UNIVERSAL
LIBRARY

OU_202102

UNIVERSAL
LIBRARY

ಶ್ರೀಃ.

ಶ್ರೀ ಕೃಷ್ಣ ಪರಬ್ರಹ್ಮಣೇನಮಃ

ಟೀಕಾತಾತ್ಪರ್ಯ ಸಹಿತ

# ಶ್ರೀ ಭಾಗವತ ಮಹಾಪುರಾಣ

## ಚತುರ್ಥ ಸ್ಕಂಧ.



ಮೋಟಗಾನಹಳ್ಳಿ

ರಾಮಶೇಷಶಾಸ್ತ್ರಿಗಳಿಂದ

ಪ್ರಕಟವಾಯಿತು.

ಬೆಂಗಳೂರು

ಕೆ. ಎಸ್. ಕೃಷ್ಣಯ್ಯರ್ ಬಿ. ಎ., ಯವರ

" ಐರಿಷ್ ", ಮುದ್ರಾಲಯದಲ್ಲಿ ಮುದ್ರಿಸಲ್ಪಟ್ಟಿತು.

೧೯೧೪ನೆಯ ಜೂನ್ ತಿಂಗಳು.

ರಿಜಿಸ್ಟರ್ಡ್ ಕಾಪಿರೈಟ್.

# ವಿಷಯಾನುಕ್ರಮಣಿಕೆ.

## ಚತುರ್ಥಸ್ಕಂಧ


| ಅಧ್ಯಾಯ. | ವಿಷಯ. | ಪುಟ. |
|---|---|---|
| ೧. | ಮನುಪುತ್ರಿಯರ ವಂಶಾವಳಿ | ೧ |
| ೨. | ಶಿವನಿಗೂ ದಕ್ಷಬ್ರಹ್ಮನಿಗೂ ದ್ವೇಷವುಂಟಾಗುವುದಕ್ಕೆ ಕಾರಣ | ೨೦ |
| ೩. | ಸತೀದೇವಿಗೆ ಶಿವನು ಹಿತೋಪದೇಶವನ್ನು ಮಾಡುವುದು | ೩೧ |
| ೪. | ಸತೀದೇವಿಯು ದಕ್ಷಯಜ್ಞದಲ್ಲಿ ಶರೀರವನ್ನು ಬಿಡುವುದು | ೪೦ |
| ೫. | ವೀರಭದ್ರನು ಜನಿಸಿ ದಕ್ಷನನ್ನು ಸಂಹರಿಸುವುದು | ೫೪ |
| ೬. | ದಕ್ಷನು ಶಿವಾನುಗ್ರಹದಿಂದ ಬದುಕುವುದು | ೬೨ |
| ೭. | ಶ್ರೀ ಮಹಾ ವಿಷ್ಣುವು ದಕ್ಷಯಜ್ಞವನ್ನು ನಡೆಯಿಸುವುದು | ೭೭ |
| ೮. | ಧ್ರುವೋಪಾಖ್ಯಾನ ಪ್ರಾರಂಭ | ೯೯ |
| ೯. | ಧ್ರುವನು ಹರಿಯಿಂದ ವರವನ್ನು ಪಡೆದು ರಾಜ್ಯವನ್ನಾಳುವುದು | ೧೨೩ |
| ,, | ಧ್ರುವಸ್ತುತಿ | ೧೨೫ |
| ೧೦. | ಧ್ರುವನು ಭ್ರಾತೃವಧೆಯನ್ನು ಮಾಡಿದ ಯಕ್ಷರನ್ನು ಸಂಹರಿಸಿದುದು | ೪ |
| ೧೧. | ಮನೂಪದೇಶದಿಂದ ಧ್ರುವನು ಯುದ್ಧವನ್ನು ನಿಲ್ಲಿಸಿದುದು | ೧೫೨ |
| ೧೨. | ಧ್ರುವರಾಯನು ಪರಮಪದವನ್ನು ಪಡೆದುದು | ೧೬೩ |
| ೧೩. | ಪೃಥುಚರಿತ್ರೆಯ ಪ್ರಾರಂಭ | ೧೮೦ |
| ೧೪. | ಋಷಿಗಳು ವೇನನನ್ನುಕೊಂದು ಅವನ ತೊಡೆಯನ್ನು ಮಥಿಸುವುದು | ೧೯೩ |
| ೧೫. | ಪೃಥುಚಕ್ರವರ್ತಿಯ ಪಟ್ಟಾಭಿಷೇಕೋತ್ಸವ | ೨೦೬ |
| ೧೬. | ಸ್ತುತಿಪಾಠಕರು ಪೃಥುವನ್ನು ಹೊಗಳುವುದು | ೨೧೩ |
| ೧೭. | ಭೂದೇವಿಯು ತನ್ನನ್ನು ಕೊಲ್ಲಲೆಳಸಿದ ಪೃಥುರಾಜನನ್ನು ಸ್ತುತಿಸಿದುದು | ೨೨೨ |
| ,, | ಭೂದೇವಿಯು ಪೃಥುರಾಜನನ್ನು ಹೊಗಳಿದುದು | ೨೩೦ |
| ೧೮. | ಭೂಮಿಯು ಗೋರೂಪದಿಂದ ಹಾಲನ್ನು ಕರೆದುದು | ೨ ೪ |
| ೧೯. | ಪೃಥುವು ಕುದುರೆ ಗಳ್ಳನಾದ ಇಂದ್ರನನ್ನು ಕೊಲ್ಲದೆ ಬಿಡುವುದು | ೨೪೩ |
| ೨೦. | ಶ್ರೀಹರಿಯು ಪೃಥುವಿಗೆ ವರಗಳನ್ನು ಕೊಡುವುದು | ೨೫೪ |
| ೨೧. | ಪೃಥುರಾಜನು ಪ್ರಜೆಗಳಿಗೆ ಧರ್ಮೋಪದೇಶವನ್ನು ಮಾಡುವುದು | ೨೬೯ |
| ೨೨. | ಸನತ್ಕುಮಾರ ಮುನಿಯು ಪೃಥುವಿಗೆ ಜ್ಞಾನೋಪದೇಶವನ್ನು ಮಾಡುವುದು | ೨ ೮ |
| ೨೩. | ಪೃಥುರಾಜನು ಮಡದಿಯೊಡನೆ ವೈಕುಂಠಕ್ಕೆ ತೆರಳುವುದು | ೩೦೮ |
| ೨೪. | ಪ್ರಚೇತಸರಿಗೆ ರುದ್ರಗೀತೆಯನ್ನುಪದೇಶಿಸುವುದು | ೩೧೯ |
| ,, | ಶ್ರೀ ರುದ್ರಗೀತಾ ಪ್ರಾರಂಭ | ೩೨೮ |
| ೨೫. | ನಾರದಮುನಿಯು ಪ್ರಾಚೀನಬರ್ಹಿಗೆ ಜ್ಞಾನೋಪದೇಶವನ್ನು ಮಾಡುವುದು | ೩೪೨ |
| ,, | ಪುರಂಜನೋಪಾಖ್ಯಾನ ಪ್ರಾರಂಭ | ೩೪೪ |

೨೬. ಪುರಂಜನ ರಾಜನ ಮೃಗಯಾ ವಿಹಾರ ೩೬೨
೨೭. ಕಾಲಕನ್ಯೋಪಾಖ್ಯಾನ ೩೭೧
೨೮. ಪುರಂಜನನು ಮೋಕ್ಷವನ್ನು ಪಡೆದುದು ೩೮೧
೨೯. ಪುರಂಜನೋಪಾಖ್ಯಾನ ತತ್ವ ನಿರೂಪಣ ೪೦೦
೩೦. ಪ್ರಚೇತಸರು ವಾರ್ಕ್ಷಿಯನ್ನು ಮದುವೆಯಾದುದು ೪೨೪
೩೧. ಪ್ರಚೇತಸರು ನಾರದೋಪದೇಶದಿಂದ ಮುಕ್ತರಾದುದು ೪೩೮

ಶ್ರೀ.

## ಶ್ರೀ ಕೃಷ್ಣಾಯ ನಮಃ

ಈ ಗ್ರಂಥವು ಅನೇಕ ವ್ಯಾಖ್ಯಾನಗಳ ಸಹಾಯವನ್ನು ಪಡೆದು ಟೀಕಿಸಲ್ಪಟ್ಟಿರುವುದರಿಂದ ಟಿಪ್ಪಣಿಗಳಲ್ಲಿರುವ ಆ ಆ ವ್ಯಾಖ್ಯಾನಾಭಿಪ್ರಾಯಗಳನ್ನು ತಿಳಿಯುವುದಕ್ಕಾಗಿ ವಾಚಕ ಮಹಾಶಯರು ಇದರಡಿ ನಿರೂಪಿತವ ವ್ಯಾಖ್ಯಾನಗಳ ಹೆಸರುಗಳನ್ನೂ ಅವುಗಳ ಸಂಕೇತಾಕ್ಷರಗಳನ್ನೂ ಸಹ ನೆನಪಿನಲ್ಲಿಡಬೇಕು

(೧) ಭಾ. ಭಾವಾರ್ಥದೀಪಿಕಾ=ಶ್ರೀಧರಸ್ವಾಮಿಕೃತ (ಅದ್ವೈತವ್ಯಾಖ್ಯಾನ)
(೨) ವೀ. ಭಾಗವತಚಂದ್ರಿಕಾ=ವೀರರಾಘವಾಚಾರ್ಯಕೃತ (ವಿಶಿಷ್ಟಾದ್ವೈತವ್ಯಾಖ್ಯಾನ
(೩) ವಿ. ಪದರತ್ನಾವಲೀ=ವಿಜಯಧ್ವಜತೀರ್ಥಕೃತ (ದ್ವೈತವ್ಯಾಖ್ಯಾನ)
(೪) ಸಿ. ಸಿದ್ಧಾಂತದೀಪಿಕಾ=ಶ್ರೀ ವಲ್ಲಭಾಚಾರ್ಯಕೃತ (ವಲ್ಲಭಮತವ್ಯಾಖ್ಯಾನ)
(೫) ಸು. ಸುಬೋಧಿನೀ=ಶ್ರೀಶುಕದೇವಕೃತ (ಭಾಗವತಮತವ್ಯಾಖ್ಯಾನ)
(೬) ದೀ. ದೀಪಿನೀ=ಶ್ರೀರಾಧಾರಮಣದಾಸಕೃತ
(೭) ಕ್ರ. ಕ್ರಮಸಂದರ್ಭ=ಶ್ರೀಗೋಸ್ವಾಮಿಕೃತ
(೮) ಸಾ. ಸಾರಾರ್ಥದರ್ಶಿನೀ=ಶ್ರೀವಿಶ್ವನಾಥಚಕ್ರವರ್ತಿಕೃತ

ಶ್ರೀ ಕೃಷ್ಣಾರ್ಪಣಮಸ್ತು

ಓಂ ತತ್ಸತ್.



## ಶ್ರೀ ಕೃಷ್ಣಪರಬ್ರಹ್ಮಣೇನಮಃ.

# ಚತುರ್ಥಸ್ಕಂಧಃ

## —ಪ್ರಥಮೋಽಧ್ಯಾಯಃ—

ಶ್ಲೋ॥ ಚತುರ್ಥೋತ್ರ ಚತುರ್ಥೇಶಂ ಚತುರ್ಥಾರ್ಥಿಕದಂ ಪ್ರಭುಂ ।
ಚತುರ್ಥಾಶ್ರಮ ವಂದ್ಯಂಚ ಶ್ರೀ ಚೈತನ್ಯಂ ನಮಾಮ್ಯಹಂ ॥

ಮೈತ್ರೇಯ ಉವಾಚ ॥ ಮನೋಸ್ತು ಶತರೂಪಾಯಾಂ ತಿಸ್ರಃ ಕನ್ಯಾಶ್ಚ ಜಜ್ಞಿರೇ । ಆಕೂತಿ ರ್ದೇವಹೂತಿಶ್ಚ ಪ್ರಸೂತಿ ರಿತಿ ವಿಶ್ರುತಾಃ॥೧॥ ಆಕೂತಿಂ

—ಪ್ರಥಮಾಧ್ಯಾಯಂ—

ಕಂದ॥ ಹರಿ ಯಜ್ಞಾದ್ಯವತಾರವ । ಧರಿಸುತೆ ಜನಿಸಿದ ಸದಾರ ಕುಲದೊಳಗಾ ವಿ ।
ಸ್ತರ ಮನುಕನ್ಯಾನ್ವಯಗಳ । ಚಂತಗಳಂ ಕ್ರಮದೊಳಿಲ್ಲಿ ಪೇಳುವ ನೊಲವಿಂ ॥

ಮೈತ್ರೇಯನು ಹೇಳುತ್ತಾನೆ. ಮನೋಃ-ಮನುವಿಗೆ, ಶತರೂಪಾಯಾಂ - ಶತರೂಪೆಯಲ್ಲಿ, ಆಕೂತಿಃ - ಆಕೂತಿಯೆಂತಲೂ, ದೇವಹೂತಿಶ್ಚ - ದೇವಹೂತಿಯೆಂತಲೂ, ಪ್ರಸೂತಿರಿತಿ - ಪ್ರಸೂತಿಯೆಂತಲೂ, ವಿಶ್ರುತಾಃ - ಪ್ರಸಿದ್ಧರಾದ, ತಿಸ್ರಃ - ಮೂವರು, ಕನ್ಯಾಃ - ಹೆಣ್ಣುಮಕ್ಕಳು, ಜಜ್ಞಿರೇ - ಹುಟ್ಟಿದರು ॥೧॥ ನೃಪಃ - ಮನುವು, ಶತರೂಪಾನುಮೋದಿತಃ - ಶತರೂಪೆಯೆಂಬ ಹೆಂಡತಿಯಿಂದ ಸಮ್ಮತಿಸಲ್ಪಟ್ಟವನಾಗಿ, ಪುತ್ರಿಕಾಧರ್ಮಂ - ಪುತ್ರಿಕಾಧರ್ಮವನ್ನು, ಆಶ್ರಿತ್ಯ - ಆಶ್ರಯಿಸಿ, ಭ್ರಾತೃಮತೀಮಪಿ - ಒಡಹುಟ್ಟಿದವರಿಂದ ಕೂಡಿದವಳಾಗಿದ್ದರೂ, ಆಕೂತಿಂ - ಆಕೂತಿಯನ್ನು, ರುಚಯೇ - ರುಚಿಯೆಂಬವ

## ಒಂದನೆಯ ಅಧ್ಯಾಯ.

### —ಮನುಪುತ್ರಿಯರ ವಂಶಾವಳಿ—

ಅನಂತರದಲ್ಲಿ ಸೂತಪೌರಾಣಿಕನು ಶೌನಕಾದಿಗಳನ್ನು ಕುರಿತು, ಅಯ್ಯಾ ಶ್ರೋತೃಗಳಿರಾ! ಮಹಾ ಮಹಿಮನಾದ ಮೈತ್ರೇಯ ಮಹರ್ಷಿಯು, ವಿದುರನಿಗೆ ತಿಳುಹಿಸಿದ ಸಂಗತಿಯನ್ನು ವಿವರಿಸುವೆನು ಕೇಳಿರಿ. ಮಹಾತ್ಮನಾದ ವೈವಸ್ವತಮನುವು ಶತರೂಪೆಯೆಂಬ ಕನ್ನಿಕೆಯನ್ನು ಮದುವೆಯಾಗಿ ಆಕೆಯಲ್ಲಿ ಆಕೂತಿ, ದೇವಹೂತಿ, ಪ್ರಸೂತಿ, ಯೆಂಬ ಮೂವರು ಹೆಣ್ಣುಮಕ್ಕಳನ್ನು ಪಡೆದನು ॥೧॥ ಬಳಿಕ ಆ ಮನುವು ಪುತ್ರವಂತನಾದರೂ, ಅನೇಕ ಪುತ್ರರನ್ನು ಬಯಸಿದವನಾಗಿ ಹೆಂಡತಿಯಾದ ಶತರೂಪೆಯ ಇಷ್ಟಾನುಸಾರವಾಗಿ, ಪುತ್ರಿಕಾಧರ್ಮವನ್ನನುಸರಿಸಿ, ಆಕೂತಿಯೆಂಬ ತನ್ನ ಹಿರಿಮಗಳನ್ನು ರುಚಿಯೆಂಬವನಿಗೆ

ರುಚಯೇ ಪ್ರಾದಾದಪಿ ಭ್ರಾತೃಮತೀಂ ನೃಪಃ । § ಪುತ್ರಿಕಾಧರ್ಮ ಮಾ
ಶ್ರಿತ್ಯ ಶತರೂಪಾಽನುಮೋದಿತಃ ||೨|| ಪ್ರಜಾಪತಿ ಸ್ಸ ಭಗವಾನ್ ರುಚಿ ಸ್ತ
ಸ್ಯಾ ಮಜೀಜನತ್ । ಮಿಥುನಂ ಬ್ರಹ್ಮವರ್ಚಸ್ವೀ ಪರಮೇಣ ಸಮಾಧಿ
ನಾ ||೩|| ಯ ಸ್ತಯೋಃ ಪುರುಷ ಸ್ಸಾಕ್ಷಾ ದ್ವಿಷ್ಣು ರ್ಯಜ್ಞಸ್ವರೂಪಧೃಕ್ ।
ಯಾ ಸ್ತ್ರೀ ಸಾ ದಕ್ಷಿಣಾ ಭೂತೇ ರಂಶಭೂತಾಽನಪಾಯಿನೀ ||೪|| ಆನಿ
ನ್ಯೇ ಸ್ವಗೃಹಂ ಪುತ್ರ್ಯಾಃ ಪುತ್ರಂ ವಿತತರೋಚಿಷಂ । ಸ್ವಾಯಂಭುವೋ
ಮುದಾಯುಕ್ತೋ ರುಚಿ ರ್ಜಗ್ರಾಹ ದಕ್ಷಿಣಾಂ ||೫|| ತಾಂ ಕಾಮಯಾನಾಂ

ಸಿಗೆ, ಪ್ರಾದಾತ್ - ಕೊಟ್ಟನು ||೨|| ಬ್ರಹ್ಮವರ್ಚಸ್ವೀ - ಬ್ರಹ್ಮವರ್ಚಸ್ಸುಳ್ಳ, ಭಗವಾನ್ - ಮಹಾಮಹಿಮನಾದ, ರುಚಿಃ - ರುಚಿಯೆಂಬ, ಪ್ರಜಾಪತಿಃ - ಬ್ರಹ್ಮನು, ಪರಮೇಣ - ನಿರತಿಶಯವಾದ, ಸಮಾಧಿನಾ - ಈಶ್ವರಾರಾಧನೆಯಿಂದ, ತಸ್ಯಾಂ - ಆ ಆಕೂತಿಯಲ್ಲಿ, ಮಿಥುನಂ - ಜವಳರಾದ ಗಂಡುಹೆಣ್ಣುಗಳನ್ನು, ಅಜೀಜನತ್ - ಜನಯಿಸಿದನು ||೩|| ತಯೋಃ - ಆ ಜವಳಮಕ್ಕಳಲ್ಲಿ, ಪುರುಷಃ - ಪುರುಷನು, ಯಾವನುಂಟೋ, ಸಃ - ಅವನು, ಯಜ್ಞಸ್ವರೂಪಧೃತ್ - ಯಜ್ಞನೆಂಬ ರೂಪವನ್ನು ಪಡೆದ, ಸಾಕ್ಷಾತ್ - ಪ್ರತ್ಯಕ್ಷನಾದ, ವಿಷ್ಣುಃ - ವಿಷ್ಣುವು. ದಕ್ಷಿಣಾ - ದಕ್ಷಿಣೆಯೆಂಬ ಯಾವ, ಸ್ತ್ರೀ-ಹೆಂಗಸುಂಟೋ, ಅವಳು- ಅನಪಾಯಿನೀ - ವಿಷ್ಣುವನ್ನೆಡಬಿಡದ, ಭೂತೇಃ - ಲಕ್ಷ್ಮಿಯ, ಅಂಶಭೂತಾ - ಅಂಶಭೂತಳು ||೪|| ಸ್ವಾಯಂಭುವಃ - ಸ್ವಾಯಂಭುವ ಮನುವು, ಮುದಾ - ಸಂತೋಷದಿಂದ, ಯುಕ್ತಃ - ಕೂಡಿದವನಾಗಿ, ವಿತತರೋಚಿಷಂ - ಅಧಿಕತೇಜಸ್ಸುಳ್ಳ, ಪುತ್ರ್ಯಾಃ - ಆಕೂತಿಯ, ಪುತ್ರಂ - ಮಗನಾದ ಯಜ್ಞನನ್ನು, ಸ್ವಗೃಹಂ - ತನ್ನಮನೆಗೆ, ಆನಿನ್ಯೇ - ಕರತಂದನು, ರುಚಿಃ - ರುಚಿಯು, ದಕ್ಷಿಣಾಂ - ದಕ್ಷಿಣೆಯನ್ನು, ಜಗ್ರಾಹ - ಸಲಹುತ್ತಿದ್ದನು ||೫||

ಯಜುಷಾಂ - ಯಜ್ಞಗಳಿಗೆ, ಅಥವಾ ಮಂತ್ರಗಳಿಗೆ, ಪತಿಃ - ಪತಿಯಾದ, ಭಗವಾನ್ - ಯಜ್ಞನು,

ಮದುವೆ ಮಾಡಿಕೊಟ್ಟನು ||೨|| ಬ್ರಹ್ಮವರ್ಚಸ್ಸನ್ನು ಪಡೆದ ಮಹಾಮಹಿಮನಾದ ಆ ರುಚಿಯು ಉತ್ತಮವಾದ ಸಂತಾನವಾಗುವುದಕ್ಕೆ ತಕ್ಕಂತೆ ನಿರತಿಶಯವಾದ ಈಶ್ವರಾರಾಧನೆಯನ್ನು ಮಾಡಿ, ತನ್ನ ಮಡದಿಯಾದ ಆಕೂತಿಯಲ್ಲಿ ಜವಳರಾದ ಹೆಣ್ಣುಗಂಡುಗಳನ್ನು ಪಡೆದನು ||೩|| ಆ ಇಬ್ಬರು ಮಕ್ಕಳಲ್ಲಿ ಗಂಡುಮಗುವೇ ಯಜ್ಞನೆಂಬ ಹೆಸರನ್ನು ಪಡೆದ ಸಾಕ್ಷಾತ್ ವಿಷ್ಣುವು. ದಕ್ಷಿಣೆಯೆಂಬ ಹೆಣ್ಣುಮಗುವೇ, ಶ್ರೀಮಹಾವಿಷ್ಣುವನ್ನೆಡಬಿಡದ ಲಕ್ಷ್ಮೀದೇವಿಯ ಅಂಶಭೂತಳು ||೪|| ಇಂತಹ ಇಬ್ಬರುಮಕ್ಕಳೂ ಹುಟ್ಟಿದಕೂಡಲೇ, ಸ್ವಾಯಂಭುವಮನುವು ಜವಳ ಮಕ್ಕಳು ಹುಟ್ಟಿದರೆಂಬ ಸಂತೋಷದಿಂದ ಕೂಡಿದವನಾಗಿ, ಮೊದಲು ವಿವಾಹಕಾಲದಲ್ಲಿ ಮಾಡಿದ ನಿಬಂಧನೆಯಮೇರೆಗೆ, ತನಗೆ ದೌಹಿತ್ರನೆನಿಸಿದ ಯಜ್ಞನೆಂಬ ಗಂಡುಮಗುವನ್ನು ತನ್ನ ಮನೆಗೆತ್ತಿಕೊಂಡುಬಂದು ಸಲಹಿದನು. ರುಚಿಯು ತನ್ನ ಮಗಳಾದ ದಕ್ಷಿಣೆಯೆಂಬ ಹೆಣ್ಣನ್ನೇ ಪುತ್ರನಂತೆ ಭಾವಿಸಿ ಬೆಳಯಿಸುತ್ತಿದ್ದನು ||೫|| ಇಂತು ಆ ಮಕ್ಕ

§ ಗಂಡುಮಕ್ಕಳಿಲ್ಲದವನು " ಈಕೆಯಲ್ಲಿ ಹುಟ್ಟುವ ಗಂಡು ಮಗುವು ನನಗೆ ಮಗನಾಗಿರಬೇಕು " ಎಂಬ ನಿಬಂಧನೆಯಿಂದ ಕನ್ಯಾ ದಾನಮಾಡುವುದಕ್ಕೆ ಪುತ್ರಿಕಾಧರ್ಮವೆಂದು, ಹೆಸರು, ಇಂತಹ ಕನ್ಯೆಯಲ್ಲಿ ಹುಟ್ಟಿದವನೇ, ಅಧಿಕಾರಿಯಾದ ದೌಹಿತ್ರನು. ಶ್ಲೋ|| ಅಭ್ರಾತೃಕಾಂ ಪ್ರದಾಸ್ಯಾಮಿ ತುಭ್ಯಂ ಕನ್ಯಾ ಮಲಂಕೃತಾಂ । ಅಸ್ಯಾಂ ಯೋ ಜಾಯತೇ ಪುತ್ರ ಸ್ಸಮೇ ಪುತ್ರೋ ಭವೇ ದಿತಿ ||

ಭಗವಾ ನುವಾಹ ಯಜುಷಾಂ ಪತಿಃ । ತುಷ್ಟಾಯಾಂ ತೋಷ ಮಾಪನ್ನೋಽ
ಜನಯದ್ದ್ವಾದಶಾಽತ್ಮಜಾನ್ ॥೬॥ ತೋಷಃ ಪ್ರತೋಷಃ ಸಂತೋಷೋ
ಭದ್ರಃ ಶಾಂತಿ ರಿಡಸ್ಪತಿಃ। ಇಧ್ಮಃ ಕವಿ ರ್ವಿಭುಃ ವಹ್ನಿಃ ಸುದೇವೋ ರೋ
ಚನೋ ದ್ವಿಷಟ್ ॥೭॥ * ತುಷಿತಾನಾಮ ತೇ ದೇವಾ ಆಸನ್ ಸ್ವಾಯಂ
ಭುವಾಂತರೇ । ಮರೀಚಿಮಿಶ್ರಾ ಋಷಯೋ ಯಜ್ಞಸ್ಸುರಗಣೇಶ್ವರಃ ॥೮॥
ಪ್ರಿಯವ್ರತೋತ್ತಾನಪಾದೌ ಮನುಪುತ್ರೌ ಮಹೌಜಸೌ । ತತ್ಪುತ್ರಪೌತ್ರ ನ
ಪ್ತೄಣಾ ಮನುವೃತ್ತಂ ತದಂತರಂ ॥೯॥ ದೇವಹೂತಿ ಮದಾ ತ್ತಾತ! ಕರ್ದ

ಕಾಮಯಾನಾಂ - ಪತಿಯನ್ನು ಬಯಸುತ್ತಿರುವ, ತಾಂ - ಆ ದಕ್ಷಿಣೆಯನ್ನು, ಉವಾಹ - ಮದುವೆಯಾದನು ತುಷ್ಟಾಯಾಂ - ಸಂತುಷ್ಟಳಾದ ದಕ್ಷಿಣೆಯಲ್ಲಿ, ತೋಷಂ - ಸಂತೋಷವನ್ನು, ಆಪನ್ನಃ - ಹೊಂದಿ, ದ್ವಾದಶ - ಹನ್ನೆರಡುಮಂದಿ, ಆತ್ಮಜಾನ್ - ಮಕ್ಕಳನ್ನು, ಅಜನಯತ್ - ಜನಿಯಿಸಿದನು ॥೬॥ ತೋಷನು ಮೊದಲು ರೋಚನನವರೆಗೂ, ದ್ವಿಷಟ್ - ಹನ್ನೆರಡು ಮಂದಿಯು ॥೭॥ ಸ್ವಾಯಂಭುವಾಂತರೇ - ಸ್ವಾಯಂಭುವ ಮನ್ವಂತರದಲ್ಲಿ, ತುಷಿತಾನಾಮ - ತುಷಿತರೆಂಬ, ತೇ - ಆ ದಕ್ಷಿಣೆಯ ಮಕ್ಕಳಾದ, ದೇವಾಃ - ದೇವತೆಗಳು, ಮರೀಚಿಮಿಶ್ರಾಃ - ಮರೀಚಿ ಮೊದಲಾದ, ಋಷಯಃ - ಋಷಿಗಳು, ಸುರಗಣೇಶ್ವರಃ - ದೇವತೆಗಳಿಗೊಡೆಯನಾದ, ಯಜ್ಞಃ - ಯಜ್ಞನು, ಆಸನ್ - ಪ್ರಜೋತ್ಪಾದಕರಾದರು ॥೮॥ ಮಹೌಜಸೌ - ಮಹಾಮಹಿಮರಾದ, ಮನುಪುತ್ರೌ-ಸ್ವಾಯಂಭುವ ಮನುವಿನ ಮಕ್ಕಳಾದ, ಪ್ರಿಯ...ದೌ, ಪ್ರಿಯವ್ರತ, ಉತ್ತಾನಪಾದರು, ತತ್ಪು...ಣಾಂ, ತತ್ - ಅವರ, ಪುತ್ರ - ಮಕ್ಕಳು, ಪೌತ್ರ - ಮೊಮ್ಮಕ್ಕಳು, ನಪ್ತೄಣಾಂ - ಮರಿಮಕ್ಕಳು, ಇವರಿಂದ, ತದಂತರಂ - ಆ ಮನ್ವಂತರವು, ಅನುವೃತ್ತಂ - ವ್ಯಾಪಿಸಲ್ಪಟ್ಟಿತು ॥೯॥ ತಾತ - ಅಯ್ಯಾವಿದುರನೆ ! ಮನುಃ - ಸ್ವಾಯಂಭುವನು, ಆತ್ಮ

ಳೇರ್ವರೂ ಯೌವನಾರೂಢರಾಗಲು, ಯಜ್ಞಪತಿಯಾದ ಯಜ್ಞಭಗವಂತನು, ತಾರುಣ್ಯಲಾವಣ್ಯಗಳಿಂದೊಪ್ಪಿ ಪತಿಯನ್ನರಸುತ್ತಿರುವ ಆ ದಕ್ಷಿಣೆಯನ್ನು ಮದುವೆಯಾಗಿ, ಅನುರೂಪನಾದ ಪತಿಯನ್ನು ಹೊಂದಿದುದರಿಂದ ಅಮಂದಾನಂದವನ್ನೊಂದಿದ ಆ ಸುಂದರೀಶಿರೋಮಣಿಯಲ್ಲಿ,ತೋಷ, ಪ್ರತೋಷ, ಸಂತೋಷ, ಭದ್ರ, ಶಾಂತಿ, ಇಡಸ್ಪತಿ, ಇಧ್ಮ, ಕವಿ, ವಿಭು, ವಹ್ನಿ, ಸುದೇವ, ರೋಚನರೆಂಬ ಹನ್ನೆರಡುಮಂದಿ ಮಕ್ಕಳನ್ನು ಪಡೆದನು ॥೭॥ ಸ್ವಾಯಂಭುವ ಮನ್ವಂತರದಲ್ಲಿ ತುಷಿತರೆಂಬ ಹೆಸರನ್ನು ಪಡೆದ ಈ ಹನ್ನೆರಡುಮಂದಿ ದೇವತೆಗಳೂ, ಮರೀಚಿ ಮೊದಲಾದ ಋಷಿಗಳೂ, ವಿಷ್ಣುವಿನವತಾರವೆನಿಸಿ, ಇಂದ್ರಾಧಿಕಾರವನ್ನು ಪಡೆದ ಯಜ್ಞನೂ, ಇವರು ಸೃಷ್ಟಿಕಾರ್ಯವನ್ನು ಬೆಳೆಯಿಸುತ್ತಿದ್ದರು. ॥೮॥ ಸ್ವಾಯಂಭುವನ ಪುತ್ರರೂ ಮಹಾತೇಜಸ್ವಿಗಳೂ ಆದ ಪ್ರಿಯವ್ರತ, ಉತ್ತಾನಪಾದರು, ಅವರಪುತ್ರ, ಪೌತ್ರ, ಪ್ರಪೌತ್ರರು, ಇವರ ಪರಂಪರೆಯಿಂದಲೇ ಆ ಮನ್ವಂತರವು ವ್ಯಾಪ್ತವಾಯಿತು ॥೯॥ ಅಯ್ಯಾ ವಿದುರನೆ ! ಅನಂತರದಲ್ಲಿ ಮನುವು ತನ್ನ ಎರಡನೆಯ ಮಗಳಾದ ದೇವ

* ಶ್ಲೋ॥ ಮನ್ವಂತರಂ ಮನು ರ್ದೇವಾ ಮನುಪುತ್ರಾ ಸ್ಸುರೇಶ್ವರಃ । ಋಷಯೋಂಶಾವತಾರಾಶ್ಚ ಹರೇ ಷಡ್ವಿಧ ಮುಚ್ಯತೇ ॥ ಮನುವು, ದೇವತೆಗಳು, ಮನುಪುತ್ರರು, ಇಂದ್ರನು, ಋಷಿಗಳು, ಅಂಶಾವತಾರಗಳು, ಈ ಆರೂ ಮನ್ವಂತರದಲ್ಲಿ ಭಗವಂತನ ಅವತಾರಗಳಾಗಿರುವವು.

ಮಾಯಾತ್ಮಜಾಂ ಮನುಃ । ತತ್ಸಂಬಂಧಿ ಶ್ರುತಪ್ರಾಯಂ ಭವತಾ ಗದತೋ ಮಮ ॥ ೧೦ ॥ ದಕ್ಷಾಯ ಬ್ರಹ್ಮಪುತ್ರಾಯ ಪ್ರಸೂತಿಂ ಭಗವಾನ್ ಮನುಃ । ಪ್ರಾಯಚ್ಛದ್ಯತ್ಕೃತಃ ಸರ್ಗಸ್ತ್ರಿಲೋಕ್ಯಾಂ ವಿತತೋ ಮಹಾನ್ ॥೧೧॥ ಯಾಃ ಕರ್ದಮಸುತಾಃ ಪ್ರೋಕ್ತಾ ನವಬ್ರಹ್ಮರ್ಷಿಪತ್ನಯಃ । ತಾಸಾಂ ಪ್ರಸೂತಿಪ್ರಸವಂ ಪ್ರೋಚ್ಯಮಾನಂ ನಿಬೋಧ ಮೇ ॥೧೨॥ ಪತ್ನೀ ಮರೀಚೇಸ್ತು ಕಲಾ ಸುಷುವೇ ಕರ್ದಮಾತ್ಮಜಾ । ಕಶ್ಯಪಂ ಪೂರ್ಣಿಮಾನಂಚ ಯಯೋರಾಪೂರಿತಂ ಜಗತ್ ॥೧೩॥ ಪೂರ್ಣಿಮಾಽಸೂತ ವಿ

---

ಜಾಂ - ಮಗಳಾದ, ದೇವಹೂತಿಂ - ದೇವಹೂತಿಯನ್ನು, ಕರ್ದಮಾಯ - ಕರ್ದಮಪ್ರಜಾಪತಿಗೆ, ಅದಾತ್ - ಕೊಟ್ಟನು, ಗದತಃ - ಹೇಳಿದ, ಮಮ - ನನ್ನಿಂದ, ತತ್ಸಂಬಂಧಿ - ಆ ದೇವಹೂತಿಯ ಸಂಬಂಧಿಯಾದ ಚರಿತ್ರೆಯು, ಭವತಾ - ನಿನ್ನಿಂದ, ಶ್ರುತಪ್ರಾಯಂ - ವಿಸ್ತಾರವಾಗಿ ಕೇಳಲ್ಪಟ್ಟಿರುವುದಷ್ಟೆ ॥೧೦॥ ಭಗವಾನ್ - ಪೂಜ್ಯನಾದ, ಮನುಃ - ಸ್ವಾಯಂಭುವನು, ಪ್ರಸೂತಿಂ - ಪ್ರಸೂತಿಯೆಂಬ ಕಿರಿಯಮಗಳನ್ನು, ಬ್ರಹ್ಮಪುತ್ರಾಯ - ಬ್ರಹ್ಮನ ಮಗನಾದ, ದಕ್ಷಾಯ - ದಕ್ಷನಿಗೆ, ಪ್ರಾಯಚ್ಛತ್ - ಕೊಟ್ಟನು, ಯತ್ಕೃತಃ - ಯಾರಿಂದ ಮಾಡಲ್ಪಟ್ಟ, ಮಹಾನ್ - ವಿಸ್ತಾರವಾದ, ಸರ್ಗಃ - ಸೃಷ್ಟಿಯು, ತ್ರಿಲೋಕ್ಯಾಂ - ಮೂರುಲೋಕಗಳಲ್ಲಿಯೂ, ವಿತತಃ - ವ್ಯಾಪಿಸಿರುವುದೋ ॥೧೧॥ ನವ...ಯಾಃ, ನವ - ಒಂಬತ್ತುಮಂದಿ, ಬ್ರಹ್ಮರ್ಷಿ - ಬ್ರಹ್ಮರ್ಷಿಗಳಿಗೆ, ಪತ್ನಯಃ - ಹೆಂಡಿರಾದ, ಯಾಃ ಯಾವ, ಕರ್ದಮಸುತಾಃ - ಕರ್ದಮನ ಪುತ್ರಿಯರು, ಪ್ರೋಕ್ತಾಃ - ಹೇಳಲ್ಪಟ್ಟರೋ, ಮೇ - ನನ್ನಿಂದ, ಪ್ರೋಚ್ಯಮಾನಂ - ಹೇಳಲ್ಪಡುವ, ತಾಸಾಂ - ಅವರ, ಪ್ರಸೂತಿಪ್ರಸವಂ - ವಂಶಪರಂಪರೆಯನ್ನು, ನಿಬೋಧ - ತಿಳಿ ॥೧೨॥ ಕರ್ದಮಾತ್ಮಜಾ - ಕರ್ದಮನ ಮಗನಾದ, ಮರೀಚೇಃ - ಮರೀಚಿ ಋಷಿಗೆ, ಪತ್ನೀ - ಹೆಂಡತಿಯಾದ, ಕಲಾ - ಕಲೆಯು, ಕಶ್ಯಪಂ - ಕಶ್ಯಪನನ್ನೂ, ಪೂರ್ಣಿಮಾನಂ - ಪೂರ್ಣಿಮನನ್ನೂ, ಸುಷುವೇ - ಹೆತ್ತಳು, ಯಯೋಃ - ಯಾರಿಂದ, ಜಗತ್ - ಜಗತ್ತು, ಆಪೂರಿತಂ - ತುಂಬಲ್ಪಟ್ಟಿತೋ ॥೧೩॥

ಹೇಪರಂತಪ - ಎಲೈ ಶತ್ರುಸೂದನನೆ ! ಪೂರ್ಣಿಮಾ - ಕಲೆಯಮಗನಾದ ಪೂರ್ಣಿಮನು, ವಿರಜಂ - ವಿರಜನನ್ನೂ, ವಿಶ್ವಗಂಚ - ವಿಶ್ವಗನನ್ನೂ, ಯಾ - ಯಾವಳು, ಹರೇಃ - ಹರಿಯ, ಪಾದಶೌಚಾತ್ -

---

ಹೂತಿಯೆಂಬ ಕನ್ನೆಯನ್ನು ಕರ್ದಮನೆಂಬ ಬ್ರಹ್ಮನಿಗಿತ್ತು ವಿವಾಹವನ್ನು ಬೆಳೆಯಿಸಿದನು. ನಾನು ಮೊದಲು ಹೇಳಿದಾಗಲೇ ಆ ದೇವಹೂತಿಯ ಚರಿತ್ರೆಯನ್ನು ನೀನು ವಿಸ್ತಾರವಾಗಿ ಕೇಳಿರಬಹುದು ॥೧೦॥ ಆ ಬಳಿಕ ಮನುವು ತನ್ನ ಕಿರಿಯಮಗಳಾದ ಪ್ರಸೂತಿಯೆಂಬ ಕನ್ನೆಯನ್ನು ಚತುರ್ಮುಖಬ್ರಹ್ಮನ ಮಗನಾದ ದಕ್ಷಬ್ರಹ್ಮನಿಗಿತ್ತು ಮದುವೆಗೈದನು ಈ ಮೂರುಲೋಕಗಳಲ್ಲಿ ಹರಡಿರುವುದೂ ಆತನ ಸೃಷ್ಟಿಯೇ ಆಗಿರುವುದು.॥೧೧॥ ಅಯ್ಯಾ ಸಾಧುವೆ! ಇನ್ನು ಕರ್ದಮನಿಂದ ದೇವಹೂತಿಯಲ್ಲಿ ಜನಿಸಿದವರಾಗಿಯೂ, ಮರೀಚಿ ಮೊದಲಾದ ನವಬ್ರಹ್ಮರಿಗೆ ಹೆಂಡಿರಾಗಿಯೂ ಇರುವ ಕಲೆ ಮೊದಲಾದವರ ವೃತ್ತಾಂತವನ್ನು ವಿವರಿಸುವೆನು ಕೇಳು ॥೧೨॥ ಕರ್ದಮಪುತ್ರಿಯೂ, ಮರೀಚಿಯ ಪತ್ನಿಯೂ ಆದ ಕಲೆಯು, ಕಶ್ಯಪ ಪೂರ್ಣಿಮರೆಂಬ ಈರ್ವರು ಮಕ್ಕಳನ್ನು ಪಡೆದಳು. ಈ ಜಗತ್ತೆಲ್ಲವೂ ಇವರ ಸಂತತಿಯೇ ಅಲ್ಲವೆ! ॥೧೩॥ ಎಲೈ ಶೂರನೆ ! ಆ ಪೂರ್ಣಿಮನು ವಿರಜ, ವಿಶ್ವಗರೆಂಬ ಈರ್ವರು ಗಂಡು

ರಜಂ ವಿಶ್ವಗಂ ಚ ಪರಂತಪ! ದೇವಕುಲ್ಯಾಂ ಹರೇಃ ಪಾದಶೌಚಾ ದ್ಯಾಽಭೂ
ತ್ಸರಿ ದ್ದಿವಃ ॥೧೪॥ ಅತ್ರೇಃ ಪತ್ನ್ಯನಸೂಯಾ ತ್ರೀನ್ ಜಜ್ಞೇ ಸುಯಶಸ
ಸ್ಸುತಾನ್ । ದತ್ತಂ ದುರ್ವಾಸಸಂ ಸೋಮ † ಮಾತ್ಮೇಶಬ್ರಹ್ಮಸಂಭ
ವಾನ್ ॥೧೫॥ ವಿದುರ ಉವಾಚ ॥ ಅತ್ರೇ ರ್ಗೃಹೇ ಸುರಶ್ರೇಷ್ಠಾ ಸ್ಥಿತ್ಯು
ತ್ಪತ್ತ್ಯಂತಹೇತವಃ। ಕಿಂಚಿಚ್ಚಿಕೀರ್ಷವೋ ಜಾತಾ ಏತ ದಾಖ್ಯಾಹಿ ಮೇ ಗು

ಪಾದಪ್ರಕ್ಷಾಳನದಿಂದ, ದಿವಃ - ಸ್ವರ್ಗದ, ಸರಿತ್ - ನದಿಯು, ಅಭೂತ್ - ಆದಳೋ, ಅಂತಹ ದೇವಕುಲ್ಯಾಂ - ದೇವಕುಲ್ಯೆಯೆಂಬ ಹೆಣ್ಣನ್ನೂ, ಅಸೂತ - ಹೆತ್ತಳು ॥೧೪॥ ಅತ್ರೇಃ - ಅತ್ರಿಯು, ಪತ್ನೀ - ಹೆಂಡತಿಯಾದ, ಅನಸೂಯಾ - ಅನಸೂಯೆಯು, ಸುಯಶಸಃ - ನಿರ್ಮಲ ಕೀರ್ತಿಯುಳ್ಳ, ದತ್ತಂ - ದತ್ತಾತ್ರೇಯನೆಂತಲೂ, ದುರ್ವಾಸಸಂ - ದುರ್ವಾಸನೆಂತಲೂ, ಸೋಮಂ - ಚಂದ್ರನೆಂತಲೂ, ಆತ್ಮ...ವಾನ್, ಆತ್ಮ - ವಿಷ್ಣುವು, ಈಶ - ರುದ್ರನು, ಬ್ರಹ್ಮ - ಬ್ರಹ್ಮನು, ಇವರಂಶದಿಂದ, ಸಂಭವಾನ್ - ಹುಟ್ಟಿದ, ತ್ರೀನ್ - ಮೂರುಮಂದಿ, ಸುತಾನ್ - ಮಕ್ಕಳನ್ನು, ಜಜ್ಞೇ - ಪಡೆದಳು ॥೧೫॥ ವಿದುರನು ಬೆಸಗೊಳ್ಳುತ್ತಾನೆ' ಹೇ ಗುರೋ - ಎಲೈ ಗುರುವೆ! ಸ್ಥಿತ್ಯ...ವಃ, ಸ್ಥಿತಿ - ಪಾಲನೆಗೂ, ಉತ್ಪತ್ತಿ - ಸೃಷ್ಟಿಗೂ, ಅಂತ - ನಾಶಕ್ಕೂ, ಹೇತವಃ - ಕಾರಣರಾದ, ಸುರಶ್ರೇಷ್ಠಾಃ - ದೇವೋತ್ತಮರಾದ, ಹರಿ, ಬ್ರಹ್ಮ, ರುದ್ರರು,

ಮಕ್ಕಳನ್ನೂ, ಪೂರ್ವಜನ್ಮದಲ್ಲಿ ತ್ರಿವಿಕ್ರಮಮೂರ್ತಿಯ ಪಾದಶೌಚದಿಂದ ದೇವಗಂಗೆಯೆನಿಸಿದ್ದ, ದೇವಕುಲ್ಯೆಯೆಂಬ ಒಂದು ಹೆಣ್ಣುಮಗುವನ್ನೂ ಪಡೆದನು ॥೧೪॥ ಅನಂತರದಲ್ಲಿ ಕರ್ದಮಪ್ರಜಾಪತಿಯ ಎರಡನೆಯಮಗಳೂ, ಅತ್ರಿಮಹಾಮುನಿಯ ಪತ್ನಿಯೂ ಆದ ಅನಸೂಯಾದೇವಿಯು ಹರಿಹರಬ್ರಹ್ಮಾಂಶಗಳಿಂದ ಸಂಭೂತರೆನಿಸಿದ ನಿರ್ಮಲಕೀರ್ತಿಗಳಾದ ದತ್ತಾತ್ರೇಯ, ದುರ್ವಾಸ, ಚಂದ್ರರೆಂಬ ಮೂವರುಮಕ್ಕಳನ್ನು ಪಡೆದಳು, ಎಂದು ಹೇಳಲು, ವಿದುರನು ಬೆಸಗೊಳ್ಳುತ್ತಾನೆ ॥೧೫॥ ಎಲೈ ಗುರುವಾದ ಮೈತ್ರೇಯನೆ ! ಜಗತ್ಪಾಲನ, ಸೃಷ್ಟಿಸಂಹಾರಗಳಿಗೆ ಕಾರಣರಾದ ಹರಿಬ್ರಹ್ಮ ರುದ್ರರು, ಏತಕ್ಕಾಗಿ ಅತ್ರಿಯ ಮನೆಯಲ್ಲಿ ಅವತರಿಸಿದರು ? ದಯೆಮಾಡಿ ಇದನ್ನು ತಿಳುಹಬೇಕು. ಎಂದು ಬೆಸಗೊಳ್ಳಲು, ಮೈತ್ರೇಯಮುನಿಯು ಹೇಳುವುದೆಂತೆಂದರೆ—ಅಯ್ಯಾ ವಿದುರನೆ ! ಕೇಳು. ಪೂರ್ವದಲ್ಲಿ ಬ್ರ

† ವಿ. ಸರ್ವಾಂತರ್ಯಾಮಿಯಾದ ಪರಮಾತ್ಮನು ಜೀವದ್ವಾರಾ ಜ್ಞಾನ, ಶಕ್ತಿ, ಮೊದಲಾದ ಗುಣಗಳನ್ನು ಹೊರಪಡಿಸಿ ಅಂಶಾವತಾರಮಾಡುವನೆಂಬುವದೇನೋ ನ್ಯಾಯವು. ಆದರೆ ಪರಮಾತ್ಮನಿಗೆ ಅಂಶಭೂತರಾಗಿ ಜೀವವಿಶೇಷರೆನಿಸಿರುವ ಅಣುಸ್ವರೂಪರಾದ ಬ್ರಹ್ಮರುದ್ರರಿಗೆ ಚಂದ್ರದುರ್ವಾಸರ ದ್ವಾರಾ ಅಂಶಾವತಾರವೆಂತು ? ಎಂದರೆ ಜೀವರಜ್ಞಾನವೆಂಬುದು ಅಖಂಡವಾಗಿದ್ದರೂ ಕರ್ಮವೆಂಬ ಅವಿದ್ಯೆಯ ಆವರಣದಿಂದ ಸಂಕುಚಿತವಾಗುವುದು. ಪರಮಾತ್ಮನ ಅನುಗ್ರಹದಿಂದ ಆ ಆವರಣವು ತೊಲಗಿದಲ್ಲಿ, ದೀಪವು ಚಿಕ್ಕದಾಗಿದ್ದರೂ ತನ್ನ ಬೆಳಕಿನ ಮೂಲಕವಾಗಿ ಅನೇಕವಸ್ತುಗಳನ್ನು ಬೆಳಗಿಸುವಂತೆ, ಜೀವನು ಅಣುವಾಗಿದ್ದರೂ ಅನಾವೃತವಾದ ತನ್ನ ಜ್ಞಾನದ ಮೂಲಕವಾಗಿ ಅನೇಕ ಶರೀರಗಳನ್ನು ಪರಿಗ್ರಹಿಸಬಹುದು. ಆದುದರಿಂದ ನಮ್ಮ ಜ್ಞಾನಕ್ಕಿಂತಲೂ, ಬ್ರಹ್ಮರುದ್ರಜೀವರ ಜ್ಞಾನವೆಂಬುದು ಪರಮಾತ್ಮಾನುಗ್ರಹಾತಿಶಯದಿಂದ ಅನಂತವೆನಿಸಿರುವ ಕಾರಣ, ಅವರು ಚಂದ್ರ ದುರ್ವಾಸರಲ್ಲಿ ಜ್ಞಾನದ್ವಾರಾ ಅಂಶಾವತಾರವನ್ನು ಮಾಡಿದರೆಂಬುದು ಯುಕ್ತವೇಸರಿ.

ರೋ॥೧೬॥ ಮೈತ್ರೇಯಃ ॥ ಬ್ರಹ್ಮಣಾ ನೋದಿತಸ್ಸೃಷ್ಟಾವತ್ರಿರ್ಬ್ರಹ್ಮ ವಿದಾಂ ವರಃ । ಸಹಪತ್ನ್ಯಾ ಯಯಾವೃಕ್ಷಂ ಕುಲಾದ್ರಿಂ ತಪಸಿ ಸ್ಥಿತಃ ॥ ತಸ್ಮಿನ್ ಪ್ರಸೂನಸ್ತಬಕಪಲಾಶಾಽಶೋಕಕಾನನೇ । ವಾರ್ಭಿಸ್ಸ್ರವದ್ಭಿರುದ್ಘುಷ್ಟೇ ನಿರ್ವಿಂಧ್ಯಾಯಾಸ್ಸಮಂತತಃ ॥೧೮॥ ಪ್ರಾಣಾಯಾಮೇನ ಸಂಯಮ್ಯ ಮನೋ ವರ್ಷಶತಂ ಮುನಿಃ । ಅತಿಷ್ಠದೇಕಪಾದೇನ ನಿರ್ದ್ವಂದ್ವೋಽನಿಲಭೋಜನಃ ॥೧೯॥ ಶರಣಂ ತಂ ಪ್ರಪದ್ಯೇಽಹಂ ಯ ಏವ ಜಗದೀಶ್ವರಃ । ಪ್ರಜಾಮಾತ್ಮಸಮಾಂ ಮಹ್ಯಂ ಪ್ರಯಚ್ಛತ್ವಿತಿ ಚಿಂತಯನ್ ॥

---

ಕಿಂಚಿತ್ - ಏನನ್ನು, ಚಿಕೀರ್ಷವಃ - ಮಾಡಲೆಳಸಿದವರಾಗಿ, ಅತ್ರೇಃ - ಅತ್ರಿಯ, ಗೃಹೇ - ಮನೆಯಲ್ಲಿ ಜಾತಾಃ - ಹುಟ್ಟಿದರು ? ಮೇ - ನನಗೆ, ಏತತ್ - ಇದನ್ನು, ಆಖ್ಯಾಹಿ - ಹೇಳು ॥೧೬॥ ಮೈತ್ರೇಯನು ಹೇಳುತ್ತಾನೆ, ಬ್ರಹ್ಮವಿದಾಂ - ಬ್ರಹ್ಮವೇತ್ತರಲ್ಲಿ, ವರಃ - ಶ್ರೇಷ್ಠನಾದ, ಅತ್ರಿಃ - ಅತ್ರಿಯು, ಸೃಷ್ಟೌ - ಸೃಷ್ಟಿಯಲ್ಲಿ, ಬ್ರಹ್ಮಣಾ - ಬ್ರಹ್ಮನಿಂದ, ನೋದಿತಃ - ಪ್ರೇರಿಸಲ್ಪಟ್ಟವನಾಗಿ, ತಪಸಿ - ತಪಸ್ಸಿನಲ್ಲಿ, ಸ್ಥಿತಃ- ಇದ್ದುಕೊಂಡು, ಪತ್ನ್ಯಾಸಹ- ಹೆಂಡತಿಯೊಡನೆ, ಋಕ್ಷಂ - ಋಕ್ಷವೆಂಬ, ಕುಲಾದ್ರಿಂ- ಕುಲಪರ್ವತವನ್ನು, ಯಯೌ - ಹೊಂದಿದನು ॥೧೭॥ ನಿರ್ವಿಂಧ್ಯಾಯಾಃ - ನಿರ್ವಿಂಧ್ಯಾನದಿಯ, ಸ್ರವದ್ಭಿಃ - ಹರಿಯುತ್ತಿರುವ, ವಾರ್ಭಿಃ - ನೀರಿಂದ, ಸಮಂತತಃ- ಸುತ್ತಮುತ್ತಲೂ, ಉದ್ಘುಷ್ಟೇ-ಶಬ್ದಗೊಳಿಸಲ್ಪಡುತ್ತಿರುವ, ತಸ್ಮಿನ್, ಆ, ಪ್ರಸೂ...ನೇ, ಪ್ರಸೂನ - ಹೂಗಳ, ಸ್ತಬಕ - ಗೊಂಚಲುಗಳುಳ್ಳ, ಪಲಾಶ-ಮುತ್ತುಗದ, ಅಶೋಕ, ಅಶೋಕ ವೃಕ್ಷಗಳ, ಕಾನನೇ - ಅರಣ್ಯದಲ್ಲಿ ॥೧೮॥ ಮುನಿಃ - ಅತ್ರಿಯು, ನಿರ್ದ್ವಂದ್ವಃ - ಶೀತೋಷ್ಣಗಳನ್ನು ಜಯಿಸಿ, ಅನಿಲಭೋಜನಃ - ವಾಯುಭಕ್ಷಣದಿಂದ ಜೀವಿಸುತ್ತಾ, ಪ್ರಾಣಾಯಾಮೇನ - ಪ್ರಾಣನಿರೋಧದಿಂದ, ಮನಃ - ಮನಸ್ಸನ್ನು, ಸಂಯಮ್ಯ - ನಿಗ್ರಹಿಸಿ, ವರ್ಷಶತಂ- ನೂರಾರು ವರ್ಷಗಳು, ಏಕಪಾದೇನ- ಒಂದು ಕಾಲಿನಿಂದ, ಅತಿಷ್ಠತ್-ನಿಂತನು ॥೧೯॥ ಯಃ-ಯಾವನು, ಜಗದೀಶ್ವರಃ-ಲೋಕನಾಯಕನೋ, ತಮೇವ - ಆತನನ್ನೇ, ಅಹಂ - ನಾನು, ಶರಣಂ - ರಕ್ಷಕನನ್ನಾಗಿ, ಪ್ರಪದ್ಯೇ - ಹೊಂದುತ್ತೇನೆ, ಮಹ್ಯಂ - ನನಗೆ, ಆತ್ಮಸಮಾಂ - ತನಗೆಸಮಮಾದ, ಪ್ರಜಾಂ - ಸಂತಾನವನ್ನು, ಪ್ರಯಚ್ಛತು - ಕೊಡಲಿ, ಇತಿ - ಹೀಗೆಂದು, ಚಿಂತಯನ್ - ಚಿಂತಿಸುತ್ತಾ, ತಪಸ್ಸುಮಾಡಿದನು ॥೨೦॥ ಪ್ರಾಣಾ...ಸಾ, ಪ್ರಾ

---

ಹ್ಮಜ್ಞಾನಿಗಳಲ್ಲಿ ವರಿಷ್ಠನಾದ ಅತ್ರಿಮುನಿಯು ಬ್ರಹ್ಮನಿಂದ ಪ್ರಜಾಸೃಷ್ಟಿಗಾಗಿ ಪ್ರೇರಿತನಾಗಿ, ತಪಸ್ಸುಗೈಯ್ಯಬೇಕೆಂದೆಳಸಿ ತನ್ನ ಮಡದಿಯಾದ ಅನಸೂಯೆಯಿಂದೊಡಗೂಡಿ, ಋಕ್ಷವೆಂಬ ಕುಲಪರ್ವತಕ್ಕೆ ತೆರಳಿದನು ॥೧೭॥ ಹೂಗೊಂಚಲುಗಳಿಂದ ರಮಣೀಯ್ಯಗಳಾದ ಪಲಾಶ, ಅಶೋಕವೃಕ್ಷಗಳಿಂದಲೂ, ಎಲ್ಲೆಲ್ಲಿಯೂ ಭೋರ್ಗರೆದು ಹರಿಯುತ್ತಿರುವ ನಿರ್ವಿಂಧ್ಯಾನದಿಯಿಂದಲೂ, ಒಪ್ಪುತ್ತಿರುವ ಆ ಕಾನನಪ್ರದೇಶದಲ್ಲಿ ನಿಂತವನಾಗಿ ಅತ್ರಿಮುನಿಯು, ಪ್ರಾಣವಾಯುಗಳನ್ನು ಬಿಗಿಹಿಡಿದು ಮನಸ್ಸನ್ನು ಸ್ಥಿರಗೊಳಿಸಿ, ಶೀತೋಷ್ಣಾದಿ ದ್ವಂದ್ವದುಃಖವಿಲ್ಲದೆ ವಾಯ್ವಾಹಾರದಿಂದ ಶರೀರಯಾತ್ರೆಯನ್ನು ನಡೆಯಿಸುತ್ತಾ, ನೂರಾರುವರ್ಷಗಳ ವರೆಗೂ ಒಂದೇ ಕಾಲಿನಿಂದ ನಿಂತವನಾಗಿ "ಯಾವನು ಜಗದೀಶ್ವರನೋ, ಆತನೇ ನನಗೆ ಶರಣವಾಗಲಿ, ತನಗೆ ಸಮಾನವೆನಿಸಿದ ಸಂತತಿಯನ್ನು ನನಗೀಯಲಿ" ಎಂದು ಧ್ಯಾನಿಸುತ್ತಾ ತೀವ್ರತಪಸ್ಸನ್ನು ಮಾಡಿದನು ॥೧೮-೨೦॥ ಬಳಿಕ ಪ್ರಾಣಾಯಾಮವೆಂಬ

ತಪ್ಯಮಾನಂ ತ್ರಿಭುವನಂ ಪ್ರಾಣಾಯಾಮೈಧಸಾಽ ಗ್ನಿನಾ । ನಿರ್ಗತೇನ ಮುನೇರ್ಮೂರ್ಧ್ನಃ ಸಮೀಕ್ಷ್ಯ *ಪ್ರಭವಸ್ತ್ರಯಃ ॥೨೧॥ ಅಪ್ಸರೋಮುನಿ ಗಂಧರ್ವ ಸಿದ್ಧವಿದ್ಯಾಧರೋರಗೈಃ । ವಿತಾಯಮಾನಯಶಸ ಸ್ತದಾಶ್ರಮಪದಂ ಯಯುಃ ॥೨೨॥ ತತ್ಪ್ರಾದುರ್ಭಾವ ಸಂಯೋಗವಿದ್ಯೋತಿತಮನಾ ಮುನಿಃ । ಉತ್ತಿಷ್ಠ ನ್ನೇಕಪಾದೇನ ದದರ್ಶ ವಿಬುಧರ್ಷಭಾನ್ ॥೨೩॥ ಪ್ರಣಮ್ಯ ದಂಡವದ್ಭೂಮಾ ವುಪತಸ್ಥೇಽ ರ್ಹಣಾಂಜಲಿಃ । ವೃಷಹಂಸ ಸು

ಪ್ರಾಣಾಯಾಮ - ಪ್ರಾಣನಿರೋಧವೆಂಬ, ಏಧಸಾ - ಕಾಷ್ಠಗಳುಳ್ಳ, ಮುನೇಃ - ಅತ್ರಿಯ, ಮೂರ್ಧ್ನಃ-ತಲೆಯಿಂದ, ನಿರ್ಗತೇನ - ಹೊರಟಿರುವ, ಅಗ್ನಿನಾ - ತಪೋಗ್ನಿ ಜ್ವಾಲೆಗಳಿಂದ, ತಪ್ಯಮಾನಂ - ತಪಿಸಲ್ಪಡುತ್ತಿರುವ, ತ್ರಿಭುವನಂ - ಮೂರುಲೋಕವನ್ನೂ, ಸಮೀಕ್ಷ್ಯ - ಕಂಡು, ತ್ರಯಃ-ಮೂವರಾದ, ಪ್ರಭವಃ-ಹರಿಹರಬ್ರಹ್ಮರು ॥೨೧॥

ಅಪ್ಸರೋ...ಗೈಃ, ಅಪ್ಸರಸ್ಸುಗಳು, ಮುನಿಗಳು, ಗಂಧರ್ವರು,ಸಿದ್ಧರು, ವಿದ್ಯಾಧರರು, ಉರಗರು-ಇವರಿಂದ, ವಿತಾ...ಸಃ, ವಿತಾಯಮಾನ - ಹೊಗಳಲ್ಪಡುವ, ಯಶಸಃ - ಕೀರ್ತಿಯುಳ್ಳವರಾಗಿ, ತದಾ...ದಂ, ತತ್- ಆ ಅತ್ರಿಯ, ಆಶ್ರಮಪದಂ - ಆಶ್ರಮವನ್ನು, ಯಯುಃ-ಹೊಂದಿದರು ॥೨೨॥ ತತ್...ನಾಃ. ತತ್ - ಆ ತ್ರಿಮೂರ್ತಿಗಳ, ಪ್ರಾದುರ್ಭಾವ - ಸಾಕ್ಷಾತ್ಕಾರದ, ಸಂಯೋಗ- ಸಾನ್ನಿಧ್ಯದಿಂದ, ವಿದ್ಯೋತಿತ - ಬೆಳಗಿಸಲ್ಪಟ್ಟ, ಮನಾಃ - ಮನಸ್ಸುಳ್ಳ, ಮುನಿಃ - ಅತ್ರಿಯು, ಏಕಪಾದೇನ- ಒಂದು ಕಾಲಿನಿಂದ, ಉತ್ತಿಷ್ಠನ್ - ಎದ್ದವನಾಗಿ, ವಿಬುಧರ್ಷಭಾನ್ - ದೇವಶ್ರೇಷ್ಠರಾದ ತ್ರಿಮೂರ್ತಿಗಳನ್ನು, ದದರ್ಶ - ಕಂಡನು ॥೨೩॥ ಭೂಮೌ - ನೆಲದಲ್ಲಿ, ದಂಡವತ್-ದಂಡದಂತೆ, ಪ್ರಣಮ್ಯ - ನಮಸ್ಕರಿಸಿ, ಅರ್ಹ...ಲಿಃ,

ಕಾಷ್ಠಗಳಿಂದ ಉರಿಸಲ್ಪಟ್ಟು, ಆ ಅತ್ರಿಮುನಿಯ ಶಿರಃ ಕಪಾಲದಿಂದ ಹೊರಹೊಮ್ಮುತ್ತಿರುವ ತಪೋಗ್ನಿಯು ಮೂರುಲೋಕಗಳನ್ನೂ ಸುಡುತ್ತಿರಲು, ಜಗತ್ಸೃಷ್ಟಿಸ್ಥಿತಿ, ಲಯಗಳಿಗೆ ಕಾರಣರಾದ ತ್ರಿಮೂರ್ತಿಗಳೂ ಅದನ್ನು ಕಂಡು, ಅಪ್ಸರಸ್ತ್ರೀಯರು, ಮುನಿಗಳು, ಗಂಧರ್ವರು, ಸಿದ್ಧರು, ವಿದ್ಯಾಧರರು, ಉರಗರು ಮೊದಲಾದವರಿಂದ ಪರಿವೃತರಾಗಿ ಹೊಗಳಿಸಿಕೊಳ್ಳುತ್ತಾ, ಆ ಅತ್ರಿಮಹರ್ಷಿಯ ಆಶ್ರಮಕ್ಕೆ ಬಂದರು ॥೨೨॥ ಆಗ ಅತ್ರಿಮುನಿಯು ಆ ತ್ರಿಮೂರ್ತಿಗಳು ಪ್ರತ್ಯಕ್ಷರಾಗಿ ದರ್ಶನವನ್ನಿತ್ತುದರಿಂದ ಸಂತುಷ್ಟಾಂತರಂಗನಾಗಿ ಒಂದೇ ಕಾಲಿನಿಂದೆದ್ದು ಅವರನ್ನು ದರ್ಶನಮಾಡಿದನು ॥೨೩॥ ಬಳಿಕ ದೀರ್ಘದಂಡನಮಸ್ಕಾರವನ್ನು ಮಾಡಿ ಗಂಧ, ಪುಷ್ಪ, ಮೊದಲಾದ ಪೂಜಾಸಾಮಗ್ರಿಗಳನ್ನು ತೆಗೆದುಕೊಂಡು, ವೃಷಭ, ಹಂಸ, ಗರುಡಾರೂಢರಾಗಿ ತ್ರಿಶೂಲ, ಡಮರುಗ, ಪುಸ್ತಕ, ಕಮಂಡಲು, ಶಂಖ. ಚಕ್ರ, ಮೊದಲಾದ ತಮ್ಮತಮ್ಮ ಚಿಹ್ನಗಳಿಂದ ರಾರಾಜಮಾನರಾದ ಶಿವ, ಬ್ರಹ್ಮ, ವಿಷ್ಣುಗಳನ್ನು ಯಥಾ ವಿಧಿಯಾಗಿ ಪೂಜಿಸಿ, ದಯಾಮೃತರಸವನ್ನು ತುಳುಕಿಸುತ್ತಿರುವ ಕ

* ಟಿ. ಅತ್ರಿಮುನಿಯು 'ಯಾವನು ಜಗದೀಶ್ವರನೋ ಅವನೇ ನನಗೆ ಶರಣವಾಗಲಿ' ಎಂದು ಸೃಷ್ಟಿ, ಸ್ಥಿತಿ, ಲಯಗಳನ್ನು ನಡೆಯಿಸುವವನನ್ನಾಗಿ ಪರಮಾತ್ಮನನ್ನು ಉಪಾಸನ ಮಾಡಿದುದರಿಂದ, ಬ್ರಹ್ಮರುದ್ರರಲ್ಲಿ ಅಂತರ್ಯಾಮಿಯಾದ ಪರಮಾತ್ಮನೇ ಅವರರೂಪದಿಂದ ಸೃಷ್ಟಿ ಲಯಗಳನ್ನು ನಡೆಯಿಸುವಕಾರಣ, ತ್ರಿಮೂರ್ತಿಗಳೂ ಬಂದರೆಂಬುದು ಯುಕ್ತವು.

ಪರ್ಣಸ್ಥಾನ್ ಸ್ವೈಃ ಸ್ವೈಶ್ಚಿಹ್ನೈಶ್ಚ ಚಿಹ್ನಿತಾನ್ ||೨೪|| ಕೃಪಾಽವಲೋ
ಕೇನ ಹಸದ್ವದನೇನೋಪಲಂಭಿತಾನ್ । ತದ್ರೋಚಿಷಾ ಪ್ರತಿಹತೇ ನಿಮೀ
ಲ್ಯ ಮುನಿರಕ್ಷಿಣೀ ||೨೫|| ಚೇತಸ್ತತ್ಪ್ರವಣಂ ಯುಂಜನ್ನಸ್ತಾವೀತ್ಸಂ
ಹತಾಂಜಲಿಃ । ಶ್ಲಕ್ಷ್ಣಯಾ ಸೂಕ್ತಯಾ ವಾಚಾ ಸರ್ವಲೋಕಗರೀಯ
ಸಃ ||೨೬|| ಅತ್ರಿಃ || ವಿಶ್ವೋದ್ಭವಸ್ಥಿತಿಲಯೇಷು ವಿಭಜ್ಯಮಾನೈರ್ಮಾ
ಯಾಗುಣೈರನುಯುಗಂ ವಿಗೃಹೀತದೇಹಾಃ । ತೇ ಬ್ರಹ್ಮವಿಷ್ಣುಗಿರಿಶಾಃ
ಪ್ರಣತೋಽಸ್ಮ್ಯಹಂ ವಸ್ತೇಭ್ಯಃ ಕಏವ ಭವತಾಂ ಮ ಇಹೋಪಹೂತಃ ||

ಅರ್ಹಣ - ಪೂಜಾದ್ರವ್ಯಗಳನ್ನು, ಅಂಜಲಿಃ - ಕೈಯಲ್ಲಿಟ್ಟುಕೊಂಡು, ವೃಷ..ಸ್ಥಾನ್, ವೃಷ - ಎತ್ತು, ಹಂಸ, ಸುಪರ್ಣ - ಗರುಡ ಇವರಮೇಲೆ, ಸ್ಥಾನ್ - ಇರುವ, ಸ್ವೈಃಸ್ವೈಃ- ತಂತಮ್ಮ, ಚಿಹ್ನೈಃ- ಚಿಹ್ನಗಳಿಂದ, ಚಿಹ್ನಿತಾನ್ - ಗುರ್ತುಮಾಡಲ್ಪಟ್ಟ, ಕೃಪಾವಲೋಕೇನ- ಕರುಣಾ ಕಟಾಕ್ಷವುಳ್ಳ, ಹಸದ್ವದನೇನ - ನಗೆಮೊಗದಿಂದ, ಉಪಲಂಭಿತಾನ್ - ಅನುಗ್ರಹವನ್ನು ಸೂಚಿಸುತ್ತಿರುವ, ತ್ರಿಮೂರ್ತಿಗಳನ್ನು, ಉಪತಸ್ಥೇ - ಪೂಜಿಸಿದನು, ತದ್ರೋಚಿಷಾ - ಅವರತೇಜಸ್ಸಿನಿಂದ, ಪ್ರತಿಹತೇ- ಹೊಡೆಯಲ್ಪಟ್ಟ, ಅಕ್ಷಿಣೀ- ಕಣ್ಣುಗಳನ್ನು, ನಿಮೀಲ್ಯ - ಮುಚ್ಚಿ, ಚೇತಃ - ಮನಸ್ಸನ್ನು, ತತ್ಪ್ರವಣಂ - ಅವರಲ್ಲಿ ಆಸಕ್ತವನ್ನಾಗಿ, ಯುಂಜನ್ - ನೆಲೆಗೊಳಿಸಿ, ಸರ್ವ...ಸಃ, ಸರ್ವ - ಎಲ್ಲ, ಲೋಕ - ಲೋಕಗಳಿಗೂ, ಗರೀಯಸಃ - ದೊಡ್ಡವರಾದ ತ್ರಿಮೂರ್ತಿಗಳನ್ನು ಕುರಿತು, ಸಂಹತಾಂಜಲಿಃ- ಕೈಜೋಡಿಸಿಕೊಂಡು, ಶ್ಲಕ್ಷ್ಣಯಾ - ಮೃದುವಾದ, ಸೂಕ್ತಯಾ - ಯುಕ್ತವಾದ, ವಾಚಾ - ವಾಕ್ಕುಗಳಿಂದ, ಅಸ್ತಾವೀತ್ - ಹೊಗಳಿದನು ||೨೬|| ವಿಶ್ವ...ಷು, ವಿಶ್ವ - ಪ್ರಪಂಚದ, ಉದ್ಭವ - ಉತ್ಪತ್ತಿ, ಸಂರಕ್ಷಣೆ, ಲಯೇಷು - ನಾಶ ಇವುಗಳಲ್ಲಿ, ವಿಭಜ್ಯಮಾನೈಃ - ಭಾಗಿಸಲ್ಪಟ್ಟ, ಮಾಯಾಗುಣೈಃ - ಮಾಯೆಯ ಗುಣಗಳಿಂದ, ಅನುಯುಗಂ - ಪ್ರತಿಯುಗದಲ್ಲಿಯೂ, ವಿಗೃಹೀತದೇಹಾಃ - ಬೇರೆಬೇರೆಯಾಗಿ ಶರೀರವನ್ನು ಧರಿಸಿದ, ತೇ - ಆ, ಬ್ರಹ್ಮವಿಷ್ಣುಗಿರಿಶಾಃ - ಬ್ರಹ್ಮವಿಷ್ಣುರುದ್ರರು ನೀವೇ, ಅಹಂ - ನಾನು, ವಃ - ನಿಮ್ಮನ್ನು, ಪ್ರಣತೋಽಸ್ಮಿ - ನಮಿಸುವೆನು, ತೇಭ್ಯಃ - ಅವರಲ್ಲಿ, ಮೇ - ನನ್ನಿಂದ, ಇಹ - ಇಲ್ಲಿ, ಉಪಹೂತಃ - ಕರೆಯಲ್ಪಟ್ಟವನು, ಭವತಾಂ - ನಿಮ್ಮಲ್ಲಿ, ಕಏವ - ಯಾರು ? ||೨೭||

ಡೆಗಣ್ಣುಗಳಿಂದಲೂ, ಕಿರುನಗೆಯಿಂದ ಮೆರೆಯುತ್ತಿರುವ ಪೆರೆಮೊಗದಿಂದಲೂ, ಶೋಭಿಸುವ ಆ ಕಾರಣಮೂರ್ತಿಗಳ ದಿವ್ಯತೇಜಸ್ಸಿನಿಂದ ತಳಮಳಿಸುತ್ತಿರುವ ಕಣ್ಣುಗಳನ್ನು ಮುಚ್ಚಿಕೊಂಡು, ತನ್ನ ಮನಸ್ಸನ್ನು ಆತ್ರಿಮೂರ್ತಿಗಳಲ್ಲಿ ನೆಲೆಗೊಳಿಸಿ ಬದ್ಧಾಂಜಲಿಯಾಗಿ, ಸಕಲ ಲೋಕನಿಯಾಮಕರಾದಆ ತ್ರಿಮೂರ್ತಿಗಳನ್ನು ಕುರಿತು, ಸೂಕ್ತವಾಗಿಯೂ ಮೃದುಮಧುರವಾಗಿಯೂ ಇರುವ ನುಡಿಗಳಿಂದ ಇಂತು ಹೊಗಳತೊಡಗಿದನು ||೨೪-೨೬|| ಎಲೈ ಮಹಾತ್ಮರಿರಾ ! ಪ್ರತಿಯುಗದಲ್ಲಿಯೂ ಜಗತ್ಸೃಷ್ಟಿ, ಸ್ಥಿತಿ ಲಯಗಳನ್ನು ನಡೆಯಿಸುವದಕ್ಕಾಗಿ ವಿಭಾಗಮಾಡಲ್ಪಡುವ ಮಾಯಾಗುಣಗಳಾದ ರಜಸ್ಸತ್ವತಮಸ್ಸುಗಳಿಂದ ಬ್ರಹ್ಮವಿಷ್ಣು, ರುದ್ರರೆಂದು ಭಿನ್ನಭಿನ್ನಗಳಾದ ನಾಮರೂಪಗಳನ್ನು ಪಡೆದ ನಿಮಗೆ ನಮಸ್ಕಾರವು. ಬ್ರಹ್ಮವಿಷ್ಣುರುದ್ರಾದಿಗಳಲ್ಲಿ ನನ್ನ ಧ್ಯಾನಕ್ಕೆ ವಿಷಯನಾದವನು ಯಾವನೊ; ಅವನನ್ನು ನೀವೇ ದಯಮಾಡಿ ತಿಳುಹಬೇಕು ||೨೭|| ಪುತ್ರಸಂತತಿಯಾಗಬೇಕೆಂದು ನಾನು ತಪ

ಏಕೋ ಮಯೇಹ ಭಗವಾನ್ ವಿವಿಧ ಪ್ರಧಾನ್ಯೈಃ ಚಿತ್ತೀಕೃತಃ ಪ್ರಜನನಾ
ಯ ಕಥಂನು? ಯೂಯಂ।ಅತ್ರಾಗತಾಸ್ತನುಭೃತಾಂ ಮನಸೋಽಪಿ ದೂರಾ
ದ್ಬ್ರೂತ ಪ್ರಸೀದತ ಮಹಾನಿಹ ವಿಸ್ಮಯೋ ಮೇ ॥ ೨೮ ॥ ಮೈತ್ರೇಯಃ ॥
ಇತಿ ತಸ್ಯವಚಃ ಶ್ರುತ್ವಾ ತ್ರಯಸ್ತೇ ವಿಬುಧರ್ಷಭಾಃ।ಪ್ರತ್ಯಾಹುಃ ಶ್ಲಕ್ಷ್ಣ
ಯಾ ವಾಚಾ ಪ್ರಹಸ್ಯ ತಮೃಷಿಂ ಪ್ರಭೋ ! ॥ ೨೯ ॥ ದೇವಾಃ॥ †ಯಥಾ

ಇಹ - ಇಲ್ಲಿ, ಮಯಾ - ನನ್ನಿಂದ, ಪ್ರಜನನಾಯ - ಪುತ್ರೋತ್ಪತ್ತಿಗಾಗಿ, ಏಕಃ - ಒಬ್ಬನಾದ ಭಗವಾನ್ - ಭಗವಂತನು, ವಿವಿಧ ಪ್ರಧಾನ್ಯೈಃ - ಹಲವು ಬಗೆಯಾದ ಮುಖ್ಯೋಪಚಾರಗಳಿಂದ, ಚಿತ್ತೀಕೃತಃ - ಚಿತ್ತದಲ್ಲಿ ಐಕ್ಯಗೊಳಿಸಲ್ಪಟ್ಟನು, ತನುಭೃತಾಂ - ಪ್ರಾಣಿಗಳ, ಮನಸೋಪಿ - ಮನಸ್ಸಿಗೂ, ದೂರಾತ್ - ದೂರವೆನಿಸಿರುವ, ಯೂಯಂ - ನೀವು, ಅತ್ರ - ಇಲ್ಲಿ, ಕಥಂನು - ಹೇಗೆ, ಆಗತಾಃ - ಬಂದಿರಿ ಬ್ರೂತ - ಹೇಳಿರಿ, ಪ್ರಸೀದತ - ಪ್ರಸನ್ನರಾಗಿರಿ. ಇಹ - ಈ ವಿಷಯದಲ್ಲಿ, ಮೇ-ನನಗೆ, ಮಹಾನ್-ಬಹಳ, ವಿಸ್ಮಯಃ - ಆಶ್ಚರ್ಯವು, ಮೈತ್ರೇಯನು ಹೇಳುತ್ತಾನೆ. ಹೇಪ್ರಭೋ - ಎಲೈ ವಿದುರನೆ! ವಿಬುಧರ್ಷಭಾಃ - ದೇವಶ್ರೇಷ್ಠರಾದ, ತೇತ್ರಯಃ - ಆ ಮೂರುಮಂದಿಯು, ಇತಿ - ಹೀಗೆಂಬ, ತಸ್ಯ - ಅವನ, ವಚಃ - ಮಾತನ್ನು, ಶ್ರುತ್ವಾ - ಕೇಳಿ, ಪ್ರಹಸ್ಯ-ನಕ್ಕು, ತಮೃಷಿಂ - ಆ ಅತ್ರಿಯನ್ನು ಕುರಿತು, ಶ್ಲಕ್ಷ್ಣಯಾ - ಮೃದುವಾದ, ವಾಚಾ - ಮಾತಿನಿಂದ, ಪ್ರತ್ಯಾಹುಃ - ಉತ್ತರವನ್ನು ಹೇಳುತ್ತಾರೆ ॥೨೯॥ ಹೇಬ್ರ

ಹ್ಮನ್ ! ನೀನು ಸತ್ಯಸಂಕಲ್ಪನಾದುದರಿಂದ ಮೊದಲು ನೀನು ಯಾವರೀತಿಯಲ್ಲಿ ಸಂಕಲ್ಪವ

ಸ್ಸನ್ನು ಮಾಡಿದ ಕಾಲದಲ್ಲಿ ನಾನಾವಿಧಗಳಾದುಪಚಾರಗಳಿಂದ ಒಬ್ಬ ಭಗವಂತನನ್ನು ಆ ರಾಧಿಸಿದನಲ್ಲದೆ ಹಲವರನ್ನು ಧ್ಯಾನಿಸಲಿಲ್ಲ. ಇಂತಿರುವಾಗ, ಅಯ್ಯಾ ಜಗತ್ಕಾರಣಮೂ ರ್ತಿಗಳಿರಾ ! ಪ್ರಾಣಿಕೋಟಿಯ ಮನಸ್ಸಿಗೆ ಕೂಡ ಗೋಚರವಾಗದ ನೀವು ಮೂವ್ವರೂ, ಕರೆಯಿಸಿಕೊಳ್ಳದೆಯೇ ಇಲ್ಲಿಗೆಂತು ಬಂದಿರಿ ? ಈ ವಿಷಯದಲ್ಲಿ ನನಗೆ ಅತ್ಯಾಶ್ಚರ್ಯವಾಗಿ ರುವುದರಿಂದ ನೀವು ಪ್ರಸನ್ನರಾಗಿ ಇದರ ತತ್ವವನ್ನು ಅರುಹಬೇಕೆಂದು ಬೇಡಿದನು ॥ ೨೮ ॥ ಅಯ್ಯಾ ಪ್ರಭುವೆ ! ಬಳಿಕ ದೇವತಾಸಾರ್ವಭೌಮರಾದ ಆ ತ್ರಿಮೂರ್ತಿಗಳು, ಆ ಅತ್ರಿ ಮಹರ್ಷಿಯ ಮಾತನ್ನು ಕೇಳಿ ಮಂದಹಾಸವನ್ನು ಬೀರುತ್ತಾ, ನಸೊಂಪಾದ ಸವಿನುಡಿಗಳಿಂ ದಿಂತು ಉತ್ತರವನ್ನು ಹೇಳತೊಡಗಿದರು ॥೨೯॥ ಎಲೈ ಬ್ರಾಹ್ಮಣೋತ್ತಮನಾದ ಅತ್ರಿಮು ನಿಯೆ ! ನೀನು ಸತ್ಯಸಂಕಲ್ಪನಾದುದರಿಂದ ಮೊದಲು ನೀನು ಯಾವರೀತಿಯಲ್ಲಿ ಸಂಕಲ್ಪವ ನ್ನು ಮಾಡಿ ತಪಸ್ಸುಮಾಡಿದೆಯೋ, ಅಂತೆಯೇ ಆಗಬೇಕಲ್ಲದೆ ಬೇರೆಯಾಗುವುದಿಲ್ಲ. ನೀನು

† ಅಯ್ಯಾ ಮುನಿಯೆ ! ಮೂರ್ತಿ ವಿಶೇಷ ನಿಶ್ಚಯವಿಲ್ಲದೆ ಸಾಮಾನ್ಯವಾಗಿ “ ಜಗತ್ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣನಾದ ಈಶ್ವರನು ನನಗೆ ಪ್ರಸನ್ನನಾಗಲಿ ” ಎಂದು ನೀನು ಸಂಕಲ್ಪಿಸಿದೆಯಾದುದರಿಂದ ಸಾಕ್ಷಾತ್ತಾಗಲಿ, ಪರಂಪರೆಯಿಂದಾಗಲಿ, ಜಗತ್ಕಾರಣರೆನಿಸಿರುವ ನಾವು ಮೂವರೂ ಬಂದೆವು. ಶ್ರುತಿ, ಸ್ಮೃತಿಗಳಿಂದ ತ್ರಿಮೂರ್ತಿಗಳಿಗೆ ಕೆಲವುಕಡೆ ಅಭೇದವೂ, ಕೆಲವೆಡೆ ಭೇದವೂ, ಕೆಲವೆಡೆ ನಿಯಮ್ಯನಿಯಾ ಮಕಭಾವವೂ, ತೋರಬರುವುದರಿಂದ ಜಗತ್ಕಾರಣತತ್ವವು ತ್ರಿಮೂರ್ತಿಗಳಿಗಿಂತ ಬೇರೆಯಾಗಿರಬಹುದೆಂಬ ಸಂಶಯವುಂಟಾಗಬಹುದು. ಆದರೆ ಬ್ರಹ್ಮರುದ್ರಾದಿಗಳು ಕರ್ಮವಶರೆಂತಲೂ,ನಾರಾಯಣಮೂರ್ತಿಯು ಸ್ವ ತಂತ್ರನೆಂತಲೂ, ಸ್ಪಷ್ಟವಾಗುವುದರಿಂದ ನಾರಾಯಣಮೂರ್ತಿಯೇ ಸರ್ವೋತ್ತಮತತ್ವವೆಂದರಿಯಬೇಕು.

ಕೃತ ಸ್ತೇ ಸಂಕಲ್ಪೋ ಭಾವ್ಯಂ ತೇ ನೈವ ನಾಽನ್ಯಥಾ। ಸತ್ಸಂಕಲ್ಪಸ್ಯ ತೇ ಬ್ರಹ್ಮನ್! ಯದ್ವೈ ಧ್ಯಾಯತಿ ತೇ ವಯಂ ॥ ೩೦ ॥ ಅಥಾಽಸ್ಮದಂಶಭೂತಾ ಸ್ತೇ ಆತ್ಮಜಾ ಲೋಕವಿಶ್ರುತಾಃ । ಭವಿತಾರೋಽಂಗ! ಭದ್ರಂತೇ ವಿಸ್ರಪ್ಸ್ಯಂತಿ ಚ ತೇ ಯಶಃ ॥ ೩೧ ॥ ಏವಂ ಕಾಮವರಂ ದತ್ವಾ ಪ್ರತಿಜಗ್ಮು ಸ್ಸುರೇಶ್ವರಾಃ । ಸಭಾಜಿತಾ ಸ್ತಯೋ ಸ್ಸಮ್ಯಕ್ ದಂಪತ್ಯೋ ರ್ಮಿಷತೋ ಸ್ತತಃ ॥ ೩೨ ॥ ಸೋಮೋಽಭೂ ದ್ಬ್ರಹ್ಮಣೋಽಂಶೇನ ದತ್ತೋ ವಿಷ್ಣೋಸ್ತು ಯೋಗವಿತ್ । ದುರ್ವಾಸಾ ಶ್ಶಂಕರ ಸ್ಯಾಂಽಶೋ ನಿಬೋಧಾಽಂಗಿರಸಃ ಪ್ರಜಾಃ ॥೩೩ ॥ ಶ್ರದ್ಧಾ ತ್ವಂಗಿರಸಃ ಪತ್ನೀ ಚತಸ್ರೋಽಸೂತ

ಹ್ಮನ್ - ಎಲೈ ಬ್ರಾಹ್ಮಣನೆ! ತೇ - ನಿನ್ನಿಂದ, ಸಂಕಲ್ಪಃ - ಸಂಕಲ್ಪವು, ಯಥಾ - ಹೇಗೆ, ಕೃತಃ - ಮಾಡಲ್ಪಟ್ಟಿತೋ, ತೇನ - ಅದರಿಂದ, ತಥೈವ - ಹಾಗೆಯೇ, ಅನ್ಯಥಾ - ಬೇರೆ, ನ - ಅಲ್ಲ. ಯತ್ - ಯಾವುದನ್ನು, ಧ್ಯಾಯತಿ - ಧ್ಯಾನಮಾಡಿದೆಯೋ, ತೇವಯಂ - ಅವರೇನಾವು ॥೩೦॥ ಹೇಅಂಗ - ಎಲೈಮುನಿಯೆ! ಅಥ - ಇನ್ನು, ಅಸ್ಮ...ತಾಃ, ಅಸ್ಮತ್ - ನಮ್ಮ, ಅಂಶ - ಅಂಶಗಳಿಂದ, ಭೂತಾಃ-ಉಂಟಾಗುವ ತೇ - ನಿನ್ನ, ಆತ್ಮಜಾಃ - ಮಕ್ಕಳು, ಲೋಕವಿಶ್ರುತಾಃ - ಲೋಕಪ್ರಸಿದ್ಧರು, ಭವಿತಾರಃ- ಆಗುತ್ತಾರೆ, ತೇ - ನಿನ್ನ, ಯಶಃ - ಕೀರ್ತಿಯನ್ನು, ವಿಸ್ರಪ್ಸ್ಯಂತಿಚ - ವಿಸ್ತರಗೊಳಿಸುವರು, ತೇ - ನಿನಗೆ, ಭದ್ರಂ - ಮಂಗಳವಾಗಲಿ ॥೩೧॥ ಏವಂ - ಇಂತು, ಕಾಮವರಂ - ಇಷ್ಟವಾದ ವರವನ್ನು, ದತ್ವಾ - ಕೊಟ್ಟು, ಸುರೇಶ್ವರಾಃ - ತ್ರಿಮೂರ್ತಿಗಳು, ತಯೋಃ - ಅವರಿಂದ, ಸಭಾಜಿತಾಃ - ಪೂಜಿಸಲ್ಪಟ್ಟವರಾಗಿ, ದಂಪತ್ಯೋಃ - ಆ ಗಂಡಹೆಂಡಿರು, ಮಿಷತೋಃ - ನೋಡುತ್ತಿರುವಾಗಲೇ, ಪ್ರತಿಜಗ್ಮುಃ - ಹೊರಟುಹೋದರು ॥೩೨॥ ಬ್ರಹ್ಮಣಃ - ಬ್ರಹ್ಮನ, ಅಂಶೇನ - ಅಂಶದಿಂದ, ಸೋಮಃ - ಚಂದ್ರನು, ಅಭೂತ್ - ಹುಟ್ಟಿದನು, ವಿಷ್ಣೋಃ - ವಿಷ್ಣುವಿನಂಶದಿಂದ, ಯೋಗವಿತ್ - ಯೋಗಿಯಾದ, ದತ್ತಃ - ದತ್ತಾತ್ರೇಯನು ಜನಿಸಿದನು, ದುರ್ವಾಸಾಃ - ದುರ್ವಾಸನು, ಶಂಕರಸ್ಯ - ಈಶ್ವರನ, ಅಂಶಃ - ಅಂಶದಿಂದ ಜನಿಸಿದನು, ಅಥ- ಇನ್ನು, ಅಂಗಿರಸಃ - ಅಂಗಿರಸ್ಸಿನ, ಪ್ರಜಾಃ - ಸಂತತಿಯನ್ನು, ನಿಬೋಧ - ತಿಳಿ ॥೩೩॥ ಅಂಗಿರಸಃ -

ಜಗದೀಶ್ವರನೆಂಬ ಯಾವ ಒಂದೇ ತತ್ವವನ್ನು ಧ್ಯಾನಮಾಡಿದೆಯೋ, ಆ ತತ್ವವೇ ನಾವಾದುದರಿಂದ ನಮ್ಮಲ್ಲಿ ಭೇದವನ್ನೆಣಿಸಬೇಡ ॥೩೦॥ ಅಯ್ಯಾ ಶ್ರೋತ್ರಿಯೋತ್ತಮನಾದ ಅತ್ರಿಮುನಿಯೆ! ನಮ್ಮ ಅಂಶಗಳಿಂದ ನಿನಗೆ ಪುತ್ರರಾಗಿ ಜನಿಸುವ ಈ ದತ್ತದುರ್ವಾಸಸ್ಸೋಮರು ಲೋಕವಿಖ್ಯಾತರಾಗುವುದಲ್ಲದೆ, ನಿನ್ನ ಕೀರ್ತಿಯನ್ನು ವಿಸ್ತರಿಸುವರು. ನಿನಗೆ ಮಂಗಳವಾಗಲಿ ॥೩೧॥ ಎಂದು ಆ ತ್ರಿಮೂರ್ತಿಗಳು ಅತ್ರಿಮುನಿಯ ಇಷ್ಟಾನುಸಾರವಾಗಿ ವರವನ್ನಿತ್ತು, ಸಂತುಷ್ಟರಾದ ಅವರಿಂದ ಮರ್ಯಾದೆಯನ್ನುಪಡೆದು, ಆ ದಂಪತಿಗಳು ನೋಡುತ್ತಿರುವಂತೆಯೇ ಮಾಯವಾದರು॥೩೨॥ ಅನಂತರದಲ್ಲಿ ಮಹಾಪತಿವ್ರತೆಯಾದ ಅನುಸೂಯಾದೇವಿಯುದರದಲ್ಲಿ ಬ್ರಹ್ಮಾಂಶದಿಂದ ಚಂದ್ರನೂ, ವಿಷ್ಣುವಿನಂಶದಿಂದ ದತ್ತಾತ್ರೇಯನೂ, ಈಶ್ವರಾಂಶದಿಂದ ದುರ್ವಾಸನೂ ಅತ್ರಿಗೆ ಪುತ್ರರಾಗಿ ಜನಿಸಿದರು. ಎಲೈ ರಾಜನೆ! ಇನ್ನು ಅಂಗಿರಸ್ಸಿನ ವಂಶಾವಳಿಯನ್ನು ವಿಸ್ತರಿಸುವೆನು ಕೇಳು ॥೩೩॥ ಅಂಗಿರಸ್ಸಿನ ಪತ್ನಿಯಾದ ಶ್ರದ್ಧೆಯೆಂಬಾಕೆಯು, ಸಿನೀವಾಲಿ, ಕುಹೂ, ರಾಕಾ, ಅನುಮಿತಿ, ಎಂಬ ನಾಲ್ವರು

ಕನ್ಯಕಾಃ । ಸಿನೀವಾಲೀ ಕುಹೂ ರಾಕಾ ಚತುರ್ಥ್ಯನುಮಿತಿ ಸ್ತಥಾ ॥೩೪॥
ತತ್ಪುತ್ರಾ ವಪರಾ ವಾಸ್ತಾಂ ಖ್ಯಾತೌ ಸ್ವಾರೋಚಿಷೇಂತರೇ। ಉತತ್ಥ್ಯೋ
ಭಗವಾನ್ ಸಾಕ್ಷಾತ್ ಬ್ರಹ್ಮಿಷ್ಠಶ್ಚ ಬೃಹಸ್ಪತಿಃ ॥ ೩೫ ॥ ಪುಲಸ್ತ್ಯೋಽ
ಜನಯತ್ಪತ್ನ್ಯಾ ಮಗಸ್ತ್ಯಂಚ ಹವಿರ್ಭುವಿ। ಸೋಽನ್ಯ ಜನ್ಮನಿ ದಹ್ರಾಗ್ನಿ
ರ್ವಿಶ್ರವಾಶ್ಚ ಮಹಾತಪಾಃ ॥ ೩೬ ॥ ತಸ್ಯ ಯಕ್ಷಪತಿ ರ್ದೇವಃ ಕುಬೇರ
ಸ್ತ್ವಿಲಬಿಲಾಸುತಃ । ರಾವಣಃ ಕುಂಭಕರ್ಣಶ್ಚ ತಥಾಽನ್ಯಸ್ಯಾಂ ವಿಭೀಷ
ಣಃ ॥ ೩೭ ॥ ಪುಲಹಸ್ಯ ರತಿ ರ್ಭಾರ್ಯಾ ತ್ರೀನಸೂತ ಸತೀ ಸುತಾನ್ ।

---

ಅಂಗಿರಸ್ಸಿನ, ಪತ್ನೀ - ಹೆಂಡತಿಯಾದ, ಶ್ರದ್ಧಾತು - ಶ್ರದ್ಧೆಯೆಂಬವಳು, ಸಿನೀವಾಲೀ, ಕುಹೂ, ರಾಕಾ, ತಥಾ - ಹಾಗೆಯೇ, ಚತುರ್ಥೀ - ನಾಲ್ಕನೆಯವಳಾದ, ಅನುಮಿತಿ, ಎಂಬ, ಚತಸ್ರಃ - ನಾಲ್ವರು, ಕನ್ಯಕಾಃ - ಹೆಣ್ಣುಮಕ್ಕಳನ್ನು, ಅಸೂತ - ಹೆತ್ತಳು ॥೩೪॥

ಸಾಕ್ಷಾತ್ - ಪ್ರತ್ಯಕ್ಷವಾಗಿ, ಭಗವಾನ್ - ಭಗವಂತನಾಗಿಯೂ, ಬ್ರಹ್ಮಿಷ್ಠಃ - ಬ್ರಹ್ಮಜ್ಞಾನಿಯಾಗಿಯೂ ಇರುವ, ಉತಥ್ಯಃ - ಉತಥ್ಯನು, ಬೃಹಸ್ಪತಿಃ - ಬೃಹಸ್ಪತಿಯೂ, ಎಂದು, ಖ್ಯಾತೌ - ಪ್ರಸಿದ್ಧರಾದ, ಅಪರೌ - ಬೇರೆ, ತತ್ಪುತ್ರೌ - ಆತನ ಇಬ್ಬರುಮಕ್ಕಳು, ಸ್ವಾರೋಚಿಷೇ - ಸ್ವಾರೋಚಿಷವೆಂಬ ಅಂತರೇ - ಮನ್ವಂತರದಲ್ಲಿ, ಆಸ್ತಾಂ - ಇದ್ದರು ॥೩೫॥ ಪುಲಸ್ತ್ಯಃ - ಪುಲಸ್ತ್ಯನು, ಪತ್ನ್ಯಾಂ - ಹೆಂಡತಿಯಾದ, ಹವಿರ್ಭುವಿ - ಹವಿರ್ಭೂ ಎಂಬ ಕರ್ದಮ ಪುತ್ರಿಯಲ್ಲಿ, ಅಗಸ್ತ್ಯಂ - ಅಗಸ್ತ್ಯಮುನಿಯನ್ನು, ಅಜನಯತ್ - ಜನಯಿಸಿದನು, ಸಃ - ಆ ಅಗಸ್ತ್ಯನು, ಅನ್ಯಜನ್ಮನಿ - ಬೇರೆಜನ್ಮದಲ್ಲಿ, ದಹ್ರಾಗ್ನಿಃ - ಜಠರಾಗ್ನಿಯು, ಮತ್ತು ಮಹಾತಪಾಃ - ಮಹಾ ತಪಸ್ವಿಯಾದ, ವಿಶ್ರವಾಶ್ಚ - ವಿಶ್ರವಸ್ಸು ಆದನು ॥೩೬॥ ತಸ್ಯ - ಆ ವಿಶ್ರವಸ್ಸಿಗೆ, ಇಲಬಿಲಾಸುತಃ - ಇಲಬಿಲೆಯ ಪುತ್ರನೂ, ಯಕ್ಷಪತಿಃ - ಯಕ್ಷರಿಗೊಡೆಯನೂ, ದೇವಃ - ಪ್ರಕಾಶಮಾನನೂ ಆದ, ಕುಬೇರಃ - ಕುಬೇರನು, ತಥಾ - ಹಾಗೆಯೇ, ಅನ್ಯಸ್ಯಾಂ - ಮತ್ತೊಬ್ಬ ಕೇಶಿನಿಯೆಂಬ ಹೆಂಡತಿಯಲ್ಲಿ, ರಾವಣಃ - ರಾವಣನು, ಕುಂಭಕರ್ಣಶ್ಚ - ಕುಂಭಕರ್ಣನು, ವಿಭೀಷಣಃ - ವಿಭೀಷಣನು ಜನಿಸಿದರು ॥೩೭॥ ಹೇಮಹಾಮತೇ - ಎಲೈ ಪ್ರಜ್ಞನೇ! ಪುಲಹಸ್ಯ - ಪುಲಹನ, ಭಾರ್ಯಾ -

---

ಹೆಣ್ಣುಮಕ್ಕಳನ್ನು ಹೆತ್ತಳು ॥೩೪॥ ಮತ್ತು ಆ ಅಂಗಿರಸ್ಸಿಗೆ ಸ್ವಾರೋಚಿಷಮನ್ವಂತರದಲ್ಲಿ ಸಾಕ್ಷಾತ್ ಭಗವತ್ಸ್ವರೂಪರೂ, ಬ್ರಹ್ಮಜ್ಞಾನಸಂಪನ್ನರೂ, ಲೋಕಪ್ರಸಿದ್ಧರೂ, ಆದ ಉತಥ್ಯ, ಬೃಹಸ್ಪತಿ, ಎಂಬ ಇಬ್ಬರು ಗಂಡುಮಕ್ಕಳೂ ಜನಿಸಿದರು ॥೩೫॥ ಪುಲಸ್ತ್ಯನೆಂಬ ಪ್ರಜಾಪತಿಯು ಕರ್ದಮನ ಮಗಳಾದ ಹವಿರ್ಭೂ ಎಂಬಾಕೆಯನ್ನು ಮದುವೆಯಾಗಿ, ಆಕೆಯಲ್ಲಿ ಅಗಸ್ತ್ಯನೆಂಬ ಲೋಕಖ್ಯಾತನಾದ ಪುತ್ರನನ್ನು ಪಡೆದನು. ಆ ಅಗಸ್ತ್ಯನು ಜನ್ಮಾಂತರದಲ್ಲಿ ಜಠರಾಗ್ನಿಯೂ, ಮಹಾತಪಸ್ವಿಯಾದ ವಿಶ್ರವಸ್ಸೆಂಬವನೂ ಆಗಿದ್ದನು ॥೩೬॥ ಆ ವಿಶ್ರವಸ್ಸೆಂಬ ಬ್ರಹ್ಮನು ಕರ್ದಮಪುತ್ರಿಯಾದ ಇಲಬಿಲಾ, ಕೇಶಿನಿ, ಎಂಬ ಇಬ್ಬರು ಕನ್ನೆಯರನ್ನು ಮದುವೆಯಾದನು. ಅವರಲ್ಲಿ ಇಲಬಿಲೆಯು ಯಕ್ಷರಿಗೊಡೆಯನಾದ ಕುಬೇರನನ್ನೂ, ಕೇಶಿನಿಯು ರಾವಣ, ಕುಂಭಕರ್ಣ, ವಿಭೀಷಣರೆಂಬ ಮೂವ್ವರುಮಕ್ಕಳನ್ನೂ ಪಡೆದಳು ॥೩೭॥ ಹಾಗೆಯೇ ಪುಲಹನೆಂಬ ಪ್ರಜಾಪತಿಯು ಕರ್ದಮನಂದನೆಯಾದ ರತಿಯನ್ನು ವರಿಸಿ, ಕರ್ಮಶ್ರೇಷ್ಠ, ವರೀಯ್ಯಾಸು, ಸಹಿಷ್ಣು, ಎಂಬ ಮೂವರುಮಕ್ಕಳನ್ನು ಪಡೆ

ಕರ್ಮಶ್ರೇಷ್ಠಂ ವರೀಯಾಂಸಂ ಸಹಿಷ್ಣುಂಚ ಮಹಾಮತೇ! ॥ ೩೮ ॥ ಕ್ರತೋರಪಿ ಕ್ರಿಯಾ ಭಾರ್ಯಾ ವಾಲಖಿಲ್ಯಾನಸೂಯತ । ಋಷೀನ್ ಷಷ್ಟಿಸಹಸ್ರಾಣಿ ಜ್ವಲತೋ ಬ್ರಹ್ಮತೇಜಸಾ ॥ ೩೯ ॥ ಊರ್ಜಾಯಾಂ ಜಜ್ಞಿರೇ ಪುತ್ರಾ ವಸಿಷ್ಠಸ್ಯ ಪರಂತಪ! । ಚಿತ್ರಕೇತುಪ್ರಧಾನಾಸ್ತೇ ಸಪ್ತ ಬ್ರಹ್ಮರ್ಷಯೋಽಮಲಾಃ ॥ ೪೦ ॥ ಚಿತ್ರಕೇತುಸ್ಸುರೋಚಿಶ್ಚ ವಿರಜಾ ಮಿತ್ರ ಏವ ಚ । ಉಲ್ಬಣೋ ವಸುಭೃದ್ಯಾನೋ ದ್ಯುಮಾನ್ ಶಕ್ತ್ಯಾದಯೋಽಪರೇ ॥ ೪೧ ॥ ಚಿತ್ತಿಸ್ತ್ವಥರ್ವಣಃ ಪತ್ನೀ ಲೇಭೇ ಪುತ್ರಂ ಧೃತವ್ರತಂ। ದಧ್ಯಂಚ ಮಶ್ವಶಿರಸಂ ಭೃಗೋರ್ವಂಶಂ ನಿಬೋಧ ಮೇ ॥೪೨॥ ಭೃಗುಃ

---

ಹೆಂಡತಿಯಾದ, ಸತೀ - ಪತಿವ್ರತೆಯಾದ, ರತಿಃ - ರತಿಯು, ಕರ್ಮಶ್ರೇಷ್ಠಂ - ಕರ್ಮಶ್ರೇಷ್ಠನೆಂದೂ ವರೀಯಾಂಸಂ - ವರೀಯಸನೆಂದೂ, ಸಹಿಷ್ಣುಂಚ - ಸಹಿಷ್ಣುವೆಂದೂ, ತ್ರೀನ್ - ಮೂರುಮಂದಿ ಪುತ್ರಾನ್ - ಮಕ್ಕಳನ್ನು, ಅಸೂತ - ಹೆತ್ತಳು ॥೩೮॥ ಕ್ರತೋಃ - ಕ್ರತುವಿನ, ಭಾರ್ಯಾ - ಹೆಂಡತಿಯಾದ, ಕ್ರಿಯಾಪಿ - ಕ್ರಿಯೆಯೂ, ಬ್ರಹ್ಮತೇಜಸಾ - ಬ್ರಹ್ಮತೇಜಸ್ಸಿನಿಂದ, ಜ್ವಲತಃ - ಪ್ರಕಾಶಿಸುವ, ವಾಲಖಿಲ್ಯಾನ್ - ವಾಲಖಿಲ್ಯರೆಂಬ, ಷಷ್ಟಿಸಹಸ್ರಾಣಿ - ಅರವತ್ತುಸಾವಿರ, ಋಷೀನ್ - ಋಷಿಗಳನ್ನು, ಅಸೂತ - ಹೆತ್ತಳು, ॥೩೯॥ ಪರಂತಪ - ಎಲೈ ಶತ್ರುಸೂದನನೆ! ವಸಿಷ್ಠಸ್ಯ - ವಸಿಷ್ಠಮುನಿಯ ಹೆಂಡತಿಯಾದ, ಊರ್ಜಾಯಾಂ - ಊರ್ಜೆಯಲ್ಲಿ, ಚಿತ್ರಕೇತುಪ್ರಧಾನಾಃ - ಚಿತ್ರಕೇತು ಮೊದಲಾದ, ಅಮಲಾಃ - ನಿರ್ಮಲರಾದ, ತೇ - ಪ್ರಸಿದ್ಧರಾದ, ಸಪ್ತ - ಏಳುಮಂದಿ, ಬ್ರಹ್ಮರ್ಷಯಃ - ಬ್ರಹ್ಮಋಷಿಗಳೂ, ಪುತ್ರಾಃ - ಮಕ್ಕಳಾಗಿ, ಜಜ್ಞಿರೆ - ಹುಟ್ಟಿದರು ॥೪೦॥ ಚಿತ್ರಕೇತು, ಸುರೋಚಿ, ವಿರಜ, ಮಿತ್ರ, ಉಲ್ಬಣ, ವಸುಭೃದ್ಯಾನ, ದ್ಯುಮಂತ, ಇವರು, ಶಕ್ತ್ಯಾದಯಃ - ಶಕ್ತಿ ಮೊದಲಾದವರು, ಅಪರೇ - ಬೇರೆ ಹೆಂಡತಿಯ ಮಕ್ಕಳು ॥೪೧॥

ಅಥರ್ವಣಃ - ಅಥರ್ವನ, ಪತ್ನೀ - ಹೆಂಡತಿಯಾದ, ಚಿತ್ತಿಃ - ಚಿತ್ತಿಯು, ಧೃತವ್ರತಂ - ನಿಯಮವಂತನಾದ, ದಧ್ಯಂಚಂ - ದಧ್ಯಂಚನೆಂಬವನನ್ನೂ, ಅಶ್ವಶಿರಸಂ - ಅಶ್ವಶಿರಸ್ಕನೆಂಬವನನ್ನೂ, ಲೇಭೇ - ಹೊಂದಿದಳು, ಮೇ - ನನ್ನಿಂದ, ಭೃಗೋಃ - ಭೃಗುವಿನ, ವಂಶಂ - ವಂಶವನ್ನು, ನಿಬೋಧ - ಆಲಿಸು ॥೪೨॥ ಹೇ ಮಹಾಭಾಗ - ಎಲೈ ಮಹಾರಾಜನೆ; ಭೃಗುಃ - ಭೃಗುವು, ಪತ್ನ್ಯಾಂ - ಹೆಂಡತಿಯಾದ,

---

ದನು. ॥೩೮॥ ಕ್ರತುವೆಂಬವನೂ ಅದೇ ಕರ್ದಮನ ಮಗಳಾದ ಕ್ರಿಯೆಯನ್ನು ಕೂಡಿ ಬ್ರಹ್ಮತೇಜಸ್ಸಿನಿಂದ ಹೊಳೆಯುವ ಅರುವತ್ತು ಸಾವಿರಮಂದಿ ವಾಲಖಿಲ್ಯರೆಂಬ ವಾನಪ್ರಸ್ಥರನ್ನು ಜನಿಯಿಸಿದನು ॥೩೯॥ ಅಂತೆಯೇ ವಸಿಷ್ಠನು, ಕರ್ದಮತನೂಜೆಯಾದ ಊರ್ಜೆಯೆಂಬ ಕನ್ಯೆಯನ್ನು ಮದುವೆಯಾಗಿ ಆಕೆಯಲ್ಲಿ ಚಿತ್ರಕೇತು, ಸುರೋಚಿ, ವಿರಜ, ಮಿತ್ರ, ಉಲ್ಬಣ, ವಸುಭೃದ್ಯಾನ, ದ್ಯುಮಂತರೆಂಬ ಬ್ರಹ್ಮತೇಜೋಗರಿಷ್ಠರಾದ ಏಳುಮಂದಿ ಮಹರ್ಷಿಗಳನ್ನೂ, ಮತ್ತೊಬ್ಬ ಹೆಂಡತಿಯಲ್ಲಿ ಶಕ್ತಿ ಮೊದಲಾದವರನ್ನೂ ಪಡೆದನು ॥೪೦-೪೧॥ ಬಳಿಕ ಅಥರ್ವನು ಕರ್ದಮನ ಮಗಳಾದ ಚಿತ್ತಿಯೆಂಬವಳ ಪಾಣಿಗ್ರಹಣವನ್ನು ಮಾಡಿ ಆಕೆಯಲ್ಲಿ ನಿಯಮವಂತರಾದ ದಧ್ಯಂಚ ಅಶ್ವಶಿರಸ್ಕರೆಂಬ ಇಬ್ಬರು ಮಕ್ಕಳನ್ನು ಹೊಂದಿದನು. ಎಲೈ ಶತ್ರುತಾಪನನಾದ ವಿದುರನೆ! ಇನ್ನು ಭೃಗುವಂಶವನ್ನು ವರ್ಣಿಸುವೆನ

ಖ್ಯಾತ್ಯಾಂ ಮಹಾಭಾಗ! ಪತ್ನ್ಯಾಂ ಪುತ್ರಾನಜೀಜನತ್ । ಧಾತಾರಂಚ ವಿಧಾತಾರಂ ಶ್ರಿಯಂಚ ಭಗವತ್ಪರಾಂ ॥ ೪೩ ॥ ಆಯತಿಂ ನಿಯತಿಂ ಚೈವ ಸುತೇ ಮೇರು ಸ್ತಯೋ ರದಾತ್ । ತಾಭ್ಯಾಂ ತಯೋ ರಭವತಾಂ ಮೃಕಂಡುಃ ಪ್ರಾಣ ಏವಚ ॥೪೪॥ ಮಾರ್ಕಂಡೇಯೋ ಮೃಕಂಡಸ್ಯ ಪ್ರಾಣಾ ದ್ವೇದಶಿರಾ ಮುನಿಃ । ಕವಿಶ್ಚ ಭಾರ್ಗವೋ ಯಸ್ಯ ಭಗವಾ ನುಶನಾ ಸುತಃ ೪೫ ॥ ತ ಏತೇ ಮುನಯಃ ಕ್ಷತ್ತಃ! ಲೋಕಾನ್ ಸರ್ಗೈ ರಭಾವಯನ್। ಏಷ ಕರ್ದಮ ದೌಹಿತ್ರಸಂತಾನಃ ಕಥಿತ ಸ್ತವ॥೪೬॥ಶೃಣ್ವತ ಶ್ಶ್ರದ್ದಧಾನಸ್ಯ

ಖ್ಯಾತ್ಯಾಂ - ಖ್ಯಾತಿಯೆಂಬವಳಲ್ಲಿ, ಧಾತಾರ- ವಿಧಾತಾರ ಎಂಬ, ಇಬ್ಬರುಮಕ್ಕಳನ್ನೂ, ಭಗವತ್ಪರಾಂ- ಭಗವಂತನನ್ನಾಶ್ರಯಿಸಿರುವ, ಶ್ರಿಯಂಚ-ಲಕ್ಷ್ಮಿಯ ಅಂಶಭೂತಳಾದ ಹೆಣ್ಣನ್ನೂ, ಪುತ್ರಾನ್-ಇವರನ್ನು ಅಜೀಜನತ್-ಜನಿಯಿಸಿದನು ॥೪೩॥ ಮೇರುಃ-ಮೇರುವೆಂಬವನು, ತಯೋಃ-ಆ ಧಾತೃವಿಧಾತೃರಿಗೆ, ಸುತೇ- ತನ್ನಮಕ್ಕಳಾದ, ಆಯತಿಂ - ಆಯತಿಯನ್ನು, ನಿಯತಿಂಚ - ನಿಯತಿಯನ್ನು, ಅದಾತ್ - ಕೊಟ್ಟನು ತಯೋಃ - ಅವರಿಗೆ, ತಾಭ್ಯಾಂ- ಆ ಆಯತಿನಿಯತಿಯರಿಂದ, ಮೃಕಂಡುಃ-ಮೃಕಂಡುವು, ಪ್ರಾಣಏವಚ- ಪ್ರಾಣನೆಂಬವನೂ, ಅಭವತಾಂ - ಉಂಟಾದರು ॥೪೪॥ ಮೃಕಂಡಸ್ಯ- ಮೃಕಂಡುವಿಗೆ, ಮಾರ್ಕಂಡೇಯಃ - ಮಾರ್ಕಂಡೇಯನೆಂತಲೂ, ಪ್ರಾಣಾತ್ - ಪ್ರಾಣನಿಂದ, ಮುನಿಃ- ಮನನಶೀಲನಾದ, ವೇದಶಿರಾಃ - ವೇದಶಿರನೆಂತಲೂ ಮಕ್ಕಳಾದರು, ಕವಿಶ್ಚ - ಕವಿಯೂ, ಭಾರ್ಗವಃ - ಭೃಗುಪುತ್ರನೇ, ಯಸ್ಯ - ಯಾವ ಕವಿಗೆ, ಭಗವಾನ್ - ಭಗವಂತನಾದ, ಉಶನಾ - ಉಶನನು, ಸುತಃ - ಮಗನೋ ॥೪೫॥ ಹೇಕ್ಷತ್ತಃ- ಎಲೈ ವಿದುರನೆ! ತಏತೇಮುನಯಃ - ಆ ಈ ಋಷಿಗಳು, ಸರ್ಗೈಃ - ತಮ್ಮ ಸಂತಾನಗಳಿಂದ, ಲೋಕಾನ್- ಲೋಕಗಳನ್ನು, ಅಭಾವಯನ್ - ಬೆಳೆಯಿಸಿದರು, ಏಷಃ - ಈ, ಕರ್ದ....ನಃ, ಕರ್ದಮ - ಕರ್ದಮ ಪ್ರಜಾಪತಿಯ, ದೌಹಿತ್ರ - ಮೊಮ್ಮಕ್ಕಳ, ಸಂತಾನಃ - ಸಂತತಿಯು, ತವ- ನಿನಗೆ, ಕಥಿತಃ - ಹೇಳಲ್ಪಟ್ಟಿತು ॥೪೬॥ ಇದು, ಶ್ರದ್ದಧಾನಸ್ಯ - ಶ್ರದ್ಧೆಯುಳ್ಳ, ಶೃಣ್ವತಃ - ಶ್ರವಣಮಾಡುವವನಿಗೆ, ಸದ್ಯಃ - ತತ್ಕ್ಷಣ

ಕೇಳು ॥ ೪೭ ॥ ಮಹಾಮಹಿಮನಾದ ಭೃಗುಮುನೀಂದ್ರನು ಕರ್ದಮನಂದನೆಯಾದ ಖ್ಯಾತಿಯೆಂದು ವಿಖ್ಯಾತಿಯನ್ನು ಪಡೆದ ಲಲನಾಮಣಿಯನ್ನು ವಿವಾಹಮಾಡಿಕೊಂಡು ಆ ಕೆಯಲ್ಲಿ ಧಾತ, ವಿಧಾತ್ರರೆಂಬ ಇಬ್ಬರು ಗಂಡುಮಕ್ಕಳನ್ನೂ, ಭಗವದ್ಧ್ಯಾನ ಪರಾಯಣೆಯೂ, ಲಕ್ಷ್ಮಿಯಪರಾವತಾರವೂ ಆದ ಒಂದು ಹೆಣ್ಣುಮಗುವನ್ನೂ ಪಡೆದನು ॥೪೩॥ ಅನಂತರದಲ್ಲಿ ಮೇರುರಾಜನು ಆಧಾತೃವಿಧಾತ್ರರಿಗೆ ತನ್ನ ಪುತ್ರಿಯರಾದ ಆಯತಿ, ನಿಯತಿ ಯೆಂಬ ಇಬ್ಬರು ಕನ್ನೆಯರನ್ನಿತ್ತು ಉದ್ವಾಹಮಾಡಿದನು. ಬಳಿಕ ಧಾತೃವು ಆಯತಿಯಲ್ಲಿ ಮೃಕಂಡುವನ್ನೂ, ವಿಧಾತ್ರನು ನಿಯತಿಯಲ್ಲಿ ಪ್ರಾಣನೆಂಬವನನ್ನೂ ಜನಿಯಿಸಿದರು ॥೪೪॥ ಆ ಮೃಕಂಡು ಮುನಿಗೆ ಮಾರ್ಕಂಡೇಯನೆಂಬ ಮಗನಾದನು. ಪ್ರಾಣನಿಗೆ ವೇದಶಿರಸ್ಕನೆಂಬ ಪುತ್ರನುದಯಿಸಿದನು. ಮಹಾತ್ಮನಾದ ಶುಕ್ರಾಚಾರ್ಯನನ್ನು ಮಗನಾಗಿ ಪಡೆದ ಕವಿಯೂ ಸಹ ಆ ಭೃಗುವಂಶೀಯನೇ ॥೪೫॥ ಅಯ್ಯಾ ವಿದುರನೆ! ಈ ಪ್ರಕಾರವಾಗಿ ನವ ಬ್ರಹ್ಮರೂ ತಂತಮ್ಮ ಸಂತತಿಗಳಿಂದ ಲೋಕವನ್ನು ಬೆಳೆಯಿಸುತ್ತಾ ಬಂದರು. ಇದೇ ಕರ್ದಮಪ್ರಜಾಪತಿಯ ದೌಹಿತ್ರಸಂತತಿಯು. ನಾನು ನಿನಗೆ ಹೇಳಿದ ಈ ಚರಿತ್ರೆಯನ್ನು ಶ್ರದ್ಧಾ

ಸದ್ಯಃ ಪಾಪಹರಃ ಪರಃ । ಪ್ರಸೂತಿಂ ಮಾನವೀಂ ದಕ್ಷ ಉಪಯೇಮೇ
ಹ್ಯಜಾತ್ಮಜಃ ॥೪೭॥ ತಸ್ಯಾಂ ಸಸರ್ಜ ದುಹಿತೄಃ ಷೋಡಶಾಮಲಲೋಚ
ನಾಃ । ತ್ರಯೋದಶಾದಾದ್ಧರ್ಮಾಯ ತಥೈಕಾಮಗ್ನಯೇ ವಿಭುಃ ॥
ಪಿತೃಭ್ಯ ಏಕಾಂ ಯುಕ್ತೇಭ್ಯೋ ಭವಾಯೈಕಾಂ ಭವಚ್ಛಿದೇ । ಶ್ರದ್ಧಾ
ಮೈತ್ರೀ ದಯಾ ಶಾಂತಿ ಸ್ತುಷ್ಟಿಃ ಪುಷ್ಟಿಃ ಕ್ರಿಯೋನ್ನತಿಃ ॥೪೯॥ ಬುದ್ಧಿ
ರ್ಮೇಧಾ ತಿತಿಕ್ಷಾ ಹ್ರೀ ಮೂರ್ತಿರ್ ಧರ್ಮಸ್ಯ ಪತ್ನಯಃ । ಶ್ರದ್ಧಾಽಸೂತ
ಶುಭಂ ಮೈತ್ರೀ ಪ್ರಸಾದ ಮಭಯಂ ದಯಾ ॥೫೦॥ ಶಾಂತಿ ಸ್ಸುಖಂ ಮುದಂ

---

ದಲ್ಲಿಯೇ, ಪಾಪಹರಃ - ಪಾಪವನ್ನು ಕಳೆಯುವುದು, ಪರಃ - ಶ್ರೇಷ್ಠವಾದುದು, ಅಜಾತ್ಮಜಃ - ಬ್ರಹ್ಮಪುತ್ರನಾದ, ದಕ್ಷಃ - ದಕ್ಷಪ್ರಜಾಪತಿಯು, ಮಾನವೀಂ - ಮನುಪುತ್ರಿಯಾದ, ಪ್ರಸೂತಿಂ - ಪ್ರಸೂತಿಯೆಂಬುವಳನ್ನು, ಉಪಯೇಮೇ - ಮದುವೆಯಾದನು ॥ ೪೭ ॥ ತಸ್ಯಾಂ - ಆಕೆಯಲ್ಲಿ, ಅಮಲಲೋಚನಾಃ - ನಿರ್ಮಲಗಳಾದ ಕಣ್ಣುಳ್ಳ, ಷೋಡಶ - ಹದಿನಾರುಮಂದಿ, ದುಹಿತೄಃ - ಹೆಣ್ಣುಮಕ್ಕಳನ್ನು, ಸಸರ್ಜ - ಸೃಷ್ಟಿಸಿದನು, ವಿಭುಃ - ದಕ್ಷನು, ಧರ್ಮಾಯ - ಧರ್ಮರಾಜನಿಗೆ, ತ್ರಯೋದಶ - ಹದಿಮೂರು ಮಂದಿಯನ್ನು ತಥಾ - ಹಾಗೆಯೇ, ಅಗ್ನಯೇ - ಅಗ್ನಿಗೆ, ಏಕಾಂ - ಒಬ್ಬಳನ್ನೂ, ಅದಾತ್ - ಕೊಟ್ಟನು ॥ ೪೮ ॥ ಯುಕ್ತೇಭ್ಯಃ - ಗುಂಪುಗೂಡಿದ, ಪಿತೃಭ್ಯಃ - ಪಿತೃಗಳಿಗೆ, ಏಕಾಂ - ಒಬ್ಬ ಮಗಳನ್ನೂ, ಭವಚ್ಛಿದೇ - ಪಾಪಹರನಾದ, ಭವಾಯ - ರುದ್ರನಿಗೆ, ಏಕಾಂ - ಒಬ್ಬಳನ್ನೂ, ಕೊಟ್ಟನು, ಶ್ರದ್ಧೆ, ಮೈತ್ರಿ, ದಯೆ, ಶಾಂತಿ, ತುಷ್ಟಿ, ಪುಷ್ಟಿ, ಕ್ರಿಯೆ, ಉನ್ನತಿ ॥ ೪೯ ॥ ಬುದ್ಧಿ, ಮೇಧೆ, ತಿತಿಕ್ಷೆ, ಹ್ರೀ, ಮೂರ್ತಿ, ಇವರು, ಧರ್ಮಸ್ಯ - ಧರ್ಮನ, ಪತ್ನಯಃ - ಹೆಂಡಿರು, ಶ್ರದ್ಧಾ - ಶ್ರದ್ಧೆಯು, ಶುಭಂ - ಶುಭವನ್ನೂ, ಮೈತ್ರೀ - ಮೈತ್ರಿಯು, ಪ್ರಸಾದಂ - ಪ್ರಸಾದವನ್ನೂ, ದಯಾ, ದಯೆಯು, ಅಭಯಂ - ಅಭಯವನ್ನೂ, ಅಸೂತ - ಹೆತ್ತರು ॥೫೦॥ ಶಾಂತಿಯು, ಸುಖಂ - ಸುಖವನ್ನೂ, ತುಷ್ಟಿಃ - ತುಷ್ಟಿಯು, ಮುದಂ - ಸಂತೋಷವನ್ನೂ, ಪುಷ್ಟಿಯು, ಸ್ಮಯಂ - ಗರ್ವವನ್ನೂ,

---

ಭಕ್ತಿಗಳಿಂದ ಕೇಳುವವರು ತಮ್ಮ ಪಾಪಗಳನ್ನು ಕಳೆದುಕೊಂಡು ಕೃತಕೃತ್ಯರಾಗುವರು. ಇಲ್ಲಿಯವರೆಗೂ ದೇವಹೂತಿಯ ಸಂತತಿಯನ್ನು ವಿವರಿಸಿದೆನು. ಇನ್ನು ಮನುವಿನ ಮೂರನೆಯ ಮಗಳಾದ ಪ್ರಸೂತಿಯ ಸಂತತಿಯನ್ನು ಬಣಿಸುವೆನು ಕೇಳು. ಚತುರ್ಮುಖ ಬ್ರಹ್ಮಪುತ್ರನಾದ ದಕ್ಷಪ್ರಜಾಪತಿಯು ಮನುಪುತ್ರಿಯಾದ ಪ್ರಸೂತಿಯನ್ನು ಪರಿಗ್ರಹಿಸಿದನು ॥೪೬-೪೭॥ ಆಕೆಯು ವಿಶಾಲನೇತ್ರಿಯರಾದ ಹದಿನಾರುಮಂದಿ ಪುತ್ರಿಯರನ್ನು ಪಡೆದಳು. ತರುವಾಯ ದಕ್ಷಪ್ರಜಾಪತಿಯು, ಯಮಧರ್ಮರಾಜನಿಗೆ ಹದಿಮೂರುಮಂದಿ ಕನ್ನೆಯರನ್ನೂ, ಅಗ್ನಿಗೆ ಒಬ್ಬಮಗಳನ್ನೂ, ಜತೆಗೂಡಿದ ಪಿತೃದೇವತೆಗಳಿಗೆ ಒಬ್ಬಮಗಳನ್ನೂ, ಪಾಪಹಾರಕನೂ ಜ್ಞಾನಪ್ರದನೂ ಆದ ಶಿವನಿಗೆ ಒಬ್ಬಮಗಳನ್ನೂ, ಕೊಟ್ಟು ಮದುವೆಗೈದನು. ಅವರಲ್ಲಿ ಶ್ರದ್ಧೆ, ಮೈತ್ರಿ, ದಯೆ, ಶಾಂತಿ, ತುಷ್ಟಿ, ಪುಷ್ಟಿ, ಕ್ರಿಯೆ ಉನ್ನತಿ, ಬುದ್ಧಿ, ಮೇಧೆ, ತಿತಿಕ್ಷೆ, ಹ್ರೀ, ಮೂರ್ತಿ, ಈ ಹದಿಮೂರುಮಂದಿ ದಕ್ಷಪುತ್ರಿಯರೂ ಯಮನ ಪತ್ನಿಯರಾದರು. ಆ ಸ್ತ್ರೀಯರಲ್ಲಿ ಶ್ರದ್ಧೆಯೆಂಬುವಳು ಶುಭವನ್ನೂ, ಮೈತ್ರಿಯು

ತುಷ್ಟಿ ಸ್ಸ್ಮಯಂ ಪುಷ್ಟಿರಸೂಯತ | ಯೋಗಂ ಕ್ರಿಯೋನ್ನತಿ ರ್ದರ್ಪ
ಮರ್ಥಂ ಬುದ್ಧಿ ರಸೂಯತ ||೫೧|| ಮೇಧಾ ಸ್ಮೃತಿಂ ತಿತಿಕ್ಷಾತು ಕ್ಷೇಮಂ
ಹ್ರೀಃ ಪ್ರಶ್ರಯಂ ಸುತಂ| ಮೂರ್ತಿಸ್ಸರ್ವಗುಣೋತ್ಪತ್ತಿ ರ್ನರನಾರಾಯ
ಣಾ ವೃಷೀ||ಯಯೋ ರ್ಜನ್ಮನ್ಯದೋ ವಿಶ್ವ ಮಭ್ಯನಂದ ತ್ಸುನಿರ್ವೃತಂ |
ಮನಾಂಸಿ ಕಕುಭೋ ವಾತಾ ಪ್ರಸೇದು ಸ್ಸರಿತೋಽದ್ರಯಃ ||೫೩||
ದಿವ್ಯವಾದ್ಯಂತ ತೂರ್ಯಾಣಿ ಪೇತುಃ ಕುಸುಮವೃಷ್ಟಯಃ | ಮುನಯ ಸ್ತು
ಷ್ಟುವು ಸ್ತುಷ್ಟಾ ಜಗು ರ್ಗಂಧರ್ವ ಕಿನ್ನರಾಃ ||೫೪|| ನೃತ್ಯಂತಿಸ್ಮ ಸ್ತ್ರಿಯೋ
ದೇವ್ಯ ಆಸೀ ತ್ಪರಮಮಂಗಳಂ | ದೇವಾ ಬ್ರಹ್ಮಾದಯ ಸ್ಸರ್ವೇ ಉಪತಸ್ಥು

ಅಸೂಯತ - ಹೆತ್ತರು, ಕ್ರಿಯೆಯು, ಯೋಗಂ - ಯೋಗವನ್ನೂ, ಉನ್ನತಿಃ - ಔನ್ನತ್ಯವು, ದರ್ಪಂ - ದರ್ಪವನ್ನೂ, ಬುದ್ಧಿಯು, ಅರ್ಥಂ - ಅರ್ಥವನ್ನೂ, ಅಸೂಯತ - ಹೆತ್ತರು ||೫೧|| ಮೇಧೆಯು, ಸ್ಮೃತಿಂ - ಸ್ಮರಣೆಯನ್ನೂ, ತಿತಿಕ್ಷಾ - ಕ್ಷಮೆಯು, ಕ್ಷೇಮಂ - ಕ್ಷೆಮವನ್ನೂ, ಹ್ರೀಃ - ನಾಚಿಕೆಯು, ಪ್ರಶ್ರಯಂ - ವಿನಯವೆಂಬ, ಸುತಂ - ಮಗನನ್ನು, ಮೂರ್ತಿಯು, ಸರ್ವಗುಣೋತ್ಪತ್ತಿಃ - ಸಕಲಗುಣಗಳಿಗೂ ಸ್ಥಾನವೆನಿಸಿದ, ನರನಾರಾಯಣರೆಂಬ, ಋಷೀ - ಋಷಿಗಳನ್ನು, ಅಸೂಯತ - ಹೆತ್ತಳು ||೫೨|| ಯಯೋಃ - ಅವರ, ಜನ್ಮನಿ - ಜನ್ಮದಲ್ಲಿ, ಅದಃ - ಈ, ವಿಶ್ವಂ - ಪ್ರಪಂಚವು, ಸುನಿರ್ವೃತಂ - ಬಹಳಸಂತೋಷಗೊಂಡು, ಅಭ್ಯನಂದತ್ - ಹರ್ಷಿಸಿತೋ, ಮನಾಂಸಿ -ಮನಸ್ಸುಗಳು, ಕಕುಭಃ - ದಿಕ್ಕುಗಳೂ, ವಾತಾಃ - ವಾಯುಗಳೂ, ಸರಿತಃ - ನದಿಗಳೂ, ಅದ್ರಯಃ - ಬೆಟ್ಟಗಳೂ, ಪ್ರಸೇದುಃ - ಪ್ರಸನ್ನಗಳಾದುವು ||೫೩|| ದಿವಿ - ಅಂತರಿಕ್ಷದಲ್ಲಿ, ತೂರ್ಯಾಣಿ - ದೇವದುಂದುಭಿಗಳು, ಅವಾದ್ಯಂತ - ಬಾರಿಸಲ್ಪಟ್ಟವು, ಕುಸುಮವೃಷ್ಟಯಃ - ಪೂಮಳೆಗಳು, ಪೇತುಃ - ಸುರಿದವು, ಮುನಯಃ - ಋಷಿಗಳು, ತುಷ್ಟಾಃ - ಸಂತೋಷಪಟ್ಟು, ತುಷ್ಟುವುಃ - ಹೊಗಳಿದರು, ಗಂಧರ್ವಕಿನ್ನರಾಃ - ಗಂಧರ್ವರು, ಕಿನ್ನರರು' ಜಗುಃ - ಗಾನಮಾಡಿದರು, ||೫೪|| ದಿವ್ಯಾಃ - ದೇವಲೋಕದ, ಸ್ತ್ರೀಯಃ - ಅಪ್ಸರಸ್ತ್ರೀಯರು, ನೃತ್ಯಂತಿಸ್ಮ - ನಾಟ್ಯಮಾಡಿದರು, ಪರಮಮಂಗಳಂ - ಬಹಳಶುಭಸೂಚನೆಗಳು, ಆಸೀತ್ - ಆದುವು, ಬ್ರಹ್ಮ

ಪ್ರಸಾದವನ್ನೂ, ದಯೆಯು ಅಭಯವನ್ನೂ, ಶಾಂತಿಯು ಸುಖವನ್ನೂ, ತೃಪ್ತಿಯು ಸಂತೋಷವನ್ನೂ, ಪುಷ್ಟಿಯು ಮದವನ್ನೂ, ಕ್ರಿಯೆಯು ಯೋಗವನ್ನೂ, ಉನ್ನತಿಯು ದರ್ಪವನ್ನೂ, ಬುದ್ಧಿಯು ಅರ್ಥವನ್ನೂ, ಮೇಧೆಯು ಸ್ಮೃತಿಯನ್ನೂ, ದುಷ್ಕಾರ್ಯದಲ್ಲಿ ಲಜ್ಜೆಯು ವಿನಯವನ್ನೂ. ಸಕಲಗುಣಸಂಪನ್ನೆಯಾದ ಮೂರ್ತಿಯು ನರನಾರಾಯಣ ಮುನೀಂದ್ರರನ್ನು ಹೆತ್ತರು ||೪೮-೫೨|| ಆ ನರನಾರಾಯಣಮಹರ್ಷಿಗಳು ಜನಿಸಿದಾಗ ಈ ಜಗತ್ತೆಲ್ಲವೂ ಅತ್ಯಂತಾನಂದವನ್ನು ಹೊಂದಿತು. ಸಕಲ ಪ್ರಾಣಿಗಳ ಮನಸ್ಸುಗಳು ಹರ್ಷಗೊಂಡವು. ದಿಕ್ಕುಗಳೆಲ್ಲವೂ ನಿರ್ಮಲಗಳಾಗಿದ್ದುವು. ಮಂದಮಾರುತಗಳು ತಣ್ಣಗೆ ಬೀಸುತ್ತಾ ಬಂದುವು. ನದಿ, ಕೊಳ ಮೊದಲಾದವುಗಳಲ್ಲಿ ಜಲವು ನಿರ್ಮಲವಾಯಿತು. ಬೆಟ್ಟಗಳೆಲ್ಲ ತಳತಳನೆ ಹೊಳೆಯುತ್ತಿದ್ದುವು ||೫೩|| ಅಂತರಿಕ್ಷದಲ್ಲಿ ದೇವದುಂದುಭಿಗಳು ಮೊಳೆದವು. ದೇವತೆಗಳು ಹೂಮಳೆಯನ್ನು ಕರೆದರು. ಪರಾವರನೇತ್ರರಾದ ಮುನಿಗಳೆಲ್ಲರೂ ಸಂತುಷ್ಟರಾಗಿ ಹೊಗಳತೊಡಗಿದರು. ಗಂಧರ್ವರೂ ಕಿನ್ನರರೂ ಗಾನಮಾಡಿದರು ||೫೪|| ರಂಭಾದಿದೇವತಾ

ರಭಿಷ್ಟವೈಃ ॥೫೫॥ ದೇವಾ ಊಚುಃ ॥ § ಯೋ ಮಾಯಯಾ ವಿರಚಿತಂ ನಿಜಯಾತ್ಮನೀದಂ ಖೇ ರೂಪಭೇದಮಿವ ತತ್ಪ್ರತಿಚಕ್ಷಣಾಯ । ಏತೇನ ಧರ್ಮಸದನೇ ಋಷಿಮೂರ್ತಿನಾಽದ್ಯ ಪ್ರಾದುಶ್ಚಕಾರ ಪುರುಷಾಯ ನಮಃ ಪರಸ್ಮೈ ॥೫೬॥ ಸೋಽಯಂ ಸ್ಥಿತಿವ್ಯತಿಕರೋಪಶಮಾಯ ಸೃಷ್ಟಾನ್ ಸತ್ತ್ವೇನ ನಃ ಸುರಗಣಾನನುಮೇಯ ತತ್ತ್ವಃ । ದೃಶ್ಯಾದದಭ್ರಕರುಣೇನ

ದಯಃ - ಬ್ರಹ್ಮನೇ ಮೊದಲಾದ, ದೇವಾಃ - ದೇವತೆಗಳು, ಅಭಿಷ್ಟವೈಃ - ಸ್ತೋತ್ರಗಳಿಂದ, ಉಪತಸ್ಥುಃ - ಹೊಗಳಿದರು ॥೫೫॥ ನಿಜಯಾ - ತನ್ನ, ಮಾಯಯಾ - ಮಾಯೆಯಿಂದ, ಖೇ - ಆಕಾಶದಲ್ಲಿ, ರೂಪಭೇದಮಿವ - ಗಂಧರ್ವನಗರಾದಿಗಳಂತೆ, ಆತ್ಮನಿ - ಯಾವ ಆತ್ಮನಲ್ಲಿ, ಇದಂ - ಈ ಜಗತ್ತು, ವಿರಚಿತಂ-ನಿರ್ಮಿಸಲ್ಪಟ್ಟಿತೋ, ತತ್ಪ್ರ...ಯ, ತತ್-ಆ ಆತ್ಮತತ್ತ್ವವನ್ನು, ಪ್ರತಿಚಕ್ಷಣಾಯ - ಪ್ರಕಾಶಗೊಳಿಸುವುದಕ್ಕಾಗಿ, ಧರ್ಮಸದನೇ - ಧರ್ಮರಾಜನ ಮನೆಯಲ್ಲಿ, ಏಕೇನ - ಒಂದಾದ, ಋಷಿಮೂರ್ತಿನಾ - ಋಷಿಸ್ವರೂಪದಿಂದ, ಅದ್ಯ-ಈಗ, ಆತ್ಮಾನಂ-ತನ್ನನ್ನು, ಯಃ- ಯಾವನು, ಪ್ರಾದುಶ್ಚಕಾರ - ಪ್ರಕಟಗೊಳಿಸಿದನೋ, ಅಂತಹ, ಪರಸ್ಮೈ ಪುರುಷಾಯ ಪರಮಪುರುಷನಿಗೆ, ನಮಃ-ನಮಸ್ಕಾರವು ॥೫೬॥

ಸ್ತ್ರೀಯರು ನಾಟ್ಯವನ್ನು ಮಾಡಿದರು. ಎಲ್ಲೆಲ್ಲಿಯೂ ಅತ್ಯಂತವಿನೋದಕರಗಳೂ ಮಂಗಳಕರಗಳೂ ಆದ ಮಹೋತ್ಸವಗಳು ನಡೆದುವು. ಬ್ರಹ್ಮನೇ ಮೊದಲಾದ ದೇವತೆಗಳು ಸ್ತುತಿಪಾಠಗಳಿಂದ ಒಲೈಸುತ್ತಾ ಸ್ತುತಿಸಲಾರಂಭಿಸಿದರಂತೆಂದರೆ ॥೫೫॥ ಆಕಾಶದಲ್ಲಿ ಗಂಧರ್ವನಗರಾದಿಗಳು ಕಲ್ಪಿತಗಳಾಗಿರುವಂತೆ, ಯಾವ ಪರಮಾತ್ಮನಲ್ಲಿ ಈ ಜಗತ್ತು ಕಲ್ಪಿತವಾಗಿರುವುದೋ, ಅಂತಹ ಪರಮಾತ್ಮಸ್ವರೂಪವನ್ನು ಪ್ರಕಾಶಗೊಳಿಸುವುದಕ್ಕಾಗಿ ಯಾವನು ಧರ್ಮರಾಜನ ಮನೆಯಲ್ಲಿ ಋಷಿರೂಪದಿಂದವತರಿಸಿದನೋ, ಆ ಪರಮಪುರುಷನಿಗೆ ನಮಸ್ಕಾರವು ॥೫೬॥ ಪ್ರತ್ಯಕ್ಷವಾಗದೆ ಶಾಸ್ತ್ರವಿಚಾರದಿಂದಲೇ ತಿಳಿಯತಕ್ಕ ನಿಜಸ್ವರೂಪವುಳ್ಳ

§ (1) ವಿ. ತನ್ನಲ್ಲಿ ತೋರುವ ಕಪ್ಪು, ಬಿಳುಪು ಮೊದಲಾದ ಬಣ್ಣಗಳಿಗೆ ಆಕಾಶವು ಸಂಬಂಧಿಸದಂತೆ, ಯಾವ ಪರಮಾತ್ಮನು ತನ್ನಲ್ಲಿರುವ ಜಗತ್ತಿನ ದೋಷಗಳಿಗೊಳಪಡುವುದಿಲ್ಲವೋ, ಅಥವಾ ಯಾವ ಪರಮಾತ್ಮನು ತನ್ನ ಸಂಕಲ್ಪದಿಂದ ಸ್ವಸ್ವರೂಪರಾದ ಜೀವರಲ್ಲಿ ದೇವ, ಮಾನವ, ತಿರ್ಯಗಾದಿ ರೂಪಭೇದವನ್ನುಂಟುಮಾಡಿ ಬಂಧ ಮೋಕ್ಷಗಳನ್ನು ಕಲ್ಪಿಸಿದನೋ, ಯಾವನು ರೂಪಭೇದವಿಲ್ಲದ ಪ್ರತ್ಯಗಾತ್ಮಸ್ವರೂಪವನ್ನು ಪ್ರಕಾಶಗೊಳಿಸಿ, ತನ್ಮೂಲಕವಾಗಿ, ಜೀವರಸಂಸಾರ ಬಂಧವನ್ನು ಬಿಡಿಸುವುದಕ್ಕಾಗಿ, ದೇವಮಾನವಾದಿ ಸಜಾತೀಯವೂ, ಪ್ರಕೃತಿಸಂಬಂಧಶೂನ್ಯವೂ, ಎನಿಸಿ ಕರ್ಮಾಧೀನವಲ್ಲದ ಋಷಿರೂಪವನ್ನು ಪಡೆದು ಧರ್ಮರಾಜನ ಮನೆಯಲ್ಲಿ ಅವತರಿಸಿದನೋ, ಅಂತಹ ಪರಮ ಪುರುಷನಿಗೆ ನಮಸ್ಕಾರವು ॥

(೨) ವಿ. ಆಕಾಶದಲ್ಲಿ ತೋರಿಬರುವ ನೀಲಪೀತಾದಿ ರೂಪಭೇದಗಳಿಗೆ ಆಕಾಶವೇ ಆಧಾರವೆನಿಸುವಂತೆ, ಪರಮಾತ್ಮನಲ್ಲಿರುವ ಜಗತ್ತಿಗೆ ಪರಮಾತ್ಮನೇ ಆಧಾರವು. ಆದುದರಿಂದ, ಯಾವಪರಮಾತ್ಮನು ತನಗೂ, ಜಗತ್ತಿಗೂ ಇರುವ ಆಧಾರಾಧೇಯ ಭಾವಸಂಬಂಧವನ್ನು ಪ್ರಕಟಗೊಳಿಸುವುದಕ್ಕಾಗಿ ಋಷಿರೂಪದಿಂದ, ಧರ್ಮರಾಜನ ಹೆಂಡತಿಯಾದ ಮೂರ್ತಿದೇವಿಯಲ್ಲಿ ಅವತರಿಸಿದನೋ, ಅಂತಹ ಪುರಾಣಪುರುಷನಿಗೆ ನಮಸ್ಕಾರವು.

ವಿಲೋಕನೇನ ಯಚ್ಛ್ರೀನಿಕೇತ ಮಮಲಂ ಕ್ಷಿಪತಾಽರವಿಂದಂ ॥೫೭॥ ಏ
ವಂ ಸುರಗಣೈಸ್ತಾತ! ಭಗವಂತಾವಭಿಷ್ಟುತೌ। ಲಬ್ಧಾವಲೋಕೈರ್ಯ
ಯತು ರರ್ಚಿತೌ ಗಂಧಮಾದನಂ ॥೫೮॥ ತಾವಿಮೌ ವೈ ಭಗವತೋ ಹರೇ
ರಂಶಾ ವಿಹಾಗತೌ। ಭಾರವ್ಯಯಾಯ ಚ ಭುವಃ ಕೃಷ್ಣೌ ಯದುಕುರೂದ್ವ
ಹೌ ॥೫೯॥ ಸ್ವಾಹಾಽಭಿಮಾನಿನಶ್ಚಾಽಗ್ನೇರಾತ್ಮಜಾಂ ಸ್ತ್ರೀನಜೀಜನ
ತ್। ಪಾವಕಂ ಪವಮಾನಂ ಚ ಶುಚಿಂ ಚ ಹುತಭೋಜನಂ ॥೬೦॥ ತೇಭ್ಯೋಽ

ಅನು...ತ್ವಃ - ಅನುಮೇಯ - ಶಾಸ್ತ್ರವಿಚಾರದಿಂದ ತಿಳಿಯಲ್ಪಡಬೇಕಾದ, ತತ್ವಃ - ನಿಜಸ್ವರೂಪ ವುಳ್ಳ, ಸೋಽಯಂ - ಆ ಭಗವಂತನು, ಸ್ಥಿತಿ...ಯ, ಸ್ಥಿತಿ - ಪ್ರಪಂಚಮರ್ಯಾದೆಯ, ವ್ಯತಿಕರ - ವ್ಯತ್ಯಾಸವನ್ನು, ಉಪಶಮಾಯ - ಶಾಂತಿಗೊಳಿಸುವುದಕ್ಕಾಗಿ, ಸತ್ವೇನ - ಸತ್ವಗುಣದಿಂದ, ಸೃಷ್ಟಃ - ಸೃಷ್ಟಿಸಲ್ಪಟ್ಟ, ಸುರಗಣಾನಃ - ದೇವತೆಗಳಾದ ನಮ್ಮನ್ನು, ಶ್ರೀನಿಕೇತಂ - ಲಕ್ಷ್ಮಿಗೆ ನೆಲೆಮನೆಯಾದ ಅಮಲಂ - ನಿರ್ಮಲವಾದ, ಯತ್ ಅರವಿಂದಂ - ಯಾವ ಕಮಲವುಂಟೋ, ತತ್ - ಅದನ್ನು, ಕ್ಷಿಪತಾ - ತಿರಸ್ಕರಿಸುವ, ಅದಭ್ರಕರುಣೇನ - ಅಧಿಕದಯೆಯುಳ್ಳ, ವಿಲೋಕನೇನ - ಕಟಾಕ್ಷದಿಂದ, ದೃಕ್ಷ್ಯಾತ್ - ನೋಡಲಿ ॥೫೭॥ ಏವಂ - ಇಂತು, ಲಬ್ಧಾವಲೋಕೈಃ - ದರ್ಶನವನ್ನು ಪಡೆದ, ಸುರಗಣೈಃ - ದೇವತೆಗಳ ಸಮೂಹದಿಂದ, ಅಭಿಷ್ಟುತೌ - ಹೊಗಳಲ್ಪಟ್ಟ, ಭಗವಂತೌ - ನರನಾರಾಯಣರು, ಗಂಧಮಾದನಂ - ಗಂಧಮಾದನ ಪರ್ವತವನ್ನು ಕುರಿತು, ಯಯತುಃ - ಹೋದರು ॥೫೮॥ ಭಗವತಃ - ಭಗವಂತನಾದ, ಹರೇಃ - ವಿಷ್ಣುವಿನ, ಅಂಶೌ - ಅಂಶಭೂತರಾದ, ತಾವಿಮೌ - ಆ ನರನಾರಾಯಣರೇ, ಭುವಃ - ಭೂಮಿಯ, ಭಾರವ್ಯಯಾಯ - ಭಾರವನ್ನು ಕಳೆವುದಕ್ಕಾಗಿ, ಯದುಕುರೂದ್ವಹೌ - ಯಾದವ ಕೌರವ ಶ್ರೇಷ್ಠರಾದ, ಕೃಷ್ಣೌ - ಕೃಷ್ಣಾರ್ಜುನರಾಗಿ, ಇಹ - ಇಲ್ಲಿ, ಆಗತೌ - ಬಂದಿರುವರು ॥೫೯॥ ಸ್ವಾಹಾ - ಸ್ವಾಹಾದೇವಿಯು, ಅಭಿಮಾನಿನಃ - ಪ್ರೀತಿಪಾತ್ರನಾದ, ಅಗ್ನೇಃ - ಅಗ್ನಿಯಿಂದ, ಹುತಭೋಜನಂ - ಹವಿಸ್ಸನ್ನು ಭುಜಿಸುವ, ಪಾವಕ, ಪವಮಾನ, ಶುಚಿಎಂಬ, ತ್ರೀನ್ - ಮೂವರು, ಆತ್ಮಜಾನ್ - ಮಕ್ಕಳನ್ನು, ಅಜೀಜನತ್ - ಹೆತ್ತಳು ॥೬೦॥ ತೇಭ್ಯಃ - ಆ ಪಾವಕಾದಿಗಳಿಂದ, ಪಂಚಚತ್ವಾರಿಂಶತ್ - ನಲವತ್ತೈದು,

ಆ ಪರಮಾತ್ಮನು ಲೋಕಮರ್ಯಾದೆಯನ್ನು ಪಾಲಿಸುವುದಕ್ಕಾಗಿ ನಿರ್ಮಿತರಾಗಿ ದೇವತೆಗಳೆನಿಸಿರುವ ನಮ್ಮನ್ನು, ಕಮಲಕಾಂತಿಯನ್ನು ಕಡೆಗಣಿಸುವ ಕರುಣಾಕಟಾಕ್ಷದಿಂದವಲೋಕಿಸಿ ಕಾಪಾಡಲಿ ॥೫೭॥ ಎಂದು ಬ್ರಹ್ಮಾದಿದೇವತೆಗಳೆಲ್ಲರೂ ಭಗವದ್ದರ್ಶನದಿಂದ ಸಂತುಷ್ಟರಾಗಿ ಸ್ತುತಿಸಲು, ಅವರಿಂದ ಪೂಜಿತರಾದ ನರನಾರಾಯಣರು ಆಯುಮನ ಸದನದಿಂದ ಗಂಧಮಾದನ ಪರ್ವತಕ್ಕೆ ತೆರಳಿದರು ॥೫೮॥ ಅಯ್ಯಾ ವಿದುರನೆ! ಇಂತು ಭಗವಂತನಾದ ಮಹಾವಿಷ್ಣುವಿನಂಶದಿಂದ ಅವತರಿಸಿದ್ದ ಆ ನರನಾರಾಯಣರೇ ಈಗ ಭೂಭಾರವನ್ನು ಇಳುಹುವುದಕ್ಕಾಗಿ ಯಾದವಕೌರವರಲ್ಲಿ ಶ್ರೇಷ್ಠರಾದ ಕೃಷ್ಣಾರ್ಜುನರೂಪದಿಂದ ಇಲ್ಲಿ ಅವತರಿಸಿರುವರು ॥೫೯॥ ಈ ವರೆಗೆ ದಕ್ಷಪುತ್ರಿಯರೂ ಧರ್ಮಪತ್ನಿಯರೂ ಆದ ಹದಿಮೂರು ಮಂದಿಯ ವಂಶಾವಳಿಯನ್ನು ವಿವರಿಸಿದೆನು. ಇನ್ನು ದಕ್ಷಬ್ರಹ್ಮನ ಹದಿನಾಲ್ಕನೆಯ ಮಗಳಾದ ಸ್ವಾಹಾದೇವಿಯ ವಂಶವನ್ನು ನಿರೂಪಿಸುವೆನು ಕೇಳು. ಅಗ್ನಿಯ ಪತ್ನಿಯಾದ ಸ್ವಾಹೆಯು ಹವಿಸ್ಸನ್ನು ಭುಜಿಸುವ ಪಾವಕ, ಪವಮಾನ, ಶುಚಿಯೆಂಬ ಮೂವ್ವರು ಮಕ್ಕಳನ್ನು

ಗ್ನಯ ಸ್ಸಮುಭವಂ ಶ್ಚತ್ವಾರಿಂಶಚ್ಚ ಪಂಚಚ । ತಏವೈಕೋನಪಂಚಾಶತ್ಸಾಕಂಪಿತೃಪಿತಾಮಹ್ಯೈಃ ॥ ೬೧ ॥ ವೈತಾನಿಕೇ ಕರ್ಮಣಿ ಯನ್ನಾಮಭಿರ್ಬ್ರಹ್ಮವಾದಿಭಿಃ। ಆಗ್ನೇಯ್ಯ ಇಷ್ಟಯೋ ಯಜ್ಞೇ ನಿರೂಪ್ಯಂತೇಽಗ್ನಯಸ್ತು ತೇ ॥೬೨॥ ಅಗ್ನಿಷ್ವಾತ್ತಾ ಬರ್ಹಿಷದಃ ಸೌಮ್ಯಾಃ ಪಿತರ ಆಜ್ಯಪಾಃ। ಸಾಽಗ್ನಯೋಽನಗ್ನಯಸ್ತೇಷಾಂ ಪತ್ನೀ ದಾಕ್ಷಾಯಣೀ ಸ್ವಧಾ॥ ತೇಭ್ಯೋ ದಧಾರ ಕನ್ಯೇ ದ್ವೇ † ವಯುನಾಂ ಧಾರಿಣೀಂ ಸ್ವಧಾ। ಉಭೇ ತೇ

**ಅಗ್ನಯಃ** - ಅಗ್ನಿಗಳು. **ಸಮುಭವನ್** - ಉಂಟಾದವು, ತಏವ - ಆ ಅಗ್ನಿಗಳೇ, ಪಿತೃಪಿತಾಮಹ್ಯೈಸ್ಸಾಕಂ - ತಂದೆತಾತಂದಿರೊಡಗೂಡಿ, ಏಕೋನಪಂಚಾಶತ್ - ನಲವತ್ತೊಂಬತ್ತು ಅಗ್ನಿಗಳು ಆದುವು ॥೬೧॥ **ವೈತಾನಿಕೇ** - ವೇದೋಕ್ತವಾದ, ಯಜ್ಞಕರ್ಮಣಿ - ಯಜ್ಞಕರ್ಮದಲ್ಲಿ, ಯನ್ನಾಮಭಿಃ - ಯಾವಹೆಸರುಗಳಿಂದ, ಬ್ರಹ್ಮವಾದಿಭಿಃ - ವೇದವನ್ನು ತಿಳಿದವರಿಂದ, ಆಗ್ನೇಯ್ಯಃ - ಅಗ್ನಿದೇವತಾಕಗಳಾದ, **ಇಷ್ಟಯಃ** - ಇಷ್ಟಿಗಳು, ನಿರೂಪ್ಯಂತೇ - ಮಾಡಲ್ಪಡುವುವೋ, **ತೇ** - ಅವುಗಳೇ, ಅಗ್ನಯಃ - ಈ ಅಗ್ನಿಗಳು ॥೬೨॥

ಅನಗ್ನಯಃ - ಅಗ್ನೌಕರಣವೆಂಬ **ಕರ್ಮ**ವಿಲ್ಲದ, ಆಜ್ಯಪಾಃ - ಆಜ್ಯವನ್ನು ಪಾನಮಾಡುವ, ಅಗ್ನಿಷ್ವಾತ್ತಾಃ - ಯಜ್ಞಗಳನ್ನು ಮಾಡದಿರುವ, ಯಾರುಂಟೋ, ಸಾಗ್ನಯಃ - ಅಗ್ನೌಕರಣವುಳ್ಳ, ಬರ್ಹಿಷದಃ - ಬರ್ಹಿಗಳಲ್ಲಿರುವ, ಸೌಮ್ಯಾಃ - ಸೋಮಪಾನವನ್ನು ಮಾಡುವ ಯಾವ ಪಿತೃಗಳುಂಟೋ, ತೇಷಾಂ - ಆ ಎರಡು ಬಗೆಯ ಪಿತೃಗಳಿಗೂ, **ದಾಕ್ಷಾಯಣೀ** - ದಕ್ಷನಮಗಳಾದ, ಸ್ವಧಾ - ಸ್ವಧೆಯು, ಪತ್ನೀ - ಹೆಂಡತಿಯು ॥೬೩॥ ಸ್ವಧಾ - ಸ್ವಧೆಯು, ತೇಭ್ಯಃ ಆ ಪಿತೃಗಳಿಂದ, ವಯುನೆ, ಧಾರಿಣಿ, ಎಂಬ, ದ್ವೇ ಕನ್ಯೇ - ಇಬ್ಬರು ಹೆಣ್ಣುಮಕ್ಕಳನ್ನು, ದಧಾರ - ಧರಿಸಿದಳು (ಹೆತ್ತಳು) ತೇಉಭೇ - ಆ ಇಬ್ಬರೂ,

ಪಡೆದಳು ॥ ೬೦ ॥ ಆ ಮೂವ್ವರಿಗೂ ನಲವತ್ತೈದುಮಂದಿ ಮಕ್ಕಳಾದರು. ತಂದೆ, ಮಕ್ಕಳು, ಮೊಮ್ಮಕ್ಕಳೂ ಸೇರಿ ಒಟ್ಟಿಗೆ ನಲವತ್ತೊಂಬತ್ತುಮಂದಿ ಅಗ್ನ್ಯಭಿಮಾನಿದೇವತೆಗಳಾದರು ॥೬೧॥ ವೇದಗಳನ್ನು ಕಲಿತ ವೈದಿಕೋತ್ತಮರು ವೇದೋಕ್ತವಾದ ಯಜ್ಞಕರ್ಮದಲ್ಲಿ ಅಗ್ನಿ ದೇವತಾಕಗಳಾದ ಇಷ್ಟಿಗಳನ್ನು ಮಾಡುವಾಗ ಈ ನಲವತ್ತೊಂಬತ್ತು ಹೆಸರುಗಳನ್ನು ಉಚ್ಚರಿಸಿ ಹವಿರ್ದಾನವನ್ನು ಮಾಡುವರು ॥೬೨॥ § ಶ್ರುತಿಯಲ್ಲಿ ಹೇಳಿದಂತೆ ¶ ಅಗ್ನೌಕರಣವೆಂಬ ಕರ್ಮವಿಶೇಷವಿಲ್ಲದೆ ಆಜ್ಯಪಾನಮಾಡುವ ಅಗ್ನಿಷ್ವಾತ್ತಪಿತೃಗಳಿಗೂ, ಅಗ್ನೌಕರಣವುಳ್ಳವರಾಗಿ ಸೋಮಪಾನವನ್ನು ಮಾಡುವ ಬರ್ಹಿಷದರೆಂಬ ಪಿತೃಗಳಿಗೂ ಸಹ, ದಕ್ಷನ ಹದಿನೈದನೆಯ ಮಗಳಾದ ಸ್ವಧೆಯು ಪತ್ನಿಯಾದಳು ॥೬೩॥ ಆಕೆಯು ಆ ಪಿತೃಗಳಿಂದ ವಯುನೆ, ಧಾರಿಣಿ ಎಂಬ ಇಬ್ಬರು ಹೆಣ್ಣುಮಕ್ಕಳನ್ನು ಹೆತ್ತಳು. ಅವರೀರ್ವರೂ

† ಪಾ. ಪಾ. ಮೇಧಾಂ ವೈತರಣೀಂ ಸ್ವಧಾ.

§ ಶ್ರು ಯೇವೈ ಯಜ್ವಾನಃ ತೇವೈ ಪಿತರೋ ಬರ್ಹಿಷದಃ । ಯೇವಾ ಅಯಜ್ವಾನೋ ಗೃಹಮೇಧಿನಸ್ತೇ ಪಿತರೋಽಗ್ನಿಷ್ವಾತ್ತಾಃ ॥

¶ ದೀ. ದೊನ್ನೆಯಲ್ಲಿ ನೀರನ್ನು ತುಂಬಿಕೊಂಡು, "ಅಗ್ನಯೇಕವ್ಯವಾಹನಾಯ ಸ್ವಧಾ, ಸೋಮಾಯ ಪಿತೃಮತೇ ಸ್ವಧಾ ॥ ಎಂದು ಎರಡಾವೃತ್ತಿ ಜಲದಲ್ಲಿ ಹೋಮಮಾಡುವುದಕ್ಕೆ ಅಗ್ನೌಕರಣವೆಂದು ಹೆಸರು.

ಬ್ರಹ್ಮವಾದಿನ್ಯೌ ಜ್ಞಾನವಿಜ್ಞಾನಪಾರಗೇ॥೬೪॥ ಭವಸ್ಯ ಪತ್ನೀತು ಸತೀ ಭವಂ
ದೇವ ಮನುವ್ರತಾ। ಆತ್ಮನಃ ಸದೃಶಂ ಪುತ್ರಂ ನಲೇಭೇ ಗುಣಶೀಲತಃ ॥೬೫॥
ಪಿತ ರ್ಯಪ್ರತಿರೂಪೇ ಸ್ವೇ ಭವಾಯಾಽನಾಗಸೇ ರುಷಾ । ಅಪ್ರೌಢೈವಾ
ತ್ಮನಾತ್ಮಾನ ಮಜಹಾ ದ್ಯೋಗಸಂಯುತಾ ॥೬೬॥

—ಇತಿ ಪ್ರಥಮೋಽಧ್ಯಾಯಃ—

ಜ್ಞಾನ...ಗೇ, ಜ್ಞಾನ - ಶಾಸ್ತ್ರಜನ್ಯನಾದ ಜ್ಞಾನದಲ್ಲಿಯೂ, ವಿಜ್ಞಾನ - ವಿವೇಕಾದಿಗಳಿಂದುಂಟಾದ ಜ್ಞಾನದಲ್ಲಿಯೂ, ಪಾರಗೇ - ಪಾರಂಗತೆಯರಾದ, ಬ್ರಹ್ಮವಾದಿನ್ಯೌ - ಯೋಗಿನಿಯರು (ಆದರು) ॥೬೪॥ ಭವಸ್ಯ - ರುದ್ರನ, ಪತ್ನೀ - ಪತ್ನಿಯಾದ, ಸತೀತು - ಸತಿಯಾದರೆ, ಗುಣಶೀಲತಃ – ಗುಣಶೀಲಾದಿಗಳಿಂದ, ಆತ್ಮನಃ - ತನಗೆ, ಸದೃಶಂ - ಸಮಾನನಾದ, ಭವಂ - ರುದ್ರನನ್ನು, ಅನುವ್ರತಾಪಿ - ಸೇವಿಸಿದರೂ, ಪುತ್ರಂ- ಮಗನನ್ನು, ನಲೇಭೇ - ಪಡೆಯಲಿಲ್ಲ ॥೬೫॥ ಅನಾಗಸೇ - ನಿರಪರಾಧಿಯಾದ, ಭವಾಯ - ರುದ್ರನಿಗೆ, ಸ್ವೇ - ತನ್ನ, ಪಿತರಿ - ತಂದೆಯಾದ ದಕ್ಷನು, ಅಪ್ರತಿರೂಪೇ - ಪ್ರತಿಕೂಲನಾಗಲು, ಸತೀ - ಸತಿಯು, ಅಪ್ರೌಢೈವ - ಬಾಲೆಯಾಗಿರುವಾಗಲೇ, ಆತ್ಮನಾ - ತನ್ನಿಂದ, ಆತ್ಮಾನಂ - ತನ್ನ ಶರೀರವನ್ನು, ಯೋಗಸಂಯುತಾ - ಯೋಗದಿಂದೊಡಗೂಡಿ ಅಜಹಾತ್ - ಬಿಟ್ಟಳು ॥೬೬॥

—ಪ್ರಥಮಾಧ್ಯಾಯಂ ಸಮಾಪ್ತಂ—

ಜ್ಞಾನವಿಜ್ಞಾನಪಾರಂಗತೆಯರಾಗಿ ಸಂಸಾರಕ್ಕೆ ಸಿಕ್ಕದೆ ಯೋಗಿನಿಯರಾದರು ॥೬೪॥ ಆ ಬಳಿಕ ದಕ್ಷನ ಪುತ್ರಿಯಾದ ಸತಿಯು ಗುಣಶೀಲಾದಿಗಳಿಂದ ತನಗೆ ಅನುರೂಪನಾದ ಮಹಾದೇವನನ್ನು ಮದುವೆಯಾಗಿ ಆತನನ್ನು ಸೇವಿಸುತ್ತಿದ್ದರೂ ಸಂತಾನವನ್ನು ಪಡೆಯಲಿಲ್ಲ ॥೬೫॥ ಏಕೆಂದರೆ—ತನ್ನ ಪತಿಯಾದ ಮಹೇಶ್ವರನು ನಿರಪರಾಧಿಯಾಗಿದ್ದರೂ, ತಂದೆಯಾದ ದಕ್ಷಪ್ರಜಾಪತಿಯು ನಿಷ್ಕಾರಣವಾಗಿ ತನ್ನ ಗಂಡನನ್ನು ದ್ವೇಷಿಸಿದುದನ್ನು ಕಂಡು, ತಾನು ಬಾಲೆಯಾಗಿರುವಾಗಲೇ ಯೋಗಾಗ್ನಿಯಿಂದ ತನ್ನ ಕಳೇಬರವನ್ನು ತೊರೆದಳು. ಆದಕಾರಣ ಆಕೆಗೆ ಸಂತತಿಯಿಲ್ಲವಾಯಿತು. ಎಂದು ಮೈತ್ರೇಯನು ವಿದುರನಿಗೆ ಹೇಳುತ್ತಿದ್ದನೆಂಬಲ್ಲಿಗೆ ಭಾಗವತಚಕೋರಚಂದ್ರಿಕೆಯೊಳ್

—ಒಂದನೆಯ ಅಧ್ಯಾಯಂ ಮುಗಿದುದು.—

# ಓಂನಮಃ ಪರಮಾತ್ಮನೇ

## —ಅಥ ದ್ವಿತೀಯೋಧ್ಯಾಯಃ.—

ವಿದುರಉವಾಚ ॥ ಭವೇ ಶೀಲವತಾಂ ಶ್ರೇಷ್ಠೇ ದಕ್ಷೋ ದುಹಿತೃವತ್ಸಲಃ । ವಿದ್ವೇಷ ಮಕರೋ ತ್ಕಸ್ಮಾ ದನಾದೃತ್ಯಾತ್ಮಜಾಂ ಸತೀಂ ॥೧॥ ಕಸ್ತಂಚ ರಾ ಽ ಚರಗುರುಂ ನಿರ್ವೈರಂ ಶಾಂತವಿಗ್ರಹಂ । ಆತ್ಮಾರಾಮಂ ಕಥಂ ದ್ವೇಷ್ಟಿ ? ಜಗತೋ ದೈವತಂ ಮಹತ್ ॥೨॥ ಏತದಾಖ್ಯಾಹಿ ಮೇ ಬ್ರಹ್ಮನ್ !

---

## —ದ್ವಿತೀಯಾಧ್ಯಾಯಂ—

ಕಂದ॥ ಮುನ್ನ ಸವಬ್ರಹ್ಮಾದಿಗ । ಳುನ್ನತಿಯಿಂ ಗೈದ ಸತ್ರಯಾಗದೊಳೋಗೆದಾ ।
ಬನ್ನವೆ ಹರದಕ್ಷರ ಪಗೆ । ಗುನ್ನತ ಕಾರಣಮೆನುತ್ತೆ ಪೇಳಲ್ಪಡುಗುಂ ॥

ವಿದುರನು ಬೆಸಗೊಳ್ಳುತ್ತಾನೆ, ದುಹಿತೃವತ್ಸಲಃ - ಹೆಣ್ಣುಮಕ್ಕಳಲ್ಲಿ ಪ್ರೀತಿಯುಳ್ಳ, ದಕ್ಷಃ - ದಕ್ಷ ಪ್ರಜಾಪತಿಯು, ಆತ್ಮಜಾಂ - ಮಗಳಾದ, ಸತೀಂ - ಸತಿಯನ್ನೂ, ಅನಾದೃತ್ಯ - ಅಸಡ್ಡೆಮಾಡಿ, ಶೀಲವತಾಂ - ಸತ್ಪುರುಷರಲ್ಲಿ, ಶ್ರೇಷ್ಠೇ - ಉತ್ತಮನಾದ, ಭವೇ - ರುದ್ರನಲ್ಲಿ, ಕಸ್ಮಾತ್ - ಯಾವ ಕಾರಣದಿಂದ, ವಿದ್ವೇಷಂ - ದ್ವೇಷವನ್ನು, ಅಕರೋತ್ - ಮಾಡಿದನು ॥೧॥ ಚರಾ...ರುಂ, ಚರ - ಜಂಗಮಂಗಳಿಗೂ, ಅಚರ - ಸ್ಥಾವರಗಳಿಗೂ, ಗುರುಂ - ಗುರುವಾದ, ನಿರ್ವೈರಂ - ವೈರವಿಲ್ಲದ, ಶಾಂತವಿಗ್ರಹಂ - ಶಾಂತಮೂರ್ತಿಯಾದ, ಆತ್ಮಾರಾಮಂ - ಆತ್ಮಕ್ರೀಡನಾದ, ಜಗತಃ - ಲೋಕಕ್ಕೆ, ಮಹತ್ - ಉತ್ತಮವಾದ, ದೈವತಂ - ದೇವತೆಯಾದ, ತಂ - ಆ ಪರಶಿವನನ್ನು, ಕಃ - ಯಾವನು, ದ್ವೇಷ್ಟಿ - ದ್ವೇಷಿಸುತ್ತಾನ, ಕಥಂದ್ವೇಷ್ಟಿ - ಹೇಗೆ ದ್ವೇಷಿಸುತ್ತಾನೆ ॥೨ ಹೇ ಬ್ರಹ್ಮನ್ - ಎಲೈ ಮೈತ್ರೇಯನೆ ! ಯತಃ - ಯಾವ

---

## ಎರಡನೆಯ ಅಧ್ಯಾಯ.

### —ಶಿವನಿಗೂ ದಕ್ಷಬ್ರಹ್ಮನಿಗೂ ದ್ವೇಷವುಂಟಾಗುವುದಕ್ಕೆ ಕಾರಣ.—

ಅನಂತರದಲ್ಲಿ ವಿದುರನು ಮೈತ್ರೇಯಮುನಿಯನ್ನು ಕುರಿತು—ಅಯ್ಯಾ ಮುನೀ ಯಾವ ತಂಸನೆ ! ದಕ್ಷಪ್ರಜಾಪತಿಯು ಶಿವನನ್ನು ಅವಮಾನಗೊಳಿಸಿದುದಕ್ಕಾಗಿ ಸತೀದೇವಿಯು ಯೋಗಾಗ್ನಿಯಿಂದ ದೇಹತ್ಯಾಗವನ್ನು ಮಾಡಿದಳೆಂದು ಹೇಳಿದೆಯಷ್ಟೆ, ಹೆಣ್ಣುಮಕ್ಕಳಲ್ಲಿ ವಿಶೇಷವಾತ್ಸಲ್ಯವುಳ್ಳ ದಕ್ಷಪ್ರಜೇಶ್ವರನು ಪ್ರಿಯಪುತ್ರಿಯಾದ ಸತಿಯನ್ನು ಅಸಡ್ಡೆಮಾಡಿ, ಸಮದರ್ಶನವುಳ್ಳ ಮಹಾತ್ಮರಲ್ಲಿ ಅಗ್ರಗಣ್ಯನಾದ ಪರಮೇಶ್ವರನಲ್ಲಿ ದ್ವೇಷವನ್ನು ಮಾಡುವುದಕ್ಕೆ ಕಾರಣವೇನು ? ॥೧॥ ಚರಾಚರಗುರುವಾಗಿಯೂ, ಶಾಂತಮೂರ್ತಿಯಾಗಿಯೂ, ಆತ್ಮಾರಾಮನಾಗಿಯೂ, ಜಗದೀಶ್ವರನಾಗಿಯೂ, ನಿರ್ಮತ್ಸರನಾಗಿಯೂ ಇರುವ ಮಹಾ

ಜಾಮಾತು ಶ್ಶ್ವಶುರಸ್ಯಚ । ವಿದ್ವೇಷಸ್ತು ಯತಃ ಪ್ರಾಣಾಂ ಸ್ತತ್ಯಜೇ ದು
ಸ್ತ್ಯಜಾನ್ ಸತೀ ॥೩॥ ಮೈತ್ರೇಯಃ । ಪುರಾ ವಿಶ್ವಸೃಜಾಂ ಸತ್ರೇ ಸಮೇ
ತಾಃ ಪರಮರ್ಷಯಃ । ತಥಾ ಽ ಮರಗಣಾ ಸ್ಸರ್ವೇ ಸಾನುಗಾ ಮುನ
ಯೋ ಽ ಗ್ನಯಃ ॥೪॥ ತತ್ರ ಪ್ರವಿಷ್ಟ ಮೃಷಯೋ ದೃಷ್ಟ್ವಾ ಽ ರ್ಕಮಿವ
ರೋಚಿಷಾ । ಭ್ರಾಜಮಾನಂ ವಿತಿಮಿರಂ ಕುರ್ವಂತಂ ತನ್ಮಹ ತ್ಸದಃ ॥
ಉದತಿಷ್ಠ ನ್ಸದಸ್ಯಾ ಸ್ತೇ ಸ್ವಧಿಷ್ಣ್ಯೇಭ್ಯ ಸ್ಸಹಾಽಗ್ನಯಃ । ಋತೇ ವಿ
ರಿಂಚಂ ಶರ್ವಂಚ ತದ್ಭಾಸಾ ಕ್ಷಿಪ್ತಚೇತಸಃ ॥೬॥ ಸದಸಸ್ಪತಿಭಿ ರ್ದಕ್ಷೋ

ದ್ವೇಷದಿಂದ, ಸತೀ - ಸತಿಯು, ದುಸ್ತ್ಯಜಾನ್ - ಬಿಡುವುದಕ್ಕಶಕ್ಯಗಳಾದರೂ, ಪ್ರಾಣಾನ್ - ಪ್ರಾಣಗಳನ್ನು, ತತ್ಯಜೇ - ಬಿಟ್ಟಳೋ, ಅಂತಹ, ವಿದ್ವೇಷಃ - ವೈರವು, ಜಾಮಾತುಃ - ಅಳಿಯನಿಗೂ, ಶ್ವಶುರಸ್ಯಚ- ಮಾವನಿಗೂ, ಹೇಗುಂಟಾಯ್ತು, ಏತತ್ - ಇದನ್ನು, ಮೇ - ನನಗೆ, ಆಖ್ಯಾಹಿ - ಹೇಳು ॥೩॥ ಮೈತ್ರೇಯನು ಹೇಳುತ್ತಾನೆ. ಪುರಾ - ಪೂರ್ವದಲ್ಲಿ, ವಿಶ್ವಸೃಜಾಂ - ಮರೀಚ್ಯಾದಿ ಬ್ರಹ್ಮರ. ಸತ್ರೇ - ಸತ್ರಯಾಗದಲ್ಲಿ, ಸಮೇತಾಃ - ಸೇರಿದ, ಪರಮರ್ಷಯಃ - ಋಷಿಶ್ರೇಷ್ಠರು, ತಥಾ - ಹಾಗೆಯೇ, ಅಮರಗಣಾಃ - ದೇವಗಣಗಳು, ಸಾನುಗಾಃ - ಸಪರಿವಾರರಾದ, ಮುನಯಃ - ಮುನಿಗಳು, ಅಗ್ನಯಃ - ಅಗ್ನಿಗಳು ಇವರು ॥೪॥ ಋಷಯಃ - ಋಷಿಗಳು, ರೋಚಿಷಾ - ತೇಜಸ್ಸಿನಿಂದ, ಅರ್ಕಮಿವ - ಸೂರ್ಯನಂತೆ, ಭ್ರಾಜಮಾನಂ - ಹೊಳೆಯುತ್ತಿರುವ, ತತ್ - ಆ, ಮಹತ್ - ದೊಡ್ಡದಾದ, ಸದಃ - ಸಭೆಯನ್ನು, ವಿತಿಮಿರಂ- ಅಂಧಕಾರ ಶೂನ್ಯವನ್ನಾಗಿ, ಕುರ್ವಂತಂ - ಮಾಡುತ್ತಿರುವ, ತತ್ರ - ಆಸಭೆಯಲ್ಲಿ,ಪ್ರವಿಷ್ಟಂ - ಪ್ರವೇಶಿಸಿದ ದಕ್ಷಬ್ರಹ್ಮನನ್ನು, ದೃಷ್ಟ್ವಾ - ಕಂಡು ॥೫॥

ತೇ - ಆ, ಸದಸ್ಯಾಃ - ಸಭೆಯವರು, ತದ್ಭಾಸಾ - ಅವನ ಕಾಂತಿಯಿಂದ, ಆಕ್ಷಿಪ್ತಚೇತಸಃ - ಮನಸೋತು, ವಿರಿಂಚಂ-ಬ್ರಹ್ಮನನ್ನು, ಶರ್ವಂಚ-ಶಿವನನ್ನೂ, ಋತೇ - ಉಳಿದು, ಎಲ್ಲರೂ, ಸಹಾಗ್ನಯಃ-ಅಗ್ನಿಗಳಿಂದೊಡಗೂಡಿ, ಸಧಿಷ್ಣ್ಯೇಭ್ಯಃ-ತಮ್ಮ ಸ್ಥಾನಗಳಿಂದ, ಉದತಿಷ್ಠನ್- ಎದ್ದರು ॥೬॥ ಭಗವಾನ್-ಪೂಜ್ಯನಾದ, ದಕ್ಷಃ-ದಕ್ಷನು, ಸದಸಸ್ಪತಿಭಿಃ-ಸಭಾಧ್ಯಕ್ಷರಿಂದ, ಸಾಧು- ಚೆನ್ನಾಗಿ, ಸತ್ಕೃತಃ-ಪೂಜಿಸಲ್ಪಟ್ಟು,

ದೇವನನ್ನು ಯಾವನು ತಾನೇ ದ್ವೇಷಿಸುವನು ? ॥೨॥ ಎಲೈ ಬ್ರಾಹ್ಮಣೋತ್ತಮನೇ ಸತೀದೇವಿಯು ಬಿಡಲಾಗದ ಪ್ರಾಣಗಳನ್ನು ಬಿಡುವಷ್ಟು ದ್ವೇಷವು ಅಳಿಯ ಮಾವಂದಿರಿಗೆಂತುಂಟಾಯಿತು ? ಇದನ್ನು ನನಗೆ ಹೇಳೆಂದು ಬೆಸಗೊಳ್ಳಲು ॥೩॥ ಮೈತ್ರೇಯನು ಹೇಳುವುದೆಂತೆಂದರೆ:—ಪೂರ್ವಕಾಲದಲ್ಲಿ ಮರೀಚಿಮೊದಲಾದ ಪ್ರಜೇಶ್ವರರು ಸತ್ರಯಾಗವನ್ನು ಮಾಡುತ್ತಿರಲು, ಒಂದುದಿನ ಮಹಾತ್ಮನಾದ ದಕ್ಷಪ್ರಜಾಪತಿಯು ಆ ಸಭೆಗೆ ಬಂದನು. ಆತನು ಸಭಾಸದನವನ್ನು ಪೊಕ್ಕೊಡನೆಯೇ ಅಲ್ಲಿ ನೆರೆದಿದ್ದ ಇಂದ್ರಾದಿದೇವತೆಗಳು, ಮಹರ್ಷಿಗಳು, ಸಶಿಷ್ಯರಾದ ಮುನಿಗಳು ಇವರೆಲ್ಲರೂ, ಅಂಧಕಾರವನ್ನೀಡಾಡುವ ಅಪರಸೂರ್ಯನಂತೆ, ಸುಂದರವಾದ ಸಭಾಮಂದಿರವನ್ನು ಬೆಳಗಿಸುತ್ತಿರುವ ಆತನನ್ನು ಕಂಡು ಹರಬ್ರಹ್ಮರಿರ್ವರು ಹೊರತು ಮಿಕ್ಕ ಸಾಮಾಜಿಕರೆಲ್ಲರೂ ಆತನ ಕಾಂತಿಯಿಂದ ಮನಸ್ಸೋತು ಮರುಳಾಗಿ,ಅಗ್ನಿಗಳಿಂದೊಡಗೂಡಿ ತಂತಮ್ಮ ಆಸನಗಳಿಂದೆದ್ದು ನಿಂತುಕೊಂಡರು॥೪-೬॥ ಅನಂತರದಲ್ಲಿ ಮಹಾಮಹಿಮನಾದ ದಕ್ಷನು ಆ ಸಭಾಧ್ಯಕ್ಷರಿಂದ ಸಾದರವಾದ

ಭಗವಾನ್ ಸಾಧು ಸತ್ಕೃತಃ । ಅಜಂ ಲೋಕಗುರುಂ ನತ್ವಾ ನಿಷಸಾದ ತ
ದಾಜ್ಞಯಾ ॥೭॥ ಪ್ರಾಙ್ನಿಷಣ್ಣಂ ಮೃಡಂ ದೃಷ್ಟ್ವಾ ನಾಮೃಷ್ಯತ್ತದನಾದೃ
ತಃ । ಉವಾಚ ವಾಮಂ ಚಕ್ಷುರ್ಭ್ಯಾ ಮಭಿವೀಕ್ಷ್ಯ ದಹನ್ನಿವ ॥ ೮ ॥
ಶ್ರೂಯತಾಂ ಬ್ರಹ್ಮರ್ಷಯೋ ಮೇ ಸಹದೇವಾ ಸ್ಸಹಾಽಗ್ನಯಃ । ಸಾ
ಧೂನಾಂ ಬ್ರುವತೋ ವೃತ್ತಂ ನಾಽಜ್ಞಾನಾನ್ನಚಮತ್ಸರಾತ್ ॥೯॥ § ಅಯಂ
ತು ಲೋಕಪಾಲಾನಾಂ ಯಶೋಘ್ನೋ ನಿರಪತ್ರಪಃ । ಸದ್ಭಿರಾಚರಿತಃ ಪಂ
ಥಾ ಯೇನ ಸ್ತಬ್ಧೇನ ದೂಷಿತಃ ॥೧೦॥ ಏಷ ಮೇ ಶಿಷ್ಯತಾಂ ಪ್ರಾಪ್ತೋ

---

ಲೋಕಗುರುಂ - ಜಗತ್ಪಿತನಾದ, ಅಜಂ-ಬ್ರಹ್ಮನನ್ನು, ನತ್ವಾ-ನಮಿಸಿ, ತದನುಜ್ಞಯಾ - ಆತನಪ್ಪಣೆಯಿಂದ, ನಿಷಸಾದ- ಕುಳಿತುಕೊಂಡನು ॥೭॥ ಪ್ರಾಕ್-ತನಗಿಂತ ಮೊದಲೇ, ನಿಷಣ್ಣಂ - ಕುಳಿತಿರುವ, ಮೃಡಂ-ರುದ್ರನನ್ನು, ದೃಷ್ಟ್ವಾ-ಕಂಡು, ತದನಾದೃತಃ- ಅವನಿಂದ ತಿರಸ್ಕರಿಸಲ್ಪಟ್ಟವನಾಗಿ, ನಾಮೃಷ್ಯತ್-ಸೈರಿಸಲಿಲ್ಲ, ಚಕ್ಷುರ್ಭ್ಯಾಂ-ಕಣ್ಣುಗಳಿಂದ, ವಾಮಂ - ವಕ್ರವಾಗಿ, ದಹನ್ನಿವ-ಸುಡುವಂತೆ, ಅಭಿವೀಕ್ಷ್ಯ-ನೋಡಿ, ಉವಾಚ- ಹೇಳಿದನು ॥೮॥ ಸಹದೇವಾಃ - ದೇವತೆಗಳಿಂದ ಕೂಡಿದ, ಸಹಾಗ್ನಯಃ- ಅಗ್ನಿಗಳಿಂದ ಕೂಡಿದ, ಮಹರ್ಷಯಃ - ಮಹರ್ಷಿಗಳಿರಾ ! ಸಾಧೂನಾಂ - ಸತ್ಪುರುಷರ, ವೃತ್ತಂ-ನಡವಳಿಯನ್ನು, ಬ್ರುವತಃ-ಹೇಳುವ, ಮೇ-ನನ್ನ ನುಡಿಯು, ಶ್ರೂಯತಾಂ-ಕೇಳಲ್ಪಡಲಿ, ಅಹಂ-ನಾನು, ಅಜ್ಞಾನಾತ್ - ತಿಳಿವಳಿಕೆಯಿಲ್ಲದೆ ಆಗಲಿ, ಮತ್ಸರಾತ್ - ಮಾತ್ಸರ್ಯದಿಂದಾಗಲಿ, ನ-ಹೇಳುವುದಿಲ್ಲ ॥೯॥ ಸ್ತಬ್ಧೇನ-ಸೋಮಾರಿಯಾದ, ಯೇನ-ಯಾವನಿಂದ, ಸದ್ಭಿಃ-ಸಾಧುಗಳಿಂದ, ಆಚರಿತ - ಆಚರಿಸಲ್ಪಟ್ಟ, ಪಂಥಾಃ-ಮಾರ್ಗವು, ದೂಷಿತಃ- ದೂಷಿಸಲ್ಪಟ್ಟಿತೋ, ನಿರಪತ್ರಪಃ - ನಾಚಿಕೆಯಿಲ್ಲದ, ಅಯಂತು-ಇವನಾದರೆ, ಲೋಕಪಾಲಾನಾಂ- ಲೋಕಪಾಲಕರ, ಯಶೋಘ್ನಃ - ಕೀರ್ತಿಯನ್ನು ಕೆಡಿಸತಕ್ಕವನು ॥೧೦॥

---

ಮರ್ಯಾದೆಯನ್ನು ಪಡೆದು ಲೋಕಪಿತನಾದ ಚತುರ್ಮುಖಬ್ರಹ್ಮನನ್ನು ನಮಿಸಿ, ಆತನಪ್ಪಣೆಯಿಂದ ಕುಳಿತುಕೊಂಡನು ॥ ೭ ॥ ಬಳಿಕ ಸುತ್ತುಮುತ್ತಲೂ ನೋಡಿ ತಾನು ಕುಳಿತುಕೊಳ್ಳುವುದಕ್ಕಿಂತ ಮೊದಲೇ ಕುಳಿತಿರುವ ರುದ್ರನನ್ನು ಕಂಡು ಆತನು ಮಾಡಿದ ಅವಮಾನವನ್ನು ಸೈರಿಸಲಾರದೆ ಕಿಡಿಗರೆಯುತ್ತಾ, ಕೆಂಪಾದ ಕಡೆಗಣ್ಣುಗಳಿಂದ ಸುಡುವಂತೆ ದುರದುರನೆ ನೋಡುತ್ತಾ, ಆ ಸಭಾಸದರನ್ನು ಕುರಿತು ॥೮॥ ಅಯ್ಯಾ ದೇವತೆಗಳಿರಾ ! ಅಗ್ನಿಗಳಿರಾ ! ಬ್ರಹ್ಮರ್ಷಿಗಳಿರಾ ! ನಾನು ಅಜ್ಞಾನದಿಂದ ಹೇಳುವುದಿಲ್ಲ. ನನಗೆ ಮತ್ಸರವಿಲ್ಲ. ಸಾಧುಗಳ ನಡವಳಿಯನ್ನು ಹೇಳುವ ನನ್ನ ಮಾತನ್ನು ಕೇಳಿರಿ ॥೯॥ ಅನಾದಿಯಾಗಿ ಸಾಧುಗಳಾಚರಿಸುತ್ತಿರುವ ಸದಾಚಾರವನ್ನು ನಾಚಿಕೆಯಿಲ್ಲದೆ ದೂಷಿಸಿ, ಲೋಕಪಾಲಕರಾದ ನಮ್ಮ ಕೀರ್ತಿಗೆ ಕುಂದನ್ನುಂಟುಮಾಡುತ್ತಿರುವ ಈ ಮೂರ್ಖನನ್ನು ಕ... ॥

---

§ ಟಿ. ಈ ಶ್ಲೋಕಗಳಿಂದ ಸಾಮಾನ್ಯವಾಗಿ ಶಿವದೂಷಣೆಯು ತೋರಿಬಂದರೂ, ನಿಜವಾಗಿ ಶಿವಸ್ತುತಿಯೇ ಇದರ ಮುಖ್ಯತಾತ್ಪರ್ಯವೆಂದರಿಯಬೇಕು. ಹೇಗೆಂದರೆ -ಆತನು ಪರಮ ತೇಜಸ್ವಿಯಾದುದರಿಂದ ಸಕಲ ಲೋಕ ಪಾಲಕರ ಕೀರ್ತಿಯನ್ನು ಅಪಹರಿಸುವವನಾಗಿಯೂ, ಎಲ್ಲಿಯೂ ದಿಕ್ಕಿಲ್ಲದ ದೀನರನ್ನು ಸಲಹುವವನಾಗಿಯೂ, ವೇದಮಾರ್ಗವನ್ನು ದೂಷಿಸುವ ಪಾಷಂಡರನ್ನು ದಂಡಿಸುವವನಾಗಿಯೂ ಇರುವನೆಂದು ಭಾವವು.

ಯನ್ಮೇ ದುಹಿತುರಗ್ರಹೀತ್ । ಪಾಣಿಂ ವಿಪ್ರಾಽಗ್ನಿಮುಖತಃ ಸಾವಿತ್ರ್ಯಾ
ಇವ ಸಾಧುವತ್ ॥೧೧॥ ಗೃಹೀತ್ವಾ ಮೃಗಶಾಬಾಕ್ಷ್ಯಾಃ ಪಾಣಿಂ ಮರ್ಕಟ
ಲೋಚನಃ । ಪ್ರತ್ಯುತ್ಥಾನಾಽಭಿವಾದಾರ್ಹೇ ವಾಚಾಪ್ಯಕೃತ ನೋಚಿತಂ॥
ಲುಪ್ತಕ್ರಿಯಾಯಾಽಶುಚಯೇ ಮಾನಿನೇ ಭಿನ್ನಸೇತವೇ । ಅನಿಚ್ಛನ್ನಪ್ಯ
ದಾಂ ಬಾಲಾಂ ಶೂದ್ರಾಯೇವೋಶತೀಂ ಗಿರಂ ॥೧೩॥ ಪ್ರೇತಾವಾಸೇಷು
ಘೋರೇಷು ಪ್ರೇತೈರ್ಭೂತಗಣೈರ್ವೃತಃ। ಅಟತ್ಯುನ್ಮತ್ತವನ್ನಗ್ನೋ
ವ್ಯುಪ್ತಕೇಶೋ ಹಸನ್ ರುದನ್॥೧೪॥ ಚಿತಾಭಸ್ಮಕೃತಸ್ನಾನಃ ಪ್ರೇತಸ್ರಙ್

ಯತ್-ಯಾವ ಕಾರಣದಿಂದ, ಸಾಧುವತ್ - ಸಾಧುವಿನಂತೆ, ವಿಪ್ರ...ತಃ, ವಿಪ್ರ-ಬ್ರಾಹ್ಮಣರ, ಅಗ್ನಿ-ಅಗ್ನಿಗಳ, ಮುಖತಃ-ಎದುರಾಗಿ, ಸಾವಿತ್ರ್ಯಾ ಇವ - ಸಾವಿತ್ರಿಯಂತಿರುವ, ಮೇ-ನನ್ನ, ದುಹಿತುಃ-ಮಗಳ, ಪಾಣಿಂ-ಕೈಯನ್ನು, ಅಗ್ರಹೀತ್ ಹಿಡಿದನೋ, ಅದರಿಂದ, ಏಷಃ-ಇವನು, ಮೇ-ನನಗೆ, ಶಿಷ್ಯತಾಂ-ಶಿಷ್ಯತ್ವವನ್ನು, ಪ್ರಾಪ್ತಃ-ಹೊಂದಿದನು ॥೧೧॥ ಮರ್ಕಟಲೋಚನಃ-ಕೋತಿಯ ಕಣ್ಣಿನಂತೆ ಕಣ್ಣುಳ್ಳ ಇವನು, ಮೃಗ...ಕ್ಷ್ಯಾಃ, ಮೃಗಶಾಬ-ಹುಲ್ಲೆಯ ಮರಿಯ, ಅಕ್ಷ್ಯಾಃ-ಕಣ್ಣಿನಂತೆ ಕಣ್ಣುಳ್ಳ ಸತಿಯ ಪಾಣಿಂ-ಕೈಯನ್ನು, ಗೃಹೀತ್ವಾ-ಹಿಡಿದವನಾದರೂ, ಪ್ರತ್ಯು...ರ್ಹೇ, ಪ್ರತ್ಯುತ್ಥಾನ - ಎದುರುಗೊಳ್ಳುವುದಕ್ಕೂ, ಅಭಿವಾದ-ನಮಸ್ಕರಿಸುವುದಕ್ಕೂ, ಅರ್ಹೇ-ಯೋಗ್ಯನಾದ ನನ್ನಲ್ಲಿ, ವಾಚಾಪಿ-ಮಾತಿನಿಂದಲೂ ಉಚಿತಂ-ಮರ್ಯಾದೆಯನ್ನು, ನಾಕೃತ-ಮಾಡಲಿಲ್ಲ ॥೧೨॥ ಲುಪ್ತಕ್ರಿಯಾಯ-ಸದಾಚಾರವಿಲ್ಲದ, ಅಶುಚಯೇ-ಅಪರಿಶುದ್ಧನಾದ, ಮಾನಿನೇ- ದುರಹಂಕಾರಿಯಾದ, ಭಿನ್ನಸೇತವೇ - ಧರ್ಮಮರ್ಯಾದೆಯನ್ನು ಲ್ಲಂಘಿಸಿದ, ಇವನಿಗೆ, ಅನಿಚ್ಛನ್ನಪಿ- ಬಯಸದಿದ್ದರೂ, ಶೂದ್ರಾಯ-ಶೂದ್ರನಿಗೆ, ಉಶತೀಂ-ಪವಿತ್ರವಾದ, ಗಿರಮಿವ-ವೇದವಾಕ್ಯನ್ನೋಪಾದಿಯಲ್ಲಿ, ಬಾಲಾಂ-ಕನ್ನೆಯನ್ನು, ಅದಾಂ-ಕೊಟ್ಟೆನು ॥೧೩॥

ಯಃ- ಯಾವನು, ಘೋರೈಃ - ಭಯಂಕರಗಳಾದ, ಪ್ರೇತೈಃ - ಪ್ರೇತಗಳಿಂದಲೂ, ಭೂತಗಣೈಃ-ಭೂತಗಣಗಳಿಂದಲೂ, ವೃತಃ - ಕೂಡಿದವನಾಗಿ, ಪ್ರೇತಾವಾಸೇಷು - ಸ್ಮಶಾನಗಳಲ್ಲಿ, ವ್ಯುಪ್ತಕೇಶಃ-ತಲೆಯನ್ನು ಬಿರಿಹೊಯ್ದುಕೊಂಡು, ನಗ್ನಃ- ಬೆತ್ತಲೆಯಾಗಿ, ಉನ್ಮತ್ತವತ್ - ಹುಚ್ಚನಂತೆ, ಹಸನ್-ನಗುತ್ತಾ, ರುದನ್-ಅಳುತ್ತಾ, ಅಟತಿ - ಅಲೆಯುವನೋ ॥೧೪॥ ಚಿತಾ...ನಃ, ಚಿತಾ-ಚಿತಿಗಳ, ಭಸ್ಮ-ಭಸ್ಮ

ಮಹಾ ಸಾಧುವಿನಂತೆ ಬಂದು, ಸಾವಿತ್ರೀದೇವಿಯಂತೆ ಸಕಲಗುಣ ಸಂಪನ್ನೆಯಾದ ನನ್ನ ಕನ್ನೆಯನ್ನು ಬ್ರಾಹ್ಮಣಸಮಕ್ಷದಲ್ಲಿ ಅಗ್ನಿಸಾಕ್ಷಿಯಾಗಿ ಕೈಹಿಡಿದುದರಿಂದ ಇವನು ನನಗೆ ಶಿಷ್ಯನಾಗಲಿಲ್ಲವೆ ? ॥೧೧॥ ಕಪಿಯಂತೆ ಕಣ್ಣುಗಳುಳ್ಳ ಈ ಚಪಲನು, ಹುಲ್ಲೆಯಮರಿಯಂತೆ ಕಣ್ಣುಳ್ಳ ಪಲ್ಲವಾಧರಿಯನ್ನು ಮದುವೆಯಾಗಿದ್ದರೂ, ಪ್ರತ್ಯುತ್ಥಾನ ಅಭಿವಂದನಾದಿಗಳಿಗೆ ಅರ್ಹನೆನಿಸಿರುವ ನನಗೆ ವಾಙ್ಮಾತ್ರದಿಂದಲಾದರೂ ಮರ್ಯಾದೆಯನ್ನು ಮಾಡದಿರುವುದುಚಿತವೆ? ॥೧೨॥ ಅಕಟಾ! ವೇದವಾಣಿಯನ್ನು ಶೂದ್ರನಿಗಿತ್ತಂತೆ, ಸದಾಚಾರವನ್ನರಿಯದುದರಿಂದ ಅಶುಚಿಯಾಗಿ ದುರಹಂಕಾರದಿಂದ ಧರ್ಮಮರ್ಯಾದೆಯನ್ನು ದೂಷಿಸುತ್ತಿರುವ ಇವನಿಗೆ ಪವಿತ್ರಳಾದ ಕನ್ನೆಯನ್ನಿತ್ತೆನಲ್ಲಾ ॥೧೩॥ ಆಹಾ ಇವನ ಗುಣಗಳನ್ನೇನೆಂದು ಬಣ್ಣಿಸಲಿ ? ಭಯಂಕರಗಳಾದ ಭೂತ, ಪ್ರೇತ, ಪಿಶಾಚಾದಿಗಳಿಂದೊಡಗೂಡಿ ತಲೆಯನ್ನು ಕೆದರಿಕೊಂಡು ಬೆತ್ತಲೆಯಾಗಿ ಹುಚ್ಚನಂತೆ ನಗುತ್ತಾ, ಕೂಡಲೆ ಅಳುತ್ತಾ ಸ್ಮಶಾನಗಳಲ್ಲಿ

ನೃಸ್ಥಿಭೂಷಣಃ । ಶಿವಾಪದೇಶೋ ಹ್ಯಶಿವೋ ಮತ್ತೋ ಮತ್ತಜನಪ್ರಿ
ಯಃ । ಪತಿಃ ಪ್ರಮಥಭೂತಾನಾಂ ತಮೋಮಾತ್ರಾತ್ಮಕಾತ್ಮನಾಂ ॥೧೪॥ ‡
ತಸ್ಮೈ ಉನ್ಮಾದ ನಾಥಾಯ ನಷ್ಟಶೌಚಾಯ ದುರ್ಹೃದೇ । ದತ್ತಾ ಬತ !

ದಿಂದ, ಕೃತ-ಮಾಡಲ್ಪಟ್ಟ, ಸ್ನಾನಃ-ಸ್ನಾನವುಳ್ಳವನಾಗಿಯೂ, ಪ್ರೇತಸ್ರಕ್-ಪ್ರೇತಗಳ ಮಾಲೆಗಳನ್ನು ಧರಿಸಿರುವ, ನೃಸ್ಥಿ....ಣಃ, ನೃ + ಅಸ್ಥಿ=ನೃಸ್ಥಿ-ಮನುಷ್ಯರ ಎಲುಬುಗಳೇ, ಭೂಷಣಃ - ಆಭರಣವಾಗುಳ್ಳ, ಶಿವಾಪದೇಶಃ-ಶಿವನೆಂಬ ವ್ಯಾಜವುಳ್ಳ, ಅಶಿವಃ - ಅಮಂಗಳನಾದ, ಮತ್ತಃ-ಮದಿಸಿದ, ಮತ್ತಜನಪ್ರಿಯಃ - ಮತ್ತರಿಗೆ ಪ್ರಿಯನೂ, ತಮೋ...ನಾಂ, ತಮೋಮಾತ್ರಾತ್ಮಕ - ಕೇವಲ ತಮೋರೂಪವಾದ, ಆತ್ಮನಾಂ-ಸ್ವಭಾವವುಳ್ಳ, ಪ್ರಮಥಭೂತಾನಾಂ - ಪ್ರಮಥಗಳೆಂಬ ಭೂತಗಳಿಗೆ, ಪತಿಃ - ಒಡೆಯನಾಗಿ

ಅಲೆದಾಡುತ್ತಿರುವನು॥೧೪॥ ಇವನ ಲಂಕಾರವನ್ನು ನೋಡಿದಿರಾ! ಚಿತಿಗಳ ಭಸ್ಮವೇ ಗಂಧವು. ಹೆಣಗಳಿಗಿಟ್ಟ ಪೂಮಾಲೆಗಳೇ ಅಲಂಕಾರವು. ಮನುಷ್ಯರೆಲುಬುಗಳೇ ಒಡವೆಗಳು. ಇಂತು ಮರುಳನಾಗಿ ಮರುಳರಿಂದ ಕೂಡಿರುವುದರಿಂದ ಇವನು ಅಶಿವನೇ ಹೊರತು ಶಿವನಲ್ಲ.

‡ (1) ದಿ. ಈ ಪರಶಿವಮೂರ್ತಿಯು ಪರಬ್ರಹ್ಮಸ್ವರೂಪನಾದುದರಿಂದ ಇವನಿಗೆ ಕರ್ಮಗಳಿಲ್ಲ. ಇವನಿಗಿಂತಲೂ ಪರಿಶುದ್ಧರಿಲ್ಲ. ಅಹಂಕಾರವೆಂಬುದೀತನನ್ನು ಇಣಿಕಿ ನೋಡದು. ಧರ್ಮಮರ್ಯಾದೆಗೀತನೆ ಆಶ್ರಯನು, ಮಹಾತಾಮಸ ಸ್ವಭಾವವುಳ್ಳ ಪ್ರಮಥಗಳನ್ನೂ ಈತನು ಸಲಹುತ್ತಿರುವನು, ಈತನ ಅನುಗ್ರಹವಾದಕೂಡಲೆ ಎಂತಹ ಪತಿತನಾದರೂ ಪಾವನನಾಗುವನು. ಈತನ ಮನಸ್ಸು ಎಂತಹ ದುಷ್ಟರಲ್ಲಿಯೂ ಕನಿಕರಗೊಳ್ಳುವುದು, ಇಂತಹ ಮಹಿಮೆಯುಳ್ಳ ಮಹಾದೇವನಿಗೆ ಮಾನುಷಿಯಾದ ನನ್ನ ಮಗಳನ್ನು ಕೊಡುವುದು ಅನುಚಿತವಾದರೂ, ಹಣದಾಸೆಗಾಗಿ ಶೂದ್ರನಿಗೆ ವೇದವನ್ನು ಕಲಿಸುವಂತೆ, ಈತನ ಸಂಬಂಧವನ್ನು ಬಿಡಬಾರದೆ? ಈ ಬ್ರಹ್ಮನ ಮಾತಿನಿಂದ ಲಜ್ಜಾಭಯಾದಿಗಳನ್ನುಳಿದು, ಅನರ್ಹಳಾದರೂ ಮಗಳನ್ನಿತ್ತು ಸಂಬಂಧವನ್ನು ಬೆಳೆಯಿಸಿದನಾದುದರಿಂದ ನಾನೇ ಧನ್ಯನು, ಎಂದು ತಾತ್ಪರ್ಯವು.

(2) ಪೂ. (1) ಈ ರುದ್ರಪ್ರಶಂಸೆಯು ದಕ್ಷನ ಅಭಿಪ್ರಾಯವೆ ? (2) ಈ ಪುರಾಣ ಕರ್ತರಾದ ವೇದವ್ಯಾಸರ ಅಭಿಪ್ರಾಯವೆ ? (3) ಇತರರ ಅಭಿಪ್ರಾಯವೆ ? (1) ದಕ್ಷನು ದೇವಾದಿಗಳನ್ನು ಕುರಿತು (ಶ್ಲೋ - ೯) ಹಲವು ಬಗೆಯಾಗಿ ಜರೆದು (ಶ್ಲೋ - ೧೯) ಕೋಪದಿಂದವನಿಗೆ ಶಾಪವನ್ನಿತ್ತು ತನ್ನ ಮನೆಗೆ ತೆರಳಿದನೆಂದು ಹೇಳಿರುವುದರಿಂದ ಇದು ದಕ್ಷನ ಅಭಿಪ್ರಾಯವಲ್ಲ (2) ಈ ಪುರಾಣವು ವೇದಾಂತಾರ್ಥವನ್ನು ಪ್ರತಿಪಾದಿಸುವುದರಿಂದಲೂ, ವೇದಾಂತಗಳಲ್ಲಿ 'ನಾರಾಯಣಾದ್ರುದ್ರೋ ಜಾಯತೇ' ಮತ್ತು ಶ್ಲೋ॥ ಸದ್ಯೋ ಜಾಯತ ತನ್ಮನ್ಯುಃ ಕುಮಾರೋ ನೀಲಲೋಹಿತಃ। ಸ ವೈ ರುರೋದ ದೇವಾನಾಂ ಪೂರ್ವಜೋ ಭಗವಾನ್ ಭವಃ । ನಾಮಾನಿ ಕುರು ಹೇ ಧಾತಃ ! ಸ್ಥಾನಾನಿ ಚ ಜಗತ್ಪತೇ ! '' ಎಂದು, ರುದ್ರನು ನಾರಾಯಣನಿಂದ ಜನಿಸಿದನೆಂತಲೂ, ಅವನು ಹುಟ್ಟಿದಾಗ ರೋದಿಸಲು, ಭಗವಂತನು ಬ್ರಹ್ಮನನ್ನು ಕುರಿತು " ಇವನಿಗೆ ಹೆಸರುಗಳನ್ನು ಸ್ಥಾನಗಳನ್ನೂ ನಿಶ್ಚಯಿಸು '' ಎಂದು ಹೇಳಿದನೆಂಬುದೇ ಮೊದಲಾದ ಪ್ರಮಾಣಗಳಿಂದ, ರುದ್ರನು ಕರ್ಮವಶನು, ಜನ್ಮಾದಿಗಳುಳ್ಳವನೂ, ಚತುರ್ಮುಖನಿಗಿಂತ ಚಿಕ್ಕವನು, ಎಂಬರ್ಥಗಳು ಹೇಳಲ್ಪಟ್ಟಿರುವುದರಿಂದಲೂ, ಈ ಅರ್ಥವು ಈ ಪುರಾಣ ಕರ್ತರಾದ ವೇದವ್ಯಾಸರ ತಾತ್ಪರ್ಯವಲ್ಲ. (3) ನಿಂದಾರೂಪವಾದ ಗ್ರಂಥಕ್ಕೆ ಬೇಕೆಂದು ವಿಪರೀತಾರ್ಥಗಳನ್ನು ಕಲ್ಪಿಸಿದಲ್ಲಿ ಎಲ್ಲಾ ಸ್ತುತಿನಿಂದೆಗಳಲ್ಲಿಯೂ, ಹೀಗೆಯೇ ಆಗಿ ನಿಜಾಭಿಪ್ರಾಯವು ಕೆಟ್ಟುಹೋಗುವುದರಿಂದ, ಇತರವಾದಿಗಳೂ, ಈ ಅಭಿಪ್ರಾಯವನ್ನು ಸಾಧಿಸಲಾರರು. ಆದಕಾರಣ ಈ ಶ್ಲೋಕಗಳಿಗೆ ಶಿವನಿಂದೆಯಲ್ಲಿಯೇ ತಾತ್ಪರ್ಯವು.

ಮಯಾ ಸಾಧ್ವೀ ಚೋದಿತೇ ಪರಮೇಷ್ಠಿನಾ ॥ ೧೬ ॥ ಮೈತ್ರೇಯಃ ॥
ವಿನಿಂದ್ಯೈವಂ ಸ ಗಿರಿಶ ಮಪ್ರತೀಪ ಮವಸ್ಥಿತಂ । ದಕ್ಷೋಽಥಾಽಪ ಉ
ಪಸ್ಪೃಶ್ಯ ಕ್ರುದ್ಧ ಶ್ಶಪ್ತುಂ ಪ್ರಚಕ್ರಮೇ ॥೧೭॥ * ಅಯಂತು ದೇವಯಜನ
ಇಂದ್ರೋಪೇಂದ್ರಾದಿಭಿ ರ್ಭವಃ। ಸಹ ಭಾಗಂ ನಲಭತಾಂ ದೇವೈ ರ್ದೇವ
ಗಣಾಽಧಮಃ ॥೧೮॥ ನಿಷಿಧ್ಯಮಾನ ಸ್ಸ ಸದಸ್ಯಮುಖ್ಯೈ ರ್ದಕ್ಷೋ ಗಿರಿ
ತ್ರಾಯ ವಿಸೃಜ್ಯ ಶಾಪಂ। ತಸ್ಮಾ ದ್ವಿನಿಷ್ಕ್ರಮ್ಯ ವಿವೃದ್ಧಮನ್ಯು ರ್ಜಗಾಮ

ರುವನೋ ॥೧೫॥ ಉನ್ಮಾದನಾಥಾಯ - ಉನ್ಮಾದ ಗ್ರಹಗಳಿಗೆ ಒಡೆಯನಾದ, ನಷ್ಟಶೌಚಾಯ - ಆಚಾರಹೀನನಾದ, ದುರ್ಹೃದೇ - ದುಷ್ಟಚಿತ್ತನಾದ, ತಸ್ಮೈ - ಅವನಿಗೆ, ಪರಮೇಷ್ಠಿನಾ - ಬ್ರಹ್ಮನಿಂದ, ಪ್ರೇರಿತೇ - ಪ್ರೇರಿಸಲ್ಪಡಲು, ಮಯಾ - ನನ್ನಿಂದ, ಸಾಧ್ವೀ - ಯೋಗ್ಯಳಾದ, ಕನ್ಯಾ - ಕನ್ಯೆಯು, ದತ್ತಾಖತ - ಕೊಡಲ್ಪಟ್ಟಳಲ್ಲಾ ॥೧೬॥ ಸದಕ್ಷಃ - ಆ ದಕ್ಷನು, ಅಪ್ರತೀಪಂ - ಪ್ರತೀಕಾರವಿಲ್ಲದೆ, ಅವಸ್ಥಿತಂ - ಕುಳಿತಿರುವ, ಗಿರಿಶಂ - ಶಿವನನ್ನು, ಏವಂ - ಇಂತು, ವಿನಿಂದ್ಯ - ದೂಷಿಸಿ, ಅಥ - ಬಳಿಕ, ಅಪಃ - ಜಲವನ್ನು, ಉಪಸ್ಪೃಶ್ಯ - ಆಚಮನಮಾಡಿ, ಕ್ರುದ್ಧಃ - ಕೋಪಗೊಂಡವನಾಗಿ, ಶಪ್ತುಂ - ಶಪಿಸುವುದಕ್ಕೆ, ಪ್ರಚಕ್ರಮೇ - ಅಣಿಯಾದನು ॥೧೭॥ ದೇವಗಣಾಧಮಃ - ದೇವತೆಗಳಲ್ಲಿ ಅಧಮನಾದ, ಅಯಂ - ಈ, ಭವಃ - ರುದ್ರನು, ದೇವಯಜನೇ - ದೇವತೆಗಳ ಯಜ್ಞದಲ್ಲಿ, ಇಂದ್ರೋ...ಭಿಃ, ಇಂದ್ರನು, ಉಪೇಂದ್ರನು, ಆದಿಭಿಃ - ಮೊದಲಾದ, ದೇವೈಸ್ಸಹ - ದೇವತೆಗಳೊಡನೆ, ಭಾಗಂ - ಹವಿರ್ಭಾಗವನ್ನು, ನಲಭತಾಂ - ಹೊಂದಬೇಡ ॥೧೮॥

ಹೇಕೌರವ್ಯ - ಎಲೈ ವಿದುರನೆ ! ಸದಕ್ಷಃ - ಆ ದಕ್ಷನು, ಸದಸ್ಯಮುಖ್ಯೈಃ - ಸಭಾನಾಯಕರಿಂದ, ನಿಷಿಧ್ಯಮಾನೋಪಿ - ತಡೆಯಲ್ಪಟ್ಟರೂ, ಗಿರಿತ್ರಾಯ - ಶಿವನಿಗೆ, ಶಾಪಂ - ಶಾಪವನ್ನು, ವಿಸೃಜ್ಯ - ಕೊಟ್ಟು

ಹೆಸರಿಗೆ ಮಾತ್ರ ಶಿವನಾಗಿರುವನು. ಇವನ ಪರಿವಾರವನ್ನು ಕಂಡಿರಾ ! ಕೇವಲ ತಮೋರೂಪರಾದ ಪ್ರಮಥಭೂತಗಳೇ ಸುತ್ತಮುತ್ತಲೂ ಆವರಿಸಿರುವರು ॥೧೫॥ ಇಂತು ಆಚಾರವಿಲ್ಲದೆ ಭೂತಪ್ರೇತಗಳನ್ನು ಕಟ್ಟಿಕೊಂಡು ಅಲೆದಾಡುತ್ತಿರುವ ದುಷ್ಟಚಿತ್ತನಿಗೆ, ಈ ಚತುರ್ಮುಖನ ಪ್ರೇರಣೆಯಿಂದ ಮೋಸಹೋಗಿ ಮಹಾಪತಿವ್ರತೆಯಾದ ಸತಿಯನ್ನಿತ್ತೆನಲ್ಲಾ. ಅಕಟಾ! ॥೧೬॥ ಅಯ್ಯಾ ವಿದುರನೆ ! ಆ ದಕ್ಷಪ್ರಜಾಪತಿಯು, ಯಾವಮಾತನ್ನೂ ಆಡದೆ ಸುಮ್ಮನೆ ಕುಳಿತಿರುವ ಪರಶಿವಮೂರ್ತಿಯನ್ನು ಈ ರೀತಿಯಾಗಿ ಜರೆದು ಅಲ್ಲಿಗೂ ಕೋಪವಾರದೇ ಹೋಗಲು, ಆಚಮನವನ್ನು ಮಾಡಿ, ಶಪಿಸ ತೊಡಗಿದನು ॥೧೭॥ ದೇವಗಣದಲ್ಲಿ ಅಧಮನಾದ ಈರುದ್ರನು ಇನ್ನುಮೇಲೆ ಇಂತಹ ದೇವಯಾಗಗಳಲ್ಲಿ ಇಂದ್ರ, ವಿಷ್ಣು, ಮೊದಲಾದ ದೇವತೆಗಳೊಡನೆ ಸಮಾನವಾದ ಹವಿರ್ಭಾಗವನ್ನು ಹೊಂದಬೇಡ ॥ ೧೮ ॥ ಎಂದು ಆದಕ್ಷನು ಶಪಿಸುವಾಗ, ಆಸಭೆಯಲ್ಲಿ ಮುಖ್ಯ ಮುಖ್ಯರಾದವರೆಲ್ಲರೂ ಬಂದು,

* ಭಾ. ಈ ಶ್ಲೋಕಕ್ಕೆ ಶಿವಪ್ರಶಂಸಾ ಪರವಾಗಿಯೂ ಅರ್ಥವುಂಟು ಎಂತೆಂದರೆ:—ಈತನು ದೇವತೆಗಳಲ್ಲಿ ಸರ್ವೋತ್ತಮನಾಗಿ ಮಹಾದೇವನೆನಿಸಿರುವುದರಿಂದ, ಈ ದೇವಯಾಗದಲ್ಲಿ ಇತರ ದೇವತೆಗಳಿಗಿಂತ ಮೊದಲೇ ಹವಿರ್ಭಾಗವನ್ನು ಪಡೆಯಲಿ. ಅಥವಾ ಈತನು ಸರ್ವಪೋಷಕನಾದ ಯಜಮಾನನಾದುದರಿಂದ ಎಲ್ಲರಿಗಿಂತ ಕಡೆಯಲ್ಲಾದರೂ ಮರ್ಯಾದೆಯನ್ನು ಹೊಂದಲಿ.

ಕೌರವ್ಯ ! ನಿಜಂ ನಿಕೇತಂ ॥೧೯॥ ವಿಜ್ಞಾಯ ಶಾಪಂ ಗಿರಿಶಾಽನುಗಾಽಗ್ರಣೀ
ರ್ನಂದೀಶ್ವರೋ ರೋಷಕಷಾಯರೂಷಿತಃ । ದಕ್ಷಾಯ ಶಾಪಂ ವಿಸಸರ್ಜ
ದಾರುಣಂ ಯೇ ಚಾಽನ್ವಮೋದಂ ಸ್ತದವಾಚ್ಯತಾಂ ದ್ವಿಜಾಃ ॥ ೨೦ ॥
ನಂದೀ॥ ಯ ಏತ ನ್ಮರ್ತ್ಯ ಮುದ್ದಿಶ್ಯ ಭಗವ ತ್ಯಪ್ರತಿದ್ರುಹಿ । ದ್ರುಹ್ಯತ್ಯಜ್ಞಃ
ಪೃಥಗ್ದೃಷ್ಟಿ ಸ್ತತ್ತ್ವತೋ ವಿಮುಖೋ ಭವೇತ್ ॥೨೧॥ ಗೃಹೇಷು ಕೂ
ಟಧರ್ಮೇಷು ಸಕ್ತೋ ಗ್ರಾಮ್ಯಸುಖೇಚ್ಛಯಾ । ಕರ್ಮತಂತ್ರಂ ವಿತನು

ವಿವೃದ್ಧಮನ್ಯುಃ - ಕೋಪವೇರಿ, ತಸ್ಮಾತ್ - ಆಸಭೆಯಿಂದ, ವಿನಿಷ್ಕ್ರಮ್ಯ - ಹೊರಟು, ನಿಜಂ - ತನ್ನ, ನಿಕೇತಂ - ಮನೆಗೆ, ಜಗಾಮ - ಹೋದನು ॥೧೯॥ ಗಿರಿ....ಣೀಃ, ಗಿರಿಶ - ಶಿವನ, ಅನುಗ - ಭಕ್ತರಲ್ಲಿ, ಅಗ್ರಣೀಃ - ಶ್ರೇಷ್ಠನಾದ, ನಂದೀಶ್ವರಃ - ನಂದಿಯು, ಶಾಪಂ - ಶಾಪವನ್ನು, ವಿಜ್ಞಾಯ - ತಿಳಿದು, ರೋಷ...ತಃ, ರೋಷ - ಕೋಪವೆಂಬ, ಕಷಾಯ - ಕೆಂಬಣ್ಣದಿಂದ, ರೂಷಿತಃ - ವ್ಯಾಪ್ತನಾಗಿ, ದಕ್ಷಾಯ - ದಕ್ಷನಿಗೂ, ತದವಾಚ್ಯತಾಂ - ಅವನ ಕೆಟ್ಟನುಡಿಯನ್ನು, ಯೇಚದ್ವಿಜಾಃ - ಯಾವಬ್ರಾಹ್ಮಣರು ಅನ್ವಮೋದನ್ - ಸಮ್ಮತಿಸಿದರೋ, ಅವರಿಗೂ, ದಾರುಣಂ - ಭಯಂಕರವಾದ, ಶಾಪಂ - ಶಾಪವನ್ನು, ವಿಸಸರ್ಜ - ಕೊಟ್ಟನು ॥೨೦॥ ಅಜ್ಞಃ - ಮೂಢನಾದ, ಯಃ - ಯಾವದಕ್ಷನು, ಏತನ್ಮರ್ತ್ಯಂ - ಈದಕ್ಷಶರೀರವನ್ನು, ಉದ್ದಿಶ್ಯ - ಉದ್ದೇಶಿಸಿ, ಅಪ್ರತಿದ್ರುಹಿ - ದ್ರೋಹವನ್ನೆಣಿಸದ, ಭಗವತಿ - ಭಗವಂತನಲ್ಲಿ, ಪೃಥಗ್ದೃಷ್ಟಿಃ - ಭೇದದೃಷ್ಟಿಯುಳ್ಳವನಾಗಿ, ದ್ರುಹ್ಯತಿ - ದ್ರೋಹವನ್ನೆಣಿಸುತ್ತಾನೋ, ಸಃ - ಅವನು, ತತ್ತ್ವತಃ - ಪರಮಾರ್ಥದಿಂದ, ವಿಮುಖಃ - ಪರಾಙ್ಮುಖನು, ಭವೇತ್ - ಆಗಲಿ ॥೨೧॥ ಗ್ರಾಮ್ಯ...ಯಾ, ಗ್ರಾಮ್ಯಸುಖ - ವಿಷಯಸುಖದ, ಇಚ್ಛಯಾ - ಆಸೆಯಿಂದ, ಕೂಟಧರ್ಮೇಷು-ಡಾಂಭಿಕ ಧರ್ಮಗಳುಳ್ಳ, ಗೃಹೇಷು - ಸಂಸಾರದಲ್ಲಿ, ಸಕ್ತಃ - ಆಸಕ್ತನಾಗಿ, ವೇದ...ಧೀಃ, ವೇದ - ವೇದಗಳ, ವಾದ - ವಾಕ್ಯಗಳಿಂದ, ವಿಪನ್ನ - ಮರುಳಾದ, ಧೀಃ - ಬುದ್ಧಿಯುಳ್ಳವನಾಗಿ, ಕರ್ಮತಂತ್ರಂ - ಕರ್ಮಕಲಾಪವನ್ನು, ವಿತನುತಾತ್ - ಮಾಡಲಿ ॥೨೨॥ ಪರಾ...ನ್ಯಾ, ಪರ - ಶಬ್ದಾದಿ ವಿಷಯಗಳನ್ನು, ಅಭಿಧ್ಯಾಯಿನ್ಯಾ -

ದಕ್ಷನೆ ! ನಿಲ್ಲು. ಶಪಿಸಬೇಡ ನಿಲ್ಲು. ಎಂದು ಎಷ್ಟು ತಡೆದರೂ ಶಾಂತನಾಗದೆ ಪರಶಿವನಿಗೆ ಶಾಪವನ್ನಿತ್ತು, ಅದೇಕೋಪದಲ್ಲಿ ತಟ್ಟನಾಸಭೆಯಿಂದೆದ್ದು ತನ್ನ ಮನೆಗೆ ತೆರಳಿದನು ॥೧೯॥ ಕೂಡಲೆ ಆಶಿವನಪಾರ್ಷದರಲ್ಲಿ ಅಗ್ರಗಣ್ಯನಾದ ನಂದೀಶ್ವರನು, ದಕ್ಷನಿತ್ತದಾರುಣವಾದ ಶಾಪವನ್ನು ಕೇಳಿ, ಕೋಪದಿಂದ ಕಣ್ಣುಗಳನ್ನು ಕೆಂಪಾಗಿ ಮಾಡಿಕೊಂಡು, ಆದಕ್ಷನಿಗೂ, ಅವನಿತ್ತ ಶಾಪವನ್ನು ಅನುಮೋದಿಸಿದ ಬ್ರಾಹ್ಮಣರಿಗೂ ಸಹ, ಅತಿಭಯಂಕರವಾದ ಶಾಪವನ್ನಿತ್ತನೆಂತೆಂದರೆ ॥೨೦॥ ಭಗವಂತನಾದ ಪರಶಿವಮೂರ್ತಿಯು, ಮಾವನಾದುದರಿಂದ ಇವನ ಶರೀರಕ್ಕೆ ಗೌರವವನ್ನಿತ್ತು, ಪ್ರತಿಯಾಗಿ ದ್ರೋಹವನ್ನೆಣಿಸದಿದ್ದರೂ, ಮೂಢನಾದ ಈ ದಕ್ಷನು ಭೇದ ದೃಷ್ಟಿಯುಳ್ಳವನಾಗಿ ದ್ರೋಹವನ್ನೆಣಿಸಿದುದುದರಿಂದ, ಇವನು ತತ್ತ್ವಜ್ಞಾನವನ್ನು ಪಡೆಯದೇಹೋಗಲಿ ॥ ಡಾಂಭಿಕಗಳಾದ ಧರ್ಮಗಳಿಗಾಕರವೆನಿಸಿದ ಸಂಸಾರದಲ್ಲಿ ನೆಲೆಗೊಂಡು, ವೇದದಲ್ಲಿ ಹೇಳಿರುವ ಅರ್ಥವಾದಗಳಿಗೆ ಮರುಳಾಗಿ, ಕ್ಷಣಿಕಗಳಾದ ಸ್ರಕ್ಚಂದನವನಿತಾದಿ ಸುಖಗಳನ್ನಾಶಿಸುತ್ತಾ, ಕರ್ಮಕಲಾಪವೆಂಬ ಸಮುದ್ರದಲ್ಲಿ ಅಲೆದಾಡುತ್ತಿರಲಿ ॥೨೨॥ ಮತ್ತು ಈ ದಕ್ಷನು ಶಬ್ದಾದಿವಿಷಯಗಳನ್ನೇ ಧ್ಯಾನಿಸುವ ಬುದ್ಧಿಯಿಂದ ಪರ

ತಾ ‡ ದ್ವೇದವಾದವಿಪನ್ನಧೀಃ । ॥ ೨೨ ॥ ಬುಧ್ಯಾ ಪರಾ ಽ ಭಿಧ್ಯಾಯಿನ್ಯಾ ವಿಸ್ಮೃತಾತ್ಮಗತಿಃ ಪಶುಃ । ಸ್ತ್ರೀಕಾಮ ಸ್ಸೋಽಸ್ತ್ವತಿತರಾಂ ದಕ್ಷೋ ಬಸ್ತ ಮುಖೋ ಽ ಚಿರಾತ್ ॥೨೩॥ ವಿದ್ಯಾಬುದ್ಧಿ ರವಿದ್ಯಾಯಾಂ ಕರ್ಮಮ ಯ್ಯಾ ಮಸೌ ಜಡಃ । ಸಂಸರಂತ್ವಿಹ ಯೇಚೇಮ ಮನುಶರ್ವಾ ಽ ವಮಾನಿ ನಂ ॥೨೪॥ § ಗಿರಃ ಶ್ರುತಾಯಾಃ ಪುಷ್ಪಿಣ್ಯಾ ಮಧುಗಂಧೇನ ಭೂರಿಣಾ। ಮಥ್ನಾಚೋನ್ಮಥಿತಾತ್ಮಾನಃ ಸಂಮುಹ್ಯಂತು ಹರದ್ವಿಷಃ ॥೨೫॥ ಸರ್ವಭಕ್ಷಾ

ಧ್ಯಾನಿಸುವ, ಬುದ್ಧ್ಯಾ -ಬುದ್ಧಿಯಿಂದ, ವಿಸ್ಮೃ...ತಿಃ, ವಿಸ್ಮೃತ - ಮರೆಯಿಸಲ್ಪಟ್ಟ, ಆತ್ಮಗತಿಃ - ಆತ್ಮ ಸ್ವರೂಪವುಳ್ಳವನಾದುದರಿಂದಲೇ, ಪಶುಃ - ಅವಿವೇಕಿಯಾದ, ದಕ್ಷನು, ಅತಿತರಾಂ - ಬಹಳವಾಗಿ, ಸ್ತ್ರೀ ಕಾಮಃ - ಸ್ತ್ರೀಕಾಮುಕನಾಗಿ, ಅಚಿರಾತ್ - ಬೇಗನೆ, ಬಸ್ತಮುಖಃ- ಕುರಿಯ ತಲೆಯುಳ್ಳವನು, ಅಸ್ತು - ಆಗಲಿ ॥೨೩॥ ಕರ್ಮಮಯ್ಯಾಂ - ಕರ್ಮರೂಪವಾದ, ಅವಿದ್ಯಾಯಾಂ - ಅವಿದ್ಯೆಯಲ್ಲಿ, ವಿದ್ಯಾಬುದ್ಧಿಃ - ತತ್ವವಿದ್ಯೆಯೆಂಬ ಬುದ್ಧಿಯುಳ್ಳ, ಅಸೌ - ಇವನು, ಜಡಃ - ಮೂಢನು, ಆಗಲಿ, ಇಮಂ ಅನು - ಈ ದಕ್ಷ ನನ್ನು ಅನುಸರಿಸಿ, ಯೇಚ - ಯಾರು ಶರ್ವಾವಮಾನಿನಃ - ಶಿವನನ್ನು ಅವಮಾನಗೊಳಿಸಿದರೋ, ಅವರು ಸಂಸರಂತು - ಸಂಸಾರದಲ್ಲಿ ಅಲೆದಾಡಲಿ ॥೨೪॥ ಹರದ್ವಿಷಃ - ಶಿವದ್ವೇಷಿಗಳು, ಪುಷ್ಪಿಣ್ಯಾಃ - ಅರ್ಥವಾದ ಗಳಿಂದ ತುಂಬಿರುವ, ಶ್ರುತಾಯಾಃ - ವೇದದ, ಗಿರಃ - ವಾಕ್ಯದ, ಭೂರಿಣಾ - ಅಧಿಕವಾದ, ಮಥ್ನಾ - ಮನ ಸ್ಸನ್ನು ಕಲಕುವ, ಮಧುಗಂಧೇನ - ಸ್ವರ್ಗಾದಿ ಫಲಗಳಿಂದ, ಉನ್ಮಥಿತಾತ್ಮಾನಃ ಕಲಕಲ್ಪಟ್ಟ ಮನಸ್ಸು ಳ್ಳವರಾಗಿ, ಸಂಮುಹ್ಯಂತು - ಮೋಹಗೊಳ್ಳಲಿ ॥೨೫॥

ದ್ವಿಜಾಃ - ಈ ಬ್ರಾಹ್ಮಣರು, ಸರ್ವಭಕ್ಷಾಃ - ವಿಧಿನಿಷೇಧಗಳಿಲ್ಲದೆ ಎಲ್ಲವನ್ನೂ ತಿನ್ನತಕ್ಕವರಾಗಿ

ಮಾತ್ಮಸ್ವರೂಪವನ್ನು ನೆನೆಯದೆ ವಿಸ್ಮೃತನಾಗಿ, ಪಶುವಿನಂತೆ ಅತ್ಯಂತ ಕಾಮಾತುರನಾ ಗಲಿ. ಅಲ್ಲದೆ ಶೀಘ್ರವಾಗಿಯೇ ಇವನಿಗೆ ಕುರಿಯ ತಲೆಯುಂಟಾಗಲಿ ॥೨೩॥

ಈ ಮೂರ್ಖನಿಗೆ ಕರ್ಮಕಲಾಪರೂಪವಾದ ಅವಿದ್ಯೆಯಲ್ಲಿ ತತ್ವವಿದ್ಯೆಯೆಂಬ ಬುದ್ಧಿಯುಂಟಾಗಲಿ. ಈ ದುರಾತ್ಮನನ್ನನುಸರಿಸಿ, ಇವನು ಮಾಡಿದ ಶಿವದ್ರೋಹ ವನ್ನು ಯಾರು ಸಮ್ಮತಿಸಿದರೋ, ಆ ಬ್ರಾಹ್ಮಣರೂ ಜನನ ಮರಣಪ್ರವಾಹದಲ್ಲಿ ಓಲಾ ಡಲಿ ॥ ೨೪ ॥ ಅಲ್ಲದೆ ಇವರು, ಮಗಮಗಿಸುತ್ತಾ ಮರುಳ್ಗೊಳಿಸುವ ಹೂಗೊಂಚಲಿನಂತೆ, ಮನಸ್ಸನ್ನು ಮೋಹಗೊಳಿಸುವ ಅರ್ಥವಾದಗಳಿಂದ ನಿಬಿಡಗಳಾದ ವೇದಗಳಲ್ಲಿ ಹೇಳಿದ,ಮ ನೋಹರವಾದ ಪರಿಮಳಗಂಧದಂತೆ ಬೆರಗುಗೊಳಿಸುತ್ತಿರುವ ನಶ್ವರಗಳಾದ ಸ್ವರ್ಗಾದಿಲೋ ಕಗಳನ್ನು ಬಯಸಿ, ಶಿವದ್ವೇಷಿಗಳಾಗಿ ಮೋಹವನ್ನು ಪಡೆಯಲಿ ॥೨೫॥ ಈ ಬ್ರಾಹ್ಮಣರು ವಿಧಿನಿಷೇಧಗಳಿಲ್ಲದೆ ಎಲ್ಲವನ್ನೂ ತಿನ್ನಲಿ. ಜೀವನಕ್ಕಾಗಿಯೇ ವಿದ್ಯೆ, ತಪಸ್ಸು, ನಿಯಮಗಳ ನ್ನು ಮಾಡಲಿ. ಈ ಲೋಕದಲ್ಲಿ ತಿರುಕರಾಗಿರಲಿ ॥ ೨೬ ॥ ಎಂದು ಬ್ರಾಹ್ಮಣ

‡ ಶ್ರು. ಅಪಾಮ ಸೋಮ ಮಮೃತಾ ಅಭೂಮ ಅಗನ್ಮಜ್ಯೋತಿ ರವಿದಾಮ ದೇವಾನ್.

§ ಗೀತಾ. ಯಾ ಮಿಮಾಂ ಪುಷ್ಪಿತಾಂ ವಾಚಂ ಪ್ರವದಂತಿ ವಿಪಶ್ಚಿತಃ । ವೇದವಾದರತಾಃ ಪಾರ್ಥ ನಾನ್ಯ ದಸ್ತೀತಿ ವಾದಿನಃ ॥

ದ್ವಿಜಾ ವೃತ್ತ್ಯೈ ಧೃತವಿದ್ಯಾ ತಪೋವ್ರತಾಃ । ವಿತ್ತದೇಹೇಂದ್ರಿಯಾ
ರಾಮಾ ಯಾಚಕಾ ವಿಚರಂತ್ವಿಹ ॥೨೬॥ ತಸ್ಯೈವಂ ವದತ ಶಾಪಂ
ಶ್ರುತ್ವಾ ದ್ವಿಜಕುಲಾಯವೈ । ಭೃಗುಃ ಪ್ರತ್ಯಸೃಜಚ್ಛಾಪಂ ಬ್ರಹ್ಮ
ದಂಡಂ ದುರತ್ಯಯಂ ॥ ೨೭ ॥ ¶ ಭವವ್ರತಧರಾ ಯೇಚ ಯೇಚ ತಾನ್
ಸಮನುವ್ರತಾಃ। ಪಾಷಂಡಿನಸ್ತೇ ಭವಂತು † ಸಚ್ಛಾಸ್ತ್ರಪರಿಪಂಥಿನಃ ॥೨೮॥
ನಷ್ಟಶೌಚಾ ಮೂಢಧಿಯೋ ಜಟಾಭಸ್ಮಾಽಸ್ಥಿಧಾರಿಣಃ । ವಿಶಂತು
ಶಿವದೀಕ್ಷಾಯಾಂ ಯತ್ರದೈವಂ ಸುರಾಸವಂ ॥೨೯॥ ಬ್ರಹ್ಮಚ ಬ್ರಾಹ್ಮ

---

ಯೂ, ವೃತ್ತ್ಯೈ - ಜೀವನಕ್ಕಾಗಿ, ಧೃತ...ತಾಃ, ಧೃತ - ಧರಿಸಲ್ಪಟ್ಟ, ವಿದ್ಯೆ, ತಪಸ್ಸು, ವ್ರತಗಳುಳ್ಳ ವರಾಗಿಯೂ, ವಿತ್ತ...ಮಾಃ, ವಿತ್ತ - ಹಣ, ದೇಹ - ಶರೀರ, ಇಂದ್ರಿಯ - ಇಂದ್ರಿಯಂಗಳು ಇವುಗಳಲ್ಲಿ ಆರಾಮಾಃ - ಕ್ರೀಡಿಸುವವರಾಗಿಯೂ, ಯಾಚಕಾಃ - ಭಿಕ್ಷಕರಾಗಿಯೂ, ಇಹ-ಈ ಲೋಕದಲ್ಲಿ, ವಿಚರಂತು - ಅಲೆದಾಡಲಿ ॥೨೬॥ ದ್ವಿಜಕುಲಾಯ - ಬ್ರಾಹ್ಮಣಕುಲಕ್ಕೇ, ಏವಂ - ಇಂತು, ವದತಃ - ಹೇಳು ತ್ತಿರುವ, ತಸ್ಯ - ಆ ನಂದಿಯ, ಶಾಪಂ - ಶಾಪವನ್ನು, ಶ್ರುತ್ವಾ - ಕೇಳಿ, ಭೃಗುಃ - ಭೃಗುಋಷಿಯು ದುರತ್ಯಯಂ - ಅತಿಕ್ರಮಿಸುವುದಕ್ಕಾಗದ, ಶಾಪಂ - ಶಾಪರೂಪವಾದ, ಬ್ರಹ್ಮದಂಡಂ - ಬ್ರಹ್ಮದಂಡವ ನ್ನು, ಪ್ರತ್ಯಸೃಜತ್ - ಪ್ರತಿಯಾಗಿಕೊಟ್ಟನು ॥೨೭॥ ಯೇಚ - ಯಾರು, ಭವವ್ರತಧರಾಃ - ಶೈವವ್ರತವ ನ್ನು ಧರಿಸಿದವರೋ, ಯೇಚ - ಯಾರು, ತಾನ್ - ಅವರನ್ನು, ಸಮನುವ್ರತಾಃ - ಅನುಸರಿಸಿದವರೋ, ತೇ - ಅವರು, ಸಚ್ಛಾಸ್ತ್ರಪರಿಪಂಥಿನಃ - ಭಗವಚ್ಛಾಸ್ತ್ರಗಳಿಗೆ ವಿರೋಧಿಗಳಾಗಿ, ಪಾಷಂಡಿನಃ - ಪಾಷಂಡರು, ಭವಂತು - ಆಗಲಿ ॥೨೮॥ ನಷ್ಟಶೌಚಾಃ - ದುರಾಚಾರರೂ, ಮೂಢಧಿಯಃ - ಮಂದಮತಿಗಳೂ, ಜಟಾಭ ಸ್ಮಾಸ್ಥಿಧಾರಿಣಃ - ಜಡೆಗಳನ್ನೂ, ಬೂದಿಯನ್ನೂ, ಎಲುಬುಗಳನ್ನೂ, ಧರಿಸಿದವರೂ ಆಗಿ, ಯತ್ರ - ಎಲ್ಲಿ, ಸುರಾ - ಮದ್ಯವೂ, ಆಸವಂ - ಪುಷ್ಪಫಲಾದಿರಸಗಳೂ, ದೈವಂ - ದೈವವೆನಿಸುವುದೋ, ಅಂತಹ, ಶಿವದೀಕ್ಷಾಯಾಂ - ಶೈವದೀಕ್ಷೆಯಲ್ಲಿ, ವಿಶಂತು - ಹೊಗಲಿ ॥೨೯॥ ಯತ್ - ಯಾವಕಾರಣದಿಂದ, ಯೂಯಂ- ನೀವು, ಪುಂಸಾಂ - ವರ್ಣಾಶ್ರಮದವರನ್ನು, ವಿಧಾರಣಾಂ - ಪಾಲಿಸುವುದರಿಂದ, ಸೇತುಂ - ಮರ್ಯಾದಾ

---

ಕುಲವನ್ನೇ ಉದ್ದೇಶಿಸಿ ಶಪಿಸುತ್ತಿರುವ ಆ ನಂದಿಯ ವಾಕ್ಯನ್ನು ಕೇಳಿ, ಬ್ರಾಹ್ಮಣೋ ತ್ತಮನಾದ ಭೃಗುಮುನಿಯು ಕ್ರುದ್ಧನಾಗಿ, ಬ್ರಹ್ಮದಂಡದಂತೆ ಅಪ್ರತೀಕಾರವಾದ ಪ್ರತಿಶಾ ಪವನ್ನಿತ್ತನೆಂತೆಂದರೆ— ॥೨೭॥ ಯಾರು ಶೈವವ್ರತವನ್ನು ಧರಿಸಿದವರೋ, ಯಾರು ಆ ಶೈವ ವ್ರತಧಾರಿಗಳನ್ನು ಅನುಸರಿಸುವರೋ, ಅವರು ತತ್ವವನ್ನು ಪ್ರತಿಪಾದಿಸುವ ಉತ್ತಮಶಾ ಸ್ತ್ರಗಳಿಗೆ ವಿಮುಖರೆನಿಸಿ ಪಾಷಂಡರಾಗಲಿ ॥೨೮॥ ಅಲ್ಲದೆ ದುರಾಚಾರರಾಗಿಯೂ ವಿವೇಕ ಹೀನರಾಗಿಯೂ, ಜಡೆಗಳನ್ನು ತಾಳಿ ಬೂದಿಯನ್ನು ಬಳೆದುಕೊಂಡು ಎಲುಬುಗಳ ಮಾ ಲೆಯನ್ನು ಧರಿಸುತ್ತಾ, ಮದ್ಯವನ್ನೇ ದೈವವೆಂದು ಪೂಜಿಸುವ ಶಿವದೀಕ್ಷೆಯನ್ನು ವಹಿ ಸಲಿ ॥೨೯॥ ಅಯ್ಯಾ ನಂದಿಯೆ! ವರ್ಣಾಶ್ರಮಾದಿ ನಿರ್ಣಯವನ್ನು ಮಾಡಿ ಲೋಕವನ್ನು

---

¶ ದೀ. ಮತ್ಸ್ಯಕೃ. ವೇದವಿಹಿತವಾದ ಈ ಶೈವವ್ರತವು ಪೂರ್ವದಲ್ಲಿಯೇ ಇದ್ದಿತೆಂದರಿಯಬೇಕು.

† ವೀ. ಪಾಂಚರಾತ್ರ ಮೊದಲಾದ ಆಗಮಗಳು.

ಣಾಂಶ್ಚೈವ ಯದ್ಯೂಯಂ ಪರಿನಿಂದಥ । ಸೇತುಂ ವಿಧಾರಣಂ ಪುಂಸಾ
ಮತಃ ಪಾಷಂಡ ಮಾಶ್ರಿತಾಃ ॥೩೦॥ ಏಷ ಏವಹಿ ಲೋಕಾನಾಂ ಶಿವಃ ಪಂ
ಥಾ ಸ್ಸನಾತನಃ । ಯಂ § ಪೂರ್ವೇ ಚಾ ನು ಸಂತಸ್ಥುಃ‡ ಯತ್ಪ್ರಮಾಣಂ
ಜನಾರ್ದನಃ ॥೩೧॥ ತದ್ಬ್ರಹ್ಮ ಪರಮಂ ಶುದ್ಧಂ ಸತಾಂ ವರ್ತ್ಮ ಸನಾತನಂ ।
ವಿಗರ್ಹ್ಯ ಯಾತ ಪಾಷಂಡಂ ದೈವಂ ವೋ ಯತ್ರ ಭೂತರಾಟ್ ॥೩೨॥
ಮೈತ್ರೇಯಃ ॥ ತಸ್ಯೈವಂ ವದತ ಶ್ಶಾಪಂ ಭೃಗೋ ಸ್ಸಭಗವಾನ್ ಭವಃ ।

---

ರೂಪವಾದ, ಬ್ರಹ್ಮ - ವೇದವನ್ನೂ, ಬ್ರಾಹ್ಮಣಾಂಶ್ಚೈವ - ಬ್ರಾಹ್ಮಣರನ್ನೂ, ಪರಿನಿಂದಿಥ - ನಿಂದಿಸಿದಿರೋ, ಅತಃ - ಆದುದರಿಂದ, ಪಾಷಂಡಂ - ಪಾಷಂಡಮತವನ್ನು, ಆಶ್ರಿತಾಃ - ಆಶ್ರಯಿಸಿರಿ ॥೩೦॥ ಯಂ - ಯಾವುದನ್ನು, ಪೂರ್ವೇ - ಪೂರ್ವಿಕರು, ಅನುಸಂತಸ್ಥುಃ - ಅನುಸರಿಸಿದರೋ, ಜನಾರ್ದನಃ - ವಿಷ್ಣುವು, ಯತ್ಪ್ರಮಾಣಂ - ಯಾವುದರಲ್ಲಿ ಪ್ರಮಾಣವೋ, ಅಂತಹ, ಏಷಏವ - ಈ ವೇದವೇ, ಲೋಕಾನಾಂ - ವರ್ಣಾಶ್ರಮಿಗಳಿಗೆ, ಶಿವಃ - ಶುಭವನ್ನುಂಟುಮಾಡುವ, ಸನಾತನಃ - ಅನಾದಿಸಿದ್ಧವಾದ, ಪಂಥಾಃ - ಮಾರ್ಗವು ॥೩೧॥

ತತ್ - ಆದುದರಿಂದ, ಪರಮಂ - ನಿರತಿಶಯವೂ, ಶುದ್ಧಂ - ಪರಿಶುದ್ಧವೂ, ಸನಾತನಂ- ಶಾಶ್ವತವೂ ಆದ, ಸತಾಂ - ಸತ್ಪುರುಷರ, ವರ್ತ್ಮ - ಮಾರ್ಗವನ್ನು, ವಿಗರ್ಹ್ಯ - ಜರೆದುದರಿಂದ, ಯತ್ರ-ಎಲ್ಲಿ, ವಃ- ನಿಮಗೆ, ಭೂತರಾಟ್ - ಭೂತಗಳಿಗೊಡೆಯನಾದ ರುದ್ರನು, ದೈವಂ - ದೈವವೊ, ಅಂತಹ, ಪಾಷಂಡಂ ಪಾಷಂಡಮತವನ್ನು, ಯಾತ - ಹೊಂದಿರಿ ॥೩೨॥ ತಸ್ಯ - ಆ, ಭೃಗೋಃ - ಭೃಗುವು, ಏವಂ - ಇಂತು ಶಾಪಂ-ಶಾಪವನ್ನು, ವದತಃ - ಹೇಳುತ್ತಿರಲು, ಭಗವಾನ್ - ಪೂಜ್ಯನಾದ, ಸಭವಃ - ಆಶಿವನು, ಕಿಂಚಿತ್

---

ಸಲಹುತ್ತಿರುವ ವೇದವನ್ನೂ, ಆ ವೇದಪ್ರಕಾಶಕರಾದ ಬ್ರಾಹ್ಮಣರನ್ನೂ ಕೂಡ ನಿಂದಿಸುತ್ತಿರುವಿರಾದುದರಿಂದ ನೀವು ಪಾಷಂಡರಾಗಿರಿ ॥೩೦॥ ವೇದವೆಂಬುದು ಸಾಮಾನ್ಯವೆ? ಯಾವ ವೇದವನ್ನು ಪೂರ್ವಿಕರಾದ ಮಹನೀಯ್ಯರು ಅನುಸರಿಸಿದರೋ, ಯಾವ ವೇದಕ್ಕೆ ಭಗವಂತನಾದ ನಾರಾಯಣಮೂರ್ತಿಯು ಮೂಲಕಾರಣನಾಗಿರುವನೋ, ಯಾವುದು ಯಜ್ಞ, ಉಪಾಸನ, ಮೊದಲಾದ ಧರ್ಮಗಳನ್ನು ಪ್ರಕಾಶಗೊಳಿಸುವುದರಿಂದ ಲೋಕಕ್ಕೆ ಮಂಗಳಕರವಾಗಿರುವುದೋ, ಅಂತಹ ವೇದವನ್ನು ಜರೆಯಬಹುದೆ ? ॥೩೧॥ ಇಂತು ಪರಮಪವಿತ್ರವಾಗಿಯೂ, ಶಾಶ್ವತವಾಗಿಯೂ, ಸತ್ಪುರುಷರಿಗೆ ಆಶ್ರಯವಾಗಿಯೂ, ಇರುವ ವೇದಮಾರ್ಗವನ್ನು ನಿಂದಿಸಿದಿರಾದುದರಿಂದ, ನೀವು ಭೂತಪತಿಯಾದ ರುದ್ರನನ್ನು ಆರಾಧಿಸುವ ಪಾಷಂಡಮತವನ್ನು ಅವಲಂಬಿಸಿರಿ ॥೩೨॥ ಅಯ್ಯಾ ಧನುರ್ವಿದ್ಯಾನಿಪುಣನಾದ ವಿ

---

§ ಪೀ. "ಪೂರ್ವಿಕರಾದ ಋಷಿಗಳು ವೇದವನ್ನು ಅನುಸರಿಸಿದರು" ಎಂದು ವೇದವು ಶಿಷ್ಟಪರಿಗೃಹೀತವೆಂಬುದಾಗಿ ಹೇಳಿದುದರಿಂದ ಶೈವಾಗಮಾದಿಗಳಲ್ಲವೆಂದು ಹೇಳಿದಂತೆಯೇ ಆಯಿತು-

‡ ಪೀ. ವೇದವು ಭಗವಂತನ ನಿಶ್ವಸಿತ ರೂಪವಾದುದರಿಂದ ಅಪೌರುಷೇಯವೂ, ಭ್ರಮವಿಪ್ರಲಂಭಾದಿ ದೋಷರಹಿತವೂ ಆಗಿರುವುದೆಂತಲೂ, ಶೈವಾಗಮಗಳು ಪೌರುಷೇಯಗಳೂ, ದುಷ್ಟಗಳೂ ಎಂತಲೂ ಹೇಳಿದಂತಾಯಿತು,

ನಿಶ್ಚಕ್ರಾಮ ತತಃ ಕಿಂಚಿ ದ್ವಿಮನಾ ಇವ ಸಾನುಗಃ ॥೩೩॥ ತೇ ऽ ಪಿ ವಿಶ್ವಸೃಜ ಸ್ಸತ್ರಂ ಸಹಸ್ರಪರಿವತ್ಸರಾನ್ । ಸಂವಿಧಾಯ ಮಹೇಷ್ವಾಸ ! ಯತ್ರೇಜ್ಯ ಋಷಭೋ ಹರಿಃ ॥೩೪॥ ಆಪ್ಲುತ್ಯಾ ऽ ವಭೃಥಂ ಯತ್ರ ಗಂಗಾ ಯಮುನಯಾ ऽ ನ್ವಿತಾ । ವಿರಜೇನಾತ್ಮನಾ ಸರ್ವೇ ಸ್ವಂ ಸ್ವಂ ಧಾಮ ಯಯು ಸ್ತತಃ ॥೩೫॥

—ಇತಿ ದ್ವಿತೀಯೋಧ್ಯಾಯಃ—

ಕೊಂಚವಾಗಿ, ದ್ವಿಮನಾಇವ - ಖಿನ್ನನಾದವನಂತೆ, ಸಾನುಗಃ - ಪರಿವಾರದಿಂದೊಡಗೂಡಿ, ತತಃ - ಆಸಭೆಯಿಂದ, ನಿಶ್ಚಕ್ರಾಮ - ಹೊರಟುಹೋದನು ॥೩೩॥ ಹೇಮಹೇಷ್ವಾಸ - ಎಲೈ ಶೂರನಾದ ವಿದುರನೇ ತೇ - ಆ, ವಿಶ್ವಸೃಜೋಪಿ - ಪ್ರಜೇಶರೂ, ಯತ್ರ - ಎಲ್ಲಿ, ಋಷಭಃ - ಶ್ರೇಷ್ಠನಾದ, ಹರಿಃ - ವಿಷ್ಣುವು, ಇಜ್ಯಃ - ಪೂಜಿಸಲ್ಪಡುವನೋ, ಅಂತಹ, ಸತ್ರಂ - ಸತ್ರಯಾಗವನ್ನು, ಸಹಸ್ರಪರಿವತ್ಸರಾನ್ - ಒಂದು ಸಾವಿರ ವರ್ಷಗಳು, ಸಂವಿಧಾಯ - ಮಾಡಿ ॥೩೪॥ ಯತ್ರ - ಎಲ್ಲಿ, ಗಂಗಾ - ಗಂಗೆಯು, ಯಮುನಯಾ - ಯಮುನೆಯೊಡನೆ, ಅನ್ವಿತಾ - ಸೇರುವುದೋ, ಅಲ್ಲಿ, ಅವಭೃಥಂ - ಅವಭೃಥಸ್ನಾನವನ್ನು, ಆಪ್ಲುತ್ಯ - ಮಾಡಿ, ತತಃ - ಬಳಿಕ ಸರ್ವೇ - ಎಲ್ಲರೂ, ವಿರಜೇನ - ಪರಿಶುದ್ಧವಾದ, ಆತ್ಮನಾ - ಮನಸ್ಸಿನಿಂದ, ಸ್ವಂಸ್ವಂ - ತಂತಮ್ಮ, ಧಾಮ - ಸ್ಥಲವನ್ನು, ಯಯುಃ - ಹೊಂದಿದರು ॥೩೫॥

—ದ್ವಿತೀಯಾಧ್ಯಾಯಂ ಸಮಾಪ್ತಂ—

ದುರನೆ ! ಇಂತು ಆ ಭೃಗುಮುನಿಯು ಶಾಪವನ್ನು ನುಡಿಯುತ್ತಿರಲು, ಸರ್ವಜ್ಞನಾದ ಪರಶಿವಮೂರ್ತಿಯು ಕೊಂಚ ಖಿನ್ನನಾದವನಂತೆ, ಅಲ್ಲಿಂದೆದ್ದು ತನ್ನ ಪರಿವಾರದಿಂದೊಡಗೂಡಿ ಹೊರಟುಹೋದನು ॥೩೩॥ ಅನಂತರದಲ್ಲಿ ಆ ಮರೀಚಿಮೊದಲಾದ ಪ್ರಜಾಪತಿಗಳು ಒಂದುಸಾವಿರ ವರ್ಷಗಳ ವರೆಗೂ ಸತ್ರಯಾಗವನ್ನು ನಡೆಯಿಸಿ, ಗಂಗಾ ಯಮುನೆಗಳ ಸಂಗಮದಲ್ಲಿ ಅವಭೃಥಸ್ನಾನವನ್ನಾಚರಿಸಿ, ಶುದ್ಧಮನಸ್ಕರಾಗಿ ತಂತಮ್ಮ ಆಶ್ರಮಗಳಿಗೆ ತೆರಳಿದರು. ಎಂದು ಮೈತ್ರೇಯನು ವಿದುರನಿಗೆ ಹೇಳುತ್ತಿದ್ದನೆಂಬಲ್ಲಿಗೆ ಶ್ರೀ ಭಾಗವತ ಚಕೋರಚಂದ್ರಿಕೆಯೋಳ್

—ಎರಡನೆಯ ಅಧ್ಯಾಯಂ ಮುಗಿದುದು.—

## ಓಂನಮಃ ಪರಮಾತ್ಮನೇ

### —ಅಥ ತೃತೀಯೋಧ್ಯಾಯಃ—

ಮೈತ್ರೇಯಃ ॥ ಸದಾ ವಿದ್ವಿಷತೋರೇವಂ ಕಾಲೋ ವೈ ಧ್ರಿಯಮಾಣ ಯೋಃ । ಜಾಮಾತುಃ ಶ್ವಶುರಸ್ಯಾಽಪಿ ಸುಮಹಾನತಿಚಕ್ರಮೇ ॥ ೧ ॥ ಯದಾಽಭಿಷಿಕ್ತೋ ದಕ್ಷಸ್ತು ಬ್ರಹ್ಮಣಾ ಪರಮೇಷ್ಠಿನಾ । ಪ್ರಜಾಪತೀನಾಂ ಸರ್ವೇಷಾಮಾಧಿಪತ್ಯೇ ಸ್ಮಯೋಽಭವತ್ ॥೨॥ ಇಷ್ಟ್ವಾ ಸ ವಾಜಪೇಯೇನ ಬ್ರಹ್ಮಿಷ್ಠಾನಭಿಭೂಯ ಚ । ಬೃಹಸ್ಪತಿಸವಂ ನಾಮ ಸ

---

### —ತೃತೀಯಾಧ್ಯಾಯಂ—

ಕಂದ॥ ಪಿತ ನೆಸಗುತ್ತಿರುವ ಬೃಹ । ಸ್ಪತಿಯಾಗವ ನೋಡಲೆಂದು ಸತಿ ಪೊರಮಡಲಾ ।
ಶಿತಿಕಂಠ ನಾಗ ತನ್ನಯ । ಸತಿಗೊರೆದಂ ಹಿತಮನೆಂದು ಪೇಳಲ್ಪಡುಗುಂ ॥

ಮೈತ್ರೇಯನು ಹೇಳುತ್ತಾನೆ—ಏವಂ - ಇಂತು, ಸದಾ - ಯಾವಾಗಲೂ, ವಿದ್ವಿಷತೋಃ - ದ್ವೇಷಿಸುತ್ತಾ, ಜಾಮಾತುಃ - ಅಳಿಯನು, ಶ್ವಶುರಸ್ಯಾಪಿ - ಮಾವನೂ, ಧ್ರಿಯಮಾಣಯೋಃ - ಇರಲು, ಸುಮಹಾನ್ - ಬಹಳವಾದ, ಕಾಲಃ - ಕಾಲವು, ಅತಿಚಕ್ರಮೇ - ಅತಿಕ್ರಮಿಸಿತು ॥೧॥ ಪರಮೇಷ್ಠಿನಾ - ಸರ್ವೋತ್ತಮವಾದ, ಬ್ರಹ್ಮಣಾ - ಬ್ರಹ್ಮನಿಂದ, ಸರ್ವೇಷಾಂ - ಎಲ್ಲಾ, ಪ್ರಜಾಪತೀನಾಂ - ಪ್ರಜೇಶ್ವರರ, ಆಧಿಪತ್ಯೇ - ದೊರೆತನದಲ್ಲಿ, ಯದಾ - ಯಾವಾಗ, ದಕ್ಷಃ - ದಕ್ಷನು, ಅಭಿಷಿಕ್ತಃ - ಅಭಿಷೇಕ ಮಾಡಲ್ಪಟ್ಟನೋ, ತದಾ - ಆಗ, ಸ್ಮಯಃ - ಅಹಂಕಾರವು, ಅಭವತ್ - ಉಂಟಾಯಿತು ॥೨॥ ಸಃ - ಅವನು, ಬ್ರಹ್ಮಿಷ್ಠಾನ್ - ಮಹರ್ಷಿಗಳನ್ನು, ಅಭಿಭೂಯ - ತಿರಸ್ಕರಿಸಿ, ವಾಜಪೇಯೇನ - ವಾಜಪೇಯ ಯಾಗದಿಂ

---

### —ಮೂರನೆಯ ಅಧ್ಯಾಯಂ—

### —ಸತೀದೇವಿಗೆ ಶಿವನು ಹಿತೋಪದೇಶಮಾಡುವುದು.—

ಮೈತ್ರೇಯಮುನಿಯು ಹೇಳುತ್ತಾನೆ:—ಅಯ್ಯಾ ವಿದುರನೆ ಕೇಳು. ಅನಂತರದಲ್ಲಿ, ಅಳಿಯ ಮಾವರಿಬ್ಬರೂ ಇಂತು ಬಹುಕಾಲದವರೆಗೂ, ಯಾವಾಗಲೂ ದ್ವೇಷವನ್ನು ಬೆಳೆಯಿಸುತ್ತಾ ಬಂದರು ॥೧॥ ಇಷ್ಟರಲ್ಲಿಯೇ ಸಕಲ ಲೋಕ ಗುರುವಾದ ಚತುರ್ಮುಖ ಬ್ರಹ್ಮನು, ತನ್ನ ಮಗನಾದ ದಕ್ಷನಿಗೆ ಎಲ್ಲಾ ಪ್ರಜೇಶ್ವರರ ಮೇಲೆಯೂ ದೊರೆತನವನ್ನಿತ್ತು ಪಟ್ಟವನ್ನು ಕಟ್ಟಿದನು. ಅದರಿಂದ ದಕ್ಷನಿಗೆ ಗರ್ವವು ತಲೆಗೇರಿತು ॥೨॥ ಬಳಿಕ ಆ ದಕ್ಷನು ಶಿವದ್ವೇಷದಿಂದಲೂ, ಒಡೆತನದ ಹೆಮ್ಮೆಯಿಂದಲೂ ಕೊಬ್ಬಿದವನಾಗಿ, ಮಹೇಶ್ವರನೇ ಮೊದಲಾದ ಮಹಾತ್ಮರಾರನ್ನೂ ಕರೆಯದೆಯೇ, ವಾಜಪೇಯ ಯಾಗವನ್ನು

ಮಾರೇಭೇ ಕ್ರತೂತ್ತಮಂ ॥೩॥ ತಸ್ಮಿನ್ ಬ್ರಹ್ಮರ್ಷಯಃ ಸರ್ವೇ ದೇವರ್ಷಿ
ಪಿತೃದೇವತಾಃ। ಆಸನ್ ಕೃತಸ್ವಸ್ತ್ಯಯನಾ ಸ್ತತ್ಪತ್ನ್ಯಶ್ಚ ಸಭರ್ತೃಕಾಃ ॥೪॥
ತದುಪಶ್ರುತ್ಯ ನಭಸಿ ಖೇಚರಾಣಾಂ ಪ್ರಜಲ್ಪತಾಂ। ಸತೀ ದಾಕ್ಷಾಯಣೀ
ದೇವೀ ಪಿತು ರ್ಯಜ್ಞಮಹೋತ್ಸವಂ ॥೫॥ ವ್ರಜಂತೀಃ ಸರ್ವತೋ ದಿ
ಗ್ಭ್ಯಃ ಉಪದೇವವರಸ್ತ್ರಿಯಃ। ವಿಮಾನಯಾನಾಃ ಸಪ್ರೇಷ್ಠಾ ನಿಷ್ಕಕಂಠೀ

ದ, ಇಷ್ಟ್ವಾ - ಯಾಗಮಾಡಿ, ಬೃಹಸ್ಪತಿಸವಂನಾಮ - ಬೃಹಸ್ಪತಿಸವವೆಂಬ, ಕ್ರತೂತ್ತಮಂ - ದೊಡ್ಡ ಯಾಗವನ್ನು, ಸಮಾರೇಭೇ - ಪ್ರಾರಂಭಿಸಿದನು ॥೩॥ ತಸ್ಮಿನ್ - ಆ ಯಾಗದಲ್ಲಿ, ಸರ್ವೇ - ಎಲ್ಲಾ, ಬ್ರಹ್ಮರ್ಷಯಃ - ಬ್ರಹರ್ಷಿಗಳು, ದೇವ...ತಾಃ, ದೇವರ್ಷಿಗಳು, ಪಿತೃದೇವತೆಗಳು, ಸಭರ್ತೃಕಾಃ - ಗಂಡಂದಿರಿಂದೊಡಗೂಡಿದ, ತತ್ಪತ್ನ್ಯಶ್ಚ - ಅವರ ಹೆಂಡಿರೂ ಸಹ, ಕೃತಸ್ವಸ್ತ್ಯಯನಾಃ - ಸಿಂಗರಿಸಿಕೊಂಡು, ಆಸನ್ - ಬಂದುನೆರೆದರು ॥೪॥ ದಾಕ್ಷಾಯಣೀ - ದಕ್ಷನಮಗಳಾದ, ಸತೀದೇವೀ - ಸತೀದೇವಿಯು, ತತ್-ಆಗ, ನಭಸಿ - ಆಕಾಶದಲ್ಲಿ, ಖೇಚರಾಣಾಂ - ಗಂಧರ್ವಾದಿಗಳು, ಪ್ರಜಲ್ಪತಾಂ - ಮಾತನಾಡಿಕೊಳ್ಳುತ್ತಿರಲು, ಪಿತುಃ - ತಂದೆಯ, ಯಜ್ಞಮಹೋತ್ಸವಂ - ಯಜ್ಞದುತ್ಸವವನ್ನು, ಉಪಶ್ರುತ್ಯ - ಕೇಳಿ ॥೫॥ ದಿಗ್ಭ್ಯಃ - ದಿಕ್ಕುಗಳಿಂದ, ಸರ್ವತಃ - ಎಲ್ಲಕಡೆಗಳಲ್ಲಿಯೂ, ವ್ರಜಂತೀಃ - ಹೊರಡುತ್ತಿರುವ, ವಿಮಾನಯಾನಾಃ - ವಿಮಾನಗಳಲ್ಲಿ ಕುಳಿತಿರುವ, ನಿಷ್ಕಕಂಠ್ಯಃ - ಸ್ವರ್ಣಹಾರಗಳುಳ್ಳ, ಸುವಾಸಸಃ-ಬಿಳ್ಳಿಯ ಉಡುಪುಗಳುಳ್ಳ, ಲೋಲಾಕ್ಷಿಃ - ಚಂಚಲನೇತ್ರಿಯರಾದ, ಮೃಷ್ಟಕುಂಡಲಾಃ - ತೊಳೆಯಲ್ಪಟ್ಟ ಕುಂಡಲಗಳುಳ್ಳ, ಉಪ...ಯಃ, ಉಪದೇವ - ಗಂಧರ್ವಾದಿಗಳ, ವರಸ್ತ್ರಿಯಃ - ಉತ್ತಮ ಸ್ತ್ರೀಯರನ್ನು ॥೬॥

ಮಾಡಿದ * ಬಳಿಕ ನಡೆಯಿಸಬೇಕಾದ ಬೃಹಸ್ಪತಿಸವವೆಂಬ ಮಹಾ ಕ್ರತುವನ್ನು ಮಾಡಲು ಪಕ್ರಮಿಸಿದನು ॥೩॥ ತರುವಾಯ ಆ ಯಜ್ಞಕ್ಕೆ ಬ್ರಹ್ಮರ್ಷಿಗಳು, ದೇವರ್ಷಿಗಳು, ಪಿತೃದೇವತೆಗಳು, ಇವರೆಲ್ಲರೂ ತಂತಮ್ಮ ಪತ್ನಿಯರಿಂದೊಡಗೂಡಿ, ಬಗೆಬಗೆಗಳಾದ ಸಿಂಗರಗಳಿಂದ ಕಂಗೊಳಿಸುತ್ತಾ, ದಿವ್ಯ ವಿಮಾನಗಳಲ್ಲಿ ಕುಳಿತು ಗುಂಪು ಗುಂಪಾಗಿ ಬಂದು ನೆರೆಯುತ್ತಿದ್ದರು ॥೪॥ ಇಂತು ಅಂಬರ ಚರರೆಲ್ಲರೂ ಗಗನಮಾರ್ಗದಲ್ಲಿ ಸಂತೋಷದಿಂದ ದಕ್ಷಯಜ್ಞವೃತ್ತಾಂತವನ್ನು ಮಾತನಾಡಿಕೊಳ್ಳುತ್ತಾ ಬರುತ್ತಿರಲು, ಆದ ದಕ್ಷ ಪುತ್ರಿಯಾದ ಸತೀ ದೇವಿಯು ತನ್ನ ತಂದೆಯು ಮಾಡುವ ಯಜ್ಞಮಹೋತ್ಸವದ ವೃತ್ತಾಂತವನ್ನು ಕೇಳುತ್ತಾ, ದಿವ್ಯವಸ್ತ್ರಾಲಂಕಾರಗಳಿಂದಲಂಕೃತೆಯರಾಗಿ, ನವರತ್ನ ಭೂಷಣಗಳಿಂದ ತಳತಳಿಸುತ್ತಾ, ತಂತಮ್ಮಗಂಡಂದಿರೊಡನೆ ಕಾಮಯಾನಗಳಾದ ವಿಮಾನಗಳಲ್ಲಿ ಕುಳಿತು, ಬೆಳಗುತ್ತಿರುವ ಕುಂಡಲಕಾಂತಿಗಳು ಕಪೋಲಮಂಡಲದಲ್ಲಿ ತಾಂಡವಿಸುವಂತೆ, ಕಟಾಕ್ಷಗಳನ್ನು ದಿಕ್ಕು ದಿಕ್ಕಿಗೂ ಬೀರುತ್ತಿರುವ, ಯಕ್ಷ, ಕಿನ್ನರ, ಗಂಧರ್ವಾದಿ ಪಕ್ಷ್ಮಲಾಕ್ಷಿಯರೆಲ್ಲರೂ ತನ್ನ ಕೈಲಾಸದ ಬಳಿಯಲ್ಲಿಯೇ ತೆರಳುತ್ತಿರುವುದನ್ನು ಕಂಡು, ಬಹುಳ

* ಶ್ರು. ವಾಜಪೇಯೇನೇಷ್ಟ್ವಾ ಬೃಹಸ್ಪತಿ ಸವೇನ ಯಜೇತ । ವಾಜಪೇಯ ಯಾಗವನ್ನು ಮಾಡಿದ ತರುವಾಯ ಬೃಹಸ್ಪತಿ ಸವವನ್ನು ಮಾಡಬೇಕು.

ಸ್ಸುವಾಸಸಃ ||೬|| ದೃಷ್ಟ್ವಾ ಸ್ವನಿಲಯಾಽಭ್ಯಾಶೇ ಲೋಲಾಕ್ಷೀ ರ್ಮೃ
ಷ್ಟಕುಂಡಲಾಃ ಪತಿಂ ಭೂತಪತಿಂ ದೇವ ಮೌತ್ಸುಕ್ಯಾ ದಭ್ಯಭಾಷತ ||೭||
ಸತೀ || ಪ್ರಜಾಪತೇ ಸ್ತೇ ಶ್ವಶುರಸ್ಯ ಸಾಂಪ್ರತಂ ನಿರ್ಯಾಪಿತೋ ಯಜ್ಞ
ಮಹೋತ್ಸವಃ ಕಿಲ । ವಯಂಚ ತತ್ರಾ ಽ ಭಿಸರಾಮ ವಾಮ ! ತೇ
ಯದ್ಯರ್ಥಿತಾ ಽ ಮೀ ವಿಬುಧಾ ವ್ರಜಂತಿಹಿ ||೮|| ತಸ್ಮಿನ್ ಭಗಿನ್ಯೋ
ಮಮ ಭರ್ತೃಭಿ ಸ್ಸ್ವಕೈ ರ್ಧ್ರುವಂ ಗಮಿಷ್ಯಂತಿ ಸುಹೃದ್ದಿದೃಕ್ಷವಃ। ಅಹಂ
ಚ ತಸ್ಮಿನ್ ಭವತಾ ಽ ಭಿಕಾಮಯೇ ಸಹೋಪನೀತಂ ಪರಿಬರ್ಹ ಮರ್ಹಿ
ತಂ || ೯ || ತತ್ರ ಸ್ವಸೄ ರ್ಮೇ ನನು ಭರ್ತೃಸಮ್ಮಿತಾ ಮಾತೃಷ್ವಸೄಃ

ಸ್ವ...ಶೇ, ಸ್ವ - ತನ್ನ, ನಿಲಯ - ಮನೆಯ, ಅಭ್ಯಾಶೇ - ಬಳಿಯಲ್ಲಿ, ದೃಷ್ಟ್ವಾ- ನೋಡಿ, ಔತ್ಸುಕ್ಯಾತ್- ಕುತೂಹಲದಿಂದ, ಭೂತಪತಿಂ - ಭೂತಗಳಿಗೊಡೆಯನೂ, ದೇವಂ- ಪ್ರಕಾಶವಾನನೂ ಆದ, ಪತಿಂ, ಶಿವನನ್ನು ಕುರಿತು, ಅಭ್ಯಭಾಷತ - ಹೇಳಿದಳು ||೭||

ಹೇವಾಮ - ಎಲೈ ಶಂಭುವೆ ! ಸಾಂಪ್ರತಂ - ಈಗ, ತೇ - ನಿನ್ನ, ಶ್ವಶುರಸ್ಯ - ಮಾವನಾದ, ಪ್ರಜಾಪತೇಃ - ದಕ್ಷನ, ಯಜ್ಞಮಹೋತ್ಸವಃ - ಯಜ್ಞವು, ನಿರ್ಯಾಪಿತಃಕಿಲ - ನಡೆಯುತ್ತಿರುವುದಷ್ಟೆ, ಅಮೀವಿಬುಧಾಃ - ಈ ದೇವತೆಗಳು, ವ್ರಜಂತಿಹಿ - ಹೋಗುವರಂತೆ, ತೇ - ನಿನಗೆ, ಅರ್ಥಿತಾಯದಿ - ಇಷ್ಟವಿದ್ದಲ್ಲಿ, ವಯಂಚ - ನಾವೂ, ತತ್ರ - ಅಲ್ಲಿಗೆ, ಅಭಿಸರಾಮ - ಹೋಗೋಣ ||೮|| ತಸ್ಮಿನ್ - ಆಯಜ್ಞದಲ್ಲಿ, ಸುಹೃದ್ದಿದೃಕ್ಷವಃ - ಬಂಧುಗಳನ್ನು ನೋಡಲಪೇಕ್ಷೆಯುಳ್ಳ, ಮಮ - ನನ್ನ, ಭಗಿನ್ಯಃ - ಅಕ್ಕತಂಗಿಯರು, ಸ್ವಕೈಃ - ತಮ್ಮ, ಭರ್ತೃಭಿಃ - ಗಂಡಂದಿರೊಡನೆ, ಆಗಮಿಷ್ಯಂತಿ - ಬರುವರು, ಧ್ರುವಂ - ನಿಶ್ಚಯವು, ತಸ್ಮಿನ್ - ಆಯಜ್ಞದಲ್ಲಿ, ಅಹಂಚ - ನಾನೂ, ಭವತಾಸಹ - ನಿನ್ನೊಡನೆ, ಉಪನೀತಂ - ತೌರುಮನೆಯಲ್ಲಿ ಕೊಡಲ್ಪಡುವ, ಪರಿಬರ್ಹಂ - ಅಲಂಕಾರವನ್ನು, ಅರ್ಹಿತುಂ - ಪಡೆಯುವುದಕ್ಕೆ, ಅಭಿಕಾಮಯೇ - ಅಪೇಕ್ಷಿಸುತ್ತೇನೆ ||೯|| ಹೇಮೃಡ - ಎಲೈ ಶಂಕರನೆ ! ಚಿರೋ...ನಾಃ, ಚಿರ - ಬಹುಕಾಲದಿಂದ, ಉತ್ಕಂಠ - ತವಕಗೊಂಡಿರುವ, ಮನಾಃ-ಮನಸ್ಸುಳ್ಳನಾನು, ತತ್ರ- ಅಲ್ಲಿ, ಮೇ - ನನ್ನ, ಭರ್ತೃಸಮ್ಮಿತಾಃ - ಗಂಡಂದಿರೊಡನೆ ಬಂದಿರುವ, ಸ್ವಸ್ರೂಃ - ಸಹೋದರಿಯರನ್ನೂ, ಮಾತೃಷ್ವಸ್ರೂಃ - ಚಿಕ್ಕ

ವಾಗಿ ತವಕಗೊಂಡು, ಸಕಲ ಭೂತಪತಿಯಾದ ತನ್ನ ಪತಿಯ ಬಳಿಗೈದಿ ವಿನಯದಿಂದಿಂತೆಂದಳು ||೫-೭|| ಎಲೈ ಮಹೇಶ್ವರನೆ ! ನಿನ್ನ ಮಾವನಾದ ದಕ್ಷಪ್ರಜಾಪತಿಯು ಈಗ ಯಜ್ಞ ಮಹೋತ್ಸವವನ್ನು ನಡೆಯಿಸುತ್ತಿರುವನಂತೆ. ಸಕಲ ದೇವತೆಗಳೂ ಅಲ್ಲಿಗೆ ತೆರಳುತ್ತಿರುವಂತೆ. ನೀನು ಸಮ್ಮತಿಸಿದಲ್ಲಿ ನಾವೂ ಅಲ್ಲಿಗೆ ಹೋಗಿಬರಬಹುದು ||೮|| ನನ್ನ ಅಕ್ಕತಂಗಿಯರೆಲ್ಲರೂ ಬಂಧುಗಳನ್ನು ನೋಡುವುದಕ್ಕಾಗಿ, ತಂತಮ್ಮ ಪತಿಗಳೊಡನೆ ಅಲ್ಲಿಗೆ ದಿಟವಾಗಿ ಬರುವರು. ನಾನೂ ನಿನ್ನೊಡನೆ ತೆರಳಿ ಯಾಗ ಮಹೋತ್ಸವದಿಂದಾನಂದಿಸಿ, ಉತ್ಸವಾಂಗವಾಗಿ ತಾಯಿ ತಂದೆಗಳಿಂದ ಕೊಡಲ್ಪಡುವ ಉಡುಗರೆಗಳನ್ನು ಪಡೆಯಬೇಕೆಂದಾಶಿಸುತ್ತಿರುವೆನು ||೯|| ಎಲೈ ಶಂಕರಮೂರ್ತಿಯೆ ! ಇಷ್ಟೇ ಅಲ್ಲದೆ, ತಾಯಿ ತಂದೆಗಳನ್ನಗಲಿ ಬಹಳ ಕಾಲವಾದುದರಿಂದ ತವಕಗೊಂಡಿರುವ ನಾನು, ಪತಿಗಳೊಂದೊಡಗೂಡಿ ಬಂದಿರುವ ನನ್ನ ಅಕ್ಕತಂಗಿಯರನ್ನೂ, ಚಿಕ್ಕತಾಯಿಯರನ್ನೂ, ನನ್ನ ಅಗಲಿಕೆಯಿಂದಲೂ ಪ್ರೀತಿ

ಕ್ಲಿನ್ನಧಿಯಂಚ ಮಾತರಂ । ದ್ರಕ್ಷ್ಯೇ ಚಿರೋತ್ಕಂಠಮನಾ ಮಹರ್ಷಿಭಿ
ರುನ್ನೀಯಮಾನಂಚ ಮೃಡಾಽಧ್ವರಧ್ವಜಂ ॥೧೦॥ ತ್ವಯ್ಯೇತ ದಾಶ್ಚ
ರ್ಯ ಮಜಾಽತ್ಮಮಾಯಯಾ ವಿನಿರ್ಮಿತಂ ಭಾತಿ ಗುಣತ್ರಯಾತ್ಮಕಂ ।
ತಥಾಽಪ್ಯಹಂ ಯೋಷಿದತತ್ವವಿಚ್ಚ ತೇ ದೀನಾ ದಿದೃಕ್ಷೇ ಭವ ಮೇ ಭವ
ಕ್ಷಿತಿಂ ॥೧೧॥ ಪಶ್ಯ ಪ್ರಯಾಂತೀ ರಭವಾಽನ್ಯಯೋಷಿತೋಽಪ್ಯಲಂಕೃತಾಃ

---

ತಾಯಿಯರನ್ನೂ, ಕ್ಲಿನ್ನಧಿಯಂ - ಖಿನ್ನಮನಸ್ಕಳಾದ, ಮಾತರಂಚ - ತಾಯಿಯನ್ನೂ, ಮಹರ್ಷಿಭಿಃ - ಋಷಿಗಳಿಂದ, ಉನ್ನೀಯಮಾನಂ - ಎತ್ತಿಕಟ್ಟಲ್ಪಟ್ಟ, ಅಧ್ವರಧ್ವಜಂ-ಶ್ರೇಷ್ಠವಾದ ಯಜ್ಞವನ್ನೂ, ಅಥವಾ ಯಜ್ಞದ ಯೂಪಸ್ತಂಭವನ್ನೂ, ದ್ರಕ್ಷ್ಯೇ - ನೋಡುವೆನು ॥೧೦॥ ಹೇ ಅಜ- ಎಲೈ ಜನ್ಮಾದಿಗಳಿಲ್ಲದವನೆ! ಆತ್ಮ...ತಂ, ಆತ್ಮ- ನಿನ್ನ, ಮಾಯಯಾ-ಮಾಯೆಯಿಂದ, ವಿನಿರ್ಮಿತಂ - ನಿರ್ಮಿಸಲ್ಪಟ್ಟ, ಗುಣತ್ರಯಾತ್ಮಕಂ - ಗುಣಸ್ವರೂಪವಾದ, ಆಶ್ಚರ್ಯಂ - ಆಶ್ಚರ್ಯಕರವಾದ, ಏತತ್ - ಈ ಜಗತ್ತು, ತ್ವಯಿ - ನಿನ್ನಲ್ಲಿ, ಭಾತಿ - ಹೊಳೆಯುತ್ತದೆ. ತಥಾಪಿ - ಆದರೂ, ಹೇಭವ - ಎಲೈ ಈಶ್ವರನೆ! ಯೋಷಿತ್ - ಹೆಂಗಸಾಗಿಯೂ, ತೇ - ನಿನ್ನ, ಅತತ್ವವಿಚ್ಚ - ತತ್ವವನ್ನು ತಿಳಿಯದವಳಾಗಿಯೂ, ದೀನಂ - ದೀನಳಾಗಿಯೂ ಇರುವ, ಅಹಂ - ನಾನು, ಮೇ - ನನ್ನ, ಭವಕ್ಷಿತಿಂ - ಜನ್ಮಭೂಮಿಯನ್ನು, ದಿದೃಕ್ಷೇ - ನೋಡಲೆಳಸುವೆನು ॥೧೧॥

---

ಯಿಂದಲೂ ಬಳಲುತ್ತಿರುವ ತಾಯಿಯನ್ನೂ, ಮಹರ್ಷಿಗಳಿಂದ ಸ್ಥಾಪಿಸಲ್ಪಟ್ಟ ಯೂಪಸ್ತಂಭದಿಂದ ರಾರಾಜಮಾನವಾಗಿ ದರ್ಶನೀಯವಾದ ಯಜ್ಞಮಹೋತ್ಸವವನ್ನೂ, ನೋಡಲೆಳಸುತ್ತಿರುವೆನು ॥೧೦॥ ಎಲೈ ಮಹೇಶಾನನೆ! "ನೀನಿಷ್ಟು ತವಕಗೊಳ್ಳುವುದಕ್ಕೆ ಅಲ್ಲಿ ಅಂತಹ ಆಶ್ಚರ್ಯವೇನು?" ಎಂದು ನೀನು ಕೇಳಬಹುದಾದರೂ, ಎಲೈ ಅನಾದಿ ನಿಧನನೆ! ನಿನ್ನ ಮಾಯಾಬಲದಿಂದ ಸತ್ವರಜಸ್ತಮೋಗುಣರೂಪವಾಗಿ ನಿರ್ಮಿಸಲ್ಪಟ್ಟ ಪರಮಾಶ್ಚರ್ಯಕರವಾದ ಈ ಜಗತ್ತುಗಳೆಲ್ಲವೂ ನಿನ್ನಲ್ಲಿಯೇ ನೆಲೆಗೊಂಡಿರುವುದರಿಂದ ನಿನಗಿದಾವುದೂ ಆಶ್ಚರ್ಯವಲ್ಲ. ನಾನು ಸ್ತ್ರೀಮಾತ್ರಳೂ, ನಿನ್ನ ಮಹಿಮೆಯನ್ನರಿಯದವಳೂ, ದೀನಳೂ ಆಗಿರುವುದರಿಂದ ನನ್ನ ತವರುಮನೆಗೆ ಹೋಗಿ ಆಶ್ಚರ್ಯಕರವಾದ ಉತ್ಸವವನ್ನ ನೋಡಿ

---

(1) ಪಿ. ಜನ್ಮಾದಿ ರಹಿತನಾದ ವಿಷ್ಣುವಿನ ಸಂಕಲ್ಪದಿಂದ ನಿರ್ಮಿತವಾಗಿ ಗುಣತ್ರಯಸ್ವರೂಪವಾಗಿರುವ ಈಜಗತ್ತೇ, ಜ್ಞಾನಿಶಿರೋಮಣಿಯಾದ ನಿನಗೆ ಆಶ್ಚರ್ಯಕರವಾಗಿ ತೋರುತ್ತಿರುವುದರಿಂದ ನಿನಗಾವುದು ತಾನೇ ಇದಕ್ಕಿಂತಲೂ ಆಶ್ಚರ್ಯವನ್ನುಂಟುಮಾಡೀತು ? ಇಲ್ಲಿ,ನಾರಾಯಣಾದ್ರುದ್ರೋ ಜಾಯತೇ ॥ ಇತ್ಯಾದಿ ವಾಕ್ಯಗಳಿಂದ ರುದ್ರನಿಗೆ ಕರ್ಮವಶಗಳಾದ ಜನ್ಮಾದಿಗಳುಂಟೆಂದು ಹೇಳಲ್ಪಟ್ಟಿರುವ ಕಾರಣ, ಜಗಜ್ಜನ್ಮಾದಿ ಕಾರಣತ್ವವು ರುದ್ರನಿಗೆ ಸಂಭವಿಸುವುದಿಲ್ಲವಾದುದರಿಂದ, ರುದ್ರನಿಂದ ಈಜಗತ್ತು ನಿರ್ಮಿಸಲ್ಪಟ್ಟಿತು, ಎಂದುಹೇಳುವ ಅರ್ಥವು ಸಂಗತವಲ್ಲ.

(2) ಪಿ. ಎಲೈ ರುದ್ರನೆ! ಸಕಲ ಜಗನ್ನಾಯಕನಾದ ಶ್ರೀ ನಾರಾಯಣಮೂರ್ತಿಯ ಸ್ವರೂಪವನ್ನು ನಿತ್ಯವೂ ಸಾಕ್ಷಾತ್ಕರಿಸಿಕೊಂಡಿರುವ ನಿನಗೆ ಪರಮಾತ್ಮನಾದ ವಿಷ್ಣುವಿನ ಇಚ್ಛೆಯಿಂದ ನಿರ್ಮಿತವಾದ ಈ ಜಗತ್ತು, ಕರತಲಾಮಲಕದಂತೆ ಏಕದೇಶವಾಗಿ ಕಾಣುತ್ತಿರುವುದರಿಂದ ನಿನಗಾಶ್ಚರ್ಯವಾವುದು ?

**ಕಾಂತಸಖಾ ವರೂಥಶಃ । ಯಾಸಾಂ ವ್ರಜದ್ಭಿ ಶ್ಶಿತಿಕಂಠ ! ಮಂಡಿ**
**ತಂ ನಭೋ ವಿಮಾನೈಃ ಕಲಹಂಸಪಾಂಡುಭಿಃ ॥೧೨॥ ಕಥಂ ಸುತಾಯಾಃ**
**ಪಿತೃಗೇಹಕೌತುಕಂ ನಿಶಮ್ಯ ದೇಹ ಸ್ಸುರವರ್ಯ! ನೇಂಗತೇ । ಅನಾಹುತಾ**
**ಅಪ್ಯಭಿಯಂತಿ ಸೌಹೃದಂ ಭರ್ತುರ್ಗುರೋ ದೇಹಕೃತಶ್ಚ ಕೇತನಂ ॥೧೩॥**
**ತಸ್ಮೇ ಪ್ರಸೀದೇದ ಮಮರ್ತ್ಯ ! ವಾಂಛಿತಂ ಕರ್ತುಂ ಭವಾನ್ ಕಾರುಣಿ**
**ಕೋ ಬತಾ ಽ ರ್ಹತಿ । ತ್ವಯಾ ತ್ಮನೋ ಽ ರ್ಧೇ ಽ ಹ ಮದಭ್ರಚಕ್ಷುಷಾ**

---

ಹೇ ಅಭವ - ಎಲೈ ಶಿವನೆ! ಶಿತಿಕಂಠ - ನೀಲಕಂಠನೆ! ಕಲಹಂಸಪಾಂಡುಭಿಃ - ಹಂಸೆಗಳಂತೆ ಬಿಳಿದಾದ, ವ್ರಜದ್ಭಿಃ- ಹೋಗುತ್ತಿರುವ, ಯಾಸಾಂ - ಯಾರ, ವಿಮಾನೈಃ - ವಿಮಾನಗಳಿಂದ, ನಭಃ - ಆಕಾಶವು, ಮಂಡಿತಂ - ಅಲಂಕರಿಸಲ್ಪಟ್ಟಿರುವುದೋ, ಅಂತಹ, ಅಲಂಕೃತಾಃ - ಸಿಂಗರಿಸಿಕೊಂಡು, ಕಾಂತಸಖಾಃ - ಗಂಡಂದಿರಿಂದೊಡಗೂಡಿ, ವರೂಥಶಃ - ಗುಂಪಾಗಿ, ಪ್ರಯಾಂತೀಃ - ಹೋಗುತ್ತಿರುವ, ಅನ್ಯಯೋಷಿತೋಪಿ - ಇತರ ಸ್ತ್ರೀಯರನ್ನೂ, ಪಶ್ಯ - ನೋಡು ॥೧೨॥ ಹೇ ಸುರವರ್ಯ - ಎಲೈ ಮಹಾದೇವನೆ! ಪಿತೃ...ಕಂ, ಪಿತೃ - ತಂದೆಯ, ಗೇಹ - ಮನೆಯ, ಕೌತುಕಂ - ಉತ್ಸವವನ್ನು, ನಿಶಮ್ಯ - ಕೇಳಿ, ಕನ್ಯಾಯಾಃ - ಮಗಳ, ದೇಹಃ - ಶರೀರವು, ಕಥಂ - ಹೇಗೆ, ನೇಂಗತೇ - ನೋಡುವುದಕ್ಕೆ ತೆರಳದಿರುವುದು ? ಸಂತಃ - ಸತ್ಪುರುಷರು, ಅನಾಹುತಾಅಪಿ - ಕರೆಯಲ್ಪಡದಿದ್ದರೂ, ಸೌಹೃದಂ - ಸ್ನೇಹಿತರ, ಭರ್ತುಃ - ಒಡೆಯನ, ಗುರೋಃ - ಗುರುವಿನ, ದೇಹಕೃತಶ್ಚ - ತಂದೆಯ, ಕೇತನಂ - ಮನೆಗೆ, ಅಭಿಯಂತಿ - ಹೋಗುತ್ತಾರೆ ॥೧೩॥ ಹೇ ಅಮರ್ತ್ಯ - ಎಲೈ ನಾಶರಹಿತನೆ! ತತ್ - ಆದುದರಿಂದ, ಮೇ - ನನ್ನಲ್ಲಿ, ಪ್ರಸೀದ - ಪ್ರಸನ್ನನಾಗು, ಕಾರುಣಿಕಃ - ದಯಾವಂತನಾದ, ಭವಾನ್ - ನೀನು, ಮೇ - ನನ್ನ, ವಾಂಛಿತಂ - ಕೋರಿಕೆಯನ್ನು, ಕರ್ತುಂ - ನೆರವೇರಿಸುವುದಕ್ಕೆ, ಅರ್ಹತಿಬತ - ಸಮರ್ಥನಪ್ಪೆ, ಅದಭ್ರಚಕ್ಷುಷಾ - ಪೂರ್ಣಜ್ಞಾನವುಳ್ಳ, ತ್ವಯಾ - ನಿನ್ನಿಂದ, ಅಹಂ - ನಾನು, ಆತ್ಮನಃ - ಶರೀರದ, ಅರ್ಧೇ - ಅರ್ಧದಲ್ಲಿ, ನಿರೂಪಿತಾ - ಧರಿಸಲ್ಪಟ್ಟೆನು, ಯಾಚಿತಃ - ಪ್ರಾರ್ಥಿಸಲ್ಪಟ್ಟ ನೀನು, ಮಾ - ನನ್ನ

---

ಬರಬೇಕೆಂದಿರುವೆನು ॥೧೧॥ ಎಲೈ ನೀಲಕಂಠನೆ ! ಹೃದಯಂಗಮವಾದ ಶೃಂಗಾರದಿಂದ ಕಂಗೊಳಿಸುತ್ತಾ, ಉಲ್ಲಾಸದಿಂದ ವಲ್ಲಭರೊಡನೆ ಮೆಲ್ಲಮೆಲ್ಲನೆ ಅಲ್ಲೆ ಮಾತುಗಳಾಡುತ್ತಾ, ಕಳಹಂಸಗಳಂತೆ ಬಿಳಿದಾದ ದಿವ್ಯವಿಮಾನಗಳಲ್ಲಿ ಕುಳಿತು, ಮುಂಗಾರು ಮಿಂಚು ಬಳ್ಳಿಗಳಂತೆ ಗಗನಾಂಚಲವನ್ನು ಬೆಳಗಿಸುತ್ತಾ, ತೆರಪಿಲ್ಲದೆ ಸಡಗರದಿಂದ ಪ್ರೊಕಮಡುತ್ತಿರುವ ಬೆಡಗು ಗಾತಿಯರಾದ ಈ ನೆರೆಹೊರೆಯ ಮಡದಿಯರನ್ನು ಕಂಡೆಯಾ ? ॥ ೧೨ ॥ ಎಲೈ ಮಹಾದೇವನೆ ! ತವರು ಮನೆಯಲ್ಲಿ ಮಹೋತ್ಸವವು ಬೆಳೆಯುವುದೆಂದು ಕೇಳಿದಾಗ ಮಗಳಾದವಳೆಂತು ತಾನೇ ತೆರಳದೇ ಇರಬಹುದು ? ಮಿತ್ರರಮನೆಗೂ, ಗುರುವಿನ ಮನೆಗೂ, ಗಂಡನ ಮನೆಗೂ, ತವರುಮನೆಗೂ ಕರೆಯದಿದ್ದರೂ ಹೋಗಿ ಬರಬೇಕೆಂದು ಹಿರಿಯರು ಹೇಳುವರಲ್ಲವೆ ? ॥೧೩॥

ಎಲೈ ಆದ್ಯಂತ ರಹಿತನಾದ ಪರಮೇಶ್ವರನೆ ! ನನ್ನಕೋರಿಕೆಯನ್ನು ನೆರವೇರಿಸುವುದಕ್ಕೆ ಮಹಾ ದಯಾಳುವಾದ ನೀನಲ್ಲದೆ ಮತ್ತಾವನು ಸಮರ್ಥನು ? ನೀನು ನಿರತಿಶಯಜ್ಞಾನ ಸಂಪನ್ನನಾದರೂ, ನನ್ನನ್ನು ಅರ್ಧಶರೀರವಾಗಿ ಧರಿಸಿರುವೆ ಯಾದುದ

ನಿರೂಪಿತಾ ಮಾ ಽ ನುಗೃಹಾಣ ಯಾಚಿತಃ ॥ ೧೪ ॥ ಮೈತ್ರೇಯಃ ॥
ಏವಂ ಗಿರಿತ್ರಃ ಪ್ರಿಯಯಾ ಽ ಭಿಭಾಷಿತಃ ಪ್ರತ್ಯಭ್ಯಧತ್ತ ಪ್ರಹಸನ್ ಸು
ಹೃತ್ಪ್ರಿಯಃ । ಸಂಸ್ಮಾರಿತೋ ಮರ್ಮಭಿದಃ ಕುವಾಗಿಷೂನ್ ಯಾ ನಾ
ಹ ಕೋ ವಿಶ್ವಸೃಜಾಂ ಸಮಕ್ಷತಃ ॥೧೫॥ ಶ್ರೀಭಗವಾನ್ ॥ ತ್ವಯೋದಿ
ತಂ ಶೋಭನಮೇವ ಶೋಭತೇ ಅನಾಹುತಾ ಅಪ್ಯಭಿಯಂತಿ ಬಂಧುಷು।
ತೇ ಯದ್ಯನುತ್ಪಾದಿತದೋಷದೃಷ್ಟಯೋ ಬಲೀಯಸಾ ಽ ನಾತ್ಮ್ಯಮ
ದೇನ ಮನ್ಯುನಾ ॥೧೬॥ ವಿದ್ಯಾ ತಪೋವಿತ್ತವಪುರ್ವಯಃ ಕುಲೈಃ ಸತಾಂ
ಗುಣೈಃ ಷಡ್ಭಿರಸತ್ತಮೇತರೈಃ। ಸ್ಮೃತೌ ಹತಾಯಾಂ ಭೃತಮಾನ

ನ್ನು, ಅನುಗೃಹಾಣ - ಅನುಗ್ರಹಿಸು ॥೧೪॥ ಏವಂ - ಇಂತು, ಪ್ರಿಯಯಾ - ಸತಿಯಿಂದ, ಅಭಿಭಾಷಿತಃ-ಪ್ರಾರ್ಥಿಸಲ್ಪಟ್ಟ, ಗಿರಿತ್ರಃ - ಶಿವನು, ಪ್ರಿಯಃ - ಪ್ರೀತಿಪಾತ್ರನಾದ, ಸುಹೃದಪಿ - ಮಿತ್ರನಾದರೂ, ಕಃ-ದಕ್ಷನು, ವಿಶ್ವಸೃಜಾಂ - ನವಬ್ರಹ್ಮರ, ಸಮಕ್ಷತಃ - ಎದುರಾಗಿ, ಯಾನ್ - ಯಾವಮಾತುಗಳನ್ನು, ಆಹ-ಹೇಳಿದನೋ, ಮರ್ಮಚ್ಛಿದಃ - ಮರ್ಮಭೇದಕಗಳಾದ, ತಾನ್ - ಆ, ಕುವಾಗಿಷೂನ್, ಕುವಾಕ್-ಕೆಟ್ಟಮಾತುಗಳೆಂಬ, ಇಷೂನ್ - ಬಾಣಗಳನ್ನು, ಸಂಸ್ಮಾರಿತಃ - ನೆನಸಿಕೊಂಡು, ಪ್ರಹಸನ್ - ಹೊರಗೆ ನಗುತ್ತಾ, ಪ್ರತ್ಯಭ್ಯದತ್ತ - ಉತ್ತರಹೇಳಿದನು ॥೧೫॥

ತೇ - ನಿನ್ನಬಂಧುಗಳು, ಬಲೀಯಸಾ - ಬಲವತ್ತರವಾದ, ಅನಾತ್ಮ್ಯಮದೇನ - ಅಹಂಕಾರ ಮದ ದಿಂದಲೂ, ಮನ್ಯುನಾ - ಕ್ರೋಧದಿಂದಲೂ, ಅನು...ಯದಿ, ಅನುತ್ಪಾದಿತ - ಆರೋಪಿಸಲ್ಪಟ್ಟ, ದೋಷಗಳಲ್ಲಿ, ದೃಷ್ಟಯೋಯದಿ - ದೃಷ್ಟಿಯಿಲ್ಲದವರಾದರೆ, ಅಂತಹ, ಬಂಧುಷು - ಬಂಧುಗಳಲ್ಲಿ, ಅನಾಹುತಾ ಅಪಿ - ಕರೆಯಲ್ಪಡದಿದ್ದರೂ, ಅಭಿಯಂತಿ - ಹೋಗುತ್ತಾರೆ, ಎಂದು, ತ್ವಯಾ - ನಿನ್ನಿಂದ, ಉದಿತಂ - ಹೇಳಲ್ಪಟ್ಟ ಮಾತು, ಶೋಭನಮೇವ - ಚೆನ್ನಾಗಿಯೇ, ಶೋಭತೇ - ತೋರುವುದು ॥೧೬॥ ವಿದ್ಯಾ....ಲೈಃ, ವಿದ್ಯೆ, ತಪಸ್ಸು, ಧನ, ರೂಪ, ಪ್ರಾಯ, ಕುಲ, ಇವುಗಳರೂಪಗಳಾದ, ಅಸತ್ತಮೇತರೈಃ - ದುಷ್ಟರಲ್ಲಿ ದೋಷಗಳಾಗಿ ಪರಿಣಮಿಸುವ, ಷಡ್ಭಿಃ - ಆರಾದ, ಸತಾಂ - ಸಾಧುಗಳ, ಗುಣೈಃ - ಗುಣಗಳಿಂದ, ಸ್ಮೃ

ರಿಂದ ನನ್ನ ಬಿನ್ನಪವನ್ನು ಲಾಲಿಸಿ ಅನುಗ್ರಹಿಸು ॥ ೧೪ ॥ ಅಯ್ಯಾ ವಿದುರನೆ ! ಇಂತು ಪ್ರಾಣಪ್ರಿಯಳಾದ ಸತೀದೇವಿಯು ಬೇಡಿಕೊಳ್ಳಲು, ಅದನ್ನು ಕೇಳಿದೊಡನೆ ಪರಶಿವ ಮೂರ್ತಿಯು ಆಕೆಗೆ ಅತ್ಯಂತಪ್ರಿಯನಾದರೂ ತನ್ನ ಮಾವನಾದ ದಕ್ಷನು ಸಕಲ ಪ್ರಜೇಶ್ವರರ ಎದುರಾಗಿ ನುಡಿದ ದುರ್ಭಾಷೆಗಳೆಂಬ ವಜ್ರಪ್ರಹಾರಗಳನ್ನು ನೆನದು, ಕೋಪಾಗ್ನಿಯು ಭುಗಿಲ್ಲನೆ ಪ್ರಜ್ವಲಿಸಿದರೂ, ಸೈರಿಸಿಕೊಂಡು ನಸುನಗುತ್ತಾ ನುಡಿದನೆಂತೆಂದರೆ ॥೧೫॥ ಎಲ್ಲೆ ವಿಶಾಲಮತಿಯಾದ ಸತಿಯೆ ! ಯಾವ ಬಂಧುಗಳು ದುರಹಂಕಾರದಿಂದ ಇಲ್ಲದ ದೋಷಗಳನ್ನು ಹುಟ್ಟುಗಟ್ಟಿಕೊಂಡು ದೂರುವುದಿಲ್ಲವೋ, ಅಂತವರಮನೆಗೆ ನೀನುಹೇಳಿದಂತೆ ಕರೆಯದಿದ್ದರೂ ತೆರಳಬೇಕೆಂಬುದು ಉಚಿತವೇ ಸರಿ ॥ ೧೬ ॥ ವಿದ್ಯೆ, ತಪಸ್ಸು, ಧನ, ರೂಪು, ಪ್ರಾಯ, ಕುಲ ಈ ಆರೂ ಮಹಾತ್ಮರಲ್ಲಿ ಗುಣಗಳೆನಿಸಿದರೂ, ಈ ಗುಣಗಳೇ ದುರಾತ್ಮರಲ್ಲಿ ದೋಷಗಳಾಗಿ ಪರಿಣಮಿಸುವುವು. ಆದುದರಿಂದ ದುಷ್ಟರಾದವರೇ ವಿದ್ಯಾದಿ ಮದಗಳಿಂದ ಮೈಮರೆತು ಗರ್ವಪರ್ವತವನ್ನೇರಿ ಕಣ್ಣುಕಾಣದೆ ಹಿರಿಯರನ್ನೆಷ್ಟು ಮಾತ್ರವೂ ಗೌರವಿ

ದುರ್ದರ್ಶ ಸ್ತಬ್ಧಾ ನಪಶ್ಯಂತಿ ಹಿಧಾಮ ಭೂಯಸಾಂ ||೧೭|| ನೈತಾದೃಶಾನಾಂ ಸ್ವಜನವ್ಯಪೇಕ್ಷಯಾ ಗೃಹಾನ್ ಪ್ರತೀಯಾದನವಸ್ಥಿತಾತ್ಮನಾಂ | ಯೇಽಭ್ಯಾಗತಾನ್ ವಕ್ರಧಿಯಾಽಭಿಚಕ್ಷತೇ ಆರೋಪಿತಭ್ರೂಭಿರಮರ್ಷಣಾಕ್ಷಿಭಿಃ ||೧೮|| ತಥಾಽರಿಭಿರ್ನವ್ಯಥತೇ ಶಿಲೀಮುಖೈಃ ಶೇತೇಽರ್ದಿತಾಂಗೋ ಹೃದಯೇನ ದೂಯತಾ | ಸ್ವಾನಾಂ ಯಥಾ ವಕ್ರಧಿಯಾಂ ದುರುಕ್ತಿಭಿರ್ದಿವಾಽನಿಶಂ ತಪ್ಯತಿ ಮರ್ಮತಾಡಿತಃ ||೧೯|| ವ್ಯಕ್ತಂ ತ್ವಮುತ್ಕೃಷ್ಟಗತೇಃ ಪ್ರಜಾಪತೇಃ ಪ್ರಿಯಾತ್ಮಜಾನಾಮಸಿ ಸುಭ್ರು! ಸಂಮತಾ | ತಥಾಪಿ ಮಾನಂ ನಪಿತುಃ ಪ್ರಪತ್ಸ್ಯಸೇ ಮದಾಶ್ರಯಾತ್ಕಃ ಪರಿತಪ್ಯತೇ ಯತಃ || ೨೦ || ಪಾಪಚ್ಯಮಾನೇನ ಹೃದಾತುರೇಂದ್ರಿಯಃ

ತಾ - ವಿವೇಕವು, ಹತಾಯಾಂ - ನಷ್ಟವಾಗಲು, ಧೃತ...ಶಃ - ಅಧಿಕಗರ್ವದಿಂದ ಕಣ್ಣುಕಾಣದೆ, ಸ್ತಬ್ಧಾಃ - ಶಠರಾದವರು. ಭೂಯಸಾಂ - ಮಹಾತ್ಮರ, ಧಾಮ - ತೇಜಸ್ಸನ್ನು, ನಪಶ್ಯಂತಿ - ನೋಡುವುದಿಲ್ಲ ||೧೭|| ಯೇ - ಯಾರು, ವಕ್ರಧಿಯಾ - ವಕ್ರಬುದ್ಧಿಯಿಂದ, ಆರೋಪಿತಭ್ರೂಭಿಃ - ಹುಬ್ಬನ್ನು ಹಾರಿಸುವ, ಅಮರ್ಷಣಾಕ್ಷಿಭಿಃ - ಕೋಪಗೊಂಡ ಕಣ್ಣುಗಳಿಂದ, ಅಭ್ಯಾಗತಾನ್ - ಬಂದವರನ್ನು, ಅಭಿಚಕ್ಷತೇ - ನೋಡುವರೋ, ಅನವಸ್ಥಿತಾತ್ಮನಾಂ - ಚಂಚಲಬುದ್ಧಿಯುಳ್ಳ. ಏತಾದೃಶಾನಾಂ - ಇಂತವರ, ಗೃಹಾನ್ - ಮನೆಯನ್ನು, ಬಂಧು...ಯಾ, ಬಂಧುಗಳೆಂದು, ನಪ್ರತೀಯಾತ್ - ಹೊಂದಬಾರದು ||೧೮|| ವಕ್ರಧಿಯಾಂ - ವಕ್ರಬುದ್ಧಿಯುಳ್ಳ, ಸ್ವಾನಾಂ - ತನ್ನವರ, ದುರುಕ್ತಿಭಿಃ - ಕೆಟ್ಟನುಡಿಗಳಿಂದ, ಮರ್ಮತಾಡಿತಃ - ಮರ್ಮಸ್ಥಾನದಲ್ಲಿ ಹೊಡೆಯಲ್ಪಟ್ಟವನಾಗಿ, ಯಥಾ - ಹೇಗೆ, ದಿವಾನಿಶಂ - ಹಗಲಿರುಳು, ತಪ್ಯತಿ - ಸಂಕಟಪಡುತ್ತಾನೋ, ತಥಾ - ಹಾಗೆ, ಅರಿಭಿಃ - ಶತ್ರುಗಳಿಂದ, ಶಿಲೀಮುಖೈಃ - ಬಾಣಗಳಿಂದ, ಅರ್ದಿತಾಂಗಃ - ಕತ್ತರಿಸಲ್ಪಟ್ಟ ಅಂಗವುಳ್ಳವನಾಗಿ, ದೂಯತಾ - ವ್ಯಥೆಗೊಳ್ಳುವ, ಹೃದಯೇನ - ಮನಸ್ಸಿನಿಂದ, ನಶೇತೇ - ಮಲಗುವುದಿಲ್ಲ ||೧೯|| ಹೇಸುಭ್ರು - ಎಲೌಪ್ರಿಯೆ, ಉತ್ಕೃಷ್ಟಗತೇಃ - ಶ್ರೇಷ್ಠವಾದ ಸ್ಥಿತಿಯುಳ್ಳ, ಪ್ರಜಾಪತೇಃ - ದಕ್ಷನಿಗೆ, ಆತ್ಮಜಾನಾಂ - ಮಕ್ಕಳಲ್ಲಿ, ತ್ವಂ - ನೀನು, ಪ್ರಿಯಾ - ಪ್ರೀತಿಪಾತ್ರಳೆಂದು, ಸಮ್ಮತಾಸಿ - ತಿಳಿದವಳಾಗಿರುವೆ. ವ್ಯಕ್ತಂ - ದಿಟವು, ತಥಾಪಿ - ಆದರೂ, ಯತಃ - ಯಾವಕಾರಣದಿಂದ, ಮದಾಶ್ರಯಾತ್ - ನನ್ನ ಸಂಬಂಧದಿಂದ, ಕಃ - ದಕ್ಷನು, ಪರಿತಪ್ಯತೇ - ದುಃಖಿಸುವನೋ, ಅದರಿಂದ, ಪಿತುಃ - ತಂದೆಯಿಂದ, ಮಾನಂ - ಮರ್ಯಾದೆಯನ್ನು, ನಪ್ರಪತ್ಸ್ಯಸೇ - ಹೊಂದುವುದಿಲ್ಲ ||೨೦||

ಸುವುದಿಲ್ಲ ||೧೭|| ಯಾವದುರಾತ್ಮರು, ನಂಟರಿಷ್ಟರು ಮನೆಗೆ ಬಂದಾಗ ಹುಬ್ಬನ್ನು ಹಾರಿಸುತ್ತಾ, ವಕ್ರಬುದ್ಧಿಯಿಂದ ದುರುಗುಟ್ಟಿಕೊಂಡು ನೋಡುವರೋ, ಚಪಲಚಿತ್ತರಾದ ಇಂತವರನ್ನು ಬಂಧುಗಳೆಂದೆಣಿಸಿ ಅವರ ಮನೆಗೆಂದಿಗೂ ಹೋಗಬಾರದು ||೧೮|| ಪುರುಷನು ತನ್ನವರಾಡಿದ ಮರ್ಮಭೇದಕಗಳಾದ ದುರುಕ್ತಿಗಳಿಂದೆಂತು ಹಗಲಿರುಳೆಲ್ಲವೂ ಸಂಕಟಪಡುವನೋ, ಶತ್ರುಗಳ ಬಾಣಗಳಿಂದ ಮೈಯೆಲ್ಲವೂ ತಾರುಮಾರಾಗಿ ಸೀಳಿದರೂ, ಅಂತು ವ್ಯಥೆಪಡುವುದಿಲ್ಲ ||೧೯|| ಉತ್ತಮಸ್ಥಿತಿಯಲ್ಲಿರುವ ಆ ದಕ್ಷನಿಗೆ ಹೆಣ್ಣುಮಕ್ಕಳೊಳಗೆ ನೀನು ಅತ್ಯಂತ ಪ್ರೇಮಪಾತ್ರಳೆಂಬುದು ದಿಟವೇ ಸರಿ. ಆದರೂ ಅವನು ನನ್ನನ್ನು ದ್ವೇಷಿಸುತ್ತಿರುವಕಾರಣ ನನ್ನ ಸಂಬಂಧದಿಂದ ನಿನ್ನನ್ನೂ ಆದರಿಸುವುದಿಲ್ಲ || ೨೦ || ಈ ದಕ್ಷನು

ಸಮೃದ್ಧಿಭಿಃ ಪೂರುಷಬುದ್ಧಿಸಾಕ್ಷಿಣಾಂ । ಅಕಲ್ಪ ಏಷಾ ಮಧಿರೋಢು ಮಂಜಸಾ ಪದಂ ಪರಂ ದ್ವೇಷ್ಟಿ ಯಥಾಽಸುರಾ ಹರಿಂ ॥೨೧॥ ಪ್ರತ್ಯು ದ್ಗಮ ಪ್ರಶ್ರಯಣಾಭಿವಾದನಂ ವಿಧೀಯತೇ ಸಾಧು ಮಿಥ ಸ್ಸುಮಧ್ಯಮೇ! । ಪ್ರಾಜ್ಞೈಃ ಪರಸ್ಮೈ ಪುರುಷಾಯ ಚೇತಸಾ ಗುಹಾಶಯಾಯೈವ ನ ದೇಹಮಾನಿನೇ ॥೨೨॥ ಸತ್ವಂ ವಿಶುದ್ಧಂ ವಸುದೇವ ಶಬ್ದಿತಂ ಯದೀಯ ತೇ ತತ್ರ ಪುಮಾ ನಪಾವೃತಃ । ಸತ್ವೇ ಚ ತಸ್ಮಿನ್ ಭಗವಾನ್ ವಾಸುದೇ

ಪಾಪಚ್ಯಮಾನೇನ - ಸುಡಲ್ಪಡುತ್ತಿರುವ, ಹೃದಾ - ಮನಸ್ಸಿನಿಂದ, ಆತುರೇಂದ್ರಿಯಃ-ವ್ಯಥೆಗೊಂಡ ಇಂದ್ರಿಯಗಳುಳ್ಳವನಾಗಿ, ಪೂರು...ಣಾಂ, ಪೂರುಷ - ಜೀವನ ಬುದ್ಧಿ - ಮನಸ್ಸನ್ನು, ಸಾಕ್ಷಿಣಾಂ - ತಿಳಿದಿರುವ, ಏಷಾಂ - ಈ ಮಹಾತ್ಮರ, ಸಮೃದ್ಧಿಭಿಃ - ಪುಣ್ಯಕೀರ್ತಿ ಮೊದಲಾದವುಗಳಿಂದ, ಪರಂ - ಶ್ರೇಷ್ಠವಾದ, ಪದಂ - ಸ್ಥಾನವನ್ನು, ಅಧಿರೋಢುಂ - ಹೊಂದುವುದಕ್ಕೆ, ಅಕಲ್ಪೋಪಿ - ಅಸಮರ್ಥನಾದರೂ, ಅಸುರಾಃ - ರಾಕ್ಷಸರು, ಹರಿಂಯಥಾ - ವಿಷ್ಣುವನ್ನೋ ಹಾಗೆಯಲ್ಲಿ, ಪರಂದ್ವೇಷ್ಟಿ - ದ್ವೇಷವನ್ನು ಮಾತ್ರ ಬೆಳೆಯಿಸುತ್ತಿರುವನು ॥೨೧॥ ಹೇಸುಮಧ್ಯಮೇ - ಎಲೌ ಮಡದಿಯೆ ! ಮಿಥಃ - ಜನರಿಂದ ಪರಸ್ಪರವಾಗಿ ಮಾಡಲ್ಪಡುವ, ಪ್ರತ್ಯು...ನಂ, ಎದುರುಗೊಳ್ಳುವುದು, ವಿಧೇಯರಾಗುವುದು, ನಮಿಸುವುದು, ಇವು, ಪ್ರಾಜ್ಞೈಃ - ಮಹಾತ್ಮರಿಂದ, ಚೇತಸಾ - ಮನಸ್ಸಿನಿಂದ, ಗುಹಾಶಯಾಯ- ಅಂತರ್ಯಾಮಿಯಾದ, ಪರಸ್ಮೈ ಪುರುಷಾಯೈವ - ಪರಮಾತ್ಮನಿಗೇ, ಸಾಧು - ಚೆನ್ನಾಗಿ, ವಿಧೀಯತೇ - ಮಾಡುವುವು, ದೇಹಮಾನಿನೇ - ದೇಹಾಭಿಮಾನವುಳ್ಳವರಿಗೆ, ನ- ಮಾಡಲ್ಪಡುವುದಲ್ಲ ॥೨೨॥ ಯತ್ -ಯಾವಕಾರಣ, ತತ್ರ-ಅಲ್ಲಿ, ಪುಮಾನ್- ಭಗವಂತನು, ಅಪಾವೃತಃ - ಆವರಣರಹಿತನಾಗಿ, ಈಯತೇ - ತೋರುವನೋ, ತತ್ - ಆ ಕಾರಣದಿಂದ, ವಿಶುದ್ಧಂ - ರಜಸ್ತಮಸ್ಸುಗಳಿಂದ ತಿರಸ್ಕೃತವಾಗದ, ಸತ್ವಂ - ಸತ್ವಪ್ರಧಾನವಾದ ಮನಸ್ಸು, ವಸುದೇವ ಶಬ್ದಿತಂ - ವಸುದೇವನೆಂದು, ಕರೆಯಲ್ಪಡುವುದು, ತಸ್ಮಿನ್ಸತ್ವೇ - ಸತ್ವಮಯವಾದ ಆ ಮನಸ್ಸಿನಲ್ಲಿ

ಅಸೂಯಾಳುವಾದುದರಿಂದ, ಅಹಂಕಾರಾದಿಗಳನ್ನುಳಿದು ಪ್ರಕೃತಿ ಪುರುಷಾದಿತತ್ವಗಳ ಯಾಥಾತ್ಮ್ಯವನ್ನು ಬಲ್ಲ ಮಹಾತ್ಮರ ಪದವಿಯನ್ನೇರುವುದಕ್ಕೆ ಅಸಮರ್ಥನಾದರೂ, ನಿರಂತರವೂ ಸಂಕಟಪಡುತ್ತಾ ದೈತ್ಯರು ದೈತ್ಯಾರಿಯಾದ ವಿಷ್ಣುವನ್ನು ದ್ವೇಷಿಸುವಂತೆ, ಸಾಧುಗಳನ್ನು ದ್ವೇಷಿಸುತ್ತಲೇ ಇರುವನು ॥೨೧॥ ಎಲೌ ಮಡದಿಯೆ ! "ನೀನು ಪ್ರತ್ಯುತ್ಥಾನಾಭಿವಂದನಾದಿಗಳನ್ನು ಮಾಡದುದರಿಂದ ದಕ್ಷನು ದ್ವೇಷಿಸುವನು" ಎಂಬೆಯೇನೋ ? ಮರ್ಯಾದಾವಿಷಯದಲ್ಲಿ ಸಾಧುಗಳಿಗೂ ಸಾಧಾರಣಜನರಿಗೂ ವ್ಯತ್ಯಾಸವುಂಟು. ಸಾಧಾರಣ ಜನರು ಅಭ್ಯಾಗತರು ಬಂದಾಗ ಪರಸ್ಪರವಾಗಿ ವಾಕ್ಕಾಯಗಳಿಂದ ಪ್ರತ್ಯುತ್ಥಾನಾದಿಗಳನ್ನು ಮಾಡುವರು. ಸಾಧುಗಳು ಮನಸ್ಸಿನಿಂದಲೇ ಅವರಲ್ಲಿ ಅಂತರ್ಯಾಮಿಯಾಗಿ ನೆಲೆಗೊಂಡಿರುವ ಪರಮಾತ್ಮನಿಗೆ ಪ್ರತ್ಯುತ್ಥಾನ, ವಿನಯ, ವಂದನಾದಿಗಳನ್ನು ಮಾಡುವರೇ ಹೊರತು, ದೇಹಾಭಿಮಾನವುಳ್ಳ ಸಂಸಾರಿಗೆ ಮಾಡಲಾರರು ॥೨೨॥ ರಜಸ್ತಮಸ್ಸುಗಳಿಂದ ಮಿಶ್ರವಾಗದೆ, ಶುದ್ಧ ಸತ್ವ ಪ್ರಧಾನವೆನಿಸಿ, ಸ್ವಪ್ರಕಾಶನಾದ ಭಗವಂತನ ನಿರಾವರಣವಾದ ಸಾಕ್ಷಾತ್ಕಾರಕ್ಕೆ ನೆಲೆಯೆನಿಸಿರುವ ಚಿತ್ತವೇ "ವಸುದೇವನೆಂದು" ಕರೆಯಲ್ಪಡುವುದರಿಂದ, ಅಂತಹ ನನ್ನ ಮನಸ್ಸಿನಲ್ಲಿಯೇ ಇಂದ್ರಿಯಾಗೋಚರನೂ ಸ್ವಪ್ರಕಾಶನೂ ಅಚಿಂತ್ಯಮಹಿಮನೂ

ವೋ ಹ್ಯಧೋಕ್ಷಜೋ ಮೇ ನಮಸಾ ವಿಧೀಯತೇ ॥೨೩॥ ತತ್ತೇ ನಿರೀ
ಕ್ಷ್ಯೋ ನಪಿತಾಪಿ ದೇಹಕೃ ದ್ದಕ್ಷೋ ಮಮ ದ್ವಿಟ್ತ್ತದನುವ್ರತಾಶ್ಚ ಯೇ ।
ಯೋ ವಿಶ್ವಸೃ ಗ್ಯಜ್ಞಗತಂ ವರೋರು ! ಮಾ ಮನಾಗಸಂ ದುರ್ವಚ
ಸಾಽಕರೋ ತ್ತಿರಃ ॥ ೨೪ ॥ ಯದಿ ವ್ರಜಿಷ್ಯಸ್ಯತಿಹಾಯ ಮದ್ವಚೋ
ಭದ್ರಂ ಭವತ್ಯಾ ನತತೋ ಭವಿಷ್ಯತಿ । ಸಂಭಾವಿತಸ್ಯ ಸ್ವಜನಾ ತ್ಪರಾಭ
ವೋ ಯದಾ ಸಸದ್ಯೋ ಮರಣಾಯ ಕಲ್ಪತೇ ॥೨೫॥

—ಇತಿ ತೃತೀಯೋಧ್ಯಾಯಃ—

ಅಧೋಕ್ಷಜಃ - ಇಂದ್ರಿಯಗಳಿಗೆ ಅಗೋಚರನಾದ, ಭಗವಾನ್ - ಭಗವಂತನಾದ, ವಾಸುದೇವಃ - ವಾಸುದೇವಮೂರ್ತಿಯು, ಮೇ - ನನ್ನ, ನಮಸಾ - ನಮಸ್ಕಾರದಿಂದ, ವಿಧೀಯತೇ - ಮಾಡಲ್ಪಡುತ್ತಾನೆ ॥೨೩॥ ಹೇವರೋರು - ಎಲೌ ಉತ್ತಮಗಳಾದ ಊರುಗಳುಳ್ಳವಳೆ ! ತತ್ - ಆದುದರಿಂದ, ಯಃ- ಯಾವ, ವಿಶ್ವಸೃಕ್ - ದಕ್ಷನು, ಯಜ್ಞಗತಂ - ಯಜ್ಞಕ್ಕೆ ಹೋಗಿದ್ದ, ಅನಾಗಸಂ - ನಿರಪರಾಧಿಯಾದ, ಮಾಂ - ನನ್ನನ್ನು, ದುರ್ವಚಸಾ - ಕೆಟ್ಟನುಡಿಯಿಂದ, ತಿರಃಕರೋತ್ - ತಿರಸ್ಕರಿಸಿದನೊ, ಅಂತಹ, ಮಮ - ನನ್ನ, ದ್ವಿಟ್ - ಶತ್ರುವಾದ, ದಕ್ಷಃ - ದಕ್ಷನು, ತೇ - ನಿನ್ನಿಂದ, ಪಿತಾಪಿ - ತಂದೆಯಾದರೂ, ದೇಹಕೃದಪಿ- ಪೋಷಕನಾದರೂ, ನನಿರೀಕ್ಷ್ಯಃ - ನೋಡಲ್ಪಡತಕ್ಕವನಲ್ಲ. ಹಾಗೆಯೆ ಯೇ-ಯಾರು, ತಂ ಅನುವ್ರತಾಃ- ಅನುಸರಿಸಿರುವರೋ, ಅವರೂ, ನನಿರೀಕ್ಷ್ಯಾಃ - ನೋಡಲ್ಪಡತಕ್ಕವರಲ್ಲ ॥೨೪॥ ಮದ್ವಚಃ-ನನ್ನ ಮಾತನ್ನು, ಅತಿಹಾಯ - ಅತಿಕ್ರಮಿಸಿ, ಯದಿವ್ರಜಿಷ್ಯಸಿ - ಹೊರಟುಹೋದರೆ, ತತಃ-ಅದರಿಂದ, ಭವತ್ಯಾಃ - ನಿನಗೆ, ಭದ್ರಂ - ಮಂಗಳವು, ನಭವಿಷ್ಯತಿ - ಆಗುವುದಿಲ್ಲ. ಸಂಭಾವಿತಸ್ಯ - ಯೋಗ್ಯನಾದವನಿಗೆ, ಯದಾ - ಯಾವಾಗ, ಸ್ವಜನಾತ್ - ತನ್ನವರಿಂದ, ಪರಾಭವಃ - ತಿರಸ್ಕಾರವುಂಟಾಗುವುದೋ, ತದಾ - ಆಗ, ಸಃ - ಆ ತಿರಸ್ಕಾರವು, ಸದ್ಯಃ - ಕೂಡಲೇ, ಮರಣಾಯ - ಮರಣಕ್ಕಾಗಿ, ಕಲ್ಪತೇ- ಕಾರಣವಾಗುವುದು॥೨೫॥

—ತೃತೀಯಾಧ್ಯಾಯಂ ಸಮಾಪ್ತಂ—

ಆದ ಭಗವಂತನಿಗೆ ಮರ್ಯಾದೆಯನ್ನು ಮಾಡುತ್ತೇನೆ ॥ ೨೩ ॥ ಸಾಧುಗಳ ಮರ್ಯಾದಾಪದ್ಧತಿ ಯಿಂತಿರುವುದರಿಂದ ಅದನ್ನರಿಯದೆ ದುರಹಂಕಾರಿಯಾದ ಆ ದಕ್ಷನು ಮುನ್ನ ಸತ್ರಯಾಗಕ್ಕೆ ಹೋಗಿದ್ದ ಸಮಯದಲ್ಲಿ ನಿರಪರಾಧಿಯಾದ ನನ್ನನ್ನು ಮರ್ಮಭೇದಕಗಳಾದ ಕೆಡುನುಡಿಗಳಿಂದ ಕಡೆಗಣಿಸಿರುವನಾದ ಕಾರಣ, ಎಲೌ ಮಡದಿಮಣಿಯೆ ! ಅವನು ನಿನ್ನನ್ನು ಜನಿಯಿಸಿದ ತಂದೆಯಾದರೂ ಪಾಲಕನಾದರೂ, ನನಗೆ ದ್ವೇಷಿಯಾದುದರಿಂದ ಅವನನ್ನಾಗಲಿ, ಅವನ ಕಡೆಯವರನ್ನಾಗಲಿ ನೀನಿಣಿಕಿ ನೋಡಬಾರದು ॥೨೪॥ ಎಲೌ ಸತಿಯೆ ! ಈ ಕಾಲದಲ್ಲಿ ನನ್ನಮಾತನ್ನುಲ್ಲಂಘಿಸಿ ಹೊರಡುವೆಯಾದರೆ ನಿನಗೆಂದಿಗೂ ಮಂಗಳವಾಗಲಾರದು. ಸಂಭಾವಿತನಾದವನಿಗೆ ಸ್ವಜನರಿಂದುಂಟಾಗುವ ತಿರಸ್ಕಾರವು ತತ್‌ಕ್ಷಣದಲ್ಲಿಯೇ ಮರಣವನ್ನುಂಟುಮಾಡುವುದು. ಎಂದು ಪರಶಿವನು ಪಾರ್ವತಿಗೆ ಹೇಳುತ್ತಿದ್ದನೆಂಬಲ್ಲಿಗೆ ಭಾಗವತ ಚಕೋರಚಂದ್ರಿಕೆಯೊಳ್ ॥೨೫॥

—ಮೂರನೆಯ ಅಧ್ಯಾಯಂ ಮುಗಿದುದು.—

## ಓಂ ನಮಃ ಪರಮಾತ್ಮನೇ

—ಅಥ ಚತುರ್ಥೋಽಧ್ಯಾಯಃ—

ಮೈತ್ರೇಯಃ ॥ ಏತಾವ ದುಕ್ತ್ವಾ ವಿರರಾಮ ಶಂಕರಃ ಪತ್ನ್ಯಂಗನಾಶಂ ಹ್ಯುಭಯತ್ರ ಚಿಂತಯನ್ । ಸುಹೃದ್ದಿದೃಕ್ಷುಃ ಪರಿಶಂಕಿತಾ ಭವಾ ನ್ನಿಷ್ಕ್ರಾಮತೀ ನಿರ್ವಿಶತೀ ದ್ವಿಧಾಸ ಸಾ ॥೧॥ ಸುಹೃದ್ದಿದೃಕ್ಷಾ ಪ್ರತಿಘಾತ ದುರ್ಮನಾಃ ಸ್ನೇಹಾ ದ್ರುದತ್ಯಶ್ರು ಕಲಾ ಽತಿ ವಿಹ್ವಲಾ । ಭವಂ ಭವಾನ್ಯ ಪ್ರತಿ

---

—ಚತುರ್ಥಾಧ್ಯಾಯಂ—

ಕಂದ॥ ಪತಿವಚನವ ನುಲ್ಲಂಘಿಸಿ । ಸತಿ ತೆರಳುತೆ ಪಿತನ ಬಳಿಯೊ ಳವಮತಿಯುಂ ಸಾ ।
ರ್ದತಿ ಕೋಪದೆ ನಿಜತನುವಂ । ಕ್ರತುವಹ್ನಿಯೊ ಳುಳಿದ ಪರಿಯ ನೊರೆದಪ್ಪುದೀಗಳ್ ॥

ಮೈತ್ರೇಯನು ಹೇಳುತ್ತಾನೆ—ಶಂಕರಃ - ಶಿವನು, ಉಭಯತ್ರ - ಎರಡು ವಿಧವಾಗಿಯೂ, ಪತ್ನ್ಯಂಗನಾಶಂ - ಮಡದಿಯ ಶರೀರನಾಶವನ್ನು, ಚಿಂತಯನ್ - ಯೋಚಿಸಿ, ಏತಾವತ್ - ಇಷ್ಟು, ಉಕ್ತ್ವಾ - ಹೇಳಿ, ವಿರರಾಮ - ಸುಮ್ಮನಾದನು, ಸಾ - ಆ ಸತೀದೇವಿಯು, ಸುಹೃದ್ದಿದೃಕ್ಷುಃ - ಬಂಧುಗಳನ್ನು ನೋಡಲೆಳಸಿ, ನಿಷ್ಕ್ರಾಮತೀ - ಹೊರಡುತ್ತಾ, ಭವಾತ್ - ಶಿವನಿಂದ, ಪರಿಶಂಕಿತಾ - ಶಂಕಿಸುತ್ತಾ, ನಿರ್ವಿಶತೀ - ಒಳಹೊಗುತ್ತಾ, ದ್ವಿಧಾ - ಸಂಶಯಗ್ರಸ್ತಳು, ಆಸ - ಆದಳು ॥೧॥ ಸುಹೃ...ನಾಃ, ಸುಹೃತ್ - ಬಂಧುಗಳ, ದಿದೃಕ್ಷಾ - ದರ್ಶನೇಚ್ಛೆಯು, ಪ್ರತಿಘಾತ - ತಡೆಯಿಂದ, ದುರ್ಮನಾಃ - ಮನಗುಂದಿರುವ, ಸ್ನೇಹಾತ್ - ಸ್ನೇಹದಿಂದ, ರುದತೀ - ಅಳುತ್ತಿರುವ, ಅಶ್ರು...ಲಾ, ಕಂಬನಿ ತುಂತುರುಗಳಿಂದ ವ್ಯಾಕುಲೆ

---

—ನಾಲ್ಕನೆಯ ಅಧ್ಯಾಯ—

---

### —ಸತೀದೇವಿಯು ದಕ್ಷಯಜ್ಞದಲ್ಲಿ ಶರೀರವನ್ನುಳಿಯುವುದು—

ಅನಂತರದಲ್ಲಿ ಮೈತ್ರೇಯ ಮುನಿಯು ವಿದುರನನ್ನು ಕುರಿತು-ಅಯ್ಯಾ ವಿದುರನೆ! ಆಗ ಪರಶಿವನು ತಾನು ಕಳುಹಿಸಿ ಕೊಟ್ಟರೂ, ಕಳುಹದೇ ತಡೆದರೂ, ಎರಡು ವಿಧದಲ್ಲಿಯೂ ತನ್ನ ಮಡದಿಯ ಶರೀರ ಉಳಿಯುವುದಿಲ್ಲವೆಂದು ಚಿಂತಿಸಿದವನಾಗಿ, ಇಷ್ಟು ಮಾತ್ರ ಹೇಳಿ ಸುಮ್ಮನಾದನು. ಕೂಡಲೇ ಸತೀದೇವಿಯು ಬಂಧುಗಳನ್ನು ನೋಡಲೆಳಸಿ, ಮನೆಯಿಂದ ಹೊರಡುತ್ತಾ, ಪತಿಯಾದ ಪರಮೇಶ್ವರನಿಗೆ ಅನಿಷ್ಟವಾದುದರಿಂದ ಏನಾಗುವುದೋ, ಎಂಬ ಶಂಕೆಯಿಂದ ಮರಳಿ ಒಳಹೊಗುತ್ತಾ, ಏನೂ ತೋರದೆ ಡೋಲಾಯಮಾನವಾದ ಮನಸ್ಸುಳ್ಳವಳಾಗಿದ್ದಳು ॥೧॥ ಅಂತು ಆ ಸತೀದೇವಿಯು ತನ್ನ ಬಳಗವನ್ನು ನೋಡಬೇಕೆಂಬ ಕೋರಿಕೆಗೆ ಭಂಗ ಉಂಟಾದುದರಿಂದ ಖಿನ್ನಳಾಗಿ, ಬಂಧು ಸ್ನೇಹದಿಂದ ಅಳುತ್ತಾ ಕಂಬನಿಗಳನ್ನುಗುಳಿಸುತ್ತಾ, ಕೋಪದಿಂದ ಗಡಗಡನೆ ನಡುಗುತ್ತಾ, ಅಸದೃಶನಾದ ತನ್ನ ಪತಿ

ಪೂರುಷಂ ರುಷಾ ಪ್ರಧಕ್ಷ್ಯತೀ ವೈಕ್ಷತ ಜಾತವೇಪಥುಃ ॥೨॥ ತತೋ ವಿನಿ
ಶ್ವಸ್ಯ ಸತೀ ವಿಹಾಯ ತಂ ಶೋಕೇನ ರೋಷೇಣ ಚ ದೂಯತಾ ಹೃದಾ ।
ಪಿತ್ರೋ ರಗಾತ್ ಸ್ತ್ರೈಣವಿಮೂಢಧೀ ರ್ಗೃಹಾನ್ ಪ್ರೇಮ್ಣಾತ್ಮನೋ
ಯೋಽರ್ಧ ಮದಾ ತ್ಸತಾಂ ಪ್ರಿಯಃ ॥ ೩ ॥ ತಾ ಮನ್ವಗಚ್ಛನ್ ದ್ರುತವಿಕ್ರ
ಮಾಂ ಸತೀ ಮೇಕಾಂ ತ್ರಿಣೇತ್ರಾಽನುಚರಾ ಸ್ಸಹಸ್ರಶಃ । ಸಪಾರ್ಷ *
ದ ಯಕ್ಷಾ ಮಣಿಮನ್ಮದಾದಯಃ ಪುರೋವೃಷೇಂದ್ರಾ ಸ್ತರಸಾ ಗತವ್ಯ
ಥಾಃ ॥೪॥ ತಾಂ ಶಾರಿಕಾಕಂದುಕದರ್ಪಣಾಂಬುಜ್ಯೈ ಶ್ವೇತಾತಪತ್ರವ್ಯಜನ
ಸ್ರಗಾದಿಭಿಃ । ಗೀತಾಯನೈ ರ್ದುಂದುಭಿ ಶಂಖವೇಣುಭಿ ರ್ವೃಷೇಂದ್ರ ಮಾ

---

ಯಾದ, ಭವಾನೀ - ಸತೀದೇವಿಯು, ರುಷಾ - ಕೋಪದಿಂದ, ಜಾತವೇಪಥುಃ - ನಡುಕವುಳ್ಳವಳಾಗಿ, ಅಪ್ರತಿ ಪೂರುಷಂ - ಅಸದೃಶನಾದ, ಭವಂ - ಶಿವನನ್ನು, ಪ್ರಧಕ್ಷ್ಯತೀವ - ಸುಡುವಂತೆ, ಐಕ್ಷತ - ನೋಡಿದಳು ॥೨॥ ತತಃ - ಬಳಿಕ, ಸತೀ - ಸತೀದೇವಿಯು, ವಿನಿಶ್ವಸ್ಯ - ನಿಟ್ಟುಸಿರು ಬಿಟ್ಟು, ಯಃ - ಯಾವನು, ಪ್ರೇಮ್ಣಾ - ಪ್ರೀತಿಯಿಂದ, ಆತ್ಮನಃ - ತನ್ನ ದೇಹದ, ಅರ್ಧಂ - ಅರ್ಧವನ್ನು, ಅದಾತ್ - ಕೊಟ್ಟನೋ, ಸತಾಂ - ಸಾಧುಗಳಿಗೆ, ಪ್ರಿಯಃ - ಪ್ರಿಯನೋ, ಅಂತಹ, ತಂ - ಆ ಶಿವನನ್ನು, ವಿಹಾಯ - ಬಿಟ್ಟು, ಶೋಕೇನ - ದುಃಖದಿಂದಲೂ, ರೋಷೇಣಚ - ಕೋಪದಿಂದಲೂ, ದೂಯತಾ - ತಳಮಳಗುಟ್ಟುವ, ಹೃದಾ - ಮನಸ್ಸಿನಿಂದ, ಸ್ತ್ರೈಣ...ಧೀಃ, ಸ್ತ್ರೀ ಸ್ವಭಾವದಿಂದ ಮೂಢಬುದ್ಧಿಯುಳ್ಳ ವಳಾಗಿ, ಪಿತ್ರೋಃ - ತಾಯಿತಂದೆಗಳ, ಗೃಹಾನ್ - ಮನೆಗೆ, ಅಗಾತ್ - ಹೋದಳು ॥೩॥ ದ್ರುತವಿಕ್ರಮಾಂ - ಶೀಘ್ರವಾಗಿ ಹೋಗುತ್ತಿರುವ, ಏಕಾಂ - ಒಂಟಿಯಾದ, ತಾಂ - ಆಕೆಯನ್ನು, ಸಪಾರ್ಷದ ಯಕ್ಷಾಃ - ಪ್ರಮಥಗಣಗಳಿಂದಲೂ ಯಕ್ಷರಿಂದಲೂ ಕೂಡಿದ, ಮಣಿ...ಯಃ - ಮಣಿಮಂತ, ಮದ, ಮೊದಲಾದ, ಸಹಸ್ರಶಃ - ಸಾವಿರಾರುಮಂದಿ, ತ್ರಿಣೇ...ರಾಃ - ಶಿವಕಿಂಕರರು, ಪುರೋ...ದ್ರಾಃ - ವೃಷಭವಾಹನವನ್ನು ಮುಂದೆ ಇರಿಸಿಕೊಂಡು, ತರಸಾ - ಬೇಗನೆ, ಗತವ್ಯಥಾಃ - ನಿರ್ಭಯರಾಗಿ, ಅಥವಾ ಆಗತವ್ಯಥಾಃ - ವ್ಯಥೆಯನ್ನು ಪಡೆದವರಾಗಿ, ಅನ್ವಗಚ್ಛನ್ - ಹಿಂಬಾಲಿಸಿದರು ॥೪॥ ತಾಂ - ಆಕೆಯನ್ನು, ವೃಷೇಂದ್ರಂ - ಎತ್ತಿನಮೇಲೆ, ಆರೋಪ್ಯ - ಕುಳ್ಳಿರಿಸಿ, ಶಾರಿ...ಜ್ಯೈಃ - ಅರಗಿಳಿ, ಚೆಂಡು, ಕನ್ನಡಿ, ಕಮಲ ಮೊದಲಾದ ಆಟದ ಸಾಮಾನುಗಳಿಂದಲೂ, ಶ್ವೇತಾ...ಭಿಃ - ಬೆಳ್ಗೊಡೆ, ಬೀಸಣಿಗೆ, ಹೂಮಾಲೆ ಮೊದ

---

ಯನ್ನು ಸುಡುವಂತೆ ನೋಡಿದಳು ॥೨॥ ಬಳಿಕ ಆಕೆಯು ನಿಟ್ಟುಸಿರನ್ನು ಬಿಟ್ಟು, ದುಃಖದಿಂದಲೂ ಕೋಪದಿಂದಲೂ ತಳಮಳಿಸುತ್ತಾ ಸಾಧುಪ್ರಿಯನಾಗಿಯೂ ತನಗೆ ದೇಹಾರ್ಧವನ್ನಿತ್ತ ಪ್ರಾಣಪ್ರಿಯನಾಗಿಯೂ ಇರುವ ಆ ಪರಶಿವನನ್ನು ಕೂಡ ಬಿಟ್ಟು, ಸ್ತ್ರೀ ಸಹಜವಾದ ಅವಿವೇಕಕ್ಕೊಳಗಾಗಿ ಒರ್ವಳೇ ತನ್ನ ತವರುಮನೆಗೆ ಹೊರಟುಹೋದಳು॥೩॥ ಇಂತು ಒಂಟಿಯಾಗಿ ವೇಗದಿಂದ ತೆರಳುತ್ತಿರುವ ಆ ಸತೀದೇವಿಯನ್ನು ಹಿಂಬಾಲಿಸಿ, ನಂದೀಶ್ವರನೇ ಮೊದಲಾದ ಪ್ರಮಥರು, ಯಕ್ಷರು, ಮಣಿಮಂತನೇ ಮೊದಲಾದ ಸಾವಿರಾರು ಶಿವ ಕಿಂಕರರು ವೃಷಭವಾಹನವನ್ನು ಮುಂದಿಟ್ಟುಕೊಂಡು ಹೋಗಿ, ಆಕೆಯನ್ನು ವೃಷಭದಮೇಲೆ ಕುಳ್ಳಿರಿಸಿ, ಅರಗಿಳಿ, ಪೂಚೆಂಡು, ಕಳಸ, ಕನ್ನಡಿ, ಕಮಲ ಮೊದಲಾದ ಕ್ರೀಡೋಪಕರಣಗಳಿಂದಲೂ, ಬೆಳ್ಗೊಡೆ, ಬೀಸಣಿಗೆ, ಗಂಧ,ಪುಷ್ಪ, ಮೊದಲಾದ ರಾಜೋಪಚಾರಗಳಿಂದಲೂ, ಸೇವಿಸುತ್ತಾ, ಶಂಖ, ವೇಣು, ದುಂದುಭಿ ಮೊದಲಾದ ವಾದ್ಯಗಳನ್ನು

ರೋಕ್ಷ್ಯ ವಿಟಂಕಿತಾ ಯಯುಃ॥೫॥ ಆಬ್ರಹ್ಮಘೋಷೋರ್ಜಿತಯಜ್ಞವೈಶಸಂ ವಿಪ್ರರ್ಷಿಜುಷ್ಟಂ ವಿಬುಧೈಶ್ಚ ಸರ್ವಶಃ । ಮೃದ್ದಾರ್ವಯಃಕಾಂಚನದರ್ಭಚರ್ಮಭಿ ರ್ನಿಸೃಷ್ಟಭಾಂಡಂ ಯಜನಂ ಸಮಾವಿಶತ್ ॥ ೬ ॥ ತಾಮಾಗತಾಂ ತತ್ರ ನಕಶ್ಚನಾದ್ರಿಯ ದ್ವಿಮಾನಿತಾಂ ಯಜ್ಞಕೃತೋ ಭಯಾಜ್ಜನಃ । ಋತೇ ಸ್ವಸೄರ್ವೈ ಜನನೀಂ ಚ ಸಾದರಾಃ ಪ್ರೇಮಾಶ್ರುಕಂಠ್ಯಃ ಪರಿಷಸ್ವಜುರ್ಮುದಾ ॥೭॥ ಸೋದರ್ಯ ಸಂಪ್ರಶ್ನ ಸಮರ್ಥವಾರ್ತಯಾ ಮಾತ್ರಾ ಚ ಮಾತೃಷ್ವಸೃಭಿಶ್ಚ ಸಾದರಂ । ದತ್ತಾಂ ಸಪರ್ಯಾಂ ವರಮಾ

ಲಾದ ರಾಜಚಿಹ್ನಗಳಿಂದಲೂ, ಗೀತಾಯನೈಃ - ಗೀತಾಶ್ರಯಗಳಾದ, ದುಂದುಭಿ...ಭೈಃ, ದುಂದುಭಿ, ಶಂಖ, ವೇಣು, ಗಳಿಂದಲೂ, ವಿಟಂಕಿತಾಃ - ಶೋಭಿತರಾಗಿ, ಯಯುಃ - ಹೋದರು ॥ ೫ ॥ ಆಬ್ರ...ಸಂ, ಆ - ಎಲ್ಲೆಡೆಗಳಲ್ಲಿಯೂ, ಬ್ರಹ್ಮಘೋಷ - ವೇದಧ್ವನಿಯಿಂದ, ಊರ್ಜಿತ - ಶೋಭಾಯಮಾನವಾದ, ಯಜ್ಞ - ಯಾಗದ ಸಂಬಂಧಯಾದ, ವೈಶಸಂ - ಪಶುವಿಶಸನವುಳ್ಳ, ಅಥವಾ ಋತ್ವಿಜರಸ್ಪರ್ಧೆಯುಳ್ಳ, ಸರ್ವಶಃ - ಎಲ್ಲೆಲ್ಲಿಯೂ, ವಿಬುಧೈಃ-ದೇವತೆಗಳಿಂದಲೂ, ವಿಪ್ರರ್ಷಿಜುಷ್ಟಂ - ಬ್ರಹ್ಮರ್ಷಿಗಳಿಂದಲೂ ಕೂಡಿರುವ, ಮೃದ್ದಾ...ಭಿಃ - ಮೃತ್ತು, ದಾರು, ಕಬ್ಬಿಣ, ಚಿನ್ನ, ದರ್ಭೆ, ಇವುಗಳಿಂದ, ನಿಸೃಷ್ಟಭಾಂಡಂ - ನಿರ್ಮಿಸಲ್ಪಟ್ಟ ಯಜ್ಞಪಾತ್ರೆಗಳುಳ್ಳ, ಯಜನಂ - ಯಜ್ಞಶಾಲೆಯನ್ನು, ಸಮಾವಿಶತ್ - ಹೊಕ್ಕಳು ॥೬॥ ತತ್ರ - ಆ ಯಜ್ಞಶಾಲೆಯಲ್ಲಿ, ಆಗತಾಂ - ಬಂದ, ತಾಂ - ಆಕೆಯನ್ನು, ಜನನೀಂ - ತಾಯಿಯನ್ನೂ, ಸ್ವಸೄಂಶ್ಚ ವಿನಾ - ಅಕ್ಕತಂಗಿಯರನ್ನುಳಿದು, ಯಜ್ಞಕೃತಃ - ಯಜಮಾನನಾದ ದಕ್ಷನ, ಭಯಾತ್ - ಭಯದಿಂದ, ಕಶ್ಚನಜನಃ - ಯಾವಜನನೂ, ನಾದ್ರಿಯತ್- ಆದರಿಸಲಿಲ್ಲ, ಸಾದರಾಃ-ಆದರದಿಂದ ಕೂಡಿದ ಅವರು, ಪ್ರೇಮಾಶ್ರುಕಂಠ್ಯಃ - ಪ್ರೇಮದಿಂದಗದ್ಗದ ಕಂಠವುಳ್ಳವರಾಗಿ, ಮುದಾ-ಸಂತೋಷದಿಂದ, ತಾಂ-ಆಕೆಯನ್ನು, ಪರಿಷಸ್ವಜುಃ - ಆಲಿಂಗಿಸಿದರು ॥೭॥

ಪಿತ್ರಾ - ತಂದೆಯಿಂದ, ಅಪ್ರತಿ ನಂದಿತಾ - ಆದರಿಸಲ್ಪಡದ, ಸಾಸತೀ - ಆ ಸತೀದೇವಿಯು, ಸೋದ...ಯಾಸಹ, ಸೋದರ್ಯ - ಸಹೋದರ ಭಾವದಿಂದ ಅಕ್ಕತಂಗಿಯರು ಮಾಡಿದ, ಸಂಪ್ರಶ್ನ - ಪ್ರಶ್ನೆಯಲ್ಲಿ, ಸಮರ್ಥ - ಯೋಗ್ಯವಾದ, ವಾರ್ತಯಾಸಹ - ಕ್ಷೇಮ ಸಮಾಚಾರದೊಡನೆ, ಮಾತ್ರಾ - ತಾಯಿ

ಮೊಳಗಸುತ್ತಾ, ಗಾನಗಳನ್ನು ಮಾಡುತ್ತಾ, ಮರ್ಯಾದೆಯಿಂದ ಕರೆದುಕೊಂಡು ಹೋದರು ॥೫॥ ಆಗ ಸತೀದೇವಿಯು ತನ್ನ ಪರಿವಾರದಿಂದೊಡಗೂಡಿ ಎಲ್ಲೆಡೆಗಳಲ್ಲಿಯೂ ನಡೆಯುತ್ತಿರುವ ವೇದಘೋಷದಿಂದ ಶೋಭಾಯಮಾನವಾಗಿ, ಪಶುವಿಶಸನ ಕರ್ಮದಿಂದಲೂ, ಋತ್ವಿಜರಪರಸ್ಪರ ಸ್ಪರ್ಧೆಯಿಂದಲೂ, ಎಲ್ಲಾ ಕಡೆಗಳಲ್ಲಿಯೂ ಹರಡಿರುವ ಮೃತ್ತಿಕೆ ದಾರು, ಕಬ್ಬಿಣ, ಬಂಗಾರಗಳಿಂದ ನಿರ್ಮಿತಗಳಾದ ಯಜ್ಞಪಾತ್ರೆಗಳಿಂದಲೂ, ರಮಣೀಯವಾದ ಯಜ್ಞಶಾಲೆಯನ್ನು ಹೊಕ್ಕಳು ॥೬॥ ಆಗ ಆ ಯಜ್ಞವಾಟದಲ್ಲಿ ನೆರೆದಿರುವ ಜನರೆಲ್ಲರೂ ದಕ್ಷಬ್ರಹ್ಮನಿಗೆ ಹೆದರಿ, ಅವಮಾನಿತಳಾಗಿ ಬಂದು ನಿಂದಿರುವ ಆ ಸತೀದೇವಿಯನ್ನು ಒಬ್ಬನಾದರೂ ಆದರಿಸಲಿಲ್ಲ. ಆಕೆಯ ತಾಯಿಯು ಸೋದರಿಯರು ಮಾತ್ರ ಕಂಡಕೂಡಲೇ ಆನಂದಬಾಷ್ಪಗಳನ್ನು ತುಳುಕಿಸುತ್ತಾ, ಅತಿಪ್ರೀತಿಯಿಂದ ಆಕೆಯನ್ನು ಅಪ್ಪಿಕೊಂಡು ಆನಂದಿಸಿದರು ॥೭॥ ಆಗ ಸತೀದೇವಿಯು ತಂದೆಯಿಂದಾದರಗೊಳ್ಳದೆ ಅವಮಾನಿತೆಯಾಗಿ, ತಾಯಿಯು ಅಕ್ಕತಂಗಿಯರು ಸೋದರವಾತ್ಸಲ್ಯದಿಂದ ಕುಶಲಪ್ರಶ್ನೆಯನ್ನು ಮಾ

ಸನಂಚ ಸಾ ನಾದತ್ತ ಪಿತ್ರಾ ಽ ಪ್ರತಿನಂದಿತಾ ಸತೀ ||೮|| ಅರುದ್ರಭಾಗಂ ತಮವೀಕ್ಷ್ಯ ಚಾಧ್ವರಂ ಪಿತ್ರಾಚ ದೇವೇ ಕೃತಹೇಳನಂ ವಿಭೌ। ಅನಾದೃತಾ ಯಜ್ಞ ಸದ ಸ್ಯಧೀಶ್ವರೀ ಚುಕೋಪ ಲೋಕಾನಿವ ಧಕ್ಷ್ಯತೀ ರುಷಾ ||೯|| ಜಗರ್ಹ ಸಾ ಽ ಮರ್ಷವಿಪನ್ನಯಾ ಗಿರಾ ಶಿವದ್ವಿಷಂ ಧೂಮಪಥಶ್ರಮ ಸ್ಮಯಂ । ಸ್ವತೇಜಸಾ ಭೂತಗಣಾನ್ ಸಮುತ್ಥಿತಾನ್ ನಿಗೃಹ್ಯ ದೇವೀ ಜಗ ತೋ ಽ ಭಿಶೃಣ್ವತಃ ||೧೦|| ಶ್ರೀದೇವ್ಯುವಾಚ || † ನಯಸ್ಯ ಲೋಕೇಸ್ತ್ಯ

ಯಿಂದಲೂ, ಮಾತೃಷ್ವಸೃಭಿಃ - ಚಿಕ್ಕತಾಯಿ ಯರಿಂದಲೂ, ಸಾದರಂ - ಪ್ರೀತಿಪೂರ್ವಕವಾಗಿ, ದತ್ತಾಂ-ಕೊಡಲ್ಪಟ್ಟ, ಸಪರ್ಯಾಂ - ಪೂಜೆಯನ್ನೂ, ಪರಂ - ಉತ್ತಮವಾದ, ಆಸನಂಚ - ಪೀಠವನ್ನೂ, ನಾದತ್ತ - ಅಂಗೀಕರಿಸಲಿಲ್ಲ ||೮|| ಅರುದ್ರಭಾಗಂ - ರುದ್ರನಿಗೆ ಭಾಗವಿಲ್ಲದ, ತಂ ಅಧ್ವರಂ- ಆ ಯಜ್ಞವನ್ನು, ವಿಭೌ - ಪ್ರಭುವಾದ, ದೇವೇ - ಮಹಾದೇವನಲ್ಲಿ, ಪಿತ್ರಾ - ತಂದೆಯಿಂದ, ಕೃತಹೇಳನಂ - ಮಾಡಲ್ಪಟ್ಟ ಪರಿಹಾಸವನ್ನೂ, ಅವೇಕ್ಷ್ಯ - ನೋಡಿ, ಯಜ್ಞಸದಸಿ - ಯಜ್ಞ ಸಭೆಯಲ್ಲಿ, ಅನಾದೃತಾ - ಮರ್ಯಾದೆಯನ್ನು ಪಡೆಯದ, ಅಧೀಶ್ವರೀ - ಸತೀದೇವಿಯು, ರುಷಾ - ಕೋಪದಿಂದ, ಲೋಕಾನ್ - ಲೋಕಗಳನ್ನು, ಧಕ್ಷ್ಯತೀವ - ಸುಡುವಂತೆ, ಚುಕೋಪ - ಸಿಟ್ಟುಗೊಂಡಳು ||೯|| ಸಾದೇವೀ - ಆ ಸತಿಯು, ಸಮುತ್ಥಿತಾನ್ - ಆ ದಕ್ಷವಧೆಗಾಗಿ ಎದ್ದ, ಭೂತಗಣಾನ್ - ಪ್ರಮಥಾದಿಗಳನ್ನು, ಸ್ವತೇಜಸಾ - ತನ್ನಾಜ್ಞೆಯಿಂದ, ನಿಗೃಹ್ಯ - ತಡೆದು, ಜಗತಃ - ಲೋಕವು, ಅಭಿಶೃಣ್ವತಃ - ಕೇಳುವಂತೆ, ಅಮರ್ಷ ವಿಪನ್ನಯಾ - ಕೋಪದಿಂದ ತೊದಲುತ್ತಿರುವ, ಗಿರಾ - ನುಡಿಯಿಂದ, ಧೂಮ...ಯಂ, ಧೂಮಪಥ - ಕರ್ಮಮಾರ್ಗದ, ಶ್ರಮ - ಅಭ್ಯಾಸದಿಂದ, ಸ್ಮಯಂ - ಗರ್ವವುಳ್ಳ, ಶಿವದ್ವಿಷಂ-ಶಿವನಿಗೆ ಶತ್ರುವಾದ ದಕ್ಷನನ್ನು, ಜಗರ್ಹ - ಜರೆದಳು ||೧೦|| ದೇಹಭೃತಾಂ - ಪ್ರಾಣಿಗಳಿಗೆ, ಪ್ರಿಯಾತ್ಮನಃ- ಪ್ರಿಯವೆನಿಸಿದಾತ್ಮನಾಗಿರುವ,

ಡುತ್ತ್ವ ಆದರಿಸಿ ಉತ್ತಮವಾದ ಪೀಠವನ್ನಿತ್ತು ಸತ್ಕರಿಸಿದರೂ, ಅದನ್ನು ಪರಿಗ್ರಹಿಸಲಿಲ್ಲ ||೮|| ತನ್ನ ಪತಿಯಾದ ರುದ್ರನಿಗೆ ಭಾಗವೇ ಇಲ್ಲದಂತೆ ನಡೆಯಿಸಲ್ಪಡುತ್ತಿರುವ ಆ ಯಜ್ಞವನ್ನು, ಲೋಕೇಶ್ವರನಾದ ಮಹಾದೇವನನ್ನು ತಂದೆಯು ದೂಷಿಸುತ್ತಿರುವುದನ್ನೂ ನೋಡಿ, ಸತೀದೇವಿಯು ಆ ಸಭೆಯಲ್ಲಿಯೂ ಮರ್ಯಾದೆಯನ್ನು ಪಡೆಯದೆ, ಕೋಪದಿಂದಲೇ ಸಕಲ ಲೋಕಗಳನ್ನೂ ಸುಡುವಳೋ ಎಂಬಂತೆ ಕೋಪಿಸಿಕೊಂಡಳು ||೯|| ಬಳಿಕ ಆ ಕೆಯು, ಕೋಪಾತಿಶಯದಿಂದ ದೂಷಕನಾದ ಆ ದಕ್ಷನನ್ನು ಸುಡುವುದಕ್ಕಾಗಿ ಏಳುತ್ತಿರುವ ಪ್ರಮಥ ಗಣಗಳನ್ನು ತನ್ನಾಜ್ಞಾಬಲದಿಂದ ತಡೆದು, ಸಭಾಸದರು ಕೇಳುವಂತೆ ಕರ್ಮಮಾರ್ಗಾಭ್ಯಾಸದಿಂದ ಗರ್ವಗೊಂಡಿರುವ ಶಿವದ್ವೇಷಿಯಾದ ಆ ದಕ್ಷನನ್ನು ಕುರಿತು ಕೋಪಾಟೋಪದಿಂದ ತೊದಲುತ್ತಿರುವ ಬಿರುನುಡಿಗಳಿಂದ ದೂಷಿಸತೊಡಗಿದಳು|| ಎಲೈ

† (1) ಪಿ. ನಿರತಿಶಯ ಪ್ರೇಮರೂಪವಾದ ಭಕ್ತಿಯಿಂದ ಪರಮ ಪುರುಷನನ್ನು ಧ್ಯಾನಿಸುತ್ತಾ, ಸರ್ವವನ್ನು ಬ್ರಹ್ಮಾತ್ಮಕವೆಂದು ತಿಳಿದಿರುವ, ಅಸದೃಶನೂ,ಪ್ರಿಯಾ ಪ್ರಿಯರಹಿತನೂ ಆದ ರುದ್ರನಲ್ಲಿ,ನಿನ್ನ ಹೊರತು ಮತ್ತಾವನುತಾನೇ ದ್ವೇಷವನ್ನು ಮಾಡುವನು?.

(೨) ಪಿ. ವಿಷ್ಣು, ಪ್ರಕೃತಿ, ಮೊದಲಾದ ಆರುಮಂದಿಯನ್ನು ಹೊರತು, ಉಳಿದೆಲ್ಲರಿಗೂ ಸ್ವಾಮಿಯಾಗಿಯೂ, ನಿರ್ವೈರನಾಗಿಯೂ, ಪ್ರಾಣಿಗಳಿಗೆ ಮನೋಭೀಷ್ಟಪ್ರದನಾಗಿಯೂ ಇರುವ ರುದ್ರನನ್ನು ನಿನ್ನ ಹೊರತು ಮತ್ತಾರು ದೂಷಿಸುವರು ?.

ತಿಶಾಯನಃ ಪ್ರಿಯ ಸ್ತಥಾ ಽ ಪ್ರಿಯೋ ದೇಹಭೃತಾಂ ಪ್ರಿಯಾತ್ಮನಃ । ತಸ್ಮಿನ್ ಸಮಸ್ತಾತ್ಮನಿ ಮುಕ್ತವೈರಕೇ ಋತೇ ಭವಂತಂ ಕತಮಃ ಪ್ರತೀಪಯೇತ್ ॥೧೧॥ ದೋಷಾನ್ ಪರೇಷಾಂಹಿ ಗುಣೇಷು ಸಾಧವೋ ಗೃಹ್ಣಂತಿ ಕೇಚಿನ್ನ ಭವಾದೃಶಾ ದ್ವಿಜ ! । ಗುಣಾಂಶ್ಚ ಫಲ್ಗೂನ್ ಬಹುಳೀಕರಿಷ್ಣವೋ ಮಹತ್ತಮಾಸ್ತೇಷ್ವವಿದದ್ಭವಾನಘಂ ॥೧೨॥ ನಾಶ್ಚರ್ಯಮೇತದ್ಯದಸತ್ಸು ಸರ್ವದಾ ಮಹದ್ವಿನಿಂದಾ ಕುಣಪಾತ್ಮವಾದಿಷು । ಸೇರ್ಷ್ಯಂ ಮ

---

ಯಸ್ಯ - ಯಾವನಿಗೆ, ಲೋಕೇ - ಲೋಕದಲ್ಲಿ, ಅತಿಶಾಯನಃ - ಹೆಚ್ಚಿದವನಾಗಲಿ, ಪ್ರಿಯಃ - ಪ್ರಿಯನಾಗಲಿ, ತಥಾ - ಹಾಗೆ, ಅಪ್ರಿಯೋವಾ - ದ್ವೇಷಿಯಾಗಲಿ, ನಾಸ್ತಿ-ಇಲ್ಲವೋ, ಸಮಸ್ತಾತ್ಮನಿ - ಎಲ್ಲರಿಗೂ ಆತ್ಮನಾಗಿರುವ, ಮುಕ್ತವೈರಕೇ - ದ್ವೇಷವನ್ನುಳಿದ, ತಸ್ಮಿನ್ - ಆ ಶಿವನಲ್ಲಿ, ಭವಂತಂಋತೇ- ನಿನ್ನನ್ನುಳಿದು, ಕತಮಃ - ಯಾವನು, ಪ್ರತೀಪಯೇತ್ - ಪ್ರತಿಕೂಲವನ್ನು ಮಾಡುವನು? ॥೧೧॥ ಹೇದ್ವಿಜ - ಎಲೈ ಬ್ರಾಹ್ಮಣನೆ! ಭವಾದೃಶಾಃ - ನಿನ್ನಂತಹ, ಕೇಚಿತ್ - ಕೆಲವುಮಂದಿ ಅಸೂಯಕರು. ಪರೇಷಾಂ-ಇತರರ, ಗುಣೇಷು - ಗುಣಗಳಲ್ಲಿ, ದೋಷಾನೇವ - ದೋಷಗಳನ್ನೇ, ಗೃಹ್ಣಂತಿ - ಗ್ರಹಿಸುವರು. ಕೇಚಿತ್ - ಕೆಲವರು, ನ - ಗ್ರಹಿಸುವುದಿಲ್ಲ, ಕೆಲವರು, ಗುಣಾಂಶ್ಚ - ಗುಣಗಳನ್ನೂ, ಗ್ರಹಿಸುವರು, ಮಹತ್ತಮಾಃ - ಸಾಧುಶ್ರೇಷ್ಠರು, ಗುಣಾನ್ - ಗುಣಗಳನ್ನು, ಬಹುಳೀಕರಿಷ್ಣವಃ - ಅಧಿಕಗೊಳಿಸುವರು, ಭವಾನ್ - ನೀನು, ತೇಷು - ಆ ಸಾಧುಗಳಲ್ಲಿ, ಅಘಂ - ಪಾಪವನ್ನು, ಅವಿದತ್ - ಮಾಡಿದೆ ॥೧೨॥ ಕುಣಪಾತ್ಮವಾದಿಷು - ಶರೀರವೇ ಆತ್ಮವೆಂದು ಹೇಳುವ, ಅಸತ್ಸು - ಅಸಾಧುಗಳಲ್ಲಿ, ಸೇರ್ಷ್ಯಂ - ಅಸೂಯೆಯಿಂದ, ಏತತ್ - ಈ, ಮಹದ್ವಿನಿಂದಾ - ಸಾಧುದೂಷಣವು, ನಾಶ್ಚರ್ಯಂ - ಆಶ್ಚರ್ಯವಲ್ಲ. ಮಹಾ...ಭಿಃ - ಮಹಾತ್ಮರ ಪಾದ ಧೂಳಿಯಿಂದ, ನಿರಸ್ತತೇಜಸಃ - ತೇಜಸ್ಸನ್ನು ಕಳೆದುಕೊಂಡ ಆ ಅಜ್ಞಾನಿ

---

ಮದೋದ್ಧತನಾದ ತಂದೆಯೆ ! ಯಾವ ಮಹಾತ್ಮನು ಸಕಲಪ್ರಾಣಿಗಳಿಗೂ ಅತಿಪ್ರಿಯನೆನಿಸಿದ ಆತ್ಮಸ್ವರೂಪನಾಗಿರುವನೋ, ಲೋಕದಲ್ಲಿ ಯಾವನಿಗೆ ಹೆಚ್ಚಿದವನಾಗಲಿ, ಪ್ರಿಯನಾಗಲಿ, ದ್ವೇಷಿಯಾಗಲಿ ಇಲ್ಲವೋ, ಅಂತಹ ನಿರ್ವೈರನೂ, ಸರ್ವಾತ್ಮಕನೂ ಆಗಿರುವ ಪರಶಿವಮೂರ್ತಿಯಲ್ಲಿ ನಿನ್ನನ್ನು ಹೊರತು ಮತ್ತಾವನು ತಾನೇ ದ್ವೇಷವನ್ನು ಎಣಿಸುವನು ? ॥೧೧॥ ಎಲೈ ಬ್ರಾಹ್ಮಣನೆ ! ಲೋಕದಲ್ಲಿ ಪರರಗುಣಗಳಲ್ಲಿ ದೋಷಗಳನ್ನಾರೋಪಿಸುವವರು ಅಧಮರೆಂತಲೂ, ಪರರಲ್ಲಿರುವ ದೋಷಗಳನ್ನುಮಾತ್ರವೇ ಎಣಿಸದೆ ಯಥಾಸ್ಥಿತವಾಗಿ ಗುಣದೋಷಗಳೆರಡನ್ನೂ ಗ್ರಹಿಸುವವರು ಮಧ್ಯಮರೆಂತಲೂ, ಪರರಲ್ಲಿರುವ ದೋಷಗಳನ್ನೆಣಿಸದೆ ಗುಣಗಳನ್ನು ಮಾತ್ರ ಗ್ರಹಿಸುವವರು ಉತ್ತಮರೆಂತಲೂ, ಪರದೋಷಗಳನ್ನು ಗಮನಿಸದೆ ಅವರಲ್ಲಿರುವ ಅಲ್ಪಗುಣಗಳನ್ನೇ ಅಧಿಕವಾಗಿ ಭಾವಿಸಿ ಸಂತೋಷಿಸುವವರು ಉತ್ತಮೋತ್ತಮರೆಂತಲೂ ಗಣಿಸಲ್ಪಡುವರಾದುದರಿಂದ, ಅಂತಹ ಉತ್ತಮೋತ್ತಮರಲ್ಲಿ ನೀನು ಅಪರಾಧವನ್ನೆಣಿಸಿದೆ ॥೧೨॥ ಅಥವಾ ನಿರಂತರವೂ ಜಡವಾದ ದೇಹವೇ ಆತ್ಮವೆಂದು ತಿಳಿದಿರುವ ಅಜ್ಞಾನಿಗಳು ಮಹಾತ್ಮರನ್ನು ಜರೆಯುವುದೇನಾಶ್ಚರ್ಯವಲ್ಲ. ಸಾಧುಗಳಾದವರು, ಅಸೂಯೆಗೊಳಗಾಗಿ ದುರ್ಜನದೂಷಣದಿಂದ ಕೋಪಿಸದಿದ್ದರೂ ಆ ಮಹಾಪುರುಷರಪಾದಧೂಳಿಯೆ ದೂಷಕರಾದ ದುರಾತ್ಮರ ತೇಜಸ್ಸೆಲ್ಲವನ್ನೂ ಕಳೆಯುವುದು. ಅಂತವರಿಗೆ ಅದೇಮಂಗ

ಹಾ ಪೂರುಷ ಪಾದಪಾಂಸುಭಿ ರ್ನಿರಸ್ತತೇಜಸ್ಸು ತದೇವ ಶೋಭನಂ॥೧೩॥‡
ಯ ದ್ದ್ವ್ಯಕ್ಷರಂ ನಾಮ ಗಿರೇರಿತಂ ನೃಣಾಂ ಸಕೃತ್ಪ್ರಸಂಗಾ ದಘ ಮಾಶು
ಹಂತಿ ತತ್ । ಪವಿತ್ರಕೀರ್ತಿಂ ತಮಲಂಘ್ಯಶಾಸನಂ ಭವಾ ನಹೋ! ದ್ವೇ
ಷ್ಟಿ ಶಿವಂ ಶಿವೇತರಃ ॥೧೪॥ † ಯತ್ಪಾದ ಪದ್ಮಂ ಮಹತಾಂ ಮನೋಽಲಿ
ಭಿ ರ್ನಿಷೇವಿತಂ ಬ್ರಹ್ಮರಸಾಸವಾರ್ಥಿಭಿಃ । ಲೋಕಸ್ಯ ಯದ್ವರ್ಷತಿ ಚಾಶಿ
ಷೋಽರ್ಥಿನ ಸ್ತಸ್ಮೈ ಭವಾನ್ ದ್ರುಹ್ಯತಿ ವಿಶ್ವಬಂಧವೇ ॥ ೧೫ ॥

---

ಗಳಲ್ಲಿ, ತದೇವ - ಅದೇ, ಶೋಭನಂ - ಯುಕ್ತವು ॥೧೩॥

ದ್ವ್ಯಕ್ಷರಂ - ಎರಡಕ್ಷರವುಳ್ಳ, (ಶಿವ) ಯನ್ನಾಮ - ಯಾವಹೆಸರು, ಸಕೃತ್ - ಒಮ್ಮೆ, ಪ್ರಸಂಗಾತ್ - ಸಂದರ್ಭಾನುಗುಣವಾಗಿ, ಈರಿತಮಪಿ - ಹೇಳಲ್ಪಟ್ಟರೂ, ತತ್ - ಅದು, ನೃಣಾಂ - ಮನುಷ್ಯರ, ಅಘಂ - ಪಾಪವನ್ನು, ಆಶು - ಬೇಗನೆ, ಹಂತಿ - ನಾಶಗೊಳಿಸುವುದೋ, ಅಂತಹ, ಪವಿತ್ರಕೀರ್ತಿಂ - ಪರಿಶುದ್ಧ ಕೀರ್ತಿಯುಳ್ಳ, ಅಲಂಘ್ಯಶಾಸನಂ - ತಡೆಯಲ್ಪಡದ ಆಜ್ಞೆಯುಳ್ಳ, ತಂಶಿವಂ - ಆ ಪರಶಿವನನ್ನು, ಶಿವೇತರಃ - ಅಮಂಗಳನಾದ, ಭವಾನ್ - ನೀನು, ದ್ವೇಷ್ಟಿ - ದ್ವೇಷಿಸುವೆ. ಅಹೋ - ಅನ್ಯಾಯವು ॥೧೪॥ ಬ್ರಹ್ಮ...ಭಿಃ, ಬ್ರಹ್ಮರಸ - ಬ್ರಹ್ಮಾನಂದವೆಂಬ, ಆಸವ - ಮಕರಂದವನ್ನು, ಅರ್ಥಿಭಿಃ - ಬಯಸುವ, ಮಹತಾಂ - ಸಾಧುಗಳ, ಮನೋಽಲಿಭಿಃ - ಮನಸ್ಸೆಂಬ ತುಂಬಿಗಳಿಂದ, ಯತ್ಪಾದಪದ್ಮಂ - ಯಾವನ ಪಾದಕಮಲವು, ನಿಷೇವಿತಂ - ಸೇವಿಸಲ್ಪಡುವುದೋ, ಯತ್ - ಯಾವಪಾದಕಮಲವು, ಅರ್ಥಿನಃ - ಸಕಾಮರಾದ, ಲೋಕಸ್ಯ - ಜನರಿಗೆ, ಆಶಿಷಃ - ಆ ಆಬಯಕೆಗಳನ್ನು, ವರ್ಷತಿ - ಕೊಡುವುದೋ, ಅಂತಹ ವಿಶ್ವಬಂಧವೇ-ಲೋಕಬಂಧುವಾದ, ತಸ್ಮೈ-ಆ ಶಿವನಿಗೆ, ಭವಾನ್-ನೀನು, ದ್ರುಹ್ಯತಿ - ದ್ರೋಹಮಾಡುತ್ತಿರುವೆ ॥೧೫॥ ಯಃ - ಯಾವನು, ಜಟಾಃ - ಜಡೆಗಳನ್ನು, ಅವಕೀರ್ಯ - ಕೆದ

---

ವು ॥೧೩॥ “ಶಿವ” ಎಂಬೆರಡಕ್ಷರಗಳಿಂದೊಡಗೂಡಿ ಜಗನ್ಮಂಗಳಕರವೆನಿಸಿರುವ ಯಾವನ ನಾಮವನ್ನು ಆಕಸ್ಮಿಕವಾಗಿ ಒಮ್ಮೆ ಉಚ್ಚರಿಸಿದರೂ, ಯಾವ ದಿವ್ಯನಾಮವು ಪುರುಷರ ಪಾಪಗಳನ್ನು ಕೂಡಲೇ ಕಳೆಯುವುದೋ, ಅಂತಹ ಪವಿತ್ರಕೀರ್ತಿಯೂ, ಅಮೋಘಶಾಸನನೂ ಆದ ಪರಶಿವಮೂರ್ತಿಯನ್ನು ಅಮಂಗಳನಾದ ನೀನು ಜರಿಯುತ್ತಿರುವುದಾಶ್ಚರ್ಯವಲ್ಲವೆ? ॥೧೪॥ ಬ್ರಹ್ಮಾನಂದವೆಂಬ ಮಕರಂದವನ್ನು ಬಯಸುತ್ತಿರುವ ಮಹಾತ್ಮರ ಮನಸ್ಸೆಂಬ ಭ್ರಮರವು ಯಾವಭಗವಂತನ ಪಾದಪದ್ಮವನ್ನಾಶ್ರಯಿಸಿರುವುದೋ, ಯಾವನ ಪಾದಕಮಲವು ಧ್ಯಾನಮಾತ್ರದಿಂದಲೇ ಸಕಾಮರಾದ ಜನರ ಮನೋಭೀಷ್ಟಗಳನ್ನು ಸಲ್ಲಿಸುವುದೋ, ಅಂತಹ ಲೋಕಬಂಧುವಾದ ಭಗವಂತನಿಗೆ ನೀನು ದ್ರೋಹವನ್ನೆಣಿಸಬಹುದೆ? ॥೧೫॥

---

‡ವಿ. ಭಗವನ್ನಾಮದಂತೆಯೇ ಮಹಾತ್ಮರ ನಾಮೋಚ್ಚಾರಣಾದಿಗಳೂ ಪಾಪಗಳನ್ನು ಕಳೆಯುವುವು.

† (1) ವಿ॥ ಈಶ್ವರಾತ್ ಜ್ಞಾನ ಮನ್ವಿಚ್ಛೇತ್ ॥ ಎಂಬಂತೆ ಜ್ಞಾನದಾತನು ಶಿವನೆಂದರಿಯಬೇಕು.

(2) ವಿ. ಶ್ಲೋ॥ ಸನಕಾದಯೋ ರುದ್ರಶಿಷ್ಯಾ ಸ್ತೇಷಾ ಮನ್ಯೇಚ ಯೋಗಿನಃ । ಬ್ರಹ್ಮಶಿಷ್ಯ ಸ್ತಥಾ ರುದ್ರೋ ಬ್ರಹ್ಮಾ ನಾರಾಯಣಸ್ಯಚ ॥ ಎಂಬವಚನದಿಂದ ರುದ್ರನು ನಿನಗೆ ಗುರುವಾದಕಾರಣ ಆತನನ್ನು ದೂಷಿಸುವ ನೀನು ಗುರುದ್ರೋಹಿಯು.

‡ಕಿಂವಾಶಿವಾಖ್ಯ ಮಶಿವಂ ನವಿದುಸ್ತ್ವದನ್ಯೇ ಬ್ರಹ್ಮಾದಯಸ್ತ ಮವಕೀ
ರ್ಯ ಜಟಾಃ ಶ್ಮಶಾನೇ। ತನ್ಮಾಲ್ಯ ಭಸ್ಮನೃಕಪಾಲ್ಯವಸತ್ಪಿಶಾಚೈ ರ್ಯನ್ಮೂ

ರಿಕೊಂಡು, ಶ್ಮಶಾನೇ - ಶ್ಮಶಾನದಲ್ಲಿ ಪಿಶಾಚೈಃ - ಪಿಶಾಚಗಳೊಡನೆ, ಅವಸತ್-ನೆಲಸಿದನೋ, ತನ್ಮಾ... ಲೀ, ತತ್ - ಆ ಸ್ಮಶಾನದ, ಮಾಲ್ಯ-ಹೂಮಾಲೆಗಳು, ಭಸ್ಮ - ಬೂದಿಯು, ನೃಕಪಾಲ - ತಲೆಬುರುಡೆಗಳೂ, ಯಾವನಿಗಿರುವುವೋ, ತಂ - ಅವನನ್ನು, ಶಿವಾಖ್ಯಂ - ಶಿವನೆಂದು ಹೆಸರುಳ್ಳ, ಅಶಿವಂ - ಅಮಂಗಳನನ್ನಾಗಿ, ತ್ವದನ್ಯೇ - ನಿನಗಿಂತ ಬೇರೆಯಾದ, ಬ್ರಹ್ಮಾದಯಃ- ಬ್ರಹ್ಮ ಮೊದಲಾದವರು, ಕಿಂವಾ -ವಿಕೀ

ಜಡೆಗಳನ್ನು ಕೆದರಿಕೊಂಡು ಭೂತ ಪಿಶಾಚಾದಿಗಳಿಂದೊಡಗೂಡಿ ಸ್ಮಶಾನದಲ್ಲಿ ವಾಸಮಾಡುತ್ತಾ, ಆ ಸ್ಮಶಾನದಲ್ಲಿರುವ ಹೂಮಾಲೆಗಳನ್ನು, ಬೂದಿಯನ್ನೂ, ತಲೆಬುರುಡೆಗಳನ್ನೂ ಅಲಂಕರಿಸಿಕೊಳ್ಳುವುದರಿಂದ ಇವನು ಶಿವನೆಂದು ಹೆಸರಿಟ್ಟುಕೊಂಡಿದ್ದರೂ,

‡ (1) ವಿ. ॥ ಪರಬ್ರಹ್ಮನಾದ ವಿಷ್ಣುವೇ ಸರ್ವೋತ್ತಮನು, ಜಗತ್ಕಾರಣನು, ಉಪಾಸ್ಯನು, ಮೋಕ್ಷಪ್ರದನು, ಎಂದು ವೇದಾಂತಾರ್ಥಗಳನ್ನು ಬೋಧಿಸುವ ಈ ಪುರಾಣದಲ್ಲಿ, ರುದ್ರಾದಿಗಳು ಜೀವವಿಶೇಷರೆಂತಲೂ, ಕರ್ಮವಶರೆಂತಲೂ ಅಲ್ಲಲ್ಲಿ ಪ್ರತಿಪಾದಿಸುವುದಲ್ಲದೆ, ಮರಳಿ ಅನೇಕ ಸ್ಥಳಗಳಲ್ಲಿ "ಸಮಸ್ತಾತ್ಮನಿ ಅಹಂಬ್ರಹ್ಮಾಚ ಶರ್ವಶ್ಚ" ಇತ್ಯಾದಿ ವಾಕ್ಯಗಳಿಂದ ಶಿರುದ್ರನೇ ಸರ್ವೋತ್ತಮನು, ಜಗತ್ಕಾರಣನು, ಉಪಾಸ್ಯನು, ಎಂದು ಹೇಳಲ್ಪಡುವುದರಿಂದ, ಇದನ್ನು ಹೇಳಿದ ವ್ಯಾಸಮುನಿಯನ್ನು ಎಂತು ನಂಬಬೇಕು? ಎಂದರೆ:-ಕೆಲವು ಕಡೆಗಳಲ್ಲಿ ಇಂತು ತೋರಿದರೂ, ಆ ಅರ್ಥವು ರುದ್ರಶರೀರಾಂತರ್ಯಾಮಿಯಾದ ಪರಮಾತ್ಮನಲ್ಲಿ ಅನ್ವಯಿಸುವುದು. ಅಥವಾ ರುದ್ರಾದಿಗಳು ಭಗವದಾವೇಶಾವತಾರಿಗಳಾದ ಕಾರಣ ಭಗವದ್ಭಾವನೆಯಿಂದ ಹೇಳಲ್ಪಟ್ಟಿತೆಂದರಿಯಬೇಕು. ಅಥವಾ ಈ ಪುರಾಣವು ಮುನ್ನ ನಡೆದವೃತ್ತಾಂತವನ್ನು ಯಥಾಸ್ಥಿತವಾಗಿ ನಿರೂಪಿಸುವುದರಿಂದ, ಸತೀದೇವಿ ಮೊದಲಾದವರು ತಮ್ಮವರನ್ನ ಕೊಂಡಾಡಿದ ವಾಕ್ಯಕ್ರಮವೇ ಇಲ್ಲಿ ಸೇರಿಸಲ್ಪಟ್ಟಿರುವುದು. ಆದಕಾರಣ ವ್ಯಾಸಮುನಿಯಿಂದ ವಿರುದ್ಧಾರ್ಥವು ಹೇಳಲ್ಪಟ್ಟಿರುವುದಿಲ್ಲ. ಹಾಗಾದರೆ:- ಶ್ಲೋ॥ ನಾನ್ಯಂ ದೈವಂ ನಮಸ್ಕುರ್ಯಾನ್ನಾನ್ಯಂ ದೈವಂ ನಿರೀಕ್ಷಯೇತ್ ನಾನ್ಯಂ ಪ್ರಸಾದ ಮಾದದ್ಯಾನ್ನಾನ್ಯದಾಯತನಂ ವಿಶೇತ್ ॥ ಎಂಬ ಸಾತ್ವತ ತಂತ್ರ ಪ್ರಮಾಣಾನುಸಾರವಾಗಿ ದೇವತಾಂತರ ನಿಷೇಧವಲ್ಲದೆ, ಅನ್ಯದೇವತಾ ಭಕ್ತರ ದರ್ಶನ, ಸ್ಪರ್ಶನ, ಸಹವಾಸ, ಸಂಭಾಷಣಾದಿಗಳನ್ನು ಕೂಡ ಮಾಡಬಾರದೆಂದು ಹೇಳಿರುವುದರಿಂದ, ರುದ್ರಾದಿಗಳನ್ನು ಭಗವದ್ಭಾವನೆಯಿಂದುಪಾಸನೆ ಮಾಡುವುದೆಂತು ? ಎಂದರೆ:- ರಜಸ್ತಮಃ ಪ್ರಕೃತಿಗಳಾದ ಬ್ರಹ್ಮ ರುದ್ರಾದಿ ಜೀವರಲ್ಲಿ ಅಂತರ್ಯಾಮಿಯಾದ ಪರಮಾತ್ಮನ ಉಪಾಸನೆಯು ಸದ್ವಾರಕನೆಂತಲೂ, ಶುದ್ಧಸತ್ವ ಮಯನಾಗಿ ಉಪಾಸಕರ ರುಚ್ಯನುಸಾರವಾಗಿ ವಾಸುದೇವ, ಸಂಕರ್ಷಣ,ರಾಮ,ಕೃಷ್ಣಾದಿ ವ್ಯೂಹವಿಭವಾದಿ ಭೇದದಿಂದಮಾಡುವ ಉಪಾಸನೆಯು ಅದ್ವಾರಕವೆಂತಲೂ ಎರಡುವಿಧವು. ಇವುಗಳಲ್ಲಿ ಸದ್ವಾರಕೋಪಾಸನೆಗೆ ಕಾಮ್ಯಗಳು ಫಲವೆಂತಲೂ, ಅದ್ವಾರಕೋಪಾಸನೆಗೆ ಮೋಕ್ಷಕಾಮ್ಯಗಳೆರಡೂ ಫಲವೆಂತಲೂ ಹೇಳಲ್ಪಡುವುದು.ಮುಮುಕ್ಷುವಾದವನಭಕ್ತಿಯು ನಿಶ್ಚಲವಾಗಿರಬೇಕಾದುದಕ್ಕಾಗಿ ದೇವತಾಂತರವಂದನಾದಿಗಳು ನಿಷೇಧಿಸಲ್ಪಟ್ಟಿರುವುವು. ಬ್ರಹ್ಮಭಾವನೆಯಿಂದಿತರ ದೇವತೆಗಳನ್ನು ಉಪಾಸನಮಾಡುವುದೆಂದಿಗೂ ವಿರುದ್ಧವಲ್ಲ. "ನಹಿನಿಂದಾ ನಿಂದ್ಯಂ ನಿಂದಿತುಂ ಪ್ರವೃತ್ತಾ, ಕಿಂತುಸ್ತುತ್ಯಂ ಸ್ತೋತುಂ ಪ್ರವೃತ್ತಾ" ಎಂಬ ನ್ಯಾಯದಿಂದ ಸಾತ್ವತತಂತ್ರದಲ್ಲಿ ಹೇಳಿರುವ ಅನ್ಯಭಕ್ತ ದೂಷಣಾಗ ವಿಷ್ಣುಭಕ್ತರ ಉತ್ತಮತ್ವವನ್ನು ತಿಳಿಸುವುದೇ ಅಭಿಪ್ರಾಯವು. ಆದುದರಿಂದ ಸಾತ್ವತತಂತ್ರಕ್ಕೂ ಈ ಪುರಾಣಕ್ಕೂ ವಿರೋಧವಿಲ್ಲವೆಂದು ತಿಳಿಯಬೇಕು.

(2) ವಿ. ಶ್ಲೋ॥ ನಾರ್ಚಯೇತ್ ಪುರುಷೋ ಬ್ರಹ್ಮವಿಷ್ಣು ಶ್ರಿಯಂ ಗಿರಂ। ಯತೋ ನಮತಿ ಯೋ ರುದ್ರಂ ಕ ಏಷ ಪುರುಷಾರ್ಥಭಾಕ್ ॥ ರುದ್ರಾನುಗ್ರಹವಿಲ್ಲದೆ ಯಾವನೂ ಜ್ಞಾನವನ್ನೂ ಪುರುಷಾರ್ಥವನ್ನೂ ಪಡೆಯಲಾರನು.

ರ್ಧಭಿ ರ್ದಧತಿ ತಚ್ಚರಣಾವಸೃಷ್ಟಂ ॥೧೬॥ ಕರ್ಣೌ ಪಿಧಾಯ ನಿರಯಾ ದ್ಯದಕಲ್ಪ ಈಶೇ ಧರ್ಮಾವಿತ ರ್ಯಸೃಣಿಭಿ ರ್ನೃಭಿ ರಸ್ಯಮಾನೇ । ಛಿಂದ್ಯಾತ್ಪ್ರಸಹ್ಯ ರುಶತೀ ಮಸತೀಂ ಪ್ರಭುಂಶ್ಚೇ ಜ್ಜಿಹ್ವಾ ಮಸೂನಪಿ ತತೋ ವಿಸೃಜೇ ತ್ಸಧರ್ಮಃ ॥೧೭॥ ಅತ ಸ್ತವೋತ್ಪನ್ನ ಮಿದಂ ಕಳೇಬರಂ ನಧಾರಯಿಷ್ಯೇ ಶಿತಿಕಂಠ ಗರ್ಹಿಣಃ । ಜಗ್ಧಸ್ಯ ಮೋಹಾದ್ಧಿ ವಿಶುದ್ಧಿ ಮಂಧಸೋ ಜುಗುಪ್ಸಿತಸ್ಯೋದ್ಧರಣಂ ಪ್ರಚಕ್ಷತೇ ॥೧೮॥ ನ ವೇದವಾದಾ ನನುವರ್ತತೇ

---

ನವಿದುಃ - ತಿಳಿಯಲಿಲ್ಲ, ಯತ್ - ಯಾವಕಾರಣದಿಂದ, ಅವರು, ತಚ್ಚರಣಾವಸೃಷ್ಟಂ - ಆತನ ಪಾದದಿಂದ ಗಳಿತವಾದ ನಿರ್ಮಾಲ್ಯವನ್ನು, ಮೂರ್ಧಭಿಃ - ಶಿರಸ್ಸುಗಳಿಂದ, ಧಧತಿ - ಧರಿಸುವರೋ ॥೧೬॥ ಧರ್ಮಾವಿತರಿ - ಧರ್ಮರಕ್ಷಕನಾದ, ಈಶೇ - ಸ್ವಾಮಿಯು, ಅಸೃಣಿಭಿಃ - ನಿರಂಕುಶರಾದ, ನೃಭಿಃ - ಪುರುಷರಿಂದ, ಅಸ್ಯಮಾನೇ - ದೂಷಿಸಲ್ಪಡುವಾಗ, ಯದಕಲ್ಪಃ - ಅಸಮರ್ಥನಾಗಿದ್ದರೆ, ಕರ್ಣೌ - ಕಿವಿಗಳನ್ನು, ಪಿಧಾಯ - ಮುಚ್ಚಿಕೊಂಡು, ನಿರಯಾತ್ - ಹೊರಟುಹೋಗಬೇಕು, ಕಲ್ಪಶ್ಚೇತ್ - ಸಮರ್ಥನಾಗಿದ್ದರೆ, ರುಶತೀಂ - ಅಮಂಗಳವಾಗಿ ನುಡಿಯುವ, ಅಸತೀಂ - ದುಷ್ಟವಾದ, ಜಿಹ್ವಾಂ - ನಾಲಗೆಯನ್ನು, ಪ್ರಸಹ್ಯ - ಬಲಾತ್ಕಾರವಾಗಿ, ಛಿಂದ್ಯಾತ್ - ಕತ್ತರಿಸಬೇಕು, ತತಃ - ಬಳಿಕ, ಅಸೂನಪಿ - ತನ್ನ ಪ್ರಾಣಗಳನ್ನು, ವಿಸೃಜೇತ್ - ಬಿಡಬೇಕು, ಸಃ - ಅದು, ಧರ್ಮಃ - ಧರ್ಮವು ॥೧೭॥ ಅತಃ - ಆದುದರಿಂದ ಶಿತಿಕಂಠಗರ್ಹಿಣಃ - ಶಿವದೂಷಕನಾದ, ತವ - ನಿನ್ನಿಂದ, ಉತ್ಪನ್ನಂ - ಜನಿಸಿದ, ಇದಂಕಳೇಬರಂ - ಈ ಶರೀರವನ್ನು, ನಧಾರಯಿಷ್ಯೇ - ಧರಿಸುವುದಿಲ್ಲ, ಮೋಹಾತ್ - ಅಜ್ಞಾನದಿಂದ, ಜಗ್ಧಸ್ಯ - ತಿನ್ನಲ್ಪಟ್ಟ, ಜುಗುಪ್ಸಿತಸ್ಯ - ದೂಷಿತವಾದ, ಅಂಧಸಃ - ಅನ್ನದ, ಉದ್ಧರಣಮೇವ - ವಮನವೇ, ವಿಶುದ್ಧಿಂ - ಪರಿಶುದ್ಧಿಯನ್ನಾಗಿ, ಪ್ರಚಕ್ಷತೇಹಿ - ಹೇಳುವರಷ್ಟೆ ॥೧೮॥

ದೇವಮನುಷ್ಯಯೋಃ - ದೇವತೆಗಳ ಮನುಷ್ಯರ, ಗತಿಃ - ಸಂಚಾರವು, ಯಥಾ - ಹೇಗೆ, ಪೃಥಕ್ - ಭಿನ್ನವೋ, ಹಾಗೆ, ಸ್ವಏವ ಲೋಕೇ - ತನ್ನಲ್ಲಿಯೇ, ರಮತಃ - ಕ್ರೀಡಿಸುವ, ಮಹಾಮುನೇಃ - ಪೂರ್ಣವಿರಕ್ತನ, ಮತಿಃ - ಬುದ್ಧಿಯು, ವೇದವಾದಾನ್ - ವೇದೋಕ್ತಗಳಾದ ವಿಧಿನಿಷೇಧಗಳನ್ನು, ನಾನು

---

ಅಶಿವನೇ ಸರಿ, ಎಂದು ಪರಶಿವನನ್ನು ಜರೆದೆಯಲ್ಲಾ ! ನಿನಗಿಂತಲೂ ಶ್ರೇಷ್ಠರೆನಿಸಿರುವ ಬ್ರಹ್ಮಾದಿದೇವತೆಗಳೆಲ್ಲರೂ ಪಾದಕಿಂಕರರಾಗಿ, ಆತನ ಪಾದಕಮಲದಿಂದ ಜಾರಿದ ನಿರ್ಮಾಲ್ಯವನ್ನು ನಿರಂತರವೂ ತಲೆಯಲ್ಲಿ ಧರಿಸುತ್ತಿರುವರಾದುದರಿಂದ,ಅವರೇಕೆ ಇದನ್ನು ತಿಳಿಯಲಿಲ್ಲ ? ॥೧೬॥ ಯಾರಾದರೆ, ಧರ್ಮರಕ್ಷಕನಾದ ಸ್ವಾಮಿಯನ್ನು ನಿರಂಕುಶರಾದ ದುರಾತ್ಮರು ದೂಷಿಸುವುದನ್ನುಕೇಳುವರೋ, ಅವರು ಶಕ್ತಿಯಿಲ್ಲದವರಾದಲ್ಲಿ ಕಿವಿಗಳನ್ನು ಮುಚ್ಚಿಕೊಂಡು ಹರಿಯನ್ನು ಸ್ಮರಿಸುತ್ತಾ ತೆರಳಬೇಕು. ಸಮರ್ಥರಾಗಿದ್ದಲ್ಲಿ ಅಮಂಗಳವಾಗಿ ನುಡಿಯುತ್ತಿರುವ ಆ ದೂಷಕನ ನಾಲಗೆಯನ್ನು ತತ್ಕ್ಷಣದಲ್ಲಿಯೇ ಛೇದಿಸಬೇಕಲ್ಲದೆ ತಾವೂ ಪ್ರಾಣತ್ಯಾಗವನ್ನು ಮಾಡಬೇಕು. ಇದೇ ಧರ್ಮಸೂಕ್ಷ್ಮವು ॥೧೭॥ ತಿಳುವಳಿಕೆಯಿಲ್ಲದೆ, ಜುಗುಪ್ಸಿತವಾದ ಅನ್ನವನ್ನುಂಡವನಿಗೆ ಅದನ್ನು ವಮನಮಾಡುವುದೇ ಶುದ್ಧಿಯೆಂದು ಹೇಳಲ್ಪಡುವುದರಿಂದ, ಶಿವದೂಷಕನಾದ ನಿನ್ನಿಂದ ಜನಿಸಿರುವ ಈ ದೇಹವನ್ನು ನಾನು ತೊರೆದುಬಿಡುವೆನು ॥೧೮॥ ಪರಶಿವನು ಕರ್ಮಹೀನನೆಂತಲೂ, ಅಪರಿಶುದ್ಧನೆಂತಲೂ ಹೀಯಾಳಿಸಿದೆ. ಮಾನವಸಂಚಾರಕ್ಕೆ ಭೂಮಿಯೂ, ದೇವಸಂಚಾರಕ್ಕೆ ಆಕಾಶವೂ, ಬೇರೆಬೇರೆ

ಮತಿ ಸ್ಸ್ವ ಏವ ಲೋಕೇ ರಮತೋ ಮಹಾ ಮುನೇಃ। ಯಥಾಗತಿ ರ್ದೇವ ಮನುಷ್ಯಯೋಃ ಪೃಥಕ್ ಸ್ವ ಏವ ಧರ್ಮೇ ನ ಪರಂ ಕ್ಷಿಪೇತ್ ಸ್ಥಿತಃ॥೧೯॥ ಕರ್ಮ ಪ್ರವೃತ್ತಂಚ ನಿವೃತ್ತ ಮಪ್ಯೃತಂ ವೇದೇ ವಿವಿಚ್ಯೋಭಯಲಿಂಗ ಮಾಶ್ರಿತಂ । ವಿರೋಧಿ ತದ್ಯೌಗ ಪದ್ಯೈಕ ಕರ್ತರಿ ದ್ವಯಂ ತಥಾ ಬ್ರಹ್ಮಣಿ ಕರ್ಮ ನರ್ಛತಿ ॥೨೦॥ ಮಾ ವಃ ಪದವ್ಯಃ ಪಿತ ರಸ್ಮದಾಶ್ರಿತಾ ಯಾ ಯಜ್ಞ ಶಾಲಾಸು ನಧೂಮವರ್ತ್ಮಭಿಃ । ತದನ್ನತೃಪ್ತೈ ರಸುಭಿ ರ್ನಿರೀಡಿತಾ ಅವ್ಯಕ್ತ ಲಿಂಗಾ ಅವಧೂತ ಸೇವಿತಾಃ ॥೨೧॥ ನೈತೇನ ದೇಹೇನ ಹರೇ ಕೃತಾಗಸೋ

---

ವರ್ತತೇ - ಅನುಸರಿಸುವುದಿಲ್ಲ, ಸ್ವಧರ್ಮಏವ - ತನ್ನಧರ್ಮದಲ್ಲಿಯೇ, ಸ್ಥಿತಃ - ಇರುವವನು, ಪರಂ - ಇತರ ಧರ್ಮವನ್ನಾಗಲಿ, ಇತರರನ್ನಾಗಲಿ, ನಕ್ಷಿಪೇತ್ - ದೂಷಿಸಬಾರದು ॥೧೯॥ ಪ್ರವೃತ್ತಂ - ಅಗ್ನಿಹೋತ್ರಾದಿರೂಪವೂ, ನಿವೃತ್ತಂ - ಶಮದಮಾದಿ ರೂಪವೂ ಆದ, ಕರ್ಮಾಪಿ - ಎರಡು ಕರ್ಮಗಳೂ, ಋತಂ - ಸತ್ಯವೇ, ವೇದೇ - ವೇದದಲ್ಲಿ, ವಿವಿಚ್ಯ - ಬೇರೆಯಾಗಿ, ಉಭಯಲಿಂಗಂ - ಪ್ರವೃತ್ತಿ ನಿವೃತ್ತಿ ಚಿಹ್ನಗಳುಳ್ಳ ಎರಡು ಕರ್ಮಗಳೂ, ಆಶ್ರಿತಂ - ಆಶ್ರಯಿಸಿರುವುವು, ತದ್ದ್ವಯಂ - ಆ ಎರಡು ಕರ್ಮಗಳು, ಯೌಗ...ರಿ, ಯೌಗಪದ - ಏಕಕಾಲದಲ್ಲಿ, ಏಕಕರ್ತರಿ - ಒಬ್ಬ ಪುರುಷನಲ್ಲಿ, ವಿರೋಧಿ - ಸೇರತಕ್ಕವಲ್ಲ, ತಥಾ - ಹಾಗೆಯೇ, ಬ್ರಹ್ಮಣಿ - ಪರಮಾತ್ಮನಲ್ಲಿ, ಕರ್ಮ - ಯಾವ ಕರ್ಮವೂ, ನರ್ಛತಿ - ನೆಲಸುವುದಿಲ್ಲ ॥೨೦॥ ಹೇಪಿತಃ - ಎಲೈ ತಂದೆಯೆ! ಯಾಃ - ಯಾವುವು, ಯಜ್ಞಶಾಲಾಸು - ಯಜ್ಞಶಾಲೆಗಳಲ್ಲಿ, ತದನ್ನತೃಪ್ತೈಃ - ಯಜ್ಞ ಭೋಜನದಿಂದ ತೃಪ್ತರಾದ, ಧೂಮವರ್ತ್ಮಭಿಃ - ಕರ್ಮಠರಿಂದ, ನೇಡಿತಾಃ- ಹೊಗಳಲ್ಪಡಲಾರವೊ, ಅಂತಹಅವ್ಯಕ್ತಲಿಂಗಾಃ-ಅಕಾರಣಗಳಾದ,ಅವಧೂತಸೇವಿತಾಃ-ಜ್ಞಾನಿಗಳಿಂದ ಸೇವಿಸಲ್ಪಡುವ, ಅಸ್ಮದಾಶ್ರಿತಾಃ - ನಮ್ಮನ್ನಾಶ್ರಯಿಸಿರುವ, ಪದವ್ಯಃ - ಅಣಿಮಾದ್ಯೈಶ್ವರ್ಯಗಳು, ವಃ - ನಿಮಗೆ, ಮಾ - ಇಲ್ಲ ॥೨೧॥ ಹರೇ - ಈಶ್ವರನಲ್ಲಿ, ಕೃತಾಗಸಃ - ಅಪರಾಧವನ್ನು ಮಾಡಿದ,

---

ಯಾದ ನೆಲೆಯಾಗಿರುವಂತೆ, ಪರಮವಿರಕ್ತನಾದ ಆತ್ಮಾರಾಮನ ಬುದ್ಧಿಯು ವಿಧಿ ನಿಷೇಧರೂಪಗಳಾದ ವೇದ ವಾದಗಳಿಗೊಳಗಾಗುವುದಿಲ್ಲ. ಸ್ವಧರ್ಮ ನಿರತನಾದವನು ಇತರ ಧರ್ಮವನ್ನಾಗಲಿ, ಇತರ ಪುರುಷರನ್ನಾಗಲಿ ಯಾವಾಗಲೂ ದೂಷಿಸಬಾರದು ॥೧೯॥ ವೇದದಲ್ಲಿಅಗ್ನಿಹೋತ್ರಾದಿರೂಪವಾದುದುಪ್ರವೃತ್ತಿಧರ್ಮನೆಂತಲೂ,ಶಮದಮಾದಿರೂಪವಾದುದು ನಿವೃತ್ತಿ ಧರ್ಮವೆಂತಲೂ, ಎರಡುವಿಧವಾಗಿ ಬೇರೆಬೇರೆ ಪ್ರತಿಪಾದಿಸಲ್ಪಟ್ಟಿರುವುವು. ಅವೆರಡಕ್ಕೂ ಏಕಕಾಲದಲ್ಲಿ ಒಬ್ಬನೇ ಅಧಿಕಾರಿಯಾಗಲಾರನು. ಪರಬ್ರಹ್ಮಸ್ವರೂಪನಾದ ಪರಮೇಶ್ವರನಲ್ಲಾದರೆ ಯಾವಕರ್ಮವೂ ಸೋಕಲಾರದು. ಆದಕಾರಣ ಪ್ರವೃತ್ತಿಧರ್ಮಾಸಕ್ತರು ನಿವೃತ್ತಿ ಧರ್ಮಗಳನ್ನೂ, ನಿವೃತ್ತಿಧರ್ಮಾಸಕ್ತರು ಪ್ರವೃತ್ತಿಧರ್ಮಗಳನ್ನೂ ಉಳಿದಲ್ಲಿ ದೋಷವಿಲ್ಲ. ಅಂತೆಯೇ ನಿರ್ಲಿಪ್ತನಾದ ಪರಶಿವಮೂರ್ತಿಯು ಉಭಯಧರ್ಮಗಳನ್ನುಳಿದರೂ ದೋಷವಿಲ್ಲ ॥೨೦॥ ಎಲೈ ತಂದೆಯೆ! ಬೂದಿಬೊಳಕನೆಂತಲೂ ದಿಗಂಬರನೆಂತಲೂ, ಭಾಗ್ಯಹೀನನೆಂತಲೂ ನನ್ನ ಪತಿಯನ್ನು ದೂಷಿಸಿದೆ. ನಿಮ್ಮ ಭೋಗಗಳು ಯಜ್ಞಶಾಲೆಗಳಲ್ಲಿ ಭೋಜನದಿಂದ ತೃಪ್ತರಾದ ಕರ್ಮಜಡರಾದ ಹೊಟ್ಟೆಬಾಕರು ಮಾತ್ರಹೊಗಳತಕ್ಕವುಗಳಾಗಿರುವುವು. ನಮ್ಮನ್ನಾಶ್ರಯಿಸಿರುವ ಅಣಿಮಾದ್ಯೈಶ್ವರ್ಯಗಳು ಜ್ಞಾನಿಗಳಿಂದ ಸೇವಿತಗಳಾಗಿಯೂ, ಅಕ್ಷಯಗಳಾಗಿಯೂ ಇರುವುವು. ಆದುದರಿಂದ 'ನಾನು

ದೇಹೋದ್ಭವೇನಾಲಮಲಂ ಕುಜನ್ಮನಾ । ವ್ರೀಡಾ ಮಮಾಭೂತ್ಕುಜ
ನಪ್ರಸಂಗತಃ ತಜ್ಜನ್ಮ ಧಿಗ್ಯೋ ಮಹತಾಮವದ್ಯಕೃತ್ ॥೨೨॥ ಗೋತ್ರಂ
ತ್ವದೀಯಂ ಭಗವಾನ್ ವೃಷಧ್ವಜೋ ದಾಕ್ಷಾಯಣೀತ್ಯಾಹ ಯದಾ ಸುದು
ರ್ಮನಾಃ । ವ್ಯಪೇತನರ್ಮಸ್ಮಿತ ಮಾಶು ತದ್ಧ್ಯಹಂ ವ್ಯುತ್ಸ್ರಕ್ಷ್ಯ ಏತ
ತ್ಕುಣಪಂ ತ್ವದಂಗಜಂ ॥೨೩॥ ಮೈತ್ರೇಯಃ ॥ ಇತ್ಯಧ್ವರೇ ದಕ್ಷಮನೂ
ದ್ಯ ಶತ್ರುಹನ್ । ಕ್ಷಿತಾವುದೀಚೀಂ ನಿಷಸಾದ ಶಾಂತವಾಕ್ । ಸ್ಪೃಷ್ಟ್ವಾ

ನಿನ್ನ, ದೇಹೋದ್ಭವೇನ - ಶರೀರದಿಂದುಂಟಾದ, ಕುಜನ್ಮನಾ - ದುಷ್ಟಜನ್ಮವುಳ್ಳ, ಏತೇನ ದೇಹೇನ - ಈ ಶರೀರದಿಂದ, ಅಲಮಲಂ - ಸಾಕುಸಾಕು, ಕುಜನಪ್ರಸಂಗತಃ - ದುಷ್ಟನಾದ ನಿನ್ನ ಸಂಬಂಧದಿಂದ, ಮಮ - ನನಗೆ, ವ್ರೀಡಾ - ನಾಚಿಕೆಯು, ಅಭೂತ್ - ಆಯಿತು, ಯಃ - ಯಾವನು, ಮಹತಾಂ - ಮಹಾತ್ಮರಿಗೆ, ಅವದ್ಯಕೃತ್ - ಅಪರಾಧಿಯೋ, ತಜ್ಜನ್ಮ - ಅಂತವನಿಂದುಂಟಾದ ಜನ್ಮವನ್ನು, ಧಿಕ್ - ನಿಂದಿಸು ॥೨೨॥

ಭಗವಾನ್ - ಭಗವಂತನಾದ, ವೃಷಧ್ವಜಃ - ಪರಶಿವನು, ದಾಕ್ಷಾಯಣಿ - ಎಲೌ ದಕ್ಷಪುತ್ರಿಯೆ! ಇತಿ - ಎಂದು, ಯದಾ - ಯಾವಾಗ, ತ್ವದೀಯಂ - ನಿನ್ನ, ಗೋತ್ರಂ - ವಂಶದ ಸಂಬಂಧವನ್ನು, ಆಹ - ಹೇಳುವನೋ, ತದಾ - ಆಗ, ಆಶು - ಬೇಗನೆ, ವ್ಯಪೇತನರ್ಮಸ್ಮಿತಂ, ವ್ಯಪೇತ - ಅಳಿದುಹೋದ, ನರ್ಮ - ಪರಿಹಾಸವು, ಸ್ಮಿತಂ - ಮಂದಹಾಸವು ಉಂಟಾಗುವಂತೆ, ಸುದುರ್ಮನಾಃ - ದುಃಖಿತವಾದ ಮನಸ್ಸುಳ್ಳವಳು, ಭವಾಮಿ - ಆಗುವೆನು, ತತ್ - ಆದುದರಿಂದ, ಅಹಂ - ನಾನು, ತ್ವದಂಗಜಂ - ನಿನ್ನ ಶರೀರದಿಂದ ಜನಿಸಿದ, ಏತತ್ಕುಣಪಂ - ಈ ಕಳೇಬರವನ್ನು, ವ್ಯುತ್ಸ್ರಕ್ಷ್ಯೇ - ತೊರೆಯುವೆನು ॥೨೩॥ ಮೈತ್ರೇಯನು ಹೇಳುತ್ತಾನೆ, ಹೇ ಶತ್ರುಹನ್ - ಎಲೈ ಶತ್ರುಸೂದನನಾದ ವಿದುರನೆ! ಅಧ್ವರೇ - ಯಜ್ಞದಲ್ಲಿ, ಇತಿ - ಇಂತು, ದಕ್ಷಂ - ದಕ್ಷನನ್ನು, ಅನುವಾದ್ಯ - ಅನುವಾದಮಾಡಿ, ಜಲಂ ಸ್ಪೃಷ್ಟ್ವಾ - ಆಚಮನಮಾಡಿ, ಪೀತದುಕೂಲ ಸಂವೃತಾ - ಪೀತಾಂಬರವನ್ನು ಮುಸುಕಿಟ್ಟು, ದೃಶಃ - ಕಣ್ಣುಗಳನ್ನು, ನಿಮೀಲ್ಯ - ಮುಚ್ಚಿಕೊಂಡು, ಶಾಂತವಾಕ್ - ಮೌನವನ್ನು ಧರಿಸಿ, ಕ್ಷಿತೌ - ಭೂಮಿಯಲ್ಲಿ, ಉದೀಚೀಂ - ಉತ್ತರಾಭಿಮುಖಿಯಾಗಿ, ನಿಷಸಾದ - ಕುಳಿತುಕೊಂಡಳು, ಯೋಗಪಥಂಚ - ಯೋಗಮಾರ್ಗವನ್ನೂ,

ಮಹಾಭೋಗಿಯು ಶಿವನು ದರಿದ್ರನು" ಎಂಬ ದುರಹಂಕಾರವನ್ನು ಬಿಡು ॥೨೨॥ ಇನ್ನು ಬಹಳ ಮಾತಾಡುವುದೇಕೆ? ಶಿವದ್ವೇಷಿಯಾದ ನಿನ್ನಿಂದ ಜನಿಸಿರುವ ಈ ದುರ್ಜನ್ಮವು ನನಗೆ ಸಾಕು. ದುರಾತ್ಮನಾದ ನಿನ್ನ ಸಂಬಂಧದಿಂದ ನನಗೆ ನಾಚಿಕೆಯಾಯಿತು. ಮಹಾತ್ಮರಿಗೆ ಅಪರಾಧವನ್ನೆಣಿಸಿದ ದುಷ್ಟನಿಂದುಂಟಾದ ದೇಹವನ್ನು ನಿಂದಿಸಬೇಕಲ್ಲವೆ? ॥ ಅಲ್ಲದೆ ಭಗವಂತನಾದ ಪರಶಿವಮೂರ್ತಿಯು ಪರಿಹಾಸಾದಿಗಳಲ್ಲಿ ವಿನೋದಕ್ಕಾದರೂ 'ದಾಕ್ಷಾಯಣಿ' ಎಂದು ಕರೆದ ಕೂಡಲೆ ನಿನ್ನ ಸಂಬಂಧವೆಂಬುದು, ಸ್ಮರಣೆಗೆಬಂದು, ಪರಿಹಾಸ, ಮಂದಹಾಸ, ವಿಲಾಸಾದಿಗಳೆಲ್ಲವೂ ನಾಶವಾಗಿ, ನಾನು ಮನಸ್ಸಿನಲ್ಲಿಯೇ ದುಃಖಗೊಳ್ಳಬೇಕಾಗುವುದರಿಂದ ನಿನ್ನ ಶರೀರದಿಂದುಂಟಾಗಿರುವ ಈ ದುಷ್ಟಕಳೇಬರವನ್ನೀಗಲೇ ತೊರೆದುಬಿಡುವೆನು, ಎಂದು ಹೇಳಿದಳು ॥೨೩॥ ಅಯ್ಯಾ ವಿದುರನೆ! ಇಂತು ಮಹಾಪತಿವ್ರತೆಯಾದ ಆ ಸತೀದೇವಿಯು ದಕ್ಷನಿಗುತ್ತರವನ್ನಿತ್ತು ಮನನೊಂದು ಮೌನವನ್ನು ಧರಿಸಿ, ಆಚಮನವನ್ನು ಮಾಡಿ, ಉತ್ತರಾಭಿಮುಖಿಯಾಗಿ ನೆಲದಮೇಲೆ ಕುಳಿತು, ಪೀತಾಂಬರವನ್ನು ಮುಸುಕಿಟ್ಟು

ಜಲಂ ಪೀತದುಕೂಲ ಸಂವೃತಾ ನಿಮೀಲ್ಯ ದೃಗ್ಯೋಗಪಥಂ ಸಮಾವಿಶತ್ ॥೨೪॥ ಕೃತ್ವಾ ಸಮಾನಾವನಿಲೌ ಜಿತಾಸನಾ ಸೋದಾನ ಮುತ್ಥಾಪ್ಯ ಚ ನಾಭಿಚಕ್ರತಃ । ಶನೈರ್ಹೃದಿ ಸ್ಥಾಪ್ಯ ಧಿಯೋರಸಿ ಸ್ಥಿತಂ ಕಂಠಾದ್ಭ್ರುವೋರ್ಮಧ್ಯ ಮನಿಂದಿತಾನಯತ್ ॥೨೫॥ ಏವಂ ಸ್ವದೇಹಂ ಮಹತಾಂ ಮಹೀಯಸಾ ಮುಹು ಸ್ಸಮಾರೋಪಿತ ಮಂಕ ಮಾದರಾತ್ । ಜಿಹಾಸತೀ ದಕ್ಷರುಷಾ ಮನಸ್ವಿನೀ ದಧಾರ ಗಾತ್ರೇಷ್ವನಿಲಾಗ್ನಿಧಾರಣಾಂ ॥೨೬॥ ತತಸ್ಸ್ವಭರ್ತುಶ್ಚರಣಾಂಬುಜಾಸವಂ ಜಗದ್ಗುರೋಶ್ಚಿಂತಯತೀ ನಚಾಪರಂ।

---

**ಸಮಾವಿಶತ್** - ಹೊಕ್ಕಳು ॥೨೪॥ **ಜಿತಾಸನಾ** - ಆಸನ ಸಿದ್ಧಿಯನ್ನು ಪಡೆದ, ಅನಿಂದಿತಾ - ಶ್ಲಾಘ್ಯಳಾದ **ಸಾ-ಆ**ಸತಿಯು, ಅನಿಲೌ - ಪ್ರಾಣ, ಅಪಾನವಾಯುಗಳನ್ನು, ಸಮಾನೌ-ಏಕರೂಪಗಳನ್ನಾಗಿ, **ಕೃತ್ವಾ** - **ಮಾಡಿ**, ಉದಾನಂ - ಉದಾನವಾಯುವನ್ನು, ನಾಭಿಚಕ್ರತಃ - ನಾಭಿಚಕ್ರದಿಂದ, ಉತ್ಥಾಪ್ಯ - ಎಬ್ಬಿಸಿ, ಶನೈಃ - ಮೆಲ್ಲನೆ, ಧಿಯಾಸಹ - ಬುದ್ಧಿಯೊಡನೆ ಹೃದಿ - ಹೃದಯದಲ್ಲಿ, ಸ್ಥಾಪ್ಯ - ನೆಲೆಗೊಳಿಸಿ, ಉರಸಿ-ಎದೆಯಲ್ಲಿ, ಸ್ಥಿತಂ - ಇರುವುದನ್ನು, ಕಂಠಾತ್ - ಕಂಠಮಾರ್ಗದಿಂದ, ಭ್ರುವೋಃ- ಹುಬ್ಬುಗಳ, ಮಧ್ಯಂ-ಮಧ್ಯವನ್ನು, ಅನಯತ್ - ಹೊಂದಿಸಿದಳು ॥೨೫॥ ಮನಸ್ವಿನೀ - ಉತ್ತಮ ಮನಸ್ಸುಳ್ಳ ಸತೀದೇವಿಯು, ಏವಂ - ಇಂತು, ಮಹತಾಂ - ಮಹಾತ್ಮರಲ್ಲಿ, ಮಹೀಯಸಾ - ಪೂಜ್ಯನಾದ ಶಿವನಿಂದ, ಮುಹುಃ - ಬಾರಿಬಾರಿಗೂ, ಆದರಾತ್ - ಪ್ರೀತಿಯಿಂದ, ಅಂಕಂ - ತೊಡೆಯನ್ನು, ಆರೋಪಿತಂ - ಹತ್ತಿಸಲ್ಪಟ್ಟ, ಸ್ವದೇಹಂ - ತನ್ನಶರೀರವನ್ನು, ದಕ್ಷರುಷಾ - ದಕ್ಷನ ಮೇಲಣಕೋಪದಿಂದ, ಜಿಹಾಸತೀ - ಬಿಡಲೆಳಸಿದವಳಾಗಿ, **ಅನಿಲಾಗ್ನಿ ಧಾರಣಾಂ - ಅ**ನಿಲಾಗ್ನಿ ಧಾರಣೆಯೆಂಬ ಯೋಗಧಾರಣೆಯನ್ನು, ಗಾತ್ರೇಷು - ಶರೀರದಲ್ಲಿ, ದಧಾರ - ಧರಿಸಿದಳು ॥೨೬॥

ಹತಕಲ್ಮಷಾ - **ಪಾಪ**ರಹಿತಳಾದ, ಸತೀ - ದಾಕ್ಷಾಯಣಿಯು, ತತಃ - ಬಳಿಕ, ಜಗದ್ಗುರೋಃ - **ಲೋಕ**ಗುರುವಾದ, ಸ್ವಭರ್ತುಃ -- ತನ್ನಗಂಡನ, ಚರಣಾಂಬುಜಾಸವಂ- **ಪಾದಕ**ಮಲ ಮಕರಂದವನ್ನು **ಚಿಂ**ತಯತೀ - ಧ್ಯಾನಿಸುತ್ತಾ, ಅಪರಂ - ಮತ್ತಾವುದನ್ನೂ, ನದದರ್ಶ - ಕಾಣಲಿಲ್ಲ, ದೇಹೋಽಪಿ - ಆಕೆ

---

ಕೊಂಡು, ಕಣ್ಣುಗಳನ್ನು ಮುಚ್ಚಿ ಯೋಗಮಾರ್ಗವನ್ನವಲಂಬಿಸಿದಳು ॥೨೪॥ ಬಳಿಕ ಆಸನಸ್ಥೈರ್ಯವನ್ನು ಪಡೆದು, ಮೇಲ್ಗಡೆಗೂ, ಕೆಳಗಡೆಗೂ ಸಂಚರಿಸುವ ಪ್ರಾಣ, ಅಪಾನಗಳೆಂಬ ವಾಯುಗಳನ್ನು ತಡೆದು ಸಮಾನವಾದ ಗತಿಯಿಂದ ಮಣಿಪೂರವೆಂಬ ನಾಭೀಚಕ್ರದಲ್ಲಿ ನಿಲ್ಲಿಸಿ, ಆ ನಾಭೀಚಕ್ರದಿಂದ ಉದಾನವೆಂಬ ವಾಯುವನ್ನೆಬ್ಬಿಸಿ ಅನಾಹತಚಕ್ರವೆಂಬಹೃದಯಸ್ಥಾನದಲ್ಲಿ ಬುದ್ಧಿಯೊಡನೆ ಜತೆಗೊಳಿಸಿ,ಬಳಿಕವಿಶುದ್ಧಚಕ್ರವೆಂಬ ಕಂಠದ್ವಾರದಿಂದ ಆಜ್ಞಾಚಕ್ರವೆಂಬ ಭ್ರೂಮಧ್ಯವನ್ನು ಸೇರಿಸಿದಳು ॥೨೫॥ ಇಂತು ಆ ಸತೀದೇವಿಯು ಮಹಾತ್ಮರಲ್ಲಿ ಮಹತ್ತಮನೆನಿಸಿರುವ ಪರಶಿವಮೂರ್ತಿಯಿಂದ ನಿರಂತರವೂ ಸಾದರವಾಗಿ ತೊಡೆಯಮೇಲೆಕುಳ್ಳಿರಿಸಿಕೊಳ್ಳಲ್ಪಡುತ್ತಿದ್ದ ತನ್ನದೇಹವನ್ನುತೊರೆಯಬೇಕೆಂದು ನಿಶ್ಚಯಿಸಿ, ಆ ದಕ್ಷನಮೇಲಣ ಕೋಪದಿಂದ ಶರೀರದಲ್ಲಿ ಅಗ್ನಿಜ್ವಾಲೆಯನ್ನೆಬ್ಬಿಸುವ 'ಅನಿಲಾಗ್ನಿಧಾರಣೆ'' ಯೆಂಬ ಧಾರಣಾವಿಶೇಷವನ್ನು ಅವಲಂಬಿಸಿದಳು ॥೨೬॥ ಬಳಿಕ ಪಾಪರಹಿತಳಾದ ಆ ದಾಕ್ಷಾಯಣಿಯು ಜಗದ್ಗುರುವಾದ ತನ್ನ ಪತಿಯ ಪಾದಕಮಲಮಕರಂದವನ್ನು ಧ್ಯಾನಿಸುತ್ತಾ, ಮತ್ತಾವುದನ್ನೂ ಗಮನಿಸದೆ ಸಮಾಧಿನಿಷ್ಠಳಾಗಲು, ಆಕೆಯ

ದದರ್ಶ ದೇಹೋ ಹತಕಲ್ಮಷಾ ಸತೀ ಸದ್ಯಃ ಪ್ರಜಜ್ವಾಲ ಸಮಾಧಿನಾಗ್ನಿನಾ ॥೨೭॥ ತತ್ಪಶ್ಯತಾಂ ಖೇ ಭುವಿ ಚಾಽದ್ಭುತಂ ಮಹ ದ್ಧಾಹೇತಿ ವಾದಸ್ಸುಮಹಾನಜಾಯತ। ಹಂತ! ಪ್ರಿಯಾ ದೈವತ ಮಸ್ಯ ದೇವೀ ಜಹಾವಸೂನ್ ಕೇನ ಸತೀ ಪ್ರಕೋಪಿತಾ ॥೨೮॥ ಅಹೋ! ಅನಾತ್ಮ್ಯಂ ಮಹದಸ್ಯ ಪಶ್ಯತ ಪ್ರಜಾಪತೇ ರ್ಯಸ್ಯ ಚರಾಚರಂ ಪ್ರಜಾಃ। ಜಹಾ ವಸೂನ್ ಯದ್ವಿಮತಾತ್ಮಜಾ ಸತೀ ಮನಸ್ವಿನೀ ಮಾನ ಮಭೀಕ್ಷ್ಣ ಮರ್ಹತಿ ॥೨೯॥ ಸೋಽಯಂ ದುರ್ಮರ್ಷಹೃದಯೋ ಬ್ರಹ್ಮಬಂಧು ರ್ಲೋಕೇಽಪಕೀರ್ತಿಂ ಮಹತೀಂ

---

ಯ ಶರೀರವೂ, ಸದ್ಯಃ - ಕೂಡಲೆ, ಸಮಾಧಿನಾ- ಸಮಾಧಿಯಿಂದುಂಟಾದ, ಅಗ್ನಿನಾ - ಯೋಗಾಗ್ನಿಯಿಂದ, ಪ್ರಜಜ್ವಾಲ - ಸುಟ್ಟುಹೋಯಿತು ॥೨೭॥ ಖೇ - ಅಂತರಿಕ್ಷದಲ್ಲಿಯೂ, ಭುವಿಚ - ಭೂಮಿಯಲ್ಲಿಯೂ, ಅದ್ಭುತಂ - ಆಶ್ಚರ್ಯಕರವಾದ, ತತ್ - ಅದನ್ನು, ಪಶ್ಯತಾಂ- ನೋಡುವವರಲ್ಲಿ, ಹಂತ - ಅಯ್ಯೋ! ದೈವತಮಸ್ಯ - ದೇವೋತ್ತಮನಾದ, ಮಹಾದೇವನಿಗೆ, ಪ್ರಿಯಾ - ಪ್ರಿಯಳಾದ, ದೇವೀ - ತೇಜಸ್ವಿನಿಯಾದ, ಸತೀದೇವಿಯು, ಕೇನ - ದಕ್ಷಬ್ರಹ್ಮನಿಂದ, ಪ್ರಕೋಪಿತಾ - ಕೋಪಗೊಳಿಸಲ್ಪಟ್ಟವಳಾಗಿ, ಅಸೂನ್ - ಪ್ರಾಣಗಳನ್ನು, ಜಹೌ - ಬಿಟ್ಟಳು, ಹಾ - ಹಾ - ಅಕಟಕಟಾ! ಇತಿ - ಎಂದು, ವಾದಃ - ಗದ್ದಲವು, ಸಮಜಾಯತ - ಉಂಟಾಯಿತು ॥೨೮॥ ಯಸ್ಯ - ಯಾವ ದಕ್ಷನಿಗೆ, ಅಥವಾ ಯಾವ ಶಿವನಿಗೆ, ಚರಾಚರಂ - ಜಗತ್ತೆಲ್ಲವೂ, ಪ್ರಜಾಃ - ಮಕ್ಕಳೋ, ಅಂತಹ, ಪ್ರಜಾಪತೇಃ - ದಕ್ಷನ, ಮಹತ್ - ಅಧಿಕವಾದ, ಅನಾತ್ಮ್ಯಂ - ದೌರ್ಜನ್ಯವನ್ನು, ಪಶ್ಯತ - ನೋಡಿರಿ, ಅಹೋ - ಅನ್ಯಾಯವು, ಯತ್ - ಯಾವಕಾರಣದಿಂದ, ಮನಸ್ವಿನೀ - ಗುಣವತಿಯಾದ, ಯಾ ಸತೀ - ಯಾವ ಸತಿಯು, ಅಭೀಕ್ಷ್ಣಂ - ಅಡಿಗಡಿಗೂ, ಮಾನಂ- ಮರ್ಯಾದೆಯನ್ನು, ಅರ್ಹತಿ - ಪಡೆಯತಕ್ಕವಳೋ, ಅಂತಹ, ಆತ್ಮಜಾ - ಮಗಳು, ವಿಮತಾ- ಅವಮಾನಿತಳಾಗಿ, ಅಸೂನ್ - ಪ್ರಾಣಗಳನ್ನು, ಜಹೌ - ಬಿಟ್ಟಳೋ ॥೨೯॥ ಬ್ರಹ್ಮದ್ವಿಟ್ - ಶಿವದ್ವೇಷಿಯಾದ, ದುರ್ಮರ್ಷಹೃದಯಃ - ಬಹಳ ಹೊಟ್ಟೆಕಿಚ್ಚಿನ ಮನಸ್ಸುಳ್ಳ, ಸೋಽಯಂ - ಈ ದಕ್ಷನು, ಯತ್- ಯಾವಕಾರಣದಿಂದ,

---

ದೇಹವು ಸಮಾಧಿಜನಿತವಾದ ಯೋಗಾಗ್ನಿಯಿಂದ ಸುಟ್ಟುಹೋಯಿತು ॥೨೭॥ ಭೂಮಿಯಲ್ಲಿಯೂ ಅಂತರಿಕ್ಷದಲ್ಲಿಯೂ ಸಹ ಅತ್ಯಾಶ್ಚರ್ಯಕರವಾದ ಈ ಸಂಗತಿಯನ್ನು ಕಂಡವರೆಲ್ಲರೂ "ಅಯ್ಯೋ! ಏನನ್ಯಾಯವಾದುದು? ದೇವತಾ ಸಾರ್ವಭೌಮನಾದ ಮಹಾದೇವನಿಗೆ ಪ್ರಿಯಪತ್ನಿಯಾದ ಸತೀದೇವಿಯು ದಕ್ಷನ ಮೇಲಣಕೋಪದಿಂದ ಪ್ರಾಣಗಳನ್ನು ಳಿದಳಲ್ಲಾ! ಅಕಟಾ ಕಷ್ಟವು" ಎಂದು ಹಾಹಾಕಾರಮಾಡತೊಡಗಿದರು ॥೨೮॥ ಅಕಟಾ! ಸಕಲಪ್ರಪಂಚವನ್ನೂ ಒಂದೇ ವಿಧವಾಗಿ ಪ್ರಜಾರೂಪದಿಂದ ಭಾವಿಸಬೇಕಾಗಿರುವ ಇವನು ತನಗೆ ಸಾಕ್ಷಾತ್ಪುತ್ರಿಯಾಗಿಯೂ, ಲೋಕಕರ್ತನಾದ ಪರಮೇಶ್ವರನಿಗೆ ಪ್ರಾಣವಲ್ಲಭೆಯಾಗಿಯೂ, ಕಲ್ಯಾಣಗುಣಶಾಲಿನಿಯಾಗಿಯೂ, ನಿರಂತರವೂ ಮರ್ಯಾದೆಯನ್ನು ಪಡೆವುದಕ್ಕೆ ತಕ್ಕವಳಾಗಿಯೂ ಇರುವ ಸತೀದೇವಿಯನ್ನು ಅವಮಾನಗೊಳಿಸಿ, ಪ್ರಾಣಗಳನ್ನು ಕಳೆದುಕೊಳ್ಳುವಂತೆ ಮಾಡಿದನಲ್ಲಾ! ಇವನ ದೌರ್ಜನ್ಯವನ್ನು ಕಂಡಿರಾ! ॥೨೯॥ ಶಿವದ್ವೇಷಿಯಾದ ಇವನು ತಾನು ದೂಷಿಸಿದುದರಿಂದಲೇ ಪ್ರಾಣತ್ಯಾಗಕ್ಕೆ ಸಿದ್ಧಳಾದ ಮಗಳನ್ನು ಕೂಡ ತಡೆಯಲಿಲ್ಲವಾದುದರಿಂದ, ಪರರೇಳಿಗೆಯನ್ನು ಸೈರಿಸಲಾರದೆ ಅಸೂಯೆಗೊಳ್ಳುವ ಬ್ರಾಹ್ಮ

ಮವಾಪ್ಸ್ಯತಿ । ಯದಂಗಜಾಂ ಸ್ವಾಂ ಪುರುಷದ್ವಿ ಡುದ್ಯತಾಂ ನ ಪ್ರತ್ಯಷೇಧ ನ್ಮೃತಯೇ ಽ ಪರಾಧತಃ ॥೩೦॥ * ವದತ್ಯೇವಂ ಜನೇ ಸತ್ಯಾ ದೃಷ್ಟ್ವಾಽಸು ತ್ಯಾಗಮದ್ಭುತಂ । ದಕ್ಷಂ ತತ್ಪಾರ್ಷದಾ ಹಂತು ಮುದತಿಷ್ಠ ನ್ನುದಾಯುಧಾಃ ॥೩೧॥ ತೇಷಾ ಮಾಪತತಾಂ ವೇಗಂ ನಿಶಾಮ್ಯ ಭಗವಾನ್ ಭೃಗುಃ ।

ಅಪರಾಧತಃ - ತನ್ನ ತಪ್ಪಿನಿಂದ, ಮೃತಯೇ - ಮರಣಕ್ಕಾಗಿ, ಉದ್ಯತಾಂ - ಪ್ರಯತ್ನಿಸಿದ, ಸ್ವಾಂ - ತನ್ನ, ಅಂಗಜಾಮಪಿ - ಮಗಳನ್ನೂ, ನಪ್ರತ್ಯಷೇಧತ್- ತಡೆಮಾಡಲಿಲ್ಲವೋ, ಆದುದರಿಂದ, ಬ್ರಹ್ಮಬಂಧುಃ - ಬ್ರಾಹ್ಮಣಾಧಮನಾದ ಇವನು, ಲೋಕೇ - ಲೋಕದಲ್ಲಿ, ಮಹತೀಂ - ಅಧಿಕವಾದ, ಅಪಕೀರ್ತಿಂ ಕೆಟ್ಟಹೆಸರನ್ನು, ಅವಾಪ್ಸ್ಯತಿ - ಹೊಂದುವನು ॥೩೦॥

ಏವಂ - ಇಂತು, ಜನೇ - ಜನವು, ವದತಿ - ಹೇಳಲು, ಸತ್ಯಾಃ - ಸತೀದೇವಿಯ, ಅದ್ಭುತಂ - ಆಶ್ಚರ್ಯಕರವಾದ, ಅಸುತ್ಯಾಗಂ - ಪ್ರಾಣತ್ಯಾಗವನ್ನು, ದೃಷ್ಟ್ವಾ - ಕಂಡು, ತತ್ಪಾರ್ಷದಾಃ - ಆಕೆಯ ಪರಿವಾರದವರು, ದಕ್ಷಂ - ದಕ್ಷನನ್ನು, ಹಂತುಂ - ಕೊಲ್ಲುವುದಕ್ಕೆ, ಉದಾಯುಧಾಃ - ಆಯುಧಗಳನ್ನೆತ್ತಿಕೊಂಡು, ಉದತಿಷ್ಠನ್ - ಎದ್ದರು ॥೩೧॥ ಭಗವಾನ್ - ಮಹಾಮಹಿಮನಾದ, ಭೃಗುಃ - ಭೃಗುಮಹರ್ಷಿಯು, ಆಪತತಾಂ - ಬರುತ್ತಿರುವ, ತೇಷಾಂ - ಅವರ, ವೇಗಂ - ವೇಗವನ್ನು, ನಿಶಮ್ಯ - ಕಂಡು, ಯಜ್ಞಘ್ನ - ಯಜ್ಞಕಂಟಕರನ್ನು, ಘ್ನೇನ - ನಾಶಗೊಳಿಸುವ, ಯಜುಷಾ - ಯಜುರ್ಮಂತ್ರದಿಂದ, ದಕ್ಷಿ

ಣಾಧಮನಾದ ಇವನು. ಈ ಲೋಕದಲ್ಲಿ ಅಪಕೀರ್ತಿಯನ್ನೂ, ಪರದಲ್ಲಿ ನರಕವನ್ನೂ ಪಡೆಯುವುದೇ ದಿಟವು ॥೩೨॥ ಎಂದು ಅಲ್ಲಿರುವ ಜನರೆಲ್ಲರೂ ನುಡಿಯುತ್ತಿರಲು, ಆ ಸತೀದೇವಿಗೆ ರಕ್ಷಕರಾಗಿ ಬಂದಿದ್ದ ನಂದಿಯೇ ಮೊದಲಾದ ಪಾರ್ಷದರೆಲ್ಲರೂ, ಆ ಸತೀದೇವಿಯ ಅತ್ಯಾಶ್ಚರ್ಯಕರವಾದ ಮರಣವನ್ನು ಕಂಡು ಕೋಪಗೊಂಡು, ತತ್ಕ್ಷಣದಲ್ಲಿಯೇ, ತಂತಮ್ಮ ಆಯುಧಗಳನ್ನು ಹಿಡಿದು, ಆ ದಕ್ಷನನ್ನು ಸಂಹರಿಸುವುದಕ್ಕೆ ಸನ್ನದ್ಧರಾದರು॥ ತರುವಾಯ ಅದ್ಭುತಶಕ್ತಿಯುಳ್ಳ ಭೃಗುಮುನಿಯು, ಎಲ್ಲಾ ಕಡೆಗಳಿಂದಲೂ ಬರುತ್ತಿರುವ ಆ ಪಾರ್ಷದರನ್ನು ಕಂಡು, ಕೂಡಲೇ ಯಜ್ಞಕಂಟಕರನ್ನು ಧ್ವಂಸಗೊಳಿಸುವ ಯಜುರ್ಮಂತ್ರಗಳಿಂದ ದಕ್ಷಿಣಾಗ್ನಿಯಲ್ಲಿ ಹೋಮಮಾಡುತ್ತಾ ಬಂದನು. ಬಳಿಕ ಬಂದಾಶ್ಚರ್ಯವು ನಡೆಯಿತು. ಅಧ್ವರ್ಯುವಾದ ಭೃಗು

ವಿ. ಮೂಲ ಶ್ಲೋ॥ ದಕ್ಷಸ್ತು ದೃಷ್ಟ್ವಾ ದುಹಿತುಃ ಸ್ವನಿಮಿತ್ತಂ ವಿನಾಶನಂ । ಬಭ್ರಾತಪ್ಯತ ಘೋರೇಣ ಮಯಾಽಸಾಸುಕೃತಂ ಬತ ! ॥೩೦॥

ತಾ॥ ದಕ್ಷನು ತನ್ನ ನಿಮಿತ್ತವಾಗಿ ಮಗಳು ಪ್ರಾಣತ್ಯಾಗ ಮಾಡಿದುದನ್ನು ಕಂಡು, ಅಕಟಾ ! ಅನ್ಯಾಯವಾಯಿತೆ ! ಎಂದು ಬಹಳವಾಗಿ ಸಂಕಟಪಟ್ಟನು.

ಶ್ಲೋ॥ ಧಿಙ್ಮಾ ಮವಿಜಿತಾತ್ಮಾನಂ ನಿರ್ಗುಣಂ ನಿರಪತ್ರಪಂ । ಯೋಽಹಂ ಸ್ವಕೃತ್ಯ ಮೃತಕಂ ವ್ಯರ್ಥ ಮೇನೋ ಮಹೀಯಸಿ ॥೩೦॥

ದುರಹಂಕಾರಿಯಾದ ನಾನು ಅನ್ಯಾಯವಾಗಿ ಮಹಾದೇವನಿಗೆ ದ್ರೋಹವನ್ನೆಸಗಿದೆನು. ಆದುದರಿಂದ ಇಂದ್ರಿಯಾಧೀನನೂ, ಶಮದಮಾದಿ ಗುಣಹೀನನೂ, ನಿರ್ಲಜ್ಜನೂ ಆದ ನನಗೆ ಧಿಕ್ಕಾರವಿರಲಿ, ಎಂದು ವ್ಯಸನಪಟ್ಟನು ॥

ಯಜ್ಞಘ್ನಘ್ನೇನ ಯಜುಷಾ ದಕ್ಷಿಣಾಗ್ನೌ ಜುಹಾವಹ ॥ ೩೨ ॥ ಅಧ್ವರ್ಯುಣಾ ಹೂಯಮಾನೇ ದೇವಾ ಉತ್ಪೇತು ರೋಜಸಾ । ಋಭವೋನಾಮ ತಪಸಾ ಸೋಮಂ ಪ್ರಾಪ್ತಾ ಸ್ಸಹಸ್ರಶಃ ॥೩೩॥ ತೈ ರಲಾತಾಯುಧೈ ಸ್ಸರ್ವೇ ಪ್ರಮಥಾ ಸ್ಸಹಗುಹ್ಯಕಾಃ । ಹನ್ಯಮಾನಾ ದಿಶೋ ಭೇಜು ರುಶದ್ಭಿರ್ಬ್ರಹ್ಮತೇಜಸಾ ॥೩೪॥

— ಇತಿ ಚತುರ್ಥೋಽಧ್ಯಾಯಃ —

---

ಣಾಗ್ನೌ - ದಕ್ಷಿಣಾಗ್ನಿಯಲ್ಲಿ, ಜುಹಾವ - ಹೋಮಮಾಡಿದನು, ಹಾ-ಆಶ್ಚರ್ಯವು ॥೩೨॥ ಅಧ್ವರ್ಯುಣಾ ಅಧ್ವರ್ಯುವಾದ ಭೃಗುಮುನಿಯಿಂದ ಹೂಯಮಾನೇ - ಹೋಮ ಮಾಡಲ್ಪಡಲು, ತಪಸಾ - ತಪಸ್ಸಿನಿಂದ ಸೋಮಂ - ಸೋಮವನ್ನು, ಪ್ರಾಪ್ತಾಃ - ಹೊಂದಿದ, ಋಭವೋನಾಮ - ಋಭುಗಳೆಂಬ, ದೇವಾಃ - ದೇವತೆಗಳು, ಸಹಸ್ರಶಃ - ತಂಡತಂಡವಾಗಿ, ಓಜಸಾ - ಪರಾಕ್ರಮದಿಂದ, ಉತ್ಪೇತುಃ - ಹುಟ್ಟಿದರು ॥೩೩॥ ಬ್ರಹ್ಮತೇಜಸಾ - ಬ್ರಹ್ಮತೇಜಸ್ಸಿನಿಂದ, ಉಶದ್ಭಿಃ - ಪ್ರಕಾಶಮಾನರಾದ, ಅಲಾತಾಯುಧೈಃ - ಕೊಳ್ಳಿಗಳೇ ಆಯುಧಗಳಾಗಿ ಉಳ್ಳ, ತೈಃ-ಆ ಋಭುದೇವತೆಗಳಿಂದ, ಸಹಗುಹ್ಯಕಾಃ-ಯಕ್ಷರಿಂದೊಡಗೂಡಿದ, ಪ್ರಮಥಾಃ - ಪ್ರಮಥಗಣಗಳು, ಹನ್ಯಮಾನಾಃ - ಹೊಡೆಯಲ್ಪಟ್ಟವರಾಗಿ, ದಿಶಃ - ದಿಕ್ಕುಗಳನ್ನು, ಭೇಜುಃ - ಹೊಂದಿದರು ॥೩೪॥

—ಚತುರ್ಥಾಧ್ಯಾಯಂ ಸಮಾಪ್ತಂ—

ಮುನಿಯು ಹೋಮಮಾಡಿದೊಡನೆಯೇ, ತಪಸ್ಸಿನಿಂದ ಸೋಮಪಾನವನ್ನು ಪಡೆದ ಮಹಾಪರಾಕ್ರಮಶಾಲಿಗಳಾದ ಋಭುಗಳೆಂಬ ಸಾವಿರಾರುಮಂದಿ ದೇವತೆಗಳು ತಂಡತಂಡಗಳಾಗಿ ಜನಿಸಿದರು ॥೩೩॥ ಇಂತು ಜನಿಸಿದ ಆ ಋಭುದೇವತೆಗಳೆಲ್ಲರೂ ಬ್ರಹ್ಮತೇಜಸ್ಸಿನಿಂದ ಹೊಳೆಯುತ್ತಾ, ಕೊಳ್ಳಿಗಳೆಂಬ ಆಯುಧಗಳನ್ನು ಧರಿಸಿ ಹೊಡೆಯುತ್ತಾ ಬರಲು, ಪ್ರಮಥರೆಲ್ಲರೂ ಆ ಪೆಟ್ಟುಗಳನ್ನು ಸೈರಿಸಲಾರದೆ ದಿಕ್ಕುದಿಕ್ಕುಗಳಿಗೂ ಓಡಿದರು. ಎಂದು ಮೈತ್ರೇಯಮುನಿಯು ವಿದುರನಿಗೆ ಹೇಳುತ್ತಿದ್ದನೆಂಬಲ್ಲಿಗೆ ಭಾಗವತ ಚಕೋರಚಂದ್ರಿಕೆಯೊಳ್

ನಾಲ್ಕನೆಯ ಅಧ್ಯಾಯಂ ಮುಗಿದುದು.

## ಓಂನಮಃ ಪರಮಾತ್ಮನೇ

—ಅಥ ಪಂಚಮೋಽಧ್ಯಾಯಃ—

ಮೈತ್ರೇಯಃ ॥ ಭವೋ ಭವಾನ್ಯಾ ನಿಧನಂ ಪ್ರಜಾಪತೇ ರಸತ್ಕೃತಾಯಾ ಅವ
ಗಮ್ಯ ನಾರದಾತ್ । ಸ್ವಪಾರ್ಷದ ಸೈನ್ಯಂಚ ತದಧ್ವರರ್ಭುಭಿ ರ್ವಿದ್ರಾವಿ
ತಂ ಕೋಪ ಮಪಾರ ಮಾದಧೇ ॥೧॥ ಕ್ರುದ್ಧ ಸ್ಸುದಷ್ಟೌಷ್ಠಪುಟ ಸ್ಸ
ಧೂರ್ಜಟಿ ರ್ಜಟಾಂ ತಟಿದ್ವಹ್ನಿ ಸಟೋಗ್ರರೋಚಿಷಂ । ಉತ್ಕೃತ್ಯ ರುದ್ರ
ಸ್ಸಹಸೋತ್ಥಿತೋ ಹಸನ್ ಗಂಭೀರನಾದೋ ವಿಸಸರ್ಜ ತಾಂ ಭುವಿ ॥೨॥
ತತೋಽತಿಕಾಯ ಸ್ತನುವಾ ಸ್ಪೃಶನ್ ದಿವಂ ಸಹಸ್ರಬಾಹು ರ್ಘನರುಕ್

---

—ಪಂಚಮಾಧ್ಯಾಯಂ—

ಕಂದ॥ ಸತಿ ಮಡಿದುದ ನಾಕರ್ಣಿಸಿ । ಶಿತಿಕಂಠಂ ವೀರಭದ್ರನಂ ಸೃಷ್ಟಿಸುತಂ ।
ಖತಿಯಿಂದೆ ದಕ್ಷನಂ ಸಂ । ಹೃತಿಗೈಸಿದ ಚರಿತಮಿಲ್ಲಿ ಪೇಳಲ್ಪಡುಗುಂ ॥

ಭವಃ - ಶಿವನು, ನಾರದಾತ್ - ನಾರದಮುನಿಯಿಂದ, ಪ್ರಜಾಪತೇಃ-ದಕ್ಷನಿಂದ, ಅಸತ್ಕೃತಾಯಾಃ, ಅವಮಾನಗೊಳಿಸಲ್ಪಟ್ಟ, ಭವಾನ್ಯಾಃ - ಸತೀದೇವಿಯ, ನಿಧನಂ- ಮರಣವನ್ನೂ, ಸ್ವಪಾರ್ಷದ ಸೈನ್ಯಂ, ತನ್ನ ಪ್ರಮಥಗಣಗಳ ಸೇನೆಯು, ತದಧ್ವರರ್ಭುಭಿಃ - ಆ ದಕ್ಷನ ಯಜ್ಞದಲ್ಲಿ ಜನಿಸಿದ ಋಭುಗಳಿಂದ ವಿದ್ರಾವಿತಂ - ಓಡಿಸಲ್ಪಟ್ಟುದನ್ನೂ, ಅವಗಮ್ಯ - ತಿಳಿದು, ಅಪಾರಂ - ಅಧಿಕವಾದ, ಕೋಪಂ - ಕೋಪವನ್ನು, ಆದಧೇ - ಪಡೆದನು ॥೧॥ ರುದ್ರಃ - ರೌದ್ರವನ್ನು ಪಡೆದ, ಸಧೂರ್ಜಟಿಃ-ಆಶಿವನು, ಕ್ರುದ್ಧಃ- ಕೋಪಗೊಂಡು, ಸುದಷ್ಟೌಷ್ಠಪುಟಃ - ತುಟಿಯನ್ನು ಕಡಿಯುತ್ತಾ, ತಟಿ...ಷಂ, ತಟಿದ್ವಹ್ನಿ - ವಿದ್ಯುತಾಗ್ನಿಯ, ಸಟಾ-ಜ್ವಾಲೆಗಳಂತೆ, ಉಗ್ರ - ಭಯಂಕರವಾದ, ರೋಚಿಷಂ - ಕಾಂತಿಯುಳ್ಳ, ಜಟಾಂ- ಜಡೆಯನ್ನು, ಉತ್ಕೃತ್ಯ - ಕಿತ್ತು, ಗಂಭೀರನಾದಃ - ಗಂಭೀರಸ್ವರವುಳ್ಳವನಾಗಿ, ಹಸನ್ - ನಗುತ್ತಾ ತಾಂ - ಆಜಡೆಯನ್ನು, ಭುವಿ - ಭೂಮಿಯಲ್ಲಿ, ವಿಸಸರ್ಜ - ಬಿಸುಟನು ॥೨॥ ತತಃ - ಆಜಡೆಯಿಂದ, ಅತಿಕಾಯಃ - ತೋರವಾದ ಮೈಯುಳ್ಳ, ತನುವಾ - ಶರೀರದಿಂದ, ದಿವಂ - ಅಂತರಿಕ್ಷವನ್ನು, ಸ್ಪೃಶನ್ -

---

—ಐದನಯ ಅಧ್ಯಾಯ—

—ವೀರಭದ್ರನು ಜನಿಸಿ ದಕ್ಷನನ್ನು ಸಂಹರಿಸಿದುದು—

ಅನಂತರದಲ್ಲಿ ಮೈತ್ರೇಯನು ವಿದುರನನ್ನು ಕುರಿತು ಹೇಳುತ್ತಾನೆ. ತರುವಾಯ ಇತ್ತ ಪರಮೇಶ್ವರನು, ತನ್ನ ಮಡದಿಯಾದ ದಾಕ್ಷಾಯಣಿಯು ದಕ್ಷನಿಂದ ಅವಮಾನಿತಳಾಗಿ ಮಡಿದುದನ್ನೂ, ಆ ದಕ್ಷಯಜ್ಞದಲ್ಲಿ ಜನಿಸಿದ ಋಭುಗಳೆಂಬವರು ತನ್ನ ಕಡೆಯವರನ್ನು ಹೊಡೆದು ಅಟ್ಟಿದುದನ್ನೂ,ನಾರದಮುನಿಯಿಂದ ತಿಳಿದು ಅತ್ಯಂತ ಕ್ರುದ್ಧನಾದನು ॥೧॥ ಆಗ ಆರುದ್ರನು ಅಪಾರವಾದ ಕ್ರೋಧದಿಂದ ತುಟಿಯನ್ನು ಕಡಿಯುತ್ತಾ, ಸಿಡಿಲ ಬೆಂಕಿಯ ಜ್ವಾಲೆಯಂತೆ ಭಯಂಕರವಾಗಿರುವ ತನ್ನ ಒಂದು ಜಡೆಯನ್ನು ಕಿತ್ತು, ಗಂಭೀರನಾದದಿಂದ ಅಟ್ಟಹಾಸಮಾಡುತ್ತಾ, ಆ ಜಡೆಯನ್ನು ನೆಲಕ್ಕೆ ಬಡಿದನು ॥೨॥ ತತ್‍ಕ್ಷಣದಲ್ಲಿಯೇ ಪರ್ವತ

ತ್ರಿಸೂರ್ಯ ದೃಕ್ । ಕರಾಳದಂಷ್ಟ್ರೋ ಜ್ವಲದಗ್ನಿಮೂರ್ಧಜಃ ಕಪಾಲ
ಮಾಲೀ ವಿವಿಧೋದ್ಯತಾಯುಧಃ ॥೩॥ ತಂ ಕಿಂಕರೋಮೀತಿ ಗೃಣಂತ ಮಾ
ಹ ಬದ್ಧಾಂಜಲಿಂ ಭಗವಾನ್ ಭೂತನಾಥಃ । ದಕ್ಷಂ ಸಯಜ್ಞಂ ಜಹಿ ಮ
ದ್ಭಟಾನಾಂ ತ್ವ ಮಗ್ರಣೀ ರುದ್ರ! ಭಟಾಂಶಕೋ ಮೇ ॥೪॥ ಆಜ್ಞಪ್ತ ಏವಂ
ಕುಪಿತೇನ ಮನ್ಯುನಾ ಸದೇವದೇವಂ ಪರಿಚಕ್ರಮೇ ವಿಭುಂ । ಮೇನೇ

ಸೋಕುತ್ತಿರುವ, ಸಹಸ್ರಬಾಹುಃ - ಸಾವಿರತೋಳುಳ್ಳ, ಘನರುಕ್-ಮೇಘದಂತೆ ಬಣ್ಣವುಳ್ಳ, ತ್ರಿಸೂರ್ಯ
ದೃಕ್ - ಮೂರುಸೂರ್ಯ ಮಂಡಲಗಳಂತೆ ಕಣ್ಣುಗಳುಳ್ಳ, ಕರಾಳದಂಷ್ಟ್ರಃ - ಭಯಂಕರಗಳಾದ ಕೋ
ರಹಲ್ಲುಗಳುಳ್ಳ, ಜ್ವಲ...ಜಃ, ಉರಿಯುವ ಬೆಂಕಿಯಂತೆ ಕೂದಲುಳ್ಳ, ಕಪಾಲಮಾಲೀ - ತಲೆಬುರುಡೆಗಳ
ಮಾಲೆಗಳನ್ನು ಧರಿಸಿದ, ವಿವಿ...ಧಃ - ನಾನಾ ವಿಧಗಳಾದ ಆಯುಧಗಳನ್ನು ಧರಿಸಿದ, ವೀರಭದ್ರನು ಜನಿ
ಸಿದನು ॥೩॥ ಭೂತನಾಥಃ - ಭೂತಪತಿಯಾದ, ಭಗವಾನ್ - ಮಹಾದೇವನು, ಕಿಂಕರೋಮಿ - ಏನು
ಮಾಡಲಿ? ಇತಿ - ಎಂದು, ಗೃಣತಂ - ಹೊಗಳುತ್ತಿರುವ, ಬದ್ಧಾಂಜಲಿಂ - ಕೈಗಳನ್ನು ಮುಗಿದಿರುವ
ತಂ - ಆ ವೀರಭದ್ರನನ್ನು ಕುರಿತು, ಹೇರುದ್ರ - ಎಲೈರುದ್ರನೆ! ಹೇಭಟ - ಎಲೈ ಯುದ್ಧ ಕುಶಲನೆ,
ತ್ವಂ - ನೀನು, ಮೇ - ನನ್ನ, ಅಂಶಕ - ಅಂಶವಾದುದರಿಂದ, ಮದ್ಭಟಾನಾಂ - ನನ್ನ ಭಟರಿಗೆ, ಅಗ್ರ
ಣೀಃ - ನಾಯಕನಾಗಿ, ಸಯಜ್ಞಂ - ಯಜ್ಞದೊಡನೆ, ದಕ್ಷಂ - ದಕ್ಷನನ್ನು, ಜಹಿ - ಜಯಿಸು ॥೪॥ ಹೆ,
ತಾತ - ಅಯ್ಯಾ ವಿದುರನೆ! ಕುಪಿತೇನ - ಕೋಪಗೊಂಡ ಶಂಕರನಿಂದ, ಮನ್ಯುನಾ - ಕೋಪದಿಂದ
ಏವಂ - ಇಂತು, ಆಜ್ಞಪ್ತಃ - ಆಜ್ಞಾಪಿಸಲ್ಪಟ್ಟ, ಸಃ - ಆ ವೀರಭದ್ರನು, ದೇವದೇವಂ - ದೇವೋತ್ತಮ
ನಾದ, ವಿಭುಂ - ಸ್ವಾಮಿಯನ್ನು, ಪರಿಚಕ್ರಮೇ - ಪ್ರದಕ್ಷಿಣಮಾಡಿದನು, ತದಾ - ಆಗ, ಅಸಂಗರಂಹ
ಸಾ - ತಡೆಯಿಲ್ಲದ ವೇಗದಿಂದ, ಆತ್ಮಾನಂ - ತನ್ನನ್ನು, ಮಹೀಯಸಾಂ - ಎಂತಹ ಶೂರರ, ಸಹೋಪಿ-

ದಂತೆ ಅತ್ಯುನ್ನತವಾದ ಶರೀರದಿಂದ ಗಗನಮಂಡಲವನ್ನು ವ್ಯಾಪಿಸುತ್ತಾ, ನೀರುಂಡಮುಗಿ
ಲಂತೆ ಶರೀರಕಾಂತಿಯನ್ನು ಬೀರುತ್ತಾ, ಒಂದೇಕಾಲದಲ್ಲುದಿಸಿದ ಮೂರು ಸೂರ್ಯಮಂ
ಡಲಗಳಂತೆ ಜ್ವಲಿಸುತ್ತಿರುವ ಮೂರುಕಣ್ಣುಗಳಿಂದಲೂ ದುರುಗುಟ್ಟಿಕೊಂಡು ನೋಡುತ್ತಾ,
ತೋರವಾದ ಕೋರೆಹಲ್ಲುಗಳಿಂದ ಭಯಂಕರನಾಗಿ, ಅಗ್ನಿಜ್ವಾಲೆಯಂತೆ ಬೆಳಗುತ್ತಿರುವ
ಜಡೆಗಳನ್ನು ಬಿರಿಹೊಯ್ದುಕೊಂಡು, ತಲೆಬುರುಡೆಗಳ ಹಾರಗಳನ್ನು ಧರಿಸಿ, ಸಾವಿರಕೈಗ
ಳಲ್ಲಿಯೂ ಬಗೆಬಗೆಗಳಾದ ಆಯುಧಗಳನ್ನು ಹಿಡಿದು ವೀರಭದ್ರನು ಆ ಜಡೆಯಿಂದ ಜನಿ
ಸಿದನು ॥೩॥ ಕೂಡಲೇ ಆತನು ಕೈಗಳನ್ನು ಮುಗಿದುಕೊಂಡು ಹೊಗಳುತ್ತಾ "ಮಹಾದೇ
ವನೆ! ನನ್ನನ್ನೇಕೆ ಜನಿಯಿಸಿದೆ? ನಾನು ಮಾಡತಕ್ಕುದೇನು? ಬೆಸಸು" ಎಂದುಬೇಡಿಕೊ
ಳ್ಳಲು, ಭಗವಂತನಾದ ಭೂತನಾಥನು ಅವನನ್ನು ಕುರಿತು "ಎಲೈ ಸಮರಶೂರನಾದರುದ್ರನೆ!
ನೀನು ನನ್ನಭಟರಲ್ಲಿ ಮುಂದಾಳಾಗಿ ತೆರಳಿ ಆ ದಕ್ಷನನ್ನೂ ಅವನ ಯಜ್ಞವನ್ನೂ ಧ್ವಂಸ
ಮಾಡು. ನನ್ನ ಅಂಶದಿಂದ ಅವತರಿಸಿರುವ ಕಾರಣ ಬ್ರಹ್ಮತೇಜಸ್ಸನ್ನಂತು ಜಯಿಸಲೆಂದು
ಶಂಕಿಸಬೇಡ ॥೪॥ ಎಂದು ಆ ಮೃತ್ಯುಂಜಯನು ಕೋಪದಿಂದಾಜ್ಞೆಯನ್ನಿತ್ತೊಡನೆಯೇ,
ವೀರಭದ್ರನು ದೇವದೇವನಾದ ಮಹಾದೇವನಿಗೆ ಪ್ರದಕ್ಷಿಣ ಪ್ರಣಾಮವನ್ನಾಚರಿಸಿ, ನಿರಂ
ಕುಶವಾದ ವೇಗವನ್ನು ಪಡೆದು, ಎಂತಹ ಶೂರರಾದರೂ ತನಗೆ ಪ್ರತಿಭಟಸಲಾರರೆಂದು ತಿಳಿ

ತದಾತ್ಮಾನ ಮಸಂಗರಂಹಸಾ ಮಹೀಯಸಾಂ ತಾತ! ಸಹ ಸ್ಸಹಿಷ್ಣುಂ ||೫||
ಅನ್ವೀಯಮಾನ ಸ್ಸತು ರುದ್ರಪಾರ್ಷದೈ ರ್ಭೃಶಂ ನದದ್ಭಿ ರ್ವ್ಯನದ ತ್ಸುಭೈರ
ವಂ । ಉದ್ಯಮ್ಯ ಶೂಲಂ ಜಗದಂತಕಾಂತಕಂ ಸಂಪ್ರಾದ್ರವ ದ್ಘೋಷಣಭೂ
ಷಣಾಂಘ್ರಿಃ ||೬|| ಅಥರ್ತ್ವಿಜೋ ಯಜಮಾನ ಸ್ಸದಸ್ಯಾ ಕಕುಭ್ಯುದೀ
ಚ್ಯಾಂ ಪ್ರಸಮೀಕ್ಷ್ಯ ರೇಣುಂ । ತಮಃ ಕಿಮೇತ ತ್ಕುತ ಏತದ್ರಜೋಽಭೂ
ದಿತಿ ದ್ವಿಜಾ ದ್ವಿಜಪತ್ನ್ಯಶ್ಚ ದಧ್ಯುಃ||೭|| ವಾತಾ ನವಾಂತಿ ನಹಿಸಂತಿ ದಸ್ಯವಃ
ಪ್ರಾಚೀನಬರ್ಹಿ ರ್ಜೀವತಿ ಹೋಗ್ರದಂಡಃ । ಗಾವೋ ನಕಾಲ್ಯಂತ ಇದಂ

---

ಬಲವನ್ನಾದರೂ, ಸಹಿಷ್ಣುಂ - ಸೈರಿಸತಕ್ಕವನನ್ನಾಗಿ, ಮೇನೇ - ತಿಳಿದನು ||೫||

ಸತು - ಆತನು, ಭೃಶಂ - ಬಹಳವಾಗಿ, ನದದ್ಭಿಃ - ಗರ್ಜಿಸುತ್ತಿರುವ, ರುದ್ರಪಾರ್ಷದೈಃ - ಶಿವ ಭಟರಿಂದ, ಅನ್ವೀಯಮಾನಃ - ಹಿಂಬಾಲಿಸಲ್ಪಟ್ಟವನಾಗಿ, ಸುಭೈರವಂ - ಬಹಳ ಭಯಂಕರವಾಗಿ, ವ್ಯನದತ್ - ಆರ್ಭಟಿಸಿದನು, ಸಃ - ಅವನು, ಜಗ...ಕಂ, ಲೋಕಕ್ಕೆ ಅಂತಕನಾದ ಯಮನಿಗೂ ಮೃತ್ಯುವಾಗಿರುವ, ಶೂಲಂ - ಶೂಲವನ್ನು, ಉದ್ಯಮ್ಯ - ಎತ್ತಿಕೊಂಡು, ಘೋಷ..ಘ್ರಿಃ - ಶಬ್ದಮಾಡುತ್ತಿರುವ ಕಾಲ್ಕಡಗ ಮೊದಲಾದ ಒಡವೆಗಳನ್ನು ಕಾಲಲ್ಲಿಟ್ಟುಕೊಂಡು, ಪ್ರಾದ್ರವತ್ - ಓಡಿದನು ||೬|| ಅಥ - ಬಳಿಕ, ಋತ್ವಿಜಃ - ಋತ್ವಿಜರು, ಯಜಮಾನನು, ಸದಸ್ಯಾಃ - ಸಭಾಸದರು, ಉದೀಚ್ಯಾಂ - ಉತ್ತರದ್ಯ ಕಕುಭಿ - ದಿಕ್ಕಿನಲ್ಲಿ, ರೇಣುಂ - ಧೂಳಿಯನ್ನು, ಪ್ರಸಮೀಕ್ಷ್ಯ - ಕಂಡು, ಏತತ್ - ಇದು, ತಮಃಕಿಂ- ಕತ್ತಲೆಯೆ ? ಏತದ್ರಜಃ - ಈ ಧೂಳಿಯು, ಕಿಮಭೂತ್ - ಏತಕ್ಕಾಯಿತು ? ಇತಿ - ಎಂದು, ದ್ವಿಜಾಃ- ಬ್ರಾಹ್ಮಣರು, ದ್ವಿಜಪತ್ನ್ಯಶ್ಚ - ಬ್ರಾಹ್ಮಣ ಪತ್ನಿಯರೂ, ದಧ್ಯುಃ - ಯೋಚಿಸಿದರು ||೭|| ವಾತಾಃ - ಬಿರುಗಾಳಿಗಳು, ನವಾಂತಿ - ಬೀಸುವುದಿಲ್ಲ ಉಗ್ರದಂಡಃ - ಕ್ರೂರವಾಗಿ ದಂಡಿಸುವ, ಪ್ರಾಚೀನ ಬರ್ಹಿಃ- ಪ್ರಾಚೀನ ಬರ್ಹಿಯೆಂಬ ರಾಜನು, ಜೀವತಿ - ಬದುಕಿರುವವನು ಆದುದರಿಂದ, ದಸ್ಯವಃ - ಕಳ್ಳರು, ನಸಂತಿ

---

ದನು ||೫|| ಇಂತಾಣತಿಸೆತ್ತು ಭಯಂಕರವಾಗಿ ಆರ್ಭಟಿಸುತ್ತಿರುವ ಪ್ರಮಥಗಣಗಳಿಂದೊಡಗೂಡಿ, ಬ್ರಹ್ಮಾಂಡಕಟಾಹವು ಬಿರಿಯುವಂತೆ ಅಬ್ಬರಿಸುತ್ತಾ, ಸರ್ವರಿಗೂ ಮೃತ್ಯುವೆನಿಸಿರುವ ಯಮನಿಗೂ ಮೃತ್ಯುವಾಗಿ ತೋರುವ ಶೂಲಾಯುಧವನ್ನು ಎತ್ತಿಕೊಂಡು, ಕಾಲ್ಕಡಗಗಳು ಝುಣಝುಣಿಸುವಂತೆ ಹೆಜ್ಜೆಗಳನ್ನಿಡುತ್ತಾ, ದಕ್ಷಿಣದಿಕ್ಕಿಗೋಡಿದನು ||೬|| ಅತ್ತ ಯಜ್ಞಶಾಲೆಯಲ್ಲಿರುವ ಭೃಗುವೇ ಮೊದಲಾದ ಋತ್ವಿಜರು, ಯಜಮಾನನಾದ ದಕ್ಷನು ಸಭೆಯಲ್ಲಿ ನೆರೆದಿರುವ ಜನರು ಇವರೆಲ್ಲರೂ, ಅಕಸ್ಮಾತ್ತಾಗಿ ಉತ್ತರ ದಿಕ್ಕಿನಲ್ಲಿ ಹಬ್ಬುತ್ತಿರುವ ಧೂಳಿಯ ಪಾಳಿಯನ್ನು ಕಂಡು, ಇದೇನು ಕತ್ತಲೆಯು ಕವಿಯುತ್ತಿರುವುದೆ? ಅಲ್ಲ. ಧೂಳಿಯು ಹಬ್ಬುತ್ತಿರುವುದು. ಇಂತು ಧೂಳಿಯೇಳುವುದಕ್ಕೆ ಕಾರಣವೇನಿರಬಹುದು? ಎಂದು ಅಲ್ಲಿಯ ಬ್ರಾಹ್ಮಣರೂ, ಅವರ ಪತ್ನಿಯರೂ ಸಹ ಯೋಚಿಸುತ್ತಿದ್ದರು ||೭|| ಬಿರುಗಾಳಿಗಳು ಬೀಸುತ್ತಿರುವುದಿಲ್ಲ. ದುಷ್ಟಶಿಕ್ಷಕನಾದ ನಮ್ಮ ಪ್ರಾಚೀನಬರ್ಹಿ ಮಹಾರಾಜನು ದೇಶವನ್ನಾಳುತ್ತಿರುವುದರಿಂದ ಕಳ್ಳಕಾಕರಿಲ್ಲ. ಆಕಳುಗಳೂ ಓಡಿ ಬರುತ್ತಿರುವುದಿಲ್ಲ. ಇಂತಾದರೂ ಹೀಗೆ ಧೂಳಿಯೇಳುವುದಕ್ಕೆ ಕಾರಣವೇನು ? ಜಗತ್ತಿಗೀಗಲೇ ಪ್ರಳಯವೇನಾದರೂ ಸಂಭವಿಸಿರಬಹುದೆ? ||೮|| ಈರೀತಿಯಾಗಿ ಎಲ್ಲರೂ ಮಾತನಾಡಿಕೊಳ್ಳು

ಕುತೋ ರಜೋ ಲೋಕೋ ಽಧುನಾ ಕಿಂಪ್ರಳಯಾಯ ಕಲ್ಪತೇ ॥೮॥ ಪ್ರ
ಸೂತಿಮಿಶ್ರಾಃ ಸ್ತ್ರಿಯ ಉದ್ವಿಗ್ನಚಿತ್ತಾ ಊಚುರ್ವಿಪಾಕೋ ವೃಜಿನಸ್ಯೈ
ಷ ತಸ್ಯ । ಯತ್ಪಶ್ಯಂತೀನಾಂ ದುಹಿತೄಣಾಂ ಪ್ರಜೇಶಃ ಸುತಾಂ ಸತೀ
ಮವದಧ್ಯಾವನಾಗಾಂ ॥೯॥ ಯಸ್ತ್ವಂತಕಾಲೇ ವ್ಯುಪ್ತಜಟಾಕಲಾಪಃ ಸ್ವ
ಶೂಲಸೂಚ್ಯರ್ಪಿತದಿಗ್ಗಜೇಂದ್ರಃ । ವಿತತ್ಯ ನೃತ್ಯತ್ಯುದಿತಾಸ್ತ್ರದೋರ್ಧ್ವ
ಜಾ ಉಚ್ಚಾಟ್ಟಹಾಸಸ್ತನಯಿತ್ನುಭಿನ್ನದೃಕ್ ॥೧೦॥ ಅಮರ್ಷಯಿತ್ವಾ ತ

-ಇಲ್ಲ, ಗಾವಃ - ಆಕಳುಗಳು, ನಶಾಮ್ಯಂತೇ - ಓಡಿಸಲ್ಪಡುವುದಿಲ್ಲ. ಇದಂ ರಜಃ - ಈ ಧೂಳಿಯು, ಕುತಃ - ಎಲ್ಲಿಂದ ಬಂದುದು? ಅಧುನಾ - ಈಗ, ಲೋಕಃ - ಜಗತ್ತು, ಪ್ರಳಯಾಯ - ನಾಶಕ್ಕಾಗಿ, ಕಲ್ಪತೇಕಿಂ - ಸಿದ್ಧವಾಗಿರುವುದೆ? ॥೮॥ ಯತ್ ಯಾವ ಕಾರಣದಿಂದ, ಪ್ರಜೇಶಃ - ದಕ್ಷನು, ದುಹಿತೄಣಾಂ - ಹೆಣ್ಣುಮಕ್ಕಳೆಲ್ಲರೂ, ಪಶ್ಯಂತೀನಾಂ - ನೋಡುತ್ತಿರುವಾಗಲೇ, ಅನಾಗಾಂ - ನಿರಪರಾಧಿನಿಯಾದ, ಸುತಾಂ - ಮಗಳಾದ, ಸತೀಂ - ಸತಿಯನ್ನು, ಅವದಧ್ಯಾ - ಅವಮಾನಗೊಳಿಸಿದನೋ, ತತ್ - ಆ ಕಾರಣದಿಂದ, ಏಷಃ - ಇದು, ತಸ್ಯ - ಅವನ, ವೃಜಿನಸ್ಯ - ಪಾಪಕರ್ಮದ, ವಿಪಾಕಃ - ಫಲವು, ಇತಿ - ಎಂದು, ಉದ್ವಿಗ್ನಚಿತ್ತಾಃ - ಮನಗುಂದಿದ, ಪ್ರಸೂತಿಮಿಶ್ರಾಃ - ದಕ್ಷಪತ್ನಿಯಾದ ಪ್ರಸೂತಿಯೊಂದೊಡಗೂಡಿದ, ಸ್ತ್ರೀಯರು, ಊಚುಃ - ಹೇಳಿದರು ॥೯॥ ಯಸ್ತು - ಯಾವನಾದರೆ, ಅಂತಕಾಲೇ - ಪ್ರಳಯದಲ್ಲಿ, ವ್ಯುಪ್ತ...ಪಃ - ಜಡೆಗಳನ್ನು ಬಿರಿಹೊಯ್ದುಕೊಂಡು, ಸ್ವಶೂ...ದ್ರಃ, ತನ್ನ ಶೂಲದಕೊನೆಗೆ ದಿಗ್ಗಜಗಳನ್ನು ಪೋಣಿಸಿಕೊಂಡು, ಉದಿ...ಜಾನ್ - ಅಸ್ತ್ರಗಳನ್ನು ಹಿಡಿದಿರುವ ತೋಳುಗಳೆಂಬ ಧ್ವಜಗಳನ್ನು, ವಿತತ್ಯ ಚಾಚಿಕೊಂಡು, ಉಚ್ಚಾ...ಕ್ - ಗಟ್ಟಿಯಾದ ನಗೆಯೆಂಬ ಸಿಡಿಲಿಂದ ದಿಕ್ಕುಗಳನ್ನು ಒಡೆಯುತ್ತಾ, ನೃತ್ಯತಿ - ಕುಣಿಯುವನೋ ॥೧೦॥

ಅಸಹ್ಯತೇಜಸಂ - ಸ್ಪರಿಸಲಾರದ ತೇಜಸ್ಸುಳ್ಳ, ಮನ್ಯುಪ್ಲುತಂ - ಕೋಪಗೊಂಡ, ಭ್ರುಕುಟ್ಯಾ - ಹುಬ್ಬುಗಂಟಿನಿಂದ, ದುರ್ವಿಷಹಂ - ತಡೆಯಲಾಗದ, ಕರಾ...ಘಃ - ಭಯಂಕರಗಳಾದ ಕೋರೆಹಲ್ಲುಗಳಿಂದ, ಉದ...ಣಂ - ನಕ್ಷತ್ರಗಣವನ್ನು ಚದರಿಸುವ, ತಂ - ಆರುದ್ರನನ್ನು, ಅಮರ್ಷಯಿತ್ವಾ - ಕೋಪಗೊಳಿಸಿ, ಕೋಪಯತಃ - ಕೋಪಗೊಳಿಸಿದ, ವಿಧಾತುರಪಿ - ಬ್ರಹ್ಮನಿಗೂ, ಸ್ವಸ್ತಿ - ಕ್ಷೇಮವು, ಸ್ಯಾತ್ಕಿಂ

ತ್ತಿರುವಾಗ ದಕ್ಷಪತ್ನಿಯಾದ ಪ್ರಸೂತಿದೇವಿಯೇ ಮೊದಲಾದ ಸ್ತ್ರೀಯರು, ಚಿಂತಾಕ್ರಾಂತೆಯರಾಗಿ "ಈ ದಕ್ಷನು ತನ್ನ ಪುತ್ರಿಯರೆಲ್ಲರೂ ನೋಡುವಂತೆಯೇ ನಿರಪರಾಧಿನಿಯಾ ಸತೀದೇವಿಯನ್ನು ಅವಮಾನಗೊಳಿಸಿಕೊಲೆಗೀಡುಮಾಡಿದನಾದುದರಿಂದ, ಇದು ಇವನಪಾಪವಲ್ಲದೆ ಬೇರೆಯಲ್ಲ" ॥೯॥ ಯಾವಮಹಾತ್ಮನು ಪ್ರಳಯಕಾಲದಲ್ಲಿ, ಜಡೆಗಳನ್ನು ಕೆದರಿಕೊಂಡು, ಕೈಯಲ್ಲಿರುವ ಶೂಲಾಗ್ರದಿಂದ ದಿಗ್ಗಜಗಳನ್ನು ಪೋಣಿಸಿಕೊಳ್ಳುತ್ತಾ, ಧ್ವಜಸ್ತಂಭಗಳಂ ಕಡುಸಿಡಿದಾಗಿ ಗಗನಮಂಡಲವನ್ನು ಭೇದಿಸುತ್ತಾ, ಆಯುಧಗಳನ್ನೆತ್ತಿರುವ ಹಸ್ತಗಳಿಂದ ಅನಯಿಸುತ್ತಾ, ಸಿಡಿಲಬ್ಬರವನ್ನು ಹೋಲುವ ಅಟ್ಟಹಾಸದಿಂದಲೇ ಬ್ರಹ್ಮಾಂಡಲವು ಬಿರಿಯವಂತೆ ಗಟ್ಟಿಯಾಗಿ ನಗುತ್ತಾ ನಾಟ್ಯವನ್ನು ಮಾಡುವನೋ ॥೧೦॥ ಅಂತಹ ಅಶಕ್ಯತೇಜನೂ, ಮಹಾಕ್ರುದ್ಧನೂ, ಭ್ರುಕುಟಿ ಭೀಷಣನೂ, ನಕ್ಷತ್ರಮಂಡಲವನ್ನು ನೂಂಕುತ್ತಿರು ಕೋರೆದಾಡೆಯುಳ್ಳವನೂ ಆದ, ಆ ರುದ್ರನನ್ನು ಕೆಣಕಿ ಕೋಪಗೊಳಿಸಿದ ಬ್ರಹ್ಮದೇವನಿ

ಮಸಹ್ಯ ತೇಜಸಂ ಮನ್ಯುಪ್ಲುತಂ ದುರ್ನಿರೀಕ್ಷ್ಯಂ ಭ್ರುಕುಟ್ಯಾ । ಕರಾಳದಂಷ್ಟ್ರಾಭಿ ರುದಸ್ತಭಾಗಣಂ ಸ್ಯಾತ್ಸ್ವಸ್ತಿ ಕಿಂ ಕೋಪಯತೋ ವಿಧಾತುಃ॥ ಬಹ್ವೇವ ಮುದ್ವಿಗ್ನದೃಶೋಚ್ಯಮಾನೇ ಜನೇನ ದಕ್ಷಸ್ಯ ಮುಹುರ್ಮಹಾತ್ಮನಃ । ಉತ್ಪೇತು ರುತ್ಪಾತತಮಾ ಸ್ಸಹಸ್ರಶೋ ಭಯಾವಹಾ ದಿವಿ ಭೂಮೌ ಚ ಪರ್ಯಕ್ ॥೧೨॥ ತಾವ ತ್ಸರುದ್ರಾನುಚರೈ ರ್ಮಖೋ ಮಹಾನ್ನಾನಾಯುಧೈ ರ್ವಾಮನಕೈ ರುದಾಯುಧೈಃ । ಪಿಂಗೈಃ ಪಿಶಂಗೈ ರ್ಮಕರೋದರಾನನೈಃ ಪರ್ಯಾದ್ರವದ್ಭಿ ರ್ವಿದುರಾನ್ವರುಧ್ಯತ ॥ ೧೩ ॥ ಕೇಚಿ ದ್ಬಭಂಜುಃ । ಪ್ರಾಗ್ವಂಶಂ † ಪತ್ನೀಶಾಲಾಂ ತಥಾಽಪರೇ । § ಸದ

ಆಗುವುದೇ? ॥ ೧೧ ॥ ಉದ್ವಿಗ್ನದೃಶಾ - ಹೆದರಿದ ಕಣ್ಣುಳ್ಳ, ಜನೇನ - ಜನದಿಂದ, ಏವಂ - ಇಂತು, ಬಹು - ಪರಿಪರಿಯಾಗಿ, ಉಚ್ಯಮಾನೇಸತಿ - ಹೇಳಲ್ಪಡುತ್ತಿರಲು, ಮಹಾತ್ಮನಃ - ಸ್ಥಿರಚಿತ್ತನಾದ, ದಕ್ಷನಿಗೆ, ಭಯಾವಹಾಃ - ಭಯವನ್ನುಂಟುಮಾಡುವ, ಉತ್ಪಾತತಮಾಃ - ಅತ್ಯಂತ ಭಯಂಕರಗಳಾದ ಉತ್ಪಾತಗಳು, ಸಹಸ್ರಶಃ - ಸಾವಿರಾರು, ದಿವಿ - ಅಂತರಿಕ್ಷದಲ್ಲಿಯೂ, ಭೂಮೌಚ - ಭೂಮಿಯಲ್ಲಿಯೂ, ಪರ್ಯಕ್ - ಎಲ್ಲೆಡೆಗಳಲ್ಲಿಯೂ, ಉತ್ಪೇತುಃ - ಉಂಟಾದುವು ॥ ೧೨ ॥ ಹೇವಿದುರ - ಎಲೈ ವಿದುರನೆ! ತಾವತ್ - ಅಷ್ಟರಲ್ಲಿ, ನಾನಾಯುಧೈಃ - ಅನೇಕಾಯುಧಗಳುಳ್ಳ, ವಾಮನೈಃ - ಕುಳ್ಳರಾದ, ಉದಾಯುಧೈಃ - ಆಯುಧಗಳನ್ನು ಧರಿಸಿರುವ, ಪಿಂಗೈಃ - ಕಪಿಲ ವರ್ಣವುಳ್ಳ, ಪಿಶಂಗೈಃ - ಹೊಂಬಣ್ಣದ, ಮಕ...ನೈಃ - ಮೊಸಳೆಯಂತೆ ಹೊಟ್ಟೆಯೂ ಮುಖವೂ ಉಳ್ಳ, ಪರ್ಯಾದ್ರವದ್ಭಿಃ - ಓಡಿಬರುತ್ತಿರುವ, ರುದ್ರಾನುಚರೈಃ - ರುದ್ರಭಟರಿಂದ, ಸಮಹಾನ್ಮಖಃ - ಆ ದೊಡ್ಡಯಜ್ಞವು, ಅನ್ವರುಧ್ಯತ - ನಾಶಮಾಡಲ್ಪಟ್ಟಿತು ॥೧೩॥ ಕೇಚಿತ್ - ಕೆಲವರು, ಪ್ರಾಗ್ವಂಶವನ್ನು, ಬಭಂಜುಃ - ಮುರಿದರು, ತಥಾ - ಹಾಗೆ ಪರೇ - ಕೆಲವರು, ಪತ್ನೀಶಾಲೆಯನ್ನು, ಮುರಿದರು, ಕೆಲವರು, ಸದಃ - ಸದಸ್ಸನ್ನೂ, ಆಗ್ನೀಧ್ರಶಾಲಾಂ

ದರೂ ಕ್ಷೇಮವಾಗಲಾರದು. ಇತರರ ಪಾಡೇನು ? ॥೧೧॥ ಎಂದು ಅಲ್ಲಿರುವ ಜನರೆಲ್ಲರೂ ಹೆದರಿದ ಹುಲ್ಲೆಯ ಮರಿಯಂತೆ ಚಪಲನೇತ್ರರಾಗಿ, ತಂತಮಗೆ ತೋರಿದಂತೆ ಹೇಳುತ್ತಿರಲು, ಧೀರೋದಾತ್ತನಾದ ದಕ್ಷನನ್ನು ಕೂಡ ಗಾಬರಿಗೊಳಿಸುವಂತೆ ಸುತ್ತಮುತ್ತಲೂ ಸಾವಿರಾರು ಉತ್ಪಾತಗಳುಂಟಾಗುತ್ತಾ ಬಂದುವು ॥೧೨॥ ಅಯ್ಯಾ ವಿದುರನ! ಅಷ್ಟರಲ್ಲಿಯೇ ಕುಳ್ಳರಾಗಿಯೂ, ನಾನಾಯುಧಧರರಾಗಿಯೂ, ಪಿಂಗ ಪಿಶಂಗವರ್ಣವುಳ್ಳವರಾಗಿಯೂ, ಮೊಸಳೆಯಂತೆ ಮುಖೋದರಗಳುಳ್ಳವರಾಗಿಯೂ, ಇರುವ ಅನೇಕಮಂದಿ ರುದ್ರಭಟರು ಓಡಿಬಂದು, ಆ ಮಹಾಯಜ್ಞವನ್ನು ನಾಶಗೊಳಿಸಲಾರಂಭಿಸಿದರು ॥೧೩॥ ಕೆಲವರು ಪ್ರಾಗ್ವಂಶವನ್ನು

† ಭಾ. ಯಜ್ಞಶಾಲೆಯ ಪೂರ್ವ ಪಶ್ಚಿಮ ದಿಕ್ಕುಗಳ ಕಂಬಗಳ ಮೇಲೆ ಅಡ್ಡಲಾಗಿ ಹಾಕುವ ಬೆನ್ನು ಮರಕ್ಕೆ ಪ್ರಾಗ್ವಂಶವೆಂದು ಹೆಸರು.

‡ ಯಜ್ಞಶಾಲೆಯ ಪಶ್ಚಿಮ ದಿಕ್ಕಿನಲ್ಲಿ ಯಜಮಾನ ಪತ್ನಿಯು ನೆಲೆಸಿರುವ ಶಾಲೆಗೆ "ಪತ್ನೀ ಶಾಲೆ" ಯೆಂದು ಹೆಸರು.

§ ಯಜ್ಞಶಾಲೆಯ ಮುಂದೆ ನೋಟಕರು ಕುಳಿತುಕೊಳ್ಳುವ ಸ್ಥಳಕ್ಕೆ ಸದಸ್ಸು ಸಭಾಮಂಟಪವೆಂದು ಹೆಸರು.

ಆಗ್ನೀಧ್ರಶಾಲಾಂಚ ತದ್ವಿಹಾರಂ ಮಹಾನಸಂ ॥೧೪॥ ರುರುಜುರ್ಯ
ಜ್ಞಪಾತ್ರಾಣಿ ತಥೈಕೇಽಗ್ನೀನನಾಶಯನ್ । ಕುಂಡೇಷ್ವಮೂತ್ರಯನ್
ಕೇಚಿದ್ಬಿಭಿದುರ್ವೇದಿಮೇಖಲಾಃ॥೧೫॥ಅಬಾಧಂತ ಮುನೀನನ್ಯ ಏಕೇ ಪ
ತ್ನೀರತರ್ಜಯನ್ । ಅಪರೇ ಜಗೃಹುರ್ದೇವಾನ್ ಪ್ರತ್ಯಾಸನ್ನಾನ್ ಪಲಾಯಿ
ತಾನ್ ॥೧೬॥ ಭೃಗುಂ ಬಬಂಧ ಮಣಿಮಾನ್ ವೀರಭದ್ರಃ ಪ್ರಜಾಪತಿಂ । ಚಂ
ಡೀಶಃ ಪೂಷಣಂ ದೇವಂ ಭಗಂ ನಂದೀಶ್ವರೋಽಗ್ರಹೀತ್ ॥೧೭॥ ಸರ್ವ
ಏವರ್ತ್ವಿಜೋ ದೃಷ್ಟ್ವಾ ಸದಸ್ಯಾಃ ಸದಿವೌಕಸಃ । ತೈರರ್ದ್ಯಮಾನಾಃ ಸು

---

ಚ - ಆಗ್ನೀಂಧ್ರಶಾಲೆಯನ್ನೂ, ತದ್ವಿಹಾರಂ - ಆ ಯಜಮಾನನ ಗೃಹವನ್ನೂ, ಮಹಾನಸಂ - ಪಾಕಶಾಲೆಯನ್ನೂ, ಬಭಂಜುಃ - ಮುರಿದರು ॥೧೪॥ ತಥಾ - ಹಾಗೆ, ಏಕೇ - ಕೆಲವರು, ಯಜ್ಞಪಾತ್ರಾಣಿ - ಯಜ್ಞಪಾತ್ರೆಗಳನ್ನು, ರುರುಜುಃ - ಒಡೆದರು, ಅಗ್ನೀನ್ - ತ್ರೇತಾಗ್ನಿಗಳನ್ನು, ಅನಾಶಯನ್ - ಆರಿಸಿದರು, ಕೇಚಿತ್ - ಕೆಲವರು, ಕುಂಡೇಷು - ಹೋಮಗೊಂಡಗಳಲ್ಲಿ, ಅಮೂತ್ರಯನ್ - ಮೂತ್ರವನ್ನು ಹೊಯ್ದರು, ವೇದಿಮೇಖಲಾಃ - ಉತ್ತರವೇದಿಯ ಸುತ್ತ ನೂಲನ್ನು, ಬಿಭಿದುಃ - ಕಿತ್ತುಹಾಕಿದರು ॥೧೫॥

ಅನ್ಯೇ - ಕೆಲವರು, ಮುನೀನ್ - ಋಷಿಗಳನ್ನು, ಅಬಾಧಂತ - ಪೀಡಿಸಿದರು. ಏಕೇ - ಕೆಲವರು, ಪತ್ನೀಃ - ಋಷಿಪತ್ನಿಯರನ್ನು, ಅತರ್ಜಯನ್ - ಹೆದರಿಸಿದರು. ಅಪರೇ - ಮತ್ತೆ ಕೆಲವರು, ಪ್ರತ್ಯಾಸನ್ನಾನ್ - ಹತ್ತಿರ ಇರುವವರನ್ನೂ, ಪಲಾಯಿತಾನಪಿ - ಓಡಿದವರನ್ನೂ ಕೂಡ, ದೇವಾನ್ - ದೇವತೆಗಳನ್ನು, ಜಗೃಹುಃ - ಹಿಡಿದುಕೊಂಡರು ॥೧೬॥ ಮಣಿಮಾನ್ - ಮಣಿಮಂತನು, ಭೃಗುಂ - ಭೃಗುವನ್ನೂ, ವೀರಭದ್ರಃ - ವೀರಭದ್ರನು, ಪ್ರಜಾಪತಿಂ - ದಕ್ಷನನ್ನೂ, ಚಂಡೀಶಃ - ಚಂಡೀಶ್ವರನು, ಪೂಷಣಂ - ಪೂಷನೆಂಬ, ದೇವಂ - ದೇವತೆಯನ್ನೂ, ಬಬಂಧ - ಕಟ್ಟಿದರು, ನಂದೀಶ್ವರಃ - ನಂದೀಶ್ವರನು, ಭಗಂ - ಭಗನೆಂಬವನನ್ನು, ಅಗ್ರಹೀತ್ - ಹಿಡಿದನು ॥೧೭॥ ಸರ್ವೇ - ಎಲ್ಲಾ, ಋತ್ವಿಜಃ - ಋತ್ವಿಕ್ಕುಗಳೂ, ಸದಸ್ಯಾಃ-

---

ಮುರಿದರು. ಕೆಲವರು ಪತ್ನೀಶಾಲೆಯನ್ನು ಕೆಡಹಿದರು. ಕೆಲವರು ಸಭಾಮಂಟಪವನ್ನುರುಳಿಸಿದರು. ಕೆಲವರು ಆಗ್ನೀಧ್ರಶಾಲೆಯನ್ನು ಹಾಳುಮಾಡಿದರು. ಕೆಲವರು ಯಜಮಾನಶಾಲೆಯನ್ನು ನೆಲಸಮಮಾಡಿದರು. ಕೆಲವರು ಪಾಕಶಾಲೆಯನ್ನು ಧ್ವಂಸಗೈದರು ॥೧೪॥ ಕೆಲವರು ಯಜ್ಞಪಾತ್ರೆಗಳನ್ನು ಒಡೆದರು. ಕೆಲವರು ದಕ್ಷಿಣಾಗ್ನಿ, ಗಾರ್ಹಪತ್ಯ, ಆಹವನೀಯಗಳೆಂಬ ಅಗ್ನಿಗಳನ್ನು ಆರಿಸಿದರು. ಕೆಲವರು ಅಗ್ನಿಗೊಂಡಗಳಲ್ಲಿ ಮೂತ್ರವನ್ನು ಸುರಿದರು. ಕೆಲವರು ಉತ್ತರವೇದಿಯ ಸುತ್ತಲೂ, ಬಿಗಿದಿರುವ ನೂಲುದಾರವನ್ನು ಕಿತ್ತುಬಿಸುಟರು ॥೧೫॥ ಕೆಲವರು ಋಷಿಗಳನ್ನು ಹೆದರಿಸಿದರು. ಕೆಲವರು ಮುನಿಪತ್ನಿಯರನ್ನು ಗದರಿಸಿದರು. ಮತ್ತೆ ಕೆಲವರು ಹತ್ತಿರ ಇರುವವರನ್ನೂ, ಓಡಿಹೋಗುವವರನ್ನೂ ದೇವತೆಗಳನ್ನು ಹಿಡಿದುಕೊಂಡರು ॥೧೬॥ ಬಳಿಕ ಮಣಿಮಂತನೆಂಬವನು ಭೃಗುವನ್ನೂ, ವೀರಭದ್ರನು ದಕ್ಷನನ್ನೂ, ಚಂಡೀಶ್ವರನು ಪೂಷಣನೆಂಬ ದೇವತೆಯನ್ನೂ, ಹಿಡಿದರು. ನಂದೀಶ್ವರನು ಭಗನೆಂಬವನನ್ನು ಹಿಡಿದುಕೊಂಡನು॥೧೭॥ಇಂತು ಗದ್ದಲವಾಗುತ್ತಿರಲು, ಅಲ್ಲಿರುವ

---

* (1) ಸಭಾಮಂಟಪದ ಮುಂದಿರುವುದಕ್ಕೆ ಹವಿರ್ಧಾನವೆಂದು ಹೆಸರು. ಹವಿರ್ಧಾನದ ಉತ್ತರದಲ್ಲಿರುವ ಶಾಲೆಗೆ ಆಗ್ನೀಧ್ರ ಶಾಲೆಯೆಂದು ಹೆಸರು.

ಮನುಷ್ಯ ತೇಜಸಂ ಮನ್ಯುಪ್ಲುತಂ ದುರ್ನಿಷಹಂ ಭ್ರುಕುಟ್ಯಾ । ಕರಾಳದಂಷ್ಟ್ರಾಭಿ ರುದಸ್ತಭಾಗಣಂ ಸ್ಯಾತ್ಸ್ವಸ್ತಿ ಕಿಂ ಕೋಪಯತೋ ವಿಧಾತುಃ॥ ಬಹ್ವೇವ ಮುದ್ವಿಗ್ನದೃಶೋಚ್ಯಮಾನೇ ಜನೇನ ದಕ್ಷಸ್ಯ ಮುಹು ರ್ಮಹಾತ್ಮನಃ । ಉತ್ಪೇತು ರುತ್ಪಾತತಮಾ ಸ್ಸಹಸ್ರಶೋ ಭಯಾವಹಾ ದಿವಿ ಭೂಮೌ ಚ ಪರ್ಯಕ್ ॥೧೨॥ ತಾವ ತ್ಸರುದ್ರಾ ಽ ನುಚರೈ ರ್ಮಖೋ ಮಹಾ ನ್ನಾನಾಯುಧೈ ರ್ವಾಮನಕೈ ರುದಾಯುಧೈಃ । ಪಿಂಗೈಃ ಪಿಶಂಗೈ ರ್ಮಕರೋದರಾನನೈಃ ಪರ್ಯಾದ್ರವದ್ಭಿ ರ್ವಿದುರಾನ್ವರುಧ್ಯತ ॥ ೧೩ ॥ ಕೇಚಿ ದ್ಬಭಂಜುಃ † ಪ್ರಾಗ್ವಂಶಂ ‡ ಪತ್ನೀಶಾಲಾಂ ತಥಾಽಪರೇ । § ಸದ

ಆಗುವುದೇ? ॥ ೧೧ ॥ ಉದ್ವಿಗ್ನದೃಶಾ - ಹೆದರಿದ ಕಣ್ಣುಳ್ಳ, ಜನೇನ - ಜನದಿಂದ, ಏವಂ - ಇಂತು, ಬಹು - ಪರಿಪರಿಯಾಗಿ, ಉಚ್ಯಮಾನೇಸತಿ - ಹೇಳಲ್ಪಡುತ್ತಿರಲು, ಮಹಾತ್ಮನಃ - ಸ್ಥಿರಚಿತ್ತನಾದ, ದಕ್ಷನಿಗೆ, ಭಯಾವಹಾಃ - ಭಯವನ್ನುಂಟುಮಾಡುವ, ಉತ್ಪಾತತಮಾಃ - ಅತ್ಯಂತ ಭಯಂಕರಗಳಾದ ಉತ್ಪಾತಗಳು, ಸಹಸ್ರಶಃ - ಸಾವಿರಾರು, ದಿವಿ - ಅಂತರಿಕ್ಷದಲ್ಲಿಯೂ, ಭೂಮೌಚ - ಭೂಮಿಯಲ್ಲಿಯೂ, ಪರ್ಯಕ್ - ಎಲ್ಲೆಡೆಗಳಲ್ಲಿಯೂ, ಉತ್ಪೇತುಃ - ಉಂಟಾದುವು ॥ ೧೨ ॥ ಹೇವಿದುರ - ಎಲೈ ವಿದುರನೆ! ತಾವತ್ - ಅಷ್ಟರಲ್ಲಿ, ನಾನಾಯುಧೈಃ - ಅನೇಕಾಯುಧಗಳುಳ್ಳ, ವಾಮನೈಃ - ಕುಳ್ಳರಾದ, ಉದಾಯುಧೈಃ - ಆಯುಧಗಳನ್ನು ಧರಿಸಿರುವ, ಪಿಂಗೈಃ - ಕಪಿಲ ವರ್ಣವುಳ್ಳ, ಪಿಶಂಗೈಃ - ಹೊಂಬಣ್ಣದ, ಮಕ...ನೈಃ - ಮೊಸಳೆಯಂತೆ ಹೊಟ್ಟೆಯೂ ಮುಖವೂ ಉಳ್ಳ, ಪರ್ಯಾದ್ರವದ್ಭಿಃ - ಓಡಿಬರುತ್ತಿರುವ, ರುದ್ರಾನುಚರೈಃ - ರುದ್ರಭಟರಿಂದ, ಸಮಹಾನ್ಮಖಃ - ಆ ದೊಡ್ಡಯಜ್ಞವು, ಅನ್ವರುಧ್ಯತ - ನಾಶವಾದಲ್ಪಟ್ಟಿತು ॥೧೩॥ ಕೇಚಿತ್ - ಕೆಲವರು, ಪ್ರಾಗ್ವಂಶವನ್ನು, ಬಭಂಜುಃ - ಮುರಿದರು, ತಥಾ - ಹಾಗೆ ಪರೇ - ಕೆಲವರು, ಪತ್ನೀಶಾಲೆಯನ್ನು, ಮುರಿದರು, ಕೆಲವರು, ಸದಃ - ಸದಸ್ಸನ್ನೂ, ಅಗ್ನೀಂಧ್ರಶಾಲಾ

ದರೂ ಕ್ಷೇಮವಾಗಲಾರದು. ಇತರರ ಪಾಡೇನು ? ॥೧೧॥ ಎಂದು ಅಲ್ಲಿರುವ ಜನರೆಲ್ಲರೂ ಹೆದರಿದ ಹುಲ್ಲೆಯ ಮರಿಯಂತೆ ಚಪಲನೇತ್ರರಾಗಿ, ತಂತಮಗೆ ತೋರಿದಂತೆ ಹೇಳುತ್ತಿರಲು, ಧೀರೋದಾತ್ತನಾದ ದಕ್ಷನನ್ನು ಕೂಡ ಗಾಬರಿಗೊಳಿಸುವಂತೆ ಸುತ್ತಮುತ್ತಲೂ ಸಾವಿರಾರು ಉತ್ಪಾತಗಳುಂಟಾಗುತ್ತಾ ಬಂದುವು ॥೧೨॥ ಅಯ್ಯಾ ವಿದುರನೆ! ಅಷ್ಟರಲ್ಲಿಯೇ ಕುಳ್ಳರಾಗಿಯೂ, ನಾನಾಯುಧಧರರಾಗಿಯೂ, ಪಿಂಗ ಪಿಶಂಗವರ್ಣವುಳ್ಳವರಾಗಿಯೂ, ಮೊಸಳೆಯಂತೆ ಮುಖೋದರಗಳುಳ್ಳವರಾಗಿಯೂ, ಇರುವ ಅನೇಕಮಂದಿ ರುದ್ರಭಟರು ಓಡಿಬಂದು, ಆ ಮಹಾಯಜ್ಞವನ್ನು ನಾಶಗೊಳಿಸಲಾರಂಭಿಸಿದರು॥೧೩॥ ಕೆಲವರು ಪ್ರಾಗ್ವಂಶವನ್ನು

† ಭಾ. ಯಜ್ಞಶಾಲೆಯ ಪೂರ್ವ ಪಶ್ಚಿಮ ದಿಕ್ಕುಗಳ ಕಂಬಗಳ ಮೇಲೆ ಅಡ್ಡಲಾಗಿ ಹಾಕುವ ಬೆನ್ನು ಮರಕ್ಕೆ ಪ್ರಾಗ್ವಂಶವೆಂದು ಹೆಸರು.

‡ ಯಜ್ಞಶಾಲೆಯ ಪಶ್ಚಿಮ ದಿಕ್ಕಿನಲ್ಲಿ ಯಜಮಾನ ಪತ್ನಿಯು ನೆಲೆಸಿರುವ ಶಾಲೆಗೆ "ಪತ್ನೀಶಾಲೆ" ಯೆಂದು ಹೆಸರು.

§ ಯಜ್ಞಶಾಲೆಯ ಮುಂದೆ ನೋಟಕರು ಕುಳಿತುಕೊಳ್ಳುವ ಸ್ಥಳಕ್ಕೆ ಸದಸ್ಸು ಸಭಾಮಂಟಪವೆಂದು ಹೆಸರು.

ಆಗ್ನೀಧ್ರಶಾಲಾಂಚ ತದ್ವಿಹಾರಂ ಮಹಾನಸಂ ॥೧೪॥ ರುರುಜು ರ್ಯ
ಜ್ಞಪಾತ್ರಾಣಿ ತಥೈಕೇಽಗ್ನೀನನಾಶಯನ್ । ಕುಂಡೇಷ್ವಮೂತ್ರಯನ್
ಕೇಚಿದ್ಬಿಭಿದು ರ್ವೇದಿ ಮೇಖಲಾಃ॥೧೫॥ಅಬಾಧಂತ ಮುನೀನನ್ಯ ಏಕೇ ಪ
ತ್ನೀ ರತರ್ಜಯನ್ । ಅಪರೇ ಜಗೃಹು ರ್ದೇವಾನ್ ಪ್ರತ್ಯಾಸನ್ನಾನ್ ಪಲಾಯಿ
ತಾನ್ ॥೧೬॥ ಭೃಗುಂ ಬಬಂಧ ಮಣಿಮಾನ್ ವೀರಭದ್ರಃ ಪ್ರಜಾಪತಿಂ । ಚಂ
ಡೀಶಃ ಪೂಷಣಂ ದೇವಂ ಭಗಂ ನಂದೀಶ್ವರೋಽಗ್ರಹೀತ್ ॥೧೭॥ ಸರ್ವ
ಏವರ್ತ್ವಿಜೋ ದೃಷ್ಟ್ವಾ ಸದಸ್ಯಾ ಸ್ಸದಿವೌಕಸಃ । ತೈ ರರ್ದ್ಯಮಾನಾಃ ಸು

ಚ - ಆಗ್ನೀಂಧ್ರಶಾಲೆಯನ್ನೂ, ತದ್ವಿಹಾರಂ - ಆ ಯಜಮಾನನ ಗೃಹವನ್ನೂ, ಮಹಾನಸಂ - ಪಾಕಶಾ
ಲೆಯನ್ನೂ, ಬಭಂಜುಃ - ಮುರಿದರು ॥೧೪॥ ತಥಾ - ಹಾಗೆ, ಏಕೇ - ಕೆಲವರು, ಯಜ್ಞಪಾತ್ರಾಣಿ - ಯ
ಜ್ಞಪಾತ್ರೆಗಳನ್ನು, ರುರುಜುಃ - ಒಡೆದರು, ಅಗ್ನೀನ್ - ತ್ರೇತಾಗ್ನಿಗಳನ್ನು, ಅನಾಶಯನ್ - ಆರಿಸಿದರು,
ಕೇಚಿತ್ - ಕೆಲವರು, ಕುಂಡೇಷು - ಹೋಮಗೂಂಡಗಳಲ್ಲಿ, ಅಮೂತ್ರಯನ್ - ಮೂತ್ರವನ್ನು ಹೊ
ಯ್ದರು, ವೇದಿಮೇಖಲಾಃ - ಉತ್ತರವೇದಿಯ ಸುತ್ತು ನೂಲನ್ನು, ಬಿಭಿದುಃ - ಕಿತ್ತುಹಾಕಿದರು ॥೧೫॥
ಅನ್ಯೇ - ಕೆಲವರು, ಮುನೀನ್ - ಋಷಿಗಳನ್ನು, ಅಬಾಧಂತ - ಪೀಡಿಸಿದರು. ಏಕೇ - ಕೆಲವರು,
ಪತ್ನೀಃ - ಋಷಿಪತ್ನಿಯರನ್ನು, ಅತರ್ಜಯನ್ - ಹೆದರಿಸಿದರು. ಅಪರೇ - ಮತ್ತೆಕೆಲವರು, ಪ್ರತ್ಯಾಸ
ನ್ನಾನ್ - ಹತ್ತಿರ ಇರುವವರನ್ನೂ, ಪಲಾಯಿತಾನಪಿ - ಓಡಿದವರನ್ನೂ ಕೂಡ, ದೇವಾನ್ - ದೇವತೆಗಳ
ನ್ನು, ಜಗೃಹುಃ - ಹಿಡಿದುಕೊಂಡರು ॥೧೬॥ ಮಣಿಮಾನ್ - ಮಣಿಮಂತನು, ಭೃಗುಂ - ಭೃಗುವನ್ನೂ,
ವೀರಭದ್ರಃ - ವೀರಭದ್ರನು, ಪ್ರಜಾಪತಿಂ - ದಕ್ಷನನ್ನೂ, ಚಂಡೀಶಃ - ಚಂಡೀಶ್ವರನು, ಪೂಷಣಂ - ಪೂಷ
ನೆಂಬ, ದೇವಂ - ದೇವತೆಯನ್ನೂ, ಬಬಂಧ - ಕಟ್ಟಿದರು, ನಂದೀಶ್ವರಃ - ನಂದೀಶ್ವರನು, ಭಗಂ - ಭಗ
ನೆಂಬವನನ್ನು, ಅಗ್ರಹೀತ್ - ಹಿಡಿದನು ॥೧೭॥ ಸರ್ವೇ - ಎಲ್ಲಾ, ಋತ್ವಿಜಃ - ಋತ್ವಿಕ್ಕುಗಳೂ, ಸದಸ್ಯಾಃ-

ಮುರಿದರು. ಕೆಲವರು ಪತ್ನೀಶಾಲೆಯನ್ನು ಕೆಡಹಿದರು. ಕೆಲವರು ಸಭಾಮಂಟಪವನ್ನುರು
ಳಿಸಿದರು. ಕೆಲವರು ಆಗ್ನೀಧ್ರಶಾಲೆಯನ್ನು ಹಾಳುಮಾಡಿದರು. ಕೆಲವರು ಯಜಮಾನಶಾಲೆ
ಯನ್ನು ನೆಲಸಮಮಾಡಿದರು. ಕೆಲವರು ಪಾಕಶಾಲೆಯನ್ನು ಧ್ವಂಸಗೈದರು ॥೧೪॥ ಕೆಲವರು
ಯಜ್ಞಪಾತ್ರೆಗಳನ್ನು ಒಡೆದರು. ಕೆಲವರು ದಕ್ಷಿಣಾಗ್ನಿ, ಗಾರ್ಹಪತ್ಯ, ಆಹವನೀಯಾಗ
ಳೆಂಬ ಅಗ್ನಿಗಳನ್ನು ಆರಿಸಿದರು. ಕೆಲವರು ಅಗ್ನಿಗೂಂಡಗಳಲ್ಲಿ ಮೂತ್ರವನ್ನು ಸುರಿದರು.
ಕೆಲವರು ಉತ್ತರವೇದಿಯ ಸುತ್ತಲೂ, ಬಿಗಿದಿರುವ ನೂಲುದಾರವನ್ನು ಕಿತ್ತುಬಿಸುಟ
ರು ॥೧೫॥ ಕೆಲವರು ಋಷಿಗಳನ್ನು ಹೆದರಿಸಿದರು. ಕೆಲವರು ಮುನಿಪತ್ನಿಯರನ್ನು ಗದರಿ
ಸಿದರು. ಮತ್ತೆ ಕೆಲವರು ಹತ್ತಿರ ಇರುವವರನ್ನೂ, ಓಡಿಹೋಗುವವರನ್ನೂ ದೇವತೆಗಳ
ನ್ನು ಹಿಡಿದುಕೊಂಡರು ॥೧೬॥ ಬಳಿಕ ಮಣಿಮಂತನೆಂಬವನು ಭೃಗುವನ್ನೂ, ವೀರಭದ್ರ
ನು ದಕ್ಷನನ್ನೂ, ಚಂಡೀಶ್ವರನು ಪೂಷಣನೆಂಬ ದೇವತೆಯನ್ನೂ, ಹಿಡಿದರು. ನಂದೀ
ಶ್ವರನು ಭಗನೆಂಬವನನ್ನು ಹಿಡಿದುಕೊಂಡನು॥೧೭॥ಇಂತು ಗದ್ದಲವಾಗುತ್ತಿರಲು, ಅಲ್ಲಿರುವ

* (1) ಸಭಾಮಂಟಪದ ಮುಂದಿರುವುದಕ್ಕೆ ಹವಿರ್ಧಾನವೆಂದು ಹೆಸರು. ಹವಿರ್ಧಾನದ ಉತ್ತರ
ದಲ್ಲಿರುವಶಾಲೆಗೆ ಆಗ್ನೀಧ್ರ ಶಾಲೆಯೆಂದು ಹೆಸರು.

ಭೃಶಂ ಗ್ರಾವಭಿ ರ್ನೈಕಧಾ ಽ ದ್ರವನ್ ॥೧೮॥ ಜುಹ್ವತ ಸ್ಸ್ರುವಹಸ್ತಸ್ಯ ಶ್ಮಶ್ರೂಣಿ ಭಗವಾನ್ ಭವಃ । ಭೃಗೋ ರ್ಲುಲುಂಚೇ ಸದಸಿ ಯೋ ಽ ಹಸತ್ ಶ್ಮಶ್ರು ದರ್ಶಯನ್ ॥೧೯॥ ಭಗಸ್ಯ ನೇತ್ರೇ ಭಗವಾನ್ ಪಾತಿತಸ್ಯ ರುಷಾ ಭುವಿ । ಉಜ್ಜಹಾರ ಸದಸ್ಥೋ ಽ ಕ್ಷ್ಣಾ ಯ ಶ್ಶಪಂತ ಮಸೂಸುಚತ್ ॥೨೦॥ ಪೂಷ್ಣೋ ಹ್ಯಪಾತಯ ದ್ದಂತಾನ್ ಕಾಲಿಂಗಸ್ಯ ಯಥಾ ಬಲಃ । ಶಪ್ಯಮಾನೇ ಗರಿಮಣಿ ಯೋ ಽ ಹಸ ದ್ದರ್ಶಯನ್ ದತಃ ॥೨೧॥ ಆಕ್ರಮ್ಯೋರಸಿ ದಕ್ಷಸ್ಯ ಶಿತಧಾರೇಣ ಹೇತಿನಾ । ಛಿಂದ ನ್ನಪಿ ತದುದ್ಧರ್ತುಂ ನಾಶಕ್ನೋ ತ್ತ್ರ್ಯಂಬಕ

---

ಸಭಾಸದರು, ಸದಿವೌಕಸಃ - ದೇವತೆಗಳಿಂದೊಡಗೂಡಿದವರಾಗಿ, ದೃಷ್ಟ್ವಾ - ಕಂಡು, ತೈಃ - ಆ ರುದ್ರಭಟರಿಂದ, ಗ್ರಾವಭಿಃ - ಕಲ್ಲುಗಳಿಂದ, ಸುಭೃಶಂ - ಬಹಳವಾಗಿ, ಅರ್ದ್ಯಮಾನಾಃ - ಪೀಡಿತರಾಗಿ, ನೈಕಧಾ - ನಾನಾಕಡೆಗೆ, ಅದ್ರವನ್ - ಓಡಿದರು ॥೧೮॥ ಯಃ - ಯಾವನು, ಶ್ಮಶ್ರು - ಮೀಸೆಗಳನ್ನು, ದರ್ಶಯನ್ - ತೋರುತ್ತಾ, ಅಹಸತ್ - ನಕ್ಕನೋ, ಸ್ರುವಹಸ್ತಸ್ಯ - ಹೋಮದ ಸಟ್ಟುಗವನ್ನು ಹಿಡಿದು, ಜುಹ್ವತಃ - ಹೋಮಮಾಡುತ್ತಿರುವ, ಭೃಗೋಃ - ಆ ಭೃಗುವಿನ, ಶ್ಮಶ್ರೂಣಿ - ಗಡ್ಡ ಮೀಸೆಗಳನ್ನು, ಭಗವಾನ್ - ಪೂಜ್ಯನಾದ, ಭವಃ - ವೀರಭದ್ರನು, ಸದಸಿ - ಸಭೆಯಲ್ಲಿ, ಲುಲುಂಚೇ - ಕಿತ್ತುಹಾಕಿದನು ॥೧೯॥ ಯಃ - ಯಾವನು, ಸದಸ್ಥಃ - ಸಭೆಯಲ್ಲಿ ಕುಳಿತು, ಶಪಂತಂ - ಬೈಯುವ ದಕ್ಷನನ್ನು, ಅಕ್ಷ್ಣಾ - ಕಣ್ಣಿಂದ ಅಸೂಸುಚತ್ - ಪ್ರೇರಿಸಿದನೋ, ರುಷಾ - ಕೋಪದಿಂದ, ಭುವಿ - ಭೂಮಿಯಲ್ಲಿ, ಪಾತಿತಸ್ಯ - ಕೆಡಹಲ್ಪಟ, ಭಗಸ್ಯ - ಆ ಭಗನ, ನೇತ್ರೇ - ಕಣ್ಣುಗಳನ್ನು, ಉಜ್ಜಹಾರ - ಕಳಚಿದನು ॥೨೦॥

ಗರಿಮಣಿ - ಲೋಕ ಗುರುವಾದ ರುದ್ರನು, ಶಪ್ಯಮಾನೇ - ದೂಷಿಸಲ್ಪಡುವಾಗ, ಯಃ - ಯಾವನು, ದತಃ - ಹಲ್ಲುಗಳನ್ನು, ದರ್ಶಯನ್ - ತೋರಿಸುತ್ತಾ, ಅಹಸತ್ - ನಕ್ಕನೋ, ಅಂತಹ ಪೂಷ್ಣಃ - ಪೂಷದೇವತೆಯ (ಸೂರ್ಯನ) ದಂತಾನ್ - ಹಲ್ಲುಗಳನ್ನು, ಕಾಲಿಂಗಸ್ಯ - ಕಳಿಂಗರಾಜನಿಗೆ, ಬಲೋಯಥಾ - ಬಲರಾಮನಂತೆ, ಅಪಾತಯತ್ - ಕೆಡಹಿದನು ॥೨೧॥ ತದಾ - ಆಗ, ತ್ರ್ಯಂಬಕಃ - ವೀರಭದ್ರನು, ದಕ್ಷಸ್ಯ - ದಕ್ಷನ, ಉರಸಿ - ಎದೆಯಲ್ಲಿ, ಆಕ್ರಮ್ಯ - ತುಳಿದುಕೊಂಡು, ಶಿತಧಾರೇಣ - ತೀಕ್ಷ್ಣಾಗ್ರವುಳ್ಳ, ಹೇ

---

ಋತ್ವಿಜರು, ಸಭಾಸದರು, ದೇವತೆಗಳೂ ಎಲ್ಲರೂ ಇದನ್ನು ಕಂಡು, ಆ ರುದ್ರಭಟರೆಸೆಯುತ್ತಿರುವ ಕವಣೆಗಲ್ಲುಗಳ ಪೆಟ್ಟುಗಳನ್ನು ತಡೆಯಲಾರದೆ, ದಿಕ್ಕಾಪಾಲಾಗಿ ಓಡಿಹೋದರು ॥೧೮॥ ಆಗ ಭಗವಂತನಾದ ವೀರಭದ್ರನು, ಮುನ್ನು ಸಭೆಯಲ್ಲಿ ಯಾವನು ಮೀಸೆಗಳನ್ನು ತಿರುವಿಕೊಂಡು ನಕ್ಕನೋ, ಸ್ರುವವನ್ನು ಹಿಡಿದು ಹೋಮಮಾಡುತ್ತಿರುವ ಆ ಭೃಗುಮುನಿಯ ಗಡ್ಡಮೀಸೆಗಳನ್ನು ಕಿತ್ತು ನೆಲಕ್ಕೆ ಬಿಸುಟನು ॥೧೯॥ ಬಳಿಕ, ಪೂರ್ವದಲ್ಲಿ ಶಿವನಿಂದೆಯನ್ನು ಮಾಡತೊಡಗಿದ ದಕ್ಷಪ್ರಜಾಪತಿಯು ಸಭೆಯಲ್ಲಿದ್ದುಕೊಂಡು ಯಾವನು ಕಣ್ಣನ್ನು ಮಿಟಕಿಸಿ ಪ್ರೇರಿಸಿದನೋ, ಅಂತಹ ಭಗನೆಂಬವನನ್ನು ಕೋಪದಿಂದ ನೆಲಕ್ಕೆ ಕೆಡಹಿ ಅವನ ಕಣ್ಣುಗಳನ್ನು ಕಿತ್ತುಹಾಕಿದನು ॥೨೦॥ ತರುವಾಯ, ಲೋಕಗುರುವಾದ ಮೃತ್ಯುಂಜಯನನ್ನು ದಕ್ಷನು ದೂಷಿಸುವಾಗ ಯಾವನು ಹಲ್ಲುಗಳನ್ನು ಕಿರಿದು ನಕ್ಕನೋ, ಆ ಸೂರ್ಯನನ್ನು ಹಿಡಿದುಕೊಂಡು, ಮುನ್ನು ಅನಿರುದ್ಧನ ವಿವಾಹಕಾಲದಲ್ಲಿ ಬಲರಾಮನು ಕಳಿಂಗರಾಜನ ಹಲ್ಲು ಮುರಿದಂತೆ, ಅವನ ಹಲ್ಲುಗಳನ್ನು ಕಿತ್ತುಹಾಕಿದನು ॥೨೧॥ ಆಗ ತ್ರ್ಯಂಬಕನಾದ ವೀರಭದ್ರನು

ಸ್ತದಾ ॥೨೨॥ ಶಸ್ತ್ರೈ ರಸ್ತ್ರಾನ್ವಿತೈ ರೇನ ಮನಿರ್ಭಿನ್ನತ್ವಚಂ ಹರಃ । ವಿಸ್ಮ
ಯಂ ಪರ ಮಾಪನ್ನೋ ದಧ್ಯೌ ಪಶುಪತಿ ಶ್ಚಿರಂ ॥೨೩॥ ದೃಷ್ಟ್ವಾ ಸಂಜ್ಞಪ
ನಂ ಯೋಗಂ ಪಶೂನಾಂ ಸಪತಿ ರ್ಮಖೇ । ಯಜಮಾನಪಶೋ ಸ್ತಸ್ಯ ಕಾ
ಯಾ ತ್ತೇನಾ ಽಹರ ಚ್ಛಿರಃ ॥೨೪॥ ಸಾಧುವಾದ ಸ್ತದಾ ತೇಷಾಂ ಕರ್ಮ
ತ ತ್ತಸ್ಯ ಶಂಸತಾಂ । ಭೂತಪ್ರೇತಪಿಶಾಚಾನಾ ಮನ್ಯೇಷಾಂ ತದ್ವಿಪರ್ಯ

ಶಿನಾ - ಖಡ್ಗದಿಂದ, ಛಿಂದನ್ನಪಿ - ಕಡಿದರೂ, ತತ್ - ಆ ತಲೆಯನ್ನು, ಉದ್ಧರ್ತುಂ - ತೆಗೆಯುವುದಕ್ಕೆ, ನಾಶಕ್ನೋತ್ - ಸಮರ್ಥನಾಗಲಿಲ್ಲ ॥೨೨॥ ಪಶುಪತಿಃ- ಭೂತನಾಥನಾದ, ಹರಃ-ವೀರಭದ್ರನು, ಅಸ್ತ್ರಾನ್ವಿತೈಃ - ಮಂತ್ರಸಹಿತಗಳಾದ, ಶಸ್ತ್ರೈಃ - ಶಸ್ತ್ರಗಳಿಂದ, ಅನಿರ್ಭಿನ್ನತ್ವಚಂ - ಕತ್ತರಿಸಲ್ಪಡದ ಚರ್ಮವುಳ್ಳ, ಏನಂ - ಈ ದಕ್ಷನನ್ನು (ಕಂಡು) ಪರಮಂ - ಅಧಿಕವಾದ, ವಿಸ್ಮಯಂ - ಆಶ್ಚರ್ಯವನ್ನು, ಆಪನ್ನಃ - ಹೊಂದಿ, ಚಿರಂ - ಬಹಳಹೊತ್ತು, ದಧ್ಯೌ - ಯೋಚಿಸಿದನು ॥೨೩॥ ಪಶೂನಾಂ - ಪಶುಗಳಿಗೆ (ಜೀವರಿಗೆ) ಪತಿಃ - ಒಡೆಯನಾದ, ಸಃ - ಆ ವೀರಭದ್ರನು, ಮಖೇ - ಯಜ್ಞದಲ್ಲಿ, ಸಂಜ್ಞಪನಂ - ಪಶುಮಾರಣದ ಯೋಗಂ - ಉಪಾಯವನ್ನು, ದೃಷ್ಟ್ವಾ - ಕಂಡು, ತೇನ-ಅದರಿಂದ, ತಸ್ಯಯಜಮಾನಪಶೋಃ - ಆ ದಕ್ಷನೆಂಬ ಪಶುವಿನ, ಕಾಯಾತ್ - ಶರೀರದಿಂದ, ಶಿರಃ - ತಲೆಯನ್ನು, ಅಹರತ್ - ಕೆಡಹಿದನು ॥೨೪॥ ತದಾ- ಆಗ, ತಸ್ಯ - ಆ ವೀರಭದ್ರನ, ತತ್ಕರ್ಮ- ಆ ಕಾರ್ಯವನ್ನು, ಶಂಸತಾಂ-ಹೊಗಳುವ, ಭೂತ...ನಾಂ- ಭೂತ, ಪ್ರೇತ, ಪಿಶಾಚ ಮೊದಲಾದವರ, ಸಾಧುವಾದಃ - ಜಯಜಯಶಬ್ದವೂ, ಅನ್ಯೇಷಾಂ - ದಕ್ಷನಕಡೆಯ ಬ್ರಾಹ್ಮಣಾದಿಗಳ, ತದ್ವಿಪರ್ಯಯಃ - ಅಕಟಾ - ಅಯ್ಯೋ ಮೊದಲಾದ ಅಮಂಗಳ ಶಬ್ದಗಳೂ

ದಕ್ಷನನ್ನು ನೆಲಕ್ಕೆ ಕೆಡಹಿ ಎದೆಯನ್ನು ತುಳಿದುಕೊಂಡು ತೀಕ್ಷ್ಣಾಗ್ರವಾದ ಖಡ್ಗದಿಂದ ಅವನ ತಲೆಯನ್ನು ಕಡಿದರೂ ಅದು ಕತ್ತರಿಸಲಿಲ್ಲ ॥೨೨॥ ಬಳಿಕ ಪಶುಪತಿಯಾದ ರುದ್ರನು ಮಂತ್ರಾಸ್ತ್ರ ಸಹಿತಗಳಾದ ಶಸ್ತ್ರಗಳಿಂದ ಎಷ್ಟು ಬಗೆಯಾಗಿ ಛೇದಿಸಿದರೂ ಅವನತಲೆಯು ಹಾಗೆಯೇ ಇರುವುದನ್ನು ಕಂಡು, ಬಹಳಕಾಲದ ವರೆಗೂ ಪರಮಾಶ್ಚರ್ಯ ಭರಿತನಾಗಿ ಆಲೋಚಿಸುತ್ತಿದ್ದನು ॥೨೩॥ ಅನಂತರದಲ್ಲಿ ಆ ಪಶುಪತಿಯು ಯಜ್ಞದಲ್ಲಿ ಪಶುಗಳನ್ನು ಯಾವರೀತಿಯಾಗಿ ಕತ್ತುಹಿಸುಕಿ ಕೊಲ್ಲುವರೋ, ಆ ಪಶುಮಾರಣೋಪಾಯದಿಂದಲೇ ದಕ್ಷನೆಂಬ ಯಜಮಾನಪಶುವನ್ನೂ ವಧಿಸಬೇಕೆಂದು ನಿಶ್ಚಯಿಸಿ ಅಂತೆಯೇ ಆ ದಕ್ಷನ ಕೊರಳನ್ನು ಹಿಸುಕಿ ಕತ್ತರಿಸಿದನು. ಇಂತು ದಕ್ಷನು ಮಡಿದಕೂಡಲೇ ವೀರಭದ್ರನು ಮಾಡಿದ ದಕ್ಷಮಾರಣ ಕರ್ಮವನ್ನು ಹೊಗಳುತ್ತಾ, ಭೂತ,ಪ್ರೇತ,ಪಿಶಾಚಾದಿಗಳೆಲ್ಲರೂ "ಜಯ ಜಯ" ಎಂದು ಹರ್ಷದಿಂದ ಕೊಂಡಾಡಿದರು. ಅಲ್ಲಿರುವ ಬ್ರಾಹ್ಮಣಾದಿಗಳು ಆದಕ್ಷನಮರಣಕ್ಕಾಗಿ ಚಿಂತಿಸುತ್ತಾ ಆಹಾ! ಅಕಟಾ! ಎಂದು ಗೋಳಾಡಿದರು ॥೨೪॥ ಬಳಿಕ ಆ ವೀರಭದ್ರನು ಮತ್ತಷ್ಟು ಕ್ರುದ್ಧನಾಗಿ ಆ ದಕ್ಷನ ತಲೆಯನ್ನು ದಕ್ಷಿಣಾಗ್ನಿಯಲ್ಲಿ ಹೋಮಮಾಡಿ,

ಯಃ ॥೨೫॥ ಜುಹಾವೈತಚ್ಛಿರಸ್ತಸ್ಮಿನ್ ದಕ್ಷಿಣಾಗ್ನಾವಮರ್ಷಿತಃ । ತದ್ದೇವಯಜನಂ ದಗ್ಧ್ವಾ ಪ್ರಾತಿಷ್ಠದ್ಗುಹ್ಯಕಾಲಯಂ ॥೨೬॥

—ಇತಿ ಪಂಚಮಾಧ್ಯಾಯಃ.—

## ಓಂನಮಃ ಪರಮಾತ್ಮನೇ

### —ಅಥ ಷಷ್ಠೋಽಧ್ಯಾಯಃ—

ಮೈತ್ರೇಯಃ॥ ಅಥ ದೇವಗಣಾಃ ಸ್ಸರ್ವೇ ರುದ್ರಾನೀಕೈಃ ಪರಾಜಿತಾಃ। ಶೂಲ ಪಟ್ಟಿಸ ನಿಸ್ತ್ರಿಂಶಗದಾ ಪರಿಘ ಮುದ್ಗರೈಃ ॥೧॥ ಸಂಛಿನ್ನಭಿನ್ನಸರ್ವಾಂಗಾ

---

ಆದುವು ॥೨೫॥ ಅಮರ್ಷಿತಃ-ಕೋಪಗೊಂಡವನಾಗಿ, ಏತಚ್ಛಿರಃ- ಈ ತಲೆಯನ್ನು, ತಸ್ಮಿನ್‌ದಕ್ಷಿಣಾಗ್ನೌ- ಆ ದಕ್ಷಿಣಾಗ್ನಿಯಲ್ಲಿ, ಜುಹಾವ - ಸುಟ್ಟನು, ತತ್ - ಆ, ದೇವಯಜನಂ-ದೇವಯಾಗವನ್ನು, ದಗ್ಧ್ವಾ - ಸುಟ್ಟು, ಗುಹ್ಯಕಾಲಯಂ - ಕೈಲಾಸಕ್ಕೆ, ಪ್ರಾತಿಷ್ಠತ್ - ಹೊರಟುಹೋದನು ॥೨೬॥

—ಪಂಚಮಾಧ್ಯಾಯಂ ಸಮಾಪ್ತಂ—

---

—ಷಷ್ಠಾಧ್ಯಾಯಂ—

ಕಂದ॥ ಸುರಗಣದೊಡನಾ ಶತಧೃತಿ । ತೆರಳುತ ಕೈಲಾಸವಾಸಿಯಂ ಮನ್ನಿಸಿ ಸಾ ।
ದರದಿಂ ನುತಿಸುತೆ ದಕ್ಷನ । ಹರಣಮ ಬದುಕಿಸಿದ ಚರಿತ ಮೊರೆಯಲ್ಪಡುಗುಂ ॥

ಮೈತ್ರೇಯನು ಹೇಳುತ್ತಾನೆ, ಅಥ - ಬಳಿಕ, ದೇವಗಣಾಃ - ದೇವಸಮೂಹಗಳು, ಸರ್ವೇ - ಎಲ್ಲರೂ, ರುದ್ರಾನೀಕೈಃ - ರುದ್ರನ ಭಟರಿಂದ, ಶೂಲ...ರೈಃ, ಶೂಲ, ಪಟ್ಟಿಸ, ಖಡ್ಗ, ಗದಾ, ಪರಿಘ, ಮುದ್ಗರ, ಇವುಗಳಿಂದ, ಪರಾಜಿತಾಃ-ಸೋಲಿಸಲ್ಪಟ್ಟು, ಸಂಛಿ...ಗಾಃ - ಕತ್ತರಿಸಲ್ಪಟ್ಟು ತುಂಡಾದ ಸರ್ವಾಂಗಗಳುಳ್ಳವರಾಗಿ, ಸರ್ತ್ವಿಕ್ಸಭ್ಯಾಃ - ಋತ್ವಿಜರಿಂದಲೂ ಸದಸ್ಯರಿಂದಲೂ ಒಡಗೂಡಿ, ಭಯಾಕುಲಾಃ -

---

ತನ್ನ ಪರಿವಾರದೊಡನೆ ಯಕ್ಷಾವಾಸವಾದ ಕೈಲಾಸಕ್ಕೆ ತೆರಳಿದನು ಎಂದು ಮೈತ್ರೇಯ ಮುನಿಯು ವಿದುರನಿಗೆ ಹೇಳಿದನೆಂಬಲ್ಲಿಗೆ ಭಾಗವತ ಚಕೋರಚಂದ್ರಿಕೆಯೊಳ್.

—ಐದನೆಯ ಅಧ್ಯಾಯಂ ಮುಗಿದುದು—

### —ಆರನೆಯ ಅಧ್ಯಾಯ—

—ದಕ್ಷನು ಶಿವಾನುಗ್ರಹದಿಂದ ಬದುಕುವುದು—

ಅನಂತರದಲ್ಲಿ ಮೈತ್ರೇಯಮುನಿಯು ವಿದುರನಿಗಿಂತೆಂದನು - ಬಳಿಕ ಆ ದೇವತೆಗಳೆಲ್ಲರೂ, ರುದ್ರಭಟರಾದ ಪ್ರಮಥಾದಿಗಳ ಶೂಲ, ಪಟ್ಟಿಸ, ಖಡ್ಗ, ಗದಾ, ಪರಿಘ, ಮುದ್ಗರ ಮೊದಲಾದ ಆಯುಧಗಳ ಪೆಟ್ಟುಗಳಿಂದ ಪರಾಜಿತರಾಗಿ ಶರೀರವೆಲ್ಲವೂ ಛಿನ್ನಾಭಿನ್ನವಾಗಿ

ಸ್ವತ್ವಿಕ್ಸಭ್ಯಾ * ಭಯಾಕುಲಾಃ । ಸ್ವಯಂಭುವೇ ನಮಸ್ಕೃತ್ಯ ಕಾ
ರ್ತ್ಸ್ನ್ಯೇನೈತ ನ್ನ್ಯವೇದಯನ್ ॥೨॥ ಉಪಲಭ್ಯ ಪುರೈವೈತ ದ್ಭಗವಾ ನಬ್ಜಸಂ
ಭವಃ । ನಾರಾಯಣಶ್ಚ ವಿಶ್ವಾತ್ಮಾ ನಕಸ್ಯಾಽಧ್ವರ ಮೀಯತುಃ ॥೩॥ ತದಾ
ಕರ್ಣ್ಯ ವಿಭುಃ ಪ್ರಾಹ ತೇಜೀಯಸಿ ‡ ಕೃತಾಗಸಿ । ಕ್ಷೇಮಾಯ ತತ್ರ
ಸಾ ಭೂಯಾ ನ್ನಪ್ರಾಯೇಣ ಬುಭೂಷತಾಂ ॥೪॥ ಅಥಾಪಿ ಯೂಯಂ ಕೃ
ತಕಿಲ್ಬಿಷಾ § ಭವೇ ಯೇ ಬರ್ಹಿಷೋ ಭಾಗಭಾಜಂ ಪರಾದುಃ । ಪ್ರಸಾದ
ಯಧ್ವಂ ಪರಿಶುದ್ಧ ಚೇತಸಾ ಕ್ಷಿಪ್ರಪ್ರಸಾದಂ ಪ್ರಗೃಹೀತಾಂಘ್ರಿಪದ್ಮಂ ॥೫॥
ಆಶಾಸಾನಾ ಜೀವಿತ ಮಧ್ವರಸ್ಯ ಲೋಕ ಸ್ಸಪಾಲಃ ಕುಪಿತೇನ ಯಸ್ಮಿನ್ ।

---

ಭಯದಿಂದ ಬಳಲುತ್ತಾ, ಸ್ವಯಂಭುವೇ - ಬ್ರಹ್ಮನಿಗೆ, ನಮಸ್ಕೃತ್ಯ - ನಮಸ್ಕರಿಸಿ, ಕಾರ್ತ್ಸ್ನ್ಯೇನ - ಸಂಪೂರ್ಣವಾಗಿ, ಏತತ್ - ಇದನ್ನು, ನ್ಯವೇದಯನ್ - ತಿಳಿಸಿದರು ॥೨॥ ಭಗವಾನ್ - ಭಗವಂತನಾದ, ಅಬ್ಜಸಂಭವಃ - ಬ್ರಹ್ಮನು, ವಿಶ್ವಾತ್ಮಾ - ಸರ್ವಾತ್ಮಕನಾದ, ನಾರಾಯಣಶ್ಚ - ನಾರಾಯಣಮೂರ್ತಿಯೂ, ಏತತ್ - ಇದನ್ನು, ಪುರೈವ - ಮೊದಲೇ, ಉಪಲಭ್ಯ - ತಿಳಿದು, ಕಸ್ಯ - ದಕ್ಷಬ್ರಹ್ಮನ, ಅಧ್ವರಂ - ಯಜ್ಞಕ್ಕೆ, ನೇಯತುಃ - ಹೋಗಲಿಲ್ಲ ॥೩॥ ತತ್ - ಅವರ ನುಡಿಯನ್ನು, ಆಕರ್ಣ್ಯ - ಕೇಳಿ, ವಿಭುಃ - ಬ್ರಹ್ಮನು, ತೇಜೀಯಸಿ - ತೇಜಸ್ವಿಯಾದವನು, ಕೃತಾಗಸ್ಯಪಿ - ಅಪರಾಧಮಾಡಿದರೂ, ತತ್ರ - ಅವನಲ್ಲಿ, ತಪ್ಪುಮಾಡಿ, ಬುಭೂಷತಾಂ - ಬದುಕಲೆಳಸುವವರಿಗೆ, ಪ್ರಾಯೇಣ - ಬಹಳವಾಗಿ, ಸಾ - ಆ ಬದುಕು, ಕ್ಷೇಮಾಯ - ಕ್ಷೇಮಕ್ಕಾಗಿ, ನ - ಆಗುವುದಿಲ್ಲ ॥೪॥ ಅಥಾಪಿ - ಆದರೂ, ಯೇ - ಯಾವನೀವು ಬರ್ಹಿಷಃ - ಯಜ್ಞದ, ಭಾಗಭಾಜಂ - ಭಾಗಿಯಾದವನನ್ನು, ಪರಾದುಃ - ಹೊರಗೋಡಿಸಿದಿರೋ, ಯೂಯಂ - ಆ ನೀವು, ಭವೇ - ಶಿವನಲ್ಲಿ, ಕೃತಕಿಲ್ಬಿಷಾಃ - ಅಪರಾಧಿಗಳಾಗಿದ್ದರೂ, ಪರಿಶುದ್ಧಚೇತಸಾ - ನಿರ್ಮಲಮನಸ್ಸಿನಿಂದ, ಕ್ಷಿಪ್ರಪ್ರಸಾದಂ - ಬೇಗನೆ ಅನುಗ್ರಹಿಸುವ, ಪ್ರಗೃ....ದ್ಮಂ - ಗ್ರಹಿಸಲ್ಪಟ್ಟ ಪಾದಕಮಲವುಳ್ಳ ಶಿವನನ್ನು, ಪ್ರಸಾದಯಧ್ವಂ - ಮನ್ನಿಸಗೊಳಿಸಿರಿ ॥೫॥ ಯಸ್ಮಿನ್ - ಯಾವರುದ್ರನು, ಕುಪಿತೇ - ಕೋಪಿಸಿದಲ್ಲಿ, ಸಪಾಲಃ - ನಾಯಕರಿಂದ ಕೂಡಿದ ಲೋಕಃ - ಜಗತ್ತು, ನ - ಇರುವುದಿಲ್ಲವೋ, ಪ್ರಿಯಯಾ - ಪತ್ನಿಯಿಂದ, ವಿಹೀನಂ - ಅಗಲಿರುವ, ಹೃದಿ - ಹೃದಯದಲ್ಲಿ, ದುರುಕ್ತಿಭಿಃ - ಕೆಟ್ಟನುಡಿಗಳಿಂದ,

---

ಋತ್ವಿಜರಿಂದಲೂ, ಸದಸ್ಯರಿಂದಲೂ, ಪರಿವೃತರಾಗಿ ಭಯದಿಂದ ನಡುಗುತ್ತಾ, ಚತುರ್ಮುಖ ಬ್ರಹ್ಮನ ಬಳಿಗೆ ಹೋಗಿ ನಮಸ್ಕರಿಸಿ, ವಿನಯದಿಂದ ದಕ್ಷಾಧ್ವರದಲ್ಲಿ ನಡೆದ ಸಮಾಚಾರವನ್ನೆಲ್ಲಾ ಕ್ರಮವಾಗಿ ಬಿನ್ನವಿಸಿದರು ॥೨॥ ಭಗವಂತನಾದ ಚತುರಾನನನೂ, ಸರ್ವಾತ್ಮಕನಾದ ನಾರಾಯಣಮೂರ್ತಿಯೂ ಸಹ ಇಂತು ನಡಿಯುವುದೆಂದು ಮೊದಲೇ ತಿಳಿದಿದ್ದ ಕಾರಣ, ಅವರೀರ್ವರೂ ಆ ಯಜ್ಞಕ್ಕೆ ಹೋಗಲಿಲ್ಲ ॥೩॥ ಆಗ ಪ್ರಭುವಾದ ಬ್ರಹ್ಮದೇವನು ದೇವತೆಗಳ ಬಿನ್ನಪವನ್ನಾಲಿಸಿ, ಅಯ್ಯಾ ದೇವತೆಗಳಿರಾ ! ಅಧಿಕ ತೇಜಶ್ಶಾಲಿಯಾದವನು ಅಪರಾಧವನ್ನು ಮಾಡಿದರೂ, ಸಾಮಾನ್ಯರಾದವರು ಅವನಿಗೆ ಅಪರಾಧವನ್ನು ಮಾಡಿದಲ್ಲಿ, ಆ ಅಪರಾಧಿಗಳು ಪ್ರಾಯಕವಾಗಿ ಎಂದಿಗೂ ಕ್ಷೇಮದಿಂದ ಬಾಳಲಾರರು. ॥೪॥ ಅಯ್ಯಾ ದೇವತ

---

* ಪಾ. ಸಮಾಕುಲಾಃ ‡ ಕೃತಾಗಸಾಂ. § ಭವಂ,

ತಮಾಶು ದೇವಂ ಪ್ರಿಯಯಾ ವಿಹೀನಂ ಕ್ಷಮಾಪಯಧ್ವಂ ಹೃದಿ ವಿದ್ಧಂ ದುರುಕ್ತೈಃ॥೬॥ ನಾಹಂ ನಯಜ್ಞೋ ನಚ ಯೂಯ ಮನ್ಯೇ ಯೇ ದೇಹಭಾಜೋ ಮುನಯಶ್ಚ ತತ್ತ್ವಂ । ವಿದುಃ ಪ್ರಮಾಣಂ ಬಲವೀರ್ಯಯೋರ್ವಾ ಯಸ್ಯಾತ್ಮತಂತ್ರಸ್ಯ * ಕ ಉಪಾಯಂ † ವಿಧಿತ್ಸೇತ್ ॥ ೭ ॥ ಸ ಇತ್ಥಮಾದಿಶ್ಯ ಸುರಾ ನಜಸ್ತೈ ಸ್ಸಮನ್ವಿತಃ ಪಿತೃಭಿ ಸ್ಸಪ್ರಜೇಶೈಃ। ಯಯೌ ಸ್ವಧಿಷ್ಣ್ಯಾ ನ್ನಿಲಯಂ ‡ ಪುರದ್ವಿಷಃ ಕೈಲಾಸ ಮದ್ರಿಪ್ರವರಂ ಪ್ರಿಯಂ

ವಿದ್ಧಂ - ಬಾಧಿಸಲ್ಪಟ್ಟ, ತಂದೇವಂ - ಆ ಮಹಾದೇವನನ್ನು, ಆಶು-ಬೇಗನೆ, ಅಧ್ವರಸ್ಯ - ಯಜ್ಞದ ಜೀವಿತಂ - ಸಂಧಾನವನ್ನು, ಆಶಾಸಾನಾಃ - ಆಶಿಸಿ, ಕ್ಷಮಾಪಯಧ್ವಂ - ಸಮಾಧಾನಗೊಳಿಸಿರಿ ॥೬॥ ಆತ್ಮತಂತ್ರಸ್ಯ - ಸ್ವತಂತ್ರನಾದ, ಯಸ್ಯ - ಯಾವನ, ತತ್ತ್ವಂ - ಯಾಥಾತ್ಮ್ಯವನ್ನೂ, ಬಲವೀರ್ಯಯೋಃ - ಬಲಪರಾಕ್ರಮಗಳ, ಪ್ರಮಾಣಂವಾ - ಪ್ರಮಾಣವನ್ನೂ, ಅಹಂ - ನಾನೂ, ನ - ತಿಳಿದಿಲ್ಲ, ಯಜ್ಞಃ - ಇಂದ್ರನು, ನ - ಇಲ್ಲ, ಯೂಯಂ - ನೀವು, ನ - ಇಲ್ಲ, ಅನ್ಯೇ - ಇತರರಾದ, ಯೇ - ಯಾವ, ದೇಹಭಾಜಃ - ಪ್ರಾಣಿಗಳುಂಟೋ, ಅವರೂ, ನ - ಇಲ್ಲ, ಮುನಯಶ್ಚ - ಋಷಿಗಳೂ, ನವಿದುಃ - ತಿಳಿದಿಲ್ಲ, ಕಃ - ಯಾವನು, ಉಪಾಯಂ - ಯುಕ್ತಿಯನ್ನು, ವಿಧಿತ್ಸೇತ್ - ಮಾಡಲೆಳಸುವನು ? ॥೭॥

ಸಃ - ಆ ಬ್ರಹ್ಮನು, ಸುರಾನ್ - ದೇವತೆಗಳನ್ನು, ಇತ್ಥಂ - ಇಂತು, ಆದಿಶ್ಯ - ಆಜ್ಞಾಪಿಸಿ, ಸಪ್ರಜೇಶೈಃ - ಪ್ರಜೇಶ್ವರರಿಂದ ಕೂಡಿದ, ಪಿತೃಭಿಃ - ಪಿತೃಗಳೊಡನೆ, ಸ್ವಧಿಷ್ಣ್ಯಾತ್ - ತನ್ನ ಮನೆಯಿಂದ ಹೊರಟು, ಪ್ರಭೋಃ - ಒಡೆಯನಾದ ಪುರದ್ವಿಷಃ-ಶಿವನಿಗೆ, ಪ್ರಿಯಂ - ಇಷ್ಟವಾದ, ಅದ್ರಿಪ್ರವರಂ-ಪರ್ವ

ಗಳರಾ ! ನೀವು ಯಜ್ಞದಲ್ಲಿ ಹವಿರ್ಭಾಗವನ್ನೀಯದೆ ಹೊರಗೊಳಿಸಿ ಭಗವಂತನಾದ ರುದ್ರನಿಗೆ ಅಪರಾಧಿಗಳಾಗಿರುವಿರಿ. ಇಂತಿದ್ದರೂ ಆ ಶಂಕರಮೂರ್ತಿಯು ಶರಣಾಗತರಾದವರಿಗೆ ಕ್ಷಿಪ್ರಪ್ರಸಾದವನ್ನು ಅನುಗ್ರಹಿಸುವನು. ಆದುದರಿಂದ ನೀವು ಕಾಮಕ್ರೋಧಗಳನ್ನುಳಿದು ನಿರ್ಮಲ ಮನಸ್ಕರಾಗಿ ಆತನ ಕ್ಷಮಾಪಣೆಯನ್ನು ಕೇಳಿಕೊಳ್ಳಿರಿ ॥೫॥ ಯಾವ ಪರಶಿವಮೂರ್ತಿಯು ಕ್ರುದ್ಧನಾದಲ್ಲಿ, ಇಂದ್ರಾದಿ ಲೋಕಪಾಲಕರಾಗಲಿ, ಜಗತ್ತಾಗಲಿ ಉಳಿಯಲಾರದೋ, ಯಾವನ ಹೃದಯವು ದಕ್ಷನ ದುರ್ವಾಕ್ಯಗಳೆಂಬ ಬಾಣಗಳಿಂದ ತಾರುಮಾರಾಗಿ ಸೀಳಿರುವುದೋ, ಯಾವನು ಪ್ರಾಣಕಾಂತೆಯನ್ನು ಅಗಲಿ ಬಳಲುತ್ತಿರುವನೋ, ಅಂತಹ ಮಹಾದೇವನೇ ಮರಳಿ ಈ ಯಜ್ಞವನ್ನು ಉಜ್ಜೀವಿಸಬೇಕಾದುದರಿಂದ ಆತನನ್ನು ಮರೆಹೊಕ್ಕು ಮನ್ನಣೆಗೊಳಿಸಿರಿ ॥೬॥ ನಾನೂ, ಇಂದ್ರನೂ, ನೀವುಗಳೂ, ಇತರ ಪ್ರಾಣಿಗಳೂ, ಮಹರ್ಷಿಗಳು ಇವರಾರೂ, ಸ್ವತಂತ್ರನಾದ ಆ ಮಹಾದೇವ ನಿಜಸ್ವರೂಪವನ್ನಾಗಲಿ, ಬಲಪರಾಕ್ರಮಗಳ ಪ್ರಮಾಣವನ್ನಾಗಲಿ, ತಿಳಿದಿಲ್ಲವಾದುದರಿಂದ ಶರಣಾಗತರಾಗಿಯೇ ಆತನ ಅನುಗ್ರಹವನ್ನು ಸಂಪಾದಿಸಬೇಕಲ್ಲದೆ ಉಪಾಯಾಂತರವಿಲ್ಲ ॥೭॥ ಇಂತು ಆ ಚತುರ್ಮುಖನು ದೇವತೆಗಳಿಗಾಜ್ಞಾಪಿಸಿ, ಮರೀಚಿಮೊದಲಾದ ಪ್ರಜೇಶ್ವರರಿಂದಲೂ, ಪಿತೃದೇವತೆಗಳಿಂದಲೂ, ಇಂದ್ರಾದಿ ದೇವಗಣಗಳಿಂದಲೂ, ಸಮೇತನಾಗಿ, ಬ್ರಹ್ಮಲೋಕದಿಂದ

ಪಾ. * ತಸ್ಯಾತ್ಮನಃ, † ಉದ್ವಿಧಿತ್ಸೇತ್, ತಸ್ಯಾತ್ಮನಃ ಕಃಪಾದಂ ವಿಧಿತ್ಸೇತ್; ‡ ಪುರಾರೇಃ.

ಪ್ರಭೋಃ॥ ೮ ॥ ಜನ್ಮೌಷಧಿತಪೋ ಮಂತ್ರಯೋಗಸಿದ್ಧೈರ್ನರೇತರೈಃ ।
ಜುಷ್ಟಂ ಕಿನ್ನರಗಂಧರ್ವೈರಪ್ಸರೋಭಿರ್ವೃತಂ ಸದಾ ॥೯॥ ನಾನಾ ಮಣಿ
ಮಯೈಃ ಶೃಂಗೈರ್ನಾನಾಧಾತು ವಿಚಿತ್ರಿತೈಃ । ನಾನಾದ್ರುಮಲತಾಗುಲ್ಮೈ
ರ್ನಾನಾ ಮೃಗಗಣಾವೃತೈಃ ॥ ೧೦ ॥ ನಾನಾಽಮಲಪ್ರಸ್ರವಣೈರ್ನಾನಾಕಂ
ದರಸಾನುಭಿಃ। ರಮಣಂ ವಿಹರಂತೀನಾಂ ರಮಣೈಸ್ಸಿದ್ಧಯೋಷಿತಾಂ॥೧೧॥
ಮಯೂರ ಕೇಕಾಽಭಿರುತಂ ಮದಾಂಧಾಽಳಿ ವಿಮೂರ್ಛಿತಂ।ಪ್ಲಾವಿತೈ ರಕ್ತ
ಕಂಠಾನಾಂ ಕೂಜಿತೈಶ್ಚ ಪತತ್ರಿಣಾಂ ॥ ೧೨ ॥ ಆಹ್ವಯಂತ ಮಿವೋದ್ಧ

ತಶ್ರೇಷ್ಠವಾದ,ಕೈಲಾಸಂ - ಕೈಲಾಸಕ್ಕೆ, ಯಯೌ - ಹೋದನು ॥ ೮ ॥ ಜನ್ಮೌ...ದ್ಧೈಃ, ಜನ್ಮದಿಂದ ಲೂ, ಔಷಧಿಗಳಿಂದಲೂ, ತಪಸ್ಸಿನಿಂದಲೂ, ಮಂತ್ರಜಪದಿಂದಲೂ, ಅಷ್ಟಾಂಗ ಯೋಗದಿಂದಲೂ, ಸಿದ್ಧರಾದ, ನರೇತರೈಃ - ದೇವತೆಗಳಿಂದಲೂ, ಕಿನ್ನರಗಂಧರ್ವೈಃ - ಕಿನ್ನರರಿಂದಲೂ, ಗಂಧರ್ವರಿಂದಲೂ, ಜುಷ್ಟಂ - ಕೂಡಿದ, ಸದಾ - ಯಾವಾಗಲೂ, ಅಪ್ಸರೋಭಿಃ - ಅಪ್ಸರಸ್ತ್ರೀಯರಿಂದ, ವೃತಂ - ವ್ಯಾಪ್ತವಾದ ॥೯॥ ನಾನಾ...ಯೈಃ - ಹಲವುಬಗೆಯ ರತ್ನಗಳಿಂದ ತುಂಬಿದ, ನಾನಾ...ತೈಃ - ಅನೇಕ ಧಾತುಗಳಿಂದ ಚಿತ್ರಗಳಾಗಿರುವ, ಶೃಂಗೈಃ - ಶಿಖರಗಳಿಂದಲೂ, ನಾನಾ...ಲ್ಮೈಃ - ಅನೇಕ ವೃಕ್ಷಗಳು, ಪೊದೆಗಳು, ಇವುಗಳಿಂದಲೂ, ನಾನಾ...ತೈಃ - ಅನೇಕ ಮೃಗ ಸಮೂಹಗಳಿಂದಲೂ ॥೧೦॥ ನಾನಾ...ಣೈಃ- ನಿರ್ಮಲಗಳಾದ ಅನೇಕ ಗಿರಿನದಿಗಳಿಂದಲೂ, ನಾನಾ...ಭಿಃ, ಅನೇಕ ಗವಿಗಳು ತಪ್ಪಲುಗಳಿಂದಲೂ, ರಮಣೈಃ - ಪ್ರಿಯರೊಡನೆ, ವಿಹರಂತೀನಾಂ - ಕ್ರೀಡಿಸುತ್ತಿರುವ, ಸಿದ್ಧಯೋಷಿತಾಂ - ಸಿದ್ಧಾಂಗನೆಯರಿಗೆ, ರಮಣಂ - ರತಿಪ್ರದವಾದ ॥೧೧॥ ಮಯೂ...ತಂ- ನವಿಲುಗಳ ಕೇಕಾಧ್ವನಿಗಳುಳ್ಳ, ಮದಾ...ತಂ - ಮದಿಸಿದ ತುಂಬಿಗಳಿಂದ ಶಬ್ದಾಯಮಾನವಾದ, ರಕ್ತಕಂಠಾನಾಂ - ಕೋಗಿಲೆಗಳ, ಪ್ಲಾವಿತೈಃ - ಪ್ಲುತಸ್ವರಗಳಿಂದಲೂ, ಪತತ್ರಿಣಾಂ - ಪಕ್ಷಿಗಳ, ಕೂಜಿತೈಶ್ಚ - ಕಲಕಲದಿಂದಲೂ ॥೧೨॥ ಉದ್ಧಸ್ತೈಃ - ಉನ್ನತಶಾಖೆಗಳುಳ್ಳ ಕಾಮದುಘೈಃ - ಅಭೀಷ್ಟಗಳನ್ನು ಕೊಡುವ, ದ್ರುಮೈಃ - ಗಿಡಗಳಿಂದ. ದ್ವಿಜಾನ್ - ಹಕ್ಕಿಗಳನ್ನು, ಆಹ್ವ

ಹೊರಟು ಪುರವೈರಿಯಾದ ಪರಮೇಶ್ವರನಿಗೆ ಪ್ರಿಯವೆನಿಸಿರುವ ಕೈಲಾಸಗಿರಿಗೆ ತೆರಳಿದನು॥ ಆ ಕೈಲಾಸದಲ್ಲಿ ಜನ್ಮದಿಂದಲೂ, ಓಷಧಿಗಳ ಶಕ್ತಿಯಿಂದಲೂ, ಕೃಚ್ಛ್ರಚಾಂದ್ರಾಯಣಾದಿ ತಪಸ್ಸಿನಿಂದಲೂ, ಪಂಚಾಕ್ಷರಿ ಮೊದಲಾದ ಮಂತ್ರಜಪದಿಂದಲೂ, ಯಮನಿಯಮಾದ್ಯಷ್ಟಾಂಗ ಯೋಗಗಳಿಂದಲೂ, ಸಿದ್ಧಿಯನ್ನು ಪಡೆದ ದೇವತೆಗಳೂ, ಯಕ್ಷ, ಕಿನ್ನರ, ಗಂಧರ್ವರೂ, ಅಪ್ಸರಸ್ತ್ರೀಯರೂ ನಿರಂತರವೂ ನೆಲಸುತ್ತಿದ್ದರು ॥೯॥ ಹಲವು ಬಣ್ಣಗಳಾದ ಗೈರಿಕ ಧಾತುಗಳಿಂದ ತುಂಬಿ, ನವರತ್ನಖಚಿತಗಳಾದ ಶಿಖರಗಳು ಮೆರೆಯುತ್ತಿದ್ದವು. ಬಗೆಬಗೆಯಾದ ತರುಷಂಡದಿಂದ ಮಂಡಿತವಾಗಿಯೂ, ನಾನಾಜಾತಿ ಮೃಗಗಳಿಂದ ರಮಣೀಯವಾಗಿಯೂ, ತಿಳಿನೀರಿಂದ ಹರಿಯುತ್ತಿರುವ ತಪ್ಪಲುಗಳಿಂದೊಪ್ಪುವ, ಸುಂದರಗಳಾದ ಕಂದರಗಳಲ್ಲಿ ತಂತಮ್ಮ ಕಾಂತರಿಂದೊಡಗೂಡಿ ಸಿದ್ಧಸೀಮಂತಿನಿಯರೆಲ್ಲರೂ ವಿಹರಿಸುತ್ತಿದ್ದರು ॥ ಎಲ್ಲೆಲ್ಲಿಯೂ ನವಿಲುಗಳು ಕೇಕಾರವದಿಂದ ಕುಣಿಯುತ್ತಿದ್ದುವು.ಮಧುಪಾನದಿಂದ ಮದವಿಡಿದು ಮಧುಕರಗಳೆಲ್ಲವೂ ಬಿಂಕದಿಂದ ಝೇಂಕರಿಸುತ್ತಿದ್ದುವು. ಕೋಗಿಲೆಗಳು ಪ್ಲುತಸ್ವರದಿಂದ ಕೂಗುತ್ತಿದ್ದುವು. ತರತರವಾದ ಹಕ್ಕಿಗಳು ಕಲಕಲಗೆಯ್ಯುತ್ತಿದ್ದುವು ॥೧೨॥ ಎತ್ತರವಾದ ಕೊಂಬೆಗಳುಳ್ಳ ಮನೋಭೀಷ್ಟಗಳನ್ನು ಕೊಡುವ ಕಲ್ಪವೃಕ್ಷಗಿಡಗಳಿಂದೊಡಗೂಡಿದ ಆ

ಸ್ತ್ರ್ಯ ದ್ವಿಜಾನ್ ಕಾಮದುಘೈ ದ್ರುಗ್ವೈಃ । ವ್ರಜಂತ ಮಿವ ಮಾತಂಗೈ ರ್ಗೃಣಂತಮಿವ ನಿರ್ಝರೈಃ ॥೧೩॥ *ಮಂದಾರೈಃ ಪಾರಿಜಾತೈಶ್ಚ ಸರಳೈಶ್ಚೋಪಶೋಭಿತಂ । ತಮಾಲೈ ಸ್ಸಾಲತಾಲೈಶ್ಚ ಕೋವಿದಾರಾಸನಾಽರ್ಜುನೈಃ ॥೧೪॥ ಚೂತೈಃ ಕದಂಬೈ ರ್ನೀಪೈಶ್ಚ ನಾಗ ಪುನ್ನಾಗ ಚಂಪಕೈಃ । ಪಾಟಲಾಽಶೋಕ ವಕುಳೈಃ ಕುಂದೈಃ ಕುರವಕೈರಪಿ ॥೧೫॥ ಸ್ವರ್ಣಾಽರ್ಣ ಶತಪತ್ರೈಶ್ಚ ವರರೇಣುಕ ಜಾತಿಭಿಃ । ಕುಟಜೈ ರ್ಮಲ್ಲಿಕಾಭಿಶ್ಚ ಮಾಧವೀಭಿಶ್ಚ ಮಂಡಿತಂ ॥೧೬॥ ಪನಸೋದುಂಬರಾಽಶ್ವತ್ಥ ಪ್ಲಕ್ಷ ನ್ಯಗ್ರೋಧ ಹಿಂಗುಭಿಃ। ಭೂರ್ಜೈ ರೋಷಧಿಭಿಃ ಪೂಗೈ ರಾಜಪೂಗೈಶ್ಚ ಜಂಬುಭಿಃ ॥೧೭॥ ಖರ್ಜೂರಾಮ್ರಾತ ಕಾಮ್ರಾದ್ಯೈಃ ಪ್ರಿಯಾಳುಮಧುಕೇಂಗುದೈಃ। ದ್ರುಮಜಾತಿಭಿ ರನ್ಯಾಭೀ ರಾಜಿತಂ ವೇಣು ಕೀಚಕೈಃ ॥೧೮॥ ಕುಮುದೋತ್ಪಲ ಕಲ್ಹಾರ ಶತಪತ್ರ ಸಮೃದ್ಧಿಭಿಃ । ನಳಿನೀಷು ಕಲಂ ಕೂಜ ತ್ಖಗಬೃಂದೋಪಶೋಭಿತಂ ॥೧೯॥

ಯಂತಮಿವ - ಕರೆಯುವಂತಿರುವ, ಮಾತಂಗೈಃ - ಆನೆಗಳಿಂದ, ವ್ರಜಂತಮಿವ - ನಡೆವಂತಿರುವ, ನಿರ್ಝರೈಃ - ಗಿರಿನದಿಗಳಿಂದ, ಗೃಣಂತಮಿವ - ಹೊಗಳುವಂತಿರುವ ॥೧೩॥ ಮಂದಾರೈಃ - ಮಂದಾರವೃಕ್ಷಗಳಿಂದಲೂ, ಪಾರಿಜಾತೈಶ್ಚ - ಪಾರಿಜಾತ ವೃಕ್ಷಗಳಿಂದಲೂ, ಸರಳೈಶ್ಚ - ಸರಳವೃಕ್ಷಗಳಿಂದಲೂ, ತಮಾಲೈಃ - ತಮಾಲಗಳಿಂದಲೂ, ಸಾಲ, ತಾಲ, ಕೋವಿದಾರ, ಅಸನ, ಅರ್ಜುನ, ಈ ವೃಕ್ಷಗಳಿಂದಲೂ, ಉಪಶೋಭಿತಂ - ಪ್ರಕಾಶಿಸುವ ॥೧೪॥ ಕುಮು...ಭಿಃ, ಕುಮುದ - ಬಿಳೀನೈದಿಲೆ, ಉತ್ಪಲ - ಕೆನ್ನೈದಿಲೆ, ಕಲ್ಹಾರ - ಕೆಂದಾವರೆ, ಶತಪತ್ರ - ತಾವರೆ, ಇವುಗಳ, ಸಮೃದ್ಧಿಭಿಃ - ಸಮೃದ್ಧಿಗಳಿಂದಲೂ, ನಳಿನೀಷು - ಕಮಲಬಳ್ಳಿಗಳಲ್ಲಿ, ಕಲಂ - ಸೊಗಸಾಗಿ, ಕೂಜ...ತಂ, ಕೂಜತ್ - ಕೂಗುವ, ಖಗ - ನೀರುಹಕ್ಕಿಗಳ, ಬೃಂದ - ಗುಂಪಿನಿಂದಲೂ, ಉಪಶೋಭಿತಂ - ಪ್ರಕಾಶವಾದ ॥೧೯॥

ರಜತಗಿರಿಯು ಕೈಯತ್ತಿ ದೂರದಲ್ಲಿರುವ ದ್ವಿಜಾತಿಥಿಗಳನ್ನು ಕರೆಯುತ್ತಿರುವಂತೆಯೂ, ಓಡುತ್ತಿರುವ ಕಾಡಾನೆಗಳ ಬಳಗದನವದಿಂದ ಅಭ್ಯಾಗತರನ್ನು ಕರತರುವುದಕ್ಕಾಗಿ ಹೊರಡುವಂತೆಯೂ, ಗಿರಿನದೀ ಘೋಷದ ನವದಿಂದ ಅವರನ್ನು ಗಟ್ಟಿಯಾಗಿ ಕರೆಯುತ್ತಿರುವಂತೆಯೂ, ರಾರಾಜಿಸಿತು ॥೧೩॥ ಅಲ್ಲಿಯ ಉದ್ಯಾನವನಗಳಲ್ಲಿ ಮಂದಾರ, ಪಾರಿಜಾತ, ಸರಳ, ಸಾಲ ತಾಲ, ತಮಾಲ, ಕೋವಿದಾರ, ಅರ್ಜುನ, ಅಸನ, ಚೂತ, ಕದಂಬ, ನೀಪ, ನಾಗ, ಪುನ್ನಾಗ, ಚಂಪಕ, ಪಾಟಲ, ಅಶೋಕ, ವಕುಳ, ಕುಂದ, ಕುರವಕ, ಸ್ವರ್ಣಾರ್ಣ, ಶತಪತ್ರ, ರೇಣುಕ, ಜಾತಿ, ಕುಟಜ, ಮಲ್ಲಿಕಾ, ಮಾಲತೀ, ಮಾಧವಿ, ಪನಸ, ಉದುಂಬರ, ಅಶ್ವತ್ಥ, ಪ್ಲಕ್ಷ, ನ್ಯಗ್ರೋಧ, ಹಿಂಗು, ಭೂರ್ಜ, ಓಷಧಿ, ಪೂಗ, ಜಂಬು, ಖರ್ಜೂರ, ಆಮ್ರಾತಕ, ಪ್ರಿಯಾಳು, ಮಧುಕ, ಇಂಗುದ, ವೇಣು, ಕೀಚಕ, ಮುಂತಾದ ವೃಕ್ಷ ಲತಾದಿಗಳು ರಮಣೀಯಾಗಳಾಗಿದ್ದುವು ॥೧೮॥ ಅಲ್ಲಲ್ಲಿ ಕುಮುದ, ಉತ್ಪಲ, ಕಲ್ಹಾರ, ಶತಪತ್ರಗಳಿಂದೊಪ್ಪುವ ತಾವರೆ ಬಳ್ಳಿಗಳಲ್ಲಿ ಹಂಸ, ಸಾರಸ, ಕಾರಂಡವಾದಿ ಜಲಪಕ್ಷಿಗಳು ಕುಳಿತು, ಅವ್ಯಕ್ತ ಮಧುರವಾಗಿ ಕಲಕಲಗೈಯುತ್ತಿದ್ದುವು ॥೧೯॥ ಹುಲ್ಲೆಗಳು, ಕಪಿಗಳು, ಕಾಡುಹಂದಿಗಳು,

* ಅನ್ವಯ ಕ್ಲೇಶವಿಲ್ಲದುದರಿಂದ ೧೪ನೆಯ ಶ್ಲೋಕದಿಂದ ೧೯ರ ವರೆಗೂ ಟೀಕಿಸಲಿಲ್ಲ.

ಮೃಗೈ ಶ್ಶಾಖಾಮೃಗೈಃ ಕ್ರೋಡೈರ್ಮೃಗೇಂದ್ರೈ ರೃಕ್ಷಶಲ್ಯಕೈಃ। ಗವ
ಯೈ ಶ್ಶರಭೈ ರ್ವ್ಯಾಘ್ರೈ ರುರುಭಿ ರ್ಮಹಿಷಾದಿಭಿಃ ॥೨೦॥ ಕರ್ಣಾಂತ್ರೈಕ
ಪದಾಶ್ವಾದ್ಯೈ ರ್ನಿರ್ಜುಷ್ಟಂ ವೃಕನಾಭಿಭಿಃ । ಕದಳೀಷಂಡ ಸಂರುದ್ಧ ನ
ಳಿನೀ ಪುಳಿನಶ್ರಿಯಂ ॥೨೧॥ ಪರ್ಯಸ್ತಂ ನಂದಯಾ ಸತ್ಯಾ ಸ್ನಾನ ಪುಣ್ಯಕ
ರೋದಯಾ।ವಿಲೋಕ್ಯ ಭೂತೇಶಗಿರಿಂ ವಿಬುಧಾ ವಿಸ್ಮಯಂ ಯಯುಃ॥೨೨॥
ದದೃಶು ಸ್ತತ್ರ ತೇ ರಮ್ಯಾ ಮಲಕಾಂ ನಾಮ ವೈಪುರೀಂ।ವನಂ ಸೌಗಂಧಿಕಂ
ಚಾಪಿ ಯತ್ರ ತನ್ನಾಮ ಪಂಕಜಂ॥೨೩॥ನಂದಾ ಚಾಲಕನಂದಾಚ ಸರಿತೌ

ಮೃಗೈಃ - ಹುಲ್ಲೆಗಳಿಂದಲೂ, ಶಾಖಾಮೃಗೈಃ - ಕಪಿಗಳಿಂದಲೂ, ಕ್ರೋಡೈಃ - ಕಾಡುಹಂದಿಗಳಿಂದಲೂ, ಮೃಗೇಂದ್ರೈಃ - ಸಿಂಹಗಳಿಂದಲೂ, ಋಕ್ಷಶಲ್ಯಕೈಃ - ಕರಡಿ ಮುಳ್ಳುಹಂದಿಗಳಿಂದಲೂ, ಗವಯೈಃ - ಗವಯಮೃಗಗಳಿಂದಲೂ, ಶರಭೈಃ - ಶರಭಗಳಿಂದಲೂ, ವ್ಯಾಘ್ರೈಃ - ಹುಲಿಗಳಿಂದಲೂ, ರುರುಭಿಃ - ಸಾರಂಗಗಳಿಂದಲೂ, ಮಹಿಷಾದಿಭಿಃ - ಕಾಡುಕೋಣ ಮೊದಲಾದವುಗಳಿಂದಲೂ ॥ ೨೦ ॥ ಕರ್ಣಾ...ದ್ಯೈಃ, ಕಿವಿಯಿಲ್ಲದ ಗೋಕರ್ಣವೆಂಬ ಮೃಗಗಳೂ, ಊರ್ಣ ಮೃಗಗಳು, ಒಂದು ಕಾಲಿನ ಮೃಗಗಳೂ, ಕುದುರೆಯಮುಖದ ಮೃಗಗಳು, ಇವುಗಳಿಂದಲೂ, ಮೃಗನಾಭಿಭಿಃ - ಕಸ್ತೂರಿ ಮೃಗಗಳಿಂದಲೂ, ಕದ...ಯಂ, ಕದಳೀಷಂಡ - ಬಾಳೇ ತೋಪಿನಿಂದ, ಸಂರುದ್ಧ-ಅಡ್ಡಗಿಸಲ್ಪಟ್ಟ, ನಳಿನೀ - ಕಮಲಬಳ್ಳಿಗಳಿಂದ ಕೂಡಿದ, ಪುಳಿನ - ಮರಳುದಿಣ್ಣೆಗಳ, ಶ್ರಿಯಂ - ಕಾಂತಿಯುಳ್ಳ ॥೨೧॥ ಸ್ನಾನ...ಯಾ, ಸ್ನಾನದಿಂದ ಪುಣ್ಯವನ್ನುಂಟುಮಾಡುವ ಉದಕವುಳ್ಳ, ಸತ್ಯಾ - ನಿರ್ಮಲವಾದ, ನಂದಯಾ - ಗಂಗೆಯಿಂದ, ಪರ್ಯಸ್ತಂ - ಬಳಸಲ್ಪಟ್ಟ, ಭೂತೇಶಸ್ಯ - ಪರಮೇಶ್ವರನ, ಗಿರಿಂ - ಕೈಲಾಸಗಿರಿಯನ್ನು, ವಿಲೋಕ್ಯ - ಕಂಡು, ವಿಬುಧಾಃ - ದೇವತೆಗಳು, ವಿಸ್ಮಯಂ - ಆಶ್ಚರ್ಯವನ್ನು, ಯಯುಃ- ಹೊಂದಿದರು ॥೨೨॥

ತತ್ರ - ಅಲ್ಲಿ, ತೇ - ಆ ಬ್ರಹ್ಮಾದಿಗಳು, ರಮ್ಯಾಂ - ರಮಣೀಯವಾದ, ಅಲಕಾಂನಾಮ - ಅಳಲಕಾ ಎಂಬ, ಪುರೀಂ - ಪಟ್ಟಣವನ್ನೂ, ಯತ್ರ - ಎಲ್ಲಿ, ತನ್ನಾ - ಜಂ, ತನ್ನಾಮ - ಅದೇಹೆಸರಿನ ಪಂಕಜಂ - ಕಮಲವುಂಟೋ, ಅಂತಹ, ಸೌಗಂಧಿಕಂ - ಸೌಗಂಧಿಕವೆಂಬ, ವನಂಚಾಪಿ - ಉದ್ಯಾನವನವನ್ನೂ, ದದೃಶುಃ - ಕಂಡರು ॥ ೨೩ ॥ ಪುರಃ - ಅಲಕಾಪುರದ, ಬಾಹ್ಯತಃ-ಹೊರಗೆ, ತೀರ್ಥ...ಸಾ,

ಸಿಂಹಗಳು, ಕರಡಿಗಳು, ಮುಳ್ಳುಹಂದಿಗಳು, ಗವಯಗಳು, ಎಂಟುಕಾಲಿನ ಶರಭಮೃಗಗಳು, ಹೆಬ್ಬುಲಿಗಳು, ಗಂಡು ಜಿಂಕೆಗಳು, ಕಾಡು ಕೋಣಗಳು, ಕಿವಿಯಿಲ್ಲದ ಗೋಕರ್ಣ ಮೃಗಗಳು, ಊರ್ಣಾಮೃಗಗಳು, ಒಂದುಕಾಲಿನ ಮೃಗಗಳು, ಕುದುರೇ ಮುಖದ ಮೃಗಗಳು, ಕಸ್ತೂರೀ ಮೃಗಗಳು,ಪರಸ್ಪರ ಮೈತ್ರಿಯಿಂದ ಸಂಚರಿಸುತ್ತಿದ್ದವು. ಅಲ್ಲಲ್ಲಿ ಬೆಳೆದಿರುವ ಬಾಳೆಯ ತೋಪುಗಳಿಂದ ತಡೆಗೊಂಡು ಮರಳು ದಿಣ್ಣೆಗಳು ಮೆರೆಯುತಿದ್ದವು ॥೨೧॥ ಅಲ್ಲದೆ ಆ ಪರ್ವತವು ಸ್ನಾನಮಾತ್ರದಿಂದಲೇ ಸಕಲ ಪಾಪಗಳನ್ನು ಕಳೆಯುವ ತಿಳಿನೀರುಳ್ಳ ಗಂಗೆಯಿಂದ ಸಂಗತವಾಗಿ ಗಗನಾಂಗಣವನ್ನು ಚುಂಬಿಸುತ್ತಿದ್ದುದು ॥೨೨॥

ಆ ಬ್ರಹ್ಮಾದಿ ದೇವತೆಗಳು ಇಂತು ಮನೋಹರವಾಗಿರುವ ಕೈಲಾಸಗಿರಿಯನ್ನೂ, ಆ ಪರ್ವತವಲ್ಲಿರುವ ರಮಣೀಯವಾದ ಅಲಕಾಪುರವನ್ನೂ, ಆ ನಗರದ ಬಳಿಯಲ್ಲಿರುವ ಸೌಗಂಧಿಕ ಕಮಲಗಳಿಂದ ವಿರಾಜಮಾನವಾದ ಸೌಗಂಧಿಕ ವನವನ್ನೂ ಕಂಡು ಪರಮಾಶ

ಬಾಹ್ಯತಃ ಪುರಃ । ತೀರ್ಥಪಾದ ಪದಾಂಭೋಜ ರಜಸಾ ಽ ತೀವ ಪಾವನೇ ॥೨೪॥ ಯಯೋ ಸ್ಸುರ ಸ್ತ್ರಿಯಃ ಕ್ಷತ್ತ ರವರುಹ್ಯ ಸ್ವಧಿಷ್ಣ್ಯತಃ । ಕ್ರೀಡಂತಿ ಪುಂಭಿ ಸ್ಸಿಂಚ್ಯಂತ್ಯೋ ವಿಗಾಹ್ಯ ರತಿಕರ್ಶಿತಾಃ ॥೨೫॥ ಯಯೋ ಸ್ತತ್ಸ್ನಾನ ವಿಭ್ರಷ್ಟ ನವಕುಂಕುಮಪಿಂಜರಂ । ವಿತೃಷೋಽಪಿ ಪಿಬಂತ್ಯಂಭಃ ಪಾಯಯಂತೋ ಗಜಾ ಗಜೀಃ ॥ ೨೬ ॥ ತಾರಹೇಮ ಮಹಾರತ್ನವಿಮಾನಶತಸಂಕುಲಾಂ । ಜುಷ್ಟಾಂ ಪುಣ್ಯಜನ ಸ್ತ್ರೀಭಿ ರ್ಯಥಾ ಖಂ ಸತಟಿದ್ಘನಂ॥೨೭॥ಹಿತ್ವಾ ಯಕ್ಷೇಶ್ವರ ಪುರೀಂ ವನಂ ಸೌಗಂಧಿಕಂಚ ತತ್।ದ್ರುಮೈಃ

ತೀರ್ಥಪಾದ - ಪೂಜ್ಯಪಾದನಾದ ಹರಿಯ, ಪದಾಂಭೋಜ - ಪಾದಕಮಲದ, ರಜಸಾ - ಧೂಳಿಯಿಂದ, ಅತೀವಪಾವನೇ - ಅತ್ಯಂತಶುದ್ಧಗಳಾದ, ನಂದಾಚ - ನಂದೆಯು, ಅಲಕನಂದಾಚ - ಅಲಕನಂದೆಯು ಇರುವವು ॥೨೪॥ ಹೇಕ್ಷತ್ತಃ - ಎಲೈ ವಿದುರನೆ ! ಸುರಸ್ತ್ರಿಯಃ - ದೇವಸ್ತ್ರೀಯರು, ಸ್ವಧಿಷ್ಣ್ಯತಃ - ತಮ್ಮಲೋಕಗಳಿಂದ, ಅವರುಹ್ಯ - ಇಳಿದು, ರತಿಕರ್ಶಿತಾಃ - ರತಿಯಿಂದ ಆಯಾಸಗೊಂಡು, ವಿಗಾಹ್ಯ- ಒಳಹೊಕ್ಕು, ಸಿಂಚಂತ್ಯಃ - ನೀರಾಟವಾಡುತ್ತಾ, ಪುಂಭಿಃ - ಪುರುಷರೊಡನೆ, ಕ್ರೀಡಂತಿ - ವಿಹರಿಸುವರೋ ॥೨೫॥ ತತ್ಸ್ನಾ...ರಂ, ತತ್ - ಆ ದೇವಾಂಗನೆಯರ, ಸ್ನಾನ - ಸ್ನಾನದಿಂದ, ವಿಭ್ರಷ್ಟ - ಕಲೆತಿರುವ, ನವಕುಂಕುಮ - ಹೊಸಕುಂಕುಮದಿಂದ, ಪಿಂಜರಂ - ಹೊಂಬಣ್ಣವೇರಿದ, ಯಯೋಃ - ಯಾವನದಿಗಳ, ಅಂಭಃ - ಜಲವನ್ನು, ಗಜಾಃ - ಆನೆಗಳು, ವಿತೃಷೋಽಪಿ ನೀರಡಕೆಯಿಲ್ಲದಿದ್ದರೂ ಗಜೀಃ - ಹೆಣ್ಣಾನೆಗಳಿಗೆ, ಪಾಯಯಂತಃ - ಕುಡಿಸುತ್ತಾ, ಪಿಬಂತಿ - ಕುಡಿಯುವುವೋ, ॥೨೬॥ ಸತಟಿದ್ಘನಂ - ಮಿಂಚುಗಳಿಂದ ಕೂಡಿದ, ಖಂಯಥಾ - ಗಗನದಂತೆ, ತಾರ...ಲಾಂ, ತಾರ - ಬೆಳ್ಳಿ, ಹೇಮ- ಚಿನ್ನ, ಮಹಾರತ್ನ - ಉತ್ತಮರತ್ನಗಳು, ಇವುಗಳಿಂದ ಕೂಡಿದ, ವಿಮಾನಶತ-ಅನೇಕವಿಮಾನಗಳಿಂದ ಸಂಕುಲಾಂ - ವ್ಯಾಪ್ತವಾದ, ಪುಣ್ಯಜನಸ್ತ್ರೀಭಿಃ - ಯಾತುಧಾನ ಸ್ತ್ರೀಯರಿಂದ, ಜುಷ್ಟಾಂ - ಕೂಡಿರುವ ॥೨೭॥ ಯಕ್ಷೇಶ್ವರಪುರೀಂ - ಅಲಕಾವತಿಯನ್ನು, ಹಿತ್ವಾ - ಉಳಿದು, ಚಿತ್ರ...ದ್ಯೈಃ-ಚಿತ್ರಗಳಾದ ಹೂಗೊಂಚಲು, ಹಣ್ಣುಗಳು, ಎಲೆಗಳೂ ಉಳ್ಳ, ಕಾಮದುಘೈಃ - ಇಷ್ಟಗಳನ್ನು ಕೊಡುವ, ದ್ರು

ರ್ಯಗೊಂಡರು ॥೨೪॥ ಆ ಅಲಕಾವತಿಯ ಮುಂದುಗಡೆಯಲ್ಲಿ, ಶ್ರೀಮಹಾವಿಷ್ಣುವಿನ ಪಾದಕಮಲದಿಂದುದ್ಭವಿಸಿದ ಲೋಕ ಪಾವನೆಗಳಾದ "ನಂದಾ, ಅಲಕನಂದಾ" ಎಂಬೆರಡು ಮಹಾನದಿಗಳು ಹರಿಯುತ್ತಿರುವುವು ॥೨೪॥ ಅಯ್ಯಾ ವಿದುರನೆ ! ದೇವಸ್ತ್ರೀಯರೆಲ್ಲರೂ ತಂತಮ್ಮ ಲೋಕಗಳಿಂದಿಳಿತಂದು, ರಮಣರಿಂದೊಡಗೂಡಿ ರತಿಕಲಹದಿಂದಾಯಾಸಗೊಂಡು, ಆ ನದೀ ಜಲದಲ್ಲಿಳಿದು ವಿನೋದದಿಂದ ನೀರಾಟವನ್ನಾಡುತ್ತಿರುವರು ॥೨೫॥ ಆ ನೀರೆಯರ ನೀರಾಟದಿಂದ ಜಾರಿದ, ನವಕುಂಕುಮ ಸಾರದಿಂದ ಪೂರಿತವಾಗಿ ಮಗಮಗಿಸುತ್ತಿರುವ ಆ ಜಲವನ್ನು ಕಂಡು ಅಲ್ಲಿಯ ಕಾಡಾನೆಗಳು ನೀರಡಕೆಯಿಲ್ಲದಿದ್ದರೂ, ತಮ್ಮ ಹೆಣ್ಣಾನೆಗಳಿಗೂ ಕುಡಿಸಿ ತಾವೂ ಕುಡಿಯುತ್ತಿರುವುವು ॥೨೬॥ ದೇವಾಂಗನೆಯರಿಂದ ಸಂಗತವಾಗಿ, ಚಿನ್ನ, ಬೆಳ್ಳಿ, ರತ್ನಗಳಿಂದ ನೂತನವಾದ ಸಾವಿರಾರು ವಿಮಾನಗಳಿಂದ ಒಪ್ಪುತ್ತಿರುವ ಆ ಅಲಕಾವತಿಯು, ಮಿಂಚುಬಳ್ಳಿಗಳಿಂದ ಚಂಚಲವಾಗಿ ವಾರಿದಗಳಿಂದ ಪೂರಿತವಾದ ಗಗನಾಂಗಣದಂತೆ ಮೆರೆಯುತ್ತಿದ್ದುದು ॥೨೭॥ ಇಂತಹ ಅಲಕಾವತಿಯನ್ನು ಅತಿಕ್ರಮಿಸಿ, ವಿಚಿತ್ರಗಳಾದ ಎಲೆಗಳಿಂದಲೂ ಹೂಗಳಿಂದಲೂ ಕಂಗೊಳಿಸುತ್ತಿರುವ ಕಾಮದುಘಗಳಾದ

ಕಾಮದುಘೈ ರ್ಹೃದ್ಯಂ ಚಿತ್ರಮಾಲ್ಯ ಫಲಚ್ಛದೈಃ ॥ ೨೮ ॥ ರಕ್ತಕಂ
ಠಖಗಾನೀಕ ಸ್ವರಮಂಡಿತ ಷಟ್ಪದಂ । ಕಲಹಂಸ ಕುಲಶ್ರೇಷ್ಠ ಖರದಂಡ
ಜಲಾಶಯಂ ॥ ೨೯ ॥ ವನ ಕುಂಜರಸಂಘುಷ್ಟ ಹರಿಚಂದನ ವಾಯುನಾ । ಅಧಿ
ಪುಣ್ಯಜನ ಸ್ತ್ರೀಣಾಂ ಮುಹು ರುನ್ಮದಯ ನ್ಮನಃ ॥ ೩೦ ॥ ವೈಡೂರ್ಯ ಕೃ
ತಸೋಪಾನಾ ವಾಪೀ ರುತ್ಪಲಮಾಲಿನೀಃ । ವ್ಯಾಪ್ತಂ ಕಿಂಪುರುಷೈ ರ್ದೃ
ಷ್ಟ್ವಾ ತ ಆರಾ ದ್ದದೃಶು ರ್ವಟಂ ॥ ೩೧ ॥ ಸಯೋಜನ ಶತೋತ್ಸೇಧಃ
ಪಾದೋನ ವಿಟಪಾಯತಃ । ಪರ್ಯಕ್ಕೃತಾಚಲಚ್ಛಾ ಯೋ ನಿರ್ನೀಡ
ಸ್ತಾಪವರ್ಜಿತಃ ॥ ೩೨ ॥ ತಸ್ಮಿನ್ ಮಹಾಯೋಗಮಯೇ ಮುಮುಕ್ಷುಶರಣೇ

ವೃಕ್ಷೈಃ - ಗಿಡಗಳಿಂದ, ಹೃದ್ಯಂ - ಮನೋಹರವಾದ, ರಕ್ತ...ದಂ, ರಕ್ತಕಂಠಖಗ - ಕೋಗಿಲೆಗಳ, ಅನೀಕ - ಗುಂಪಿನ, ಸ್ವರ - ಸ್ವರದಿಂದ, ಮಂಡಿತ - ಮಿಳಿತವಾದ, ಷಟ್ಪದಂ - ತುಂಬಿಗಳ ಝುಂಕಾರವುಳ್ಳ, ಕಲ...ಯಂ , ಕಲಹಂಸರಾಜಹಂಸ ಶ್ರೇಷ್ಠಗಳಿಂದಲೂ, ಖರದಂಡ - (ಕಠಿನನಾಳವುಳ್ಳ) ಕಮಲಗಳಿಂದಲೂ ಕೂಡಿದ, ಜಲಾಶಯಂ-ಕೊಳಗಳುಳ್ಳ ॥ ೨೯ ॥ ವನ...ನಾ, ವನಕುಂಜರ-ಕಾಡಾನೆಗಳಿಂದ, ಸಂಘುಷ್ಟ - ಅಲ್ಲಾಡಿಸಲ್ಪಟ್ಟ, ಹರಿಚಂದನ - ಗಂಧದ ಮರಗಳ. ವಾಯುನಾ - ಗಾಳಿಯಿಂದ, ಪುಣ್ಯಜನಸ್ತ್ರೀಣಾಂ - ರಾಕ್ಷಸಸ್ತ್ರೀಯರ, ಮನಃ - ಮನಸ್ಸನ್ನು, ಅಧಿ - ಅಧಿಕವಾಗಿ, ಮುಹುಃ - ಬಾರಿಬಾರಿಗೂ, ಉನ್ಮದಯತ್ - ಮದಗೊಳಿಸುತ್ತಿರುವ, ತತ್ - ಆ ಸೌಗಂಧಿಕಂಚ - ಸೌಗಂಧಿಕವನ್ನೂ, ವೈಡೂ...ನಾಃ-ವೈಡೂರ್ಯಮಣಿಗಳ ಮೆಟ್ಟಲುಗಳುಳ್ಳ, ಉತ್ಪಲಮಾಲಿನೀಃ - ನೈದಿಲೆಗಳುಳ್ಳ, ವಾಪೀಃ ॥ ಬಾವಿಗಳನ್ನೂ, ಕಿಂಪುರುಷೈಃ - ಕಿಂಪುರುಷರಿಂದ, ವ್ಯಾಪ್ತಂ - ತುಂಬಿದ, ವಟಂಚ - ವಟವೃಕ್ಷವನ್ನೂ, ತೇ - ಅವರು, ಆರಾತ್ - ಬಳಿಯಲ್ಲಿ. ದದೃಶುಃ - ಕಂಡರು ॥ ೩೧ ॥ ಸಃ - ಅದು, ಯೋಜ...ಧಃ-ನೂರುಗಾವುದಗಳ ಎತ್ತರವಾಗಿಯೂ, ಪಾದೋ...ತಃ, ಎಪ್ಪತ್ತೈದು ಗಾವುದಗಳ ಉದ್ದವುಳ್ಳ ಕೊಂಬೆಗಳಿಂದ ವಿಸ್ತಾರವಾಗಿಯೂ, ಪರ್ಯ...ಯಃ, ಪರ್ಯಕ್ಕೃತ - ಸುತ್ತಲೂ ಮಾಡಲ್ಪಟ್ಟ, ಅಚಲಚ್ಛಾಯಃ - ಶಾಶ್ವತವಾದ ನೆರಳುಳ್ಳುದಾಗಿಯೂ, ನಿರ್ನೀ...ತಃ, ಗೂಡುಗಳಿಲ್ಲದೆಯೂ ಇದ್ದಿತು ॥ ೩೧ ॥ ಸುರಾಃ - ದೇವತೆಗಳು, ಮಹಾಯೋಗಮಯೇ - ಧ್ಯಾನಯೋಗಾದಿಗಳಿಂದ ಪ್ರಚುರವಾದ, ಮುಮು

ಕಲ್ಪತರುಗಳಿಂದ ಕಮನೀಯವಾಗಿ ॥ ೨೮ ॥ ಕೋಗಿಲೆಗಳ ಪಂಚಮಸ್ವರದಿಂದ ಸಂಚಾದ ಚಂಚರೀಕಗಳ ಗಾನದಿಂದಲೂ, ಕಲಹಂಸದಿಂದ ಕಲಕಲಾಯಮಾನ ವೆನಿಸಿರುವ ಕಮಲಿನೀಷಂಡದಿಂದ ಮಂಡಿತವಾದ ಕೊಳಗಳಿಂದಲೂ, ಕಾಡಾನೆಗಳ ಕ್ರೀಡೆಯಿಂದ ಮುರಿಯಲ್ಪಟ್ಟ ಚಂದನ ವೃಕ್ಷಗಳ ಗಂಧಬೆರಸಿ ಅಂದವಾಗಿ ಬೀಸುತ್ತಿರುವ ತಂಗಾಳಿಯಿಂದಲೂ, ವನವಿಹಾರಮಾಡುವ ಯಾತುಧಾನ ವನಿತೆಯರ ಮನವನ್ನು ಮದಗೊಳಿಸುತ್ತಿರುವ ಸೌಗಂಧಿಕವನವನ್ನೂ, ಆ ವನದಲ್ಲಿ ವೈಡೂರ್ಯ ಮಣಿಗಳ ಸೋಪಾನಗಳಿಂದಲೂ, ಕವ್ವಲ ಕುಮುದಾದಿ ಪುಷ್ಪಗಳಿಂದಲೂ, ಕಂಗೊಳಿಸುವ ತಾಗೊಳಗಳನ್ನೂ, ನೋಡುತ್ತಾ ನಡೆವ ಬಳಿಯಲ್ಲಿಯೇ ಬಂದು ಅದ್ಭುತವಾದ ವಟವೃಕ್ಷವನ್ನು ಕಂಡರು ॥ ೩೧ ॥ ಆ ವೃಕ್ಷವು ನೂರುಗಾವುದಗಳ ಎತ್ತರವಾಗಿಯೂ, ಎಪ್ಪತ್ತೈದು ಗಾವುದಗಳ ಅಗಲವಾಗಿಯೂ, ನಿರಂತರ ಛಾಯಾ ಸಮೇತವಾಗಿಯೂ, ಹಕ್ಕಿಗಳ ಗೂಡುಗಳಿಲ್ಲದೆಯೂ, ಬಿಸಿಲು ಬೀಳದೆಯೂ, ಯೋಗಾಭ್ಯಾಸಿಗಳಾದ ಮಹಾ ಮುನಿಮಂಡಲಿಯಿಂದ ನಿಬಿಡವಾಗಿದ್ದಿತು ॥ ೩೨ ॥ ಅಂತಹ

ಸುರಾಃ । ದದೃಶು ರ್ದೇವ ಮಾಸೀನಂ ತ್ಯಕ್ತಾಽಮರ್ಷ ಮಿವಾಂತಕಂ ॥೩೬॥ ಸನಂದಾದ್ಯೈ ರ್ಮಹಾಸಿದ್ಧೈ ಶ್ಶಾಂತೈ ಸ್ಸಂಶಾಂತ ವಿಗ್ರಹಂ।ಉಪಾಸ್ಯಮಾನಂ ಸಖ್ಯಾಚ ಭರ್ತ್ರಾ ಗುಹ್ಯಕ ರಕ್ಷಸಾಂ॥೩೭॥ ವಿದ್ಯಾತಪೋ ಯೋಗಪಥ ಮಾಸ್ಥಿತಂ ತದಧೀಶ್ವರಂ । ಚರಂತಂ ವಿಶ್ವಸುಹೃದಂ ವಾತ್ಸಲ್ಯಾ ಲ್ಲೋಕ ಮಂಗಳಂ ॥೩೮॥ ಲಿಂಗಂ ಚ ತಾಪಸಾ ಽ ಭೀಷ್ಟಂ ಭಸ್ಮದಂಡ ಜಟಾ ಽ ಜಿನಂ । ಲಿಂಗೇನ ಸಂಧ್ಯಾ ಽ ಭ್ರರುಚಾ ಚಂದ್ರಲೇಖಾಂಚ ಬಿಭ್ರತಂ॥೩೯॥ ಉಪವಿಷ್ಟಂ ದರ್ಭಮಯ್ಯಾಂ ಬ್ರುಸ್ಯಾಂ ಬ್ರಹ್ಮ ಸನಾತನಂ । ನಾರದಾಯ

ಕ್ಷುಶರಣೇ - ಮುಮುಕ್ಷುಗಳಿಗೆ ಆಶ್ರಯವಾದ, ತಸ್ಮಿನ್ - ಆವಟವೃಕ್ಷದಲ್ಲಿ, ತ್ಯಕ್ತಾಮರ್ಷಂ - ಕೋಪವನ್ನುಳಿದ, ಅಂತಕಮಿವ - ಯಮನಂತೆ, ಆಸೀನಂ - ಕುಳಿತಿರುವ, ದೇವಂ - ಮಹಾದೇವನನ್ನೂ, ದದೃಶುಃ - ಕಂಡರು ॥೩೬॥ ಶಾಂತೈಃ - ಶಾಂತರಾದ, ಸನಂದಾದ್ಯೈಃ - ಸನಂದ ಮೊದಲಾದ, ಮಹಾಸಿದ್ಧೈಃ- ಸಿದ್ಧಪುರುಷರಿಂದಲೂ, ಗುಹ್ಯಕರಕ್ಷಸಾಂ - ಯಕ್ಷರಾಕ್ಷಸರಿಗೆ, ಭರ್ತ್ರಾ - ಒಡೆಯನಾದ, ಸಖ್ಯಾಚ- ಮಿತ್ರನಾದ ಕುಬೇರನಿಂದಲೂ, ಉಪಾಸ್ಯಮಾನಂ - ಸೇವಿಸಲ್ಪಡುತ್ತಿರುವ, ಸಂಶಾಂತ ವಿಗ್ರಹಂ-ಸಂಪೂರ್ಣವಾಗಿ ಶಾಂತವಾದ ಸ್ವರೂಪವುಳ್ಳ ॥೩೭॥

ವಿದ್ಯಾ...ಥಂ, ಉಪಾಸನೆ, ಚಿತ್ತೈಕಾಗ್ರ್ಯ, ಸಮಾಧಿ, ಇವುಗಳ ದಾರಿಯನ್ನು, ಆಸ್ಥಿತಂ - ಆಚರಿಸುವ, ತದಧೀಶ್ವರಂ - ಅವುಗಳಿಗೆ ಒಡೆಯನಾದ, ವಿಶ್ವಸುಹೃದಂ - ಲೋಕಬಂಧುವಾದ, ವಾತ್ಸಲ್ಯಾತ್ - ಪ್ರೇಮದಿಂದ, ಲೋಕಮಂಗಳಂ - ಲೋಕಕ್ಷೇಮವನ್ನು, ಚರತಂ - ಮಾಡುತ್ತಿರುವ ॥೩೮॥ ಸಂಧ್ಯಾಭ್ರರುಚಾ - ಸಂಜೆಮೋಡದಂತೆ ಕಾಂತಿಯುಳ್ಳ, ಅಂಗೇನ - ಶರೀರದಿಂದ, ಭಸ್ಮ...ನಂ ಭಸ್ಮ, ದಂಡ, ಜಟಾಕೃಷ್ಣಾಜಿನಗಳುಳ್ಳ, ತಾಪಸಾಭೀಷ್ಟಂ - ಋಷಿಗಳಿಗೆ, ಸಮ್ಮತವಾದ, ಲಿಂಗಂ - ಮುನಿವೇಷವನ್ನೂ, ಚಂದ್ರಲೇಖಾಂಚ - ಬಾಲಚಂದ್ರನನ್ನೂ ಬಿಭ್ರತಂ - ಧರಿಸಿರುವ, ॥೩೯॥ ದರ್ಭಮಯ್ಯಾಂ - ದರ್ಭೆಗಳಿಂದ ಮಾಡಲ್ಪಟ್ಟ, ಬ್ರುಸ್ಯಾಂ - ಋಷ್ಯಾಸನದಲ್ಲಿ, ಉಪವಿಷ್ಟಂ - ಕುಳಿತಿರುವ, ಸತಾಂ - ಸಾಧುಗಳು, ಶೃಣ್ವತಾಂ - ಕೇಳುವಹಾಗೆ, ಪೃಚ್ಛತೇ - ಬೆಸಗೊಳ್ಳುವ, ನಾರದಾಯ - ನಾರದಮುನಿಗೆ, ಸನಾತನಂ - ಶಾಶ್ವತವಾದ, ಬ್ರಹ್ಮ - ಆತ್ಮತತ್ವವನ್ನು ಪ್ರವೋಚಂತಂ - ಹೇಳುತ್ತಿರು

ವಟವೃಕ್ಷದ ಬುಡದಲ್ಲಿ ಕೋಪವನ್ನುಳಿದು ಕುಳಿತಿರುವ ಕೃತಾಂತನಂತೆ ಶಾಂತರೂಪನಾಗಿ ನೆಲಸಿರುವ ಪುರಾಂತಕನನ್ನು ಕಂಡರು ॥೩೬॥ ತಪಸ್ಸಿದ್ಧಿಯನ್ನು ಪಡೆದ ಶಾಂತರಾದ ಸನಂದಾದಿ ಮಹಾ ಯೋಗಿಗಳೂ, ಯಕ್ಷರಾಕ್ಷಸಾಧ್ಯಕ್ಷನಾದ ಕುಬೇರನೂ ಆತನನ್ನು ಓಲೈಸುತ್ತಿದ್ದರು ॥೩೭॥ ತಪೋಯೋಗಜ್ಞಾನ ಮಾರ್ಗಗಳಿಗೆ ಪ್ರವರ್ತಕನಾಗಿದ್ದರೂ, ಜಗತ್ಪ್ರಿಯನಾದುದರಿಂದ ಲೋಕಕ್ಷೇಮವನ್ನೆಸಗುವುದಕ್ಕಾಗಿ ವಾತ್ಸಲ್ಯದಿಂದ ಉಪಾಸನಾತಪೋಯೋಗ ಮಾರ್ಗಗಳನ್ನು ಆಚರಿಸುತ್ತಿದ್ದನು॥೩೮॥ ಸಂಜೆಮೋಡದಂತೆ ಕಾಂತಿಭರಿತವಾದ, ಶರೀರದಲ್ಲಿ ಬೂದಿಯನ್ನು ಬೊಳೆದುಕೊಂಡು, ಜಡೆಗಳನ್ನು ಧರಿಸಿ, ಕೃಷ್ಣಾಜಿನವನ್ನು ಹೊದ್ದು ತಲೆಯಲ್ಲಿ ಬಾಲಚಂದ್ರನನ್ನು ಅಲಂಕರಿಸಿಕೊಂಡು, ಋಷಿವೇಷದಿಂದೊಪ್ಪುತ್ತಿದ್ದನು ॥೩೯॥ ದರ್ಭಮಯವಾದ ಬ್ರುಷಿಯೆಂಬ ಆಸನದಲ್ಲಿ ಕುಳಿತು,ಸುತ್ತಲೂ ನೆರೆದಿರುವ ಮಹರ್ಷಿಗಳು ಕೇಳುವಂತೆ, ಬೆಸಗೊಳ್ಳುತ್ತಿರುವ ನಾರದ ಮುನಿಗೆ ಆತ್ಮ ತತ್ವೋಪದೇಶವನ್ನು ಮಾಡುತ್ತಿ

ಪ್ರವ್ರೋಚಂತಂ ಪೃಚ್ಛತೇ ಶೃಣ್ವತಾಂ ಸತಾಂ ॥೩೭॥ ‡ ಕೃತ್ವೋರೌ ದಕ್ಷಿಣೇ ಸವ್ಯಂ ಪಾದಪದ್ಮಂಚ ಜಾನುನಿ । ಬಾಹುಪ್ರಕೋಷ್ಠೇಽಕ್ಷಮಾಲಾಮಾಸೀನಂ ತರ್ಕ ಮುದ್ರಯಾ ॥೩೮॥ ತಂ ಬ್ರಹ್ಮನಿರ್ವಾಣಸಮಾಧಿ ಮಾಶ್ರಿತಂ ವ್ಯಪಾಶ್ರಿತಂ ಗಿರಿಶಂ ಯೋಗಕಕ್ಷ್ಯಾಂ । ಸಲೋಕಪಾಲಾ ಮುನಯೋ ಮುನೀನಾ ಮಾದ್ಯಂ ಮುನಿಂ ಪ್ರಾಂಜಲಯಃ ಪ್ರಣೇಮುಃ ॥೩೯॥ ಸತೂಪಲಭ್ಯಾಗತ ಮಾತ್ಮಯೋನಿಂ ಸುರಾಽಸುರೇಶೈ ರಭಿವಂದಿತಾಂಘ್ರಿಂ । ಉತ್ಥಾಯ ಚಕ್ರೇ ಶಿರಸಾಽಭಿವಾದನಂ ಮಹತ್ತಮಃ ಕಸ್ಯ ಯಥೈವ ವಿಷ್ಣುಃ॥೪೦॥

ವ ॥೩೭॥ ದಕ್ಷಿಣೇ - ಬಲಗಡೆಯ, ಊರೌ - ತೊಡೆಯಲ್ಲಿ, ಸವ್ಯಂ - ಎಡದ, ಪಾದಪದ್ಮಂ - ಪಾದಕಮಲವನ್ನೂ, ಜಾನುನಿ - ಎಡದ ಜಾನುವಿನಲ್ಲಿ, ಎಡದೋಳನ್ನೂ, ಬಾಹುಪ್ರಕೋಷ್ಠೇ - ಬಲಗಡೆಯ ಮುಂಗೈಯಲ್ಲಿ, ಅಕ್ಷಮಾಲಾಂಚ - ಜಪಸರವನ್ನೂ, ಕೃತ್ವಾ - ಇಟ್ಟುಕೊಂಡು, ತರ್ಕಮುದ್ರಯಾ ಉಪದೇಶಮುದ್ರೆಯಿಂದ, ಆಸೀನಂ - ಕುಳಿತಿರುವ ॥೩೮॥ ಬ್ರಹ್ಮ...ಧಿಂ, ಬ್ರಹ್ಮನಿರ್ವಾಣ - ಬ್ರಹ್ಮಾನಂದದಲ್ಲಿ, ಸಮಾಧಿಂ - ಚಿತ್ತೈಕಾಗ್ರ್ಯವನ್ನು, ಆಶ್ರಿತಂ - ಆಶ್ರಯಿಸಿರುವ, ಯೋಗಕಕ್ಷ್ಯಾಂ - ಯೋಗಪಟ್ಟವನ್ನು, ವ್ಯಪಾಶ್ರಿತಂ - ವಿಶೇಷವಾಗಿ ಆಶ್ರಯಿಸಿರುವ, ಮುನೀನಾಂ - ಮನನಶೀಲರಿಗೆ, ಆದ್ಯಂ - ಮೊದಲನೆಯವನಾದ, ತಂಗಿರಿಶಂ - ಆ ಶಿವನನ್ನು, ಸಲೋಕಪಾಲಾಃ - ಲೋಕಪಾಲರಿಂದ ಕೂಡಿದ, ಮುನಯಃ - ಮುನಿಗಳು, ಪ್ರಾಂಜಲಯಃ - ಕೈಜೋಡಿಸಿ, ಪ್ರಣೇಮುಃ - ನಮಸ್ಕರಿಸಿದರು ॥೩೯॥ ಸತು - ಆ ಶಿವನು, ಸುರಾಸುರೇಶೈಃ - ದೇವದಾನವಶ್ರೇಷ್ಠರಿಂದ, ಅಭಿ...ಘ್ರಿಂ-ನಮಸ್ಕರಿಸಲ್ಪಟ್ಟ ಪಾದಗಳುಳ್ಳ, ಅಭ್ಯಾಗತಂ - ಬಂದ, ತಂ ಆತ್ಮಯೋನಿಂ - ಆ ಬ್ರಹ್ಮನನ್ನು, ಉಪಲಭ್ಯ - ಎದುರುಗೊಂಡು, ಮಹತ್ತಮಃ - ಅತ್ಯಂತಪೂಜ್ಯನಾದ, ವಿಷ್ಣುಃ - ವಾಮನಮೂರ್ತಿಯು, ಕಸ್ಯೇವ - ಕಶ್ಯಪನಿಗೋಪಾದಿಯಲ್ಲಿ, ಉತ್ಥಾಯ - ಎದ್ದು, ಶಿರಸಾ - ತಲೆಯಿಂದ, ಅಭಿವಾದನಂ - ನಮಸ್ಕಾರವನ್ನು, ಚಕ್ರೇ - ಮಾಡಿದನು ॥೪೦॥

ದ್ದನು॥೩೭॥ ಬಲತೊಡೆಯಮೇಲೆ ಎಡಗಾಲನ್ನಿಟ್ಟುಕೊಂಡು ಎಡದೊಡೆಯ ತುದಿಯಲ್ಲಿ ಎಡಗೈಯನ್ನಿಟ್ಟು, ಬಲಮುಂಗೈಯಲ್ಲಿ ಜಪಸರವನ್ನು ಧರಿಸಿ, ಚಿನ್ಮುದ್ರೆಯನ್ನು ಹಿಡಿದು ಕುಳಿತಿದ್ದನು ॥೩೮॥ ಯೋಗಪಟ್ಟವನ್ನು ಕಟ್ಟಿಕೊಂಡು, ಬ್ರಹ್ಮಾನಂದದಲ್ಲಿ ಚಿತ್ತೈಕಾಗ್ರ್ಯವನ್ನು ಪಡೆದು, ಮಹರ್ಷಿಗಳೆಲ್ಲರಿಗೂ ಮನನ ಮಾರ್ಗವನ್ನು ತೋರುತ್ತಿರುವ, ಆದಿಮುನಿಯಾದ ಆ ಮಹಾದೇವನನ್ನು ಕಂಡು, ಇಂದ್ರಾದಿ ಲೋಕಪಾಲಕರೂ, ಮರೀಚ್ಯಾದಿ ಪ್ರಜೇಶರೂ ಸಹ, ಕೈಮುಗಿದು ದಂಡಪ್ರಣಾಮವನ್ನು ಮಾಡಿದರು ॥೩೯॥ ತರುವಾಯ ಅತ್ಯಂತ ಪೂಜ್ಯನಾದ ಪರಶಿವಮೂರ್ತಿಯು, ಸುರಾಸುರ ಬೃಂದವಂದಿತಚರಣಾರವಿಂದನಾದ ಶತಾನಂದನು ಬಂದುದನ್ನು ಕಂಡು, ದಿಗ್ಗನೆದ್ದು, ಮುನ್ನು ಲೋಕಗುರುವಾದ ವಾಮನಮೂರ್ತಿಯು

† ಶ್ಲೋ॥ ಏಕಂಪಾದ ಮಥೈಕಸ್ಮಿನ್ ವಿನ್ಯಸೇದೂರು ಸಂಜ್ಞಿತಂ । ಇತರಸ್ಮಿಂ ಸ್ತಥಾಬಾಹುಂ ವೀರಾಸನ ಮಿದಂ ಸ್ಮೃತಂ (ಯೋಗಶಾಸ್ತ್ರ)

ಶ್ಲೋ॥ ತರ್ಜನ್ಯಂಗುಷ್ಠಯೋ ರಗ್ರೇ ಮಿಥ ಗುಸ್ಸಂಯೋಜ್ಯ ಚಾಂಗುಳೀಃ। ಪ್ರಸಾರ್ಯ ಬೋಧನಂ ಪ್ರಾಹು ಸ್ತರ್ಕಮುದ್ರೇತಿ ಮಾಂತ್ರಿಕಾಃ (ಚಿನ್ಮುದ್ರಾಲಕ್ಷಣ)

ತಥಾ ಪರೇ ಸಿದ್ಧಗಣಾ ಮಹರ್ಷಿಭಿ ರ್ಯೇ ವೈ ಸಮಂತಾ ದನು ನೀಲಲೋಹಿ
ತಂ । ನಮಸ್ಕೃತಃ ಪ್ರಾಹ ಶಶಾಂಕಶೇಖರಂ ಕೃತಪ್ರಣಾಮಂ ಪ್ರಹಸ ನ್ನಿ
ವಾತ್ಮಭೂಃ ॥೪೦॥ ಬ್ರಹ್ಮಾ ॥ ‡ ಜಾನೇ ತ್ವಾ ಮೀಶ! ವಿಶ್ವಸ್ಯ ಜಗತೋ
ಯೋನಿಬೀಜಯೋಃ । ಶಕ್ತೇಃ ಶಿವಸ್ಯಚ ಪರಂ ಯತ್ತ ದ್ಬ್ರಹ್ಮ ನಿರಂತ
ರಂ॥೪೧॥ ತ್ವ ಮೇವ ಭಗವ ನ್ನೇತ ಚ್ಛಿವಶಕ್ತ್ಯೋ ಸ್ಸರೂಪಯೋಃ। ವಿಶ್ವಂ

ಮಹರ್ಷಿಭಿಃ - ಋಷಿಗಳಿಂದ ಕೂಡಿ, ಯೇವೈ - ಯಾರು ಅನುನೀಲಲೋಹಿತಂ - ಶಿವನ ಸಮಂತಾತ್ - ಸುತ್ತಲೂ ಇದ್ದರೋ, ಪರೇ-ಇತರರಾದ, ಸಿದ್ಧಗಣಾಃ - ಆ ಸಿದ್ಧಸಮೂಹಗಳು, ವಂದಿಸಿದರು, ನಮಸ್ಕೃತಃ - ವಂದಿಸಲ್ಪಟ್ಟ' ಆತ್ಮಭೂಃ - ಬ್ರಹ್ಮನು, ಕೃತಪ್ರಣಾಮಂ- ನಮಸ್ಕಾರಮಾಡಿದ, ಶಶಾಂಕಶೇಖರಂ - ಚಂದ್ರಮೌಳಿಯನ್ನು ಕುರಿತು, ಪ್ರಹಸನ್ನಿವ - ನಸುನಕ್ಕು, ಪ್ರಾಹ - ಹೇಳುತ್ತಾನೆ ॥ ಹೇಈಶ - ಎಲೈ ಮಹೇಶ್ವರನೆ! ವಿಶ್ವಸ್ಯ- ಸಮಸ್ತವಾದ, ಜಗತಃ-ಜಗತ್ತಿಗೆ, ಯೋನಿಬಿಜಯೋಃ-ಕ್ಷೇತ್ರಬೀಜಗಳೆನಿಸಿದ, ಶಕ್ತೇಃ - ಶಕ್ತಿಗೂ, ಶಿವಸ್ಯಚ - ಪುರುಷನಿಗೂ, ಪರಂ -ವಿಲಕ್ಷಣವಾದ, ನಿರಂತರಂ - ಭೇದರಹಿತವಾದ, ಯದ್ಬ್ರಹ್ಮ - ಯಾವಬ್ರಹ್ಮವಸ್ತುವುಂಟೋ, ತತ್ - ಅದನ್ನು ತ್ವಾಂ - ನಿನ್ನನ್ನಾಗಿ ಜಾನೇ - ತಿಳಿಯುತ್ತೇನೇ ॥೪೧॥ ಹೇಭಗವನ್ - ಎಲೈ ಭಗವಂತನೆ! ಸರೂಪಯೋಃ - ಅಲ್ಲಿವಿಭಕ್ತರಾಗಿರುವ, ಶಿವಶಕ್ತ್ಯೋಃ - ಪ್ರಕೃತಿಪುರುಷರಿಂದ, ಕ್ರೀಡನ್ - ಕ್ರೀಡಿಸುತ್ತಾ, ಊರ್ಣಪದೋಯಥಾ - ಜಾಡರ ಹುಳುವಿಂತೆ, ಏತತ್ - ಈ, ವಿಶ್ವಂ - ಜಗತ್ತನ್ನು, ಸೃಜಸಿ - ಸೃಷ್ಟಿಸುವೆ, ಪಾಸಿ - ಸಲಹುವೆ,

ಕಶ್ಯಪಮುನಿಯನ್ನು ಸತ್ಕರಿಸಿದಂತೆ, ಎದಿರುಗೊಂಡು ಸಾಷ್ಟಾಂಗವಾಗೆರಗಿದನು ॥೪೦॥

ಕೂಡಲೇ ಆಚಂದ್ರಮೌಳಿಯ ಸುತ್ತಮುತ್ತಲೂ ಇರುವ ತಪಸ್ಸಿದ್ಧರಾದ ಮಹರ್ಷಿಗಳೆಲ್ಲರೂ ವಂದನಗಳನ್ನಾಚರಿಸಿದರು. ಇಂತು ಸರ್ವರಿಂದ ನಮಸ್ಕೃತನಾದ ಪರಮೇಷ್ಠಿಯು ನಿಕೃಷ್ಟನಂತೆ ಅಡಿಗೆರಗುತ್ತಿರುವ ಪುರಹರನನ್ನು ಕಂಡು ನಸುನಗುತ್ತಾ ಇಂತೆಂದನು ॥೪೧॥ ಎಲೈ ಲೋಕೇಶ್ವರನೆ! "ಈ ಜಗತ್ತಿಗೆ ಕ್ಷೇತ್ರಬೀಜರೂಪರಾದ ಪ್ರಕೃತಿಪುರುಷರಿಗಿಂತ ವಿವಿಕ್ತವಾಗಿರುವ ಪರಬ್ರಹ್ಮವಸ್ತುವೇ ನೀನಾಗಿರುವೆ" ಯೆಂಬುದನ್ನು ನಾನು ಬಲ್ಲೆನು॥೪೨॥ ಅಯ್ಯಾ ಭಗವಂತನೆ! ನಿನಗಿಂತಲೂ ಬೇರೆಯಲ್ಲದೆ ನಿನಗಂಶಭೂತರೆನಿಸಿರುವ ಪ್ರಕೃತಿಪುರುಷರಿಂದ ಜಗದ್ರೂಪವಾಗಿ ಕ್ರೀಡಿಸುತ್ತಾ, ಇತರಾಪೇಕ್ಷೆಯಿಲ್ಲದೆ ತಂತು ಸೃಷ್ಟಿಸಂಹಾರಗಳನ್ನೆಸಗುವ ಊರ್ಣನಾಭಿಯಂತೆ, ನೀನು ಈ ಜಗತ್ತನ್ನು ಸೃಷ್ಟಿಸಿ ಸಲಹಿ ಸಂಹರಿಸುವೆ.

‡ (1) ವೀ. ರುದ್ರನು ಭಗವತ್ಸ್ವರೂಪನಾದುದರಿಂದಲೂ, ಭಗವದಾವೇಶಾವತಾರನಾಗಿರುವುದರಿಂದಲೂ, ಅವನು ಪರಮಾತ್ಮನಿಗಿಂತ ನಿಕೃಷ್ಟನಾಗಿದ್ದರೂ, ಆರುದ್ರರೂಪದಿಂದಿರುವ ಭಗವಂತನನ್ನು ಉದ್ದೇಶಿಸಿ, ಬ್ರಹ್ಮದೇವನು ಈ ಪ್ರಕರಣದಲ್ಲಿ ಜಗತ್ಕಾರಣನೆಂತಲೂ, ಧರ್ಮಪಾಲಕನೆಂತಲೂ ಹಲವು ವಿಧವಾಗಿ ಕೊಂಡಾಡುವನೆಂದರಿಯಬೇಕು.

(2) ವಿ. "ಪರಮಾತ್ಮನು ತನ್ನ ಭಕ್ತನಾದ ರುದ್ರನಲ್ಲಿ ದಕ್ಷನುದ್ವೇಷಿಸಿದುದನ್ನು ಸಹಿಸಲಾರದೆ, ಅವನ ಯಜ್ಞವನ್ನು ನಾಶಗೊಳಿಸಿದನು" ಎಂದು ತಿಳಿದ ಬ್ರಹ್ಮದೇವನು ಮರಳಿ ಆ ಯಜ್ಞವನ್ನು ನೆರವೇರಿಸಬೇಕೆಂಬ ಕೋರಿಕೆಯಿಂದ, ಆರುದ್ರಾಂತರ್ಯಾಮಿಯಾದ ಪರಮಾತ್ಮನು ಪ್ರಸನ್ನನಾದಲ್ಲಿ ರುದ್ರನೂ ಪ್ರಸನ್ನನಾಗುವನೆಂದೆಣಿಸಿ, ತದಂತರ್ಯಾಮಿಯಾದ ನರಸಿಂಹಮೂರ್ತಿಯನ್ನು ಕೊಂಡಾಡುತ್ತಾನೆಂದು ತಿಳಿಯಬೇಕು.

ಸೃಜಸಿ ಪಾಸ್ಯತ್ಸಿ ಕ್ರೀಡನ್ನೂರ್ಣಪದೋ ಯಥಾ ॥೪೩॥ ತ್ವಮೇವ ಧರ್ಮಾ
ರ್ಥದುಘಾಽಭಿಪತ್ತಯೇ ದಕ್ಷೇಣ ಸೂತ್ರೇಣ ಸಸರ್ಜಿಥಾಽಧ್ವರಂ । ತ್ವಯೈ
ವ ಲೋಕೇಽವಸಿತಾಶ್ಚ ಸೇತವೋ ಯಾನ್ಬ್ರಾಹ್ಮಣಾಃ ಶ್ರದ್ದಧತೇ ಧೃ
ತವ್ರತಾಃ ॥೪೪॥ ತ್ವಂ ಕರ್ಮಣಾಂ ಮಂಗಳ ! ಮಂಗಳಾನಾಂ ಕರ್ತು
ಸ್ಸ್ಮ ಲೋಕೇ ತನುಷೇ ಸ್ವಃ ಪರಂ ವಾ । ಅಮಂಗಳಾನಾಂ ಚ ತಮಿಸ್ರಮುಲ್ಬ
ಣಂ ವಿಪರ್ಯಯಃ ಕೇನ ತದೇವ ಕಸ್ಯಚಿತ್ ॥ ನ ವೈ ಸತಾಂ ತ್ವಚ್ಚರಣಾ

---

ಅತ್ಸಿ - ಲಯಗೊಳಿಸುವೆ ॥ ೪೩॥ ಹೇ ಧರ್ಮಾರ್ಥದುಘ - ಧರ್ಮಾರ್ಥಗಳನ್ನು ಕೊಡತಕ್ಕ ಪರಶಿವನೆ, ತ್ವಮೇವ - ನೀನೇ, ಅಭಿಪತ್ತಯೇ - ಧರ್ಮ, ಅರ್ಥ ಮೊದಲಾದವುಗಳನ್ನು ಪಡೆಯುವುದಕ್ಕಾಗಿ, ದಕ್ಷೇಣ - ದಕ್ಷಬ್ರಹ್ಮನೆಂಬ, ಸೂತ್ರೇಣ - ನಿಮಿತ್ತದಿಂದ, ಅಧ್ವರಂ - ಯಜ್ಞವನ್ನು, ಸಸರ್ಜಿಥ - ನಡೆಯಿಸಿದೆ, ಧೃತವ್ರತಾಃ - ನಿಯಮವಂತರಾದ, ಬ್ರಾಹ್ಮಣಾಃ-ಬ್ರಾಹ್ಮಣರು, ಯಾನ್ - ಯಾವುವುಗಳನ್ನು, ಶ್ರದ್ದಧತೇ - ಆದರಿಸುವರೋ, ಅಂತಹ, ಸೇತವಃ - ಧರ್ಮಮರ್ಯಾದೆಗಳು, ತ್ವಯೈವ - ನಿನ್ನಿಂದಲೇ ಲೋಕೇ - ಲೋಕದಲ್ಲಿ, ಅವಸಿತಾಃ - ನಿರ್ಣಯಿಸಲ್ಪಟ್ಟಿರುವುವು ॥೪೪॥

ಹೇ ಮಂಗಳ - ಎಲೈ ಕಲ್ಯಾಣಮೂರ್ತಿಯೆ ! ತ್ವಂ - ನೀನು, ಲೋಕೇ - ಲೋಕದಲ್ಲಿ, ಮಂಗಳಾನಾಂ - ಶುಭಕರ್ಮಗಳನ್ನು, ಕರ್ತುಃ - ಮಾಡಿದವನಿಗೆ, ಸ್ವಃ - ಸ್ವರ್ಗವನ್ನಾಗಲಿ, ಪರಂವಾ - ಮೋಕ್ಷವನ್ನಾಗಲಿ, ತನುಷೇ - ಮಾಡುವೆ, ಅಮಂಗಳಾನಾಂ - ಪಾಪಕರ್ಮಗಳನ್ನು, ಕರ್ತುಶ್ಚ - ಮಾಡಿದವನಿಗೂ, ಉಲ್ಬಣಂ - ತಮಿಸ್ರಂ - ನರಕವನ್ನೂ, ತನುಷೇ-ಮಾಡುವೆ, ತದೇವ-ಆ ಶುಭಕರ್ಮದಲ್ಲಿಯೇ ಕಸ್ಯಚಿತ್ - ಒಬ್ಬನಿಗೆ, ಕೇನ - ಯಾವುದರಿಂದ, ವಿಪರ್ಯಯಃ - ಮಂದಫಲವು ಆಯಿತೋ ॥ ೪೫॥ ತ್ವಚ್ಚ...ನಾಂ - ನಿನ್ನ ಪಾದಗಳಲ್ಲಿ ಮನಸ್ಸನ್ನಿರಿಸಿದ, ಸರ್ವೇಷು-ಎಲ್ಲಾ, ಭೂತೇಷು-ಪ್ರಾಣಿಗಳಲ್ಲಿಯೂ,

---

ಚಿಂತಾಮಣಿಯು ತನ್ನ ಶಕ್ತಿಯಿಂದ ಆ ಆ ಪದಾರ್ಥಗಳನ್ನುಂಟುಮಾಡುವಂತೆ, ನೀನು ನಿನ್ನ ಶಕ್ತಿಯಿಂದ ಜಗತ್ಸೃಷ್ಟ್ಯಾದಿಗಳನ್ನು ಮಾಡುವೆಯಾದಕಾರಣ ಜಗತ್ಕಾರಣತ್ವ, ನಿರ್ವಿಕಾರತ್ವಗಳೆಂಬ ಗುಣಗಳು ಪರಸ್ಪರ ವಿರುದ್ಧಗಳಾಗಿದ್ದರೂ ನಿನಗೆ ಸಲ್ಲುವುವು ॥ ೪೩ ॥ ಅಯ್ಯಾ ಧರ್ಮಾದಿಪುರುಷಾರ್ಥದಾಯಕನಾದ ಕೈಲಾಸನಾಯಕನೆ ! ಸಕಲ ಪುರುಷಾರ್ಥಗಳನ್ನೂ ಕೊಡುವ ವೇದಗಳನ್ನು ಸಲಹುವುದಕ್ಕಾಗಿ, ನೀನು ದಕ್ಷನೆಂಬ ನಿಮಿತ್ತದಿಂದ ಯಜ್ಞವನ್ನು ನಡೆಯಿಸಿದೆ. ವ್ರತನಿಷ್ಠರಾದ ಬ್ರಾಹ್ಮಣಶ್ರೇಷ್ಠರು ಯಾವ ಧರ್ಮಗಳನ್ನು ಅತಿಪ್ರೀತಿಯಿಂದಾಚರಿಸುವರೋ, ಅಂತಹ ಧರ್ಮಮರ್ಯಾದೆಗಳನ್ನು ನೆಲೆಗೊಳಿಸಿದವನೂ ನೀನೇ ಅಲ್ಲವೆ ? ॥೪೪॥ ಅಯ್ಯಾ ಶಿವಂಕರನಾದ ಶಂಕರನೆ ! ಲೋಕದಲ್ಲಿ ಸತ್ಕರ್ಮಾಚರಣೆಯನ್ನು ಮಾಡಿದ ಸಾಧುಗಳಿಗೆ ಸ್ವರ್ಗಾದಿಪುಣ್ಯಲೋಕಗಳನ್ನೂ, ಫಲಾಭಿಸಂಧಿಯಿಲ್ಲದ ಅದೇ ಕರ್ಮಿಗಳಿಗೆ ಕೈವಲ್ಯವನ್ನೂ ದಯಪಾಲಿಸುತ್ತಾ, ಅಮಂಗಳವಾದ ಪಾಪಕೃತ್ಯಗಳನ್ನು ಮಾಡಿದವರಿಗೆ ಅತಿಭಯಂಕರವಾದ ನರಕಯಾತನೆಯನ್ನೂ ವಿಧಿಸುವ ಧರ್ಮಾಧ್ಯಕ್ಷನಾದ ನೀನೇ ಒಬ್ಬನ ವಿಷಯದಲ್ಲಿ ಮಾತ್ರ ಸತ್ಕರ್ಮಾಚರಣೆಗೂ ದುಷ್ಫಲವನ್ನಿತ್ತುದಕ್ಕೆ ಕಾರಣವಾವುದೋ ತಿಳಿಯಲಿಲ್ಲ ॥೪೫॥ ನಿನ್ನ ಪಾವಕನಾಮದಲ್ಲಿ ಚಿತ್ತವನ್ನಿಟ್ಟು ಸಕಲಭೂತಗ

ರ್ಪಿತಾತ್ಮನಾಂ ಭೂತೇಷು ಸರ್ವೇಷ್ವಭಿ ಪಶ್ಯತಾಂ ತವ । ಭೂತಾನಿ ಚಾ ತ್ಮನ್ಯಪೃಥ ಗ್ದಿದೃಕ್ಷತಾಂ ಪ್ರಾಯೇಣ ರೋಷೋಽಭಿಭವೇ ದ್ಯಥಾ ಪಶುಂ ॥ ಪೃಥ ಗ್ಧಿಯಃ ಕರ್ಮದೃಶೋ ದುರಾಶಯಾಃ ಪರೋದಯೇನಾಽರ್ಪಿತಹೃದ್ರು ಜೋಽನಿಶಂ । ಪರಾನ್ ದುರುಕ್ತೈ ರ್ವಿತುದಂ ತ್ಯರುಂತುದಾ ಸ್ತಾನ್ ಮಾವ ಧೀ ದ್ದೈವವಧಾನ್ ಭವದ್ವಿಧಃ ॥೪೭॥ ಯಸ್ಮಿನ್ ಯದಾ ಪುಷ್ಕರನಾಭ ಮಾಯಯಾ ದುರಂತಯಾ ಸ್ಪೃಷ್ಟಧಿಯಃ ಪೃಥಗ್ದೃಶಃ । ಕುರ್ವಂತಿ ತತ್ರ

---

ತವ - ನಿನ್ನನ್ನು, ಅಭಿಪಶ್ಯತಾಂ - ನೋಡುತ್ತಿರುವ, ಆತ್ಮನಿ - ತನ್ನಲ್ಲಿ, ಭೂತಾನಿ - ಪ್ರಾಣಿಗಳನ್ನೂ ಅಪೃಥಕ್ - ಬೇರೆಯಲ್ಲವಂತೆ, ದಿದೃಕ್ಷತಾಂ - ನೋಡಬಯಸಿದ, ಸತಾಂ - ಸಾಧುಗಳನ್ನು, ಪಶುಂಯಥಾ ಅಜ್ಞಾನಿಯನ್ನೋಪಾದಿಯಲ್ಲಿ, ರೋಷಃ - ಕೋಪವು ಪ್ರಾಯೇಣ - ಬಹಳವಾಗಿ, ನಾಭಿಭವೇತ್ - ತಿರಸ್ಕರಿಸಲಾರದು ॥೪೬॥ ಯೇ - ಯಾರು, ಪೃಥಗ್ಧಿಯಃ - ಭೇದಬುದ್ಧಿಯುಳ್ಳವರೂ, ಕರ್ಮದೃಶಃ - ಕರ್ಮಾಸಕ್ತರೂ, ದುರಾಶಯಾಃ - ದುರಭಿಪ್ರಾಯವುಳ್ಳವರೂ, ಅನಿಶಂ - ಯಾವಾಗಲೂ ಪರೋದಯೇನ - ಪರರೇಳಿಗೆಯಿಂದ, ಅರ್ಪಿ...ಜಃ-ಹೊಟ್ಟೆಯುರಿಯುಳ್ಳವರೂ, ಅರುಂತುದಾಃ-ಮರ್ಮಭೇದಕರಾಗಿ, ಪರಾನ್ ಇತರರನ್ನು, ದುರುಕ್ತೈಃ - ಕೆಡುನುಡಿಗಳಿಂದ, ವಿತುದಂತಿ - ನೋಯಿಸುವರೋ, ಅಂತಹ, ದೈವವಧಾನ್ - ದೈವದಿಂದ ವಧೆಯನ್ನು ಪಡೆಯುವ, ತಾನಪಿ-ಅಂತವರನ್ನೂ, ಭವದ್ವಿಧಃ - ನಿನ್ನಂತವನು, ಮಾವಧೀತ್ - ಕೊಲ್ಲಲಾರನು ॥೪೭॥

ಯಸ್ಮಿನ್ - ಯಾವದೇಶದಲ್ಲಿ, ಯದಾ - ಯಾವಕಾಲದಲ್ಲಿ ದುರಂತಯಾ - ಅಪಾರವಾದ, ಪುಷ್ಕ...ಯಾ - ಪದ್ಮನಾಭನ ಮಾಯೆಯಿಂದ, ಸ್ಪೃಷ್ಟಧಿಯಃ - ಮತಿಗೆಟ್ಟವರಾಗಿ, ಪೃಥಗ್ದೃಶಃ - ಭೇದದೃಷ್ಟಿಯಿಂದ ಅಪರಾಧವನ್ನೆಣಿಸುವರೋ, ತತ್ರ - ಅಂತವರಲ್ಲಿ, ಸಾಧವಃ - ಸಾಧುಗಳು, ಅನುಕಂಪಯಾ - ಕನಿಕರದಿಂದ, ಕೃಪಾಂ - ದಯೆಯನ್ನು, ಕುರ್ವಂತಿ - ಮಾಡುತ್ತಾರೆ, ದೈವಬಲಾತ್ - ದೈವವಶದಿಂದ, ಕೃತೇ - ಮಾಡಲ್ಪಟ್ಟ ತಪ್ಪಿಗಾಗಿ, ಪರಾಕ್ರಮಂ - ಪರಾಕ್ರಮವನ್ನು, ನ - ಮಾಡುವುದಿಲ್ಲ, ಹೇಪ್ರಭೋ - ಎಲೈ ಲೋಕೇಶ್ವರನೆ !, ಭವಾಂಸ್ತು - ನೀನಾದರೆ, ಪರಮಸ್ಯಪುಂಸಃ - ಪರಮಪುರುಷನ, ದುರಂತಯಾ ಮಾಯಯಾ - ಅಪಾರವಾದ ಮಾಯೆಯಿಂದ, ಅಸ್ಪೃಷ್ಟಮತಿಃ - ಮತಿಗೆಡದವನಾಗಿಯೂ, ಸಮಸ್ತ ದೃಕ್ - ಸರ್ವಜ್ಞನಾಗಿಯೂ ಇರುವೆ, ತಯಾ - ಆ ಮಾಯೆಯಿಂದ, ಹೃ

---

ಳಲ್ಲಿಯೂ ನಿನ್ನನ್ನು ನೋಡುತ್ತಾ, ಎಲ್ಲರನ್ನೂ ಆತ್ಮಭಾವನೆಯಿಂದಾದರಿಸುತ್ತಾ ಇರುವ ಸಜ್ಜನರನ್ನು ಕೂಡ ಪಾಮರರನ್ನೋಪಾದಿಯಲ್ಲಿ ಕೋಪವೆಂಬುದು ವಶಗೊಳಿಸಿಕೊಳ್ಳಲಾರದು. ಇಂತಿರುವಲ್ಲಿ ಈ ದಕ್ಷಾಧ್ವರಧ್ವಂಸಕ್ಕೆ ಮಹಾತ್ಮನಾದ ನಿನ್ನ ಕೋಪವು ಕಾರಣವಲ್ಲವೆಂದು ಹೇಳುವುದೇನು?॥೪೬॥ ಆದುದರಿಂದ ಭೇದಬುದ್ಧಿಯನ್ನು ಪಡೆದು ಕರ್ಮಮಾರ್ಗಾಸಕ್ತರಾಗಿ ದುರ್ಬುದ್ಧಿಯಿಂದ ಯಾವಾಗಲೂ ಪರರೇಳಿಗೆಯನ್ನು ಸೈರಿಸಲಾರದೆ ಅಸೂಯೆಪಡುತ್ತಾ, ಇತರರನ್ನು ದುರ್ಭಾಷಣೆಗಳಿಂದ ನೋಯಿಸುತ್ತಾ, ದೈವದಂಡನಕ್ಕೆ ಪಾತ್ರರಾಗಿರುವ ದುರಾತ್ಮರನ್ನೂ ಕೂಡ ನಿನ್ನಂಥವರು ಸಂಹರಿಸಲಾರರು ॥೪೭॥ ಯಾವ ದೇಶಕಾಲಗಳಲ್ಲಿಯಾಗಲಿ, ಅಪಾರವಾದ ಭಗವನ್ಮಾಯೆಯಿಂದ ಮತಿಗೆಟ್ಟ ಪಾಮರರು ಭೇದಬುದ್ಧಿಯಿಂದ

ಹ್ಯನುಕಂಪಯಾ ಕೃಪಾಂ ನಸಾಧವೋ ದೈವಬಲಾತ್ಕೃತೇ ಕ್ರಮಂ ॥೪೮॥
ಭವಾಂಸ್ತು ಪುಂಸಃ ಪರಮಸ್ಯ ಮಾಯಯಾ ದುರಂತಯಾಽ ಸ್ಪೃಷ್ಟಮತಿಃ
ಸಮಸ್ತದೃಕ್ । ತ್ವಯಾಹೃತಾತ್ಮ ಸ್ವನುಕರ್ಮಚೇತ ಸ್ಸ್ವನುಗ್ರಹಂ ಕರ್ತು
ಮಿಹಾಽ ರ್ಹಸಿ ಪ್ರಭೋ! ॥ ೪೯ ॥ ಕುರ್ವಧ್ವರಸ್ಯೋದ್ಧರಣಂ ಹತಸ್ಯ
ಭೋ ಸ್ತ್ವಯಾಽ ಸಮಾಪ್ತಸ್ಯ ಮನೋ! ಪ್ರಜಾಪತೇಃ। ನಯತ್ರ ಭಾ
ಗಂ ತವ ಭಾಗಿನೋ ದದುಃ ಕುಯಜ್ವನೋ ಯೇನ ಮಖೋ ನಿನೀಯ
ತೇ ॥೫೦॥ ಜೀವತಾ ದ್ಯಜಮಾನೋಽಯಂ ಪ್ರಪದ್ಯೇತಾಽ ಕ್ಷಿಣೀ ಭಗಃ।
ಭೃಗೋ ಶ್ಶ್ಮಶ್ರೂಣಿ ರೋಹಂತು ಪೂಷ್ಣೋ ದಂತಾಶ್ಚ ಪೂರ್ವವತ್ ॥೫೧॥
ದೇವಾನಾಂ ಭಗ್ನಗಾತ್ರಾಣಾ ಮೃತ್ವಿಜಾಂ ಚಾಯುಧಾಽ ಶ್ಮಭಿಃ। ಭವತಾಽ

---

ಹೃತಾತ್ಮಸು - ಮತಿಗೆಟ್ಟಿರುವುದರಿಂದ, ಅನುಕರ್ಮಚೇತಸ್ಸು - ಕರ್ಮಾಧೀನವಾದ ಮನಸ್ಸುಳ್ಳವರಲ್ಲಿ, ಇಹ
ಈಗ, ಅನುಗ್ರಹಂ - ಪ್ರಸಾದವನ್ನು, ಕರ್ತುಂ-ಮಾಡುವುದಕ್ಕೆ, ಅರ್ಹಸಿ - ಯೋಗ್ಯನಾಗುತ್ತಿ ॥೪೮॥
ಭೋಃಮನೋಃ - ಅಯ್ಯಾ ರುದ್ರನೆ! ಯೇನ - ಯಾವ ನಿನ್ನಿಂದ, ಮಖಃ - ಯಾಗವು, ನಿನೀಯತೇ
ಸಫಲಗೊಳಿಸಲ್ಪಡುವುದೋ, ಅಂತಹ, ಭಾಗಿನಃ - ಯಜ್ಞಭಾಗಕ್ಕೆ ಅರ್ಹನಾದ, ತವ - ನಿನಗೆ, ಯ
ತ್ರ - ಯಾವಯಜ್ಞದಲ್ಲಿ, ಕುಯಜ್ವನಃ - ದುಷ್ಟರಾದ ಋತ್ವಿಜರು, ಭಾಗಂ - ಹವಿರ್ಭಾಗವನ್ನು, ನದ
ದುಃ - ಕೊಡಲಿಲ್ಲವೋ, ತ್ವಯಾ - ನಿನ್ನಿಂದ, ಅಸಮಾಪ್ತಸ್ಯ - ಮುಗಿಸಲ್ಪಡದ, ಪ್ರಜಾಪತೇಃ - ದಕ್ಷ
ನ, ಅಧ್ವರಸ್ಯ - ಯಜ್ಞದ, ಉದ್ಧರಣಂ - ಉದ್ಧಾರವನ್ನು, ಕುರು - ಮಾಡು ॥೪೯॥

ಅಯಂ - ಈ, ಯಜಮಾನಃ - ದಕ್ಷನು, ಜೀವತಾತ್ - ಬದುಕಲಿ, ಭಗಃ - ಭಗನು, ಅಕ್ಷಿ
ಣೀ - ಕಣ್ಣುಗಳನ್ನು ಪ್ರಪದ್ಯೇತ - ಪಡೆಯಲಿ, ಭೃಗೋಃ - ಭೃಗುವಿನ, ಶ್ಮಶ್ರೂಣಿ-ಗಡ್ಡಮೀಸೆಗಳು,
ರೋಹಂತು - ಬೆಳೆಯಲಿ, ಪೂಷ್ಣಃ - ಸೂರ್ಯನ, ದಂತಾಶ್ಚ - ಹಲ್ಲುಗಳೂ, ಪೂರ್ವವತ್ - ಮುನ್ನಿ
ನಂತಾಗಲಿ ॥೫೧॥ ಹೇಮನ್ಯೋ - ಎಲೈ ರುದ್ರನೆ! ಆಯುಧಾಶ್ಮಭಿಃ - ಆಯುಧಗಳಿಂದಲೂ, ಕಲ್ಲುಗ

---

ಅಪರಾಧಗಳನ್ನು ಮಾಡಿದರೂ, ಸಾಧುಗಳಾದವರು "ನನ್ನಕರ್ಮವಿಂತಿದ್ದುದೇ ಹೊರತು
ಅವರ ಅಪರಾಧವೇನು?" ಎಂದು ಕನಿಕರಿಸುತ್ತಾ,ಅವರಲ್ಲಿದಯೆಯನ್ನು ಮಾಡುವರಲ್ಲದೆ,
ಅವರ ತಪ್ಪಿಗಾಗಿ ಪರಾಕ್ರಮವನ್ನು ತೋರಿಸುವುದಿಲ್ಲ ॥೪೭॥ ಎಲೈ ಜಗನ್ನಾಥನೆ! ನೀನಾ
ದರೆ ಪರಮಪುರುಷನ ದುರಂತವಾದ ಮಾಯೆಗೆ ಸಿಲುಕದೆ ಸರ್ವಜ್ಞನಾಗಿರುವೆ. ಆದಕಾರ
ಣ ಆ ಮಾಯೆಗೊಳಗಾಗಿ ಮತಿಗೆಟ್ಟು ಕರ್ಮಾಧೀನರಾಗಿರುವ ಜನರನ್ನನುಗ್ರಹಿಸು ॥೪೮॥
ಅಯ್ಯಾ ರುದ್ರಮೂರ್ತಿಯೆ! ಯಜ್ಞಫಲಪ್ರದನಾದ ನಿನಗೂ ಯಜ್ಞದಲ್ಲಿ ಹವಿರ್ಭಾಗವ
ನ್ನು ಕೊಡದೆ ತಿರಸ್ಕರಿಸಿದ ಆ ದುಷ್ಟರುತ್ವಿಜರ ಅಪರಾಧಕ್ಕಾಗಿ ಧ್ವಂಸಮಾಡಲ್ಪಟ್ಟ ಆ
ದಕ್ಷಾಧ್ವರವನ್ನು ಜೀರ್ಣೋದ್ಧಾರಗೊಳಿಸು ॥೪೯॥ ಯಜ್ಞಕ್ಕೆ ಯಜಮಾನನಾದ ದಕ್ಷ
ಬ್ರಹ್ಮನು ಬದುಕಲಿ. ಭಗದೇವನು ಕಣ್ಣುಗಳನ್ನು ಪಡೆಯಲಿ. ಭೃಗುಮಹರ್ಷಿಗೆ ಗಡ್ಡ
ಮೀಸೆಗಳು ಬೆಳೆಯಲಿ. ಸೂರ್ಯನಿಗೆ ಮುನ್ನಿನಂತೆಯೇ ಹಲ್ಲುಗಳು ಹುಟ್ಟಲಿ ॥ ೫೧ ॥
ನಿನ್ನ ಭಟರು ಪ್ರಯೋಗಿಸಿದ ಕವಣೆಗಲ್ಲುಗಳಿಂದಲೂ ಆಯುಧಗಳಿಂದಲೂ ಅಂಗಭಂಗವ

ನುಗೃಹೀತಾನಾ ಮಾಶು ಮನ್ಯೋಽಸ್ತ್ವನಾತುರಂ ॥೫೨॥ ಏಷ ತೇ ರುದ್ರ! ಭಾಗೋಽಸ್ತು ಯದುಚ್ಛಿಷ್ಟೋಽಧ್ವರಸ್ಯ ವೈ ! ಯಜ್ಞಸ್ತೇ ರುದ್ರ! ಭಾಗೇನ ಕಲ್ಪತಾ ಮದ್ಯ ಯಜ್ಞಹನ್ ! ॥೫೩॥

—ಇತಿ ಷಷ್ಠೋಽಧ್ಯಾಯಃ—

ಳಿಂದಲೂ, ಭಗ್ನಗಾತ್ರಾಣಾಂ - ಮೈಮುರಿದಿರುವ, ಭವತಾ-ನಿನ್ನಿಂದ, ಅನುಗೃಹೀತಾನಾಂ-ಅನುಗ್ರಹಿಸಲ್ಪಟ್ಟ, ದೇವಾನಾಂ - ದೇವತೆಗಳಿಗೂ, ಋತ್ವಿಜಾಂಚ - ಋತ್ವಿಜರಿಗೂ, ಆಶು-ಬೇಗನೆ, ಅನಾತುರಂ - ಆರೋಗ್ಯವು, ಅಸ್ತು - ಆಗಲಿ ॥೫೨॥ ಹೇರುದ್ರ - ಎಲೈ ರುದ್ರನೆ ! ಅಧ್ವರಸ್ಯ - ಯಜ್ಞದ, ಉಚ್ಛಿಷ್ಟಃ - ಉಳಿದ ಸ್ವಿಷ್ಟಕೃದ್ಭಾಗವು, ಯತ್ - ಎಷ್ಟುಂಟೋ, ತಾವಾನ್ - ಅಷ್ಟೂ, ತೇ - ನಿನಗೆ, ಭಾಗಃ - ಭಾಗವು, ಅಸ್ತು - ಆಗಲಿ, ಯಜ್ಞಹನ್ - ಯಜ್ಞನಾಶಕನಾದ, ಹೇರುದ್ರ - ಎಲೈ ರುದ್ರನೆ ! ಅದ್ಯ - ಈಗ, ತೇ - ನಿನ್ನ, ಭಾಗೇನ - ಭಾಗದಿಂದ, ಯಜ್ಞಃ-ಯಜ್ಞವು, ಕಲ್ಪತಾಂ-ನಡೆಯಲಿ ॥೫೩॥

— ಷಷ್ಠಾಧ್ಯಾಯಂ ಸಮಾಪ್ತಂ —

ನ್ನು ಪಡೆದಿರುವ ದೇವತೆಗಳೂ ಋತ್ವಿಜರೂ ಸಹ ನಿನಗೆ ಶರಣಾಗತರಾಗಿರುವುದರಿಂದ, ಅವರಿಗೆ ಬೇಗನೆ ಆರೋಗ್ಯವುಂಟಾಗಲಿ ॥೫೨॥ ಎಲೈ ಯಜ್ಞನಾಶಕನಾದ ರುದ್ರನೆ ! ಯಜ್ಞಕರ್ಮದಲ್ಲಿ ಮಿಗುವ ಪವಿತ್ರವಾದ ಯಾವ ಉಚ್ಛಿಷ್ಟವೆಂಬ ಸ್ವಿಷ್ಟಕೃದ್ಭಾಗವುಂಟೋ, ಅದು ನಿನಗೆ ಭಾಗವಾಗಿರಲಿ. ಈ ನಿನ್ನ ಯಜ್ಞಭಾಗದಿಂದ ಮರಳಿ ಯಜ್ಞವು ನಡೆಯಲಿ, ಎಂದು ಬ್ರಹ್ಮದೇವನು ಮಹಾದೇವನಿಗೆ ಹೇಳುತ್ತಿದ್ದನೆಂಬಲ್ಲಿಗೆ ಭಾಗವತಚಕೋರಚಂದ್ರಿಕೆಯೊಳ್

ಆರನೆಯ ಅಧ್ಯಾಯಂ ಮುಗಿದುದು.

## ಓಂನಮಃ ಪರಮಾತ್ಮನೇ

### —ಸಪ್ತಮೋಽಧ್ಯಾಯಃ—

ಮೈತ್ರೇಯಃ ॥ ಇತ್ಯಜೇನಾಽನುನೀತೇನ ಭವೇನ ಪರಿತುಷ್ಯತಾ ಅಭ್ಯ
ಧಾಯಿ ಮಹಾಬಾಹೋ! ಪ್ರಹಸ್ಯ ಶ್ರೂಯತಾಮಿತಿ ॥೧॥ ಶ್ರೀಮಹಾದೇವಃ॥
ನಾಽಘಂ ಪ್ರಜೇಶ! ಬಾಲಾನಾಂ ವರ್ಣಯೇ ನಾಽನುಚಿಂತಯೇ ।
ದೈವಮಾಯಾಽಭಿಭೂತಾನಾಂ । ದಂಡಸ್ತತ್ರ ಧೃತೋ ಮಯಾ ॥೨॥

---

### —ಸಪ್ತಮಾಧ್ಯಾಯಂ—

ಕಂದ॥ ಅವತರಿಸುತೆ ಸಿರಿಯರಸಂ । ಶಿವದಕ್ಷಪ್ರಮುಖರಿಂದೆ ಸನ್ನುತಿಪಡೆದು ।
ತ್ಸವದಿಂ ದಕ್ಷನ ಸವವಂ । ತವಕದೆ ನಡೆಯಿಸಿದನೆಂದು ಪೇಳಲ್ಪಡುಗುಂ ॥

ಮೈತ್ರೇಯ ಮುನಿಯು ಹೇಳುತ್ತಾನೆ, ಹೇಮಹಾಬಾಹೋ - ಎಲೈ ಶೂರನಾದ ವಿದುರನೆ! ಇತಿ - ಇಂತು, ಅಜೇನ - ಬ್ರಹ್ಮನಿಂದ, ಅನುನೀತೇನ - ಸಂತೈಸಲ್ಪಟ್ಟ, ಪರಿತುಷ್ಯತಾ - ಸಂತೋಷಗೊಂಡ, ಭವೇನ - ಶಿವನಿಂದ, ಪ್ರಹಸ್ಯ - ನಕ್ಕು, ಶ್ರೂಯತಾಂ - ಕೇಳಲ್ಪಡಲಿ, ಇತಿ - ಎಂದು, ಅಭ್ಯಧಾಯಿ - ಹೇಳಲ್ಪಟ್ಟಿತು ॥೧॥ ಹೇಪ್ರಜೇಶ - ಎಲೈ ಬ್ರಹ್ಮನೆ! ಅಹಂ - ನಾನು, ದೈವ...ನಾಂ - ದೈವಮಾಯೆಯಿಂದ ತಿರಸ್ಕೃತರಾದ, ಬಾಲಾನಾಂ - ಅಜ್ಞಾನಿಗಳ, ಅಘಂ - ಅಪರಾಧವನ್ನು, ನವರ್ಣಯೇ - ವಿವರಿಸುವುದಿಲ್ಲ, ನಾನುಚಿಂತಯೇ - ಸ್ಮರಿಸುವುದೂ ಇಲ್ಲ, ತತ್ರ - ಆ ವಿಷಯದಲ್ಲಿ, ಮಯಾ - ನನ್ನಿಂದ ದಂಡಃ - ಶಿಕ್ಷೆಯು ಮಾತ್ರ, ಧೃತಃ - ಮಾಡಲ್ಪಟ್ಟಿತು ॥೨॥ ದಗ್ಧಶೀರ್ಷ್ಣಃ - ಸುಡಲ್ಪಟ್ಟ ತಲೆಯುಳ್ಳ,

---

### —ಏಳನೆಯ ಅಧ್ಯಾಯ—

ಶ್ರೀ ಮಹಾವಿಷ್ಣುವವತರಿಸಿ ದಕ್ಷಯಜ್ಞವನ್ನು ನಡೆಯಿಸುವುದು.

ಅನಂತರದಲ್ಲಿ ಮೈತ್ರೇಯಮುನಿಯು ವಿದುರನನ್ನು ಕುರಿತು ಹೇಳುವುದೆಂತೆಂದರೆ— ಅಯ್ಯಾ ರಿಪುಸೇನಾಭಿದುರನಾದ ವಿದುರನೆ! ಇಂತು ಚತುರಾನನನು ಸಂತೈಸಿದುದರಿಂದ ತ್ರಿಪುರಾಂತಕನು ಅಂತರಂಗದಲ್ಲಿ ಸಂತಸಗೊಂಡು ನಸುನಗುತ್ತಾ ,, ಎಲೈ ಜಗತ್ಕರ್ತನಾದ ಕಮಲಾಸನನೆ! ಭಗವನ್ಮಾಯೆಯಿಂದ ಮರುಳಾಗಿ ವಿವೇಕವಿಲ್ಲದೆ ಹಸುಳೆಗಳು ಮಾಡಿದ ಅಪರಾಧವನ್ನು ನಾನು ಬಣ್ಣಿಸುವುದಿಲ್ಲ. ಅದನ್ನು ಯೋಚಿಸುವುದೂ ಇಲ್ಲ. ಆದರೆ ತಪ್ಪು ಮಾಡಿದವರಿಗೆ ಮನ್ನಣೆಯನ್ನು ಕೊಡಬಾರದೆಂಬ ಲೋಕಶಿಕ್ಷೆಗಾಗಿ ಅವರನ್ನು ದಂಡಿಸಿರುವೆನು ॥೨॥ ನಿನ್ನ ಪ್ರಾರ್ಥನಾನುಸಾರವಾಗಿ ಅವರನ್ನೀಗ ಮನ್ನಿಸುವೆನು. ಯಜಮಾನ

ಪ್ರಜಾಪತೇರ್ದಗ್ಧಶೀರ್ಷ್ಣೋ ಭವತ್ವಜಮುಖಂ ಶಿರಃ । ಮಿತ್ರಸ್ಯ ಚಕ್ಷುಷೇಕ್ಷೇತ ಭಾಗಂ ಸ್ವಂ ಬರ್ಹಿಷೋ ಭಗಃ ॥೩॥ ಪೂಷಾ ತು ಯಜಮಾನಸ್ಯ ದದ್ಭಿರ್ಜಕ್ಷತು ಪಿಷ್ಟಭುಕ್ । ದೇವಾಃ ಪ್ರಕೃತ್ತಸರ್ವಾಂಗಾ ಯೇ ಮ ಉಚ್ಛೇಷಣಂ ದದುಃ ॥೪॥ ಬಾಹುಭ್ಯಾಮಶ್ವಿನೋಃ ಪೂಷ್ಣೋ ಹಸ್ತಾಭ್ಯಾಂ ಕೃತಬಾಹವಃ । ಭವಂತ್ವಧ್ವರ್ಯವಶ್ಚಾಽನ್ಯೇ ಬಸ್ತಶ್ಮಶ್ರುರ್ಭೃಗುರ್ಭವೇತ್ ॥೫॥ ಮೈತ್ರೇಯಃ ॥ ತದಾ ಸರ್ವಾಣಿ ಭೂತಾನಿ ಶ್ರುತ್ವಾ ಮೀಢುಷ್ಟಮೋದಿತಂ । ಪರಿತುಷ್ಟಾತ್ಮಭಿಸ್ತಾತ ಸಾಧು ಸಾಧ್ವಿತ್ಯಥಾಽಬ್ರುವನ್ ॥೬॥ ತತೋ ಮೀಢ್ವಾಂಸಮಾಮಂತ್ರ್ಯ ಶುನಾಸೀರಾಃ ಸಹರ್ಷಿಭಿಃ।

---

ಪ್ರಜಾಪತೇಃ - ದಕ್ಷನಿಗೆ, ಅಜಮುಖಂ - ಮೇಕೆಯಮುಖವುಳ್ಳ, ಶಿರಃ - ತಲೆಯು, ಭವತು - ಉಂಟಾಗಲಿ, ಮಿತ್ರಸ್ಯ - ಮಿತ್ರದೇವನಿಗ ಕಣ್ಣುಬರಲಿ, ಭಗಃ - ಭಗದೇವನು, ಸ್ವಂ - ತನ್ನ, ಬರ್ಹಿಷಃ - ಯಜ್ಞದ, ಭಾಗಂ - ಭಾಗವನ್ನು, ಚಕ್ಷುಷಾ - ಕಣ್ಣಿಂದ, ಈಕ್ಷೇತ - ಕಾಣಲಿ, ॥೩॥ ಪಿಷ್ಟಭುಕ್ - ಹಿಟ್ಟನ್ನುತಿನ್ನುವ, ಪೂಷಾತು - ಸೂರ್ಯನು, ಯಜಮಾನಸ್ಯ - ಯಜಮಾನನ, ದದ್ಭಿಃ - ದಂತಗಳಿಂದ, ಜಕ್ಷತು - ತಿನ್ನಲಿ, ಯೇ - ಯಾರು, ಮೇ - ನನಗೆ, ಉಚ್ಛೇಷಣಂ - ಯಜ್ಞಶೇಷವನ್ನು, ದದುಃ - ಕೊಟ್ಟರೋ, ಪ್ರಕೃತ್ತಸರ್ವಾಂಗಾಃ - ಕತ್ತರಿಸಲ್ಪಟ್ಟ ಅವಯವಗಳುಳ್ಳ, ತೇದೇವಾಃ - ಆ ದೇವತೆಗಳು ಅರುಜರಾಗಲಿ ॥೪॥ ಅನ್ಯೇ - ಇತರರಾದ, ಅಧ್ವರ್ಯವಃ - ಋತ್ವಿಜರು, ಅಶ್ವಿನೋಃ - ಅಶ್ವಿನೀ ದೇವತೆಗಳ, ಬಾಹುಭ್ಯಾಂ - ತೋಳುಗಳಿಂದ, ಕೃತಬಾಹವಃ - ತೋಳುಳ್ಳವರೂ, ಪೂಷ್ಣಃ - ಸೂರ್ಯನ, ಹಸ್ತಾಭ್ಯಾಂ- ಹಸ್ತಗಳಿಂದ, ಕೃತಹಸ್ತಾಶ್ಚ - ಕೈಗಳುಳ್ಳವರೂ, ಭವಂತು - ಆಗಲಿ, ಭೃಗುಃ - ಭೃಗುವು, ಬಸ್ತಶ್ಮಶ್ರುಃ- ಕುರಿಯಂತೆ ಗಡ್ಡಮೀಸೆಗಳುಳ್ಳವನು, ಭವೇತ್ - ಆಗಲಿ ॥ ೫ ॥ ಮೈತ್ರೇಯನು ಹೇಳುತ್ತಾನೆ, ತದಾ - ಆಗ, ಸರ್ವಾಣಿಭೂತಾನಿ ಸಕಲ ಭೂತಗಳು, ಮೀಢು...ತಂ, ಮೀಢುಷ್ಟಮ-ಅತ್ಯಂತ ಮಂಗಳಕರನಾದವನಿಂದ, ಉದಿತಂ-ಹೇಳಲ್ಪಟ್ಟುದನ್ನು, ಶ್ರುತ್ವಾ-ಕೇಳಿ, ಅಥ-ಬಳಿಕ, ಪರಿತುಷ್ಟಾತ್ಮಭಿಃ - ಸಂತುಷ್ಟವಾದ ಮನಸ್ಸಿನಿಂದ, ಸಾಧುಸಾಧು - ಜಯಜಯ, ಇತಿ - ಎಂದು, ಅಬ್ರುವನ್ - ಹೇಳಿದರು ॥೬॥ ತತಃ-ಬಳಿಕ, ಶುನಾಸೀರಾಃ - ಇಂದ್ರಾದಿ ದೇವತೆಗಳು, ಸಹರ್ಷಿಭಿಃ-ಋಷಿಗಳಿಂದೊಡಗೂಡಿ, ಮೀಢ್ವಾಂಸಂ - ಈಯ

---

ನಾದ ದಕ್ಷಪ್ರಜಾಪತಿಯ ಶಿರಸ್ಸು ದಕ್ಷಿಣಾಗ್ನಿಯಲ್ಲಿ ಸುಟ್ಟುಹೋಗಿರುವುದರಿಂದ, ಇನ್ನುಮೇಲಾದಕ್ಷನಿಗೆ ಕುರಿದಲೆಯುಂಟಾಗಲಿ. ಮಿತ್ರನು, ಭಗನು, ಇವರೀರ್ವರೂ ಮುನ್ನಿನಂತೆಯೇ ಕಣ್ಣುಗಳನ್ನು ಪಡೆಯಲಿ ॥೩॥ ಇದುವರೆಗೂ ಪಿಷ್ಟವನ್ನು ತಿನ್ನುತ್ತಿದ್ದ ಪೂಷದೇವನು ಯಜಮಾನನ ಹಲ್ಲುಗಳಿಂದ ಹವಿರ್ಭಾಗವನ್ನು ತಿನ್ನಲಿ. ಈ ದೇವತೆಗಳು ನನಗೆ ಯಜ್ಞದಲ್ಲಿ ಸ್ವಿಷ್ಟಕೃತ್ತೆಂಬ ಹವಿರ್ಭಾಗವನ್ನಿತ್ತರಾದುದರಿಂದ, ಇವರೆಲ್ಲರೂ ಅಂಗವೈಕಲ್ಯವನ್ನುಳಿದು ಪುಷ್ಟಾಂಗರಾಗಿ ಆರೋಗ್ಯವನ್ನು ಪಡೆಯಲಿ ॥೪॥ ಅಂಗವೈಕಲ್ಯವನ್ನು ಪಡೆದ ಋತ್ವಿಜರೇ ಮೊದಲಾದ ಇತರರಿಗೂ ಅಶ್ವಿನೀದೇವತೆಗಳ ಬಾಹುಗಳೇ ಬಾಹುಗಳಾಗಲಿ. ಸೂರ್ಯನಹಸ್ತಗಳೇ ಹಸ್ತಗಳಾಗಲಿ. ಭೃಗುಮುನಿಗೆ ಕುರಿಯಂತೆ ಗಡ್ಡಮೀಸೆಗಳುಂಟಾಗಲಿ ” ಎಂದು ಹೇಳಿದನು ॥೫॥ ತರುವಾಯ ಸಕಲಭೂತಗಳೂ ಆಪರಶಿವನ ನುಡಿಯನ್ನು ಕೇಳಿಅತ್ಯಂತಾನಂದಗೊಂಡು ಎಲ್ಲರೂ ಜಯಜಯಶಬ್ದದಿಂದ ಕೊಂಡಾಡಿದರು ॥೬॥ ಆಗ ಇಂದ್ರನೇ

ಭೂಯ ಸ್ತದ್ದೇವಯಜನಂ ಸಮೀಢ್ವ ದ್ವೇಧಸೋ ಯಯುಃ ॥೭॥ ವಿಧಾಯ
ಕಾರ್ತ್ಸ್ನ್ಯೇನಚ ತದ್ಯದಾಹ ಭಗವಾನ್ ಭವಃ । ಸಂದಧುಃ ಕಸ್ಯ ಕಾಯೇ
ನ ಸವನೀಯಪಶೋಃ ಶ್ಶಿರಃ ॥೮॥ ಸಂಧೀಯಮಾನೇ ಶಿರಸಿ ದಕ್ಷೋರುದ್ರಾ
ಭಿವೀಕ್ಷಿತಃ। ಸದ್ಯಸ್ಸುಪ್ತ ಇವೋತ್ತಸ್ಥೌ ದದೃಶೇಚಾಗ್ರತೋ ಮೃಡಂ॥
ತದಾ ವೃಷಧ್ವಜದ್ವೇಷಕಲಿಲಾತ್ಮಾ ಪ್ರಜಾಪತಿಃ। ಶಿವಾವಲೋಕಾ ದಭವ
ಚ್ಛರದ್ಧ್ರದ ಇವಾಮಲಃ ॥೧೦॥ ಭವಸ್ತವಾಯ ಕೃತಧೀ ರ್ನಾಶಕ್ನೋ ದ
ನುರಾಗತಃ । ಔತ್ಕಂಠ್ಯಾ ದ್ಬಾಷ್ಪಕಲಯಾ ಸಂಪರೇತಾಂ ಸುತಾಂ ಸ್ಮರನ್ ॥

---

ರನನ್ನು, ಆಮಂತ್ರ್ಯ - ಕರೆದು, ಸಮೀ...ಸಃ, ಮೀಢ್ವತ್ - ಶಿವನಿಂದಲೂ, ವೇಧಸಃ - ಬ್ರಹ್ಮನಿಂದಲೂ ಬಡಗೂಡಿ, ಭೂಯಃ - ಮರಳಿ, ತತ್ - ಆ, ದೇವಯಜನಂ - ಯಜ್ಞಶಾಲೆಯನ್ನು, ಯಯುಃ - ಹೊಂದಿದರು ॥೭॥ ಭಗವಾನ್ - ಭಗವಂತನಾದ, ಭವಃ - ಶಿವನು, ಯತ್ - ಯಾವುದನ್ನು, ಆಹ - ಹೇಳಿದನೋ, ತತ್ - ಅದನ್ನು, ಕಾರ್ತ್ಸ್ನ್ಯೇನ - ಪೂರ್ಣವಾಗಿ, ವಿಧಾಯ - ಮಾಡಿ, ಸವನೀಯಪಶೋಃ - ಯಜ್ಞಪಶುವಿನ, ಶಿರಃ - ತಲೆಯನ್ನು, ಕಸ್ಯ - ದಕ್ಷನ, ಕಾಯೇನ - ಶರೀರದೊಡನೆ, ಸಂದಧುಃ - ಸೇರಿಸಿದರು ॥೮॥ ಶಿರಸಿ - ತಲೆಯು, ಸಂಧೀಯಮಾನೇಸತಿ - ಸೇರಿಸಲ್ಪಡಲು, ದಕ್ಷಃ - ದಕ್ಷನು, ರುದ್ರಾಭಿವೀಕ್ಷಿತಃ - ರುದ್ರನಿಂದ ನೋಡಲ್ಪಟ್ಟವನಾಗಿ, ಸುಪ್ತಇವ - ಮಲಗಿದವನಂತೆ, ಸದ್ಯಃ-ಕೂಡಲೇ, ಉತ್ತಸ್ಥೌ - ಎದ್ದನು, ಅಗ್ರತಃ - ಎದುರಾಗಿ, ಮೃಡಂಚ - ಶಿವನನ್ನೂ, ದದೃಶೇ - ಕಂಡನು ॥೯॥ ತದಾ- ಆಗ, ...ತ್ಮಾ, ವೃಷ ವೃಷಧ್ವಜ - ಶಿವನಲ್ಲಿ, ದ್ವೇಷ - ವೈರದಿಂದ, ಕಲಿಲಾತ್ಮಾ - ತಳಮಳಿಸುವ ಮನಸ್ಸುಳ್ಳ, ಪ್ರಜಾಪತಿಃ - ದಕ್ಷನು, ಶಿವಾವಲೋಕಾತ್ - ಶಿವನ ದರ್ಶನದಿಂದ, ಶರದ್ಧ್ರದ ಇವ - ಶರತ್ಕಾಲದ ನದಿಯಂತೆ, ಅಮಲಃ - ನಿರ್ಮಲಚಿತ್ತನು, ಅಭವತ್ - ಆದನು ॥೧೦॥ ಭವಸ್ತವಾಯ - ಶಿವಸ್ತುತಿಗಾಗಿ, ಕೃತಧೀರಪಿ - ನಿಶ್ಚಯಿಸಿದರೂ, ಸುತಾಂ - ಮಗಳನ್ನು, ಅನುರಾಗತಃ - ಪ್ರೀತಿಯಿಂದ, ಸಂಪರೇತಾಂ - ಮೃತಳಾದ ಸ್ಮರನ್ ಸ್ಮರಿಸುತ್ತಾ, ಔತ್ಕಂಠ್ಯಾತ್ - ಅಗಲಿದ ಖಿನ್ನತೆಯಿಂದ, ಬಾಷ್ಪಕಲಯಾ - ಕಂಬನಿಗರೆಯುತ್ತಾ, ನಾಶಕ್ನೋತ್ - ಸಮರ್ಥನಾಗಲಿಲ್ಲ ॥೧೧॥

---

ಮೊದಲಾದ ದೇವತೆಗಳೆಲ್ಲರೂ, ದಕ್ಷಯಜ್ಞಶಾಲೆಗೆ ಬಿಜಯಮಾಡುವಂತೆ ಪರಶಿವನನ್ನು ಸಮ್ಮತಿಗೊಳಿಸಿ ಆ ಶಿವನನ್ನೂ ಬ್ರಹ್ಮನನ್ನೂ ಭೃಗು ಮೊದಲಾದ ಋಷಿಗಳನ್ನೂ ಋಭುದೇವಗಣಗಳನ್ನೂ ಕರೆದುಕೊಂಡು ಮರಳಿ ಆ ಯಜ್ಞವಾಟಕ್ಕೆ ಹೋದರು ॥೭॥ ಅಲ್ಲಿ ಪರಮೇಶ್ವರನು ನುಡಿದಂತೆಯೇ ಅಂಗಾಂಗಗಳನ್ನು ಸರಿಪಡಿಸಿ, ಆ ಯಜ್ಞಪಶುವಿನ ತಲೆಯನ್ನು ತಂದು ಮೃತನಾಗಿ ಬಿದ್ದಿರುವ ದಕ್ಷನ ಕಳೇಬರಕ್ಕೆ ಸೇರಿಸಿದರು ॥೮॥ ಆ ತಲೆಯು ಕಚ್ಚಿಕೊಂಡಕೂಡಲೇ ರುದ್ರನಿಂದ ವೀಕ್ಷಿತನಾದ ದಕ್ಷನು ನಿದ್ದೆಯಿಂದೆದ್ದವನಂತೆ ತತ್ಕ್ಷಣದಲ್ಲಿಯೇ ಮೇಲಕ್ಕೆದ್ದು ಮುಂಗಡೆಯಲ್ಲಿ ಕಂಗೊಳಿಸುತ್ತಿರುವ ಗಂಗಾಧರನನ್ನು ಕಂಡನು॥ ಶಿವದ್ವೇಷವೆಂಬುದು ಮನದಲ್ಲಿ ತಳಮಳಿಸುತ್ತಿದ್ದರೂ, ಆ ದಕ್ಷಪ್ರಜಾಪತಿಯು ಆಪರಶಿವನ ದರ್ಶನವಾದಕೂಡಲೇ ಶರತ್ಕಾಲದ ನದಿಯಂತೆ ನಿರ್ಮಲಮನಸ್ಕನಾದನು ॥೧೦॥ ಕೂಡಲೇ ಪರಶಿವಮೂರ್ತಿಯನ್ನು ಕೊಂಡಾಡುವುದಕ್ಕೆ ಸಿದ್ಧನಾಗಿ, ಮೃತಳಾದ ಮಗಳನ್ನು ಸ್ಮರಿಸಿಕೊಂಡು ಪ್ರೇಮದಿಂದಲೂ ಚಿಂತೆಯಿಂದಲೂ ಕಂಬನಿಗರೆಯುತ್ತಾ, ಹೊಗಳಲಾರ

ಕೃಚ್ಛ್ರಾತ್ಸಂಸ್ತಭ್ಯ ಚ ಮನಃ ಪ್ರೇಮವಿಹ್ವಲಿತ ಸುಧೀಃ । ಶಶಂಸ ನಿರ್ವ್ಯಳೀಕೇನ ಭಾವೇನೇಶಂ ಪ್ರಜಾಪತಿಃ ||೧೨|| ದಕ್ಷಃ । ಭೂಯಾನನುಗ್ರಹ ಅಹೋ ! ಭವತಾ ಕೃತೋ ಮೇ ದಂಡಸ್ತ್ವಯಾ ಮಯಿ ಭೃತೋ ಯದಪಿ ಪ್ರಲಬ್ಧಃ । ನ ಬ್ರಹ್ಮಬಂಧುಷು ಚ ವಾಂ ಭಗವನ್ನವಜ್ಞಾ ತುಭ್ಯಂ ಹರೇಶ್ಚ ಕುತ ಏವ ಧೃತವ್ರತೇಷು ||೧೩|| ವಿದ್ಯಾತಪೋವ್ರತಧರಾನ್ ಮುಖತಸ್ಸ್ಮ ವಿಪ್ರಾನ್ ಬ್ರಹ್ಮಾತ್ಮತತ್ತ್ವಮವಿತುಂ ಪ್ರಥಮಂತ್ವಮಸ್ರಾಕ್। ತದ್ಬ್ರಾಹ್ಮಣಾನ್ ಪರಮ ! ಸರ್ವವಿಪತ್ಸು ಪಾಸಿ ಪಾಲಃ ಪಶೂನಿವ ವಿಭೋ!

---

ಪ್ರೇಮವಿಹ್ವಲಿತಃ - ಪ್ರೀತಿಯಿಂದ ವ್ಯಾಕುಲನಾದ, ಸುಧೀಃ - ವಿದ್ವಾಂಸನಾದ, ಪ್ರಜಾಪತಿಃ - ದಕ್ಷನು, ಕೃಚ್ಛ್ರಾತ್ - ಪ್ರಯಾಸದಿಂದ, ಮನಃ - ಮನಸ್ಸನ್ನು, ಸಂಸ್ತಭ್ಯ - ನಿಗ್ರಹಿಸಿ, ನಿರ್ವ್ಯಳೀಕೇನ - ನಿಷ್ಕಪಟವಾದ, ಭಾವೇನ - ಮನಸ್ಸಿನಿಂದ, ಈಶಂ - ಶಿವನನ್ನು, ಶಶಂಸ - ಹೊಗಳಿದನು ||೧೨|| ಹೇಭಗವನ್ - ಎಲೈ ಭಗವಂತನೆ, ತ್ವಂ - ನೀನು, ಪ್ರಲಬ್ಧೋಯದಪಿ - ನಿಂದಿಸಲ್ಪಟ್ಟರೂ, ದಂಡಃ - ಶಿಕ್ಷೆಯು, ಭೃತಃ - ವಿಧಿಸಲ್ಪಟ್ಟಿತು, ಭವತಾ - ನಿನ್ನಿಂದ, ಮಯಿ - ನನ್ನಲ್ಲಿ, ಭೂಯಾನ್ - ಅಧಿಕವಾದ, ಅನುಗ್ರಹಃ - ಅನುಗ್ರಹವು, ಕೃತಃ - ಮಾಡಲ್ಪಟ್ಟಿತು, ತುಭ್ಯಂ - ನಿನಗೂ, ಹರೇಶ - ವಿಷ್ಣುವಿಗೂ, ವಾಂ - ನಿಮ್ಮಿರ್ವರಿಗೂ, ಬ್ರಹ್ಮಬಂಧುಷು ಚ - ಹೆಸರಿಗೆ ಬ್ರಾಹ್ಮಣರಾದವರಲ್ಲಿಯೂ, ಅವಜ್ಞಾ - ಉಪೇಕ್ಷೆಯು, ನ - ಇಲ್ಲ, ಧೃತವ್ರತೇಷು - ನಿಯಮವಂತರಾದವರಲ್ಲಿ, ಕುತಏವ - ಹೇಳುವುದೇನು ? || ಹೇಪರಮ - ಎಲೈ ಸರ್ವಶ್ರೇಷ್ಠನೆ ! ತ್ವಂ - ನೀನು, ಬ್ರಹ್ಮಾ - ಬ್ರಹ್ಮನಾಗಿ, ಅಥವಾ ಬ್ರಹ್ಮ - ವೇದವನ್ನೂ, ಆತ್ಮತತ್ತ್ವಂ - ಆತ್ಮಸ್ವರೂಪವನ್ನೂ, ಅವಿತುಂ - ಕಾಪಾಡುವುದಕ್ಕಾಗಿ, ಪ್ರಥಮಂ - ಮೊದಲು, ವಿದ್ಯಾ ... ರಾನ್ - ವಿದ್ಯೆ ತಪಸ್ಸು, ವ್ರತಗಳನ್ನು ನಡೆಯಿಸುವ, ವಿಪ್ರಾನ್ - ಬ್ರಾಹ್ಮಣರನ್ನು, ಮುಖತಃ - ಮುಖದಿಂದ, ಅಸ್ರಾಕ್ - ಸೃಷ್ಟಿಸಿದೆ, ತತ್ - ಆದುದರಿಂದ, ಹೇವಿಭೋ - ಎಲೆ ಪ್ರಭುವೆ ! ಪ್ರಗೃಹೀತದಂಡಃ - ದಂಡವನ್ನು ಹಿಡಿದು, ಪಶೂನ್ - ಪಶುಗಳನ್ನು, ಗೋವಳನಂತೆ, ಸರ್ವ

---

ದೇ ಹೋದನು||೧೧|| ತರುವಾಯ ಪ್ರೇಮದಿಂದ ವ್ಯಾಕುಲವಾದ ಮನಸ್ಸುಳ್ಳವನಾದರೂ, ಭವಿತವ್ಯತಾ ಮಹಿಮೆಯನ್ನರಿತವನಾದುದರಿಂದ ಕಷ್ಟಸವಾಗಿ ಉಕ್ಕಳಿಸುತ್ತಿರುತ ದುಃಖವನ್ನು ತಡೆದುಕೊಂಡು, ನಿರ್ಮಲಮನಸ್ಕನಾಗಿ ಶಿವನನ್ನು ಹೊಗಳತೊಡಗಿದನೆಂತೆಂದರೆ || ಎಲೈ ಭಗವಂತನೆ! ನಾನು ಹಲವುಬಗೆಯಿಂದ ಜರೆದರೂ, ಅವನ್ನೆಣಿಸದೆ ವಿವೇಕವುಂಟಾಗುವಂತೆ ದಂಡಿಸಿ ನನಗೆ ಸಂಪೂರ್ಣವಾದ ಅನುಗ್ರಹವನ್ನು ತೋರಿಸಿದೆ. ನೀನುಮತ್ತು ಲೋಕಪಾಲಕನಾದ ಶ್ರೀ ಮಹಾವಿಷ್ಣುವು, ಬ್ರಾಹ್ಮಣರೆಂಬ ಹೆಸರನ್ನು ಮಾತ್ರಪಡೆದ ಪತಿತರನ್ನು ಕೂಡ ಉಪೇಕ್ಷಿಸುವವರಲ್ಲ. ಇಂತಿರುವಾಗ ಸ್ವಧರ್ಮನಿರತರಾದ ಬ್ರಾಹ್ಮಣರ ವಿಷಯದಲ್ಲಿ ಹೇಳುವುದೇನು? ||೧೩|| ಎಲೈ ಸರ್ವೋತ್ತಮನಾದ ಮಹೇಶ್ವರನೆ! ಜಗತ್ಕಾರಣಮೂರ್ತಿಯಾದ ನೀನು ಸ್ವಯಂವ್ಯಕ್ತಗಳಾದ ವೇದಗಳನ್ನೂ, ಆತ್ಮತತ್ತ್ವಸ್ವರೂಪವನ್ನೂ ಉದ್ಧರಿಸಿ, ಸಂಪ್ರದಾಯ ಪರಿಪಾಲನೆಯನ್ನು ಮಾಡುವುದಕ್ಕಾಗಿ ಚತುರ್ಮುಖರೂಪವನ್ನು ವಹಿಸಿ, ವಿದ್ಯೆ, ತಪಸ್ಸು, ವ್ರತಮೊದಲಾದುವುಗಳನ್ನಾಚರಿಸುವ ಬ್ರಾಹ್ಮರನ್ನು ಮೊದಲು ನಿನ್ನ ಮುಖದಿಂದಲೇ ಸೃಷ್ಟಿಸಿರುವೆಯಾದುದರಿಂದ, ಕೇಡಿಗೀಡಾಗದಂತೆ ಕಾಡಿನಲ್ಲಿ

ಪ್ರಗೃಹೀತದಂಡಃ ॥೧೪॥ ಯೋಽಸೌ ಮಯಾಽವಿದಿತತತ್ತ್ವದೃಶಾ ಸಭಾಯಾಂ ಕ್ಷಿಪ್ತೋ ದುರುಕ್ತಿವಿಶಿಖೈರಗಣಯ್ಯ ತನ್ಮಾಮ್ । ಅರ್ವಾಕ್ಪತಂತಮರ್ಹತ್ತಮ ! ನಿಂದಯಾಽಪಾದ್ದೃಷ್ಟ್ಯಾರ್ದ್ರಯಾ ಸ ಭಗವಾನ್ ಸ್ವಕೃತೇನ ತುಷ್ಯೇತ್ ॥೧೫॥ ಮೈತ್ರೇಯಃ ॥ ಕ್ಷಮಾಪ್ಯೈವಂ ಸ ಮೀಢ್ವಾಂಸಂ ಬ್ರಹ್ಮಣಾ ಚಾಽನುಮಂತ್ರಿತಃ । ಕರ್ಮ ಸಂತಾನಯಾಮಾಸ ಸೋಪಾಧ್ಯಾಯರ್ತ್ವಿಗಗ್ನಿಭಿಃ ॥೧೬॥ ವೈಷ್ಣವಂ ಯಜ್ಞಸಂತತ್ಯೈ ತ್ರಿಕಪಾಲಂ ದ್ವಿಜೋ

ವಿಪತ್ಸು - ಎಲ್ಲಾ ಆಪತ್ತುಗಳಲ್ಲಿಯೂ, ಬ್ರಾಹ್ಮಣಾನ್ - ಬ್ರಾಹ್ಮಣರನ್ನು, ಪಾಸಿ-ಸಲಹುತ್ತಿರುವೆ ॥೧೪॥

ಹೇ ಅರ್ಹತ್ತಮ- ಎಲೈ ಅತ್ಯಂತ ಪೂಜ್ಯನೆ! ಅವಿದಿತ ತತ್ತ್ವದೃಶಾ-ತತ್ತ್ವಜ್ಞಾನವಿಲ್ಲದ, ಮಯಾ-ನನ್ನಿಂದ, ಯೋಽಸೌ - ಯಾವ ಮಹಾತ್ಮನು, ಸಭಾಯಾಂ - ಸಭೆಯಲ್ಲಿ, ದುರುಕ್ತ ವಿಶಿಖೈಃ - ದುರ್ಭಾಷೆಗಳೆಂಬ ಬಾಣಗಳಿಂದ, ಕ್ಷಿಪ್ತಃ - ಹೊಡೆಯಲ್ಪಟ್ಟನೋ, ಸಭಗವಾನ್ - ಅಂತಹನೀನು, ತತ್ - ಅದನ್ನು, ಅಗಣಯ್ಯ - ಎಣಿಸದೆ, ನಿಂದಯಾ - ಮಹಾತ್ಮರ ದೂಷಣೆಯಿಂದ, ಅರ್ವಾಕ್ - ಕೆಳಗೆ, ಪತಂತಂ - ಬಿದ್ದಿರುವ, ಮಾಂ - ನನ್ನನ್ನು, ಆರ್ದ್ರಯಾ - ದಯಾವಿಶಿಷ್ಟವಾದ, ದೃಷ್ಟ್ಯಾ - ದೃಷ್ಟಿಯಿಂದ, ಅಪಾತ್ - ರಕ್ಷಿಸಿವೆ, ಸ್ವಕೃತೇನ - ನಿನ್ನ ಕಾರ್ಯದಿಂದ, ತುಷ್ಯೇತ್ - ನೀನೇ ಸಂತೋಷಿಸಬೇಕು ॥೧೫॥ ಮೈತ್ರೇಯನು ಹೇಳುತ್ತಾನೆ, ಸಃ - ಆದಕ್ಷನು, ಏವಂ - ಇಂತು, ಮೀಢ್ವಾಂಸಂ - ಶಿವನನ್ನು, ಕ್ಷಮಾಪ್ಯ - ಮನ್ನಣೆಗೊಳಿಸಿ, ಬ್ರಹ್ಮಣಾಚ - ಬ್ರಹ್ಮನಿಂದಲೂ, ಅನುಮಂತ್ರಿತಃ - ಆಜ್ಞೆಯನ್ನು ಪಡೆದು, ಸೋಪಾ...ಭಿಃ, ಉಪಾಧ್ಯಾಯರು, ಋತ್ವಿಜರು, ಅಗ್ನಿಗಳು, ಇವುಗಳಿಂದಕೂಡಿ, ಕರ್ಮ - ಯಜ್ಞ ಕರ್ಮವನ್ನು, ಸಂತಾನಯಾಮಾಸ - ಬೆಳೆಯಿಸಿದನು ॥೧೬॥ ದ್ವಿಜೋತ್ತಮಾಃ - ಬ್ರಾಹ್ಮಣ ಶ್ರೇಷ್ಠರು, ಯಜ್ಞಸಂತತ್ಯೈ - ಯಜ್ಞವು ಸಾಂಗವಾಗಿ ನಡೆಯುವುದಕ್ಕೂ, ವೀರ...ಯೋಚ -ವೀರಭದ್ರನ ಸಂಸರ್ಗದಿಂದುಂಟಾದ ದೋಷವನ್ನು ಕಳೆಯುವುದಕ್ಕಾಗಿಯೂ, ತ್ರಿಕಪಾಲಂ - ಮೂರುಕಪಾಲಗಳಲ್ಲಿ ಸಂಸ್ಕೃತವಾದ, ವೈಷ್ಣವಂ - ವಿಷ್ಣುದೇವತಾಕವಾದ, ಪುರೋಡಾಶಂ - ಪುರೋಡಾ

ಗೋಗಳನ್ನು ಸಲಹುವುದಕ್ಕಾಗಿ ಕೋಲನ್ನು ಹಿಡಿದಿರುವ ಗೋವಳನಂತೆ, ಆ ಬ್ರಾಹ್ಮಣರನ್ನು ಸರ್ವಾಪದಗಳಲ್ಲಿಯೂ ವಿಹಿತದಂಡನೆಯಿಂದ ಪಾಲಿಸುವುದು ನಿನ್ನ ಕರ್ತವ್ಯವಾಗಿರುವುದು॥ ಎಲೈ ಪೂಜ್ಯತಮನಾದ ಪಶುಪತಿಯೆ ! ತತ್ತ್ವವನ್ನರಿಯದ ಮೂಢನಾದ ನಾನು ಮಹಾಸಭೆಯಲ್ಲಿ ದುರ್ಭಾಷಣಗಳೆಂಬ ತೀಕ್ಷ್ಣಬಾಣಗಳಿಂದ ನೋಯಿಸಿದರೂ, ಅದನ್ನು ಗಣಿಸದೆ ಮಹಾತ್ಮರನ್ನು ನಿಂದಿಸಿದುದರಿಂದ ಅಧೋಗತಿಯನ್ನು ಪಡೆದ ನನ್ನನ್ನು ದಯಾರ್ದ್ರವಾದ ದೃಷ್ಟಿಯಿಂದ ಕನಿಕರಿಸಿ ಉದ್ಧರಿಸಿದೆಯಾದುದರಿಂದ, ನೀನು ಮಾಡಿದ ಮಹೋಪಕಾರಕ್ಕೆ ನೀನೇ ಸಂತೋಷಿಸಬೇಕಲ್ಲದೆ, ನಾನು ಪ್ರತ್ಯುಪಕಾರವನ್ನು ಮಾಡಲಾರೆನು, ಎಂದು ಕೊಂಡಾಡಿದನು ॥೧೫॥ ಅಯ್ಯಾ ವಿದುರನೆ ! ಆ ದಕ್ಷನು ಇಂತು ಪರಶಿವನನ್ನು ಮನ್ನಣೆಗೊಳಿಸಿ ಚತುರ್ಮುಖನಿಂದಪ್ಪಣೆಯನ್ನು ಪಡೆದು, ಉಪಾಧ್ಯಾಯರು, ಋತ್ವಿಜರು, ಅಗ್ನಿಗಳು ಇವರಿಂದೊಡಗೂಡಿ ಯಜ್ಞಕರ್ಮವನ್ನು ನಡೆಯಿಸತೊಡಗಿದನು ॥೧೬॥ ಬಳಿಕ ವೀರಭದ್ರನಿಂದಲೂ, ಪ್ರಮಥಗಣಗಳಿಂದಲೂ ಉಂಟಾದ ಸಂಸರ್ಗದೋಷವನ್ನು ಹೋಗಲಾಡಿಸುವುದಕಾಗಿಯೂ, ಯಜ್ಞವು ನಿರಂತರಾಯವಾಗಿ ನೆರವೇರುವುದಕ್ಕಾಗಿಯೂ, ಋತ್ವಿಜರು ಮೂರು ಕಪಾಲಗಳಲ್ಲಿ ಸಂಸ್ಕೃತವಾದ ಪುರೋಡಾಶವನ್ನು ವಿಷ್ಣುದೇವತಾಕವಾಗಿ

ತ್ತಮಾಃ । ಪುರೋಡಾಶಂ ನಿರವಪನ್ ವೀರಸಂಸರ್ಗಶುದ್ಧಯೇ ॥ ೧೭ ॥
ಅಧ್ವರ್ಯುಣಾತ್ತಹವಿಷಾ ಯಜಮಾನೋ ವಿಶಾಂಪತೇ ! । ಧಿಯಾ ವಿಶುದ್ಧ
ಯಾ ದಧ್ಯೌ ತಥಾ ಪ್ರಾದುರಭೂದ್ಧರಿಃ ॥ ತದಾ ಸ್ವಪ್ರಭಯಾ ತೇಷಾಂ
ದ್ಯೋತಯಂತ್ಯಾ ದಿಶೋ ದಶ । ಮುಷ್ಣಂಸ್ತೇಜ ಉಪಾನೀತಸ್ತಾರ್ಕ್ಷ್ಯೇ
ಣ ಸ್ತೋತ್ರವಾಜಿನಾ ॥೧೯॥ ಶ್ಯಾಮೋ ಹಿರಣ್ಯರಶನೋಽರ್ಕಕಿರೀಟಜು
ಷ್ಟೋ ನೀಲಾಲಕಭ್ರಮರಮಂಡಿತಕುಂಡಲಾಸ್ಯಃ । ಕಂಬ್ವಬ್ಜಚಕ್ರಶರಚಾ
ಪಗದಾಸಿಚರ್ಮವ್ಯಗ್ರೈರ್ಹಿರಣ್ಮಯಭುಜೈರಿವ ಕರ್ಣಿಕಾರಃ ॥೨೦॥ ವಕ್ಷ

ಶವನ್ನು, ನಿರವಪನ್ - ಹೋಮಮಾಡಿದರು ॥೧೭॥ ಯಜಮಾನಃ - ದಕ್ಷನು, ಆತ್ತಹವಿಷಾ - ಹವಿಸ್ಸನ್ನು ಧರಿಸಿದ, ಅಧ್ವರ್ಯುಣಾ ಸಹ - ಅಧ್ವರ್ಯುವಿನೊಡನೆ, ವಿಶುದ್ಧಯಾ - ನಿರ್ಮಲವಾದ, ಧಿಯಾ - ಬುದ್ಧಿಯಿಂದ, ದಧ್ಯೌ - ಧ್ಯಾನಮಾಡಿದನು, ಹರಿಃ - ವಿಷ್ಣುವು, ತಥಾ - ಹಾಗೆಯೇ, ಪ್ರಾದುರಭೂತ್ - ಆವಿರ್ಭವಿಸಿದನು ॥೧೮॥

ತದಾ - ಆಗ, ದಶದಿಶಃ - ಹತ್ತುದಿಕ್ಕುಗಳನ್ನು, ದ್ಯೋತಯಂತ್ಯಾ - ಬೆಳಗಿಸುತ್ತಿರುವ, ಸ್ವಪ್ರಭಯಾ - ತನ್ನ ಕಾಂತಿಯಿಂದ, ತೇಜಃ - ಆಸದಸ್ಯರ, ತೇಜಸ್ಸನ್ನು, ಮುಷ್ಣನ್ - ಕದಿಯುತ್ತಾ, ಸ್ತೋತ್ರವಾಜಿನಾ - ಬೃಹದ್ರಥಂತರ ಸಾಮಗಳೆಂಬ ರೆಕ್ಕೆಗಳುಳ್ಳ, ತಾರ್ಕ್ಷ್ಯೇಣ - ಗರುಡನಿಂದ, ಉಪಾನೀತಃ - ಬಳಿಗೊಯ್ಯಲ್ಪಟ್ಟನು ॥೧೯॥ ಶ್ಯಾಮಃ - ಶ್ಯಾಮಲವರ್ಣವುಳ್ಳ, ಹಿರಣ್ಯರಶನಃ - ಚಿನ್ನದಂತಿರುವ ಪೀತಾಂಬರವನ್ನು ಧರಿಸಿದ, ಅರ್ಕ...ಷ್ಟಃ - ಸೂರ್ಯನಂತೆ ಹೊಳೆಯುವ ಕಿರೀಟದಿಂದ ಕೂಡಿದ, ನೀಲಾ...ಸ್ಯಃ, ನೀಲಾಲಕ - ಕರಿದಾದ ಮುಂಗುರುಳೆಂಬ, ಭ್ರಮರ - ತುಂಬಿಗಳಿಂದ, ಮಂಡಿತ - ಅಲಂಕೃತವಾದ, ಕುಂಡಲ - ಕುಂಡಲಗಳಿಂದ ಕೂಡಿದ, ಆಸ್ಯಃ - ಮುಖವುಳ್ಳ, ಕಂಬ್ವ...ಗ್ರೈಃ, ಕಂಬು - ಶಂಖ, ಅಬ್ಜ - ಕಮಲ, ಚಕ್ರ, ಶರ - ಬಾಣ, ಚಾಪ - ಧನುಸ್ಸು, ಗದೆ, ಅಸಿ - ಕತ್ತಿ, ಚರ್ಮ - ಕೈಚೀಲ ಇವುಗಳಿಂದ, ವ್ಯಗ್ರೈಃ - ಕೂಡಿದ, ಹಿರಣ್ಮಯಭುಜೈಃ - ಚಿನ್ನದೊಡವೆಗಳಿಂದ ಕೂಡಿದ ಭುಜಗಳಿಂದ, ಕರ್ಣಿಕಾರ ಇವ - ಕಂಚಿವಾಳದಂತೆ ಶೋಭಿಸುವ ॥ ೨೦ ॥ ವಕ್ಷಸಿ

ಹೋಮಮಾಡಿದರು॥೧೭॥ ತರುವಾಯ ಯಜಮಾನನಾದ ದಕ್ಷನು ಹವಿರ್ಭಾಗವನ್ನು ಹಿಡಿದುಕೊಂಡಿರುವ ಅಧ್ವರ್ಯುವಿನೊಡನೆ ನಿಂದು, ನಿರ್ಮಲವಾದ ಬುದ್ಧಿಯಿಂದ ಧ್ಯಾನಿಸಲು, ತತ್ ಕ್ಷಣದಲ್ಲಿಯೇ ಶ್ರೀಹರಿಯು ಆವಿರ್ಭವಿಸಿದನು ॥೧೮॥ ಆ ಭಗವಂತನು ಬಿಜಮಾಡಿದ ಕೂಡಲೇ, ಆತನ ದಿವ್ಯತೇಜಸ್ಸಿನಿಂದ ದಶದಿಕ್ಕುಗಳೂ ಬೆಳಗಿದುವು ಸಭಾಸದರ ತೇಜಸ್ಸು ಕುಗ್ಗಿಹೋಯಿತು. ರಥಂತರ ಸಾಮಗಳೆಂಬ ಪಕ್ಷಗಳಿಂದೊಡಗೂಡಿದ ಗರುಡನ ಹೆಗಲಮೇಲೆ ಹೊಳೆಯುತ್ತಿದ್ದನು ॥೧೯॥ ಆತನ ಶರೀರವು ನೀಲಮೇಘದಂತೆ ಶ್ಯಾಮಲವಾಗಿಯೂ, ಬಂಗಾರದಂತೆ ಕಂಗೊಳಿಸುವ ಪೀತಾಂಬರದಿಂದ ಪರಿವೃತವಾಗಿಯೂ ಇದ್ದಿತು. ತಲೆಯಲ್ಲಿ ಸೂರ್ಯಮಂಡಲದಂತೆ ಜಗಜಗಿಸುವ ರತ್ನ ಕಿರೀಟವು ಶೋಭಿಸುತ್ತಿದ್ದಿತ. ಕುಂಡಲಗಳಿಂದ ಮಂಡಿತವಾದ ಮುಖಪುಂಡರೀಕದಲ್ಲಿ, ಮುಂಗುರುಳೆಂಬ ತುಂಬಿಗಳು ತಾಂಡವಿಸುತ್ತಿದ್ದುವು. ಭಕ್ತಪಾಲನವ್ಯಗ್ರಗಳಾಗಿ, ಶಂಖ, ಚಕ್ರ ಗದಾ, ಪದ್ಮ ಧನು, ಬಾಣ, ಚರ್ಮ, ಮೊದಲಾದ ಆಯುಧಗಳಿಂದ ಕೂಡಿ, ರತ್ನ ಖಚಿತಗಳಾದ ಸುವರ್ಣಾಭರಣಗಳಿಂದ ಕಂಗೊಳಿಸುತ್ತಿರುವ ಭುಜಗಳಿಂದ, ಪುಷ್ಪಿತವಾದ ಕರ್ಣಿಕಾರದಂ

ಸ್ಯಧಿಶ್ರಿತವಧೂ ರ್ವನಮಾಲ್ಯುದಾರ ಹಾಸಾವಲೋಕಕಲಯಾ ರಮಯಂಶ್ಚ ವಿಶ್ವಂ । ಪಾರ್ಶ್ವಭ್ರಮದ್ವ್ಯಜನ ಚಾಮರರಾಜಹಂಸಃ ಶ್ವೇತಾತಪತ್ರ ಶಶಿನೋಪರಿ ರಜ್ಯಮಾನಃ ॥೨೧॥ ತ ಮುಪಾಗತ ಮಾಲಕ್ಷ್ಯ ಸರ್ವೇ ಸುರಗಣಾದಯಃ । ಪ್ರಣೇಮುಃ ಸ್ಸಹಸೋತ್ಥಾಯ ಬ್ರಹ್ಮೇಂದ್ರ ತ್ರ್ಯಕ್ಷನಾಯಕಾಃ ॥ ತತ್ತೇಜಸಾ ಹೃತರುಚ ಸ್ಸನ್ನಜಿಹ್ವಾ ಸ್ಸಸಾಧ್ವಸಾಃ । ಮೂರ್ಧ್ನಾ ಕೃತಾಂಜಲಿ ಪುಟಾ ಉಪತಸ್ಥು ರಧೋಕ್ಷಜಂ ॥೨೩॥ ಅಪ್ಯರ್ವಾಗ್ವೃತ್ತಯೋ ಯಸ್ಯ ಮಹಿ ತ್ವಾತ್ಮಭುವಾದಯಃ। ಯಥಾಮತಿ ಗೃಣಂತಿಸ್ಮ ಕೃತಾಽನುಗ್ರಹವಿಗ್ರಹಂ॥೨೪॥ ದಕ್ಷೋ ಗೃಹೀತಾಽರ್ಹಣಸಾದನೋತ್ತಮಂ ಯಜ್ಞೇಶ್ವರಂ

---

ಎದೆಯಲ್ಲಿ, ಅಧಿಶ್ರಿತವಧೂಃ - ಲಕ್ಷ್ಮಿಯನ್ನು ಧರಿಸಿದ, ವನಮಾಲೀ - ವನಮಾಲೆಯನ್ನು ಧರಿಸಿದ, ಉದಾ...ಯಾ - ಉತ್ತಮವಾದ ನಗೆನೋಟದ ಬೆಡಗಿನಿಂದ, ವಿಶ್ವಂ - ಎಲ್ಲರನ್ನೂ, ರಮಯನ್ - ಸಂತೋಷಗೊಳಿಸುವ, ಪಾರ್ಶ್ವೇ - ಪಕ್ಕಗಳಲ್ಲಿ, ಭ್ರಮತ್ - ಚಲಿಸುತ್ತಿರುವ, ವ್ಯಜನ - ಬೀಸಣಿಗೆಗಳು, ಚಾಮರ - ಚಮರಗಳು ಎಂಬ ರಾಜಹಂಸಗಳುಳ್ಳ, ಉಪರಿ - ಮೇಲ್ಗಡೆಯಲ್ಲಿ, ಶ್ವೇತಾತಪತ್ರಶಶಿನಾ - ಬೆಳುಗೊಡೆ ತುಂಬ ಚಂದ್ರನಿಂದ, ರಜ್ಯಮಾನಃ - ಹೊಳೆಯುತ್ತಿರುವ, ॥೨೧॥ ಉಪಾಗತಂ - ಬಂದ, ತಂ - ಆ ವಿಷ್ಣುವನ್ನು, ಆಲಕ್ಷ್ಯ - ಕಂಡು, ಸರ್ವೇ - ಎಲ್ಲಾ, ಸುರಗಣಾದಯಃ - ದೇವಗಣವೊದಲಾದ, ಬ್ರಹ್ಮೇಂದ್ರ..ಕಾಃ, ಬ್ರಹ್ಮ, ಇಂದ್ರ, ಶಿವ ಇವರು, ಸಹಸಾ - ಬೇಗನೆ, ಉತ್ಥಾಯ - ಎದ್ದು, ಪ್ರಣೇಮುಃ - ನಮಸ್ಕರಿಸಿದರು ॥೨೨॥

ತತ್ತೇಜಸಾ - ಆತನ ತೇಜಸ್ಸಿನಿಂದ, ಹೃತರುಚಃ - ತೇಜಸ್ಸು ಕುಂದಿ, ಸನ್ನಜಿಹ್ವಾಃ - ನಾಲಗೆ ಜೋಮಾಗಿ, ಸಸಾಧ್ವಸಾಃ - ಭಯಗೊಂಡು, ಮೂರ್ಧ್ನಾ - ತಲೆಯಲ್ಲಿ, ಕೃತಾಂಜಲಿಪುಟಾಃ - ಕೈಜೋಡಿಸಿಕೊಂಡು, ಅಧೋಕ್ಷಜಂ - ವಿಷ್ಣುವನ್ನು, ಉಪತಸ್ಥುಃ - ಹೊಗಳಿದರು ॥೨೩॥ ಯಸ್ಯ - ಯಾವನ, ಮಹಿ - ಮಹಿಮೆಯನ್ನು ಕುರಿತು, ಅರ್ವಾಗ್ವೃತ್ತಯೋಽಪಿ - ಅನರ್ಹಮನೋವೃತ್ತಿಯುಳ್ಳವರಾದರೂ ಆತ್ಮಭುವಾದಯಃ - ಬ್ರಹ್ಮಾದಿಗಳು, ಕೃತಾನುಗ್ರಹವಿಗ್ರಹಂ - ಭಕ್ತರ ಅನುಗ್ರಹಾರ್ಥವಾಗಿ ಅವತರಿಸಿದ ಭಗವಂತನನ್ನು ಯಥಾಮತಿ - ತಮ್ಮ ಬುದ್ಧಿಗನುಸಾರವಾಗಿ, ಗೃಣಂತಿಸ್ಮ - ಹೊಗಳಿದರು ॥೨೪॥ ದಕ್ಷಃ-

---

ತೊಪ್ಪುತ್ತಿದ್ದನು ॥೨೦॥ ವಿಶಾಲವಾದ ವಕ್ಷಸ್ಥಲದಲ್ಲಿ ಲಕ್ಷ್ಮೀದೇವಿಯು ನಲಿಯುತ್ತಿದ್ದಳು. ವನಮಾಲೆಯು ಮೆರೆಯುತ್ತಿದ್ದದು. ಆನಂದಕರವಾಗಿ ಬೆಡಗು ಬೀರುತ್ತಿರುವ ನಗೆನೋಟವು ಜಗತ್ತೆಲ್ಲವನ್ನೂ ಸಂತೋಷಗೊಳಿಸುತ್ತಿದ್ದುದು. ಇಕ್ಕೆಲದಲ್ಲಿಯೂ ಧವಳ ಧವಳವಾದ ಚಾಮರಗಳು ರಾಜಹಂಸಗಳಂತೆ ಚಲಿಸುತ್ತಿದ್ದುವು. ಪೂರ್ಣಚಂದ್ರಮಂಡಲದಂತೆ ಪಾಂಡುರವಾದ ಬೆಳುಗೊಡೆಯು ಮೇಲ್ಗಡೆಯಲ್ಲಿ ಶೋಭಿಸುತ್ತಿದ್ದದು ॥೨೧॥ ಇಂತು ವೈಭವದಿಂದ ಬಂದ ಮುಕುಂದನನ್ನು ಕಂಡಕೂಡಲೇ ಪುರಂದರ, ಶತಾನಂದ, ಚಂದ್ರಶೇಖರರೇ ಮೊದಲಾದದೇವತೆಗಳೆಲ್ಲರೂ ದಿಗ್ಗನೆದ್ದು ದಂಡಪ್ರಣಾಮಗಳನ್ನಾಚರಿಸಿದರು ॥೨೨॥ ಆ ಭಗವಂತನ ದಿವ್ಯತೇಜಸ್ಸಿನಿಂದ ಕಳೆಗುಂದಿ ನಾಲಗೆಜೋಮಾಗಿ, ಭಯಗೊಂಡು ಕೈಮುಗಿದುಕೊಂಡು ಹೊಗಳತೊಡಗಿದರು ॥೨೩॥ ಬ್ರಹ್ಮಾದಿದೇವತೆಗಳು ಆತನ ಮಹಿಮೆಯನ್ನು ತಿಳಿಯುವುದಕ್ಕೆ ಅಸಮರ್ಥರಾದರೂ, ಭಕ್ತರನ್ನು ಅನುಗ್ರಹಿಸುವುದಕ್ಕಾಗಿಯೇ ಅವತಾರವನ್ನುಮಾಡಿರುವ ನಾರಾಯಣಮೂರ್ತಿಯನ್ನು ತಿಳಿದಮಟ್ಟಿಗೆ ಸ್ತುತಿಸಿದರು ॥೨೪॥ ಆಗಯಜಮಾನನಾದ ದಕ್ಷ

ವಿಶ್ವಸೃಜಾಂ ಪರಂ ಗುರುಂ । ಸುನಂದನಂದಾದ್ಯನುಗೈ ರ್ವೃತಂ ಮುದಾ ಗೃಣನ್ ಪ್ರಪೇದೇ ಪ್ರಯತಃ ಕೃತಾಂಜಲಿಃ ॥೨೫॥ ದಕ್ಷಉವಾಚ॥ ಶುದ್ಧಂ ಸ್ವಧಾಮ್ನ್ಯುಪರತಾಽಖಿಲಬುದ್ಧ್ಯವಸ್ಥಂ ಚಿನ್ಮಾತ್ರ ಮೇಕ ಮಭಯಂ ಪ್ರತಿಷಿಧ್ಯ ಮಾಯಾಂ । ತಿಷ್ಠಂ ಸ್ತಯೈವ ಪುರುಷತ್ವ ಮುಪೇತ್ಯ ತಸ್ಯಾ ಮಾಸ್ಸೇ ಭವಾ ನಪರಿಶುದ್ಧ ಇವಾತ್ಮತಂತ್ರಃ ॥೨೬॥ ಋತ್ವಿಜಊಚುಃ॥ ತತ್ತ್ವಂ ನತೇ ವಯ ಮನಂಜನ ! ರುದ್ರಶಾಪಾ ತ್ಕರ್ಮಣ್ಯವಗ್ರಹಧಿಯೋ

---

ದಕ್ಷನು, ಅರ್ಹ...ಮಂ - ಪೂಜಾಸಾಮಗ್ರಿಯುಳ್ಳ ಉತ್ತಮಪಾತ್ರೆಯನ್ನು, ಗೃಹೀತ್ವಾ-ತೆಗೆದುಕೊಂಡ, ಯಜ್ಞೇಶ್ವರಂ - ಯಜ್ಞನಾಯಕನೂ, ವಿಶ್ವಸೃಜಾಂ - ಬ್ರಹ್ಮಾದಿಗಳಿಗೆ, ಪರಂಗುರುಂ - ಪರಮಗುರುವೂ, ಸುನಂ...ಗೈಃ-ಸುನಂದ ಸನಂದ, ಮೊದಲಾದ ಪರಿವಾರದಿಂದ, ವೃತಂ - ಬಳಸಲ್ಪಟ್ಟವನೂ ಆದ ವಿಷ್ಣುವನ್ನು, ಪ್ರಯತಃ - ಯತ್ನಶೀಲನಾಗಿ, ಕೃತಾಂಜಲಿಃ - ಕೈಮುಗಿದು, ಮುದಾ - ಸಂತೋಷದಿಂದ, ಗೃಣನ್ - ಹೊಗಳುತ್ತಾ, ಪ್ರಪೇದೇ - ಮರೆಹೊಕ್ಕನು ॥೨೫॥ ಶುದ್ಧಂ - ನಿರ್ಮಲನಾಗಿ, ಉಪ...ಸ್ಥಂ, ಉಪರತ - ಇಲ್ಲದಿರುವ, ಅಖಿಲಂ - ಸಮಸ್ತಗಳಾದ, ಬುದ್ಧ್ಯವಸ್ಥಂ - ಬುದ್ಧಿಯವಸ್ಥೆಗಳುಳ್ಳ, ಚಿನ್ಮಾತ್ರಂ - ಜ್ಞಾನಮಾತ್ರಸ್ವರೂಪನಾದ, ಏಕಂ - ಅದ್ವಿತೀಯನಾದ, ಅಭಯಂ - ಭಯರಹಿತನಾದ, ಭವಾನ್ ನೀನು, ಆತ್ಮತಂತ್ರಃ - ಸ್ವತಂತ್ರನಾಗಿ, ಮಾಯಾಂ-ಮಾಯೆಯನ್ನು, ಪ್ರತಿಷಿಧ್ಯ - ತೂರೆದು, ಸ್ವಧಾಮ್ನಿ-ಸ್ವರೂಪದಲ್ಲಿ, ತಿಷ್ಠನ್ - ಇರುತ್ತಾ, ತಯೈವ - ಆ ಮಾಯೆಯಿಂದಲೇ, ಪುರುಷತ್ವಂ - ಮನುಷ್ಯನಾಕೃತಿಯನ್ನು, ಉಪೇತ್ಯ - ಹೊಂದಿ, ಅಪರಿಶುದ್ಧಇವ - ಅಪರಿಶುದ್ಧನಂತೆ, ತಸ್ಯಾಂ - ಆ ಮಾಯೆಯಲ್ಲಿ, ಆಸ್ತೇ - ಇರುತ್ತಿ ॥೨೬॥

ಋತ್ವಿಜರು ಹೇಳುತ್ತಾರೆ:- ಅನಂಜನ - ಉಪಾಧಿರಹಿತನೆ! ಭಗವನ್-ಭಗವಂತನೆ! ವಯಂ - ನಾವು ರುದ್ರಶಾಪಾತ್ - ನಂದಿಯ ಶಾಪದಿಂದ, ಕರ್ಮಣಿ - ಯಜ್ಞಕರ್ಮದಲ್ಲಿ, ಅವಗ್ರಹಧಿಯಃ - ದುರಾಗ್ರಹಬುದ್ಧಿಯುಳ್ಳವರಾಗಿ, ತೇ - ನಿನ್ನ, ತತ್ತ್ವಂ - ಸ್ವರೂಪವನ್ನು, ನವಿದ್ಮಃ - ತಿಳಿಯಲಿಲ್ಲ. ಯದರ್ಥಂ - ಯಾವುದಕ್ಕಾಗಿ, ಅಧಿದೈವಂ - ದೇವಾಧಿಕಾರದಿಂದ, ಅದೋವ್ಯವಸ್ಥಾಃ - ಈ ವ್ಯವಸ್ಥೆಗಳುಂಟಾಗಿರುವವೊ,

---

ಪ್ರಜಾಪತಿಯು ಉತ್ತಮಗಳಾದ ತಟ್ಟೆಗಳಲ್ಲಿ ಪೂಜಾಸಾಮಗ್ರಿಯನ್ನಿಟ್ಟುಕೊಂಡು ಬಳಿವಿಡಿದು ಯಥಾವಿಧಿಯಾಗಿ ಸತ್ಕರಿಸಿ, ಯಜ್ಞಫಲಪ್ರದನಾಗಿಯೂ, ಜಗತ್ಕರ್ತರಾದ ಬ್ರಹ್ಮಾದಿಗಳಿಗೆ ಗುರುವಾಗಿಯೂ, ನಂದ,ಸುನಂದ, ಮೊದಲಾದ ಭಕ್ತಾಗ್ರೇಸರರಿಂದ ಪರಿವೃತನಾಗಿಯೂ ಇರುವ ಆತನನ್ನು ಮರೆಹೊಕ್ಕು, ಶ್ರದ್ಧೆಯಿಂದ ಬದ್ಧಾಂಜಲಿಯಾಗಿ ನುತಿಸಿದನೆಂತೆಂದರೆ॥ ಎಲೈ ಭಗವಂತನ! ನಿರಂತರವೂ ಸ್ವಸ್ವರೂಪದಲ್ಲಿ ರಮಿಸುವ ನೀನು ಜಾಗ್ರದಾದಿ ಬುದ್ಧ್ಯವಸ್ಥಾತೀತನಾದುದರಿಂದ ಮಾಯಾರಹಿತನಾಗಿಯೂ, ಚಿನ್ಮಾತ್ರನಾಗಿಯೂ ಅದ್ವಿತೀಯನಾಗಿಯೂ, ನಿರ್ಭಯನಾಗಿಯೂ ಇರುವೆ. ಇಂತು ನೀನು ಸ್ವತಂತ್ರನಾಗಿದ್ದರೂ, ಆ ಮಾಯೆಯಲ್ಲಿ ನೆಲಗೊಂಡು ರಾಮಕೃಷ್ಣಾದಿರೂಪದಿಂದ ಮನುಷ್ಯರಂತೆ ನಟಿಸುತ್ತಲೂ,ಅದೇಮಾಯೆಯಿಂದ ಅಪರಿಶುದ್ಧನಾದವನಂತೆಯೂ ತೋರುತ್ತಿರುವೆ. ಆದುದರಿಂದ ನೀನೇ ಪರಮೇಶ್ವರನಲ್ಲದೆ ಇತರರಲ್ಲ ಎಂದು ಹೊಗಳಿದನು॥೨೬॥ ಬಳಿಕ ಋತ್ವಿಜರು ತಮ್ಮ ಅಪರಾಧವನ್ನು ಕಳೆದುಕೊಳ್ಳುವುದಕ್ಕಾಗಿ " ಎಲೈ ಮಾಯೋಪಾಧಿರಹಿತನಾದ ಪರಮಪುರುಷನೆ ! ಸರ್ವ

ಭಗವನ್ ! ವಿದಾಮಃ । ಧರ್ಮೋಪಲಕ್ಷಣ ಮಿದಂ ತ್ರಿವೃ ದಧ್ವರಾಖ್ಯಂ
ಜ್ಞಾತಂ ಯದರ್ಥ ಮಧಿದೈವ ಮದೋ ವ್ಯವಸ್ಥಾಃ ॥ ೨೭ ॥ ಸದಸ್ಯಾ ಊ
ಚುಃ ॥ ಉತ್ಪತ್ತ್ಯಧ್ವನ್ಯಶರಣ ಉರುಕ್ಲೇಶದುರ್ಗೇಽಂತಕೋಗ್ರವ್ಯಾಲಾಽನ್ವಿ
ಷ್ಟೇ ವಿಷಯಮೃಗತೃಷ್ಣ್ಯಾತ್ಮಗೇಹೋರುಭಾರಃ । ದ್ವಂದ್ವಶ್ವಭ್ರೇ ಖಲ
ಮೃಗಭಯೇ ಶೋಕದಾವೇಽಜ್ಞಸಾರ್ಥಃ ಪಾದೌ ಕಸ್ತೇ ಶರಣದ ! ಕದಾ

---

ಅಂತಹ, ಧರ್ಮೋಪಲಕ್ಷಣಂ - ಧರ್ಮಕ್ಕೆ ಜ್ಞಾಪಕವಾದ, ತ್ರಿವೃತ್- ವೇದಪ್ರತಿಪಾದ್ಯವಾದ, ಇದಂ ಅಧ್ವರಾಖ್ಯಂ - ಈ ಯಜ್ಞವೆಂಬ ಕರ್ಮವುಮಾತ್ರ, ಜ್ಞಾತಂ - ತಿಳಿಯಲ್ಪಟ್ಟಿರುವುದು ॥೨೭॥ ಸದಸ್ಯರು ಹೇಳುತ್ತಾರೆ:-ಶರಣದ - ಎಲೈ ಆಶ್ರಯದಾತನೆ! ಅಶರಣೇ - ವಿಶ್ರಮಸ್ಥಾನಶೂನ್ಯವಾದ, ಉರು...ಗೇ - ಅಧಿಕಗಳಾದ ಪಂಚಕ್ಲೇಶಗಳೆಂಬ ದುರ್ಗಗಳುಳ್ಳ, ಅಂತ...ಷ್ಟೇ-ಯಮನೆಂಬ ಹೆಬ್ಬುಲಿಯಿಂದ ಹೊಂಚುಹಾಕಲ್ಪಟ್ಟ, ದ್ವಂದ್ವಶ್ವಭ್ರೇ - ಸುಖದುಃಖಗಳೆಂಬ ಗುಂಡಿಗಳುಳ್ಳ, ಖಲ...ಯೇ - ದುರ್ಜನರೆಂಬ ಕಾಡುಮೃಗಗಳ ಭಯವುಳ್ಳ, ಶೋಕದಾವೇ - ದುಃಖವೆಂಬ ಕಾಳ್ಕಿಚ್ಚುಳ್ಳ, ಉತ್ಪತ್ತ್ಯಧ್ವನಿ - ಸಂಸಾರ ಮಾರ್ಗದಲ್ಲಿ ಇರುವ, ಅಜ್ಞಸಾರ್ಥಃ - ಅಜ್ಞರ ಸಮೂಹವು, ವಿಷ...ರಃ, ವಿಷಯ - ಶಬ್ದಾದಿವಿಷಯಗಳೆಂಬ ಮೃಗತೃಷ್ಣಾ - ಬಿಸಿಲ್ಗುದುರೆಯುಳ್ಳ, ಆತ್ಮ - ಶರೀರದಲ್ಲಿಯೂ, ಗೇಹ - ಮನೆಯಲ್ಲಿಯೂ, ಉರುಭಾರಃ - ಅಧಿಕಾಸಕ್ತಿಯುಳ್ಳುದರಿಂದ, ಕಾಮೋಪಸೃಷ್ಟಃ - ಕಾಮಪೀಡಿತನಾದ, ಕಃ - ಯಾವನು

---

ಸ್ವರೂಪನಾದುದರಿಂದ ನೀನೇ ರುದ್ರಾದಿರೂಪನಾಗಿಯೂ ಇರುವೆ. ಆದರೂ ಆ ನಂದೀಶ್ವರನ ಶಾಪದಿಂದ ಕರ್ಮಗಳಲ್ಲಿಯೇ ದುರಾಗ್ರಹವುಳ್ಳ ನಾವು ಕ್ರಿಯಾಜನ್ಯವಾದ “ಅಪೂರ್ವ”ವೆಂಬ ಧರ್ಮಕ್ಕೆ ಜ್ಞಾಪಕವಾಗಿಯೂ, ವೇದಪ್ರತಿಪಾದ್ಯವಾಗಿಯೂ, “ಇಂತಹ ಕರ್ಮಕ್ಕೆ ಇದೇ ದೇವತೆಯು” ಎಂಬ ವ್ಯವಸ್ಥೆಗೊಳಪಟ್ಟುದಾಗಿಯೂ ಇರುವ ಯಜ್ಞದ ಸ್ವರೂಪವನ್ನು ಬಲ್ಲೆವೇ ಹೊರತು ನಿನ್ನ ತತ್ವವನ್ನರಿತವರಲ್ಲ, ಎಂದು ಕ್ಷಮಾಪಣೆಯನ್ನು ಬೇಡಿಕೊಂಡರು॥ ॥೨೭॥ ಅಲ್ಲಿಯ ಸದಸ್ಯರು, ಯಜಮಾನನಲ್ಲದೆ ಬಿಕ್ಷಾರ್ಥ್ಯವಾಗಿ ನಷ್ಟವಾದರೂ, ಹಣದಾಸೆಯಿಂದ ತಾವು ತಹತಹ ಪಡುವುದನ್ನು ಯೋಚಿಸಿಕೊಂಡು, ಪಶ್ಚಾತ್ತಾಪಪಡುತ್ತಾ, ವೈರಾಗ್ಯವನ್ನು ಪಡೆಯಬೇಕೆಂದೆಣಿಸಿ, ‘ಎಲೈ ರಕ್ಷಕನಾದ ಪುಂಡರೀಕಾಕ್ಷನೆ ! ಅಪಾರವಾದ ಸಂಸಾರದ ದಾರಿಯನ್ನೇನೆಂದು ಬಣ್ಣಿಸುವ ? ಎಷ್ಟು ದೂರ ನಡೆದರೂ ಕುಳಿತುಕೊಳ್ಳುವುದಕ್ಕೆ ನೆಳಲಿಲ್ಲ. ಕಾಮಕ್ರೋಧಾದಿಗಳೆಂಬ ದುರ್ಗಗಳಿಂದ ಭಯಂಕರವಾಗಿರುವುದು. ಯಮನೆಂಬ ಹೆಬ್ಬುಲಿಯು ಹೊಂಚು ಹಾಕುತ್ತಿರುವುದು. ಶಬ್ದಾದಿವಿಷಯಗಳೆಂಬ ಕಾಡುಮೃಗಗಳು ಕಾಟವಂತೂ ಹೇಳಲಳವಲ್ಲ. ಸುಖದುಃಖಗಳೆಂಬ ಹಳ್ಳಕೊಳ್ಳಗಳು ಅಡಿಗಡಿಗೂ ಪಲ್ಲಟಗೊಳಿಸುವುವು. ಶೋಕವೆಂಬ ಕಾಳ್ಕಿಚ್ಚು ಸುತ್ತಲೂ ಮುತ್ತಿಬೇಯುತ್ತಿರುವುದು. “ನಾನು” ಎಂಬ ಅಹಂಕಾರಕ್ಕೆ ಆಶ್ರಯವಾದ ದೇಹವು, “ನನ್ನದು” ಎಂಬ ಮಮಕಾರಕ್ಕೆ ನೆಲೆಯಾದ ಪತ್ನೀಪುತ್ರ ಗೃಹಾದಿಗಳು, ಇವರೆಂಬ ಬಿಸಿಲ್ಗುದುರೆಗಳು ಬಾರಿಬಾರಿಗೂ ಮೋಹಗೊಳಿಸುವುವು. ಇಂತಹ ಅಪಾರವಾದ ಸಂಸಾರ ಮಾರ್ಗದಲ್ಲಿ ನಡೆಯುತ್ತಾ, ಅವಿದ್ಯಾ ಕಾಮಕರ್ಮಗಳಿಗೊಳಗಾಗಿ ಅಜ್ಞಾನಿಯಾದ ಜನಸಂಘವು ಯಾವಾಗ ನಿನ್ನ ಪಾದಗಳ

ಯಾತಿ ಕಾಮೋಪಸೃಷ್ಟಃ॥೨೮॥ ರುದ್ರ ಉವಾಚ ॥ ತವ ವರದ! ವರಾಂಘ್ರಾ
ವಾಶಿಷೇಹಾಽಖಿಲಾಽರ್ಥೇ ಹ್ಯಪಿ ಮುನಿಭಿರಸಕ್ತೈರಾದರೇಣಾಽ
ರ್ಹಣೀಯೇ । ಯದಿ ರಚಿತಧಿಯಂ ಮಾಽವಿದ್ಯಲೋಕೋಽಪವಿದ್ಧಂ ಜಪ
ತಿ ನಗಣಯೇ ತತ್ತ್ವತ್ಪರಾಽನುಗ್ರಹೇಣ ॥೨೯॥ ಭೃಗುರುವಾಚ ॥ ಯನ್ಮಾ
ಯಯಾ ಗಹನಯಾಽಪಹೃತಾತ್ಮಬೋಧಾ ಬ್ರಹ್ಮಾದಯಸ್ತನುಭೃತಸ್ತ
ಮಸಿ ಸ್ವಪಂತಃ । ನಾತ್ಮನ್ ಸ್ರಿತಂ ತವ ವಿದಂತ್ಯಧುನಾಽಪಿ ತತ್ತ್ವಂ

ಕದಾ - ಯಾವಾಗ, ತೇ - ನಿನ್ನ, ಪಾದೌ - ಪಾದಗಳನ್ನು, ಯಾತಿ - ಹೊಂದುವನು ॥೨೮॥

ರುದ್ರನು ಹೇಳುತ್ತಾನೆ—ಹೇವರದ - ಎಲೈ ವರದಾಯಕನಾದ ಭಗವಂತನೆ! ಇಹ - ಈ ಲೋಕದಲ್ಲಿ, ಆಶಿಷಾ - ಕಾಮದಿಂದ, ಅಖಿಲಾರ್ಥೇ - ಎಲ್ಲರಿಂದಲೂ ಪ್ರಾರ್ಥಿಸಲ್ಪಟ್ಟ, ಅಸಕ್ತೈಃ - ವಿರಕ್ತರಾದ, ಮುನಿಭಿರಪಿ - ಜ್ಞಾನಿಗಳಿಂದಲೂ, ಆದರೇಣ - ಶ್ರದ್ಧೆಯಿಂದ ಅರ್ಹಣೀಯೇ - ಪೂಜಿಸಲ್ಪಡತಕ್ಕ, ತವ - ನಿನ್ನ, ಅಂಘ್ರೌ - ಪಾದದಲ್ಲಿ, ರಚಿತಧಿಯಂ - ಮನಸ್ಸನ್ನಿಟ್ಟ, ಮಾಂ-ನನ್ನನ್ನು ಅವಿದ್ಯಲೋಕಃ ಅಜ್ಞಾನಿಗಳಾದ ಜನರು, ಅಪವಿದ್ಧಂ - ಆಚಾರಹೀನನೆಂದು, ಜಪತಿಯದಿ - ಹೇಳುವುದಾದರೆ, ತತ್ - ಅದನ್ನು, ತ್ವತ್ಪರಾನುಗ್ರಹೇಣ-ನಿನ್ನ ಅನುಗ್ರಹಾತಿಶಯದಿಂದ ಅಥವಾ ನಿನ್ನ ಭಕ್ತರ ಅನುಗ್ರಹದಿಂದ, ನಗಣಯೇ - ಲೆಕ್ಕಿಸುವುದಿಲ್ಲ ॥೨೯॥ ಭೃಗುವು ಹೇಳುತ್ತಾನೆ—ಗಹನಯಾ -ತಿಳಿಯಲಸಾಧ್ಯವಾದ, ಯನ್ಮಾಯಯಾ - ಯಾವನ ಮಾಯೆಯಿಂದ ಅಪ...ಧಾಃ - ಆತ್ಮಸ್ವರೂಪಜ್ಞಾನವನ್ನು ಕಳೆದುಕೊಂಡ, ತನುಭೃತಃ - ದೇಹಧಾರಿಗಳಾದ, ಬ್ರಹ್ಮಾದಯಃ - ಬ್ರಹ್ಮನೊದಲಾದವರು, ತಮಸಿ - ಅಜ್ಞಾನದಲ್ಲಿ, ಸ್ವಪಂತಃ ಮಲಗಿ, ಆತ್ಮನ್ - ತಮ್ಮಲ್ಲಿ, ಸ್ರಿತಂ - ನೆಲೆಯಾಗಿರುವ, ತವ - ನಿನ್ನ, ತತ್ತ್ವಂ - ಸ್ವರೂಪವನ್ನು, ಅಧುನಾಪಿ - ಇಂದಿಗೂ, ನವಿದಂತಿ - ತಿಳಿಯಲಿಲ್ಲವೋ, ಸೋಯಂ - ಅಂತಹ, ಪ್ರಣತಾತ್ಮಬಂಧುಃ- ಭಕ್ತ

ನ್ನು ಮರೆಹೋಗುವ್ರದೋ ನಾವರಿಯೆವು. ಆದುದರಿಂದ ನಿನ್ನ ಸಾಯುಜ್ಯಕ್ಕೆ ಸಾಧನವಾದ ವಿಷಯ ವೈರಾಗ್ಯವನ್ನು ದಯೆಪಾಲಿಸು, ಎಂದು ಬೇಡಿದರು ॥೨೮॥ ರುದ್ರನು, ತನಗುಂಟಾಗಿದ್ದ ಅಪವಾದವೆಂಬುದು ಮೊದಲು ದುಸ್ಸಹವಾಗಿದ್ದರೂ, ಭಗವದ್ದರ್ಶನವಾದ ಕೂಡಲೇ ಅದನ್ನು ಮರೆತು, ಎಲೈ ವರದಾಯಕನಾದ ಸುರನಾಯಕನೆ! ಈ ಲೋಕದಲ್ಲಿ ಸಕಾಮರಾದ ಪುರುಷರಿಗೆ ಸಕಲ ಮನೋಭೀಷ್ಟಗಳನ್ನು ಕೊಡತಕ್ಕುದಾಗಿಯೂ, ಪರಮ ವಿರಕ್ತರಾದ ಜ್ಞಾನಿಗಳಿಗೂ ಆಶ್ರಯಣೀಯ್ಯಗಳಾಗಿಯೂ ಇರುವ ನಿನ್ನ ಪಾದಪದ್ಮಗಳಲ್ಲಿ ಮನಸ್ಸನ್ನು ನಲಗೊಳಿಸಿರುವ ನನ್ನನ್ನು, ತತ್ವಜ್ಞಾನವಿಲ್ಲದ ಪಾಮರರು ಆಚಾರಹೀನನೆಂದು ಜರೆಯುತ್ತಿದ್ದರೂ, ನಿನ್ನ ಅನುಗ್ರಹಾತಿಶಯದಿಂದ ನಾನದನ್ನೆಣಿಸಲಾರೆನು, ಎಂದು ಬೇಡಿಕೊಂಡನು ॥೨೯॥ ಅಗಭೃಗುಮುನಿಯು, ಜೀವಸಾಮಾನ್ಯವೆಂಬುದು ಸ್ವಭಾವವಾಗಿ ತತ್ತ್ವಜ್ಞಾನರಹಿತವಾಗಿಯೇ ಇರುವುದು. ಆದಕಾರಣ ನಾನೂ ಕ್ಷಮಾಪಣೆಯನ್ನು ಬೇಡಿಕೊಳ್ಳುವೆನೆಂದೆಣಿಸಿ ಎಲೈ ಭಗವಂತನೆ! ಯಾವ ನಿನ್ನ ಗಹನವಾದ ಮಾಯೆಯಿಂದ ಮರುಳಾಗಿ ಬ್ರಹ್ಮಾದಿ ಪಿಪೀಲಿಕಾಂತವಾಗಿ ಸಕಲಜೀವರೂ ಅಜ್ಞಾನವೆಂಬ ಕಗ್ಗತ್ತಲೆಯಲ್ಲಿ ಮುಳುಗಿ, ತಮ್ಮಲ್ಲಿ ಅಂತರ್ಯಾಮಿರೂಪದಿಂದ ನೆಲಸಿರುವ ನಿನ್ನ ಸ್ವರೂಪವನ್ನು ಈಗಲೂ ಕಾಣದಿರುವರೋ, ಭಕ್ತರಿಗೆ ಆಪ್ತಬಂಧುವಾದ ಅಂತಹ ನೀನು ನನ್ನನ್ನನುಗ್ರಹಿಸು ’’

ಸೋಽಯಂ ಪ್ರಸೀದತು ಭವಾನ್ ಪ್ರಣತಾತ್ಮಬಂಧುಃ॥೨೮॥ ಬ್ರಹ್ಮೋವಾಚ ॥ ನೈತತ್ಸ್ವರೂಪಂ ಭವತೋಽಸೌ ಪದಾರ್ಥಭೇದಗ್ರಹೈಃ ಪುರುಷೋ ಯಾವದೀಕ್ಷೇತ್। ಜ್ಞಾನಸ್ಯ ಚಾರ್ಥಸ್ಯ ಗುಣಸ್ಯ ಚಾಶ್ರಯೋ ಮಾಯಾಮಯಾದ್ವ್ಯತಿರಿಕ್ತೋ ಯತಸ್ತ್ವಂ ॥೨೯॥ ಇಂದ್ರ ಉವಾಚ॥ ಇದಮಪ್ಯಚ್ಯುತ ! ವಿಶ್ವಭಾವನಂ ವಪುರಾನಂದಕರಂ ಮನೋದೃಶಾಂ । ಸುರವಿದ್ವಿಟ್ಕ್ಷಪಣೈರುದಾಯುಧೈರ್ಭುಜದಂಡೈರುಪಪನ್ನಮಷ್ಟಭಿಃ ॥೩೦॥ ಪತ್ನ್ಯ

---

ರಿಗೆ ಆಪ್ತಬಂಧುವಾದ, ಭವಾನ್ - ನೀನು, ಪ್ರಸೀದತು - ಪ್ರಸನ್ನನಾಗು ॥೨೮॥ ಬ್ರಹ್ಮನು ಹೇಳುತ್ತಾನೆ—ಯತಃ - ಯಾವಕಾರಣದಿಂದ, ತ್ವಂ - ನೀನು, ಜ್ಞಾನಸ್ಯ - ಜ್ಞಾನಸಾಧನಗಳಾದ ಇಂದ್ರಿಯಗಳಿಗೂ, ಅರ್ಥಸ್ಯ - ಶಬ್ದಾದಿವಿಷಯಗಳಿಗೂ, ಗುಣಸ್ಯಚ - ಇಂದ್ರಿಯವಿಷಯಗಳಿಗೆ ಕಾರಣಗಳಾದ ಸತ್ವಾದಿಗುಣಗಳಿಗೂ, ಆಶ್ರಯಃ - ನೆಲೆಯಾದವನೋ, ಮಾಯಾಮಯಾತ್ - ಮಾಯಾವಿಕಾರಗಳಾದ ಶರೀರಾದಿಗಳಿಗಿಂತಲೂ, ವ್ಯತಿರಿಕ್ತಃ-ಬೇರೆಯಾದವನೋ, ಆದುದರಿಂದ, ಅಸೌಪುರುಷಃ - ಈ ಜೀವನು, ಪದಾ...ಹೈಃ ಪದಾರ್ಥ - ವಸ್ತುಗಳ, ಭೇದ - ವ್ಯತ್ಯಾಸವನ್ನು ಗ್ರಹೈಃ - ಗ್ರಹಿಸುವ ಇಂದ್ರಿಯಗಳಿಂದ, ಭವತಃ - ನಿನ್ನ, ಏತತ್ - ಈ, ಸ್ವರೂಪಂ - ತತ್ವವನ್ನು ನೇಕ್ಷೇತ್ - ನೋಡಲಾರನು ॥೨೯॥

ಇಂದ್ರನು ಹೇಳುತ್ತಾನೆ—ಹೇ ಅಚ್ಯುತ - ಎಲೈ ಪುರಾಣಪುರುಷನೆ ! ವಿಶ್ವಭಾವನಂ - ಲೋಕರಕ್ಷಕವೂ, ಮನೋದೃಶಾಂ - ಕಣ್ಮನಗಳಿಗೆ ಆನಂದಕರಂ-ಸಂತೋಷಗೊಳಿಸುವುದೂ, ಸುರ...ಣೈಃ-ದೇವಶತ್ರುಗಳಾದ ರಾಕ್ಷಸರನ್ನು ನಾಶಗೊಳಿಸುವ, ಉದಾಯುಧೈಃ - ಆಯುಧಗಳಿಂದೊಪ್ಪುವ, ಅಷ್ಟಭಿಃ-ಎಂಟಾದ, ಭುಜದಂಡೈಃ - ಭುಜಗಳಿಂದ ಕೂಡಿದ, ಇದಂವಪುರಪಿ - ಈ ನಿನ್ನ ಶರೀರವೂ, ಉಪಪನ್ನಮೇವ - ಸತ್ಯವಾದುದೇ ಸರಿ ॥೩೦॥ ಋತ್ವಿಜರ ಪತ್ನಿಯರು ಹೇಳುತ್ತಾರೆ—ಹೇಯಜ್ಞಾತ್ಮನ್ - ಎಲೈ ಯಜ್ಞ

---

ಎಂದು ಬಿನ್ನೈಸಿದನು ॥೨೮॥ ತರುವಾಯ ಚತುರ್ಮುಖನು “ ಬ್ರಹ್ಮಾದಿಗಳೂ ಆತ್ಮತತ್ವವನ್ನರಿಯಲಾರರೆಂದು ಹೇಳಿದಭೃಗುವಿನ ನುಡಿಯನ್ನು ಸ್ಮರಿಸಲಾರದೆ, ಬ್ರಹ್ಮತತ್ತ್ವಜ್ಞಾನವನ್ನು ಪ್ರಕಟಗೊಳಿಸಲಳಸಿ ” ಎಲೈ ಪರಾವರೇಶನೆ ! ನೀನು ಪದಾರ್ಥಗಳ ತಿಳವಳಿಕೆಯನ್ನುಂಟುಮಾಡುವುದಕೆ ಸಾಧನಗಳಾದ ಚಕ್ಷುರಾದೀಂದ್ರಿಯಗಳಿಗೂ, ಆ ಇಂದ್ರಿಯಗಳಿಂದ ಅನುಭವಿಸಲ್ಪಡುವ, ಶಬ್ದಾದಿವಿಷಯಗಳಿಗೂ, ಆ ವಿಷಯೇಂದ್ರಿಯಗಳೆರಡಕ್ಕೂ ಕಾರಣಗಳಾದ ಸತ್ವಾದಿಗುಣಗಳಿಗೂ ಆಶ್ರಯನೆನಿಸಿ, ಮಾಯಾಪರಿಣಾಮರೂಪಗಳಾದ ಶರೀರಾದಿಗಳಿಗಿಂತ ವಿವಿಕ್ತನಾದುದರಿಂದ, ಅವಿದ್ಯೋಪಾಧಿಕನಾದ ಯಾವಪುರುಷನು ತಾನೇ ಪದಾರ್ಥಗಳ ಭೇದವನ್ನು ಮಾತ್ರ ಗ್ರಹಿಸತಕ್ಕ ಶಕ್ತಿಯುಳ್ಳ ಇಂದ್ರಿಯಗಳಿಂದ ಅವಾಙ್ಮನಸಗೋಚರವಾದ ನಿನ್ನ ಸ್ವರೂಪವನ್ನು ಕಾಣಬಲ್ಲನು ? ” ಎಂದು ತತ್ವಾವೇದಕವಾಗಿ ಕೊಂಡಾಡಿದನು ॥೨೯॥ ಬಳಿಕ ಇಂದ್ರನು “ ಇಂದ್ರಿಯಗಳಿಗೆ ವಿಷಯವಾದುದೆಲ್ಲವೂ ಮಿಥ್ಯಾಭೂತವಾದುದು” ಎಂದು ಹೇಳಿದ ಬ್ರಹ್ಮನ ನುಡಿಯನ್ನು ಕೇಳಿ ಅದನ್ನು ಸಹಿಸಲಾರದೆ ” ಎಲೈ ಪುರಾಣಪುರುಷನೆ ! ಸಕಲ ಲೋಕರಕ್ಷಕವೂ ಕಣ್ಮನಗಳಿಗೆ ಆನಂದಕರವೂ ಆಗಿ ದೇವಕಂಟಕರಾದ ರಾಕ್ಷಸರನ್ನು ಧ್ವಂಸಗೊಳಿಸುವ, ದಿವ್ಯಾಯುಧಗಳಿಂದ ದೇದೀಪ್ಯಮಾನಗಳಾದ ಎಂಟು ಭುಜಗಳಿಂದೊಪ್ಪಿರುವ, ಈ ನಿನ್ನ ಅಪ್ರಾಕೃತದಿ

ಊಚುಃ ॥ ಯಜ್ಞೋಽಯಂ ತವ ಯಜನಾಯ ಕೇನ ಸೃಷ್ಟೋ ವಿಧ್ವಸ್ತಃ
ಪಶುಪತಿನಾಽದ್ಯ ದಕ್ಷಕೋಪಾತ್ । ತಂ ನಸ್ತ್ವಂ ಶವಶಯನಾಭಶಾಂತ
ಮೇಧಂ ಯಜ್ಞಾತ್ಮನ್ನಳಿನರುಚಾ ದೃಶಾ ಪುನೀಹಿ ॥೩೩॥ ಋಷಯಊಚುಃ ॥
ಅನನ್ವಿತಂ ತವ ಭಗವನ್! ವಿಚೇಷ್ಟಿತಂ ಯದಾತ್ಮನಾ ಚರಸಿ ಹಿ ಕರ್ಮ
ನಾಽಜ್ಯಸೇ। ವಿಭೂತಯೇ ಯತ ಉಪಸೇದು ರೀಶ್ವರೀಂ ನಮನ್ಯತೇ ಸ್ವಯ
ಮನುವರ್ತಿನೀಂ ಭವಾನ್॥೩೪॥ ಸಿದ್ಧಾ ಊಚುಃ॥ ಅಯಂ ತೇ ಕಥಾ ಮೃಷ್ಟ

ಸ್ವರೂಪನೆ! ತವ - ನಿನ್ನ, ಯಜನಾಯ - ಪೂಜೆಗಾಗಿ, ಕೇನ - ಬ್ರಹ್ಮನಿಂದ, ಸೃಷ್ಟಃ - ಸೃಷ್ಟಿಸಲ್ಪಟ್ಟ, ಅಯಂಯಜ್ಞಃ-ಈ ಯಜ್ಞವು, ಅದ್ಯ - ಈಗ, ದಕ್ಷಕೋಪಾತ್ - ದಕ್ಷನಲ್ಲಿ ಕೋಪದಿಂದ, ಪಶುಪತಿನಾ - ರುದ್ರನಿಂದ, ವಿಧ್ವಸ್ತಃ - ನಾಶಗೊಳಿಸಲ್ಪಟ್ಟಿತು, ನಃ - ನಮ್ಮ, ಶವ...ಧಂ, ಶವಯನ - ಸ್ಮಶಾನಕ್ಕೆ, ಆಭ - ಸಮಾನವಾಗಿಯೂ, ಶಾಂತಮೇಧಂ - ಉತ್ಸವರಹಿತವಾಗಿಯೂ ಇರುವ, ತಂ - ಆ ಯಜ್ಞವನ್ನು, ತ್ವಂ - ನೀನು, ನಳಿನರುಚಾ - ಕಮಲದಂತೆ ಕಾಂತಿಯುಳ್ಳ, ದೃಶಾ - ದೃಷ್ಟಿಯಿಂದ, ಪುನೀಹಿ - ಪವಿತ್ರಗೊಳಿಸು ॥೩೪॥ ಋಷಿಗಳು ಹೇಳುತ್ತಾರೆ:—ಹೇಭಗವನ್ - ಎಲೈ ಭಗವಂತನೆ! ಯತ್ - ಯಾವುದರಿಂದ, ಆತ್ಮನಾ - ಸ್ವಂತವಾಗಿ, ಆಚರಿಸಿ - ಕರ್ಮವನ್ನು ಮಾಡುತ್ತಿರುವೇ ಕರ್ಮಣಾ - ಕರ್ಮದಿಂದ, ನಾಜ್ಯಸೇಹಿ - ಲಿಪ್ತನಾಗುವುದಿಲ್ಲವೋ, ಯತಃ - ಯಾವುದರಿಂದ, ಅನ್ಯೇ- ಇತರರು, ವಿಭೂತಯೇ - ಸಂಪತ್ತಿಗಾಗಿ, ಈಶ್ವರೀಂ - ಲಕ್ಷ್ಮೀದೇವಿಯನ್ನು, ಉಪಸೇದುಃ - ಸೇವಿಸುವರೋ, ಸ್ವಯಂ - ತಾನಾಗಿ, ಅನುವರ್ತಿನೀಂ - ಅನುವರ್ತಿಸುವ ಆಕೆಯನ್ನು, ಭವಾನ್ - ನೀನು ನಮನ್ಯತೇ - ಗಣಿಸುವುದಿಲ್ಲವೋ, ಆದುದರಿಂದ, ತವ - ನಿನ್ನ, ವಿಚೇಷ್ಟಿತಂ - ನಡವಳಿಯು, ಅನನ್ವಿತಂ- ತಲೆಕೆಳಗಾಗಿರುವುದು ॥೩೪॥ ಸಿದ್ಧರು ಹೇಳುತ್ತಾರೆ, ಕ್ಲೇಶ...ಗ್ಧಃ - ದುಃಖಗಳೆಂಬ ಕಾಳ್ಗಿಚ್ಚಿನಿಂದ ಸುಡಲ್ಪಟ್ಟ, ತೃಷಾರ್ತಃ - ಆಸೆಯೆಂಬ ನೀರಡಿಕೆಯಿಂದ ಬಳಲಿದ, ಅಯಂ - ಈ, ನಃ - ನಮ್ಮ, ಮನೋ

ವ್ಯಮಂಗಳ ವಿಗ್ರಹವು ಇಂದ್ರಿಯವಿಷಯವಾಗಿದ್ದರೂ ಸತ್ಯವೇ ಹೊರತು ಅನಿರ್ವಚನೀಯವಾದ ಪ್ರಪಂಚದಂತೆ ಮಿಥ್ಯೆಯಲ್ಲ'' ಎಂದು ವಿಜ್ಞಾಪಿಸಿದನು ॥೩೨॥ ಈ ಮಧ್ಯದಲ್ಲಿ ಅಲ್ಲಿನ ಋತ್ವಿಜರ ಪತ್ನಿಯರು ‹‹ ಎಲೈ ಯಜ್ಞಮೂರ್ತಿಯೆ ! ನಿನ್ನನ್ನಾರಾಧಿಸುವುದಕ್ಕಾಗಿ ಬ್ರಹ್ಮದೇವನಿಂದ ನಿರ್ಮಿತವಾದ ಈ ಯಜ್ಞವನ್ನು ಪರಶಿವನು ದಕ್ಷನಮೇಲಣ ಕೋಪದಿಂದ ಧ್ವಂಸಮಾಡಿದನು. ಈ ಯಜ್ಞವಾಟವು ಸ್ಮಶಾನದಂತೆ ಅಮಂಗಳವಾಗಿಯೂ, ಉತ್ಸವರಹಿತವಾಗಿಯೂ ಇರುವುದು. ಕಮಲದಂತೆ ಕಮನೀಯವಾದ ನಿನ್ನ ದೃಷ್ಟಿಯಿಂದ ವೀಕ್ಷಿಸಿ ಈ ನಮ್ಮ ಯಜ್ಞವನ್ನು ಪಾವನಗೊಳಿಸು'' ಎಂದು ಮೊರೆಯಿಟ್ಟರು ॥ ೩೩ ॥ ಅನಂತರದಲ್ಲಿ ಅಲ್ಲಿನ ಮಹರ್ಷಿಗಳು ಆಶ್ಚರ್ಯಗೊಂಡು '' ಎಲೈ ಭಗವಂತನೆ ! ಲೋಕದಲ್ಲಿ ಕರ್ಮಗಳನ್ನು ಮಾಡುವವರು ಕರ್ಮಫಲಗಳನ್ನು ಅನುಭವಿಸಲೇ ಬೇಕು. ಇಂತಿರುವಲ್ಲಿ ನೀನು ಕರ್ಮಗಳನ್ನು ಮಾಡುತ್ತಲೇ ಇರುವೆ. ಆದರೂ ಆ ಫಲಗಳಿಗೊಳಗಾಗುವುದಿಲ್ಲ. ಮತ್ತು ಜಗತ್ತೆಲ್ಲವೂ ಸಂಪತ್ತನ್ನು ಪಡೆಯುವುದಕ್ಕಾಗಿ ಯಾರನ್ನು ಭಜಿಸಿ ಸೇವಿಸುವರೋ, ಆ ಜಗನ್ಮಾತೆಯಾದ ಭಾಗ್ಯದೇವತೆಯು ತಾನಾಗಿಯೇ ಅನುಸರಿಸಿ ಸೇವಿಸುತ್ತಿದ್ದರೂ, ಆಕೆಯನ್ನು ನೀನು ಗೌರವಿಸುವುದಿಲ್ಲ. ಇದರಿಂದ ನಿನ್ನ ನಡವಳಿಯು ನಮಗೆ ತಲೆ

ಪೀಯೂಷನದ್ಯಾಂ ಮನೋವಾರಣಃ ಕ್ಲೇಶದಾವಾಽಗ್ನಿದಗ್ಧಃ । ತೃಷಾರ್ತೋಽವಗಾಢೋ ಸಸಸ್ಮಾರ ದಾವಂ ನ ನಿಷ್ಕ್ರಾಮತಿ ಬ್ರಹ್ಮಸಂಪನ್ನವನ್ನಃ ॥೩೫॥ ಯಜಮಾನ್ಯುವಾಚ ॥ ಸ್ವಾಗತಂ ತೇ ಪ್ರಸೀದೇಶ ! ತುಭ್ಯಂ ನಮಃ ಶ್ರೀನಿವಾಸ ಶ್ರಿಯಾ ಕಾಂತಯಾ ತ್ರಾಹಿ ನಃ । ತ್ವಾಮೃತೇಽಧೀಶ ! ನಾಂಗೈರ್ಮಖಃ ಶೋಭತೇ ಶೀರ್ಷಹೀನಃ ಕಬಂಧೋ ಯಥಾಪೂರುಷಃ ॥೩೬॥ ಲೋಕಪಾಲಾಃ ॥ ದೃಷ್ಟಃ ಕಿಂನೋ ದೃಗ್ಭಿರಸದ್ಗ್ರಹೈಸ್ತ್ವಂ ಪ್ರತ್ಯಗ್ದ್ರ

ವಾರಣಃ - ಮನಸ್ಸೆಂಬ ಆನೆಯು, ತೇ - ನಿನ್ನ, ಕಥಾ...ದ್ಯಾಂ, ಕಥೆಯೆಂಬ ಪರಿಶುದ್ಧವಾದ ಅಮೃತನದಿಯಲ್ಲಿ, ಅವಗಾಢಃ - ಮುಳುಗಿ, ದಾವಂ - ಕಾಳ್ಕಿಚ್ಚನ್ನು, ನಸಸ್ಮಾರ - ಸ್ಮರಿಸುವುದಿಲ್ಲ. ಬ್ರಹ್ಮಸಂಪನ್ನವತ್ - ಬ್ರಹ್ಮೈಕ್ಯವನ್ನು ಹೊಂದಿದವನಂತೆ, ನನಿಷ್ಕ್ರಾಮತಿ - ಹಿಂದಿರುಗುವುದಿಲ್ಲ ॥೩೫॥ ದಕ್ಷಪತ್ನಿಯು ಹೇಳುತ್ತಾಳೆ, ಶ್ರೀನಿವಾಸ - ಲಕ್ಷ್ಮೀನಿಲಯನೆ ! ಈಶ - ಎಲೈ ಸ್ವಾಮಿಯೆ ! ತೇ - ನಿನಗೆ, ಸ್ವಾಗತಂ - ಸುಖಾಗಮನವೆ ? ತುಭ್ಯಂ - ನಿನಗೆ, ನಮಃ - ನಮಸ್ಕಾರವು. ಹೇ ಅಧೀಶ - ಎಲೈ ಲೋಕನಾಯಕನೆ ! ಮಖಃ - ಯಜ್ಞವು, ತ್ವಾಮೃತೇ - ನಿನ್ನನ್ನುಳಿದು, ಶೀರ್ಷಹೀನಃ - ತಲೆಯಿಲ್ಲದ, ಕಬಂಧಃ - ಮುಂಡವಾಗಿರುವ, ಪೂರುಷೋಯಥಾ - ಪುರುಷನಂತೆ, ಅಂಗೈಃ - ಅಂಗಗಳಿಂದ, ನಶೋಭತೇ - ಪ್ರಕಾಶಿಸುವುದಿಲ್ಲ. ॥೩೬॥ ಲೋಕಪಾಲರು ಹೇಳುತ್ತಾರೆ, ಹೇಭೂಮನ್ - ಎಲೈ ಸರ್ವಾತ್ಮಕನೆ ? ಯೇನ - ಯಾವ ನಿನ್ನಿಂದ, ದೃಶ್ಯಂ - ಸಕಲವೂ, ದೃಶ್ಯತೇ - ಕಾಣಲ್ಪಡುವುದೋ, ಪ್ರತ್ಯಕ್ - ಹಿಂಮೊಗವಾದ, ದ್ರಷ್ಟಾ - ದ್ರಷ್ಟೃವಾದ, ತ್ವಂ - ನೀನು, ಅಸದ್ಗ್ರಹೈಃ - ವಿಷಯಗಳನ್ನು ಮಾತ್ರ ಗ್ರಹಿಸುವ, ದೃಗ್ಭಿಃ - ದೃಷ್ಟಿಯಿಂದ, ದೃಷ್ಟಃಕಿಂ - ಕಾಣಲ್ಪಟೆಯಾ ? ಪಷ್ಠಃ - ಭೂತಾತಿರಿಕ್ತನಾದ, ಯ

ಕೆಳಗಾಗಿ ತೋರುತ್ತಿರುವುದು, ಎಂದು ಹೊಗಳಿದರು ॥೩೪॥ ಆಮೇಲೆ ಸಿದ್ಧರು ಭಗವಂತನ ಕಥಾಮೃತಪಾನ ಸುಖವನ್ನು ಅಭಿವಂದಿಸುತ್ತಾ "ಎಲೈ ಭಗವಂತನೆ ! ಸಂಸಾರದುಃಖಗಳೆಂಬ ಕಾಳ್ಕಿಚ್ಚಿನಿಂದ ಬೆಂದು ದುರಾಶೆಯೆಂಬ ನೀರಡಿಕೆಯಿಂದ ಬಳಲಿಬೆಂಡಾಗಿರುವ ನಮ್ಮ ಮನವೆಂಬ ಮದಗಜವು ನಿನ್ನ ದಿವ್ಯಚರಿತ್ರೆಯೆಂಬ ಅಮೃತಸಾಗರದಲ್ಲಿ ಮುಳುಗಿ, ಬ್ರಹ್ಮೈಕ್ಯವನ್ನು ಪಡೆದ ಮುಕ್ತನಂತೆ ಕ್ಲೇಶಗಳನ್ನು ಮರೆತು ಹಿಂದಿರುಗದೆ ಅಲ್ಲಿಯೇ ಓಲಾಡುತ್ತಿರುವುದು " ಎಂದು ಪ್ರಾರ್ಥಿಸಿದರು ॥೩೫॥ ಆಗ ದಕ್ಷಪತ್ನಿಯೂ, ಯಜಮಾನಿಯೂ, ಆದ ಪ್ರಸೂತಿಯು "ಎಲೈ ಲೋಕೇಶನೆ ! ನಿನಗೆ ಸುಖಾಗಮನವೆ ! ಎಲೈ ಶ್ರೀನಿವಾಸನೆ ! ನಿನಗೆ ನಮಸ್ಕಾರವು. ಎಲೈ ಲಕ್ಷ್ಮೀಕಾಂತನೆ ! ನಮ್ಮನ್ನು ಕಾಪಾಡು. ತಲೆಯಿಲ್ಲದ ಅಂಗಗಳಿಂದ ಕೂಡಿರುವ ಮುಂಡವೆಂತು ಶೋಭಿಸುವುದಿಲ್ಲವೊ, ಅಂತೆಯೇ ನೀನಿಲ್ಲದೆ ಸಕಲದೇವತಾಸಹಿತವಾದ ಈ ಯಜ್ಞವು ಶೋಭಿಸುವುದಿಲ್ಲ " ಎಂದು ಬಿನ್ನವಿಸಿದಳು ॥೩೬॥ ಆಗ ಲೋಕಪಾಲರು ಆ ಭಗವಂತನ ದಿವ್ಯಮಂಗಳವಿಗ್ರಹ ದರ್ಶನ ಸೌಲಭ್ಯವನ್ನು ಅನುಸಂಧಾನಮಾಡಿ ಆತನ ಮಾಯಾವೈಭವವನ್ನು ವರ್ಣಿಸುತ್ತಾ "ಎಲೈ ಸರ್ವಾಂತರ್ಯಾಮಿಯೆ ! ಶಬ್ದಮೊದಲಾದ ವಿಷಯಗಳನ್ನು ಗ್ರಹಿಸತಕ್ಕ ಈ ನಮ್ಮ ಇಂದ್ರಿಯಗಳಿಗೆ ನೀನ ಗೋಚರನಾದುದುದೋ, ಅದು ನಿನ್ನನುಗ್ರಹವೇ ಹೊರತು ಬೇರೆಯಲ್ಲ. ಪ್ರತ್ಯಗ್ರೂಪನಾಗಿಯೂ, ಸರ್ವಸಾಕ್ಷಿಯಾಗಿಯೂ, ಭೂತಾತಿರಿಕ್ತನಾಗಿಯೂ, ಇರುವ ನೀನು ಪಾಂಚ

ಷ್ಟಾ ದೃಶ್ಯತೇ ಯೇನ ದಶ್ಯಂ। ಮಾಯಾ ಹ್ಯೇಷಾ ಭವದೀಯಾಹಿ ಭೂಮನ್!
ಯ ಸ್ತ್ವಂ ಷಷ್ಠಃ ಪಂಚಭಿ ರ್ಭಾಸಿ ಭೂತೈಃ॥೩೭॥ ಯೋಗೇಶ್ವರಾ ಊ
ಚುಃ ॥ ಪ್ರೇಯಾ ನ್ನತೇಽನ್ಯೋ ಸ್ತ್ಯಮುತ ಸ್ತ್ವಯಿ ಪ್ರಭೋ! ವಿಶ್ವಾತ್ಮ
ನೀಕ್ಷೇ ನ್ನಪೃಥ ಗ್ಯ ಆತ್ಮನಃ। ಅಥಾಽಪಿ ಭಕ್ತ್ಯೇಶ! ತಯೋಪಧಾವತಾ
ಮನನ್ಯವೃತ್ತ್ಯಾಽನುಗೃಹಾಣ ವತ್ಸಲ! ॥೩೮॥ ಜಗದುದ್ಭವಸ್ಥಿತಿಲಯೇಷು
ದೈವತೋ ಬಹುಭಿದ್ಯಮಾನಗುಣಯಾತ್ಮಮಾಯಯಾ। ರಚಿತಾತ್ಮಭೇದ

ಸ್ತ್ವಂ - ಯಾವನೀನು, ಪಂಚಭಿಃ - ಐದು, ಭೂತೈಃ - ಭೂತಗಳಿಂದ, ಭಾಸಿ-ಹೊಳೆಯುವೆಯೊ, ಏಷಾ-ಇದು, ಭವದೀಯಾ - ನಿನ್ನ, ಮಾಯಾಹಿ - ಮಾಯೆಯುಷ್ಟ ॥೩೭॥ ಯೋಗಿಗಳು ಹೇಳುತ್ತಾರೆ - ಹೇಪ್ರಭೋ - ಎಲೈ ಪ್ರಭುವೆ! ವಿಶ್ವಾತ್ಮನಿ - ಸರ್ವಾತ್ಮಕನಾದ, ತ್ವಯಿ - ನಿನ್ನಲ್ಲಿ, ಯಃ - ಯಾವನು, ಆತ್ಮನಃ - ತನಗಿಂತಲೂ, ಪೃಥಕ್ - ಭೇದವನ್ನು, ನೇಕ್ಷೇತ್ - ನೋಡುವುದಿಲ್ಲವೋ, ಅಮುತಃ - ಇವನಿಗಿಂತಲೂ, ತೇ - ನಿನಗೆ, ಪ್ರೇಯಾನ್ - ಪ್ರಿಯತಮನಾದವನು, ನ - ಇಲ್ಲ, ಅಥಾಪಿ - ಆದರೂ, ವತ್ಸಲ-ಭಕ್ತಪ್ರಿಯನೆ! ಈಶ - ಎಲೈ ಸ್ವಾಮಿಯೆ! ಅನನ್ಯವೃತ್ತ್ಯಾ-ಏಕಾಂತವಾದ, ತಯಾ - ಆ, ಭಕ್ತ್ಯಾ - ಭಕ್ತಿಯಿಂದ, ಉಪಧಾವತಾಂ - ಮರೆಹೊಗುವವರನ್ನು, ಅನುಗೃಹಾಣ - ಅನುಗ್ರಹಿಸು ॥೩೮॥ ಜಗ...ಷು, ಜಗತ್ - ಜಗತ್ತಿನ, ಉದ್ಭವ - ಉತ್ಪತ್ತಿ, ಸ್ಥಿತಿ - ನೆಲೆ, ಲಯೇಷು - ನಾಶ, ಇವುಗಳಲ್ಲಿ, ದೈವತಃ - ಜೀವಾದೃಷ್ಟದಿಂದ, ಬಹು...ಯಾ, ಬಹು - ಅನೇಕ ವಿಧವಾಗಿ, ಭಿದ್ಯಮಾನ - ಭೇದವನ್ನು ಪಡೆದ, ಗುಣಯಾ - ಗುಣಗಳುಳ್ಳ, ಆತ್ಮಮಾಯಯಾ - ನಿನ್ನ ಮಾಯೆಯಿಂದ, ರಚಿ...ಯ, ರಚಿತ-ಮಾಡಲ್ಪಟ್ಟ, ಆತ್ಮಭೇದಮತಯೇ - ಬ್ರಹ್ಮಾದಿ ಭೇದಜ್ಞಾನವುಳ್ಳ, ಸ್ವಸಂಸ್ಥಯಾ - ಕೈವಲ್ಯ ರೂಪದಿಂದ, ವಿನಿ...ನೇ, ವಿನಿವರ್ತಿತ - ಹೋಗಲಾಡಿಸಲ್ಪಟ್ಟ, ಭ್ರಮ - ಭೇದಭ್ರಾಂತಿಯೂ, ಗುಣ - ಸತ್ವಾದಿಗುಣ

ಭೌತಿಕಶರೀರನಾಗಿ ಕಾಣುವುದು ನಿನ್ನ ಮಾಯಾವಿಲಾಸವಲ್ಲವೆ? ಯಾರು ನಿನ್ನ ದಿವ್ಯಶರೀರವನ್ನು ಭೌತಿಕವೆಂದು ತಿಳಿಯುವರೋ ಅವರು ಶುಷ್ಕಜ್ಞಾನಿಗಳೇ ಹೊರತು ತತ್ವಜ್ಞರಲ್ಲ" ಎಂದು ನುಡಿದರು ॥೩೭॥ ಅನಂತರದಲ್ಲಿ ಯೋಗಿಗಳು "ಎಲೈ ಭಕ್ತವತ್ಸಲನಾದ ಭಗವಂತನೆ! ಯಾವಪುರುಷನು ಸರ್ವಾತ್ಮಕನಾದ ನಿನ್ನನ್ನು ಅನನ್ಯಭಾವದಿಂದ ಕಾಣುವನೋ ಅವನಿಗಿಂತಲೂ ನಿನಗೆ ಪ್ರಿಯನಾವನೂ ಇಲ್ಲ. ಆದರೂ ಎಲೈ ಸ್ವಾಮಿಯು! ಅವ್ಯಭಿಚರಿತವಾದ ಭಕ್ತಿಯನ್ನಿಟ್ಟು, ಸ್ವಾಮಿಭೃತ್ಯಭಾವದಿಂದ ನಿನ್ನನ್ನಾರಾಧಿಸುವ ಭಕ್ತಜನರನ್ನನುಗ್ರಹಿಸಿ ಸಲಹು ॥೩೮॥ ಮಾಯಾರಹಿತವಾದ ಕೈವಲ್ಯರೂಪದಿಂದ, ಭೇದಭ್ರಾಂತಿಯನ್ನೂ ಆಭ್ರಾಂತಿಗೆ ಮೂಲಕಾರಣವಾದ ಗುಣಪ್ರಸಾರವನ್ನೂ ಹೋಗಲಾಡಿಸುವ ನಿತ್ಯಮುಕ್ತನಾದ ನೀನೇ, ಜೀವರ ಕರ್ಮಾನುಸಾರವಾಗಿ ಉಂಟಾಗುವ ಉತ್ಪತ್ತಿ, ಸ್ಥಿತಿ, ಪ್ರಳಯಗಳಲ್ಲಿ, ನಿನ್ನ ಮಾಯಾಗುಣಗಳಾದ ಸತ್ವಾದಿಗಳನ್ನು ಹಲವು ಬಗೆಯಾಗಿ ವಿಂಗಡಿಸಿ, ಆ ಆ ಗುಣಗಳಿಂದ ಬ್ರಹ್ಮಾದಿ ಭೇದ ಬುದ್ಧಿಯನ್ನುಂಟುಮಾಡುವೆ. ಆದುದರಿಂದ ಭಜನೀಯರಾದ ದೇವತೆಗಳು ಅನೇಕರಾಗಿದ್ದರೂ, ನೀನೇ ಸರ್ವಾತ್ಮಕನಾದುದರಿಂದ ಜ್ಞಾನಿಗಳಂತೆಯೇ, ನಿನ್ನನ್ನು ಭಕ್ತಿಯಿಂದ ಭಜಿಸುವ ಯೋಗಿಗಳನ್ನೂ

ಮತಯೇ ಸ್ವಸಂಸ್ಥಯಾ ವಿನಿವರ್ತಿತಭ್ರಮಗುಣಾತ್ಮನೇ ನಮಃ ॥೩೯॥ ಬ್ರ
ಹ್ಮೋವಾಚ ॥ ನಮಸ್ತೇ ಶ್ರಿತಸತ್ವಾಯ ಧರ್ಮಾದೀನಾಂಚ ಸೂತಯೇ ।
ನಿರ್ಗುಣಾಯ ಚ ಯತ್ಕಾಷ್ಠಾಂ ನಾಹಂ ವೇದಾಽಪರೇಪಿಚ ॥ ೪೦ ॥
ಅಗ್ನಿರುವಾಚ ॥ ಯತ್ತೇಜಸಾಽಹಂ ಸುಸಮಿದ್ಧತೇಜಾ ಹವ್ಯಂವಹೇ ಸ್ವ
ಧ್ವರ ಆಜ್ಯಸಿಕ್ತಂ । ತಂ ಯಜ್ಞಿಯಂ ‡ ಪಂಚವಿಧಂಚ ಪಂಚಭಿಃ ಸ್ವಿಷ್ಟಂ

ಗಳು, ಇವುಗಳ ಆತ್ಮನೇ - ಸ್ವರೂಪವುಳ್ಳ, ತೇ-ನಿನಗೆ, ನಮಃ-ನಮಸ್ಕಾರವು ॥೩೯॥ ಆಕಾಶವಾಣಿಯು ಹೇಳುತ್ತದೆ, ಯತ್ಕಾಷ್ಠಾಂ - ಯಾರತತ್ವವನ್ನು, ಅಹಂ - ನಾನು, ನವೇದ - ತಿಳಿಯಲಾರೆನೋ, ಅಪರೇಪಿಚ - ಇತರರೂ, ನವಿದುಃ - ತಿಳಿಯಲಿಲ್ಲವೋ, ಅಂತಹ, ಶ್ರಿತಸತ್ವಾಯ - ಸತ್ವಗುಣವನ್ನಾಶ್ರಯಿಸಿದ ಧರ್ಮಾದೀನಾಂ - ಧರ್ಮಾದಿ ಫಲಗಳನ್ನು, ಸೂತಯೇ - ಕೊಡುವ, ನಿರ್ಗುಣಾಯ - ಗುಣರಹಿತನಾದ, ತೇ - ನಿನಗೆ, ನಮಃ - ನಮಸ್ಕಾರವು ॥೪೦॥

ಅಗ್ನಿಯು ಹೇಳುತ್ತಾನೆ! ಯತ್ತೇಜಸಾ - ಯಾರ ತೇಜಸ್ಸಿನಿಂದ, ಅಹಂ - ನಾನು, ಸುಸಮಿದ್ಧತೇಜಾಃ - ಪ್ರದೀಪ್ತವಾದ ತೇಜಸ್ಸುಳ್ಳವನಾಗಿ, ಸ್ವಧ್ವರೇ - ಉತ್ತಮವಾದ ಯಜ್ಞದಲ್ಲಿ, ಆಜ್ಯಸಿಕ್ತಂ - ತುಪ್ಪದಿಂದ ನೆನೆಯಿಸಲ್ಪಟ್ಟ, ಹವ್ಯಂ - ಹವಿಸ್ಸನ್ನು, ವಹೇ - ಸ್ವೀಕರಿಸುವೆನೋ, ಯಜ್ಞಿಯಂ - ಯಜ್ಞಪಾಲಕನಾದ, ಪಂಚಭಿಃ - ಐದು, ಯಜುರ್ಭಿಃ - ಮಂತ್ರಗಳಿಂದ, ಸ್ವಿಷ್ಟಂ - ಪೂಜಿಸಲ್ಪಟ್ಟ, ಪಂಚವಿಧಂ - ಐದುವಿಧವಾಗಿರುವ, ತಂ - ಆ, ಯಜ್ಞಂ - ಯಜ್ಞಮೂರ್ತಿಯನ್ನು, ಪ್ರಣತೋಸ್ಮಿ - ನಮಸ್ಕರಿಸುವೆನು ॥೪೧॥ ದೇವತೆಗಳು ಹೇಳುತ್ತಾರೆ, ಅದ್ಯ - ಈಗ, ಯಃ - ಯಾವನೀನು, ಅಕ್ಷ್ಣೋಃ - ಕಣ್ಣು

ಅನುಗ್ರಹಿಸು" ಎಂದು ಹೊಗಳಿದರು ॥೩೯॥ ತರುವಾಯ ಶಬ್ದ ಬ್ರಹ್ಮಸ್ವರೂಪವಾದ ಆಕಾಶವಾಣಿಯು "ಎಲೈ ಧರ್ಮಾದಿ ಪುರುಷಾರ್ಥ ಪ್ರದನಾದ ಸತ್ವಮೂರ್ತಿಯೆ! ನಿರ್ಗುಣನಾದ ನಿನಗೆ ನಮಸ್ಕಾರವು, ಯಾವ ಮಹಾತ್ಮನ ತತ್ವವನ್ನು, ನಾನಾಗಲಿ, ರುದ್ರಾದಿಗಳಾಗಲಿ ತಿಳಿಯಲಾರೆವೋ, ಅಂತಹ ನೀನು, ಸತ್ವವನ್ನಾಶ್ರಯಿಸಿದ ಸಗುಣಮೂರ್ತಿಯೋ, ಗುಣಾತೀತವಾದ ಅನಿರ್ವಚನೀಯ ತತ್ವವೋ, ನಾನರಿಯೆನು" ಎಂದು ಸ್ತುತಿಸಿತು ॥೪೦॥ ಬಳಿಕ ಯಜ್ಞಮೂರ್ತಿಯು "ಎಲೈ ಭಗವಂತನೆ! ಯಾವನ ತೇಜಸ್ಸಿನಿಂದ ನಾನು ದೀಪ್ತ ತೇಜಸ್ಕನಾಗಿ ಉತ್ತಮ ಯಜ್ಞಗಳಲ್ಲಿ ಆಜ್ಯಸಿಕ್ತಗಳಾದ ಹವಿರ್ಭಾಗಗಳನ್ನು ವಹಿಸಿ ದೇವತೆಗಳನ್ನು ತೃಪ್ತಿಗೊಳಿಸುವೆನೊ, ಐದು ಮಂತ್ರಗಳಿಂದ ಐದು ಬಗೆಯಾಗಿ ಹೊಗಳಲ್ಪಟ್ಟ ಆಯಜ್ಞಮೂರ್ತಿಯಾದ ನಿನ್ನನ್ನೇ ವಂದಿಸುವೆನು" ಎಂದುಸುರಿದನು. ಆಗ ದೇವತೆಗಳು

‡ ಟಿ. ಶ್ರುತಿಸ್ಮೃತಿಗಳಲ್ಲಿ ಹೇಳುವಂತೆ, ಯಜ್ಞವೆಂಬುದು, ಅಗ್ನಿಹೋತ್ರ, ದರ್ಶಪೂರ್ಣಮಾಸ, ಚಾತುರ್ಮಾಸ್ಯ, ಪಶು, ಸೋಮ, ಎಂದು ಐದು ಬಗೆಯಾಗಿರುವುದು. ಈ ಯಜ್ಞಗಳಲ್ಲಿ ಕೆಳಗೆ ವಿವರಿಸುವ ಐದು ಮಂತ್ರಗಳಿಂದ ಭಗವಂತನನ್ನು ಆರಾಧಿಸಬೇಕು. ಶ್ರು॥ ಸಏಷಯಜ್ಞಃ ಪಂಚವಿಧೋಽಗ್ನಿಹೋತ್ರಂ, ದರ್ಶಪೌರ್ಣಮಾಸೌ, ಚಾತುರ್ಮಾಸ್ಯಾನಿ, ಪಶು, ಸ್ಸೋಮ ಇತಿ. ಐದು ಮಂತ್ರಗಳು. ಶ್ರು॥ (1) ಆಶ್ರಾವಯೇತಿ ಚತುರಕ್ಷರಂ, (2) ಅಸ್ತು ಶ್ರೌಷಡಿತಿ ಚತುರಕ್ಷರಂ, (3) ಯಜೇತಿ ದ್ವ್ಯಕ್ಷರಂ, (4) ಯೇಯಜಾಮಹ ಇತಿ ಪಂಚಾಕ್ಷರಂ, (5) ದ್ವ್ಯಕ್ಷರೋ ವಷಟ್ಕಾರಃ ॥ (ತೈತ್ತಿರೀಯಕ) (ಸ್ಮೃತಿ) ಶ್ಲೋ॥ ಚತುರ್ಭಿಶ್ಚ ಚತುರ್ಭಿಶ್ಚ ದ್ವಾಭ್ಯಾಂ ಪಂಚಭಿ ರೇವಚ। ಹೂಯತೇಚ ಪುನರ್ದ್ವಾಭ್ಯಾಂ ಸಮೇ ವಿಷ್ಣುಃ ಪ್ರಸೀದತು ॥

ಯಜುರ್ಭಿಃ ಪ್ರಚರಿತೋಽಸ್ಮಿನ್ ಯಜ್ಞೇ ॥೪೧॥ ದೇವಾ ಊಚುಃ ॥ ಪುರಾ ಕಲ್ಪಾಪಾಯೇ ಸ್ವಕೃತಮುದರೀಕೃತ್ಯ ವಿಕೃತಂ ತ್ವಮೇವಾದ್ಯಸ್ತಸ್ಮಿನ್ ಸಲಿಲ ಉರುಗೇಂದ್ರಾಧಿಶಯನೇ। ಪುಮಾನ್ ಶೇಷೇ ಸಿದ್ಧೈರ್ಹೃದಿ ವಿಮೃಶಿತಾಧ್ಯಾತ್ಮಪದವಿಃ ಸ ಏವಾದ್ಯಾಕ್ಷ್ಣೋರ್ಯಃ ಪಥಿ ಚರಸಿ ಭೃತ್ಯಾನವಸಿ ನಃ ॥೪೨॥ ಗಂಧರ್ವಾ ಊಚುಃ ॥ ಅಂಶಾಂಶಾಸ್ತೇ ದೇವ ! ಮರೀಚ್ಯಾದಯ ಏತೇ ಬ್ರಹ್ಮೇಂದ್ರಾದ್ಯಾ ದೇವಗಣಾ ರುದ್ರಪುರೋಗಾಃ । ಕ್ರೀಡಾಭಾಂಡಂ ವಿಶ್ವಮಿದಂ ಯಸ್ಯ ವಿಭೂಮನ್ ತಸ್ಮೈ ನಿತ್ಯಂ ನಾಥ ! ನಮಸ್ತೇ ಕರವಾಮ ॥೪೩॥ ವಿದ್ಯಾಧರಾ ಊಚುಃ ॥ ತ್ವನ್ಮಾಯಯಾ...

---

ಗಳ, ಪಥಿ - ದಾರಿಯಲ್ಲಿ, ಚರಸಿ - ಸಂಚರಿಸುವೆಯೋ, ಭೃತ್ಯಾನ್ - ಕಿಂಕರರಾದ, ನಃ - ನಮ್ಮನ್ನು, ಅವಸಿ - ಪಾಲಿಸುವೆಯೊ, ಆದ್ಯಃಪುಮಾನ್ - ಪುರಾಣ ಪುರುಷನಾದ, ಸಏವತ್ವಂ - ಆ ನೀನೇ, ಪುರಾ - ಮೊದಲು, ಕಲ್ಪಾಪಾಯೇ - ಪ್ರಳಯದಲ್ಲಿ, ಸ್ವಕೃತಂ - ನಿನ್ನಿಂದ ಮಾಡಲ್ಪಟ್ಟ, ವಿಕೃತಂ - ಜಗತ್ತನ್ನು, ಉದರೀಕೃತ್ಯ - ಒಳಗೊಳಿಸಿ, ತಸ್ಮಿನ್‌ಸಲಿಲೇ - ಆ ಪ್ರಳಯ ಜಲದಲ್ಲಿ, ಉರ...ನೇ - ಶೇಷತಲ್ಪದಲ್ಲಿ, ಸಿದ್ಧೈಃ - ಸಿದ್ಧರಿಂದ, ಹೃದಿ - ಮನಸ್ಸಿನಲ್ಲಿ, ವಿಮೃ...ವಿಃ, ವಿಮೃಶಿತ- ಧ್ಯಾನಿಸಲ್ಪಟ್ಟ, ಅಧ್ಯಾತ್ಮಪದವಿಃ- ಜ್ಞಾನಮಾರ್ಗವುಳ್ಳವನಾಗಿ, ಶೇಷೇ - ಮಲಗುವೆ ॥೪೨॥ ಗಂಧರ್ವರು ಹೇಳುತ್ತಾರೆ. ಹೇನಾಥ - ಎಲೈಸ್ವಾಮಿಯೆ ! ವಿಭೂಮನ್ - ಎಲೈ ಸರ್ವವ್ಯಾಪಕನೆ ? ಯಸ್ಯತೇ - ಯಾವ ನಿನಗೆ, ಏತೇ ಮರೀಚ್ಯಾದಯಃ- ಈ ಮರೀಚಿ ಮೊದಲಾದ ಪ್ರಜೇಶ್ವರರೂ, ಬ್ರಹ್ಮೇಂದ್ರಾದ್ಯಾಃ - ಬ್ರಹ್ಮ, ಇಂದ್ರ ಮೊದಲಾದ, ರುದ್ರಪುರೋಗಾಃ - ರುದ್ರನೇ ಮುಂತಾದ, ದೇವಗಣಾಃ - ದೇವತಾ ಸಮೂಹವು, ಅಂಶಾಂಶಾಃ - ಅಂಶದ ಅಂಶವಾಗಿರುವರೋ, ಇದಂವಿಶ್ವಂ - ಈ ಜಗತ್ತು, ಕ್ರೀಡಾಭಾಂಡಂ - ಕ್ರೀಡಾ ಸಾಮಗ್ರಿಯಾಗಿರುವುದೋ, ತಸ್ಮೈತೇ - ಅಂತಹ ನಿನಗೆ, ನಿತ್ಯಂ - ಯಾವಾಗಲೂ, ನಮಃ - ನಮಸ್ಕಾರವನ್ನು, ಕರವಾಮ - ಮಾಡುವೆವು ॥೪೩॥ ವಿದ್ಯಾಧರರು ಹೊಗಳುತ್ತಾರೆ. ತ್ವನ್ಮಾಯಯಾ - ನಿನ್ನ ಮಾಯೆಯಿಂದ, ಅರ್ಥಂ - ಪುರು

---

“ಎಲೈ ಪರಮ ಪುರುಷನೆ ! ಆದ್ಯಂತ ರಹಿತನಾದ ಯಾವ ನೀನು, ಮುನ್ನ ಮಹಾಪ್ರಳಯದಲ್ಲಿ, ನಿನ್ನ ಮಾಯೆಯಿಂದ ನಿರ್ಮಿತವಾದ ಈ ಜಗತ್ತನ್ನು ನಿನ್ನಲ್ಲಿಯೇ ಅಡಗಿಸಿಕೊಂಡು, ಆ ಪ್ರಳಯಜಲದಲ್ಲಿ ಶೇಷಶಯನದ ಮೇಲೆ ಮಲಗಿ, ತಪಸ್ಸಿದ್ಧರಾಗಿ ಜ್ಞಾನಮಾರ್ಗ ಪಾರಂಗತರಾದ ಜನೋಲೋಕ ವಾಸಿಗಳಿಂದ ಹೊಗಳಿಸಿಕೊಳ್ಳುವೆಯೋ, ಆ ನೀನೇ ಈಗ ನಮ್ಮ ದೃಷ್ಟಿಗೋಚರನಾಗಿ, ಭೃತ್ಯರಾದ ನಮ್ಮನ್ನು ಕಾಪಾಡುತ್ತಿರುವೆ, ಆದುದರಿಂದ, ನಾವು ದೇವತೆಗಳೆನ್ನಿಸಿಕೊಂಡಿದ್ದರೂ ಜಗದಾದ್ಯಂತಗಳೆರಡಲ್ಲಿಯೂ ಸಾಕ್ಷಿಯಾಗಿರುವ ನೀನೇ ನಿಜವಾದ ದೇವನು,, ಎಂದು ಹೊಗಳಿದರು ॥೪೨॥ ಆಮೇಲೆ ಗಂಧರ್ವರು, “ಎಲೈ ಸರ್ವಾಂತರ್ಯಾಮಿಯೆ ! ಯಾವ ಮಹಾತ್ಮನಿಗೆ ಈ ಜಗತ್ತೆಲ್ಲವೂ ಆಟದ ಪೆಟ್ಟಿಗೆಯಾಗಿರುವುದೊ, ಅಂತಹ ನಿನಗೆ ಈ ಮರೀಚಿಮೊದಲಾದ ಪ್ರಜೇಶ್ವರರು, ಬ್ರಹ್ಮ, ಇಂದ್ರ, ರುದ್ರರೇ ಮೊದಲಾದ ದೇವತೆಗಳೂ ಅಂಶಾಂಶಪುರುಷರಾಗಿರುವರು. ಇದನ್ನು ತಿಳಿದಿದ್ದರೂ ನಾವು ಭಯದಿಂದ ಎಲ್ಲರನ್ನೂ, ಪರಮೇಶ್ವರನೆಂದೇ ಹೊಗಳುವೆವು. ಪರಮಾರ್ಥವಾಗಿ ಪರಮೇಶ್ವರನು ನೀನೇ ಹೊರತು ಬೇರೆಯಿಲ್ಲ,, ಎಂದು ಕೊಂಡಾಡಿದರು ॥೪೩॥ ತರುವಾಯ ವಿದ್ಯಾ

ರ್ಥ ಮಭಿಪದ್ಯ ಕಲೇಬರೇಽಸ್ಮಿನ್ ಕೃತ್ವಾಮಮಾಽಹಮಿತಿ ದುರ್ಮತಿ
ರುತ್ಪಥೈ ಸ್ವೈಃ । ಕ್ಷಿಪ್ತೋಽಪ್ಯಸದ್ವಿಷಯ ಲಾಲಸ ಆತ್ಮಮೋಹಂ ಯು
ಷ್ಮತ್ಕಥಾಽಮೃತನಿಷೇವಕ ಉದ್ವ್ಯುದಸ್ಯೇತ್ ॥೪೪॥ ಬ್ರಾಹ್ಮಣಾ
ಊಚುಃ ॥ ತ್ವಂ ಕ್ರತು ಸ್ತ್ವಂ ಹವಿ ಸ್ತ್ವಂ ಹುತಾಶ ಸ್ಸ್ವಯಂ ತ್ವಂ ಹಿ
ಮಂತ್ರ ಸ್ಸಮಿದ್ದರ್ಭ ಪಾತ್ರಾಣಿಚ । ತ್ವಂ ಸದಸ್ಯರ್ತ್ವಿಜೋ ದಂಪತೀ ದೇ
ವತಾ ಅಗ್ನಿಹೋತ್ರಂ ಸ್ವಧಾ ಸೋಮ ಆಜ್ಯಂ ಪಶುಃ ॥೪೫॥ ತ್ವಂಪುರಾ

---

ಷಾರ್ಥ ಸಾಧನವಾದ ಮಾನವ ದೇಹವನ್ನು, ಅಭಿಪದ್ಯ - ಹೊಂದಿ, ಅಸ್ಮಿನ್‌ಕಳೇಬರೇ - ಈ ಶರೀರದಲ್ಲಿ, ಮಮ - ನನ್ನದು, ಅಹಂ - ನಾನು, ಇತಿ - ಎಂದು, ದುರ್ಮತಿಃ - ದುರ್ಬುದ್ಧಿಯುಳ್ಳವನಾಗಿ, ಸ್ವೈಃ - ತನ್ನವರಿಂದ, ಕ್ಷಿಪ್ತೋಽಪಿ - ತಿರಸ್ಕರಿಸಲ್ಪಟ್ಟರೂ, ಅಸ...ಸಃ, ದುಷ್ಟಗಳಾದ ಶಬ್ದಾದಿ ವಿಷಯಗಳಲ್ಲಿ ಆಸಕ್ತನಾಗಿದ್ದರೂ, ಯುಷ್ಮ...ಕಃ, ನಿಮ್ಮ ಕಥಾಮೃತವನ್ನು ಪಾನಮಾಡುವವನು, ಆತ್ಮಮೋಹಂ - ತನ್ನ ಅಹಂಕಾರ ಗ್ರಂಥಿಯನ್ನು, ಉದ್ವ್ಯುದಸ್ಯೇತ್-ಪರಿತ್ಯಾಗ ಮಾಡುವನು ॥೪೪॥

ಬ್ರಾಹ್ಮಣರು ಹೊಗಳುತ್ತಾರೆ:—ತ್ವಂ - ನೀನು, ಕ್ರತುಃ - ಯಜ್ಞವು, ತ್ವಂ - ನೀನು, ಹವಿಃ - ಪುರೋಡಾಶವು, ತ್ವಂ - ನೀನು, ಸ್ವಯಂ - ಸಾಕ್ಷಾತ್ತಾಗಿ, ಹುತಾಶಃ - ಅಗ್ನಿಯು, ತ್ವಂ - ನೀನು, ಮಂತ್ರಃ - ಮಂತ್ರವು, ತ್ವಂ - ನೀನು, ಸಮಿ..ಣಿಚ - ಸಮಿತ್ತು 'ದರ್ಭೆ' ಯಜ್ಞಪಾತ್ರೆಗಳು, ತ್ವಂ - ನೀನು, ಸದ..ಜಃ - ಸದಸ್ಯರು, ಋತ್ವಿಜರು, ದಂಪತೀ - ಯಜಮಾನ ಯಜಮಾನಿಯರು, ದೇವತಾಃ - ಇಂದ್ರಾದಿಗಳು, ಅಗ್ನಿಹೋತ್ರಂ - ಅಗ್ನಿಹೋತ್ರವೆಂಬ ಕರ್ಮವು, ಸ್ವಧಾ - ಸ್ವಧೆಯು, ಸೋಮಃ - ಸೋಮವು, ಆಜ್ಯಂ - ಆಜ್ಯವು, ಪಶುಃ - ಪಶುವು ॥೪೫॥ ಹೇ ತ್ರಯೀಗಾತ್ರ - ಎಲೈ ವೇದಮೂರ್ತಿಯೇ? ಯ

---

ಧರರು, ,,ಎಲೈ ಪುಣ್ಯಶ್ಲೋಕನೆ ! ನಿನ್ನ ಮಾಯೆಯಿಂದ ಕಲ್ಪಿತವಾಗಿರುವ ಪುರುಷಾರ್ಥ ಸಾಧನವೆನಿಸಿದ, ಮನುಷ್ಯಶರೀರವನ್ನು ಪಡೆದು, ಈ ಕಳೇಬರದಲ್ಲಿ ಅಹಂಕಾರ ಮಮಕಾರಗಳನ್ನಿಟ್ಟು ಮತಿಗೆಟ್ಟು, ಲೋಕಮರ್ಯಾದೆಯನ್ನುಲ್ಲಂಘಿಸಿದ ತನ್ನ ಪುತ್ರಾದಿಗಳಿಂದ ತಿರಸ್ಕೃತನಾದರೂ, ತುಚ್ಛಗಳಾದ ಶಬ್ದಾದಿ ವಿಷಯಗಳಲ್ಲಿ ಆಸೆಯನ್ನಳಿಯದೆ, ವಿಷಯ ಲಂಪಟನಾದ ದುರಾತ್ಮನೂಸಹ, ನಿನ್ನ ದಿವ್ಯ ಕಥಾಮೃತವನ್ನು ಪಾನ ಮಾಡಿದ ಕೂಡಲೇ ಅಹಂಕಾರ ಮಮಕಾರಗಳನ್ನಳಿದು ಕೃತಾರ್ಥನಾಗುವನು. ಆದುದರಿಂದ ನಾವು ವಿದ್ಯಾಧರರೆಂದು ಹೆಸರನ್ನು ಪಡೆದು, ವಿದ್ಯೆಗಳಿಂದ ಸಂಪದಗಳನ್ನು ಸಂಪಾದಿಸಿದ್ದರೂ, ಮೋಹ ನಿವೃತ್ತಿಯೆಂಬುದು ನಿನ್ನ ಕಥಾಶ್ರವಣದಿಂದುಂಟಾಗಬೇಕಲ್ಲದೆ ಬೇರೆಯಿಲ್ಲ,, ಎಂದು ಕೈವಾರಿಸಿದರು ॥೪೪॥ ಅನಂತರದಲ್ಲಿ ಅಲ್ಲಿ ನೆರದಿದ್ದ ಬ್ರಾಹ್ಮಣರು "ಭಗವನ್ನಾಮ ಮಹಾತ್ಮ್ಯವರ್ಣನವಾತಿರಲಿ,ಪ್ರಕೃತವಾದ ಯಜ್ಞವನ್ನು ಪೂರ್ತಿಗೊಳಿಸಿಕೊಳ್ಳಬೇಕು"ಎಂದು ಯೋಚಿಸಿ,,ಎಲೈಯಜ್ಞಮೂರ್ತಿಯೆ!ಯಜ್ಞವು,ಪುರೋಡಾಶ ಮೊದಲಾದ ಹವಿರ್ದ್ರವ್ಯವು, ದಕ್ಷಿಣಾಗ್ನಿ, ಗಾರ್ಹಪತ್ಯ, ಆಹವನೀಯಗಳೆಂಬ ಅಗ್ನಿಗಳು, ವೇದೋಕ್ತಗಳಾದ ಯಜ್ಞಮಂತ್ರಗಳು, ಸಮಿತ್ತು, ದರ್ಭೆ, ಯಜ್ಞ ಪಾತ್ರೆಗಳು, ಸದಸ್ಯರು, ಋತ್ವಿಜರು, ಯಜಮಾನನು, ಯಜಮಾನಪತ್ನಿಯು, ಇಂದ್ರಾದಿದೇವತೆಗಳು, ಅಗ್ನಿ ಹೋತ್ರವೆಂಬ ಕರ್ಮ ವಿಶೇಷವು, ಸ್ವಾಹಾ ಸ್ವಧೆಗಳು, ಸೋಮವು, ಆಜ್ಯವು, ಪಶುವು ಇವುಗಳೆಲ್ಲವೂ ನೀನೇ ಅಲ್ಲದೆ ಬೇರೆಯಿಲ್ಲ ॥೪೫॥ ಎಲೈ ವೇದಮೂರ್ತಿಯೇ ! ಯಜ್ಞ ಕ್ರತುಗಳ ಸ್ವರೂಪ

ಗಾಂ ರಸಾಯಾ ಮಹಾಸೂಕರೋ ದಂಷ್ಟ್ರಯಾ ಪದ್ಮಿನೀಂ ವಾರಣೇಂದ್ರೋ
ಯಥಾ । ಸ್ತೂಯಮಾನೋ ನದಲ್ಲೀಲಯಾ ಯೋಗಿಭಿರ್ವ್ಯುಜ್ಜಹರ್ಥ
ತ್ರಯೀಗಾತ್ರ ! ಯಜ್ಞಕ್ರತುಃ ॥೪೬॥ ಸ ಪ್ರಸೀದ ತ್ವಮಸ್ಮಾಕಮಾ
ಕಾಂಕ್ಷತಾಂ ದರ್ಶನಂ ತೇ ಪರಿಭ್ರಷ್ಟಸತ್ಕರ್ಮಣಾಂ । ಕೀರ್ತ್ಯಮಾನೇ
ನೃಭಿರ್ನಾಮ್ನಿ ಯಜ್ಞೇಶ ! ತೇ ಯಜ್ಞವಿಘ್ನಾಃ ಕ್ಷಯಂ ಯಾಂತಿ ತ
ಸ್ಮೈ ನಮಃ ॥೪೭॥ ಮೈತ್ರೇಯಃ ॥ ಇತಿ ದಕ್ಷಃ ಕವಿರ್ಯಜ್ಞಂ ಭದ್ರ !
ರುದ್ರಾಽವಮರ್ಶಿತಂ । ಕೀರ್ತ್ಯಮಾನೇ ಹೃಷೀಕೇಶೇ ಸನ್ನಿನ್ಯೇ ಯಜ್ಞ

ಜ್ಞಕ್ರತುಃ - ಯಜ್ಞ, ಕ್ರತುಗಳ ಸ್ವರೂಪನಾದ, ತ್ವಂ - ನೀನು, ಪುರಾ - ಪೂರ್ವದಲ್ಲಿ, ಮಹಾ ಸೂಕರಃ- ಯಜ್ಞವರಾಹ ಮೂರ್ತಿಯಾಗಿ, ಯೋಗಿಭಿಃ - ಯೋಗಿಗಳಿಂದ, ಸ್ತೂಯಮಾನಃ - ಹೊಗಳಲ್ಪಡುತ್ತಾ, ದಂಷ್ಟ್ರಯಾ - ಕೋರೆದಾಡೆಯಿಂದ, ಪದ್ಮಿನೀಂ - ತಾವರೆ ಬಳ್ಳಿಯನ್ನು, ವಾರಣೇಂದ್ರೋ ಯಥಾ - ಕಾಡಾನೆಯಂತೆ, ನದನ್ - ಗರ್ಜಿಸುತ್ತಾ, ಲೀಲಯಾ - ವಿಲಾಸವಾಗಿ, ರಸಾಯಾಃ - ಪಾತಾಳದಿಂದ, ಗಾಂ ಭೂಮಿಯನ್ನು, ವ್ಯುಜ್ಜಹಾರ್ಥ - ಉದ್ಧರಿಸಿದೆ ॥೪೬॥ ಹೇ ಯಜ್ಞೇಶ - ಎಲೈ ಯಜ್ಞಪಾಲಕನೆ? ಸಃ -ಅಂತಹ, ತ್ವಂ - ನೀನು, ಪರಿ...ಣಾಂ- ವೈದಿಕ ಕರ್ಮವನ್ನು ಪೂರೈಸದೆ ಭ್ರಷ್ಟರಾಗಿರುವ, ತೇ- ನಿನ್ನ, ದರ್ಶನಂ - ದರ್ಶನವನ್ನು, ಆಕಾಂಕ್ಷತಾಂ - ಬಯಸುತ್ತಿರುವ, ಅಸ್ಮಾಕಂ - ನಮ್ಮಲ್ಲಿ, ಪ್ರಸೀದ - ಪ್ರಸನ್ನನಾಗು, ಯಸ್ಯತೇ - ಯಾವ ನಿನ್ನ, ನಾಮ್ನಿ - ಹೆಸರು, ನೃಭಿಃ - ಪುರುಷರಿಂದ, ಕೀರ್ತ್ಯಮಾನೇ - ಹೊಗಳಲ್ಪಟ್ಟರೆ, ಯಜ್ಞವಿಘ್ನಾಃ - ಯಜ್ಞದ ವಿಘ್ನಗಳು, ಕ್ಷಯಂ - ನಾಶವನ್ನು, ಯಾಂತಿ - ಹೊಂದುವುವೋ ತಸ್ಮೈತೇ - ಅಂತಹ ನಿನಗೆ, ನಮಃ - ನಮಸ್ಕಾರವು ॥೪೭॥

ಮೈತ್ರೇಯನು ಹೇಳುತ್ತಾನೆ:—ಹೇ ಭದ್ರ - ಎಲೈ ಮಂಗಳಕರನಾದ ವಿದುರನೆ ! ಇತಿ - ಇಂತು, ಯಜ್ಞಭಾವನೇ - ಯಜ್ಞಪಾಲಕನಾದ, ಹೃಷೀಕೇಶೇ - ವಿಷ್ಣುವು, ಕೀರ್ತ್ಯಮಾನೇ - ಹೊಗಳಲ್ಪಡಲು, ಕವಿಃ - ಕರ್ಮಕುಶಲನಾದ, ದಕ್ಷಃ - ದಕ್ಷನು, ರುದ್ರಾವಮರ್ಶಿತಂ - ರುದ್ರನಿಂದ ನಾಶಗೊಳಿಸಲ್ಪಟ್ಟ,

ನಾಗಿರುವ ನೀನು, ಮುನ್ನ ಯಜ್ಞವರಾಹ ರೂಪವನ್ನು ಪಡೆದು, ಮಹಾಯೋಗಿಗಳಿಂದ ಸ್ತೂಯಮಾನನಾಗಿ, ಕೆಸರಿನಿಂದ ಕಮಲಿನಿಯನ್ನು ಕೀಳುವ ಕಾಡಾನೆಯಂತೆ, ರಸಾತಲದಲ್ಲಿ ಅಡಗಿದ್ದ ಭೂಮಂಡಲವನ್ನು ಲೀಲೆಯಿಂದ ಕೋರೆದಾಡೆಯಲ್ಲಿ ಧರಿಸಿ, ಉದ್ಧರಿಸಿದೆ ॥೪೬॥ ಎಲೈ ಯಜ್ಞಪಾಲಕನೆ ! ನಾವು ನಿನ್ನ ಆರಾಧನರೂಪವಾದ ಯಜ್ಞಕರ್ಮವನ್ನು ಪೂರೈಸದೆ ಭ್ರಷ್ಟರಾಗಿ, ಆ ದೋಷವನ್ನು ಕಳೆದುಕೊಳ್ಳುವುದಕ್ಕಾಗಿ ನಿನ್ನ ದರ್ಶನವನ್ನೇ ಬಯಸುತ್ತಿರುವೆವು. ಆದುದರಿಂದ ನಮ್ಮನ್ನನುಗ್ರಹಿಸು. ಎಲೈ ಭಗವಂತನೆ ! ಮನುಷ್ಯನಾದವನು ಯಾವ ನಿನ್ನ ದಿವ್ಯನಾಮವನ್ನು ಸ್ಮರಿಸಿದ ಮಾತ್ರದಿಂದಲೇ ಸಕಲ ಯಜ್ಞ ವಿಘ್ನಗಳು ಪಲಾಯನಗೈಯುವುವೋ, ಅಂತಹ ನಿನಗೆ ಪ್ರಣಾಮಗಳನ್ನಾಚರಿಸುವೆವು,, ಎಂದು ಮೊರೆಯಿಟ್ಟರು ॥೪೭॥ ಆಯುಷ್ಯಮಂಗಳಮೂರ್ತಿಯಾದ ವಿದುರನೆ ! ಆ ದಕ್ಷಾಧ್ವರದಲ್ಲಿ ನೆರೆದಿರುವವರೆಲ್ಲರೂ ಈ ರೀತಿಯಾಗಿ ಯಜ್ಞ ಪಾಲಕನಾದ ವಿಷ್ಣುವನ್ನು ಕೊಂಡಾಡಿದ ಬಳಿಕ, ಕರ್ಮ ಕುಶಲನಾದ ದಕ್ಷಪ್ರಜಾಪತಿಯು, ಮುನ್ನ ವೀರಭದ್ರನಿಂದ ಧ್ವಂಸಗೊಳಿಸಲ್ಪಟ್ಟ ಯಜ್ಞದಲ್ಲಿ ರುದ್ರನಿಗೆ ಹವಿರ್ಭಾಗವನ್ನು ಕೊಡುವಂತೊಪ್ಪಿ, ಯಾಗ

ಭಾವನೇ ॥೪೮॥ ಭಗವಾನ್ ಸ್ವೇನ ಭಾಗೇನ ಸರ್ವಾತ್ಮಾ ಸರ್ವಭಾಗ
ಭುಕ್ । ದಕ್ಷಂ ಬಭಾಷ ಆಭಾಷ್ಯ ಪ್ರೀಯಮಾಣ ಇವಾನಘ ! ॥೪೯॥ ಶ್ರೀ
ಭಗವಾನ್ ॥ ಅಹಂ ಬ್ರಹ್ಮಾ ಚ ಶರ್ವಶ್ಚ ಜಗತಃ ಕಾರಣಂ ಪರಂ । ಆತ್ಮೇ
ಶ್ವರ ಉಪದ್ರಷ್ಟಾ ಸ್ವಯಂ ದೃಗವಿಶೇಷಣಃ॥೫೦॥ಆತ್ಮಮಾಯಾಂ ಸಮಾವಿಶ್ಯ
ಸೋಽಹಂ ಗುಣಮಯೀಂ ! ದ್ವಿಜ ! ಸೃಜನ್ ರಕ್ಷನ್ ಹರನ್ ವಿಶ್ವಂ ದಧ್ರೇ
ಸಂಜ್ಞಾಂ ಕ್ರಿಯೋಚಿತಾಂ॥೫೧॥ ತಸ್ಮಿನ್ ಬ್ರಹ್ಮಣ್ಯದ್ವಿತೀಯೇ ಕೇವಲೇ ಪರ

---

ಅಥವಾ ರುದ್ರನಿಂದ ಸಂಬಂಧಿಸಲ್ಪಟ್ಟ, ಯಜ್ಞಂ - ಯಜ್ಞವನ್ನು, ಸನ್ನಿನ್ಯೇ - ನಡೆಯಿಸಿದನು ॥೪೮॥ ಹೇ ಅನಘ - ಎಲೈ ಪುಣ್ಯಶಾಲಿಯೆ ! ಸರ್ವಾತ್ಮಾ - ಸರ್ವಸ್ವರೂಪನಾದ, ಭಗವಾನ್ - ಭಗವಂತನು ಸರ್ವಭಾಗಭುಗಪಿ - ಸಕಲ ಭಾಗಗಳನ್ನೂ ಭುಜಿಸುವವನಾದರೂ, ಪ್ರೀಯಮಾಣ ಇವ - ತ್ರಿಕಪಾಲಪು ರೋಡಾಶಭಾಗದಿಂದಲೇ ತೃಪ್ತನಾದಂತಾಗಿ, ದಕ್ಷಂ - ದಕ್ಷನನ್ನು, ಆಭಾಷ್ಯ - ಕರೆದು, ಬಭಾಷೇ ಹೇಳಿದನು ॥ ೪೯ ॥ ಯೋಽಹಂ - ಯಾವ ನಾನು, ಜಗತಃ - ಜಗತ್ತಿಗೆ ಪರಂ - ನಿರತಿಶಯವಾದ, ಕಾ ರಣಂ - ಕಾರಣವೋ, ಆತ್ಮೇಶ್ವರಃ - ಆತ್ಮನೂ ಈಶ್ವರನೂ ಆಗಿರುವೆನೋ, ಉಪದ್ರಷ್ಟಾ - ಸಾಕ್ಷಿಯಾ ಗಿರುವೆನೊ, ಸ್ವಯಂದೃಕ್ - ಸ್ವಪ್ರಕಾಶನೋ, ಅವಿಶೇಷಣಃ - ಭೇದರಹಿತನೋ, ಸಃ - ಆನಾನೇ, ಬ್ರಹ್ಮಾ ಚ - ಬ್ರಹ್ಮನೂ, ಶರ್ವಶ್ಚ - ರುದ್ರನೂ ಆಗಿರುವೆನು ॥ ೫೦ ॥ ಹೇ ದ್ವಿಜ - ಎಲೈ ದಕ್ಷನೆ। ಸೋಽಹಂ - ಆನಾನು, ಗುಣಮಯೀಂ - ತ್ರಿಗುಣಾತ್ಮಕವಾದ, ಆತ್ಮಮಾಯಾಂ - ನನ್ನ ಮಾಯೆಯನ್ನು ಸಮಾವಿಶ್ಯ - ಆಶ್ರಯಿಸಿ, ವಿಶ್ವಂ - ಜಗತ್ತನ್ನು, ಸೃಜನ್ - ಸೃಷ್ಟಿಸುತ್ತಾ, ರಕ್ಷನ್ - ಸಲಹುತ್ತಾ, ಹರನ್ - ನಾಶಗೊಳಿಸುತ್ತಾ, ಕ್ರಿಯೋಚಿತಾಂ - ಕಾರ್ಯಾನುಗುಣವಾದ, ಸಂಜ್ಞಾಂ-ಹೆಸರನ್ನು, ದಧ್ರೇ- ಧರಿಸುವೆನು ॥ ೫೧ ॥ ಅದ್ವಿತೀಯೇ - ಸಜಾತೀಯ ವಿಜಾತೀಯ ಭೇದರಹಿತನಾದ, ಕೇವಲೇ - ಪ್ರಕೃ ತಿ ಸಂಬಂಧರಹಿತನಾದ, ಪರಮಾತ್ಮನಿ - ಸರ್ವಾತ್ಮಕನಾದ, ತಸ್ಮಿನ್ ಬ್ರಹ್ಮಣಿ - ಬ್ರಹ್ಮರೂಪನಾದ, ನನ್ನಲಿ, ಅಜ್ಞಃ - ಅಜ್ಞಾನಿಯು, ಬ್ರಹ್ಮರುದ್ರೌ - ಬ್ರಹ್ಮರುದ್ರರನ್ನೂ, ಭೂತಾನಿಚ - ಭೂತಗಳನ್ನೂ,

---

ವನ್ನು ನಡೆಯಿಸಿದನು ॥೪೮॥ ಎಲೈ ಪಾಪರಹಿತನಾದ ವಿದುರನೆ ! ಭಗವಂತನು ನಿರಪರಾ ಧಿಗಳಲ್ಲಿಯೇ ಪೂರ್ಣಪ್ರೀತಿಯನ್ನು ಮಾಡುವ ನೆಂಬುದಕ್ಕೆ ನೀನೆ ನಿದರ್ಶನವಲ್ಲವೆ ? ಆದ ಕಾರಣ, ಸರ್ವಾತ್ಮಕನಾದ ಭಗವಂತನು ಸರ್ವಭಾಗಗಳನ್ನೂ ಭುಜಿಸತಕ್ಕವನಾಗಿದ್ದ ರೂ, ರುದ್ರಾಪರಾಧದಿಂದ ಪೂರ್ಣವಾಗಿ ಪ್ರೀತನಾಗದೆ, ವಿಷ್ಣು ದೇವತಾಕವಾಗಿ ಕೊಡಲ್ಪ ಟ್ಟ ತ್ರಿಕಪಾಲ ಪುರೋಡಾಶದಿಂದ ಪ್ರೀತನಾದಂತೆ, ದಕ್ಷನನ್ನು ಕರೆದು ಹೇಳಿದನು ॥೪೯॥ „ಅಯ್ಯಾದಕ್ಷನೆ ! ಈ ಜಗತ್ತಿಗೆ ಮೂಲಕಾರಣವಾಗಿಯೂ, ಆತ್ಮಸ್ವರೂಪನಾಗಿಯೂ, ಲೋಕಾಧ್ಯಕ್ಷನಾಗಿಯೂ, ಸರ್ವಸಾಕ್ಷಿಯಾಗಿಯೂ, ಸ್ವಪ್ರಕಾಶನಾಗಿಯೂ, ಅದ್ವಿ ತೀಯನಾಗಿಯೂ ಇರುವ ನಾನೇ ಬ್ರಹ್ಮನೂ ರುದ್ರನೂ ಆಗಿರುವೆನು ॥೫೦॥ ಎಲೈ ದಕ್ಷ ನೆ ನಾನು ತ್ರಿಗುಣಾತ್ಮಕವಾದ ನನ್ನ ಮಾಯೆಯನ್ನೊಳಕೊಂಡು, ಈ ಜಗತ್ತನ್ನು ಸೃ ಷ್ಟಿಸಿ, ಸಲುಹಿ, ಲಯಗೊಳಿಸುತ್ತಾ, ಆ ಆ ಕಾರ್ಯಗಳಿಗನುಗುಣವಾದ ಹೆಸರುಗಳನ್ನು ಪಡೆಯುವೆನು ॥೫೧॥ ಅದ್ವಿತೀಯನೂ, ನಿರುಪಾಧಿಕನೂ, ಸರ್ವಾತ್ಮಕನೂ, ಬ್ರಹ್ಮಾ ದಿಸ್ವರೂಪನೂ ಆದ ನನಗಿಂತ ಬ್ರಹ್ಮರುದ್ರರನ್ನಾಗಲಿ, ಭೂತಗಳನ್ನಾಗಲಿ ಬೇರೆ ಯೆಂದೆ

ಮಾತ್ಮನಿ। ಬ್ರಹ್ಮ ರುದ್ರೌಚ ಭೂತಾನಿ ಭೇದೇನಾಽಜ್ಞೋಽನುಪಶ್ಯತಿ ॥೫೨॥ ಯಥಾ ಪುಮಾನ್ನ ಸ್ವಾಂಗೇಷು ಶಿರಃ ಪಾಣ್ಯಾದಿಷು ಕ್ವಚಿತ್ । ಪಾರಕ್ಯಬುದ್ಧಿಂ ಕುರುತೇ ಏವಂ ಭೂತೇಷು ಮತ್ಪರಃ ॥೫೩॥ ತ್ರಯಾಣಾಮೇಕಭಾವಾನಾಂ ಯೋ ನಪಶ್ಯತಿ ವೈಭಿದಾಂ । ಸರ್ವಭೂತಾತ್ಮನಾಂ ಬ್ರಹ್ಮನ್! ಸ ಶಾಂತಿಮಧಿಗಚ್ಛತಿ ॥೫೪॥ ಮೈತ್ರೇಯಃ॥ ಏವಂ ಭಗವತಾದಿಷ್ಟಃ ಪ್ರಜಾಪತಿಪತಿ ರ್ಹರಿಂ। ಅರ್ಚಿತ್ವಾ ಕ್ರತುನಾ ಸ್ವೇನ ದೇವಾನುಭಯತೋಽಯಜತ್ ॥೫೫॥ ರುದ್ರಂಚ ಸ್ವೇನಭಾಗೇನ ಹ್ಯುಪಾಧಾವತ್ಸಮಾಹಿತಃ । ಕರ್ಮಣೋದವಸಾನೇನ ಸೋಮಪಾನಿತರಾನಪಿ। ಉದವಸ್ಯ ಸಹರ್ತ್ವಿಗ್ಭಿ ಸ್ಸ

---

ಭೇದೇನ - ಬೇರೆಯಾಗಿ ಅನುಪಶ್ಯತಿ - ನೋಡುತ್ತಾನೆ ॥ ೫೨ ॥ ಪುಮಾನ್ - ಪುರುಷನು, ಶಿರಃಪಾಣ್ಯಾದಿಷು - ತಲೆ, ಕೈ, ಮೊದಲಾದ, ಸ್ವಾಂಗೇಷು - ತನ್ನ ಅಂಗಗಳಲ್ಲಿ, ಪಾರಕ್ಯ ಬುದ್ಧಿಂ - ಬೇರೆಯೆಂಬ ಬುದ್ಧಿಯನ್ನು, ಯಥಾ - ಹೇಗೆ, ನಕುರುತೇ - ಮಾಡುವುದಿಲ್ಲವೋ, ಏವಂ - ಇಂತೆಯೇ, ಮತ್ಪರಃ - ನನ್ನ ಭಕ್ತನು, ಭೂತೇಷು - ಪ್ರಾಣಿಗಳಲ್ಲಿ ಭೇದವನ್ನೆಣಿಸುವುದಿಲ್ಲ ॥ ೫೩ ॥

ಹೇ ಬ್ರಹ್ಮನ್ - ಎಲೈ ದಕ್ಷನೆ ! ಸರ್ವಭೂತಾತ್ಮನಾಂ - ಸರ್ವಾತ್ಮಕರಾದ, ಏಕಭಾವಾನಾಂ - ಒಂದೇ ಸ್ವರೂಪವುಳ್ಳ, ತ್ರಯಾಣಾಂ - ನಮ್ಮ ಮೂವರಲ್ಲಿ, ಯಃ - ಯಾವನು, ಭಿದಾಂ - ಬೇದವನ್ನು, ನಪಶ್ಯತಿ - ನೋಡುವುದಿಲ್ಲವೋ, ಸಃ - ಅವನು, ಶಾಂತಿಂ - ಮನಶ್ಶಾಂತಿಯನ್ನು, ಅಧಿಗಚ್ಛತಿ-ಹೊಂದುತ್ತಾನೆ ॥ ೫೪ ॥ ಮೈತ್ರೇಯನು ಹೇಳುತ್ತಾನೆ-ಏವಂ - ಇಂತು, ಭಗವತಾ-ಭಗವಂತನಿಂದ, ಆದಿಷ್ಟಃ - ಆಜ್ಞಾಪಿಸಲ್ಪಟ್ಟ, ಪ್ರಜಾಪತಿಪತಿಃ - ದಕ್ಷನು, ಸ್ವೇನ - ಸ್ವಂತವಾದ, ಕ್ರತುನಾ - ತ್ರಿಕಪಾಲೇಷ್ಟಿಯಿಂದ, ಹರಿಂ - ಹರಿಯನ್ನು, ಅರ್ಚಿತ್ವಾ - ಪೂಜಿಸಿ, ಉಭಯತಃ - ಪ್ರಯಾಜಗಳಿಂದಲೂ, ದರ್ಶಪೌರ್ಣಮಾಸಗಳಿಂದಲೂ, ದೇವಾನ್ - ದೇವತೆಗಳನ್ನು, ಅಯಜತ್ - ಪೂಜೆಸಿದನು ॥ ೫೫ ॥ ಸಮಾಹಿತಃ - ಶಾಂತಮನಸ್ಕನಾದ ದಕ್ಷನು, ಸ್ವೇನ - ತನ್ನ, ಭಾಗೇನ - ಭಾಗದಿಂದ, ರುದ್ರಂಚ - ರುದ್ರನನ್ನು, ಉದವಸಾನೇನ - ಪೂರ್ತಿಗೊಳಿಸುವ, ಕರ್ಮಣಾ - ಕರ್ಮದಿಂದ, ಸೋಮಪಾನ್ - ಸೋಮಪಾನಮಾಡುವವ

---

ಣಿಸುವವನು ಅಜ್ಞನೇ ಸರಿ ॥೫೨॥ ಪುರುಷನು ತಲೆ, ಕೈ, ಕಾಲು, ಮೊದಲಾದ ತನ್ನ ಅಂಗಗಳಲ್ಲಿ ಒಂದನ್ನು ಬೇರೆಯೆಂದು ಯೆಂತು ತಿಳಿಯುವುದಿಲ್ಲವೊ, ಅಂತೆಯೇ ನನ್ನ ಭಕ್ತನಾದವನೆಂದಿಗೂ ಪ್ರಾಣಿಗಳಲ್ಲಿ ಭೇದವನ್ನೆಣಿಸುವುದಿಲ್ಲ ॥೫೩॥ ಅಯ್ಯಾ ಬ್ರಾಹ್ಮಣೋತ್ತಮನಾದ ದಕ್ಷನೆ ! ಯಾವಪುರುಷನಾದರೆ ಸರ್ವಾತ್ಮಕರೂ, ಏಕರೂಪರೂ, ಆದ ನಮ್ಮ ಮೂವರಲ್ಲಿ ಭೇದವನ್ನೆಣಿಸುವುದಿಲ್ಲವೋ, ಅವನು ಮನಶ್ಶಾಂತಿಯನ್ನು ಪಡೆಯುವನು,, ಎಂದು ಶ್ರೀಹರಿಯು ದಕ್ಷನಿಗುಪದೇಶವನ್ನಿತ್ತನು. ॥೫೪॥ ಅಯ್ಯಾ ವಿದುರನೆ! ಇಂತು ಶ್ರೀಹರಿಯಿಂದುಪದೇಶಗೊಂಡ ದಕ್ಷಪ್ರಜೇಶ್ವರನು, ತ್ರಿಕಪಾಲೇಷ್ಟಿಯಿಂದ ನಾರಾಯಣ ಮೂರ್ತಿಯನ್ನು ಆರಾಧಿಸಿ, ಬಳಿಕ ಆ ಅಧ್ವರದಲ್ಲಿಯೂ ಸ್ವರ್ಗದಲ್ಲಿಯೂ ಇದ್ದ ದೇವತೆಗಳನ್ನು, ಪ್ರಯಾಜಮೊದಲಾದ ಅಂಗಗಳಿಂದಲೂ, ದರ್ಶಪೌರ್ಣಮಾಸಾದಿ ಪ್ರಧಾನಕರ್ಮದಿಂದಲೂ, ಪೂಜಿಸಿದನು ॥೫೫॥ ತರುವಾಯ ಶಾಂತಚಿತ್ತನಾದ ದಕ್ಷನು ಸ್ವಿಷ್ಟಕೃತ್ತೆಂಬ ಯಜ್ಞಾವಶಿಷ್ಟ ಭಾಗದಿಂದ ರುದ್ರನನ್ನು ಪೂಜಿಸಿ, ಉದವಸಾನವೆಂಬ ಸಮಾಪನೇಷ್ಟಿಯ

ಸ್ನಾವವಭೃಥಂ ತತಃ ॥೫೬॥ ತಸ್ಮಾ ಅಪ್ಯನುಭಾವೇನ ಸ್ವೇನೈವಾವಾಪ್ತ
ರಾಧಸೇ । ಧರ್ಮ ಏವ ಮತಿಂ ದತ್ವಾ ತ್ರಿದಶಾಸ್ತೇ ದಿವಂ ಯಯುಃ ॥೫೭॥
ಏವಂ ದಾಕ್ಷಾಯಣೀ ದೇವೀ ತ್ಯಕ್ತ್ವಾ ಪೂರ್ವಕಳೇಬರಂ । ಜಜ್ಞೇ ಹಿ
ಮವತಃ ಕ್ಷೇತ್ರೇ ಮೇನಾಯಾಮಿತಿ ಶುಶ್ರುಮ ॥೫೮॥ ತಮೇವ ದಯಿತಂ
ಭೂಯ ಆವೃಙ್ಕ್ತೇ ಪತಿಮಂಬಿಕಾ । ಅನನ್ಯಭಾವೈಕಗತಿಂ ಶಕ್ತಿಸ್ಸುಪ್ತೇವ
ಪೂರುಷಂ॥೫೯॥ ಏತದ್ಭಗವತಶ್ಶಂಭೋಃ ಕರ್ಮ ದಕ್ಷಾಧ್ವರದ್ರುಹಃ। ಶ್ರುತಂ

---

ರನ್ನೂ, ಇತರಾನಪಿ - ಸೋಮಪಾನವಿಲ್ಲದ ದೇವತೆಗಳನ್ನೂ, ಉಪಾಧಾವತ್-ಪೂಜಿಸಿದನು, ಉದವಸ್ಯ - ಕರ್ಮವನ್ನು ಪೂರೈಸಿ, ಋತ್ವಿಗ್ಭಿಸ್ಸಹ-ಋತ್ವಿಜರೊಡನೆ, ತತಃ-ಬಳಿಕ, ಅವಭೃತಂ ಅವಭೃಥವಾಗುವಂತೆ, ಸಸ್ನೌ-ಸ್ನಾನಮಾಡಿದನು ॥೫೬॥ ಸ್ವೇನ-ತನ್ನ, ಅನುಭಾವೇನೈವ-ಮಹಿಮೆಯಿಂದಲೇ, ಅವಾಪ್ತರಾಧಸೇ-ಧರ್ಮಸಿದ್ಧಿಯನ್ನು ಪಡೆದ, ತಸ್ಮೈ - ಆದಕ್ಷನಿಗೆ, ಧರ್ಮಏವ - ಧರ್ಮದಲ್ಲಿಯೇ, ಮತಿಂ - ಬುದ್ಧಿಯನ್ನು, ದತ್ವಾ - ಕೊಟ್ಟು, ತ್ರಿದಶಾಃ - ದೇವತೆಗಳು, ತ್ರಿದಿವಂ - ಸ್ವರ್ಗವನ್ನು, ಯಯುಃ - ಹೊಂದಿದರು ॥ ೫೭ ॥ ಏವಂ - ಇಂತು, ದಾಕ್ಷಾಯಣೀ - ದಕ್ಷಪುತ್ರಿಯಾದ, ದೇವೀ - ಸತೀದೇವಿಯು, ಪೂರ್ವಕಳೇಬರಂ - ಪೂರ್ವಶರೀರವನ್ನು, ತ್ಯಕ್ತ್ವಾ - ತೊರೆದು, ಹಿಮವತಃ - ಹಿಮವಂತನಿಗೆ, ಕ್ಷೇತ್ರೇ-ಪತ್ನಿಯಾದ, ಮೇನಾಯಾಂ - ಮೇನೆಯಲ್ಲಿ ಜಜ್ಞೇ - ಜನಿಸಿದಳು, ಇತಿ-ಎಂದು, ಶುಶ್ರುಮ - ಕೇಳಿರುವೆವು ॥ ಅನನ್ಯಭಾವಾ - ಬೇರೆಡೆಯಲ್ಲಿ ಮನಸ್ಸಿಲ್ಲದ, ಅಂಬಿಕಾ - ಪಾರ್ವತಿಯು, ಭೂಯಃ - ಪುನಃ ಜನ್ಮದಲ್ಲಿಯೂ, ಸುಪ್ತಾ - ಲೀನವಾಗಿದ್ದ, ಶಕ್ತಿಃ - ಮಾಯಾಶಕ್ತಿಯು, ಪೂರುಷಮಿವ - ಪರಮಾತ್ಮನನ್ನೇ ಪ್ರದಿಯಲ್ಲಿ, ಏಕಗತಿಂ - ತನ್ನಲ್ಲಿಯೇ ಮನಸ್ಸುಳ್ಳ, ದಯಿತಂ - ಪ್ರೀತಿಪಾತ್ರನಾದ, ತಮೇವ-ಶಿವನನ್ನೇ, ಪತಿಂ - ಗಂಡನನ್ನಾಗಿ, ಆವೃಙ್ಕ್ತೇ - ವರಿಸಿದಳು ॥ ೫೯ ॥ ದಕ್ಷಾ... ಹಃ - ದಕ್ಷಯಜ್ಞವನ್ನು ಧ್ವಂಸಗೊಳಿಸಿದ, ಭಗವತಃ - ಭಗವಂತನಾದ, ಶಂಭೋಃ - ಈಶ್ವರನ, ಕರ್ಮ - ಕಾರ್ಯವು, ಏತತ್-ಇಂತು,

---

ನ್ನು ಮಾಡಿ, ಸೋಮ ಪಾನಮಾಡುವ ದೇವತೆಗಳನ್ನೂ, ಸೋಮಪಾನವಿಲ್ಲದ ಇತರದೇವತೆಗಳನ್ನು ಕೂಡ ಆರಾಧಿಸಿ, ಯಜ್ಞಕರ್ಮವನ್ನು ಸಾಂಗವಾಗಿ ನೆರವೇರಿಸಿ, ಋತ್ವಿಜರಿಂದೊಡಗೂಡಿಅವಭೃಥ ಸ್ನಾನವನ್ನು ಮಾಡಿದನು ॥೫೬॥ ಆಗ ದೇವತೆಗಳೆಲ್ಲರೂ, ತಮ್ಮ ಪ್ರಭಾವದಿಂದ ಯಜ್ಞವನ್ನು ನೆರವೇರಿಸಿ, ಕೃತಕೃತ್ಯನಾದ ದಕ್ಷನನ್ನು "ಧರ್ಮಬುದ್ಧಿಯುಂಟಾಗಲಿ"ಎಂದು ಹರಿಸಿ ಸ್ವರ್ಗಕ್ಕೆ ತೆರಳಿದರು॥೫೭॥ದಕ್ಷಪುತ್ರಿಯಾದ ಸತೀದೇವಿಯುಇಂತು ಪೂರ್ವಶರೀರವನ್ನುಳಿದು, ಬಳಿಕ ಹಿಮವಂತನ ಪತ್ನಿಯಾದ ಮೇನಾದೇವಿಯಲ್ಲಿ ಪಾರ್ವತಿಯೆಂಬ ಹೆಸರಿನಿಂದ ಜನಿಸಿದಳು, ಎಂದು ಕೇಳಿ ಬಲ್ಲೆವು ॥೫೮॥ ಆ ಪಾರ್ವತಿಯು ಮತ್ತಾರಲ್ಲಿಯೂ ಮನಸ್ಸನ್ನಿಡದೆ ಶಿವನನ್ನೇ ಮದುವೆಯಾಗಬೇಕೆಂದು ನಿರ್ಧರಿಸಿ, ಪ್ರಳಯದಲ್ಲಿ ಮರೆಯಾಗಿ ಅಡಗಿರುವಮಾಯಾಶಕ್ತಿಯು, ಮರಳಿ ಸೃಷ್ಟಿಕಾಲದಲ್ಲಿಭಗವಂತನನ್ನೆಂತು ಎಡಬಿಡದೇ ಆವರಿಸುವುದೋ, ಅಂತು ತನ್ನಲ್ಲಿಯೇ ಮನಸ್ಸನ್ನಿಟ್ಟು ತಪಿಸುತ್ತಾ, ಪರಮಪ್ರೀತ್ಯಾಸ್ಪದನಾದ ಪರಶಿವಮೂರ್ತಿಯನ್ನೇ ವರಿಸಿದಳು ॥೫೯॥ ದಕ್ಷಾಧ್ವರವನ್ನು ಧ್ವಂಸಗೊಳಿಸಿದ ಭಗವಂತನಾದ ಭವಾನೀಪತಿಯ ಈ ವಿಜಯವೃತ್ತಾಂತವನ್ನು, ಬೃಹಸ್ಪತಿ ಶಿಷ್ಯನೂ

ಭಾಗವತಾ ಚ್ಛಿಷ್ಯಾ ದುದ್ಧವಾ ನ್ಮೇ ಬೃಹಸ್ಪತೇಃ ॥೬೦॥ ಇದಂ ಪವಿತ್ರಂ ಪರ ಮೀಶಚೇಷ್ಟಿತಂ ಯಶಸ್ಯ ಮಾಯುಷ್ಯ ಮಘೌಘಮರ್ಷಣಂ । ಯೋ ನಿತ್ಯದಾಕರ್ಣ್ಯ ನರೋಽನುಕೀರ್ತಯೇ ದ್ಧುನೋತ್ಯಘಂ ಕೌರವ ! ಭಕ್ತಿಭಾವತಃ ॥೬೧॥

—ಇತಿ ಸಪ್ತಮೋಽಧ್ಯಾಯಃ—

ಬೃಹಸ್ಪತೇಃ - ಬೃಹಸ್ಪತಿಯ, ಶಿಷ್ಯಾತ್ - ಶಿಷ್ಯನಾದ, ಭಾಗವತಾತ್ - ಭಗವದ್ಭಕ್ತನಾದ, ಉದ್ಧವಾತ್ - ಉದ್ಧವನಾದ, ಮೇ - ನನ್ನಿಂದ, ಶ್ರುತಂ - ಕೇಳಲ್ಪಟ್ಟಿತು ॥೬೦॥

ಹೇ ಕೌರವ - ಎಲೈ ವಿದುರನೆ ! ಯಃನರಃ - ಯಾವ ಮನುಷ್ಯನು, ಪವಿತ್ರಂ - ಪರಿಶುದ್ಧವೂ, ಪರಂ - ಉತ್ತಮವೂ, ಯಶಸ್ಯಂ - ಕೀರ್ತಿಕರವೂ, ಆಯುಷ್ಯಂ-ಆಯುರ್ವರ್ಧಕವೂ, ಅಘೌಘಮರ್ಷಣಂ - ಪಾಪಸಮೂಹ ನಾಶಕವೂ ಆದ, ಇದಂ - ಈ, ಈಶಚೇಷ್ಟಿತಂ- ಶಿವನ ಲೀಲೆಯನ್ನು, ನಿತ್ಯದಾ- ನಿತ್ಯವೂ, ಆಕರ್ಣ್ಯ - ಕೇಳಿ, ಅನುಕೀರ್ತಯೇತ್ - ಹೊಗಳುವನೋ, ಸಃ - ಅವನು, ಭಕ್ತಿಭಾವತಃ- ಭಕ್ತಿಭಾವದಿಂದ, ಅಘಂ - ತನ್ನ ಮತ್ತು ಇತರರ ಪಾಪವನ್ನು, ಧುನೋತಿ - ಕಳೆಯುವನು ॥ ೬೧ ॥

—ಸಪ್ತಮಾಧ್ಯಾಯಂ ಸಮಾಪ್ತಂ—

ಪರಮಭಾಗವತನೂ ಆದ ಉದ್ಧವನು ನನಗೆ ತಿಳುಹಿದನು ॥೬೦॥ ಅಯ್ಯಾ ಕುರುವಂಶ ಚಂದ್ರನೆ! ಅತ್ಯಂತ ಪವಿತ್ರವೂ, ಸರ್ವೋತ್ತಮವೂ, ಯಶಸ್ಕರವೂ, ಆಯುಷ್ಯ ವರ್ಧಕವೂ, ಪಾಪಹಾರಕವೂ ಆದ ಪರಮೇಶ್ವರನ ಈ ವಿಜಯ ವೃತ್ತಾಂತವನ್ನು ಯಾವಪುರುಷನು ನಿತ್ಯದಲ್ಲಿಯೂ ಭಕ್ತಿಯಿಂದ ಶ್ರವಣಮಾಡುತ್ತಾ, ಭಜನಮಾಡುವನೋ, ಅವನು ಭಕ್ತಿಭರದಿಂದ ಸಕಲ ಪಾಪಗಳನ್ನು ಕಳೆದುಕೊಳ್ಳುವುದಲ್ಲದೆ, ತನ್ನ ಸಹವಾಸದಲ್ಲಿರುವ ಇತರರ ಪಾಪಗಳನ್ನೂ ಕಳೆಯುವನು, ಎಂದು ಮೈತ್ರೇಯನು ವಿದುರನಿಗೆ ಹೇಳಿದ ನೆಂಬಲ್ಲಿಗೆ ಭಾಗವತಚಕೋರ ಚಂದ್ರಿಕೆಯೊಳ್

—ಏಳನೆಯ ಅಧ್ಯಾಯಂ ಮುಗಿದುದು —

# ಓಂನಮಃ ಪರಮಾತ್ಮನೇ

—ಅಥ ಅಷ್ಟಮೋಽಧ್ಯಾಯಃ—

ಮೈತ್ರೇಯಃ ॥ ಸನಕಾದ್ಯಾ ನಾರದಶ್ಚ ಋಭುರ್ಹಂಸೋಽರುಣಿರ್ಯತಿಃ । ನೈತೇ ಗೃಹಾನ್ ಬ್ರಹ್ಮಸುತಾ ಹ್ಯಾವಸನ್ನೂರ್ಧ್ವರೇತಸಃ ॥ ೧ ॥
ಮೃಷಾಽಧರ್ಮಸ್ಯ ಭಾರ್ಯಾಸೀದ್ದಂಭಂ ಮಾಯಾಂ ಚ ಶತ್ರುಹನ್ ।

—ಅಷ್ಟಮಾಧ್ಯಾಯಂ—

ಕಂದ॥ ದಕ್ಷಕುಲ ಪ್ರಸ್ತಾವದೆ । ದಕ್ಷಾಧ್ವರಕಥೆಯನೊರೆದು ಮನುವಂಶಕಥೋ ।
ಪಕ್ಷೇಪದೊಳೀಗಳ್ ಧ್ರುವ । ನಕ್ಷಯ ಪದವಾಂತ ಚರಿತ ಮೊರೆಯಲ್ಪಡುಗುಂ ॥
ಖಲತಾಯಿಯ ಬಿರುನುಡಿಯಿಂ । ಚಲಗೊಂಡು ಧ್ರುವಕುಮಾರ ನಡವಿಗೆ ನಡೆತಂ ।
ದಲಸದೆ ತಪವಾಚರಿಸು । ತ್ತೊಲಿಸಿದನಾ ಹರಿಯನೆಂದು ಪೇಳ್ವುದೀಗಳ್ ॥

ಮೈತ್ರೇಯನು ಹೇಳುತ್ತಾನೆ:— ಹೇಶತ್ರುಹನ್ - ಎಲೈ ಶತ್ರುಮರ್ದನನಾದ ವಿದುರನೆ! ಸನಕಾದ್ಯಾಃ - ಸನಕ ಮೊದಲಾದವರು, ನಾರದಶ್ಚ - ನಾರದನು, ಋಭುಃ - ಋಭುವು, ಹಂಸಃ - ಹಂಸನು, ಅರುಣಿಃ - ಅರುಣಿಯೂ, ಯತಿಃ - ಯತಿಯೂ, ಏತೇ - ಈ, ಬ್ರಹ್ಮಸುತಾಃ - ಬ್ರಹ್ಮಪುತ್ರರು, ಊರ್ಧ್ವರೇತಸಃ - ನೈಷ್ಠಿಕ ಬ್ರಹ್ಮಚಾರಿಗಳಾಗಿ, ಗೃಹಾನ್ - ಗೃಹಸ್ಥಾಶ್ರಮವನ್ನು, ನಾವಸನ್ - ಪಡೆಯಲಿಲ್ಲ ॥೧॥ ಅಧರ್ಮಸ್ಯ - ಬ್ರಹ್ಮನ ಮಗನಾದ ಅಧರ್ಮನಿಗೆ, ಮೃಷಾ-ಮೃಷೆಯು, (ಸುಳ್ಳು) ಭಾರ್ಯಾ-ಹೆಂಡತಿಯು, ಆಸೀತ್ - ಆದಳು, ಸಾ - ಅವಳು, ದಂಭಂ - ದಂಭನೆಂಬ ಗಂಡು ಮಗುವನ್ನೂ, ಮಾಯಾಂ - ಮಾಯೆಯೆಂಬ ಹೆಣ್ಣುಮಗುವನ್ನೂ, ಮಿಥುನಂ - ಈ ಅವಳಿ ಮಕ್ಕಳನ್ನು, ಅಸೂತ - ಹೆತ್ತು

—ಎಂಟನೆಯ ಅಧ್ಯಾಯ—

## ಧ್ರುವೋಪಾಖ್ಯಾನ

ಅನಂತರವಲ್ಲಿ ಮೈತ್ರೇಯಮುನಿಯು ವಿದುರನಿಗೆ ಹೇಳುವುದೆಂತೆಂದರೆ—ಅಯ್ಯಾ ಶತ್ರುಸೂದನನಾದ ವಿದುರನೆ! ಬ್ರಹ್ಮಪುತ್ರರಾದ ಮರೀಚಿ ಮೊದಲಾದವರ ವಂಶಾವಳಿಗಳನ್ನು ವಿವರಿಸಿದೆನಷ್ಟೆ. ಆ ಬ್ರಹ್ಮಪುತ್ರರಲ್ಲಿ ಸನಕಾದಿಗಳು, ನಾರದರು, ಋಭುವು, ಹಂಸನು, ಅರುಣಿಯು, ಯತಿಯು, ಇವರು ಮಾತ್ರ ನೈಷ್ಠಿಕ ಬ್ರಹ್ಮಚರ್ಯದಿಂದ ಊರ್ಧ್ವರೇತಸ್ಕರಾಗಿ, ಗೃಹಸ್ಥಾಶ್ರಮವನ್ನು ಪಡೆಯದುದರಿಂದ ಇವರಿಗೆ ಸಂತತಿಯಿಲ್ಲ. ॥೧॥ ಅದೇ ಬ್ರಹ್ಮಪುತ್ರನಾದ ಅಧರ್ಮನು ಮೃಷೆಯೆಂಬ ಹೆಂಡತಿಯನ್ನು ಮದುವೆಯಾಗಿ ಆಕೆಯಲ್ಲಿ,*ದಂಭ†ಮಾಯೆ ಎಂಬ ಇಬ್ಬರು ಮಕ್ಕಳನ್ನು ಪಡೆದನು. ತಂದೆಯಾದ ದಿಕ್ಪಾಲಕನಾದ

* ಇತರರನ್ನು ಮೋಸಗೊಳಿಸುವುದು. † ಮೋಸಗೊಳಿಸುವುದಕ್ಕೆ ತಕ್ಕ ನಡವಳಿ.

ಅಸೂತ ಮಿಥುನಂ ತತ್ತು ನಿರ್ಋತಿ ರ್ಜಗೃಹೇಽಪ್ರಜಃ ॥೨॥ ತಯೋ
ಸ್ಸಮಭವ ಲ್ಲೋಭೋ ನಿಕೃತಿಶ್ಚ ಮಹಾಮತೇ । ತಾಭ್ಯಾಂ ಕ್ರೋಧ
ಶ್ಚ ಹಿಂಸಾಚ ಯದ್ದುರುಕ್ತಿಃ ಸ್ವಸಾ ಕಲೇಃ ॥೩॥ ದುರುಕ್ತೌ ಕಲಿರಾಧ
ತ್ತ ಭಯಂ ಮೃತ್ಯುಂಚ ಸತ್ತಮ । ತಯೋಶ್ಚ ಮಿಥುನಂ ಜಜ್ಞೇ ಯಾ
ತನಾ ನಿರಯ ಸ್ತಥಾ ‡ ॥೪॥ ಸಂಗ್ರಹೇಣ ಮಯಾ ಖ್ಯಾತಃ ಪ್ರತಿಸರ್ಗ

ಳು, ಅಪ್ರಜಃ- ಸಂತಾನವಿಲ್ಲದ, ನಿರ್ಋತಿಃ - ನಿರ್ಋತಿಯೆಂಬರಾಕ್ಷಸನು, ತತ್ತು - ಆ ಇಬ್ಬರು ಮಕ್ಕಳೆ
ನ್ನು, ಜಗೃಹೇ - ತೆಗೆದುಕೊಂಡನು ॥೨॥ ಹೇಮಹಾಮತೇ- ಎಲೈ ಪ್ರಾಜ್ಞನಾದ ವಿದುರನೆ ! ತಯೋಃ -
ಅವರಿಂದ, ಲೋಭಃ - ಜಿಪುಣತನವು, ನಿಕೃತಿಶ್ಚ - ಶಾಠ್ಯವು, ಸಮಭವತ್ - ಉಂಟಾಯಿತು, ತಾಭ್ಯಾಂ-
ಅವರಿಂದ, ಕ್ರೋಧಶ್ಚ - ಕ್ರೋಧವು, ಹಿಂಸಾಚ - ಹಿಂಸೆಯೂ ಜನಿಸಿದರು, ಯತ್ - ಯಾರಿಂದ, ಕಲಿ
ಯು, ಕಲೇಃ - ಕಲಿಗೆ, ಸ್ವಸಾ - ತಂಗಿಯಾದ, ದುರುಕ್ತಿಃ - ದುರ್ಭಾಷಣವು ಉಂಟಾಯಿತೋ ॥೩॥
ಹೇಸತ್ತಮ - ಎಲೈ ಸಾಧುಶಿರೋಮಣಿಯೆ ! ಕಲಿಃ - ಕಲಿಯು, ದುರುಕ್ತೌ - ದುರುಕ್ತಿಯೆಂಬವಳಲ್ಲಿ
ಭಯಂ - ಭಯವನ್ನೂ, ಮೃತ್ಯುಂ - ಮೃತ್ಯುವನ್ನು, ಆಧತ್ತ - ಪಡೆದನು, ತಯೋಃ - ಅವರಿಂದ,
ಯಾತನಾ- ಯಾತನೆಯೂ, ನಿರಯಃ - ನರಕವೆಂಬ, ಮಿಥುನಂ - ಅವಳಿ ಮಕ್ಕಳು, ಜಜ್ಞೇ - ಉಂಟಾ
ದರು ॥೪॥ ಹೇ ಅನಘ - ಎಲೈ ಪಾಪರಹಿತನೆ ! ಮಯಾ - ನನ್ನಿಂದ, ತವ - ನಿನಗೆ, ಸಂಗ್ರಹೇಣ - ಸಂ
ಕ್ಷೇಪವಾಗಿ, ಪ್ರತಿಸರ್ಗಃ - ಅಧರ್ಮವಂಶವು, ಖ್ಯಾತಃ - ಹೇಳಲ್ಪಟ್ಟಿತು, ಪುಮಾನ್ - ಪುರುಷನು, ಪು

ನಿರ್ಋತಿಯೆಂಬ ರಾಕ್ಷಸೇಶ್ವರನು ತನಗೆ ಸಂತತಿಯಿಲ್ಲದುದರಿಂದ ಆ ಇಬ್ಬರು ಮಕ್ಕಳ
ನ್ನೂ ಸಲಹಿದನು ॥೨॥ ಅಯ್ಯಾ ಪ್ರಾಜ್ಞಶಿರೋಮಣಿಯಾದ ವಿದುರನೆ ! ಆ ಮಾಯಾ
ದಂಭರೀರ್ವರೂ ಸಹೋದರರಾದರೂ ಅಧರ್ಮಾಂಶಸಂಭೂತರಾದುದರಿಂದ ದಂಪತಿಗಳಾಗಿ
ಲೋಭ, ನಿಕೃತಿ, ಯೆಂಬ ಈರ್ವರು ಮಕ್ಕಳನ್ನು ಪಡೆದರು. ಆ ಲೋಭನು ತಂಗಿ
ಯಾದ ನಿಕೃತಿಯನ್ನು ಮದುವೆಯಾಗಿ ಹಿಂಸಾಕ್ರೋಧರೆಂಬ ಇಬ್ಬರು ಮಕ್ಕಳನ್ನು ಜನಿ
ಯಿಸಿದನು. ಆ ಕ್ರೋಧನು ಹಿಂಸೆಯಲ್ಲಿ ದುರುಕ್ತಿ, ಕಲಿಯೆಂಬ ಈರ್ವರು ಪುತ್ರರನ್ನು
ಪಡೆದನು ॥೩॥ ಕಲಿಯು ತಂಗಿಯಾದ ದುರುಕ್ತಿಯನ್ನು ಕೂಡಿ ಮೃತ್ಯು, ಭಯ, ಎಂಬ
ವರನ್ನು ಪಡೆದನು. ಆ ಮೃತ್ಯು ಭಯಗಳಿಂದ ಯಾತನೆ, ನಿರಯಗಳೆಂಬ ಇಬ್ಬರು ಮಕ್ಕ
ಳುಂಟಾದರು ॥೪॥ ಎಲೈ ಪುಣ್ಯಶಾಲಿಯೆ ! ಈ ಅಧರ್ಮವಂಶೋತ್ಪತ್ತಿಯನ್ನು ನಿನಗೆ ಸಂ
ಗ್ರಹವಾಗಿ ತಿಳುಹಿಸಿರುವೆನು. ಪುಣ್ಯಕರವಾದೀವಂಶಾವಳಿಯನ್ನು ಯಾವ ಪುರುಷನು

‡ ವಿ. ಮೂಲ ಶ್ಲೋ॥ ಏತೇ ಹ್ಯಧರ್ಮವೃಕ್ಷಸ್ಯ ಶಾಖಾಃ ಸ್ಸಂಸೃತಿಹೇತವಃ । ಶ್ರೇಯಸ್ಕಾಮೋ
ನಸೇವೇತ್ಯನಿತರಾ ಮಾಶ್ರಮೋತ್ತಮಃ ॥ ಅಧರ್ಮವೆಂಬ ವೃಕ್ಷಕ್ಕೆ ಶಾಖೆಗಳಾದ ಮಾಯೆ, ನಿಕೃತಿ,
ಹಿಂಸೆ, ದುರುಕ್ತಿ, ಮೃತ್ಯು, ಯಾತನೆಗಳೆಂಬ ಸ್ತ್ರೀಯರೂ, ದಂಭ, ಲೋಭ, ಕ್ರೋಧ, ಕಲಿ, ಭಯ, ನರ
ಕಗಳೆಂಬಪುರುಷರೂ ಕೂಡ ಸಂಸಾರಹೇತುಗಳಾದುದರಿಂದ ಶ್ರೇಯಸ್ಕಾಮನಾದವನು ಇವರ ಸಹವಾಸ
ವನ್ನು ಮಾಡಬಾರದು. ಅವರಲ್ಲಿಯೂ ಆಶ್ರಮಶ್ರೇಷ್ಠನಾದ ಯತಿಯು ಇವರ ಕಡೆಗೆ ಇಣಿಕಿ ನೋಡ
ಬಾರದೆಂದು ತಾತ್ಪರ್ಯವು. ಈ ಶ್ಲೋಕಕ್ಕೆ ಶ್ರೀಧರೀಯದಲ್ಲಿಯೂ ವೀರರಾಘವೀಯದಲ್ಲಿಯೂ ವ್ಯಾಖ್ಯಾ
ನವಿಲ್ಲ. ಕೆಲವು ಪ್ರತಿಗಳಲ್ಲಿ ಮೂಲಶ್ಲೋಕವೂ ಇಲ್ಲ

ಸ್ತ್ವಮಾಸಘ ! । ತ್ರಿಶ್ಶೃತ್ತ್ವೈತತ್ಪವಿತ್ರಂ ಪುಣ್ಯಂ ವಿಧುನೋತ್ಯಾತ್ಮನೋ ಮಲಂ ॥೫॥ † ಅಥಾತಃ ಕೀರ್ತಯೇ ವಂಶಂ ಪುಣ್ಯಕೀರ್ತೇಃ ಕುರೂದ್ವಹ ! । ಸ್ವಾಯಂಭುವಸ್ಯಾಪಿ ಮನೋರ್ಹರೇರಂಶಾಂಶಜನ್ಮನಃ ॥ ಪ್ರಿಯವ್ರತೋತ್ತಾನಪಾದೌ ಶತರೂಪಾಪತೇಃ ಸುತೌ । ವಾಸುದೇವಸ್ಯ ಕಲಯಾ ರಕ್ಷಾಯಾಂ ಜಗತಃ ಸ್ಥಿತೌ ॥೬॥ ಜಾಯೇ ಉತ್ತಾನಪಾದಸ್ಯ ಸುನೀತಿಸ್ಸುರುಚಿಸ್ತಯೋಃ । ಸುರುಚಿಃ ಪ್ರೇಯಸೀ ಪತ್ಯುರ್ನೇತರಾ ಯತ್ಸುತೋ ಧ್ರುವಃ ॥೭॥ ಏಕದಾ ಸುರುಚೇಃ ಪುತ್ರಮಂಕಮಾರೋಪ್ಯ ಲಾಲಯನ್ ।

ಣ್ಯಂ - ಪುಣ್ಯಕರವಾದ, ಏತತ್ - ಈ ಅಧರ್ಮ ಸಂತತಿಯನ್ನು, ತ್ರಿಃ - ಮೂರಾವರ್ತಿ, ಶ್ರುತ್ವಾ - ಕೇಳಿ, ಆತ್ಮನಃ - ತನ್ನ, ಮಲಂ - ಪಾಪವನ್ನು, ವಿಧುನೋತಿ - ಕಳೆದುಕೊಳ್ಳುವನು ॥೫॥

ಹೇ ಕುರೂದ್ವಹ - ಎಲೈ ಕುರುಪುಂಗವನೆ ! ಅಥ - ಇನ್ನು, ಪುಣ್ಯಕೀರ್ತೇಃ - ಪುಣ್ಯಶ್ಲೋಕನಾದ - ಹರೇಃ - ವಿಷ್ಣುವಿನ, ಅಂಶಾಂಶಜನ್ಮನಃ - ಅಂಶಭೂತನಾದ ಬ್ರಹ್ಮನಿಂದ ಜನಿಸಿದ, ಸ್ವಾಯಂಭುವಸ್ಯ ಸ್ವಾಯಂಭುವನೆಂಬ, ಮನೋಃ - ಮನುವಿನ, ವಂಶಮಪಿ - ವಂಶಾವಳಿಯನ್ನೂ, ಕೀರ್ತಯೇ - ವಿವರಿಸುವೆನು ॥೬॥ ಶತರೂಪಾಪತೇಃ - ಶತರೂಪೆಯ ಗಂಡನಾದ ಸ್ವಾಯಂಭುವ ಮನುವಿನ, ಸುತೌ - ಮಕ್ಕಳಾದ, ಪ್ರಿಯವ್ರತೋತ್ತಾನಪಾದೌ - ಪ್ರಿಯವ್ರತ, ಉತ್ತಾನಪಾದರೆಂಬವರು, ವಾಸುದೇವಸ್ಯ - ವಿಷ್ಣುವಿನ, ಕಲಯಾ - ಅಂಶದಿಂದ, ಜಗತಃ - ಲೋಕದ, ರಕ್ಷಾಯಾಂ - ಪಾಲನೆಯಲ್ಲಿ, ಸ್ಥಿತೌ - ಇದ್ದರು ॥೬॥ ಉತ್ತಾನಪಾದಸ್ಯ - ಉತ್ತಾನಪಾದನಿಗೆ, ಸುನೀತಿಃ - ಸುನೀತಿಯು, ಸುರುಚಿಃ - ಸುರುಚಿಯು, ಜಾಯೇ - ಇಬ್ಬರು ಹೆಂಡಿರಿದ್ದರು, ತಯೋಃ - ಅವರಲ್ಲಿ, ಸುರುಚಿಃ - ಸುರುಚಿಯು, ಪತ್ಯುಃ - ಗಂಡನಿಗೆ, ಪ್ರೇಯಸೀ - ಅತ್ಯಂತ ಪ್ರಿಯೆಯು, ಧ್ರುವಃ - ಧ್ರುವನು, ಯತ್ಸುತಃ - ಯಾವಳ ಮಗನೋ, ಇತರಾ - ಆ ಇನ್ನೊ

ಮೂರಾವರ್ತಿ ಕೇಳುವನೋ, ಅವನು ಪಾಪಗಳನ್ನು ಕಳೆದುಕೊಂಡು ಮನಶ್ಶುದ್ಧಿಯನ್ನು ಪಡೆಯುವನು ॥೫॥ ಅಯ್ಯಾ ಕುರುಪುಂಗವನಾದ ವಿದುರನೆ ! ಇನ್ನು ಪುಣ್ಯಶ್ಲೋಕನೂ ಭಗವದಂಶಸಂಭೂತನೂ, ಆದ ಸ್ವಾಯಂಭುವಮನುವಿನ ವಂಶಾವಳಿಯನ್ನು ಬಣ್ಣಿಸುವೆನು ಕೇಳು ॥೬॥ ಶತರೂಪಾಪತಿಯಾದ ಸ್ವಾಯಂಭುವಮನುವಿಗೆ ಭಗವದಂಶವಿಶಿಷ್ಟರಾದ ಪ್ರಿಯವ್ರತ, ಉತ್ತಾನಪಾದರೆಂದ ಈರ್ವರು ಮಕ್ಕಳು ಜನಿಸಿ ಧರ್ಮದಿಂದ ಲೋಕಪಾಲನೆಯನ್ನು ಮಾಡುತ್ತಿದ್ದರು ॥೭॥ ಅವರಲ್ಲಿ ಕಿರಿಯವನಾದ ಉತ್ತಾನಪಾದರಾಯನಿಗೆ ಸುನೀತಿ, ಸುರುಚಿ, ಯೆಂಬ ಈರ್ವರು ಹೆಂಡರಿದ್ದರು. ಸುರುಚಿಯೆಂಬ ಕಿರೀಹೆಂಡತಿಯು ಗಂಡನಿಗೆ ಅತ್ಯಂತ ಪ್ರೀತಿಪಾತ್ರಳೆನಿಸಿದ್ದಳು. ಧ್ರುವಕುಮಾರನಿಗೆ ಜನನಿಯಾದ ಸುನೀತಿಯೆಂಬ ಹಿರೀಹೆಂಡತಿಯು ಗಂಡನ ಪ್ರೀತಿಗೆ ಪಾತ್ರಳಾಗಿರಲಿಲ್ಲ ॥೮॥ ಇಂತಿರಲು,

† ವಿ. ಶ್ಲೋ ॥ ಆವಿಷ್ಟಾಃ ಕರಿತಾ ದೇವಾ ಬ್ರಹ್ಮದಕ್ಷೋ ಮನುಃ ಪೃಥುಃ । ಶಕ್ರಾದ್ಯಾ ಋಷಯಶ್ಚೈವ ಮತ್ಸ್ಯವ್ಯಾಸಾದಯೋ ಹರಿಃ ॥೧॥ ಪ್ರಿಯವ್ರತೋತ್ತಾನಪದಪ್ರಮುಖೇಷು ಹರಿಸ್ಸ್ವಯಂ। ಆವಿಷ್ಟಸ್ಸ್ಯಾತ್ ಭೂತೇಷು ಋಷಭಾದ್ಯಾಸ್ಸ್ವಯಂ ಹರಿಃ ॥೨॥ ಬ್ರಹ್ಮ, ದಕ್ಷ, ಮನು, ಪೃಥು, ಇಂದ್ರ, ಋಷಿಗಳು, ಪ್ರಿಯವ್ರತ, ಉತ್ತಾನಪಾದ ಮೊದಲಾದವರಲ್ಲಿ ಹರಿಯು ಆವೇಶವಾಗಿರುವನೆಂತಲೂ, ಮತ್ಸ್ಯಾದ್ಯವತಾರಗಳು, ವ್ಯಾಸರು ಋಷಭಮೊದಲಾದವರು ಸಾಕ್ಷಾತ್ತಾಗಿ ಹರಿಯೆಂತಲೂ ತಿಳಿಯಬೇಕು

ಉತ್ತಮಂ ನಾರುರುಕ್ಷಂತಂ ಧ್ರುವಂ ರಾಜಾಽಭ್ಯನಂದತ ॥ ೯ ॥ ತಥಾ ಚಿ
ಕೀರ್ಷಮಾಣಂ ತಂ ಸಪತ್ನ್ಯಾಸ್ತನಯಂ ಧ್ರುವಂ । ಸುರುಚಿಶ್ಶೃಣ್ವತೋ
ರಾಜ್ಞಃ ಸೇರ್ಷ್ಯಮಾಹಾಽತಿಗರ್ವಿತಾ॥೧೦॥ ನ ವತ್ಸ ! ನೃಪತೇರ್ಧಿಷ್ಣ್ಯಂ
ಭವಾನಾರೋಢುಮರ್ಹತಿ । ನಗೃಹೀತೋ ಮಯಾ ಯತ್ತ್ವಂ ಕುಕ್ಷಾವ
ಪಿ ನೃಪಾತ್ಮಜಃ॥೧೧॥ ಬಾಲೋಽಸಿ ಬತ ! ನಾತ್ಮಾನಮನ್ಯಸ್ತ್ರೀಗರ್ಭಸಂಭೃ
ತಂ । ನೂನಂ ವೇದ ಭವಾನ್ ಯಸ್ಯ ದುರ್ಲಭೇಽರ್ಥೇ ಮನೋರಥಃ ॥
ತಪಸಾರಾಧ್ಯ ಪುರುಷಂ ತಸ್ಯೈವಾಽನುಗ್ರಹೇಣಮೇ । ಗರ್ಭೇ ತ್ವಂ ಸಾ

ಬ್ಬ ಹೆಂಡತಿಯು-ನ - ಪ್ರಿಯೆಯಾಗಿರಲಿಲ್ಲ ॥ ೮ ॥ ಏಕದಾ - ಬಂದುದಿನ, ರಾಜಾ - ಉತ್ತಾನಪಾ
ದನು, ಸುರುಚೇಃ - ಸುರುಚಿಯು, ಪುತ್ರಂ - ಮಗನಾದ, ಉತ್ತಮಂ - ಉತ್ತಮನನ್ನು, ಅಂಕಂ - ತೊಡೆ
ಯಲ್ಲಿ, ಆರೋಪ್ಯ - ಕುಳ್ಳಿರಿಸಿ, ಲಾಲಯನ್ - ಆಡಿಸುತ್ತಾ, ಆರುರುಕ್ಷಂತಂ - ಏರಲೆಳಸಿದ, ಧ್ರುವಂ -
ಧ್ರುವನನ್ನು, ನಾಭ್ಯನಂದತ - ಅನುಮೋದಿಸಲಿಲ್ಲ ॥೯॥ ತಥಾ - ಅಂತು, ಚಿಕೀರ್ಷಮಾಣಂ - ಮಾಡಲೆಳ
ಸುತ್ತಿರುವ, ಸಪತ್ನ್ಯಾಃ-ಸವತಿಯ, ತನಯಂ-ಮಗನಾದ, ತಂ ಧ್ರುವಂ-ಆ ಧ್ರುವನನ್ನು ಕುರಿತು, ಸುರುಚಿಃ-
ಸುರುಚಿಯು, ಅತಿಗರ್ವಿತಾ - ಬಹಳ ಗರ್ವಗೊಂಡು, ರಾಜ್ಞಃ- ರಾಜನು, ಶೃಣ್ವತಃ - ಕೇಳುವಂತೆ, ಸೇ
ರ್ಷ್ಯಂ - ಅಸೂಯೆಯಿಂದ, ಆಹ - ಹೇಳುತ್ತಾಳೆ ॥೧೦॥ ಹೇ ವತ್ಸ - ಎಲೈ ಮಗುವೆ ! ನೃಪಾತ್ಮಜಃ -
ರಾಜಪುತ್ರನಾದ, ಭವಾನ್ - ನೀನು, ಯತ್ - ಯಾವ ಕಾರಣದಿಂದ, ಕುಕ್ಷೌ - ಹೊಟ್ಟೆಯಲ್ಲಿ, ಮಯಾ -
ನನ್ನಿಂದ, ನಗೃಹೀತಃ - ಗ್ರಹಿಸಲ್ಪಡಲಿಲ್ಲವೋ, ಅದರಿಂದ, ಅಪಿ - ನೀನು ರಾಜಪುತ್ರನಾದರೂ, ನೃಪತೇಃ -
ರಾಜನ, ಧಿಷ್ಣ್ಯಂ - ಸಿಂಹಾಸನವನ್ನು, ಆರೋಢುಂ - ಏರುವುದಕ್ಕೆ, ನಾರ್ಹತಿ - ಅರ್ಹನಾಗಲಾರೆ॥೧೧॥
ಯಸ್ಯ - ಯಾವನಿನಗೆ, ದುರ್ಲಭೇ - ಅಸಾಧ್ಯವಾದ, ಅರ್ಥೇ - ವಿಷಯದಲ್ಲಿ, ಮನೋರಥಃ - ಕೋರಿಕೆ,
ಇರುವುದೋ, ಅಂತಹ, ಭವಾನ್ - ನೀನು, ಆತ್ಮನಂ - ನಿನ್ನನ್ನು, ಅನ್ಯಸ್ತ್ರೀ ಗರ್ಭ ಸಂಭೃತಂ -
ಬೇರೆ ಸ್ತ್ರೀಯಿಂದ ಜನಿಸಿದವನೆಂದು, ನವೇದ - ತಿಳಿಯಲಿಲ್ಲ. ನೂನಂ - ದಿಟವು, ಬಾಲೋಸಿ - ಹಸುಳೆ
ಯಾಗಿರುವೆ, ಬತ - ಅಕಟಾ ॥೧೨॥ ತ್ವಂ - ನೀನು, ನೃಪಾಸನಂ - ಸಿಂಹಾಸನವನ್ನು, ಯದೀಚ್ಛಸಿ -

ಬಂದುದಿನ ಉತ್ತಾನಪಾದರಾಯನು ಸುರುಚಿಯ ಮಗನಾದ ಉತ್ತಮನನ್ನು ತೊಡೆಯ
ಮೇಲೆ ಕುಳ್ಳಿರಿಸಿಕೊಂಡು ಮುದ್ದಾಡುತ್ತಿರುವಾಗ ಸುನೀತಿಯ ತನೂಜನಾದ ಧ್ರುವಕುಮಾ
ರನಲ್ಲಿಗೆ ಬಂದು ಉತ್ತಮನಂತೆಯೇ ತಾನೂ ತಂದೆಯ ತೊಡೆಯಮೇಲೆ ಕುಳಿತುಕೊಬೇಕೆ
ಕೆಂದೇರತೊಡಗಲು, ಉತ್ತಾನಪಾದರಾಜನು ಸುನೀತಿಯಮೇಲಣ ಅಸೂಯೆಯಿಂದ ಸಿಡು
ಮುಡಿಗೊಂಡು ಆ ಮಗುವನ್ನು ನಿರಾಕರಿಸಿದನು ॥೯॥ ಇಂತು ತಂದೆಯಾದರಿಸಿ ಕರೆಯ
ದಿದ್ದರೂ, ತೊಡೆಯನ್ನೇರಲೆಳಸುತ್ತಿರುವ ಧ್ರುವಕುಮಾರನನ್ನು ಕಂಡು, ಸುರುಚಿಯು
ಅಸೂಯೆಗೊಂಡು ಅತಿ ಗರ್ವಿತೆಯಾಗಿ ರಾಜನು ಕೇಳುತ್ತಿರುವಾಗಲೇ ಆ ಮಗುವನ್ನು ಜರೆ
ಯತೊಡಗಿದಳೆಂತೆಂದರೆ ॥೧೦॥ ಎಲೈ ಮಗುವೆ ! ನೀನು ರಾಜಪುತ್ರನಾಗಿದ್ದರೂ, ನನ್ನ
ಗರ್ಭದಲ್ಲಿ ಜನಿಸಲಿಲ್ಲವಾದುದರಿಂದ ನಿನಗೀರಾಜಾಸನವನ್ನೇರುವುದಕ್ಕೆ ಯೋಗ್ಯತೆಯಿಲ್ಲ॥೧೧॥
ಅಯ್ಯೋಪಾಪ ! ಹಸುಳೆಯಾದ ನೀನೇನುಬಲ್ಲೆ? ನೀನು ಅನ್ಯಸ್ತ್ರೀಯಲ್ಲಿ ಜನಿಸಿದವನೆಂದು
ತಿಳಿದಿರುವುದಿಲ್ಲವೆಂದು ತೋರುತ್ತಿರುವುದು ದಿಟ.ಆದುದರಿಂದಲೇ ಕೈಗೂಡದ ಬಯಕೆಯನ್ನು

ಧಯಾತ್ಮಾನಂ ಯದೀಚ್ಛಸಿ ನೃಪಾಸನಂ ॥೧೩॥ ಮೈತ್ರೇಯಃ ॥ ಮಾತು
ಸ್ಸಪತ್ನ್ಯಾ ಸ್ಸುದುರುಕ್ತಿವಿದ್ಧಃ ಶ್ವಸನ್ ರುಷಾ ದಂಡಹತೋ ಯಥಾಽಹಿಃ।
ಹಿತ್ವಾ ಮಿಷಂತಂ ಪಿತರಂ ಸನ್ನವಾಚಂ ಜಗಾಮ ಮಾತುಃ ಪ್ರರುದನ್ ಸ
ಕಾಶಂ ॥೧೪॥ ತಂ ನಿಶ್ವಸಂತಂ ಸ್ಫುರಿತಾಧರೋಷ್ಠಂ ಸುನೀತಿ ರುತ್ಸಂಗ
ಉದೂಹ್ಯ ಬಾಲಂ। ನಿಶಮ್ಯ ತತ್ಪೌರಮುಖಾ ನ್ನಿತಾಂತಂ ಸಾ ವಿವ್ಯಥೇ
ಯದ್ಗದಿತಂ ಸಪತ್ನ್ಯಾ ॥೧೫॥ ಸೋತ್ಸೃಜ್ಯ ಧೈರ್ಯಂ ವಿಲಲಾಪ ಶೋಕ
ದಾವಾಗ್ನಿನಾ ದಾವಲತೇವ ಬಾಲಾ। ವಾಕ್ಯಂ ಸಪತ್ನ್ಯಾಃ ಸ್ಮರತೀ ಸರೋ

---

ಬಯಸುವುದಾದರೆ, ಪುರುಷಂ - ಭಗವಂತನನ್ನು, ತಪಸಾ - ತಪಸ್ಸಿನಿಂದ, ಆರಾಧ್ಯ - ಪೂಜಿಸಿ, ತಸ್ಯ - ಆತನ, ಅನುಗ್ರಹೇಣೈವ - ಅನುಗ್ರಹದಿಂದಲೇ, ಮೇ - ನನ್ನ, ಗರ್ಭೇ - ಉದರದಲ್ಲಿ, ಆತ್ಮಾನಂ - ಜನ್ಮವನ್ನು, ಸಾಧಯ - ಸಂಪಾದಿಸು ॥೧೩॥

ಮೈತ್ರೇಯನು ಹೇಳುತ್ತಾನೆ!—ಸಪತ್ನ್ಯಾಃಮಾತುಃ - ಬಲತಾಯಿಯ, ಸುದುರುಕ್ತಿವಿದ್ಧಃ - ಕೆಟ್ಟ ಮಾತುಗಳಿಂದ ನೊಂದು, ದಂಡಹತಃ - ಕೋಲಿನಿಂದ ಹೊಡೆಯಲ್ಪಟ್ಟ, ಯಥಾಹಿಃ - ಹಾವಿನಂತೆ, ರುಷಾ-ಕ್ರೋಧದಿಂದ, ಶ್ವಸನ್ - ನಿಟ್ಟುಸಿರು ಬಿಡುತ್ತಾ, ಸನ್ನವಾಚಂ - ಮಾತಾಡದೆ, ಮಿಷಂತಂ - ನೋಡುತ್ತಿರುವ, ಪಿತರಂ - ತಂದೆಯನ್ನು, ಹಿತ್ವಾ - ಬಿಟ್ಟು, ಪ್ರರುದನ್ - ಗಟ್ಟಿಯಾಗಿ ಅಳುತ್ತಾ, ಮಾತುಃ - ತಾಯಿಯ, ಸಕಾಶಂ - ಬಳಿಗೆ, ಜಗಾಮ - ಹೋದನು ॥೧೪॥ ಸುನೀತಿಃ - ಸುನೀತಿಯು, ನಿಶ್ವಸಂತಂ - ನಿಟ್ಟುಸಿರು ಬಿಡುವ, ಸ್ಫುರಿತಾಧರೋಷ್ಠಂ - ನಡುಗುತ್ತಿರುವ ಕೆಳದುಟಿಯುಳ್ಳ, ತಂಬಾಲಂ - ಆಧ್ರುವನನ್ನು, ಉತ್ಸಂಗಂ - ತೊಡೆಯಲ್ಲಿ, ಉದೂಹ್ಯ - ಕುಳ್ಳಿರಿಸಿಕೊಂಡು, ಸಪತ್ನ್ಯಾ - ಸವತಿಯಿಂದ, ಯತ್ - ಯಾವುದು, ಗದಿತಂ - ಹೇಳಲ್ಪಟ್ಟಿತೋ, ತತ್ - ಅದನ್ನು, ಪೌರಮುಖಾತ್ - ಪಟ್ಟಣಿಗರಿಂದ, ನಿತಾಂತಂ - ಸಮಗ್ರವಾಗಿ, ನಿಶಮ್ಯ - ಕೇಳಿ, ಸಾ - ಆಕೆಯು, ವಿವ್ಯಥೇ - ವ್ಯಥೆಗೊಂಡಳು ॥ ೧೫ ॥ ಸಾಬಾಲಾ - ಆ ಸುನೀತಿಯು, ಶೋಕದಾವಾಗ್ನಿನಾ - ದುಃಖವೆಂಬ ಕಾಳ್ಕಿಚ್ಚಿನಿಂದ, ದಾವಲತೇವ - ಬೆಂಕಿಗೆ ಸಿ

---

ಬಯಸುತ್ತಿರುವೆ ॥ ೧೨ ॥ ಎಲೈ ಬಾಲಕನೆ ! ನನ್ನ ಉತ್ತಮಕುಮಾರನಂತೆ ನೀನೂ ಸಿಂಹಾಸನವನ್ನು ಏರಬೇಕೆಂದಿದ್ದಲ್ಲಿ, ತಪಸ್ಸಿನಿಂದ ಪರಮಪುರುಷನಾದ ಭಗವಂತನನ್ನಾರಾಧಿಸಿ, ಆತನನುಗ್ರಹವನ್ನು ಪಡೆದು ನನ್ನ ಗರ್ಭದಲ್ಲಿ ಜನಿಸು, ಎಂದು ನುಡಿದಳು ॥೧೩॥ ಅಯ್ಯಾ ವಿದುರನೆ ! ಬಳಿಕ ಆ ಧ್ರುವಕುಮಾರನು ತನ್ನ ಬಲತಾಯಿ ನುಡಿದ ಬಿರುನುಡಿಗಳೆಂಬ ಬಾಣಗಳಿಂದ ನೊಂದು ಕೋಲಿನಿಂದ ಬಡಿಯಲ್ಪಟ್ಟ ಕಾಳೋರಗದಂತೆ ರೋಷಗೊಂಡು ನಿಟ್ಟುಸಿರುಬಿಡುತ್ತಾ, ಬಲತಾಯಿಯಾದ ಸುರುಚಿಯು ಜರೆಯುತ್ತಿದ್ದರೂ ಬದುಲಾಡದೆ ಬಾಯಮುಚ್ಚಿಕೊಂಡುನೋಡುತ್ತಿರುವತಂದೆಯನ್ನುಳಿದುಗಟ್ಟಿಯಾಗಿ ಅಳುತ್ತಾ ತಾಯಿ-ಯಬಳಿಗೆ ಬಂದನು ॥೧೪॥ ಕೋಪದಿಂದ ಕೆಳದುಟಿಯು ತಳಮಳಗೊಳ್ಳುವಂತೆ ನಿಟ್ಟುಸಿರುಬಿಡುತ್ತಾ ಬಂದ ಮಗನನ್ನಪ್ಪಿಕೊಂಡು ಮುದ್ದಾಡಿ ತೊಡೆಯಮೇಲೆ ಕುಳ್ಳಿರಿಸಿಕೊಂಡು ಸಂತೈಸುತ್ತಾ, ನೆರೆಹೊರೆಯ ಪಟ್ಟಣಿಗರಿಂದ ತನ್ನ ಸವತಿಯಾಡಿದ ದುಗುಡವಾದ ಕೆಡುನುಡಿಗಳೆಲ್ಲವನ್ನೂ ಕೇಳಿ ಬಹಳವಾಗಿ ದುಃಖಗೊಂಡಳು ॥೧೫॥ ತರುವಾಯ ಶೋಕವೆಂಬುದು ಗತ್ತನುಕ್ಕಿ ಬರಲು, ಅದನ್ನು ಸೈರಿಸಲಾರದೆ ಆ ಸುನೀತಿಯು ಧೈರ್ಯಗುಂದಿ

ಜಶ್ರಿಯಾದೃಶಾ ಬಾಷ್ಪಕಲಾ ಮುವಾಹ ॥೧೬॥ ದೀರ್ಘಂ ಶ್ವಸಂ
ತೀ ವೃಜಿನಸ್ಯ ಪಾರ ಮಪಶ್ಯತೀ ಬಾಲಕ ಮಾಹ ಬಾಲಾ । ಮಾಽಮಂ
ಗಲಂ ತಾತ ! ಪರೇಷು ಮಂಸ್ಥಾ ಭುಂಕ್ತೇ ಜನೋ ಯತ್ಪರದುಃಖದ ಸ್ತ
ತ್ ॥೧೭॥ ಸತ್ಯಂ ಸುರುಚ್ಯಾಭಿಹಿತಂ ಭವಾನ್ ಮೇ ಯದ್ದುರ್ಭಗಾಯಾ
ಉದರೇ ಗೃಹೀತಃ । ಸ್ತನ್ಯೇನ ವೃದ್ಧಶ್ಚ ವಿಲಜ್ಜತೇ ಯಾಂ ಭಾರ್ಯೇತಿವಾ
ವೋಢು ಮಿಡಸ್ಪತಿ ರ್ಮಾಂ ॥೧೮॥ ಆತಿಷ್ಠ ತತ್ತಾತ! ವಿಮತ್ಸರ ಸ್ತ್ವ ಮು
ಕ್ತಂ ಸಮಾತ್ರಾಪಿ ಯದವ್ಯಲೀಕಂ । ಆರಾಧಯಾಽಧೋಕ್ಷಜಪಾದ

ಕ್ಕಿದ ಬಳ್ಳಿಯಂತೆ, ಧೈರ್ಯಂ - ಧೈರ್ಯವನ್ನು, ಉತ್ಸೃಜ್ಯ - ತೊರೆದು, ವಿಲಲಾಪ - ರೋದಿಸಿದಳು, ಸಪತ್ನ್ಯಾಃ - ಸವತಿಯ, ವಾಕ್ಯಂ - ಮಾತನ್ನು, ಸ್ಮರತೀ - ನೆನೆದು, ಸರೋ...ಯಾ - ತಾವರೆಯೆಸಳಿನಂತೆ ಕಾಂತಿಯುಳ್ಳ, ದೃಶಾ - ಕಣ್ಣಿನಿಂದ, ಬಾಷ್ಪಕಲಾಂ - ಕಂಬನಿಗಳನ್ನು, ಉವಾಹ - ಧರಿಸಿದಳು ॥೧೬॥ ಬಾಲಾ - ಸುನೀತಿಯು, ದೀರ್ಘಂ - ಉದ್ದವಾಗಿ, ಶ್ವಸಂತೀ - ಉಸಿರುಬಿಡುತ್ತಾ, ವೃಜಿನಸ್ಯ - ದುಃಖದ, ಪಾರಂ - ದಡವನ್ನು, ಅಪಶ್ಯತೀ - ಕಾಣದೆ, ಹೇ ತಾತ - ಅಯ್ಯಾ ಮಗುವೆ, ಯತ್ - ಯಾವ ಕಾರಣದಿಂದ, ಪರದುಃಖದಃ - ಇತರರಿಗೆ ದುಃಖವನ್ನುಂಟುಮಾಡಿದ, ಜನಃ - ಜನವು, ಭುಂಕ್ತೇ - ತಾನಿತ್ತುದನ್ನೇ ಅನುಭವಿಸುವುದೊ, ತತ್ - ಆದುದರಿಂದ, ಪರೇಷು - ಇತರರಲ್ಲಿ, ಅಮಂಗಲಂ - ಅಪರಾಧವನ್ನು, ಮಾಮಂಸ್ಥಾಃ - ತಿಳಿಯಬೇಡ ॥ ೧೭ ॥ ಇಡಸ್ಪತಿಃ - ಭೂಪತಿಯಾದ ಉತ್ತಾನಪಾದನು, ಯಾಂ ಮಾಂ - ಯಾವನನ್ನು, ಭಾರ್ಯೇತಿ - ಹೆಂಡತಿಯೆಂದು, ವಾ - ದಾಸಿಯೆಂದೂ, ವೋಢುಂ - ಸ್ವೀಕರಿಸುವುದಕ್ಕೆ, ವಿಲಜ್ಜತೇ - ನಾಚುತ್ತಿರುವನೋ, ಅಂತಹ, ದುರ್ಭಗಾಯಾಃ - ನಿರ್ಭಾಗ್ಯಳಾದ, ಮೇ - ನನ್ನ ಉದರೇ - ಗರ್ಭದಲ್ಲಿ, ಭವಾನ್ - ನೀನು, ಗೃಹೀತಃ - ಗ್ರಹಿಸಲ್ಪಟ್ಟ, ಸ್ತನ್ಯೇನ - ಸ್ತನ್ಯದಿಂದ, ವೃದ್ಧಶ್ಚ - ಬೆಳೆದವನೂ ಆದೆ ಅದರಿಂದ, ಸುರುಚ್ಯಾ - ಸುರುಚಿಯಿಂದ, ಅಭಿಹಿತಂ - ಹೇಳಲ್ಪಟ್ಟ ನುಡಿಯು, ಸತ್ಯಂ - ದಿಟವು ॥೧೮॥ ಹೇ ತಾತ - ಎಲೈ ತಂದೆಯೆ? ತತ್ - ಆದುದರಿಂದ, ತ್ವಂ - ನೀನು, ವಿಮತ್ಸರಃ - ಮತ್ಸರವಿಲ್ಲದೆ, ಸಮಾತ್ರಾಪಿ - ಸವತಿಯಾದರೂ ಆ ಸುರುಚಿಯಿಂದ, ಯದುಕ್ತಂ - ಯಾವುದು ಹೇಳಲ್ಪಟ್ಟಿತೋ, ಅದನ್ನು, ಅವ್ಯಲೀಕಂ - ನಿಷ್ಕಪಟವಾಗಿ, ಆತಿಷ್ಠ - ಆಚರಿಸು, ಉತ್ತಮವಾಯಥಾ - ಉತ್ತಮ

ಕಾಳ್ಗಿಚ್ಚಿಗೆ ಸಿಕ್ಕಿದೆಳಬಳ್ಳಿಯಂತೆ ಬಳಲಿ ಬೆಂಡಾಗಿ ಅಳುತ್ತಾ, ಸವತಿಯಾಡಿದ ಸೊಕ್ಕು ನುಡಿಗಳನ್ನು ನೆನನೆನೆದು ತಾವರೆಯೆಸಳಿನಂತೆ ಬೆಳಗುತ್ತಿರುವ ಕಣ್ಣುಗಳಿಂದ ಕಂಬನಿಗಳನ್ನು ತುಳುಕಿಸುತ್ತಾ, ದಟ್ಟವಾಗಿ ನಿಟ್ಟುಸಿರುಗಳನ್ನು ಬಿಡುತ್ತಾ, ಅಪಾರವಾದ ದುಃಖಪಾರಾವಾರದಲ್ಲಿ ಮುಳುಗಿ ಪಾರಗಾಣದ ಧ್ರುವಕುಮಾರನಿಗೆ ಹೇಳಿದಳೆಂತೆಂದರೆ ॥ ಅಪ್ಪಾ ಮಗುವೆ ! ಪರರಿಗೆ ದುಃಖವನ್ನುಂಟುಮಾಡಿದ ಪುರುಷನು ತಾನುಕೊಟ್ಟ ದುಃಖದ ಫಲವನ್ನು ತಾನನುಭವಿಸುವವನಾದುದರಿಂದ ನಿನಗಿತರರು ಅಪರಾಧವನ್ನು ಮಾಡಿದರೆಂದೆಣಿಸಬೇಡ॥೧೭॥ ಮಹಾರಾಜನಾದ ನಿಮ್ಮ ತಂದೆಯು ಯಾವನನ್ನನ್ನು ಹೆಂಡತಿಯೆಂದಾಗಲಿ ಕಡೆಗೆ ದಾಸಿಯೆಂದಾಗಲಿ ಇಟ್ಟುಕೊಳ್ಳುವುದಕ್ಕೆ ನಾಚುತ್ತಿರುವನೋ, ಅಂತಹ ನಿರ್ಭಾಗ್ಯಳಾದನನ್ನ ಗರ್ಭದಲ್ಲಿ ನೀನು ಜನಿಸಿದೆಯಾದುದರಿಂದ ಸುರುಚಿಯು ನುಡಿದ ನುಡಿಯು ದಿಟವೇ ಸರಿ ॥೧೮॥ ಮಗುವೆ ! ಆದುದರಿಂದ ಬಲತಾಯಿಯಾದರೂ ಆ ಸುರುಚಿಯು ಹೇಳಿದುದನ್ನು ನಿರ್ಮತ್ಸರನಾಗಿ ಆಚರಿಸು. ಉತ್ತಮಕುಮಾರನಂತೆ ನೀನೂ ಸಿಂಹಾಸನವನ್ನೇರಲೆಳ

ಪದ್ಮಂ ಯದೀಚ್ಛಸೇ ಽ ಧ್ಯಾಸನ ಮುತ್ತಮೋ ಯಥಾ ॥೧೯॥ ಯಸ್ಯಾಂ
ಘ್ರಿಪದ್ಮಂ ಪರಿಚರ್ಯ ವಿಶ್ವವಿಭಾವನಾಯಾತ್ತ ಗುಣಾ ಽ ಭಿಪತ್ತೇಃ ।
ಅಜೋ ಽ ಧ್ಯತಿಷ್ಠತ್ಖಲು ಪಾರಮೇಷ್ಠ್ಯಂ ಪದಂ ಜಿತಾತ್ಮಶ್ವಸನಾಽಭಿವಂ
ದ್ಯಂ ॥೨೦॥ ತಥಾ ಮನುರ್ವೋ ಭಗವಾನ್ ಪಿತಾಮಹೋ ಯಮೇಕಮ
ತ್ಯಾ ಪುರುದಕ್ಷಿಣೈರ್ಮಖೈಃ । ಇಷ್ಟ್ವಾಽಭಿಪೇದೇ ದುರವಾಪ ಮನ್ಯತೋ
ಭೌಮಂ ಸುಖಂ ದಿವ್ಯ ಮಥಾಽಪವರ್ಗ್ಯಂ ॥೨೧॥ ತಮೇವ ವತ್ಸಾಶ್ರಯ
ಭೃತ್ಯವತ್ಸಲಂ ಮುಮುಕ್ಷುಭಿ ರ್ಮೃಗ್ಯಪದಾಬ್ಜಪದ್ಧತಿಂ । ಅನನ್ಯಭಾವೇ
ನಿಜಧರ್ಮಭಾವಿತೇ ಮನಸ್ಯವಸ್ಥಾಪ್ಯ ಭಜಸ್ವ ಪೂರುಷಂ ॥೨೨॥ ನಾನ್ಯಂ

ನಂತೆ, ಅಧ್ಯಾಸನಂ - ಸಿಂಹಾಸನವನ್ನು, ಇಚ್ಛಸೇಯದಿ- ಬಯಸುವುದಾದರೆ, ಅಧೋ...ದ್ಮಂ - ವಿಷ್ಣುವಿನ ಪಾದಕಮಲವನ್ನು, ಆರಾಧಯ - ಪೂಜಿಸು ॥೧೯॥

ವಿಶ್ವವಿಭಾವನಾಯ - ಲೋಕಪಾಲನೆಗಾಗಿ, ಆತ್ತ..ತ್ತೇಃ, ಆತ್ತ - ಅಂಗೀಕರಿಸಲ್ಪಟ್ಟ, ಗುಣಾಭಿಪತ್ತೇಃ - ಸತ್ವಮೂರ್ತಿಯುಳ್ಳ, ಯಸ್ಯ - ಯಾವನ, ಅಂಘ್ರಿಪದ್ಮಂ - ಪಾದಕಮಲವನ್ನು, ಪರಿಚರ್ಯ - ಆರಾಧಿಸಿ, ಅಜಃ - ಬ್ರಹ್ಮನು, ಜಿತಾ...ದ್ಯಂ, ಜಿತ - ಗೆಲ್ಲಲ್ಪಟ್ಟ, ಆತ್ಮ - ಮನಸ್ಸು, ಶ್ವಸನ - ಪ್ರಾಣವಾಯುಗಳೂ ಉಳ್ಳ, ಯೋಗಿಗಳಿಂದ, ಅಭಿವಂದ್ಯಂ - ನಮಸ್ಕರಿಸಲ್ಪಟ್ಟ, ಪಾರಮೇಷ್ಠ್ಯಂ - ಸರ್ವೋನ್ನತವಾದ, ಪದಂ - ಸ್ಥಾನವನ್ನು, ಅಧ್ಯತಿಷ್ಠತ್ಖಲು - ಪಡೆದನಷ್ಟೆ ॥೨೦॥ ತಥಾ - ಹಾಗೆಯೇ, ವಃ- ನಿಮ್ಮ ಪಿತಾಮಹಃ - ತಾತನಾದ, ಭಗವಾನ್ - ಪೂಜ್ಯನಾದ, ಮನುರಪಿ - ಮನುವೂ, ಏಕಮತ್ಯಾ - ಸರ್ವಾಂತರ್ಯಾಮಿ ದೃಷ್ಟಿಯಿಂದ, ಪುರುದಕ್ಷಿಣೈಃ - ಅಧಿಕ ದಕ್ಷಿಣೆಗಳುಳ್ಳ, ಮಖೈಃ - ಯಜ್ಞಗಳಿಂದ, ಯಂ - ಯಾವನನ್ನು, ಇಷ್ಟ್ವಾ - ಆರಾಧಿಸಿ, ಅನ್ಯತಃ - ಇತರರಿಂದ, ದುರವಾಪಂ - ಹೊಂದಲಸಾಧ್ಯವಾದ, ಭೌಮಂ - ಭೂಸಂಬಂಧವಾದ, ದಿವ್ಯಂ - ಸ್ವರ್ಗಸಂಬಂಧವಾದ, ಅಪವರ್ಗ್ಯಂ - ಮೋಕ್ಷರೂಪವಾದ, ಸುಖಂ - ಸುಖವನ್ನು, ಅಭಿಪೇದೇ - ಹೊಂದಿದನೋ ॥೨೧॥ ಹೇವತ್ಸ - ಎಲೈ ಮಗುವೆ ! ಭೃತ್ಯವತ್ಸಲಂ - ಭಕ್ತರಲ್ಲಿ ವಾತ್ಸಲ್ಯವುಳ್ಳ, ಮುಮುಕ್ಷುಭಿಃ - ಮೋಕ್ಷಾಪೇಕ್ಷಿಗಳಿಂದ, ಮೃಗ್ಯ...ತಿಂ - ಹುಡುಕಲ್ಪಟ್ಟ ಪಾದಕಮಲ ಮಾರ್ಗವುಳ್ಳ, ತಮೇವ ಪೂರುಷಂ - ಆ ಪರಮಾತ್ಮನನ್ನು, ಅನನ್ಯಭಾವಿತೇ - ಏಕಾಗ್ರವಾದ, ಮನಸಿ - ಮನಸ್ಸಿನಲ್ಲಿ, ಅವಸ್ಥಾಪ್ಯ - ನೆಲೆಗೊಳಿಸಿ, ಅನನ್ಯಭಾವಃ-ನಿಶ್ಚಿಂತನಾಗಿ, ಭಜಸ್ವ-ಧ್ಯಾನಿಸು ॥೨೨॥

ಸುವೆಯಾದರೆ ನಿಷ್ಕಪಟಭಾವದಿಂದ ಶ್ರೀ ನಾರಾಯಣಮೂರ್ತಿಯ ಪಾದಕಮಲವನ್ನಾರಾಧಿಸು ॥೧೯॥ ಪೂರ್ವದಲ್ಲಿ ಲೋಕಕರ್ತನಾದ ಚತುರ್ಮುಖನು, ಜಗತ್ಪಾಲನೆಗಾಗಿ ಸತ್ವಾವತಾರವನ್ನು ಪಡೆದ ಆ ಭಗವಂತನ ಪಾದಪದ್ಮವನ್ನಾರಾಧಿಸಿ, ಸರ್ವೋತ್ತಮವಾಗಿಯೂ, ಪ್ರಾಣಮನೋಜಯವನ್ನು ಪಡೆದ ಮಹಾ ಯೋಗಿಗಳಿಗೆ ವಂದ್ಯವಾಗಿಯೂ, ಇರುವ ಸತ್ಯಲೋಕಾಧಿಪತ್ಯವನ್ನು ಪಡೆದನು ॥೨೦॥ ಅಂತೆಯೇ ನಿಮ್ಮ ಪಿತಾಮಹನಾದ ಮನುಚಕ್ರೇಶ್ವರನೂಕೂಡ, ಸರ್ವಾಂತರ್ಯಾಮಿ ದೃಷ್ಟಿಯನ್ನು ಪಡೆದು, ಭೂರಿದಕ್ಷಿಣೆಗಳುಳ್ಳ ಅನೇಕಯಜ್ಞಗಳಿಂದ ಭಗವಂತನನ್ನಾರಾಧಿಸಿ ಇತರರಿಂದ ಹೊಂದಲಸದಳವಾದ ಭೂಮಂಡಲಾಧಿಪತ್ಯವನ್ನೂ, ಬಳಿಕ ಸ್ವರ್ಗಾದ್ಯುತ್ತಮಲೋಕಭೋಗಗಳನ್ನೂ, ತರುವಾಯ ಅಖಂಡಾನಂದರೂಪವಾದ ಮೋಕ್ಷಪದವನ್ನೂ ಪಡೆದನು ॥೨೧॥ ಎಲೈ ಮಗುವೆ ! ಆದುದರಿಂದ ಮಹಾಯೋಗಿವಂದಿತಚರಣಾರವಿಂದನಾಗಿಯೂ, ಭಕ್ತವತ್ಸಲನಾಗಿಯೂ ಇರುವ ಆಪರನು

ತತಃ ಪದ್ಮಪಲಾಶಲೋಚನಾ ದ್ದುಃಖಚ್ಛಿದಂ ತೇ ಮೃಗಯಾಮಿ ಕಂಚನ ।
ಯೋ ಮೃಗ್ಯತೇ ಹಸ್ತಗೃಹೀತಪದ್ಮಯಾ ಶ್ರಿಯೇತರೈ ರಂಗ ! ವಿಮೃಗ್ಯ
ಮಾಣಯಾ ‖೨೩‖ ಮೈತ್ರೇಯಃ ‖ ಏವಂ ಸಂಜಲ್ಪಿತಂ ಮಾತು ರಾಕ
ರ್ಣ್ಯಾರ್ಥಾಗಮಂ ವಚಃ । ಸನ್ನಿಯಮ್ಯಾತ್ಮನಾತ್ಮಾನಂ ನಿಶ್ಚಕ್ರಾಮ
ಪಿತುಃ ಪುರಾತ್ ‖೨೪‖ ನಾರದ ಸ್ತದುಪಾಕರ್ಣ್ಯ ಜ್ಞಾತ್ವಾ ತಸ್ಯ ಚಿಕೀ
ರ್ಷಿತಂ । ಸ್ಪೃಷ್ಟ್ವಾ ಮೂರ್ಧನ್ಯಘಘ್ನೇನ ಪಾಣಿನಾ ಪ್ರಾಹ ವಿಸ್ಮಿ
ತಃ ‖೨೫‖ ಅಹೋ ! ತೇಜಃ ಕ್ಷತ್ರಿಯಾಣಾಂ ಮಾನಭಂಗ ಮಮೃಷ್ಯತಾಂ।

---

ಹೇಅಂಗ - ಎಲೈ ಮಗುವೆ! ಯಃ - ಯಾವನು, ಇತರೈಃ - ಬ್ರಹ್ಮಾದಿಗಳಿಂದ, ವಿಮೃಗ್ಯಮಾಣಯಾ - ಹುಡಕಲ್ಪಡುವ, ಹಸ್ತ...ಯಾ - ಕೈಯಲ್ಲಿ ಪದ್ಮವನ್ನು ಹಿಡಿದ, ಶ್ರಿಯಾ - ಲಕ್ಷ್ಮಿಯಿಂದ, ಮೃಗ್ಯತೇ - ಹುಡುಕಲ್ಪಡುವನೊ, ಅಂತಹ, ಪದ್ಮ...ತ್ - ತಾವರೆ ಯೆಸಳಿನಂತೆ ಕಣ್ಣುಳ್ಳ, ತತಃ - ಆ ಭಗವಂತನಿಗಿಂತಲೂ, ಅನ್ಯಾ - ಇತರರನ್ನು, ತೇ - ನಿನ್ನ, ದುಃಖಚ್ಛಿದಂ - ದುಃಖನಾಶಕನನ್ನಾಗಿ, ಕಂಚನ - ಯಾವನನ್ನೂ, ನಮೃಗಯಾಮಿ - ತಿಳಿಯಲಾರೆನು ‖೨೩‖ ಮೈತ್ರೇಯನು ಹೇಳುತ್ತಾನೆ, ಏವಂ - ಇಂತು, ಮಾತುಃ - ತಾಯಿಯ, ಸಂಜಲ್ಪಿತಂ - ರೋದನವನ್ನು, ಅರ್ಥಾಗಮಂ - ಪುರುಷಾರ್ಥವನ್ನುಂಟುಮಾಡುವ, ವಚಃ - ಮಾತನ್ನೂ, ಆಕರ್ಣ್ಯ - ಕೇಳಿ, ಆತ್ಮನಾ - ತಾನೇ, ಆತ್ಮಾನಂ - ಮನಸ್ಸನ್ನು, ಸನ್ನಿಯಮ್ಯ - ಸಂತೈಸಿ, ಪಿತುಃ - ತಂದೆಯ, ಪುರಾತ್ - ಪಟ್ಟಣದಿಂದ, ನಿಶ್ಚಕ್ರಾಮ - ಹೊರಟನು ‖೨೪‖ ನಾರದಃ - ನಾರದಮುನಿಯು, ತತ್ - ಅದನ್ನು, ಉಪಾಕರ್ಣ್ಯ - ಕೇಳಿ, ತಸ್ಯ - ಅವನ, ಚಿಕೀರ್ಷಿತಂ- ಕೋರಿಕೆಯನ್ನು, ಜ್ಞಾತ್ವಾ - ತಿಳಿದು, ಅಘಘ್ನೇನ - ಪಾಪಹಾರಕವಾದ, ಪಾಣಿನಾ - ಹಸ್ತದಿಂದ, ಮೂರ್ಧನಿ - ತಲೆಯಲ್ಲಿ, ಸ್ಪೃಷ್ಟ್ವಾ - ಸವರಿ, ವಿಸ್ಮಿತಃ - ಆಶ್ಚರ್ಯಗೊಂಡು, ಪ್ರಾಹ - ಹೇಳುತ್ತಾನೆ‖೨೫‖ ಮಾನಭಂಗಂ - ಮಾನಭಂಗವನ್ನು, ಅಮೃಷ್ಯತಾಂ - ಸೈರಿಸಲಾರದ, ಕ್ಷತ್ರಿಯಾಣಾಂ - ಕ್ಷತ್ರಿಯರ, ತೇಜಃ - ತೇಜಸ್ಸು, ಅಹೋ - ಆಶ್ಚರ್ಯವು, ಅಯಂ - ಇವನು, ಬಾಲೋಪಿ - ಹಸುಳೆಯಾಗಿದ್ದರೂ, ಸ

---

ಪುರುಷನನ್ನು ಏಕಾಗ್ರವಾದ ಮನಸ್ಸಿನಲ್ಲಿ ನೆಲೆಗೊಳಿಸಿನಿಶ್ಚಿಂತನಾಗಿ ಧ್ಯಾನಿಸು‖೨೨‖ ಎಲೈ ಮಗುವೆ ! ಯಾವ ಜಗನ್ಮಾತೆಯ ಕರುಣಾಕಟಾಕ್ಷಪಾತ್ರಕ್ಕಾಗಿ ಬ್ರಹ್ಮಾದಿ ದೇವತೆಗಳು ಕೂಡ ನಿಯಮವಂತರಾಗಿ ತಪೋವ್ರತಾದಿಗಳಿಂದಾರಾಧಿಸುವರೋ, ಅಂತಹ ರಮಾದೇವಿಯು ಕಮಲವೆಂಬಕೈದೀವಿಗೆಯನ್ನು ಹಿಡಿದು ಯಾವಭಗವಂತನನ್ನುಹುಡುಕುತ್ತಿರುವಳೋ ಪುಂಡರೀಕಾಕ್ಷನಾದ ಆ ನಾರಾಯಣಮೂರ್ತಿಯ ಹೊರತು, ಮತ್ತಾವನೂ ನಿನ್ನ ದುಃಖವನ್ನು ಕಳೆಯಲಾರನು ಎಂದು ಹೇಳಿದಳು ‖೨೩‖ ಅಯ್ಯಾ ವಿದುರನೆ ! ಇಂತು ತಾಯಿಯು ರೋದಿಸಿದುದನ್ನೂ,ಪರಮ ಪುರುಷಾರ್ಥಪ್ರದವಾದ ಆಕೆಯ ಹಿತೋಪದೇಶವನ್ನೂ ಕೇಳಿ, ಧ್ರುವಕುಮಾರನು ತನ್ನ ಮನಸ್ಸನ್ನು ಧೈರ್ಯಗೊಳಿಸಿಕೊಂಡು, ಕೂಡಲೇ ತಂದೆಯ ಪಟ್ಟಣದಿಂದ ಹೊರಟುಹೋದನು ‖೨೪‖ ಆಗ ನಾರದಮಹಾಮುನಿಯು ಅದನ್ನು ಕೇಳಿ, ಹಸುಳೆಯಾದ ಆ ಧ್ರುವನಪ್ರಯತ್ನವನ್ನು ತಿಳಿದುಬಂದು ಪಾಪಹಾರಕವಾದ ತನ್ನ ಕರಕಮಲದಿಂದ ಅವನ ತಲೆಯನ್ನು ಸವರಿ, ಆಶ್ಚರ್ಯಭರಿತನಾಗಿ ಯೋಚಿಸಿದನು ‖೨೫‖ ಆಹಾ ! ಇದೇನು ? ಇವನು ಬಾಲನಾದರೂ ಬಲತಾಯಿಯಾಡಿದ ದುರ್ವಾಕ್ಯಗಳನ್ನು ಮನಸ್ಸಿನಲ್ಲಿಟ್ಟು ಹೊರಟಿರುವನಲ್ಲಾ ! ಸ್ವಲ್ಪವಾದರೂ ಮಾನಭಂಗವನ್ನು ಸೈರಿಸಲಾರದ ಕ್ಷತ್ರಿಯರ

ಬಾಲೋಽಪ್ಯಯಂ ಹೃದಾ ಧತ್ತೇ ಯತ್ಸಮಾತುರಸದ್ವಚಃ ॥ ೨೬ ॥
✱ಶ್ರೀ ನಾರದಃ ॥ ನಾಧುನಾಪ್ಯವಮಾನಂ ತೇ ಸಂಮಾನಂ ವಾಪಿ ಪುತ್ರಕ ! ।
ಲಕ್ಷಯಾಮಃ ಕುಮಾರಸ್ಯ ಸಕ್ತಸ್ಯ ಕ್ರೀಡನಾದಿಷು ॥೨೭॥ ವಿಕಲ್ಪೇ ವಿದ್ಯ
ಮಾನೇಪಿ ನಹ್ಯಸಂತೋಷಹೇತವಃ । ಪುಂಸೋ ಮೋಹಮೃತೇ ಭಿನ್ನಾ
ಯಲ್ಲೋಕೇ ನಿಜಕರ್ಮಭಿಃ ॥೨೮॥ ಪರಿತುಷ್ಯೇತ್ತತಸ್ತಾತ ! ತಾವನ್ಮಾ

ಮಾತುಃ - ಬಲತಾಯಿಯ, ಅಸದ್ವಚಃ - ಕೆಟ್ಟನುಡಿಯನ್ನು, ಹೃದಾ - ಮನಸ್ಸಿನಲ್ಲಿ, ಧತ್ತೇ - ಧರಿಸಿರುವನಲ್ಲಾ ॥೨೬॥

ಹೇಪುತ್ರಕ - ಎಲೈ ಮಗುವೆ! ಕ್ರೀಡನಾದಿಷು - ಆಟ ಮೊದಲಾದವುಗಳಲ್ಲಿ, ಸಕ್ತಸ್ಯ - ಆಸಕ್ತನಾದ, ಕುಮಾರಸ್ಯ - ಹಸುಳೆಯಾದ, ತೇ - ನಿನಗೆ, ಅಧುನಾಪಿ - ಈಗಲೂ, ಅವಮಾನಂ - ಅವಮಾನವನ್ನೂ, ಸಂಮಾನಂವಾಪಿ - ಬಹುಮಾನವನ್ನೂ, ನಲಕ್ಷಯಾಮಃ - ಕಾಣೆವು ॥೨೭॥ ಯತ್ - ಯಾವ ಕಾರಣದಿಂದ, ಲೋಕೇ - ಲೋಕದಲ್ಲಿ, ನಿಜಕರ್ಮಭಿಃ - ತಮ್ಮ ಕರ್ಮಗಳಿಂದ, ಭವತಿ - ಉಂಟಾಗುವುದೋ, ಆದುದರಿಂದ, ವಿಕಲ್ಪೇ - ಸುಖದುಃಖಾದಿ ವಿವೇಕವು, ವಿದ್ಯಮಾನೇಪಿ - ಇದ್ದರೂ, ಪುಂಸಃ - ಪುರುಷನಿಗೆ, ಮೋಹಂಋತೇ - ಮೋಹವನ್ನುಳಿದು, ಭಿನ್ನಾಃ - ಬೇರೆಯಾದ, ಅಸಂತೋಷಹೇತವಃ - ದುಃಖಕಾರಣಗಳು, ನ - ಇಲ್ಲ ॥೨೮॥ ಹೇತಾತ - ಎಲೈ ತಂದೆಯೆ! ತತಃ - ಆದುದರಿಂದ, ಬುಧಃ -

ತೇಜಸ್ಸೆಂಬುದೆಷ್ಟರದೋ ! ಆಶ್ಚರ್ಯವು॥೨೬॥

ಎಲೈ ಮಗುವೆ ! ಆಟವಾಡುವ ವಯಸ್ಸುಳ್ಳ ಹಸುಳೆಯಾದ ನಿನಗೆ ಈ ಬಾಲ್ಯದಲ್ಲಿ ಮಾನವಾಗಲಿ, ಅವಮಾನವಾಗಲಿ ಇಲ್ಲನೆಂದೆಣಿಸುವೆನು. ಮಾನಾವಮಾನಗಳನ್ನು ಲೆಕ್ಕಿಸದೆ ಆಟಗಳನ್ನಾಡುವುದೇ ಬಾಲ್ಯಕ್ಕೆ ಸಹಜಧರ್ಮವಾದುದರಿಂದ, ನೀನಿದಕ್ಕೆ ಚಿಂತಿಸಬೇಡ ॥೨೭॥ "ನಾನು ಬಾಲರಂತೆ ಅಜ್ಞಾನಿಯಲ್ಲ. ಬಾಲವಯಸ್ಕನಾದರೂ ವಿವೇಕಿಯಾದುದರಿಂದ ಚಿಂತಿಸುವೆನು" ಎಂಬೆಯೇನೋ? ಲೋಕದಲ್ಲಿ ಸುಖದುಃಖಗಳೆಂಬುವು ತಮ್ಮ ಪ್ರಾಕ್ತನ ಕರ್ಮಾನುಸಾರವಾಗಿ ಪ್ರಾಪ್ತವಾಗುವುದರಿಂದ,ವಿವೇಕವೆಂಬುದುಂಟಾಗಿದ್ದರೂ ಪುರುಷನಿಗೆ ಸುಖದುಃಖಗಳನ್ನುಂಟುಮಾಡುವುದಕ್ಕೆ ದೇಹಾತ್ಮಭ್ರಮರೂಪವಾದ ಮೋಹ ಹೊರತು ಮತ್ತಾವುವೂ ಕಾರಣಗಳಲ್ಲ ॥೨೮॥ ಇಂತು ಮೋಹವೇ ಸುಖದುಃಖಕಾರಣ

✱ ವಿ. ಮೂಲ. ಶ್ಲೋ॥ ಕ್ವ ಯಾತ್ಯೇಕೋ ಭವಾನ್ ವತ್ಸ ! ಹಿತ್ವಾ ಸ್ವಗೃಹ ಮೃದ್ಧಿಮತ್। ಲಕ್ಷಯೇ ತ್ವಾಽವಮತ್ಯಾಂಗ ? ಸಂತಪ್ತಂ ಸ್ವಜನೋತ್ಥಯಾ ॥೧೬॥ ಧ್ರುವಃ ॥ ಕಿ ಮೇತದ್ಭಗವನ್ ! ಧ್ಯಾನಾದ್ದೃಷ್ಟಂ ಕಿಂ ಯೋಗರಾಧಸಾ। ನೋತ್ಸಹೇ ಸುರುಚೇ ರ್ವಾಚಾ ಸಮಾಧಾತುಂ ಮನಃ ಕ್ಷತಂ॥೧೭॥

ತಾ॥ ಎಲೈ ಮಗುವೆ? ಸರ್ವಸಂಪತ್ಸಮೃದ್ಧವಾದ ಅರಮನೆಯನ್ನುಳಿದು, ಒಂಟಿಯಾಗಿ ನೀನೆಲ್ಲಿಗೆ ತೆರಳುತ್ತಿರುವೆ ? ನಿನ್ನನ್ನು ನೋಡಿದರೆ, ಸ್ವಜನರಿಂದ ಅವಮಾನಗೊಂಡು ಬಳಲುತ್ತಿರುವಂತೆ ತೋರುವುದು. ಎಂದು ನಾರದಮುನಿಯು ಬೆಸಗೊಂಡನು ॥೧೬॥ ಆಗ ಧ್ರುವನು, ಅಯ್ಯಾ ಭಗವಂತನಾದ ದೇವಮುನಿಯೆ ! ನೀನಿದನ್ನು ಧ್ಯಾನದಿಂದ ತಿಳಿದೆಯಾ? ಅಥವಾ ಯೋಗದೃಷ್ಟಿಯಿಂದ ಕಂಡೆಯಾ ? ಬಲತಾಯಿಯಾಡಿದ ಪರುಷೋಕ್ತಿಗಳಿಂದ ನೊಂದಿರುವ ನನ್ನ ಮನಸ್ಸನ್ನು ಸಮಾಧಾನಗೊಳಿಸಲಾರೆನು. ಆದುದರಿಂದ ತೆರಳುವೆನು ಎಂದು ನುಡಿದನು. ಈ ಭಾಗಕ್ಕೆ ಅನೇಕ ಕೋಶಗಳಲ್ಲಿ ಮೂಲವಾಗಲಿ,ವ್ಯಾಖ್ಯಾನವಾಗಲಿ ಕಾಣಬರುವುದಿಲ್ಲ.

ತ್ರೇಣ ಪೂರುಷಃ। ದೈವೋಪಸಾದಿತಂ ಯಾವ ದ್ವೀಕ್ಷ್ಯೇಶ್ವರಗತಿಂ ಬುಧಃ॥
ಅಥ ಮಾತ್ರೋಪದಿಷ್ಟೇನ ಯೋಗೇನಾ ಽ ವರುರುತ್ಸಸಿ । ಯತ್ಪ್ರಸಾದಂ
ಸವೈ ಪುಂಸಾಂ ದುರಾರಾಧ್ಯೋ ಮತೋ ಮಮ॥೩೪॥ ಮುನಯಃ ಪದವೀಂ
ಯಸ್ಯ ನಿಸ್ಸಂಗೇನೋರುಜನ್ಮಭಿಃ । ನವಿದು ರ್ಮೃಗಯಂತೋಽಪಿ ತೀವ್ರ
ಯೋಗ ಸಮಾಧಿನಾ ॥೩೫॥ ‡ ಅತೋ ನಿವರ್ತತಾ ಮೇಷ ನಿರ್ಬಂಧ ಸ್ತವ

ತಿಳುವಳಿಕೆಯುಳ್ಳ, ಪೂರುಷಃ - ಪುರುಷನು, ಈಶ್ವರಗತಿಂ - ದೈವಗತಿಯನ್ನು, ವೀಕ್ಷ್ಯ - ತಿಳಿದು, ಯಾವತ್ - ಎಷ್ಟು, ದೈವೋಪಸಾದಿತಂ - ಪ್ರಾಚೀನಕರ್ಮದಿಂದ ಪ್ರಾಪ್ತವಾಗುವುದೋ, ತಾವನ್ಮಾತ್ರೇಣ - ಅಷ್ಟುಮಾತ್ರದಿಂದಲೇ, ಪರಿತುಷ್ಯೇತ್ - ಸಂತೋಷಗೊಳ್ಳಬೇಕು ॥೩೩॥ ಅಥ - ಅಲ್ಲದೆ, ಮಾತ್ರಾ - ತಾಯಿಯಿಂದ, ಉಪದಿಷ್ಟೇನ - ಉಪದೇಶಿಸಲ್ಪಟ್ಟ, ಯೋಗೇನ - ಭಕ್ತಿಯೋಗದಿಂದ, ಯತ್ಪ್ರಸಾದಂ - ಯಾರ ಅನುಗ್ರಹವನ್ನು, ಅವರುರುತ್ಸಸಿ - ಪಡೆಯಲೆಳಸುವೆಯೋ, ಸವೈ - ಆ ಭಗವಂತನು, ಪುಂಸಾಂ- ಪುರುಷರಿಗೆ, ದುರಾರಾಧ್ಯಃ - ದುಃಖದಿಂದಾರಾಧಿಸುವುದಕ್ಕೂ ಶಕ್ಯನಲ್ಲ, ಎಂದು, ಮಮ - ನನಗೆ, ಮತಃ - ಸಮ್ಮತನು ॥೩೪॥ ಮುನಯಃ - ಯೋಗಿಗಳು, ಉರುಜನ್ಮಭಿಃ - ಅನೇಕ ಜನ್ಮಗಳಲ್ಲಿ, ನಿಸ್ಸಂಗೇನ - ಸಂಗರಹಿತವಾದ, ತೀವ್ರಯೋಗೇನ - ಯುಕ್ತವಾದ, ಸಮಾಧಿನಾ - ಚಿತ್ತೈಕಾಗ್ರ್ಯದಿಂದ, ಮೃಗಯಂತೋಽಪಿ - ಹುಡುಕಿದರೂ, ಯಸ್ಯ - ಯಾವನ, ಪದವೀಂ - ಮಾರ್ಗವನ್ನು, ನವಿದುಃ - ತಿಳಿಯಲಿಲ್ಲವೋ ॥೩೫॥ ಅತಃ - ಆದುದರಿಂದ, ತವ - ನಿನ್ನ, ಏಷಃ - ಈ, ನಿರ್ಬಂಧಃ - ಹಠವು, ನಿಷ್ಫಲಃ - ಪ್ರಯೋಜನವಿಲ್ಲದುದು, ನಿವರ್ತತಾಂ - ಹಿಂದಿರುಗು, ಶ್ರೇಯಸಾಂ - ಶ್ರೇಯಸ್ಸುಗಳ, ಕಾಲೇ - ಕಾಲವು,

ವಾಗಿರುವುದರಿಂದ, ವಿವೇಕಿಯಾದ ಪುರುಷನು ದೈವಾನುಕೂಲ್ಯವಿಲ್ಲದೆ ಯಾವಪ್ರಯತ್ನಗಳೂ ಫಲಿಸುವುದಿಲ್ಲವೆಂದು ತಿಳಿದು, ಪ್ರಾಚೀನ ಕರ್ಮಾನುಗುಣವಾಗಿ ಎಷ್ಟುಮಾತ್ರ ಸುಖದುಃಖಗಳುಂಟಾಗುವುವೋ, ಅಷ್ಟುಮಾತ್ರದಿಂದಲೇ ಸಂತೋಷಗೊಳ್ಳಬೇಕಲ್ಲದೆ ಅಧಿಕ ಸುಖಕ್ಕಾಗಿ ಪ್ರಯತ್ನಿಸಬಾರದು ॥೩೩॥ ಮತ್ತು, ನೀನು ತಾಯಿಯುಪದೇಶಿಸಿದ ಯೋಗ ಮಾರ್ಗದಿಂದ ಯಾರ ಅನುಗ್ರಹವನ್ನು ಪಡೆಯಬೇಕೆಂದು ಬಯಸುತ್ತಿರುವೆಯೋ, ಆ ಭಗವಂತನನ್ನು ಎಷ್ಟುಶ್ರಮದಿಂದಾರಾಧಿಸಿದರೂ, ಆತನು ಸಾಧ್ಯನಲ್ಲವೆಂದರಿಯುವೆನು ॥೩೪॥ ಮನನಶೀಲರಾದ ಮಹಾಯೋಗಿಗಳು ಹಲವು ಜನ್ಮಗಳಲ್ಲಿ ನಿಸ್ಸಂಗರಾಗಿ ತೀವ್ರಯೋಗವನ್ನು ಪಡೆದ ಚಿತ್ತೈಕಾಗ್ರ್ಯದಿಂದ ಅರಸಿದರೂ,ಆ ಭಗವಂತನ ದಾರಿಯನ್ನು ಕಾಣಲಾರದೇ ಹೋದರು ॥೩೫॥ ಆದುದರಿಂದ ನೀನಿಂತು ಹಠಗೊಳ್ಳುವುದು ಪ್ರಯೋಜನಕಾರಿಯಲ್ಲ. ಹಿಂದಿರುಗಿ ಮನೆಗೆ ಹೋಗು. ನೀನು ವೃದ್ಧನಾದ ಬಳಿಕ ಶ್ರೇಯಸ್ಸಮಯವು ಪ್ರಾಪ್ತ

‡ ದೀ. (ನಿತರಾಂ + ವರ್ತತಾಂ - ನಿವರ್ತತಾಂ,) (ನಿಶ್ಚಿತಂ ಫಲಂ - ಯಸ್ಯಾಸಃ - ನಿಷ್ಫಲಃ,) ಎಂಬ ವ್ಯುತ್ಪತ್ತಿಯಿಂದ ಈ ಶ್ಲೋಕಕ್ಕೆ ನಾರದರ ಮುಖ್ಯ ತಾತ್ಪರ್ಯವೇನೆಂದರೆ "ಎಲೈ ಮಗುವೆ! ಭಕ್ತಿಪ್ರಿಯನಾದ ಭಗವಂತನು ಭಕ್ತಿಯೋಗದಿಂದ ಮೆಚ್ಚುವನೇ ಹೊರತು, ತಪಸ್ಸಮಾಧಿಗಳಿಂದ ಮೆಚ್ಚುವನಲ್ಲ. ಆದುದರಿಂದ ನಿನ್ನ ತಾಯಿಯುಪದೇಶದಂತೆ ಭಕ್ತಿಯೋಗವನ್ನೇ ಬಲವಾಗಿ ಹಿಡಿ. ನಿನ್ನ ಹಠವು ಗೆಲ್ಲುವುದು. ಭಗವದಾರಾಧನೆಗೆ ಬಾಲ್ಯವೇ ಸುಸಮಯವಲ್ಲದೆ ಮುದಿತನವಲ್ಲ. ಎಂದುಪದೇಶಿಸಿದನು"

ನಿಷ್ಫಲಃ । ಯತಿಷ್ಯತಿ ಭವಾನ್ ಕಾಲೇ ಶ್ರೇಯಸಾಂ ಸಮುಪಸ್ಥಿತೇ ॥೩೨॥
ಯಸ್ಯ ಯದ್ದೈವವಿಹಿತಂ ಸತೇನ ಸುಖದುಃಖಯೋಃ । ಆತ್ಮಾನಂ ತೋಷ
ಯನ್ ದೇಹೀ ತಮಸಃ ಪಾರಮೃಚ್ಛತಿ ॥೩೩॥ ಗುಣಾಧಿಕಾ ನ್ಮುದಂ
ಲಿಪ್ಸೇ ದನುಕ್ರೋಶಂ ಗುಣಾಧಮಾತ್ । ಮೈತ್ರೀಂ ಸಮಾನಾ ದನ್ವಿಚ್ಛೆ
ನ್ನತಾಪೈ ರಭಿಭೂಯತೇ ॥೩೪॥ ಧ್ರುವಃ ॥ ಸೋಽಯಂ ಶಮೋ ಭಗವ
ತಾ ಸುಖದುಃಖಹತಾತ್ಮನಾಂ।ದರ್ಶಿತಃ ಕೃಪಯಾ ಪುಂಸಾ ದುರ್ದರ್ಶೋಽ
ಸ್ಮದ್ವಿಧೈಸ್ತು ಯಃ ॥೩೫॥ ಅಥಾಽಪಿ ಮೇಽವಿನೀತಸ್ಯ ಕ್ಷಾತ್ರಂ ಘೋರ

ಸಮುಪಸ್ಥಿತೇ - ಒದಗಿದರೆ, ಭವಾನ್ - ನೀನು, ಯತಿಷ್ಯತಿ - ಯತ್ನಿಸುವೆ ॥೩೨॥ ಸುಖದುಃಖಯೋಃ- ಸುಖದುಃಖಗಳಲ್ಲಿ, ಯಸ್ಯ - ಯಾವನಿಗೆ, ಯತ್ - ಯಾವುದು, ದೈವವಿಹಿತಂ-ದೈವದಿಂದೊದಗುವುದೋ, ಸದೇಹೀ - ಆ ಪುರುಷನು, ತೇನ - ಅದರಿಂದ, ಆತ್ಮಾನಂ - ಮನಸ್ಸನ್ನು, ತೋಷಯನ್ - ಸಂತೋಷ ಗೊಳಿಸುತ್ತಾ, ತಮಸಃ - ಅಜ್ಞಾನದ, ಪಾರಂ - ಕಡೆಯಾದ ಮೋಕ್ಷವನ್ನು, ಋಚ್ಛತಿ-ಹೊಂದುವನು॥೩೩॥ ಗುಣಾಧಿಕಾತ್ - ಅಧಿಕ ಗುಣವುಳ್ಳವರಿಂದ, ಮುದಂ - ಸಂತೋಷವನ್ನು, ಲಿಪ್ಸೇತ್ - ಪಡೆಯಲೆಳಸ ಬೇಕು, ಗುಣಾಧಮಾತ್ - ಗುಣಹೀನನಿಂದ, ಅನುಕ್ರೋಶಂ - ಪಶ್ಚಾತ್ತಾಪ ಪಡೆಬೇಕು, ಸಮಾನಾತ್ - ಸಮಾನನಿಂದ, ಮೈತ್ರೀಂ - ಸ್ನೇಹವನ್ನು, ಅನ್ವಿಚ್ಛೇನ್ - ಬಯಸುತ್ತಾ, ತಾಪೈಃ - ತಾಪಗಳಿಂದ, ನಾಭಿ ಭೂಯತೇ - ತಿರಸ್ಕರಿಸಲ್ಪಡುವುದಿಲ್ಲ ॥೩೪॥ ಧ್ರುವನು ಹೇಳುತ್ತಾನೆ, ಅಸ್ಮದ್ವಿಧೈಃ - ನಮ್ಮಂತವರಿಂದ, ಯಃ - ಯಾವನು, ದುರ್ದರ್ಶಃ - ನೋಡಲಶಕ್ಯನೋ, ಅಥವಾ ಯಾವ ಶಾಂತಿಯು ನೋಡಲಶಕ್ಯವೋ, ಭ ಗವತಾ - ಅಂತಹ ನಿನ್ನಿಂದ, ಸುಖ...ನಾಂ - ಸುಖದುಃಖಗಳಿಂದ ಮನಗುಂದಿರುವ, ಪುಂಸಾಂ - ಪುರು ಷರಿಗೆ, ಕೃಪಯಾ - ದಯೆಯಿಂದ, ಸೋಽಯಂ - ಶಮಃ - ಆ ಶಾಂತ್ಯುಪಾಯವು, ದರ್ಶಿತಃ - ತೋರಿಸ ಲ್ಪಟ್ಟಿತು ॥೩೫॥

ಅಥಾಪಿ - ಆದರೂ, ಘೋರಂ - ಅಧಿಕವಾದ, ಕ್ಷಾತ್ರಂ - ಕ್ಷತ್ರಸ್ವಭಾವವನ್ನು, ಉಪೇಯುಷಃ -

ವಾದಾಗ ಯತ್ನಮಾಡುವೆ. ಈಗ ಸುಮ್ಮನಿರು ॥೩೨॥ ಯಾವ ಪುರುಷನು ಸುಖದುಃಖ ಗಳ ಪ್ರವೃತ್ತಿನಿವೃತ್ತಿಗಳಗಾಗಿ ಪ್ರಯತ್ನಿಸದೆ,ಪೂರ್ವಕರ್ಮಾನುಸಾರವಾಗಿಯಾವಾಗಯಾ ವುದು ಪ್ರಾಪ್ತವಾಗುವುದೋ, ಅದರಿಂದಲೇ ಮನಸ್ಸನ್ನು ಸಂತೋಷಗೊಳಿಸುತ್ತಾ ತೃಪ್ತ ನಾಗಿರುವನೋ, ಅವನು ಈ ಅಜ್ಞಾನಪಾರಾವಾರಕ್ಕೆ ಪಾರವೆನಿಸಿದ ಪರಮಪದವನ್ನು ಪಡೆ ಯುವನು ॥೩೩॥ ಮತ್ತು ಯಾವಪುರುಷನು ತನಗಿಂತಲೂ ಗುಣಾಢ್ಯರನ್ನು ಕಂಡಾಗ ಅವ ರನ್ನು ಪ್ರೀತಿಸುತ್ತಲೂ, ತನಗಿಂತಲೂ ಗುಣಹೀನರನ್ನು ನೋಡಿದಾಗ ಅವರಲ್ಲಿ ಕನಿಕರ ಗೊಳ್ಳುತ್ತಲೂ, ಸಮಾನರಲ್ಲಿ ಮೈತ್ರಿಯನ್ನು ಮಾಡುತ್ತಲೂ ಇರುವನೋ, ಅವನು ಆಧ್ಯಾ ತ್ಮಿಕಾದಿ ತಾಪಗಳಿಗೆ ಗುರಿಯಾಗದೆ ಸುಖಿಯಾಗಿರುವನು. ಆದುದರಿಂದ ನೀನು ಹಿಂದಿರುಗು ಎಂದು ನುಡಿದನು ॥೩೪॥ ಆ ನುಡಿಗಳನ್ನು ಕೇಳಿ ಧ್ರುವನು ಹೇಳುತ್ತಾನೆ—ಅಯ್ಯಾ ಮು ನೀಂದ್ರನೆ ! ನಮ್ಮಂತಹ ಪಾಮರರಿಗೆಂದಿಗೂ ಗೋಚರನಾಗಲಾರದ ನೀನು ದಯೆಯಿಂದ ಬಿಜಮಾಡಿ ಸುಖದುಃಖರೂಪವಾದ ಸಂಸಾರದ ಸುಳಿಯಲ್ಲಿ ಮುಳುಗಿ ಸಂಕಟಪಡುವ ಭ್ರಾಂತ ರಾಗುತ್ತಿರುವ ಪಾಮರರ ನೋಟಕನಿಗೆ ಕಾಣಲು ಹೊಳೆ ಯದಿರುವ ಈ ಮನಶ್ಶಾಂತ್ಯುಪಾಯವ ನ್ನು ನೀನುಪದೇಶಿಸಿದೆ ॥೩೫॥ ಆದರೂ ಘೋರವಾದ ಕ್ಷಾತ್ರಸ್ವಭಾವವನ್ನು ಪಡೆದಿರುವು

ಮುಪೇಯುಷಃ । ಸುರುಚ್ಯಾ ದುರ್ವಚೋಬಾಣೈ ರ್ನ ಭಿನ್ನೇ ಶ್ರಯತೇ
ಹೃದಿ॥೩೬॥ ಪದಂ ತ್ರಿಭುವನೋತ್ಕೃಷ್ಟಂ ಜಿಗೀಷೋಃ ಸ್ಸಾಧು ವರ್ತ್ಮ ಮೇ।
ಬ್ರೂಹ್ಯಸ್ಮತ್ಪಿತೃಭಿ ರ್ಬ್ರಹ್ಮ ನ್ನನ್ಯೈ ರಪ್ಯನಧಿಷ್ಠಿತಂ ॥೩೭॥ ನೂನಂ ಭ
ವಾನ್ ಭಗವತೋ ಯೋಂಗಜಃ ಪರಮೇಷ್ಠಿನಃ । ವಿತುದ ನ್ನಟತೇ ವೀ
ಣಾಂ ಹಿತಾರ್ಥಂ ಜಗತೋಽರ್ಕವತ್ ॥೩೮॥ ಮೈತ್ರೇಯಃ ॥ ಇತ್ಯು
ದಾಹೃತ ಮಾಕರ್ಣ್ಯ ಭಗವಾ ನ್ನಾರದ ಸ್ತದಾ। ಪ್ರೀತಃ ಪ್ರತ್ಯಾಹ ತಂ
ಬಾಲಂ ಸದ್ವಾಕ್ಯ ಮನುಕಂಪಯಾ ॥೩೯॥ ನಾರದಃ ॥ ಜನನ್ಯಾಽಭಿಹಿತಃ
ಪಂಥಾಃ ಸವೈ ನಿಶ್ರೇಯಸಸ್ಯ ತೇ। ಭಗವಾನ್ ವಾಸುದೇವ ಸ್ತಂ ಭಜತತ್ಪ್ರ

---

ಹೊಂದಿದ, ಅವಿನೀತಸ್ಯ - ಕ್ರುದ್ಧನಾದ, ಮೇ - ನನ್ನ, ಸುರುಚ್ಯಾಃ- ಸುರುಚಿಯು, ದುರ್ವಚೋಬಾಣೈಃ- ಕೆಟ್ಟನುಡಿಗಳೆಂಬ ಬಾಣಗಳಿಂದ, ಭಿನ್ನೇ - ಒಡೆದಿರುವ, ಹೃದಿ - ಮನಸ್ಸಿನಲ್ಲಿ, ನಶ್ರಯತೇ - ನಿಲ್ಲುವುದಿಲ್ಲ ॥೩೬॥ ಹೇಬ್ರಹ್ಮನ್ - ಎಲೈ ನಾರದನೆ! ಅಸ್ಮತ್ಪಿತೃಭಿಃ - ನಮ್ಮ ಪೂರ್ವಿಕರಿಂದಲೂ, ಅನ್ಯೈರಪಿ - ಇತರರಿಂದಲೂ, ಅನಧಿಷ್ಠಿತಂ - ಹೊಂದಲ್ಪಡದ, ತ್ರಿಭು...ಷ್ಟಂ - ಮೂರು ಲೋಕಗಳಿಗಿಂತ ಶ್ರೇಷ್ಠವಾದ, ಪದಂ - ಸ್ಥಾನವನ್ನು, ಜಿಗೀಷೋಃ - ಪಡೆಯಲೆಳಸಿರುವ, ಮೇ - ನನಗೆ, ಸಾಧು - ಸರಿಯಾದ, ವರ್ತ್ಮ - ದಾರಿಯನ್ನು, ಬ್ರೂಹಿ - ತಿಳುಹಿಸು ॥೩೭॥ ಯಃ - ಯಾವನು, ಪರಮೇಷ್ಠಿನಃ - ಬ್ರಹ್ಮನಿಗೆ, ಅಂಗಜಃ - ಪುತ್ರನೋ, ಭವಾನ್ - ನೀನು, ವೀಣಾಂ - ವೀಣೆಯನ್ನು, ವಿತುದನ್ - ಬಾರಿಸುತ್ತಾ, ಜಗತಃ - ಲೋಕದ, ಹಿತಾರ್ಥಂ - ಹಿತಕ್ಕಾಗಿ, ಅರ್ಕವತ್ - ಸೂರ್ಯನಂತೆ, ಅಟತೇ - ಚರಿಸುತ್ತಿರುವೆ ॥೩೮॥ ಮೈತ್ರೇಯನು ಹೇಳುತ್ತಾನೆ, ಭಗವಾನ್ - ಪೂಜ್ಯನಾದ, ನಾರದಃ- ನಾರದಮುನಿಯು, ತದಾ- ಆಗ, ಇತಿ - ಇಂತು, ಉದಾಹೃತಂ - ಧ್ರುವನು ನುಡಿದುದನ್ನು, ಆಕರ್ಣ್ಯ - ಕೇಳಿ, ಪ್ರೀತಃ - ಸಂತೋಷಗೊಂಡು, ಅನುಕಂಪಯಾ - ಕನಿಕರದಿಂದ, ತಂಬಾಲಂ ಪ್ರತಿ - ಆ ಕುಮಾರನನ್ನು ಕುರಿತು, ಸದ್ವಾಕ್ಯಂ - ಒಳ್ಳೆಯ ಮಾತನ್ನು, ಆಹ - ಹೇಳುತ್ತಾನೆ, ॥೩೯॥ ಜನನ್ಯಾ - ತಾಯಿಯಿಂದ, ಅಭಿಹಿತಃ - ಹೇಳಲ್ಪಟ್ಟ, ಭಗವಾನ್ - ಭಗವಂತನಾದ, ವಾಸುದೇವಃ - ವಾಸುದೇವನೆಂಬ, ಸಪಂಥಾಃ - ಆದಾರಿಯೇ, ತೇ - ನಿನ್ನ, ನಿಶ್ರೇಯಸಸ್ಯ - ಶ್ರೇಯಸ್ಸಿಗಾಗುವುದು, ಅದರಿಂದ, ತತ್ಪ್ರ...ನಾ - ಆತನಲ್ಲಿ ಮನಸ್ಸಿಟ್ಟು, ತಂ-

---

ದರಿಂದ ಕ್ರುದ್ಧನಾಗಿರುವ ನನ್ನ ಮನಸ್ಸಿನಲ್ಲಿ ಸುರುಚಿಯಾಡಿದ ದುರ್ವಾಕ್ಯಗಳೆಂಬ ಬಾಣಗಳು ತಾರುಮಾರಾಗಿ ತೂರಿರುವುದರಿಂದ ನಿನ್ನುಪದೇಶಕ್ಕೆ ನೆಲೆಗೊಡದಿರುವುದು ॥೩೬॥ ಅಯ್ಯಾ ದೇವರ್ಷಿಯೆ ! ಇಂತಿರುವುದರಿಂದ ನಮ್ಮ ಪಿತೃ ಪಿತಾಮಹಾದಿಗಳಾಗಲಿ, ಇತರರಾಗಲಿ ಹೊಂದಲಸದಳವೆನಿಸಿ,ಮೂರುಲೋಕಗಳಲ್ಲಿಯೂ ಉತ್ತಮವಾಗಿರುವ ಪದವಿಯನ್ನು ಪಡೆಯಬೇಕೆಂದೆಳಸುತ್ತಿರುವ ನನಗೆ ಸರಿಯಾದ ದಾರಿಯನ್ನುಪದೇಶಿಸು ॥೩೭॥ ಸಾಕ್ಷಾದ್ಬ್ರಹ್ಮಪುತ್ರನಾದ ನೀನು ವೀಣೆಯನ್ನು ಬಾರಿಸುವ ನೆಪದಿಂದ ಭಗವನ್ನಾಮಬೀಜವನ್ನು ಬಿತ್ತುತ್ತಾ, ಲೋಕಹಿತಾರ್ಥವಾಗಿ ಸೂರ್ಯನಂತೆ ಸಂಚರಿಸುತ್ತಿರುವೆ, ಆದಕಾರಣ ಸದುಪದೇಶದಿಂದ ನನ್ನನ್ನುದ್ಧರಿಸು ಎಂದು ಬೇಡಿದನು ॥ ಅಯ್ಯಾ ವಿದುರನೆ ! ಇಂತು ಉಸುರುತ್ತಿರುವ ಹಸುಳೆಯ ಸವಿನುಡಿಗಳನ್ನು ಕೇಳಿ ಅತ್ಯಂತ ಪ್ರೀತಿಗೊಂಡವನಾದ ಮುನಿಯು ಕನಿಕರದಿಂದ ಅವನನ್ನು ಕುರಿತು ಹೇಳುತ್ತಾನೆ ॥೩೯॥ ಮಗುವೆ ! ನಿನ್ನ ತಾಯಿಯಾದ ಸುನೀತಿಯುಪದೇಶಿಸಿದ ಭಕ್ತಿಯೋಗಕ್ಕಿಂತಲೂ ಭಗವಂತನಾದ ವಾಸುದೇವಮೂರ್ತಿಯ

ವಣಾತ್ಮನಾ ॥೪೦॥ ಧರ್ಮಾರ್ಥಕಾಮಮೋಕ್ಷಾಖ್ಯಂ ಯ ಇಚ್ಛೇ ಚ್ಛ್ರೇಯ ಆತ್ಮನಃ । ಏಕಮೇವ ಹರೇ ಸ್ತತ್ರ ಕಾರಣಂ ಪಾದಸೇವನಂ ॥೪೧॥ ತತ್ತಾತ! ಗಚ್ಛ ಭದ್ರಂತೇ ಯಮುನಾಯಾ ಸ್ತಟಂಶುಚಿ । ಪುಣ್ಯಂ ಮಧುವನಂ ಯತ್ರ ಸಾಂನಿಧ್ಯಂ ನಿತ್ಯದಾ ಹರೇಃ ॥೪೨॥ ✠ ಸ್ನಾತ್ವಾಽನುಸವನಂ ತಸ್ಮಿನ್ ಕಾಲಿಂದ್ಯಾ ಸ್ಸಲಿಲೇ ಶಿವೇ । ಕೃತ್ವೋಚಿತಾನಿ ನಿವಸ ನ್ನಾತ್ಮನಃ ಕಲ್ಪಿತಾಸನಃ ॥೪೩॥ ಪ್ರಾಣಾಯಾಮೇನ ತ್ರಿವೃತಾ ಪ್ರಾಣೇಂದ್ರಿಯ ಮನೋಮಲಂ । ಶನೈ ರ್ವ್ಯುದಸ್ಯಾಽಭಿಧ್ಯಾಯೇ ನ್ಮನಸಾ ಗುರುಣಾ

ಆ ಭಗವಂತನನ್ನು, ಭಜ - ಧ್ಯಾನಿಸು ॥೪೦॥ ಯಃ - ಯಾವನು, ಆತ್ಮನಃ - ತನಗೆ, ಧರ್ಮಾ...ಖ್ಯಂ - ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ, ಶ್ರೇಯಃ - ಶ್ರೇಯಸ್ಸನ್ನು, ಇಚ್ಛೇತ್ - ಬಯಸುವನೋ, ತತ್ರ - ಆ ವಿಷಯದಲ್ಲಿ, ಹರೇಃ - ಹರಿಯ, ಪಾದಸೇವನಂ - ಪಾದಸೇವೆಯು, ಏಕಮೇವ - ಒಂದೇ, ಕಾರಣಂ - ಕಾರಣವು ॥೪೧॥ ಹೇತಾತ - ಎಲೆ ತಂದೆಯೆ! ತತಃ - ಆದುದರಿಂದ, ಯತ್ರ - ಎಲ್ಲಿ, ನಿತ್ಯದಾ - ಯಾವಾಗಲೂ, ಹರೇಃ - ವಿಷ್ಣುವಿನ, ಸಾನ್ನಿಧ್ಯಂ - ಸನ್ನಿಧಿಯುಂಟೋ, ಪುಣ್ಯಂ-ಪುಣ್ಯಕರವಾದ, ಮಧುವನಂ-ಮಧುವನವೆಂಬ, ಶುಚಿ - ಪರಿಶುದ್ಧವಾದ, ಯಮುನಾಯಾಃ - ಯಮುನಾನದಿಯ, ತಟಂ - ದಡವನ್ನು, ಗಚ್ಛ - ಹೊಂದು, ತೇ - ನಿನಗೆ, ಭದ್ರಂ - ಮಂಗಳವಾಗುವುದು ॥೪೨॥ ಕಾಳಿಂದ್ಯಾಃ - ಯಮುನೆಯ, ಶಿವೇ - ಮಂಗಳಕರವಾದ, ತಸ್ಮಿನ್ ಸಲಿಲೇ - ಆ ಉದಕದಲ್ಲಿ, ಅನುಸವನಂ - ಮೂರು ಕಾಲಗಳಲ್ಲಿಯೂ, ಸ್ನಾತ್ವಾ - ಸ್ನಾನಮಾಡಿ, ಆತ್ಮನಃ - ನಿನಗೆ, ಉಚಿತಾನಿ - ಯೋಗ್ಯಗಳಾದ ಕರ್ಮಗಳನ್ನು, ಕೃತ್ವಾ - ಮಾಡಿ, ಕಲ್ಪಿತಾಸನಃ - ಆಸನಗಳನ್ನು ಕಲಿತು, ನಿವಸನ್ - ಕುಳಿತುಕೊಂಡು ॥೪೩॥ ತ್ರಿವೃತಾ - ರೇಚಕಾದಿಗಳಿಂದ ಕೂಡಿದ, ಪ್ರಾಣಾಯಾಮೇನ - ಶ್ವಾಸನಿರೋಧದಿಂದ, ಪ್ರಾಣೇ...ಲಂ, ಪ್ರಾಣ, ಇಂದ್ರಿಯ

ಸ್ವವಶಗೊಳಿಸಿಕೊಳ್ಳುವುದಾರಿಯಾಪುದೂ ಇಲ್ಲ. ಆದುದರಿಂದ ಏಕಾಂತಭಕ್ತಿಯಿಂದ ಅವನನ್ನು ಧ್ಯಾನಿಸು ॥೪೦॥ ಯಾವ ಪುರುಷನಾದರೆ ಧರ್ಮಾರ್ಥಕಾಮಮೋಕ್ಷಗಳೆಂಬ ಪುರುಷಾರ್ಥಗಳನ್ನು ಬಯಸುವನೋ, ಅವನ ಇಷ್ಟಸಿದ್ಧಿಗೆ ಶ್ರೀಹರಿಯ ಪಾದಸೇವೆಯೊಂದೇ ಕಾರಣವು ॥೪೧॥ ಎಲೈ ಮಗುವೆ! ಆದುದರಿಂದ ಪವಿತ್ರವಾದ ಯಮುನಾನದಿಯ ದಡದಲ್ಲಿರುವ ಪುಣ್ಯಕರವಾದ ಮಧುವನಕ್ಕೆ ತೆರಳು. ಅಲ್ಲಿ ಭಗವಂತನಾವಾಗಲೂ ಸಾನ್ನಿಧ್ಯವನ್ನು ಪಡೆದಿರುವನು ॥೪೨॥ ಆ ಯಮುನಾನದಿಯ ಮಂಗಳಕರವಾದ ಜಲದಲ್ಲಿ ತ್ರಿಕಾಲಗಳಲ್ಲಿಯೂ ಸ್ನಾನಮಾಡಿ ನಿನಗುಚಿತಗಳಾದ ದೇವತಾವಂದನಾದಿ ನಿತ್ಯಕರ್ಮಗಳನ್ನಾಚರಿಸಿ, ಸ್ವಸ್ತಿಕ ಮೊದಲಾದ ಆಸನಗಳನ್ನು ಕಲಿತು, ಸ್ಥಿರಾಸನನಾಗಿ ಕುಳಿತು ರೇಚಕ, ಪೂರಕ, ಕುಂಭಕಗಳೆಂಬ ಯೋಗವಿಶೇಷಗಳಿಂದ ಪ್ರಣವಾನುಸಂಧಾನಪೂರ್ವಕವಾಗಿ ಶ್ವಾಸನಿರೋಧವನ್ನು ಮಾಡಿ ಪಂಚಪ್ರಾಣಗಳಲ್ಲಿಯೂ, ಚಕ್ಷುರಾದಿ ಇಂದ್ರಿಯಗಳಲ್ಲಿಯೂ ಮನಸ್ಸಿನಲ್ಲಿ

✠ ವಿ. ಇಲ್ಲಿ "ಉಚಿತಾನಿಕೃತ್ವಾ" ಎಂಬುದರಿಂದ ಯಮನಿಯಮಗಳೂ, "ಕಲ್ಪಿತಾಸನಃ" ಎಂಬುದರಿಂದ ಆಸನವೂ, "ಮಲಂ ವ್ಯುದಸ್ಯ" ಎಂಬುದರಿಂದ ಪ್ರಾಣಾಯಾಮ, ಪ್ರತ್ಯಾಹಾರಗಳೂ, "ಅಭಿಧ್ಯಾಯೇತ್" ಎಂಬುದರಿಂದ ಧಾರಣಾಧ್ಯಾನಗಳೂ, ಹೇಳಲ್ಪಡುವ ಕಾರಣ, ಈ ಶ್ಲೋಕಗಳಿಂದ ನಾರದಮುನಿಯು ಧ್ರುವನಿಗೆ ಅಷ್ಟಾಂಗ ಯೋಗವನ್ನೂ ಕ್ರಮವಾಗಿ ಉಪದೇಶಿಸಿದನೆಂದರಿಯಬೇಕು.

ಗುರುಂ ॥೪೪॥ ಪ್ರಸಾದಾ ಽ ಭಿಮುಖಂ ಶಶ್ವ ತ್ಪ್ರಸನ್ನವದನೇಕ್ಷಣಂ । ಸುನಾಸಂ ಸುಭ್ರುವಂ ಚಾರುಕಪೋಲಂ ಸುರಸುಂದರಂ ॥೪೫॥ ತರುಣಂ ರಮಣೀಯಾಂಗ ಮರುಣೋಷ್ಠೇಕ್ಷಣಾಽಧರಂ । ಪ್ರಣತಾಶ್ರಯಣಂ ನೃಮ್ಣಂ ಶರಣ್ಯಂ ಕರುಣಾಽರ್ಣವಂ ॥೪೬॥ ಶ್ರೀವತ್ಸಾಂಕಂ ಘನಶ್ಯಾಮಂ ಪುರುಷಂ ವನಮಾಲಿನಂ । ಶಂಖಚಕ್ರಗದಾ ಪದ್ಮೈ ರಭಿವ್ಯಕ್ತಚತುರ್ಭುಜಂ ॥೪೭॥ ಕಿರೀಟಿನಂ ಕುಂಡಲಿನಂ ಕೇಯೂರ ವಲಯಾಽನ್ವಿತಂ । ಕೌಸ್ತುಭಾಭರಣಗ್ರೀವಂ ಪೀತಕೌಶೇಯವಾಸಸಂ ॥೪೮॥ ಕಾಂಚೀಕಲಾಪ

ಮನಸ್ಸು ಇವುಗಳ ದೋಷಗಳನ್ನು, ಶನೈಃ - ಮೆಲ್ಲನೆ, ವ್ಯುದಸ್ಯ - ಕಳೆದು, ಗುರುಣಾ - ನಿರ್ಮಲವಾದ, ಮನಸಾ - ಮನಸ್ಸಿನಿಂದ, ಗುರುಂ - ಭಗವಂತನನ್ನು, ಅಭಿಧ್ಯಾಯೇತ್ - ಧ್ಯಾನಿಸಬೇಕು ॥ ೪೪ ॥ ಪ್ರಸಾ...ಖಂ - ಅನುಗ್ರಹಕ್ಕೆ ಅಭಿಮುಖನಾಗಿಯೂ, ಶಶ್ವ...ಣಂ- ಯಾವಾಗಲೂ ಪ್ರಸನ್ನನಾದ ನೋಟದಿಂದಕೂಡಿದ ನಗೆಮೊಗವುಳ್ಳವನಾಗಿಯೂ, ಸುನಾಸಂ - ಸುಂದರವಾದ ಮೂಗುಳ್ಳವನಾಗಿಯೂ, ಸುಭ್ರುವಂ-ಸೊಗಸಾದ ಹುಬ್ಬುಳ್ಳವನಾಗಿಯೂ, ಚಾರುಕಪೋಲಂ - ಅಂದವಾದ ಕದಪುಳ್ಳವನಾಗಿಯೂ, ಸುರಸುಂದರಂ - ದೇವತೆಗಳಿಗಿಂತ ಸುಂದರನಾಗಿಯೂ ಇರುವ ॥೪೫॥

ತರುಣಂ - ಬಾಲನೂ, ರಮಣೀಯಾಂಗಂ - ಸುಂದರವಾದ ಮೈಯುಳ್ಳವನೂ, ಅರು...ರಂ - ಕೆಂಪಾದ ಕೆಳದುಟಿಯೂ ಕಣ್ಣುಗಳೂ ಉಳ್ಳವನೂ, ಪ್ರಣ...ಣಂ - ಭಕ್ತರಿಗಾಶ್ರಯನೂ, ನೃಮ್ಣಂ - ಸುಖಕರನೂ, ಶರಣ್ಯಂ - ರಕ್ಷಕನೂ, ಕರುಣಾರ್ಣವಂ - ದಯಾಸಮುದ್ರನೂ, ॥೪೬॥ ಶ್ರೀವತ್ಸಾಂಕಂ - ಶ್ರೀವತ್ಸವನ್ನು ಧರಿಸಿದವನೂ, ಘನಶ್ಯಾಮಂ - ಮೇಘದಂತೆ ಕರಿದಾದವನೂ, ಪುರುಷಂ - ಪುರುಷಲಕ್ಷಣಯುಕ್ತನೂ, ವನಮಾಲಿನಂ - ವನಮಾಲೆಯುಳ್ಳವನೂ, ಶಂಖ...ದ್ಮೈಃ - ಶಂಖ, ಚಕ್ರ, ಗದಾ, ಪದ್ಮ, ಇವುಗಳಿಂದ, ಅಭಿ...ಜಂ - ಶೋಭಿಸುವ ನಾಲ್ಕು ತೋಳುಳ್ಳವನೂ, ॥೪೭॥ ಕಿರೀಟಿನಂ - ಕಿರೀಟವುಳ್ಳವನೂ, ಕುಂಡಲಿನಂ - ಕುಂಡಲಗಳುಳ್ಳವನೂ, ಕೇಯೂ...ತಂ - ಕಡಗ, ಬಾಹುಪುರಿಗಳಿಂದ ಕೂಡಿದವನೂ, ಕೌಸ್ತು...ಯಂ - ಕೌಸ್ತುಭಮಣಿಯನ್ನು ಕೊರಳಲ್ಲಿಧರಿಸಿದವನೂ, ಪೀತ...ಸಂ - ಪೀತಾಂಬರವನ್ನು ಧರಿಸಿದವನು ॥೪೮॥ ಕಾಂಚೀ...ಸ್ತಂ - ಒಡ್ಯಾಣವನ್ನು ಬಿಗಿದಿರುವವನೂ, ಲಸ...

ಯೂ ಇರುವ ದೋಷಗಳನ್ನು ಮೆಲ್ಲಮೆಲ್ಲನೆ ಕಳೆದು ಕಾಮಾದಿದೋಷರಹಿತವಾದ ನಿರ್ಮಲಮನಸ್ಸಿನಿಂದ ಲೋಕಗುರುವೆನಿಸಿದ ಭಗವಂತನನ್ನು ಧ್ಯಾನಿಸಬೇಕು ॥೪೪॥ ಧ್ಯಾನಕ್ರಮವೆಂತೆಂದರೆ— ಸರ್ವಾಂತರ್ಯಾಮಿಯಾದ ಆ ಭಗವಂತನನ್ನು ಅನುಗ್ರಹಾಭಿಮುಖನೆಂತಲೂ, ನಿರಂತರದಲ್ಲಿಯೂ ನಗೆಮೊಗದಲ್ಲಿ ಜಗಜಗಿಸುತ್ತಿರುವ ಬೊಗಸೆಗಣ್ಣುಗಳಿಂದ ಕರುಣಾಕಟಾಕ್ಷಗಳನ್ನು ಬೀರುತ್ತಿರುವನೆಂತಲೂ, ಸಂಪಗೆಯ ಮೊಗ್ಗೆಸಂತಿರುವ ನಾಸಾದಂಡದಿಂದಲೂ, ಕಾಮಬಿಲ್ಲನ್ನು ಹೋಲುವ ಕುಡುಹುಬ್ಬುಗಳಿಂದಲೂ, ಮಣಿಗನ್ನಡಿಗಳಂತಿರುವ ಕಪೋಲಗಳಿಂದಲೂ ಬೆಳಗುತ್ತಿರುವನೆಂತಲೂ, ತರುಣನೆಂತಲೂ, ಮನ್ಮಥನಳಕೂಬರ ಜಯಂತಾದಿ ದೇವಪುರುಷರಿಗಿಂತಲೂ ಸುಂದರನಾಗಿರುವನೆಂತಲೂ, ಸುಂದರಾಕಾರನೆಂತಲೂ, ಕೆಂಪಾದ ಕೆಳದುಟಿ ಕಡೆಗಣ್ಣುಗಳಿಂದ ಸೋಂಪುಗರೆವನೆಂತಲೂ, ಪ್ರಣತರಿಗೆ ಆಶ್ರಯನಾಗಿರುವನೆಂತಲೂ ಲೋಕಸುಖಂಕರನಾದ ದಯಾಸಮುದ್ರನೆಂತಲೂ, ಶ್ರೀವತ್ಸಚಿಹ್ನವನ್ನು ಧರಿಸಿ, ವನಮಾಲೆಯಿಂದ ಶೋಭಿಸುತ್ತಾ, ನೀಲಮೇಘಶ್ಯಾಮನಾಗಿ,

ಪರ್ಯಸ್ತಂ ಲಸತ್ಕಾಂಚನನೂಪುರಂ। ದರ್ಶನೀಯತಮಂ ಶಾಂತಂ ಮನೋ
ನಯನ ವರ್ಧನಂ ॥೪೯॥ ಪದ್ಭ್ಯಾಂ ನಖಮಣಿಶ್ರೇಣ್ಯಾ ವಿಲಸದ್ಭ್ಯಾಂ ಸ
ಮರ್ಚತಾಂ । ಹೃತ್ಪದ್ಮಕರ್ಣಿಕಾಧಿಷ್ಣ್ಯಮಾಕ್ರಮ್ಯಾತ್ಮನ್ಯವಸ್ಥಿತಂ ॥
ಸ್ಮಯಮಾನ ಮಭಿಧ್ಯಾಯೇತ್ಸಾನುರಾಗಾವಲೋಕನಂ । ನಿಯತೇನೈಕ
ಭೂತೇನ ಮನಸಾ ವರದರ್ಷಭಂ ॥೫೦॥ ಏವಂ ಭಗವತೋ ರೂಪಂ ಸು
ಭದ್ರಂ ಧ್ಯಾಯತೋ ಮನಃ । ನಿವೃತ್ತ್ಯಾ ಪರಯಾ ತೂರ್ಣಂ ಸಂಪನ್ನಂ
ನನಿವರ್ತತೇ ॥೫೧॥ ಜಪ್ಯಶ್ಚ ಪರಮೋ ಗುಹ್ಯಃ ಶ್ರೂಯತಾಂ ಮೇ

---

ರಂ - ಹೊಳೆಯುತ್ತಿರುವ ಚಿನ್ನದ ಕಾಲ್ಗಡಗಗಳುಳ್ಳವನೂ, ದರ್ಶನೀಯತಮಂ - ಅತ್ಯಂತ ಸುಂದರನೂ, ಶಾಂತಂ - ಕ್ಷಮಾವಂತನೂ, ಮನೋ...ನಂ - ಮನಸ್ಸಿಗೂ ಕಣ್ಣಿಗೂ ಸುಖಕರನೂ ॥೪೯॥ ನಖ...ಣ್ಯಾ - ಉಗುರುಗಳೆಂಬ ರತ್ನಶ್ರೇಣಿಯಿಂದ, ವಿಲಸದ್ಭ್ಯಾಂ - ಹೊಳೆಯುವ, ಪದ್ಭ್ಯಾಂ - ಪಾದಗಳಿಂದ, ಸಮರ್ಚತಾಂ - ಭಕ್ತರ, ಹೃತ್ಪ...ಧ್ಯಂ - ಹೃದಯಕಮಲದ ಮಧ್ಯವನ್ನು, ಆಕ್ರಮ್ಯ - ಆಕ್ರಮಿಸಿ, ಆತ್ಮನಿ - ಹೃದಯದಲ್ಲಿ, ಅವಸ್ಥಿತಂ - ಇರುವ ॥೫೦॥

ನಿಯತೇನ - ನೆಲೆಗೆನಿಂದ, ಏಕಭೂತೇನ - ಏಕಾಗ್ರವಾದ, ಮನಸಾ - ಮನಸ್ಸಿನಿಂದ, ಸಾನು...ನಂ - ಕರುಣಾಕಟಾಕ್ಷವುಳ್ಳ, ಸ್ಮಯಮಾನಂ - ನಗುತ್ತಿರುವ, ವರದರ್ಷಭಂ - ವರದರಾಜನನ್ನು, ಅಭಿಧ್ಯಾಯೇತ್ - ಧ್ಯಾನಿಸಬೇಕು, ॥೫೦॥ ಏವಂ - ಇಂತು, ಭಗವತಃ - ಭಗವಂತನ, ಸುಭದ್ರಂ - ಮಂಗಳಕರವಾದ, ರೂಪಂ - ರೂಪವನ್ನು, ಧ್ಯಾಯತಃ - ಧ್ಯಾನಿಸುವವನ, ಮನಃ - ಮನಸ್ಸು, ಪರಯಾ - ತೀವ್ರವಾದ, ನಿವೃತ್ತ್ಯಾ - ವೈರಾಗ್ಯದಿಂದ, ಸಂಪನ್ನಂ-ಕೂಡಿ, ನನಿವರ್ತತೇ - ಹಿಂದಿರುಗುವುದಿಲ್ಲ ॥೫೧॥ ಹೇನೃಪಾತ್ಮಜ - ಎಲೈ ರಾಜಪುತ್ರನೆ! ಯಂ - ಯಾವುದನ್ನು, ಸಪ್ತರಾತ್ರಂ - ಏಳುರಾತ್ರಿಗಳು, ಪ್ರಪಠನ್ - ಜಪಿಸುವ, ಪುಮಾನ್ - ಪುರುಷನು, ಖೇಚರಾನ್ - ಗಗನಚಾರಿಗಳನ್ನು, ಪಶ್ಯತಿ-ನೋಡುವನೋ,

---

ಚತುರ್ಭುಜಗಳವನಾಗಿಯೂ, ಶಂಖ, ಚಕ್ರ, ಗದಾ ಪದ್ಮಗಳನ್ನು ಧರಿಸಿರುವ ಪುರಾಣಪುರುಷನೆಂತಲೂ, ತಲೆಯಲ್ಲಿ ಕಿರೀಟವನ್ನೂ, ಕಿವಿಗಳಲ್ಲಿ ಕುಂಡಲಗಳನ್ನೂ, ತೋಳುಗಳಲ್ಲಿ ಕಡಗ ಬಾಹುಪುರಿಗಳನ್ನೂ, ಕಂಠದಲ್ಲಿ ಕೌಸ್ತುಭಮಣಿಯನ್ನೂ, ತಳೆದು, ಪಟ್ಟೆಪೀತಾಂಬರುವನ್ನುಟ್ಟು, ರತ್ನದೊಡ್ಯಾಣವನ್ನು ಬಿಗಿದು ಹೊಳೆಯುತ್ತಿರುವ ಕಾಲಂದುಗೆಗಳನ್ನು ಸಿಂಗರಿಸಿ, ಲೋಕಾತಿಶಯವಾದ ಸೌಂದರ್ಯದಿಂದ ಕಣ್ಮನಗಳಿಗಾನಂದವನ್ನು ಬೀರುತ್ತಾ ಶಾಂತಸ್ವರೂಪದಿಂದ ನೆಲಸಿರುವಂತೆಯೂ, ಉಗುರುಗಳೆಂಬ ಮಣಿಕುಂಡಲಗಳಿಂದಮಂಡಿತಗಳಾದ ಅಡಿದಾವರೆಗಳನ್ನು ಭಕ್ತರ ಹೃದಯಪುಂಡರೀಕ ಕರ್ಣಿಕಾಮಧ್ಯದಲ್ಲಿಟ್ಟು ನೆಲಸಿರುವನೆಂತಲೂ, ಕಿರುನಗೆಯಿಂದೊಡಗೂಡಿ ಕರುಣಾಕಟಾಕ್ಷವನ್ನು ಪ್ರಸರಿಸುತ್ತಿರುವನೆಂತಲೂ ಭಾವಿಸುತ್ತಾ, ಯಮನಿಯಮಾದಿ ಯೋಗಾಂಗಗಳಿಂದ ನೆಲೆಗೆನಿಂದುನಿಶ್ಚಲವಾಗಿರುವ ಮನಸ್ಸಿನಿಂದ ವರದರಾಜನಾದ ವಾಸುದೇವನನ್ನು ಭಜಿಸಬೇಕು ॥೫೦॥ ಇಂತು ಭಗವಂತನ ದಿವ್ಯಮಂಗಳರೂಪವನ್ನು ಧ್ಯಾನಿಸುವವನ ಮನಸ್ಸು ಬೇಗನೆ ಪರವೈರಾಗ್ಯವನ್ನು ಪಡೆದು ಮರಳಿ ಹಿಂದಿರುಗುವುದಿಲ್ಲ ॥೫೧॥ ಅಯ್ಯಾ ರಾಜಪುತ್ರನೆ! ನಿರತಿಶಯವಾಗಿಯೂ, ಅತಿರಹಸ್ಯವಾಗಿಯೂ ಇರುವ ಒಂದು ಮಂತ್ರರಾಜವನ್ನು ಧ್ಯಾನಕ್ಕೆ ಅನುಕೂಲವಾಗುವಂತೆ ನಿನ

ನೃಪಾತ್ಮಜ ! । ಯಂ ಸಪ್ತರಾತ್ರಂ ಪ್ರಪಠನ್ ಪುಮಾನ್ ಪಶ್ಯತಿ ಖೇಚರಾನ್ ॥೫೩॥ * ಓಂ ನಮೋ ಭಗವತೇ ವಾಸುದೇವಾಯ * ಮಂತ್ರೇಣಾಽನೇನ ದೇವಸ್ಯ ಕುರ್ಯಾದ್ ದ್ರವ್ಯಮಯೀಂ ಬುಧಃ । ಸಪರ್ಯಾಂ ವಿವಿಧೈರ್ದ್ರವ್ಯೈರ್ ದೇಶಕಾಲ ವಿಭಾಗ ವಿತ್ ॥ ೫೪ ॥ ಸಲಿಲೈಃ ಶುಚಿಭಿರ್ಮಾಲ್ಯೈರ್ವನ್ಯೈರ್ಮೂಲಫಲಾದಿಭಿಃ । ಶಸ್ತಾಂಕುರಾಂಶುಕೈಶ್ಚಾಽರ್ಚೇತ್ತುಲಸ್ಯಾ ಪ್ರಿಯಯಾ ಪ್ರಭುಂ ॥ ೫೫ ॥ ಲಬ್ಧ್ವಾ ದ್ರವ್ಯಮಯೀಮರ್ಚಾಂ ಕ್ಷಿತ್ಯಂಬ್ವಾದಿಷು ವಾಽರ್ಚಯೇತ್ । ಆಭೃ

ಅಂತಹ, ಪರಮಃ - ನಿರತಿಶಯವಾದುದರಿಂದ ಗುಹ್ಯಃ, - ಅತಿರಹಸ್ಯವಾದ, ಜಪ್ಯಃ - ಮಂತ್ರವು, ಮೇ - ನನ್ನಿಂದ, ಶ್ರೂಯತಾಂ - ಕೇಳಲ್ಪಡಲಿ ॥೫೩॥ ದೇಶ....ತ್ - ದೇಶ, ಕಾಲಗಳ ವಿಭಾಗವನ್ನು ತಿಳಿದ, ಬುಧಃ- ಪಂಡಿತನು, ಅನೇನ ಮಂತ್ರೇಣ - ಈ ಮಂತ್ರದಿಂದ, ವಿವಿಧೈಃ - ನಾನಾ ವಿಧಗಳಾದ, ದ್ರವ್ಯೈಃ ವಸ್ತುಗಳಿಂದ, ದೇವಸ್ಯ-ಭಗವಂತನ, ದ್ರವ್ಯಮಯೀಂ - ದ್ರವ್ಯರೂಪವಾದ, ಸಪರ್ಯಾಂ - ಆರಾಧನೆಯನ್ನು, ಕುರ್ಯಾತ್ - ಮಾಡಬೇಕು ॥೫೪॥

ಶುಚಿಭಿಃ - ಪರಿಶುದ್ಧಗಳಾದ, ಸಲಿಲೈಃ - ಜಲದಿಂದಲೂ, ವನ್ಯೈಃ - ಅಡವಿಯಲ್ಲಿ ಹುಟ್ಟಿದ, ಮೂಲಫಲಾದಿಭಿಃ - ಬೇರುಹಣ್ಣು ಮೊದಲಾದವುಗಳಿಂದಲೂ, ಶಸ್ತ....ಕೈಃ - ಪ್ರಶಸ್ತಗಳಾದ ದೂರ್ವಾಂಕುರಮೊದಲಾದವುಗಳಿಂದಲೂ, ಪ್ರಿಯಯಾ - ಇಷ್ಟವಾದ, ತುಲಸ್ಯಾ ತುಲಸಿಯಿಂದಲೂ, ಪ್ರಭುಂ - ಭಗವಂತನನ್ನು, ಅರ್ಚೇತ್ - ಪೂಜಿಸಬೇಕು ॥೫೫॥ ದ್ರವ್ಯಮಯೀಂ - ಶಿಲಾದಿ ನಿರ್ಮಿತವಾದ, ಅರ್ಚಾಂ - ಪ್ರತಿಮೆಯನ್ನು, ಲಬ್ಧ್ವಾ - ಪಡೆದು, ಕ್ಷಿತ್ಯಂ..ಷು - ಭೂಮಿ - ನೀರು ಮೊದಲಾದವುಗಳಲ್ಲಿಯಾಗಲಿ, ಅರ್ಚಯೇತ್ - ಪೂಜಿಸಬೇಕು, ಮುನಿಃ - ಮನನಶೀಲನಾಗಿ, ಆಭೃತಾತ್ಮಾ- ಮನಸ್ಸ್ಥೈರ್ಯವನ್ನು ಪಡೆದು, ಶಾಂತಃ - ಶಾಂತನಾಗಿ, ಯತವಾಕ್ - ಮೌನವನ್ನು ಹೊಂದಿ, ಮಿತ...ಕ್-

ಗುಪದೇಶಿಸುವೆನು. ಈ ಮಂತ್ರವನ್ನು ಏಳು ದಿನಗಳು ಭಕ್ತಿಯಿಂದ ಜಪಿಸಿದವನು ಖೇಚರರನ್ನು ಕಾಣುವನು. ಎಂದು ನಾರದಮುನಿಯು ಮಂತ್ರಪ್ರಭಾವವನ್ನರುಹಿ ಧ್ರುವಕುಮಾರನನ್ನು ಬಳಿಗೆಕರೆದು ಅವನ ಬಲಗಿವಿಯಲ್ಲಿ ಈ ಮಂತ್ರವನ್ನು ಸಂಪ್ರದಾಯಾನುಸಾರವಾಗಿ ಉಪದೇಶಿಸಿ, ಬಳಿಕ ಎಲೈ ಕುಮಾರನೆ! ದೇಶಕಾಲಸ್ವರೂಪವನ್ನು ಬಲ್ಲ ವಿದ್ವಾಂಸನು ಅನೇಕವಿಧಗಳಾದ ದ್ರವ್ಯಗಳನ್ನು ಜತೆಗೊಳಿಸಿಕೊಂಡು ಈ ಮಂತ್ರದಿಂದ ದ್ರವ್ಯರೂಪವಾದ ಯಜ್ಞವನ್ನಾಚರಿಸಬೇಕು ॥೫೩-೫೪॥ ಪರಿಶುದ್ಧವಾದ ಜಲದಿಂದಲೂ, ಪುಷ್ಪಗಳಿಂದಲೂ, ಆರಣ್ಯಕಗಳಾದ ಕಂದ, ಮೂಲಫಲಾದಿಗಳಿಂದಲೂ, ಎಳದಾದ ದೂರ್ವಾಂಕುರಗಳಿಂದಲೂ, ಭಗವಂತನಿಗೆ ಪ್ರಿಯವಾದ ತುಲಸಿಯಿಂದಲೂ, ಶ್ರೀ ಹರಿಯನ್ನು ಪೂಜಿಸಬೇಕು ॥೫೫॥ ಶಿಲಾದಿಗಳಿಂದ ನಿರ್ಮಿತವಾದ ಪ್ರತಿಮೆಯಲ್ಲಾಗಲಿ, ಸ್ಥಂಡಿಲ, ಗಂಗಾದಿ ಜಲ, ಅಗ್ನಿ ಬ್ರಾಹ್ಮಣ, ಸೂರ್ಯಮಂಡಲ ಮೊದಲಾದವುಗಳಲ್ಲಾಗಲಿ, ಭಗವಂತನನ್ನಾರಾ

* ಟೀ. ಈ ಮಂತ್ರಕ್ಕೆ "ದ್ವಾದಶಾಕ್ಷರಿ" ಎಂದು ಹೆಸರು. ಶ್ರೀ ನಾರದಮುನಿಯು ಅನುಪನೀತನಾದ ಧ್ರುವಕುಮಾರನಿಗೆ ಈ ಮಂತ್ರವನ್ನುಪದೇಶಿಸಿದುದರಿಂದ, ಪ್ರಣವ ಪೂರ್ವಕಗಳಾದ ವೈಷ್ಣವ ಮಂತ್ರಗಳ ಉಪದೇಶಕ್ಕೆ ದ್ವಿಜರೇ ಅಧಿಕಾರಿಗಳೆಂಬ ನಿಯಮವಿಲ್ಲವೆಂದರಿಯಬೇಕು.

ತಾತ್ಮಾ ಮುನಿಃ ಶಾಂತೋ ಯತವಾಕ್ ಮಿತವನ್ಯಭುಕ್ ||೫೬|| ಸ್ವೇ ಚ್ಛಾ ಽ ವತಾರಚರಿತ್ರೈ ರಚಿಂತ್ಯ ನಿಜಮಾಯಯಾ | ಕರಿಷ್ಯತ್ಯುತ್ತಮ ಶ್ಲೋಕ ಸ್ತದ್ಧ್ಯಾಯೇ ದ್ಧೃದಯಂಗಮಂ || ೫೭ || ಪರಿಚರ್ಯಾ ಭಗ ವತೋ ಯಾವತ್ಯಃ ಪೂರ್ವಸೇವಿತಾಃ | ತಾ § ಮಂತ್ರಹೃದಯೇ ನೈವ ಪ್ರಯುಂಜ್ಯಾ ನ್ಮಂತ್ರಮೂರ್ತಯೇ ||೫೮|| ಏವಂ ಕಾಯೇನ ಮನಸಾ ವಚಸಾಚ ಮನೋಗತಂ | ಪರಿಚರ್ಯಮಾಣೋ ಭಗವಾನ್ ಭಕ್ತಿಮ ತ್ಪರಿಚರ್ಯಯಾ ||೫೯|| ಪುಂಸಾ ಮಮಾಯಿನಾಂ ಸಮ್ಯ ಗ್ಭಜತಾಂ ಭಾವವರ್ಧನಃ | ಶ್ರೇಯೋ ದಿಶತ್ಯಭಿಮತಂ ಯದ್ಧರ್ಮಾದಿಷು ದೇಹಿ

ಮಿತವಾಗಿ ಕಂದಮೂಲಾದಿಗಳನ್ನು ಭುಜಿಸಬೇಕು ||೫೬|| ಉತ್ತಮಶ್ಲೋಕಃ - ಭಗವಂತನು ಸ್ವೇಚ್ಛಾ..ತ್ರೈಃ - ತಾನಾಗಿಮಾಡುವ ಅವತಾರಗಳ ಚರಿತ್ರಗಳಿಂದ, ಅಚಿಂತ್ಯನಿಜಮಾಯಯಾ - ಅದ್ಭುತವಾದ ತನ್ನ ಸಂಕಲ್ಪದಿಂದ, ಯತ್ - ಯಾವುದನ್ನು, ಕರಿಷ್ಯತಿ - ಮಾಡುವನೋ, ಹೃದಯಂಗಮಂ- ಮನೋಹರವಾದ, ತತ್ - ಅದನ್ನು, ಧ್ಯಾಯೇತ್ - ಧ್ಯಾನಿಸಬೇಕು ||೫೭|| ಪೂರ್ವಸೇವಿತಾಃ - ಪೂರ್ವಿಕರಿಂದ ಸೇವಿಸಲ್ಪಟ್ಟ, ಭಗವತಃ - ಭಗವಂತನ, ಯಾವತ್ಯಃ - ಎಷ್ಟು, ಪರಿಚರ್ಯಾಃ - ಸೇವೆಗಳಿರುವುವೋ, ತಾಃ - ಆ ಸೇವೆಗಳನ್ನು, ಮಂತ್ರಮೂರ್ತಯೇ - ಮಂತ್ರದಿಂದ ಧ್ಯಾನಿಸಲ್ಪಟ್ಟ ಮೂರ್ತಿಯುಳ್ಳ, ಭಗವಂತನಿಗೆ, ಮಂತ್ರಹೃದಯೇನೈವ - ಮಂತ್ರಹೃದಯದಿಂದಲೇ, ಪ್ರಯುಂಜ್ಯಾತ್ - ಸಲ್ಲಿಸಬೇಕು ||೫೮|| ಏವಂ - ಇಂತು, ಮನೋಗತಂ - ಕೋರಿಕೆಯು ನೆರವೇರುವಂತೆ, ಕಾಯೇನ - ಶರೀರದಿಂದಲೂ, ಮನಸಾ - ಮನಸ್ಸಿನಿಂದಲೂ, ವಚಸಾಚ - ಮಾತಿನಿಂದಲೂ, ಭಕ್ತಿ...ಯಾ - ಭಕ್ತಿಯುಳ್ಳಸೇವೆಯಿಂದ, ಪರಿಚರ್ಯಮಾಣಃ - ಸೇವಿಸಲ್ಪಡುವ, ಭಗವಾನ್ - ಭಗವಂತನು ||೫೯|| ಅಮಾಯಿನಾಂ - ನಿಷ್ಕಪಟರಾದ, ಸಮ್ಯಕ್ - ಚೆನ್ನಾಗಿ, ಭಜತಾಂ - ಧ್ಯಾನಿಸುವವರ, ಭಾವವರ್ಧನಃ -

ಧಿಸಬೇಕು. ಭಗವದಾರಾಧನೆಗೆ ಅನರ್ಹಗಳಾದ ಸಮಯಗಳಲ್ಲಿ ಭಕ್ತನಾದವನು ಮನೋನಿಗ್ರಹವನ್ನು ಮಾಡಿ ಮನನಶೀಲನಾಗಿ ಸಮಾಧಾನದಿಂದ ವಾಙ್ನಿಯಮವನ್ನು ಪಡೆದು, ಆರಣ್ಯಕಗಳಾದ ಕಂದಮೂಲಾದಿಗಳನ್ನು ಮಿತವಾಗಿ ಭುಜಿಸುತ್ತಾ, ಭಗವಂತನು ತನ್ನ ಇಚ್ಛಾನುಸಾರವಾಗಿ ಮಾಯೆಯಿಂದ ವರಾಹಾದ್ಯವತಾರಗಳನ್ನು ಮಾಡಿ ದುಷ್ಟನಿಗ್ರಹಶಿಷ್ಟಪರಿಪಾಲನರೂಪಗಳಾದ ಯಾವ ಅದ್ಭುತಚರಿತ್ರಗಳನ್ನು ನಡೆಯಿಸಿದನೋ, ಅವುಗಳನ್ನು ಅನನ್ಯಮನಸ್ಕನಾಗಿ ಧ್ಯಾನಿಸುತ್ತಿರಬೇಕು ||೫೬-೫೭|| ಮತ್ತು ಪೂರ್ವಿಕರಾದ ಭಕ್ತರ ಸಂಪ್ರದಾಯದಂತೆ ಪೂಜಾಕಾಲದಲ್ಲಿ ಯಾವಯಾವ ಉಪಚಾರಗಳನ್ನು ಸಮರ್ಪಿಸಿರುವನೋ, ಅವುಗಳನ್ನು ವಿರಾಮವಾದ ಧ್ಯಾನಕಾಲದಲ್ಲಿ ಮಂತ್ರಮೂರ್ತಿಯಾದ ಭಗವಂತನಿಗೆ ಮಂತ್ರಹೃದಯದಿಂದಲೇ ಸಮರ್ಪಿಸಬೇಕು ||೫೮|| ಇಂತು ವಾಕ್ಕಾಯಮಾನಸಗಳೆಂಬ ತ್ರಿಕರಣಗಳಿಂದಲೂ, ತನ್ನ ಕೋರಿಕೆಯು ಸಿದ್ಧಿಸುವಂತೆ ಸಂಪೂರ್ಣಭಕ್ತಿಯಿಂದ

§ ಏ "ಹೃದಯಂ ನಮಃಶಬ್ದಃ" ಎಂದು ಮಂತ್ರೋದ್ಧಾರವೆಂಬ ಗ್ರಂಥದಲ್ಲಿ ಹೇಳಲ್ಪಟ್ಟಿರುವುದರಿಂದ "ಓಂನಮೋ ಭಗವತೇ ವಾಸುದೇವಾಯ" ಎಂಬ ಮಂತ್ರಕ್ಕೆ "ನಮಃ" ಎಂಬುದೇ ಮಂತ್ರಹೃದಯವೆಂದು ತಿಳಿಯಬೇಕು.

ನಾಂ ॥೬೦॥ ವಿರಕ್ತ ಶ್ಚೇಂದ್ರಿಯರತೌ ಭಕ್ತಿಯೋಗೇನ ಭೂಯಸಾ ।
ತಂ ನಿರಂತರಭಾವೇನ ಭಜೇತಾದ್ಧಾ ¶ ವಿಮುಕ್ತಯೇ ॥ ೬೧ ॥ ಇತ್ಯು
ಕ್ತ ಸ್ತಂ ಪರಿಕ್ರಮ್ಯ ಪ್ರಣಮ್ಯ ಚ ನೃಪಾರ್ಭಕಃ । ಯಯೌ ಮಧುವ
ನಂ ಪುಣ್ಯಂ ಹರೇ ಶ್ಚರಣಚರ್ಚಿತಂ ॥ ೬೨ ॥ ತಪೋವನಂ ಗತೇ ತಸ್ಮಿನ್
ಪ್ರವಿಷ್ಟೋಂತಃ ಪುರಂ ಮುನಿಃ । ಅರ್ಹಿತಾ ಽ ರ್ಹಣಕೋ ರಾಜ್ಞಾ

ಭಕ್ತಿಯನ್ನು ಹೆಚ್ಚಿಸುವ ಭಗವಂತನು, ದೇಹಿನಾಂ - ಪ್ರಾಣಿಗಳಿಗೆ, ಧರ್ಮಾದಿಷು - ಧರ್ಮವೊದಲಾದ ಪುರುಷಾರ್ಥಗಳಲ್ಲಿ, ಯತ್ - ಯಾವುದು, ಅಭಿಮತಂ - ಇಷ್ಟವೋ, ಅಂತಹ, ಶ್ರೇಯಃ - ಶ್ರೇಯಸ್ಸನ್ನು, ದಿಶತಿ - ಕೊಡುವನು ॥೬೦॥ ಇಂದ್ರಿಯರತೌ - ಇಂದ್ರಿಯಪ್ರೀತಿಯಲ್ಲಿ, ವಿರಕ್ತಃ - ಆಸೆಯಿಲ್ಲದೆ, ಭೂಯಸಾ - ನಿಷ್ಕಾಮವಾದ, ಭಕ್ತಿಯೋಗೇನ - ಭಕ್ತಿಯಿಂದಲೂ, ನಿರಂತರ ಭಾವೇನ - ಅಭೇದ ಭಾವನೆಯಿಂದಲೂ, ವಿಮುಕ್ತಯೇ - ಮೋಕ್ಷಕ್ಕಾಗಿ, ಅದ್ಧಾ - ಸಾಕ್ಷಾತ್ತಾಗಿ, ಭಜೇತ - ಭಜಿಸಬೇಕು ॥೬೧॥ ನೃಪಾರ್ಭಕಃ - ರಾಜಪುತ್ರನು, ಇತಿ - ಇಂತು, ಉಕ್ತಃ - ಹೇಳಲ್ಪಟ್ಟು, ತಂ - ಆ ನಾರದನನ್ನು, ಪರಿಕ್ರಮ್ಯ - ಬಲವಂದು, ಪ್ರಣಮ್ಯ ಚ - ನಮಸ್ಕರಿಸಿ, ಹರೇಃ - ವಿಷ್ಣುವಿನ, ಚರಣ ಚರ್ಚಿತಂ - ಪಾದಗಳಿಂದ ಅಲಂಕೃತವಾದ, ಪುಣ್ಯಂ - ಪಾವನವಾದ, ಮಧುವನಂ - ಮಧುವನಕ್ಕೆ, ಯಯೌ - ಹೋದನು ॥೬೨॥ ತಸ್ಮಿನ್ - ಆ ಧ್ರುವನು, ತಪೋವನಂ - ಮಧುವನಕ್ಕೆ, ಗತೇ - ಹೋರಡಲು, ಮುನಿಃ . ನಾರದ ಮುನಿಯು, ಅಂತಃ ಪುರಂ - ಉತ್ತಾನಪಾದರಾಜನ ಅರಮನೆಯನ್ನು, ಪ್ರವಿಷ್ಟಃ - ಹೊಕ್ಕು, ರಾಜ್ಞಾ - ರಾಜನಿಂದ, ಅರ್ಹಿ...ಕಃ, ಸತ್ಕಾರಗೊಂಡು, ಸುಖಾಸೀನಃ - ಸುಖವಾಗಿ

ಸೇವಿಸಿದರೆ, ಅಂತಹ ಸೇವೆಯನ್ನು ಪಡೆದ ಭಗವಂತನು ನಿಷ್ಕಾಮರಾಗಿ ಅನನ್ಯಭಕ್ತಿಯಿಂದ ತನ್ನನ್ನು ಭಜಿಸುವವರಿಗೆ ಭಕ್ತಿಯನ್ನು ವೃದ್ಧಿಗೊಳಿಸುವುದಲ್ಲದೆ, ಅವರಿಗೆ ಸಮ್ಮತವಾದ ಪುರುಷಾರ್ಥವನ್ನೂ ಇತ್ತು ಸಲಹುವನು ॥೫೮-೬೦॥ ಭಕ್ತನಾದವನು ಇಂದ್ರಿಯಭೋಗಗಳನ್ನಾಶಿಸದೆ ನಿಷ್ಕಾಮವಾದ ಭಕ್ತಿಯನ್ನು ಪಡೆದು ಅಭೇದಭಾವನೆಯಿಂದ ತಾನೇ ಸಾಕ್ಷಾತ್ತಾಗಿ ಭಗವಂತನನ್ನು ಭಜಿಸಿದವನು ಮುಕ್ತಿಯನ್ನು ಪಡೆಯುವನೇ ಹೊರತು, ರಾಜಸದಿಂದ ಕಷ್ಟಕ್ಕೆ ಪಾಲುಮಾರಿ ಶಿಷ್ಯಾದಿಗಳ ಮೂಲಕವಾಗಿ ಭಗವದಾರಾಧನೆಯನ್ನು ಮಾಡಿಸಿ ಭಕ್ತಿಯನ್ನು ತೋರುವವನು ನಿತ್ಯನಿರ್ವಾಣಪದವನ್ನು ಹೊಂದಲಾರನು. ಆದುದರಿಂದ ನೀನು ಸಾಕ್ಷಾತ್ತಾಗಿ ಭಗವಂತನನ್ನಾರಾಧಿಸು ॥೬೧॥ ಎಂದು ನಾರದಮುನಿಯಿಂದುಪದೇಶವನ್ನು ಪಡೆದಕೂಡಲೆ ಧ್ರುವಕುಮಾರನು ಆ ದೇವಮುನಿಗೆ ಪ್ರದಕ್ಷಿಣಪ್ರಣಾಮವನ್ನಾಚರಿಸಿ, ಭಗವಂತನ ಪಾದಕಮಲಪರಾಗದಿಂದ ಪಾವನವೆನಿಸಿರುವ ಮಧುವನಕ್ಕೆ ತೆರಳಿದನು ॥೬೨॥ ಆ ಧ್ರುವನು ತಪಸ್ಸಿಗಾಗಿ ಮಧುವನಕ್ಕೆ ತೆರಳಲು, ಇತ್ತ ನಾರದಮುನಿಯು ಉತ್ತಾನಪಾದರಾಜನ ಅಂತಃಪುರಕ್ಕೆ ಹೋಗಿ ರಾಜನಿಂದ ಯಥಾಕ್ರಮವಾಗಿ

¶ ದೀ. ಶ್ಲೋ॥ ಧನಶಿಷ್ಯಾದಿಭಿ ರ್ದ್ವಾರೈ ರ್ಯಾ ಭಕ್ತಿ ರುಪಪಾದ್ಯತೇ। ವಿದೂರತ್ವಾ ದುತ್ತಮತಾಹಾನ್ಯಾ ತಸ್ಯಾಶ್ಚ ನಾಂಗತಾ ॥ (ಭಕ್ತಿರಸಾಮೃತ ಸಿಂಧು) ಹಣದಿಂದಾಗಲಿ, ಶಿಷ್ಯಾದಿಗಳಿಂದಾಗಲಿ ದೇವತಾರಾಧನೆಯನ್ನು ಮಾಡಿಸಿ, ಸಂಪಾದಿಸಿದ ಭಕ್ತಿಯು ಭಗವಂತನಿಗೆ ದೂರವಾದುದರಿಂದ ಉತ್ತಮ ಭಕ್ತಿಯಲ್ಲ.

ಸುಖಾಸೀನ ಉವಾಚ ತಂ ॥೬೩॥ ನಾರದಃ ॥ ರಾಜನ್ ಕಿಂಧ್ಯಾಯಸೇ ? ದೀರ್ಘಂ ಮುಖೇನ ಪರಿತುಷ್ಯತಾ । ಕಿಂವಾ ನರಿಷ್ಯತೇ ಕಾಮೋ? ಧರ್ಮೋ ವಾ ಽ ರ್ಥೇನ ಸಂಯುತಃ ॥೬೪॥ ರಾಜಾ ॥ ಸುತೋ ಮೇ ಬಾಲಕೋ ಬ್ರಹ್ಮನ್ ! ಸ್ತ್ರೈಣೇನಾ ಽ ಕರುಣಾತ್ಮನಾ । ನಿರ್ವಾಸಿತಃ † ಪಂಚವರ್ಷಃ ಸಹಮಾತ್ರಾ ಮಹಾನ್ಕವಿಃ ॥೬೫॥ ಅಪ್ಯನಾಥಂ ವನೇ ಬ್ರಹ್ಮನ್ ! ಮಾಸ್ಮಾ ಽ ದಂತ್ಯರ್ಭಕಂ ವೃಕಾಃ । ಶ್ರಾಂತಂ ಶಯಾನಂ ಕ್ಷುಧಿತಂ ಪರಿಮ್ಲಾನಮುಖಾಂಬುಜಂ ॥ ೬೬ ॥ ಅಹೋ ! ಮೇ ಬತ ! ದೌರಾತ್ಮ್ಯಂ

---

ಕುಳಿತು, ತಂ - ಆರಾಜನಿಗೆ, ಉವಾಚ - ಹೇಳಿದನು ॥೬೩॥ ಹೇರಾಜನ್ - ಎಲೈ ರಾಜನೆ ! ಪರಿಶುಷ್ಯತಾ - ಒಣಗಿದ, ಮುಖೇನ - ಮುಖದಿಂದ, ದೀರ್ಘಂ - ಬಹಳವಾಗಿ, ಕಿಂ - ಏನನ್ನು, ಧ್ಯಾಯಸೇ - ಯೋಚಿಸುತ್ತಿರುವೆ ? ಅರ್ಥೇನ - ಅರ್ಥದಿಂದ, ಸಂಯುತಃ - ಕೂಡಿದ, ಧರ್ಮಃ - ಧರ್ಮವಾಗಲಿ, ಕಾಮೋವಾ - ಕಾಮವಾಗಲಿ, ಕಿಂ ನರಿಷ್ಯತೇ - ನಾಶವಾಗಲಿಲ್ಲವಷ್ಟೆ ? ॥೬೪॥

ಹೇಬ್ರಹ್ಮನ್ - ಎಲೈ ಬ್ರಹ್ಮಪುತ್ರನೆ! ಸ್ತ್ರೈಣೇನ - ಸ್ತ್ರೀವಶನಾದ, ಅಕರುಣಾತ್ಮನಾ - ನಿರ್ಘೃಣನಾದ ನಿನ್ನಿಂದ, ಬಾಲಕಃ - ಹಸುಳೆಯಾದ, ಪಂಚವರ್ಷಃ - ಐದುವರ್ಷ ವಯಸ್ಸುಳ್ಳ, ಮಹಾನ್ - ವಿನೀತನಾದ, ಕವಿಃ - ಬುದ್ಧಿಶಾಲಿಯಾದ, ಮೇ - ನನ್ನ, ಸುತಃ - ಮಗನು, ಮಾತ್ರಾಸಹ - ತಾಯಿಯೊಡನೆ, ನಿರ್ವಾಸಿತಃ - ಹೊರಡಿಸಲ್ಪಟ್ಟನು ॥೬೫॥ ಹೇಬ್ರಹ್ಮನ್ - ಎಲೈ ನಾರದನೆ ! ವನೇ - ಕಾಡಿನಲ್ಲಿ, ಶ್ರಾಂತಂ - ಬಳಲಿ, ಪರಿ...ಜಂ - ಕಳೆಗುಂದಿದ ಮುಖವುಳ್ಳವನಾಗಿ, ಕ್ಷುಧಿತಂ - ಹಸಿವುಗೊಂಡು, ಶಯಾನಂ - ಮಲಗಿರುವ, ಅನಾಥಂ - ದಿಕ್ಕಿಲ್ಲದ, ಅರ್ಭಕಂ - ಮಗುವನ್ನು, ವೃಕಾಃ - ತೋಳಗಳು, ಮಾಸ್ಮಾದಂತ್ಯಪಿ - ತಿನ್ನದಿರುವವೆ ? ॥೬೬॥ ಅಸತ್ತಮಃ - ಅತ್ಯಂತ ದುಷ್ಟನಾದ, ಯಃ-ಯಾವ ನಾನು

---

ಸತ್ಕಾರವನ್ನು ಪಡೆದು ಸುಖಾಸೀನನಾಗಿ ಆ ರಾಜನಿಗಿಂತೆಂದನು ॥೬೩॥ ಅಯ್ಯಾ ಮಹಾರಾಜನೆ! ಮುಖವನ್ನು ಬಳಲಿಸಿಕೊಂಡು ನೀನಿಂತು ಯೋಚಿಸುತ್ತಿರುವದೇಕೆ? ಧರ್ಮಕ್ಕೇನಾದರೂ ಲೋಪಬಂದಿರುವುದೆ ? ಅರ್ಥನಾಶವುಂಟಾಗಿರುವುದೆ ? ನಿನ್ನ ಮನೋರಥಕ್ಕೇನಾದರೂ ಕುಂದಾಯಿತೆ? ಎಂದು ಕುಶಲಪ್ರಶ್ನೆಮಾಡುತ್ತಿರುವ ನಾರದಮುನಿಗೆ ಉತ್ತಾನಪಾದರಾಯನು ಹೇಳುತ್ತಾನೆ---ಅಯ್ಯಾ ಬ್ರಹ್ಮಪುತ್ರನಾದಮುನಿಯೆ ! ನನ್ನ ದುಃಖನ್ನೇನೆಂದು ಹೇಳಲಿ ? ಹೆಂಗಸಿನ ಬೇಳವೆಗೆ ಬೆರಗಾಗಿ ಸಹಜವಾದ ವಾತ್ಸಲ್ಯವನ್ನೂ ತೊರದು ಶಾಸ್ತ್ರಪದ್ಧತಿಗಳನ್ನುಲ್ಲಂಘಿಸಿ ಹಸುಳೆಯೂ, ಪಂಚವರ್ಷವಯಸ್ಕನೂ ವಿನೀತನೂ, ಬುದ್ಧಿಶಾಲಿಯೂ ಆಗಿರುವ ನನ್ನ ಮಗನನ್ನು ತಾಯಿಯೊಡನೆ ಹೊರಡಿಸಿದೆನು ॥೬೫॥ ಬೆಂಗಾಡಿನಲ್ಲಿ ಅಲೆಯುತ್ತಾ, ತಾವರೆಯಂತಿರುವ ಮೊಗವ್ರೊಣಗಿ ಬಳಲಿಬಾಯಾರಿ ಹಸಿವುಗೊಂಡು ಅನಾಥನಾಗಿ ಮಲಗಿರುವ ನನ್ನಕಂದನನ್ನುತೋಳಮೊದಲಾದ ಕಾಡುಮೃಗಗಳು ಕಚ್ಚಿ ತಿನ್ನದಿರುವವೆ ? ॥೬೬॥ ಅಂದಗಾರನಾದ ಕಂದನು ಬಂದು ಆನಂದದಿಂದ ನನ್ನ ತೊಡೆಯು

---

† ಪೀ ಶ್ಲೋ॥ ವೃದ್ಧೌ ಚ ಮಾತಾಪಿತರೌ ಸಾಧ್ವೀ ಭಾರ್ಯಾ ಸುತಃ ಶಿಶುಃ। ಅಪ್ಯಕಾರ್ಯಶತಂ ಕೃತ್ವಾ ಭರ್ತವ್ಯಾ ಮನು ರಬ್ರವೀತ್ ॥ [ಮುದುಕರಾದ ತಾಯಿತಂದೆಗಳನ್ನೂ, ಪತಿವ್ರತೆಯಾದ ಹೆಂಡತಿಯನ್ನೂ, ಶಿಶುವಾದ ಮಗನನ್ನೂ ನೂರಾರು ದುಷ್ಕಾರ್ಯಗಳನ್ನು ಮಾಡಿಯಾದರೂ ಸಲಹಬೇಕು.

(ಮನುಸ್ಮೃತಿ)

ಸ್ತ್ರೀಜಿತಸ್ಯೋಪಧಾರಯ । ಯೋಽಂಕಂ ಪ್ರೇಮ್ಣಾ ರುರುಕ್ಷಂತಂ ನಾಽಭ್ಯ
ನಂದ ಮಸತ್ತಮಃ ॥೧೭॥ ನಾರದಃ ॥ ಮಾಮಾಶುಚಃ ಸ್ವತನಯಂ ದೇವ
ಗುಪ್ತಂ ವಿಶಾಂಪತೇ ! । ತತ್ಪ್ರಭಾವ ಮಭಿಜ್ಞಾಯ ಪ್ರಾವೃಙ್ಕ್ತೇ ಯದ್ಯ
ಶೋ ಜಗತ್ ॥೧೮॥ ಸುದುಷ್ಕರಂ ಕರ್ಮ ಕೃತ್ವಾ ಲೋಕಪಾಲೈರಪಿ
ಪ್ರಭುಃ । ಏಷ್ಯತ್ಯ ಚಿರತೋ ರಾಜನ್! ಯಶೋ ವಿಪುಲಯಂ ಸ್ತವ ॥೧೯॥
ಮೈತ್ರೇಯಃ॥ ಇತಿದೇವರ್ಷಿಣಾ ಪ್ರೋಕ್ತಂ ವಿಶ್ರುತ್ಯ ಜಗತೀಪತಿಃ । ರಾಜ
ಲಕ್ಷ್ಮೀ ಮನಾದೃತ್ಯ ಪುತ್ರ ಮೇವಾಽನ್ವಚಿಂತಯತ್ ॥೨೦॥ ತತ್ರಾಽ

---

ಅಂಕಂ - ತೊಡೆಯನ್ನು, ಆರುರುಕ್ಷಂತಂ - ಏರಲೆಳಸಿದ ಮಗುವನ್ನು, ನಾಭ್ಯನಂದಂ - ಸಮ್ಮತಿಸಲಿಲ್ಲವೋ, ಅಂತಹ, ಸ್ತ್ರೀಜಿತಸ್ಯ - ಹೆಣ್ಣಿಗಸಾದ, ಮೇ - ನನ್ನ, ದೌರಾತ್ಮ್ಯಂ - ದುಷ್ಟತನವನ್ನು, ಉಪಧಾರಯ - ತಿಳಿದುಕೋ, ಅಹೋಬತ - ಆಹಾ ಕಷ್ಟವು ॥೧೭॥ ನಾರದನು ಹೇಳುತ್ತಾನೆ, ಹೇವಿಶಾಂಪತೇ - ಎಲೈ ರಾಜನೆ ? ಯದ್ಯಶಃ - ಯಾರಕೀರ್ತಿಯು, ಜಗತ್ - ಲೋಕವನ್ನು, ಪ್ರಾವೃಂಕ್ತೇ ಆಕ್ರಮಿಸಿರುವುದೋ, ತತ್ಪ್ರಭಾವಂ - ಅವನ ಮಹಿಮೆಯನ್ನು, ಅವಿಜ್ಞಾಯ - ತಿಳಿಯದೆ, ದೈವಗುಪ್ತಂ - ದೈವರಕ್ಷಿತನಾದ, ಸ್ವತನಯಂ - ನಿನ್ನ ಮಗನನ್ನು ಕುರಿತು, ಮಾಮಾಶುಚಃ - ಚಿಂತಿಸಬೇಡ ॥೧೮॥ ಹೇರಾಜನ್ - ಎಲೈ ರಾಜನೆ? ಪ್ರಭುಃ - ಜಿತೇಂದ್ರಿಯನಾದ ಧ್ರುವನು, ಲೋಕಪಾಲೈರಪಿ - ಲೋಕಪಾಲರಿಂದಲೂ, ಸುದುಷ್ಕರಂ- ಮಾಡಲಾಗದ, ಕರ್ಮ - ಕಾರ್ಯವನ್ನು, ಕೃತ್ವಾ - ಮಾಡಿ, ತವ - ನಿನ್ನ, ಯಶಃ - ಕೀರ್ತಿಯನ್ನು, ವಿಪುಲಯನ್ -ಹೆಚ್ಚಿಸುತ್ತಾ, ಅಚಿರತಃ- ಶೀಘ್ರವಾಗಿಯೇ, ಏಷ್ಯತಿ-ಬರುವನು॥೧೯॥ ಇತಿ - ಇಂತು, ಜಗತೀಪತಿಃ - ಉತ್ತಾನಪಾದನು, ದೇವರ್ಷಿಣಾ - ನಾರದನಿಂದ, ಪ್ರೋಕ್ತಂ - ಹೇಳಲ್ಪಟ್ಟುದನ್ನು, ವಿಶ್ರುತ್ಯ - ಕೇಳಿ, ರಾಜಲಕ್ಷ್ಮೀಂ - ರಾಜ ಸಂಪತ್ತನ್ನು, ಅನಾದೃತ್ಯ - ತಿರಸ್ಕರಿಸಿ, ಪುತ್ರಮೇವ - ಮಗನನ್ನೇ, ಅನ್ವಚಿಂತಯತ್ - ಚಿಂತಿಸುತ್ತಿದ್ದನು ॥೨೦॥ ತತ್ರ - ಆ ಮಧುವನದಲ್ಲಿ, ಧ್ರುವನು, ಅಭಿಷಿಕ್ತಃ - ಸ್ನಾನಮಾಡಿ, ಪ್ರಯತಃ - ಜಿತೇಂದ್ರಿಯನಾಗಿ,ತಾಂವಿಭಾವರೀಂ - ಆ ರಾತ್ರಿಯಲ್ಲಿ,

---

ನ್ನೇರಬೇಕೆಂದೆಳಸಿದಾಗ, ಮಂದಭಾಗ್ಯನಾದ ನಾನು ದಂಮಗಗೊಳಿಸಿ ಹಿಂದಕ್ಕೆ ಕಳುಹಿದೆನಲ್ಲಾ. ಅಕಟಾ ! ನನ್ನ ದೌರಾತ್ಮ್ಯವೆಷ್ಟರದೆಂದು ತಿಳಿದೆಯಾ ? ॥ ೧೭ ॥ ಎಂದು ಗೋಳಿಡುತ್ತಿರುವ ರಾಜನನ್ನು ಕುರಿತು ನಾರದನು ಹೇಳುತ್ತಾನೆ—ಅಯ್ಯಾ ರಾಜೇಂದ್ರನೆ ! ಚಿಂತಿಸಬೇಡ. ನಿನ್ನ ಮಗನ ಮಹಿಮೆಯು ಸಾಮಾನ್ಯವಲ್ಲ. ಆತನ ಕೀರ್ತಿಯು ಲೋಕವನ್ನೆಲ್ಲಾ ಹಬ್ಬುವುದು. ಆತನಿಗೆ ಭಗವಂತನೇ ರಕ್ಷಕನಾಗಿರುವುದರಿಂದ ಅವನಿಗಾಗಿ ಮರುಗಬೇಡ ॥೧೮॥ ಮಹನೀಯ್ಯನಾದ ಆಧ್ರುವಕುಮಾರನು ಇಂದ್ರಾದಿ ದಿಕ್ಪಾಲರಿಂದಲೂ ಸಾಧಿಸಲಾಗದ ಮಹಾಕಾರ್ಯವನ್ನು ಸಾಧಿಸಿ, ನಿನ್ನ ಯಶಸ್ಸನ್ನು ವಿಸ್ತರಿಸಿ ಶೀಘ್ರವಾಗಿಯೇ ಹಿಂದಿರುಗಿ ಬರುವನು ಚಿಂತಿಸಬೇಡ ॥೧೯॥ ಅಯ್ಯಾ ವಿದುರನೆ ! ಎಂದು ನುಡಿದ ದೇವರ್ಷಿಯಾದ ನಾರದನ ನುಡಿಗಳನ್ನು ಕೇಳಿ, ಉತ್ತಾನಪಾದರಾಜನು ಪಶ್ಚಾತ್ತಾಪತಪ್ತನಾಗಿ ಅನನ್ಯಸಾಧಾರಣವಾದ ರಾಜ್ಯಲಕ್ಷ್ಮಿಯನ್ನೂ ಗಣಿಸದೆ,ಮಗನನ್ನೇ ಚಿಂತಿಸುತ್ತಿದ್ದನು॥ ಅತ್ತ ಧ್ರುವಕುಮಾರನು ಮಧುವನಕ್ಕೆ ತೆರಳಿ ಯಮುನೆಯಲ್ಲಿ ಮಿಂದು, ಪರಿಶುದ್ಧನಾಗಿ ಆ ರಾತ್ರಿ ಉಪವಾಸವನ್ನು ಮಾಡಿ ನಾರದಮುನಿಯ ಉಪದೇಶದಂತೆ ಏಕಾಗ್ರಚಿತ್ತದಿಂದ

ಭಿಷಿಕ್ತಃ ಪ್ರಯತ ಸ್ತಾಂ ಮುಪೋಷ್ಯ ವಿಭಾವರೀಂ । ಸಮಾಹಿತಃ ಪರ್ಯ
ಚರ ದೃಷ್ಯಾದೇಶೇನ ಪೂರುಷಂ ॥೩೧॥ ತ್ರಿರಾತ್ರಾಂತೇ ತ್ರಿರಾತ್ರಾಂತೇ
ಕಪಿತ್ಥಬದರಾಶನಃ । ಆತ್ಮವೃತ್ತ್ಯನುಸಾರೇಣ ಮಾಸಂ ನಿನ್ಯೇ ಽ ರ್ಚಯನ್
ಹರಿಂ ॥೩೨॥ ದ್ವಿತೀಯಂ ಚ ತಥಾ ಮಾಸಂ ಷಷ್ಠೇ ಷಷ್ಠೇ ಽ ರ್ಭಕೋ
ದಿನೇ । ತೃಣಪರ್ಣಾದಿಭಿಃ ಶೀರ್ಣೈಃ ಕೃತಾನ್ನೋ ಽ ಭ್ಯರ್ಚಯ ದ್ವಿ
ಭುಂ ॥೩೩॥ ತೃತೀಯಂ ಚಾನಯ ನ್ಮಾಸಂ ನವಮೇ ನವಮೇ ಽ ಹನಿ ।
ಅಬ್ಭಕ್ಷ ಉತ್ತಮಶ್ಲೋಕ ಮುಪಾಧಾವ ತ್ಸಮಾಧಿನಾ॥೩೪॥ ಚತುರ್ಥಮಪಿ
ವೈಮಾಸಂ ದ್ವಾದಶೇ ದ್ವಾದಶೇ ಽ ಹನಿ । ವಾಯುಭಕ್ಷೋ ಜಿತಶ್ವಾಸೋ
ಧ್ಯಾಯನ್ ದೇವ ಮಧಾರಯತ್ ॥೩೫॥ ಪಂಚಮೇ ಮಾಸ್ಯನು ಪ್ರಾಪ್ತೇ ಜಿತ

---

ಉಪೋಷ್ಯ - ಉಪವಾಸಮಾಡಿ, ಸಮಾಹಿತಃ - ಸ್ಥಿರಚಿತ್ತನಾಗಿ, ಋಷ್ಯಾದೇಶೇನ - ನಾರದೋಪದೇಶದಂತೆ, ಪೂರುಷಂ - ಪರಮಾತ್ಮನನ್ನು, ಪರ್ಯಚರತ್ - ಪೂಜಿಸಿದನು ॥೩೧॥ ತ್ರಿರಾತ್ರಾಂತೇ - ಮೂರು ರಾತ್ರಿಗಳ ಕಡೆಯಲ್ಲಿ, ಆತ್ಮ...ಣ - ದೇಹಸ್ಥಿತಿಗನುಕೂಲವಾಗಿ ಕಪಿ...ನಃ - ಬೇಲದಹಣ್ಣು, ಬೋರೆಯ ಹಣ್ಣು ಇವುಗಳನ್ನು ತಿನ್ನುತ್ತಾ, ಹರಿಂ - ಹರಿಯನ್ನು, ಅರ್ಚಯನ್ - ಪೂಜಿಸುತ್ತಾ, ಮಾಸಂ - ಒಂದು ತಿಂಗಳನ್ನು, ನಿನ್ಯೇ - ಕಳೆವನು ॥೩೨॥ ಅರ್ಭಕಃ - ಆ ಬಾಲಕನು, ತಥಾ - ಹಾಗೆಯೇ, ದ್ವಿತೀಯಂಮಾಸಂ - ಎರಡನೆಯ ತಿಂಗಳು, ಷಷ್ಠೇಷಷ್ಠೇದಿನೇ - ಆರನೆಯ ದಿನದಲ್ಲಿ, ಶೀರ್ಣೈಃ - ಒಣಗಿದ, ತೃಣಪರ್ಣಾದಿಭಿಃ - ಹುಲ್ಲು ಎಲೆ ಮೊದಲಾದವುಗಳಿಂದ, ಕೃತಾನ್ನಃ - ಆಹಾರಮಾಡುತ್ತಾ, ವಿಭುಂ - ಭಗವಂತನನ್ನು, ಅಭ್ಯರ್ಚಯತ್ - ಪೂಜಿಸಿದನು ॥೩೩॥ ನವಮೇನವಮೇಽಹನಿ - ಒಂಬತ್ತನೆಯ ದಿನದಲ್ಲಿ, ಅಬ್ಭಕ್ಷಃ - ಜಲಾಹಾರಮಾಡಿ, ತೃತೀಯಂ - ಮೂರನೆಯ, ಮಾಸಂಚ - ತಿಂಗಳನ್ನೂ, ಅನಯತ್ - ಕಳೆದನು, ಸಮಾಧಿನಾ - ಯೋಗದಿಂದ, ಉತ್ತಮಶ್ಲೋಕಂ - ಭಗವಂತನನ್ನು, ಉಪಾಧಾವತ್-ಆರಾಧಿಸಿದನು॥೩೪॥

ಚತುರ್ಥಂ - ನಾಲ್ಕನೆಯ, ಮಾಸಮಪಿ - ತಿಂಗಳಲ್ಲಿಯೂ, ದ್ವಾದಶೇ-ದ್ವಾದಶೇಽಹನಿ- ಹನ್ನೆರಡನೆಯ ದಿನದಲ್ಲಿ, ವಾಯುಭಕ್ಷಃ - ಗಾಳಿಯನ್ನು ಕುಡಿದು, ಜಿತಶ್ವಾಸಃ - ಶ್ವಾಸಧಾರಣೆಮಾಡಿ, ಧ್ಯಾಯನ್ - ಧ್ಯಾನಿಸುತ್ತಾ, ದೇವಂ - ಹರಿಯನ್ನು, ಅಧಾರಯತ್ - ಧಾರಣೆಯನ್ನು ಮಾಡಿದನು ॥೩೫॥ ಪಂಚಮೇ-

---

ಪರಮಪುರುಷನನ್ನಾರಾಧಿಸಿದನು ॥೩೧॥ ಇಂತು ಹರಿಪೂಜಾಪರಾಯಣನಾಗಿ ಮೂರುಮೂರುದಿನಗಳಿಗೊಂದುಸಲ ತನ್ನ ದೇಹಧಾರಣೆಗೆ ಮಾತ್ರ ತಕ್ಕಷ್ಟು ಬೇಲದ,ಬೋರೆಯ ಹಣ್ಣುಗಳನ್ನು ತಿನ್ನುತ್ತಾ ಒಂದುತಿಂಗಳನ್ನು ಕಳೆದನು॥೩೨॥ ಬಳಿಕ ಬಾಲಕನು ಎರಡನೆಯ ತಿಂಗಳಲ್ಲಿ ಆರಾರುದಿನಗಳಿಗೊಂದು ಸಲ ತರಗೆಲೆಗಳನ್ನೂ ಒಣಹುಲ್ಲುಗಳನ್ನೂ ತಿನ್ನುತ್ತಾ ಭಗವಂತನನ್ನು ಪೂಜಿಸಿದನು॥೩೩॥ತರುವಾಯ ಮೂರನೆಯತಿಂಗಳಲ್ಲಿ ಒಂಬತ್ತೊಂಬತ್ತು ದಿನಗಳಿಗೊಂದಾವೃತ್ತಿ ಜಲಾಹಾರವನ್ನು ಮಾಡುತ್ತಾ ಪುಣ್ಯಶ್ಲೋಕನಾದ ಪರಮಪುರುಷನನ್ನು ಪೂಜಿಸಿದನು ॥೩೪॥ಅಂತೆಯೇ ನಾಲ್ಕನೆಯ ತಿಂಗಳಲ್ಲಿಯೂ ಹನ್ನೆರಡುದಿನಗಳಿಗೊಂದುಸಲ ಗಾಳಿಯನ್ನು ಕುಡಿಯುತ್ತಾ, ಶ್ವಾಸವನ್ನು ಜಯಿಸಿ ಧ್ಯಾನಿಸುತ್ತಾ ಧಾರಣೆಮಾಡಿದನು ॥೩೫॥ ಐದನೆಯತಿಂಗಳು ಬಂದಕೂಡಲೇ ಪ್ರಾಣಜಯವನ್ನು ಪಡೆದ ಆ ರಾಜಕುಮಾರನು ಸರ್ವಾತ್ಮಕನಾದ ಮಹಾತ್ಮನನ್ನು ಧ್ಯಾನಿಸುತ್ತಾ ಮೋಟುಮರದಂತೆ ನಿಶ್ಚಲ

ಶ್ವಾಸೋ ನೃಪಾತ್ಮಜಃ। ಧ್ಯಾಯನ್ ಬ್ರಹ್ಮ ಪದೈಕೇನ ತಸ್ಥೌ ಸ್ಥಾಣುರಿವಾಽ
ಚಲಃ ✠ ॥೭೬॥ ಸರ್ವತೋ ಮನ ಆಕೃಷ್ಯ ಹೃದಿ ಭೂತೇಂದ್ರಿಯಾಶಯಂ।
ಧ್ಯಾಯನ್ ಭಗವತೋ ರೂಪಂ ನಾದ್ರಾಕ್ಷೀತ್ಕಿಂಚ ನಾಽಪರಂ ॥೭೭॥
ಆಧಾರಂ ಮಹದಾದೀನಾಂ ಪ್ರಧಾನಪುರುಷೇಶ್ವರಂ। ಬ್ರಹ್ಮ ಧಾರಯಮಾ
ಣಸ್ಯ ತ್ರಯೋ ಲೋಕಾಶ್ಚಕಂಪಿರೇ ॥೭೮॥ ಯದೈಕಪಾದೇನ ಸಪಾರ್ಥಿ
ವಾಽರ್ಭಕಸ್ತಸ್ಥೌ ತದಂಗುಷ್ಠನಿಪೀಡಿತಾ ಮಹೀ। ನನಾಮ ತತ್ರಾರ್ಧ

ಐದನೆಯ, ಮಾಸಿ - ತಿಂಗಳು, ಅನುಪ್ರಾಪ್ತೇ - ಬರಲು, ಜಿತಶ್ವಾಸಃ - ಪ್ರಾಣಧಾರಣೆಯನ್ನು ಮಾಡಿದ, ನೃಪಾತ್ಮಜಃ - ರಾಜಪುತ್ರನು, ಬ್ರಹ್ಮ - ಪರಮಾತ್ಮನನ್ನು, ಧ್ಯಾಯನ್ - ಧ್ಯಾನಿಸುತ್ತಾ, ಸ್ಥಾಣುರಿವ- ಮೋಟು ಮರದಂತೆ, ಅಚಲಃ - ಚಲಿಸದೆ, ಏಕೇನಪದಾ - ಒಂದು ಕಾಲಿಂದ, ತಸ್ಥೌ - ನಿಂತನು ॥೭೬॥ ಸರ್ವತಃ - ಎಲ್ಲಾ ಕಡೆಗಳಿಂದಲೂ, ಭೂತೇ...ಯಂ - ಭೂತ, ಇಂದ್ರಿಯಗಳಿಗೆ ನೆಲೆಯಾದ, ಮನಃ - ಮನಸ್ಸನ್ನು, ಆಕೃಷ್ಯ - ಸೆಳೆದು, ಹೃದಿ - ಹೃದಯದಲ್ಲಿ, ಭಗವತಃ - ಭಗವಂತನ, ರೂಪಂ - ರೂಪ ವನ್ನು, ಧ್ಯಾಯನ್ - ಧ್ಯಾನಿಸುತ್ತಾ, ಅಪರಂಕಿಂಚನ - ಮತ್ತಾವುದೊಂದನ್ನೂ, ನಾದ್ರಾಕ್ಷೀತ್ - ನೋಡಲಿಲ್ಲ ॥೭೭॥ ಮಹದಾದೀನಾಂ - ಮಹತ್ತು ಮೊದಲಾದ ತತ್ವಗಳಿಗೆ, ಆಧಾರಂ - ಆಶ್ರಯವಾಗಿಯೂ, ಪ್ರಧಾ...ರಂ, ಪ್ರಕೃತಿಪುರುಷರಿಗೆ ನಿಯಾಮಕನಾಗಿಯೂ ಇರುವ, ಬ್ರಹ್ಮ - ಪರಮಾತ್ಮನನ್ನು, ಧಾರ ಯಮಾಣಸ್ಯ - ಧಾರಣೆಮಾಡುವ ಆಧ್ರುವನಿಗೆ, ತ್ರಯೋಲೋಕಾಃ - ಮೂರುಲೋಕಗಳೂ, ಚಕಂಪಿ ರೇ - ನಡುಗಿದುವು ॥೭೮॥ ಸಪಾರ್ಥಿವಾಽರ್ಭಕಃ - ಆ ರಾಜಪುತ್ರನು, ಯದಾ - ಯಾವಾಗ, ಏಕಪಾ

ನಾಗಿ ಒಂದುಕಾಲಿನಿಂದ ನಿಂತು ತಪಿಸಲಾರಂಭಿಸಿದನು ॥೭೬॥ ಬಳಿಕ ಪೃಥಿವ್ಯಾದಿಭೂತ ಗಳಿಗೂ, ಚಕ್ಷುರಾದೀಂದ್ರಿಯಗಳಿಗೂ ಆಶ್ರಯವೆನಿಸಿರುವ ಮನಸ್ಸನ್ನು ಎಲ್ಲಾ ಕಡೆಗಳಿಂ ದಲೂ ಹಿಂದಿರುಗಿಸಿ ತನ್ನ ಮನಸ್ಸಿನಲ್ಲಿಯೇ ಭಗವಂತನ ದಿವ್ಯರೂಪವನ್ನು ಧ್ಯಾನಿಸುತ್ತಾ, ಮತ್ತಾವುದನ್ನೂ ನೋಡಲಿಲ್ಲ ॥೭೭॥ ಇಂತಾಧ್ರುವಕುಮಾರನು ಮಹತ್ತು ಮೊದಲಾದತ ತ್ವಗಳಿಗೂ ಆಶ್ರಯವೆನಿಸಿ ಪ್ರಕೃತಿಪುರುಷರಿಗೆ ನಿಯಾಮಕನಾಗಿರುವ ಪರಬ್ರಹ್ಮನನ್ನು ಧ್ಯಾನಿಸುತ್ತಿರಲು, ಆತನ ತಪೋಜ್ವಾಲೆಯಿಂದ ಮೂರುಲೋಕಗಳೂ ನಡುಗಿದವು॥೭೮॥ ಈ

✠ ವಿ. ಮೂಲ ಶ್ಲೋಕ॥ ದೇವಾಶ್ಚಕ್ರುಸ್ತತೋ ವಿಘ್ನಂ ತ್ರಾಸಯಂತಸ್ಸ್ವಮಾಯಯಾ। ಸರ್ಪೇಭಸಿಂಹ ಕೂಶ್ಮಾಂಡ್ಯೈಸ್ಸ್ವಾನ್ನಾಽಪಶ್ಯತ್ಪುರಂಗತಃ ॥ (ತಾ) ದೇವತೆಗಳು ತಮ್ಮ ಮಾಯಾ ಬಲದಿಂದ, ಹಾವು, ಆನೆ, ಸಿಂಹ, ಪಿಶಾಚ ಮೊದಲಾದವುಗಳನ್ನು ಸೃಷ್ಟಿಸಿ ಕಳುಹಿದರೂ, ಆತ್ಮನಿಷ್ಠನಾದ ಆ ಧ್ರುವನು ಯಾವುದನ್ನೂ ನೋಡಲಿಲ್ಲ.

ಈ ಪ್ರಕರಣದಲ್ಲಿ, ಚಿತ್ತಾಭಿಮಾನಿಗಳೂ, ಸತ್ಯಸಂಕಲ್ಪರೂ, ಆದ ದೇವತೆಗಳು ವಿಘ್ನಗಳನ್ನು ಮಾಡಿದುದು ಪರಮ ಭಾಗವತನಾದ ಧ್ರುವನ ಕೀರ್ತಿಯನ್ನು ಹರಡುವುದಕ್ಕಾಗಿಯೇ ಹೊರತು ತಪಸ್ಸನ್ನು ಕೆಡಿಸುವುದಕ್ಕಲ್ಲ. ಶ್ಲೋ॥ ಯತ್ರ ದೇವೈಃ ಕೃತೇವಿಘ್ನೇ ಖಂಡಿತೋ ನಪುಮಾನ್ ಭವೇತ್। ತತ್ರ ತದ್ಯಶಸೇ ವಿಘ್ನಂ ಕುರ್ಯುರ್ನತು ವಿಘಾತಯೇ। ಯತ್ರ ಖಂಡಿತತಾ ತತ್ರ ಖಂಡನಾಯೈವ ಕೇವಲಂ। ಸತ್ಯಕಾಮಾ ಯತೋ ದೇವಾಸ್ತೇ ಚಿತ್ತಾದ್ಯಭಿಮಾನಿನಃ। ಅತೋ ವಿಮೋಹನಾಯೈವ ಪ್ರಾಪ್ನುಯುಸ್ತೇ ಪರಾಜಯಂ। ತೇಷಾಂ ಮಶಕ್ತಿತೋಕ್ತಿಶ್ಚ ವಿಮೋಹಾಯ ಸುರದ್ವಿಷಾಂ ॥

ಮಿಭೇಂದ್ರಧಿಷ್ಠಿತಾ ತರೀವ ಸವ್ಯೇತರತಃ ಪದೇ ಪದೇ ॥ ೭೯ ॥ ತಸ್ಮಿನ್ನ
ಭಿಧ್ಯಾಯತಿ ‡ ವಿಶ್ವಮಾತ್ಮನೋ ದ್ವಾರಂ ನಿರುಧ್ಯಾಽಸುಮನನ್ಯಯಾ ಧಿ
ಯಾ । ಲೋಕಾ ನಿರುಚ್ಛ್ವಾಸನಿಪೀಡಿತಾ ಭೃಶಂ ಸಲೋಕಪಾಲಾಃ ಶರಣಂ
ಯಯುರ್ಹರಿಂ ॥೮೦॥ ದೇವಾಃ ॥ ನೈವಂ ವಿದಾಮೋ ಭಗವನ್! ಪ್ರಾಣ
ರೋಧಂ ಚರಾಽಚರಸ್ಯಾಽಖಿಲಸತ್ತ್ವಧಾಮ್ನಃ । ವಿಧೇಹಿ ತನ್ನೋ
ವೃಜಿನಾದ್ವಿಮೋಕ್ಷಂ ಪ್ರಾಪ್ತಾ ವಯಂ ತ್ವಾಂ ಶರಣಂ ಶರಣ್ಯಂ ॥೮೧॥

ಪೇನ- ಒಂದು ಕಾಲಿನಿಂದ, ತಸ್ಥೌ - ನಿಂತನೋ, ತದಾ - ಆಗ, ತದಂ...ತಾ - ಅವನ ಹೆಬ್ಬೆಟ್ಟಿನಿಂದ ತುಳಿಯಲ್ಪಟ್ಟ, ಮಹೀ - ಭೂಮಿಯು, ತತ್ರ - ಅದರಲ್ಲಿ, ಅರ್ಧಂ - ಅರ್ಧಭಾಗವು, ಇಭೇಂದ್ರಧಿಷ್ಠಿತಾ - ಆನೆಯಿಂದ ಹೊರಲ್ಪಟ್ಟ, ತರೀವ - ಹಡಗಿನಂತೆ, ಸವ್ಯೇತರತಃ - ಎಡಬಲಗಡೆಗಳಲ್ಲಿ, ಪದೇಪದೇ - ಅಡಿಗಡಿಗೂ, ನನಾಮ - ಬಗ್ಗಿತು ॥೭೯॥ ತಸ್ಮಿನ್ - ಆ ಧ್ರುವನು, ಆತ್ಮನಃ - ತನ್ನ, ಅಸುಂ - ಪ್ರಾಣವನ್ನೂ, ದ್ವಾರಂ - ಇಂದ್ರಿಯಗಳನ್ನೂ, ನಿರುಧ್ಯ - ತಡೆದು, ಅನನ್ಯಯಾ - ಏಕಾಗ್ರವಾದ, ಧಿಯಾ - ಬುದ್ಧಿಯಿಂದ, ವಿಶ್ವಂ - ಜಗತ್ಸ್ವರೂಪನಾದ ವಿಷ್ಣುವನ್ನು, ಅಭಿಧ್ಯಾಯತಿ-ಧ್ಯಾನಿಸುತ್ತಿರಲು, ಲೋಕಾಃ-ಲೋಕಗಳು, ಭೃಶಂ - ಬಹಳವಾಗಿ ನಿರುಚ್ಛ್ವಾಸ - ಉಸಿರಾಡದಿರುವುದರಿಂದ, ನಿಪೀಡಿತಾಃ - ಪೀಡಿಸಲ್ಪಟ್ಟವರಾಗಿ, ಸಲೋಕಪಾಲಾಃ - ಲೋಕಪಾಲರಿಂದೊಡಗೂಡಿ, ಹರಿಂ - ವಿಷ್ಣುವನ್ನು, ಶರಣಂ - ರಕ್ಷಕನನ್ನಾಗಿ, ಯಯುಃ - ಹೊಂದಿದರು ॥೮೦॥ ದೇವತೆಗಳು ಹೇಳುತ್ತಾರೆ:—ಹೇಭಗವನ್ - ಎಲೈಭಗವಂತನೆ! ಅಖಿ...ಮ್ನಃ - ಸಕಲತತ್ವಗಳಿಗೂ ನೆಲೆಯಾದ ಶರೀರವುಳ್ಳ, ಚರಾಚರಸ್ಯ - ಸ್ಥಾವರ ಜಂಗಮಗಳಿಗೆ, ಏವಂ - ಇಂತು, ಪ್ರಾಣರೋಧಂ - ಶ್ವಾಸವಿಲ್ಲದುದು, ನವಿದಾಮಃ - ತಿಳಿಯಲಿಲ್ಲ, ತತ್ - ಆದುದರಿಂದ, ವಯಂ - ನಾವು, ಶರಣ್ಯಂ - ರಕ್ಷಕನಾದ, ತ್ವಾಂ - ನಿನ್ನನ್ನು, ಶರಣಂ - ಗತಿಯನ್ನಾಗಿ, ಪ್ರಾಪ್ತಾಃ - ಹೊಂದಿರುವೆವು, ನಃ - ನಮ್ಮನ್ನು, ವೃಜಿನಾತ್ - ಈ ಪಾಪದಿಂದ, ವಿಮೋಕ್ಷಂ - ಬಿಡುಗಡೆಯು

ಪ್ರಕಾರವಾಗಿ ಆ ರಾಜನಂದನನು ಒಂದು ಕಾಲಿನಿಂದ ನಿಂತು ತಪಿಸುವಾಗ ಅವನ ಕಾಲ್ಬೆರಳಿನಿಂದ ತುಳಿಯಲ್ಪಟ್ಟ ಭೂಮಿಯು ಆನೆಯಮೇಲೆ ಹೊರಿಸಲ್ಪಟ್ಟ ಹಡಗಿನಂತೆ ಇಕ್ಕೆಲಗಳಲ್ಲಿಯೂ ಹೊರಳುತ್ತಿದ್ದಿತು ॥೭೯॥ ಅಲ್ಲದೆ ಆ ರಾಜತನೂಜನು ನಿಶ್ವಾಸೋಚ್ಛ್ವಾಸಗಳನ್ನೂ ಇಂದ್ರಿಯದ್ವಾರಗಳನ್ನೂ ನಿರೋಧಿಸಿ, ಏಕಾಂತಮನಸ್ಸಿನಿಂದ ಪ್ರಪಂಚಸ್ವರೂಪನಾದ ಭಗವಂತನನ್ನು ಧ್ಯಾನಿಸುತ್ತಿರಲು, ಅವನ ತಪೋಮಹಿಮೆಯಿಂದ ಸಕಲಪ್ರಾಣಿಗಳೂ ಉಸಿರಾಡದೆ ತಳಮಳಿಸುತ್ತಾ ಇಂದ್ರಾದಿಲೋಕಪಾಲರಿಂದೊಡಗೂಡಿ ಲೋಕಶರಣ್ಯನಾದ ಶ್ರೀಹರಿಯನ್ನು ಶರಣುಹೊಂದಿ ಬೇಡಿದರು ॥೮೦॥ ಎಲೈ ಭಗವಂತನೆ ! ಸಕಲತತ್ವಾಧಿಷ್ಠಿತವಾದ ಶರೀರವುಳ್ಳ ಈ ಚರಾಚರವರ್ಗಕ್ಕೆ ಇಂತು ಪ್ರಾಣವ್ಯಾಪಾರವು ನಿಂತುಹೋದುದನ್ನೆಂದಿಗೂ ಕಾಣೆವು. ಆದುದರಿಂದ ನಾವು ದೀನದಯಾಳುವಾದ ನಿನ್ನನ್ನು

‡ ದೀ. ಶ್ಲೋ॥ ಏಕದೇಶಸ್ಥಿತಸ್ಯಾಽಗ್ನೇಃ ಜ್ಯೋತ್ಸ್ನಾ ವಿಸ್ತಾರಿಣೀಯಥಾ । ಪರಸ್ಯ ಬ್ರಹ್ಮಣಃ ಶಕ್ತಿಸ್ತಥೇದಮಖಿಲಂ ಜಗತ್ ॥ (ವಿಷ್ಣುಪುರಾಣ) (ತಾ) ಅಗ್ನಿಯೆಂಬುದೊಂದು ಕಡೆಯಲ್ಲಿದ್ದರೂ, ಅದರ ತೇಜಶ್ಶಕ್ತಿಯಂತು ಎಲ್ಲಾ ಕಡೆಗಳಲ್ಲಿಯೂ ವಿಸ್ತರಿಸುವುದೋ, ಅಂತೆಯೇ, ಪರಬ್ರಹ್ಮ ಶಕ್ತಿಯೂ ಈ ಜಗದ್ರೂಪವಾಗಿ ಹಬ್ಬಿರುವುದೆಂದು ಭಾವವು.

ಶ್ರೀಭಗವಾನ್ ॥ ಮಾಭೈಷ್ಟ ಬಾಲಂ ತಪಸೋ ದುರತ್ಯಯಾ ನ್ನಿವರ್ತಯಿ
ಷ್ಯೇ ಪ್ರತಿಯಾತ ಸ್ವಧಾಮ । ಯತೋ ಹಿವಃ ಪ್ರಾಣನಿರೋಧ ಆಸೀ
ದೌತ್ತಾನಪಾದಿ ರ್ಮಯಿ ಸಂಗತಾತ್ಮಾ ॥೮೨॥

— ಇತ್ಯಷ್ಟಮೋಧ್ಯಾಯಃ

ಸ್ನ, ವಿಧೇಹಿ - ಮಾಡು ॥೮೧॥ ಭಗವಂತನು ಹೇಳುತ್ತಾನೆ:—ಮಾಭೈಷ್ಟ - ಹೆದರಬೇಡಿರಿ, ಬಾಲಂ - ಆ ಹಸುಳೆಯನ್ನು, ದುರತ್ಯಯಾತ್ - ನಾಶರಹಿತವಾದ, ತಪಸಃ - ತಪಸ್ಸಿನಿಂದ, ನಿವರ್ತಯಿಷ್ಯೇ - ಹಿಂದಿರುಗಿಸುವೆನು, ಸ್ವಧಾಮ - ನಿಮ್ಮ ಲೋಕಗಳಿಗೆ, ಪ್ರತಿಯಾತ - ತೆರಳಿರಿ, ಯತಃ - ಯಾವನಿಂದ, ವಃ - ನಿಮಗೆ, ಪ್ರಾಣನಿರೋಧಃ - ಶ್ವಾಸಪ್ರತಿಬಂಧವು, ಆಸೀತ್ - ಆಯಿತೋ, ಸಃ - ಅವನು, ಮಯಿ - ನನ್ನಲ್ಲಿ, ಸಂಗತಾತ್ಮಾ - ಮನಸ್ಸನ್ನಿಟ್ಟ, ಔತ್ತಾನಪಾದಿಃ - ಧ್ರುವನಾಗಿರುವನು ॥೮೨॥

—ಅಷ್ಟಮಾಧ್ಯಾಯಂ ಸಮಾಪ್ತಂ—

ಮರೆಹೊಕ್ಕಿರುವೆವು. ಈ ಪ್ರಾಣಾಪತ್ತಿನಿಂದ ನಮ್ಮನ್ನುದ್ಧರಿಸಿ ಕಾಪಾಡು ॥೮೧॥ ಎಂದು ಬೇಡುತ್ತಿರುವ ದೇವತೆಗಳನ್ನು ಕುರಿತು ಭಗವಂತನು ಹೇಳುತ್ತಾನೆ. ಅಯ್ಯಾ ಪ್ರಾಣಿಗಳಿರಾ ! ಹೆದರಬೇಡಿರಿ. ಆ ಬಾಲಕನು ಮಾಡುತ್ತಿರುವ ಘೋರವಾದ ತಪಸ್ಸನ್ನು ನಿಲ್ಲಿಸುವೆನು. ನಿಮ್ಮನಿಮ್ಮ ಲೋಕಗಳಿಗೆ ತೆರಳಿರಿ. ಯಾವನ ತಪಸ್ಸಿನಿಂದ ನಿಮಗೆ ಉಸಿರಾಡದೆ ನಿಂತು ಹೋಗಿರುವುದೋ, ಅವನೇ ನನಗೇಕಾಂತಭಕ್ತನಾದ ಧ್ರುವಕುಮಾರನೆಂದು ತಿಳಿಯಿರಿ, ಎಂದು ನಾರಾಯಣಮೂರ್ತಿಯು ಇಂದ್ರಾದಿಗಳಿಗೆ ತಿಳುಹಿದನೆಂಬಲ್ಲಿಗೆ ಭಾಗವತ ಚಕೋರಚಂದ್ರಿಕೆಯೊಳ್

ಎಂಟನೆಯ ಅಧ್ಯಾಯಂ ಮುಗಿದುದು.

## ಓಂನಮಃ ಪರಮಾತ್ಮನೇ

— ಅಥ ನವಮೋಧ್ಯಾಯಃ —

ಮೈತ್ರೇಯಃ ॥ ತಏವ ಮುತ್ಸನ್ನಭಯಾ ಉರುಕ್ರಮೇ ಕೃತಾವನಾಮಾಃ ಪ್ರಯಯುಸ್ತ್ರಿವಿಷ್ಟಪಂ । ಸಹಸ್ರಶೀರ್ಷಾಪಿ ತತೋ ಗರುತ್ಮತಾ ಮಧೋರ್ವನಂ ಭೃತ್ಯದಿದೃಕ್ಷಯಾ ಗತಃ ॥೧॥ ಸವೈ ಧಿಯಾ ಯೋಗವಿಪಾಕತೀವ್ರಯಾ ಹೃತ್ಪದ್ಮಕೋಶೇ ಸ್ಫುರಿತಂ ತಟಿತ್ಪ್ರಭಂ । ತಿರೋಹಿತಂ ಸಹಸೈ

---

—ನವಮಾಧ್ಯಾಯಂ—

ಕಂದ॥ ಹರಿಯಂ ಕೈವಾರಿಸಿ ಪಲ । ತೆರದಿಂ ಧ್ರುವ ನಾಂತು ವರಗಳಂ ವನದಿಂ ಹಿಂ ।
ದಿರುಗಿ ಪಿತನಿತ್ತರಾಜ್ಯವ । ನುರುಧರ್ಮದೆ ಪೊರೆದ ನೆಂದು ಪೇಳಲ್ಪಡುಗುಂ ॥

ಮೈತ್ರೇಯನು ಹೇಳುತ್ತಾನೆ:—ತೇ - ಆ ದೇವಾದಿಗಳು, ಏವಂ - ಇಂತು, ಉತ್ಸನ್ನಭಯಾಃ - ಭಯವನ್ನುಳಿದು, ಉರುಕ್ರಮೇ - ಭಗವಂತನಲ್ಲಿ, ಕೃತಾವನಾಮಾಃ - ನಮಸ್ಕರಮಾಡಿ, ತ್ರಿವಿಷ್ಟಪಂ- ಸ್ವರ್ಗಾದಿ ಲೋಕಗಳಿಗೆ, ಪ್ರಯಯುಃ - ತೆರಳಿದರು, ಸಹಸ್ರ ಶೀರ್ಷಾಪಿ - ಸರ್ವಾತ್ಮಕನಾದ ಭಗವಂತನೂ, ತತಃ - ಬಳಿಕ, ಗರುತ್ಮತಾ - ಗರುಡನನ್ನೇರಿ, ಭೃತ್ಯದಿದೃಕ್ಷಯಾ - ಭಕ್ತನನ್ನು ಕಾಣಲೆಳಸಿ, ಮಧೋರ್ವನಂ - ಮಧುವನಕ್ಕೆ, ಗತಃ - ಹೋದನು ॥೧॥ ಸವೈ - ಆ ಧ್ರುವನು, ಯೋ...ಯಾ - ಧ್ಯಾನಾತಿಶಯದಿಂದ ನಿಶ್ಚಲವಾದ, ಧಿಯಾ - ಬುದ್ಧಿಯಿಂದ, ಹೃತ್ಪ...ಶೇ - ಹೃದಯಕಮಲದಲ್ಲಿ, ತಟಿತ್ಪ್ರಭಂ - ಮಿಂಚುಬಳ್ಳಿಯಂತೆ ಕಾಂತಿಯುಳ್ಳುದಾಗಿ, ಸ್ಫುರಿತಂ - ಹೊಳೆಯುತ್ತಿದ್ದ, ಸಹಸೈವ - ಬೇಗನೆ,

---

— ಒಂಭತ್ತನೆಯ ಅಧ್ಯಾಯ —

— ಧ್ರುವನು ಹರಿಯಿಂದ ವರಗಳನ್ನು ಪಡೆದು ರಾಜ್ಯವನ್ನಾಳುವುದು —

ಅನಂತರದಲ್ಲಿ ಮೈತ್ರೇಯ ಮುನಿಯು ವಿದುರನಿಗಿಂತೆಂದನು, ಅಯ್ಯಾವಿದುರನೇ ! ಬಳಿಕ ಆದೇವತೆಗಳು ಭಗವಂತನ ನುಡಿಗಳಿಂದ ಭಯವನ್ನುಳಿದು, ಆತನಿಗೆ ದಂಡಪ್ರಣಾಮವನ್ನಾಚರಿಸಿ, ಅಪ್ಪಣೆಯನ್ನು ಪಡೆದು ತಂತಮ್ಮ ಲೋಕಗಳಿಗೆ ತೆರಳಿದರು. ತರುವಾಯ ಸರ್ವಾತ್ಮಕನಾದ ಭಗವಂತನೂ, ಭಕ್ತನನ್ನುದ್ಧರಿಸಲೆಳಸಿ, ಗರುಡನನ್ನೇರಿ ಮಧುವನಕ್ಕೆ ಹೋದನು ॥೧॥ ಅತ್ತ ಧ್ರುವಕುಮಾರನು ತೈಲಧಾರೆಯಂತೆ ಅವಿಚ್ಛಿನ್ನವಾದ ಧ್ಯಾನಯೋಗದಿಂದ ಬುದ್ಧಿಯನ್ನು ನೆಲೆಗೊಳಿಸಿ ಸಮಾಧಿನಿಷ್ಠನಾಗಿ, ತನ್ನಹೃದಯಕಮಲದಲ್ಲಿ, ಮುಂಗಾರು ಮಿಂಚು ಬಳ್ಳಿಯಂತೆ ಹೊಳೆಯುತ್ತಾ ಪರಮಾನಂದಮಯವಾಗಿದ್ದ ಚಿಜ್ಜ್ಯೋತಿಯು ತಟ್ಟನೆ ಮರೆಯಾದುದನ್ನು ಕಂಡು, ನಿಧಿಯನ್ನು ಕಳೆದುಕೊಂಡವನಂತೆ ಬಹು

ವೋಽಪಲಕ್ಷ್ಯ ಬಹಿಸ್ಸ್ಥಿತಂ ತದವಸ್ಥಂ ದದರ್ಶ ॥೨॥ ತದ್ದರ್ಶನೇನಾಗತ ಸಾಧ್ವಸಃ ಕ್ಷಿತಾ ವವಂದತಾಽಂಗಂ ವಿನಮಯ್ಯ ದಂಡವತ್ । ದೃಗ್ಭ್ಯಾಂ ಪ್ರಪಶ್ಯನ್ ಪ್ರಪಿಬನ್ನಿವಾರ್ಭಕಶ್ಚುಂಬನ್ನಿವಾಸ್ಯೇನ ಭುಜೈರಿವಾಶ್ಲಿಷನ್ ॥ ಸತಂ ವಿವಕ್ಷಂತಮತದ್ವಿದಂ ಹರಿರ್ಜ್ಞಾತ್ವಾಽಸ್ಯ ಸರ್ವಸ್ಯ ಚ ಹೃದ್ಯವಸ್ಥಿತಃ। ಕೃತಾಂಜಲಿಂ ಬ್ರಹ್ಮಮಯೇನ ಕಂಬುನಾ ಪಸ್ಪರ್ಶ ಬಾಲಂ ಕೃಪಯಾ ಕಪೋಲೇ ॥೪॥ ಸವೈ ತದೈವ ಪ್ರತಿಪಾದಿತಾಂ ಗಿರಂ ದೈವೀಂ ಪರಿಜ್ಞಾತ ಪರಾತ್ಮನಿರ್ಣಯಃ । ತಂ ಭಕ್ತಿಭಾವೋಽಭ್ಯಗೃಣಾದಸತ್ವರಂ ಪರಿಶ್ರು

---

ತಿರೋಹಿತಂ - ಮರೆಯಾದುದನ್ನು, ಉಪಲಕ್ಷ್ಯ - ಕಂಡು, ಬಹಿಸ್ಸ್ಥಿತಂ - ಹೊರಗಿರುವ, ತದವಸ್ಥಂ - ಅಂತಹ ದಿವ್ಯ ಮೂರ್ತಿಯನ್ನೇ, ದದರ್ಶ - ಕಂಡನು ||೨|| ಅರ್ಭಕಂ - ಆ ಹಸುಳೆಯು, ತದ್ದರ್ಶನೇನ- ಆ ಭಗವಂತನ ದರ್ಶನದಿಂದ, ಆಗತಸಾಧ್ವಸಃ - ಭಯಗೊಂಡವನಾಗಿ, ಅಂಗಂ - ಶರೀರವನ್ನು, ದಂಡವತ್ - ದಂಡದಂತೆ, ವಿನಮಯ್ಯ - ಬಾಗಿಸಿ, ದೃಗ್ಭ್ಯಾಂ - ಕಣ್ಣುಗಳಿಂದ, ಪ್ರಪಿಬನ್ನಿವ - ಕುಡಿಯುವಂತೆ, ಪ್ರಪಶ್ಯನ್ - ನೋಡುತ್ತಾ, ಆಸ್ಯೇನ- ಮುಖದಿಂದ, ಚುಂಬನ್ನಿವ - ಮುತ್ತಿಡುವಂತೆಯೂ, ಭುಜೈಃ - ತೋಳುಗಳಿಂದ, ಆಶ್ಲಿಷನ್ನಿವ - ಅಪ್ಪುವಂತೆಯೂ, ಕ್ಷಿತೌ - ಭೂಮಿಯಲ್ಲಿ, ವವಂದತ - ನಮಸ್ಕರಿಸಿದನು ||೩|| ಸಃಹರಿಃ - ಆ ಭಗವಂತನು, ವಿವಕ್ಷಂತಂ- ಹೊಗಳಲೆಳಸಿ, ಅತದ್ವಿದಂ - ಸ್ತುತಿಯನ್ನರಿಯದಿರುವ, ತಂ - ಆ ಧ್ರುವನನ್ನು, ಜ್ಞಾತ್ವಾ - ತಿಳಿದು, ಅಸ್ಯ - ಇವನ, ಸರ್ವಸ್ಯ - ಜಗತ್ತಿನ, ಹೃದಿ - ಹೃದಯದಲ್ಲಿ, ಅವಸ್ಥಿತಃ - ನೆಲಸಿದವನಾಗಿ, ಬ್ರಹ್ಮಮಯೇನ - ವೇದಸ್ವರೂಪವಾದ, ಕಂಬುನಾ - ಶಂಖದಿಂದ, ಕೃತಾಂಜಲಿಂ - ಕೈಮುಗಿದಿರುವ, ಬಾಲಂ - ಧ್ರುವನನ್ನು, ಕಪೋಲೇ - ಕೆನ್ನೆಯಲ್ಲಿ, ಪಸ್ಪರ್ಶ - ತಡವಿದನು ||೪|| ಧ್ರುವಕ್ಷಿತಿಃ - ಸ್ಥಿರವಾದ ನೆಲೆಯುಳ್ಳ, ಪರಿ...ಯಃ - ಈಶ್ವರ ಜೀವತತ್ತ್ವವನ್ನು ಬಲ್ಲ, ಭಕ್ತಿಭಾವಃ - ಭಕ್ತಿಯಿಂದ ಪ್ರೇಮಿಸುವ, ಸವೈ - ಆ ಧ್ರುವನು, ತದೈವ - ಆಗಲೇ, ಪ್ರತಿಪಾದಿತಾಂ - ಹೇಳಲ್ಪಟ್ಟ, ದೈವೀಂ - ದೈವದ, ಗಿರಂ - ನುಡಿಯನ್ನು, (ತಿಳಿದು) ಅಸತ್ವರಂ - ಸ್ಥಿರನಾದ, ಪರಿ...ಸಂ_

---

ಮುಖನಾಗಿ, ಧ್ಯಾನಗೋಚರವಾಗಿದ್ದ ರೂಪಿನಿಂದಲೇ ಹೊರಗೆ ನಿಂತಿರುವ ಪರಮಾತ್ಮನನ್ನು ಕಂಡನು ||೨|| ಆ ಭಗವಂತನ ದಿವ್ಯಮಂಗಳವಿಗ್ರಹ ದರ್ಶನವಾದ ಕೂಡಲೇ, ಧ್ರುವನು ಗಾಬರಿಗೊಂಡು, ದಂಡದಂತೆ ಉದ್ದವಾಗಿ ನೆಲದಲ್ಲಿ ಮಲಗಿ, ನೋಡುತ್ತಾ, ಕಣ್ಣುಗಳಿಂದ ಸೌಂದರ್ಯವನ್ನು ಕುಡಿವಂತೆಯೂ ಮುಖದಿಂದ ಮುತ್ತಿಡುವಂತೆಯೂ, ತೋಳುಗಳಿಂದಪ್ಪಿಕೊಳ್ಳುವಂತೆಯೂ ಆನಂದ ಪರವಶನಾಗಿ ನಮಸ್ಕರಿಸಿದನು || ೩ || ಸರ್ವಾಂತರ್ಯಾಮಿಯಾದ ಆ ಭಗವಂತನು, ದಂಡಪ್ರಣಾಮವನ್ನಾಚರಿಸಿ ಭಗವದ್ಗುಣಗಳನ್ನು ಎಷ್ಟೋ ಹೊಗಳಬೇಕೆಂಬಾಸೆಯಿದ್ದರೂ, ಹೊಗಳಲರಿಯದೆ, ಕೈಮುಗಿದುಕೊಂಡು ಸ್ತಬ್ಧನಾಗಿ ಮುಂದೆನಿಂತಿರುವ ಧ್ರುವಕುಮಾರನನ್ನು ಕಂಡು, ವೇದಸ್ವರೂಪವಾಗಿ ತನ್ನ ಕರ ಕಮಲದಲ್ಲಿ ನಲಿದಾಡುತ್ತಿರುವ ಪಾಂಚಜನ್ಯವೆಂಬ ಶಂಖದಿಂದ ಆ ಹಸುಳೆಯಗಲ್ಲವನ್ನು ತಡವಿ ಸಂತೈಸಿದನು, || ೪ || ತತ್ಕ್ಷಣದಲ್ಲಿಯೇ ಆ ಧ್ರುವಕುಮಾರನು ಜೀವೇಶ್ವರ ತತ್ತ್ವಸ್ವರೂಪವನ್ನರಿತು, ಪರಮಭಕ್ತಿಯುಳ್ಳವನಾಗಿ, ಭಗವತ್ಸಂಬಂಧಿಯಾದ ಆದಿವ್ಯಶಬ್ದವನ್ನು ಕೇಳಿ, ಸ್ಥಿರವಾಗಿನಿಂತು, ಜಗದ್ವಿಖ್ಯಾತವಾದ

ತೋರುಶ್ರವಸಂ ಧ್ರುವಕ್ಷಿತಿಃ ॥೫॥ ಧ್ರುವಸ್ತುತಿಃ॥ ಯೋಂತಃ ಪ್ರವಿಶ್ಯ ಮ
ಮ ವಾಚ ಮಿಮಾಂ ಪ್ರಸುಪ್ತಾಂ ಸಂಜೀವಯತ್ಯಖಿಲ ಶಕ್ತಿಧರ ಸ್ಸ್ವಧಾ
ಮ್ನಾ । ಅನ್ಯಾಂಶ್ಚ ಹಸ್ತಚರಣ ಶ್ರವಣ ತ್ವಗಾದೀನ್ ಪ್ರಾಣಾನ್ ನಮೋ
ಭಗವತೇ ಪುರುಷಾಯ ತುಭ್ಯಂ ॥೬॥ ಏಕ ಸ್ತ್ವಮೇವ ಭಗವ ನ್ನಿದ ಮಾ
ತ್ಮಶಕ್ತ್ಯಾ ಮಾಯಾಖ್ಯಯೋರುಗುಣಯಾ ಮಹದಾದ್ಯಶೇಷಂ । ಸೃಷ್ಟ್ವಾ
ನುವಿಶ್ಯ ಪುರುಷ ಸ್ತದಸದ್ಗುಣೇಷು ನಾನೇವ ದಾರುಷು ವಿಭಾವಸುವ ದ್ವಿ

ವಿಖ್ಯಾತ ಕೀರ್ತಿಯುಳ್ಳ, ತಂ - ಆ ಭಗವಂತನನ್ನು, ಅಭ್ಯಗೃಣಾತ್ - ಹೊಗಳಿದನು ॥೫॥ ಅಖಿಲಶಕ್ತಿಧರಃ- ಸಕಲ ಶಕ್ತಿಗಳನ್ನು ಧರಿಸಿರುವ, ಯಃ - ಯಾವನು, ಅಂತಃಪ್ರವಿಶ್ಯ - ಒಳಹೊಕ್ಕು, ಸ್ವಧಾಮ್ನಾ - ತನ್ನ ಚಿಚ್ಛಕ್ತಿಯಿಂದ, ಮಮ - ನನ್ನ, ಸುಪ್ತಾಂ - ಅಸಮರ್ಥವಾಗಿದ್ದ, ವಾಚಂ - ವಾಕ್ಕನ್ನೂ, ಪ್ರಾಣಾನ್ - ಪ್ರಾಣಗಳನ್ನೂ, ಹಸ್ತ...ದೀನ್ - ಕೈ, ಕಾಲು, ಕಿವಿ, ಮೈ ಮೊದಲಾದ, ಅನ್ಯಾಂಶ್ಚ - ಇತರೇಂದ್ರಿಯಗಳ ನ್ನೂ, ಸಂಜೀವಯತಿ - ಬದುಕಿಸುವನೋ, ತಸ್ಮೈ - ಅಂತಹ, ಭಗವತೇ - ನಿರತಿಶಯ ಮಹಿಮೆಯುಳ್ಳ, ಪುರುಷಾಯ - ಸರ್ವಾಂತರ್ಯಾಮಿಯಾದ, ತುಭ್ಯಂ - ನಿನಗೆ, ನಮಃ - ನಮಸ್ಕಾರವು ॥೬॥

ಹೇಭಗವನ್ - ಎಲೈ ಭಗವಂತನೆ! ತ್ವಂ - ನೀನು, ಏಕಏವ - ಒಬ್ಬನೇ, ಉರುಗುಣಯಾ - ಅಧಿಕ ಗುಣಗಳುಳ್ಳ, ಮಾಯಾಖ್ಯಯಾ - ಮಾಯೆಯೆಂಬ ಹೆಸರುಳ್ಳ, ಆತ್ಮಶಕ್ತ್ಯಾ - ನಿನ್ನ ಶಕ್ತಿಯಿಂದ, ಇದಂ - ಈ, ಮಹದಾದಿ - ಮಹತ್ತು ಮೊದಲಾದ, ಅಶೇಷಂ - ಸಕಲವನ್ನೂ, ಸೃಷ್ಟ್ವಾ - ಸೃಜಿಸಿ, ಪುರುಷಃ - ಅಂತರ್ಯಾಮಿ ರೂಪದಿಂದ, ಅನುವಿಶ್ಯ - ಒಳಹೊಕ್ಕು, ತದಸದ್ಗುಣೇಷು - ಆ ಮಾಯೆಯ ತುಚ್ಛಗಳಾದ ಗುಣಗಳಲ್ಲಿ, ದಾರುಷು - ಕಾಷ್ಠಗಳಲ್ಲಿ, ವಿಭಾವಸುವತ್ - ಅಗ್ನಿಯಹಾಗೆ, ನಾನೇವ - ಅನೇಕರಂತೆ, ವಿಭಾಸಿ - ಹೊಳೆಯುತ್ತಿರುವೆ ॥೭॥ ಹೇನಾಥ - ಎಲೈ ಸ್ವಾಮಿಯೆ ! ತ್ವದ್ದತ್ತಯಾ - ಯಾವ

ಪುಣ್ಯಕೀರ್ತಿಯುಳ್ಳ, ಭಗವಂತನನ್ನು ಹೊಗಳತೊಡಗಿದನು, ॥೫॥

—: ಧ್ರುವ ಸ್ತುತಿ :—

ಕಂ॥ ಹರಿಕರುಣಾ ಬಲದಿಂದ । ಚ್ಛರಿಯಹ ವಾಕ್ಪಟುತೆಯೊಂದಿ ರಾಜಕುಮಾರಂ ।
ಭರದಿಂ ಪೊಗಳಿದನಾನರ । ಹರಿಯಂ ನಿಜಭಕ್ತ ಕಲ್ಪತರುವಲ್ಲರಿಯಂ ॥

ಸಕಲ ಶಕ್ತಿಗಳನ್ನು ವಶಗೊಳಿಸಿಕೊಂಡಿರುವ ಯಾವ ಭಗವಂತನು, ನನ್ನ ಒಳಹೊಕ್ಕು ನಿಶ್ಚೈತನ್ಯವಾಗಿ ಮಲಗಿರುವ ನನ್ನ ವಾಕ್ಕನ್ನೂ, ಪ್ರಾಣಗಳನ್ನೂ, ಚಕ್ಷುರಾದೀಂದ್ರಿಯಗಳನ್ನೂ ಇತರಗಳನ್ನೂ ಕಂಡು, ತನ್ನ ಚಿಚ್ಛಕ್ತಿಯನ್ನು ಪ್ರೇರಿಸಿ ಬದುಕಿಸಿದನೋ, ಅಂತಹ ನಿರತಿಶಯ ಮಹಿಮನೂ, ಸರ್ವಾಂತರಾತ್ಮನೂ, ಆದ ನಿನಗೆ ನಮಸ್ಕಾರವು ॥ ೬ ॥ ಎಲೈ ಭಗವಂತನೇ ಅದ್ವಿತೀಯನಾದ ನೀನೇ ಸತ್ತ್ವಾದಿಗುಣಗಳಿಂದೊಡಗೂಡಿ, ಮಾಯೆ ಯೆಂದು ಹೆಸರುಗೊಂಡಿರುವ ನಿನ್ನ ಶಕ್ತಿಯಿಂದಲೇ, ಪೃಥಿವ್ಯಾದಿ ಮಹದಂತವಾದ ಈ ಜಗತ್ತನ್ನು ಸೃಜಿಸಿ, ಅದರಲ್ಲಿ ಅಂತರ್ಯಾಮಿರೂಪದಿಂದ ಪ್ರವೇಶಿಸಿ, ಕಾಷ್ಠಗಳಲ್ಲಿರುವ ಅಗ್ನಿಯಂತೆ, ಆಮಾಯಾಗುಣಗಳಾದ ವಾಕ್ಕು ಮೊದಲಾದ ಇಂದ್ರಿಯಗಳಲ್ಲಿ ಅಗ್ನಿಮೊದಲಾದ ದೇವತೆಗಳ ರೂಪದಿಂದ ಅನೇಕರಂತೆ ಕಾಣುತ್ತಿರುವೆಯಾದುದರಿಂದ ನಿನಗಿಂತ ಬೇರೆ ಯಾವನೂ ಜ್ಞಾನಕ್ರಿಯಾಶಕ್ತಿಗಳನ್ನು ಧರಿಸಿದವನಿಲ್ಲ ॥೭॥ ಎಲೈ

ಭಾಸಿ ||೭|| ತ್ವದ್ದತ್ತಯಾ ವಯುನಯೇದ ಮಚಷ್ಟ ವಿಶ್ವಂ ಸುಪ್ತಪ್ರಬು
ದ್ಧ ಇವ ನಾಥ ! ಭವತ್ಪ್ರಪನ್ನಃ । ತಸ್ಯಾಽಪವರ್ಗ್ಯಶರಣಂ ತವ ಪಾದ
ಮೂಲಂ ವಿಸ್ಮರ್ಯತೇ ಕೃತವಿದಾ ಕಥ ಮಾರ್ತಬಂಧೋ ! ||೮|| ನೂನಂ
ವಿಮೃಷ್ಟಮತಯ ಸ್ತವ ಮಾಯಯಾ ತೇ ಯೇ ತ್ವಾಂ ಭವಾಽಪ್ಯಯ ವಿ
ಮೋಕ್ಷಣ ಮನ್ಯಹೇತೋಃ । ಅರ್ಚಂತಿ ಕಲ್ಪಕತರುಂ ಕುಣಪೋಪಭೋ
ಗ್ಯ ಮಿಚ್ಛಂತಿ ಯತ್ಸ್ಪರ್ಶಜಂ ನಿರಯೇಽಪಿ ನೃಣಾಂ ||೯|| ಯಾ ನಿರ್ವೃತಿ
ಸ್ತನುಭೃತಾಂ ತವ ಪಾದಪದ್ಮಧ್ಯಾನಾ ದ್ಭವ ಜ್ಜನಕಥಾಶ್ರವಣೇನವಾ ಸ್ಯಾ
ತ್ ಸಾ ಬ್ರಹ್ಮಣಿಸ್ವಮಹಿಮನ್ಯಪಿ ನಾಥ ! ಮಾಭೂ ತ್ಕಿಂತ್ವಂತಕಾಽಸಿ

---

ನಿನ್ನಿಂದ ಕೊಡಲ್ಪಟ್ಟ, ವಯುನಯಾ - ಜ್ಞಾನದಿಂದ, ಭವತ್ಪ್ರಪನ್ನಃ - ನಿನ್ನನ್ನು ಮರೆಹೊಕ್ಕ ಚತು ರ್ಮುಖನು, ಸುಪ್ತ ಪ್ರಬುದ್ಧ ಇವ - ಮಲಗಿ ಎದ್ದವನಂತೆ, ಇದಂವಿಶ್ವಂ- ಈ ಜಗತ್ತನ್ನು, ಅಚಷ್ಟ- ಕಂಡನೋ, ಹೇ ಆರ್ತಬಂಧೋ - ಎಲೈ ದೀನಬಂಧುವೆ! ತಸ್ಯತವ - ಆ ನಿನ್ನ, ಅಪ...ಣಂ, ಅಪವ ರ್ಗ್ಯ - ಮುಮುಕ್ಷುಗಳಿಗೆ, ಶರಣಂ - ಗತಿಯಾದ, ಪಾದಮೂಲಂ - ಪಾದವನ್ನು, ಕೃತವಿದಾ - ಕೃತಜ್ಞ ನಾದವನಿಂದ, ಕಥಂ - ಹೇಗೆ, ವಿಸ್ಮರ್ಯತೇ - ಮರೆಯಲ್ಪಡುತ್ತದೆ ||೮|| ಯೇ - ಯಾರು, ಭವಾ... ಣಂ - ಜನ್ಮಮರಣಗಳನ್ನು ತೊಲಗಿಸುವುದಕ್ಕೆ ಕಾರಣನಾದ, ತ್ವಾಂ - ನಿನ್ನನ್ನು, ಅನ್ಯಹೇತೋಃ - ಇತರ ಕಾರಣಕ್ಕಾಗಿ, ಅರ್ಚಂತಿ - ಪೂಜಿಸುವರೋ, ನಿರಯೇಽಪಿ - ನರಕದಲ್ಲಿಯೂ, ನೃಣಾಂ - ಪುರು ಷರಿಗೆ, ಯತ್ - ಯಾವ, ಸ್ಪರ್ಶಜಂ - ವಿಷಯ ಸುಖವುಂಟೋ, ಅದಕ್ಕಾಗಿ, ಕಲ್ಪಕತರುಂ - ಕಲ್ಪವೃ ಕ್ಷ ಪ್ರಾಯನಾದ ನಿನ್ನನ್ನು, ಕುಣಪೋಪಭೋಗ್ಯಂ-ಶವಸದೃಶವಾದ ಶರೀರದ ಸುಖಕ್ಕೆಂದು, ಇಚ್ಛಂತಿ - ಬಯಸುವರೋ, ತೇ - ಅವರು, ವಿಮೃಷ್ಟಮತಯಃ - ಬುದ್ಧಿಹೀನರು, ನೂನಂ - ದಿಟವು ||೯|| ಹೇನಾ ಥ - ಎಲೈ ಸ್ವಾಮಿಯೆ ! ತವ - ನಿನ್ನ, ಪಾದ...ತ್ - ಪಾದಕಮಲ ಧ್ಯಾನದಿಂದಲೂ, ಭವ...ನವಾ - ನಿನ್ನ ಭಕ್ತರ ಚರಿತ್ರ ಶ್ರವಣದಿಂದಲೂ, ತನುಭೃತಾಂ - ಪ್ರಾಣಿಗಳಿಗೆ, ಯಾ - ಯಾವ, ನಿರ್ವೃತಿಃ - ಸುಖವು, ಸ್ಯಾತ್ - ಆಗುವುದೋ, ಸಾ - ಅದು, ಸ್ವಮಹಿಮನಿ - ನಿಜಾನಂದ ರೂಪವಾದ, ಬ್ರಹ್ಮಣ್ಯಪಿ-

---

ಸ್ವಾಮಿಯೆ ! ಲೋಕಕರ್ತನೆಂದು ಹೆಸರುಗೊಂಡಿರುವ ಚತುರ್ಮುಖನು ಕೂಡ, ನೀಸಿತ್ತ ಜ್ಞಾನವನ್ನು ಪಡೆದು, ನಿದ್ದೆಯಿಂದೆದ್ದವನಂತೆ, ಈ ಜಗತ್ತನ್ನು ಕಂಡನಾದುದರಿಂದ, ನಿನ್ನ ಶಕ್ತಿಹೊರತು ಅಗ್ನಿ ಮೊದಲಾದ ದೇವತೆಗಳಲ್ಲಿ ಜ್ಞಾನಕ್ರಿಯಾಶಕ್ತಿಗಳಿಲ್ಲವೆಂದು ಹೇ ಳುವುದೇನು ? ಇಂತು ಸರ್ವೇಂದ್ರಿಯಗಳಿಗೂ ಚೈತನ್ಯವನ್ನಿತ್ತು, ಮುಕ್ತರಿಗೂ ಆಶ್ರಯ ನೆನಿಸಿರುವ ಮಹೋಪಕಾರಿಯಾದ ನಿನ್ನ ಪಾದಕಮಲವನ್ನು ಉಪಕಾರಸ್ಮರಣೆಯುಳ್ಳವ ನು ಯಾವನುತಾನೇ ಮರೆತಾನು ? || ೮ || ಯಾರಾದರೆ, ಜನನ ಮರಣರೂಪವಾದ ಸಂಸಾ ರದಿಂದುದ್ಧರಿಸತಕ್ಕ ನಿನ್ನನ್ನು, ಇತರ ವಿಷಯಗಳಿಗಾಗಿ ಪೂಜಿಸುವರೋ, ನರಕದಲ್ಲಿರುವ ಕ್ರಿಮಿಗಳಿಗೆ ಕೂಡ ಸಾಮಾನ್ಯವಾಗಿ ದೊರೆಯತಕ್ಕ ಕ್ಷಣಿಕವಾದ ವಿಷಯ ಸುಖ ವನ್ನು ಬಯಸಿ, ಶವಸಮಾನವಾದ ಶರೀರದ ಭೋಗಕ್ಕಾಗಿ ಕಲ್ಪವೃಕ್ಷಪ್ರಾಯನಾದ ನಿನ್ನ ನ್ನು ಆಶ್ರಯಿಸುವರೋ, ಅವರು ಬುದ್ಧಿಹೀನರೇ ದಿಟ || ೯ || ಎಲೈ ಜಗನ್ನಾಥನೆ ! ನಿನ್ನ ಪಾದಕಮಲಧ್ಯಾನದಿಂದಲೂ, ನಿನ್ನ ಭಕ್ತರ ಕಥಾಶ್ರವಣದಿಂದಲೂ, ಪ್ರಾಣಿಗಳಿಗೆ ಯಾವ ಆನಂದ ಉಂಟಾಗುವುದೋ, ಆ ಆನಂದವು ನಿಜಾನಂದರೂಪವಾದ ಮೋಕ್ಷದಲ್ಲಿಯೂ

ಲುಲಿತಾ ತ್ಪತತಾಂ ವಿಮಾನಾತ್ ॥೧೦॥ ಭಕ್ತಿಂ ಮುಹುಃ ಪ್ರವಹತಾಂ ತ್ವ
ಯಿ ಮೇ ಪ್ರಸಂಗೋ ಭೂಯಾ ದನಂತ ! ಮಹತಾ ಮಮಲಾಶಯಾನಾಂ ।
ಯೇನಾಂಜಸೋಲ್ಬಣ ಮುರುವ್ಯಸನಂ ಭವಾಬ್ಧಿಂ ನೇಷ್ಯೇ ಭವದ್ಗುಣಕ
ಥಾ ಽ ಮೃತಪಾನಮತ್ತಃ ॥ ೧೧ ॥ ತೇ ನಸ್ಮರಂತ್ಯತಿತರಾಂ ಪ್ರಿಯ ಮೀಶ !
ಮರ್ತ್ಯಂ ಯೇ ಚಾಽನ್ವದಃ ಸುತ ಸುಹೃದ್ಗೃಹವಿತ್ತದಾರಾಃ। ಯೇ ತ್ವಬ್ಜನಾ
ಭ! ಭವದೀಯಪದಾರವಿಂದಸೌಗಂಧ್ಯಲುಬ್ಧಹೃದಯೇಷು ಕೃತಪ್ರಸಂಗಾಃ ॥

---

ಬ್ರಹ್ಮನಲ್ಲಿಯೂ, ಮಾಭೂತ್ - ಆಗಲಾರದು, ಅಂತ...ತ್, ಅಂತಕ - ಯಮನ, ಅಸಿ - ಖಡ್ಗದಂತಿರುವ ಕಾಲದಿಂದ, ಲುಲಿತಾತ್ - ಕತ್ತರಿಸಲ್ಪಟ್ಟ, ವಿಮಾನಾತ್ - ವಿಮಾನದಿಂದ, ಪತತಾಂ - ಬೀಳುವವರಿಗೆ, ಕಿಂ - ಹೇಳುವುದೇನು ? ॥೧೦॥ ಹೇ ಅನಂತ - ಎಲೈ ನಾಶರಹಿತನೆ ! ತ್ವಯಿ - ನಿನ್ನಲ್ಲಿ, ಮುಹುಃ - ಬಾರಿಬಾರಿಗೂ, ಭಕ್ತಿಂ - ಭಕ್ತಿಯನ್ನು, ಪ್ರವಹತಾಂ - ಬೆಳೆಯಿಸುವ, ಅಮಲಾಶಯಾನಾಂ - ನಿರ್ಮಲ ಮನಸ್ಸುಳ್ಳ, ಮಹತಾಂ - ಸಾಧುಗಳಲ್ಲಿ, ಮೇ - ನನಗೆ, ಪ್ರಸಂಗಃ - ಸಹವಾಸವು, ಭೂಯಾತ್ - ಉಂಟಾಗಲಿ, ಯೇನ - ಯಾವುದರಿಂದ, ಭವ...ತ್ತಃ- ನಿನ್ನ ಗುಣಗಳೆಂಬ ಅಮೃತದ ಪಾನದಿಂದ ಮತ್ತನಾಗಿ, ಅಂಜಸಾ - ಬೇಗನೆ, ಉಲ್ಬಣಂ - ಅಪಾರವಾದ, ಉರುವ್ಯಸನಂ - ಅಧಿಕವ್ಯಸನಗಳುಳ್ಳ, ಭವಾಬ್ಧಿಂ - ಸಂಸಾರ ಸಾಗರವನ್ನು, ನೇಷ್ಯೇ - ದಾಟುವೆನೋ ॥೧೧॥ ಅಬ್ಜನಾಭ - ಕಮಲನಾಭನೆ ! ಈಶ - ಸ್ವಾಮಿಯೆ ! ಯೇ - ಯಾರು, ಭವ...ಷು, ಭವದೀಯ - ನಿನ್ನ, ಪದಾರವಿಂದ - ಪಾದಕಮಲದ, ಸೌಗಂಧ್ಯ- ಸುವಾಸನೆಯಲ್ಲಿ, ಲುಬ್ಧಹೃದಯೇಷು - ಆಸಕ್ತವಾದ ಮನಸ್ಸುಳ್ಳವರಲ್ಲಿ, ಕೃತಪ್ರಸಂಗಾಃ - ಸಹವಾಸ ಮಾಡುವರೋ, ತೇ - ಅವರು, ಅತಿತರಾಂ - ಅತ್ಯಂತವಾಗಿ, ಪ್ರಿಯಮಪಿ - ಪ್ರಿಯವಾದರೂ, ಮರ್ತ್ಯಂ - ಶರೀರವನ್ನಾಗಲಿ, ಅದಃ - ಅದನ್ನು, ಅನು - ಅನುಸರಿಸಿದ, ಸುತ...ರಾಃ, ಮಕ್ಕಳು, ಮಿತ್ರರು, ಮನೆ, ಹೆಂಡಿರು, ಇವರಾಗಲಿ, ಯಾರನ್ನೂ, ನಸ್ಮರಂತಿ - ಸ್ಮರಿಸುವುದಿಲ್ಲ ॥೧೨॥

---

ಉಂಟಾಗಲಾರದು. ಇಂತಿರುವಾಗ, ಕಾಲವೆಂಬ ಯಮನ ಕರವಾಲದಿಂದ ಕಡಿಕಡಿಯಾಗುವ ವಿಮಾನಪಙ್ಕ್ತಿಯಿಂದುರುಳಿ ಬಾಯ್ಬಿಡುವ ಸ್ವರ್ಗಾದಿ ಲೋಕದವರ ನಶ್ವರ ಸುಖಗಳನ್ನು ಬಣ್ಣಿಸುವದೇನು ? ॥ ೧೦ ॥ ಎಲೈ ಪುರಾಣ ಪುರುಷನೆ ! ಇಂತು ವಿಷಯ ಸುಖವೆಂಬುದು ಅನಿತ್ಯವಾದುದರಿಂದ, ಯಾವನಿನ್ನ ದಿವ್ಯ ಕಥಾಮೃತಪಾನದಿಂದ ಮತ್ತನಾಗಿ ಅಪ್ರಯತ್ನವಾಗಿಯೇ, ಬಹುದುಃಖಮಯವಾಗಿಯೂ, ಅಪಾರವಾಗಿಯೂ, ಇರುವ ಸಂಸಾರವನ್ನು ದಾಂಟುವೆನೋ, ಅಂತಹ ನಿನ್ನಲ್ಲಿ ಅಡಿಗಡಿಗೂ ನಿರಂತರವಾದ ಭಕ್ತಿಯನ್ನು ಪ್ರವಾಹಗೊಳಿಸುತ್ತಾ, ನಿರ್ಮಲಾಂತಃಕರಣರಾಗಿರುವ ಭಾಗವತೋತ್ತಮರಲ್ಲಿ ನನಗೆ ಸಂಗವುಂಟಾಗುವಂತನುಗ್ರಹಿಸು ॥ ೧೧ ॥ ಎಲೈ ಕಮಲನಾಭನೆ ! ಕಾಮಿತಪ್ರದನೆ ! ಯಾವಮಹಾತ್ಮರು ನಿನ್ನ ಪಾದಕಮಲ ಪರಾಗ ಪರಿಮಳದಲ್ಲಿ ಮನವಿಟ್ಟ ಮಹಾಭಾಗವತರಲ್ಲಿ ಸಂಗಗೊಳ್ಳುವರೋ, ಅವರು ಪರಮಪ್ರಿಯವೆನಿಸಿಕೊಂಡಿರುವ ಶರೀರವನ್ನಾಗಲಿ, ಆ ಶರೀರವನ್ನನುಸರಿಸಿರುವ ಪುತ್ರ, ಮಿತ್ರ, ಕಳತ್ರ, ಗೃಹ, ಧನಾದಿಗಳನ್ನಾಗಲಿ ಸ್ಮರಿಸಲಾರರು. ಆದುದರಿಂದ ಅತ್ಯಂತ ಪ್ರಿಯವಸ್ತುಗಳನ್ನು ಕೂಡ ಮರೆವಂತೆ ಮದಗೊಳಿಸುವ ನಿನ್ನ ದಿವ್ಯ ಚರಿತ್ರೆಗಿಂತಲೂ, ಮಾದಕವಾವುದು? ॥೧೨॥

ತಿರ್ಯಗ್ನಗ ದ್ವಿಜಸರೀಸೃಪದೇವದೈತ್ಯ ಮರ್ತ್ಯಾದಿಭಿಃ ಪರಿಚಿತಂ ಸದಸದ್ವಿಶೇಷಂ । ರೂಪಂ ಸ್ಥವಿಷ್ಠಮಜ ! ತೇ ಮಹದಾದ್ಯನೇಕಂ ನಾತಃ ಪರಂ ಪರಮ ! ವೇದ್ಮಿ ನ ಯತ್ರ ವಾದಃ ॥೧೫॥ ಕಲ್ಪಾಂತ ಏತ ದಖಿಲಂ ಜಠರೇಣ ಗೃಹ್ಣನ್ ಶೇತೇ ಪುಮಾನ್ ಸ್ವದೃಗನಂತಸಖ ಸ್ತದಂತೇ । ಯನ್ನಾಭಿಸಿಂಧುರುಹ ಕಾಂಚನ ಲೋಕಪದ್ಮಗರ್ಭೇ ದ್ಯುಮಾನ್ ಭಗವತೇ ಪ್ರಣತೋಸ್ಮಿ ತಸ್ಮೈ ॥೧೬॥ ತ್ವಂ ನಿತ್ಯಮುಕ್ತಪರಿಶುದ್ಧವಿಬುದ್ಧ ಆತ್ಮಾ ಕೂಟಸ್ಥ

ಪರಮ - ಸರ್ವೋತ್ತಮನಾದ, ಅಜ - ಜನ್ಮರಹಿತನೆ ! ತಿರ್ಯ...ಭಿಃ - ಪಶುಗಳು, ಸ್ಥಾವರಗಳು, ಪಕ್ಷಿಗಳು, ಸರ್ಪಗಳು, ದೇವತೆಗಳು, ರಾಕ್ಷಸರು, ಮನುಷ್ಯರು ಮೊದಲಾದವರಿಂದ, ಪರಿಚಿತಂ - ವ್ಯಾಪ್ತವಾದ, ಸದಸದ್ವಿಶೇಷಂ - ಚೇತನಾ ಚೇತನಗಳೆಂಬ ವಿಶೇಷವುಳ್ಳ, ಮಹದಾದ್ಯನೇಕಂ - ಮಹತ್ತತ್ತ್ವ ಮೊದಲಾದ ಅನೇಕ ಕಾರಣಗಳುಳ್ಳ, ತೇ - ನಿನ್ನ, ಸ್ಥವಿಷ್ಠಂ - ಸ್ಥೂಲವಾದ ವಿರಾಡ್ರೂಪವನ್ನು, ವೇದ್ಮಿ - ಬಲ್ಲೆನು, ಅತಃಪರಂ - ಇದಕ್ಕೆ ಮೇಲ್ಪಟ್ಟ ಈಶ್ವರ ರೂಪವನ್ನು, ನವೇದ್ಮಿ - ಕಾಣೆನು, ಯತ್ರ - ಎಲ್ಲಿ- ವಾದಃ - ಶಬ್ದ ಪ್ರಚಾರವು, ನ - ಇಲ್ಲವೋ, ಅಂತಹ ಬ್ರಹ್ಮರೂಪವನ್ನೂ, ನವೇದ್ಮಿ - ಕಾಣೆನು ॥೧೫॥ ಯಃಪುಮಾನ್ - ಯಾವ ಪರಮಾತ್ಮನು, ಕಲ್ಪಾಂತೇ - ಪ್ರಳಯದಲ್ಲಿ, ಏತತ್ ಅಖಿಲಂ - ಈ ಸಕಲ ಜಗತ್ತನ್ನೂ, ಜಠರೇಣ - ಉದರಲ್ಲಿ, ಗೃಹ್ಣನ್ - ವಹಿಸಿ, ಸ್ವದೃಕ್-ಆತ್ಮಾರಾಮನಾಗಿ, ಅನಂತಸಖಃ - ಶೇಷನಿಂದೊಡಗೂಡಿ, ತದಂಗೇ - ಆತನ ತೊಡೆಯಲ್ಲಿ, ಶೇತೇ - ಮಲಗಿರುವನೋ, ಯನ್ನಾ...ರ್ಭೇ - ಯಾವನ ಹೊಕ್ಕುಳೆಂಬ ಸರೋವರದಲ್ಲಿ ಜನಿಸಿದ, ಚಿನ್ನದ, ಜಗದ್ರೂಪವಾದ ಕಮಲದಲ್ಲಿ, ದ್ಯುಮಾನ್ - ತೇಜಸ್ವಿಯಾದ ಬ್ರಹ್ಮನು ಜನಿಸಿದನೋ, ಅಂತಹ, ಭಗವತೇ - ಭಗವಂತನಾದ, ತಸ್ಮೈ - ಅವನಿಗೆ, ಪ್ರಣತೋಸ್ಮಿ - ವಂದಿಸುತ್ತೇನೆ ॥೧೬॥ ಯತ್ - ಯಾವಕಾರಣದಿಂದ, ನೀನು, ಬುದ್ಧ್ಯವಸ್ಥಿತಿಂ - ಬುದ್ಧಿಯ ಅವಸ್ಥೆಯನ್ನು, ಅಖಂಡಿತಯಾ - ತಡೆಯಿಲ್ಲದ, ಸ್ವದೃಷ್ಟ್ಯಾ - ಚಿಚ್ಛಕ್ತಿಯಿಂದ, ದ್ರಷ್ಟಾ - ನೋ

ಎಲೈ ಸರ್ವೋತ್ತಮನಾದ ಪುರಾಣ ಪುರುಷನೆ ! ನಾನಿಂತು ನಿನ್ನ ದಿವ್ಯಕಥಾಮಹಿಮೆಯನ್ನು ಬಲ್ಲವನಾದರೂ, ಪಶುಗಳಿಂದಲೂ, ಸ್ಥಾವರಗಳಿಂದಲೂ, ಸರ್ಪಗಳಿಂದಲೂ, ಪಕ್ಷಿಗಳಿಂದಲೂ, ದೇವತೆಗಳಿಂದಲೂ, ಮನುಷ್ಯರು ಮೊದಲಾದ ಅನೇಕ ಜಾತಿಗಳಿಂದೊಡಗೂಡಿ, ಚೇತನಾಚೇತನಗಳೆಂಬ ಭೇದಕ್ಕೊಳಗಾಗಿ, ಮಹತ್ತತ್ತ್ವ ಮೊದಲಾದ ಅನೇಕ ಕಾರಣಗಳುಳ್ಳ, ಪ್ರಪಂಚಸ್ವರೂಪವಾದ ಈ ನಿನ್ನ ವಿರಾಡ್ರೂಪವನ್ನು ಬಲ್ಲೆನೇ ಹೊರತು, ಇದನ್ನು ಮೀರಿದ ಮಾಯಾಶಬಲಿತವಾದ ಈಶ್ವರ ರೂಪವನ್ನಾಗಲಿ, ಮಾಯಾತೀತವೆನಿಸಿ, ಮನೋವಾಕ್ಕುಗಳಿಗಗೋಚರವಾಗಿರುವ ಶುದ್ಧ ಬ್ರಹ್ಮಸ್ವರೂಪವನ್ನಾಗಲಿ ಕಾಣೆನು. ಆದಕಾರಣ ದೇಹಾಭಿಮಾನ ವೆಂಬುದು ತೊಲಗದೆ ಕ್ಲೇಶಗೊಳ್ಳುತ್ತಿರುವೆನು ॥ ಎಂದು ಹೊಗಳುತ್ತಾ ಭಗವತ್ಕೃಪೆಯಿಂದ ವಿರಾಡ್ರೂಪಕ್ಕಿಂತಲೂ ಅತೀತವಾದ ರೂಪದ್ವಯಸ್ವರೂಪವನ್ನೂ ತಿಳಿದು, ಈಶ್ವರ ರೂಪವನ್ನು ವರ್ಣಿಸುತ್ತಾನೆ. ಯಾವ ಪರಮಪುರುಷನು ಪ್ರಳಯದಲ್ಲಿ ಈ ದೃಶ್ಯಪ್ರಪಂಚವೆಲ್ಲವನ್ನೂ ತನ್ನ ಜಠರದಲ್ಲಡಗಿಸಿಕೊಂಡು, ಯೋಗನಿದ್ರಾರೂಢನಾಗಿ ಶೇಷಪರ್ಯಂಕದಲ್ಲಿ ಶಯನಿಸುವನೋ, ಯಾವ ಭಗವಂತನ ನಾಭೀಸರೋವರದಿಂದ ಜನಿಸಿದ ಜಗದ್ರೂಪವಾದ ಕಾಂಚನ ಕಮಲದಲ್ಲಿ ಚರಾಚರ ಗುರುವಾದ ಚತುರ್ಮುಖನುದಿಸಿದನೋ, ಆ ಪರಮೇಶ್ವರನನ್ನು ವಂದಿಸುವೆನು ॥ ೧೬ ॥ ಎಲೈ

ಆದಿಪುರುಷೋ ಭಗವಾಂಸ್ತ್ರ್ಯಧೀಶಃ । ಯದ್ಬುದ್ಧ್ಯವಸ್ಥಿತಿ ಮಖಂಡಿತಯಾ
ಸ್ವದೃಷ್ಟ್ಯಾ ದ್ರಷ್ಟಾ ಸ್ಥಿತಾವಧಿಮಖೋ ವ್ಯತಿರಿಕ್ತ ಆಸ್ಸೇ ॥ ೧೫ ॥
ಯಸ್ಮಿನ್ ವಿರುದ್ಧಗತಯೋ ಹ್ಯನಿಶಂ ಪತಂತಿ ವಿದ್ಯಾದಯೋ ವಿವಿಧಶಕ್ತ
ಯ ಆನುಪೂರ್ವ್ಯಾತ್ । ತದ್ಬ್ರಹ್ಮ ವಿಶ್ವಭವ ಮೇಕ ಮನಂತ ಮಾದ್ಯ
ಮಾನಂದಮಾತ್ರ ಮವಿಕಾರ ಮಹಂ ಪ್ರಪದ್ಯೇ ॥೧೬॥ ಸತ್ಯಾಶಿಷೋಹಿ

---

ಡುವೆಯೋ, ಸ್ಥಿತಾ - ಪಾಲನೆಯಲ್ಲಿ, ಅಧಿಮಖಃ - ಯಜ್ಞಪಾಲಕನೋ, ವ್ಯತಿರಿಕ್ತಃ - ಬೇರೆಯಾಗಿ, ಆ ಸ್ಸೇ - ಇರುವೆಯೋ, ಆದುದರಿಂದ, ತ್ವಂ - ನೀನು, ನಿತ್ಯ...ದ್ಧಃ - ನಿತ್ಯನು, ಮುಕ್ತನು, ಪರಿಶುದ್ಧ ನು, ಸರ್ವಜ್ಞನು, ಆತ್ಮಾ - ಚೈತನ್ಯ ಸ್ವರೂಪನು, ಕೂಟಸ್ಥನು - ನಿರ್ವಿಕಾರನು, ಆದಿಪುರುಷಃ - ಉ ತ್ಪತ್ತಿರಹಿತನು, ಭಗವಾನ್ - ನಿರತಿಶಯ ಮಹಿಮನು, ತ್ರ್ಯಧೀಶಃ - ತ್ರಿಗುಣಗಳಿಗೂ ನಿಯಾಮಕನು ಆಗಿರುವೆ ॥೧೫॥ ವಿರುದ್ಧಗತಯಃ - ಬೇರೆಬೇರೆ ಸ್ವಭಾವವುಳ್ಳ, ವಿದ್ಯಾದಯಃ - ಜ್ಞಾನ ಮೊದಲಾದ, ವಿವಿ ಧಶಕ್ತಯಃ - ಅನೇಕ ಶಕ್ತಿಗಳು, ಆನುಪೂರ್ವ್ಯಾತ್ - ಕ್ರಮದಿಂದ, ಯಸ್ಮಿನ್ - ಯಾರಲ್ಲಿ, ಅನಿಶಂ - ನಿರಂತರವೂ ಪತಂತಿ - ಆಕಸ್ಮಿಕವಾಗಿ ಜನಿಸುವುವೋ, ವಿಶ್ವಭವಂ - ಜಗತ್ಕಾರಣವೆನಿಸಿದ, ಏಕಂ-ಅದ್ವಿ ತೀಯವಾದ, ಅನಂತಂ - ನಾಶರಹಿತವಾದ, ಆದ್ಯಂ - ಜನ್ಮರಹಿತವಾದ, ಅವಿಕಾರಂ - ವಿಕಾರವಿಲ್ಲದ, ಆನಂದಮಾತ್ರಂ - ಆನಂದಘನವನ್ನು, ಅಹಂ - ನಾನು, ಪ್ರಪದ್ಯೇ - ಮರೆಹೋಗುವೆನು ॥೧೬॥ ಹೇಭಗ ವನ್ - ಎಲೈ ಭಗವಂತನೆ! ಪುರು..ತೇಃ - ಪುರುಷಾರ್ಥಸ್ವರೂಪನಾದ, ತವ - ನಿನ್ನ, ಪಾದಪದ್ಮಂ -

---

ಪರಾವರನೆ! ನೀನೂ ಜೀವನಂತೆಯೆ ಯೋಗನಿದ್ರೆ ಮೊದಲಾದ ಅವಸ್ಥೆಗಳನ್ನುಳ್ಳವನಾಗಿದ ರೂ ಜೀವರಿಗಿಂತ ವಿಲಕ್ಷಣನಾಗಿರುವೆ. ಎಂತೆಂದರೆ:-ನೀನು ನಿತ್ಯಮುಕ್ತನು. ಜೀವನ್ನು ನಿನ್ನನುಗ್ರಹದಿಂದ ಮುಕ್ತನಾಗತಕ್ಕವನು. ನೀನು ಪರಿಶುದ್ಧನು. ಜೀವನು ಮಲಿನನು. ನೀನು ಸರ್ವಜ್ಞನು. ಜೀವನು ಅಜ್ಞನು. ನೀನು ಚೈತನ್ಯಸ್ವರೂಪನು. ಜೀವನು ದೇಹಾ ತ್ಮಾಧ್ಯಾಸದಿಂದ ಜಡನು. ನೀನು ನಿರ್ವಿಕಾರನು. ಜೀವನು ವಿಕಾರವುಳ್ಳವನು. ನೀನು ಆದ್ಯಂತರಹಿತನು. ಜೀವನು ಜನ್ಮವುಳ್ಳವನು ನೀನು ನಿರತಿಶಯ ಮಹಿಮನು. ಜೀವನು ಭಾಗ್ಯಹೀನನು. ನೀನು ಮಾಯಾನಿಯಾಮಕನು. ಜೀವನುಮಾಯಾಧೀನನು. ಅಲ್ಲದೆ ನೀನುಸು ಷುಪ್ತಿಯಲ್ಲಿ ಜೀವರ ಬುದ್ಧ್ಯವಸ್ಥೆಗಳನ್ನು ಚಿಚ್ಛಕ್ತಿಯಿಂದ ನೋಡುತ್ತಾ, ಪಾಲನ ಕಾಲದಲ್ಲಿ ವಿಷ್ಣುರೂಪದಿಂದ ಸಲಹುತ್ತಾ, ಸರ್ವಾತ್ಮಕನಾಗಿದ್ದರೂ ಯಾವುದಕ್ಕೂ ಅಂಟದೆ ಬಿಂಗಡವಾಗಿರುವೆ. ಆದುದರಿಂದ ನಿನ್ನ ನಿದ್ರಾದಿಗಳೂ ಚಿದ್ವಿಲಾಸವೆಂದೇ ತಿಳಿಯು ವೆನು ॥೧೫॥ ಎಂದು ಸ್ವಾಧೀನ ಮಾಯಕನಾದ ಪರಮೇಶ್ವರನ ಸ್ವರೂಪವನ್ನು ಬಣ್ಣಿಸಿ, ನಿರ್ವಿಶೇಷವಾದ ಬ್ರಹ್ಮಸ್ವರೂಪವನ್ನು ವರ್ಣಿಸುತ್ತಾನೆ. ಯಾವ ಪರಬ್ರಹ್ಮವಸ್ತುವಿನಲ್ಲಿ ಪರಸ್ಪರ ವಿರುದ್ಧಗಳೆನಿಸಿದ, ಜ್ಞಾನ-ಅಜ್ಞಾನ, ಸೃಷ್ಟಿ-ಸಂಹಾರ, ಜನ್ಮ-ಅನಾದಿತ್ವ, ನಿರ್ಗುಣ ತ್ವ-ಜಗಲ್ಲೀಲೆ, ಆತ್ಮಾರಾಮತ್ವ-ಭಕ್ತವಾತ್ಸಲ್ಯ, ಮೊದಲಾದ ಅನೇಕ ಶಕ್ತಿಗಳು ನಿರಂತ ರದಲ್ಲಿಯೂ ಆಕಸ್ಮಿಕವಾಗಿ ಜನಿಸುತ್ತಿರುವುವೋ, ಅಂತಹ, ಜಗತ್ಕಾರಣವೂ, ಅದ್ವಿತೀಯ ವೂ, ನಾಶರಹಿತವೂ, ಅನಾದಿಯೂ, ನಿರ್ವಿಕಾರವೂ, ಪರಿಪೂರ್ಣವೂ, ಆನಂದ ಘನವೂ ಆದ ಪರತತ್ವವನು ಮರೆಹೋಗುವೆನು ॥೧೬॥ ಎಲೈ ಪೂಜ್ಯನೆ! ಭಗವಂತನೆ! ಧರ್ಮಾ

ಭಗವಂಸ್ತವ ಪಾದಪದ್ಮ ಮಾಶೀಸ್ತಥಾಽನುಭಜತಃ ಪುರುಷಾರ್ಥ
ಮೂರ್ತೇಃ । ಅಪ್ಯೇವ ಮಾರ್ಯ ! ಭಗವಾನ್ ಪರಿಪಾತಿ ದೀನಾನ್ * ವಾ
ಶ್ರೇವ ವತ್ಸಕ ಮನುಗ್ರಹಕಾತರೋಽಸ್ಮಾನ್ ॥೧೭॥ ಮೈತ್ರೇಯಃ ॥
ಅಥಾಽಭಿಷ್ಟುತ ಏವಂ ವೈ ಸತ್ಸಂಕಲ್ಪೇನ ಧೀಮತಾ । ಭೃತ್ಯಾಽನುರ
ಕ್ತೋ ಭಗವಾನ್ ಪ್ರತಿನಂದ್ಯೇದ ಮಬ್ರವೀತ್ ॥೧೮॥ ಶ್ರೀ ಭಗವಾನ್ ॥
ವೇದಾಽಹಂ ತೇ ವ್ಯವಸಿತಂ ಹೃದಿ ರಾಜನ್ಯಬಾಲಕ ! । ತತ್ಪ್ರಯಚ್ಛಾ
ಮಿ ಭದ್ರಂತೇ ದುರಾಪ ಮಪಿ ಸುವ್ರತ! ॥೧೯॥ ನಾನ್ಯೈ ರಧಿಷ್ಠಿತಂ ಭದ್ರ!

---

ಪಾದಕಮಲವು, ತಥಾ - ಹಾಗೆ, ಅನುಭಜತಃ - ಧ್ಯಾನಿಸುವವನಿಗೆ, ಆಶಿಷಃ - ರಾಜ್ಯಾದಿಗಳಿಗಿಂತಲೂ, ಸತ್ಯಾ - ಸ್ಥಿರವಾದ, ಆಶೀಃ - ಪುರುಷಾರ್ಥವೇಸರಿ, ಹೇ ಆರ್ಯ ! - ಎಲೈ ಪೂಜ್ಯನೆ ! ಏವಮಪಿ - ಇಂತಿದ್ದರೂ, ಅನುಗ್ರಹಕಾತರಃ - ಅನುಗ್ರಹಿಸುವುದರಲ್ಲಿ ಆಸಕ್ತನಾದ ನೀನು, ವತ್ಸಕಂ - ಎಳಗರುವನ್ನು, ವಾಶ್ರೇವ - ಈದ ಆಕಳಿನಂತೆ, ದೀನಾನ್ - ಅನಾಥರಾದ, ಅಸ್ಮಾನ್ - ನಮ್ಮನ್ನು, ಭಗವಾನ್ - ನೀನು, ಪರಿಪಾತಿ - ಸಲಹುತ್ತಿರುವೆ॥೧೭॥ ಮೈತ್ರೇಯನು ಹೇಳುತ್ತಾನೆ:—ಅಥ - ಬಳಿಕ, ಸತ್ಸಂಕಲ್ಪೇನ - ಸ್ಥಿರ ಸಂಕಲ್ಪವುಳ್ಳ, ಧೀಮತಾ - ಬುದ್ಧಿಶಾಲಿಯಾದ ಧ್ರುವನಿಂದ, ಏವಂ - ಇಂತು, ಅಭಿಷ್ಟುತಃ - ಹೊಗಳಲ್ಪಟ್ಟ, ಭೃತ್ಯಾನುರಕ್ತಃ - ಭಕ್ತವತ್ಸಲನಾದ, ಭಗವಾನ್ - ಭಗವಂತನು, ಪ್ರತಿನಂದ್ಯ - ಸಂತೋಷಿಸಿ, ಇದಂ - ಈ ಮಾತನ್ನು, ಅಬ್ರವೀತ್ - ಹೇಳಿದನು ॥೧೮॥

ಭಗವಂತನು ಹೇಳುತ್ತಾನೆ:—ಹೇರಾಜನ್ಯಬಾಲಕ - ಎಲೈ ರಾಜಪುತ್ರನೆ! ತೇ - ನಿನ್ನಿಂದ, ಹೃದಿ-ಮನಸ್ಸಿನಲ್ಲಿ, ವ್ಯವಸಿತಂ-ನಿಶ್ಚಯಿಸಲ್ಪಟ್ಟಿರುವುದನ್ನು, ಅಹಂ-ನಾನು, ವೇದ-ಬಲ್ಲೆನು, ಹೇಸುವ್ರತ-ಎಲೈ ತಪಸ್ವಿಯೆ ! ತತ್ - ಆ ನಿನ್ನ ಕೋರಿಕೆಯನ್ನು, ದುರಾಪಮಪಿ- ಹೊಂದಲಶಕ್ಯವಾದರೂ, ಪ್ರಯಚ್ಛಾಮಿ - ಕೊಡುವೆನು, ತೇ - ನಿನಗೆ, ಭದ್ರಂ - ಮಂಗಳವಾಗುವುದು ॥೧೯॥ ಹೇಭದ್ರ - ಎಲೈ ಮಂಗಳಕ

---

ದಿಪುರುಷಾರ್ಥಗಳ ಸ್ವರೂಪನಾಗಿರುವ, ನಿನ್ನ ಪಾದಪದ್ಮವನ್ನು ಯಾರು ಏಕಾಂತಭಕ್ತಿಯಿಂದ ಭಜಿಸುವರೋ, ಅಂತಹ ನಿಷ್ಕಾಮರಿಗೆ ನಿನ್ನ ಪಾದಸೇವೆಗಿಂತಲೂ ರಾಜ್ಯಾದಿಗಳು ಪರಮಪುರುಷಾರ್ಥವಲ್ಲ. ಇಂತಿದ್ದರೂ, ಪರಮದಯಾಳುವಾದ ನೀನು, ಹೊಸದಾಗಿ ಹೆತ್ತ ಆಕಳು ಹಾಲಿತ್ತು ಕಾಡುಮೃಗಗಳ ಕಾಟವಿಲ್ಲದೆ ಕರುವನ್ನು ಸಲಹುವಂತೆ, ದೀನರಾದ ನಾವು ಬಯಸದಿದ್ದರೂ, ನಮ್ಮ ಕಾಮಿತಾರ್ಥಗಳನ್ನಿತ್ತು ಕಾಪಾಡುವೆಯಾದುದರಿಂದ ಭಕ್ತವತ್ಸಲನಾದ ನಿನ್ನ ಅವ್ಯಾಜ ಕರುಣೆಯನ್ನೆಂತು ಬಣ್ಣಿಸಲಿ ? ಎಂದು ಸ್ತುತಿಸಿದನು ॥೧೭॥ ಅಯ್ಯಾ ವಿದುರನ ! ದೃಢಸಂಕಲ್ಪನಾದ ಧ್ರುವಕುಮಾರನಿಂತು ಸ್ತುತಿಸಲು, ಭೃತ್ಯಾನುರಕ್ತನಾದ ಭಗವಂತನು ಸಂತಸಗೊಂಡು ನುಡಿದ ನೆಂತೆಂದರೆ ॥೧೮॥ ಎಲೈ ರಾಜಕುಮಾರನ ! ನಿನ್ನ ಮನದಲ್ಲಿರುವ ಕೋರಿಕೆಯನ್ನು ನಾನು ಬಲ್ಲೆನು. ಅಸಾಧ್ಯವಾದುದಾದರೂ ಆ ನಿನ್ನ ಸಂಕಲ್ಪವನ್ನು ನೆರವೇರಿಸುವೆನು ॥೧೯॥ ಎಲೈ ಮಂಗಳಮತಿಯಾದ ಮನುಕುಲದೀಪನ ! ಯಾವ ಪದವಿಯು ನಾಶರಹಿತವಾಗಿ ನಿತ್ಯಪ್ರಕಾಶವಾಗಿರು

---

* ವಾ. ಉಸ್ರೇವ.

ಯದ್ಭ್ರಾಜಿಷ್ಣು ಧ್ರುವಕ್ಷಿತಿ । ಯತ್ರ ಗ್ರಹರ್ಕ್ಷ ತಾರಾಣಾಂ ಜ್ಯೋತಿಷಾಂ ಚಕ್ರ ಮಾಹಿತಂ ॥೨೦॥ ‡ ಮೇಢ್ಯಾಂ ಗೋಚಕ್ರವತ್ ಸ್ಥಾಸ್ನು ಪರಸ್ತಾತ್ಕಲ್ಪವಾಸಿನಾಂ । ಧರ್ಮೋಽಗ್ನಿಃ ಕಶ್ಯಪ ಶ್ಶುಕ್ರೋ ಮುನಯೋ ಯೇ ವನೌಕಸಃ । ಚರಂತಿ ದಕ್ಷಿಣೀಕೃತ್ಯ ಭ್ರಮಂತೋ ಯತ್ಸತಾರಕಾಃ ॥ ಪ್ರಸ್ಥಿತೇ ತು ವನಂ ಪಿತ್ರಾ ದತ್ವಾ ಗಾಂ ಧರ್ಮಸಂಶ್ರಯಃ । ಷಟ್ತ್ರಿಂಶದ್ವರ್ಷಸಾಹಸ್ರಂ ರಕ್ಷಿತಾಽವ್ಯಾಹತೇಂದ್ರಿಯಃ ॥೨೨॥ ತ್ವದ್ಭ್ರಾತರ್ಯುತ್ತಮೇ ನಷ್ಟೇ ಮೃಗಯಾಯಾಂ ತು ತನ್ಮನಾಃ । ಅನ್ವೇಷಂತೀ ವನಂ ಮಾತಾ

ರನೆ! ಭ್ರಾಜಿಷ್ಣು - ಪ್ರಕಾಶವಾದ, ಧ್ರುವಕ್ಷಿತಿ - ಶಾಶ್ವತವಾದ ವಾಸವುಳ್ಳ, ಯತ್ - ಯಾವುದು, ಅನ್ಯೈಃ- ಇತರರಿಂದ, ನಾಧಿಷ್ಠಿತಂ - ಹೊಂದಲ್ಪಟ್ಟಿರುವುದಿಲ್ಲವೋ, ಯತ್ರ - ಎಲ್ಲಿ, ಗ್ರಹರ್ಕ್ಷತಾರಾಣಾಂ - ಗ್ರಹ, ನಕ್ಷತ್ರ, ತಾರ, ಇವುಗಳ ರೂಪವಾದ, ಜ್ಯೋತಿಷಾಂ - ಜ್ಯೋತಿಸ್ಸುಗಳ, ಚಕ್ರಂ - ಮಂಡಲವು, ಮೇಢ್ಯಾಂ - ಮೇಟಿಯಲ್ಲಿ, ಗೋಚಕ್ರವತ್ - ಎತ್ತುಗಳ ಸಾಲಿನಂತೆ, ಆಹಿತಂ - ಇಡಲ್ಪಟ್ಟಿತೋ, ಕಲ್ಪವಾಸಿನಾಂ - ಅವಾಂತರ ಕಲ್ಪದಲ್ಲಿರುವವರಿಗಿಂತ, ಪರಸ್ತಾದಪಿ - ಆಚೆಗೂ, ಸ್ಥಾಸ್ನು - ಸ್ಥಿರವೋ, ಯತ್ - ಯಾವುವನ್ನು, ಧರ್ಮಃ - ಧರ್ಮನು, ಅಗ್ನಿಃ - ಅಗ್ನಿಯು, ಕಶ್ಯಪಃ- ಕಶ್ಯಪನು, ಶುಕ್ರಃ- ಶುಕ್ರನು, ವನೌಕಸಃ - ಅರಣ್ಯವಾಸಿಗಳಾದ, ಯೇಮುನಯಃ - ಸಪ್ತರ್ಷಿಗಳು, ಇವರು, ಸತಾರಕಾಃ - ತಾರೆಗಳಿಂದೊಡಗೂಡಿ, ದಕ್ಷಿಣೀಕೃತ್ಯ - ಪ್ರದಕ್ಷಿಣವಾಗಿ, ಭ್ರಮಂತಃ - ತಿರುಗುತ್ತಾ, ಚರಂತಿ - ಸಂಚರಿಸುವರೋ, ಆ ಪದವನ್ನು ಕೊಡುವೆನು ॥೨೦-೨೧॥ ಪಿತ್ರಾ - ತಂದೆಯಿಂದ, ಗಾಂ - ಭೂಮಿಯನ್ನು, ದತ್ವಾ - ಕೊಟ್ಟು, ವನಂ - ಕಾಡಿಗೆ, ಪ್ರಸ್ಥಿತೇ - ಹೊಂದಲ್ಪಡಲು, ಧರ್ಮಸಂಶ್ರಯಃ - ಧರ್ಮಿಷ್ಠನಾದ ನೀನು, ಅವ್ಯಾಹತೇಂದ್ರಿಯಃ - ಅದ್ಭುತ ಶಕ್ತಿಯುಳ್ಳವರಾಗಿ, ಷಟ್ತ್ರಿಂ...ಸ್ರಂ - ಮೂವತ್ತಾರುಸಾವಿರ ವರ್ಷಗಳು, ರಕ್ಷಿತಾ - ರಾಜ್ಯವನ್ನಾಳುವೆ ॥೨೨॥ ತ್ವದ್ಭ್ರಾತರಿ - ನಿನ್ನ ತಮ್ಮನಾದ, ಉತ್ತಮೇ - ಉತ್ತಮನು, ಮೃಗಯಾಯಾಂ - ಬೇಟೆಯಲ್ಲಿ, ನಷ್ಟೇ - ಸಾಯಲು, ತನ್ಮನಾಃ - ಅವನಲ್ಲಿ ಮನಸ್ಸು

ವುದೋ, ಸೂರ್ಯಚಂದ್ರಾದಿ ಗ್ರಹಗಳು, ಅಶ್ವಿನ್ಯಾದಿ ನಕ್ಷತ್ರಗಳು, ಇತರ ತಾರೆಗಳು ಇವುಗಳ ರೂಪವಾದ ಜ್ಯೋತಿಶ್ಚಕ್ರವು, ಕಣದಲ್ಲಿ ಮೇಟಿಯ ಮರಕ್ಕೆ ಬಿಗಿಯುವ ಗೋಗಳ ಸಾಲಿನಂತೆ ಎಲ್ಲಿ ನೆಲೆಗೊಳಿಸಲ್ಪಟ್ಟಿರುವುದೋ, ಸ್ವರ್ಗ, ಮರ್ತ್ಯ, ಪಾತಾಳಗಳೆಂಬ ಮೂರುಲೋಕಗಳೂ ಪ್ರಳಯವಾದರೂ ಯಾವುದು ಶಾಶ್ವತವಾಗಿರುವುದೋ, ಧರ್ಮ, ಅಗ್ನಿ, ಶುಕ್ರ, ಸಪ್ತರ್ಷಿಗಳು, ಮೊದಲಾದವರು ಯಾವುದನ್ನು ಪ್ರದಕ್ಷಿಣವಾಗಿ ಸುತ್ತುತ್ತಿರುವರೋ, ಅಂತಹ ಧ್ರುವಪದವನ್ನು ನಿನಗೆ ಕೊಡುವೆನು ॥೨೦-೨೧॥ ತಂದೆಯಾದ ಉತ್ತಾನಪಾದರಾಜನು ನಿನಗೆ ರಾಜ್ಯವನ್ನಿತ್ತು ವನಕ್ಕೆ ತೆರಳಿದಬಳಿಕ ನೀನು ಮೂವತ್ತಾರುಸಾವಿರ ವರ್ಷಗಳವರೆಗೂ ಅಳಹಾಯಶೂರನಾಗಿ ಧರ್ಮದಿಂದ ರಾಜ್ಯವನ್ನಾಳುವೆ॥೨೨॥ ಪರಮಭಾಗವತನಾದ ನಿನಗೆ ದ್ರೋಹವನ್ನೆಣಿಸಿದುದರಿಂದ, ನಿನ್ನ ತಮ್ಮನಾದ ಉತ್ತಮನು

‡ ಭಾ. ಧಾನ್ಯವನ್ನು ತುಳಿಸಲು ಎತ್ತುಗಳನ್ನು ಕಟ್ಟುವುದಕ್ಕಾಗಿ, ಕಣದ ನಡುವೆ ನಟ್ಟಿರುವ ಕಂಬಕ್ಕೆ ''ಮೇಢಿ ಅಥವಾ ಮೇಟಿ'' ಯೆಂದುಹೆಸರು.

ದಾವಾಽಗ್ನಿಂ ಸಾ ಪ್ರವೇಕ್ಷ್ಯತಿ ॥೨೩॥ ಇಷ್ಟ್ವಾ ಮಾಂ ಯಜ್ಞಹೃದಯಂ
ಯಜ್ಞೈಃ ಪುಷ್ಕಲದಕ್ಷಿಣೈಃ । ಭುಕ್ತ್ವಾ ಚೇಹಾಶಿಷಃ ಸತ್ಯಾ ಅಂತೇ
ಮಾಂ ಸಂಸ್ಮರಿಷ್ಯಸಿ ॥೨೪॥ ತತೋ ಗಂತಾಸಿ ಮತ್‌ಸ್ಥಾನಂ ಸರ್ವಲೋಕ
ನಮಸ್ಕೃತಂ । ಉಪರಿಷ್ಟಾದೃಷಿಭ್ಯಸ್ತ್ವಂ ಯತೋ ನಾವರ್ತತೇ ಗತಃ॥
ಮೈತ್ರೇಯಃ ॥ ಇತ್ಯರ್ಚಿತಸ್ಸ ಭಗವಾನತಿದಿಶ್ಯಾತ್ಮನಃ ಪದಂ । ಬಾಲಸ್ಯ
ಪಶ್ಯತೋ ಧಾಮ ಸ್ವಮಗಾದ್ಗರುಡಧ್ವಜಃ ॥೨೫॥ ಸೋಽಪಿ ಸಂಕಲ್ಪಜಂ
ವಿಷ್ಣೋಃ ಪಾದಸೇವೋಪಸಾದಿತಂ । ಪ್ರಾಪ್ಯ ಸಂಕಲ್ಪನಿರ್ವಾಣಂ ನಾಽ
ತಿಪ್ರೀತೋಽಭ್ಯಗಾತ್ಪುರಂ ॥೨೬॥ ವಿದುರಃ ॥ ಸುದುರ್ಲಭಂ ಯತ್ಪರಮಂ

೨೩. ಸಾ ಮಾತಾ - ತಾಯಿಯಾದ ಆ ಸುರುಚಿಯು, ವನಂ - ಕಾಡಿನಲ್ಲಿ, ಅನ್ವೇಷಂತೀ - ಹುಡುಕುತ್ತಾ, ದಾವಾಗ್ನಿಂ - ಕಾಳ್ಕಿಚ್ಚನ್ನು, ಪ್ರವೇಕ್ಷ್ಯತಿ - ಹೊಗುವಳು ॥೨೩॥ ಯಜ್ಞಹೃದಯಂ - ಯಜ್ಞಪ್ರಿಯನಾದ, ಮಾಂ - ನನ್ನನ್ನು, ಪುಷ್ಕಲದಕ್ಷಿಣೈಃ - ಸಂಪೂರ್ಣದಕ್ಷಿಣೆಯುಳ್ಳ, ಯಜ್ಞೈಃ - ಯಜ್ಞಗಳಿಂದ, ಇಷ್ಟ್ವಾ - ಪೂಜಿಸಿ, ಇಹ - ಈ ಲೋಕದಲ್ಲಿ, ಸತ್ಯಾಃ - ಅಧಿಕಗಳಾದ, ಆಶಿಷಃ - ಭೋಗಗಳನ್ನು, ಭುಕ್ತ್ವಾ - ಅನುಭವಿಸಿ, ಅಂತೇ - ಕಡೆಯಲ್ಲಿ, ಮಾಂ - ನನ್ನನ್ನು, ಸಂಸ್ಮರಿಷ್ಯಸಿ - ಸ್ಮರಿಸುವೆ ॥೨೪॥ ತತಃ - ಬಳಿಕ, ಗತಃ - ಹೋದವನು, ಯತಃ - ಎಲ್ಲಿಂದ, ನಾವರ್ತತೇ - ಹಿಂದಿರುಗುವುದಿಲ್ಲವೋ, ಅಂತಹ, ಸರ್ವ...ತಂ - ಸಕಲ ಲೋಕಗಳಿಂದ ವಂದಿಸಲ್ಪಟ್ಟ, ಋಷಿಭ್ಯಃ - ಸಪ್ತಋಷಿಗಳಿಗಿಂತ, ಉಪರಿಷ್ಟಾತ್ - ಮೇಲಡೆಯಿರುವ, ಮತ್‌ಸ್ಥಾನಂ - ನನ್ನ ಸ್ಥಾನವನ್ನು, ಗಂತಾಸಿ - ಹೊಂದುವೆ ॥೨೫॥ ಮೈತ್ರೇಯನು ಹೇಳುತ್ತಾನೆ:—ಇತಿ - ಇಂತು, ಅರ್ಚಿತಃ - ಪೂಜಿಸಲ್ಪಟ್ಟ, ಭಗವಾನ್ - ಭಗವಂತನಾದ, ಗರುಡಧ್ವಜಃ - ವಿಷ್ಣುವು, ಆತ್ಮನಃ - ತನ್ನ, ಪದಂ - ಸ್ಥಾನವನ್ನು, ಅತಿದಿಶ್ಯ - ಇತ್ತು, ಬಾಲಸ್ಯ - ಧ್ರುವನು, ಪಶ್ಯತಃ - ನೋಡುತ್ತಿರುವಾಗಲೇ, ಸ್ವಂಧಾಮ - ತನ್ನ ವೈಕುಂಠಕ್ಕೆ, ಅಗಾತ್ - ಹೋದನು ॥೨೬॥ ಸೋಽಪಿ - ಆ ಧ್ರುವನೂ, ವಿಷ್ಣೋಃ - ವಿಷ್ಣುವಿನ, ಪಾದ...ತಂ - ಪಾದಸೇವೆಯಿಂದುಂಟಾದ, ಸಂಕಲ್ಪನಿರ್ವಾಣಂ - ಸಂಕಲ್ಪವನ್ನು ಪೂರ್ತಿಗೊಳಿಸಿದ, ಸಂಕಲ್ಪಜಂ - ಕೋರಿಕೆಯನ್ನು, ಪ್ರಾಪ್ಯ-

ಬೇಟೆಗೆ ಹೋಗಿ ಮೃತನಾಗುವನು. ಅವನ ತಾಯಿಯಾದ ಸುರುಚಿಯು ಪುತ್ರಪ್ರೇಮ
ದಿಂದ ಕಾಡಿನಲ್ಲಿ ಅರಸುತ್ತಾ ಕಾಳ್ಕಿಚ್ಚಿಗೆ ಸಿಕ್ಕಿ ಸಾಯುವಳು ॥೨೩॥ ನೀನು ಸಮಗ್ರ
ದಕ್ಷಿಣಾಪೂರ್ವಕವಾಗಿ ಅನೇಕ ಯಜ್ಞಗಳಿಂದ ಯಜ್ಞಪ್ರಿಯನಾದ ನನ್ನನ್ನು ಆರಾಧಿಸಿ,
ನಿರತಿಶಯಗಳಾದ, ಐಹಿಕಭೋಗಗಳೆಲ್ಲವನ್ನೂ ಅನುಭವಿಸಿ, ಕಡೆಗೆ ನನ್ನ ಧ್ಯಾನದಲ್ಲಿ ನಿರ
ತನಾಗುವೆ॥೨೪॥ ತರುವಾಯ ಸರ್ವಲೋಕನಮಸ್ಕೃತವೂ, ಪುನರಾವೃತ್ತಿರಹಿತವೂ, ಆದ
ಸಪ್ತರ್ಷಿಮಂಡಲಕ್ಕೂ ಮೇಲ್ಗಡೆಯಲ್ಲಿರುವ ನನ್ನ ಸ್ಥಾನವನ್ನು ಹೊಂದುವೆ ॥೨೫॥ ಅಯ್ಯಾ
ವಿದುರನೆ! ಇಂತು ಧ್ರುವಕುಮಾರನಿಂದ ಸ್ತುತಿಸಲ್ಪಟ್ಟ ಭಗವಂತನಾದ ವಾಸುದೇವಮೂರ್ತಿ
ಯು, ತನ್ನ ದಿವ್ಯಪದವನ್ನನುಗ್ರಹಿಸಿ, ಆ ಕುಮಾರನು ನೋಡುತ್ತಿರುವಂತೆಯೇ, ತನ್ನ ನೆಲೆ
ಯಾದ ವೈಕುಂಠಕ್ಕೆ ತೆರಳಿದನು ॥೨೬॥ ಆ ಧ್ರುವಕುಮಾರನೂ, ತಂದೆಯ ಸಿಂಹಾಸನವ
ನ್ನೇರಬೇಕೆಂಬ ತನ್ನ ಮನೋರಥವು ಭಗವದನುಗ್ರಹದಿಂದ ಕೈಗೂಡಿದರೂ, ಅಲ್ಪಸುಖ
ವೆಂದರಿತವನಾದುದರಿಂದ ಪೂರ್ಣಸಂತೋಷವಿಲ್ಲದೆ ತನ್ನ ಪುರಕ್ಕೆ ಬಂದನು ॥೨೭॥ ಎಂದು

ಪದಂ ಹರೇರ್ಮಾಯಾವಿನಸ್ತಚ್ಚರಣಾಽರ್ಚನಾರ್ಜಿತಂ । ಲಬ್ಧ್ವಾಪ್ಯಸಿ
ದ್ಧಾರ್ಥ ಮಿವೈಕಜನ್ಮನಾ ಕಥಂ ಸ್ವಮಾತ್ಮಾನ ಮಮನ್ಯತಾಽರ್ಥವಿತ್॥
ಮೈತ್ರೇಯಃ ॥ ಮಾತು ಸ್ಸಪತ್ನ್ಯಾ ವಾಗ್ಬಾಣೈ ರ್ಹೃದಿ ವಿದ್ಧಸ್ತು ತಾನ್
ಸ್ಮರನ್ । ನೈಚ್ಛ ನ್ಮುಕ್ತಿಪತೇ ರ್ಮುಕ್ತಿಂ ತಸ್ಮಾತ್ತಾಪ ಮುಪೇಯಿವಾನ್ ॥
ಧ್ರುವಃ ॥ ಸಮಾಧಿನಾ ನೈಕಭವೇನ ಯತ್ಪರಂ ವಿದು ಸ್ಸನಂದಾದಯ ಊ
ರ್ಧ್ವರೇತಸಃ। ಮಾಸೈ ರಹಂ ಷಡ್ಭಿ ರಮುಷ್ಯ ಪಾದಯೋ ಶ್ಛಾಯಾ ಮುಪೇ

ಹೊಂದಿ, ನಾತಿಪ್ರೀತಃ - ಅತಿಪ್ರೀತನಾಗದೆ, ಪುರಂ - ಪಟ್ಟಣಕ್ಕೆ, ಅಭ್ಯಗಾತ್ - ಹೋದನು ॥೨೭॥

ವಿದುರನು ಹೇಳುತ್ತಾನೆ, ಅರ್ಥವಿತ್ - ಪುರುಷಾರ್ಥ ಸ್ವರೂಪವನ್ನು ಬಲ್ಲಧ್ರುವನು, ಮಾಯಾವಿನಃ - ಸಕಾಮರಿಗೆ, ಸುದುರ್ಲಭಂ - ಅಸಾಧ್ಯವಾದ, ಹರೇಃ - ವಿಷ್ಣುವಿನ, ಚರ...ತಂ - ಪಾದಸೇವೆಯಿಂದ ಲಭಿಸಿದ, ಯತ್ - ಯಾವ, ಪರಮಂಪದಂ - ಮೋಕ್ಷಪದವುಂಟೋ, ತತ್ - ಅದನ್ನು, ಏಕಜನ್ಮನಾ - ಒಂದೇಜನ್ಮದಿಂದ, ಲಬ್ಧ್ವಾಪಿ - ಹೊಂದಿದರೂ, ಸ್ವಮಾತ್ಮಾನಂ- ತನ್ನನ್ನು, ಅಸಿದ್ಧಾರ್ಥಂ- ಕೃತಾರ್ಥನಾಗದವನಂತೆ, ಕಥಂ - ಹೇಗೆ, ಅಮನ್ಯತ - ತಿಳಿದನು ॥೨೮॥ ಮೈತ್ರೇಯನು ಹೇಳುತ್ತಾನೆ, ಸಪತ್ನ್ಯಾಮಾತುಃ - ಬಲತಾಯಿಯ, ವಾಗ್ಬಾಣೈಃ - ನುಡಿಗಳೆಂಬ ಬಾಣಗಳಿಂದ, ಹೃದಿ - ಹೃದಯದಲ್ಲಿ, ವಿದ್ಧಃ - ಹೊಡೆಯಲ್ಪಟ್ಟು, ತಾನ್ - ಅವುಗಳನ್ನು, ಸ್ಮರನ್ - ಸ್ಮರಿಸುತ್ತಾ, ಮುಕ್ತಿಪತೇಃ - ಭಗವಂತನಿಂದ, ಮುಕ್ತಿಂ - ಮೋಕ್ಷವನ್ನು, ನೈಚ್ಛತ್ - ಬಯಸಲಿಲ್ಲ, ತಸ್ಮಾತ್ - ಆದುದರಿಂದ, ತಾಪಂ - ಚಿಂತೆಯನ್ನು, ಉಪೇಯಿವಾನ್ - ಹೊಂದಿದನು ॥೨೯॥ ಧ್ರುವನು ಹೇಳುತ್ತಾನೆ, ಊರ್ಧ್ವರೇತಸಃ - ಜಿತೇಂದ್ರಿಯರಾದ, ಸನಂದಾದಯಃ - ಸನಕಾದಿ ಯೋಗಿಗಳು, ನೈಕಭವೇನ - ಅನೇಕ ಜನ್ಮಗಳಲ್ಲುಂಟಾದ, ಸಮಾಧಿನಾ - ಚಿತ್ತನಿರೋಧದಿಂದ, ಯತ್ಪದಂ - ಯಾವ ಪದವನ್ನು, ವಿದುಃ - ತಿಳಿದರೋ, ಅಹಂ - ನಾನು, ಷಡ್ಭಿರ್ಮಾಸೈಃ - ಆರುತಿಂಗಳಲ್ಲಿಯೇ, ಅಮುಷ್ಯ - ಆ ಭಗವಂತನ, ಪಾದಯೋಃ - ಪಾದಗಳ, ಛಾಯಾಂ - ನೆರಳನ್ನು, ಉಪೇತ್ಯಾಪಿ - ಹೊಂದಿದರೂ, ಪೃಥಙ್ಮತಿಃ - ಭೇದಬುದ್ಧಿಯುಳ್ಳವನಾಗಿ, ಅಪಗತಃ-

ನುಡಿದ ಮೈತ್ರೇಯಮುನಿಯನ್ನು ಕುರಿತು, ಎಲೈ ಗುರುವರ್ಯನೆ ! ಪುರುಷಾರ್ಥಸ್ವರೂಪವನ್ನು ಬಲ್ಲ ಕುಮಾರನು, ಫಲಾಭಿಸಂಧಿಯಿಂದೆಷ್ಟುಜನ್ಮಗಳು ತಪಸ್ಸನ್ನು ಮಾಡಿದರೂ ಲಭಿಸಲಾರದ ಪರಮಪದವನ್ನು ವೈಷ್ಣವದೀಕ್ಷೆಯಿಂದ ಆರಾಧಿಸಲ್ಪಟ್ಟ ಭಗವಂತನ ಅನುಗ್ರಹದಿಂದ ಒಂದೇ ಜನ್ಮದಲ್ಲಿ ಪಡೆದರೂ, ಕೃತಾರ್ಥನೆಂದು ತಿಳಿಯದೆ ಅತೃಪ್ತಿಗೊಳ್ಳುವುದಕ್ಕೆ ಕಾರಣವೇನು ? ಎಂದು ವಿದುರನು ಬೆಸಗೊಳ್ಳಲು ॥೨೮॥ ಮೈತ್ರೇಯನು ಹೇಳುತ್ತಾನೆ, ಅಯ್ಯಾ ವಿದುರನೆ! ಬಲತಾಯಿಯ ವಾಗ್ಬಾಣಗಳಿಂದೆದೆಬಿರಿದ ಧ್ರುವಕುಮಾರನು ಆ ಬಿರುನುಡಿಗಳನ್ನು ನೆನೆನೆನೆದು ರೋಷಾಕ್ರಾಂತನಾಗಿದ್ದುದರಿಂದ, ಮೋಕ್ಷಪ್ರದನಾದ ವಾಸುದೇವನಲ್ಲಿ ಮುಕ್ತಿಯನ್ನು ಬೇಡದೆ ಇಂತು ಪಶ್ಚಾತ್ತಾಪಪಟ್ಟನು ॥೨೯॥ ನನ್ನ ಗುರುವಾದ ನಾರದಮುನಿಗೂ ಗುರುಗಳೆನಿಸಿದ ಜಿತೇಂದ್ರಿಯರಾದ ಸನಕಾದಿಮಹಾತ್ಮರೂ ಕೂಡ, ಅನೇಕಜನ್ಮಗಳಲ್ಲಿ ಸಮಾಧಿನಿಷ್ಠರಾಗಿ ಯಾವ ಪದವನ್ನು ಪಡೆಯಲಾರದೇ ಹೋದರೋ, ಅಂತಹ ಪರಮಪದವನ್ನು ನಾನಾರುತಿಂಗಳಲ್ಲಿಯೇ ಪಡೆದರೂ, ಭೇದಬುದ್ಧಿಯಿಂದ ಅಭಾಗ್ಯವನ್ನು ಕಳೆ

ತ್ವಾಽಪಗತಃ ಪೃಥಙ್ಮತಿಃ ॥೩೦॥ ಅಹೋ ! ಬತ ! ಮಮಾನಾತ್ಮ್ಯಂ ಮಂದಭಾಗ್ಯಸ್ಯ ಪಶ್ಯತ । ಭವಚ್ಛಿದಃ ಪಾದಮೂಲಂ ಗತ್ವಾಽಯಾಚೇ ಯದಂತವತ್ ॥೩೧॥ ಮತಿರ್ವಿದೂಷಿತಾ ದೇವೈಃ ಪತದ್ಭಿರಸಹಿಷ್ಣುಭಿಃ । ಯೋ ನಾರದವಚಸ್ತಥ್ಯಂ ನಾಗ್ರಾಹಿಷಮಸತ್ತಮಃ ॥೩೨॥ * ದೈವೀಂ ಮಾಯಾಮುಪಾಶ್ರಿತ್ಯ ಪ್ರಸುಪ್ತ ಇವ ಭಿನ್ನದೃಕ್ । ತಪ್ಯೇ ದ್ವಿತೀಯೇಽಪ್ಯಸತಿ ಭ್ರಾತೃಭ್ರಾತೃವ್ಯಹೃದ್ರುಜಾ ॥೩೩॥ ಮಯೈತತ್ಪ್ರಾರ್ಥಿತಂ ವ್ಯರ್ಥಂ

ಹಿಂದಿರುಗಿದೆನು ॥೩೦॥ ಯತ್ - ಯಾವಕಾರಣದಿಂದ, ಭವಚ್ಛಿದಃ - ಪಾಪಹಾರಕನಾದ ಭಗವಂತನ, ಪಾದಮೂಲಂ - ಸಾಮೀಪ್ಯವನ್ನು, ಗತ್ವಾ - ಹೊಂದಿ, ಅಂತವತ್ - ನಶ್ವರಫಲವನ್ನು, ಅಯಾಚೇ - ಬೇಡಿದೆನೋ, ತತ್ - ಆದುದರಿಂದ, ಮಂದಭಾಗ್ಯಸ್ಯ - ಭಾಗಹೀನನಾದ, ಮಮ - ನನ್ನ, ಅನಾತ್ಮ್ಯಂ - ಅವಿವೇಕವನ್ನು, ಪಶ್ಯತ - ನೋಡಿರಿ, ಅಹೋಬತ - ಅಯ್ಯೋ ! ಅನ್ಯಾಯ ॥೩೧॥ ಅಸತ್ತಮಃ-ಅಜ್ಞನಾದ, ಯಃ - ಯಾವನಾನು, ನಾರದವಚಃ - ನಾರದನ ನುಡಿಯನ್ನು, ತಥ್ಯಂ - ಸತ್ಯವನ್ನಾಗಿ, ನಾಗ್ರಾಹಿಷಂ - ಗ್ರಹಿಸಲಿಲ್ಲವೋ, ಅಂತಹ ನನ್ನ, ಮತಿಃ - ಬುದ್ಧಿಯು, ಪತದ್ಭಿಃ - ಕೆಳಗಿರುವ, ಅಸಹಿಷ್ಣುಭಿಃ - ಅಸೂಯಾಳುಗಳಾದ, ದೇವೈಃ - ದೇವತೆಗಳಿಂದ, ವಿದೂಷಿತಾ - ಕೆಡಿಸಲ್ಪಟ್ಟಿತು ॥೩೨॥ ಪ್ರಸುಪ್ತ ಇವ - ಮಲಗಿದವನಂತೆ, ದೈವೀಂ - ಭಗವಂತನ, ಮಾಯಾಂ - ಮಾಯೆಯನ್ನು, ಉಪಾಶ್ರಿತ್ಯ - ಆಶ್ರಯಿಸಿ, ದ್ವಿತೀಯೇ - ಎರಡನೆಯ ವಸ್ತುವು, ಅಸತ್ಯಪಿ - ಇಲ್ಲದಿದ್ದರೂ, ಭ್ರಾತೃ...ಜಾ, ಭ್ರಾತೃ - ತಮ್ಮನೇ, ಭ್ರಾತೃವ್ಯ - ಶತ್ರುವೆಂಬ, ಹೃದ್ರುಜಾ - ಹೃದಯರೋಗದಿಂದ, ತಪ್ಯೇ - ಸಂಕಟಪಡುವೆನು ॥೩೩॥ ಗತಾಯುಷಿ - ಆಯುಸ್ಸಿಲ್ಲದವನಲ್ಲಿ, ಚಿಕಿತ್ಸೇವ - ಔಷಧಪ್ರಯೋಗದಂತೆ, ಮಯಾ - ನನ್ನಿಂದ, ಏತತ್ - ಇದು, ವ್ಯರ್ಥಂ - ನಿಷ್ಫಲವಾಗಿ, ಪ್ರಾರ್ಥಿತಂ - ಬೇಡಲ್ಪಟ್ಟಿತು, ತಪಸಾ - ತಪಸ್ಸಿನಿಂದ, ದುಷ್ಪ್ರಸಾದನಂ - ಅನುಗ್ರಹವನ್ನು ಪಡೆಯಲಶಕ್ಯವಾದ ಭವಚ್ಛಿದಂ - ಪಾಪಹಾರಕನಾದ, ಜಗದಾತ್ಮಾನಂ - ಪರಮಾತ್ಮ

ದುಕೊಂಡೆನಲ್ಲಾ ! ॥೩೦॥ ಜನನ ಮರಣರೂಪವಾದ ಸಂಸಾರತಾಪವನ್ನು ನೀಗಾಡುವ ನೀರಜಾಕ್ಷನ ನಿರ್ಮಲಪಾದಮೂಲವನ್ನು ಹೊಂದಿದ್ದರೂ, ಶಾಶ್ವತಪದವಿಯನ್ನು ಬಯಸದೆ,ನಶ್ವರವಾದ ಸುಖಕ್ಕಾಸಿಸಿದೆನಲ್ಲಾ. ಅಕಟಾ! ನನ್ನ ಅವಿವೇಕವನ್ನು ಕಂಡಿರಾ! ॥೩೧॥ ಅಕಟಾ ! ನನಗಿಂತ ಕೆಳಗಿರಬೇಕೆಂದು ಅಸೂಯೆಗೊಂಡ ದೇವತೆಗಳೇ ನನ್ನ ಬುದ್ಧಿಯನ್ನು ಕೆಡಿಸಿ ಸಂಸಾರಭೋಗಕ್ಕೆ ಕೆಡಹಿರಬಹುದು. ಅವಿವೇಕಿಯಾದ ನಾನು ಮಹಾತ್ಮನಾದ ನಾರದಮುನಿಯು ನುಡಿದ ನುಡಿಯನ್ನು ದಿಟವೆಂದು ನಂಬದೆ ಹೋದೆನು ॥೩೨॥ ನಿದ್ರಿಸುವ ಪುರುಷನಂತೆ ಮರುಳಾದ ನಾನು ಭಗವನ್ಮಾಯೆಗೊಳಗಾಗಿ, ಬ್ರಹ್ಮಭಿನ್ನವಾದ ಎರಡನೆಯ ವಸ್ತುವೇ ಇಲ್ಲದಿದ್ದರೂ, ಭೇದಬುದ್ಧಿಯುಳ್ಳವನಾಗಿ ಒಡಹುಟ್ಟಿದವನನ್ನೇ ಹಗೆಯೆಂದು ತಿಳಿದು, ಸಂಕಟಪಡುತ್ತಿರುವೆನು ॥೩೩॥ ಎಂತಹ ತಪಸ್ಸಿಗೂ ಸಿಲುಕದಿರುವ

* ವಿ. ಭಗವಂತನ ಮಾಯೆಯೆಂಬ ಬಂಧಕ ಶಕ್ತಿಗೊಳಗಾಗಿ, ಅಜ್ಞಾನದಲ್ಲಿ ಬಿದ್ದ ನಾನು, ದೃಗ್ದೋಷದಿಂದ ಪದಾರ್ಥಗಳನ್ನು ಸರಿಯಾಗಿ ಕಾಣದೇ ಹೋಗುವುದು ಮಾತ್ರವೇ ಅಲ್ಲದೆ ಬೇರೆಯಾಗಿಯೂ ತಿಳಿಯುವಂತೆ, ತಮ್ಮನನ್ನೇ ಶತ್ರುವನ್ನಾಗಿ ತಿಳಿದೆನು.

ಚಿಕಿತ್ಸೇವ ಗತಾಯುಷಿ । ಪ್ರಸಾದ್ಯ ಜಗದಾತ್ಮಾನಂ ತಪಸಾ ದುಷ್ಪ್ರಸಾ
ದನಂ । ಭವಚ್ಛಿದ ಮಯಾಚೇ ಽ ಹಂ ಭವಂ ಭಾಗ್ಯವಿವರ್ಜಿತಃ ॥೩೪॥ †
ಸ್ವಾರಾಜ್ಯಂ ಯಚ್ಛತೋ ಮೌಢ್ಯಾನ್ಮಾನೋ ಮೇ ಭಿಕ್ಷಿತೋ ಬತ ! । ಈ
ಶ್ವರಾತ್ ಕ್ಷೀಣಪುಣ್ಯೇನ ಫಲೀಕಾರಾ ನಿವಾಧನಃ ॥೩೫॥ ಮೈತ್ರೇಯಃ ॥
ನವೈ ಮುಕುಂದಸ್ಯ ಪದಾರವಿಂದಯೋ ರಜೋಜುಷ ಸ್ತಾತ ! ಭವಾದೃ
ಶಾ ಜನಾಃ । ವಾಂಛಂತಿ ತದ್ದಾಸ್ಯ ಮೃತೇ ಽ ರ್ಥ ಮಾತ್ಮನೋ ಯದೃಚ್ಛ
ಯಾ ಲಬ್ಧಮನಸ್ಸಮೃದ್ಧಯಃ ॥೩೬॥ ಆಕರ್ಣ್ಯಾತ್ಮಜ ಮಾಯಾಂತಂ ಸಂಪ

ನನ್ನು, ಪ್ರಸಾದ್ಯ- ಸಂತೋಷಗೊಳಿಸಿ, ಭಾಗ್ಯವಿವರ್ಜಿತಃ-ಭಾಗ್ಯಹೀನನಾದ ನಾನು ಭವಂ-ಸಂಸಾರವನ್ನು, ಯಾಚೇ - ಬೇಡಿದೆನು ॥೩೪॥ ಅಧನಃ - ದರಿದ್ರನು, ಕ್ಷೀಣಪುಣ್ಯೇನ - ಪುಣ್ಯನಾಶದಿಂದ, ಈಶ್ವರಾತ್ - ಚಕ್ರವರ್ತಿಯಲ್ಲಿ, ಫಲೀಕಾರಾನಿವ-ಬತ್ತದ ಕಾಳನ್ನೋ, ಪಾದಿಯಲ್ಲಿ, ಮೇ - ನನ್ನಿಂದ, ಮೌಢ್ಯಾತ್ - ಮೌಢ್ಯದಿಂದ, ಸ್ವಾರಾಜ್ಯಂ - ಮೋಕ್ಷಸಾಮ್ರಾಜ್ಯವನ್ನು, ಯಚ್ಛತಃ - ಕೊಡತಕ್ಕ ಭಗವಂತನಿಂದ, ಮಾನಃ - ಅಭಿಮಾನವನ್ನೆ, ಭಿಕ್ಷಿತಃ - ಬೇಡಲ್ಪಟ್ಟಿತು, ಬತ - ಕಷ್ಟವು ॥೩೫॥

ಮೈತ್ರೇಯನು ಹೇಳುತ್ತಾನೆ:—ಹೇತಾತ - ಎಲೈ ವಿದುರನೆ! ಮುಕುಂದಸ್ಯ - ವಿಷ್ಣುವಿನ, ಪದಾರವಿಂದಯೋಃ - ಪಾದಕಮಲಗಳ, ರಜೋಜುಷಃ - ಧೂಳಿಯನ್ನು ಪಡೆದ, ಯದೃಚ್ಛಯಾ - ಪ್ರಯತ್ನವಿಲ್ಲದೆ, ಲಬ್ಧ...ಯಃ, ಲಬ್ಧ- ದೊರೆತಷ್ಟರಿಂದಲೇ, ಮನಸ್ಸಮೃದ್ಧಯಃ - ಮನಸ್ತೃಪ್ತಿಯುಳ್ಳ, ಭವಾದೃಶಾಃ - ನಿಮ್ಮಂತವರು, ತದ್ದಾಸ್ಯಮೃತೇ - ಆತನ ಸೇವೆಹೊರತು, ಆತ್ಮನಃ - ತಮಗೆ, ಅರ್ಥಂ- ಇತರ ವಸ್ತುಗಳನ್ನು, ನವಾಂಛಂತಿವೈ - ಬಯಸುವುದಿಲ್ಲವಷ್ಟೆ ॥೩೬॥ ರಾಜಾ - ಉತ್ತಾನಪಾದರಾಯನು,

ಪಾಪಹಾರಕನಾದ ಪರಮಾತ್ಮನನ್ನೊಲಿಸಿ, ಭಾಗ್ಯಹೀನನಾದ ನಾನು ಸಂಸಾರವನ್ನು ಬೇಡಿದೆನು. ಆಹಾ ! ಆಯುಸ್ಸು ಮುಗಿದವನಿಗೌಷಧವನ್ನು ಕೊಡುವಂತೆ, ನಾನು ಬೇಡಿದುದು ವ್ಯರ್ಥವಾಯಿತಲ್ಲಾ ॥೩೪॥ ಪುಣ್ಯಹೀನನಾದ ಬಡವನು ಚಕ್ರವರ್ತಿಯಬಳಿಗೆ ಹೋಗಿ ಬೊಗಸೆಯ ಬತ್ತವನ್ನು ಬೇಡಿದಂತೆ,ಮೋಕ್ಷಸಾಮ್ರಾಜ್ಯವಿತ್ತು ಸಲಹುವ ಮಹೇಶ್ವರನ ಬಳಿಯಲ್ಲಿ ಮೌಢ್ಯದಿಂದ ಮಾನವನ್ನು ಬೇಡಿದೆನಲ್ಲಾ! ಏನುಮಾಡಲಿ ? ಎಂದು ಮರುಗಿದನು ॥೩೫॥ ಅಯ್ಯಾ ವಿದುರನೆ ! ಆ ಧ್ರುವನಿಂತು ಚಿಂತಿಸಿದುದೇನನ್ಯಾಯವಲ್ಲ. ಭಗವಂತನ ಪಾದಾರವಿಂದ ಮಕರಂದವನ್ನು ಪಾನಮಾಡುತ್ತಾ, ಪ್ರಯತ್ನಮಾಡದೆ ದೊರೆತಷ್ಟುಮಾತ್ರದಿಂದಲೇ ಸಂತೋಷಗೊಳ್ಳುವ ನಿನ್ನಂತಹ ಸಾಧುಗಳು ಭಗವಂತನ ಕೈಂಕರ್ಯವನ್ನು ಮಾತ್ರ ಬಯಸುವರೇ ಹೊರತು ಮತ್ತಾವುದನ್ನೂ ಬೇಡುವುದಿಲ್ಲ ॥೩೬॥ ಅದಂತಿರಲಿ. ಇತ್ತ ಉತ್ತಾನಪಾದರಾಯನು ತನ್ನ ಮಗನು ಬಂದನೆಂಬ ಸುದ್ದಿಯನ್ನು ಕೇಳಿ

† ವಿ. ಪಾ. ತಾದಾತ್ಮ್ಯಂ - ಏಕಾಗ್ರಚಿತ್ತದಿಂದ ಮನೆಯನ್ನು ಹೊಕ್ಕಂತೆ ಹರಿಯಲ್ಲಿ ಸೇರುವುದೆಂದರ್ಥವೇ ಹೊರತು ಭಗವದ್ರೂಪವನ್ನು ಪಡೆಯುವುದೆಂದಲ್ಲ.

ಶ್ಲೋ॥ ಹರೌ ನಿಯತ ಚಿತ್ತತ್ವಾ ದ್ಗೃಹವ ತ್ತತ್ಪ್ರವೇಶನಾತ್ । ಮೋಕ್ಷಂ ತಾದಾತ್ಮ್ಯ ಮಿತ್ಯಾಹು ರ್ನತು ತದ್ರೂಪತಃ ಕ್ವಚಿತ್ ॥

ರೇತ್ಯ ಯಥಾಗತಂ । ರಾಜಾ ನಶ್ರದ್ದಧೇ ಭದ್ರ ಮಭದ್ರಸ್ಯ ಕುತೋ ಮಮ ||೩೭|| ಶ್ರದ್ಧಾಯ ವಾಕ್ಯಂ ದೇವರ್ಷೇ ರ್ಹರ್ಷವೇಗೇನ ಧರ್ಷಿತಃ । ವಾರ್ತಾಹರ್ತು ರತಿಪ್ರೀತ್ಯಾ ಹಾರಂ ಪ್ರಾದಾ ನ್ಮಹಾಧನಂ ||೩೮|| ಸದಶ್ವಂ ರಥಮಾರುಹ್ಯ ಕಾರ್ತಸ್ವರಪರಿಷ್ಕೃತಂ । ಬ್ರಾಹ್ಮಣೈಃ ಕುಲವೃದ್ಧೈಶ್ಚ ಪರ್ಯಸ್ತೋ ಽಮಾತ್ಯಬಂಧುಭಿಃ ||೩೯|| ಶಂಖದುಂದುಭಿನಾದೇನ ಬ್ರಹ್ಮಘೋಷೇಣ ವೇಣುಭಿಃ । ನಿಶ್ಚಕ್ರಾಮ ಪುರಾ ತ್ತೂರ್ಣ ಮಾತ್ಮಜಾ ಽವೇಕ್ಷಣೋತ್ಸುಕಃ ||೪೦|| ಸುನೀತಿ ಸ್ಸುರುಚಿ ಶ್ಚಾಽಸ್ಯ ಮಹಿಷ್ಯೌ ರುಕ್ಮ

---

ಆಯಾಂತಂ - ಬರುತ್ತಿರುವ, ಆತ್ಮಜಂ - ಮಗನನ್ನು, ಆಕರ್ಣ್ಯ - ಕೇಳಿ, ಸಂಪರೇತ್ಯ - ಮೃತನಾದವನು, ಆಗತಂಯಥಾ - ಬಂದುಳಿದು, ಅಭದ್ರಸ್ಯ - ಭಾಗ್ಯಹೀನನಾದ, ಮಮ - ನನಗೆ, ಭದ್ರಂ- ಈ ಶುಭವು, ಕುತಃ - ಎಲ್ಲಿಯದು ? ಎಂದು, ನಶ್ರದ್ದಧೇ - ನಂಬಲಿಲ್ಲ ||೩೭|| ದೇವರ್ಷೇಃ - ನಾರದಮುನಿಯ, ವಾಕ್ಯಂ-ವಾಕ್ಯವನ್ನು, ಶ್ರದ್ಧಾಯ-ನಂಬಿ, ಹರ್ಷವೇಗೇನ-ಸಂತೋಷಾತಿಶಯದಿಂದ, ಧರ್ಷಿತಃ- ಉಬ್ಬಿ, ವಾರ್ತಾಹರ್ತುಃ- ಸುದ್ಧಿಯನ್ನು ಹೇಳಿದವನಿಗೆ, ಅತಿಪ್ರೀತ್ಯಾ-ಅಧಿಕಪ್ರೀತಿಯಿಂದ, ಮಹಾಧನಂ - ಅಧಿಕ ಧನವುಳ್ಳ, ಹಾರಂ - ರತ್ನಹಾರವನ್ನು, ಪ್ರಾದಾತ್ - ಕೊಟ್ಟನು ||೩೮|| ಅಮಾತ್ಯಬಂಧುಭಿಃ - ಮಂತ್ರಿಗಳಿಂದಲೂ, ನಂಟರಿಂದಲೂ, ಕುಲವೃದ್ಧೈಃ - ಕುಲದಲ್ಲಿ ಹಿರಿಯರಾದ, ಬ್ರಾಹ್ಮಣೈಶ್ಚ - ಬ್ರಾಹ್ಮಣರಿಂದಲೂ, ಪರ್ಯಸ್ತಃ - ಪರಿವೃತನಾಗಿ, ಕಾರ್ತ...ತಂ - ಸುವರ್ಣದಿಂದ ಅಲಂಕರಿಸಲ್ಪಟ್ಟ, ಸದಶ್ವಂ - ಉತ್ತಮಾಶ್ವಗಳುಳ್ಳ, ರಥಂ - ರಥವನ್ನು, ಆರುಹ್ಯ - ಹತ್ತಿ ||೩೯|| ಶಂಖ...ನ - ಶಂಖ, ದುಂದುಭಿಗಳ ಧ್ವನಿಯಿಂದಲೂ, ಬ್ರಹ್ಮ ಘೋಷೇಣ - ವೇದಘೋಷದಿಂದಲೂ, ವೇಣುಭಿಃ - ವೇಣುಗಳಿಂದಲೂ, ಒಡಗೂಡಿ, ಆತ್ಮ...ಕಃ - ಮಗನನ್ನು ಕಾಣುವ ಕುತೂಹಲದಿಂದ, ತೂರ್ಣಂ-ಬೇಗನೆ, ಪುರಾತ್ - ಪಟ್ಟಣದಿಂದ, ನಿಶ್ಚಕ್ರಾಮ - ಹೊರಟನು ||೪೦|| ಅಸ್ಯ - ಉತ್ತಾನಪಾದನ, ಮಹಿಷ್ಯೌ - ಪಟ್ಟಮಹಿಷಿಯರಾದ, ಸುನೀತಿಃ - ಸುನೀತಿಯೂ, ಸುರುಚಿಃ - ಸುರುಚಿಯೂ, ರುಕ್ಮಭೂಷಿತೇ - ಅಲಂಕರಿಸಿಕೊಂಡು, ಶಿಬಿಕಾಂ - ಅಂದಣವನ್ನು, ಆರುಹ್ಯ - ಏರಿ, ಉತ್ತಮೇನಸಾರ್ಧಂ - ಉತ್ತಮನೊಡನೆ, ಅಭಿಜ

---

ದರೂ, ಸತ್ತವನು ಬದುಕಿಬಂದನೆಂಬ ನುಡಿಯಂತೆ ತಿಳಿದು, ಭಾಗ್ಯಹೀನನಾದ ನನಗೆ ಇಂತಹ ಪುತ್ರಾಗಮನರೂಪವಾದ ಭಾಗ್ಯವು ದೊರೆಯುವುದುಂಟೆ ? ಎಂದಾನುಡಿಯನ್ನು ನಂಬಲಿಲ್ಲ ||೩೭|| ತರುವಾಯ ಮಹಾತ್ಮನಾದ ನಾರದಮುನಿಯು ಹೇಳಿದ ನುಡಿಯನ್ನು ಜ್ಞಾಪಿಸಿಕೊಂಡು, ಅತ್ಯಂತ ಸಂತೋಷದಿಂದ ಮೈಯುಬ್ಬಿ, ಆ ಸುದ್ದಿಯನ್ನು ತಂದ ಚಾರನಿಗೆ ಅಮೂಲ್ಯವಾದ ಒಂದು ರತ್ನಹಾರವನ್ನು ಬಹುಮಾನವಿತ್ತನು ||೩೮|| ತತ್ಕ್ಷಣದಲ್ಲಿಯೇ ವೃದ್ಧರಾದ ಬ್ರಾಹ್ಮಣೋತ್ತಮರನ್ನೂ, ಮಂತ್ರಿಗಳನ್ನೂ, ಬಂಧುಗಳನ್ನೂ, ಕರೆಯಿಸಿ, ರತ್ನಾಲಂಕೃತವಾದ ಕಾಂಚನರಥವನ್ನೇರಿ, ಶಂಖ, ದುಂದುಭಿಗಳ ಧ್ವನಿಗಳಿಂದಲೂ, ಬ್ರಾಹ್ಮಣರ ವೇದಘೋಷದಿಂದಲೂ. ವೇಣು ಮೊದಲಾದ ವಾದ್ಯಗಳಿಂದಲೂ ಒಡಗೂಡಿ, ಮಗನನ್ನು ನೋಡಬೇಕೆಂದು ತವಕಗೊಂಡು ಬೇಗನೆ ತನ್ನರಾಜಧಾನಿಯಿಂದ ಹೊರಟನು||೪೦|| ಕೂಡಲೇ ಆ ಉತ್ತಾನಪಾದರಾಜನ ಪಟ್ಟದರಾಣಿಯರಾದ ಸುನೀತಿ, ಸುರುಚಿ, ಯೆಂಬವರೂ ಸರ್ವಾಲಂಕಾರಭೂಷಿತೆಯರಾಗಿ, ಉತ್ತಮಕುಮಾರನೊಡನೆ ಅಂದಣವನ್ನೇರಿ

ಭೂಷಿತೇ । ಆರುಹ್ಯ ಶಿಬಿಕಾಂ ಸಾರ್ಧ ಮುತ್ತಮೇನಾಽಭಿಜಗ್ಮತುಃ ॥
ತಂ ದೃಷ್ಟ್ವೋಪವನಾಭ್ಯಾಶ ಆಯಾಂತಂ ತರಸಾ ರಥಾತ್ । ಅವರುಹ್ಯ
ನೃಪ ಸ್ತೂರ್ಣ ಮಾಸಾದ್ಯ ಪ್ರೇಮವಿಹ್ವಲಃ ॥೪೨॥ ಪರಿರೇಭೇಂಗಜಂ
ದೋರ್ಭ್ಯಾಂ ದೀರ್ಘೋತ್ಕಂಠಮನಾ ಶ್ವಸನ್ । ವಿಷ್ವಕ್ಸೇನಾಂಘ್ರಿಸಂ
ಸ್ಪರ್ಶಹತಾಶೇಷಾಘಬಂಧನಂ ॥೪೩॥ ಅಥಾಜಿಘ್ರನ್ಮುಹುರ್ಮೂರ್ಧ್ನಿ
ಶೀತೈರ್ನಯನವಾರಿಭಿಃ । ಸ್ನಪಯಾಮಾಸ ತನಯಂ ಜಾತೋ
ದ್ದಾಮ ಮನೋರಥಃ ॥೪೪॥ ಅಭಿವಾದ್ಯ ಪಿತುಃ ಪಾದಾ ವಾಶೀರ್ಭಿಶ್ಚಾಽ

---

ಗ್ಮತುಃ - ಹೊರಟರು ॥೪೧॥ ನೃಪಃ - ರಾಜನು, ಉಪ...ಶೇ - ಉದ್ಯಾನದ ಬಳಿಯಲ್ಲಿ, ಆಯಾಂತಂ - ಬರುತ್ತಿರುವ, ತಂ - ಆ ಧ್ರುವನನ್ನು, ದೃಷ್ಟ್ವಾ - ಕಂಡು, ತರಸಾ - ಬೇಗನೆ, ರಥಾತ್ - ರಥದಿಂದ, ಅವರುಹ್ಯ - ಇಳಿದು, ಪ್ರೇಮವಿಹ್ವಲಃ - ಪ್ರೀತಿಯಿಂದ ವ್ಯಾಕುಲನಾಗಿ, ತೂರ್ಣಂ - ಬೇಗನೆ, ಆಸಾದ್ಯ - ಬಳಿವಿಡಿದು ॥೪೨॥ ದೀರ್ಘೋ...ನಾಃ - ಬಹಳವಾಗಿ ಮನನೊಂದು, ಶ್ವಸನ್ - ನಿಟ್ಟುಸಿರುಬಿಡುತ್ತಾ, ವಿಷ್ವ...ನಂ, ವಿಶ್ವಕ್ಸೇನ - ವಿಷ್ಣುವಿನ, ಅಂಘ್ರಿ - ಪಾದದ, ಸಂಸ್ಪರ್ಶ - ಸ್ಪರ್ಶದಿಂದ, ಹತ - ನಷ್ಟವಾದ, ಅಶೇಷ - ಸಂಪೂರ್ಣವಾದ, ಅಘಬಂಧನಂ - ಪಾಪಸಂಬಂಧವುಳ್ಳ, ಅಂಗಜಂ-ಮಗನನ್ನು, ದೋರ್ಭ್ಯಾಂ - ತೋಳುಗಳಿಂದ, ಪರಿರೇಭೇ - ಅಪ್ಪಿಕೊಂಡನು ॥೪೩॥ ಅಥ - ಬಳಿಕ, ಜಾತೋ...ಥಃ - ಸಂಪೂರ್ಣ ಮನೋರಥನಾಗಿ, ತನಯಂ - ಮಗನನ್ನು, ಮುಹುಃ - ಅಡಿಗಡಿಗೂ, ಮೂರ್ಧ್ನಿ - ತಲೆಯಲ್ಲಿ, ಅಜಿಘ್ರತ - ಮೂಸಿನೋಡಿದನು, ಶೀತೈಃ - ತಣ್ಣಗಿರುವ, ನಯನವಾರಿಭಿಃ - ಕಣ್ಣೀರಿನಿಂದ, ಸ್ನಪಯಾಮಾಸ - ಸ್ನಾನಮಾಡಿಸಿದನು ॥೪೪॥ ಸಜ್ಜನಾಗ್ರಣೀಃ - ಸಾಧುಶಿರೋಮಣಿಯಾದ ಧ್ರುವನು, ಶೀರ್ಷ್ಣಾ - ತಲೆಯಿಂದ, ಪಿತುಃ - ತಂದೆಯ, ಪಾದಗಳನ್ನು, ಅಭಿವಾದ್ಯ - ನಮಿಸಿ, ಆಶೀರ್ಭಿಃ - ಆಶೀರ್ವಾದಗಳಿಂದ, ಅಭಿಮಂತ್ರಿತಃ - ಕರೆಯಲ್ಪಟ್ಟವನಾಗಿ, ಸತ್ಕೃತಃ - ಆದರವನ್ನು ಪಡೆದು, ಮಾತರೌ - ತಾಯಿಯರನ್ನು, ನನಾಮ-

---

ತೆರಳಿದರು ॥ ೧॥ ಬಳಿಕ ರಾಜನು, ಊರಹೊರಗಣ ಉದ್ಯಾನದ ಬಳಿಯಲ್ಲಿ ಬರುತ್ತಿರುವ ಬಾಲಕನನ್ನು ಕಂಡು, ಪ್ರೇಮರಸವೆಂಬುದು ಗಕ್ಕನುಕ್ಕಳಿಸಿಬರಲು. ಕೂಡಲೇ ರಥದಿಂದಿಳಿದು ಬೇಗನೆ ಮಗನಬಳಿಗೈದಿ, ತಾಪಾತಿಶಯದಿಂದ ಉದ್ದುದ್ದವಾಗಿ ಉಸಿರುಬಿಡುತ್ತಾ, ಭಗವಂತನಾದ ರಮಾಕಾಂತನ ಪಾದಾಂತವನ್ನು ಮರೆಹೊಕ್ಕು ದುರಂತವಾದ ದುರಿತಸಂತಾನವನ್ನು ನೀಗಿ ಪಾವನನಾಗಿರುವ ಕುಮಾರನನ್ನು ಎರಡು ತೋಳುಗಳಿಂದಲೂ ಬಿಗಿದಪ್ಪಿಕೊಂಡನು ॥೪೨॥ ಬಳಿಕ ಸಂಪೂರ್ಣಮನೋರಥನಾಗಿ ಅಡಿಗಡಿಗೂ ಶಿರಸ್ಸಿನಲ್ಲಾಘ್ರಾಣಿಸುತ್ತಾ, ತಣ್ಣಗಿರುವ ಕಣ್ಣೀರುಗಳಿಂದ ಮಗನನ್ನಭಿಷೇಕಿಸಿದನು ॥೪೩॥ ಬಳಿಕ ಸಾಧುಶಿರೋಮಣಿಯಾದ ಧ್ರುವಕುಮಾರನು, ವಿನಯಾವನತನಾಗಿ ತಂದೆಯಡಿಗಳಿಗೆರಗಿ ಆಶೀರ್ವಾದಪುರಸ್ಸರವಾಗಿ ಮರ್ಯಾದೆಯನ್ನು ಪಡೆದು, ತಾಯಿಯರ ಬಳಿಗೆ ಬಂದು ಸಾಷ್ಟಾಂಗವಾಗಿ ನಮಿಸಿದನು ॥೪೫॥ ಆಗ ಸುರುಚಿಯು ಕಾಲಿಗೆರಗಿರುವ ಆ ಮಗುವನ್ನೆಬ್ಬಿಸಿ, ಅಪ್ಪಿಕೊಂಡು ಬಾಷ್ಪಗದ್ಗದವಾದ ಸ್ವರದಿಂದ “ಸುಖವಾಗಿ ಬಾಳು” ಎಂದು ಹರಸಿ

ಭಿಮಂತ್ರಿತಃ । ನನಾಮ ಮಾತರೌ ಶೀರ್ಷ್ಣಾ ಸತ್ಕೃತ ಸ್ಸಜ್ಜನಾಽಗ್ರ
ಣೀಃ ॥೪೫॥ ಸುರುಚಿಸ್ತಂ ಸಮುತ್ಥಾಪ್ಯ ಪಾದಾವನತ ಮರ್ಭಕಂ । ಪ
ರಿಷ್ವಜ್ಯಾಹ ಜೀವೇತಿ ಬಾಷ್ಪಗದ್ಗದಯಾ ಗಿರಾ ॥೪೬॥ ಯಸ್ಯ ಪ್ರಸ
ನ್ನೋ ಭಗವಾನ್ ಗುಣೈ ರ್ಮೈತ್ರ್ಯಾದಿಭಿ ರ್ಹರಿಃ । ತಸ್ಮೈ ನಮಂತಿ
ಭೂತಾನಿ ನಿಮ್ನ ಮಾಪ ಇವ ಸ್ವಯಂ ॥೪೭॥ ಉತ್ತಮಶ್ಚ ಧ್ರುವಶ್ಚೋಭಾ ವ
ನ್ಯೋನ್ಯಂ ಪ್ರೇಮವಿಹ್ವಲೌ । ಅಂಗಸಂಗಾ ದುತ್ಪುಲಕಾ ವಸ್ರೌಘಂ ಮುಹು
ರೂಹತುಃ ॥೪೮॥ ಸುನೀತಿ ರ್ಯಸ್ಯ ಜನನೀ ಪ್ರಾಣೇಭ್ಯೋಽಪಿ ಪ್ರಿಯಂ
ಸುತಂ । ಉಪಗೂಹ್ಯ ಜಹಾ ವಾಧಿಂ ತದಂಗಸ್ಪರ್ಶ ನಿರ್ವೃತಾ ॥೪೯॥ ಪ
ಯಃ ಸ್ತನಾಭ್ಯಾಂ ಸುಸ್ರಾವ ನೇತ್ರಜೈ ಸ್ಸಲಿಲೈ ಶ್ಶಿವೈಃ । ತಥಾಽಭಿ

---

ವಂದಿಸಿದನು ॥೪೫॥

ಸುರುಚಿಃ - ಸುರುಚಿಯು, ಪಾದಾವನತಂ - ಕಾಲಿಗೆರಗಿದ, ತಂ ಅರ್ಭಕಂ - ಆ ಹಸುಳೆಯನ್ನು, ಸಮುತ್ಥಾಪ್ಯ - ಎಬ್ಬಿಸಿ, ಪರಿಷ್ವಜ್ಯ - ಅಪ್ಪಿಕೊಂಡು, ಬಾಷ್ಪಗದ್ಗದಯಾ - ಕಂಬನಿಯಿಂದ ಗದ್ಗದವಾದ, ಗಿರಾ - ವಾಕ್ಕಿನಿಂದ, ಜೀವೇತಿ - ಬಾಳೆಂದು, ಆಹ - ಹೇಳಿದಳು ॥ ೪೬ ॥ ಯಸ್ಯ - ಯಾವನ, ಮೈತ್ರ್ಯಾದಿಭಿಃ - ಮೈತ್ರಿಮೊದಲಾದ, ಗುಣೈಃ - ಗುಣಗಳಿಂದ, ಭಗವಾನ್ - ಭಗವಂತನಾದ, ಹರಿಃ - ಹರಿಯು, ಪ್ರಸನ್ನಃ - ಅನುಗ್ರಹಿಸಿದನೋ, ತಸ್ಮೈ - ಅವನಿಗೆ, ಆಪಃ - ಜಲವು, ನಿಮ್ನಮಿವ - ಹಳ್ಳವನ್ನೋಪಾದಿಯಲ್ಲಿ, ಭೂತಾನಿ - ಪ್ರಾಣಿಗಳು, ಸ್ವಯಂ - ತಾವೇ, ನಮಂತಿ - ಬಾಗುವುವು ॥೪೭॥ ಉತ್ತಮಶ್ಚ - ಉತ್ತಮನೂ, ಧ್ರುವಶ್ಚ - ಧ್ರುವನೂ, ಉಭೌ - ಇಬ್ಬರೂ, ಅನ್ಯೋನ್ಯಂ - ಪರಸ್ಪರವಾಗಿ, ಪ್ರೀತಿವಿಹ್ವಲೌ - ಪ್ರೇಮದಿಂದ ವ್ಯಾಕುಲರಾಗಿ, ಅಂಗಸಂಗಾತ್ - ಆಲಿಂಗನದಿಂದ, ಉತ್ಪುಲಕೌ - ರೋಮಾಂಚವೇರಿ, ಮುಹುಃ - ಬಾರಿಬಾರಿಗೂ, ಅಸ್ರೌಘಂ - ಕಂಬನಿಗಳನ್ನು, ಊಹತುಃ - ಪಡೆದರು ॥೪೮॥ ಯಸ್ಯ - ಯಾವ ಧ್ರುವನಿಗೆ, ಜನನೀ - ತಾಯಿಯೋ, ಸುನೀತಿಃ - ಆ ಸುನೀತಿಯು, ಪ್ರಾಣೇಭ್ಯೋಽಪಿ - ಪ್ರಾಣಗಳಿಗಿಂತಲೂ, ಪ್ರಿಯಂ - ಪ್ರಿಯನಾದ, ಸುತಂ - ಮಗನನ್ನು, ಉಪಗೂಹ್ಯ - ಅಪ್ಪಿಕೊಂಡು, ತದಂ...ತಾ - ಪುತ್ರಾಲಿಂಗನದಿಂದ ಸುಖಿತಳಾಗಿ, ಆಧಿಂ - ಮನೋರೋಗವನ್ನು, ಜಹೌ - ಬಿಟ್ಟಳು॥೪೯॥

---

ದಳು ॥೪೬॥ ಅಯ್ಯಾ ಸಾಧುವೆ ! ಯಾವನ ಮೈತ್ರ್ಯಾದಿಗುಣಗಳಿಗೆ ಭಗವಂತನಾದ ವಾಸುದೇವಮೂರ್ತಿಯೇ ಮೆಚ್ಚಿದನೋ, ಅವನಿಗೆ ನೀರಿನ ಪ್ರವಾಹವು ನಿಮ್ನ ಭೂಮಿಗೆ ಬಾಗುವಂತೆ ಸಕಲ ಭೂತಗಳು ಬಾಗುವುವು. ಇಂತಿರುವಾಗ ಬಲತಾಯಿಯಾದ ಸುರುಚಿಯು ಪ್ರೀತಿಸಿದುದೇನಾಶ್ಚರ್ಯವಲ್ಲ ॥೪೭॥ ತರುವಾಯ ಉತ್ತಮನು ಧ್ರುವನು, ಇವರೀರ್ವರೂ ಪರಸ್ಪರವಾಗಿ ಆಲಿಂಗಿಸಿಕೊಂಡು ಪ್ರೇಮದಿಂದ ವ್ಯಾಕುಲರಾಗಿಯೂ, ಅನ್ಯೋನ್ಯಾಶ್ಲೇಷದಿಂದ ರೋಮಾಂಚಿತರಾಗಿಯೂ, ಅಡಿಗಡಿಗೂ ಕಂಬನಿಗಳನ್ನು ಸುರಿಸಿದರು॥೪೮॥ ಆ ಧ್ರುವನ ತಾಯಿಯಾದ ಸುನೀತಿಯೂ, ಪ್ರಾಣಪ್ರಿಯನಾದ ಮಗನನ್ನು ಆಲಿಂಗಿಸಿಕೊಂಡು ಪರಮಾನಂದದಿಂದ ಪರವಶೆಯಾಗಿ ತನಗುಂಟಾಗಿದ್ದ ಮನೋವ್ಯಾಧಿಯನ್ನು ತೊರೆದಳು ॥೪೯॥ ಅಯ್ಯಾ ವೀರನೆ ! ಮಗನನ್ನಪ್ಪಿಕೊಂಡಕೂಡಲೆ, ಕಣ್ದಾವರೆಗಳಿಂದ ತಣ್ಣ

ಷಿಚ್ಯಮಾನಾಭ್ಯಾಂ ವೀರ! ವೀರಸುಪ್ರೋ ಮುಹುಃ ॥೪೦॥ ತಾಂ ಶಶಂಸು
ರ್ಜನಾ ರಾಜ್ಞೀಂ ದಿಷ್ಟ್ಯಾ ತೇ ಪುತ್ರ ಆರ್ತಿಹಾ । ಪ್ರತಿಲಬ್ಧಶ್ಚಿರಂ ನ
ಷ್ಟೋ ರಕ್ಷಿತಾ ಮಂಡಲಂ ಭುವಃ ॥೪೧॥ ಅಭ್ಯರ್ಚಿತಸ್ತ್ವಯಾ ನೂ
ನಂ ಭಗವಾನ್ ಪ್ರಣತಾರ್ತಿಹಾ । ಯದನುಧ್ಯಾಯಿನೋ ಧೀರಾ ಮೃತ್ಯುಂ
ಜಿಗ್ಯುಃ ಸುದುರ್ಜಯಮ್ ॥೪೨॥ ಲಾಲ್ಯಮಾನಂ ಜನೈರೇವಂ ಧ್ರುವಂ
ಸಭ್ರಾತರಂ ನೃಪಃ । ಆರೋಪ್ಯ ಕರಿಣೀಂ ಹೃಷ್ಟಃ ಸ್ತೂಯಮಾನೋಽ

ಹೇವೀರ - ಎಲೈ ವಿದುರನೆ! ತಥಾ - ಅಂತು, ಶಿವೈಃ - ಮಂಗಳಕರಗಳಾದ, ನೇತ್ರಜೈಃ - ಕಣ್ಣುಗಳಿಂದ ಸುರಿವ, ಸಲಿಲೈಃ - ಆನಂದ ಬಾಷ್ಪಗಳಿಂದ, ಅಭಿಷಿಚ್ಯಮಾನಾಭ್ಯಾಂ - ನೆನಸಲ್ಪಡುತ್ತಿರುವ, ವೀರಸುವಃ - ವೀರಮಾತೆಯಾದ ಸುನೀತಿಯ, ಸ್ತನಾಭ್ಯಾಂ - ಸ್ತನಗಳಿಂದ, ಮುಹುಃ - ಅಡಿಗಡಿಗೂ, ಪಯಃ - ಹಾಲು, ಸುಸ್ರುವ - ಸ್ರವಿಸಿತು ॥೪೦॥ ಆರ್ತಿಹಾ - ದುಃಖನಾಶಕನಾದ, ಭುವಃಮಂಡಲಂ - ಭೂಮಂಡಲವನ್ನು, ರಕ್ಷಿತಾ - ಸಲಹುವ, ತೇ - ನಿನ್ನ, ಪುತ್ರಃ - ಮಗನು, ಚಿರಂ - ಬಹುಕಾಲವಾಗಿ, ಹೋಗಿದ್ದರೂ, ದಿಷ್ಟ್ಯಾ - ದೈವಯೋಗದಿಂದ, ಪ್ರತಿಲಬ್ಧಃ - ಹೊಂದಲ್ಪಟ್ಟನು, ಎಂದು, ಜನಾಃ - ಜನರು ತಾಂರಾಜ್ಞೀಂ - ಆ ಸುನೀತಿಯನ್ನು, ಶಶಂಸುಃ - ಹೊಗಳಿದರು ॥೪೧॥ ಯದನುಧ್ಯಾಯಿನಃ - ಯಾವನನ್ನು ಭಜಿಸುವ, ಧೀರಾಃ - ಪಂಡಿತರು, ಸುದುರ್ಜಯಂ - ಜಯಿಸಲಾಗದ, ಮೃತ್ಯುಂ - ಸಂಸಾರವನ್ನು, ಜಿಗ್ಯುಃ - ಗೆಲ್ಲುವರೋ, ಅಂತಹ, ಪ್ರಣತಾರ್ತಿಹಾ - ಭಕ್ತರ ಕಷ್ಟಗಳನ್ನು ನೀಗಿಸುವ, ಭಗವಾನ್ - ಭಗವಂತನು, ತ್ವಯಾ - ನಿನ್ನಿಂದ, ಅಭ್ಯರ್ಚಿತಃ - ಪೂಜಿಸಲ್ಪಟ್ಟನು, ನೂನಂ - ದಿಟವು ॥೪೨॥ ಏವಂ - ಇಂತು, ಜನೈಃ - ಜನರಿಂದ, ಲಾಲ್ಯಮಾನಂ - ಹೊಗಳಲ್ಪಡುವ, ಸಭ್ರಾತರಂ - ತಮ್ಮನಿಂದ ಕೂಡಿದ, ಧ್ರುವಂ - ಧ್ರುವನನ್ನು, ನೃಪಃ - ರಾಜನು, ಕರಿಣೀಂ - ಆನೆಯ ಮೇಲೆ, ಆರೋಪ್ಯ - ಕುಳ್ಳಿರಿಸಿ, ಹೃಷ್ಟಃ - ಸಂತುಷ್ಟನಾಗಿ, ಜನೈಃ - ಜನರಿಂದ, ಸ್ತೂಯಮಾನಃ - ಕೊಂಡಾಡಲ್ಪಡುತ್ತಾ, ಪುರಂ - ಪಟ್ಟ

ಸುರಿಯುತ್ತಿರುವ ಆನಂದ ಬಾಷ್ಪಗಳಿಂದ ಅಭಿಷೇಕಗೊಂಡ ಆಕೆಯ ಸ್ತನಮಂಡಲದಿಂದ ಹಾಲು ಸುರಿಯಿತು ॥೪೦॥ ಸುತ್ತಮುತ್ತಣ ಜನರೆಲ್ಲರೂ ಅಮ್ಮಾ ವೀರಮಾತೆಯೆ! ಹೆಸರು ಕೂಡ ಮರೆತುಹೋಗುವಂತೆ ಬಹುಕಾಲವಾಗಿ ಹೋಗಿದ್ದ ನಿನ್ನ ಕುಮಾರನು ದೈವಯೋಗದಿಂದ ಸಾರ್ವಭೌಮಪದವಿಯನ್ನು ಪಡೆದು ಹಿಂದಿರುಗಿ ಬಂದು ನಿನ್ನ ದಂಮುಗವನ್ನು ಕುಂದಿಸಿದನಲ್ಲಾ! ನೀನೆಷ್ಟು ಭಾಗ್ಯವತಿಯೋ! ॥೪೧॥ ಯಾವ ಭಗವಂತನನ್ನು ಆರಾಧಿಸಿದವರು ಎಂತಹ ದುರ್ಜಯವಾದ ಮೃತ್ಯುವನ್ನೂ ಜಯಿಸುವರೋ, ಭಕ್ತರ ಆಪತ್ತುಗಳನ್ನು ಕಳೆಯುವ ಆ ಭಗವಂತನನ್ನು ನೀನು ಚೆನ್ನಾಗಿ ಆರಾಧಿಸಿದೆ. ಆದುದರಿಂದಲೇ ನಿನ್ನ ಮಗನು ಸುರಕ್ಷಿತನಾಗಿ ಬಂದನು ॥೪೨॥ ಎಂದು ಕೊಂಡಾಡುತ್ತಿರಲು, ಉತ್ತಾನಪಾದರಾಜನು ಜನರಿಂದ ಹೊಗಳಿಸಿಕೊಳ್ಳುತ್ತಿರುವ, ತಮ್ಮನಾದ ಉತ್ತಮನಿಂದೊಡಗೂಡಿದ ಧ್ರುವಕುಮಾರನನ್ನು, ಆನೆಯಮೇಲೆ ಕುಳ್ಳಿರಿಸಿ, ವಂದಿಮಾಗಧಾದಿಗಳಿಂದ ಕೈವಾರಗೊಳ್ಳ

ವಿಶತ್ಪುರಂ ॥೫೩॥ ತತ್ರತತ್ರೋಪಸಂಕ್ಲೃಪ್ತೈರ್ಲಸನ್ಮಕರ ತೋರಣೈಃ ।
ಸವೃಂತೈಃ ಕದಳೀಸ್ತಂಭೈಃ ಪೂಗಪೋತೈಶ್ಚ ತದ್ವಿಧೈಃ ॥೫೪॥ ಚೂತಪಲ್ಲವವಾಸಸ್ಸ್ರಙ್ಮುಕ್ತಾದಾಮ ವಿಲಂಬಿಭಿಃ । ಉಪಸ್ಕೃತಂ ಪ್ರತಿದ್ವಾರಮಪಾಂ ಕುಂಭೈಸ್ಸದೀಪಕೈಃ ॥೫೫॥ ಪ್ರಾಕಾರೈರ್ಗೋಪುರಾಗಾರೈಶ್ಶಾತಕುಂಭಪರಿಚ್ಛದೈಃ । ಸರ್ವತೋಽಲಂಕೃತಂ ಶ್ರೀಮದ್ವಿಮಾನ ಶಿಖರದ್ಯುಭಿಃ ॥೫೬॥ ಮೃಷ್ಟಚತ್ವರ ರಥ್ಯಾಟ್ಟಮಾರ್ಗಂ ಚಂದನ ಚರ್ಚಿತಂ । ಲಾಜಾಕ್ಷತೈಃ ಪುಷ್ಪಫಲೈಸ್ತಂಡುಲೈರ್ಬಲಿಭಿರ್ಯುತಂ ॥೫೭॥

---

ಣವನ್ನು, ಅವಿಶತ್ - ಹೊಕ್ಕನು ॥೫೩॥ ತತ್ರತತ್ರ - ಅಲ್ಲಲ್ಲಿ, ಉಪಸಂಕ್ಲೃಪ್ತೈಃ-ಮಾಡಲ್ಪಟ್ಟ, ಲಸನ್ಮಕರತೋರಣೈಃ - ಹೊಳೆಯುವ ಮಕರತೋರಣಗಳಿಂದಲೂ, ಸವೃಂತೈಃ - ಗೊನೆಗಳಿಂದ ಕೂಡಿದ, ಕದಳೀಸ್ತಂಭೈಃ - ಬಾಳೇಗಿಡಗಳಿಂದಲೂ, ತದ್ವಿಧೈಃ - ಅಂತಹ, ಪೂಗಪೋತೈಶ್ಚ - ಎಳೆ ಅಡಕೆ ಗಿಡಗಳಿಂದಲೂ ॥೫೪॥ ಚೂತ...ಭಿಃ - ಮಾವಿನ ಚಿಗುರು, ವಸ್ತ್ರದ ಹೂಮಾಲೆ, ಮುತ್ತಿನಹಾರ, ಇವುಗಳಿಂದ, ವಿಲಂಬಿಭಿಃ - ಅಲಂಕರಿಸಲ್ಪಟ್ಟ, ಸದೀಪಕೈಃ - ದೀಪಗಳಿಂದೊಡಗೂಡಿದ, ಅಪಾಂಕುಂಭೈಃ - ಜಲಕುಂಭಗಳಿಂದಲೂ, ಪ್ರತಿದ್ವಾರಂ - ಮನೆಮನೆಯ ಬಾಗಿಲಲ್ಲಿಯೂ, ಉಪಸ್ಕೃತಂ-ಅಲಂಕರಿಸಲ್ಪಟ್ಟ ॥೫೫॥ ಶಾತ...ದೈಃ-ಚಿನ್ನದ ಅಲಂಕಾರವುಳ್ಳ, ಶ್ರೀಮ...ಭಿಃ - ಕಾಂತಿಯುಕ್ತಗಳಾದ, ವಿಮಾನಾಗ್ರಭಾಗದಂತೆ ಕಾಂತಿಯುಳ್ಳ, ಪ್ರಾಕಾರೈಃ - ಕೋಟೆಗಳಿಂದಲೂ, ಸರ್ವತಃ - ಎಲ್ಲೆಡೆಗಳಲ್ಲಿಯೂ, ಅಲಂಕೃತಂ-ಅಲಂಕರಿಸಲ್ಪಟ್ಟ ॥೫೬॥ ಮೃಷ್ಟ...ರ್ಗಂ, ಮೃಷ್ಟ - ಗುಡಿಸಲ್ಪಟ್ಟ, ಚತ್ವರ - ಚೌಕಗಳು, ರಥ್ಯ - ರಾಜಮಾರ್ಗಗಳೂ, ಅಟ್ಟ - ಕೋಟೆದೆನೆಗಳು, ಮಾರ್ಗಂ - ಇತರ ಮಾರ್ಗಗಳುಳ್ಳ, ಚಂದನಚರ್ಚಿತಂ - ಗಂಧೋದಕದಿಂದ, ಸಾರಿಸಲ್ಪಟ್ಟ, ಲಾಜಾಕ್ಷತೈಃ - ಅರಳು, ಅಕ್ಷತೆ ಇವುಗಳಿಂದಲೂ, ಪುಷ್ಪಫಲೈಃ - ಪುಷ್ಪಗಳಿಂದಲೂ, ತಂಡುಲೈಃ - ತಂಡುಲಗಳಿಂದಲೂ, ಬಲಿಭಿಃ - ಇತರ ಅಲಂಕಾರಗಳಿಂದ, ಯುತಂ - ಕೂಡಿರುವ ॥೫೭॥

---

ಸುತ್ತಾ ಸಂತೋಷದಿಂದ ತನ್ನ ನಗರಿಗೆ ಕರೆದುಕೊಂಡು ಹೋದನು ॥೫೩॥ ಆ ಪಟ್ಟಣಿಗರೆಲ್ಲರೂ ಧ್ರುವಕುಮಾರನು ನಗರಪ್ರವೇಶಮಾಡುವನೆಂದು ಸಂತೋಷದಿಂದ ಅಡಿಗಡಿಗೂ, ಗೊನೆಗಳಿಂದ ಕೂಡಿದ ಬಾಳೆಗಂಬಗಳನ್ನೂ, ಎಳೆದಾದ ಅಡಕೆಯ ಸಸಿಗಳನ್ನೂ ನಿಲ್ಲಿಸಿ, ಮಕರಾಕೃತಿಯಿಂದ ಹೊಳೆಯುವ ತೋರಣಗಳನ್ನು ಬಿಗಿದಿದ್ದರು. ಮನೆಮನೆಯ ಬಾಗಿಲಲ್ಲಿಯೂ ಮಾವಿನ ಚಿಗುರುಗಳನ್ನು ಬಿಗಿದು, ಅಂದವಾದ ವಸ್ತ್ರಗಳನ್ನು ಹಾಸಿ, ಹೂಗಳಿಂದ ಸಿಂಗರಿಸಿ, ದೀಪಗಳನ್ನು ಬೆಳಗಿಸಿ, ಪೂರ್ಣಕುಂಭಗಳನ್ನು ಇಟ್ಟಿದ್ದರು ॥೫೪-೫೫॥ ಕೋಟೆಕೊತ್ತಲಗಳಲ್ಲಿಯೂ, ಹೆಬ್ಬಾಗಿಲುಗಳಲ್ಲಿಯೂ, ಬಗೆಬಗೆಯಾದ ಚಿನ್ನದ ಕೆಲಸಗಳನ್ನು ಮಾಡಿದ್ದರು. ಅಲ್ಲಿಯ ಮನೆಗಳಲ್ಲವೂ ವಿವಿಧಾಲಂಕಾರಗಳಿಂದ ವಿಮಾನಪಙ್ಕ್ತಿಯಂತೊಪ್ಪುತ್ತಿದ್ದುವು ॥೫೬॥ ಹೆದ್ದಾರಿಗಳನ್ನೂ, ಚೌಕಗಳನ್ನೂ, ಕೋಟೆದೆನೆಗಳನ್ನೂ, ಎಲ್ಲೆಡೆಗಳನ್ನೂ ಚೊಕ್ಕಟವಾಗಿ ಗುಡಿಸಿ, ಗಂಧೋದಕದಿಂದ ಸಾರಿಸಿ, ಲಾಜಾಕ್ಷತೆಗಳಿಂದಲೂ, ತಂಡುಲಗಳಿಂದಲೂ, ಹೂಗಳಿಂದಲೂ, ಫಲಗಳಿಂದಲೂ ಅಲಂಕರಿಸಿದ್ದರು ॥೫೭॥ ಇಂತು

ಧ್ರುವಾಯ ಪಥಿ ದೃಷ್ಟಾಯ ತತ್ರತತ್ರ ಪುರಸ್ತ್ರಿಯಃ । ಸಿದ್ಧಾರ್ಥಾಽಕ್ಷತ
ದಧ್ಯಂಬು ದೂರ್ವಾಪುಷ್ಪಫಲಾನಿಚ ॥ ೫೮ ॥ ಉಪಜಹ್ರುಃ ಪ್ರಯುಂಜಾನಾ
ವಾತ್ಸಲ್ಯಾ ದಾಶಿಷ ಸ್ಸತೀಃ । ಶೃಣ್ವಂ ಸ್ತದ್ವಲ್ಗು ಗೀತಾನಿ ಪ್ರಾವಿಶ ದ್ಭವನಂ
ಪಿತುಃ ॥೫೯॥ ಮಹಾಮಣಿವ್ರಾತಮಯೇ ತಸ್ಮಿನ್ ಸಭವನೋತ್ತಮೇ ।
ಲಾಲಿತೋ ಽ ತಿತರಾಂ ಪಿತ್ರಾ ನ್ಯವಸ ದ್ದಿವಿ ದೇವವತ್ ॥೬೦॥ ಪಯಃ
ಫೇನನಿಭಾ ಶ್ಶಯಾ ದಾಂತರುಕ್ಮಪರಿಚ್ಛದಾಃ । ಆಸನಾನಿ ಮಹಾರ್ಹಾಣಿ
ಯತ್ರ ರೌಕ್ಮಾ ಉಪಸ್ಕರಾಃ ॥೬೧॥ ಯತ್ರ ಸ್ಫಟಿಕಕುಡ್ಯೇಷು ಮಹಾ

ತತ್ರತತ್ರ - ಅಲ್ಲಲ್ಲಿ, ಸತೀಃ - ಪತಿವ್ರತೆಯರಾದ, ಪುರಸ್ತ್ರಿಯಃ - ಪಟ್ಟಣದ ಮುತ್ತೈದೆಯರು, ಪಥಿ - ದಾರಿಯಲ್ಲಿ, ದೃಷ್ಟಾಯ - ಕಾಣಲ್ಪಟ್ಟ, ಧ್ರುವಾಯ - ಧ್ರುವನಿಗೆ, ವಾತ್ಸಲ್ಯಾತ್ - ಪ್ರೀತಿಯಿಂದ, ಪತೀಃ - ಉತ್ತಮಗಳಾದ, ಆಶಿಷಃ - ಹರಕೆಗಳನ್ನು, ಪ್ರಯುಂಜಾನಾಃ - ಹೇಳುತ್ತಾ, ಸಿದ್ಧಾ...ನಿಚ - ಬಿಳಿಸಾಸುವೆ, ಅಕ್ಷತೆ, ಮೊಸರು, ನೀರು, ಗರಿಕೆ, ಹೂವು, ಹಣ್ಣು, ಇವುಗಳನ್ನು, ಉಪಜಹ್ರುಃ - ಎರಚಿದರು, ತದ್ವ...ನಿ - ಆ ಸ್ತ್ರೀಯರ ಸೊಗಸಾದ ಹಾಡುಗಳನ್ನು, ಶೃಣ್ವನ್ - ಕೇಳುತ್ತಾ, ಪಿತುಃ - ತಂದೆಯ, ಭವನಂ - ಮನೆಯನ್ನು, ಪ್ರಾವಿಶತ್ - ಹೊಕ್ಕನು ॥೫೯॥ ಮಹಾ ..ಯೇ - ಉತ್ತಮ ರತ್ನಮಯವಾದ, ತಸ್ಮಿನ್ - ಆ, ಸ್ವಭವನೋತ್ತಮೇ - ತನ್ನ ಅರಮನೆಯಲ್ಲಿ, ಪಿತ್ರಾ - ತಂದೆಯಿಂದ, ಅತಿತರಾಂ - ಅತ್ಯಂತವಾಗಿ, ಲಾಲಿತಃ - ಆದರಿಸಲ್ಪಟ್ಟವನಾಗಿ, ದಿವಿ - ಸ್ವರ್ಗದಲ್ಲಿ, ದೇವವತ್ - ದೇವಪುರುಷನಂತೆ, ನ್ಯವಸತ್ - ವಾಸಿಸುತ್ತಿದ್ದನು ॥೬೦॥ ಯತ್ರ - ಯಾವ ಮನೆಯಲ್ಲಿ, ಪಯಃ...ಭಾಃ - ಹಾಲಿನ ನೊರೆಗೆ ಸಮಾನಗಳಾದ, ಶಯ್ಯಾಃ - ಹಾಸಿಗೆಗಳು, ದಾಂತ...ದಾಃ - ದಂತದ ಕೆಲಸವುಳ್ಳ ಚಿನ್ನದ ಸಾಮಗ್ರಿಗಳು, ಮಹಾರ್ಹಾಣಿ - ಬಹಳ ಬೆಲೆಯುಳ್ಳ, ಆಸನಾನಿ - ಪೀಠಗಳು, ರೌಕ್ಮಾಃ - ಚಿನ್ನದ, ಉಪಸ್ಕರಾಃ - ಸಲಕರಣೆಗಳೂ, ಇರುವುವೋ ॥೬೧॥ ಯತ್ರ - ಯಾವ ಮನೆಯಲ್ಲಿ, ಮಹಾಮರಕತೇಷು - ಮರಕತ ಮಣಿಗಳಿಂದ

ಉತ್ಸವದಿಂದ ಬರುತ್ತಿರುವಾಗ, ಆ ಪುರಾಂಗನೆಯರು ಅಲ್ಲಲ್ಲಿನಿಂದು, ಧ್ರುವಕುಮಾರನು ಬಳಿಗೆ ಬಿಜಮಾಡಿದ ಕೂಡಲೆ, ಪ್ರೇಮರಸವುಕ್ಕಿ ಶುಭಕರಗಳಾದ ಹರಕೆಗಳನ್ನು ಮಾಡುತ್ತಾ, ಬಿಳೀಸಾಸುವೆ, ಮಂತ್ರಾಕ್ಷತೆ, ಮೊಸರು, ನೀರು, ಗರಕೆ, ಹೂವು, ಹಣ್ಣು ಮೊದಲಾದ ಮಂಗಳದ್ರವ್ಯಗಳನ್ನೆರಚುತ್ತಾ, ಇಂಪಾದ ಗೀತಗಳನ್ನು ಹಾಡಿದರು. ರಾಜಪುತ್ರನು ಅವರ ಹೃದಯಂಗಮಗಳಾದ ಮಂಗಳ ಗೀತಗಳನ್ನು ಕೇಳುತ್ತಾ, ತನ್ನ ತಂದೆಯರಮನೆಗೆ ತೆರಳಿದನು ॥೫೯॥ ಆ ಅರಮನೆಯಲ್ಲಿ ದಂತದ ಚಿತ್ರಕೆಲಸಗಳಿಂದ ಕಾಂತವಾಗಿ, ಬಂಗಾರದ ಸಲಕರಣಗಳಿಂದ ಕಂಗೊಳಿಸುತ್ತಾ, ಹಾಲಿನ ನೊರೆಯಂತೆ ಮೆರೆಯುವ ನೂರಾರು ಹಾಸಿಗೆಗಳೊಪ್ಪುತ್ತಿದ್ದುವು ॥ ಮರಕತಮಣಿಗಳಿಂದ ಚಿತ್ರಿತವಾದ ಸ್ಫಟಿಕದ ಗೋಡೆಗಳಲ್ಲಿ ಕೆತ್ತಿರುವ ರತ್ನಮಯಗಳಾದ ಹೆಣ್ಣುಗೊಂಬೆಗಳ ಕೈಗಳಲ್ಲಿ ಸಾವಿರಾರು ಮಣಿದೀಪಗಳು ಬೆಳಗುತ್ತಿದ್ದುವು. ಅರಮನೆಯಸುತ್ತಲೂ, ಕಿಲಕಿಲಧ್ವನಿಯಿಂದ ಕಲಕಲವನ್ನು ಮಾಡುತ್ತಿರುವ ಪಕ್ಷಿದಂಪತಿಗಳಿಂದ ಸೊಂಪಾಗಿಯೂ, ಅಂದವಾಗಿ ಹಾರಾಡುತ್ತಿರುವ ಇಂದಿಂದಿ

ಮರಕತೇಷು ಚ । ಮಣಿಪ್ರದೀಪಾ ಆಭಾಂತಿ ಲಲನಾರತ್ನಸಂಯುತಾಃ ॥
ಉದ್ಯಾನಾನಿ ಚ ರಮ್ಯಾಣಿ ವಿಚಿತ್ರೈ ರಮರದ್ರುಮೈಃ । ಕೂಜದ್ವಿಹಂ
ಗಮಿಥುನೈ ರ್ಗಾಯನ್ಮತ್ತಮಧುವ್ರತೈಃ ॥೬೧॥ ವಾಪ್ಯೋ ವೈಡೂರ್ಯಸೋ
ಪಾನಾಃ ಪದ್ಮೋತ್ಪಲಕುಮುದ್ವತೀಃ । ಹಂಸಕಾರಂಡವಕುಲೈ ರ್ಜುಷ್ಟಾ
ಶ್ಚಕ್ರಾಹ್ವಸಾರಸೈಃ ॥೬೨॥ ಉತ್ತಾನಪಾದೋ ರಾಜರ್ಷಿಃ ಪ್ರಭಾವಂ ತ
ನಯಸ್ಯ ತಂ । ಶ್ರುತ್ವಾ ದೃಷ್ಟ್ವಾಽದ್ಭುತತಮಂ ಪ್ರಪೇದೇ ವಿಸ್ಮಯಂ
ಪರಂ ॥೬೩॥ ವೀಕ್ಷ್ಯೋಢವಯಸಂ ತಂಚ ಪ್ರಕೃತೀನಾಂ ಚ ಸಮ್ಮತಂ ।

---

ಕೂಡಿದ, ಸ್ಫಟಿಕ ಕುಡ್ಯೇಷು-ಸ್ಫಟಿಕದಗೋಡೆಗಳಲ್ಲಿ, ಲಲ...ತಾಃ-ರತ್ನದ ಹೆಣ್ಣುಗೊಂಬೆಗಳಿಂದ ಗೂಡಿದ, ಮಣಿಪ್ರದೀಪಾಃ - ರತ್ನದೀಪಗಳು, ಆಭಾಂತಿ- ಹೊಳೆಯುವುವೋ ॥೬೦॥ ಯತ್ರ - ಎಲ್ಲಿ, ವಿಚಿತ್ರೈಃ - ಹಲವು ಬಗೆಗಳಾದ, ಕೂಜ...ನೈಃ - ಕೂಗುತ್ತಿರುವ ಪಕ್ಷಿದಂಪತಿಗಳುಳ್ಳ, ಗಾಯ...ತೈಃ - ಮದದಿಂದ ಹಾಡುತ್ತಿರುವ ದುಂಬಿಗಳುಳ್ಳ, ಅಮರದ್ರುಮೈಃ - ಕಲ್ಪವೃಕ್ಷಗಳಿಂದ, ರಮ್ಯಾಣಿ - ಮನೋಹರಗಳಾದ, ಉದ್ಯಾನಾನಿ - ಉದ್ಯಾನವನಗಳೂ ॥೬೧॥ ವೈಡೂ....ನಾಃ - ವೈಡೂರ್ಯಮಣಿಗಳ ಮೆಟ್ಟಿಲುಗಳುಳ್ಳ, ಪದ್ಮೋ...ತೀಃ - ತಾವರೆ, ನೈದಿಲೆ, ಬಿಳಿನೈದಿಲೆಗಳುಳ್ಳ, ಹಂಸ...ಲೈಃ - ಹಂಸ, ಕಾರಂಡವಗಳೆಂಬ ಹಕ್ಕಿಗಳ ಗುಂಪುಗಳಿಂದಲೂ, ಚಕ್ರಾ...ಸೈಃ - ಚಕ್ರವಾಕ, ಸಾರಸ ಇವುಗಳಿಂದಲೂ, ಜುಷ್ಟಾಃ - ಕೂಡಿದ, ವಾಪ್ಯಃ - ಕೊಳಗಳೂ ಇರುವುವೋ ॥೬೨॥ ರಾಜರ್ಷಿಃ - ರಾಜರಲ್ಲಿ ಋಷಿಯೆನಿಸುವ, ಉತ್ತಾನಪಾದಃ - ಉತ್ತಾನಪಾದರಾಯನು, ತನಯಸ್ಯ - ಮಗನ, ಅದ್ಭುತತಮಂ - ಅತ್ಯಾಶ್ಚರ್ಯಕರವಾದ, ತಂ ಪ್ರಭಾವಂ - ಆ ಮಹಿಮೆಯನ್ನು, ಶ್ರುತ್ವಾ - ಕೇಳಿ, ದೃಷ್ಟ್ವಾಚ - ಕಂಡು, ಪರಂ - ಅಧಿಕವಾದ, ವಿಸ್ಮಯಂ - ಆಶ್ಚರ್ಯವನ್ನು, ಪ್ರಪೇದೇ - ಹೊಂದಿದನು ॥೬೩॥ ರಾಜಾ - ದೊರೆಯು, ಊಢವಯಸಂ - ಪ್ರಾಪ್ತವಯಸ್ಕನಾದ, ತಂ - ಅವನನ್ನು, ಪ್ರಕೃತೀನಾಂ - ಪ್ರಜೆಗಳಿಗೆ, ಸಮ್ಮತಂ - ಇಷ್ಟನಾದವನನ್ನಾಗಿ,

---

ರಗಳ ಸಂದೋಹದಿಂದ ಸುಂದರವಾಗಿಯೂ ಇರುವ ಪರಿಪರಿಯಾದ ಕಲ್ಪತರುಗಳಿಂದ ಮೆರೆಯುವ ಪೂದೋಟಗಳು ನೋಟಕ್ಕೆ ಮಾಟವಾಗಿದ್ದುವು. ಅಲ್ಲದೆ ವೈಡೂರ್ಯಮಣಿಗಳ ಸೋಪಾನಗಳಿಂದಲೂ, ಕಮಲ, ಕುವಲಯ, ಕುಮುದಾದಿ ಜಲಪುಷ್ಪಗಳಿಂದಲೂ ಲಲಿತವಾಗಿಯೂ, ಹಂಸ, ಕಾರಂಡವ, ಸಾರಸ ಚಕ್ರವಾಕ ಪತತ್ರಿಗಳಿಂದ ವಿಚಿತ್ರವಾಗಿಯೂ ಇರುವ ತಂಗೊಳಗಳು ಕಂಗೊಳಸುತ್ತಿದ್ದುವು. ಇಂತು ದಿವ್ಯ ವೈಭವಗಳಿಂದ ನವ್ಯವೆನಿಸಿರುವ ರಾಜಗೃಹವನ್ನು ಹೊಕ್ಕು, ತಂದೆಯ ಪರಮಪ್ರೀತಿಗೆ ಪಾತ್ರನಾಗಿ, ಸ್ವರ್ಗವಾಸಿಯಾದ ದೇವಪುರುಷನಂತೆ, ಅಸದೃಶಗಳಾದ ರಾಜಭೋಗಗಳನ್ನು ಅನುಭವಿಸುತ್ತಾ ಸುಖವಾಗ ನೆಲಸಿದ್ದನು ॥೬೦-೬೨॥ ರಾಜರ್ಷಿಯಾದ ಉತ್ತಾನಪಾದನು, ತನ್ನ ಮಗನ ಅತ್ಯದ್ಭುತವಾದ ಮಹಿಮೆಯನ್ನು ಕೇಳುತ್ತಲೂ, ಕಣ್ಣಾರನೋಡುತ್ತಲೂ, ಪರಮಾಶ್ಚರ್ಯಗೊಳ್ಳುತ್ತಿದ್ದನು ॥೬೩॥ ಇಂತು ಕೆಲಕಾಲ ಕಳೆಯಲು, ರಾಜನು, ಪ್ರಾಪ್ತವಯಸ್ಕನಾಗಿಯೂ, ಪ್ರಜಾನುರಾಗ ಪಾತ್ರನಾಗಿಯೂ ಇರುವ ಧ್ರುವನಿಗೆ ರಾಜಪಟ್ಟವನ್ನೀವುದೇ ಪ್ರಜೆಗ

ಅನುರಕ್ತ ಪ್ರಜಂ ರಾಜಾ ಧ್ರುವಂ ಚಕ್ರೇ ಭುವಃ ಪತಿಂ ॥೬೬॥ ಆತ್ಮಾನಂ ಚಪ್ರವಯಸ ಮಾಕಲಯ್ಯ ವಿಶಾಂಪತಿಃ । ವನಂ ವಿರಕ್ತಃ ಪ್ರಾತಿಷ್ಠ ದ್ವಿ ಮೃಶನ್ನಾತ್ಮನೋ ಗತಿಂ ॥೬೭॥

— ಇತಿ ನವಮೋಧ್ಯಾಯಃ —

ವೀಕ್ಷ್ಯ - ತಿಳಿದು, ಅನು...ಜಂ - ಪ್ರಜಾನುರಾಗವನ್ನು ಪಡೆದಿರುವ, ಧ್ರುವಂ - ಧ್ರುವನನ್ನು, ಭುವಃ - ಭೂಮಿಗೆ, ಪತಿಂ - ಒಡೆಯನನ್ನಾಗಿ, ಚಕ್ರೇ - ಮಾಡಿದನು ॥೬೬॥ ವಿಶಾಂಪತಿಃ - ರಾಜನು, ಆತ್ಮಾನಂ - ತನ್ನನ್ನು, ಪ್ರವಯಸಂ - ಮುದುಕನನ್ನಾಗಿ, ಆಕಲಯ್ಯ - ನಿಶ್ಚಯಿಸಿ, ಆತ್ಮನಃ - ತನ್ನ, ಗತಿಂ - ದಾರಿಯನ್ನು, ವಿಮೃಶನ್ - ಯೋಚಿಸಿ, ವಿರಕ್ತಃ - ವೈರಾಗ್ಯವನ್ನು ಪಡೆದು, ವನಂ - ಕಾಡಿಗೆ, ಪ್ರಾತಿಷ್ಠತ್ - ಹೊರಟು ಹೋದನು ॥೬೭॥

—ನವಮಾಧ್ಯಾಯಂ ಸಮಾಪ್ತಂ—

ಳಗೆ ಸಮ್ಮತನೆಂದು ತಿಳಿದು, ಆತನಿಗೆ ಸಾಮ್ರಾಜ್ಯ ಪಟ್ಟಾಭಿಷೇಕವನ್ನು ಮಾಡಿದನು ॥೬೬॥ ಬಳಿಕ ತನಗೆ ಮುದಿತನವು ಬಂದುದನ್ನೂ, ತನ್ನ ಮುಂದಣಗತಿಯನ್ನು ಹುಡುಕಬೇಕೆಂಬುದನ್ನೂ ಯೋಚಿಸಿ, ಸರ್ವಸಂಗಗಳನ್ನು ತ್ಯಜಿಸಿ, ವೈರಾಗ್ಯದಿಂದ ಕಾಡಿಗೆ ತೆರಳಿದನು, ಎಂದು ಮೈತ್ರೇಯ ಮುನಿಯು ವಿದುರನಿಗೆ ಹೇಳಿದನೆಂಬಲ್ಲಿಗೆ ಭಾಗವತ ಚಕೋರ ಚಂದ್ರಿಕೆಯೊಳ್

— ಒಂಬತ್ತನೆಯ ಅಧ್ಯಾಯಂ ಮುಗಿದುದು. —

## ಓಂ ನಮಃ ಪರಮಾತ್ಮನೇ

### —ಅಥ ದಶಮೋಽಧ್ಯಾಯಃ—

ಮೈತ್ರೇಯಃ ॥ ಪ್ರಜಾಪತೇರ್ದುಹಿತರಂ ಶಿಶುಮಾರಸ್ಯ ವೈ ಧ್ರುವಃ । ಉಪಯೇಮೇ ಭ್ರಮಿಂ ನಾಮ ತತ್ಸುತೌ ಕಲ್ಪವತ್ಸಕೌ ॥೧॥ ಇಲಾಯಾಮಪಿ ಭಾರ್ಯಾಯಾಂ ವಾಯೋಃ ಪುತ್ರ್ಯಾಂ ಮಹಾಬಲಃ । ಪುತ್ರಮುತ್ಕಲನಾಮಾನಂ ಯೋಷಿದ್ರತ್ನಮಜೀಜನತ್॥ ಉತ್ತಮಸ್ತ್ವಕೃತೋದ್ವಾಹೋ

---

—ದಶಮಾಧ್ಯಾಯಂ—

ಕಂ॥ ದಿತಿಸುತರಿಂ ತನ್ನನುಜಂ । ಹತನಾದುದ ಶೂರನಾ ಧ್ರುವರಾಜಂ ।
ಖತಿಯಿಂ ದಲಕಾವತಿಗೈ । ದುತೆ ದನುಜರತರಿದ ಪರಿಯನೊರೆದಪುದೀಗಳ್ ॥

ಮೈತ್ರೇಯನು ಹೇಳುತ್ತಾನೆ ಧ್ರುವಃ - ಧ್ರುವನು, ಶಿಶುಮಾರಸ್ಯ - ಶಿಶುಮಾರನೆಂಬ, ಪ್ರಜಾಪತೇಃ- ಬ್ರಹ್ಮನ, ಭ್ರಮಿಂನಾಮ - ಭ್ರಮಿಯೆಂಬ, ದುಹಿತರಂ - ಮಗಳನ್ನು, ಉಪಯೇಮೇ - ಮದುವೆಯಾದನು. ಕಲ್ಪವತ್ಸಕೌ - ಕಲ್ಪ, ವತ್ಸಕ, ರೆಂಬುವರು ತತ್ಸುತೌ - ಆಕೆಯ ಮಕ್ಕಳು, ॥೧॥ ಮಹಾಬಲಃ- ಪರಾಕ್ರಮಶಾಲಿಯಾದ ಧ್ರುವನು, ವಾಯೋಃ - ವಾಯುವಿಗೆ, ಪುತ್ರ್ಯಾಂ - ಮಗಳಾದ, ಭಾರ್ಯಾಯಾಂ - ಹೆಂಡತಿಯಾದ, ಇಲಾಯಾಮಪಿ - ಇಳೆಯಲ್ಲಿಯೂ, ಉತ್ಕಲನಾಮಾನಂ - ಉತ್ಕಲನೆಂದು ಹೆಸರುಳ್ಳ, ಪುತ್ರಂ-ಮಗನನ್ನೂ, ಯೋಷಿದ್ರತ್ನಂಚ-ಒಂದು ಹೆಣ್ಣುಮಗುವನ್ನೂ, ಅಜೀಜನತ್-ಜನಿಯಿಸಿದನು॥

---

## ಹತ್ತನೆಯ ಅಧ್ಯಾಯ.

—ಧ್ರುವನು ಭ್ರಾತೃವಧೆಯನ್ನು ಮಾಡಿದ ಯಕ್ಷರನ್ನು ಸಂಹರಿಸಿದುದು—

ಅನಂತರದಲ್ಲಿ ಮೈತ್ರೇಯಮುನಿಯು ವಿದುರನಿಗೆ ಹೇಳುವುದೆಂತೆಂದರೆ.—ಅಯ್ಯಾ ವಿದುರನೆ ! ತರುವಾಯ ಧ್ರುವಸಾರ್ವಭೌಮನು ಶಿಶುಮಾರನೆಂಬ ಪ್ರಜಾಪತಿಯ ಪುತ್ರಿಯಾದ "ಭ್ರಮಿ' ಎಂಬಾಕೆಯನ್ನು ಮದುವೆಯಾದನು. ಆಕೆಗೆ ಕಲ್ಪ, ವತ್ಸಕರೆಂಬ ಇಬ್ಬರು ಗಂಡುಮಕ್ಕಳಾದರು ॥೧॥ ಅಂತೆಯೇ ಮಹಾಶೂರನಾದ ಧ್ರುವರಾಜನು ವಾಯುಪುತ್ರಿಯಾದ ,,ಇಳಾ,, ಎಂಬವಳನ್ನು ಕೈಹಿಡಿದು ಆಕೆಯಲ್ಲಿ ,,ಉತ್ಕಲ,, ನೆಂಬ ಒಬ್ಬ ಮಗನನ್ನೂ ಒಂದು ಕನ್ಯಾರತ್ನವನ್ನೂ ಪಡೆದನು ॥೨॥ ಉತ್ತಮಕುಮಾರನು ಮದುವೆ

ಮೃಗಯಾಯಾಂ ಬಲೀಯಸಾ । ಹತಃ ಪುಣ್ಯಜನೇನಾಽದ್ರೌ ತನ್ಮಾತಾಽಸ್ಯಗತಿಂ ಗತಾ ॥೩॥ ಧ್ರುವೋ ಭ್ರಾತೃವಧಂ ಶ್ರುತ್ವಾ ಕೋಪಾಽಮರ್ಷಶುಚಾಽರ್ಪಿತಃ । ಜೈತ್ರಂ ಸ್ಯಂದನಮಾಸ್ಥಾಯ ಗತಃ ಪುಣ್ಯಜನಾಲಯಂ ॥೪॥ ಗತ್ವೋದೀಚೀಂ ದಿಶಂ ರಾಜಾ ರುದ್ರಾಽನುಚರಸೇವಿತಾಂ । ದದರ್ಶ ಹಿಮವದ್ದ್ರೋಣ್ಯಾಂ ಪುರೀಂ ಗುಹ್ಯಕಸಂಕುಲಾಂ ॥೫॥ ದಧ್ಮೌ ಶಂಖಂ ಬೃಹದ್ಬಾಹುಃ ಖಂ ದಿಶಶ್ಚಾಽನುನಾದಯನ್ । ಯೇನೋದ್ವಿಗ್ನದೃಶಃ ಕ್ಷತ್ತರುಪದೇವ್ಯೋಽತ್ರಸನ್ ಭೃಶಂ ॥೬॥ ತತೋ ನಿಷ್ಕ್ರಮ್ಯ

ಉತ್ತಮಸ್ತು-ಉತ್ತಮನು, ಅಕೃತೋದ್ವಾಹಃ-ಮದುವೆಯಾಗದೆಯೇ, ಮೃಗಯಾಯಾಂ - ಬೇಟೆಯಲ್ಲಿ, ಬಲೀಯಸಾ-ಬಲವಂತನಾದ, ಪುಣ್ಯಜನೇನ - ರಾಕ್ಷಸನಿಂದ, ಅದ್ರೌ-ಬೆಟ್ಟದಲ್ಲಿ, ಹತಃ-ಕೊಲ್ಲಲ್ಪಟ್ಟನು, ತನ್ಮಾತಾ-ಅವನ ತಾಯಿಯೂ, ಅಸ್ಯ-ಮಗನ, ಗತಿಂ-ಗತಿಯನ್ನು, ಗತಾ-ಹೊಂದಿದಳು ॥೩॥ ಧ್ರುವಃ - ಧ್ರುವನು, ಭ್ರಾತೃವಧಂ-ತಮ್ಮನು ಮಡಿದುದನ್ನು, ಶ್ರುತ್ವಾ-ಕೇಳಿ, ಕೋಪಾ...ತಃ-ಕೋಪದಿಂದಲೂ, ಆತುರದಿಂದಲೂ, ದುಃಖದಿಂದಲೂ ಕೂಡಿ, ಜೈತ್ರಂ-ಜಯಶೀಲವಾದ, ಸ್ಯಂದನಂ-ರಥವನ್ನು, ಆಸ್ಥಾಯ-ಏರಿ, ಪುಣ್ಯಜನಾಲಯಂ-ಯಕ್ಷಲೋಕಕ್ಕೆ, ಗತಃ-ಹೋದನು ॥೪॥ ರಾಜಾ-ಧ್ರುವನು, ರುದ್ರಾ...ತಾಂ-ರುದ್ರಭಟರಿಂದ ಆಶ್ರಯಿಸಲ್ಪಟ್ಟ, ಉದೀಚೀಂದಿಶಂ - ಉತ್ತರದಿಕ್ಕಿಗೆ, ಗತ್ವಾ - ಹೋಗಿ, ಹಿಮವದ್ರೋಣ್ಯಾಂ-ಹಿಮವತ್ಪರ್ವತದ ತಪ್ಪಲಲ್ಲಿ, ಗುಹ್ಯಕಸಂಕುಲಾಂ - ಯಕ್ಷರಿಂದ ತುಂಬಿರುವ, ಪುರೀಂ -ಅಲಕಾವತಿಯನ್ನು, ದದರ್ಶ- ಕಂಡನು ॥೫॥ ಹೇಕ್ಷತ್ತಃ- ಎಲೈ ವಿದುರನೆ ! ಯೇನ - ಯಾವುದರಿಂದ, ಉದ್ವಿಗ್ನದೃಶಃ - ಭಯಗೊಂಡ ಕಣ್ಣುಳ್ಳವರಾಗಿ, ಉಪದೇವ್ಯಃ - ಯಕ್ಷಸ್ತ್ರೀಯರು, ಭೃಶಂ - ಬಹಳವಾಗಿ, ಅತ್ರಸನ್ - ಹೆದರಿದರೋ, ಬೃಹದ್ಬಾಹುಃ - ಪರಾಕ್ರಮವಂತನಾದ ಧ್ರುವನು, ಖಂ-ಅಂತರಿಕ್ಷವನ್ನೂ, ದಿಶಶ್ಚ - ದಿಕ್ಕುಗಳನ್ನೂ, ಅನುನಾದಯನ್ - ಶಬ್ದಗೊಳಿಸುತ್ತಾ, ಶಂಖಂ-ಶಂಖವನ್ನು, ದಧ್ಮೌ - ಮೊಳಗಿಸಿದನು, ॥ ೬ ॥ ತತಃ-ಬಳಿಕ, ಬಲಿನಃ - ಬಲವಂತರಾದ, ಉಪ...ಟಾಃ - ಯಕ್ಷಭಟರು, ತಂನಿನಾದಂ - ಆ ಶಬ್ದವನ್ನು, ಅಸಹಂತಃ- ಸಹಿಸಲಾರದೆ, ನಿಷ್ಕ್ರಮ್ಯ-ಹೊರಗೆ ಬಂದು, ಉ

ಯಾಗುವುದಕ್ಕೆ ಮೊದಲೇ, ಕಾಡಿನಲ್ಲಿ ಬೆಟ್ಟದ ಮೇಲ್ಗಡೆಯಲ್ಲಿ ಬೇಟೆಯಾಡುತ್ತಾ, ಬಲಿಷ್ಠನಾದ ಒಬ್ಬರಾಕ್ಷಸನಿಂದ ಕೊಲ್ಲಲ್ಪಟ್ಟನು. ಆ ಸುದ್ದಿಯನ್ನುಕೇಳಿ ಅವನ ತಾಯಿಯಾದ ಸುರುಚಿಯೂ ಮಗನನ್ನೇ ಹಿಂಬಾಲಿಸಿಳು (ಸತ್ತಳು) ॥೩॥ ಬಳಿಕ ಸಹೋದರನು ಮಡಿದುದನ್ನು ಕೇಳಿ, ಧ್ರುವಚಕ್ರೇಶ್ವರನು ಕೋಪದಿಂದಲೂ, ಆತುರದಿಂದಲೂ, ದುಃಖದಿಂದಲೂ ಒಡಗೂಡಿ, ತತ್ಕ್ಷಣದಲ್ಲಿಯೇ ಜಯಶೀಲವಾದ ತೇರನ್ನೇರಿ, ಯಕ್ಷರಿಗೆ ನೆಲೆಯಾದ ಅಲಕಾವತಿಯ ಕಡೆಗೆ ತೆರಳಿದನು ॥೪॥ ಇಂತು ಬಡಗಣ ದಿಕ್ಕಿಗೆ ಪ್ರಯಾಣಮಾಡಿ ನಡೆಯುತ್ತಾ ಹಿಮಾಲಯದ ತಪ್ಪಲಿಗೆ ತೆರಳಿ, ರುದ್ರಾನುಚರರಿಂದ ಭದ್ರವಾಗಿಯೂ, ಯಕ್ಷರಿಂದ ರಕ್ಷಿತವಾಗಿಯೂ ಇರುವ ಅಲಕಾವತಿಯನ್ನು ಕಂಡನು ॥೫॥ ಕೂಡಲೆ ಮಹಾ ಧೀರನಾದ ಧ್ರುವವೀರನು, ಭೂಮ್ಯಂತರಿಕ್ಷಗಳು ಗುಮ್ಮಡಿಸುವಂತೆ ಶಂಖವನ್ನು ಮೊಳಗಿಸಿದನು. ಆ ಧ್ವನಿಯನ್ನು ಕೇಳಿದೊಡನೆಯೇ ಯಕ್ಷಾಂಗನೆಯರೆಲ್ಲರೂ ಗಾಬರಿಗೊಂಡರು ॥೬॥ ತರುವಾಯ ಮಹಾಶೂರರಾದ ಆ ಯಕ್ಷಭಟರೇ ಆರ್ಭಟವನ್ನು ಸೈರಿ

ಬಲಿನ ಉಪದೇವಮಹಾಭಟಾಃ । ಅಸಹಂತ ಸ್ತಂ ನಿನಾದ ಮಭಿಪೇತು ರುದಾಯುಧಾಃ ॥೭॥ ಸ ತಾ ನಾಪತತೋ ವೀರ ಉಗ್ರಧನ್ವಾ ಮಹಾರಥಃ । ಏಕೈಕಂ ಯುಗಪ ತ್ಸರ್ವಾ ನಹನ್ ಬಾಣೈ ಸ್ತ್ರಿಭಿ ಸ್ತ್ರಿಭಿಃ ॥೮॥ ತೇ ವೈ ಲಲಾಟಲಗ್ನೈ ಸ್ತೈ ರಿಷುಭಿ ಸ್ಸರ್ವ ಏವ ಹಿ । ಮತ್ವಾ ನಿರಸ್ತಮಾತ್ಮಾನ ಮಾಶಂಸನ್ ಕರ್ಮ ತಸ್ಯ ತತ್ ॥೯॥ ತೇಽಪಿ ಚಾಮು ಮಮೃಷ್ಯಂತಃ ಪಾದಸ್ಪರ್ಶ ಮಿವೋರಗಾಃ । ಶನ್ಯೈ ರವಿಧ್ಯನ್ ಯುಗಪ ದ್ದ್ವಿಗುಣಂ ಪ್ರಚಿಕೀರ್ಷವಃ ॥೧೦॥ ತತಃ ಪರಿಘನಿಸ್ತ್ರಿಂಶೈಃ ಪ್ರಾಸಶೂಲಪರಶ್ವಧೈಃ । ಶಕ್ತ್ಯೃ

ದಾಯುಧಾಃ - ಆಯುಧಗಳನ್ನೆತ್ತಿಕೊಂಡು, ಅಭಿಪೇತುಃ - ಯುದ್ಧಕ್ಕೆ ತೊಡಗಿದರು ॥೭॥ ವೀರಃ-ಶೂರನೂ, ಉಗ್ರಧನ್ವಾ - ಕ್ರೂರವಾದ ಧನುಸ್ಸುಳ್ಳವನೂ, ಮಹಾರಥಃ - ಮಹಾರಥಿಕನೂ ಆದ, ಸಃ- ಆ ಧ್ರುವನು, ಆಪತತಃ - ಬರುತ್ತಿರುವ, ತಾನ್ - ಅವರನ್ನು, ಯುಗಪತ್ - ಏಕಕಾಲದಲ್ಲಿಯೇ, ಏಕೈಕಂ- ಒಬ್ಬೊಬ್ಬನನ್ನು, ತ್ರಿಭಿಸ್ತ್ರಿಭಿರ್ಬಾಣೈಃ - ಮೂರುಮೂರು ಬಾಣಗಳಿಂದ, ಸರ್ವಾನ್-ಎಲ್ಲರನ್ನೂ, ಅಹನ್-ಸಂಹರಿಸಿದನು ॥೮॥ ತೇಸರ್ವಏವ - ಅವರೆಲ್ಲರೂ, ಲಲಾಟಲಗ್ನೈಃ - ಹಣೆಯಲ್ಲಿನಟ್ಟ, ತೈರಿಷುಭಿಃ- ಆ ಬಾಣಗಳಿಂದ, ಆತ್ಮಾನಂ - ತಮ್ಮನ್ನು, ನಿರಸ್ತಂ - ಸೋಲಿಸಲ್ಪಟ್ಟವರನ್ನಾಗಿ, ಮತ್ವಾ- ತಿಳಿದು, ತಸ್ಯ-ಅವನ, ತತ್ಕರ್ಮ - ಆ ಕಾರ್ಯವನ್ನು, ಆಶಂಸನ್ - ಹೊಗಳಿದರು ॥೯॥ ತೇಽಪಿಚ- ಅವರೂ, ಉರಗಾಃ-ಸರ್ಪಗಳು, ಪಾದಸ್ಪರ್ಶಮಿವ - ಕಾಲ್ತುಳಿತದಂತೆ, ಅಮುಂ - ಇವನನ್ನು, ಅಮೃಷ್ಯಂತ -ಸಹಿಸದೆ, ದ್ವಿಗುಣಂ-ಎರಡರಷ್ಟು, ಪ್ರಚಿಕೀರ್ಷವಃ-ಮಾಡಲೆಳಸಿ, ಶನ್ಯೈಃ- ಮೆಲ್ಲಗೆ, ಯುಗಪತ್- ಒಮ್ಮೆಯೇ, ಅವಿಧ್ಯನ್ - ಹೊಡೆದರು ॥೧೦॥

ತತಃ - ಬಳಿಕ, ತ್ರಯೋದಶ - ಹದಿಮೂರು, ಅಯುತಾನಿ - ಹತ್ತು ಸಾವಿರ ಯಕ್ಷರು, ಪ್ರಕುಪಿತಾಃ - ಕೋಪಗೊಂಡು, ತತ್ಪ್ರತೀಕರ್ತುಂ - ಅವನಿಗೆ ಬದಲುಮಾಡುವುದಕ್ಕಾಗಿ, ಇಚ್ಛಂತಃ -

ಸಹಿಸಲಾರದೆ ಹೊರಗೆಬಂದು, ತಂತಮ್ಮ ಆಯುಧಗಳನ್ನು ಪಿಡಿದು ಕಾಳಗಕ್ಕೆ ತೊಡಗಿದರು ॥೭॥ ಆಗ ಧನುರ್ವಿದ್ಯಾನಿಪುಣನೂ, ಮಹಾರಥಿಕನೂ, ಶೂರಾಗ್ರೇಸರನೂ ಆದ ಧ್ರುವಮಹಾರಾಜನು ಒಬ್ಬೊಬ್ಬರನ್ನು ಮೂರು ಮೂರು ಬಾಣಗಳಿಂದ ಹೊಡೆಯುತ್ತಾ, ಒಮ್ಮೆಯೇ ಎಲ್ಲರನ್ನೂ ನಿಗ್ರಹಿಸಿದನು ॥೮॥ ಆ ಯಕ್ಷರು ಹಣೆಯಲ್ಲಿ ನಟ್ಟಬಾಣಗಳ ಪೆಟ್ಟನ್ನು ಸೈರಿಸಲಾರದೆ, ಪೆಟ್ಟುಗೊಂಡಿದ್ದರೂ ಜಗಜ್ಜಟ್ಟಿಯಾದ ಆತನ ಪರಾಕ್ರಮವನ್ನು ಕೊಂಡಾಡಿದರು ॥೯॥ ಬಳಿಕ ಅವರೆಲ್ಲರೂ ಕಾಲಿನಿಂದ ಮೆಟ್ಟಲ್ಪಟ್ಟ ಹಾವಿನಂತೆ ತಟ್ಟನೆ ಕೋಪಗೊಂಡು ಒಕ್ಕಟ್ಟಾಗಿ, ಆ ಧ್ರುವನನ್ನು ಮುಮ್ಮಡಿಯಾಗಿ ನೋಯಿಸಬೇಕೆಂದೆಣಿಸಿ, ಆಯುಧಗಳಿಂದ ಹೊಡೆಯತೊಡಗಿದರು ॥೧೦॥ ಆ ಅಲಕಾವತಿಯಲ್ಲಿರುವ ಒಂದು ಲಕ್ಷ ಮೂವತ್ತು ಸಾವಿರ ಮಂದಿ ಯಕ್ಷಭಟರೂ ಸೇರಿ, ಕ್ರುದ್ಧರಾಗಿ ಧ್ರುವನು ಮಾಡಿದುದಕ್ಕೆ ಬದಲು ಮಾಡಬೇಕೆಂದೆಣಿಸಿ, ಪರಿಘ, ಖಡ್ಗ, ನಿಸ್ತ್ರಿಂಶ, ಪ್ರಾಸ, ಶೂಲ, ಗಂಡುಗೊಡಲಿ, ಶಕ್ತಿ, ಋಷ್ಟಿ, ಭುಸುಂಡಿ, ಇವು ಮೊದಲಾದ ಆಯುಧಗಳಿಂದಲೂ, ಚಿತ್ರಗಳಾದ ಹದ್ದಿನರಕ್ಕೆಗಳುಳ್ಳ ಬಾಣಗಳಿಂದಲೂ, ಮಳೆಗರೆಯುತ್ತಾ, ಮೇಘಗಳು ಬಿರುಮಳೆಯಿಂದ ಬೆಟ್ಟವನ್ನು ಮುಸುಕುವಂತೆ, ಸಾರಥಿಯಿಂದಲೂ ರಥದಿಂದಲೂ ಕೂಡಿರುವ

ಷ್ಟಿಭಿ ರ್ಭುಸುಂಡೀಭಿ ಶ್ಚಿತ್ರವಾಜೈ ಶ್ಶರೈರಪಿ ॥ ೧೧ ॥ ಅಭ್ಯವರ್ಷನ್
ಪ್ರಕುಪಿತಾ ಸ್ಸರಥಂ ಸಹಸಾರಥಿಂ । ಇಚ್ಛಂತ ಸ್ತತ್ಪ್ರತೀಕರ್ತು ಮಯು
ತಾನಿ ತ್ರಯೋದಶ ॥೧೨॥ ಔತ್ತಾನಪಾದಿ ಸ್ಸತದಾ ಶಸ್ತ್ರವರ್ಷೇಣ ಭೂರಿ
ಣಾ । ನ ಉಪಾದೃಶ್ಯತ ಛನ್ನ ಆಸಾರೇಣ ಯಥಾ ಗಿರಿಃ ॥೧೩॥ ಹಾಹಾ
ಕಾರ ಸ್ತದೈವಾಸೀ ತ್ಸಿದ್ಧಾನಾಂ ದಿವಿ ಪಶ್ಯತಾಂ । ಹತೋಽಯಂ ಮಾ
ನವ ಸ್ಸೂರ್ಯೋ ಮಗ್ನಃ ಪುಣ್ಯಜನಾರ್ಣವೇ ॥೧೪॥ ನದತ್ಸು ಯಾ
ತುಧಾನೇಷು ಜಯಕಾಶಿಷ್ವಥೋ ಮೃಧೇ । ಉದತಿಷ್ಠ ದ್ರಥ ಸ್ತಸ್ಯ
ನೀಹಾರಾದಿವ ಭಾಸ್ಕರಃ ॥ ೧೫ ॥ ಧನು ರ್ವಿಸ್ಫೂರ್ಜಯ ದ್ದಿವ್ಯಂ

ಖಯಸಿ, ಪರಿಘ, ನಿಸ್ತ್ರಿಂಶ - ಕತ್ತಿ, ಪ್ರಾಸ, ಶೂಲ, ಪರಶ್ವಧ - ಗಂಡುಗೊಡಲಿ, ಶಕ್ತಿ, ಋಷ್ಟಿ ಭುಸುಂಡಿ, ಇವುಗಳಿಂದಲೂ, ಚಿತ್ರವಾಜೈಃ - ವಿಚಿತ್ರಗಳಾದ ರೆಕ್ಕೆಗಳುಳ್ಳ, ಶರೈರಪಿ-ಬಾಣಗಳಿಂದಲೂ, ಸರಥಂ - ರಥದಿಂದ ಕೂಡಿದ, ಸಹಸಾರಥಿಂ - ಸಾರಥಿಯಿಂದ ಕೂಡಿದ ಧ್ರುವನನ್ನು, ಅಭ್ಯವರ್ಷನ್ - ಮಳೆಗರೆದರು. ॥೧೧-೧೨॥ ಸ ಔತ್ತಾನಪಾದಿಃ - ಆ ಧ್ರುವನು, ತದಾ - ಆಗ, ಭೂರಿಣಾ - ಅಧಿಕವಾದ, ಶಸ್ತ್ರವರ್ಷೇಣ - ಬಾಣಗಳ ಮಳೆಯಿಂದ, ಆಸಾರೇಣ - ಮಳೆಯಿಂದ, ಮಹಾಗಿರಿರಿವ - ದೊಡ್ಡ ಬೆಟ್ಟ ದಂತೆ, ಛನ್ನಃ-ಮುಚ್ಚಲ್ಪಟ್ಟು, ನೋಪಾದೃಶ್ಯತ - ಕಾಣಲ್ಪಡಲಿಲ್ಲ ॥೧೩॥ ತದೈವ - ಆಗಲೇ, ದಿವಿ - ಅಂತರಿಕ್ಷದಲ್ಲಿ, ಪಶ್ಯತಾಂ - ನೋಡುವ, ಸಿದ್ಧಾನಾಂ - ಸಿದ್ಧರಲ್ಲಿ, ಅಯಂ-ಮಾನವಃ - ಈ ಮನು ನಂದ ನನಾದ, ಧ್ರುವನೆಂಬ, ಸೂರ್ಯಃ - ಸೂರ್ಯನು, ಪುಣ್ಯ...ವೇ - ಯಕ್ಷರೆಂಬ ಸಮುದ್ರದಲ್ಲಿ, ಮ ಗ್ನಃ - ಮುಳುಗಿದನು, ಹತಃ - ಮಡಿದನು, ಇತಿ - ಎಂದು, ಹಾಹಾಕಾರಃ - ಕೋಲಾಹಲವು, ಆಸೀ ತ್ - ಆಯಿತು, ॥೧೪॥ ಅಥೋ - ಬಳಿಕ, ಮೃಧೇ - ಯುದ್ಧದಲ್ಲಿ, ಜಯಕಾಶಿಷು - ಜಯಶೀಲರಾದ, ಯಾತುಧಾನೇಷು - ರಾಕ್ಷಸರು, ನದತ್ಸು - ಆರ್ಭಟಿಸಲು, ತಸ್ಯ - ಅವನ, ರಥಃ - ರಥವು, ನೀಹಾ ರಾತ್ - ಮಂಜಿನಿಂದ, ಭಾಸ್ಕರ ಇವ - ಸೂರ್ಯನಂತೆ, ಉದತಿಷ್ಠತ್ - ಎದ್ದಿತು ॥೧೫॥ ದಿವ್ಯಂ- ಅದ್ಭುತವಾದ, ಧನುಃ - ಬಿಲ್ಲನ್ನು, ವಿಸ್ಫೂರ್ಜಯನ್ - ಟಂಕಾರಮಾಡುತ್ತಾ, ದ್ವಿಷತಾಂ - ಶತ್ರುಗಳ

ಧ್ರುವರಾಜನನ್ನು ಆಚ್ಛಾದಿಸಿದರು ॥೧೧-೧೨॥ ಆಗ ಉತ್ತಾನಪಾದ ತನಯನಾದ ಧ್ರುವ ವನು, ಬಿರುಮಳೆಯಿಂದ ಮರೆಗೊಂಬ ಬೆಟ್ಟದಂತೆ, ಆದಾನವರ ಬಲವಾದ ಬಾಣಗಳ ಮಳೆಯಿಂದ ಮುಚ್ಚಲ್ಪಟ್ಟನು ॥೧೩॥ ಒಡನೆಯೇ ಗಗನದಲ್ಲಿ ನಿಂತು ಆ ಅದ್ಭುತವಾದ ಕಾ ಳಗವನ್ನು ನೋಡುತ್ತಿದ್ದ ಸಿದ್ಧರೆಲ್ಲರೂ ಹಾಹಾ ! 'ಮನುವಂಶ ತಿಲಕನಾದ ಧ್ರುವನೆಂಬ ಸೂರ್ಯನು ರಾಕ್ಷಸರೆಂಬ ಕಡಲಲ್ಲಿ ಮುಳುಗಿದನಲ್ಲಾ ! ಅಕಟಾ ! ಎಂದು ಗೋಳಾಡ ತೊಡಗಿದರು॥೧೪॥ "ನಾವು ಗೆದ್ದೆವು. ತಾವು ಗೆದ್ದೆವು" ಎಂದು ಬಡಿವಾರ ಬಡಿಯುತ್ತಾ ರಾಕ್ಷ ಸಭಟರೆಲ್ಲರೂ ಕೋಲಾಹಲ ಮಾಡಿದರು. ಇಂತಿರಲಾಗ ಮಿಂಚಿನತಂಡವನ್ನು ಕಂಡರಿಸಿ ಕೊಂಡು ಹೊರಹೊಮ್ಮುವ ಮಾರ್ತಾಂಡ ಮಂಡಲದಂತೆ, ಧ್ರುವರಾಜನ ರಥವು ನಿಮೇಷ ಮಾತ್ರದಲ್ಲಿಯೇ ಹೊರಗೆ ಬಂದುದು ॥೧೫॥ ತರುವಾಯ ಧ್ರುವಮಹಾರಾಜನು, ದಿವ್ಯವಾ ದ ತನ್ನ ಧನುಸ್ಸಿನ ಟಂಕಾರದಿಂದಲೇ ಶಗೆಗಳ ಹೃದಯವನ್ನು ಬಿರಿಯಿಸುತ್ತಾ, ಬಿರು ಗಾಳಿಯು ಮೋಡಗಳ ತಂಡವನ್ನೋಡಿಸುವಂತೆ, ಬಾಣಗಳ ಮಳೆಯಿಂದ, ಆರಾಕ್ಷಸರ ಶ

ದ್ವಿಷತಾಂ ಖೇದ ಮುದ್ವಹನ್ । ಅಸ್ತ್ರೌಘಂ ವ್ಯಧಮ ದ್ಬಾಣೈ ರ್ಘನಾನೀಕ ಮಿವಾನಿಲಃ ।।೧೬।। ತಸ್ಯ ತೇ ಚಾಪನಿರ್ಮುಕ್ತಾ ಭಿತ್ವಾ ವರ್ಮಾಣಿ ರಕ್ಷಸಾಂ । ಕಾಯಾ ನಾವಿವಿಶು ಸ್ತಿಗ್ಮಾ ಗಿರೀ ನಶನಯೋ ಯಥಾ ।।೧೭।। ಭಲ್ಲೈ ಸ್ಸಂಭಿದ್ಯಮಾನಾನಾಂ ಶಿರೋಭಿ ಶ್ಚಾರುಕುಂಡಲೈಃ । ಊರುಭಿ ರ್ಹೇಮತಾಳಾಭೈ ರ್ದೋರ್ಭಿ ರ್ವಲಯವಲ್ಗುಭಿಃ ।। ೧೮ ।। ಹಾರಕೇಯೂರಮುಕುಟೈ ರುಷ್ಣೀಷೈಶ್ಚ ಮಹಾಧನೈಃ । ಆಸ್ತೃತಾ ಸ್ತಾ ರಣಭುವೋ ರೇಜು ರ್ವೀರ ! ಮನೋಹರಾಃ।।೧೯।। ಹತಾವಶಿಷ್ಟಾ ಇತರೇ

ಗ, ಖೇದಂ - ದುಃಖವನ್ನು, ಉದ್ವಹನ್ - ಉಂಟುಮಾಡುತ್ತಾ, ಅನಿಲಃ - ಬಿರುಗಾಳಿಯು, ಘನಾನೀಕಮಿವ - ಮೋಡಗಳ ತಂಡವನ್ನೋಪಾದಿಯಲ್ಲಿ, ಬಾಣೈಃ - ಬಾಣಗಳಿಂದ, ಅಸ್ತ್ರೌಘಂ - ಅಸ್ತ್ರಗಳ ಸಮೂಹವನ್ನು, ವ್ಯಧಮತ್ - ನಾಶಗೊಳಿಸಿದನು ।।೧೬।। ತಸ್ಯ - ಅವನ ಚಾಪನಿರ್ಮುಕ್ತಾಃ - ಬಿಲ್ಲಿನಿಂದ ಬಿಡಲ್ಪಟ್ಟ, ತಿಗ್ಮಾಃ - ಚೂಪಾದ, ತೇ - ಆಬಾಣಗಳು, ಅಶನಯಃ - ಸಿಡಿಲುಗಳು, ಗಿರೀನ್ ಯಥಾ - ಬೆಟ್ಟಗಳನ್ನೋಪಾದಿಯಲ್ಲಿ, ರಕ್ಷಸಾಂ - ರಾಕ್ಷಸರ, ವರ್ಮಾಣಿ - ಕವಚಗಳನ್ನು, ಭಿತ್ವಾ - ಸೀಳಿ, ಕಾಯಾನ್ - ಶರೀರಗಳನ್ನು, ಆವಿವಿಶುಃ - ಹೊಕ್ಕುವು ।।೧೭।। ಹೇವೀರ - ಎಲೈ ಶೂರನಾದ ವಿದುರನೆ ! ಭಲ್ಲೈಃ - ಭಲ್ಲಗಳಿಂದ, ಸಂಭಿದ್ಯಮಾನಾನಾಂ - ಭೇದಿಸಲ್ಪಟ್ಟ ರಾಕ್ಷಸರ, ಚಾರುಕುಂಡಲೈಃ - ಸೊಗಸಾದ ಕಡಕುಗಳುಳ್ಳ, ಶಿರೋಭಿಃ - ತಲೆಗಳಿಂದಲೂ, ಹೇಮತಾಳಾಭೈಃ - ಚಿನ್ನದ ತಾಳೆಮರಗಳಂತಿರುವ, ಊರುಭಿಃ - ತೊಡೆಗಳಿಂದಲೂ, ವಲಯವಲ್ಗುಭಿಃ - ಕಂಕಣಗಳಿಂದ ಮನೋಹರಗಳಾದ, ದೋರ್ಭಿಃ - ತೋಳುಗಳಿಂದಲೂ, ಹಾರ...ಟೈಃ - ಹಾರ, ಬಾಹುಪುರಿ, ಕಿರೀಟ, ಇವುಗಳಿಂದಲೂ, ಮಹಾಧನೈಃ - ಬಹಳ ಬೆಲೆಯುಳ್ಳ, ಉಷ್ಣೀಷೈಃ - ರುಮಾಲುಗಳಿಂದಲೂ, ಆಸ್ತೃತಾಃ - ಹರಡಲ್ಪಟ್ಟ, ತಾಃ ರಣಭುವಃ - ಆಯುದ್ಧಪ್ರದೇಶಗಳು, ಮನೋಹರಾಃ - ಸೊಗಸಾಗಿ, ರೇಜುಃ - ಹೊಳೆಯುತ್ತಿದ್ದುವು ।।೧೮-೧೯।। ಹತಾವಶಿಷ್ಟಾಃ - ಉಳಿದುಳಿದ, ಇತರೇ - ಇತರರಾದ, ರಕ್ಷೋಗಣಾಃ - ರಾಕ್ಷಸಗಣಗಳು, ಕ್ಷತ್ರಿ... ಕೈಃ - ಧ್ರುವನಬಾಣಗಳಿಂದ, ಪ್ರಾಯಃ - ಬಹಳವಾಗಿ, ವಿವೃ...ವಾಃ - ಅಂಗಾಂಗಗಳು ಗಾಯವಾಗಿ, ಮೃಗೇ...ವ - ಸಿಂಹದೊಡನೆ ಸೆಣಸಿದ ಸಲಗಗಳಂತೆ, ರಣಾಜಿರಾತ್ - ಯುದ್ಧಾಂಗಣದಿಂದ, ವಿದು

ಸ್ತ್ರಾಸ್ತ್ರಗಳನ್ನೆಲ್ಲಾ ನಾಶಗೊಳಿಸಿದನು ।।೧೬।। ಅವನಿಂದ ಪ್ರಯೋಗಿಸಲ್ಪಟ್ಟ ತೀಕ್ಷ್ಣಗಳಾದ ಬಾಣಗಳು, ರಾಕ್ಷಸರಕವಚಗಳನ್ನು ಭೇದಿಸಿ, ಬೆಟ್ಟಗಳನ್ನು ಭೇದಿಸುವ ಬರಸಿಡಿಲುಗಳಂತೆ ಅವರಶರೀರಗಳನ್ನು ಹೊಕ್ಕುವು ।।೧೭।। ಅಯ್ಯಾ ವಿದುರನೆ ! ಬಳಿಕ ಧ್ರುವನು ಭಲ್ಲಗಳನ್ನು ಪ್ರಯೋಗಿಸಲು, ಅವುಗಳಿಂದ ಕತ್ತರಿಸಲ್ಪಟ್ಟ ದಾನವಭಟರ ಅಂಗಾಂಗಗಳು ಛಿನ್ನಾಭಿನ್ನಗಳಾಗಿ ಉರುಳಾಡುತಿದ್ದುವು. ರತ್ನಕುಂಡಲಗಳಿಂದ ಮಂಡಿತಗಳಾದ ತಲೆಬುರುಡೆಗಳಿಂದಲೂ, ಚಿನ್ನದ ತಾಳೆಯಮರಗಳಂತೆ ನೀಳವಾದ ತೊಡೆಗಳಿಂದಲೂ, ಕಡಗಗಳಿಂದ ಬೆಡಗುಗೊಂಡಿರುವ ನಿಡುದೋಳುಗಳಿಂದಲೂ, ಬಹುಮೂಲ್ಯಗಳಾದ ಶಿರೋವೇಷ್ಟನಗಳಿಂದಲೂ ನಿಬಿಡವಾಗಿರುವ ಆಯುದ್ಧಾಂಗಣವು ಅತ್ಯಂತರಮಣೀಯ್ಯವಾಗಿ ತೋರುತ್ತಿದ್ದುದು ।।೧೯।। ಆ ಮೇಲೆ ಉಳಿದುಳಿದ ಇತರ ರಾಕ್ಷಸಭಟರು, ಆಧ್ರುವರಾಜನ ಬಾಣಪರಂಪರೆಗಳಿಂದ ನೊಂದುದಲ್ಲದೆ ಅಂಗಾಂಗ ಭಂಗವನ್ನು ಪಡೆದು, ಸಿಂಹದೊಡನೆ ಸೆಣಸಿದ

ರಣಾಽಜಿರಾ ದ್ರಕ್ಷೋಗಣಾಃ ಕ್ಷತ್ರಿಯವರ್ಯಸಾಯಕೈಃ । ಪ್ರಾಯೋ ವಿವೃಕ್ಣಾಽವಯವಾ ವಿದುದ್ರುವು ರ್ಮೃಗೇಂದ್ರ ವಿಕ್ರೀಡಿತ ಯೂಥಪಾಇವ ॥೨೦॥ ಅಪಶ್ಯಮಾನ ಸ್ಸತದಾಽತತಾಯಿನಂ ಮಹಾಮೃಧೇ ಕಂಚನ ಮಾನವೋತ್ತಮಃ । ಪುರೀಂ ದಿದೃಕ್ಷ ನ್ನಪಿ ನಾಽವಿಶ ದ್ದ್ವಿಷಾಂ ನಮಾಯಿನಾಂ ವೇದ ಚಿಕೀರ್ಷಿತಂ ಜನಃ ॥೨೧॥ ಇತಿಬ್ರುವಂ ಶ್ಚಿತ್ರರಥ ಸ್ಸ್ವಸಾರಥಿಂ ಯತ್ತಃ ಪರೇಷಾಂ ಪ್ರತಿಯೋಗಶಂಕಿತಃ । ಶುಶ್ರಾವ ಶಬ್ದಂ ಜಲಧೇ ರಿವೇರಿತಂ ನಭಸ್ವತೋ ದಿಕ್ಷು ರಜೋಽನ್ವದೃಶ್ಯತ ॥೨೨॥ ಕ್ಷಣೇನಾಚ್ಛಾದಿತಂ ವ್ಯೋಮ ಘನಾಽನೀಕೇನ ಸರ್ವತಃ । ವಿಸ್ಫುರತ್ತಟಿತಾ ದಿಕ್ಷು ತ್ರಾಸಯತ್‌ಸ್ತನಯಿತ್ನುನಾ ॥೨೩॥ ವವೃಷೂ ರುಧಿರೌಘಾಸೃಕ್ಪೂಯವಿಣ್ಮೂತ್ರ

---

ದ್ರುವುಃ-ಓಡಿದರು ॥೨೦॥ ಸಮಾನವೋತ್ತಮಃ-ಮನುವಂಶಶ್ರೇಷ್ಠನಾದ ಆ ಧ್ರುವನು, ತದಾ-ಆಗ, ಮಹಾಮೃಧೇ-ದೊಡ್ಡಯುದ್ಧದಲ್ಲಿ, ಕಂಚನ-ಒಬ್ಬನಾದರೂ, ಆತತಾಯಿನಂ-ಆಯುಧಪಾಣಿಯನ್ನು, ಅಪಶ್ಯಮಾನಃ-ಕಾಣದೆ, ದ್ವಿಷಾಂ-ಶತ್ರುಗಳ, ಪುರೀಂ-ಪಟ್ಟಣವನ್ನು, ದಿದೃಕ್ಷನ್ನಪಿ-ನೋಡಲೆಳಸಿದರೂ, ಜನಃ-ಜನವು, ಮಾಯಿನಾಂ-ಮೋಸಗಾರರ, ಚಿಕೀರ್ಷಿತಂ-ತಂತ್ರವನ್ನು, ನವೇದ-ತಿಳಿಯುವುದಿಲ್ಲ, ಎಂದು, ನಾವಿಶತ್-ಪ್ರವೇಶಿಸಲಿಲ್ಲ ॥೨೧॥ ಚಿತ್ರರಥಃ-ಶೂರನಾದ ಧ್ರುವನು, ಸ್ವಸಾರಥಿಂ-ತನ್ನ ಸಾರಥಿಗೆ, ಇತಿ-ಇಂತು, ಬ್ರುವನ್-ಹೇಳುತ್ತಾ, ಪರೇಷಾಂ-ಶತ್ರುಗಳ, ಪ್ರತಿಯೋಗಶಂಕಿತಃ-ಪ್ರತೀಕಾರವನ್ನು ಚಿಂತಿಸುತ್ತಾ, ಯತ್ತಃ-ಎಚ್ಚರವಾಗಿ, ಜಲಧೇರಿವ-ಸಮುದ್ರದಂತೆ, ಈರಿತಂ-ಹೇಳಲ್ಪಟ್ಟ, ಶಬ್ದಂ-ಧ್ವನಿಯನ್ನು, ಶುಶ್ರಾವ-ಕೇಳಿದನು, ಅನು-ಕೂಡಲೇ, ನಭಸ್ವತಃ-ಗಾಳಿಯಿಂದ, ರಜಃ-ಧೂಳಿಯು, ಅದೃಶ್ಯತ-ಕಾಣಲ್ಪಟ್ಟಿತು ॥೨೨॥ ವಿಸ್ಫು...ತಾ-ಹೊಳೆಯುತ್ತಿರುವ ಮಿಂಚುಗಳುಳ್ಳ, ತ್ರಾಸ....ನಾ-ಹೆದರಿಸುವ ಸಿಡಿಲುಗಳುಳ್ಳ, ಘನಾನೀಕೇನ-ಮೋಡಗಳ ತಂಡದಿಂದ, ಸರ್ವತಃ-ಎಲ್ಲೆಲ್ಲಿಯೂ, ಕ್ಷಣೇನ-ಕ್ಷಣಕಾಲದಲ್ಲಿ, ವ್ಯೋಮ-ಆಕಾಶವು, ಆಚ್ಛಾದಿತಂ-ಮುಚ್ಚಲ್ಪಟ್ಟಿತು ॥೨೩॥ ಹೇ ಅನಘ-ಎಲೈ ಸುಕೃತಶಾಲಿಯೆ! ರುಧಿ...ಸಃ-ರಕ್ತ, ಮಾಂಸ, ಕೀವು, ಮಲ, ಮೂತ್ರ, ಕೊಬ್ಬು ಇವು

---

ಸಲಗಗಳಂತೆ ಭಯಗೊಂಡು ರಣಾಂಗಣದಿಂದ ಪಲಾಯನ ಗೈದರು ॥೨೦॥ ಆಗ ಮನುಕುಲ ಲಲಾಮನಾದ ಧ್ರುವರಾಯನು, ಆ ವಿಶಾಲವಾದ ರಣಭೂಮಿಯಲ್ಲಿ ಕೈದುವನ್ನು ಹಿಡಿದು ಕಾದಾಡುವ ಒಬ್ಬ ಭಂಟನನ್ನಾದರೂ ಕಾಣದೆ, ಶತ್ರುಗಳ ವಾಸಸ್ಥಾನವಾದ ಅಲಕಾವತಿಯನ್ನು ನೋಡಬೇಕೆಂಬ ಕೋರಿಕೆಯಿದ್ದರೂ, 'ಮೋಸಗಾರರ ಮರ್ಮವನ್ನು ಬಲ್ಲವರಾರು ?'' ಎಂದು ಯೋಚಿಸಿ ಆ ಶತ್ರುಗಳ ರಾಜಧಾನಿಗೆ ತೆರಳಲಿಲ್ಲ ॥೨೧॥ ಇಂತೆಯೇ ತನ್ನ ಸಾರಥಿಯೊಡನೆ ಯೋಚಿಸುತ್ತಾ, 'ದುರುಳರಾದ ದಾನವರೇನು ಪ್ರತೀಕಾರವನ್ನು ಮಾಡುವರೋ' ಎಂದು ಶಂಕಿಸುತ್ತಾ, ಎಚ್ಚರವಾಗಿ ನೋಡುತ್ತಿರುವಾಗಲೇ, ಪ್ರಳಯಕಾಲದ ಸಮುದ್ರ ದಾರ್ಭಾಟವನ್ನು ಹೋಲುವ ಒಂದು ಶಬ್ದವು ದೂರದಿಂದ ಕೇಳಬಂದುದು. ಒಡನೆಯೇ ದಶದಿಕ್ಕುಗಳಲ್ಲಿಯೂ ಬಿರುಗಾಳಿಯು ಬೀಸತೊಡಗಿ ಧೂಳಿಯು ಹಬ್ಬಿತು ॥೨೨॥ ಕ್ಷಣಕಾಲದಲ್ಲಿಯೇ, ಥಳಥಳಿಸುವಂತೆ ಮಿಂಚುಗಳನ್ನು ಕರೆಯುತ್ತಾ, ಭಯಂಕರಗಳಾದ ಬರಸಿಡಿಲುಗಳಿಂದ ಎದೆ ಬಿರಿಯಿಸುತ್ತಿರುವ ಮೇಘಘಟಗಳು, ಎಲ್ಲ ದಿಕ್ಕುಗಳ

ನೋದಸಃ । ನಿಪೇತುರ್ಗಗನಾದಸ್ಯ ಕಬಂಧಾನ್ಯಗ್ರತೋಽನಘ ! ॥೨೪॥ ತತಃ ಖೇಽದೃಶ್ಯತ ಗಿರಿರ್ನಿಕ್ಷೇಪುಃ ಸ್ಸರ್ವತೋ ದಿಶಂ । ಗದಾಪರಿಘನಿಸ್ತ್ರಿಂಶಮುಸಲಾಃ ಸಾಶ್ಮವರ್ಷಿಣಃ ॥೨೫॥ ಅಹಯೋಽಶನಿನಿಶ್ವಾಸಾ ವಮಂತೋಽಗ್ನಿಂ ರುಷಾಽಕ್ಷಿಭಿಃ । ಅಭ್ಯಧಾವನ್ ಗಜಾ ಮತ್ತಾ ಸಿಂಹವ್ಯಾಘ್ರಾಶ್ಚ ಯೂಥಶಃ ॥೨೬॥ ಸಮುದ್ರ ಊರ್ಮಿಭಿರ್ಭೀಮಃ ಪ್ಲಾವಯನ್ ಸರ್ವತೋ ಭುವಂ । ಆಸಸಾದ ಮಹಾಹ್ರಾದಃ ಕಲ್ಪಾಂತ ಇವ ಭೀಷಣಃ ॥೨೭॥ ಏವಂವಿಧಾನ್ಯನೇಕಾನಿ ತ್ರಾಸನಾನ್ಯಮನಸ್ವಿನಾಂ । ಸಸೃಜುಸ್ತಿಗ್ಮಗತಯ

---

ಗಳನ್ನು, ವವೃಷುಃ - ಮಳೆಗರೆದುವು, ಅಸ್ಯ - ಇವನ, ಅಗ್ರತಃ - ಮುಂದುಗಡೆಯಲ್ಲಿ, ಗಗನಾತ್- ಅಂತರಿಕ್ಷದಿಂದ, ಕಬಂಧಾನಿ - ಮುಂಡಗಳು, ನಿಪೇತುಃ - ಬಿದ್ದುವು ॥೨೪॥ ತತಃ - ಬಳಿಕ, ಖೇ - ಅಂತರಿಕ್ಷದಲ್ಲಿ, ಗಿರಿಃ - ಬೆಟ್ಟವು, ಅದೃಶ್ಯತ - ಕಾಣಲ್ಪಟ್ಟಿತು, ಸರ್ವತೋದಿಶಂ - ಎಲ್ಲಾದಿಕ್ಕುಗಳಲ್ಲಿ ಯೂ, ಸಾಶ್ಮವರ್ಷಿಣಃ - ಕಲ್ಲುಮಳೆಯಿಂದ ಕೂಡಿದ, ಗದಾ...ಲಾಃ - ಗದೆಗಳು, ಪರಿಘಗಳು, ನಿಸ್ತ್ರಿಂಶಗಳು, ನಿಪೇತುಃ - ಬಿದ್ದುವು ॥೨೫॥ ಅಶನಿನಿಶ್ವಾಸಾಃ - ಸಿಡಿಲಿನಂತೆ ಉಸಿರುಬಿಡುವ, ಅಹಯಃ - ಹಾವುಗಳು, ರುಷಾ - ಕೋಪದಿಂದ, ಅಕ್ಷಿಭಿಃ - ಕಣ್ಣುಗಳಿಂದ, ಅಗ್ನಿಂ - ಬೆಂಕಿಯನ್ನು, ವಮಂತಃ- ಕಾರುತ್ತಾ, ಅಭ್ಯಧಾವನ್ - ಅಟ್ಟಿಕೊಂಡು ಬಂದುವು, ಮತ್ತಾಃ - ಮದಿಸಿದ, ಗಜಾಃ - ಆನೆಗಳು, ಸಿಂಹ...ಶ್ಚ - ಸಿಂಹಗಳು, ಹುಲಿಗಳೂ, ಯೂಥಶಃ - ಗುಂಪಾಗಿ, ಅಭ್ಯಧಾವನ್ - ಅಟ್ಟಿಕೊಂಡು ಬಂದುವು ॥೨೬॥ ಊರ್ಮಿಭಿಃ - ಅಲೆಗಳಿಂದ, ಭೀಮಃ - ಭಯಂಕರವಾದ, ಸಮುದ್ರಃ - ಸಮುದ್ರವು, ಸರ್ವತಃ - ಎಲ್ಲೆಲ್ಲಿಯೂ, ಭುವಂ - ಭೂಮಿಯನ್ನು, ಪ್ಲಾವಯನ್ - ಮುಳುಗಿಸುತ್ತಾ, ಕಲ್ಪಾಂತಇವ - ಪ್ರಳಯದಲ್ಲಿಯೋಪಾದಿಯಲ್ಲಿ, ಭೀಷಣಃ - ಭಯಂಕರವಾಗಿ, ಮಹಾಹ್ರಾದಃ - ಆರ್ಭಟಿಸುತ್ತಾ, ಆಸಸಾದ - ಹತ್ತಿರದಲ್ಲಿ ಕಂಡುಬಂದಿತು ॥೨೭॥ ಅಸುರಾಃ - ರಾಕ್ಷಸರು, ಏವಂ ವಿಧಾನಿ - ಈ ರೀತಿಗಳಾದ, ಅಮನಸ್ವಿನಾಂ - ಭೀರುಗಳಿಗೆ, ತ್ರಾಸನಾನಿ - ಭಯಂಕರಗಳಾದ, ಅನೇಕಾನಿ - ಅನೇಕಮಾಯೆಗಳನ್ನು, ತಿಗ್ಮಗತಯಃ ಭಯಂಕರವಾದ ಸ್ವಭಾವವುಳ್ಳ, ಆಸುರ್ಯಾಮಾಯಯಾ - ರಾಕ್ಷಸ ಮಾಯೆಯಿಂದ

---

ಲ್ಲಿಯೂ ಒಡ್ಡು ಮೆರೆಯುತ್ತಾ ಮುಗಿಲನ್ನು ಮುಚ್ಚಿದುವು ॥೨೩॥ ಅಲ್ಲದೆ ರಕ್ತ, ಮಾಂಸ, ಮಲ, ಮೂತ್ರ, ಕೀವು, ಕೊಬ್ಬು ಮೊದಲಾದ ಅಸಹ್ಯವಸ್ತುಗಳನ್ನು ಮಳೆಗರೆದುವು. ಆಧ್ರುವನ ಮುಂದುಗಡೆಯಲ್ಲಿಯೇ, ಅಂತರಿಕ್ಷದಿಂದ ತಪತಪನೆ ತಲೆಯಿಲ್ಲದ ಮುಂಡಗಳು ಬೀಳತೊಡಗಿದುವು ॥೨೪॥ ಆಕಾಶದಲ್ಲಿ, ಬೆಟ್ಟಗಳು, ಕಾಣಬಂದವು ಎಲ್ಲಾ ದಿಕ್ಕುಗಳಿಂದಲೂ, ಕಲ್ಲುಮಳೆಯು ಸುರಿಯುತ್ತಿದ್ದುದಲ್ಲದೆ, ಗದೆಗಳು, ಪರಿಘಗಳು, ಕತ್ತಿಗಳು, ಮುಸಲಗಳು, ಇವು ಮೊದಲಾದ ಭಯಂಕರಾಯುಧಗಳು ಬೀಳುತ್ತಿದ್ದುವು ॥೨೫॥ ಸಿಡಿಲಿನಂತೆ ನಿಟ್ಟುಸಿರುಬಿಡುತ್ತಿರುವ ಹೆಬ್ಬಾವುಗಳು ಕಣ್ಣುಗಳಿಂದ ಕಿಡಿಗಳನ್ನು ಕಾರುತ್ತಾ, ಅಟ್ಟಿಬಂದುವು. ಮದಿಸಿದ ಕಾಡಾನೆಗಳು, ಸಿಂಹಗಳು, ಹುಲಿಗಳು, ಇವುಗಳು ಗುಂಪು ಗುಂಪಾಗಿ ತರುಬಿಕೊಂಡು ಬಂದುವು ॥೨೬॥ ಸಮುದ್ರವು ಅಲೆಗಳಿಂದ ಭಯಂಕರವಾಗಿ, ಎಲ್ಲೆಲ್ಲಿಯೂ ಭೂಮಿಯನ್ನು ಮುಳುಗಿಸುತ್ತಾ ಪ್ರಳಯಪಯೋಧಿಯಂತೆ ಭೋರ್ಗರೆಯುತ್ತಾ ಮೇರೆ ದಾಟಿ ಬಂದಿತು ॥೨೭॥ ಇಂತು ಆರಾಕ್ಷಸರು, ಹೇಡಿಗಳು ಹೆದರುವಂತೆ, ತಮ್ಮ ಮಾಯೆಯಿಂದ ಅನೇಕ

ಆಸುರ್ಯಾ ಮಾಯಯಾ ಽ ಸುರಾಃ ॥೨೮॥ ಧ್ರುವೇ ಪ್ರಯುಕ್ತಾ ಮಸುರೈ
ಸ್ತಾಂ ಮಾಯಾ ಮತಿದುಸ್ತರಾಂ। ನಿಶಾಮ್ಯ ತಸ್ಯ ಮುನಯ ಶ್ಶ ಮಾಶಂಸನ್
ಸಮಾಗತಾಃ ॥೨೯॥ ಮುನಯಃ ॥ ಔತ್ತಾನಪಾದೇ ! ಭಗವಾಂ ಸ್ತವ ಶಾ
ರ್ಙಧನ್ವಾ ದೇವಃ ಕ್ಷಿಣೋ ತ್ವವನತಾರ್ತಿಹರೋ ವಿಪಕ್ಷಾನ್ । ಯನ್ನಾ
ಮಧೇಯ ಮಭಿಧಾಯ ನಿಶಮ್ಯ ಚಾದ್ಧಾ ಲೋಕೋಂಜಸಾ ತರತಿ ದು
ಸ್ತರ ಮಂಗ ! ಮೃತ್ಯುಂ ॥೩೦॥

—ಇತಿ ದಶಮೋಧ್ಯಾಯಃ—

ಸಸೃಜುಃ - ಸೃಷ್ಟಿಸಿದರು ॥೨೮॥ - ಅಸುರೈಃ ರಾಕ್ಷಸರಿಂದ, ಧ್ರುವೇ - ಧ್ರುವನಲ್ಲಿ, ಪ್ರಯುಕ್ತಾಂ -
ಪ್ರಯೋಗಿಸಲ್ಪಟ್ಟ, ಅತಿದುಸ್ತರಾಂ - ಗೆಲ್ಲಲಸಾಧ್ಯವಾದ, ತಾಂಮಾಯಾಂ - ಆ ಮಾಯೆಯನ್ನು, ನಿಶಾ
ಮ್ಯ - ಕಂಡು, ಮುನಯಃ - ಋಷಿಗಳು, ಸಮಾಗತಾಃ - ಬಂದು, ತಸ್ಯ - ಅವನಿಗೆ, ಶಂ - ಸುಖವ
ನ್ನು, ಸಮಾಶಂಸನ್ - ಪ್ರಾರ್ಥಿಸಿದರು ॥೨೯॥ ಹೇಅಂಗ - ಎಲೈ ಪ್ರಿಯನಾದ, ಔತ್ತಾನ ಪಾದೇ - ಧ್ರು
ವನೆ ! ಲೋಕಃ - ಜನವು, ಯನ್ನಾಮಧೇಯಂ - ಯಾವನ ಹೆಸರನ್ನು, ಅಭಿಧಾಯ - ಹೇಳಿ, ನಿಶಮ್ಯ
ಚ - ಕೇಳಿಯು, ಅದ್ಧಾ - ಸಾಕ್ಷಾತ್ತಾಗಿ, ಅಂಜಸಾ - ಬೇಗನೆ, ದುಸ್ತರಂ - ದಾಟಲಶಕ್ಯವಾದ, ಮೃ
ತ್ಯುಂ - ಮೃತ್ಯುವನ್ನು, ತರತಿ - ದಾಟುವುದೋ, ಅಂತಹ, ಭಗವಾನ್ - ಭಗವಂತನಾದ, ದೇವಃ -
ಪ್ರಕಾಶಮಾನನಾದ, ಅವನತಾರ್ತಿಹರಃ - ಭಕ್ತರ ಪಾಪಗಳನ್ನು ಕಳೆಯುವ, ಶಾರ್ಙಧನ್ವಾ - ವಿಷ್ಣು
ವು, ತೇ - ನಿನ್ನ, ವಿಪಕ್ಷಾನ್ - ಶತ್ರುಗಳನ್ನು, ಕ್ಷಿಣೋತು - ನಾಶಗೊಳಿಸಲಿ ॥೩೦॥

—ಇತಿ ದಶಮೋಧ್ಯಾಯಃ—

ಭಯಂಕರಗಳಾದ ಉತ್ಪಾತಗಳನ್ನು ಸೃಜಿಸಿದರು ॥೨೮॥ ಹೀಗೆ ರಾಕ್ಷಸರು ಧ್ರುವಸಾರ್ವ
ಭೌಮನನ್ನು ಹೆದರಿಸುವುದಕ್ಕಾಗಿ ಉತ್ಪಾತಗಳನ್ನು ಸೃಷ್ಟಿಸುತ್ತಿರುವುದನ್ನು ಕಂಡು, ಮ
ಹರ್ಷಿಗಳು ಧ್ರುವನ ಬಳಿಗೆ ಬಂದು, ಆತನಿಗೆ ಸುಖವಾಗಲೆಂದು ಹರಸುತ್ತಾ ॥೨೯॥
ಅಯ್ಯಾ ಧ್ರುವಮಂಡಲೇಶ್ವರನೆ ! ಹೆದರಬೇಡ. ಲೋಕದಲ್ಲಿ ಜನರು ಯಾವ ಭಗವಂತನ
ದಿವ್ಯನಾಮವನ್ನು ಶ್ರವಣ ಮಾಡಿದರೂ, ಪಠನಮಾಡಿದರೂ, ದುಸ್ತರವಾದ ಮೃತ್ಯುಭಯವ
ನ್ನು ದಾಟುವರೋ, ಅಂತಹ ಭಕ್ತಾರ್ತಿಭಂಜನನಾದ ಭಗವಂತನೇ ನಿನ್ನ ಶತ್ರುಗಳನ್ನು
ನಾಶಗೊಳಿಸಿ, ನಿನಗೆ ಜಯವನ್ನು ಕೊಡುವನು. ನೀನು ಹೆದರಬೇಡ, ಎನ್ನುತ್ತಾ ಹರಿಸಿ
ದರೆಂದು, ಮೈತ್ರೇಯಮುನಿಯು ವಿದುರನಿಗೆ ಹೇಳಿದನೆಂಬಲ್ಲಿಗೆ ಭಾಗವತ ಚಕೋರ
ಚಂದ್ರಿಕೆಯೊಳ್

—ಹತ್ತನೆಯ ಅಧ್ಯಾಯಂ ಮುಗಿದುದು—

## ಓಂನಮಃ ಪರಮಾತ್ಮನೇ

### — ಅಥ ಏಕಾದಶೋಽಧ್ಯಾಯಃ —

ಮೈತ್ರೇಯಃ ॥ ನಿಶಮ್ಯ ಗದತಾ ಮೇವ ಮೃಷೀಣಾಂ ಧನುಷಿ ಧ್ರುವಃ ।
ಸಂದಧೇ ಽ ಸ್ತ್ರ ಮುಪಸ್ಪೃಶ್ಯ ಯನ್ನಾರಾಯಣ ನಿರ್ಮಿತಂ ॥೧॥ ಸಂಧೀ
ಯಮಾನ ಏತಸ್ಮಿನ್ ಮಾಯಾ ಗುಹ್ಯಕ ನಿರ್ಮಿತಾಃ । ಕ್ಷಿಪ್ರಂ ವಿನೇಶು
ರ್ವಿದುರ ! ಕ್ಲೇಶಾ ಜ್ಞಾನೋದಯೇ ಯಥಾ॥೨॥ ತಸ್ಯಾರ್ಷಮಸ್ತ್ರಂ ಧನುಷಿ

---

### —ಏಕಾದಶಾಧ್ಯಾಯಂ.—

ಕಂ॥ ದನುಜಕುಲಂ ಮಡಿದುದನಾ । ಮನುಭೂಪತಿ ಕಂಡು ಮೊಮ್ಮನೆಡೆಗೈತರುತಂ ॥
ವಿನಯದೆ ತತ್ವವ ನರುಹು । ತ್ತನುವಿಂ ಧ್ರುವ ನೆಸಪ ಯುದ್ಧಮಂ ನಿಲ್ಲಿಸಿದಂ ॥

ಮೈತ್ರೇಯನು ಹೇಳುತ್ತಾನೆ:—ಧ್ರುವಃ - ಧ್ರುವನು, ಏವಂ-ಇಂತು, ಋಷೀಣಾಂ - ಋಷಿಗಳು ಗದತಾಂ-ಹೇಳುತ್ತಿರಲು, ನಿಶಮ್ಯ-ಕೇಳಿ, ಉಪಸ್ಪೃಶ್ಯ-ಆಚಮನಮಾಡಿ, ಯತ್-ಯಾವುದು, ನಾರಾ... ತಂ - ನಾರಾಯಣನಿಂದ ನಿರ್ಮಿಸಲ್ಪಟ್ಟಿತೊ, ಅಂತಹ, ಅಸ್ತ್ರಂ - ಅಸ್ತ್ರವನ್ನು, ಧನುಷಿ-ಧನುಸ್ಸಿನಲ್ಲಿ, ಸಂದಧೇ-ತೊಟ್ಟನು ॥ ೧ ॥ ಹೇವಿದುರ - ಎಲೈ ವಿದುರನೆ ಏತಸ್ಮಿನ್ - ಈ ನಾರಾಯಣಾಸ್ತ್ರವು, ಸಂಧೀಯಮಾನೇಸತಿ - ತೊಡಲ್ಪಡಲು, ಗುಹ್ಯಕನಿರ್ಮಿತಾಃ - ಯಕ್ಷರಿಂದ ನಿರ್ಮಿತಗಳಾದ, ಮಾಯಾಃ - ಮಾಯೆಗಳು, ಜ್ಞಾನೋದಯೇ - ಜ್ಞಾನವುಂಟಾದಮೇಲೆ, ಕ್ಲೇಶಾಯಥಾ - ಕ್ಲೇಶಗಳಂತೆ, ಕ್ಷಿಪ್ರಂ - ಬೇಗನೆ, ವಿನೇಶುಃ-ಹಾಳಾದುವು ॥ ೨ ॥ ತಸ್ಯ-ಆ ಧ್ರುವನು, ಧನುಷಿ - ಧನುಸ್ಸಿನಲ್ಲಿ, ಆರ್ಷಾಸ್ತ್ರಂ - ನಾರಾಯಣಾಸ್ತ್ರವನ್ನು, ಪ್ರಯುಂಜತಃ - ಪ್ರಯೋಗಿಸಲು, ಸುವರ್ಣಪುಂಖಾಃ - ಚಿನ್ನದ ಅಲಗುಗಳುಳ್ಳ, ಕಲಹಂಸವಾಸಸಃ - ಹಂಸಗಳಂತೆ ರೆಕ್ಕೆಗಳುಳ್ಳ, ಬಾಣಗಳು, ವಿನಿಸ್ರುತಾಃ - ಹೊರಗೆ ಬಂದು, ಭೀಮರವಾಃ-ಭಯಂಕರಧ್ವನಿಗಳುಳ್ಳ, ಶಿಖಂಡಿನಃ - ನವಿಲುಗಳು, ವನಂಯಥಾ -ವನವನ್ನೇಪಾದಿಯಲ್ಲಿ, ದ್ವಿಷದ್ಬಲಂ-

---

### —ಹನ್ನೊಂದನೆಯ ಅಧ್ಯಾಯ—

### —ಮನೂಪದೇಶದಿಂದ ಧ್ರುವನು ಯುದ್ಧವನ್ನು ನಿಲ್ಲಿಸಿದುದು—

ಅನಂತರದಲ್ಲಿ ಮೈತ್ರೇಯನು ವಿದುರನಿಗೆ ಹೇಳುತ್ತಾನೆ, ಅಯ್ಯಾವಿದುರನೆ ! ಇಂತು ಹರಸುತ್ತಿರುವ ಮಹರ್ಷಿಗಳ ನುಡಿಗಳನ್ನು ಕೇಳಿ ಧ್ರುವರಾಯನು, ಆಚಮನಮಾಡಿ ನಾರಾಯಣಮೂರ್ತಿಯಿಂದ ನಿರ್ಮಿತವಾದ ನಾರಾಯಣಾಸ್ತ್ರವನ್ನು ಧನುಸ್ಸಿನಲ್ಲಿ ತೊಟ್ಟನು. ॥೧॥ ಆ ಅಸ್ತ್ರವನ್ನು ತೊಟ್ಟ ಕೂಡಲೇ, ಜ್ಞಾನೋದಯವಾದೊಡನೆಯೇ ಸಂಸಾರದುಃಖಗಳು ತೊಲಗುವಂತೆ, ರಾಕ್ಷಸನಿರ್ಮಿತಗಳಾದ ಆ ಮಾಯೆಗಳೆಲ್ಲವೂ ನಾಶವಾದುವು ॥೨॥ ಅಲ್ಲದೆ ಅವನು ನಾರಾಯಣಾಸ್ತ್ರವನ್ನು ಸಂಧಾನಮಾಡಿ ಬಿಡಲು, ಚಿನ್ನದ ಅಲಗುಗಳಿಂದ ಹೊಳೆಯುತ್ತಾ, ಹಂಸದಗರಿಗಳಿಂದ ಕೂಡಿರುವ ಅನೇಕಬಾಣಗಳು ಅದರಿಂದ ಹೊರಟು,

ಪ್ರಯುಂಜತ ಸ್ಸುವರ್ಣಪುಂಖಾಃ ಕಲಹಂಸವಾಸಸಃ । ವಿನಿಸ್ಸ್ರುತಾ ಆವಿವಿಶು ರ್ದ್ವಿಷದ್ಬಲಂ ಯಥಾವನಂ ಭೀಮರವಾ ಶ್ಶಿಖಂಡಿನಃ ॥೩॥ ತೈ ಸ್ತಿಗ್ಮಧಾರೈಃ ಪ್ರಧನೇ ಶಿಲೀಮುಖೈ ರಿತಸ್ತತಃ ಪುಣ್ಯಜನಾ ಉಪದ್ರುತಾಃ। ತಮಭ್ಯಧಾವನ್ ಕುಪಿತಾ ಉದಾಯುಧಾ ಸ್ಸುಪರ್ಣ ಮುನ್ನದ್ಧಫಣಾ ಇವಾಹಯಃ ॥೪॥ ಸತಾನ್ ಪೃಷತ್ಕೈ ರಭಿಧಾವತೋ ಮೃಧೇ ನಿಕೃತ್ತಬಾಹೂರು ಶಿರೋಧರೋದರಾನ್।ನಿನಾಯ ಲೋಕಂ ಪರ ಮರ್ಕಮಂಡಲಂ ವ್ರಜಂತಿ ನಿರ್ಭಿದ್ಯ ಯ ಮೂರ್ಧ್ವರೇತಸಃ ॥೫॥ ತಾನ್ ಹನ್ಯಮಾನಾ ನಭಿವೀಕ್ಷ್ಯ ಗುಹ್ಯಕಾ ನನಾಗಸ ಶ್ಚಿತ್ರರಥೇನ ಭೂರಿಶಃ । ಔತ್ತಾನಪಾದಿಂ ಕೃಪಯಾ ಪಿತಾಮಹೋ ಮನು ರ್ಜಗಾದೋಪಗತ ಸ್ಸಹರ್ಷಿಭಿಃ ॥೬॥ ಅಲಂ ವತ್ಸಾತಿ

---

ಶತ್ರುಸೈನ್ಯವನ್ನು, ಆವಿವಿಶುಃ-ಹೊಕ್ಕುವು, ॥ ೩ ॥ ಪ್ರಧನೇ - ಯುದ್ಧದಲ್ಲಿ, ತಿಗ್ಮಧಾರೈಃ - ಹರಿತವಾದ ಕೊನೆಯುಳ್ಳ, ತೈಶ್ಶಿಲೀಮುಖೈಃ - ಆ ಬಾಣಗಳಿಂದ, ಉಪದ್ರುತಾಃ - ಹೊಡೆಯಲ್ಪಟ್ಟ, ಪುಣ್ಯಜನಾಃ- ರಾಕ್ಷಸರು, ಕುಪಿತಾಃ - ಕೋಪಗೊಂಡು, ಉದಾಯುಧಾಃ - ಆಯುಧಗಳನ್ನು ಹಿಡಿದು, ಉನ್ನದ್ಧಫಣಾಃ-ಹೆಡೆಯನ್ನೆತ್ತಿದ, ಅಹಯಃಇವ - ಸರ್ಪಗಳಂತೆ, ತಂ-ಆ ಧ್ರುವನನ್ನು, ಇತಸ್ತತಃ - ಎಲ್ಲೆಲ್ಲಿಯೂ, ಅಭ್ಯಧಾವನ್- ಬೆನ್ನಟ್ಟಿದರು ॥ ೪ ॥ ಸಃ-ಆ ಧ್ರುವನು, ಅಭಿಧಾವತಃ - ಎದುರುಬಿದ್ದ, ಪೃಷತ್ಕೈಃ - ಬಾಣಗಳಿಂದ, ನಿಕೃತ್ತ...ರಾನ್-ಕತ್ತರಿಸಲ್ಪಟ್ಟ, ತೋಳು, ತೊಡೆ, ಕೊರಲು, ಹೊಟ್ಟೆಗಳುಳ್ಳ, ತಾನ್-ಅವರನ್ನು, ಮೃಧೇ - ಯುದ್ಧದಲ್ಲಿ, ಊರ್ಧ್ವರೇತಸಃ - ಜಿತೇಂದ್ರಿಯರು, ಅರ್ಕಮಂಡಲಂ-ಸೂರ್ಯಮಂಡಲವನ್ನು, ನಿರ್ಭಿದ್ಯ - ಭೇದಿಸಿ, ಯಂ-ಯಾವಲೋಕವನ್ನು, ವ್ರಜಂತಿ - ಹೊಂದುವರೋ, ಪರಂ-ಉತ್ತಮವಾದ, ತಂಲೋಕಂ - ಆ ಲೋಕಕ್ಕೆ, ನಿನಾಯ - ಕಳುಹಿದನು ॥ ೫ ॥ ಚಿತ್ರರಥೇನ-ಚಿತ್ರವಾದ ರಥಗತಿಯುಳ್ಳ ಧ್ರುವನಿಂದ, ಭೂರಿಶಃ - ಗುಂಪಾಗಿ, ಹನ್ಯಮಾನಾನ್ - ಕೊಲ್ಲಲ್ಪಡುತ್ತಿರುವ, ಅನಾಗಸಃ - ನಿರಪರಾಧಿಗಳಾದ, ತಾನ್- ಆ, ಗುಹ್ಯಕಾನ್ - ಯಕ್ಷರನ್ನು, ಅಭಿವೀಕ್ಷ್ಯ-ಕಂಡು, ಪಿತಾಮಹಃ-ಅಜ್ಜನಾದ, ಮನುಃ - ಮನುವು, ಋಷಿಭಿಸ್ಸಹ - ಋಷಿಗಳೊಡನೆ, ಉಪಗತಃ - ಬಂದು, ಕೃಪ

---

ಭಯಂಕರವಾದ ನಾದವುಳ್ಳ ನವಿಲು ವನವನ್ನು ಹೊಗುವಂತೆ,ಆರ್ಭಟಿಸಿಕೊಂಡು ಶತ್ರುಸೈನ್ಯವನ್ನು ಹೊಕ್ಕುವು ॥೩॥ ಹರಿತವಾದ ತುದಿಗಳುಳ್ಳ ಆಬಾಣಗಳಿಂದ ಪೆಟ್ಟುತಿಂದ ರಾಕ್ಷಸರೆಲ್ಲರೂ ಕ್ರುದ್ಧರಾಗಿ, ತಮ್ಮ ತಮ್ಮ ಆಯುಧಗಳನ್ನು ಧರಿಸಿ, ರೋಷಗೊಂಡ ಹಾವುಗಳು ಹೆಡೆಗಳನ್ನೆತ್ತಿ ಗರುಡನನ್ನು ತರುಬಿಕೊಂಡು ಹೋಗುವಂತೆ, ಧ್ರುವನನ್ನು ಬೆನ್ನಟ್ಟಬಂದರು ॥ ೪ ॥ ಆಗ ಧ್ರುವರಾಯನು, ಎದುರುಬಿದ್ದು ಬರುತ್ತಿರುವ ಆದಾನವರ ತೋಳು, ತೊಡೆ, ಕಂಠ,ಶಿರಸ್ಸು, ಹೊಟ್ಟೆ ಮೊದಲಾದ ಅಂಗಾಂಗಗಳನ್ನುಬಾಣಗಳಿಂದ ಕತ್ತರಿಸಿ, ಜಿತೇಂದ್ರಿಯರಾದ ನೈಷ್ಠಿಕಬ್ರಹ್ಮಚಾರಿಗಳು ಸೂರ್ಯಮಂಡಲವನ್ನು ಭೇದಿಸಿಕೊಂಡು ಯಾವ ಲೋಕಕ್ಕೆ ಹೋಗುವರೋ, ಆ ವೀರಸ್ವರ್ಗಕ್ಕೆ ಅವರನ್ನು ಕಳುಹಿಸಿದನು ॥೫॥ ಇಂತು ಮಹಾ ರಥಿಕನಾದ ಧ್ರುವನು, ನಿರಪರಾಧಿಗಳಾದ ಯಕ್ಷರನ್ನು ಹಿಂಡುಹಿಂಡಾಗಿ ಕೊಲ್ಲುತ್ತಿರುವುದನ್ನು ಕಂಡು, ದಯಾಳುವಾದ ಮನುಚಕ್ರವರ್ತಿಯು ಮಹರ್ಷಿಗಳಿಂದೊಡಗೂಡಿ ಅಲ್ಲಿಗೆ ಬಂದು ಮೊಮ್ಮಗನಾದ ಧ್ರುವನಿಗಿಂತೆಂದನು ॥೬॥ ಎಲೈ

ರೋಷೇಣ ತಮೋದ್ವಾರೇಣ ಪಾಪ್ಮನಾ । ಯೇನ ಪುಣ್ಯಜನಾ ನೇತಾ ನ
ವಧೀಸ್ತ್ವ ಮನಾಗಸಃ ॥೭॥ ನಾಸ್ಮತ್ಕುಲೋಚಿತಂ ತಾತ ! ಕರ್ಮೈತ ತ್ಸ
ದ್ವಿಗರ್ಹಿತಂ । ವಧೋ ಯದುಪದೇವಾನಾ ಮಾರಬ್ಧ ಸ್ತೇಽಕೃತೈನಸಾಂ ॥
ನನ್ವೇಕಸ್ಯಾಽ ಪರಾಧೇನ ಪ್ರಸಂಗಾ ದ್ಬಹವೋ ಹತಾಃ । ಭ್ರಾತು ರ್ವ
ಧಾಽಭಿತಪ್ತೇನ ತ್ವಯಾಂಗ ! ಭ್ರಾತೃವತ್ಸಲ ! ॥೯॥ ನಾಯಂ ಮಾರ್ಗೋ
ಹಿ ಸಾಧೂನಾಂ ಹೃಷೀಕೇಶಾಽನುವರ್ತಿನಾಂ । ಯದಾತ್ಮಾನಂ ಪರಾಗ್ಗೃ
ಹ್ಯ ಪಶುವ ದ್ಭೂತವೈಶಸಂ ॥೧೦॥ ಸರ್ವಭೂತಾತ್ಮಭಾವೇನ ಭೂತಾವಾ
ಸಂ ಹರಿಂ ಭವಾನ್ ।ಆರಾಧ್ಯಾಪ ದುರಾರಾಧ್ಯಂ ವಿಷ್ಣೋ ಸ್ತತ್ಪರಮಂ ಪದಂ॥

ಯಾ-ದಯೆಯಿಂದ, ಔತ್ತಾನಪಾದಿಂ-ಧ್ರುವನನ್ನು ಕುರಿತು, ಜಗಾದ - ಹೇಳಿದನು, ॥೬॥ ವತ್ಸ-ಎಲೈ ಮಗುವೆ ! ತಮೋದ್ವಾರೇಣ - ಅಜ್ಞಾನಕ್ಕೆ ಬಾಗಿಲಾದ, ಪಾಪ್ಮನಾ - ಪಾಪಿಷ್ಠವಾದ, ಅತಿರೋಷೇಣ-ಅಧಿಕರೋಷದಿಂದ, ಅಲಂ-ಸಾಕು, ಯೇನ - ಯಾವುದರಿಂದ, ತ್ವಂ- ನೀನು, ಅನಾಗಸಃ - ನಿರಪರಾಧಿಗಳಾದ, ಏತಾನ್ ಪುಣ್ಯಜನಾನ್ - ಈ ಯಕ್ಷರನ್ನು, ಅವಧೀಃ- ಕೊಂದೆಯೋ ॥೭॥ ತಾತ-ಅಪ್ಪಾ, ಸದ್ವಿಗರ್ಹಿತಂ - ಸಾಧುಗಳಿಂದ ನಿಂದಿತವಾದ, ಏತತ್ಕರ್ಮ-ಈ ಕಾರ್ಯವು, ಅಸ್ಮತ್ಕುಲೋಚಿತಂ- ನಮ್ಮ ಕುಲಕ್ಕೆ ತಕ್ಕುದು, ನ-ಅಲ್ಲ, ತೇ-ನಿನ್ನಿಂದ, ಅಕೃತೈನಸಾಂ - ಅಪರಾಧಮಾಡದ, ಉಪದೇವಾನಾಂ-ಯಕ್ಷರ, ವಧಃ-ಕೊಲೆಯು, ಪ್ರಾರಬ್ಧೋ ಯತ್ - ಪ್ರಾರಂಭಿಸಲ್ಪಟ್ಟಿದಾವುದುಂಟೋ ॥೮॥ ಭ್ರಾತೃವತ್ಸಲ-ಸೋದರಪ್ರೀತಿಯುಳ್ಳ, ಅಂಗ- ಧ್ರುವನೆ ! ಭ್ರಾತುಃ-ತಮ್ಮನ, ವಧ - ಸಂಹಾರದಿಂದ, ಅಭಿತಪ್ತೇನ-ನೊಂದ, ತ್ವಯಾ-ನಿನ್ನಿಂದ, ಏಕಸ್ಯ-ಒಬ್ಬನ, ಅಪರಾಧೇನ-ತಪ್ಪಿತದಿಂದ, ಪ್ರಸಂಗಾತ್-ಸಂಬಂಧದಿಂದ ಬಹವಃ - ಬಹಳಮಂದಿಯು, ಹತಾಃ- ಮಡಿದರು ॥೯॥ ಆತ್ಮಾನಂ - ಶರೀರವನ್ನು, ಪರಾಗ್ಗೃಹ್ಯ-ಆತ್ಮವನ್ನಾಗಿ ತಿಳಿದು, ಪಶುವತ್- ಪಶುಗಳಂತೆ, ಭೂತವೈಶಸಂ - ಭೂತಹಿಂಸೆಯು, ಯತ್-ಯಾವುದುಂಟೋ, ಅಯಂಮಾರ್ಗಃ - ಈ ದಾರಿಯು, ಹೃಷೀಕೇಶಾನುವರ್ತಿನಾಂ - ವಾಸುದೇವನನ್ನನುಸರಿಸಿದ, ಸಾಧುಗಳದು, ನ-ಅಲ್ಲ ॥೧೦॥ ಭವಾನ್ - ಯಾವ ನೀನು, ಸರ್ವ...ನ-ಸಕಲ ಪ್ರಾಣಿಗಳಲ್ಲಿಯೂ ಆತ್ಮದೃಷ್ಟಿಯಿಂದ, ಭೂತಾವಾಸಂ - ಪ್ರಾಣಿಗಳಲ್ಲಿ ಅಂತರ್ಯಾಮಿಯಾದ, ಹರಿಂ - ಭಗವಂತನನ್ನು, ಆರಾ

ಮಗುವೆ ! ಅಜ್ಞಾನಕ್ಕೆ ಬಾಗಿಲೆನಿಸಿ, ಸಕಲಪಾಪಗಳನ್ನು ಸಂಘಟನಗೊಳಿಸುವ, ಅತಿಕೋಪವನ್ನು ಬಿಡು. ನೀಚವಾದ ಈ ಕೋಪಕ್ಕೊಳಗಾಗಿ ನೀನು ನಿರಪರಾಧಿಗಳಾದ ಇಷ್ಟುಮಂದಿ ಯಕ್ಷರನ್ನು ಕೊಂದೆಯಲ್ಲಾ.ಮಗುವೆ! ಸಾಧುಗಳಿಂದ ತಿರಸ್ಕೃತವಾಗಿರುವ ಈ ಕಾರ್ಯವು ನಮ್ಮ ಕುಲಕ್ಕೆ ಉಚಿತವಲ್ಲ. ಅನ್ಯಾಯವಾಗಿ ನಿರಪರಾಧಿಗಳಾದ ಯಕ್ಷರನು ಕೊಲ್ಲುವುದಕ್ಕೆ ಮೊದಲು ಮಾಡಿದೆಯಲ್ಲಾ ! ॥೮॥ ಅಯ್ಯಾ ಭ್ರಾತೃವತ್ಸಲನಾದ ಧ್ರುವನೆ ! ನಿನ್ನತಮ್ಮನಲ್ಲಿರುವ ಪ್ರೀತಿವಿಶೇಷದಿಂದ ದುಃಖಿತನಾಗಿ ಇಂತು ಮಾಡುತ್ತಿರುವೆ. ಆದರೆ ಒಬ್ಬನು ಮಾಡಿದ ಅಪರಾಧಕ್ಕಾಗಿ ಹಲವರನ್ನು ಕೊಲ್ಲಬಹುದೆ ? ॥೯॥ ಶರೀರವನ್ನೇ ಆತ್ಮವನ್ನಾಗಿ ತಿಳಿದು ಪರಸ್ಪರವಾಗಿ ಹಿಂಸಿಸುವ ಪಶುಗಳಂತೆ, ಇಂತು ಪ್ರಾಣಿಹಿಂಸೆಗೆಯ್ಯುವುದು ಭಗವದ್ಭಕ್ತರಾದ ಸಾಧುಗಳ ಮಾರ್ಗವಲ್ಲ॥೧೦॥ ನೀನು ಬಾಲ್ಯದಲ್ಲಿಯೇ ಸರ್ವಭೂತಗಳಲ್ಲಿಯೂ ಆತ್ಮಭಾವನೆಯನ್ನಿಟ್ಟು ಸರ್ವಾತ್ಮಕನಾದ ಪರಮಾತ್ಮನನ್ನು ಆರಾಧಿ

ಸತ್ವಂ ಹರೇ ರನುಧ್ಯಾತ ಸ್ತತ್ಪುಂಸಾ ಮಪಿ ಸಮ್ಮತಃ। ಕಥಂ ತ್ವವದ್ಯಂ ಕೃತವಾ ನನುಶಿಕ್ಷನ್ ಸತಾಂ ವ್ರತಂ ॥೧೨॥ ತಿತಿಕ್ಷಯಾ ಕರುಣಯಾ ಮೈತ್ರ್ಯಾ ಚಾಽಖಿಲಜಂತುಷು । ಸಮತ್ವೇನ ಚ ಸರ್ವಾತ್ಮಾ ಭಗವಾನ್ ಸಂಪ್ರಸೀದತಿ ॥೧೩॥ ಸಂಪ್ರಸನ್ನೇ ಭಗವತಿ ಪುರುಷಃ ಪ್ರಾಕೃತೈ ರ್ಗುಣೈಃ । ವಿಮುಕ್ತೋ ಜೀವನಿರ್ಮುಕ್ತೋ ಬ್ರಹ್ಮನಿರ್ವಾಣ ಮೃಚ್ಛತಿ ॥ ಭೂತೈಃ ಪಂಚಭಿ ರಾರಬ್ಧೈ ರ್ಯೋಷಿತ್ಪುರುಷ ಏವಹಿ। ತಯೋ ರ್ವ್ಯವಾಯಾ ತ್ಸಂಭೂತಿ ರ್ಯೋಷಿ ತ್ಪುರುಷಯೋ ರಿಹ ॥೧೫॥ ಏವಂ ಪ್ರವರ್ತತೇ

---

ಧ್ಯ-ಪೂಜಿಸಿ, ದುರಾರಾಧ್ಯಂ - ಪಡೆಯಲಸಾಧ್ಯವಾದ, ವಿಷ್ಣೋಃ - ವಿಷ್ಣುವಿನ, ತತ್-ಆ, ಪರಮಂ ಪದಂ- ಮೋಕ್ಷಪದವನ್ನು, ಆಪ - ಹೊಂದಿದೆಯೋ ॥ ೧೧ ॥ ಸತ್ವಂ - ಆ ನೀನು, ಹರೇಃ - ಹರಿಯ, ಅನುಧ್ಯಾತಃ - ಹೃದಯದಲ್ಲಿರುವವನೂ, ತತ್ಪುಂಸಾಮಪಿ - ಆತನ ಭಕ್ತರಿಗೂ, ಸಮ್ಮತಃ- ಇಷ್ಟನೂ ಆಗಿ, ಸತಾಂ - ಸಾಧುಗಳ, ವ್ರತಂ - ನಿಯಮವನ್ನು, ಅನುಶಿಕ್ಷನ್ - ಕಲಿತು, ಕಥಂ-ಹೇಗೆ, ಅವದ್ಯಂ-ದುಷ್ಕಾರ್ಯವನ್ನು, ಕೃತವಾನ್ - ಮಾಡಿದೆ ॥ ೧೨ ॥ ತಿತಿಕ್ಷಯಾ - ಸೈರಣೆಯಿಂದಲೂ, ಕರುಣಯಾ - ದಯೆಯಿಂದಲೂ, ಅಖಿಲಜಂತುಷು - ಸಕಲಪ್ರಾಣಿಗಳಲ್ಲಿಯೂ, ಮೈತ್ರ್ಯಾಚ - ಸ್ನೇಹದಿಂದಲೂ, ಸಮತ್ವೇನಚ - ಸಮಬುದ್ಧಿಯಿಂದಲೂ, ಸರ್ವಾತ್ಮಾ - ಸರ್ವಸ್ವರೂಪನಾದ, ಭಗವಾನ್- ಭಗವಂತನು, ಸಂಪ್ರಸೀದತಿ - ಪ್ರಸನ್ನನಾಗುವನು ॥ ೧೩ ॥ ಭಗವತಿ - ಭಗವಂತನು, ಸಂಪ್ರಸನ್ನೇ- ಪ್ರಸನ್ನನಾಗಲು, ಪುರುಷಃ - ಪುರುಷನು, ಪ್ರಾಕೃತೈಃ - ಪ್ರಕೃತಿಸಂಬಂಧಗಳಾದ, ಗುಣೈಃ - ಗುಣಗಳಿಂದ, ವಿಮುಕ್ತಃ - ಬಿಡಲ್ಪಟ್ಟು, ಜೀವನಿರ್ಮುಕ್ತಃ - ಲಿಂಗಶರೀರದಿಂದ ಬಿಡುಗಡೆಯನ್ನು ಪಡೆದು, ನಿರ್ವಾಣಂ - ಸುಖರೂಪವಾದ ಬ್ರಹ್ಮ - ಬ್ರಹ್ಮವನ್ನು, ಋಚ್ಛತಿ - ಹೊಂದುತ್ತಾನೆ ॥ ೧೪ ॥ ಪಂಚಭಿಃ-ಐದು, ಭೂತೈಃ-ಭೂತಗಳಿಂದ, ಆರಬ್ಧೈಃ - ಉಂಟಾದ ದೇಹಗಳಿಂದ, ಯೋಷಿತ್-ಹೆಂಗಸು, ಪುರುಷಏವಹಿ - ಗಂಡಸು, ತಯೋಃ-ಅವರ, ವ್ಯವಾಯಾತ್ - ಸಂಗಮದಿಂದ, ಇಹ-ಈ ಲೋಕದಲ್ಲಿ, ಯೋಷಿತ್ಪುರುಷಯೋಃ-ಸ್ತ್ರೀಪುರುಷರ, ಸಂಭೂತಿಃ-ಉತ್ಪತ್ತಿಯು ॥ ೧೫ ॥

---

ಸಿ ಪುನರಾವೃತ್ತಿ ರಹಿತವಾದ ಪರಮಪದವನ್ನು ಸಂಪಾದಿಸಿರುವೆ ॥೧೧॥ ಇಂತು ನೀನು ನಿರಂತರವೂ ಭಗವದ್ಧ್ಯಾನ ಪರಾಯಣನಾಗಿಯೂ, ಭಾಗವತೋತ್ತಮರಿಗೆ ಸಮ್ಮತನಾಗಿಯೂ, ಸಾಧುಗಳ ನಡತೆಯನ್ನು ಚೆನ್ನಾಗಿ ಕಲಿತವನಾಗಿಯೂ ಇದ್ದರೂ, ಈಗ ಇಂತಹ ದುಷ್ಕಾರ್ಯವನ್ನೆಂತು ಮಾಡಿದೆಯೊ ನಾನರಿಯೆನು ॥೧೨॥ ಅಯ್ಯಾ ಧ್ರುವನೆ! ಸಂಪೂರ್ಣವಾದ ಸೈರಣೆಯನ್ನು ಪಡೆದು ಭೇದಜ್ಞಾನವನ್ನುಳಿದು ಸಕಲಪ್ರಾಣಿಗಳಲ್ಲಿಯೂ ಕನಿಕರವನ್ನಿಟ್ಟು ಸಮಬುದ್ಧಿಯಿಂದ ಮೈತ್ರಿಯನ್ನು ಮಾಡುವ ಪುರುಷನಿಗೆ ಸರ್ವಾತ್ಮಕನಾದ ಭಗವಂತನು ಪ್ರಸನ್ನನಾಗುವನು ॥೧೩॥ ಭಗವಂತನ ಅನುಗ್ರಹವುಂಟಾದ ಕೂಡಲೇ, ಆ ಪುರುಷನು ಪ್ರಕೃತಿ ಸಂಬಂಧಗಳಾದ ಸತ್ವಾದಿಗುಣಗಳಿಂದಲೂ, ಆ ಗುಣಗಳಿಂದುಂಟಾಗಿರುವ ಲಿಂಗಶರೀರದಿಂದಲೂ, ಬಿಡುಗಡೆಯನ್ನು ಪಡೆದು ನಿತ್ಯಾನಂದ ಘನವಾದ ಬ್ರಹ್ಮಾನಂದವನ್ನು ಪಡೆಯುವನು ॥೧೪॥ ಎಲೈ ಮಗುವೆ ! "ತಮ್ಮನನ್ನು ಕೊಂದರು" ಎಂದು ದೇಹಾತ್ಮಭಾವನೆಯಿಂದ ಆಗ್ರಹಗೊಂಡಿರುವ ನಿನಗೆ ಇಲ್ಲಿಯವರೆಗೂ ಲೋಕನ್ಯಾ

ಸರ್ಗಃ ಸ್ಥಿತಿಸ್ಸಂಯಮ ಏವಚ । ಗುಣವ್ಯತಿಕರಾ ದ್ರಾಜನ್ ! ಮಾಯ
ಯಾ ಪರಮಾತ್ಮನಃ ॥೧೬॥ ನಿಮಿತ್ತಮಾತ್ರಂ ತತ್ರಾಸೀ ನ್ನಿರ್ಗುಣಃ ಪುರು
ಷರ್ಷಭಃ । ವ್ಯಕ್ತಾ ಽ ವ್ಯಕ್ತಮಿದಂ ವಿಶ್ವಂ ಯತ್ರ ಭ್ರಮತಿ ಲೋಹವ
ತ್ ॥ ೧೭ ॥ ಸಖಲ್ವಿದಂ ಭಗವಾನ್ ಕಾಲಶಕ್ತ್ಯಾ ಗುಣಪ್ರವಾಹೇಣ
ವಿಭಕ್ತವೀರ್ಯಃ।ಕರೋತ್ಯಕರ್ತೈವ ನಿಹಂತ್ಯಹಂತಾ ಚೇಷ್ಟಾ ವಿಭೂಮ್ನಃ

---

ಹೇರಾಜನ್-ಎಲೈ ರಾಜನೆ!ಪರಮಾತ್ಮನಃ-ಭಗವಂತನ,ಮಾಯಯಾ-ಮಾಯೆಯಿಂದ, ಗುಣವ್ಯತಿಕರಾತ್-ಗುಣಗಳ ಬದಲಾವಣೆಯಿಂದ, ಏವಂ- ಇಂತು, ಸರ್ಗಃ - ಉತ್ಪತ್ತಿಯು, ಸ್ಥಿತಿಃ - ಪಾಲನೆಯು, ಸಂಯಮಏವಚ - ಸಂಹಾರವು, ಪ್ರವರ್ತತೇ - ಉಂಟಾಗುವುದು ॥ ೧೬ ॥ ಯತ್ರ - ಯಾವ ಭಗವಂತನು ನಿಮಿತ್ತವಾದಲ್ಲಿ, ವ್ಯಕ್ತಾವ್ಯಕ್ತಂ - ಸ್ಥೂಲಸೂಕ್ಷ್ಮರೂಪವಾದ, ಇದಂವಿಶ್ವಂ - ಈ ಜಗತ್ತು, ಲೋಹವತ್ - ಸೂಜಿಗಲ್ಲಿನ ಬಳಿಯಲ್ಲಿ ಲೋಹದಂತೆ, ಭ್ರಮತಿ - ಸುತ್ತುವುದೋ, ತತ್ರ - ಆ, ನಿರ್ಗುಣಃ- ಗುಣರಹಿತನಾದ, ಪುರುಷರ್ಷಭಃ - ಪುರುಷೋತ್ತಮನು, ನಿಮಿತ್ತಮಾತ್ರಂ - ಕಾರಣಮಾತ್ರನು, ಆಸೀತ್-ಆದನು ॥ ೧೭ ॥ ಭಗವಾನ್ - ಅಚಿಂತ್ಯಮಹಿಮನಾದ, ಸಃ-ಆ ಭಗವಂತನು, ಕಾಲಶಕ್ತ್ಯಾ-ಕಾಲಶಕ್ತಿಯಿಂದ, ಗುಣಪ್ರವಾಹೇಣ - ಗುಣಗಳ ಪ್ರವಾಹದಿಂದ, ವಿಭಕ್ತವೀರ್ಯಃ - ವಿಭಾಗಮಾಡಲ್ಪಟ್ಟ ಶಕ್ತಿಯುಳ್ಳವನಾಗಿ, ಇದಂ- ಈ ಜಗತ್ತನ್ನು, ಅಕರ್ತೈವ - ಕರ್ತೃತ್ವವಿಲ್ಲದೆಯೇ, ಕರೋತಿ-ಮಾಡುತ್ತಾನೆ, ಅಹಂತಾ - ಕೊಲ್ಲದವನಾಗಿಯೇ, ಹಂತಿ - ಕೊಲ್ಲುತ್ತಾನೆ, ವಿಭೂಮ್ನಃ - ವ್ಯಾಪಕವಾದ

---

ಯಿಂದ ಸಮಾಧಾನಹೇಳಿದೆನು. ಇನ್ನು ತತ್ವವನ್ನು ತಿಳುಹುವೆನು ಕೇಳು. ನಿರ್ಲಿಪ್ತನಾದ ಆತ್ಮನಿಗೆ ಅಣ್ಣ, ತಮ್ಮಂದಿರೆಂಬ ಸಂಬಂಧವಿಲ್ಲ. ಕೊಲ್ಲುವುದು ಕೊಲ್ಲಲ್ಪಡುವುದು ಎಂಬ ವ್ಯವಹಾರವೂ ಇಲ್ಲ. ಶರೀರಾದಿರೂಪದಿಂದ ಪರಿಣಮಿಸಿರುವ ಪಂಚಮಹಾ ಭೂತಗಳೇ ಸ್ತ್ರೀ ಪುರುಷರೆಂದು ಹೆಸರುಗೊಳ್ಳುವುವು. ಇಂತಹ ಸ್ತ್ರೀಪುರುಷರ ಸಂಭೋಗದಿಂದ ಬೇರೇಸ್ತ್ರೀಪುರುಷರ ಉತ್ಪತ್ತಿಯುಂಟಾಗುವುದು ॥ ಅಯ್ಯಾ ರಾಜನೆ ! ಭಗವಂತನ ಮಾಯೆಯಿಂದುಂಟಾಗುವ ಗುಣಗಳ ಬದಲಾವಣೆಯಿಂದ ಈರೀತಿಯಾಗಿ ಪಿತ್ರಾದಿರೂಪದಿಂದ ಉತ್ಪತ್ತಿಯೂ,ರಾಜಾದಿರೂಪದಿಂದ ಪಾಲನವೂ ಘಾತುಕಾದಿರೂಪದಿಂದ ಸಂಹಾರವೂ ನಡೆಯುತ್ತಿರುವುದು ॥ ಪ್ರಾಣಿಗಳಶರೀರಗಳೂ,ಅವುಗಳಿಗೆ ಕಾರಣಗಳಾದಸತ್ವಾದಿಗುಣಗಳೂ ಸಹ ಅಚೇತನಗಳಾದುದರಿಂದ ಇವುಗಳಿಂದುತ್ಪತ್ತಿಮೊದಲಾದುವು ಆಗುವುದೆ?ಎಂಬೆಯೇನೋ.ಸತ್ವಾದಿಗುಣ ವಿಕಾರಗಳಾದ ಈ ಸೃಷ್ಟ್ಯಾದಿಗಳಿಗೆ ಭಗವಂತನು ನಿಮಿತ್ತಮಾತ್ರವೆನಿಸುವನು. ಕಾರ್ಯಕಾರಣಾತ್ಮಕವಾದ ಈ ಜಗತ್ತು ಸೂಜಿಗಲ್ಲಿನ ಬಳಿಯಲ್ಲಿ ನಲಿದಾಡುವ ಲೋಹದಂತೆ ಭಗವಚ್ಛಕ್ತಿಯಿಂದನಡೆಯುತ್ತಿರುವುದು॥೧೭॥ ನಿರ್ವಿಕಾರನಾದ ಭಗವಂತನು ನಿಮಿತ್ತಮಾತ್ರವಾದಲ್ಲಿ ಸೃಷ್ಟಿ, ಸ್ಥಿತಿ, ಸಂಹಾರಗಳು ಮೂರೂ ಒಮ್ಮೆಯೇ ಏತಕ್ಕಾಗಬಾರದು ! ಎಂಬೆಯೇನೊ? ಭಗವಂತನ ಶಕ್ತಿರೂಪವಾದ ಕಾಲದಿಂದ ಕ್ರಮವಾಗಿ ಗುಣಗಳಲ್ಲಿ ಬದಲಾವಣೆಯುಂಟಾಗಿ ಅದರಿಂದ ಸೃಷ್ಟ್ಯಾದಿವಿಷಯವಾದ ಭಗವಚ್ಛಕ್ತಿಯು ವಿಭಾಗಿಸಲ್ಪಡುವುದು. ಆದಕಾರಣ ಒಮ್ಮೆಯೇ ಸೃಷ್ಟ್ಯಾದಿಗಳುಂಟಾಗುವುದಿಲ್ಲ. ಭಗವಚ್ಛಕ್ತಿರೂಪವಾದ ಕಾಲವೂ ಒಮ್ಮೆಯೇ ಗುಣಗಳಲ್ಲಿ ಬದಲಾವಣೆಯನ್ನುಂಟುಮಾಡಲಿ, ಎಂಬೆಯೇನೊ?

ಖಲು ದುರ್ವಿಭಾವ್ಯಾ ॥ ೧೮ ॥ ಸೋಽನಂತೋಽಂತಕರಃ ಕಾಲೋಽನಾದಿ ರಾದಿಕೃ ದವ್ಯಯಃ । ಜನಂ ಜನೇನ ಜನಯನ್ ಮಾರಯನ್ ಮೃತ್ಯುನಾಂತಕಂ ॥೧೯॥ ನವೈ ಸ್ವಪಕ್ಷೋಽಸ್ಯ ವಿಪಕ್ಷ ಏವವಾ ಪರಸ್ಯ ಮೃತ್ಯೋ ರ್ವಿಶತ ಸ್ಸಮಂ ಪ್ರಜಾಃ । ತಂ ಧಾವಮಾನ ಮನುಧಾವಂ ತ್ಯನೀಶಾ ಯಥಾ ರಜಾಂಸ್ಯನಿಲಂ ಭೂತಸಂಘಾಃ ॥೨೦॥ ಆಯುಷೋಽಪಚಯಂ ಜಂತೋ ಸ್ತಥೈವೋಪಚಯಂ ವಿಭುಃ । ಉಭಾಭ್ಯಾಂ ರಹಿತ ಸ್ಸ್ವಸ್ಥಃದು

---

ಕಾಲದ, ಚೇಷ್ಟಾ- ನಡವಳಿಯು, ದುರ್ವಿಭಾವ್ಯಾಖಲು - ತಿಳಿಯತಕ್ಕುದಲ್ಲವಷ್ಟೆ ॥ ೧೮ ॥ ಅನಂತಃ- ನಾಶವಿಲ್ಲದ, ಆದಿಕೃತ್-ಎಲ್ಲವನ್ನೂ ಜನಿಯಿಸುವ, ಅವ್ಯಯಃ - ವಿಕಾರವಿಲ್ಲದ, ಅಂತಕರಃ - ನಾಶಗೊಳಿಸುವ, ಸಕಾಲಃ-ಆ ಕಾಲವು, ಜನೇನ-ಜನದಿಂದ, ಜನಂ - ಜನವನ್ನು, ಜನಯನ್ - ಹುಟ್ಟಿಸುತ್ತಾ, ಮೃತ್ಯುನಾ-ಮೃತ್ಯುವಿನಿಂದ, ಅಂತಕಂ-ಕೊಲ್ಲುವವನನ್ನೂ, ಮಾರಯನ್-ಕೊಲ್ಲಿಸುತ್ತಿರುವನು ॥೧೯॥ ಮೃತ್ಯೋಃ - ಮೃತ್ಯುವಿಗೆ, ಪರಸ್ಯ - ನಿಯಾಮಕನಾದ, ಸಮಂ - ಸಮವಾಗಿ, ಪ್ರಜಾಃ - ಪ್ರಾಣಿಗಳನ್ನು, ವಿಶತಃ-ಹೊಗುವ, ಅಸ್ಯ - ಈ ಕಾಲಕ್ಕೆ, ಸ್ವಪಕ್ಷಃ - ತನ್ನವರಾಗಲಿ, ವಿಪಕ್ಷೋವಾ - ಶತ್ರುಗಳಾಗಲಿ, ನ-ಇಲ್ಲ, ಅನಿಲಂ-ಗಾಳಿಯನ್ನು, ರಜಾಂಸಿಯಥಾ - ಧೂಳಿಗಳಂತೆ, ಅನೀಶಾಃ-ಅಸಮರ್ಥರಾದ, ಭೂತಸಂಘಾಃ - ಪ್ರಾಣಿಗಳ ಸಮೂಹಗಳು, ಧಾವಮಾನಂ - ಓಡುತ್ತಿರುವ, ತಂ-ಅವನನ್ನು, ಅನುಧಾವಂತಿ-ಹಿಂಬಾಲಿಸುತ್ತಿರುವರು ॥ ೨೦ ॥ ಉಭಾಭ್ಯಾಂ - ನಾಶವೃದ್ಧಿಗಳಿಂದ, ರಹಿತಃ - ಬಿಡಲ್ಪಟ್ಟು, ಸ್ವಸ್ಥಃ - ಸ್ವರೂಪದಲ್ಲಿರುವ, ಅಸೌವಿಭುಃ - ಈ ಭಗವಂತನು, ದುಸ್ಥಸ್ಯ-ಕರ್ಮಾಧೀನನಾದ, ಜಂತೋಃ- ಪ್ರಾಣಿಗೆ, ಆಯುಷಃ - ಆಯುಸ್ಸಿನ, ಅಪಚಯಂ - ನಾಶವನ್ನೂ, ಉಪಚಯಂಚ - ವೃದ್ಧಿಯನ್ನೂ,

---

ಕಾಲಶಕ್ತಿಯೆಂಬುದು ಚಿಸಿರ್ವಚಿಸಲಸಾಧ್ಯವಾಗಿರುವುದರಿಂದ ತಿಳಿಸಲಳವಲ್ಲ. ಇಂತು ಅದ್ಭುತಮಹಿಮನಾದ ಭಗವಂತನು ಕರ್ತೃತ್ವವಿಲ್ಲದೆಯೇ ಸೃಷ್ಟಿಸುತ್ತಾ ಸಂಹಾರಕತ್ವವಿಲ್ಲದೆಯೇ ಜಗತ್ತನ್ನು ಲಯಗೊಳಿಸುತ್ತಿರುವನು ॥೧೮॥ ಅಲ್ಲದೆ ತಾನು ನಾಶರಹಿತನಾಗಿಯೂ ಅಂತವಿಲ್ಲದೆಯೂ ಇದ್ದುಕೊಂಡು, ಪಿತ್ರಾದಿರೂಪರಾದ ಜನರಿಂದ ಪುತ್ರಾದಿಜನರನ್ನು ಸೃಷ್ಟಿಗೊಳಿಸುತ್ತಾ ಘಾತುಕರಾದವರನ್ನು ಮೃತ್ಯುವಿನಿಂದ ಲಯಗೊಳಿಸುತ್ತಾ ನಿರ್ಲಿಪ್ತನಾಗಿರುವನು ॥೧೯॥ ಮೃತ್ಯುವಿಗೆ ಮೃತ್ಯುವೆನಿಸಿ ಸಕಲ ಪ್ರಾಣಿಗಳಲ್ಲಿ ಒಳಹೊಕ್ಕಿರುವ ಆಭಗವಂತನಿಗೆ ತನ್ನವರೆಂದಾಗಲಿ ಇತರರೆಂದಾಗಲಿ ಭೇದವಿಲ್ಲ. ಇಂತು ಭಗವಂತನಲ್ಲಿ ವೈಷಮ್ಯವಿಲ್ಲದಿದ್ದರೂ ಗಾಳಿಯನ್ನು ಹಿಂಬಾಲಿಸುವ ಧೂಳಿಯಂತೆ ಪ್ರಾಣಿಗಳು ತಂತಮ್ಮ ಕರ್ಮಾನುಸಾರವಾಗಿ ಆ ಭಗವಂತನನ್ನು ಅನುಸರಿಸುವರು. ಇದರಿಂದ ಪ್ರಾಣಿಗಳಿಗುಂಟಾಗುವ ಫಲವೈಷಮ್ಯವೆಂಬುದು ಕರ್ಮಾಧೀನವಲ್ಲದೆ ಭಗವಂತನಿಗೆ ಸಂಬಂಧವಿಲ್ಲ. ಆದಕಾರಣ ಸೃಷ್ಟ್ಯಾದಿ ಪ್ರಯುಕ್ತ ವೈಷಮ್ಯ ನೈರ್ಘೃಣ್ಯಗಳು ಭಗವಂತನಿಗೆ ಸೇರಲಾರವು ॥೨೦॥ ಸರ್ವವ್ಯಾಪಕನಾದ ಈ ಭಗವಂತನು ಕರ್ಮಾಧೀನರಾದ ಪ್ರಾಣಿಗಳಿಗೆ ಆವರವರ ಕರ್ಮಾನುಗುಣವಾಗಿ ಸೊಳ್ಳೆ, ಇರುವೆ ಮೊದಲಾದ ಚಿಕ್ಕಪ್ರಾಣಿಗಳಿಗೆ ಆಯುಷ್ಯವನ್ನು ಕುಂದಿಸುತ್ತಲೂ, ದೇವತೆಗಳು ಮೊದಲಾದವರಲ್ಲಿ ಆಯುಸ್ಸನ್ನು ಬೆಳೆಯಿಸುತ್ತ

ಸ್ಥಸ್ಯ ವಿದಧಾತ್ಯಸೌ॥೨೧॥ ಕೇಚಿತ್ಕರ್ಮ ವದಂತ್ಯೇನಂ ಸ್ವಭಾವ ಮಪರೇ
ನೃಪ ! । ಏಕೇ ಕಾಲಂ ಪರೇ ದೈವಂ ಪುಂಸಃ ಕಾಮ ಮುತಾಽಪರೇ॥
ಅವ್ಯಕ್ತಸ್ಯಾಽಪ್ರಮೇಯಸ್ಯ ನಾನಾಶಕ್ತ್ಯುದಯಸ್ಯಚ । ನವೈ ಚಿಕೀ

---

ವಿದಧಾತಿ - ಮಾಡುತ್ತಾನೆ ॥ ೨೧ ॥ ಕೇಚಿತ್ - ಕೆಲವರು, ಏನಂ - ಇವನನ್ನು, ಕರ್ಮ - ಕರ್ಮವೆಂತಲೂ, ಅಪರೇ - ಇತರರು, ಸ್ವಭಾವಂ - ಸ್ವಭಾವವೆಂತಲೂ, ಏಕೇ - ಕೆಲವರು, ಕಾಲಂ - ಕಾಲವೆಂತಲೂ, ಪರೇ - ಕೆಲವರು, ದೈವಂ - ದೈವವೆಂತಲೂ, ಉತಅಪರೇ - ಮತ್ತೆ ಕೆಲವರು, ಪುಂಸಃ - ಪುರುಷನ, ಕಾಮಂ - ಕಾಮವೆಂತಲೂ, ವದಂತಿ - ಹೇಳುತ್ತಾರೆ ॥ ೨೨ ॥ ಹೇ ತಾತ - ಅಯ್ಯಾ ಧ್ರುವನೆ ! ಅವ್ಯಕ್ತಸ್ಯ - ಅಗೋಚರನಾದ, ಅಪ್ರಮೇಯಸ್ಯ - ಅಳತೆಗೆ ಸಿಕ್ಕದ, ನಾನಾಶಕ್ತ್ಯುದಯಸ್ಯ - ಅನೇಕ ಶಕ್ತಿಗಳಿಂದೊಡಗೂಡಿದ ಭಗವಂತನ, ಚಿಕೀರ್ಷಿತಂ - ಸಂಕಲ್ಪವನ್ನು, ನ - ತಿಳಿಯಲಾರರು,

---

ಲೂ, ತಾನು ಹ್ರಾಸವೃದ್ಧಿಗಳಿಗೊಳಗಾಗದೆ ಸ್ವಸ್ವರೂಪದಿಂದಿರುವನು ॥೨೧॥ ಇಂತು ಸರ್ವಾಂತರ್ಯಾಮಿಯಾಗಿ ಇಚ್ಛಾಮಾತ್ರದಿಂದ ಸೃಷ್ಟಿ ಸ್ಥಿತಿ ಸಂಹಾರ ಕಾರ್ಯಗಳನ್ನು ನಡೆಯಿಸುತ್ತಾ, ಅವರವರಕರ್ಮಾನುಸಾರವಾಗಿಜಗತ್ತನ್ನುನಿಯಮಿಸುತ್ತಾ,ಸರ್ವಭೂತಸಮಾನನಾಗಿರುವ ಭಗವಂತನನ್ನರಿಯದೆ, ಕರ್ಮ ಬ್ರಹ್ಮವಾದಿಗಳಾದ ಮೀಮಾಂಸಕರು, ಜಗತ್ತಿನ ಸುಖದುಃಖಗಳಿಗೆ ಕಾರಣವಾದುದು ಕರ್ಮವೆಂತಲೂ, ನಾಸ್ತಿಕಾದಿಗಳು ಸ್ವಭಾವವೆಂತಲೂ, ವ್ಯವಹಾರ ನಿಪುಣರಾದ ಲೌಕಿಕರು ಕಾಲವೆಂತಲೂ, ಜೋಯಿಸರು ಗ್ರಹ ಮೊದಲಾದ ದೈವವೆಂತಲೂ, ವಾತ್ಸ್ಯಾಯನಾದಿಗಳು ‡ ಶ್ರುತಿಯಲ್ಲಿ ಹೇಳುವಂತೆ ಕಾಮವೇ ಕಾರಣವೆಂತಲೂ ವಿವಾದಮಾಡುತ್ತಿರುವರು ॥೨೨॥ ಆದರೆ ಇವರ ವಾದಗಳಿಗೆ ಮೂಲಕಾರಣವಾದ ತತ್ತ್ವವೆಂಬುದು ಬಲದಿಂದಾಗಲಿ, ಬುದ್ಧಿ ಮೊದಲಾದವುಗಳಿಂದಾಗಲಿ ಸ್ಪಷ್ಟಗೊಳಿಸತಕ್ಕುದಾಗಿಲ್ಲ. ಈ ಕಾರಣದಿಂದಲೇ ಪ್ರತ್ಯಕ್ಷ ಮೊದಲಾದ ಯಾವ ಪ್ರಮಾಣಗಳಿಂದಲೂ ತಿಳಿಯ ಶಕ್ಯವಲ್ಲ, ಆದರೂ ಅವರು ಹೇಳುವ ಕಾಲ, ಕರ್ಮ, ಸ್ವಭಾವಾದಿ ಶಕ್ತಿಗಳಿಗೆಲ್ಲಾ ಆಧಾರವೆನಿಸಿದ ಆ ಮೂಲತತ್ತ್ವದ ಬಾದೊಂದು ಶಕ್ತಿಯನ್ನೇ ಅಧಿಕರಿಸಿ ವಾದಿಗಳು ವಿವಾದಮಾಡುವುದರಿಂದ ಸರ್ವಶಕ್ತಿಗಳುಳ್ಳ ಭಗವಂತನಲ್ಲಿ ಈ ವಿವಾದಕ್ಕೆ ಅವಕಾಶವೇ ಇಲ್ಲ. ಅಯ್ಯಾ ಧ್ರುವನೆ ! ಈ ವಿವಾದಗಳೆಲ್ಲವೂ ನಾಮಮಾತ್ರಗಳೇ ಹೊರತು † ಶ್ರುತಿಯಲ್ಲಿ ಹೇಳಿದಂತೆ ಅಚಿಂತ್ಯಾದ್ಭುತ ಮಹಿಮನಾದ ಆ ಭಗವಂತನ ಸಂಕಲ್ಪವನ್ನು ಯಾವನು ಬಲ್ಲನು ? ಲೋಕದಲ್ಲಿ ಪ್ರತಿಪ್ರಾಣಿಯೂ ತನ್ನ ಮುಂದಣ ಸಂಗತಿಯನ್ನು

---

‡ ಭಾ. ಶ್ರು. ಕಾಮೋಽಕಾರ್ಷೀತ್ ಕಾಮಃ ಕರೋತಿ ನಾಹಂ ಕರೋಮಿ ಕಾಮಃ ಕರ್ತಾ ನಾಹಂ ಕರ್ತಾ ಕಾಮಃ ಕಾರಯಿತಾ ನಾಹಂ ಕಾರಯಿತಾ ಇತ್ಯಾದಿ. ಕಾರ್ಯಗಳನ್ನು ಮಾಡುವುದು ಮಾಡಿಸುವುದೂ ಸಹ ಕಾಮವೇ ಆದುದರಿಂದ ಕಾಮವೇ ಸುಖದುಃಖಕಾರಣವೆಂದು ತಾತ್ಪರ್ಯವು.

† ಸಾ. ಶ್ರು. ಕೋ ಅದ್ಧಾವೇದ ? ಕ ಇಹ ಪ್ರಾವೋಚತ್ ? ಕುತ ಆಯಾತಾ ? ಕುತ ಇಯಂ ಸೃಷ್ಟಿಃ ? ಶ್ಲೋ॥ ನಹ್ಯಸ್ಯ ಕರ್ಹಿಚಿದ್ರಾಜನ್ ! ಪುಮಾನ್ವೇದ ಚಿಕೀರ್ಷಿತಂ । ಯದ್ವಿಜಿಜ್ಞಾಸಯಾ ಯುಕ್ತಾ ಮುಹ್ಯಂತಿ ಕವಯೋಽಪಿ ಹಿ ॥ (ಧರ್ಮರಾಜನಿಗೆ ಭೀಷ್ಮಾಚಾರ್ಯನು ಹೇಳುವುದು) ಭಗವಂತನ ತತ್ತ್ವವನ್ನು ಯಾರೂ ತಿಳಿಯಲಾರರೆಂದು ಭಾವವು.

ಷ್ಟಿತಂ ತಾತ ! ಕೋ ವೇದಾಥ ಸ್ವಸಂಭವಂ ॥೨೩॥ ನಚೈತೇ ಪುತ್ರಕ ! ಭ್ರಾತು ರ್ಹಂತಾರೋ ಧನದಾನುಗಾಃ । ವಿಸರ್ಗಾದಾನಯೋ ಸ್ತಾತ ! ಪುಂಸೋ ದೈವಂ ಹಿಕಾರಣಂ ॥೨೪॥ ಸಏವ ವಿಶ್ವಂ ಸೃಜತಿ ಸಏವಾಽವತಿ ಹಂತಿಚ । ತಥಾಪಿ ಹ್ಯನಹಂಕಾರಾ ನ್ನಾಜ್ಯತೇ ಗುಣಕರ್ಮಭಿಃ ॥೨೫॥ ಏಷ ಭೂತಾನಿ ಭೂತಾತ್ಮಾ ಭೂತೇಶೋ ಭೂತಭಾವನಃ । ಸ್ವಶಕ್ತ್ಯಾ ಮಾಯಯಾ ಯುಕ್ತಃ ಸೃಜತ್ಯತ್ತಿ ಚ ಪಾತಿಚ ॥೨೬॥ ತಮೇವ ಮೃತ್ಯು ಮಮೃತಂ ತಾತ ! ದೈವಂ ಸರ್ವಾತ್ಮನೋಽಪೇಹಿ ಜಗತ್ಪರಾಯ

ಸ್ವಸಂಭವಂ - ತನಗೆ ಜನಕನಾದವನನ್ನು, ಕಃ - ಯಾವನು, ವೇದ - ತಿಳಿಯುವನು ? ॥ ೨೩ ॥ ಹೇ ಪುತ್ರಕ - ಮಗುವೆ ! ಭ್ರಾತುಃ - ತಮ್ಮನನ್ನು, ಹಂತಾರಃ - ಕೊಂದವರು, ಏತೇ - ಈ, ಧನದಾನುಗಾಃ - ಯಕ್ಷರು, ನ - ಅಲ್ಲ, ತಾತ - ಅಪ್ಪ, ಪುಂಸಃ - ಪುರುಷನ, ವಿಸರ್ಗಾದಾನಯೋಃ - ಜನನ ಮರಣಗಳಿಗೆ, ದೈವಂ - ಈಶ್ವರನೇ, ಕಾರಣಂ ಹಿ - ಕಾರಣವಷ್ಟೆ ॥ ೨೪ ॥ ಸಏವ - ಆ ಈಶ್ವರನೇ, ವಿಶ್ವಂ - ಜಗತ್ತನ್ನು, ಸೃಜತಿ - ಸೃಷ್ಟಿಸುತ್ತಾನೆ, ಸಏವ - ಅವನೇ, ಅವತಿ - ಪಾಲಿಸುತ್ತಾನೆ, ಹಂತಿಚ - ಕೊಲ್ಲುತ್ತಾನೆ, ತಥಾಪಿ - ಆದರೂ, ಅನಹಂಕಾರಾತ್ - ಅಹಂಕಾರವಿಲ್ಲದುದರಿಂದ, ಗುಣಕರ್ಮಭಿಃ - ಗುಣಪ್ರಯುಕ್ತಗಳಾದ ಕರ್ಮಗಳಿಂದ, ನಾಜ್ಯತೇ - ಲಿಪ್ತನಾಗುವುದಿಲ್ಲ ॥ ೨೫ ॥ ಭೂತಾತ್ಮಾ - ಭೂತಗಳ ಸ್ವರೂಪನಾಗಿರುವ, ಭೂತೇಶಃ - ಭೂತಪಾಲಕನಾದ, ಭೂತಭಾವನಃ - ಭೂತಗಳನ್ನು ವೃದ್ಧಿಗೊಳಿಸುವ, ಏಷಃ - ಈ ಭಗವಂತನು, ಸ್ವಶಕ್ತ್ಯಾ - ತನ್ನ ಶಕ್ತಿರೂಪವಾದ, ಮಾಯಯಾ - ಮಾಯೆಯಿಂದ, ಭೂತಾನಿ - ಪ್ರಾಣಿಗಳನ್ನು, ಸೃಜತಿ - ಸೃಷ್ಟಿಸುತ್ತಾನೆ, ಅತ್ತಿ - ನಾಶಗೊಳಿಸುತ್ತಾನೆ, ಅವತಿಚ - ಸಲಹುತ್ತಾನೆ ॥ ೨೬ ॥

ಹೇ ತಾತ - ಅಪ್ಪ ಧ್ರುವನೆ ! ವಿಶ್ವಸೃಜಃ - ಬ್ರಹ್ಮಾದಿಗಳು, ನಸಿ - ಮೂಗಿನಲ್ಲಿ, ದಾಮಯಂತ್ರಿತಾಃ - ದಾರವೇರಿಸಲ್ಪಟ್ಟ, ಗಾವೋಯಥಾ - ಗೋಗಳಂತೆ, ಯಸ್ಮೈ - ಯಾವನಿಗೆ, ಬಲಿಂ - ಪೂಜೆಯನ್ನು, ಹರಂತಿ - ಒಪ್ಪಿಸುವರೋ, ಜಗತ್ಪರಾಯಣಂ - ಜಗತ್ತಿಗೆ ಆಧಾರನಾದ, ಮೃತ್ಯುಂ - ದುಷ್ಟರಿಗೆ ಮೃತ್ಯುವಾದ, ಅಮೃತಂ - ಭಕ್ತರಿಗೆ ಅಮೃತವಾದ, ತಮೇವಮೇವಂ- ಆ ಭಗವಂತನನ್ನೇ,

ತಿಳಿಯಬಲ್ಲನೇ ಹೊರತು ತನ್ನನ್ನು ಸೃಷ್ಟಿಸಿದವನ ಸಮಾಚಾರವನ್ನು ತಿಳಿಯಬಲ್ಲನೇ ? ॥೨೩॥ ಅಯ್ಯಾ ಮಗುವೆ ! ಇಂತು ಕರ್ಮಾಧೀನರಾದ ಪ್ರಾಣಿಗಳ ಜನನ ಮರಣಾದಿಗಳಿಗೆ ಭಗವಂತನೇ ನಿಮಿತ್ತವಾಗಿರುವುದರಿಂದ ಕುಬೇರಾನುಚರರಾದ ಈ ಯಕ್ಷರು ನಿನ್ನ ತಮ್ಮನನ್ನು ಸಂಹರಿಸಿದರೆಂಬ ಆಗ್ರಹವನ್ನು ಬಿಡು. ಇವನ ಮರಣಕ್ಕೆ ದೈವವೇ ಕಾರಣವಲ್ಲದೆ ಯಕ್ಷರಲ್ಲ ॥೨೪॥ ಆ ಭಗವಂತನೇ ಜಗತ್ತನ್ನು ಸೃಷ್ಟಿಸಿ, ಪಾಲಿಸಿ ಲಯಗೊಳಿಸುವನು. ಆದರೂ ಜೀವರಂತೆ ದೇಹಾತ್ಮಾಧ್ಯಾಸರೂಪವಾದ ಅಹಂಕಾರಕ್ಕೊಳಗಾಗದುದರಿಂದ ಗುಣಕಾರ್ಯಗಳಾದ ಕರ್ಮಗಳಿಗೆ ಬದ್ಧನಾಗುವುದಿಲ್ಲ ॥೨೫॥ ಸರ್ವಾತ್ಮಕನೂ, ಭೂತಪಾಲಕನೂ, ಜಗನ್ನಿಯಾಮಕನೂ ಆದ ಆ ಭಗವಂತನು ತನ್ನ ಬಹಿರಂಗಶಕ್ತಿಯಾದ ಮಾಯೆಯಿಂದೊಡಗೂಡಿ ಜಗತ್ಸೃಷ್ಟ್ಯಾದಿಗಳನ್ನು ಮಾಡುವುದರಿಂದ ಈ ಬಹಿರಂಗಕಾರ್ಯಗಳಿಂದ ಭಗವಂತನಿಗೆ ಅಹಂಕಾರವುಂಟಾಗಲಾರದು॥೨೬॥ಅಯ್ಯಾ ಮಗುವೆ! ಪರಮೇಶ್ವರನೇ ಕರ್ತನೆಂದು ತಿಳಿದಿದ್ದರೂ ಅಹಂಕಾರಾದಿಗಳನ್ನು ಬಿಡುವುದು ಅವಶ್ಯಕವಾದುದ

ಣಂ । ಯಸ್ಮೈ ಬಲಿಂ ವಿಶ್ವಸೃಜೋ ಹರಂತಿ ಗಾವೋ ಯಥಾ ವೈ ನಸಿ ದಾಮಯಂತ್ರಿತಾಃ ॥೨೬॥ ಯಃ ಪಂಚವರ್ಷೋ ಜನನೀಂ ತ್ವಂ ವಿಹಾಯ ಮಾತುಃ ಸಪತ್ನ್ಯಾ ವಚಸಾ ಭಿನ್ನಮರ್ಮಾ । ವನಂಗತ ಸ್ತಪಸಾ ಪ್ರತ್ಯಗಕ್ಷ ಮಾರಾಧ್ಯ ಲೇಭೇ ಮೂರ್ಧ್ನಿ ಪದಂ ತ್ರಿಲೋಕ್ಯಾಃ ॥ ೨೭ ॥ ತಮೇನ ಮಂಗಾತ್ಮನಿ ಮುಕ್ತವಿಗ್ರಹೇ ವ್ಯಪಾಶ್ರಿತಂ ನಿರ್ಗುಣ ಮೇಕ ಮಕ್ಷರಂ । ಆತ್ಮಾನ ಮನ್ವಿಚ್ಛ ವಿಮುಕ್ತ ಮಾತ್ಮದೃಕ್ ಯಸ್ಮಿ ನ್ನಿದಂ ಭೇದ ಮಸತ್ಪ್ರತೀಯತೇ ॥೨೮॥ ತ್ವಂ ಪ್ರತ್ಯಗಾತ್ಮನಿ ತದಾ ಭಗವತ್ಯನಂತ ಆನಂದ ಮಾತ್ರ ಉಪಪನ್ನ ಸಮಸ್ತಶಕ್ತೌ । ಭಕ್ತಿಂ ವಿಧಾಯ ಪರಮಾಂ

ಸರ್ವಾತ್ಮನಾ - ಸರ್ವಭಾವದಿಂದ, ಉಪೇಹಿ - ಮರೆಹೋಗು ॥ ೨೬ ॥ ಸಪತ್ನ್ಯಮಾತುಃ - ಬಲತಾಯಿಯ, ವಚಸಾ - ಮಾತಿನಿಂದ, ಭಿನ್ನಮರ್ಮಾ - ಎದೆಬಿರಿದು, ಪಂಚವರ್ಷಃ - ಐದು ವಯಸ್ಸುಳ್ಳ, ಯಸ್ತ್ವಂ - ಯಾವ ನೀನು, ಜನನೀಂ - ತಾಯನ್ನು, ವಿಹಾಯ - ತೊರೆದು, ವನಂ - ಕಾಡಿಗೆ, ಗತಃ- ಹೋಗಿ, ತಪಸಾ - ತಪಸ್ಸಿನಿಂದ, ಪ್ರತ್ಯಗಕ್ಷಂ - ಇಂದ್ರಿಯಾ ಗೋಚರನಾದ ಹರಿಯನ್ನು, ಆರಾಧ್ಯ - ಪೂಜಿಸಿ, ತ್ರಿಲೋಕ್ಯಾಃ - ಮೂರುಲೋಕಗಳ, ಮೂರ್ಧ್ನಿ - ತಲೆಯಲ್ಲಿ, ಪದಂ - ಸ್ಥಾನವನ್ನು, ಲೇಭೇ - ಹೊಂದಿದೆಯೋ ॥ ೨೭ ॥ ಹೇ ಅಂಗ - ಎಲೈ ಧ್ರುವನೆ । ಆತ್ಮದೃಕ್ - ಆತ್ಮಜ್ಞಾನಿಯಾದ ನೀನು ಯಸ್ಮಿನ್ - ಯಾರಲ್ಲಿ, ಇದಂ ಭೇದಂ - ಈ ಭೇದಗಳುಳ್ಳ, ಅಸತ್-ಸತ್ತ್ವಶೂನ್ಯವಾದ ಜಗತ್ತು, ಪ್ರತೀಯತೇ - ಕಾಣುತ್ತಿರುವುದೋ, ಅಂತಹ, ನಿರ್ಗುಣಂ-ಗುಣರಹಿತನೂ, ಏಕಂ-ಅದ್ವಿತೀಯನೂ, ಅಕ್ಷರಂ- ನಾಶರಹಿತನೂ, ಆದ, ಮುಕ್ತವಿಗ್ರಹೇ - ದ್ವೇಷಾದಿಗಳಿಲ್ಲದ, ಆತ್ಮನಿ - ಮನಸ್ಸಿನಲ್ಲಿ, ವ್ಯಪಾಶ್ರಿತಂ - ನೆಲಸಿರುವ, ತಮೇನ ಮಾತ್ಮಾನಂ - ಆಪರಮಾತ್ಮನನ್ನು, ಅನ್ವಿಚ್ಛ - ಶರಣುಹೋಗು ॥ ೨೮ ॥ ತ್ವಂ- ನೀನು, ಪ್ರತ್ಯಗಾತ್ಮನಿ - ಇಂದ್ರಿಯ ಗೋಚರನಲ್ಲದ, ಅನಂತೇ - ಅಂತವಿಲ್ಲದ, ಆನಂದಮಾತ್ರೇ -

ರಿಂದ ಬ್ರಹ್ಮಾದಿದೇವತೆಗಳೆಲ್ಲರೂ ಮೂಗುದಾರ ವಿಡಲ್ಪಟ್ಟ ಗೋಗಗಳಂತೆ ಕಿಂಕರರಾಗಿ ಯಾವಭಗವಂತನಾಜ್ಞೆಯಮೇರೆ ಕಾರ್ಯಗಳನ್ನು ನಡೆಯಿಸುತ್ತಿರುವರೋ,ಅಂತಹ ಜಗದಾಶ್ರಯನಾಗಿಯೂ ಭಕ್ತರಿಗೆ ಅಮೃತಪ್ರಾಯನಾಗಿಯೂ ದುರ್ಜನರಿಗೆಮೃತ್ಯುವಾಗಿಯೂ ಇರುವ ಆ ಭಗವಂತನಿಗೆ ಶರಣಾಗತನಾಗು ॥೨೬॥ ನೀನು ಐದುವರ್ಷದ ಹಸುಳೆಯಾಗಿರುವಾಗಲೇ ಬಲತಾಯಿಯ ಬಿರುನುಡಿಗಳೆಂಬ ಬಾಣಗಳಿಂದ ಎದೆಬಿರಿದು ಹೆತ್ತತಾಯನ್ನು ತೊರೆದು ಕಾಡಿಗೆ ತೆರಳಿ ಘೋರವಾದ ತಪಶ್ಚರ್ಯೆಯಿಂದ ಇಂದ್ರಿಯಾಗೋಚರನಾದ ಭಗವಂತನನ್ನು ಮೆಚ್ಚಿಸಿ ಮೂರುಲೋಕಗಳಿಗೂ ಮೂರ್ಧಸ್ಥಾನದಲ್ಲಿ ನೆಲೆಯನ್ನು ಪಡೆದಿರುವೆ ॥೨೭॥ ಎಲೈ ಧ್ರುವನೆ ! ನಿನಗೆ ಆ ಭಗವಂತನನ್ನು ಮೆಚ್ಚಿಸುವುದು ಕಷ್ಟವಲ್ಲವಾದುದರಿಂದ ಆತ್ಮಸ್ವರೂಪವನ್ನು ಬಲ್ಲ ನೀನು ನಾನಾಭೇದ ವಿಚಿತ್ರವಾದ ಈ ಅಸತ್ಪ್ರಪಂಚವು ಯಾವ ಭಗವಂತನ ಆಧಾರದಿಂದ ತೋರುತ್ತಿರುವುದೋ, ಯಾವನಿಗೆ ನಿರ್ವೈರವಾದ ಭಕ್ತರ ಹೃದಯವು ನೆಲೆಯಾಗಿರುವುದೋ, ಅಂತಹ ನಿರ್ಗುಣನೂ, ಅದ್ವಿತೀಯನೂ ನಿತ್ಯಮುಕ್ತನೂ ಆದ ಪರಮಾತ್ಮನನ್ನು ಮೆಚ್ಚಿಸು ॥೨೮॥ ಅವಾಙ್ಮನಸಗೋಚರನೂ, ಆನಂದಸ್ವರೂಪನೂ, ಸಕಲ ಶಕ್ತಿಯುಕ್ತನೂ ಆದ ಭಗವಂತನನ್ನು ಏಕಾಂತಭಕ್ತಿಯಿಂದ

ಶನಕ್ಕೈ ರವಿದ್ಯಾ ಗ್ರಂಥಿಂ ವಿಭೇತ್ಸ್ಯಸಿ ಮಮಾಹ ಮಿತಿ ಪ್ರರೂಢಂ ॥೩೦॥
ಸಂಯಚ್ಛ ರೋಷಂ ಭದ್ರಂ ತೇ ಪ್ರತೀಪಂ ಶ್ರೇಯಸಾಂ ಪರಂ । ಶ್ರು
ತೇನ ಭೂಯಸಾ ರಾಜ ನ್ನಗದೇನ ಯಥಾಮಯಂ॥೩೧॥ಯೇನೋಪಸೃಷ್ಟಾ
ತ್ಪುರುಷಾ ಲ್ಲೋಕ ಉದ್ವಿಜತೇ ಭೃಶಂ । ನ ಬುಧ ಸ್ತದ್ವಶಂ ಗಚ್ಛೇ ದಿಚ್ಛ
ನ್ನಭಯ ಮಾತ್ಮನಃ ॥೩೨॥ ಹೇಳನಂ ಗಿರಿಶಭ್ರಾತು ರ್ಧನದಸ್ಯ ತ್ವಯಾಕೃ
ತಂ । ಯಜ್ಜಘ್ನಿವಾನ್ ಪುಣ್ಯಜನಾನ್ ಭ್ರಾತೃಘ್ನಾ ನಿತ್ಯಮರ್ಷಿತಃ ॥ ೩೩ ॥

---

ಆನಂದ ಸ್ವರೂಪನಾದ, ಉಪ...ಕ್ತೌ - ಸಕಲಶಕ್ತಿಗಳಿಂದ ಕೂಡಿದ, ಭಗವತಿ - ಭಗವಂತನಲ್ಲಿ, ಪರಮಾಂ - ತೀವ್ರವಾದ, ಭಕ್ತಿಂ - ಪ್ರೇಮವನ್ನು, ವಿಧಾಯ - ಮಾಡಿ, ತದಾ - ಆಗ, ಮಮ - ನನ್ನದು, ಅಹಂ - ನಾನು, ಇತಿ - ಎಂದು, ಪ್ರರೂಢಂ - ಬೇರೂರಿದ, ಅವಿದ್ಯಾ ಗ್ರಂಥಿಂ - ಅಹಂಕಾರ ಗ್ರಂಥಿಯನ್ನು, ಶನಕೈಃ - ಮೆಲ್ಲನೆ, ವಿಭೇತ್ಸ್ಯಸಿ - ಭೇದಿಸುವೆ ॥ ೩೦ ॥ ಹೇರಾಜನ್ - ಎಲೈ ರಾಜನೆ ! ಭೂಯಸಾ - ಅಧಿಕವಾದ, ಶ್ರುತೇನ - ತತ್ವ ಶ್ರವಣದಿಂದ, ಶ್ರೇಯಸಾಂ - ಪುರುಷಾರ್ಥಗಳಿಗೆ, ಪರಂ- ಅಧಿಕವಾಗಿ, ಪ್ರತೀಪಂ - ವಿರೋಧಿಯಾದ, ರೋಷಂ - ಕೋಪವನ್ನು, ಅಗದೇನ - ಔಷಧದಿಂದ, ಆಮಯಮಿವ - ರೋಗವನ್ನೋಡಿಸುವಂತೆ, ಸಂಯಚ್ಛ - ನಿಗ್ರಹಿಸು, ತೇ - ನಿನಗೆ, ಭದ್ರಂ - ಮಂಗಳವಾಗುವುದು ॥ ೩೧ ॥ ಯೇನ - ಯಾವ ರೋಷದಿಂದ, ಉಪಸೃಷ್ಟಾತ್ - ಕೂಡಿದ, ಪುರುಷಾತ್ - ಪುರುಷನಿಂದ, ಲೋಕಃ - ಜಗತ್ತು, ಭೃಶಂ - ಬಹಳವಾಗಿ, ಉದ್ವಿಜತೇ - ದುಃಖಿಸುವುದೋ, ಆತ್ಮನಃ - ತನಗೆ, ಅಭಯಂ - ಸುಖವನ್ನು, ಇಚ್ಛನ್ - ಬಯಸುವ, ಬುಧಃ - ಪಂಡಿತನು, ತದ್ವಶಂ - ಆ ರೋಷಕ್ಕೆ ವಶವನ್ನು, ನಗಚ್ಛೇತ್ - ಹೊಂದಬಾರದು ॥ ೩೨ ॥ ಭ್ರಾತೃಘ್ನಾನ್ ಇತಿ - ತಮ್ಮನನ್ನು ಕೊಂದವರೆಂದು, ಅಮರ್ಷಿತಃ - ಕೋಪಗೊಂಡು, ಪುಣ್ಯಜನಾನ್ - ಯಕ್ಷರನ್ನು, ಯಜ್ಜಘ್ನಿವಾನ್-ಕೊಂದುದಾವುದುಂಟೋ, ಇದು, ತ್ವಯಾ - ನಿನ್ನಿಂದ, ಗಿರಿಶಭ್ರಾತುಃ - ಶಿವನಿಗೆ ಸಹೋದರನಾದ, ಧನದಸ್ಯ - ಕುಬೇರನಿಗೆ, ಹೇಳನಂ - ತಿರಸ್ಕಾರವು, ಕೃತಂ - ಮಾಡಲ್ಪಟ್ಟಿತು ॥ ೩೩ ॥ ಹೇವತ್ಸ - ಎಲೈ ಮಗುವೆ!

---

ನೀನು ಆರಾಧಿಸಿದಲ್ಲಿ " ನಾನು ನನ್ನದು " ಎಂದು ಶರೀರಾದಿಗಳಲ್ಲಿ ಬೇರೂರಿಕೊಂಡಿರುವ ಅಹಂಕಾರ ಗ್ರಂಥಿಯನ್ನು ಮೆಲ್ಲನೆ ನಾಶಗೊಳಿಸುವೆ ॥೩೦॥ ಅಯ್ಯಾ ರಾಜನೆ ! ಆದುದರಿಂದ ನೀನು ವಿಸ್ತಾರವಾಗಿ ತತ್ವವಿಚಾರಮಾಡಿ ಉತ್ತಮವಾದ ಔಷಧದಿಂದ ದೀರ್ಘರೋಗವನ್ನು ಕಳೆಯುವಂತೆ ಶ್ರವಣಾದಿಗಳಿಂದ *ಸಕಲ ಪುರುಷಾರ್ಥಗಳಿಗೂ ಅತ್ಯಂತ ವಿರೋಧಿಯಾದ ಕೋಪವನ್ನು ನಿಗ್ರಹಿಸು. ನಿನಗೆ ಮಂಗಳವಾಗುವುದು ॥೩೧॥ ಯಾವಕೋಪಕ್ಕೆ ವಶನಾದ ಪುರುಷನಿಂದ ಲೋಕವೆಲ್ಲವೂ ಹೆದರಿ ದುಃಖಿಸುವುದೋ, ಅಂತಹ ಪಾಪಿಯಾದ ಕೋಪಕ್ಕೆ ಶ್ರೇಯಸ್ಕಾಮನಾದ ವಿವೇಕಿಯು ಯೆಂದಿಗೂ ಒಳಗಾಗಬಾರದು ॥೩೨॥ ತಮ್ಮನನ್ನು ಕೊಂದರೆಂದು ಕೋಪಗೊಂಡು ಈ ಯಕ್ಷರನ್ನು ಸಂಹರಿಸಿದುದರಿಂದ ನೀನು ಪರಶಿವನಿಗೆ ಸಹೋದರನೂ ಯಕ್ಷೇಶ್ವರನೂ ಆದ ಕುಬೇರನಿಗೆ ಅವಮಾನಮಾಡಿದಂತಾ

---

* ಶ್ಲೋ॥ ಅಪಕಾರಿಣಿ ಕೋಪಶ್ಚೇ ತ್ಕೋಪೇ ಕೋಪಃ ಕಥಂನ ? ತೇ । ಧರ್ಮಾರ್ಥ ಕಾಮಮೋಕ್ಷಾಣಾಂ ಪ್ರತ್ಯಕ್ಷ ಪರಿಪಂಥಿನಿ ॥ ಅಪಕಾರಿಯಾದ ಶತ್ರುವನ್ನು ಕೊಲ್ಲಲೆಳಸುವ ಶೂರನು, ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳನ್ನೂ ನಾಶಗೊಳಿಸುವ ಮಹಾಪಕಾರಿಯಾದ ಕೋಪವೆಂಬ ಶತ್ರುವನ್ನು ಮೊದಲು ಜಯಿಸಬೇಕು, (ವಾಸಿಷ್ಠ ಪುರಾಣ)

ತಂ ಪ್ರಸಾದಯ ವತ್ಸಾಶು ಸನ್ನತ್ಯಾ ಪ್ರಣಯೋಕ್ತಿಭಿಃ । ನ ಯಾವನ್ಮಹತಾಂ ತೇಜಃ ಕುಲಂ ನೋಽಭಿಭವಿಷ್ಯತಿ ॥೩೪॥ * ಏವಂ ಸ್ವಾಯಂಭುವಃ ಪೌತ್ರಮನುಶಾಸ್ಯ ಮನುರ್ಧ್ರುವಂ । ತೇನಾಽಭಿನಂದಿತಸ್ಸಾಕಮೃಷಿಭಿಸ್ಸ್ವಪುರಂ ಯಯೌ ॥೩೫॥

—ಇತ್ಯೇಕಾದಶೋಽಧ್ಯಾಯಃ—

ಯಾವತ್ - ಎಷ್ಟರಲ್ಲಿ, ಮಹತಾಂ - ಮಹಾತ್ಮರ, ತೇಜಃ - ತೇಜಸ್ಸು, ಕುಲಂ - ಕುಲವನ್ನು, ನೋಽಭಿಭವಿಷ್ಯತಿ - ತಿರಸ್ಕರಿಸುವದಿಲ್ಲವೋ, ತಾವತ್ - ಅಷ್ಟರಲ್ಲಿ, ಸನ್ನತ್ಯಾ - ನಮಸ್ಕಾರದಿಂದಲೂ, ವಿನಯೋಕ್ತಿಭಿಃ - ವಿನಯವಾದ ನುಡಿಗಳಿಂದಲೂ, ತಂ - ಅವನನ್ನು, ಪ್ರಸಾದಯ - ಸಂತೈಸು ॥೩೪॥ ಏವಂ - ಇಂತು, ಸ್ವಾಯಂಭುವಃ - ಬ್ರಹ್ಮಪುತ್ರನಾದ, ಮನುಃ - ಮನುವು, ಪೌತ್ರಂ - ಮೊಮ್ಮಗನಾದ, ಧ್ರುವಂ - ಧ್ರುವನನ್ನು, ಅನುಶಾಸ್ಯ - ಆಜ್ಞಾಪಿಸಿ, ತೇನ - ಅವನಿಂದ, ಅಭಿನಂದಿತಃ - ಸತ್ಕರಿಸಲ್ಪಟ್ಟವನಾಗಿ, ಋಷಿಭಿಸ್ಸಾಕಂ - ಋಷಿಗಳೊಡನೆ, ಸ್ವಪುರಂ - ತನ್ನ ಪಟ್ಟಣಕ್ಕೆ, ಯಯೌ - ಹೊರಟುಹೋದನು. ॥ ೩೫ ॥

— ಏಕಾದಶಾಧ್ಯಾಯಂ ಸಮಾಪ್ತಂ —

ಯಿತು ॥೩೩॥ ಮಹಾತ್ಮರ ಮನಸ್ಸಿಗೆ ನೋವನ್ನುಂಟುಮಾಡಿದರೆ ಕುಲಕ್ಕೆ ಚ್ಯುತಿಯುಂಟಾಗುವ್ರದು. ಆದುದರಿಂದ ಆ ಮಹನೀಯರ ತೇಜಸ್ಸಿನಿಂದ ಕುಲಕ್ಕೆ ಕೇಡುಂಟಾಗದಂತೆ ನೀನು ವಿನೀತನಾಗಿ ವಿನಯೋಕ್ತಿಗಳಿಂದ ಆ ಯಕ್ಷೇಶ್ವರನನ್ನು ಸಂತೈಸು ಎಂದು ಹೇಳಿದನು॥ ಇಂತು ಸ್ವಾಯಂಭುವಮನುವು ತನ್ನ ಮೊಮ್ಮಗನಾದ ಧ್ರುವನಿಗೆ ತತ್ತ್ವೋಪದೇಶವನ್ನು ಮಾಡಿ ಆತನಿಂದ ಸತ್ಕಾರವನ್ನು ಪಡೆದು ಮಹರ್ಷಿಮಂಡಲಿಯಿಂದ ಕೂಡಿ ತನ್ನ ನಗರಿಗೆ ತೆರಳಿದನು, ಎಂದು ಮೈತ್ರೇಯಮುನಿಯು ವಿದುರನಿಗೆ ಹೇಳಿದನೆಂಬಲ್ಲಿಗೆ

ಭಾಗವತ ಚಕೋರ ಚಂದ್ರಿಕೆಯೊಳ್

—ಹನ್ನೊಂದನೆಯ ಅಧ್ಯಾಯಂ ಮುಗಿದುದು—

* ವಿ. ಮೂಲ ಶ್ಲೋ॥ ಇತ್ಯುಕ್ತಸ್ತಂ ಪ್ರಣಮ್ಯಾಹ ಭಗವಾನ್ಸ್ತೇನುಶಾಸನಂ । ಆತಿಷ್ಠೇ ಭ್ರಾತೃಪಾತೋ ಮೇ ರೋಚತಾಂ ಕ್ಷಮ್ಯತಾಮಿತಿ ॥ ೩೪ ॥ ಎಂದುಪದಿಷ್ಟನಾದ ಧ್ರುವನು, "ಪಿತಾಮಹನೆ ! ಇನ್ನು ನಿನ್ನಾಜ್ಞಾನುಸಾರವಾಗಿ ನಡೆಯುವೆನು. ಅಜ್ಞಾನದಿಂದ ತಾಯಿ ತಮ್ಮಂದಿರ ಮರಣಕ್ಕಾಗಿ ದುಃಖಿಸುತ್ತಿದ್ದ ನನ್ನ ಅಪಚಾರವನ್ನು ಕ್ಷಮಿಸು" ಎಂದು ಬೇಡಿದನು.

## ಓಂ ನಮಃ ಪರಮಾತ್ಮನೇ.

### —ಅಷ್ಟಾದಶೋಽಧ್ಯಾಯಃ—

ಮೈತ್ರೇಯಃ ॥ ಧ್ರುವಂ ನಿವೃತ್ತಂ ಪ್ರತಿಬುಧ್ಯ ವೈಶಸಾ ದಪೇತಮನ್ಯುಂ
ಭಗವಾನ್ ಧನೇಶ್ವರಃ । ತತ್ರಾಗತ ಶ್ಚಾರಣ ಯಕ್ಷ ಕಿನ್ನರೈ ಸ್ಸಂಸ್ತೂಯ
ಮಾನೋಽ ಭ್ಯವದ ತ್ಕೃತಾಂಜಲಿಂ ॥ ೧ ॥ ಧನದಃ ॥ ಭೋಭೋಃ !
ಕ್ಷತ್ರಿಯದಾಯಾದ ! ಪರಿತುಷ್ಟೋಽಸ್ಮಿ ತೇಽನಘ ! । ಯಸ್ತ್ವಂ ಪಿತಾಮ
ಹಾದೇಶಾ ದ್ವೈರಂ ದುಸ್ತ್ಯಜ ಮತ್ಯಜಃ ॥ ೨ ॥ ನ ಭವಾ ನವಧೀ

---

### — ದ್ವಾದಶಾಧ್ಯಾಯಂ —

ಕಂ॥ ಧನಪತಿಯಿಂ ಸತ್ಕೃತಿಯಂ । ತನಘಂ ನಿಜನಗರಿಗೈದುತಂ ಧ್ರುವರಾಜಂ।
ಘನಯಜ್ಞಗಳಂ ನಡೆಯಿಸು । ತನುವಿಂ ಹರಿಪದವಪಡೆದ ಪರಿಯೊರೆದಪೆನಾಂ ॥

ಮೈತ್ರೇಯನು ಹೇಳುತ್ತಾನೆ—ಭಗವಾನ್ - ಭಾಗ್ಯಶಾಲಿಯಾದ, ಧನೇಶ್ವರಃ - ಕುಬೇರನು, ವೈಶಸಾತ್ - ಕೊಲೆಯಿಂದ, ನಿವೃತ್ತಂ - ಹಿಂದಿರುಗಿದ, ಅಪೇತಮನ್ಯುಂ - ಕೋಪವನ್ನುಳಿದ, ಧ್ರುವಂ - ಧ್ರುವನನ್ನು, ನಿಶಮ್ಯ - ಕೇಳಿ, ಚಾರಣೈಃ - ಚಾರಣರು, ಯಕ್ಷರು, ಕಿನ್ನರರು ಇವರಿಂದ, ಸಂಸ್ತೂಯಮಾನಃ - ಹೊಗಳಲ್ಪಡುತ್ತಾ, ತತ್ರ - ಅಲ್ಲಿಗೆ, ಆಗತಃ -ಬಂದವನಾಗಿ, ಕೃತಾಂಜಲಿಂ - ಕೈಮುಗಿದ ಧ್ರುವನಿಗೆ, ಅಭ್ಯವದತ್ - ಹೇಳಿದನು ॥ ೧ ॥ ಭೋಭೋಃ - ಅಯ್ಯಾ ! ಕ್ಷತ್ರಿಯದಾಯಾದ - ಕ್ಷತ್ರಿಯಕುಮಾರನೆ ! ಅನಘ - ಪಾಪರಹಿತನೆ ! ತೇ - ನಿನ್ನಲ್ಲಿ, ಪರಿತುಷ್ಟೋಽಸ್ಮಿ - ಸಂತೋಷ ಪಟ್ಟೆನು, ಯಸ್ತ್ವಂ - ಯಾವ ನೀನು, ಪಿತಾಮಹಾದೇಶಾತ್ - ತಾತನಪ್ಪಣೆಯಿಂದ, ದುಸ್ತ್ಯಜಂ - ಬಿಡಲಶಕ್ಯವಾದ, ವೈರಂ - ದ್ವೇಷವನ್ನು, ಅತ್ಯಜಃ - ಬಿಟ್ಟೆಯೋ ॥ ೨ ॥ ಭವಾನ್ - ನೀನು, ಯಕ್ಷಾನ್ - ಯಕ್ಷರನ್ನು,

---

### ಹನ್ನೆರಡನೆಯ ಅಧ್ಯಾಯ.

### —ಧ್ರುವನು ಪರಮಪದವನ್ನು ಪಡೆಯುವುದು—

ಅನಂತರದಲ್ಲಿ ಮೈತ್ರೇಯ ಮುನಿಯು ವಿದುರನಿಗೆ ಹೇಳುವುದೆಂತೆಂದರೆ—ಅಯ್ಯಾ ವಿದುರನೆ ! ಕೇಳು. ತರುವಾಯ ಮಹಾಭಾಗ್ಯಶಾಲಿಯಾದ ಕುಬೇರನು, ಸ್ವಾಯಂಭುವ ಮನುವಿನಪ್ಪಣೆಯಂತೆ ಯಕ್ಷ ಸಂಹಾರದಿಂದ ನಿವೃತ್ತನಾಗಿ, ಧ್ರುವನು ಶಾಂತನಾಗಿರುವನೆಂಬ ಸುದ್ದಿಯನ್ನು ಕೇಳಿ, ಯಕ್ಷ, ಕಿನ್ನರ ಚಾರಣ,ಗಂಧರ್ವಾದಿಗಳಿಂದ ಕೈವಾರಗೊಳ್ಳುತ್ತಾ, ಧ್ರುವನಬಳಿಗೈತಂದು, ಬದ್ಧಾಂಜಲಿಯಾಗಿ ಪ್ರಣಾಮವನ್ನಾಚರಿಸಿದ ಧ್ರುವನನ್ನು ಹರಸುತ್ತಾ ನುಡಿದನು ॥೧॥ ಅಯ್ಯಾ ಕ್ಷತ್ರಿಯ ಕುಮಾರನೆ ! ನಿನ್ನಲ್ಲಿ ಬಹಳ ಸಂತುಷ್ಟನಾದೆನಯ್ಯಾ ಶೂರನೆ ! ಪಿತಾಮಹನಾದ ಮನುವಿನ ಆಜ್ಞಾಪ್ರಕಾರವಾಗಿ, ಬಿಡಲಾರದಂತಹ ವೈರವನ್ನು ಬಿಟ್ಟೆಯಾದುದರಿಂದ ನೀನು ಪಾಪರಹಿತನೇ ಸರಿ ॥ ೨ ॥ ಸಕಲ ಪ್ರಾಣಿಗಳ

ದೃಷ್ಟವಾನ್ ನ ಯಕ್ಷಾ ಭ್ರಾತರಂ ತವ ! ಕಾಲ ಏವಹಿ ಭೂತಾನಾಂ ಪ್ರಭು
ರಪ್ಯಯ ಭಾವಯೋಃ ॥ ೩ ॥ § ಅಹಂ ತ್ವ ಮಿತ್ಯಪಾರ್ಥಾಧೀ ರಜ್ಞಾನಾ
ತ್ಪುರುಷಸ್ಯಹಿ । ಸ್ವಾಪ್ನೀವಾ ಭಾತ್ಯ ತದ್ಧ್ಯಾನಾ ದ್ಯಯಾ ಬಂಧವಿಪ

ನಾವಧೀತ್ - ಕೊಲ್ಲಲಿಲ್ಲ. ಯಕ್ಷಾಃ - ಯಕ್ಷರು, ತವ - ನಿನ್ನ, ಭ್ರಾತರಂ - ತಮ್ಮನನ್ನು, ನ - ಕೊಲ್ಲಲಿಲ್ಲ, ಭೂತಾನಾಂ - ಪ್ರಾಣಿಗಳ, ಅಪ್ಯಯಭಾವಯೋಃ - ನಾಶವೃದ್ಧಿಗಳಿಗೆ, ಕಾಲಏವ - ಕಾಲವೇ, ಪ್ರಭುರ್ಹಿ - ಸ್ವಾಮಿಯಷ್ಟೆ ॥ ೩ ॥ ಯಯಾ - ಯಾವ ಬುದ್ಧಿಯಿಂದ, ಅತದ್ಧ್ಯಾನಾತ್ - ದೇಹಾತ್ಮ ಭಾವನೆಯಿಂದ, ಬಂಧವಿಪರ್ಯಯೌ - ಕರ್ಮಬಂಧವು, ದುಃಖಾದಿಗಳು ಉಂಟಾಗುವುವೋ, ಸ್ವಾಪ್ನೀವ-ಸ್ವಪ್ನಜ್ಞಾನದಂತೆ, ಅಪಾರ್ಥಾ - ಅರ್ಥವಿಲ್ಲದ, ಅಹಂ - ನಾನು, ತ್ವಂ - ನೀನು, ಇತಿ - ಹೀಗೆಂಬ, ಧೀಃ-

ಜನನ ಮರಣಗಳಿಗೂ ಕಾಲಸ್ವರೂಪನಾದ ಭಗವಂತನೇ ನಿಯಾಮಕನಾಗಿರುವುದರಿಂದ, ನೀನು ಯಕ್ಷರನ್ನು ಕೊಂದವನೂ ಅಲ್ಲ. ಯಕ್ಷರೂ ನಿನ್ನ ತಮ್ಮನನ್ನು ಕೊಂದವರಲ್ಲ ॥೩॥ ಪುರುಷನು ತನ್ನ ನಿಜಸ್ವರೂಪವನ್ನುತಿಳಿಯದೆ ಶರೀರವನ್ನೇ ಆತ್ಮವನ್ನಾಗಿ ತಿಳಿದಿರುವುದರಿಂದ

§ ವಿ. ಇಲ್ಲಿ ಧ್ರುವನು ಕೊಂದುದೂ, ಯಕ್ಷರು ಕೊಲ್ಲಲ್ಪಟ್ಟುದೂ ಪ್ರತ್ಯಕ್ಷವಾಗಿರುವಲ್ಲಿ ಅದನ್ನು ಮರೆಮಾಚಿ ಹನನಾದಿಗಳಿಗೆ ಭಗವಂತನೇ ಕರ್ತನೆಂದು ಹೇಳುವ ಕುಬೇರನ ವಾಕ್ಯವೆಂತು ಸತ್ಯವು?. ಎಂದರೆ 'ನಾನು ಕೊಂದೆನು ತಾನು ಕೊಂದೆನು' ಎಂಬ ವ್ಯವಹಾರಕ್ಕೆ ದೇಹವಿಲಕ್ಷಣವಾದ ಆತ್ಮಜ್ಞಾನವಿಲ್ಲದುದೇ ಕಾರಣವು. ಈ ಅಜ್ಞಾನವು ಅನ್ಯಥಾ ಜ್ಞಾನವೆಂತಲೂ, ವಿಪರೀತ ಜ್ಞಾನವೆಂತಲೂ ಎರಡು ವಿಧ ಒಂದು ವಸ್ತುವಿನಲ್ಲಿ ಮತ್ತೊಂದು ವಸ್ತುವಿನ ಧರ್ಮವು ತೋರುವುದೇ ಅನ್ಯಥಾ ಜ್ಞಾನವೆನಿಸುವುದು "ಶಂಖವು ಹಳದಿಯಾಗಿದೆ" ಎಂಬಲ್ಲಿ ಶಂಖದ ಬಿಳುಪಿನಲ್ಲಿ ದೃಗ್ದೋಷದಿಂದ ಹೊಂಬಣ್ಣವು ತೋರುವುದೇ ದೃಷ್ಟಾಂತವು, ಒಂದು ವಸ್ತುವು ಮತ್ತೊಂದು ವಸ್ತುವಾಗಿ ತೋರುವುದೇ ವಿಪರೀತ ಜ್ಞಾನವೆನಿಸುವುದು, ಕಪ್ಪೆಯ ಚಿಪ್ಪು ಬೆಳ್ಳಿಯಾಗಿ ತೋರುವುದೇ ಇದಕ್ಕೆ ನಿದರ್ಶನವು, "ನಾನು ಕೊಲ್ಲುವೆನು" ಎಂಬಲ್ಲಿ ಈ ಎರಡು ವಿಧಗಳಾದ ಜ್ಞಾನಗಳೂ ತೋರುವುವು. ಶಂಖದಲ್ಲಿ ಹೊಂಬಣ್ಣವು ತೋರುವಂತೆ ನಾನು ಎಂಬುದಕ್ಕೆ ಪರ್ಯಾಯವಾದ ಶರೀರದಲ್ಲಿ ಕೊಲೆಯೆಂಬ ಧರ್ಮಾಂತರವು ತೋರುವುದೇ ಅನ್ಯಥಾ ಜ್ಞಾನವೆಂತಲೂ, ಶುಕ್ತಿಯು ರಜತವಾಗಿ ತೋರುವಂತೆ ಶರೀರವು ಆತ್ಮವಾಗಿ ತೋರುವುದೇ ವಿಪರೀತ ಜ್ಞಾನವೆಂತಲೂ ತಿಳಿಯಬೇಕು. ಆದುದರಿಂದ ಕೊಲ್ಲುವುದು, ಕೊಲ್ಲಲ್ಪಡುವುದು ಎಂಬ ಧರ್ಮಗಳು ಆತ್ಮನಲ್ಲಿಲ್ಲ. ಈ ಧರ್ಮಗಳನ್ನು ಆತ್ಮನಲ್ಲಾರೋಪಿಸುವವರು ತತ್ವಜ್ಞರೂ ಅಲ್ಲ. ಶ್ಲೋ॥ ಯ ಏನಂ ವೇತ್ತಿ ಹಂತಾರಂ ಯಶ್ಚೈನಂ ಮನ್ಯತೇ ಹತಂ । ಉಭೌತೌ ನವಿಜಾನೀತೋ ನಾಯಂ ಹಂತಿ ನಹನ್ಯತೇ ॥ (ಗೀತಾ) ಅಜ್ಞಾನದಿಂದ ಹಂತೃತ್ವಾದಿಗಳು ಆತ್ಮನಲ್ಲಿ ತೋರುವುವೆಂದು ಹೇಳುವುದೇನೋ ಸತ್ಯ. ಆದರೇ ಈ ಧರ್ಮಗಳು ಶರೀರಕ್ಕೆ ತಪ್ಪುವುದಿಲ್ಲ. ಎಂಬೆಯೇನೋ. ಅದೂ ಸತ್ಯವಲ್ಲ ಶ್ಲೋ॥ ಅಥಚೈನಂ ನಿತ್ಯಜಾತಂ ನಿತ್ಯಂವಾ ಮನ್ಯಸೇ ಮೃತಂ । ತಥಾಪಿ ತ್ವಂ ಮಹಾಬಾಹೋ ನೈನಂ ಶೋಚಿತು ಮರ್ಹಸಿ ॥ (ಗೀತಾ) ಎಂಬಂತೆ ಶರೀರವು ಅಡಿಗಡಿಗೂ ಹುಟ್ಟಿ ನಾಶವಾಗುವುದರಿಂದ, ಅದಕ್ಕಾಗಿಯೂ ಚಿಂತಿಸಬೇಕಾದುದಿಲ್ಲ, ಆದಕಾರಣ 'ಕೊಲ್ಲುವುದು ಕೊಲ್ಲಲ್ಪಡುವುದು' ಎಂಬಧರ್ಮಗಳು ಶರೀರಾತ್ಮಗಳಲ್ಲಿ ಸಂಬಂಧಿಸದಿದ್ದರೂ, ಅನ್ಯಥಾ ಜ್ಞಾನ, ವಿಪರೀತ ಜ್ಞಾನಗಳನ್ನುಂಟುಮಾಡುವ ಮೂಲಾಜ್ಞಾನದಿಂದ ವ್ಯರ್ಥವಾದ ಸ್ವಪ್ನಬುದ್ಧಿಯಂತೆ ಶರೀರಾತ್ಮರಲ್ಲಿ ತೋರುವುವೇ ಹೊರತು, ಇದು ದಿಟವಲ್ಲ. ಆದುದರಿಂದ ಪರಮಾತ್ಮನೇ ಸರ್ವಕರ್ತನೆಂಬ ಕುಬೇರನ ಉಪದೇಶವನ್ನೇ ಸತ್ಯವೆಂದರಿಯಬೇಕು.

ರ್ಯಯಾ ॥೪॥ ತದ್ಗಚ್ಛ ಧ್ರುವ ! ಭದ್ರಂ ತೇ ಭಗವಂತ ಮಧೋಕ್ಷಜಂ ।
ಸರ್ವಭೂತಾತ್ಮಭಾವೇನ ಸರ್ವಭೂತಾತ್ಮ ವಿಗ್ರಹಂ ॥ ೫ ॥ ಭಜಸ್ವ
ಭಜನೀಯಾಂಘ್ರಿ ಮಭವಾಯ ಭವಚ್ಛಿದಂ । ಯುಕ್ತಂ ವಿರಹಿತಂ
ಶಕ್ತ್ಯಾ ಗುಣಮಯ್ಯಾತ್ಮಮಾಯಯಾ ॥ ೬ ॥ ವೃಣೀಹಿ ಕಾಮಂ ನೃಪ !
ಯನ್ಮನೋಗತಂ ಮತ್ತಸ್ತ್ವ ಮೌತ್ತಾನಪದೇಽವಿಶಂಕಿತಃ । ವರಂ ವರಾ
ರ್ಹೋಂಬುಜನಾಭಪಾದಯೋ ರನಂತರಂ ತ್ವಾಂ ವಯ ಮಂಗ ! ಶುಶ್ರು

ಬುದ್ಧಿಯು, ಪುರುಷಸ್ಯ - ಪುರುಷನ, ಅಜ್ಞಾನಾತ್ - ಸ್ವರೂಪಾಜ್ಞಾನದಿಂದ, ಆಭಾತಿ - ಉಂಟಾಗುವುದಷ್ಟೆ ॥ ೪ ॥ ಹೇ ಧ್ರುವ - ಎಲೈ ಧ್ರುವನೆ ! ತತ್ - ಆದುದರಿಂದ, ಸರ್ವ...ಹಂ - ಸಕಲ ಭೂತಗಳ ಸ್ವರೂಪವಾದ ಶರೀರವುಳ್ಳ, ಅಧೋಕ್ಷಜಂ - ಇಂದ್ರಿಯಾಗೋಚರನಾದ, ಭಗವಂತಂ - ಅದ್ಭುತವು ಹಿಮನಾದ ಹರಿಯನ್ನು, ಸರ್ವ...ನ - ಸಕಲ ಭೂತಗಳಲ್ಲಿ ಆತ್ಮಭಾವದಿಂದ, ಗಚ್ಛ - ಮರೆಹೋಗು, ತೇ - ನಿನಗೆ, ಭದ್ರಂ-ಒಳ್ಳೆಯದಾಗುವುದು ॥೫॥ ಗುಣಮಯ್ಯಾ-ಸತ್ವಾದಿರೂಪವಾದ, ಆತ್ಮಮಾಯಯಾ - ತನ್ನ ಮಾಯೆಯ, ಶಕ್ತ್ಯಾ - ಶಕ್ತಿಯಿಂದ, ಯುಕ್ತಂ - ಕೂಡಿರುವ, ವಿರಹಿತಂ - ಬಿಡಲ್ಪಟ್ಟಿರುವ, ಭವಚ್ಛಿದಂ - ಸಂಸಾರಹಾರಕನಾದ, ಭಜ...ಘ್ರಿಂ - ಪೂಜಾರ್ಹಗಳಾದ ಪಾದಗಳುಳ್ಳ, ಭಗವಂತನನ್ನು, ಅಭವಾಯ - ಸಂಸಾರ ನಿವೃತ್ತಿಗಾಗಿ, ಭಜಸ್ವ - ಭಜಿಸು ॥ ೬ ॥

ಔತ್ತಾನಪದೇ - ಉತ್ತಾನಪಾದನ ಪುತ್ರನಾದ, ನೃಪ - ಎಲೈ ರಾಜನೆ! ತ್ವಂ - ನೀನು, ಕಾಮಂ-ಸಂಕೋಚವಿಲ್ಲದೆ, ಅವಿಶಂಕಿತಃ - ನಿರ್ಭಯನಾಗಿ, ಮನೋಗತಂ - ಮನಸ್ಸಿನಲ್ಲಿರುವುದು, ಯತ್ - ಯಾವುದೋ, ವರಂ - ಅಂತಹ ವರವನ್ನು, ಮತ್ತಃ - ನನ್ನಿಂದ, ವೃಣೀಹಿ - ವರಿಸು, ವರಾರ್ಹಃ - ವರಕ್ಕೆಯೋಗ್ಯನಾದ ನೀನು, ಅಂಬು...ಯೋಃ - ಪದ್ಮನಾಭನ ಪಾದಗಳಿಗೆ, ಅನಂತರ ಮಿತಿ - ಹತ್ತಿರದ

ನಾನು ಕೊಂದೆನು ನೀನು ಕೊಂದೆ, ಎಂಬ ಭ್ರಾಂತಿಜ್ಞಾನವುಂಟಾಗುವುದು ಈ ಜ್ಞಾನವು ಸ್ವಪ್ನಪದಾರ್ಥಗಳ ಜ್ಞಾನದಂತೆ ವ್ಯರ್ಥವಾದುದೇ ಹೊರತು ಸತ್ಯವಲ್ಲ ದೇಹಾತ್ಮಧ್ಯಾಸರೂಪವಾದ ಈ ಭ್ರಾಂತಿ ಜ್ಞಾನದಿಂದಲೇ ಜನನ ಮರಣವಾದ ಸಂಸಾರವೂ ಅಜ್ಞಾನ ದುಃಖಾದಿಗಳೂ ಉಂಟಾಗುವುವು ॥೪॥ ಅಯ್ಯಾ ಧ್ರುವನೆ ! ಆದುದರಿಂದ ನೀನು ಸಕಲಭೂತಗಳಲ್ಲಿಯೂ ಆತ್ಮಭಾವವನ್ನು ಪಡೆದು, ಸರ್ವಭೂತಸ್ವರೂಪವಾದ ಶರೀರವುಳ್ಳವನಾದರೂ ಇಂದ್ರಿಯಗಳಿಗೆ ಅಗೋಚರನೆನಿಸಿರುವ ಭಗವಂತನನ್ನು ಮರೆಹೊಗು. ಇದರಿಂದ ನಿನಗೆ ಕಲ್ಯಾಣವಾಗುವುದು ॥೫॥ ಶರಣಾಗತನಾದ ಬಳಿಕ ಪೂಜಾರ್ಹಗಳಾದ ಪಾದಗಳುಳ್ಳವನಾಗಿ ಭಕ್ತರ ಪಾಪರಾಶಿಗಳನ್ನು ಪಲಾಯನಗೊಳಿಸುತ್ತಾ, ಸತ್ವಾದಿಗುಣರೂಪವಾದ ತನ್ನ ಮಾಯಾಶಕ್ತಿಯಿಂದೊಡಗೂಡಿದ ಗುಣರೂಪದಿಂದ ಜಗಲ್ಲೀಲೆಯನ್ನು ನಡೆಯಿಸುತ್ತಿದ್ದರೂ, ತಾನುಮಾತ್ರ ಮಾಯೆಗೊಳಗಾಗದೆ ನಿರ್ಗುಣವೆನಿಸಿರುವ ಭಗವಂತನನ್ನು ಭಜಿಸಿ ಕೃತಾರ್ಥನಾಗು ॥೬॥ ಎಲೈ ಪ್ರಿಯನಾದ ಧ್ರುವನೆ ! ವರಗಳನ್ನು ಪಡೆಯುವುದಕ್ಕೆ ಅರ್ಹನಾದ ನೀನು ಶ್ರೀಹರಿಯ ಪಾದಕಮಲಗಳಿಗೆ ಸಮೀಪದಲ್ಲಿರುವವನೆಂದು ನಾವು ಕೇಳಬಲ್ಲೆವಾದುದರಿಂದ, ಎಲಾ ಉತ್ತಾನಪಾದತನಯನೆ ! ನೀನು ಸಂಕೋಚಪಡದೆ ನಿರ್ಭಯನಾಗಿ ಇಚ್ಛಾ

ಷು ॥ ೭ ॥ ಸ ರಾಜರಾಜೇನ ವರಾಯ ಚೋದಿತೋ ಧ್ರುವೋ ಮಹಾಭಾ
ಗವತೋ ಮಹಾಮತಿಃ । ಹರೌ ಸ ವವ್ರೇಽಚಲಿತಾಂ ಸ್ಮೃತಿಂ ಯಯಾ
ತರತ್ಯಯತ್ನೇನ ದುರತ್ಯಯಂ ತಮಃ ॥ ೮ ॥ ತಸ್ಯ ಪ್ರೀತೇನ ಮನಸಾ ತಾಂ
ದತ್ತ್ವೈಲಬಿಲಸ್ತತಃ । ಪಶ್ಯತೋಽಂತರ್ದಧೇ ಸೋಽಪಿ ಸ್ವಪುರಂ ಪ್ರತ್ಯ
ಪದ್ಯತ ॥ ೯ ॥ ಅಥಾಽಯಜತ ಯಜ್ಞೇಶಂ ಕ್ರತುಭಿರ್ಭೂರಿದಕ್ಷಿಣೈಃ ।
ದ್ರವ್ಯಕ್ರಿಯಾದೇವತಾನಾಂ ಕರ್ಮ ಕರ್ಮಫಲಪ್ರದಂ ॥ ೧೦ ॥ ಸರ್ವಾ
ತ್ಮನ್ಯಚ್ಯುತೇಽಸರ್ವೇ ತೀವ್ರೌಘಾಂ ಭಕ್ತಿಮುದ್ವಹನ್ । ದದರ್ಶಾತ್ಮನಿ

---

ಲ್ಲಿರುವವನೆಂದು, ತ್ವಾಂ - ನಿನ್ನನ್ನು, ಶುಶ್ರುಮ - ಕೇಳಿರುವೆವು ॥ ೭ ॥ ಮಹಾಭಾಗವತಃ - ಭಕ್ತಾಗ್ರೇಸರನಾದ, ಮಹಾಮತಿಃ - ಸೂಕ್ಷ್ಮಬುದ್ಧಿಯಾದ, ಸಧ್ರುವಃ - ಆ ಧ್ರುವನು, ರಾಜರಾಜೇನ - ಚಕ್ರವರ್ತಿಯಾದ ಮನುವಿನಿಂದ, ವರಾಯ - ವರಕ್ಕಾಗಿ, ಚೋದಿತಃ - ಪ್ರೇರಿತನಾಗಿ, ಯಯಾ - ಯಾವುದರಿಂದ, ಅಯತ್ನೇನ - ಪ್ರಯತ್ನವಿಲ್ಲದೆ, ದುರತ್ಯಯಂ - ನಾಶಗೊಳಿಸಲಾಗದ, ತಮಃ - ಅಜ್ಞಾನವನ್ನು, ತರತಿ - ದಾಟುವನೋ, ಹರೌ - ಹರಿಯಲ್ಲಿ, ಅಚಲಿತಾಂ - ಸ್ಥಿರವಾದ, ತಾಂಸ್ಮೃತಿಂ - ಅಂತಹ ಸ್ಮರಣೆಯನ್ನು, ವವ್ರೇ - ಬೇಡಿದನು ॥ ೮ ॥ ಐಲಬಿಲಃ - ಕುಬೇರನು, ಪ್ರೀತೇನ - ಸಂತುಷ್ಟವಾದ, ಮನಸಾ - ಮನಸ್ಸಿನಿಂದ, ತಾಂ - ಭಗವತ್ಸ್ಮೃತಿಯನ್ನು, ದತ್ವಾ - ಕೊಟ್ಟು, ತಸ್ಯ - ಅವನು ಪಶ್ಯತಃ - ನೋಡುತ್ತಿರುವಾಗಲೇ, ಅಂತರ್ದಧೇ - ಮಾಯವಾದನು, ಸೋಽಪಿ - ಆ ಧ್ರುವನೂ, ಸ್ವಪುರಂ - ತನ್ನ ಪಟ್ಟಣವನ್ನು, ಪ್ರತ್ಯಪದ್ಯತ - ಹೊಂದಿದನು ॥ ೯ ॥ ಅಥ - ಬಳಿಕ, ದ್ರವ್ಯ...ನಾಂ - ಪುರೋಡಾಶಾದಿ ದ್ರವ್ಯವು, ಋತ್ವಿಜರವ್ಯಾಪಾರ ರೂಪವಾದ ಕರ್ಮವು, ಇಂದ್ರಾದಿ ದೇವತೆಗಳೂ ಇವರ, ಭೂರಿದಕ್ಷಿಣೈಃ - ಅಧಿಕ ದಕ್ಷಿಣೆಗಳುಳ್ಳ, ಕ್ರತುಭಿಃ - ಯಜ್ಞಗಳಿಂದ, ಕರ್ಮ - ಕರ್ಮಸಾಧ್ಯವಾದ ಫಲರೂಪನಾಗಿಯೂ, ಕರ್ಮಫಲಪ್ರದಂ - ಕರ್ಮಫಲವನ್ನು ಕೊಡತಕ್ಕವನಾಗಿಯೂ ಇರುವ, ಯಜ್ಞೇಶಂ - ಯಜ್ಞಮೂರ್ತಿಯನ್ನು, ಅಯಜತ - ಪೂಜಿಸಿದನು ॥ ೧೦ ॥ ಸರ್ವಾತ್ಮನಿ - ಸರ್ವಾತ್ಮಕನಾದ,

---

ನುಸಾರವಾದ ವರವನ್ನು ಬೇಡು, ಎಂದು ಹೇಳಿದನು ॥೭॥ ಆಗ ಮಹಾ ಭಾಗವತೋತ್ತಮನೂ, ಪ್ರಾಜ್ಞಶಿರೋಮಣಿಯೂ ಆದಧ್ರುವರಾಯನು ವರಕ್ಕಾಗಿ ಮನುಮಂಡಲೇಶ್ವರನಿಂದ ಪ್ರೇರಿತನಾಗಿ, ಯಾವುದರಿಂದ ಪ್ರಯತ್ನವಿಲ್ಲದೆಯೇ ದಾಟಲಶಕ್ಯವಾದ ಅಜ್ಞಾನಸಾಗರವನ್ನು ದಾಟಬಹುದೋ, ಅಂತಹ ನಿಶ್ಚಲವಾದ ಭಗವಂತನ ಸ್ಮರಣೆಯುಂಟಾಗುವಂತೆ ವರವನ್ನು ಬೇಡಿದನು ॥೮॥ ಕುಬೇರನು ಸಂತುಷ್ಟನಾಗಿ ಆತನ ಇಚ್ಛಾನುಸಾರವಾಗಿ ವರವನ್ನಿತ್ತು, ಆತನು ನೋಡುತ್ತಿದ್ದಂತೆಯೇ ಅಂತರ್ಧಾನನಾದನು ಬಳಿಕ ಧ್ರುವರಾಯನು ತನ್ನ ರಾಜಧಾನಿಗೆ ತೆರಳಿದನು ॥೯॥

ತರುವಾಯ ಧ್ರುವರಾಯನು ಭಗವಂತನ ಪ್ರಸನ್ನತೆ ಸಮಗ್ರದಕ್ಷಿಣೆಗಳುಳ್ಳ ಯಜ್ಞಗಳನ್ನು ನಡೆಯಿಸಿ, ಋತ್ವಿಜ ವ್ಯಾಪಾರರೂಪವಾದ ಕ್ರಿಯಾ ಕಲಾಪದಿಂದ ಚರುಪುರೋಡಾಶಾದಿ ದ್ರವ್ಯಗಳನ್ನಿತ್ತು, ಇಂದ್ರಾದಿ ದೇವತೆಗಳನ್ನು ದಣಿಸದಲ್ಲಿ ಯಾವ ಕರ್ಮಫಲವುಂಟಾಗುವುದೋ, ಅಂತಹ ಕರ್ಮಫಲಸ್ವರೂಪನಾಗಿಯೂ ಆ ಕರ್ಮಗಳನ್ನು ಕೊಡತಕ್ಕವನಾಗಿಯೂ ಇರುವ ಭಗವಂತನನ್ನಾರಾಧಿಸಿದನು ॥೧೦॥ ಇಷ್ಟೇ ಅಲ್ಲದೆ ಪಿತಾಮಹನಾದ

ಭೂತೇಷು ತಮೇವಾಽವಸ್ಥಿತಂ ವಿಭುಂ ॥ ೧೧ ॥ ತಮೇವಂ ಶೀಲಸಂಪ
ನ್ನಂ ಬ್ರಹ್ಮಣ್ಯಂ ದೀನವತ್ಸಲಂ । ಗೋಪ್ತಾರಂ ಧರ್ಮಸೇತೂನಾಂ ಮೇ
ನಿರೇ ಪಿತರಂ ಪ್ರಜಾಃ ॥ ೧೨ ॥ ಷಟ್ತ್ರಿಂಶದ್ವರ್ಷ ಸಾಹಸ್ರಂ ಶಶಾಸ ಕ್ಷಿತಿ
ಮಂಡಲಂ । ಭೋಗೈಃ ಪುಣ್ಯಕ್ಷಯಂ ಕುರ್ವನ್ನಶುಭೈ ರಶುಭಕ್ಷ
ಯಂ ॥ ೧೩ ॥ ಏವಂ ಬಹುಸವಂ ಕಾಲಂ ಮಹಾತ್ಮಾಽವಿಚಲೇಂದ್ರಿ
ಯಃ । ತ್ರಿವರ್ಗೌಪಯಿಕಂ ನೀತ್ವಾ ಪುತ್ರಾಯಾಽದಾನ್ನೃಪಾಸನಂ ॥೧೪॥

---

ಅಸರ್ವೇ - ಸರ್ವೋಪಾಧಿ ವರ್ಜಿತನಾದ, ಅಚ್ಯುತೇ - ವಿಷ್ಣುವಿನಲ್ಲಿ, ತೀವ್ರೌಘಾಂ - ನಿರಂತರ ಪ್ರವಾಹವುಳ್ಳ, ಭಕ್ತಿಂ - ಪ್ರೇಮವನ್ನು, ಉದ್ವಹನ್ - ವಹಿಸುತ್ತ, ಆತ್ಮನಿ - ತನ್ನಲ್ಲಿಯೂ, ಭೂತೇಷು ಚ - ಇತರ ಭೂತಗಳಲ್ಲಿಯೂ, ಅವಸ್ಥಿತಂ - ನೆಲಸಿರುವ, ವಿಭುಂ - ವ್ಯಾಪಕನಾದ, ತಮೇವ - ಆ ಹರಿಯನ್ನೇ, ದದರ್ಶ - ಕಂಡನು ॥ ೧೧ ॥ ಪ್ರಜಾಃ - ಪ್ರಜೆಗಳು, ಏವಂ - ಇಂತು, ಶೀಲಸಂಪನ್ನಂ-ಸದ್ವೃತ್ತಿಯಿಂದ ಕೂಡಿರುವ, ಬ್ರಹ್ಮಣ್ಯಂ - ಬ್ರಾಹ್ಮಣ ಪ್ರಿಯನಾದ, ದೀನವತ್ಸಲಂ-ಬಡವರನ್ನು ಸಲಹುವ, ಧರ್ಮಸೇತೂನಾಂ - ಧರ್ಮಮರ್ಯಾದೆಗಳನ್ನು, ಗೋಪ್ತಾರಂ - ಪಾಲಿಸುವ, ತಂ - ಆ ಧ್ರುವನನ್ನು, ಪಿತರಂ - ತಂದೆಯನ್ನಾಗಿ, ಮೇನಿರೇ - ತಿಳಿದರು ॥ ೧೨ ॥ ಭೋಗೈಃ - ಸುಖಾನುಭವದಿಂದ, ಪುಣ್ಯಕ್ಷಯಂ - ಪುಣ್ಯನಾಶವನ್ನೂ, ಅಶುಭೈಃ - ದುಃಖಾನುಭವದಿಂದ, ಅಶುಭಕ್ಷಯಂ - ಪಾಪನಾಶವನ್ನೂ, ಕುರ್ವನ್ - ಮಾಡುತ್ತಾ, ಷಟ್ತ್ರಿಂ...ಸ್ರಂ - ಮೂವತ್ತಾರು ಸಾವಿರ ವರ್ಷಗಳು, ಕ್ಷಿತಿಮಂಡಲಂ - ಭೂಮಂಡಲವನ್ನು, ಶಶಾಸ - ಪಾಲಿಸಿದನು ॥ ೧೧೩ ॥ ಮಹಾತ್ಮಾ - ಶ್ರೇಷ್ಠವಾದ ಮನಸ್ಸುಳ್ಳ, ಅವಿಚಲೇಂದ್ರಿಯಃ - ಜಿತೇಂದ್ರಿಯನಾದ ಧ್ರುವನು, ಏವಂ - ಇಂತು, ತ್ರಿವರ್ಗೌಪಯಿಕಂ - ಧರ್ಮಕಾಮಾರ್ಥಗಳಿಗೆ ಸಾಧನವಾದ, ಬಹುಸವಂ - ಅನೇಕ ಸಂವತ್ಸರಗಳುಳ್ಳ, ಕಾಲಂ - ಕಾಲವನ್ನು, ನೀತ್ವಾ - ಕಳೆದು, ಪುತ್ರಾಯ - ಮಗನಿಗೆ, ನೃಪಾಸನಂ - ಸಿಂಹಾಸನವನ್ನು, ಅದಾತ್ - ಕೊಟ್ಟನು ॥ ೧೪ ॥

---

ಮನುವಿನ ಉಪದೇಶಾನುಸಾರವಾಗಿ ಸರ್ವಾತ್ಮಕನಾಗಿಯೂ ಸರ್ವೋಪಾಧಿವರ್ಜಿತನಾಗಿಯೂ ಇರುವ ಶ್ರೀಹರಿಯಲ್ಲಿ, ನಿರಂತರವಾದ ಭಕ್ತಿಯನ್ನು ಬೆಳೆಯಿಸುತ್ತಾ ತನ್ನಲ್ಲಿಯೂ ಇತರ ಭೂತಗಳಲ್ಲಿಯೂ ಸಹ ಪರಿಪೂರ್ಣನಾದ ಆ ಭಗವಂತನೇ ನೆಲಸಿರುವುದನ್ನು ಕಂಡನು ॥ ಆತನ ಪ್ರಜೆಗಳೆಲ್ಲರೂ, ಇಂತು ಸರ್ವಾತ್ಮಭಾವವನ್ನು ಪಡೆದು ಸುಶೀಲನಾಗಿಯೂ, ಬ್ರಾಹ್ಮಣ ಸೇವಾಪರಾಯಣನಾಗಿಯೂ, ದೋಷವನ್ನೆಣಿಸದೆ ಬಡವರನ್ನು ಕನಿಕರಿಸುವವನಾಗಿಯೂ, ಸಂಪ್ರದಾಯಾನುಸಾರವಾಗಿ ಧರ್ಮಮರ್ಯಾದೆಗಳನ್ನು ಸಲಹುವವನಾಗಿಯೂ ಇರುವ ಆ ಧ್ರುವನನ್ನು ತಂದೆಯೆಂದೇ ಭಾವಿಸಿದರು ॥ ಪಾಪದಂತೆಯೇ ಪುಣ್ಯ ಕರ್ಮವೂ ಜನ್ಮಾಂತರವನ್ನುಂಟುಮಾಡುವುದರ ಮೂಲಕವಾಗಿ ಬ್ರಹ್ಮಪ್ರಾಪ್ತಿಗೆ ವಿರೋಧಿಯಾಗಿರುವುದರಿಂದ, ಅನುಭವಿಸಿದಲ್ಲದೆ ಪ್ರಾರಬ್ಧ ಕರ್ಮವು ಸವೆಯಲಾರದೆಂದು ಬಲ್ಲ ಧ್ರುವರಾಯನು ದುಃಖಾನುಭವದಿಂದ ಪಾಪಕರ್ಮಗಳನ್ನೂ ಸುಖಾನುಭವದಿಂದ ಪುಣ್ಯಕರ್ಮಗಳನ್ನೂ ನಾಶಗೊಳಿಸುತ್ತಾ ಮೂವತ್ತಾರು ಸಾವಿರ ವರ್ಷಗಳವರೆಗೂ ಧರ್ಮದಿಂದ ರಾಜ್ಯವನ್ನಾಳುತ್ತಿದ್ದನು॥ ಇಂತು ಪರಿಶುದ್ಧ ಮನಸ್ಕನಾಗಿ ಇಂದ್ರಿಯಗಳನ್ನು ಜಯಿಸಿ ಬಹುಕಾಲದವರೆಗೂ ಧರ್ಮಾರ್ಥ ಕಾಮಗಳೆಂಬ ಪುರುಷಾರ್ಥಗಳನ್ನು ಗಳಿಸಿ ಬಳಿಕ ತನ್ನ ಸಿಂಹಾಸನವನ್ನು ಮಗನಿಗಿತ್ತನು॥

§ ಮನ್ಯಮಾನ ಇದಂ ವಿಶ್ವಂ ಮಾಯಾರಚಿತ ಮಾತ್ಮನಿ । ಅವಿದ್ಯಾರಚಿತ ಸ್ವಪ್ನ ಗಂಧರ್ವನಗರೋಪಮಂ ॥ ೧೫ ॥ ಆತ್ಮಸ್ತ್ರ್ಯಪತ್ಯ ಸುಹೃದೋ ಬಲ ಮೃದ್ಧಕೋಶ ಮಂತಃ ಪುರಂ ಪರಿವಿಹಾರಭುವಶ್ಚ ರಮ್ಯಾಃ । ಭೂಮಂಡಲಂ ಜಲಧಿ ಮೇಖಲ ಮಾಕಲಯ್ಯ ಕಾಲೋಪಸೃಷ್ಟ ಮಿತಿ ಸಪ್ರಯಯೌ ವಿಶಾಲಾಂ ॥ ೧೬ ॥ ತಸ್ಯಾಂ ವಿಶುದ್ಧಕರಣ ಶ್ಶಿವವಾ ರ್ವಿಗಾಹ್ಯ ಬದ್ಧ್ವಾಸನಂ ಜಿತಮರುನ್ಮನಸಾ ಹೃತಾಕ್ಷಃ । ಸ್ಥೌಲೇ ದಧಾರ ಭಗವತ್ಪ್ರತಿ

---

ಆತ್ಮನಿ - ತನ್ನಲ್ಲಿ, ಮಾಯಾರಚಿತಂ - ಮಾಯೆಯಿಂದ ಕಲ್ಪಿತವಾದ, ಇದಂ - ಪರಿದೃಶ್ಯಮಾನವಾದ, ವಿಶ್ವಂ - ಜಗತ್ತನ್ನು, ಅವಿ...ಮಂ, ಅವಿದ್ಯಾ - ಅಜ್ಞಾನದಿಂದ, ರಚಿತ-ಮಾಡಲ್ಪಟ್ಟ, ಸ್ವಪ್ನ - ಕನಸಿಗೂ, ಗಂಧರ್ವನಗರಕ್ಕೂ, ಉಪಮಂ - ಸಮಾನವನ್ನಾಗಿ, ಮನ್ಯಮಾನಃ - ತಿಳಿದನು ॥ ೧೫ ॥ ಸಃ- ಆಧ್ರುವನು, ಆತ್ಮ...ದಃ - ಶರೀರ, ಹೆಂಡಿರು, ಮಕ್ಕಳು, ನಂಟರು ಇವರನ್ನೂ, ಬಲಂ-ಸೈನ್ಯವನ್ನೂ, ಋದ್ಧಕೋಶಂ - ತುಂಬಿದ ಬೊಕ್ಕಸವನ್ನೂ, ಅಂತಃಪುರಂ - ರಾಣಿವಾಸವನ್ನೂ, ರಮ್ಯಾಃ - ಸೊಗಸಾದ, ಪವಿಹಾರಭುವಶ್ಚ - ಆಟದ ತೋಟಗಳನ್ನೂ, ಜಲಧಿಮೇಖಲಂ - ಸಮುದ್ರಗಳಿಂದ ಬಳಸಲ್ಪಟ್ಟ, ಭೂಮಂಡಲಂ - ಭೂಮಂಡಲವನ್ನೂ, ಕಾಲೋಪಸೃಷ್ಟಮಿತಿ - ಕಾಲಕ್ಕೊಳಪಟ್ಟದೆಂದು, ಆ ಕಲಯ್ಯ - ನಿಶ್ಚಯಿಸಿ, ವಿಶಾಲಾಂ - ಬದರಿಕಾಶ್ರಮಕ್ಕೆ, ಪ್ರಯಯೌ - ಹೊರಟುಹೋದನು ॥ ೧೬ ॥ ತಸ್ಯಾಂ - ಆ ಬದರಿಕೆಯಲ್ಲಿ, ಶಿವವಾಃ-ಪವಿತ್ರವಾದ ಜಲವನ್ನು, ವಿಗಾಹ್ಯ - ಹೊಕ್ಕು, ವಿಶುದ್ಧಕರಣಃ- ಇಂದ್ರಿಯಗಳನ್ನು ಶುದ್ಧಗೊಳಿಸಿ, ಆಸನಂ - ಸ್ವಸ್ತಿಕ ಮೊದಲಾದ ಆಸನಗಳನ್ನು, ಬದ್ಧ್ವಾ - ಆಶ್ರಯಿಸಿ

---

ಬಳಿಕ ಐಹಿಕ ಭೋಗಗಳಲ್ಲಿ ಬೇಸರವನ್ನು ಪಡೆದು ಅಜ್ಞಾನದಿಂದ ಸ್ವಪ್ನವೂ ಗಂಧರ್ವನಗರಾದಿಗಳೂ ಕಲ್ಪಿಸಲ್ಪಡುವಂತೆ, ಈ ಜಗತ್ತೆಲ್ಲವೂ ಭಗವಂತನ ಮಾಯೆಯಿಂದ ತನ್ನಲ್ಲಿ ಕಲ್ಪಿತವಾಗಿರುವುದೆಂದು ತಿಳಿದನು ॥೧೫॥ ಮತ್ತು ಶರೀರವು ಹೆಂಡಿರು, ಮಕ್ಕಳು, ನಂಟರು, ಸೈನ್ಯವು, ತುಂಬಿದ ಬಂಡಾರವು, ರಾಣಿವಾಸವು, ರಮಣೀಯಗಳಾದ ವಿಹಾರಸ್ಥಳಗಳು, ಚತುಸ್ಸಮುದ್ರಮುದ್ರಿತವಾದ ಭೂಮಂಡಲವು, ಇವೆಲ್ಲವೂ ಕಾಲಶಕ್ತಿಗೊಳಪಟ್ಟು ನಾಶವಾಗತಕ್ಕವುಗಳೆಂದು ನಿಶ್ಚಯಿಸಿಕೊಂಡು, ತಪಸ್ಸಿಗಾಗಿ ಬದರಿಕಾಶ್ರಮಕ್ಕೆ ತೆರಳಿದನು॥ ಅಲ್ಲಿ ಪವಿತ್ರವಾದ ನದೀಜಲದಲ್ಲಿ ಸ್ನಾನವನ್ನು ಮಾಡುತ್ತಾ, ಇಂದ್ರಿಯದೋಷಗಳನ್ನು ನೀಗಾಡಿ ಸ್ವಸ್ತಿಕ ಮೊದಲಾದ ಆಸನಗಳಲ್ಲಿ ಸಿದ್ಧಿಯನ್ನು ಪಡೆದು ರೇಚಕ ಪೂರಕ ಕುಂಭಕಗಳಿಂದ ಪ್ರಾಣವಾಯುಗಳನ್ನು ನಿರೋಧಿಸಿ, ಮನಸ್ಸಿನಿಂದ ಚಕ್ಷುರಾದೀಂದ್ರಿಯಗಳನ್ನು

---

§ (೧) ವೀ. ದೇವಮಾನವಾದಿ ರೂಪವಾದ ಈ ಜಗತ್ತು, ಪ್ರಕೃತಿ ಪರಿಣಾಮರೂಪವಾದ ಸ್ವಪ್ನ ಗಂಧರ್ವನಗರದಂತೆ ಜೀವನಲ್ಲಿ ಮಾಯೆಯಿಂದ ಕಲ್ಪಿತವಾಗಿರುವುದೆಂದು ತಿಳಿದನು.

(೨) ವಿ. ಪರಮಾತ್ಮನ ಇಚ್ಛೆಯಿಂದ ಕಲ್ಪಿತಗಳಾದ ಸ್ವಪ್ನಗಂಧರ್ವ ನಗರಗಳಂತೆ, ಈ ಜಗತ್ತು ಭಗವದಿಚ್ಛೆಯಿಂದ ಪರಮಾತ್ಮನಲ್ಲಿ ಕಲ್ಪಿತವಾಗಿರುವುದೆಂದು ತಿಳಿದನು. ಇಲ್ಲಿ "ಅವಿದ್ಯಾ" ಎಂಬ ಪದಕ್ಕೆ ಅ-ವಿಷ್ಣುವಿನ, ವಿದ್ಯಾ-ಇಚ್ಛೆ, ಎಂದರ್ಥವು, ಮಾಯಾಶಬ್ದಕ್ಕೂ ಇಚ್ಛೆಯೆಂದೇ ಅರ್ಥವು. ಶ್ಲೋ॥ ಮಹಾಮಾಯೇ ತ್ಯವಿದ್ಯೇತಿ ನಿಯತಿ ರ್ಮೋಹಿನೀತಿಚ । ಪ್ರಕೃತಿ ರ್ವಾಸನೇ ತ್ಯೇವ ತವೇಚ್ಛಾನಂತ । ಕಥ್ಯತೇ॥ "ಅ" ನಿರೋಧೇ ಪುಮಾನ್ವಿಷ್ಣೌ, 'ಅ' ಎಂಬುದು ವಿಷ್ಣುವಾಚಕವಾದಾಗ ಪುಲ್ಲಿಂಗವಾಗುವುದು.

ರೂಪ ಏತ ದ್ಧ್ಯಾಯಂ ಸ್ತದವ್ಯವಹಿತೋ ವ್ಯಸೃಜ ತ್ಸಮಾಧೌ ॥ ೧೭ ॥
ಭಕ್ತಿಂ ಹರೌ ಭಗವತಿ ಪ್ರವಹ ನ್ನಜಸ್ರ ಮಾನಂದಬಾಷ್ಪಕಲಯಾ ಮುಹು
ರರ್ದ್ಯಮಾನಃ । ವಿಕ್ಲಿದ್ಯಮಾನಹೃದಯಃ ಪುಲಕಾಂಚಿತಾಂಗೋ ನಾ
ತ್ಮಾನ ಮಸ್ಮರ ದಸಾವಿತಿ ಮುಕ್ತಲಿಂಗಃ ॥ ೧೮ ॥ ಸದದರ್ಶ ವಿಮಾನಾ
ಗ್ರ್ಯಂ ನಭಸೋಽವತರ ದ್ಧ್ರುವಃ । ವಿಭ್ರಾಜಯ ದ್ದಶದಿಶೋ ರಾಕಾ
ಪತಿ ಮಿವೋದಿತಂ ॥ ೧೯ ॥ ತತ್ರಾಽನುದೇವ ಪ್ರವರೌ ಚತುರ್ಭುಜೌ

---

ಜಿತಮರುತ್ - ಶ್ವಾಸಧಾರಣೆಯುಮಾಡಿ, ಮನಸಾ - ಮನಸ್ಸಿನಿಂದ, ಆಹೃತಾಕ್ಷಃ - ಇಂದ್ರಿಯ ಗಳನ್ನು ಹಿಂದಿರುಗಿಸಿ, ಸ್ಥೂಲೇ - ದೊಡ್ಡದಾದ, ಭಗವತ್ಪ್ರತಿರೂಪೇ - ಭಗವಂತನ ವಿರಾಡ್ರೂಪದಲ್ಲಿ, ಏತತ್ - ಈ ಮನಸ್ಸನ್ನು, ದಧಾರ - ನೆಲೆಗೊಳಿಸಿದನು, ಧ್ಯಾಯನ್ - ಧ್ಯಾನಿಸುತ್ತಾ, ಅವ್ಯವಹಿತಃ - ಧ್ಯಾತೃಧ್ಯೇಯ ಭೇದವಳಿದವನಾಗಿ, ಸಮಾಧೌ - ಸಮಾಧಿಯಲ್ಲಿ ನೆಲಸಿ, ತತ್ - ಆಸ್ಥೂಲ ರೂಪವನ್ನು, ವ್ಯಸೃಜತ್ - ಬಿಟನು ॥ ೧೭ ॥ ಭಗವತಿ - ಭಗವಂತನಾದ, ಹರೌ - ಹರಿಯಲ್ಲಿ, ಅಜಸ್ರಂ - ಯಾ ವಾಗಲೂ, ಭಕ್ತಿಂ - ಭಕ್ತಿಯನ್ನು, ಪ್ರವಹನ್ - ಸಂಪೂರ್ಣವಾಗಿಟ್ಟು, ಮುಹುಃ - ಅಡಿಗಡಿಗೂ, ಆನಂದ ಬಾಷ್ಪಕಲಯಾ - - ಆನಂದ ಬಾಷ್ಪಗಳ ಪ್ರವಾಹದಿಂದ, ಅರ್ದ್ಯಮಾನಃ - ತೋಯಿಸಲ್ಪ ಟ್ಟವನಾಗಿ, ವಿಕ್ಲಿದ್ಯಮಾನ ಹೃದಯಃ - ಮನಸ್ಸುಕರಗಿ, ಪುಲಕಾಂಚಿತಾಂಗಃ-ಮೈಯಲ್ಲಿ ರೋಮಾಂ ಚವಾಗಿ, ಮುಕ್ತಲಿಂಗಃ - ಶರೀರಾಭಿಮಾನವಿಲ್ಲದುದರಿಂದ, ಆತ್ಮಾನಂ - ತನ್ನನ್ನೂ, ನಾಸ್ಮರತ್- ಸ್ಮರಿಸಲಿಲ್ಲ ॥ ೧೮ ॥

ಸಃ - ಆಧ್ರುವನು, । ನಭಸಃ - ಆಕಾಶದಿಂದ, ಅವತರತ್ - ಇಳಿಯುತ್ತಿರುವ, ಉದ್ಯತಂ - ಉದ ಯಿಸಿದ, ರಾಕಾಪತಿಮಿವ - ಚಂದ್ರಮಂಡಲದಂತೆ, ದಶದಿಶಃ - ಹತ್ತು ದಿಕ್ಕುಗಳನ್ನು, ವಿಭ್ರಾಜಯ ತ್ - ಬೆಳಗಿಸುತ್ತಿರುವ, ವಿಮಾಗ್ರ್ಯಂ - ಉತ್ತಮ ವಿಮಾನವನ್ನು, ದದರ್ಶ - ಕಂಡನು ॥ ೧೯ ॥ ಅನು - ಬಳಿಕ, ತತ್ರ - ಅಲ್ಲಿ, ಚತುರ್ಭುಜೌ - ನಾಲ್ಕುತೋಳುಳ್ಳ, ಶ್ಯಾಮೌ-ನೀಲವರ್ಣರಾದ, ಕಿಶೋ

---

ವಿಷಯಗಳಗೆರಗದಂತೆ ಹಿಂದಿರುಗಿಸಿ, ಭಗವಂತನ ಸ್ಥೂಲಾಕಾರವೆನಿಸಿದ ವಿರಾಡ್ರೂಪದಲ್ಲಿ ಮನಸ್ಸನ್ನು ನಿಲ್ಲಿಸಿ ಧ್ಯಾನಿಸುತ್ತಾ, ಧ್ಯಾತೃಧ್ಯೇಯಗಳೆಂಬ ಭೇದವಳಿದು ಸಮಾಧಿನಿಷ್ಠನಾ ಗಿ ಧ್ಯಾನಕ್ಕೆ ವಿಷಯವಾಗಿದ್ದ ಆ ಸ್ಥೂಲರೂಪವನ್ನುಳಿದನು ॥೧೭॥ ಇಂತು ಯಮನಿಯ ಮಾದ್ಯಷ್ಟಾಂಗ ಯೋಗನಿಷ್ಠಾಗರಿಷ್ಠನಾಗಿ, ಭಗವಂತನಾದ ವಾಸುದೇವಮೂರ್ತಿಯಲ್ಲಿ ನಿರಂತರದಲ್ಲಿಯೂ ಅನನ್ಯವಾದ ಭಕ್ತಿಯನ್ನು ಬೆಳೆಯಿಸುತ್ತಾ, ಅಡಿಗಡಿಗೂಆತ್ಮಾನಂದದಿಂ ದುಂಟಾಗುವ ಆನಂದ ಬಾಷ್ಪಗಳಿಂದ ನೆನೆಯುತ್ತಾ, ಮನಸ್ಸುಕರಗಿ ಮೈಯೆಲ್ಲವೂ ರೋ ಮಾಂಚನೇರಿ ದೇಹಾಭಿಮಾನವು ಕೂಡ ಇಲ್ಲದೆ ಬ್ರಹ್ಮಾನಂದಸಾಗರದಲ್ಲೋಲಾಡುತ್ತಾ "ತಾನು ಧ್ರುವನು" ಎಂಬುದನ್ನು ಸಹ ಮರೆತುಹೋದನು ॥೧೮॥ ಇಂತು ಆತ್ಮಾರಾಮ ನಾಗಿ ಉದಯಿಸುವ ಪೂರ್ಣಿಮಾ ಚಂದ್ರಮಂಡಲದಂತೆ ದಶದಿಕ್ಕುಗಳನ್ನೂ ಬೆಳಗಿಸುತ್ತಾ, ಗಗನಮಾರ್ಗದಿಂದಿಳಿಯುತ್ತಿರುವ ದಿವ್ಯವಿಮಾನವನ್ನು ಕಂಡನು ॥ ೧೯ ॥ ತರುವಾ ಯ ಆ ವಿಮಾನದಲ್ಲಿ ಚತುರ್ಭುಜಗಳಿಂದೊಪ್ಪುತ್ತಾ, ನೀಲಮೇಘಶ್ಯಾಮರಾಗಿಯೂ, ಕಿಂ

ಶ್ಯಾಮೌ ಕಿಶೋರಾ ವರುಣಾಂಬುಜೇಕ್ಷಣೌ । ಸ್ಥಿತಾ ವವಷ್ಟಭ್ಯ ಗದಾಂ ಸುವಾಸಸೌ ಕಿರೀಟಹಾರಾಂಗದಚಾರುಕುಂಡಲೌ ॥ ೨೦ ॥ ವಿಜ್ಞಾಯ ತಾ ವುತ್ತಮಗಾಯಕಿಂಕರಾ ವಭ್ಯುತ್ಥಿತ ಸ್ಸಾಧ್ವಸವಿಸ್ಮೃತ ಕ್ರಮಃ । ನನಾಮ ನಾಮಾನಿ ಗೃಣನ್ ಮಧುದ್ವಿಷಃ ಪಾರ್ಷತ್ಪ್ರಧಾನಾವಿತಿ ಸಂಹತಾಂಜಲಿಃ ॥ ೨೧ ॥ ತಂ ಕೃಷ್ಣಪಾದಾ ಽ ಭಿನಿವಿಷ್ಟಚೇತಸಂ ಬದ್ಧಾಂಜಲಿಂ ಪ್ರಶ್ರಯನಮ್ರಕಂಧರಂ । ಸುನಂದನಂದಾ ವುಪಸೃತ್ಯ ಸಸ್ಮಿತಂ ಪ್ರತ್ಯೂಚತುಃ ಪುಷ್ಕರನಾಭಸಮ್ಮತೌ ॥ ೨೨ ॥ ಸುನಂದನಂದಾ ವೂಚತುಃ ॥ ಭೋಭೋ ರಾಜನ್! ಸುಭದ್ರಂ ತೇ ವಾಚಂ ನೋಽವಹಿತ ಶ್ಶೃಣು । ಯಃ

---

ರೌ - ಬಾಲರಾದ, ಅರು...ಣೌ - ಕೆಂದಾವರೆಯಸಳಿನಂತೆ ಕಣ್ಣುಳ್ಳ, ಸುವಾಸಸೌ - ಉತ್ತಮ ವಸ್ತ್ರಗಳನ್ನು ಧರಿಸಿರುವ, ಕಿರೀ...ಲೌ - ಕಿರೀಟ, ಬಾಹುಪುರಿ, ಸೊಗಸಾದ ಕುಂಡಲಗಳು ಇವುಗಳನ್ನು ಧರಿಸಿದ, ಗದಾಂ - ಗದೆಯನ್ನು, ಅವಷ್ಟಭ್ಯ - ಹಿಡಿದು, ಸ್ಥಿತೌ - ಇರುವ, ದೇವಪ್ರವರೌ - ಇಬ್ಬರು ದೇವಪುರುಷರನ್ನು, ದದರ್ಶ - ಕಂಡನು ॥ ೨೦ ॥ ತೌ - ಅವರನ್ನು, ಉತ್ತ..ರೌ - ಭಗವಂತನ ಅನುಚರರನ್ನಾಗಿ ವಿಜ್ಞಾಯ - ತಿಳಿದು, ಅಭ್ಯುತ್ಥಿತಃ - ಎದುರುಗೊಂಡು, ಸಾಧ್ವ...ಮಃ - ಸಡಗರದಿಂದ ಪೂಜಾಕ್ರಮವನ್ನು ಮರೆತು, ಪಾರ್ಷತ್ಪ್ರಧಾನಾವಿತಿ - ಭಕ್ತಾಗ್ರೇಸರರೆಂದು, ಮಧುದ್ವಿಷಃ - ಶ್ರೀಹರಿಯ, ನಾಮಾನಿ - ನಾಮಗಳನ್ನು, ಗೃಣನ್ - ಹೊಗಳುತ್ತಾ, ಸಂಹತಾಂಜಲಿಃ - ಕೈಮುಗಿದು, ನನಾಮ - ನಮಿಸಿದನು ॥೨೧॥ ಕೃಷ್ಣ...ಸಂ - ಕೃಷ್ಣನಪಾದಗಳಲ್ಲಿಡಲ್ಪಟ್ಟ ಮನಸ್ಸುಳ್ಳ, ಬದ್ಧಾಂಜಲಿಂ - ಕೈಜೋಡಿಸಿರುವ, ಪ್ರಶ್ರ...ರಂ - ವಿನಯದಿಂದ ತಲೆಯನ್ನು ಬಾಗಿಸಿರುವ, ತಂ - ಅವನನ್ನು, ಉಪಸೃತ್ಯ - ಬಳಿವಿಡಿದು, ಪುಷ್ಕ...ತೌ - ವಿಷ್ಣುವಿಗೆ ಪ್ರಿಯರಾದ, ಸುನಂದನಂದೌ - ಸುನಂದನಂದರೆಂಬುವರು, ಸಸ್ಮಿತಂ - ನಸುನಕ್ಕು, ಪ್ರತ್ಯೂಚತುಃ - ಉತ್ತರವನ್ನಿತ್ತರು ॥೨೨॥

ಭೋಭೋರಾಜನ್ - ಅಯ್ಯಾ ರಾಜನೆ! ಪಂಚವರ್ಷಃ - ಐದುವರ್ಷವುಳ್ಳ, ಯಃ ಭವಾನ್ - ಯಾವ ನೀನು, ತಪಸಾ - ತಪಸ್ಸಿನಿಂದ, ದೇವಂ - ಭಗವಂತನನ್ನು, ಅತೀತೃಪತ್ - ಮೆಚ್ಚಿಸಿದೆಯೋ-

---

ದಾವರೆಯ ಎಸಳನಂತೆ ಬೊಗಸೆಗಣ್ಣುಗಳುಳ್ಳವರಾಗಿಯೂ, ಕಿರೀಟ, ಹಾರ, ಅಂಗದ ಕುಂಡಲಗಳಿಂದ ಶೋಭಿತರಾಗಿಯೂ, ಬಾಲರಾಗಿಯೂ, ಗದಾದಂಡವನ್ನು ಧರಿಸಿದವರಾಗಿಯೂ ಇರುವ ಇಬರು ದೇವಪುರುಷರನ್ನು ಕಂಡನು ॥೨೦॥ ಕೂಡಲೇ ಅವರನ್ನು ಪುಣ್ಯಶ್ಲೋಕನಾದ ಪುರಾಣಪುರುಷನ ಕಿಂಕರರನ್ನಾಗಿ ತಿಳಿದು, ತಟ್ಟನೆ ಎದುರುಗೊಂಡು,, ಭಗವಂತನಪಾರ್ಷದರೇ ಬಿಜಮಾಡಿ ದರ್ಶನವನ್ನಿತ್ತರಲ್ಲಾ " ಎಂಬ ಸಂಭ್ರಮದಿಂದಅತಿಥಿಪೂಜಾಕ್ರಮವನ್ನೂ ಕೂಡ ಮರೆತು ಸಂತೋಷಾತಿಶಯದಿಂದ ಭಗವಂತನ ದಿವ್ಯನಾಮಗಳನ್ನು ಹೊಗಳುತ್ತಾ ಬದ್ಧಾಂಜಲಿಯಾಗಿ ನಮಿಸಿದನು ॥೨೧॥ ಆಗ ಭಗವಂತನಿಗೆ ಪ್ರಿಯರಾಗಿರುವ ಸುನಂದ, ನಂದರೆಂಬ ಆ ದೇವಪುರುಷರು ಭಗವಂತನ ಪಾದಕಮಲದಲ್ಲಿ ಮನಸ್ಸನ್ನಿಟ್ಟು, ವಿನಯದಿಂದ ತಲೆಯನ್ನು ಬಾಗಿಸಿ ಬದ್ಧಾಂಜಲಿಯಾಗಿ ನಿಂದಿರುವ ಧ್ರುವರಾಜನ ಬಳಿಗೆಬಂದು ಕಿರುನಗೆಯನ್ನು ತೋರುತ್ತಾ ನುಡಿದರೆಂತೆಂದರೆ ॥೨೨॥ ಅಯ್ಯಾ

ಪಂಚವರ್ಷ ಸ್ತಪಸಾ ಭವಾನ್ ದೇವ ಮತೀತೃಪತ್ ॥ ೨೩ ॥ ತಸ್ಯಾಖಿ
ಲ ಜಗದ್ಧಾತು ರಾವಾಂ ದೇವಸ್ಯ ಶಾರ್ಙ್ಗಿಣಃ । ಪಾರ್ಷದಾ ವಿಹ ಸಂಪ್ರಾ
ಪ್ತೌ ನೇತುಂ ತ್ವಾಂ ಭಗವತ್ಪದಂ ॥೨೪॥ ಸುದುರ್ಜಯಂ ವಿಷ್ಣುಪದಂ ಜಿ
ತಂ ತ್ವಯಾ ಯತ್ಸೂರಯೋ ಽ ಪ್ರಾಪ್ಯ ವಿಚಕ್ಷತೇ ಪರಂ । ಆತಿಷ್ಠ ತ
ಚ್ಚಂದ್ರದಿವಾಕರಾದಯೋ ಗ್ರಹರ್ಕ್ಷತಾರಾಃ ಪರಿಯಂತಿ ದಕ್ಷಿಣಂ ॥ ೨೫ ॥
ಅನಾಸ್ಥಿತಂ ತೇ ಪಿತೃಭಿ ರನ್ಯೈರಪ್ಯಂಗ ! ಕರ್ಹಿಚಿತ್ । ಆತಿಷ್ಠ ಜಗತಾಂ

---

ಆ ನೀನು, ಅವಹಿತಃ - ಸಾವಧಾನವಾಗಿ, ನಃ - ನಮ್ಮ, ವಾಚಂ - ಮಾತನ್ನು, ಶೃಣು - ಕೇಳು ॥೨೩॥ ಆವಾಂ - ನಾವಿಬ್ಬರೂ, ಅಖಿ...ತುಃ - ಸಕಲ ಜಗತ್ತನ್ನು ನಿರ್ಮಾಣ ಮಾಡಿದ, ಶಾರ್ಙ್ಗಿಣಃ - ಶಾರ್ಙ್ಗವೆಂಬ ಧನುಸ್ಸುಳ್ಳ, ತಸ್ಯದೇವಸ್ಯ - ಆ ವಿಷ್ಣುವಿನ, ಪಾರ್ಷದೌ - ಸನ್ನಿಧಿಸೇವಕರು, ತ್ವಾಂ - ನಿನ್ನನ್ನು, ಭಗವತ್ಪದಂ - ಭಗವಂತನಬಳಿಗೆ, ನೇತುಂ - ಒಯ್ಯುವುದಕ್ಕಾಗಿ, ಇಹ - ಇಲ್ಲಿಗೆ, ಸಂಪ್ರಾಪ್ತೌ - ಬಂದೆವು ॥೨೪॥ ಸುದುರ್ಜಯಂ - ದುಃಖದಿಂದಲೂ ಜಯಿಸಲಾಗದ, ವಿಷ್ಣುಪದಂ - ವಿಷ್ಣುವಿನ ನೆಲೆಯು, ತ್ವಯಾ - ನಿನ್ನಿಂದ, ಜಿತಂ - ಜಯಿಸಲ್ಪಟ್ಟಿತು, ಸೂರಯಃ - ಸಪ್ತಋಷಿಗಳು, ಯತ್ - ಯಾವುದನ್ನು, ಅಪ್ರಾಪ್ಯ - ಹೊಂದದೆ, ಪರಂ - ಕೆಳಗಿದ್ದುಕೊಂಡು, ಪಶ್ಯಂತಿ - ನೋಡುವರೊ, ಚಂದ್ರ...ಯಃ - ಚಂದ್ರ, ಸೂರ್ಯ, ಮೊದಲಾದ, ಗ್ರಹರ್ಕ್ಷತಾರಾಃ - ಗ್ರಹಗಳು, ನಕ್ಷತ್ರಗಳು, ತಾರೆಗಳು, ಯತ್ - ಯಾವುದನ್ನು, ದಕ್ಷಿಣಂ - ಪ್ರದಕ್ಷಿಣವಾಗಿ, ಪರಿಯಂತಿ - ಸುತ್ತುವುವೋ, ತತ್ - ಆ ಸ್ಥಾನದಲ್ಲಿ ಇರು ॥೨೫॥ ಹೇ ಅಂಗ - ಎಲೈ ಧ್ರುವನೆ! ಯತ್ - ಯಾವಸ್ಥಾನವು, ತೇ - ನಿನ್ನ, ಪಿತೃಭಿಃ - ಪೂರ್ವೀಕರಿಂದಲೂ, ಅನ್ಯೈರಪಿ - ಇತರರಿಂದಲೂ, ಅನಾಸ್ಥಿತಂ - ಆಶ್ರಯಿಸಲ್ಪಡಲಿಲ್ಲವೋ, ಜಗತಾಂ - ಸಕಲಲೋಕಗಳಿಗೂ, ವಂದ್ಯಂ - ಪೂಜ್ಯವಾದ, ತತ್ - ಆ, ವಿಷ್ಣೋಃ - ವಿಷ್ಣು

---

ರಾಜನೆ ! ಸಾವಧಾನವಾಗಿ ನಮ್ಮ ನುಡಿಯನ್ನಾಲಿಸು. ನೀನು ಐದುವರ್ಷದ ಬಾಲನಾಗಿರುವಾಗಲೇ ಘೋರವಾದ ತಪವನ್ನಾಚರಿಸಿ ಯಾವ ಭಗವಂತನನ್ನು ಮೆಚ್ಚಿಸಿದೆಯೋ ॥೨೩॥ ಸಕಲ ಜಗತ್ಕಾರಣನೂ, ದಿವ್ಯಮಂಗಳ ವಿಗ್ರಹನೂ, ಆದ ಆ ವಾಸುದೇವಮೂರ್ತಿಯ ಕಿಂಕರರಾದ ನಾವು, ನಿನ್ನನ್ನು ಪರಮಪದಕ್ಕೆ ಕರೆದುಕೊಂಡು ಹೋಗುವುದಕ್ಕಾಗಿ ಇಲ್ಲಿಗೆ ಬಂದಿರುವೆವು ॥೨೪॥ ಅಯ್ಯಾ ಭಾಗವತೋತ್ತಮನೆ ! ಇತರರು ಎಷ್ಟು ಕಷ್ಟಪಟ್ಟರೂ ದೊರೆಯಲಾರದ ವಿಷ್ಣುಪದವನ್ನು ನೀನು ಜಯಿಸಿದೆ. ನಿತ್ಯಸೂರಿಗಳೆನಿಸಿರುವ ಸಪ್ತಋಷಿಗಳು ಕೂಡ ಯಾವ ಉತ್ತಮ ಪದವನ್ನು ಪಡೆಯಲಾರದೇ ಕೆಳಗಡೆಯಲ್ಲಿದ್ದು ನೋಡುವರೋ, ಸೂರ್ಯ, ಚಂದ್ರಮೊದಲಾದ ಗ್ರಹಗಳು, ಅಶ್ವಿನ್ಯಾದಿ ನಕ್ಷತ್ರಗಳು, ಇತರ ತಾರೆಗಳೂ, ಯಾವ ದಿವ್ಯಪದವನ್ನು ಪ್ರದಕ್ಷಿಣವಾಗಿ ಸುತ್ತುತ್ತಿರುವುವೋ, ಅಂತಹ ಪರಮಪದವನ್ನು ಪಡೆ ॥ ೨೫ ॥ ನಿನ್ನ ಪೂರ್ವೀಕರಾದ ಮನ್ವಾದಿಗಳಾಗಲಿ, ಇತರ ಮಹಾತ್ಮರಾಗಲಿ, ಯಾವ ಪದವನ್ನು ಪಡೆಯಲಿಲ್ಲವೋ, ಅಂತಹ

ವಂದ್ಯಂ ತದ್ವಿಷ್ಣೋಃ ಪರಮಂ ಪದಂ ॥೨೬॥ * ಏತದ್ವಿಮಾನ ಪ್ರವರ ಮು
ತ್ತಮಶ್ಲೋಕಮೌಳಿನಾ । ಉಪಸ್ಥಾಪಿತ ಮಾಯುಷ್ಮ ನ್ನಧಿರೋಢುಂ ತ್ವ
ಮರ್ಹಸಿ ॥೨೭॥ ಮೈತ್ರೇಯಃ ॥ ನಿಶಮ್ಯ ವೈಕುಂಠನಿಯೋಜ್ಯಮುಖ್ಯ
ಯೋ ರ್ಮಧುಚ್ಯುತಾಂ ವಾಚ ಮುರುಕ್ರಮಪ್ರಿಯಃ। ಕೃತಾಽಭಿಷೇಕಃ ಕೃತ
ನಿತ್ಯಮಂಗಳೋ ಮುನೀನ್ ಪ್ರಣಮ್ಯಾಶಿಷ ಮಭ್ಯವಾದಯತ್ ॥೨೮॥ ಪರೀ
ತ್ಯಾಽಭ್ಯರ್ಚ್ಯ ಧಿಷ್ಣ್ಯಾಽಗ್ರ್ಯಂ ಪಾರ್ಷದಾ ವಭಿವಂದ್ಯಚ। ಇಯೇಷ ತದಧಿ

---

ವಿನ, ಪರಮಂಪದಂ - ಉತ್ತಮಪದವನ್ನು, ಆತಿಷ್ಠ - ಪಡೆ ॥೨೬॥ ಹೇ ಆಯುಷ್ಮನ್ - ಎಲೈ ಆ
ಯುಷ್ಮಂತನೆ ! ಉತ್ತ...ನಾ - ಉತ್ತಮ ಶ್ಲೋಕದಲ್ಲಿ ಉತ್ತಮನಾದ ಭಗವಂತನಿಂದ, ಏತತ್ -ಈ,
ವಿಮಾನಪ್ರವರಂ - ಉತ್ತಮ ವಿಮಾನವು, ಉಪಸ್ಥಾಪಿತಂ - ಕಳುಹಿಸಲ್ಪಟ್ಟಿತು, ತ್ವಂ - ನೀನು, ಅಧಿ
ರೋಢುಂ - ಏರುವುದಕ್ಕೆ, ಅರ್ಹಸಿ - ಯೋಗ್ಯನಾಗುತ್ತಿ ॥೨೭॥ ಮೈತ್ರೇಯನು ಹೇಳುತ್ತಾನೆ ॥ ಉ
ರು...ಯಃ - ಭಗವಂತನಿಗೆ ಪ್ರಿಯನಾದ ಧ್ರುವನು, ವೈಕುಂ...ಯೋಃ - ಭಗವಂತನ ಪಾರ್ಷದರಲ್ಲಿ
ಮುಖ್ಯರಾದ ಸುನಂದನಂದರ, ಮಧುಚ್ಯುತಾಂ - ಅಮೃತವನ್ನು ಸುರಿಸುವ, ವಾಚಂ - ನುಡಿಯನ್ನು,
ನಿಶಮ್ಯ-ಕೇಳಿ, ಕೃತಾಭಿಷೇಕಃ-ಸ್ನಾನವನ್ನು ಮಾಡಿ, ಕೃತ....ಳಃ ನಿತ್ಯಕರ್ಮವನ್ನು ಮಾಡಿ, ಮುನೀನ್-
ಋಷಿಗಳನ್ನು, ಪ್ರಣಮ್ಯ-ನಮಸ್ಕರಿಸಿ, ಆಶಿಷಂ-ಆಶೀರ್ವಾದವನ್ನು, ಅಭ್ಯವಾದಯತ್-ಹೇಳಿಸಿದನು ॥೨೮॥
ಧಿಷ್ಣ್ಯಾಗ್ರ್ಯಂ - ವಿಮಾನವನ್ನು, ಪರೀತ್ಯ - ಪ್ರದಕ್ಷಿಣಮಾಡಿ, ಅಭ್ಯರ್ಚ್ಯ - ಪೂಜಿಸಿ, ಪಾರ್ಷ

---

ಜಗದ್ವಂದ್ಯವಾದ ವಿಷ್ಣುವಿನ ಪರಮಪದವನ್ನು ಹೊಂದು ॥ ೨೬ ॥ ಅಯ್ಯಾ ಆಯುಷ್ಮಂ
ತನೆ ! ಉತ್ತಮ ಶ್ಲೋಕದಲ್ಲಿ ಉತ್ತಮನಾದ ವಾಸುದೇವ ಮೂರ್ತಿಯೇ ನಿನಗಾಗಿ ಈ
ದಿವ್ಯವಿಮಾನವನ್ನು ಕಳುಹಿಸಿರುವನಾದುದರಿಂದ ಇದನ್ನೇರಿ ಕುಳಿತುಕೊ, ಎಂದು ಹೇಳಿದ
ರು ॥೨೭॥ ಅಯ್ಯಾ ವಿದುರನೆ ! ಆಗ ಶ್ರೀಹರಿಗೆ ಪರಮಪ್ರಿಯನಾದ ಧ್ರುವರಾಜನು, ಭಗ
ವಂತನ ಸನ್ನಿಧಿಸೇವಕರಾದ ಸುನಂದನಂದರ, ಅಮೃತವನ್ನು ಸುರಿಸುತ್ತಿರುವ ಸವಿನುಡಿಗ
ಳನ್ನು ಕೇಳಿ, ಮಂಗಳ ಸ್ನಾನವನ್ನುಮಾಡಿ, ಸಂಧ್ಯಾದಿ ನಿತ್ಯಕರ್ಮಗಳನ್ನು ನೆರವೇರಿಸಿ
ಪ್ರಯಾಣಕ್ಕೆ ತಕ್ಕಂತೆ ಅಲಂಕರಿಸಿಕೊಂಡು, ನೆರೆಹೊರೆಯಲ್ಲಿದ್ದ ಮಹರ್ಷಿಗಳಿಗೆ ನಮ
ಸ್ಕರಿಸಿ, ಅವರಿಂದ ಆಶೀರ್ವಾದಗಳನ್ನು ಪಡೆದನು ॥ ೨೮ ॥ ತರುವಾಯ ಪ್ರದಕ್ಷಿಣ ಪೂ
ರ್ವಕವಾಗಿ ಆ ದಿವ್ಯ ವಿಮಾನವನ್ನು ಪೂಜಿಸಿ, ದೇವ ಶ್ರೇಷ್ಠರಾದ ಸುನಂದ ನಂದರನ್ನು
ವಂದಿಸಿ, ತೇಜೋಮಯವಾಗಿ ಹೊಳೆಯುತ್ತಿರುವ ತನ್ನ ಶರೀರದಿಂದಲೇ, ಆ ದಿವ್ಯವಿಮಾ

---

* ವಿ. ಭಗವಂತನು ಭಕ್ತರನ್ನು ಅನುಗ್ರಹಿಸುವುದಕ್ಕಾಗಿ ಅವರ ಬಳಿಯಲ್ಲಿಯೇ ನೆಲಸಿರುವುದ
ರಿಂದ ಪರಮಪದದಂತೆ ಭಗವಂತನ ಅಭಿಮಾನಕ್ಕೆ ಮುಖ್ಯವಿಷಯವಾದ ಧ್ರುವಲೋಕಕ್ಕೂ, ವೈಕುಂ
ಠ, ಪರಮಪದ, ವಿಷ್ಣುಪದ, ಮೊದಲಾದ ಹೆಸರುಗಳನ್ನು ಕೊಟ್ಟಿರುವರು. ಏಕಾಂತಭಕ್ತರನ್ನಾದ
ರಿಸುವುದು ಭಗವಂತನ ಕರ್ತವ್ಯವಾದುದರಿಂದ ಆಜಾನ ಪರಿಶುದ್ಧನಾದ ಧ್ರುವನನ್ನು ಸಶರೀರವಾಗಿ ಕರೆ
ಯಿಸಿಕೊಳ್ಳಬೇಕೆಂದು ಪಾರ್ಷದರೊಡನೆ ವಿಮಾನವನ್ನು ಕಳುಹಿಸಿದುದು ನ್ಯಾಯವೇ ಸರಿ.

ಷ್ಠಾತುಂ ಬಿಭ್ರ ದ್ರೂಪಂ ಹಿರಣ್ಮಯಂ ॥೨೯॥ ‡ ತದಾ ದುಂದುಭಯೋ
ನೇದು ರ್ಮೃದಂಗ ಪಣವಾದಯಃ । ಗಂಧರ್ವಮುಖ್ಯಾಃ ಪ್ರಜಗುಃ ಪೇತುಃ
ಕುಸುಮ ವೃಷ್ಟಯಃ ॥೩೦॥ ಸಚ ಸ್ವರ್ಲೋಕ ಮಾರೋಕ್ಷ್ಯನ್ ಸುನೀತಿಂ
ಜನನೀಂ ಧ್ರುವಃ । ಅನ್ವಸ್ಮರ ದಗಂ ಹಿತ್ವಾ ದೀನಾಂ ಯಾಸ್ಯೇ ತ್ರಿವಿಷ್ಟ
ಪಂ ॥೩೧॥ ಇತಿ ವ್ಯವಸಿತಂ ತಸ್ಯ ವ್ಯವಸಾಯ ಸುರೋತ್ತಮೌ । ದರ್ಶ
ಯಾಮಾಸತು ರ್ದೇವೀಂ ದೇವಯಾನೇನ ಗಚ್ಛತೀಂ ॥೩೨॥ ತತ್ರ ತತ್ರ

ದೌ - ದೇವದೂತರನ್ನು, ಅಭಿವಂದ್ಯ - ನಮಸ್ಕರಿಸಿ, ಹಿರಣ್ಮಯಂ - ತೇಜೋರೂಪವಾದ, ರೂಪಂ - ತನ್ನ ರೂಪವನ್ನು, ಬಿಭ್ರತ್ - ಧರಿಸಿದವನಾಗಿ, ತತ್ - ಅದನ್ನು, ಅಧಿರೋಢುಂ - ಏರುವುದಕ್ಕೆ, ಇಯೇಷ-ಬಯಸಿದನು ॥೨೯॥ ತದಾ - ಆಗ, ದುಂದುಭಯಃ - ದುಂದುಭಿವಾದ್ಯಗಳು, ಮೃದಂ...ಯಃ- ಮದ್ದಳೆ, ಪಣವ ಮೊದಲಾದವುಗಳು, ನೇದುಃ - ಮೊಳಗಿದುವು, ಗಂಧರ್ವಮುಖ್ಯಾಃ - ಗಂಧರ್ವರು ಮೊದಲಾದವರು, ಜಗುಃ - ಗಾನಮಾಡಿದರು, ಕುಸುಮ ವೃಷ್ಟಿಗಳು, ಪೇತುಃ - ಬಿದ್ದುವು ॥೩೦॥ ಸಚಧ್ರುವಃ - ಆ ಧ್ರುವನು, ಸ್ವರ್ಲೋಕಂ - ವಿಷ್ಣುಪದವನ್ನು, ಆರೋಕ್ಷ್ಯನ್ - ಏರುತ್ತಾ, ದೀನಾಂ - ದೀನಳಾದ ತಾಯನ್ನು, ಹಿತ್ವಾ - ಬಿಟ್ಟು, ಅಗಂ - ಹೊಂದಲ ಶಕ್ಯವಾದ, ತ್ರಿವಿಷ್ಟಪಂ - ಪುಣ್ಯಲೋಕವನ್ನು, ಕಥಂ ಯಾಸ್ಯೇ - ಹೇಗೆ ಹೊಂದಲಿ ? ಇತಿ - ಎಂದು, ಜನನೀಂ - ತಾಯಿಯಾದ, ಸುನೀತಿಂ - ಸುನೀತಿಯನ್ನು, ಅಸ್ಮರತ್ - ಸ್ಮರಿಸಿದನು ॥೩೧॥ ಸುರೋತ್ತಮೌ - ದೇವ ದೂತರು, ಇತಿ - ಹೀಗೆಂಬ, ತಸ್ಯ - ಅವನ, ವ್ಯವಸಿತಂ-ಅಭಿಪ್ರಾಯವನ್ನು, ವ್ಯವಸಾಯ - ತಿಳಿದು, ದೇವಯಾನೇನ - ವಿಮಾನದಿಂದ, ಗಚ್ಛತೀಂ - ಹೋಗುತ್ತಿರುವ, ದೇವೀಂ-ಸುನೀತಿಯನ್ನು, ದರ್ಶಯಾಮಾಸತುಃ- ತೋರಿಸಿದರು ॥೩೨॥ ತತ್ರತತ್ರ - ಅಲ್ಲಲ್ಲಿ, ಪಥಿ - ದಾರಿಯಲ್ಲಿ, ಪ್ರಶಂಸದಿಃ - ಹೊಗಳುತ್ತಿರುವ,

ನವನ್ನೇರಲೆಳಸಿದನು ॥ ೨೯ ॥ ಆಗ ಅಂತರಿಕ್ಷದಲ್ಲಿ ದುಂದುಭಿವಾದ್ಯಗಳು, ಮೃದಂಗ, ಪಣವ ಮೊದಲಾದ ವಾದ್ಯಗಳೂ ಮೊಳಗಿದುವು. ಗಂಧರ್ವರು ಗಾನಮಾಡಿದರು. ಪುಷ್ಪವೃಷ್ಟಿಗಳು ಸುರಿದುವು ॥ ೩೦ ॥ ಆ ಧ್ರುವರಾಜನು ಇಂತು ವೈಭವದಿಂದ ವಿಮಾನವನ್ನೇರಿ ಪರಮ ಪದಕ್ಕೆ ತೆರಳುವಾಗ "ಅಕಟಾ ! ನನ್ನನ್ನಗಲಿ ಬಳಲುತ್ತಿರುವ ತಾಯಿಯನ್ನುಳಿದು ನಾನೊಬ್ಬನೇ ಪರಮಪದಕ್ಕೆಂತು ಹೋಗಲಿ?,, ಎಂದು ಜನನಿಯಾದ ಸುನೀತಿಯನ್ನು ಸ್ಮರಿಸಿಕೊಂಡನು ॥೩೧॥ ಆಸುನಂದ ನಂದರು ಧ್ರುವರಾಯನ ಅಭಿಪ್ರಾಯವನ್ನು ತಿಳಿದು, ಮುಂದುಗಡೆಯಲ್ಲಿ ವಿಮಾನದಲ್ಲಿ ಕುಳಿತು ತೆರಳುತ್ತಿರುವ ಸುನೀತಿಯನ್ನು ತೋರಿಸಿದರು ॥೩೨॥ ಬಳಿಕ ಧ್ರುವರಾಯನು ಸಂತೋಷದಿಂದ ತೆರಳುತ್ತಾ, ಅಲ್ಲಲ್ಲಿ ದಾರಿಯಲ್ಲಿ ವಿಮಾ

‡ ಶ್ಲೋ॥ ತದೋತ್ತಾನಪದಃ ಪುತ್ರೋ ದದರ್ಶಾಂತಿಕ ಮಾಗತಂ । ಮೃತ್ಯೋ ರ್ಮೂರ್ಧ್ನಿ ಪದಂದತ್ವಾ ಆರುರೋಹಾಽದ್ಭುತಂ ಗೃಹಂ ॥೩೦॥ (ತಾ) ಆಗ ಉತ್ತಾನಪಾದರಾಯನ ಮಗನಾದ ಧ್ರುವನು ಬಳಿಗೆ ಬಂದ ವಿಮಾನವನ್ನು ಕಂಡು ಮೃತ್ಯುವಿನ ತಲೆಯನ್ನು ಮೆಟ್ಟಿ, ಅದ್ಭುತವಾದ ಆ ವಿಮಾನವನ್ನೇರಿದನು. ಆಂಧ್ರಾಕ್ಷರಕೋಶದಲ್ಲಿ ಈ ಶ್ಲೋಕವೂ ವ್ಯಾಖ್ಯಾನಗಳೂ ಸಹ ಇರುವುದಿಲ್ಲ.

ಪ್ರಶಂಸದ್ಭಿಃ ಪಥಿ ವೈಮಾನಿಕೈ ಸ್ಸುರೈಃ । ಅವಕೀರ್ಯಮಾಣೋ ದದೃಶೇ ಕುಸುಮೈಃ ಕ್ರಮಶೋ ಗ್ರಹಾನ್ ॥೩೩॥ ತ್ರಿಲೋಕೀಂ ದೇವಯಾನೇನ ಸೋಽತಿವ್ರಜ್ಯ ಮುನೀನಪಿ। ಪರಸ್ತಾ ದ್ಯದ್ಧ್ರುವಗತಿ ರ್ವಿಷ್ಣೋಃಪದ ಮಥಾಽಭ್ಯಗಾತ್ ॥೩೪॥ * ಯದ್ಭ್ರಾಜಮಾನಂ ಸ್ವರುಚೈವ ಸರ್ವತೋ ಲೋಕಾಸ್ತ್ರಯೋ ಹ್ಯನು ವಿಭ್ರಾಜಂತ ಏತೇ। ಯನ್ನಾವ್ರಜನ್ ಜಂತುಷು ಯೇಽನನುಗ್ರಹಾ ವ್ರಜಂತಿ ಭದ್ರಾಣಿ ಚರಂತಿ ಯೇಽನಿಶಂ ॥೩೫॥ ಶಾಂತಾ ಸ್ಸ

ವೈಮಾನಿಕೈಃ - ವಿಮಾನಾರೂಢರಾದ, ಸುರೈಃ - ದೇವತೆಗಳಿಂದ, ಕುಸುಮೈಃ - ಹೂಗಳಿಂದ, ಅವಕೀರ್ಯಮಾಣಃ - ಎರಚಲ್ಪಟ್ಟವನಾಗಿ, ಕ್ರಮಶಃ - ಕ್ರಮವಾಗಿ, ಗ್ರಹಾನ್ - ಆದಿತ್ಯಾದಿಗ್ರಹಗಳ ಸ್ಥಾನಗಳನ್ನು, ದದೃಶೇ - ಕಂಡನು ॥೩೩॥ ಸಃ - ಅವನು, ದೇವಯಾನೇನ - ವಿಮಾನದಿಂದ, ತ್ರಿಲೋಕೀಂ - ಮೂರುಲೋಕಗಳನ್ನೂ, ಮುನೀನಪಿ - ಸಪ್ತಋಷಿಗಳನ್ನೂ, ಅತಿವ್ರಜ್ಯ - ಅತಿಕ್ರಮಿಸಿ, ಅಥ - ಬಳಿಕ, ಪರಸ್ತಾತ್ - ಮೇಲೆ, ಧ್ರುವಗತಿ - ಶಾಶ್ವತವಾದ ಗತಿಯುಳ್ಳ, ಯತ್ - ಯಾವ, ವಿಷ್ಣೋಃಪದಂ- ವಿಷ್ಣುಪದವುಂಟೋ ಅದನ್ನು, ಅಭ್ಯಗಾತ್- ಹೊಂದಿದನು ॥೩೪॥

ಸ್ವರುಚೈವ - ತನ್ನ ಪ್ರಕಾಶದಿಂದಲೇ, ಭ್ರಾಜಮಾನಂ - ಹೊಳೆಯುವ, ಯತ್ - ಯಾವುದನ್ನು, ಅನು - ಅನುಸರಿಸಿ, ಏತೇ - ಈ, ತ್ರಯೋಲೋಕಾಃ - ಮೂರುಲೋಕಗಳೂ, ವಿಭ್ರಾಜಂತೇ - ಹೊಳೆಯುತ್ತಿರುವುವೋ, ಯೇ- ಯಾರು, ಜಂತುಷು - ಪ್ರಾಣಿಗಳಲ್ಲಿ, ಅನನುಗ್ರಹಾಃ - ಅನುಗ್ರಹವಿಲ್ಲದವರೋ, ಅವರು, ಯತ್ - ಯಾವುದನ್ನು, ನಾವ್ರಜನ್ - ಹೊಂದಲಿಲ್ಲವೋ, ಯೇ - ಯಾರು, ಅನಿಶಂ - ಯಾವಾಗಲೂ, ಭದ್ರಾಣಿ - ಶುಭಕಾರ್ಯಗಳನ್ನು, ಚರಂತಿ-ಮಾಡುವರೋ, ಅವರು ವ್ರಜಂತಿ - ಹೊಂದುವರೋ ॥ ೩೫ ॥ ಶಾಂತಾಃ - ತಾಳ್ಮೆಯುಳ್ಳ, ಸಮದೃಶಃ - ಭೇದಬುದ್ಧಿಯಿಲ್ಲದ, ಶುದ್ಧಾಃ - ಪರಿಶು

ನಾರೂಢರಾದ ದೇವತೆಗಳಿಂದ ಹೊಗಳಿಸಿಕೊಳ್ಳುತ್ತಾ, ಹೂಗಳಿಂದೆರಚಲ್ಪಡುತ್ತಾ, ಕ್ರಮವಾಗಿ ಸೂರ್ಯನೇ ಮೊದಲಾದ ಗ್ರಹಗಳ ಸ್ಥಾನಗಳನ್ನು ಕಂಡನು ॥೩೩॥ ಇಂತು ವಿಮಾನಾರೂಢನಾಗಿ ಮೂರು ಲೋಕಗಳನ್ನೂ, ಸಪ್ತಋಷಿ ಮಂಡಲವನ್ನೂ ಅತಿಕ್ರಮಿಸಿ, ಎಲ್ಲಕ್ಕೂ ಮೇಲ್ಗಡೆಯಲ್ಲಿ ನಾಶರಹಿತವೆನಿಸಿ ನೆಲಸಿರುವ ಮಹಾವಿಷ್ಣುವಿನ ಪದವನ್ನು ಪಡೆದನು ॥೩೪॥ ಸ್ವಪ್ರಕಾಶದಿಂದ ಬೆಳಗುತ್ತಿರುವ ಯಾವ ದಿವ್ಯಪದದ ತೇಜಸ್ಸಿನಿಂದ ಸ್ವರ್ಗಮರ್ತ್ಯಪಾತಾಳಗಳೆಂಬ ಈ ಮೂರು ಲೋಕಗಳೂ ಹೊಳೆಯುತ್ತಿರುವುವೋ, ಭೂತದಯೆಯಿಲ್ಲದಪ್ರಾಣಿಗಳು ಯಾವುದನ್ನು ಪಡೆಯಲಾರರೋ, ಭೇದದೃಷ್ಟಿಯಿಲ್ಲದೆ ಸರ್ವಭೂತಗಳನ್ನೂ ಸಮಾನವಾಗಿ ಕಾಣುವ ಮಹಾತ್ಮರಿಗೆ ಯಾವುದು ಫಲರೂಪವಾಗಿರುವುದೋ ॥

* ವಿ. ಸತ್ಯಲೋಕದಂತೆಯೇ ಧ್ರುವಲೋಕವನ್ನು ಪಡೆದವರಿಗೂ ಪ್ರಾಯಿಕವಾಗಿ ಪುನರಾವೃತ್ತಿಯಿಲ್ಲವಾದುದರಿಂದ, ಅವರಿಗೆ ಕಲ್ಪಾಂತರದಲ್ಲಿ ಬ್ರಹ್ಮನೊಡನೆ ಮುಕ್ತಿಯಾಗುವುದು. ಶಮದಮಾದಿಗಳಿಂದೊಡಗೂಡಿ ಸರ್ವಭೂತಗಳಲ್ಲಿಯೂ ಆತ್ಮಭಾವನೆಯನ್ನಿಟ್ಟ ಪರಬ್ರಹ್ಮೋಪಾಸಕರು ಕೂಡ ಕೆಲವರು ಪ್ರಾರಬ್ಧಕರ್ಮದಿಂದಾಗಲಿ, ಭೋಗಾಪೇಕ್ಷೆಯಿಂದಾಗಲಿ ವಿಘ್ನಗಳುಂಟಾಗಿ ಸತ್ಯಲೋಕವನ್ನೂ, ಧ್ರುವಲೋಕವನ್ನೂ ಹೊಂದಿ, ಅಲ್ಲಿ ಭೋಗಗಳನ್ನನುಭವಿಸಿದ ಬಳಿಕ ಪೂರ್ಣಯೋಗಿಗಳಾಗಿ ಮೋಕ್ಷವನ್ನು ಪಡೆಯುವರು.

ಮದ್ಯಶ ಶ್ಶುದ್ಧಾ ಸ್ಸರ್ವಭೂತಾಽನುರಂಜನಾಃ। ಯಾಂತ್ಯಂಜಸಾಽಚ್ಯುತ
ಪದ ಮಚ್ಯುತಪ್ರಿಯ ಬಾಂಧವಾಃ ॥೩೬॥ ಇತ್ಯುತ್ತಾನಪದಃ ಪುತ್ರೋ ಧ್ರು
ವಃ ಕೃಷ್ಣಪರಾಯಣಃ। ಅಭೂ ತ್ತ್ರಯಾಣಾಂ ಲೋಕಾನಾಂ ಚೂಡಾಮಣಿ
ರಿವಾಽಮಲಃ ॥೩೭॥ ಗಂಭೀರವೇಗೋಽನಿಮಿಷಂ ಜ್ಯೋತಿಷಾಂ ಚಕ್ರ
ಮಾಹಿತಂ। ಯಸ್ಮಿನ್ ಭ್ರಮತಿ ಕೌರವ್ಯ! ಮೇಢ್ಯಾಮಿವ ಗವಾಂ ಗಣಃ॥
ಮಹಿಮಾನಂ ವಿಲೋಕ್ಯಾಽಸ್ಯ ನಾರದೋ ಭಗವಾನ್ ಋಷಿಃ। ಆತೋ
ದ್ಯಂ ವಿತುದನ್ ಶ್ಲೋಕಾನ್ ಸತ್ರೇಽಗಾಯ ತ್ಪ್ರಚೇತಸಾಂ ॥೩೯॥ ಶ್ರೀ

ದ್ಧರಾದ, ಸರ್ವ...ನಾಃ - ಸಕಲಪ್ರಾಣಿಗಳನ್ನು ಸಂತೋಷಗೊಳಿಸುವ, ಅಚ್ಯು....ವಾಃ - ವಿಷ್ಣು ಪ್ರಿಯರಾಗಿರುವ ಭಕ್ತರು, ಅಂಜಸಾ - ಬೇಗನೆ, ಯತ್ - ಯಾವ, ಅಚ್ಯುತಪದಂ - ಪರಮಪದವನ್ನು, ಯಾಂತಿ-ಹೊಂದುವರೊ, ಅಂತಹ ಪದವನ್ನು ಪಡೆದನು ॥ ೩೬ ॥ ಇತಿ-ಇಂತು, ಅಮಲಃ - ಪರಿಶುದ್ಧನಾದ, ಉತ್ತಾನಪದಃ- ಉತ್ತಾನಪಾದರಾಯನ, ಪುತ್ರಃ - ಮಗನಾದ ಧ್ರುವನು, ಕೃಷ್ಣಪರಾಯಣಃ - ಕೃಷ್ಣನೇ ಗತಿಯೆಂದು ತಿಳಿದವನಾಗಿ, ತ್ರಯಾಣಾಂಲೋಕಾನಾಂ - ಮೂರುಲೋಕಗಳಿಗೂ, ಚೂಡಾಮಣಿರಿವ-ಶಿರೋರತ್ನದಂತೆ, ಅಭೂತ್-ಆದನು ॥ ೩೭ ॥ ಹೇಕೌರವ್ಯ- ಎಲೈ ವಿದುರನೆ! ಗಂಭೀರವೇಗಃ-ಗಂಭೀರವಾದ ನಡಿಗೆಯುಳ್ಳ, ಗವಾಂ-ಎತ್ತುಗಳ, ಗಣಃ - ಸಾಲು, ಮೇಢ್ಯಾಮಿವ-ಮೇಟಿಯಲ್ಲಿಯೋಪಾದಿಯಲ್ಲಿ, ಯಸ್ಮಿನ್-ಯಾವ ಧ್ರುವನಲ್ಲಿ, ಆಹಿತಂ-ಇಡಲ್ಪಟ್ಟ, ಜ್ಯೋತಿಷಾಂ-ನಕ್ಷತ್ರಾದಿಗಳ, ಚಕ್ರಂ - ಮಂಡಲವು, ಅನಿಶಂ - ನಿರಂತರವೂ, ಭ್ರಮತಿ - ತಿರುಗುತ್ತಿರುವುದೋ ॥ ೩೮ ॥ ಭಗವಾನ್ - ಷಡ್ಗುಣೈಶ್ವರ್ಯಯುಕ್ತನಾದ, ನಾರದಋಷಿಃ - ನಾರದಮುನಿಯು, ಅಸ್ಯ - ಈಧ್ರುವನ, ಮಹಿಮಾನಂ - ಮಹಿಮೆಯನ್ನು, ವಿಲೋಕ್ಯ - ಕಂಡು, ಪ್ರಚೇತಸಾಂ-ಪ್ರಚೇತಸರ, ಸತ್ರೇ-ಯಜ್ಞದಲ್ಲಿ, ಆತೋದ್ಯಂ-ವೀಣೆಯನ್ನು, ವಿತುದನ್-ಬಾರಿಸುತ್ತಾ, ಶ್ಲೋಕಾನ್-ಮುಂದಣ ಮೂರು ಶ್ಲೋಕಗಳನ್ನು, ಅಗಾಯತ್-ಗಾನಮಾಡಿದನು ॥ ೩೯ ॥ ಪತಿದೇವತಾಯಾಃ - ಪತಿಯೇ ದೈವವಾಗಿರುವ, ಸುನೀತೇಃ - ಸುನೀತಿಯ,

ಶಮದಮಾದಿ ಸಂಪನ್ನರಾಗಿ, ಭೇದಬುದ್ಧಿಯಿಲ್ಲದೆ, ಅಂತರಂಗ ಬಹಿರಂಗಗಳೆರಡರಲ್ಲಿಯೂ ಪರಿಶುದ್ಧಿಯನ್ನು ಪಡೆದು, ಸರ್ವಭೂತಗಳನ್ನೂ ಸಂತೋಷಗೊಳಿಸುವ, ಭಾಗವತೋತ್ತಮರು ಯಾವ ಪರಮಪದವನ್ನು ಪಡೆಯುವರೋ, ಅಂತಹ ಧ್ರುವಲೋಕದ ಸಿರಿಯನ್ನು ಬಣ್ಣಿಸಲಳವೆ? ॥ ೩೬ ॥ ಈ ಪ್ರಕಾರವಾಗಿ ವಿಷ್ಣುಭಕ್ತಾಗ್ರೇಸರನಾದ ಧ್ರುವರಾಯನು ಸರ್ವೋನ್ನತವಾದ ಧ್ರುವಲೋಕವೆಂಬ ವಿಷ್ಣುಪದವನ್ನು ಪಡೆದು, ತ್ರಿಲೋಕಗಳಿಗೂ ಅಲಂಕಾರವಾದ ಶಿರೋಮಣಿಯಂತೆ ನೆಲಸಿದನು ॥ ೩೭ ॥ ಅಯ್ಯಾವಿದುರನೆ! ಧಾನ್ಯಗಳನ್ನು ತುಳಿಸುವುದಕ್ಕಾಗಿ ಹೂಡಲ್ಪಟ್ಟ ಎತ್ತುಗಳು ಮೇಟಿಯನ್ನು ಸುತ್ತುವಂತೆ, ಸೂರ್ಯಾದಿ ತೇಜಶ್ಚಕ್ರವೆಲ್ಲಾ ಯಾವುದನ್ನು ಸುತ್ತುತ್ತಿರುವುದೋ, ಅಂತಹ ಧ್ರುವಪದವಿಯನ್ನು ಸಾಮಾನ್ಯವೆಂದರಿಯಬೇಡ. ॥೩೮॥ ಬಳಿಕ ಭಗವಂತನಾದ ನಾರದಮುನಿಯು ಈ ಧ್ರುವರಾಜನ ಮಹಿಮೆಯಂ ಕಂಡು ಸಂತೋಷಗೊಂಡು, ತನ್ನ ವೀಣೆಯನ್ನು ನುಡಿಸುತ್ತಾ, ಪ್ರಚೇತಸರ ಸತ್ರಯಾಗಕ್ಕೆ ಹೋಗಿ, ಧ್ರುವನ ಮಹಿಮೆಯನ್ನು ಕೊಂಡಾಡುವ ಈ ಮೂರು ಪದ್ಯಗಳನ್ನು ಹಾಡಿದನು ॥೩೯॥ ಪತಿಯೇ ಪರದೈವವೆಂದು ತಿಳಿದ ಸುನೀತಿಯ ಪುತ್ರ

ನಾರದಃ ॥ ನೂನಂ ಸುನೀತೇಃ ಪತಿದೇವತಾಯಾ ಸ್ತಪಃ ಪ್ರಭಾವಸ್ಯ ಸುತ
ಸ್ಯ ತಾಂ ಗತಿಂ । ದೃಷ್ಟ್ವಾಽಭ್ಯುಪಾಯಾನಪಿ ವೇದವಾದಿನೋ ನೈವಾಧಿಗಂ
ತುಂ ಪ್ರಭವಂತಿ ಕಿಂ ನೃಪಾಃ ? ॥೪೦॥ ಯಃ ಪಂಚವರ್ಷೋ ಗುರುದಾರ
ವಾಕ್ಶರೈ ರ್ಭಿನ್ನೇನ ಯಾತೋ ಹೃದಯೇನ ದೂಯತಾ । ವನಂ ಮದಾದೇ
ಶಕರೋಽಜಿತಂ ಪ್ರಭುಂ ಜಿಗಾಯ ತದ್ಭಕ್ತಗುಣೈಃ ಪರಾಜಿತಂ ॥೪೧॥
ಯಃ ಕ್ಷತ್ರಬಂಧು ರ್ಭುವಿ ತಸ್ಯಾಽಧಿರೂಢ ಮನ್ವಾರುರುಕ್ಷೇದಪಿ ವರ್ಷ
ಪೂಗೈಃ । ಷಟ್ಪಂಚವರ್ಷೋ ಯದಹೋಭಿ ರಲ್ಪೈಃ ಪ್ರಸಾದ್ಯ ವೈಕುಂಠ
ಮವಾಪ ತತ್ಪದಂ ॥ ೪೨ ॥ ಮೈತ್ರೇಯಃ ॥ ಏತತ್ತೇಽಭಿಹಿತಂ ಸರ್ವಂ

---

ಸುತಸ್ಯ-ಮಗನ, ತಪಃಪ್ರಭಾವಸ್ಯ - ತಪ್ಪೋಮಹಿಮೆಯ, ತಾಂಗತಿಂ - ಆ ಫಲವನ್ನು, ಅಭ್ಯುಪಾಯಾನ್-ಅದನ್ನು ಪಡೆಯುವುದಕ್ಕೆ ಉಪಾಯಗಳನ್ನು, ದೃಷ್ಟ್ವಾ - ಕಂಡು, ವೇದವಾದಿನೋಽಪಿ - ಋಷಿಗಳೂ, ಅಧಿಗಂತುಂ - ಹೊಂದುವುದಕ್ಕೆ, ನೈವಪ್ರಭವಂತಿ - ಸಮರ್ಥರಾಗುವುದಿಲ್ಲ, ನೃಪಾಃ-ರಾಜರು, ಕಿಂಹೇಳುವುದೇನು ? ॥ ೪೦ ॥ ಪಂಚವರ್ಷಃ - ಐದುವರ್ಷಗಳುಳ್ಳ, ಯಃ - ಯಾವಧ್ರುವನು, ಗುರು...ರೈಃ-ಬಲತಾಯಿಯ ಮಾತುಗಳೆಂಬ ಬಾಣಗಳಿಂದ, ಭಿನ್ನೇನ - ಬೆಂದ, ದೂಯತಾ - ದುಃಖಗೊಂಡ, ಹೃದಯೇನ-ಮನಸ್ಸಿನಿಂದ, ವನಂಗತಃ-ಕಾಡಿಗೆ ತೆರಳಿ, ಮದಾದೇಶಕರಃ - ನನ್ನ ಆಜ್ಞೆಯನ್ನನುಸರಿಸಿ, ತದ್ಭಕ್ತಗುಣೈಃ - ಭಗವದ್ಭಕ್ತರ ಗುಣಗಳಿಂದ, ಪರಾಜಿತಂ - ಸೋಲಿಸಲ್ಪಟ್ಟ, ಪ್ರಭುಂ-ಪ್ರಭುವಾದ, ಅಜಿತಂ-ಭಗವಂತನನ್ನು, ಜಿಗಾಯ-ವಶಗೊಳಿಸಿಕೊಂಡನೋ ॥ ೪೧ ॥

ಯತ್-ಯಾವಕಾರಣದಿಂದ, ಷಟ್ಪಂಚವರ್ಷಃ - ಐದಾರು ವಯಸ್ಸುಳ್ಳ ಧ್ರುವನು, ಅಲ್ಪೈಃಅಹೋಭಿಃ-ಕೆಲವು ದಿನಗಳಲ್ಲಿಯೇ, ವೈಕುಂಠಂ - ಭಗವಂತನನ್ನು, ಪ್ರಸಾದ್ಯ- ಒಲಿಸಿ, ತತ್ಪದಂ - ಆತನ ಪದವನ್ನು, ಅವಾಪ-ಹೊಂದಿದನೋ, ಅದರಿಂದ, ಭುವಿ-ಭೂಮಿಯಲ್ಲಿ, ಯಃಕ್ಷತ್ರಬಂಧುಃ - ಯಾವ ಕ್ಷತ್ರಿಯನೇ ಆಗಲಿ, ತಸ್ಯ - ಆ ಧ್ರುವನಿಂದ, ಅಧಿರೂಢಂ - ಹೊಂದಲ್ಪಟ್ಟ ಸ್ಥಾನವನ್ನು, ತಮನು-ಅವನನ್ನು ಹಿಂಬಾಲಿಸಿ, ವರ್ಷಪೂಗೈಃ-ನೂರಾರು ವರ್ಷಗಳಿಂದಲೂ, ಆರುರುಕ್ಷೇದಪಿ-ಏರಲೆಳಸುವನೆ? ॥೪೨॥

---

ನಾದ ಧ್ರುವನ ತಪಃ ಫಲವೆನಿಸಿದ, ಧ್ರುವಪದವನ್ನು ಮೋಕ್ಷೋಪಾಯಗಳನ್ನು ಸಮಗ್ರವಾಗಿ ತಿಳಿದಮಹಾತ್ಮರು ಕೂಡ ಪಡೆಯಲಾರರು. ಇಂತಿರುವಾಗ ಸಾಮಾನ್ಯರಾದವರ ಪಾಡೇನು ? ॥೪೦॥ ಯಾವ ಧ್ರುವಕುಮಾರನು ಬಲತಾಯಿಯ ಪರುಷೋಕ್ತಿಗಳೆಂಬ ಸರಳುಗಳಿಂದ ಎದೆ ಬಿರಿದು, ಮನಗುಂದಿ ಐದು ವರ್ಷಗಳ ಹಸುಳೆಯಾಗಿರುವಾಗಲೇ ತಪಿಸಬೇಕೆಂದು ಕಾಡಿಗೆ ತೆರಳಿ, ಅಲ್ಲಿ ನನ್ನ ಅಣತಿಯಂತೆ ತಪವನ್ನಾಚರಿಸಿ, ಭಾಗವತೋತ್ತಮರ ಗುಣಗಳಾದ ಭೂತದಯ ಮೊದಲಾದವುಗಳಿಂದ ಭಕ್ತಪರಾಧೀನನಾದ ಭಗವಂತನನ್ನು ವಶಗೊಳಿಸಿ ಕೊಂಡನೋ, ಅವನ ಮಹಿಮೆಯೇನು ಸಾಮಾನ್ಯವೆ ? ॥೪೧॥ ಐದಾರುವರುಷಗಳ ವಯಸ್ಸುಳ್ಳ ಧ್ರುವ ಕುಮಾರನು, ಅಲ್ಪದಿನಗಳಿಂದ ಭಗವಂತನನ್ನು ಮೆಚ್ಚಿಸಿ, ಯಾವಪರಮಪದವನ್ನು ಪಡೆದನೋ, ಕ್ಷತ್ರಿಯನೆಂಬ ಹೆಸರುಳ್ಳವನಿಗೆ, ನೂರಾರು ವರ್ಷಗಳು ತಪವನ್ನಾಚರಿಸಿದರೂ ಆ ಪದವನ್ನು ಪಡೆಯಬೇಕೆಂಬ ಬಯಕೆಯುಕೂಡ ಉಂಟಾಗಲಾರದು. ಇನ್ನು ಆ ಪದ ಪ್ರಾಪ್ತಿಯನ್ನು ಹೇಳುವುದೇನು? ಎಂದು ಗಾನಮಾಡಿದನು ॥೪೨॥

ಯತ್ಪೃಷ್ಟೋಽಹ ಮಿಹ ತ್ವಯಾ।ಧ್ರುವಸ್ಯೋದ್ದಾಮಯಶಸ ಶ್ಚರಿತಂ ಸಮ್ಮ
ತಂ ಸತಾಂ ॥೪೩॥ ಧನ್ಯಂ ಯಶಸ್ಯ ಮಾಯುಷ್ಯಂ ಪುಣ್ಯಂ ಸ್ವಸ್ತ್ಯಯನಂ
ಮಹತ್ । ಸ್ವರ್ಗ್ಯಂ ಧ್ರೌವ್ಯಂ ಸೌಮನಸ್ಯಂ ಪ್ರಶಸ್ಯ ಮಘಮರ್ಷಣಂ ॥
ಶ್ರುತ್ವೈತ ಚ್ಛ್ರದ್ಧಯಾ ಽ ಭೀಕ್ಷ್ಣಮಚ್ಯುತ ಪ್ರಿಯಚೇಷ್ಟಿತಂ । ಭವೇ
ದ್ಭಕ್ತಿ ರ್ಭಗವತಿ ಯಯಾ ಸ್ಯಾತ್ ಕ್ಲೇಶಸಂಕ್ಷಯಃ ॥೪೫॥ ಮಹತ್ವ ಮಿ
ಚ್ಛತಾಂ ತೀರ್ಥಂ ಶ್ರೋತುಃ ಶೀಲಾದಯೋ ಗುಣಾಃ । ಯತ್ರ ತೇಜ ಸ್ತ
ದಿಚ್ಛೂನಾಂ ಮಾನೋ ಯತ್ರ ಮನಸ್ವಿನಾಂ ॥೪೬॥ ಪ್ರಯತಃ ಕೀರ್ತಯೇ

---

ಮೈತ್ರೇಯನು ಹೇಳುತ್ತಾನೆ:—ಇಹ-ಇಲ್ಲಿ, ತ್ವಯಾ-ನಿನ್ನಿಂದ, ಅಹಂ-ನಾನು, ಯತ್ - ಯಾವುದನ್ನು,
ಪೃಷ್ಟಃ - ಕೇಳಲ್ಪಟ್ಟೆನೋ, ಅಂತಹ, ಸತಾಂ - ಸತ್ಪುರುಷರಿಗೆ, ಸಮ್ಮತಂ - ಇಷ್ಟವಾದ, ಉದ್ದಾ
ಮಯಶಸಃ - ಅಧಿಕ ಕೀರ್ತಿಯುಳ್ಳ, ಧ್ರುವಸ್ಯ - ಧ್ರುವರಾಯನ, ಏತತ್ಸರ್ವಂ - ಈ ಚರಿತ್ರೆಯೆ
ಲ್ಲವೂ, ತೇ-ನಿನಗೆ, ಅಭಿಹಿತಂ - ಹೇಳಲ್ಪಟ್ಟಿತು ॥ ೪೩ ॥ ಧನ್ಯಂ-ಧನವನ್ನು ಕೊಡತಕ್ಕದೂ, ಯಶ
ಸ್ಯಂ-ಕೀರ್ತಿಕರವೂ, ಆಯುಷ್ಯಂ - ಆಯುರ್ವರ್ಧಕವೂ, ಪುಣ್ಯಂ - ಪುಣ್ಯಕರವೂ, ಸ್ವಸ್ತ್ಯಯನಂ-
ಮಂಗಳಕರವೂ, ಮಹತ್-ಮಹಿಮಪ್ರದವೂ, ಸ್ವರ್ಗ್ಯಂ-ಸ್ವರ್ಗಪ್ರದವೂ, ಧ್ರೌವ್ಯಂ - ಧ್ರುವಪದಪ್ರಾಪ
ಕವೂ, ಸೌಮನಸ್ಯಂ - ಮನೋದುಃಖನಾಶಕವೂ, ಪ್ರಶಸ್ಯಂ - ಪ್ರಾಶಸ್ತ್ಯಸಂಪಾದಕವೂ, ಅಘಮರ್ಷ
ಣಂ-ಪಾಪನಾಶಕವೂ ಆದ ॥ ೪೪ ॥ ಏತತ್-ಈ, ಅಚ್ಯುತಪ್ರಿಯಚೇಷ್ಟಿತಂ - ವಿಷ್ಣುವಿಗೆ ಪ್ರಿಯವಾ
ದ ಧ್ರುವನಚರಿತ್ರೆಯನ್ನು, ಯಃ - ಯಾವನು, ಶ್ರದ್ಧಯಾ - ಭಕ್ತಿಯಿಂದ, ಅಭೀಕ್ಷ್ಣಂ - ಅಡಿಗಡಿಗೂ,
ಶ್ರುತ್ವಾ - ಕೇಳಿ, ವರ್ತತೇ - ಇರುವನೋ, ತಸ್ಯ - ಅವನಿಗೆ, ಯಯಾ - ಯಾವುದರಿಂದ, ಕ್ಲೇಶಸಂ
ಕ್ಷಯಃ - ಕ್ಲೇಶನಾಶವು, ಸ್ಯಾತ್ - ಆಗುವುದೋ, ಅಂತಹ, ಭಕ್ತಿಃ - ಭಕ್ತಿಯು, ಭವೇತ್
ಉಂಟಾದೀತು, ॥೪೫॥ ಯತ್ರ - ಯಾವಚರಿತ್ರೆಯು ಕೇಳಲ್ಪಟ್ಟರೆ, ಮಹತ್ವಂ - ದೊಡ್ಡತನವನ್ನು,-
ಇಚ್ಛತಾಂ - ಬಯಸುವವರಿಗೆ, ತೀರ್ಥಂ - ದೊಡ್ಡತನವೂ, ಶ್ರೋತುಃ - ಕೇಳುವವನಿಗೆ, ಶೀಲಾದಯಃ-
ಸದಾಚಾರಮೊದಲಾದುವುಗಳು, ತದಿಚ್ಛೂನಾಂ - ತೇಜಸ್ಸನ್ನು ಬಯಸುವವರಿಗೆ, ತೇಜಃ - ತೇಜಸ್ಸು
ಮನಸ್ವಿನಾಂ - ಮಾನವನ್ನು ಬಯಸುವವರಿಗೆ, ಮಾನಃ-ಮಾನವೂ ಉಂಟಾಗುವುದೋ, ॥೪೬॥ ಪುಣ್ಯಶ್ಲೋ

---

ಅಯ್ಯಾ ವಿದುರನೆ ! ಮಹಾ ಕೀರ್ತಿಶಾಲಿಯಾದ ಯಾವ ಧ್ರುವರಾಯನ ಸಾಧುಸಮ್ಮ
ತವಾದಚರಿತ್ರೆಯನ್ನು ವಿವರಿಸಬೇಕೆಂದು ನೀನು ನನ್ನನ್ನುಬೆಸಗೊಂಡೆಯೋ, ಅದೆಲ್ಲವನ್ನೂ
ನಿನಗೆ ನಿರೂಪಿಸಿದೆನು ॥೪೩॥ ಶ್ರೋತೃಗಳ ಮನೋರಥಾನುಸಾರವಾಗಿ ಈ ಚರಿತ್ರೆಯು,
ಧನ, ಆಯುಷ್ಯ, ಪುಣ್ಯ, ಅಭಿವೃದ್ಧಿ, ಸ್ವರ್ಗ, ಧ್ರುವಲೋಕ, ಮನೋವ್ಯಾಧಿನಾಶ, ಗೌರ
ವ, ಪಾಪನಾಶ, ಮೊದಲಾದವುಗಳನ್ನುಂಟುಮಾಡುವುದು ॥೪೪॥ ಅಲ್ಲದೆ ಭಾಗವತೋತ್ತ
ಮನಾದ ಈ ಧ್ರುವರಾಜನ ಚರಿತ್ರೆಯನ್ನು ಶ್ರದ್ಧೆಯಿಂದ ಕೇಳುವವನಿಗೆ, ಸಕಲದುಃಖಗಳ
ನ್ನೂ ನಾಶಗೊಳಿಸುವ ಭಗವದ್ಭಕ್ತಿಯುಂಟಾಗುವುದು ॥೪೫॥ ಮರ್ಯಾದೆಯನ್ನು ಬಯ
ಸುವವರಿಗೆ ಮರ್ಯಾದೆಯು, ಸದಾಚಾರಾದಿಗಳನ್ನಪೇಕ್ಷಿಸುವವರಿಗೆ ಅಂತಹ ಸದ್ಗುಣಗ
ಳು, ತೇಜಸ್ಸನ್ನು ಪ್ರಾರ್ಥಿಸುವವರಿಗೆ ತೇಜಸ್ಸು, ಮಹತ್ವವನ್ನು ಬೇಡುವವರಿಗೆ ಮಹ
ತ್ವವೂ ಉಂಟಾಗುವುದು ॥೪೬॥ ಆದುದರಿಂದ ಜನರು ಏಕಾಗ್ರಮನಸ್ಕರಾಗಿ ಪುಣ್ಯಶ್ಲೋ

ತ್ಯಾತಃ ಸಮವಾಯೇ ದ್ವಿಜನ್ಮನಾಂ। ಸಾಯಂಚ ಪುಣ್ಯಶ್ಲೋಕಸ್ಯ ಧ್ರುವಸ್ಯ ಚರಿತಂ ಮಹತ್ ॥೪೭॥ ಪೌರ್ಣಮಾಸ್ಯಾಂ ಸಿನೀವಾಲ್ಯಾಂ ದ್ವಾದಶ್ಯಾಂ ಶ್ರವಣೇಽಥವಾ । ದಿನಕ್ಷಯೇ ವ್ಯತೀಪಾತೇ ಸಂಕ್ರಮೇಽರ್ಕದಿನೇಪಿವಾ ॥ ಶ್ರಾವಯೇ ಚ್ಛ್ರದ್ಧಧಾನಾನಾಂ ತೀರ್ಥಪಾದಪದಾಶ್ರಯಃ । ನೇಚ್ಛಂಸ್ತತ್ರಾತ್ಮ ನಾತ್ಮಾನಂ ಸಂತುಷ್ಟ ಇತಿ ಸಿಧ್ಯತಿ ॥೪೯॥ ಜ್ಞಾನಮಜ್ಞಾತತತ್ತ್ವಾಯ ಯೋದದ್ಯಾತ್ಸತ್ಪಥೇಽಮೃತಂ । ಕೃಪಾಳೋರ್ದೀನನಾಥಸ್ಯ ದೇವಾಸ್ತಸ್ಯಾಽನುಗೃಹ್ಣತೇ ॥೫೦॥ ಇದಂ ಮಯಾ ತೇಽಭಿಹಿತಂ ಕು

---

ಕಸ್ಯ - ಪುಣ್ಯಕೀರ್ತಿಯುಳ್ಳ, ಧ್ರುವಸ್ಯ - ಧ್ರುವನ, ಮಹತ್ - ಉತ್ತಮವಾದ, ಚರಿತಂ - ಚರಿತ್ರೆಯನ್ನು, ಪ್ರಯತಃ - ಸ್ಥಿರಚಿತ್ತನಾಗಿ, ಪ್ರಾತಃ - ಮುಂಜಾನೆಯಲ್ಲಿಯೂ, ಸಾಯಂಚ - ಸಂಜೆಯಲ್ಲಿಯೂ, ದ್ವಿಜನ್ಮನಾಂ - ಬ್ರಾಹ್ಮಣರ, ಸಮವಾಯೇ - ಸಮಾಜದಲ್ಲಿ, ಕೀರ್ತಯೇತ್-ಹೊಗಳಬೇಕು ॥೪೭॥ ಪೌರ್ಣಮಾಸ್ಯಾಂ - ಪೂರ್ಣಿಮೆಯಲ್ಲಿಯೂ, ಸಿನೀವಾಲ್ಯಾಂ - ಅಮಾವಾಸ್ಯೆಯಲ್ಲಿಯೂ, ದ್ವಾದಶ್ಯಾಂ - ದ್ವಾದಶಿಯಲ್ಲಿಯೂ, ಅಥವಾ - ಶ್ರವಣೇ - ಶ್ರವಣ ನಕ್ಷತ್ರಯುಕ್ತವಾದ, ದಿನದಲ್ಲಿಯೂ, ದಿನಕ್ಷಯೇ - ತಿಥಿನಾಶದಲ್ಲಿಯೂ, ವ್ಯತೀಪಾತೇ - ವ್ಯತೀಪಾತದಲ್ಲಿಯೂ, ಸಂಕ್ರಮೇ - ಸಂಕ್ರಮಣದಲ್ಲಿಯೂ, ಅರ್ಕದಿನೇಪಿವಾ - ಸಪ್ತಮೀಭಾನುವಾರದಲ್ಲಿಯೂ ॥೪೮॥

ತೀರ್ಥ...ಯಃ, ತೀರ್ಥಪಾದ - ಗಂಗೆಯನ್ನು ಪಾದದಲ್ಲಿ ಜನಿಯಿಸಿದ ಭಗವಂತನ, ಪದಾಶ್ರಯಃ- ಪಾದಗಳನ್ನು ಆಶ್ರಯಿಸಿದ ಭಕ್ತನು, ಶ್ರದ್ಧಧಾನಾನಾಂ - ಭಕ್ತಿಯುಳ್ಳವರಿಗೆ, ಶ್ರಾವಯೇತ್ - ಶ್ರವಣ ಮಾಡಿಸಬೇಕು, ನೇಚ್ಛನ್-ನಿಷ್ಕಾಮನಾಗಿ, ಆತ್ಮನಃ ಪ್ರತಿ- ತನ್ನನ್ನು ಕುರಿತು, ಆತ್ಮನ್ಯೇವ - ತನ್ನಿಂದಲೇ, ಸಂತುಷ್ಟ ಇತಿ - ಸಂತೋಷಪಡುವುದರಿಂದ, ಸಿಧ್ಯತಿ - ಸಿದ್ಧಿಯನ್ನು ಪಡೆಯುತ್ತಾನೆ ॥೪೯॥ ಯಃ - ಯಾವನು, ಅಜ್ಞಾತತತ್ತ್ವಾಯ - ತತ್ತ್ವವನ್ನರಿಯದವರಿಗೆ, ಸತ್ಪಥೇ - ಭಗವಂತನಮಾರ್ಗದಲ್ಲಿ ಅಮೃತಂ - ಅಮೃತರೂಪವಾದ, ಜ್ಞಾನಂ - ಜ್ಞಾನವನ್ನು, ದದ್ಯಾತ್ - ಕೊಡುವನೋ, ದೀನನಾಥಸ್ಯ- ದೀನರಿಗೆ ಪ್ರಭುವಾದ, ಕೃಪಾಳೋಃ - ದಯಾವಂತನಾದ, ತಸ್ಯ - ಅವನಿಗೆ, ದೇವಾಃ - ದೇವತೆಗಳು, ಅನುಗೃಹ್ಣತೇ - ಅನುಗ್ರಹವನ್ನು ಮಾಡುತ್ತಾರೆ ॥೫೦॥ ಹೇಕುರೂದ್ವಹ - ಎಲೈ ಕುರುವಂಶ

---

ಕನಾದ ಧ್ರುವನ ಚರಿತ್ರೆಯನ್ನು, ಸಂಜೆಮುಂಜಾನೆಗಳೆರಡರಲ್ಲಿಯೂ ಬ್ರಾಹ್ಮಣಸಮಾಜಗಳಲ್ಲಿ ಹೊಗಳಬೇಕು ॥೪೭॥ ಹುಣ್ಣಿಮೆಯಲ್ಲಿಯೂ ಅಮಾವಾಸ್ಯೆಯಲ್ಲಿಯೂ, ದ್ವಾದಶಿಯಲ್ಲಿಯೂ, ಶ್ರವಣನಕ್ಷತ್ರಯುಕ್ತವಾದ ದಿನದಲ್ಲಿಯೂ, ಶೂನ್ಯತಿಥಿಯಲ್ಲಿಯೂ, ವ್ಯತೀಪಾತದಲ್ಲಿಯೂ, ಸಂಕ್ರಮಣಗಳಲ್ಲಿಯೂ, ಭಾನುವಾರದಿಂದ ಕೂಡಿದ ಸಪ್ತಮೀದಿನಗಳಲ್ಲಿಯೂ, ಭಗವದ್ಭಕ್ತನಾದವನು ಶ್ರದ್ಧಾಳುಗಳಾದ ಜನರಿಗೆ ಶ್ರವಣಮಾಡಿಸಬೇಕು. ತಾನು ಯಾವ ಪ್ರತಿಫಲಕ್ಕೂ ಆಸಿಸದೆ, ನಿಷ್ಕಾಮನಾಗಿ ಆತ್ಮಾನಂದದಿಂದಲೇ ಯಾವನು ತೃಪ್ತನಾಗುವನೋ, ಅಂತವನು ಮುಕ್ತಿಯನ್ನೇ ಪಡೆಯುವನು ॥೪೯॥ ಯಾವ ಮಹಾತ್ಮನು ತತ್ತ್ವವನ್ನರಿಯದ ಪಾಮರರನ್ನು ಸದುಪದೇಶದಿಂದ ಸನ್ಮಾರ್ಗಕ್ಕೆ ತಿರುಗಿಸಿ, ಆದಾರಿಯಲ್ಲಿ ಅಮೃತರೂಪವಾದ ತತ್ವಜ್ಞಾನವನ್ನುಂಟುಮಾಡುವನೋ, ಅಂತಹ ದೀನದಯಾಳುವಿಗೆ ಸಕಲದೇವತೆಗಳೂ ಕಲ್ಯಾಣವನ್ನು ಮಾಡುವರು ॥೫೦॥ ಅಯ್ಯಾ ಕುರುವಂಶದೀಪನೆ ! ಯಾವ

**ರೂದ್ವಹ ! ಧ್ರುವಸ್ಯ ವಿಖ್ಯಾತ ವಿಶುದ್ಧಕರ್ಮಣಃ । ಹಿತ್ವಾಽರ್ಭಕಃ ಕ್ರೀ
ಡನಕಾನಿ ಮಾತು ಗೃಹಂ ಚ ವಿಷ್ಣುಂ ಶರಣಂ ಯೋ ಜಗಾಮ ॥೫೧॥**

**— ಇತಿ ದ್ವಾದಶೋಽಧ್ಯಾಯಃ —**

ಶ್ರೇಷ್ಠನೆ ! ಅರ್ಭಕಃ - ಶಿಶುವಾದ, ಯಃ - ಯಾವನು, ಕ್ರೀಡನಕಾನಿ - ಆಟದ ಸಾಮಾನುಗಳನ್ನೂ, ಮಾತುಃ- ತಾಯಿಯು, ಗೃಹಂಚ-ಮನೆಯನ್ನೂ, ಹಿತ್ವಾ - ಬಿಟ್ಟು, ವಿಷ್ಣುಂ - ವಿಷ್ಣುವನ್ನು, ಶರಣಂ - ರಕ್ಷಕನನ್ನಾಗಿ, ಜಗಾಮ - ಹೊಂದಿದನೋ, ಅಂತಹ, ವಿಖ್ಯಾ...ಣಃ - ಪ್ರಸಿದ್ಧವಾದ ಶುದ್ಧಚರಿತ್ರೆಯುಳ್ಳ, ಧ್ರುವಸ್ಯ - ಧ್ರುವನ, ಇದಂ - ಈ ಚರಿತ್ರೆಯು, ಮಯಾ - ನನ್ನಿಂದ, ತೇ - ನಿನಗೆ, ಅಭಿಹಿತಂ- ಹೇಳಲ್ಪಟ್ಟಿತು ॥೫೧॥

— ದ್ವಾದಶಾಧ್ಯಾಯಂ ಸಮಾಪ್ತಂ —

---

ಮಹಾಭಾಗವತನು ಶಿಶುವಾಗಿರುವಾಗಲೇ ಆಟದ ಸಾಮಾನುಗಳನ್ನೂ, ಪರಮ ಪ್ರಿಯಳಾದ ತಾಯಿಯನ್ನೂ ಕೂಡ ತೊರೆದು, ಶ್ರೀಮಹಾವಿಷ್ಣುವನ್ನು ಮರೆಹೊಕ್ಕು ಕೃತಾರ್ಥನಾದನೋ, ಅಂತಹ ಶುದ್ಧ ಚರಿತ್ರನೂ, ವಿಖ್ಯಾತ ಕೀರ್ತಿಯೂ ಆದ ಧ್ರುವರಾಜನ ಚರಿತ್ರೆಯನ್ನು ನಿನಗೆ ನಾನು ತಿಳುಹಿಸಿದೆನು. ಎಂದು ಮೈತ್ರೇಯ ಮುನಿಯು ವಿದುರನಿಗೆ ಹೇಳಿದನೆಂಬಲ್ಲಿಗೆ ಭಾಗವತ ಚಕೋರ ಚಂದ್ರಿಕೆಯೊಳ್

— ಹನ್ನೆರಡನೆಯ ಅಧ್ಯಾಯಂ ಮುಗಿದುದು —

# ಓಂನಮಃ ಪರಮಾತ್ಮನೇ.

## — ಅಥ ತ್ರಯೋದಶೋಧ್ಯಾಯಃ —

ಸೂತ ಉವಾಚ ॥ ನಿಶಮ್ಯ ಕೌಶಾರವಿಣೋಪವರ್ಣಿತಂ ಧ್ರುವಸ್ಯ ವೈಕುಂಠಪದಾಽಧಿರೋಹಣಂ । ಪ್ರರೂಢಭಾವೋ ಭಗವತ್ಯಧೋಕ್ಷಜೇ ಪ್ರಷ್ಟುಂ ಪುನ ಸ್ತಂ ವಿದುರಃ ಪ್ರಚಕ್ರಮೇ ॥೧॥ ವಿದುರಃ ॥ ಕೇತೇ ? ಪ್ರಚೇತಸೋ ನಾಮ ಕಸ್ಯಾಽಪತ್ಯಾನಿ ? ಸುವ್ರತ ! । ಕಸ್ಯಾಽನ್ವವಾಯೇ ಪ್ರಖ್ಯಾತಾಃ ? ಕುತ್ರವಾ ಸತ್ರಮಾಸತ ? ॥೨॥ ಮನ್ಯೇ ಮಹಾಭಾಗವತಂ

---

### ತ್ರಯೋದಶಾಧ್ಯಾಯಂ.

ಕಂ॥ ಧ್ರುವವಂಶದಂಗಧಾತ್ರೀ । ಧವ ನಾತ್ಮಜನೆನಿಪ ವೇನನಾ ಕೋಟಲೆಯಿಂ ॥
ತವೆ ನೊಂದು ಬೇಸರಿಂ ವಿಪಿ । ನವ ನೊಂದಿದ ಚರಿತ ಮಿಲ್ಲಿ ಪೇಳಲ್ಪಡುಗುಂ ॥

ಸೂತನು ಹೇಳುತ್ತಾನೆ, ಕೌಶಾರವಿಣಾ - ಮೈತ್ರೇಯನಿಂದ, ಉಪವರ್ಣಿತಂ - ವಿವರಿಸಲ್ಪಟ್ಟ, ಧ್ರುವಸ್ಯ-ಧ್ರುವನ, ವೈಕುಂ...ಣಂ - ಪರಮಪದ ಪ್ರಯಾಣವನ್ನು, ನಿಶಮ್ಯ - ಕೇಳಿ, ವಿದುರಃ-ವಿದುರನು, ಭಗವತಿ - ಭಗವಂತನಾದ, ಅಧೋಕ್ಷಜೇ - ವಿಷ್ಣುವಿನಲ್ಲಿ, ಪ್ರರೂಢಭಾವಃ- ಭಕ್ತಿನೆಲೆಗೊಂಡು, ಪುನಃ-ಮರಳಿ, ತಂ-ಆ ಮೈತ್ರೇಯನನ್ನು, ಪ್ರಷ್ಟುಂ - ಬೆಸಗೊಳ್ಳುವುದಕ್ಕೆ, ಪ್ರಚಕ್ರಮೇ - ಪ್ರಾರಂಭಿಸಿದನು ॥ ೧ ॥ ಹೇಸುವ್ರತ - ಎಲೈ ಮಹಾತ್ಮನೆ ! ತೇ-ಆ, ಪ್ರಚೇತಸೋನಾಮ - ಪ್ರಚೇತಸರೆಂಬವರು, ಕೇ-ಯಾರು ? ಕಸ್ಯ - ಯಾರ, ಅಪತ್ಯಾನಿ - ಮಕ್ಕಳು?, ಕಸ್ಯ-ಯಾರ ಅನ್ವವಾಯೇ - ವಂಶದಲ್ಲಿ, ಪ್ರಖ್ಯಾತಾಃ-ಪ್ರಸಿದ್ಧರು, ಕುತ್ರ-ಎಲ್ಲಿ, ಸತ್ರಂ-ಸತ್ರಯಾಗವನ್ನು, ಆಸತ-ಮಾಡುತ್ತಿದ್ದರು.॥೨॥ ಯೇನ-ಯಾರಿಂದ, ಹರೇಃ - ವಿಷ್ಣುವಿನ, ಪರಿಚರ್ಯಾವಿಧಿಃ - ಪೂಜಾಕ್ರಮರೂಪವಾದ, ಕ್ರಿಯಾಯೋಗಃ-ಕರ್ಮಯೋಗವು, ಪ್ರೋಕ್ತಃ - ಹೇಳಲ್ಪಟ್ಟಿತೋ, ದೇವದರ್ಶನಂ - ಭಗವಂತನ ಸಾಕ್ಷಾತ್ಕಾರವುಳ್ಳ

---

### ಹದಿಮೂರನೆಯ ಅಧ್ಯಾಯ

### —ಪೃಥುಚರಿತ್ರೆಯ ಪ್ರಾರಂಭ—

ಅನಂತರದಲ್ಲಿ ಸೂತಪೌರಾಣಿಕನು ಶೌನಕಾದಿಗಳಿಗೆ ಹೇಳುವುದೆಂತೆನೆ:- ಅಯ್ಯಾ ಮಹರ್ಷಿಗಳಿರಾ ! ಕೇಳಿರಿ. ಇಂತು ಮಹಾಭಾಗವತನಾದ ಧ್ರುವರಾಯನು, ವೈಕುಂಠವನ್ನೇರಿದ ವೃತ್ತಾಂತವನ್ನು ಕೇಳಿ, ಭಗವದ್ಭಕ್ತಿಯೆಂಬುದು ಮತ್ತಷ್ಟು ಬೇರೂರಲು, ವಿದುರನು ಮರಳಿ ಮೈತ್ರೇಯನನ್ನು ಬೆಸಗೊಂಡನು ॥೧॥ ಅಯ್ಯಾ ಬ್ರಹ್ಮಿಷ್ಠನಾದ ಮುನಿಯೆ ! "ನಾರದ ಮುನಿಯು ಪ್ರಚೇತಸರ ಸತ್ರಯಾಗದಲ್ಲಿ ಧ್ರುವನ ಕೀರ್ತಿಯನ್ನು ಕೊಂಡಾಡಿದನು" ಎಂದು ಹೇಳಿದೆಯಲ್ಲಾ ! ಆ ಪ್ರಚೇತಸರು ಯಾವಜಾತಿಯವರು ? ಯಾರಲ್ಲಿ ಜನಿಸಿದವರು ? ಯಾವ ವಂಶಕ್ಕೆ ಸೇರಿದವರು ? ಅವರು ಸತ್ರಯಾಗವನ್ನು ಮಾಡಿದುದೆಲ್ಲಿ ? ॥೨॥ ಯಾವ ಮಹಾತ್ಮನು ಭಗವತ್ಪೂಜಾ ವಿಧಾನರೂಪವಾದ ಕರ್ಮಯೋಗವನ್ನು ಸಮಗ್ರವಾಗಿ ಪ್ರತಿಪಾದಿಸುವ ಪಾಂಚರಾತ್ರಾಗಮವನ್ನು ವಿರಚಿಸಿ ಅಜ್ಞರಾದ ಪಾಮರರಿಗೆ ಕೂಡ

ನಾರದಂ ದೇವದರ್ಶನಂ । ಯೇನ ಪ್ರೋಕ್ತಃ ಕ್ರಿಯಾಯೋಗಃ ಪರಿಚ
ರ್ಯಾವಿಧಿರ್ಹರೇಃ ॥೩॥ ‡ ಸ್ವಧರ್ಮಶೀಲೈಃ ಪುರುಷೈರ್ಭಗವಾನ್ ಯ
ಜ್ಞಪೂರುಷಃ । ಇಜ್ಯಮಾನೋ ಭಕ್ತಿಮತಾ ನಾರದೇನೇರಿತಃ ಕಿಲ ॥ ೪ ॥
ಯಾಸ್ತಾ ದೇವರ್ಷಿಣಾ ತತ್ರ ವರ್ಣಿತಾ ಭಗವತ್ಕಥಾಃ । ಮಹ್ಯಂ ಶುಶ್ರೂ
ಷವೇ ಬ್ರಹ್ಮನ್ ! ಕಾರ್ತ್ಸ್ನ್ಯೇನಾಚಷ್ಟುಮರ್ಹಸಿ ॥೫॥ ಮೈತ್ರೇಯಃ ॥
ಧ್ರುವಸ್ಯ ಚೋತ್ಕಲಃ ಪುತ್ರಃ ಪಿತರಿ ಪ್ರಸ್ಥಿತೇ ವನಂ । ಸಾರ್ವಭೌಮಶ್ರಿ

ನಾರದಂ - ನಾರದಮುನಿಯನ್ನು, ಮಹಾಭಾಗವತಂ - ಭಕ್ತಾಗ್ರೇಸರನನ್ನಾಗಿ, ಮನ್ಯೇ - ತಿಳಿಯು
ವೆನು ॥ ೩ ॥ ಭಕ್ತಿಮತಾ - ಭಕ್ತಿಯುಕ್ತನಾದ, ನಾರದೇನ-ನಾರದನಿಂದ, ಯಜ್ಞಪುರುಷಃ - ಯಜ್ಞ
ಪುರುಷನಾದ, ಭಗವಾನ್ - ಭಗವಂತನು, ಸ್ವಧರ್ಮಶೀಲೈಃ - ತಂತಮ್ಮ ಧರ್ಮಗಳನ್ನು ನಡೆಯಿಸುವ,
ಪುರುಷೈಃ - ಪುರುಷರಿಂದ, ಇಜ್ಯಮಾನಃ - ಪೂಜಿಸಲ್ಪಡತಕ್ಕವನೆಂದು, ಈರಿತಃಕಿಲ - ಹೇಳಲ್ಪಟ್ಟನ
ಷ್ಟೆ ॥ ೪ ॥ ಹೇಬ್ರಹ್ಮನ್-ಎಲೈ ಬ್ರಾಹ್ಮಣೋತ್ತಮನೆ ! ದೇವರ್ಷಿಣಾ - ನಾರದಮುನಿಯಿಂದ, ತತ್ರ-
ಆ ಸತ್ರಯಾಗದಲ್ಲಿ, ಯಾಃ-ಯಾವ, ಭಗವತ್ಕಥಾಃ - ಭಗವಂತನ ಚರಿತ್ರಗಳು, ವರ್ಣಿತಾಃ-ವಿವರಿಸಲ್ಪ
ಟ್ಟುವೋ, ಅವುಗಳನ್ನು, ಶುಶ್ರೂಷವೇ - ಕೇಳಲೆಳಸಿರುವ, ಮಹ್ಯಂ - ನನಗೆ. ಕಾರ್ತ್ಸ್ನ್ಯೇನ-ಸಂಪೂರ್ಣ
ವಾಗಿ, ಆಚಷ್ಟುಂ - ಹೇಳುವುದಕ್ಕೆ, ಅರ್ಹಸಿ - ಯೋಗ್ಯನಾಗುತ್ತಿ ॥ ೫ ॥ ಮೈತ್ರೇಯನು ಹೇಳು
ತ್ತಾನೆ, ಉತ್ಕಲಃ-ಉತ್ಕಲನೆಂಬ, ಧ್ರುವಸ್ಯ - ಧ್ರುವನ, ಪುತ್ರಃ-ಮಗನು, ಪಿತರಿ-ತಂದೆಯು, ವನಂ-

ಭಗವಂತನ ಸಾಕ್ಷಾತ್ಕಾರವಾಗುವಂತೆ ಸುಲಭಮಾರ್ಗವನ್ನು ತೋರಿಸಿ, ಲೋಕವನ್ನನುಗ್ರ
ಹಿಸಿದನೋ, ಭಗವಂತನನ್ನು ಸಾಕ್ಷಾತ್ತಾಗಿ ಕಂಡಿರುವ ಆ ನಾರದ ಮುನಿಯು ಭಾಗವತ
ಶಿರೋಮಣಿ ಯೆಂಬುದರಲ್ಲಿ ಸಂಶಯವಿಲ್ಲ ॥೩॥ ಮತ್ತು ಭಗವದ್ಭಕ್ತನಾದ ಆಮುನಿಯು,
ತಂತಮ್ಮ ವರ್ಣಾಶ್ರಮಗಳಿಗನುಗುಣಗಳಾದ ಪಂಚಮಹಾಯಜ್ಞಾದಿಗಳನ್ನು ಆಚರಿಸುವಬ್ರಾ
ಹ್ಮಣಾದಿವರ್ಣದವರೂ ಭಗವದಾರಾಧನ ರೂಪವಾಗಿಯೇ ತಮ್ಮ ಕರ್ಮಗಳನ್ನು ನಡೆಯಿ
ಸಬೇಕೆಂದು ಪಂಚರಾತ್ರಾದಿಗಳಲ್ಲಿ ಪ್ರತಿಪಾದಿಸಿರುವನು ॥೪॥ ಇಂತಹ ನಾರದ ಮುನಿಯು
ಸತ್ರಯಾಗದಲ್ಲಿ ಪ್ರಚೇತಸರಿಗೆ ಯಾವ ಯಾವ ಭಗವಚ್ಚರಿತ್ರಗಳನ್ನು ಬಣ್ಣಿಸಿದನೋ,
ಆ ದಿವ್ಯಚರಿತ್ರಗಳನ್ನು ಸಮಗ್ರವಾಗಿ ಕೇಳಬೇಕೆಂದು ತವಕಿಸುತ್ತಿರುವನನಗೆ, ದಯಪಾ
ಲಿಸು, ಎಂದು ಬೇಡಿದನು॥೫॥ ಆಗ ಮೈತ್ರೇಯನು ಹೇಳುತ್ತಾನೆ —ಅಯ್ಯಾ ವಿದುರನೆ! ಕೇ
ಳು. ಇಂತು ಧ್ರುವರಾಯನು ಪರಮಪದವನ್ನು ಪಡೆವುದಕ್ಕಾಗಿ ಕಾಡಿಗೆ ತೆರಳಿದ ಬಳಿಕ ಆ

‡ ವಿ. ಪ್ರವೃತ್ತಿ ಮಾರ್ಗಕ್ಕೆ ಯೋಗ್ಯಗಳಾದ ಯಜ್ಞಾದಿಗಳುಸಂಕಲ್ಪಭೇದದಿಂದ ನಿವೃತ್ತಿಮಾರ್ಗ
ಕ್ಕೂ ಸಾಧನಗಳಾಗುವುವು. ಯಜ್ಞಾದಿಕರ್ಮಗಳಲ್ಲಿ, ಸಾಕ್ಷಾನ್ನಾರಾಯಣ ಮೂರ್ತಿಯೇ ಚರುಪುರೋಡಾ
ಶಾದಿ ದ್ರವ್ಯಗಳಿಗೆ ಸ್ವಾಮಿಯಾಗಿಯೂ, ತದಭಿಮಾನಿಗಳಾದ ಅಗ್ನಿಮೊದಲಾದ ದೇವತೆಗಳಲ್ಲಿ ಅಂತರ್ಯಾ
ಮಿಯಾಗಿಯೂ, ಇಂದ್ರಾದಿ ದೇವತಾರೂಪವಾಗಿಯೂ, ಮಂತ್ರ ಮೂರ್ತಿಯಾಗಿಯೂ, ಇರುವನೆಂದು
ಭಾವಿಸಿದಲ್ಲಿ, ಯಜ್ಞಾದಿಕರ್ಮಗಳು ನಿವೃತ್ತಿ ಮಾರ್ಗಕ್ಕೆ ಸಹಕಾರಿಗಳಾಗುವುವು. ಎಂಬುದೇ ಪಾಂಚರಾ
ತ್ರಾಗಮಾಭಿಪ್ರಾಯವು.

ಯಂ ನೈಚ್ಛ ದಧಿರಾಜಾಸನಂ ಪಿತುಃ ॥೬॥ * ಸ ಜನ್ಮನೋಪಶಾಂತಾತ್ಮಾ ನಿಸ್ಸಂಗ ಸ್ಸಮದರ್ಶನಃ। ದದರ್ಶ ಲೋಕೇವಿತತ ಮಾತ್ಮಾನಂ ಲೋಕ ಮಾತ್ಮನಿ ॥೭॥ † ಆತ್ಮಾನಂ ಬ್ರಹ್ಮನಿರ್ವಾಣಂ ಪ್ರತ್ಯಸ್ತಮಿತ ವಿಗ್ರಹಂ । ಅವಬೋಧರಸೈಕಾತ್ಮ್ಯ ಮಾನಂದ ಮನುಸಂತತಂ ॥೮॥ ಅವ್ಯವಚ್ಛಿನ್ನ ಯೋಗಾಗ್ನಿ ದಗ್ಧ ಕರ್ಮಮಲಾಶಯಃ । ಸ್ವರೂಪ ಮವರುಂಧಾನೋ ನಾತ್ಮನೋऽ

ಕಾಡಿಗೆ, ಪ್ರಸ್ಥಿತೇ-ತೆರಳಲು, ಪಿತುಃ- ತಂದೆಯ, ಸಾರ್ವಭೌಮಶ್ರಿಯಂ-ಚಕ್ರವರ್ತಿಸಂಪತ್ತನ್ನೂ, ಅಧಿರಾಜಾಸನಂ- ಸಿಂಹಾಸನವನ್ನೂ, ನೈಚ್ಛತ್-ಬಯಸಲಿಲ್ಲ ॥ ೬ ॥ ಜನ್ಮನಾ - ಹುಟ್ಟಿನಿಂದಲೇ, ಉಪ...ತ್ಮಾ - ಶಾಂತವಾದ ಮನಸ್ಸುಳ್ಳ, ನಿಸ್ಸಂಗಃ - ಸಂಗರಹಿತನಾದ, ಸಮದರ್ಶನಃ - ಭೇದದೃಷ್ಟಿಯಿಲ್ಲದ, ಸಃ-ಅವನು, ಲೋಕೇ - ಲೋಕದಲ್ಲಿ, ವಿತತಂ-ವ್ಯಾಪಿಸಿರುವ, ಆತ್ಮಾನಂ - ತನ್ನನ್ನೂ, ಆತ್ಮನಿ-ತನ್ನಲ್ಲಿ, ಲೋಕಂ - ಲೋಕವನ್ನೂ, ದದರ್ಶ - ಕಂಡನು ॥ ೭ ॥ ಅವ್ಯ...ಯಃ, ಅವ್ಯವಚ್ಛಿನ್ನ - ನಿರಂತರವಾದ, ಯೋಗಾಗ್ನಿ - ಧ್ಯಾನವೆಂಬ ಅಗ್ನಿಯಿಂದ, ದಗ್ಧ-ಸುಡಲ್ಪಟ್ಟ, ಕರ್ಮಮಲ - ಕರ್ಮಗಳೆಂಬ ಕಶ್ಮಲವುಳ್ಳ, ಆಶಯಃ - ಮನಸ್ಸುಳ್ಳವನಾಗಿ, ಆತ್ಮಾನಂ - ತನ್ನನ್ನು, ಸ್ವರೂಪಂ - ಸ್ವರೂಪಭೂತವಾದ, ನಿರ್ವಾಣಂ - ಶಾಂತವಾದ, ಪ್ರತ್ಯಸ್ತಮಿತ ವಿಗ್ರಹಂ - ಭೇದರಹಿತವಾದ, ಅವ....ತ್ಮ್ಯಂ-ಜ್ಞಾನದಿಂದೇಕರೂಪವಾಗಿಯೂ, ಅನುಸಂತತಂ-ಯಾವಾಗಲೂ, ಆನಂದಂ - ಆನಂದಸ್ವರೂಪವಾಗಿಯೂ

ತನ ಪುತ್ರನಾದ ಉತ್ಕಲನು ತೀವ್ರ ವೈರಾಗ್ಯಸಂಪನ್ನನಾದುದರಿಂದ ತಂದೆಯ ಸಿಂಹಾಸನವನ್ನಾಗಲಿ ಆ ಚಕ್ರವರ್ತಿಪದವಿಯ ಭೋಗಗಳನ್ನಾಗಲಿ ಬಯಸಲಿಲ್ಲ ॥೬॥ ಆತನು ಹುಟ್ಟಿದಮೊದಲುಗೊಂಡು ಕಾಮಾದಿಗಳನ್ನುಳಿದು, ಸಂಗರಹಿತನಾಗಿ ಸರ್ವರನ್ನೂ ಸಮದೃಷ್ಟಿಯಿಂದ ನೋಡುತ್ತಾ ತಾನು ಸಕಲಲೋಕಗಳಲ್ಲಿಯೂ ತುಂಬಿರುವುದನ್ನೂ, ಸಕಲವೂ ತನ್ನಲ್ಲಿರುವುದನ್ನೂ ಕಂಡನು.॥೭॥ನಿರಂತರದಲ್ಲಿಯೂ ಆತ್ಮಧ್ಯಾನರೂಪಯೋಗವೆಂಬಅಗ್ನಿಯಿಂದಮನಸ್ಸಿನಲ್ಲಿ ನೆಲಸಿರುವ ಅನಾದಿಕರ್ಮವಾಸನೆಗಳೆಲ್ಲವನ್ನೂ ನಿರ್ಮೂಲವಾಗಿ ಸುಟ್ಟು ಶಾಂತವಾಗಿಯೂ, ಭೇದರಹಿತವಾಗಿಯೂ, ಸಚ್ಚಿದಾನಂದ ಘನವಾಗಿಯೂ ಇರುವ ಪರಬ್ರ

* ವಿ. ಉತ್ಕಲನು ಅನೇಕ ಜನ್ಮಗಳಲ್ಲಿ ಕೈಗೂಡಿದ ಯೋಗಮಹಿಮೆಯಿಂದ ಆತ್ಮ ಯಾಥಾತ್ಮ್ಯಜ್ಞಾನವನ್ನು ಪಡೆದು ತೃಪ್ತನಾಗಿರುವುದರಿಂದ ಇತರ ಪುರುಷಾರ್ಥಗಳನ್ನು ಬಯಸಲಿಲ್ಲ ಆತನು ರಾಜ್ಯವನ್ನು ಬಯಸದುದಕ್ಕಿದೇ ಕಾರಣವು. ಭಗವಂತನ ಶರೀರವು ಲೋಕದಲ್ಲೆಲ್ಲಾ ವ್ಯಾಪ್ತವಾಗಿರುವುದೆಂತಲೂ, ಲೋಕಕ್ಕೆಲ್ಲಾ ಆ ಶರೀರವೇ ಧಾರಕವೆಂತಲೂತಿಳಿಯಬೇಕು.

† (೧) ವಿ. ಪ್ರತ್ಯಸ್ತಮಿತ ವಿಗ್ರಹಂ ಶರೀರ ರಹಿತನೆಂದು ಭಾವವು" ಶ್ರುತಿಯಲ್ಲಿ ಹೇಳುವಂತೆ ಭಗವಂತನು ಶರೀರಗಳಲ್ಲಿ ಅಶರೀರನಾಗಿರುವನು. ಶ್ರು. ಅಶರೀರಂ ಶರೀರೇಷು.

(೨) ವಿ. ಉತ್ಕಲನು ಸರ್ವಪ್ರಾಣಿಗಳಲ್ಲಿಯೂ ಒಳಗೂ ಹೊರಗೂ, ಗುಣಗುಣಿಗಳಿಗೂ, ರೂಪರೂಪಿಗಳಿಗೂ ಭೇದವಿಲ್ಲದಂತೆ ವ್ಯಾಪ್ತನಾಗಿಯೂ, ಶ್ರುತಿಯಲ್ಲಿ ಹೇಳುವಂತೆ ಅನಂತಗುಣ ಪೂರ್ಣನಾಗಿಯೂ, ಪ್ರಾಕೃತವೈಕೃತರೂಪ ರಹಿತನಾಗಿಯೂ, ದೇಹಾಭಿಮಾನಿಯಾದ ಜೀವನಿಗಿರುವಂತೆ ಶರೀರಾದಿ ನಿಮಿತ್ತವಾದ ದುಃಖವಿಲ್ಲದವನಾಗಿಯೂ, ಇರುವ ಬಿಂಬರೂಪನಾದ ಶ್ರೀಹರಿಯು, ಲೋಕವ್ಯಾಪ್ತನಾಗಿರುವುದನ್ನೂ, ಲೋಕಕ್ಕೆ ಆ ಹರಿಯೇ ಆಧಾರವಾಗಿರುವುದನ್ನೂ ಕಂಡನು.

ನ್ಯಂ ತದ್ವ್ಯೈಕ್ಷತ ॥೯॥ ಜಡಾಂಧ ಬಧಿರೋನ್ಮತ್ತ ಮೂಕಾಕೃತಿ ರತನ್ಮತಿಃ ।
ಲಕ್ಷಿತಃ ಪಥಿ ಬಾಲಾನಾಂ ಪ್ರಶಾಂತಾರ್ಚಿರಿವಾನಲಃ ॥೧೦॥ ಮತ್ವಾ ತಂ ಜ
ಡ ಮುನ್ಮತ್ತಂ ಕುಲವೃದ್ಧಾಃ ಸಮಂತ್ರಿಣಃ । ವತ್ಸರಂ ಭೂಪತಿಂ ಚಕ್ರು
ರ್ಯವೀಯಾಂಸಂ ಭ್ರಮೇಃ ಸುತಂ ॥೧೧॥ ಸರ್ವರ್ಧಿ ರ್ವತ್ಸರಸ್ಯೇಷ್ಟಾ ಭಾ
ರ್ಯಾಽಸೂತ ಷಡಾತ್ಮಜಾನ್ । ಪುಷ್ಪಾರ್ಣಂ ಚಂದ್ರಕೇತುಂ ಚ ಇಷ
ಮೂರ್ಜಂ ವಸುಂ ಜಯಂ ॥೧೨॥ ಪುಷ್ಪಾರ್ಣಸ್ಯ ಪ್ರಭಾ ಭಾರ್ಯಾ ದೋ
ಷಾ ಚ ದ್ವೇ ಬಭೂವತುಃ । ಪ್ರಾತ ರ್ಮಧ್ಯಂದಿನಂ ಸಾಯ ಮಿತಿಹ್ಯಾ

---

ಇರುವ, ಬ್ರಹ್ಮ - ಬ್ರಹ್ಮವನ್ನಾಗಿ, ಅವರುಂಧಾನಃ - ತಿಳಿದು, ಆತ್ಮನಃ - ತನಗಿಂತಲೂ, ತತ್-ಅದನ್ನು, ಅನ್ಯಂ - ಬೇರೆಯನ್ನಾಗಿ, ನ್ಯೈಕ್ಷತ-ನೋಡಲಿಲ್ಲ ॥ ೮-೯ ॥ ಜಡಾಂ...ತಿಃ-ಜಡರು, ಕುರುಡರು ಕಿವುಡರು, ಹುಚ್ಚರು, ಮೂಗರು, ಇವರಂತೆ ಆಕೃತಿಯುಳ್ಳ, ಅತನ್ಮತಿಃ ಜಡಾದಿಗಳಂತೆ ಬುದ್ಧಿಯಿಲ್ಲದ ಉತ್ಕಲನು, ಪ್ರಶಾಂತಾರ್ಚಿಃ - ಉರಿಯಿಲ್ಲದ, ಅನಲಇವ - ಅಗ್ನಿಯಂತೆ, ಪಥಿ-ದಾರಿಯಲ್ಲಿ, ಬಾಲಾನಾಂ ಹುಡುಗರಿಂದ, ಲಕ್ಷಿತಃ-ಕಾಣಲ್ಪಟ್ಟನು ॥ ೧೦ ॥

ತಂ - ಅವನನ್ನು ಜಡಂ - ಜಡನನ್ನಾಗಿಯೂ, ಉನ್ಮತ್ತಂ - ಮರುಳನನ್ನಾಗಿಯೂ, ಮತ್ವಾ-ತಿಳಿದು, ಸಮಂತ್ರಿಣಃ - ಮಂತ್ರಿಗಳಿಂದ ಕೂಡಿದ, ಕುಲವೃದ್ಧಾಃ - ಹಿರಿಯರು, ಭ್ರಮೇಃ ಭ್ರಮಿಯ, ಯವೀಯಾಂಸಂ- ಕಿರಿಯವನಾದ, ವತ್ಸರಂ ವತ್ಸರನೆಂಬ, ಸುತಂ-ಮಗನನ್ನು, ಭೂಪತಿಂ-ರಾಜನನ್ನಾಗಿ, ಚಕ್ರುಃ-ಮಾಡಿದರು ॥ ೧೧ ॥ ವತ್ಸರಸ್ಯ - ವತ್ಸರನಿಗೆ, ಇಷ್ಟಾ - ಪ್ರಿಯಳಾದ, ಭಾರ್ಯಾ - ಹೆಂಡತಿಯಾದ, ಸರ್ವರ್ಧಿಃ- ಸರ್ವರ್ಧಿಯೆಂಬುವಳು, ಪುಷ್ಪಾರ್ಣ, ಚಂದ್ರ, ಇಷ, ಊರ್ಜ, ವಸು, ಜಯ, ಎಂಬ, ಷಡಾತ್ಮಜಾನ್-ಆರುಮಂದಿ ಮಕ್ಕಳನ್ನು. ಅಸೂತ-ಹೆತ್ತಳು ॥ ೧೨ ॥ ಪುಷ್ಪಾರ್ಣಸ್ಯ - ಪುಷ್ಪಾರ್ಣನಿಗೆ, ಪ್ರಭಾ - ಪ್ರಭೆಯು, ದೋಷಾಚ - ದೋಷಾಯೆಂಬ, ದ್ವೇ- ಇಬ್ಬರು ಹೆಂಡಿರು, ಬಭೂವತುಃ-

---

ಹ್ಮವೇ ತಾನೆಂದು ತಿಳಿದವನಾಗಿ ತನಗಿಂತ ಬೇರೆಯಾಗಿ ಯಾವುದನ್ನೂ ಕಾಣಲಿಲ್ಲ ॥೮-೯॥ ಆತ್ಮಾನಂದವನ್ನು ಅನುಭವಿಸುತ್ತಾ ಸರ್ವಜ್ಞನಾಗಿದ್ದರೂ, ಬೂದಿಮುಚ್ಚಿದ ಕೆಂಡದಂತೆ ಅದನ್ನು ಹೊರಪಡಿಸದೆ, ಆ ಮಹಾತ್ಮನು ಮೂಢರಂತೆ ಅಜ್ಞಾನವನ್ನ ನಟಿಸುತ್ತಾ, ಕುರುಡರಂತೆ ಪ್ರಾಪಂಚಿಕ ವಿಷಯಗಳನ್ನು ಲಕ್ಷಿಸದೆ, ಕಿವುಡರಂತೆ ಕಾಡು ಹರಟೆಗಳನ್ನು ಕೇಳದೆ, ಹುಚ್ಚರಂತೆ ಭಕ್ತಿಭರರಿಂದ ಮೈಮರತು ಬೀದಿಬೀದಿಗಳಲ್ಲಿ ಬಾಲರೊಡನೆ ಅಲೆದಾಡುತ್ತಿದ್ದನು ॥೧೦॥ ಅದನ್ನು ಕಂಡು ಹಿರಿಯರಾದ ಅರಸುಪೀಳಗೆಯವರು ಮಂತ್ರಿಗಳೊಡನಾಲೋಚಿಸಿ ಮರುಳನೆಂದಾತನನ್ನುಳಿದು ಭ್ರಮಿಯ ಕಿರಿಯಮಗನಾದ ವತ್ಸರನೆಂಬವನಿಗೆ ಪಟ್ಟವನ್ನು ಕಟ್ಟಿದರು ॥೧೧॥ ಆ ವತ್ಸರನ ಪ್ರಿಯಪತ್ನಿಯಾದ ಸರ್ವರ್ಧಿಯೆಂಬಾಕೆಯು ಪುಷ್ಪಾರ್ಣ, ಚಂದ್ರಕೇತು, ಇಷ, ಊರ್ಜ, ವಸು, ಜಯಎಂಬ ಆರುಮಂದಿಮಕ್ಕಳನ್ನು ಹೆತ್ತಳು ॥೧೨॥ ಆ ಪುಷ್ಪಾರ್ಣನಿಗೆ ಪ್ರಭೆ, ದೋಷೆ, ಎಂಬ ಇಬ್ಬರು ಹೆಂಡತಿಯರಾದರು. ಆವರಲ್ಲಿ ಪ್ರಭೆಯೆಂಬ ಹೆಂಡತಿಯು ಪ್ರಾತಃಕಾಲ, ಮಧ್ಯಾಹ್ನ, ಸಾಯಂಕಾಲಗಳೆಂಬ ಮೂವರುಪುತ್ರರನ್ನೂ ಕಿರಿಯವಳಾದ ದೋಷೆಯು ಪ್ರದೋಷ, ನಿಶೀಥ, ವ್ಯುಷ್ಟಿ ಯೆಂಬ ಮೂವ

ರ್ಗ ಪ್ರಭಾಸುತಾಃ ॥೧೩॥ ಪ್ರದೋಷೋ ನಿಶೀಥೋವ್ಯುಷ್ಟ ಇತಿ ದೋಷಾಸುತಾ ಸ್ತ್ರಯಃ । ವ್ಯುಷ್ಟ ಸ್ಸುತಂ ಪುಷ್ಕರಿಣ್ಯಾಂ ಸರ್ವತೇಜಸ ಮಾದಧೇ ॥೧೪॥ ಸಚಕ್ಷುಸ್ಸುತ ಮಾಕೂತ್ಯಾಂ ಮನುಂ ಪತ್ನ್ಯಾ ಮವಾಪಹ । ಮನೋ ರಸೂತ ಮಹಿಷೀ ವಿರಜಾ ನ್ನಡ್ವಲಾಸುತಾನ್ ॥೧೫॥ ಪುರುಂ ಕುತ್ಸಂ ತ್ರಿತಂ ದ್ಯುಮ್ನಂ ಸತ್ಯವಂತ ಮೃತಂ ವ್ರತಂ । ಅಗ್ನಿಷ್ಟೋಮ ಮತೀರಾತ್ರಂ ಸುದ್ಯುಮ್ನಂ ಶಿಬಿ ಮುಲ್ಮುಕಂ ॥೧೬॥ ಉಲ್ಮುಕೋಽಜನಯತ್ಪುತ್ರಾನ್ ಪುಷ್ಕರಿಣ್ಯಾಂ ಷಡುತ್ತಮಾನ್ । ಅಂಗಂ ಸುಮನಸಂ ಖ್ಯಾತಿಂ ಕ್ರತು ಮಂಗಿರಸಂ ಗಯಂ ॥೧೭॥ ಸುನೀಥಾಽಂಗಸ್ಯ ಯಾ ಪತ್ನೀ ಸುಷುವೇ ವೇನ ಮುಲ್ಬಣಂ। ಯದ್ದೌಶ್ಶೀಲ್ಯಾ ತ್ಸರಾಜರ್ಷಿ ರ್ನಿರ್ವಿಣ್ಣೋ ನಿರಗಾ ತ್ಪುರಾತ್॥

ಇದ್ದರು, ಪ್ರಾತಃಕಾಲ, ಮಧ್ಯಾಹ್ನ, ಸಾಯಂಕಾಲ, ಇತಿ - ಎಂಬುವರು, ಪ್ರಭಾಸುತಾಃ - ಪ್ರಭೆಯ ಮಕ್ಕಳು ಆಸನ್-ಆದರು ॥ ೧೩ ॥ ಪ್ರದೋಷ, ನಿಶೀಥ, ವ್ಯುಷ್ಟ, ಇತಿ-ಎಂಬ, ತ್ರಯಃ-ಮೂರು ಮಂದಿಯು, ದೋಷಾಸುತಾಃ -ದೋಷೆಯಮಕ್ಕಳು, ವ್ಯುಷ್ಟಃ - ವ್ಯುಷ್ಟಯು, ಪುಷ್ಕರಿಣ್ಯಾಂ- ಪುಷ್ಕರಿಣಿಯಲ್ಲಿ, ಸರ್ವತೇಜಸಂ- ಸರ್ವತೇಜಸ್ಕನೆಂಬ, ಸುತಂ-ಮಗನನ್ನು, ಆದಧೇ-ಪಡೆದನು ॥೧೪॥ ಸಃ- ಆ ಸರ್ವತೇಜಸ್ಕನು, ಆಕೂತ್ಯಾಂಪತ್ನ್ಯಾಂ - ಆಕೂತಿಯೆಂಬ ಹೆಂಡತಿಯಲ್ಲಿ, ಚಕ್ಷುಃಮನುಂ - ಚಕ್ಷುಸ್ಸೆಂಬ ಮನುವನ್ನು, ಸುತಂ - ಮಗನನ್ನಾಗಿ, ಅವಾಪಹ - ಪಡೆದನು, ಮನೋಃ - ಮನುವಿನ, ಮಹಿಷೀ-ಹೆಂಡತಿಯಾದ, ನಡ್ವಲಾ-ನಡ್ವಲೆಯು, ವಿರಜಾನ್ - ಶುದ್ಧರಾದ, ಪುರು ಮೊದಲಾದ ಹನ್ನೆರಡು ಮಂದಿ, ಸುತಾನ್ - ಮಕ್ಕಳನ್ನು, ಅಸೂತ - ಹೆತ್ತಳು ॥ ೧೫--೧೬ ॥ ಉಲ್ಮುಕಃ - ಉಲ್ಮುಕನು, ಪುಷ್ಕರಿಣ್ಯಾಂ-ಪುಷ್ಕರಿಣಿಯಲ್ಲಿ, ಅಂಗಮೊದಲಾದ, ಉತ್ತಮಾನ್ - ಉತ್ತಮರಾದ, ಷಟ್-ಪುತ್ರಾನ್- ಆರುಮಂದಿ ಮಕ್ಕಳನ್ನು, ಅಜನಯತ್-ಜನಿಯಿಸಿದನು ॥ ೧೭ ॥ ಅಂಗಸ್ಯ- ಅಂಗರಾಜನಿಗೆ, ಪತ್ನೀ- ಹೆಂಡತಿಯಾದ, ಯಾ - ಯಾವ, ಸುನೀಥಾ - ಸುನೀಥೆಯು, ಉಲ್ಬಣಂ - ಕ್ರೂರನಾದ, ವೇನಂ-ವೇನನನ್ನು, ಸುಷುವೇ - ಹೆತ್ತಳು, ಯದ್ದೌಶ್ಶೀಲ್ಯಾತ್ - ಯಾವನ ಕೆಟ್ಟತನದಿಂದ, ಸರಾಜರ್ಷಿಃ-ಆ ಅಂಗ ರಾಜನು, ನಿರ್ವಿಣ್ಣಃ-ಬೇಸರಗೊಂಡು, ಪುರಾತ್-ಪಟ್ಟಣದಿಂದ, ನಿರಗಾತ್-ಹೊರಟು ಹೋದನೋ ॥೧೮॥

ರು ಮಕ್ಕಳನ್ನೂ ಪಡೆದನು. ಆವ್ಯುಷ್ಟಯೆಂಬವನು ಪುಷ್ಕರಿಣಿಯೆಂಬವಳಲ್ಲಿ ಸರ್ವತೇಜಸನೆಂಬ ಮಗನನ್ನು ಪಡೆದನು ॥೧೪॥ ಆ ಸರ್ವತೇಜಸನು ಆಕೂತಿಯೆಂಬ ಪತ್ನಿಯಲ್ಲಿ ಚಕ್ಷುಸ್ಸೆಂದು ಅಡ್ಡಹೆಸರುಳ್ಳಮನುವೆಂಬ ಮಗನನ್ನು ಪಡೆದನು. ಆ ಚಕ್ಷುರ್ಮನುವಿನ ಹೆಂಡತಿಯಾದ ನಡ್ವಲೆಯೆಂಬವಳು ಪರಿಶುದ್ಧರಾದ ಪುರು, ಕುತ್ಸ, ತ್ರಿತ, ದ್ಯುಮ್ನ, ಸತ್ಯವಂತ, ಋತ, ವ್ರತ, ಅಗ್ನಿಷ್ಟೋಮ, ಅತಿರಾತ್ರ, ಸುದ್ಯುಮ್ನ, ಶಿಬಿ, ಉಲ್ಮುಕ ಎಂಬ ಹೆಸರುಳ್ಳ ಹನ್ನೆರಡುಮಂದಿ ಮಕ್ಕಳನ್ನು ಪಡೆದಳು ॥೧೬॥ ಕಿರಿಯಮಗನಾದ ಉಲ್ಮುಕನು ಪುಷ್ಕರಿಣಿಯೆಂಬ ಹೆಂಡತಿಯಲ್ಲಿ ಅಂಗ, ಸುಮನಸು, ಖ್ಯಾತಿ, ಕ್ರತು, ಅಂಗೀರಸು, ಗಯ ಎಂಬ ಉತ್ತಮಗುಣಸಂಪನ್ನರಾದ ಆರುಮಂದಿ ಮಕ್ಕಳನ್ನು ಪಡೆದನು ॥೧೭॥ ಆ ಅಂಗರಾಜನು ತನ್ನಪತ್ನಿಯಾದ ಸುನೀಥಾದೇವಿಯಲ್ಲಿ ಅತಿದುಷ್ಟನಾದ ವೇನನೆಂಬ ಮಗನನ್ನು ಪಡೆದನು. ತಂದೆಯನ್ನು ಹಲವುಬಗೆಯಿಂದ ಕಾಡಿಸಿ ದೇಶದಿಂದೋಡಿಸಿದ ವೇನನೆಂಬುವನು ಇವನೇ॥

ಯ ಮಂಗ ! ಶೇಪುಃ ಕುಪಿತಾ ವಾಗ್ವಜ್ರಾ ಮುನಯಃ ಕಿಲ । ಗತಾಸೋ
ಸ್ತಸ್ಯ ಭೂಯ ಸ್ತೇ ಮಮಂಥು ರ್ದಕ್ಷಿಣಂ ಕರಂ ॥೧೯॥ ಅರಾಜಕೇ ತದಾ
ಲೋಕೇ ದಸ್ಯುಭಿಃ ಪೀಡಿತಾಃ ಪ್ರಜಾಃ । ಜಾತೋ ನಾರಾಯಣಾಂಶೇನ
ಪೃಥು ರಾದ್ಯಃ ಕ್ಷಿತೀಶ್ವರಃ ॥೨೦॥ ವಿದುರಃ ॥ ತಸ್ಯ ಶೀಲನಿಧೇಃ ಸಾಧೋ
ರ್ಬ್ರಹ್ಮಣ್ಯಸ್ಯ ಮಹಾತ್ಮನಃ । ರಾಜ್ಞಃ ಕಥ ಮಭೂ ದ್ದುಷ್ಟಾ? ಪ್ರಜಾ ಯ
ದ್ವಿಮನಾ ಯಯೌ ॥೨೧॥ ಕಿಂವಾಂಹೋ ವೇನ ಮುದ್ದಿಶ್ಯ ಬ್ರಹ್ಮದಂಡ ಮ
ಯೂಯುಜನ್? । ದಂಡವ್ರತಧರೇ ರಾಜ್ಞಿ ಮುನಯೋ ಧರ್ಮಕೋವಿದಾಃ॥
ನಾಽವಧ್ಯೇಯಃ ಪ್ರಜಾಪಾಲಃ ಪ್ರಜಾಭಿ ರಘವಾನಪಿ । ಯದಸೌ ಲೋ

ಹೇ ಅಂಗ - ಎಲೈ ವಿದುರನೆ ! ಯಂ - ಯಾವನನ್ನು, ಕುಪಿತಾಃ - ಕೋಪಗೊಂಡು, ವಾಗ್ವಜ್ರಾಃ-ವಾ
ಕ್ಕೆಂಬ ವಜ್ರಾಯುಧವುಳ್ಳವರಾಗಿ, ಮುನಯಃ - ಮುನಿಗಳು, ಶೇಪುಃ - ಶಪಿಸಿದರೋ, ಅಂತಹ, ಗತಾ
ಸೋಃ-ಮೃತನಾದ, ತಸ್ಯ - ಆವೇನನ, ದಕ್ಷಿಣಂಕರಂ - ಬಲಗೈಯನ್ನು, ಭೂಯಃ- ಮರಳಿ, ಮಮಂ
ಥುಃ-ಕಡೆದರು ॥ ೧೯ ॥ ಲೋಕೇ - ಜಗತ್ತು, ಅರಾಜಕೇ - ರಾಜನಿಲ್ಲದಂತಾಗಿ, ಪ್ರಜಾಃ - ಜನರು
ದಸ್ಯುಭಿಃ-ಕಳ್ಳಕಾಕರಿಂದ, ಪೀಡಿತಾಃ - ಬಾಧಿಸಲ್ಪಟ್ಟರು, ತದಾ-ಆಗ, ಆದ್ಯಃ- ಮೊದಲನೆಯ, ಕ್ಷಿತೀ
ಶ್ವರಃ- ರಾಜನಾದ, ಪೃಥುಃ - ಪೃಥುರಾಜನು, ನಾರಾಯಣಾಂಶೇನ - ವಿಷ್ಣುವಿನಂಶದಿಂದ, ಜಾತಃ-ಜನಿ
ಸಿದನು ॥ ೨೦ ॥ ಶೀಲನಿಧೇಃ - ಸದಾಚಾರಕ್ಕೆ ಗಣಿಯಾದ, ಸಾಧೋಃ - ಶಾಂತನಾದ, ಬ್ರಹ್ಮಣ್ಯಸ್ಯ-
ಬ್ರಾಹ್ಮಣಪ್ರಿಯನಾದ, ಮಹಾತ್ಮನಾದ, ತಸ್ಯರಾಜ್ಞಃ - ಆ ರಾಜನಿಗೆ, ದುಷ್ಟಾ-ಕೇಡನ್ನು ಮಾಡುವ,
ಪ್ರಜಾ - ಸಂತತಿಯು, ಕಥಂ-ಹೇಗೆ, ಅಭೂತ್-ಆಯಿತು, ಯತ್ - ಯಾವುದರಿಂದ, ವಿಮನಾಃ-ಮನ
ಗುಂದಿ, ಯಯೌ-ಹೊರಟು ಹೋದನೋ ॥ ೨೧ ॥ ಧರ್ಮಕೋವಿದಾಃ - ಧರ್ಮಸ್ವರೂಪವನ್ನು ಬಲ್ಲ
ಮುನಯಃ - ಋಷಿಗಳು, ರಾಜ್ಞಿ-ರಾಜನು, ದಂಡವ್ರತಧರೇ - ಪಾಲನ ನಿಯಮವನ್ನು ಪಡೆದಿರುವಾಗ,
ಕಿಂವಾ-ಯಾವ, ಅಂಹಃ-ಅಪರಾಧವನ್ನು, ಉದಿಶ್ಯ - ಉದ್ದೇಶಿಸಿ, ವೇನಂ-ವೇನನನ್ನು, ಬ್ರಹ್ಮದಂಡಂ-
ಶಾಪರೂಪವಾದ ಶಿಕ್ಷೆಯನ್ನು, ಅಯೂಯುಜನ್ - ಮಾಡಿದರು ॥ ೨೨ ॥ ಯತ್- ಯಾವಕಾರಣದಿಂದ

ಇವನ ಕಾಟವನ್ನು ತಡೆಯಲಾರದೆ ಪರಮಶಾಂತರಾದ ಮುನಿಗಳೂ ಕೂಡ ಕೋಪಗೊಂ
ಡು ತಮ್ಮ ವಾಗ್ವಜ್ರರೂಪವಾದ ಶಾಪದಿಂದ ಇವನನ್ನು ಮಡುಹಿದರು. ಬಳಿಕ ಜಗತ್ತಿನಲ್ಲಿ
ಪ್ರಜಾಪಾಲಕನಾದ ರಾಜನಿಲ್ಲದೆ ಅರಾಜಕವುಂಟಾಗಿ ಪ್ರಜೆಗಳೆಲ್ಲರೂ ಕಳ್ಳಕಾಕರಿಂದ ತಳ
ಮಳಿಸುವರೆಂದು ತಿಳಿದು, ಆ ಮಹರ್ಷಿಗಳೆಲ್ಲರೂ ಸೇರಿ ಮರಳಿ ಆ ವೇನರಾಜನ ಬಲಗೈ
ಯ್ಯನ್ನು ಮಥಿಸಿದರು. ಅವನ ಕೈಯಿಂದ ಆದಿರಾಜನೆನಿಸಿದ ಪೃಥುಚಕ್ರವರ್ತಿಯು ನಾರಾ
ಯಣಾಂಶದಿಂದ ಉದಿಸಿದನು ॥೨೦॥ ಎಂದು ಹೇಳಲು ವಿದುರನು ಬೆಸಗೊಳ್ಳುತ್ತಾನೆ—ಅ
ಯ್ಯಾ ಸಾಧುವೆ ! ಸದಾಚಾರಕ್ಕೆ ತವರೂರಾಗಿಯೂ, ಬ್ರಾಹ್ಮಣಪ್ರಿಯನಾಗಿಯೂ ಮಹಾ
ತ್ಮನಾಗಿಯೂ, ಸಾಧುಶಿರೋಮಣಿಯಾಗಿಯೂ ಇದ ಅಂಗರಾಜನಿಗೆ ತಂದೆಯನ್ನೇ ಕಾಡಿ
ಸಿ ಅಟ್ಟುವಂತಹ ದುಷ್ಟಪುತ್ರನುಂಟಾಗಲು ಕಾರಣವೇನು ? ॥೨೧॥ ವೇನರಾಜನು ದಂ
ಡಾಧಿಕಾರಿಯಾಗಿರುವಾಗ ಧರ್ಮಸೂಕ್ಷ್ಮವನ್ನು ಬಲ್ಲ ಮುನಿಗಳು ಯಾವ ಅಪರಾಧಕ್ಕಾಗಿ
ವೇನನನ್ನು ಶಪಿಸಿ ಕೊಂದರು ? ॥೨೨॥ ರಾಜನೆಂಬುವನು ಭಗವದಂಶದಿಂದವತರಿಸಿ ತನ್ನ ತೇ

ಕಪಾಲಾನಾಂ ಬಿಭರ್ತ್ಯೋಜ ಸ್ಸ್ವತೇಜಸಾ ॥೨೨॥ ಏತದಾಖ್ಯಾಹಿ ಮೇ ಬ್ರಹ್ಮನ್ ! ಸುನೀಥಾತ್ಮಜ ಚೇಷ್ಟಿತಂ । ಶ್ರದ್ದಧಾನಾಯ ಭಕ್ತಾಯ ತ್ವಂ ಪರಾವರವಿತ್ತಮಃ ॥೨೩॥ ಮೈತ್ರೇಯಃ ॥ ಅಂಗೋಽಶ್ವಮೇಧಂ ರಾಜರ್ಷಿ ರಾಜಹಾರ ಮಹಾಕ್ರತುಂ । ನಾಜಗ್ಮು ರ್ದೇವತಾ ಸ್ತಸ್ಮಿ ನ್ನಾಹೂತಾ ಬ್ರಹ್ಮವಾದಿಭಿಃ ॥೨೪॥ ತಮೂಚು ರ್ವಿಸ್ಮಿತಾ ಸ್ತತ್ರ ಯಜಮಾನ ಮಥರ್ತ್ವಿಜಃ। ಹವೀಂಷಿ ಹೂಯಮಾನಾನಿ ನತೇ ಗೃಹ್ಣಂತಿ ದೇವತಾಃ॥೨೫॥ ರಾಜನ್! ಹವೀಂಷ್ಯದುಷ್ಟಾನಿ ಶ್ರದ್ಧಯಾ ಸಾದಿತಾನಿ ತೇ । ಛಂದಾಂಸ್ಯಯಾತಯಾ

ಅಸೌ- ರಾಜನು, ಸ್ವತೇಜಸಾ - ತನ್ನ ತೇಜಸ್ಸಿನಿಂದ, ಲೋಕಪಾಲಾನಾಂ - ಲೋಕಪಾಲಕರ, ಓಜಃ- ಅಂಶವನ್ನು, ಬಿಭರ್ತಿ - ಧರಿಸುವನೋ, ಆದುದರಿಂದ, ಪ್ರಜಾಪಾಲಃ - ರಾಜನು, ಅಘವಾನಪಿ - ಪಾಪಿಯಾದರೂ, ಪ್ರಜಾಭಿಃ-ಪ್ರಜೆಗಳಿಂದ, ನಾವಧ್ಯೇಯಃ-ಕಡೆಗಣಿಸಲ್ಪಡಕೂಡದು ॥ ೨೨ ॥

ಹೇಬ್ರಹ್ಮನ್ - ಅಯ್ಯಾ ಬ್ರಾಹ್ಮಣನೆ ! ಪರಾ....ಮಃ - ಪರಾವರಜ್ಞರಲ್ಲಿ ಶ್ರೇಷ್ಠನಾದ, ತ್ವಂ - ನೀನು, ಶ್ರದ್ದಧಾನಾಯ-ಶ್ರದ್ಧೆಯುಳ್ಳ, ಭಕ್ತಾಯ- ಭಕ್ತನಾದ, ಮೇ-ನನಗೆ, ಏತತ್-ಈ, ಸುನೀ.... ತಂ-ಸುನೀಥೆಯ ಮಗನಾದ ವೇನನ ಚರಿತ್ರೆಯನ್ನು, ಆಖ್ಯಾಹಿ - ಹೇಳು ॥ ೨೩ ॥ ಮೈತ್ರೇಯನು ಹೇಳುತ್ತಾನೆ, ಅಂಗಃ - ಅಂಗನೆಂಬ, ರಾಜರ್ಷಿಃ - ರಾಜಋಷಿಯು, ಅಶ್ವಮೇಧಂ - ಅಶ್ವಮೇಧವೆಂಬ, ಮಹಾಕ್ರತುಂ - ದೊಡ್ಡ ಯಜ್ಞವನ್ನು, ಆಜಹಾರ-ನಡೆಯಿಸಿದನು, ತಸ್ಮಿನ್ - ಆ ಕ್ರತುವಿನಲ್ಲಿ, ಬ್ರಹ್ಮವಾದಿಭಿಃ - ಋತ್ವಿಜರಿಂದ, ಆಹೂತಾಃ - ಕರೆಯಲ್ಪಟ್ಟ, ದೇವತಾಃ - ದೇವತೆಗಳು, ನಾಜಗ್ಮುಃ - ಬರಲಿಲ್ಲ ॥ ೨೪ ॥ ತತ್ರ-ಅಲ್ಲಿ, ವಿಸ್ಮಿತಾಃ - ಆಶ್ಚರ್ಯಗೊಂಡ, ಋತ್ವಿಜಃ - ಋತ್ವಿಜರು, ತಂಯಜಮಾನಂ-ಆ ಯಜಮಾನನಿಗೆ, ಊಚುಃ - ಹೇಳಿದರು, ದೇವತಾಃ - ದೇವತೆಗಳು, ತೇ- ನಿನ್ನಿಂದ, ಹೂಯಮಾನಾನಿ-ಉದ್ದೇಶದಿಂದ ಕೊಡಲ್ಪಟ್ಟ, ಹವೀಂಷಿ - ಹವಿಸ್ಸುಗಳನ್ನು, ದೇವತಾಃ - ದೇವತೆಗಳು, ನಗೃಹ್ಣಂತಿ-ತೆಗೆದುಕೊಳ್ಳುವುದಿಲ್ಲ ॥ ೨೫ ॥ ಹೇರಾಜನ್ - ಎಲೈರಾಜನೆ ! ಹವೀಂಷಿ - ಹವಿಸ್ಸುಗಳು, ಅದುಷ್ಟಾನಿ-ಪರಿಶುದ್ಧವಾಗಿರುವುವು, ತೇ-ನಿನ್ನಿಂದ, ಶ್ರದ್ಧಯಾ - ಶ್ರದ್ಧೆಯಿಂದ, ಸಾದಿತಾನಿ - ಸಂಪಾದಿಸಲ್ಪ

ಜಸ್ಸಿನಿಂದಲೇ ಇಂದ್ರಾದ್ಯಷ್ಟದಿಕ್ಪಾಲಕರ ಕಲೆಗಳನ್ನು ಪಡೆದಿರುವನಾದುದರಿಂದ ಆವನು ಅಪರಾಧಿಯಾಗಿದ್ದರೂ ಪ್ರಜೆಗಳಾದವರು ರಾಜನನ್ನು ತಿರಸ್ಕರಿಸಕೂಡದಷ್ಟೆ. ಇಂತಿರುವಾಗ ವೇನರಾಜನನ್ನು ಕೊಂದುದೇಕೆ ? ॥೨೨॥ ಅಯ್ಯಾ ಬ್ರಾಹ್ಮಣೋತ್ತಮನೆ ! ನೀನು ಹಿಂದಣ ಮುಂದಣ ಸಂಗತಿಗಳನ್ನು ಚೆನ್ನಾಗಿಬಲ್ಲವನಾದುದರಿಂದ ಶ್ರದ್ಧೆಯಿಂದ ಕೇಳಬೇಕೆಂದು ತವಕಿಸುತ್ತಿರುವ ನನಗೆ ಈ ಸುನೀಥಾದೇವಿಯ ಪುತ್ರನಾದ ವೇನರಾಜನ ಚರಿತ್ರೆಯನ್ನು ವಿಶದವಾಗಿ ತಿಳುಹಿಸು, ಎಂದು ಬೆಸಗೊಳ್ಳಲು ಮೈತ್ರೇಯನು ಹೇಳುತ್ತಾನೆ ॥೨೩॥ ಒಂದಾನೊಂದು ಕಾಲದಲ್ಲಿ ಅಂಗರಾಜರ್ಷಿಯು ಅಶ್ವಮೇಧ ವೆಂಬ ಮಹಾಕ್ರತುವನ್ನು ಮಾಡತೊಡಗಿದನು. ಆ ಕ್ರತುವಿನಲ್ಲಿ ಋತ್ವಿಜರು ಮಂತ್ರಪೂರ್ವಕವಾಗಿ ಆಹ್ವಾನಮಾಡಿದರೂ ಹವಿರ್ಭಾಗಗಳನ್ನು ಗ್ರಹಿಸುವುದಕ್ಕಾಗಿ ದೇವತೆಗಳು ಬರಲಿಲ್ಲ ॥೨೪॥ ಆಗ ಋತ್ವಿಜರು ಆಶ್ಚರ್ಯಗೊಂಡು ಯಜಮಾನನಾದ ವೇನನನ್ನು ಕುರಿತು "ಎಲೈ ಮಹಾರಾಜನೆ! ನೀನು ಶ್ರದ್ಧೆಯಿಂದ ಮಂತ್ರಪೂರ್ವಕವಾಗಿತ್ತ ಹವಿರ್ಭಾಗಗಳನ್ನು ದೇವತೆಗಳು ಪರಿ

ಮಾನಿ ಯೋಜಿತಾನಿ ಧೃತವ್ರತ್ಯೈಃ ॥ ೨೭ ॥ ನವಿದಾಮೇಹ ದೇವಾನಾಂ ಹೇಳನಂ ವಯ ಮಣ್ವಪಿ। ಯನ್ನಗೃಹಂತಿ ಭಾಗಾನ್ ಸ್ವಾನ್ ಯೇ ದೇವಾಃ ಕರ್ಮಸಾಕ್ಷಿಣಃ ॥೨೮॥ ಅಂಗೋ ದ್ವಿಜವಚಶ್ಶ್ರುತ್ವಾ ಯಜಮಾನ ಸ್ಸುದುರ್ಮನಾಃ। ತತ್ಪ್ರಷ್ಟುಂ ವ್ಯಸೃಜ ದ್ವಾಚಂ ಸದಸ್ಯಾಂ ಸ್ತದನುಜ್ಞಯಾ ॥೨೯॥ ನಾಗಚ್ಛಂತ್ಯಾಹುತಾ ದೇವಾ ನಗೃಹ್ಣಂತಿ ಗ್ರಹಾ ನಿಹ। ಸದಸಸ್ಪತಯೋ ಬ್ರೂತ! ಕಿ ಮವದ್ಯಂ ಮಯಾ ಕೃತಂ ॥೩೦॥ ಸದಸಸ್ಪತಯ

---

ಟ್ಟವುಗಳು, ಛಂದಾಂಸಿ - ಮಂತ್ರಗಳು, ಅಯಾತಯಾಮಾನಿ- ನಿಸ್ಸಾರಗಳಲ್ಲ, ಧೃತವ್ರತ್ಯೈಃ-ವೇದವ್ರತವನ್ನು ಧರಿಸಿದವರಿಂದ, ಯೋಜಿತಾನಿ - ಪ್ರಯೋಗಿಸಲ್ಪಟ್ಟವುಗಳು ॥ ೨೭ ॥ ವಯಂ - ನಾವು, ಇಹ- ಇಲ್ಲಿ, ಅಣ್ವಪಿ - ಸ್ವಲ್ಪವಾದರೂ, ದೇವಾನಾಂ - ದೇವತಗಳ, ಹೇಳನಂ-ತಿರಸ್ಕಾರವನ್ನು, ನವಿದಾಮ- ತಿಳಿಯಲಿಲ್ಲ, ಕರ್ಮಸಾಕ್ಷಿಣಃ - ಕರ್ಮಗಳಿಗೆ ಸಾಕ್ಷಿಗಳಾದ, ಯೇದೇವಾಃ - ಯಾವದೇವತೆಗಳುಂಟೋ, ಅವರು, ಸ್ವಾನ್‌ಭಾಗಾನ್ - ತಮ್ಮ ಭಾಗಗಳನ್ನು, ಯತ್ - ಯಾಕೆ, ನಗೃಹ್ಣಂತಿ - ಪರಿಗ್ರಹಿಸುವುದಿಲ್ಲವೋ ॥ ೨೮ ॥ ಯಜಮಾನಃ-ಕರ್ತನಾದ, ಅಂಗಃ-ಅಂಗರಾಜನು, ದ್ವಿಜವಚಃ - ಋತ್ವಿಜರ ಮಾತನ್ನು, ಶ್ರುತ್ವಾ-ಕೇಳಿ, ಸುದುರ್ಮನಾಃ-ಮನಗುಂದಿ, ತತ್- ಅದನ್ನು, ಪ್ರಷ್ಟುಂ - ಬೆಸಗೊಳ್ಳುವುದಕ್ಕೆ, ಸದಸ್ಯಾನ್ - ಸಭಾಸದರನ್ನು ಕುರಿತು, ತದನುಜ್ಞಯಾ - ಅವರ ಅಪ್ಪಣೆಯಿಂದ, ವಾಚಂ- ಮಾತನ್ನು, ವ್ಯಸೃಜತ್-ಬಿಟ್ಟನು ॥ ೨೯ ॥ ಹೇಸದಸಸ್ಪತಯಃ - ಅಯ್ಯಾ ಸದಸ್ಯರಿರಾ! ಆಹುತಾಃ-ಕರೆಯಲ್ಪಟ್ಟ, ದೇವಾಃ - ದೇವತೆಗಳು, ನಾಗಚ್ಛಂತಿ - ಬರುವುದಿಲ್ಲ, ಇಹ - ಇಲ್ಲಿ, ಗ್ರಹಾನ್ - ಸೋಮಪಾತ್ರಗಳನ್ನು, ನಗೃಹ್ಣಂತಿ - ಪರಿಗ್ರಹಿಸುವುದಿಲ್ಲ, ಮಯಾ-ನನ್ನಿಂದ, ಕಿಂ-ಏನು, ಅವದ್ಯಂ - ಅಪರಾಧವು, ಕೃತಂ - ಮಾಡಲ್ಪಟ್ಟಿತು, ಬ್ರೂತ-ಹೇಳಿರಿ ॥ ೩೦ ॥ ನರದೇವ - ರಾಜನೆ, ಭವತಃ-ನಿನಗೆ, ಇಹ-ಈ ಜನ್ಮದಲ್ಲಿ, ಅಘಂತಾವತ್-ಪಾಪವು, ಮನಾಗಪಿ - ಸ್ವಲ್ಪವೂ, ನಸ್ಥಿತಂ - ಇರುವುದಿಲ್ಲ, ಯತ್-ಯಾವ

---

ಗ್ರಹಿಸುವಂತೆ ಕಾಣುವದಿಲ್ಲ. ನೀನು ಅತ್ಯಂತ ಶ್ರದ್ಧೆಯಿಂದ ಸಂಪಾದಿಸಿರುವದರಿಂದ ಈ ಹವಿಸ್ಸುಗಳಲ್ಲಾವದೋಷವೂ ಇಲ್ಲ. ಸ್ವರವರ್ಣಾದಿಗಳ ಲೋಪವಿಲ್ಲದೆ ಮಂತ್ರೋಚ್ಚಾರಣೆಯನ್ನು ನಿಯಮದಿಂದ ಅಭ್ಯಾಸಮಾಡಿರುವ ವೇದವ್ರತಿಗಳು ಪ್ರಯೋಗಿಸುತ್ತಿರುವುದರಿಂದ ಮಂತ್ರಗಳಲ್ಲಿಯೂ, ಯಾತಯಾಮತ್ವಾದಿ ದೋಷಗಳುಕಂಡು ಬರುವುದಿಲ್ಲ॥೨೬-೨೭॥ ಇಂತು ಯಥಾವಿಧಿಯಾಗಿ ನಡೆಯುತ್ತಿರುವ ಈ ಯಜ್ಞಕರ್ಮದಲ್ಲಿ ಸ್ವಲ್ಪವಾದರೂ ದೇವತಾ ತಿರಸ್ಕಾರವು ನಡೆದಿರುವುದಿಲ್ಲ. ಹೀಗಿದ್ದರೂ ಕರ್ಮಸಾಕ್ಷಿಗಳಾದ ದೇವತೆಗಳು ಬಂದು ತಂತಮ್ಮಹವಿರ್ಭಾಗಗಳನ್ನು ಪರಿಗ್ರಹಿಸದಿರುವುದಕ್ಕೆ ಕಾರಣವೇನೋ ತಿಳಿಯಲಿಲ್ಲ" ಎಂದು ನುಡಿದರು ॥೨೮॥ ಆಗ ಯಜಮಾನನಾದ ಅಂಗರಾಜನು ಅವರನುಡಿಗಳನ್ನು ಕೇಳಿ ಮನವಿಳದು ಖಿನ್ನನಾಗಿ, ಮೌನವನ್ನು ಪಡೆದವನಾಗಿದ್ದರೂ, ದೇವತೆಗಳು ಬಾರದಿರುವುದಕ್ಕೆ ಕಾರಣವನ್ನು ಬೆಸಗೊಳ್ಳುವುದಕ್ಕಾಗಿ ಸಭಾನುಜ್ಞೆಯಿಂದ ಮೌನವನ್ನುಳಿದು ಸದಸ್ಯರನ್ನು ಕುರಿತು ಕೇಳಿದನೆಂತೆಂದರೆ ॥೨೯॥ ಅಯ್ಯಾ ಸಭಾಸದರಿರಾ! ನಾವು ಕರೆದರೂ ದೇವತೆಗಳು ಬರಲಿಲ್ಲ. ಈ ಯಾಗದಲ್ಲಿ ಹವಿರ್ಭಾಗಗಳನ್ನು ಪರಿಗ್ರಹಿಸಲೂ ಇಲ್ಲ. ನಾನೇನು ಅಪರಾಧವನ್ನು ಮಾಡಿರುವೆನು? ದಯಮಾಡಿತಿಳುಹಿಸಿರಿ ಎನಲು ॥೩೦॥ ಸದಸ್ಯರು

ಊಚುಃ ॥ ನರದೇವೇಹ ಭವತೋ ನಾಘಂ ತಾವ ನ್ಮನಾಕ್ ಸ್ಥಿತಂ । ಅ
ಸ್ತ್ಯೇಕಂ ಪ್ರಾಕ್ತನ ಮಘಂ ಯದಿಹೇದೃಕ್ ತ್ವಮಪ್ರಜಃ ॥೩೧॥ ತಥಾಸಾ
ಧಯ ಭದ್ರಂತೇ ಆತ್ಮಾನಂ ಸುಪ್ರಜಂ ನೃಪ ! । ಇಷ್ಟಸ್ತೇ ಪುತ್ರಕಾಮಸ್ಯ
ಪುತ್ರಂ ದಾಸ್ಯತಿ ಯಜ್ಞಭುಕ್ ॥೩೨॥ ‡ ತಥಾ ಸ್ವಭಾಗಧೇಯಾನಿ ಗ್ರಹಿ
ಷ್ಯಂತಿ ದಿವೌಕಸಃ । ಯದ್ಯಜ್ಞಪುರುಷ ಸ್ಸಾಕ್ಷಾ ದಪತ್ಯಾಯ ಹರಿ ರ್ವೃತಃ ॥
ತಾಂ ಸ್ತಾನ್ ಕಾಮಾನ್ ಹರಿ ರ್ದದ್ಯಾ ದ್ಯಾನ್ ಯಾನ್ ಕಾಮಯತೇ ಜನಃ ।

ಕಾರಣದಿಂದ, ಈದೃಕ್-ಇಂತಹ, ತ್ವಂ-ನೀನೂ, ಅಪ್ರಜಃ- ಸಂತಾನರಹಿತನೊ, ಪ್ರಾಕ್ತನಂ-ಹಿಂದಣ ಜನ್ಮದ, ಏಕಂಅಘಂ - ಆ ಒಂದು ಪಾಪವು, ಅಸ್ತಿ-ಇದೆ ॥ ೩೧ ॥ ಹೇನೃಪ-ಎಲೈ ರಾಜನೆ ! ತಥಾ-ಹಾಗೆಯೇ, ಆತ್ಮಾನಂ-ನಿನ್ನನ್ನು, ಸುಪ್ರಜಂ - ಒಳ್ಳೆಯ ಸಂತಾನವುಳ್ಳವನನ್ನಾಗಿ, ಸಾಧಯ-ಮಾಡು, ತೇ-ನಿನಗೆ, ಭದ್ರಂ - ಕಲ್ಯಾಣವಾಗುವುದು, ಇಷ್ಟಃ-ಪೂಜಿಸಲ್ಪಟ್ಟ, ಯಜ್ಞಭುಕ್ ವಿಷ್ಣುವು, ಪುತ್ರಕಾಮಸ್ಯ-ಪುತ್ರರನ್ನು ಬಯಸುವ, ತೇ ನಿನಗೆ, ಪುತ್ರಂ - ಮಗನನ್ನು, ದಾಸ್ಯತಿ-ಕೊಡುವನು ॥೩೨॥ ಯತ್ - ಯಾವಕಾರಣದಿಂದ, ಯಜ್ಞಪುರುಷಃ - ಶ್ರೀಹರಿಯು, ಸಾಕ್ಷಾತ್- ನೇರವಾಗಿ, ಅಪತ್ಯಾಯ-ಸಂತತಿಗಾಗಿ, ವೃತಃ - ವರಿಸಲ್ಪಡುವನೋ, ಅದರಿಂದ, ದಿವೌಕಸಃ - ದೇವತೆಗಳು, ತಥಾ-ಹಾಗೆಯೇ, ಸ್ವಭಾಗಧೇಯಾನಿ ತಮ್ಮ ಭಾಗಗಳನ್ನು, ಗ್ರಹಿಷ್ಯಂತಿ-ಪಡೆಯುವರು ॥ ೩೩ ॥ ಜನಃ-ಜನವು, ಯಾನ್

ಅವನನ್ನು ಕುರಿತು ಅಯ್ಯಾ "ಮಹಾರಾಜನೆ ! ನೀನೀಜನ್ಮದಲ್ಲಿ ಸ್ವಲ್ಪವೂ ಪಾಪವನ್ನು ಮಾಡಿದವನಲ್ಲ. ತಿಳಿಯದಂತೇನಾದರೂ ಪಾಪವಿದ್ದರೂ ಪ್ರಾಯಶ್ಚಿತ್ತಗಳಿಂದ ಅದೆಲ್ಲವನ್ನೂ ಕಳೆದುಕೊಂಡಿರುವೆ. ಆದಕಾರಣ ನಿನಗೆ ಈಜನ್ಮದ ಪಾಪವಾವುದೂ ಇಲ್ಲ. ನೀನು ಇಂತಹ ಗುಣವಂತನಾಗಿದ್ದರೂ ಅಪುತ್ರನಾಗಿರುವುದರಿಂದ ಪೂರ್ವಜನ್ಮದ ಪಾಪವೊಂದುಂಟು ॥೩೧॥ ಆದಕಾರಣ ನೀನು ಪುತ್ರನನ್ನು ಪಡೆಯುವುದಕ್ಕೆ ತಕ್ಕ ಉಪಾಯವನ್ನು ಮಾಡು. ಭಕ್ತಿಯಿಂದ ಭಗವಂತನನ್ನು ಪೂಜಿಸು. ಆಭಗವಂತನು ಪುತ್ರಕಾಮನಾದ ನಿನಗೆ ಪುತ್ರಸಂತತಿಯನ್ನು ದಯೆಪಾಲಿಸುವನು ॥೩೨॥ ನೀನು ಅನನ್ಯ ಭಾವದಿಂದ ಪುತ್ರನಿಗಾಗಿ ಭಗವಂತನನ್ನು ಮೆಚ್ಚಿಸಿದಲ್ಲಿ ಸುಪ್ರೀತನಾದ ಆಭಗವಂತನೊಡನೆಯೇ ಸಕಲದೇವತೆಗಳೂ ಬಂದು ನಿನ್ನ ಯಾಗದಲ್ಲಿ ಹವಿರ್ಭಾಗಗಳನ್ನು ಪರಿಗ್ರಹಿಸುವರು ॥೩೩॥ ಜನರು ಯಾವ

‡ ವಿ-ದೇವತೆಗಳು ಭಗವಂತನ ಶರೀರದಿಂದುತ್ಪನ್ನರಾದುದರಿಂದಲೂ, ಆಶ್ರಿತರಾದುದರಿಂದಲೂ, ಆತನಲ್ಲಿಯೇ ಮನಸ್ಸುಳ್ಳವರಾದುದರಿಂದಲೂ, ಭಗವಂತನು ತುಷ್ಟನಾದಲ್ಲಿ ದೇವತೆಗಳೂ ತುಷ್ಟರಾಗಿ ಹವಿರ್ಭಾಗಗಳನ್ನು, ಪರಿಗ್ರಹಿಸುವರು. ಮಹಾತ್ಮನಾದ ಪೃಥುರಾಜನು ಜನಿಸುವ ನಿಮಿತ್ತವಾಗಿ ದೇವತೆಗಳು ಅಂಗರಾಜನ ಯಜ್ಞದಲ್ಲಿ ಹವಿರ್ಭಾಗಗಳನ್ನು ಪಡೆಯಲಿಲ್ಲವೇ ಹೊರತು, ಅಪುತ್ರನೆಂದಲ್ಲ. ಧರ್ಮಿಷ್ಠನಾದವನು ಅಪುತ್ರನಾಗಿದ್ದರೂ ಉತ್ತಮಲೋಕಗಳನ್ನು ಪಡೆಯುವನೆಂದೇ ತಿಳಿಯಬೇಕು. (ಅಪುತ್ರಸ್ಯಗತಿರ್ನಾಸ್ತಿ) ಮಕ್ಕಳಿಲ್ಲದವನಿಗೆ ಸದ್ಗತಿಯಿಲ್ಲವೆಂಬುದು ಅರ್ಥವಾದವು. ಅಥವಾ ಅಪುತ್ರಸ್ಯ- ಪುತ್ರರಿಲ್ಲದವನಿಗೆ, ನಾ-ಪುರುಷೋತ್ತಮನಾದ ಹರಿಯೇ, ಗತಿಃ-ದಿಕ್ಕಾಗಿ, ಅಸ್ತಿ-ಇರುತ್ತಾನೆ, ಎಂದು ತಾತ್ಪರ್ಯವು.

ಶ್ಲೋ॥ ಅನಪತ್ಯೋಽಪಿ ಸದ್ಧರ್ಮಾಲೋಕಜಿ ನ್ನಾತ್ರಸಂಶಯಃ ।
ದೇವೈಸ್ತು ಪೃಥುಜನ್ಮಾರ್ಥೇ ಹವಿ ರಂಗಸ್ಯ ನೋಽಹೃತಂ ॥

ಆರಾಧಿತೋ ಯಥೈವೈಷ ಸ್ತಥಾ ಪುಂಸಾಂ ಫಲೋದಯಃ ॥ ೩೪ ॥
ಇತಿ ವ್ಯವಸಿತಾ ವಿಪ್ರಾ ಸ್ತಸ್ಯ ರಾಜ್ಞಃ ಪ್ರಜಾತಯೇ । ಪುರೋಡಾಶಂ ನಿ
ರವಪನ್ * ಶಿಪಿವಿಷ್ಟಾಯ ವಿಷ್ಣವೇ ॥೩೫॥ ತಸ್ಮಾ ತ್ಪುರುಷ ಉತ್ತಸ್ಥೌ ಹೇ
ಮಮಾಲ್ಯ್ಯಮಲಾಂಬರಃ । ಹಿರಣ್ಮಯೇನ ಪಾತ್ರೇಣ ಸಿದ್ಧ ಮಾದಾಯ
ಪಾಯಸಂ ॥೩೬॥ ಸವಿಪ್ರಾನುಮತೋ ರಾಜಾ ಗೃಹೀತ್ವಾಂಜಲಿ ನೌದನಂ।
ಅವಘ್ರಾಯ ಮುದಾ ಯುಕ್ತಃ ಪ್ರಾದಾ ತ್ಪತ್ನ್ಯ ಉದಾರಧೀಃ ॥೩೭॥ ಸಾ

ಯಾನ್-ಯಾವಯಾವ ಕೋರಿಕೆಗಳನ್ನು, ಕಾಮಯತೇ- ಅಪೇಕ್ಷಿಸುವುದೋ, ತಾಂಸ್ತಾನ್ - ಆ ಆಕೋರಿಕೆಗಳನ್ನು, ಹರಿಃ-ಹರಿಯು, ದದ್ಯಾತ್- ಕೊಡುವನು, ಏಷಃ - ಈ ಭಗವಂತನು, ಯಥಾ-ಹೇಗೆ, ಆರಾಧಿತಃ-ಪೂಜಿಸಲ್ಪಟ್ಟನೋ, ಪುಂಸಾಂ - ಪುರುಷರಿಗೆ, ತಥಾ- ಹಾಗೆ, ಫಲೋದಯಃ - ಫಲಸಿದ್ಧಿಯುಂಟಾಗುವುದು ॥ ೩೪ ॥ ಇತಿ-ಹೀಗೆ, ವ್ಯವಸ್ಥಿತಾಃ- ನಿಶ್ಚಯಿಸಿದ, ವಿಪ್ರಾಃ - ಬ್ರಾಹ್ಮಣರು, ತಸ್ಯರಾಜ್ಞಃ- ಆ ರಾಜನಿಗೆ, ಪ್ರಜಾತಯೇ - ಸಂತಾನವಾಗುವುದಕ್ಕಾಗಿ, ಶಿಪಿವಿಷ್ಟಾಯ - ಪಶುಗಳಲ್ಲಿ ಯಜ್ಞರೂಪದಿಂದಿರುವ ವಿಷ್ಣುವಿಗೆ, ಪುರೋಡಾಶಂ - ಪುರೋಡಾಶವನ್ನು, ನಿರವಪನ್ - ಹೋಮಮಾಡಿದರು ॥ ೩೫ ॥

ತಸ್ಮಾತ್ - ಆ ಹೋಮಕುಂಡದಿಂದ, ಹೇಮಮಾಲ್ಯಃ - ಬಂಗಾರದ ಮಾಲಿಕೆಗಳುಳ್ಳ, ಅಮಲಾಂಬರಃ - ನಿರ್ಮಲವಸ್ತ್ರಗಳುಳ್ಳ, ಪುರುಷಃ - ಪುರುಷನು, ಹಿರಣ್ಮಯೇನ - ಚಿನ್ನದ, ಪಾತ್ರೇಣ - ಪಾತ್ರದಿಂದ, ಸಿದ್ಧಂ - ಸಿದ್ಧವಾದ, ಪಾಯಸಂ - ಪಾಯಸವನ್ನು, ಆದಾಯ - ತೆಗೆದುಕೊಂಡು, ಉತ್ತಸ್ಥೌ - ಎದ್ದನು ॥೩೬॥ ಸರಾಜಾ - ಆರಾಜನು, ವಿಪ್ರಾನುಮತಃ - ಬ್ರಾಹ್ಮಣರಿಂದ ಸಮ್ಮತಿಸಲ್ಪಟ್ಟವನಾಗಿ, ಅಂಜಲಿನಾ - ಬೊಗಸೆಯಿಂದ, ಓದನಂ - ಪಾಯಸವನ್ನು, ಗೃಹೀತ್ವಾ - ತೆಗೆದುಕೊಂಡು, ಅವಘ್ರಾಯ - ಮೂಸಿನೋಡಿ, ಮುದಾ - ಸಂತೋಷದಿಂದ, ಯುಕ್ತಃ - ಕೂಡಿ, ಉದಾರಧೀಃ - ಧಾರಾಳವಾದ ಮನಸ್ಸುಳ್ಳವನಾದುದರಿಂದ, ಪತ್ನ್ಯೈ - ಹೆಂಡತಿಗೆ, ಪ್ರಾದಾತ್ - ಕೊಟ್ಟನು ॥೩೭॥ ಸಾ

ಯಾವ ಫಲವನ್ನು ಬಯಸಿ ಆರಾಧಿಸುವರೋ, ಅವರಿಗೆ ಭಗವಂತನು ಆ ಆ ಫಲಗಳನ್ನು ದಯಪಾಲಿಸುವನಾದುದರಿಂದ, ನೀನು ಪುತ್ರಾಭಿಲಾಷೆಯಿಂದ ಯಜ್ಞವನ್ನು ಮಾಡಿದಲ್ಲಿ ನಿನಗೆ ಪುತ್ರಸಂತಾನವಾಗುವುದು''॥೩೪॥ ಎಂದು ಆ ಋತ್ವಿಜರು ನಿಶ್ಚಯಿಸಿ, ಅಂಗರಾಜನಿಗೆ ಪುತ್ರಸಂತಾನವಾಗಲೆಂದು ಸಂಕಲ್ಪಿಸಿ, ಪಶುಗಳಲ್ಲಿ ಯಜ್ಞರೂಪದಿಂದ ನೆಲೆಗೊಂಡಿರುವ ಶ್ರೀಹರಿಗಾಗಿ ಪುರೋಡಾಶ ಹೋಮವನ್ನು ಮಾಡಿದರು ॥೩೫॥ ತರುವಾಯ ಬಂಗಾರದ ಮಾಲಿಕೆಗಳಿಂದಲೂ, ನಿರ್ಮಲವಸ್ತ್ರಗಳಿಂದಲೂ, ಅಲಂಕೃತನಾದ ಅಗ್ನಿಪುರುಷನು, ಸಿದ್ಧವಾದ ಪಾಯಸದಿಂದ ತುಂಬಿದ ಚಿನ್ನದ ಪಾತ್ರೆಯನ್ನು ಕೈಯಲ್ಲಿಟ್ಟುಕೊಂಡು ಅಗ್ನಿಕುಂಡದಿಂದ ಆವಿರ್ಭವಿಸಿದನು ॥೩೬॥ ಆಗ ಅಂಗರಾಜನು ಬ್ರಾಹ್ಮಣರ ಅನುಮತಿಯಿಂದ ಪಾಯಸ ಪಾತ್ರೆಯನ್ನು ತೆಗೆದುಕೊಂಡು ತನ್ನ ಬೊಗಸೆಯಿಂದ ಅದನ್ನು ಮೂಸಿನೋಡಿ, ಅತ್ಯಂತ ಸಂತುಷ್ಟನಾಗಿ ಆ ಪಾಯಸವನ್ನು ಧಾರಾಳದಿಂದ ತನ್ನ ಮಡದಿಯಾದ ಸುನೀಥಾದೇವಿಗಿತ್ತನು ॥೩೭॥ ಆಕೆಯು ಪುರುಷಸಂತತಿಯನ್ನುಂಟುಮಾಡುವ ಆ ಪಾಯಸವನ್ನು ಭುಜಿಸಿ, ಪತಿ

* ಭಾ. (ಶಿಪಿ-ಯಜ್ಞ ಪಶುಗಳಲ್ಲಿ, ವಿಷ್ಟಾಯ-ನೆಲಸಿರುವವನು) ವಿಷ್ಣುವು. ಶ್ರು॥ ಯಜ್ಞೋವೈ ವಿಷ್ಣುಃ ಪಶವ ಶ್ಶಿಪಿಃ ಯಜ್ಞಏವ ಪಶುಷು ಪ್ರತಿತಿಷ್ಠತಿ ॥

ತತ್ಪುಂಸವನಂ ರಾಜ್ಞೀ ಪ್ರಾಶ್ಯವೈ ಪತ್ಯು ರಾದಧೇ । ಗರ್ಭಂ ಕಾಲ ಉಪಾವೃತ್ತೇ ಕುಮಾರಂ ಸುಷುವೇಽಪ್ರಜಾ ॥೩೮॥ ಸ ಬಾಲ ಏವ ಪುರುಷೋ ಮಾತಾಮಹ ಮನುವ್ರತಃ । ಅಧರ್ಮಾಂಶೋದ್ಭವಂ ಮೃತ್ಯುಂ ತೇನಾಽಭವ ದಧಾರ್ಮಿಕಃ ॥೩೯॥ ಸ ಶರಾಸನ ಮುದ್ಯಮ್ಯ ಮೃಗಯುರ್ವನಗೋಚರಃ । ಹಂತ್ಯಸಾಧು ರ್ಮೃಗಾನ್ ದೀನಾನ್ ವೇನೋಽಸಾ ವಿತ್ಯರೌಜ್ಜನಃ ॥೪೦॥ ಆಕ್ರೀಡೇ ಕ್ರೀಡತೋ ಬಾಲಾನ್ ವಯಸ್ಯಾ ನತಿದಾರುಣಃ । ಪ್ರಸಹ್ಯ ನಿರನುಕ್ರೋಶಃ ಪಶುಮಾರ ಮಮಾರಯತ್ ॥೪೧॥ ತಂ ವಿಲಕ್ಷ್ಯ

ಜ್ಞೀ - ಆ ಸುನೀಥೆಯು, ಪುಂಸವನಂ - ಗಂಡುಮಗುವನ್ನುಹೆರುವ, ತತ್ - ಆಪಾಯಸವನ್ನು, ಪ್ರಾಶ್ಯ - ಭಕ್ಷಿಸಿ, ಪತ್ಯುಃ - ಗಂಡನಿಂದ, ಗರ್ಭಂ - ಗರ್ಭವನ್ನು, ಆದಧೇ - ಪಡೆದಳು, ಕಾಲೇ - ಗರ್ಭಕಾಲವು, ಉಪಾವೃತ್ತೇ - ಕಳೆಯಲು, ಅಪ್ರಜಾ - ಸಂತತಿಯಿಲ್ಲದ ಸುನೀಥೆಯು, ಕುಮಾರಂ-ಗಂಡುಮಗುವನ್ನು, ಸುಷುವೇ - ಹೆತ್ತಳು ॥೩೮॥ ಸಃಪುರುಷಃ - ಅವನು, ಬಾಲಏವ - ಹಸುಳೆಯಾಗಿರುವಾಗಲೇ, ಅಧ...ವಂ - ಅಧರ್ಮನ ಅಂಶದಿಂದವತರಿಸಿದ, ಮಾತಾಮಹಂ - ಅಜ್ಜನಾದ, ಮೃತ್ಯುಂ - ಮೃತ್ಯುವನ್ನು, ಅನುವ್ರತಃ - ಅನುಸರಿಸಿದನು, ತೇನ - ಅದರಿಂದ, ಅಧಾರ್ಮಿಕಃ - ದುಷ್ಟನು, ಅಭವತ್ - ಆದನು ॥೩೯॥ ಸಃ - ಅವನು, ಶರಾಸನಂ - ಬಿಲ್ಲನ್ನು, ಉದ್ಯಮ್ಯ- ಎತ್ತಿಕೊಂಡು, ವನಗೋಚರಃ - ಕಾಡಿನಲ್ಲಿ ಅಲೆಯುತ್ತಾ, ಮೃಗಯುಃ - ಬೇಟೆಯಾಡುತ್ತಾ, ಅಸಾಧುಃ - ದುಷ್ಟನಾಗಿ, ದೀನಾನ್ ಮೃಗಾನ್ - ಬಡಮೃಗಗಳನ್ನು, ಹಂತಿ - ಕೊಲ್ಲುತ್ತಾನೆ, ಜನಃ - ಜನವು, ಅಸೌವೇನಃ - ಈ ವೇನನು, ಇತಿ - ಎಂದು, ಅರೌತ್ - ಗೋಳಿಟ್ಟರು ॥೪೦॥ ಅತಿದಾರುಣಃ - ಬಹಳ ಕ್ರೂರನಾದವೇನನು, ಆಕ್ರೀಡೇ - ಉದ್ಯಾನದಲ್ಲಿ, ಕ್ರೀಡತಃ - ಆಡುವ, ವಯಸ್ಯಾನ್ - ಜತೆಗಾರರಾದ, ಬಾಲಾನ್ - ಹುಡುಗರನ್ನು, ನಿರನುಕ್ರೋಶಃ - ನಿರ್ಘೃಣನಾಗಿ, ಪ್ರಸಹ್ಯ - ಬಲಾತ್ಕಾರದಿಂದ, ಪಶುಮಾರಂ - ಕುರಿಗಳನ್ನು ಕೊಂದಂತೆ, ಅಮಾರಯತ್ - ಕೊಲ್ಲುತ್ತಿದ್ದನು ॥೪೧॥

ನೃಪಃ - ಅಂಗರಾಜನು, ಖಲಂ - ದುಷ್ಟನಾದ, ತಂಪುತ್ರಂ - ಆ ಮಗನನ್ನು, ವೀಕ್ಷ್ಯ - ಕಂಡು, ವಿವಿಧೈಃ - ಹಲವು ಬಗೆಯಾದ, ಶಾಸನೈಃ - ಕಟ್ಟಳೆಗಳಿಂದಲೂ, ಯದಾ - ಯಾವಾಗ, ಶಾಸಿತುಂ-

ಸಂಯೋಗದಿಂದ ಗರ್ಭವನ್ನು ಧರಿಸಿದಳು. ಗರ್ಭಕಾಲವತಿಕ್ರಮಿಸಿದ ಬಳಿಕ ಗಂಡುಮಗುವನ್ನು ಹೆತ್ತಳು ॥೩೮॥ ಆ ಗಂಡುಮಗುವು ಹುಟ್ಟಿದಮೊದಲುಗೊಂಡು, ಅಧರ್ಮಾಂಶ ಸಂಭೂತನು, ತನಗೆ ಮಾತಾಮಹನೂ ಆಗಿರುವ ಮೃತ್ಯುವನ್ನು ಅನುಸರಿಸಿದುದರಿಂದ ದುರ್ಮಾರ್ಗನಾದನು ॥೩೯॥ ದುಷ್ಟನಾದ ಅವನು ಯಾವಾಗಲೂ ಬಿಲ್ಲನ್ನು ಹಿಡಿದು, ಬೇಟೆಗಾಗಿ ಕಾಡುಗಳಲ್ಲಿ ತಿರುಗುತ್ತಾ, ನಿರಪರಾಧಿಗಳಾದ ಬಡಮೃಗಗಳನ್ನು ಕನಿಕರವಿಲ್ಲದೆ ಕೊಲ್ಲುತ್ತಿದ್ದನು. ಜನರೆಲ್ಲರೂ ಅವನನ್ನು ಕಂಡು "ಅಕಟಾ ಹಾಳು ವೇನನು ಬಂದನಲ್ಲಾ ! ಇನ್ನೇನು ಗತಿ?" ಎಂದು ಗೋಳಾಡುತ್ತಿದ್ದರು ॥೪೦॥ ಕಟುಕನಾದ ಆ ವೇನನು, ಉದ್ಯಾನಗಳಲ್ಲಿ, ಆಡುತ್ತಿರುವ ಜತೆಗಾರರಾದ ಹುಡುಗರನ್ನು ಹಿಡಿದುಕೊಂಡು ನಿರ್ದಯನಾಗಿ ಕುರಿಗಳನ್ನು ಕೊಲ್ಲುವಂತೆ ಕೊಂದು ಹಾಕುತ್ತಿದ್ದನು॥೪೧॥ ಇಂತು ದುರುಳನಾಗಿರುವ ಪುತ್ರನನ್ನು ಕಂಡು, ಅಂಗರಾಜನು ಬಗೆಬಗೆಯಾದ ಕಟ್ಟಳೆಗಳಿಂದ ತಿದ್ದಿದರೂ ಅವನನ್ನು ಸರಿಯಾದ

ಖಲಂ ಪುತ್ರಂ ಶಾಸನೈರ್ವಿವಿಧೈರ್ನೃಪಃ। ಯದಾ ನಶಾಸಿತುಂ ಕಲ್ಪೋ ಭೃ
ಶಮಾಸೀತ್ಸುದುರ್ಮನಾಃ ॥೪೨॥ ಪ್ರಾಯೇಣಾಽಭ್ಯರ್ಚಿತೋ ದೇವೋ
ಯೇಽಪ್ರಜಾ ಗೃಹಮೇಧಿನಃ। ಕದಪತ್ಯಭೃತಂ ದುಃಖಂ ಯೇನ ವಿಂದಂ
ತಿ ದುರ್ಭರಂ ॥೪೩॥ ಯತಃ ಪಾಪೀಯಸೀ ಕೀರ್ತಿರಧರ್ಮಶ್ಚ ಮಹಾ
ನ್ನೃಣಾಂ। ಯತೋ ವಿರೋಧಸ್ಸರ್ವೇಷಾಂ ಯತ ಆಧಿರನಂತಕಃ ॥೪೪॥
ಕಸ್ತಂ ಪ್ರಜಾಽಪದೇಶಂ ವೈ ಮೋಹಬಂಧನಮಾತ್ಮನಃ। ಪಂಡಿತೋ
ಬಹು ಮನ್ಯೇತ ಯದರ್ಥಾಃ ಕ್ಲೇಶದಾ ಗೃಹಾಃ ॥೪೫॥ ಕದಪತ್ಯಂ ವರಂ
ಮನ್ಯೇ ಸದಪತ್ಯಾಚ್ಛುಚಾಂ ಪದಾತ್। ನಿರ್ವಿದ್ಯೇತ ಗೃಹಾನ್ಮರ್ತ್ಯೋ

---

ಶಿಕ್ಷಿಸುವುದಕ್ಕೆ, ನಕಲ್ಪಃ - ಸಮರ್ಥನಾಗಲಿಲ್ಲವೋ, ತದಾ - ಆಗ, ಭೃಶಂ - ಬಹಳವಾಗಿ, ದುರ್ಮನಾಃ-ಮನಗುಂದಿದವನು, ಆಸೀತ್ - ಆದನು, ॥೪೨॥ ಯೇ - ಯಾರು, ಕದ....ತಂ - ದುಷ್ಪುತ್ರರಿಂದುಂಟಾದ, ದುಃಖಂ - ದುಃಖವನ್ನು, ನವಿಂದಂತಿ - ತಿಳಿಯಲಿಲ್ಲವೋ, ಅಪ್ರಜಾಃ - ಮಕ್ಕಳಿಲ್ಲದ, ಯೇ - ಯಾವ, ಗೃಹಮೇಧಿನಃ - ಗೃಹಸ್ಥರುಂಟೋ, ಅವರಿಂದ, ಪ್ರಾಯೇಣ - ಬಹಳ ಮಟ್ಟಿಗೆ ದೇವಃ - ಭಗವಂತನು, ಅಭ್ಯರ್ಚಿತಃ - ಪೂಜಿಸಲ್ಪಟ್ಟನು ॥೪೩॥ ಯತಃ - ದುಸ್ಸಂತತಿಯಿಂದ, ನೃಣಾಂ - ಮನುಷ್ಯರಿಗೆ, ಪಾಪೀಯಸೀ - ಪಾಪಿಷ್ಠವಾದ, ಕೀರ್ತಿಃ - ಹೆಸರೂ, ಮಹಾನ್-ಅಧಿಕವಾದ, ಅಧರ್ಮಶ್ಚ - ಅಧರ್ಮವೂ, ಯತಃ - ಯಾವುದರಿಂದ, ಸರ್ವೇಷಾಂ - ಎಲ್ಲರೊಡನೆಯೂ, ವಿರೋಧಃ-ದ್ವೇಷವೂ, ಯತಃ - ಯಾವುದರಿಂದ, ಅನಂತಕಃ - ನಿರಂತವಾದ, ಆಧಿಃ- ಮನೋರೋಗವುಂಟೋ, ॥೪೪॥ ಯದರ್ಥಾಃ- ಯಾವ ಮಗನ ನಿಮಿತ್ತವಾಗಿ, ಗೃಹಾಃ - ಮನೆಯು, ಕ್ಲೇಶದಾಃ - ದುಃಖಕಾರಿಯಾಗುವುದೋ, ಅಂತಹ, ಪ್ರಜಾಪದೇಶಂ - ಮಗನೆಂಬ ನೆವವುಳ್ಳ, ಆತ್ಮನಃ - ತನಗೆ, ಮೋಹಬಂಧನಂ - ಅಜ್ಞಾನದಿಂದ ಸೆರೆಯೆನಿಸಿರುವ, ತಂ - ಅವನನ್ನು, ಪಂಡಿತಃ - ತಿಳಿವಳಿಕೆಯುಳ್ಳವನು, ಕಃ - ಯಾವನು, ಬಹುಮನ್ಯೇತ - ಗೌರವಿಸುವನು ? ॥೪೫॥ ಯತ್ - ಯಾವನಿಂದ, ಗೃಹಃ - ಮನೆಯು, ಕ್ಲೇಶನಿವಹಃ - ದುಃಖಸಮೂಹವುಳ್ಳದಾಗಿರುವುದೋ, ಮರ್ತ್ಯಃ - ಮನುಷ್ಯನು, ಗೃಹಾತ್ - ಮನೆಯಿಂದ, ನಿರ್ವಿದ್ಯೇತ-ವಿರ

---

ದಾರಿಗೆ ತರುವುದಕ್ಕಾಗದೇ ಹೋಗಲು, ಮನಸ್ಸು ಮುರಿದು ಬಹಳ ಚಿಂತಾಕ್ರಾಂತನಾದನು ॥೪೨॥ ಅಕಟಾ ! ಲೋಕದಲ್ಲಿ ಮಕ್ಕಳಿಲ್ಲದವರಾರೋ, ಮಕ್ಕಳಿರುವವರಲ್ಲಿಯೂ ಹಗಲಿರುಳೆಲ್ಲವೂ ದುಷ್ಪುತ್ರನಿಂದುಂಟಾಗುವ ಸಂಕಟವನ್ನು ಅನುಭವಿಸದವರಾರೋ, ಅವರು ಜನ್ಮಾಂತರದಲ್ಲಿ ಚೆನ್ನಾಗಿ ಭಗವಂತನನ್ನು ಪೂಜಿಸಿದವರೆಂದು ತಿಳಿಯುವೆನು ॥೪೩॥ ಜಗತ್ತಿನಲ್ಲಿ ಪಾಪಿಷ್ಠವಾದ ಕೆಟ್ಟ ಹೆಸರನ್ನು ಬೆಳೆಯಿಸುತ್ತಾ, ಅಧಿಕವಾದ ಪಾಪವನ್ನುಗಳಿಸುತ್ತಾ, ಸರ್ವರೊಡನೆಯೂ ದ್ವೇಷವನ್ನು ಸಂಪಾದಿಸುತ್ತಾ, ಅನವರತವೂ ಮನೋರೋಗವನ್ನು ಹೆಚ್ಚಿಸುತ್ತಾ, ಮನೆಯನ್ನು ದುಃಖಮಯವಾದ ನರಕದಂತೆ ಮಾಡುತ್ತಾ, ಪುತ್ರನೆಂಬ ಹೆಸರಿನಿಂದ ತನ್ನ ಸದ್ಗತಿಗೆ ಬಂಧಕನಾಗಿರುವವನನ್ನು ಪಂಡಿತನಾದವನಾವನು ತಾನೇ ಸಮ್ಮತಿಸುವನು ? ॥೪೪-೪೫॥ ಎಂದು ಚಿಂತಿಸುತ್ತಾ, ಆಹಾ! ಸತ್ಪುತ್ರನುಂಟಾದಲ್ಲಿ ಯಾವ ಮನೆಯು ಸ್ವರ್ಗದಂತೆ ಸುಖಮಯವಾಗಿ ತೋರುತ್ತಾ ಗೃಹವಾಸದಲ್ಲಿಯೇ ಆಸಕ್ತಿಯನ್ನು ಹೆಚ್ಚಿಸುತ್ತಾ ಸಂಸಾರ ದುಃಖಗಳಿಗೆ ಗುರಿಗೈಯುವುದೋ, ಅಂತಹ ಮನೆ

ಯತ್ ಕ್ಲೇಶನಿವಹಾ ಗೃಹಾಃ ||೪೬|| ಏವಂ ಸ ನಿರ್ವಿಣ್ಣಮನಾ ನೃಪೋ ಗೃಹಾತ್ ನಿಶೀಥ ಉತ್ಥಾಯ ಮಹೋದಯೋದಯಾತ್ । ಅಲಬ್ಧನಿದ್ರೋಽನುಪಲಕ್ಷಿತೋ ನೃಭಿರ್ಹಿತ್ವಾ ಗತೋ ವೇನಸುವಂ ಪ್ರಸುಪ್ತಾಂ ||೪೭|| ವಿಜ್ಞಾಯ ನಿರ್ವಿದ್ಯಗತಂ ಪತಿಂ ಪ್ರಜಾಃ ಪುರೋಹಿತಾಽಮಾತ್ಯ ಸುಹೃದ್ಗಣಾದಯಃ । ವಿಚಿಕ್ಯುರುರ್ವ್ಯಾ ಮತಿಶೋಕಕಾತುರಾ ಯಥಾ ನಿಗೂಢಂ ಪುರುಷಂ ಕುಯೋಗಿನಃ ||೪೮|| ಅಲಕ್ಷಯಂತಃ ಪದವೀಂ ಪ್ರಜಾಪತೇ

---

ಕ್ತನಾಗುವನೋ, ಅಂತಹ, ಕದಪತ್ಯಂ - ದುಷ್ಪುತ್ರನನ್ನೇ, ಶುಚಾಂ-ದುಃಖಗಳಿಗೆ, ಪದಾತ್ - ಸ್ಥಾನವೆನಿಸಿದ, ಸದಪತ್ಯಾತ್-ಸತ್ಪುತ್ರನಿಗಿಂತಲೂ, ವರಂ-ಉತ್ತಮನನ್ನಾಗಿ, ಮನ್ಯೇ-ತಿಳಿಯುತ್ತೇನೆ ||೪೬||

ಏವಂ-ಇಂತು, ನಿರ್ವಿಣ್ಣಮನಾಃ-ಖಿನ್ನಮನಸ್ಕನಾದ, ಸನೃಪಃ-ಆ ಅಂಗರಾಜನು, ನಿಶೀಥೇ-ನಟ್ಟಿರುಳಲ್ಲಿ, ಉತ್ಥಾಯ-ಎದ್ದು, ಅಲಬ್ಧನಿದ್ರಃ - ನಿದ್ರೆಯನ್ನುಳಿದು, ಮಹೋ...ತ್, ಮಹೋದಯ-ಸಕಲಸಂಪತ್ತುಗಳಿಗೂ, ಉದಯಾತ್-ನೆಲೆಯಾದ, ಗೃಹಾತ್ - ಮನೆಯಿಂದ ಹೊರಟು, ಪ್ರಸುಪ್ತಾಂ-ಮಲಗಿದ್ದ, ವೇನಸುವಂ - ವೇನನತಾಯಿಯನ್ನು, ಹಿತ್ವಾ - ತೊರೆದು, ನೃಭಿಃ- ಮನುಷ್ಯರಿಂದ, ಅನುಪಲಕ್ಷಿತಃ-ಕಾಣಲ್ಪಡದಂತೆ, ಗತಃ ಹೊರಟುಹೋದನು || ೪೭ || ಪುರೋ...ಯಃ-ಪುರೋಹಿತರು, ಮಂತ್ರಿಗಳು, ಬಂಧುಗಳು ಮೊದಲಾದ, ಪ್ರಜಾಃ-ಪ್ರಜೆಗಳು, ಪತಿಂ-ಪತಿಯನ್ನು, ನಿರ್ವಿದ್ಯ-ಜುಗುಪ್ಸೆಗೊಂಡು, ಗತಂ - ಹೋದವನನ್ನಾಗಿ, ವಿಜ್ಞಾಯ - ತಿಳಿದು, ಅತಿ...ರಾಃ-ಬಹಳ ದುಃಖದಿಂದ ಹೆದರಿ, ನಿಗೂಢ-ಹೃದಯದಲ್ಲಿರುವ, ಪುರುಷಂ-ಪರಮಾತ್ಮನನ್ನು, ಕುಯೋಗಿನೋಯಥಾ-ಯೋಗಭ್ರಷ್ಟರಂತೆ, ಉರ್ವ್ಯಾಂ-ಭೂಮಿಯಲ್ಲಿ, ವಿಚಿಕ್ಯುಃ-ಅರಸಿದರು || ೪೮ || ಹೇಪೌರವ - ಎಲೈ ವಿದುರನೆ ! ತೇ-ಅವರು, ಪ್ರಜಾ

---

ಯನ್ನು ದುಃಖಮಯವಾಗಿಸಿ, ಸಂಸಾರದಲ್ಲಿ ವಿರಕ್ತಿಯನ್ನುಂಟುಮಾಡುವುದರಿಂದ ಸತ್ಪುತ್ರನಿಗಿಂತಲೂ ದುಷ್ಪುತ್ರನಾಗುವುದೇ ಲೇಸು ||೪೬|| ಎಂದು ಬಗೆಬಗೆಯಾಗಿ ಯೋಚಿಸುತ್ತಾ, ಆ ಅಂಗರಾಜನು ದುರಂತವಾದ ಚಿಂತಾಸಮುದ್ರದಲ್ಲಿ ಮುಳುಗಿ ಬಂದಾನೊಂದು ರಾತ್ರಿಯಲ್ಲಿ ನಿದ್ದೆ ಬಾರದೆ ನಟ್ಟಿರುಳಲ್ಲಿ ಎದ್ದು ಬಳಿಯಲ್ಲಿಯೇ ಮಲಗಿ ನಿದ್ರಿಸುತ್ತಿದ್ದ ವೇನನ ತಾಯಿಯಾದ ಸುನೀಥೆಯೆಂಬ ಪತ್ನಿಯನ್ನೂ ತೊರೆದು, ಯಾರಿಗೂ ಕಾಣದಂತೆ ಸಕಲ ಸಂಪತ್ಸಮೃದ್ಧವಾದ ಅರಮನೆಯಿಂದ ಒಂಟಿಯಾಗಿ ಹೊರಟುಹೋದನು ||೪೭|| ಬೆಳಗಾಗಲು, ಎಂದಿನಂತೆಯೇ ರಾಜದರ್ಶನಕ್ಕಾಗಿ ಬಂದ ಪುರೋಹಿತರು, ಮಂತ್ರಿಗಳು, ಬಂಧುಗಳು, ಮಿತ್ರರೇಮೊದಲಾದ ಪ್ರಜೆಗಳು, ತಮ್ಮ ಒಡೆಯನಾದ ಅಂಗರಾಜನು ಜುಗುಪ್ಸಿತನಾಗಿ ಹೊರಟುಹೋಗಿರುವುದನ್ನು ಕಂಡು, ಶೋಕಾತುರರಾಗಿ, ಹೃದಯದಲ್ಲಿಯೇ ನೆಲೆಗೊಂಡಿರುವ ಪರಮಾತ್ಮನನ್ನು ಕಾಣಲಾರದೆ, ಎಲ್ಲೆಲ್ಲಿಯೋ ಹುಡುಕಲೆಳಸುವ ಅಜ್ಞಾನಿಗಳಂತೆ, ಮರೆಯಾಗಿರುವ ದೊರೆಯನ್ನು ಕಾಣದೆ, ವಿಫಲ ಪ್ರಯತ್ನರಾಗಿ ತಮ್ಮ ರಾಜಧಾನಿಗೆ ಬಂದು, ಕಂಬನಿಗರೆಯುತ್ತಾ, ಗುಂಪುಗೂಡಿರುವ ಋಷಿಗಳ ಬಳಿಗೆ ತೆರಳಿ, ಅವರೆಲ್ಲರೂ ತಮ್ಮ

ಹತೋದ್ಯಮಾಃ ಪ್ರತ್ಯುಪಸೃತ್ಯ ತೇ ಪುರೀಂ । ಋಷೀನ್ ಸಮೇತಾನಭಿ
ವಂದ್ಯ ಸಾಶ್ರವೋ ನ್ಯವೇದಯನ್ ಪೌರವ ! ಭರ್ತೃವಿಪ್ಲವಂ ॥೪೯॥

— ಇತಿ ತ್ರಯೋದಶೋಽಧ್ಯಾಯಃ —

ಓಂನಮಃ ಪರಮಾತ್ಮನೇ.

— ಅಥ ಚತುರ್ದಶೋಽಧ್ಯಾಯಃ —

ಮೈತ್ರೇಯಃ ॥ ಭೃಗ್ವಾದಯಸ್ತೇ ಮುನಯೋ ಲೋಕಾನಾಂ ಕ್ಷೇಮದ
ರ್ಶಿನಃ । ಗೋಪ್ತರ್ಯಸತಿ ವೈ ನೄಣಾಂ ಪಶ್ಯಂತಃ ಪಶುಸಾಮ್ಯತಾಂ ॥೧॥

ಪತೇಃ-ರಾಜನ, ಪದವೀಂ- ಮಾರ್ಗವನ್ನು, ಅಲಕ್ಷಯಂತಃ- ಕಾಣದೆ, ಹತೋದ್ಯಮಾಃ - ವಿಫಲಪ್ರಯತ್ನರಾಗಿ, ಪುರೀಂ- ಪಟ್ಟಣಕ್ಕೆ, ಪ್ರತ್ಯುಪಸೃತ್ಯ - ಹಿಂದಿರುಗಿ, ಸಾಶ್ರವಃ - ಕಂಬನಿಗರೆಯುತ್ತಾ, ಸಮೇತಾನ್-ಗುಂಪುಗೂಡಿದ, ಋಷೀನ್-ಋಷಿಗಳಿಗೆ, ಭರ್ತೃವಿಪ್ಲವಂ - ದೊರೆಯು ಓಡಿಹೋದುದನ್ನು, ನ್ಯವೇದಯನ್-ತಿಳುಹಿದರು ॥ ೪೯ ॥

ತ್ರಯೋದಶಾಧ್ಯಾಯಂ ಸಮಾಪ್ತಂ.

— ಚತುರ್ದಶಾಧ್ಯಾಯಂ —

ಕಂದ॥ ಅಂಗನೃಪಂ ತೆರಳಲ್ಕವ । ನಂಗಜನಹ ವೇನ ನೃಪನ ಕೋಟಲೆಗೆ ಜಗಂ ।
ಕಂಗೆಡೆ ಮುನಿಪುಂಗವ ರವ । ನಂಗವ ಭಂಗಿಸುತೆ ಮಥಿಸಿದಿರವಿಂದೊರೆಗುಂ ॥

ಮೈತ್ರೇಯನು ಹೇಳುತ್ತಾನೆ—ಲೋಕಾನಾಂ - ಜನರ, ಕ್ಷೇಮದರ್ಶಿನಃ - ಕ್ಷೇಮವನ್ನು ನೋಡುವ, ಭೃಗ್ವಾದಯಃ - ಭೃಗು ಮೊದಲಾದ, ತೇಮುನಯಃ - ಆಮುನಿಗಳು, ಗೋಪ್ತರಿ - ರಾಜನು, ಅಸತಿ - ಇಲ್ಲದಿರಲು, ನೄಣಾಂ - ಮನುಷ್ಯರ, ಪಶುಸಾಮ್ಯತಾಂ - ಪಶುಗಳ ಸಾಮ್ಯವನ್ನು, ಪಶ್ಯಂತಃ - ನೋಡುತ್ತಾ ॥೧॥ ಬ್ರಹ್ಮವಾದಿನಃ - ಜ್ಞಾನಿಗಳಾದ ಅವರು, ವೀರಮಾತರಂ-ವೀರಜನನಿಯಾದ,

ರಾಜನು, ಕಾಣದೇ ಹೊರಟುಹೋದ ವೃತ್ತಾಂತವನ್ನು ಬಿನ್ನೈಸಿದರು, ಎಂದು ಮೈತ್ರೇಯ ಮುನಿಯು ವಿದುರನಿಗೆ ಹೇಳಿದನೆಂಬಲ್ಲಿಗೆ, ಭಾಗವತ ಚಕೋರಚಂದ್ರಿಕೆಯೊಳ್

—ಹದಿಮೂರನೆಯ ಅ…ಯವು ಮುಗಿದುದು—

—ಹದಿನಾಲ್ಕ…ಯ ಅಧ್ಯಾಯ—

—ಋಷಿಗಳು ವೇನನನ್ನುಕೊಂದು ಅವನ ತೊಡೆಯನ್ನು ಮಥಿಸುವುದು—

ಅನಂತರದಲ್ಲಿ ಮೈತ್ರೇಯಮುನಿಯು ಹೇಳುತ್ತಾನೆ:-ಅಯ್ಯಾ ವಿದುರನೆ ! ಭೃಗುಮೊದಲಾದ ಮಹರ್ಷಿಗಳು ಅಂಗರಾಜನು ಓಡಿ ಹೋದ ವೃತ್ತಾಂತವನ್ನು ಕೇಳಿ, ಪ್ರಜಾಪಾಲಕನಾದ ರಾಜನಿಲ್ಲದೇ ಹೋದಲ್ಲಿ, ಜನರು ಪಶುಗಳಂತೆ ಸ್ವೇಚ್ಛಾಚಾರದಿಂದ ನಾಶವಾಗುವ

ವೀರಮಾತರಮಾಹೂಯ ಸುನೀಥಾಂ ಬ್ರಹ್ಮವಾದಿನಃ । ಪ್ರಕೃತ್ಯಸಮ್ಮತಂ ವೇನಮಭ್ಯಷಿಂಚನ್ ಪತಿಂ ಭುವಃ ॥೨॥ ಶ್ರುತ್ವಾ ನೃಪಾಸನಗತಂ ವೇನಮತ್ಯುಗ್ರಶಾಸನಂ । ನಿಲಿಲ್ಯುರ್ದಸ್ಯವಸ್ಸದ್ಯಸ್ಸರ್ಪತ್ರಸ್ತಾ ಇವಾಖವಃ ॥ ಸ ಆರೂಢನೃಪಸ್ಥಾನ ಉನ್ನದ್ಧೋಽಷ್ಟವಿಭೂತಿಭಿಃ । ಅವಮೇನೇ ಮಹಾಭಾಗಾನ್ ಸ್ತಬ್ಧಸ್ಸಂಭಾವಿತಸ್ಸ್ವತಃ ॥೪॥ ಏವಂ ಮದಾಂಧ ಉತ್ಸಿಕ್ತೋ ನಿರಂಕುಶ ಇವ ದ್ವಿಪಃ । ಪರ್ಯಟನ್ ರಥಮಾಸ್ಥಾಯ ಕಂಪಯನ್ನಿವ ರೋದಸೀ ॥೫॥ ನಯಷ್ಟವ್ಯಂ ನ ದಾತವ್ಯಂ ನಹೋತವ್ಯಂ ದ್ವಿಜಾಃ! ಕ್ವಚಿತ್ ।

ಸುನೀಥಾಂ - ಸುನೀಥೆಯನ್ನು, ಆಹೂಯ - ಕರೆದು, ಪ್ರಕೃತ್ಯಸಂಮತಂ - ಪ್ರಜೆಗಳಿಗೆ ಅನಿಷ್ಟನಾದ, ವೇನಂ - ವೇನನನ್ನು, ಭುವಃ - ಭೂಮಿಗೆ, ಪತಿಂ - ಒಡೆಯನನ್ನಾಗಿ, ಅಭ್ಯಷಿಂಚನ್ - ಅಭಿಷೇಕ ಮಾಡಿದರು ॥೨॥ ಅತ್ಯುಗ್ರಶಾಸನಂ - ಕ್ರೂರದಂಡನೆಯುಳ್ಳ, ವೇನಂ - ವೇನನನ್ನು, ನೃಪಾಸನಗತಂ - ಸಿಂಹಾಸನವನ್ನು ಪಡೆದವನನ್ನಾಗಿ, ಶ್ರುತ್ವಾ - ಕೇಳಿ. ದಸ್ಯವಃ - ಕಳ್ಳಕಾಕರು, ಸದ್ಯಃ - ತತ್‍ಕ್ಷಣದಲ್ಲಿಯೇ ಸರ್ಪತ್ರಸ್ತಾಃ - ಹಾವಿನಿಂದ ಹೆದರಿದ, ಆಖವಇವ - ಇಲಿಗಳಂತೆ, ನಿಲಿಲ್ಯುಃ- ಅಡಿಗಿಕೊಂಡರು ॥೩॥ ಆರೂಢನೃಪಸ್ಥಾನಃ - ಸಿಂಹಾಸನವನ್ನು ಪಡೆದ, ಸಃ - ಆ ವೇನನು, ಅಷ್ಟವಿಭೂತಿಭಿಃ- ಅಷ್ಟೈಶ್ವರ್ಯಗಳಿಂದ, ಉನ್ನದ್ಧಃ - ಕೊಬ್ಬಿ, ಸ್ವತಃ - ತಾನಾಗಿಯೇ, ಸ್ತಬ್ಧಃ - ಶಠನಾಗಿಯೂ ಸಂಭಾವಿತನಾಗಿಯೂ, ಆಗಿ, ಮಹಾಭಾಗಾನ್ - ದೊಡ್ಡವರನ್ನು, ಅವಮೇನೇ - ತಿರಸ್ಕರಿಸಿದನು ॥೪॥ ಏವಂ- ಇಂತು, ಮದಾಂಧಃ - ಕೊಬ್ಬಿ ಕಣ್ಣುಕಾಣದೆ, ಉತ್ಸಿಕ್ತಃ - ಮದವೇರಿ, ನಿರಂಕುಶಃ - ಅಂಕುಶವಿಲ್ಲದ, ದ್ವಿಪಇವ - ಆನೆಯಂತೆ, ರಥಂ - ತೇರಿನಲ್ಲಿ, ಆಸ್ಥಾಯ - ಕುಳಿತು, ರೋದಸೀ - ಭೂಮ್ಯಂತರಿಕ್ಷಗಳನ್ನು, ಕಂಪಯನ್ನಿವ - ಅಲ್ಲಾಡಿಸುವಂತೆ, ಪರ್ಯಟನ್ - ಸಂಚರಿಸುತ್ತಾ ಇದ್ದನು ॥೫॥

ಹೇದ್ವಿಜಾಃ - ಎಲೈ ಬ್ರಾಹ್ಮಣರಿರಾ ! ಕ್ವಚಿತ್ - ಎಲ್ಲಿಯೂ, ನಯಷ್ಟವ್ಯಂ - ಯಾಗವಮಾಡಕೂಡದು, ನದಾತವ್ಯಂ - ದಾನಮಾಡಕೂಡದು, ನಹೋತವ್ಯಂ - ಹೋಮಮಾಡಕೂಡದು, ಇತಿ - ಹೀಗೆ, ಭೇರೀ - ಘೋಷೇಣ - ಭೇರಿಶಬ್ದದಿಂದ, ಧರ್ಮಂ - ಧರ್ಮವನ್ನು, ನ್ಯವಾರಯತ್ -

ರೆಂದು ತಿಳಿದು, ವೀರಮಾತೆಯಾದ ಸುನೀಥಾದೇವಿಗಿದನ್ನು ಅರಿಕೆಮಾಡಿ, ಪ್ರಜಾಸಮ್ಮತಿಯಿಲ್ಲದಿದ್ದರೂ, ಕ್ರಮವನ್ನನುಸರಿಸಿ ವೇನನನ್ನೇ ಚಕ್ರವರ್ತಿಯನ್ನಾಗಿ ಪಟ್ಟಾಭಿಷೇಕ ಮಾಡಿದರು ॥೨॥ ಕ್ರೂರದಂಡನೆಯುಳ್ಳ ವೇನನು ಪಟ್ಟಾಭಿಷಿಕ್ತನಾದವನೆಂಬುದನ್ನು ಕೇಳಿ ಕಳ್ಳಕಾಕರೆಲ್ಲರೂ, ಹಾವಿಗೆ ಹೆದರಿದ ಇಲಿಗಳಂತೆ ಅಲ್ಲಲ್ಲಿಯೇ ಅಡಗಿಹೋದರು ॥೩॥ ಸಾಮ್ರಾಜ್ಯಪದವಿಯನ್ನು ಪಡೆದ ವೇನನು, ಅಷ್ಟದಿಕ್ಪಾಲಕರ ಕಳೆಗಳಿಂದಲೂ, ಅಣಿಮಾದಿ ಸಿದ್ಧಿಗಳಿಂದಲೂ ಗರ್ವಿತನಾಗಿ, ಯುಕ್ತಾಯುಕ್ತವಿವೇಕವಿಲ್ಲದೆ, "ನಾನೇಶೂರನು, ನಾನೇ ಧೀರನು, ನಾನೇ ಹಮ್ಮೀರನು" ಎಂದು ತನ್ನನ್ನು ತಾನೇ ಹೊಗಳಿಕೊಳ್ಳುತ್ತಾ, ಮಹಾತ್ಮರಾದವರನ್ನೂ ಕಡೆಗಣಿಸಿದನು ॥೪॥ ಇಂತು ಮದವೇರಿ ಕಣ್ಣುಕಾಣದೆ, ಅಂಕುಶವಿಲ್ಲದ ಕಾಡಾನೆಯಂತೆ ಸ್ವೇಚ್ಛೆಯಾಗಿ ನಡೆಯುತ್ತಾ, ರಥವನ್ನೇರಿ ಭೂಮ್ಯಂತರಿಕ್ಷಗಳೆರಡನ್ನು, ನಡುಗಿಸುವಂತೆ ಸಂಚರಿಸತೊಡಗಿದನು ॥೫॥ ಇಂತು ಭೂಮಂಡಲವನ್ನು ಸುತ್ತುತ್ತಾ, ಬ್ರಾಹ್ಮಣಾದಿಗಳು ಇನ್ನು ಮೇಲೆ ಯಜ್ಞಯಾಗಗಳನ್ನು ಮಾಡಕೂಡದು. ದಾನಧರ್ಮಗ

ಇತಿ ನ್ಯವಾರಯ ದ್ಧರ್ಮಂ ಭೇರೀಘೋಷೇಣ ಸರ್ವಶಃ ||೬|| ವೇನಸ್ಯಾ ಽ
ವೇಕ್ಷ್ಯ ಮುನಯೋ ದುರ್ವೃತ್ತಸ್ಯ ವಿಚೇಷ್ಟಿತಂ | ವಿಮೃಶ್ಯ ಲೋಕವ್ಯ
ಸನಂ ಕೃಪಯೋಚುಃ ಸ್ಮ ಸತ್ರಿಣಃ ||೭|| ಅಹೋ ! ಉಭಯತಃ ಪ್ರಾಪ್ತಂ
ಲೋಕಸ್ಯ ವ್ಯಸನಂ ಮಹತ್ | ದಾರುಣ್ಯುಭಯತೋ ದೀಪ್ತ ಇವ ತಸ್ಕರ
ಪಾಲಯೋಃ ||೮|| ಅರಾಜಕಭಯಾ ದೇಷ ಕೃತೋ ರಾಜಾ ಽ ತದರ್ಹಣಃ |
ತತೋಽಪ್ಯಾಸೀ ದ್ಭಯಂ ತ್ವದ್ಯ ಕಥಂ ಸ್ಯಾ ? ತ್ಸ್ವಸ್ತಿ ದೇಹಿನಾಂ ||೯||
ಅಹೇರಿವ ಪಯಃ ಪೋಷಃ ಪೋಷಕಸ್ಯಾ ಽ ಪ್ಯನರ್ಥಭೃತ್ ವೇನಃ ಪ್ರ

ತಡೆದನು ||೬|| ಸತ್ರಿಣಃ - ಯಜ್ಞಮಾಡುವ, ಮುನಯಃ - ಋಷಿಗಳು, ದುರ್ವೃತ್ತಸ್ಯ - ದುಷ್ಟನಾದ, ವೇನಸ್ಯ - ವೇನನ, ವಿಚೇಷ್ಟಿತಂ - ನಡವಳಿಯನ್ನು, ಅವೇಕ್ಷ್ಯ - ಕಂಡು, ಲೋಕಸ್ಯ - ಜನರ, ವ್ಯಸನಂಚ - ದುಃಖವನ್ನೂ, ವಿಮೃಶ್ಯ - ಆಲೋಚಿಸಿ, ಊಚುಃ - ಹೇಳಿದರು, ||೭|| ಉಭಯತಃ- ಎರಡುಕಡೆಗಳಲ್ಲಿಯೂ, ದೀಪ್ತೇ - ಉರಿಯುವ, ದಾರುಣೀವ - ಕಾಷ್ಠದಲ್ಲಿಯೋಪಾದಿಯಲ್ಲಿ, ಲೋಕಸ್ಯ - ಜನರಿಗೆ, ತಸ್ಕರಪಾಲಯೋಃ - ಕಳ್ಳರು ಮತ್ತು ರಾಜರು, ಉಭಯತಃ - ಇಬ್ಬರಿಂದಲೂ, ಮಹತ್ - ಅಧಿಕವಾದ, ವ್ಯಸನಂ - ದುಃಖವು. ಪ್ರಾಪ್ತಂ - ಬದಗಿತು, ಅಹೋ - ಅನ್ಯಾಯವು ||೮|| ಏಷಃ - ಈವೇನನು, ಅತದರ್ಹಣೋಽಪಿ - ರಾಜ್ಯಕ್ಕೆ ಅರ್ಹನಲ್ಲದಿದ್ದರೂ, ಅರಾಜಕಭಯಾತ್- ರಾಜರಿಲ್ಲ ವೆಂಬ ಭಯದಿಂದ, ರಾಜಾ - ದೊರೆಯಾಗಿ, ಕೃತಃ - ಮಾಡಲ್ಪಟ್ಟನು, ಅದ್ಯತು - ಈಗಲಾದರೋ, ತತೋಽಪಿ - ಅವನಿಂದಲೂ, ಭಯಂ - ಭಯವು, ಆಸೀತ್ - ಉಂಟಾಯಿತು, ದೇಹಿನಾಂ - ಪ್ರಾಣಿಗಳಿಗೆ, ಕಥಂ - ಹೇಗೆ ಸ್ವಸ್ತಿ - ಕ್ಷೇಮವು, ಸ್ಯಾತ್ - ಆದೀತು ? ||೯|| ಪೋಷಕಸ್ಯಾಪಿ - ಸಲಹಿದವನಿಗೂ, ಅನರ್ಥಭೃತ್ - ಕೇಡನ್ನು ಮಾಡುವ, ಅಹೇಃ - ಹಾವಿನ ಪಯಃಪೋಷಇವ - ಹಾಲಿನಪೋಷಣೆಯಂತೆ, ಸುನೀ...ವ, ಸುನೀಥೆಯ ಗರ್ಭದಿಂದ ಜನಿಸಿದ, ಪ್ರಕೃತ್ಯೈವ - ಸ್ವಭಾವದಿಂದಲೇ, ಖಲಃ- ದುಷ್ಟನಾದ, ವೇನಃ - ವೇನನು, ಪ್ರಜಾಪಾಲಃ - ರಾಜನಾಗಿ, ನಿರೂಪಿತಃ - ಇಡಲ್ಪಟ್ಟನು. ಸರ್ವೆ -

ಳನ್ನು ಆಚರಿಸಕೂಡದು ಹೋಮಗಳನ್ನು ನಡೆಯಿಸಕೂಡದು” ಎಂದು, ಎಲ್ಲೆಡೆಗಳಲ್ಲಿಯೂ ಡಂಗುರವನ್ನು ಹೊಯ್ಸಿದನು ||೬|| ಈರೀತಿಯಾಗಿ ಧರ್ಮಕಂಟಕನಾಗಿರುವ ವೇನನ ದುರಾಚಾರವನ್ನು ಕಂಡು, ಲೋಕಕ್ಕೆ ಪ್ರಾಪ್ತವಾಗಿರುವ ಅಪಾರವಾದ ಸಂಕಟವನ್ನು ಯೋಚಿಸಿ; ಸತ್ರಯಾಗವನ್ನು ಮಾಡುತ್ತಿದ್ದ ಮಹರ್ಷಿಗಳೆಲ್ಲರೂ ಯಾಗವನ್ನುಳಿದು ಬಂದು, ಕನಿಕರದಿಂದ ಚಿಂತಿಸಿದರು. ಅಯ್ಯೋ ! ಏನನ್ಯಾಯ ? ಈ ದುಷ್ಟನು ದೊರೆಯಾದುದರಿಂದ, ಎರಡುಕಡೆಗಳಲ್ಲಿ ಹೊತ್ತಿಬೇಯುವಕಾಷ್ಠದ ನಡುವೆಯಿರುವ ಹುಳುಗಳಂತೆ, ಜನರಿಗೆ ಕಳ್ಳಕಾಕರ ಭಯವೊಂದು ಕಡೆ. ರಾಜಭಯವೊಂದು ಕಡೆ, ಎರಡು ಕಡೆಗಳಲ್ಲಿಯೂ ಮಹಾವ್ಯಸನವುಂಟಾಯಿತಲ್ಲಾ ! ||೮|| ಇವನು ರಾಜ್ಯಾಧಿಕಾರಕ್ಕೆ ಅರ್ಹನಲ್ಲವೆಂದು ತಿಳಿದಿದ್ದರೂ, ಅರಾಜಕವಾದೀತೆಂಬ ಭಯದಿಂದ ಇವನಿಗೆ ಪಟ್ಟವನ್ನು ಕಟ್ಟಿದೆವು. ಅರಾಜಕಕ್ಕಿಂತಲೂ ಅಧಿಕವಾದ ಭಯವು ಈಗ ಇವನಿಂದಲೇ ಜಗತ್ತಿಗುಂಟಾಗಿರುವುದು. ಆಹಾ ! ಈಗ ಪ್ರಜೆಗಳಿಗೆಂತು ಕ್ಷೇಮವಾದೀತು ? ||೯|| ಹಾವಿಗೆರೆದಹಾಲು ವಿಷವಾಗಿ ಸಲಹಿದವನನ್ನೇ ಕೊಲ್ಲುವಂತೆ, ಹುಟ್ಟಿದ ಮೊದಲು ದುರುಳನಾದ ಇವನಿಗೆ ಪ್ರಜಾನಾಶಕ್ಕಾಗಿಯೇ ಪ

ಕೃತ್ಯೈವ ಖಲಃ ಸುನೀಥಾಗರ್ಭಸಂಭವಃ ||೧೦|| ನಿರೂಪಿತಃ ಪ್ರಜಾಪಾಲಃ
ಸ ಜಿಘಾಂಸತಿ ವೈ ಪ್ರಜಾಃ | ತಥಾಪಿ ಸಾಂತ್ವಯೇಮಾಽಮುಂ ನಾಸ್ಮಾಂ
ಸ್ತತ್ಪಾತಕಂ ಸ್ಪೃಶೇತ್ || ೧೧ || ತದ್ವಿದ್ವದ್ಭಿರಸದ್ವೃತ್ತೋ ವೇನೋ
ಽಸ್ಮಾಭಿಃ ಕೃತೋ ನೃಪಃ | ಸಾಂತ್ವಿತೋ ಯದಿ ನೋ ವಾಚಂ ನಗ್ರಹೀಷ್ಯ
ತ್ಯಧರ್ಮಕೃತ್ ||೧೨|| ಲೋಕಧಿಕ್ಕಾರ ಸಂದಗ್ಧಂ ದಹಿಷ್ಯಾಮಃ ಸ್ವತೇ
ಜಸಾ | ಏವ ಮಧ್ಯವಸಾಯೈನಂ ಮುನಯೋ ಗೂಢಮನ್ಯವಃ | ಉಪವ್ರ
ಜ್ಯಾಽಬ್ರುವನ್ ವೇನಂ ಸಾಂತ್ವಯಿತ್ವಾ ಚ ಸಾಮಭಿಃ ||೧೩|| ಮುನಯಃ||
ನೃಪವರ್ಯ ! ನಿಬೋಧೈತ ದ್ಯತ್ತೇ ವಿಜ್ಞಾಪಯಾಮ ಭೋಃ | ಆಯುಶ್ಶ್ರೀ

ಅವನೇ, ಪ್ರಜಾಃ - ಪ್ರಜೆಗಳನ್ನು, ಜಿಘಾಂಸತಿ - ಕೊಲ್ಲಲೆಳಸುತ್ತಿರುವನು, ತಥಾಪಿ-ಆದರೂ, ಅಮುಂ-ಇವನನ್ನು, ಸಾಂತ್ವಯೇಮ - ಸಂತೈಸುವ, ಅಸ್ಮಾನ್ - ನಮ್ಮನ್ನು, ತತ್ಪಾತಕಂ - ಆ ಪಾಪವು, ನಸ್ಪೃಶೇತ್ - ಅಂಟದಿರಲಿ ||೧೧||

ತತ್ - ಅವನ ದುರುಳತನವನ್ನು, ವಿದ್ವದ್ಭಿಃ - ತಿಳಿದಿರುವ, ಅಸ್ಮಾಭಿಃ - ನಮ್ಮಿಂದ, ಅಸದ್ವೃತ್ತಃ - ದುರ್ವೃತ್ತನಾದ, ವೇನಃ - ವೇನನು, ನೃಪಃ - ರಾಜನಾಗಿ, ಕೃತಃ-ಮಾಡಲ್ಪಟ್ಟನು, ಸಾಂತ್ವಿತಃ - ಸಂತೈಸಲ್ಪಟ್ಟವನಾಗಿ, ಅಧರ್ಮಕೃತ್ - ದುಷ್ಟನಾದವನು, ನಃ - ನಮ್ಮ, ವಾಚಂ - ನುಡಿಯನ್ನು, ನಗ್ರಹೀಷ್ಯತಿಯದಿ - ನಡೆಯಿಸದಿದ್ದರೆ, ಲೋಕ... ಗ್ಧಂ ಲೋಕದ ತಿರಸ್ಕಾರದಿಂದ ಸುಡಲ್ಪಟ್ಟ, ಏನಂ - ಇವನನ್ನು, ಸ್ವತೇಜಸಾ - ನಮ್ಮ ತಪೋಬಲದಿಂದ, ದಹಿಷ್ಯಾಮಃ - ಸುಡೋಣ, ಏವಂ-ಇಂತು, ಅಧ್ಯವಸಾಯ - ನಿಶ್ಚಯಿಸಿ, ಗೂಢಮನ್ಯವಃ-ಕೋಪವನ್ನು ಅಡಗಿಸಿಕೊಂಡ, ಮುನಯಃ-ಋಷಿಗಳು, ಉಪವ್ರಜ್ಯ - ಹತ್ತಿರಕ್ಕೆ ಬಂದು, ವೇನಂ-ವೇನನನ್ನು, ಸಾಮಭಿಃ-ಸವಿನುಡಿಗಳಿಂದ, ಸಾಂತ್ವಯಿತ್ವಾ-ಸಂತೈಸಿ, ಅಬ್ರುವನ್ - ಹೇಳಿದರು ||೧೨-೧೩|| ಭೋನೃಪವರ್ಯ-ಎಲೈ ರಾಜೇಂದ್ರನೆ ! ಹೇತಾತ-ಎಲೈತಂದೆಯೆ ! ತವ-ನಿನಗೆ, ಆಯು...ನಂ-ಆಯುಷ್ಯ, ಐಶ್ವರ್ಯ, ಬಲ, ಕೀರ್ತಿ ಇವುಗಳನ್ನು, ವರ್ಧನಂ-ಬೆಳೆಯಿಸುವ, ಯತ್ -ಯಾವುದನ್ನು, ತೇ-ನಿನಗೆ, ವಿಜ್ಞಾಪಯಾಮ - ಬಿನ್ನವಿಸುವೆವೋ, ತತ್-ಅದ

ಟ್ಟವನ್ನಿತ್ತಂತಾಯಿತು. ರಾಜನಾದ ಇವನೇ ಪ್ರಜೆಗಳನ್ನು ನಾಶಗೊಳಸಬೇಕೆಂದಿರುವನಲ್ಲಾ ! ಇದೇನನ್ಯಾಯ ? ಅದರೂ ಇವನಿಗೆ ಧರ್ಮಮಾರ್ಗವನ್ನು ತಿಳಿಹಿಸಿನೋಡೋಣ || ಚಿಕ್ಕಂದಿನಿಂದಲೂ ಇವನ ದುರಳತನವನ್ನು ಬಲ್ಲವರಾದರೂ ನಾವು ಇವನನ್ನೇ ದೊರೆಯನ್ನಾಗಮಾಡಿದುದರಿಂದ, ಇವನು ಪ್ರಜೆಗಳನ್ನು ಗೋಳಾಡಿಸುವುದಕ್ಕೆ ಅವಕಾಶವಾಯಿತು. ಆದಕಾರಣ ನಾವು ಇವನನ್ನು ಸವಿನುಡಿಗಳಿಂದ ಸಂತೈಸಿದಲ್ಲಿ ಭೂತದ್ರೋಹದಿಂದುಂಟಾಗುವದೋಷವು ನಮ್ಮನ್ನಂಟಲಾರದು. ಇವನು ನಮ್ಮ ನುಡಿಯನ್ನು ಕೇಳದೆ ಅನ್ಯಾಯವನ್ನೇ ಮಾಡಿದಲ್ಲಿ, ಲೋಕಧಿಕ್ಕಾರದಿಂದ ಸುಡಲ್ಪಟ್ಟ ಇವನನ್ನು ನಮ್ಮ ತಪೋಬಲದಿಂದ ಸುಟ್ಟುಬಿಡೋಣ" ಎಂದು ನಿಶ್ಚಯಿಸಿ ಆ ಮಹರ್ಷಿಗಳು ಉಕ್ಕಿಬರುವ ಕೋಪವನ್ನು ಮನಸ್ಸಿನಲ್ಲಿಯೇ ಅಡಗಿಸಿಕೊಂಡು ವೇನನ ಬಳಿಗೆ ಬಂದು ಮಧುರೋಕ್ತಿಗಳಿಂದ ಸಂತೋಷಗೊಳಿಸಿ ಹೇಳತೊಡಗಿದರು ||೧೨-೧೩|| ಅಯ್ಯಾ ರಾಜೇಂದ್ರನೆ ! ನಾವೆಲ್ಲರೂ ನಿನಗೊಂದು ಬಿನ್ನಪವನ್ನು ಅರುಹಬೇಕೆಂದು ಬಂದಿರುವೆವು. ಅದನ್ನು ಲಾಲಿಸು, ಇದರಿಂದ ನಿನಗೆ ಆಯು

ಬಲಕೀರ್ತಿಧನಾನಿ ತವ ತಾತ! ವಿವರ್ಧನಂ ॥೧೪॥ ಧರ್ಮ ಆಚರಿತಃ ಪುಂಸಾಂ ವಾಙ್ಮನಃ ಕಾಯವೃತ್ತಿಭಿಃ । ಲೋಕಾನ್ ವಿಶೋಕಾನ್ ವಿತರತ್ಯಥಾನಂತ್ಯ ಮಸಂಗಿನಾಂ ॥೧೫॥ ಸತೇ ಮಾವಿನಶೇದ್ವೀರ! ಪ್ರಜಾನಾಂ ಕ್ಷೇಮಲಕ್ಷಣಃ । ಯಸ್ಮಿನ್ ವಿನಷ್ಟೇ ನೃಪತಿ ರೈಶ್ವರ್ಯಾದವರೋಹತಿ ॥ ೧೬ ॥ ರಾಜನ್ನಸಾಧ್ವಮಾತ್ಯೇಭ್ಯಶ್ಚೋರಾದಿಭ್ಯಃ ಪ್ರಜಾ ನೃಪಃ । ರಕ್ಷನ್ ಯಥಾಬಲಂ ಗೃಹ್ಣನ್ನಿಹ ಪ್ರೇತ್ಯಚ ಮೋದತೇ ॥ ೧೭ ॥ ಯಸ್ಯ ರಾಷ್ಟ್ರೇ ಪುರೇಚೈವ ಭಗವಾನ್ ಯಜ್ಞಪೂರುಷಃ । ಇಜ್ಯತೇ ಸ್ವೇನ ಧರ್ಮೇಣ ಜನೈ

---

ನ್ನು, ನಿಬೋಧ - ಲಾಲಿಸು, ॥೧೪॥ ವಾಙ್ಮ.. ಭಿಃ - ವಾಕ್ಕು, ಮನಸ್ಸು, ಶರೀರ ಇವುಗಳ ವ್ಯಾಪಾರಗಳಿಂದ, ಆಚರಿತಃ - ನಡೆಯಿಸಲ್ಪಟ್ಟ, ಪುಂಸಾಂ - ಪುರುಷರ, ಧರ್ಮಃ - ಧರ್ಮವು, ಲೋಕಾನ್ - ಲೋಕಗಳನ್ನು, ವಿಶೋಕಾನ್ - ದುಃಖರಹಿತಗಳನ್ನಾಗಿ, ವಿತರತಿ - ಮಾಡುತ್ತಾನೆ, ಅಥ - ಅಲ್ಲದೆ, ಅಸಂಗಿನಾಂ - ವಿರಕ್ತರಿಗೆ, ಆನಂತ್ಯಂ - ಮೋಕ್ಷವನ್ನೂ, ವಿತರತಿ - ಕೊಡುವುದು ॥೧೫॥ ಹೇ ವೀರ - ಎಲೈ ಶೂರನೆ ! ಯಸ್ಮಿನ್ - ಯಾವುದು, ವಿನಷ್ಟೇ - ನಷ್ಟವಾದರೆ, ನೃಪತಿಃ-ರಾಜನು, ಐಶ್ವರ್ಯಾತ್ - ಸಂಪತ್ತಿನಿಂದ, ಅವರೋಹತಿ - ಉರುಳುವನೋ, ಪ್ರಜಾನಾಂ - ಪ್ರಜೆಗಳಿಗೆ, ಕ್ಷೇಮಲಕ್ಷಣಃ ಕ್ಷೇಮವನ್ನುಂಟುಮಾಡುವ, ಸಃ - ಆ ಧರ್ಮವು, ತೇ - ನಿನಗೆ ಮಾವಿನಶ್ಯೇತ್ - ನಾಶವಾಗಬೇಡ ॥೧೬॥ ಹೇ ರಾಜನ್ - ಎಲೈ ರಾಜನೆ ! ನೃಪಃ - ದೊರೆಯಾದವನು, ಅಸಾ...ಭ್ಯಃ - ದುಷ್ಟರಾದ ಅಧಿಕಾರಿಗಳಿಂದಲೂ, ಚೋರಾದಿಭ್ಯಃ - ಕಳ್ಳರು ಮೊದಲಾದವರಿಂದಲೂ, ಪ್ರಜಾಃ-ಪ್ರಜೆಗಳನ್ನು, ರಕ್ಷನ್ - ಸಲಹುತ್ತಾ, ಯಥಾ - ಶಾಸ್ತ್ರೋಕ್ತವಾಗಿ, ಬಲಿಂ - ಕಾಣಿಕೆಯನ್ನು, ಗೃಹ್ಣನ್ - ಪಡೆದು, ಇಹ - ಇಲ್ಲಿಯೂ, ಪ್ರೇತ್ಯಚ - ಪರದಲ್ಲಿಯೂ, ಮೋದತೇ - ಸುಖಿಸುತ್ತಾನೆ ॥೧೭॥ ಯಸ್ಯ - ಯಾವನ, ರಾಷ್ಟ್ರೇ-ದೇಶದಲ್ಲಿಯೂ, ಪುರ್ಯೇಚೈವ - ಪಟ್ಟಣದಲ್ಲಿಯೂ, ಭಗವಾನ್ - ಭಗವಂತನಾ ್ರ, ಯಜ್ಞಪೂರುಷಃ - ಯಜ್ಞಪುರುಷನು, ವರ್ಣಾ...ತ್ಯೈಃ - ವರ್ಣಾಶ್ರಮಗಳಿಂದ ಕೂಡಿದ, ಜನೈಃ - ಜನರಿಂದ, ಸ್ವೇನಧರ್ಮೇಣ -

---

ಷ್ಯವೂ, ಐಶ್ವರ್ಯವೂ, ಬಲವೂ, ಕೀರ್ತಿಯೂ ಸಹ ಬೆಳೆಯುವುವು ॥೧೪॥ ಮನೋವಾಕ್ಕಾಯಗಳೆಂಬ ತ್ರಿಕರಣಗಳಿಂದಲೂ ಶ್ರದ್ಧಾ ಪುರಸ್ಸರವಾಗಿ ನಡೆಯಿಸಲ್ಪಡುವ ಭಗವದಾರಾಧನರೂಪವಾದ ಧರ್ಮವು ಸಕಾಮರಿಗೆ ಐಹಿಕ ಸುಖಗಳನ್ನೂ ನಿಷ್ಕಾಮರಿಗೆ ನಿತ್ಯವಾದ ಮೋಕ್ಷಪದವನ್ನೂ ಕೊಡುವುದು ॥೧೫॥ ಅಯ್ಯಾ ಶೂರನೆ! ಅಂತಹ ಧರ್ಮವನ್ನಳಿದಲ್ಲಿ ರಾಜನಾದವನು ಭಾಗ್ಯಹೀನನಾಗುವನು. ಆದುದರಿಂದ ಪ್ರಜೆಗಳಿಗೆ ಕ್ಷೇಮವನ್ನುಂಟುಮಾಡುವ ಧರ್ಮವನ್ನು ನಾಶಗೊಳಿಸಬೇಡ ॥೧೬॥ ಎಲೈ ವೇನನೆ ! ದುಷ್ಟರಾದ ಅಧಿಕಾರಿಗಳ ಕಾಟವಿಲ್ಲದಂತೆಯೂ, ಕಳ್ಳಕಾಕರ ಕೋಟಲೆಯಿಲ್ಲದಂತೆಯೂ, ಪ್ರಜೆಗಳನ್ನು ನೆನ್ಮದಿಯಾಗಿ ಸಲಹುತ್ತಾ, ಅವರಿಂದ ಶಾಸ್ತ್ರದಲ್ಲಿ ಹೇಳಿರುವಂತೆ ಕಾಣಿಕೆ (ತೆರಿಗೆ)ಗಳನ್ನು ತೆಗೆದುಕೊಳ್ಳುವ ರಾಜನು ಈ ಲೋಕದಲ್ಲಿ ಸುಖವನ್ನೂ ಪರದಲ್ಲಿ ಸದ್ಗತಿಯನ್ನೂ ಪಡೆಯುವನು ॥೧೭॥ ಯಾವದೊರೆಯ ರಾಷ್ಟ್ರದಲ್ಲಿಯೂ, ದೇಶದಲ್ಲಿಯೂ, ಪಟ್ಟಣದಲ್ಲಿಯೂ ಬ್ರಾಹ್ಮಣಾದಿ ಚಾತುರ್ವರ್ಣ್ಯದವರೂ ತಂತಮ್ಮ ಜಾತಿಕಟ್ಟಳೆಯನ್ನನುಸರಿಸಿ ಭಗವಂತನಾದ ಯಜ್ಞಪುರುಷನನ್ನು ಪೂಜಿಸುವರೋ ॥೧೮॥ ತನ್ನಾಜ್ಞಾನುರೂಪವಾದ ಶ್ರುತಿಯಲ್ಲಿ ಹೇ

ವರ್ಣಾಶ್ರಮಾಽನ್ವಿತೈಃ॥೧೮॥ ತಸ್ಯರಾಜ್ಞೋ ಮಹಾಭಾಗ ! ಭಗವಾನ್
ಭೂತಭಾವನಃ । ಪರಿತುಷ್ಯತಿ ವಿಶ್ವಾತ್ಮಾ ತಿಷ್ಠತೋ ನಿಜಶಾಸನೇ ॥೧೯॥
ತಸ್ಮಿಂ ಸ್ತುಷ್ಟೇ ಕಿ ಮಪ್ರಾಪ್ಯಂ ಜಗತಾ ಮೀಶ್ವರೇಶ್ವರೇ । ಲೋ
ಕಾಃ ಸಪಾಲಾ ಹ್ಯೇತಸ್ಮೈ ಹರಂತಿ ಬಲಿ ಮಾದೃತಾಃ॥೨೦॥ತಂ ಸರ್ವಲೋ
ಕಾಽಮರಯಜ್ಞಸಂಗ್ರಹಂ * ತ್ರಯೀಮಯಂ ದ್ರವ್ಯಮಯಂ ತಪೋಮ
ಯಂ । ಯಜ್ಞೈರ್ವಿಚಿತ್ರೈ ರ್ಯಜತೋ ಭವಾಯತೇ ರಾಜನ್ ! ಸ್ವ

---

ತತ್ವ ಧರ್ಮಾನುಸಾರವಾಗಿ, ಇಜ್ಯತೇ- ಪೂಜಿಸಲ್ಪಡುವನೋ ॥೧೮॥ ಹೇಮಹಾಭಾಗ-ಎಲೈ ಭಾಗ್ಯಶಾಲಿ
ಯೆ ! ನಿಜಶಾಸನೇ - ತನ್ನ ಆಜ್ಞೆಯಲ್ಲಿ, ತಿಷ್ಠತಃ - ಇರುವ, ತಸ್ಯರಾಜ್ಞಃ-ಆರಾಜನವಿಷಯದಲ್ಲಿ, ಭೂ
ತಭಾವನಃ - ಜಗದ್ರಕ್ಷಕನಾದ, ವಿಶ್ವಾತ್ಮಾ - ಜಗದ್ರೂಪನಾದ, ಭಗವಾನ್ ಭಗವಂತನು, ಪರಿತುಷ್ಯತಿ -
ಒಲಿಯುತ್ತಾನೆ ॥ ೧೯ ॥ ಜಗತಾಂ - ಲೋಕಕ್ಕೆ, ಈಶ್ವರೇಶ್ವರೇ - ಸರ್ವೇಶ್ವರನಾದ, ತಸ್ಮಿನ್ - ಆ
ಭಗವಂತನು, ತುಷ್ಟೇ - ಒಲಿದರೆ, ಅಪ್ರಾಪ್ಯಂ - ದುರ್ಲಭವಾದುದು, ಕಿಂ - ಏನು ? ಸಪಾಲಾಃ ಲೋ
ಕಪಾಲರಿಂದ ಕೂಡಿದ, ಲೋಕಾಃ-ಲೋಕಗಳು, ಏತಸ್ಮೈ-ಇವನಿಗೆ, ಆದೃತಾಃ-ಭಕ್ತಿಯಿಂದ,ಬಲಿಂ -
ಪೂಜೆಯನ್ನು, ಹರಂತಿ -ಮಾಡುತ್ತಾರೆ ॥೨೦॥ ಹೇರಾಜನ್ - ಎಲೈರಾಜನೆ ! ಸರ್ವ...ಹಂ, ಸರ್ವಲೋ
ಕ-ಎಲ್ಲಾಲೋಕಗಳನ್ನೂ, ಅಮರದೇವತೆಗಳನ್ನೂ, ಯಜ್ಞ-ಯಜ್ಞಗಳನ್ನು, ಸಂಗ್ರಹಂ-ನಡೆಯಿಸುವ,
ತ್ರಯೀಮಯಂ-ವೇದಸ್ವರೂಪನೂ, ದ್ರವ್ಯಮಯಂ-ದ್ರವ್ಯಸ್ವರೂಪನೂ, ತಪೋಮಯಂ- ತಪಸ್ಸ್ವರೂ
ಪನೂ ಆದ, ತಂ - ಆ ಭಗವಂತನನ್ನು, ವಿಚಿತ್ರೈಃ - ನಾನಾ ವಿಧಗಳಾದ, ಯಜ್ಞೈಃ - ಯಜ್ಞಗಳಿಂದ

---

ಳಿದಂತೆ ಯಜ್ಞಾದಿಗಳನ್ನು ನಡೆಯಿಸುವ ಆ ರಾಜನ ವಿಷಯದಲ್ಲಿ ಭೂತಪಾಲಕನಾಗಿಯೂ
ಸರ್ವಾತ್ಮಕನಾಗಿಯೂ ಇರುವ ಭಗವಂತನು ಪೂರ್ಣಾನುಗ್ರಹವನ್ನು ಮಾಡುವನು ॥೧೯॥
ಜಗತ್ಪಾಲಕರಿಗೆಲ್ಲಾ ಪಾಲಕನಾದ ಆ ಭಗವಂತನು ಸುಪ್ರೀತನಾದಲ್ಲಿ ಯಾವುದುತಾನೇ ದು
ರ್ಲಭವು ? ಇಂದ್ರಾದಿಪಾಲಕರಿಂದ ಕೂಡಿದ ಜಗತ್ತೆಲ್ಲವೂ ಭಕ್ತಿಯಿಂದ ಆತನನ್ನು ಆರಾ
ಧಿಸುತ್ತಿರುವುದು ॥೨೦॥ ಹೀಂತು ಸರ್ವಲೋಕಗಳನ್ನೊಳಗೊಂಡಿರುವ ಯಜ್ಞಗಳನ್ನೂ ನಿ
ಯಮಿಸುತ್ತಾ ವೇದಸ್ವರೂಪನೂ ದ್ರವ್ಯಮಯನೂ, ತಪೋರೂಪನೂ ಆಗಿರುವ ಆ ಭ
ಗವಂತನನ್ನು ಹಲವುವಿಧಗಳಾದ ಯಜ್ಞಗಳಿಂದ ನೀನು ಆರಾಧಿಸಿದಲ್ಲಿ ನಿನಗೆ ಇಹದಲ್ಲಿ ಸು
ಖವೂ ಪರದಲ್ಲಿ ಮೋಕ್ಷವೂ ಉಂಟಾಗುವುದು. ಆದಕಾರಣ ನಿನ್ನ ದೇಶದಲ್ಲಿರುವ ಪ್ರಜೆಗ

---

* ವಿ. ವೇದದಲ್ಲಿ ಧರ್ಮಾಧರ್ಮಾದಿಗಳ ಸ್ವರೂಪವನ್ನು ಸಾಂಗವಾಗಿ ಬೋಧಿಸುವುದರಿಂದ ವೇದ
ವು ಪರಮಪ್ರಮಾಣವೆಂತಲೂ, ಭಗವಂತನು ವೇದಸ್ವರೂಪನೆಂತಲೂ ಹೇಳಲ್ಪಟ್ಟಿರುವುದು. ವೇದವು
ಎರಡು ಭಾಗವಾಗಿರುವುದು. ಯಜ್ಞಾದಿ ಕರ್ಮಗಳ ವಿಧಾನವನ್ನು ಬೋಧಿಸುವುದಕ್ಕೆ ಪೂರ್ವಕಾಂಡ
ಅಥವಾ ಕರ್ಮಕಾಂಡವೆಂದೂ, ಆತ್ಮತತ್ವವನ್ನು ಸಾಂಗವಾಗಿ ನಿರೂಪಿಸುವ ಎರಡನೆಯ ಭಾಗಕ್ಕೆ ಉತ್ತರ
ಕಾಂಡ ಅಥವಾ ಜ್ಞಾನಕಾಂಡವೆಂದೂ ಹೆಸರು. ಚರುಪುರೋಡಾಶಾದಿ ದ್ರವ್ಯರೂಪನೆಂಬುದರಿಂದ ಕರ್ಮಕಾಂ
ಡಸ್ವರೂಪನೆಂತಲೂ ತಪೋರೂಪನೆಂಬುದರಿಂದ ಜ್ಞಾನಕಾಂಡ ಸ್ವರೂಪನೆಂತಲೂ ಹೇಳಿದಂತಾಯಿತು.
ಶ್ರು॥ ಸರ್ವೇವೇದಾ ಯತ್ಪದ ಮಾಮನಂತಿ ತಪಾಂಸಿ ಸರ್ವಾಣಿಚ ಯದ್ವದಂತಿ । ವೇದೈಶ್ಚ ಸರ್ವೈ ರಹ
ಮೇವ ವೇದ್ಯಃ ॥

ದೇಶಾ ನನುರೋದ್ಧು ಮರ್ಹಸಿ ॥೨೦॥ ಯಜ್ಞೇನ ಯುಷ್ಮದ್ವಿಷಯೇ ದ್ವಿಜಾತಿಭಿ ರ್ವಿತಾಯಮಾನೇನ ಸುರಾಃ ಕಲಾಃ ಹರೇಃ । ಸ್ವಿಷ್ಟಾ ಸ್ಸುತುಷ್ಟಾಃ ಪ್ರದಿಶಂತಿ ವಾಂಛಿತಾ ತದ್ಧೇಳನಂ ನಾರ್ಹಸಿ ವೀರ ! ಚೇಷ್ಟಿತುಂ ॥೨೧॥ ವೇನಃ ॥ ಬಾಲಿಶಾ ಬತ ! ಯೂಯಂ ವೈ ಅಧರ್ಮೇ ಧರ್ಮಮಾನಿನಃ । ಯೇ ವೃತ್ತಿದಂ ಪತಿಂ ಹಿತ್ವಾ ಜಾರಂ ಪತಿ ಮುಪಾಸತೇ ॥೨೩॥ ಅವಜಾನಂತ್ಯಮೀ ಮೂಢಾ ನೃಪರೂಪಿಣ ಮೀಶ್ವರಂ । ನಾನುವಿಂದಂತಿ ತೇ ಭದ್ರ ಮಿಹಲೋಕೇ ಪರತ್ರ ಚ ॥೨೪॥ ಕೋ ಯಜ್ಞಪುರುಷೋ ನಾಮ ? ಯತ್ರ

---

ಯಾತಃ - ಪೂಜಿಸುವ, ತೇ - ನಿನಗೆ, ಭವಾಯ - ಅಭಿವೃದ್ಧಿಗಾಗಿ ಅಥವಾ ಅಭವಾಯ-ಮೋಕ್ಷಕ್ಕಾಗಿ ಆಗುವುದು, ಸ್ವದೇಶಾನ್ ನಿನ್ನ ದೇಶದವರನ್ನು, ಅನುರೋದ್ಧುಂ - ಅನುಸರಿಸುವುದಕ್ಕೆ, ಅರ್ಹಸಿ-ಯೋಗ್ಯನಾಗುತ್ತಿ ॥೨೦॥ ಹೇ ವೀರ - ಎಲೈ ಶೂರನೆ ! ಯುಷ್ಮದ್ವಿಷಯೇ - ನಿನ್ನ ದೇಶದಲ್ಲಿ, ದ್ವಿಜಾತಿಭಿಃ - ಬ್ರಾಹ್ಮಣರಿಂದ, ವಿತಾಯಮಾನೇನ - ಬೆಳೆಯಿಸಲ್ಪಡುವ, ಯಜ್ಞೇನ-ಯಜ್ಞದಿಂದ, ಹರೇಃ - ಹರಿಯ, ಕಲಾಃ - ಅಂಶರೂಪರಾದ, ಸುರಾಃ - ದೇವತೆಗಳು, ಸ್ವಿಷ್ಟಾಃ - ಚೆನ್ನಾಗಿ ಪೂಜಿಸಲ್ಪಟ್ಟು, ಸಂತುಷ್ಟಾಃ - ಸಂತುಷ್ಟರಾಗಿ, ವಾಂಛಿತಂ - ನಿನ್ನ ಇಷ್ಟಾರ್ಥವನ್ನು, ಪ್ರದಿಶಂತಿ-ಕೊಡುತ್ತಾರೆ, ತತ್ - ಆದುದರಿಂದ, ದೇವ ಹೇಳನಂ - ದೇವತಾ ತಿರಸ್ಕಾರವನ್ನು, ಚೇಷ್ಟಿತುಂ - ಮಾಡುವುದಕ್ಕೆ, ನಾರ್ಹಸಿ-ಯೋಗ್ಯನಾಗುವುದಿಲ್ಲ ॥೨೧॥ ವೇನನು ಹೇಳುತ್ತಾನೆ, ಯೇ - ಯಾರು, ವೃತ್ತಿದಂ - ಜೀವನವನ್ನು ಕೊಡುವ, ಪತಿಂ-ಪತಿಯನ್ನು, ಗಂಡನನ್ನು, ಹಿತ್ವಾ-ತೊರೆದು, ಜಾರ ಂಪತಿಂ-ಮಿಂಡನನ್ನು, ಉಪಾಸತೇ-ಸೇವಿಸುವರೋ, ಅಂತು, ಅಧರ್ಮೇ - ಅಧರ್ಮದಲ್ಲಿ ಧರ್ಮಮಾನಿನಃ - ಧರ್ಮವನ್ನು ತಿಳಿದಿರುವ, ಯೂಯಂ-ನೀವು, ಬಾಲಿಶಾಬತ - ಮೂರ್ಖರೇ ದಿಟ ॥೨೩॥ ಅಮೀಮೂಢಾಃ-ಈ ಮೂಢರು, ನೃಪರೂಪಿಣಂ - ರಾಜರೂಪನಾದ, ಈಶ್ವರಂ - ಭಗವಂತನನ್ನು, ಅವಜಾನಂತಿ - ತಿರಸ್ಕರಿಸುತ್ತಾರೆ ತೇ-ಅವರು, ಇಹಲೋಕೇ - ಈ ಲೋಕದಲ್ಲಿಯೂ, ಪರತ್ರಚ ಪರಲೋಕದಲ್ಲಿಯೂ, ಭದ್ರಂ-ಶುಭವನ್ನು, ನಾನುವಿಂದಂತಿ-ಪಡೆಯುವುದಿಲ್ಲ ॥೨೪॥ ಭರ್ತೃ...ಣಾಂ-ಗಂಡನಪ್ರೀತಿಗೆ ದೂರರಾದ, ಕುಯೋಷಿತಾಂ-

---

ಳಲ್ಲಿ ಧರ್ಮ ವಿರೋಧವನ್ನು ಮಾಡದೆ ಅವರಂತೆ ನೀನೂ ಆಚರಿಸು ॥೨೦॥ ನಿನ್ನ ದೇಶದಲ್ಲಿ ಬ್ರಾಹ್ಮಣಾದಿಗಳು ಯಜ್ಞಗಳನ್ನು ನಡಯಿಸಿದಲ್ಲಿ ಭಗವಂತನಿಗೆ ಅಂಶಭೂತರಾದ ದೇವತೆಗಳು ಆ ಯಜ್ಞಗಳಿಂದ ಸಂತುಷ್ಟರಾಗಿ ನಿನ್ನ ಮನೋಭೀಷ್ಟವನ್ನು ಸಲ್ಲಿಸುವರು. ಇನ್ನುಮೇಲಾದರೂ ನೀನು ದೇವತೆಗಳನ್ನು ನಿಂದಿಸಬೇಡ, ಎಂದು ನುಡಿಯಲು ॥೨೧॥ ವೇನನು ಹೇಳುತ್ತಾನೆ—ಅಯ್ಯಾ ಬ್ರಾಹ್ಮಣರಿರಾ ! ಸರ್ವಸೋಪಸ್ಕರಗಳನ್ನೂ ಇತ್ತು ಸಂತೋಷದಿಂದ ಜೀವನವನ್ನು ನಡೆಯಿಸುವ ಗಂಡನನ್ನುಳಿದು ಮಿಂಡನನ್ನು ಸೇವಿಸುವ ಬಜಾರಿಯರಂತೆ ಅಧರ್ಮವನ್ನೇ ಧರ್ಮವೆಂದು ತಿಳಿದಿರುವ ನೀವು ಮೂರ್ಖರೇದಿಟ ॥೨೩॥ ಯಾವ ಮೂರ್ಖರಾದರೆ ರಾಜರೂಪದಿಂದಿರುವ ಭಗವಂತನನ್ನು ಕಡೆಗಣಿಸುವರೋ, ಅವರು ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ಸುಖವನ್ನು ಪಡೆಯಲಾರರು ॥೨೪॥ ಅಯ್ಯಾ ಮುನಿಗಳಿರಾ ! ಕೈ ಹಿಡಿದ ಪತಿಯಲ್ಲಿ ಅನುರಾಗವಿಲ್ಲದೆ ಉಪಪತಿಯಲ್ಲಿ ಪ್ರೀತಿಯನ್ನು ತೋರುವ ದುಷ್ಟಾಂಗನೆಯರಂತೆ ಜೀವನ ಪ್ರದನಾದ ನನ್ನಲ್ಲಿ ಭಕ್ತಿಯಿಲ್ಲದೆ ಮತ್ತಾವನ

ವೋ ಭಕ್ತಿರೀದೃಶೀ । ಭರ್ತರ್ಯಸ್ನೇಹ ವಿದುರಾಣಾಂ ಯಥಾ ಜಾರೇ ಕುಯೋಷಿತಾಂ ॥೨೫॥ ವಿಷ್ಣುರ್ವಿರಿಂಚೋ ಗಿರಿಶ ಇಂದ್ರೋ ವಾಯುರ್ಯಮೋ ರವಿಃ। ಪರ್ಜನ್ಯೋ ಧನದ ಸ್ಸೋಮಃ ಕ್ಷಿತಿ ರಗ್ನಿ ರಪಾಂಪತಿಃ॥ ಏತೇ ಚಾನ್ಯೇಚ ವಿಬುಧಾಃ ಪ್ರಭವೋ ವರಶಾಪಯೋಃ । ದೇಹೇ ಭವಂತಿ ನೃಪತೇ ಸ್ಸರ್ವದೇವಮಯೋ ನೃಪಃ ॥೨೬॥ ತಸ್ಮಾನ್ಮಾಂ ಕರ್ಮಭಿರ್ವಿಪ್ರಾಃ ! ಯಜಧ್ವಂ ಗತಮತ್ಸರಾಃ । ಬಲಿಂಚ ಮಹ್ಯಂ ಹರತ ಮತ್ತೋಽನ್ಯಃ ಕೋಽಗ್ರಭುಕ್ ಪುಮಾನ್? ॥೨೭॥ ಮೈತ್ರೇಯಃ। ಇತ್ಥಂ ವಿಪರ್ಯಯಮತಿಃ ಪಾಪೀಯಾನುತ್ಪಥಂ ಗತಃ। ಅನುನೀಯಮಾನ ಸ್ತದ್ಯಾಚ್ಞಾಂ

---

ದುಷ್ಟಸ್ತ್ರೀಯರಿಗೆ, ಜಾರೇಇವ - ಉಪಪತಿಯಲ್ಲಿರೋಪ ದಿಯಲ್ಲಿ, ವಃ-ನಿಮಗೆ, ಯತ್ರ-ಯಾವನಲ್ಲಿ, ಈದೃಶೀ - ಇಂತಹ, ಭಕ್ತಿಃ - ಭಕ್ತಿಯುಂಟೋ, ಆ, ಯಜ್ಞಪುರುಷೋನಾಮ - ಯಜ್ಞಪುರುಷನೆಂಬುವನು, ಕೋನಾಮ - ಯಾವನು ॥ ೨೫ ॥ ವಿಷ್ಣುವು, ಬ್ರಹ್ಮನು, ಶಿವನು, ಇಂದ್ರನು, ವಾಯುವು, ಯಮನು, ಸೂರ್ಯನು, ಪರ್ಜನ್ಯನು, ಕುಬೇರನು, ಚಂದ್ರನು, ಭೂಮಿ, ಅಗ್ನಿ, ವರುಣ, ಏತೇಚ - ಇವರು ಅನ್ಯೇ - ಇತರರಾದ, ವರಶಾಪಯೋಃ - ಶಿಕ್ಷೆರಕ್ಷೆಗಳಿಗೆ, ಪ್ರಭವಃ- ಸಮರ್ಥರಾದ, ಅನ್ಯೇಚವಿಬುಧಾಃ- ಇತರ ದೇವತೆಗಳೂ, ನೃಪತೇಃ-ರಾಜನ, ದೇಹೇ-ಶರೀರದಲ್ಲಿ, ಭವಂತಿ-ಇರುತ್ತಾರೆ, ನೃಪಃ-ರಾಜನು, ಸರ್ವದೇವಮಯಃ-ಸಕಲ ದೇವತಾಸ್ವರೂಪನು ॥೨೬॥ ಹೇವಿಪ್ರಾಃ-ಅಯ್ಯಾ ಬ್ರಾಹ್ಮಣರಿರಾ ! ತಸ್ಮಾತ್-ಆದುದರಿಂದ, ಗತಮತ್ಸರಾಃ-ಮಾತ್ಸರ್ಯವಿಲ್ಲದೆ, ಮಾಂ ನನ್ನನ್ನು, ಯಜಧ್ವಂ-ಪೂಜಿಸಿರಿ, ಮಹ್ಯಂ- ನನಗೆ, ಬಲಿಂ-ಕಾಣಿಕೆಯನ್ನು, ಹರತ -ಕೊಡಿರಿ, ಮತ್ತಃ-ನನಗಿಂತಲೂ ಅನ್ಯಃ - ಬೇರೆಯಾದ, ಅಗ್ರಭುಕ್- ಅಗ್ರಮರ್ಯಾದೆಗರ್ಹನು, ಕಃ - ಯಾವ ಪುರುಷನು ॥ ೨೭ ॥

ಮೈತ್ರೇಯನು ಹೇಳುತ್ತಾನೆ:—ಇತ್ಥಂ-ಇಂತು, ವಿಪರ್ಯಯಮತಿಃ ಮತಿಗೆಟ್ಟ, ಪಾಪೀಯಾನ್-ಪಾಪಿಷ್ಠನಾದ, ಉತ್ಪಥಂ-ದುರ್ಮಾರ್ಗವನ್ನು, ಗತಃ-ಹೊಂದಿರುವ ವೇನನು, ಭ್ರಷ್ಟಮಂಗಳಃ-ನಿರ್ಭಾಗ್ಯನಾದುದರಿಂದ, ಅನುನೀಯಮಾನೋಪಿ - ಸಂತೈಸಲ್ಪಟ್ಟರೂ, ತದ್ಯಾಚ್ಞಾಂ - ಅವರ ಪ್ರಾರ್ಥನೆಯನ್ನು,

---

ನ್ನೇ ನೀವಿಷ್ಟು ಕೊಂಡಾಡುತ್ತಿರುವರಲ್ಲಾ! ಆ ಯಜ್ಞಪುರುಷನೆಂಬುವನು ಯಾವನು? ॥ ವಿಷ್ಣು, ಬ್ರಹ್ಮ, ಮಹೇಶ್ವರ, ಇಂದ್ರ, ವಾಯು, ಯಮ, ಸೂರ್ಯ, ಪರ್ಜನ್ಯ, ಕುಬೇರ, ಚಂದ್ರ, ಭೂಮಿ ಅಗ್ನಿ, ವರುಣ, ಇವರು, ಇನ್ನೂ ನಿಗ್ರಹಾನುಗ್ರಹ ಸಮರ್ಥರಾದ ಇತರ ದೇವತೆಗಳೂ ಸಹ ರಾಜನ ಶರೀರದಲ್ಲಿಯೇ ನೆಲಸಿರುವುದರಿಂದ ರಾಜನು ಸಕಲ ದೇವತಾಸ್ವರೂಪನೆನಿಸುವನು ॥೨೬॥ ಎಲೈ ವಿಪ್ರರಿರಾ ! ಇಂತಿರುವುದರಿಂದ ಇನ್ನುಮೇಲೆ ಈ ಅಸೂಯೆಯನ್ನು ಬಿಡಿರಿ. ನೀವು ಮಾಡುವ ಸಕಲ ಕರ್ಮಗಳಿಂದ ಪ್ರತ್ಯಕ್ಷದೇವತೆಯಾದ ನನ್ನನ್ನು ಪೂಜಿಸಿರಿ. ನನಗೆ ಸರಿಯಾಗಿ ಕಾಣಿಕೆಗಳನ್ನು ಒಪ್ಪಿಸಿರಿ. ಅಗ್ರಪೂಜೆಯನ್ನು ಪಡೆಯತಕ್ಕ ಪುರುಷನು ನನಗಿಂತಲೂ ಮತ್ತಾವನೂ ಇಲ್ಲ ಎಂದು ನುಡಿದನು ॥೨೭॥ ಅಯ್ಯಾ ವಿದುರನೆ ! ಇಂತು ಮತಿಗೆಟ್ಟು ಪಾಪಕ್ಕೆ ಹೇಸದೆ ದುರ್ಮಾರ್ಗನಾದ ವೇನನು, ನಿರ್ಭಾಗ್ಯನಾಗುವ ಕೇಡುಗಾಲ ಪ್ರಾಪ್ತವಾಗಿರುವುದರಿಂದ ಎಷ್ಟುಬಗೆಯಾಗಿ ಬೋಧಿಸಿದರೂ ಆ ಮಹರ್ಷಿಗಳ ಬಿನ್ನಪವನ್ನು ನಡೆಯಿಸಲಿಲ್ಲ ॥೨೮॥ ಆ ಮಹರ್ಷಿಗಳು, ದುರಹಂಕಾರದಿಂದ

ನಚಕ್ರೇ ಭ್ರಷ್ಟಮಂಗಳಃ ॥೨೯॥ ಇತಿ ತೇಽಸತ್ಕೃತಾಸ್ತೇನ ದ್ವಿಜಾಃ ಪಂ
ಡಿತಮಾನಿನಾ । ಭಗ್ನಾಯಾಂ ಭವ್ಯ ! ಯಾಚ್ಞಾಯಾಂ ತಸ್ಮೈ ವಿದುರ ! ಚು
ಕ್ರುಧುಃ ॥೩೦॥ ಹನ್ಯತಾಂ ಹನ್ಯತಾಮೇಷ ಪಾಪಃ ಪ್ರಕೃತಿದಾರುಣಃ ॥ ಜೀ
ವನ್ ಜಗದಸಾವಾಶು ಕುರುತೇ ಭಸ್ಮಸಾದ್ಧ್ರುವಂ ॥೩೧॥ ನಾಯಮರ್ಹ
ತ್ಯಸದ್ವೃತ್ತೋ ನರದೇವವರಾಸನಂ ! ಯೋಽಧಿಯಜ್ಞಪತಿಂ ವಿಷ್ಣುಂ ವಿ
ನಿಂದತ್ಯನಪತ್ರಪಃ ॥೩೨॥ ಕೋ ವೈನಂ ಪರಿಚಕ್ಷೀತ ? ವೇನಮೇಕಮೃತೇಽ
ಶುಭಂ । ಪ್ರಾಪ್ತ ಈದೃಶಮೈಶ್ವರ್ಯಂ ಯದನುಗ್ರಹಭಾಜನಃ ॥ ೩೩ ॥

---

ನಚಕ್ರೇ-ನಡೆಯಿಸಲಿಲ್ಲ ॥೨೯॥ ಹೇಭವ್ಯ-ಎಲೈ ಪುಣ್ಯಶಾಲಿಯಾದ, ವಿದುರ -ವಿದುರನೆ! ತೇದ್ವಿಜಾಃ-ಆಬ್ರಾಹ್ಮಣರು, ಪಂಡಿತಮಾನಿನಾ-ವಿದ್ವಾಂಸನೆಂದು ತಿಳಿದಿರುವ, ತೇನ-ಅವನಿಂದ, ಇತಿ-ಇಂತು, ಅಸತ್ಕೃತಾಃ-ತಿರಸ್ಕರಿಸಲ್ಪಟ್ಟವರಾಗಿ, ಯಾಚ್ಞಾಯಾಂ-ಪ್ರಾರ್ಥನೆಯು, ಅಥವಾ ಭವ್ಯಯಾಚ್ಞಾಯಾಂ-ಲೋಕಕ್ಷೇಮಕರವಾದ ಪ್ರಾರ್ಥನೆಯು, ಭಗ್ನಾಯಾಂ - ನೆರವೇರದಿರಲು, ತಸ್ಮೈ - ಅವನಿಗಾಗಿ, ಚುಕ್ರುಧುಃ - ಕೋಪಗೊಂಡರು ॥೩೦॥ ಪ್ರಕೃತಿದಾರುಣಃ - ಸ್ವಭಾವದಿಂದ ಕಟುಕನಾದ, ಪಾಪಃ - ಪಾಪಿಷ್ಠನಾದ, ಏಷಃ-ಈತನು, ಹನ್ಯತಾಂ ಹನ್ಯತಾಂ - ಖಂಡಿತವಾಗಿ ಕೊಲ್ಲಲ್ಪಡಲಿ, ಅಸೌ - ಇವನು, ಜೀವನ್ - ಬದುಕಿದ್ದರೆ, ಆಶು - ಬೇಗನೆ, ಜಗತ್ - ಲೋಕವನ್ನು, ಭಸ್ಮಸಾತ್ಕುರುತೇ - ಬೂದಿಯನ್ನು ಮಾಡುವನು, ಧ್ರುವಂ - ದಿಟವು ॥ ೩೧ ॥ ಯಃ - ಯಾವನು, ಅನಪತ್ರಪಃ - ನಾಚಿಕೆಯಿಲ್ಲದೆ, ಅಧಿಯಜ್ಞಪತಿಂ - ಯಜ್ಞನಾಯಕನಾದ, ವಿಷ್ಣುಂ - ವಿಷ್ಣುವನ್ನು, ನಿಂದತಿ - ದೂಷಿಸುವನೋ, ಅಯಂ - ಆ ಇವನು, ಅಸದ್ವೃತ್ತಃ - ದುಷ್ಟನಾದುದರಿಂದ, ನರ...ನಂ - ಸಿಂಹಾಸನವನ್ನು, ನಾರ್ಹತಿ - ಪಡೆಯತಕ್ಕವನಲ್ಲ ॥೩೨॥ ಯದ...ನಃ - ಯಾರ ಅನುಗ್ರಹಕ್ಕೆ ಪಾತ್ರನಾಗಿ, ಈದೃಶಂ - ಇಂತಹ, ಐಶ್ವರ್ಯಂ-ಸಂಪತ್ತನ್ನು, ಪ್ರಾಪ್ತಃ - ಪಡೆದನೋ, ಅಶುಭಂ - ಅಮಂಗಳನಾದ, ವೇನಮೇಕಂ - ವೇನನೊಬ್ಬನನ್ನು, ಋತೇ - ಉಳಿದು, ಕೋವಾ - ಯಾತ್ತಾವನು ತಾನೇ, ಏನಂ - ಈ ವಿಷ್ಣುವನ್ನು, ಪರಿಚಕ್ಷೀತ - ನಿಂದಿಸುವನು ॥೩೩॥ ಇತ್ಥಂ - ಇಂತು, ರೂಢಮನ್ಯವಃ - ಅಧಿಕಕೋಪವುಳ್ಳ, ಋಷಯಃ - ಋಷಿಗಳು,

---

ಪಂಡಿತಮ್ಮನ್ಯನಾದ ವೇನನು ಲೋಕಕ್ಷೇಮಕರವಾದ ತಮ್ಮ ಪ್ರಾರ್ಥನೆಯನ್ನು ನಿರಾಕರಿಸಲು, ಅವನಮೇಲೆ ಅತ್ಯಾಗ್ರಹವನ್ನು ಪಡೆದರು ॥೩೦॥ ಸ್ವಭಾವದಿಂದಲೇ ಕಟುಕನಾಗಿರುವ ಪಾಪಿಯಾದ ಈ ದುಷ್ಟ ವೇನನನ್ನು ಈಗಲೇ ಕೊಲ್ಲಿರಿ. ಕೊಲ್ಲಿರಿ. ಈ ದುರಾತ್ಮನು ಬದುಕಿದ್ದಲ್ಲಿ ಜಗತ್ತನ್ನೆಲ್ಲಾ ಶೀಘ್ರವಲ್ಲಿಯೇ ಸುಟ್ಟು ಬೂದಿ ಮಾಡಿಬಿಡುವನು ॥೩೧॥ ಈ ಪಾಪಿಯು ಶ್ರೀಮನ್ನಾರಾಯಣಮೂರ್ತಿಯ ಅನುಗ್ರಹಕ್ಕೆ ಪಾತ್ರನಾಗಿ ಇಷ್ಟು ಸಂಪತ್ತನ್ನು ಪಡೆದಿದ್ದರೂ ಅದನ್ನೆಣಿಸದೆ ನಾಚಿಕೆಗೆಟ್ಟು ಆ ಭಗವಂತನನ್ನೇ ದೂಷಿಸುತ್ತಿರುವನಾದುದರಿಂದ ಈ ದುಷ್ಟನು ರಾಜಾಸನವನ್ನೇರುವುದಕ್ಕರ್ಹನಲ್ಲ ॥ ೩೨ ॥ ಭಗವಂತನ ಪ್ರಸಾದದಿಂದ ಸಂಪತ್ತನ್ನು ಪಡೆದವರಲ್ಲಿ ಈ ವೇನನೊಬ್ಬನನ್ನುಳಿದು ಯಾತ್ತಾರು ತಾನೇ ಯಜ್ಞಪುರುಷನಾದ ಭಗವಂತನನ್ನು ತಿರಸ್ಕರಿಸುವರು? ॥೩೩॥ ಎಂದು ಆ ಮಹರ್ಷಿಗಳೆಲ್ಲರೂ ಯೋಚಿಸಿಕೊಂಡು ಮೊದಲಿನಿಂದಲೂ ಒಳಗೆ ಅಡಗಿದ್ದ ಕ್ರೋಧವೆಂಬುದು ಉದ್ಬುದ್ಧವಾಗಲು, ಆ ವೇನನನ್ನು ಕೊಲ್ಲುವುದೇ ನ್ಯಾಯವೆಂದು ನಿಶ್ಚಯಿಸಿದವರಾಗಿ, ವಿಷ್ಣುನಿಂದೆಯಿಂದ ಮೊದಲೇ

ಇತ್ಥಂ ವ್ಯವಸಿತಾ ಹಂತು ಮೃಷಯೋ ರೂಢಮನ್ಯವಃ । * ನಿಜಘ್ನು ರ್ಹುಂ
ಕೃತ್ಯೈ ರ್ವೇನಂ ಹತ ಮಚ್ಯುತನಿಂದಯಾ ॥೩೪॥ ಋಷಿಭಿ ಸ್ಸ್ವಾಶ್ರಮಪ
ದಂ ಗತೇ ಪುತ್ರಕಳೇಬರಂ । ಸುನೀಥಾ ಪಾಲಯಾಮಾಸ ವಿದ್ಯಾಯೋಗೇನ

ಹಂತುಂ - ಕೊಲ್ಲುವುದಕ್ಕೆ, ವ್ಯವಸಿತಾಃ - ನಿಶ್ಚಯಿಸಿ, ಅಚ್ಯುತನಿಂದಯಾ - ವಿಷ್ಣುನಿಂದೆಯಿಂದ, ಹತಂ-ಕೊಲ್ಲಲ್ಪಟ್ಟಿರುವ, ವೇನಂ - ವೇನನನ್ನು, ಹುಂಕೃತ್ಯೈಃ - ಹುಂಕಾರಗಳಿಂದ, ನಿಜಘ್ನುಃ - ಕೊಂದು ಹಾಕಿದರು ॥೩೪॥ ಋಷಿಭಿಃ - ಋಷಿಗಳಿಂದ, ಸ್ವಾಶ್ರಮಪದಂ - ತಮ್ಮಾಶ್ರಮಕ್ಕೆ, ಗತೇ - ಹೊರಡಲ್ಪಡಲು, ಸುನೀಥಾ - ತಾಯಿಯು, ಶೋಚತೀ - ದುಃಖಿಸುತ್ತಾ, ವಿದ್ಯಯೋಗೇನ - ಯುಕ್ತಿಯಿಂದ,

ಸಂಸ್ಕೃತನಾಗಿದ್ದ ವೇನನನ್ನು ಹುಂಕಾರದಿಂದಲೇ ಮಡುಹಿದರು ॥೩೪॥ ಆ ಮುನಿಗಳಂತು ವೇನನನ್ನು ಶಾಪದಿಂದಮಡುಹಿ ತಂತಮ್ಮ ಆಶ್ರಮಗಳಗೆತೆರಳದ ಬಳಿಕ, ವೇನನತಾಯಿಯಾದ ಸುನೀಥಾದೇವಿಯು ಚಿಂತಿಸುತ್ತಾ ಮಂತ್ರಿಗಳೊಡನಾಲೋಚಿಸಿ ಮಗನ ಕಳೇಬರವನ್ನು ಎಣ್ಣೆಯ ಕೊಪ್ಪರಿಗೆಯಲ್ಲಿರಿಸಿ ಕೆಡದಂತೆ ಕಾಪಾಡುತ್ತಿದ್ದಳು ॥೩೫॥ ಅತ್ತ ಮುನಿಗಳು ಬಂದುಮಿನ ಸರಸ್ವತೀ ನದಿಯ ಜಲದಲ್ಲಿ ಮಿಂದು ಅಗ್ನಿಹೋತ್ರಗಳನ್ನು ಮಾಡಿ ಆ

* ಪ್ರ. ಇಲ್ಲಿ "ಮಹಾತ್ಮರಾದ ಬ್ರಾಹ್ಮಣೋತ್ತಮರು ರಾಜಹತ್ಯೆಯನ್ನು ಮಾಡಬಹುದೆ ?" ಎಂದು ಕೆಲವರು ಆಕ್ಷೇಪಿಸಬಹುದು. ಆದರೆ ಶ್ಲೋ॥ ಭಗವನ್ನಿಂದಯಾ ವೇನೋ ದ್ವಿಜೈ ಸ್ತಮಸಿಪಾತಿತಃ ॥ ಎಂಬ ವಚನಾನುಸಾರವಾಗಿ ಆ ಮುನಿಗಳು ವೇನನನ್ನು ಶಪಿಸಿದರೇ ಹೊರತು ಕೊಲ್ಲಲಿಲ್ಲ. ಅವರು ಪ್ರಯೋಗಿಸಿದ "ನೀನು ಸಾಯಿ" ಎಂಬ ಶಾಪವಾಕ್ಯವು ಓದುವವರಿಗೆ ಅಶ್ಲೀಲವಾಗಿ ತೋರುವುದೆಂದೆಣಿಸಿ ಗ್ರಂಥದಲ್ಲಿ ಕೊಂದರೆಂದು ಹೇಳಲ್ಪಟ್ಟಿರುವುದು.

ಈ ವಿಷಯದಲ್ಲಿ ಮಧ್ವಮತ ಗ್ರಂಥಗಳ ಅಭಿಪ್ರಾಯವೇನೆಂದರೆ — "ಅಹಂಬ್ರಹ್ಮಾಸ್ಮಿ' ನಾನೇ ಬ್ರಹ್ಮನಾಗಿರುವೆನು, ಎಂಬ ಉಪಾಸನಾಶಾಸ್ತ್ರಪ್ರವೃತ್ತಿಗೆ ವೇನನೇ ಮೂಲವು. ಅವನು ದೇವರೇ ಇಲ್ಲವೆಂದು ಹೇಳುತ್ತಾ, ಎಲ್ಲರೂ ತನ್ನ ನಾಸ್ತಿಕಮತವನ್ನೇ ಅವಲಂಬಿಸಬೇಕೆಂದು ಲೋಕದಲ್ಲೆಲ್ಲ ಡಂಗುರವನ್ನು ಹೊಯ್ಸಿ ಹರಡಿದನು. ಅದರಿಂದ ಅವನ ಸಿದ್ಧಾಂತವು ಜಗತ್ತಿನಲ್ಲೆಲ್ಲಾ ವ್ಯಾಪಿಸಿತು ದೈತ್ಯರು, ಅಸುರರು, ಪಿಶಾಚರು ಇವರು ಆ ಮತವನ್ನು ಅವಲಂಬಿಸಿದರು. ಇದಕ್ಕಾಗಿ ಬ್ರಾಹ್ಮಣರು ವೇನನನ್ನು ಶಪಿಸಿಕೊಂದರು. ಬಳಿಕ ಪೃಥುರಾಜನು ಜನಿಸಿ ಭೂಮಿಯಲ್ಲಿ ಆ ಮತವನ್ನು ಹಾಳುಮಾಡಿದನು. ಮರಳಿ ಭೀಮಸೇನನು ಗಂಧಮಾದನಕ್ಕೆ ಹೋಗಿದ್ದಾಗ ಅಲ್ಲಿ ಮಣಿಮಂತ ಮೊದಲಾದ ರಾಕ್ಷಸರನ್ನು ಕೊಂದನು. ಅವರು ಭೀಮಸೇನನ ಮೇಲಣ ದ್ವೇಷದಿಂದ ಅವನ ಮತವನ್ನು ಹಾಳುಮಾಡಬೇಕೆಂದು ಇಪ್ಪತ್ತೆಂಟನೆ ವೈವಸ್ವತಮನುವಿನ ಕಾಲದ ಕಲಿಯುಗದಲ್ಲಿ ಶಂಕರಾದಿ ರೂಪದಿಂದ ಜನಿಸಿ ವೇನಮತವನ್ನು ಆಶ್ರಯಿಸಿದರು. ಅವರಲ್ಲಿ ಮಣಿಮಂತನೇ ಶಂಕರರೂಪದಿಂದ ಅದ್ವೈತಭಾಷ್ಯವನ್ನು ರಚಿಸಿದನು. ಶ್ಲೋ॥ ಅಹಂ ಬ್ರಹ್ಮೇತಿ ವೇನಸ್ತು ಧ್ಯಾಯ ನ್ನಾಪಾಽಧರಂತಮಃ । ತದ್ಪ್ರಾದ್ಧಾಂತೋ ಮಹೀಂ ವ್ಯಾಪ್ತೋ ಛೇಯಾರ್ಥಾಖ್ಯಾಪಯತೋನಿಶಂ ॥೧॥ ಅಸುರಾ ರಾಕ್ಷಸಾಶ್ಚೈವ ಪಿಶಾಚಾ ತತ್ಪಥಿಸ್ಥಿತಾಃ । ಭೂಮೌ ತತ್ಪೃಥುನಾ ಸರ್ವಂ ನಿರಸ್ತಂ ಮಹಿಮಾತ್ಮನಾ ॥೨॥ ಪುನಃ ಕಲಿಯುಗೇ ಪ್ರಾಪ್ತೇ ಅಷ್ಟಾವಿಂಶತಿಮೇ ಮನೋಃ । ವೈವಸ್ವತಸ್ಯ ಸಮಯೇ ಜಾತಾಃ ಕ್ರೋಧವಶಾ ಭುವಿ । ಖ್ಯಾಪಯಂತಿ ದುರಾತ್ಮಾನೋ ಮಣಿಮಾಂ ಸ್ತತ್ಪುರಸ್ಸರಃ ॥

ಶೋಚತೀ ॥೩೫॥ ಏಕದಾ ಮುನಯ ಸ್ತೇತು ಸರಸ್ವತ್ಸಲಿಲಾಪ್ಲುತಾಃ ।
ಹುತ್ವಾಽಗ್ನೀನ್ ಸತ್ಕಥಾ ಶ್ಚಕ್ರು ರುಪವಿಷ್ಟಾ ಸ್ಸರಿತ್ತಟೇ ॥೩೬॥ ವೀಕ್ಷ್ಯೋ
ತ್ಥಿತಾನ್ ಮಹೋತ್ಪಾತಾ ನಾಹುರ್ಲೋಕಭಯಂಕರಾನ್ । ಅಪ್ಯಭದ್ರ ಮನಾ
ಥಾಯಾ ದಸ್ಯುಭ್ಯೋ ನಭವೇ ದ್ಭುವಃ ॥೩೭॥ ಏವಂ ಮೃಶಂತ ಋಷಯೋ
ಧಾವತಾಂ ಸರ್ವತೋದಿಶಂ । ಪಾಂಸು ಸ್ಸಮುತ್ಥಿತೋ ಭೂರಿ ಶ್ಚೋರಾ
ಣಾ ಮಭಿಲುಂಪತಾಂ ॥೩೮॥ ತದುಪದ್ರವ ಮಾಜ್ಞಾಯ ಲೋಕಸ್ಯ ವಸು ಲುಂ
ಪತಾಂ । ಭರ್ತರ್ಯುಪರತೇ ತಸ್ಮಿನ್ನನ್ಯೋನ್ಯಂ ಚ ಜಿಘಾಂಸತಾಂ ॥೩೯॥ ‡

ಪುತ್ರ ಕಳೇಬರಂ - ಮಗನ ಶರೀರವನ್ನು, ಪಾಲಯಾಮಾಸ ಸಲಹುತ್ತಿದ್ದಳು ॥೩೫॥ ಏಕದಾ - ಒಂದು ದಿನ, ತೇಮುನಯಸ್ತು - ಆ ಋಷಿಗಳು, ಸರ......ತಾಃ - ಸರಸ್ವತೀನದಿಯಲ್ಲಿ ಸ್ನಾನಮಾಡಿ, ಅಗ್ನೀನ್- ಅಗ್ನಿಗಳನ್ನು, ಹುತ್ವಾ - ಹೋಮಮಾಡಿ, ಸರಿತ್ತಟೇ - ನದಿಯ ದಡದಲ್ಲಿ, ಉಪವಿಷ್ಟಾಃ - ಕುಳಿತು, ಸತ್ಕಥಾಃ - ಭಗವಚ್ಚರಿತ್ರೆಗಳನ್ನು, ಚಕ್ರುಃ - ಹೇಳುತ್ತಿದ್ದರು ॥೩೬॥ ಉತ್ಥಿತಾನ್ - ಉಂಟಾದ, ಲೋಕಭಯಂಕರಾನ್ - ಲೋಕಕ್ಕೆ ಭಯವನ್ನುಂಟುಮಾಡುವ, ಉತ್ಪಾತಾನ್ - ಉತ್ಪಾತಗಳನ್ನು, ವೀಕ್ಷ್ಯ - ಕಂಡು, ಅನಾಥಾಯಾಃ - ದಿಕ್ಕಿಲ್ಲದ, ಭುವಃ - ಭೂಮಿಗೆ, ದಸ್ಯುಭ್ಯಃ -ಕಳ್ಳರಿಂದ, ಅಭದ್ರಂ - ಕೇಡು, ನಭವೇತ್ - ಆಗಬೇಡ ಎಂದು, ಆಹುಃ - ಹೇಳುತ್ತಾರೆ, ॥೩೭॥ ಏವಂ - ಇಂತು, ಋಷಯಃ - ಋಷಿಗಳು, ಮೃಶಂತಃ - ಯೋಚಿಸುತ್ತಿದ್ದರು. ದಿಶಂಸರ್ವತಃ - ಎಲ್ಲಾದಿಕ್ಕುಗಳಲ್ಲಿಯೂ, ಧಾವತಾಂ - ಓಡುತ್ತಿರುವ, ಅಭಿಲುಂಪತಾಂ - ಅಪಹರಿಸುವ, ಚೋರಾಣಾಂ - ಕಳ್ಳರ, ಭೂರಿಃ - ಅಧಿಕವಾದ, ಪಾಂಸುಃ - ಧೂಳಿಯು, ಸಮುತ್ಥಿತಃ - ಎದ್ದಿತು ॥೩೮॥ ತಸ್ಮಿನ್ ಭರ್ತರಿ - ಆ ದೊರೆಯು, ಉಪರತೇ - ನಾಶವಾಗಲು, ಲೋಕಸ್ಯ - ಜನರ, ವಸು - ಧನವನ್ನು, ಲುಂಪತಾಂ - ಅಪಹರಿಸುತ್ತಿ

ನದಿಯ ದಡದಲ್ಲಿಯೇ ಕುಳಿತುಕೊಂಡು ಪರಸ್ಪರವಾಗಿ ಭಗವಚ್ಚರಿತ್ರೆಗಳನ್ನು ಸಂಭಾಷಿಸುತ್ತಿದ್ದರು ॥೩೬॥ ಆಗ ಲೋಕಕ್ಕೆ ಮಹಾಭಯವನ್ನುಂಟುಮಾಡುವ ಅನೇಕ ಉತ್ಪಾತಗಳು ಏಳುತ್ತಾ ಬಂದುವು. ಅವುಗಳನ್ನು ಕಂಡು ಅವರು ಅಕಟಾ ಇನ್ನೇನುಗತಿ ? ಅನಾಥವಾಗಿರುವ ಲೋಕಕ್ಕೆ ಕೇಡುಂಟಾಗದಿರಲಿ ॥೩೭॥ ಎಂದು ಯೋಚಿಸುತ್ತಾ ಇರುವಷ್ಟರಲ್ಲಿಯೇ ದಿಕ್ಕು ದಿಕ್ಕುಗಳಲ್ಲಿಯೂ ಸೂರೆಮಾಡಿಕೊಂಡು ಓಡುತ್ತಿರುವ ಕಳ್ಳರ ಗುಂಪಿನಿಂದೆಲ್ಲೆಲ್ಲಿಯೂ ಧೂಳಿಯೆದ್ದಿತು ॥೩೮॥ ತರುವಾಯ ಆ ಋಷಿಗಳು ಉಗ್ರಶಾಸನನಾದ ವೇನರಾಜನು ಮಡಿದುದರಿಂದ ಜನರು ಒಬ್ಬರನ್ನೊಬ್ಬರು ಕೊಲ್ಲುತ್ತಾ ಜನರ ಸ್ವತ್ತುಗಳನ್ನು ಕೊಳ್ಳೆಹೊಡೆಯುತ್ತಾ ಇರುವುದನ್ನೂ, ದೇಶವೆಲ್ಲವೂ ಗುಂದಿ ದಿಕ್ಕಿಲ್ಲದೆ ಕಳ್ಳರು ಪುಂಡರು ಮೊದಲಾದವರ ಕೋಟಲೆಯಿಂದ ಸಂಕಟಪಡುತ್ತಿರುವುದನ್ನೂ ತಿಳಿದು, ಅವರನ್ನು ಅಡಗಿ

‡ ಶ್ಲೋ॥ ಬ್ರಾಹ್ಮಣಾನಾಂ ಪರೋಧರ್ಮಃ ವೇದಾನಾಂ ಧಾರಣಾದಪಿ । ಅಹಿಂಸಾ ಸತ್ಯವಚನಂ ಕ್ಷಮಾಸಂತೋಷ ಇತ್ಯಪಿ ॥ (ಮಹಾಭಾರತ) ಬ್ರಾಹ್ಮಣರಿಗೆ ಅಹಿಂಸೆಯು ವೇದವ್ರತ ವಿಗಳಿಗಿಂತಲೂ ಉತ್ತಮವಾದುದರಿಂದ ಅವರು ಕಳ್ಳಕಾಕರನ್ನು ನಿಗ್ರಹಿಸುವುದರಿಂದ ಹಿಂಸಾದೋಷವು ಪ್ರಾಪ್ತವಾಗುವುದೆಂದು ಹೆದರಿ ಅವರನ್ನು ನಿಗ್ರಹಿಸಲಿಲ್ಲ.

ಚೋರಪ್ರಾಯಂ ಜನಪದಂ ಹೀನಸತ್ತ್ವಮರಾಜಕಂ । ಲೋಕಾನ್ನಾಽವಾರಯನ್ ಶಕ್ತಾ ಅಪಿ ತದ್ದೋಷದರ್ಶಿನಃ ॥ ೪೦ ॥ ಬ್ರಾಹ್ಮಣಃ ಸಮದೃಕ್ ಶಾಂತೋ ದೀನಾನಾಂ ಸಮುಪೇಕ್ಷಕಃ । ಸ್ರವತೇ ಬ್ರಹ್ಮ ತಸ್ಯಾಪಿ ಭಿನ್ನಭಾಂಡಾತ್ಪಯೋ ಯಥಾ ॥೪೧॥ ನಾಂಗಸ್ಯ ವಂಶೋ ರಾಜರ್ಷೇರೇಷ ಸಂಸ್ಥಾತುಮರ್ಹತಿ । ಅಮೋಘವೀರ್ಯಾ ಹಿ ನೃಪಾ ವಂಶೇಽಸ್ಮಿನ್ ಕೇಶವಾಶ್ರಯಾಃ ॥೪೨॥ ವಿನಿಶ್ಚಿತ್ಯೈವಮೃಷಯೋ ವಿಪನ್ನಸ್ಯ ಮಹೀಪತೇಃ । ಮ

---

ರುವ, ಅನ್ಯೋನ್ಯಂ - ಒಬ್ಬರನ್ನೊಬ್ಬರು, ಜಿಘಾಂಸತಾಂ - ಕೊಲ್ಲುತ್ತಿರುವ, ಜನರ, ತದುಪದ್ರವಂ - ಆ ಬಾಧೆಯನ್ನು, ಆಜ್ಞಾಯ - ತಿಳಿದು ॥೩೯॥ ಜನಪದಂ - ದೇಶವನ್ನು, ಹೀನಸತ್ತ್ವಂ - ಬಲಗುಂದಿದುದನ್ನಾಗಿಯೂ, ಅರಾಜಕಂ - ದಿಕ್ಕಿಲ್ಲದುದನ್ನಾಗಿಯೂ, ಚೋರಪ್ರಾಯಂ - ಕಳ್ಳರ ಮಯವನ್ನಾಗಿಯೂ, ತಿಳಿದು, ಶಕ್ತಾಅಪಿ - ಶಕ್ತರಾದರೂ, ತದ್ದೋ....ನಃ - ತಡೆಯದಿದ್ದಲ್ಲಿ ದೋಷವನ್ನು ಬಲ್ಲವರಾದರೂ, ಲೋಕಾನ್ - ಜನರನ್ನು, ನಾವಾರಯನ್ - ತಡೆಯಲಿಲ್ಲ ॥ ೪೦ ॥ ಬ್ರಾಹ್ಮಣಃ - ಬ್ರಹ್ಮಜ್ಞಾನಿಯೂ ಸಮದೃಕ್ - ಸಮಬುದಿಯುಳ್ಳವನೂ, ಶಾಂತಃ - ಶಮಾದಿ ಸಂಪನ್ನನೂ, ಆಗಿದ್ದರೂ, ದೀನಾನಾಂ- ದೀನರಲ್ಲಿ, ಸಮುಪೇಕ್ಷಕಃ - ಉಪೇಕ್ಷೆಯುಳ್ಳವನಾದಲ್ಲಿ, ತಸ್ಯ - ಅವನ, ತಪಃ- ತಪಸ್ಸು, ಭಿನ್ನಭಾಂಡಾತ್ - ತೂತು ಮಡಿಕೆಯಿಂದ, ಪಯೋಯಥಾ-ಹಾಲಿನಂತೆ, ಸ್ರವತೇ-ಕಳೆದು ಹೋಗುತ್ತದೆ ॥ ೪೧ ॥ ರಾಜರ್ಷೇಃ - ರಾಜ ಋಷಿಯಾದ, ಅಂಗಸ್ಯ - ಅಂಗನ, ಏಷವಂಶಃ ಈ ವಂಶವು, ಸಂಸ್ಥಾತುಂ - ನಿಂತು ಹೋಗುವುದಕ್ಕೆ, ನಾರ್ಹತಿ - ಯೋಗ್ಯವಲ್ಲ, ಅಸ್ಮಿನ್ವಂಶೇ - ಈ ವಂಶದಲ್ಲಿ, ಕೇಶವಾಶ್ರಯಾಃ- ವಿಷ್ಣುಭಕ್ತರಾದ, ನೃಪಾಃ - ರಾಜರು, ಅಮೋಘವೀರ್ಯಾಃಹಿ - ದಿವ್ಯಮಹಿಮೆಯುಳ್ಳವರಷ್ಟೆ ॥೪೨॥ ಋಷಯಃ - ಮುನಿಗಳು, ಏವಂ - ಇಂತು, ವಿನಿಶ್ಚಿತ್ಯ - ನಿಶ್ಚಯಿಸಿ, ವಿಪನ್ನಸ್ಯ - ಮೃತನಾದ, ಮಹೀಪತೇಃ - ರಾಜನ, ಊರುಂ - ತೊಡೆಯನ್ನು, ತರಸಾ - ಬೇಗನೆ, ಮಮಂಥುಃ - ಮಥಿಸಿದರು, ತತ್ರ- ಅಲ್ಲಿ, ಬಾಹುಕಃ-ಕುಳ್ಳನಾದ, ನರಃ-ಮನುಷ್ಯನು, ಆಸೀತ್ - ಇದ್ದನು ॥೪೩॥ ಕಾಕಕೃಷ್ಣಃ-ಕಾ

---

ಸುವುದಕ್ಕೆ ಶಕ್ತರಾಗಿದ್ದರೂ, ಅಡಗಿಸದಿದ್ದರೆ ತಮಗೆ ಪಾಪವುಂಟಾಗುವುದೆಂದು ತಿಳಿದಿದ್ದರೂ, ಸಕಲ ಧನಗಳಿಗಿಂತಲೂ, ಸರ್ವೋತ್ತಮವೆನಿಸಿದ ತಮ್ಮ ತಪೋಧನವನ್ನು ವೆಚ್ಚಮಾಡುವುದಕ್ಕಿಷ್ಟವಿಲ್ಲದೆ ಬೇರೆರೀತಿಯಿಂದಲೇ ಅವರನ್ನು ನಿಗ್ರಹಿಸಬೇಕೆಂದು ನಿಶ್ಚಯಿಸಿ ಆ ಚೋರಾದಿಗಳನ್ನು ನಿವಾರಿಸಲಿಲ್ಲ ॥೪೦॥ ಬ್ರಹ್ಮಜ್ಞಾನಿಯಾಗಿರಲಿ, ಸಮಬುದ್ಧಿಯಾಗಿರಲಿ, ಶಮದಮಾದಿ ಸಂಪನ್ನನಾಗಿರಲಿ, ಎಂತವನಾದರೂ ದೀನರಾದವರನ್ನು ಉಪೇಕ್ಷಿಸಿದಲ್ಲಿ ಅವನ ತಪಸ್ಸು ತೂತುಮಡಕೆಯಲ್ಲಿಟ್ಟ ಹಾಲಿನಂತೆ ನಾಶವಾಗುವುದು ॥೪೧॥ ಆದುದರಿಂದ ನಾವು ಉದಾಸೀನರಾಗಿರಕೂಡದು. ಮತ್ತು ರಾಜರ್ಷಿಯಾದ ಅಂಗರಾಜನ ವಂಶದಲ್ಲಿ ಜನಿಸಿದ ರಾಜರೆಲ್ಲರೂ ಭಗವದ್ಭಕ್ತರಾದ ಮಹಾಮಹಿಮರೆನ್ನಿಸಿದ್ದರಾದುದರಿಂದ ಈ ರಾಜನ ವಂಶವು ನಿಂತುಹೋಗಬಾರದು ॥೪೨॥ ಎಂದು ಆ ಮಹರ್ಷಿಗಳೆಲ್ಲರೂ ನಿಶ್ಚಯಿಸಿ ಮೃತನಾದ ವೇನರಾಜನ ಕಳೇಬರವನ್ನು ತರಿಸಿ ಅವನ ತೊಡೆಯನ್ನು ಮಥಿಸಿದರು. ಅಲ್ಲಿ ಒಬ್ಬ ಕುಳ್ಳನಾದ ಪುರುಷನುದಿಸಿದನು ॥೪೩॥ ಅವನು ಕಾಗೆಯಂತೆ ಕರಿದೆನಿಸಿದ್ದನು. ಅವನ ಶರೀರವು ಬಹಳ ಕುಳ್ಳಾಗಿತ್ತು. ತೋಳುಗಳು ಮೋಟಾಗಿದ್ದುವು. ಗಲ್ಲಗಳು ಮಾತ್ರ ಬಲು

ಮಂಥು ರೂರುಂ ತರಸಾ ತತ್ರಾಸೀದ್ಬಾಹುಕೋ ನರಃ ॥೪೩॥ ✝ ಕಾಕಕೃ
ಷ್ಣೋಽತಿಹ್ರಸ್ವಾಂಗೋ ಹ್ರಸ್ವಬಾಹು ರ್ಮಹಾಹನುಃ । ಹ್ರಸ್ವಪಾ ನ್ನಿ
ಮ್ನನಾಸಾಗ್ರೋ ರಕ್ತಾಕ್ಷ ಸ್ತಾಮ್ರಮೂರ್ಧಜಃ ॥೪೪॥ ತಂತು ತೇಽವನ
ತಂ ದೀನಂ ಕಿಂಕರೋಮೀತಿ ವಾದಿನಂ । ನಿಷೀದೇತ್ಯಬ್ರುವಂ ಸ್ತಾತ! ಸನಿ
ಷಾದ ಸ್ತತೋಽಭವತ್ ॥೪೫॥ ತಸ್ಯವಂಶ್ಯಾಸ್ತು ನೈಷಾದಾ ಗಿರಿಕಾನನ
ಗೋಚರಾಃ। ಯೇನಾಹರ ಜ್ಜಾಯಮಾನೋ ವೇನಕಲ್ಮಷ ಮುಲ್ಬಣಂ ॥೪೬॥

—* ಇತಿ ಚತುರ್ದಶೋಽಧ್ಯಾಯಃ —

ಗೆಯಂತೆ ಕರಿದಾಗಿಯೂ, ಅತಿಹ್ರಸ್ವಾಂಗಃ-ಬಹಳ ಕುಳ್ಳಾದ ಮೈಯುಳ್ಳವನಾಗಿಯೂ, ಹ್ರಸ್ವಬಾಹುಃ-ಕುಳ್ಳಾದ ತೋಳುಗಳುಳ್ಳವನಾಗಿಯೂ, ಮಹಾಹನುಃ- ತೋರವಾದ ಗಲ್ಲವುಳ್ಳವನಾಗಿಯೂ, ಹ್ರಸ್ವಪಾತ್-ಕುರುಚಾದ ಪಾದಗಳುಳ್ಳವನಾಗಿಯೂ, ನಿಮ್ನನಾಸಾಗ್ರಃ-ಆಳವಾದ ಮೂಗಿನ ತುದಿಯುಳ್ಳವನಾಗಿಯೂ,ತಾಮ್ರಮೂರ್ಧಜಃ-ಕೆಂಗೂದಲುಳ್ಳವನಾಗಿಯೂ, ಇದ್ದನು ॥೪೪॥ ಹೇ ತಾತ-ಅಯ್ಯಾ ವಿದುರನೆ! ತೇ-ಅವರು, ಅವನತಂ-ನಮಸ್ಕರಿಸಿದ, ದೀನಂ-ವಿನೀತನಾದ, ಕಿಂಕರೋಮಿ-ಏನುಮಾಡಲಿ? ಇತಿ-ಎಂದು, ವಾದಿನಂ - ಹೇಳುವ, ತಂ - ಅವನನ್ನು, ನಿಷೀದ -ಕುಳಿತುಕೊ, ಇತಿ - ಎಂದು, ಅಬ್ರುವನ್ -ಹೇಳಿದರು, ಸಃ - ಅವನು, ತತಃ - ಬಳಿಕ ನಿಷಾದಃ - ಬೇಡನು, ಅಭವತ್ - ಆದನು ॥೪೫॥ ಯೇನ - ಯಾವಕಾರಣದಿಂದ, ಜಾಯಮಾನಃ-ಹುಟ್ಟಿದಕೂಡಲೇ ಇವನು ಉಲ್ಬಣಾಂ - ಅಧಿಕವಾದ, ವೇನಕಲ್ಮಷಂ-ವೇನನ ಪಾಪವನ್ನು ಅಹರತ್ -ಅಪಹರಿಸಿದನೋ, ತಸ್ಯ - ಇವನ, ವಂಶ್ಯಾಃ - ವಂಶದವರು, ಗಿರಿ...ರಾಃ - ಬೆಟ್ಟಗುಟ್ಟಗಳಲ್ಲಿರುವ, ನೈಷಾದಾಃ - ಬೇಡರು ಆದರು ॥೪೬॥

—ಚತುರ್ದಶಾಧ್ಯಾಯಂ ಸಮಾಪ್ತಂ—

ಗಾತ್ರವಾಗಿದ್ದವು, ಅಡಿಗಳು ಬಹಳ ಕಿರಿದು.ಮೂಗು ಹಳ್ಳವಾಗಿದ್ದಿತು.ಕಣ್ಣುಗಳು ಕೆಂಪು. ಕೂದಲು ತಾಮ್ರವರ್ಣ ॥೪೪॥ ಇಂತಿರುವ ಆ ಪುರುಷನು ವಿನಯದಿಂದ ನಮಸ್ಕರಿಸಿ ಏನು ಮಾಡಲಿ ? ಎಂದು ಬೆಸಗೊಳ್ಳಲು, "ನಿಷೀದ-ಕುಳಿತುಕೊ" ಎಂದು ಹೇಳಿದರು. ಬಳಿಕ ಅವನು"ನಿಷಾದ(ಬೇಡ)"ನಾದನು ॥೪೫॥ ಇವನು ವೇನನ ಶರೀರದಿಂದ ಜನಿಸಿ ಅವನ ಅತ್ಯುಗ್ರವಾದ ಪಾಪವನ್ನೆಲ್ಲಾ ಹೋಗಲಾಡಿಸಿದುದರಿಂದ ಇವನ ವಂಶದಲ್ಲಿ ಜನಿಸಿದವರು ಬೆಟ್ಟಗಳಲ್ಲಿ ಓಡಾಡುವ "ನಿಷಾದ-ಬೇಡ" ರಾದರು ಎಂದು ಮೈತ್ರೇಯಮುನಿಯು ವಿದುರನಿಗೆ ಹೇಳಿದನೆಂಬಲ್ಲಿಗೆ ಭಾಗವತ ಚಕೋರಚಂದ್ರಿಕೆಯೊಳ್

ಹದಿನಾಲ್ಕನೆಯ ಅಧ್ಯಾಯಂ ಮುಗಿದುದು.

✝ ಸಿ. ಸಮುದ್ರ ಮಥನದಲ್ಲಿ ಮೊದಲು ಕಾಲಕೂಟವು ಜನಿಸಿದಂತೆ ವೇನಮಥನದಲ್ಲಿ ಮೊದಲು ನಿಷಾದನು ಜನಿಸಿದನು.

* ವಿಜಯಧ್ವಜಾನುಸಾರವಾಗಿ ಇಲ್ಲಿ ಅಧ್ಯಾಯ ಮುಗಿಯುವುದಿಲ್ಲ.

## ಓಂನಮಃ ಪರಮಾತ್ಮನೇ.

### — ಅಥ ಪಂಚದಶೋಽಧ್ಯಾಯಃ —

ಮೈತ್ರೇಯಃ ॥ ಅಥ ತಸ್ಯ ಪುನರ್ವಿಪ್ರೈರಪುತ್ರಸ್ಯ ಮಹೀಪತೇಃ । ಬಾಹುಭ್ಯಾಂ ಮಥ್ಯಮಾನಾಭ್ಯಾಂ ‡ ಮಿಥುನಂ ಸಮಪದ್ಯತ ॥೧॥ ತದ್ದೃಷ್ಟ್ವಾ ಮಿಥುನಂ ಜಾತಮೃಷಯೋ ಬ್ರಹ್ಮವಾದಿನಃ । ಊಚುಃ ಪರಮಸಂಹೃಷ್ಟಾ ವಿದಿತ್ವಾ ಭಗವತ್ಕಲಾಂ ॥೨॥ ಋಷಯಃ ॥ ಏಷ ವಿಷ್ಣೋರ್ಭಗವತಃ ಕಲಾ ಭುವನ ಪಾಲಿನೀ । ಇಯಂ ಚ ಲಕ್ಷ್ಮ್ಯಾಃ ಸಂಭೂತಿಃ * ಪುರುಷ

---

—ಪಂಚದಶಾಧ್ಯಾಯಂ—

ಕಂ॥ ಮುನಿಮಥಿತವೇನ ಭುಜದಿಂ । ಜನಿಸಿದ ಪೃಥುಚಕ್ರಪತಿಗೆ ಸಾಮ್ರಾಜ್ಯವನಿ ।
ತ್ತನುವಿಂ ಮನ್ನಣೆ ಯೆಸಗಿದ । ಘನಚರಿತವ ನೊರೆವುದೀಗಳೀ ಅಧ್ಯಾಯಂ ॥

ಮೈತ್ರೇಯನು ಹೇಳುತ್ತಾನೆ, ಅಥ - ಬಳಿಕ, ಅಪುತ್ರಸ್ಯ - ಮಕ್ಕಳಿಲ್ಲದ, ತಸ್ಯಮಹೀಪತೇಃ ಆವೇನನ, ಬಾಹುಭ್ಯಾಂ - ತೋಳುಗಳು, ವಿಪ್ರೈಃ-ಋಷಿಗಳಿಂದ, ಮಥ್ಯಮಾನಾಭ್ಯಾಂ - ಕಡೆಯಲ್ಪಲು, ಮಿಥುನಂ - ಜವಳಿ ಮಕ್ಕಳು, ಸಮಪದ್ಯತ - ಉಂಟಾದರು ॥೧॥ ಬ್ರಹ್ಮವಾದಿನಃ - ವೇದವ್ರಾದ, ಋಷಯಃ - ಮುನಿಗಳು, ತತ್ - ಆ, ಮಿಥುನಂ -ಜವಳಿ ಮಕ್ಕಳು, ಉದಿತಂ - ಹುಟ್ಟಿದುದನ್ನು, ದೃಷ್ಟ್ವಾ - ಕಂಡು ಭಗವತ್ಕಲಾಂ - ಭಗವಂತನ ಅಂಶವನ್ನಾಗಿ, ವಿದಿತ್ವಾ - ತಿಳಿದು, ಪರಮಸಂಹೃಷ್ಟಾಃ- ಅಧಿಕ ಸಂತೋಷದಿಂದ, ಊಚುಃ -ಹೇಳಿದರು, ॥ ೨ ॥ ಏಷಃ - ಈ ಗಂಡು ಕೂಸು

---

—ಹದಿನೈದನೆಯಅಧ್ಯಾಯ—

### — ಪೃಥುಚಕ್ರವರ್ತಿಯ ಪಟ್ಟಾಭಿಷೇಕೋತ್ಸವ —

ಅನಂತರದಲ್ಲಿ ಮೈತ್ರೇಯ ಮುನಿಯು ಹೇಳುತ್ತಾನೆ:-ಅಯ್ಯಾ ವಿದುರನೆ ! ತರುವಾಯ ಆ ಋಷಿಗಳು ಮರಳಿ ಯೋಚಿಸಿ, ಪುತ್ರಹೀನನಾದ ವೇನರಾಜನ ಬಾಹುಗಳನ್ನು ಮಥಿಸಲು, ಅವುಗಳಿಂದ ಜವಳಿ ಮಕ್ಕಳು ಜನಿಸಿದರು ॥೧॥ ಆ ವೇದ ವ್ರತರಾದ ಬ್ರಾಹ್ಮಣರು ಆಯಮಳರು ಜನಿಸಿದುದನ್ನು ಕಂಡು, ಅವರನ್ನು ಭಗವದಂಶವನ್ನಾಗಿ ತಿಳಿದು ಅತ್ಯಂತ

---

‡ ಅಚೇತನಗಳಾದ ಸ್ತಂಭ ಮೊದಲಾದವುಗಳಲ್ಲಿ ಅವತರಿಸಿದ ಭಗವಂತನು ವೇನನ ಮೃತಕಳೇಬರದಲ್ಲಿ ಜನಿಸಿದುದು ಅಸಂಭವವಲ್ಲ.

* (೧) ವೀ. ಶ್ಲೋ॥ ರಾಘವತ್ವೇ ಭವೇತ್ಸೀತಾ ರುಕ್ಮಿಣೀ ಕೃಷ್ಣಜನ್ಮನಿ । ಅನ್ಯೇಷು ಚಾವತಾರೇಷು ವಿಷ್ಣೋ ರೇಷಾಽನಪಾಯಿನೀ ॥ ಲಕ್ಷ್ಮೀದೇವಿಯು ಎಲ್ಲಾ ಅವತಾರಗಳಲ್ಲಿಯೂ ಎಡಬಿಡದಿರುವಳು.

(೨) ವಿ. ಶ್ಲೋ॥ ಸಾಕ್ಷಾದೇವತು ಸಾಕ್ಷಾಚ್ಚ ಹರೇಸ್ಸನ್ನಿಧಿತಃ ಕ್ವಚಿತ್ । ಗೋಪ್ಯಾದರೂಪಾಭವತಿ ವಿಪರೀತಂ ನತುಕ್ವಚಿತ್ ॥ ಭಗವಂತನು ಕೃಷ್ಣಾದಿರೂಪದಿಂದವತರಿಸಿದಾಗ ಲಕ್ಷ್ಮಿಯು ರುಕ್ಮಿಣ್ಯಾದಿರೂಪದಿಂದ ಸಾಕ್ಷಾತ್ತಾಗಿ ಪತ್ನಿಯಾಗಿರುವಳು. ವಿಷ್ಣುವು ಇತರರಲ್ಲಿ ಅಂಶಾವತಾರವನ್ನು ಮಾಡುವಾಗ ರಮಾದೇವಿಯು ಗೋಪ್ಯವಾಗಿರುವಳು.

ಸ್ತ್ಯನಪಾಯಿನೀ||೩|| ಅತ್ರ ತು ಪ್ರಥಮೋ ರಾಜ್ಞಾಂ ಪುಮಾನ್ ಪ್ರಥಯಿತಾ
ಯಶಃ। ಪೃಥುರ್ನಾಮ ಮಹಾರಾಜೋ ಭವಿಷ್ಯತಿ ಪೃಥುಶ್ರವಾಃ ॥ ೪ ॥
ಇಯಂ ಚ ಸುದತೀ ದೇವೀ ಗುಣಭೂಷಣ ಭೂಷಣಾ। ಅರ್ಚಿರ್ನಾಮ
ವರಾರೋಹಾ ಪೃಥುಮೇವಾವರುಂಧತೀ ||೫|| ಏಷ ಸಾಕ್ಷಾದ್ಧರೇ ರಂ
ಶೋ ಜಾತೋ ಲೋಕರಿರಕ್ಷಯಾ। ಇಯಂ ಚ ತತ್ಪರಾ ಹಿ ಶ್ರೀ ರನುಜಜ್ಞೇಽ
ನಪಾಯಿನೀ ||೬|| ಪ್ರಶಂಸಂತಿಸ್ಮ ತಂ ವಿಪ್ರಾ ಗಂಧರ್ವಪ್ರವರಾ ಜಗುಃ। ಮು
ಮುಚುಃ ಸುಮನೋಧಾರಾಃ ಸಿದ್ಧಾ ನೃತ್ಯಂತಿ ಸ್ವಸ್ತ್ರಿಯಃ ||೭|| ಶಂಖತೂ

ಭಗವತಃ - ಭಗವಂತನಾದ, ವಿಷ್ಣೋಃ - ವಿಷ್ಣುವಿನ, ಭುವನಪಾಲಿನೀ - ಲೋಕವನ್ನಾಳುವ, ಕಲಾ- ಅಂಶವು, ಇಯಂ ಚ - ಈ ಹೆಣ್ಣು ಕೂಸು, ಪುರುಷಸ್ಯ - ಪರಮಾತ್ಮನನ್ನು, ಅನಪಾಯಿನೀ - ಎಡೆಬಿಡದ, ಲಕ್ಷ್ಮ್ಯಾಃ-ಲಕ್ಷ್ಮಿಯ, ಸಂಭೂತಿಃ - ಅವತಾರವು ॥ ೩ ॥ ಅತ್ರ ತು - ಇವರಲ್ಲಿ, ಪುಮಾನ್ - ಗಂಡು ಮಗುವು, ರಾಜ್ಞಾಂ - ರಾಜರಲ್ಲಿ, ಪ್ರಥಮಃ - ಮೊದಲನೆಯವನಾಗಿಯೂ, ಪೃಥುಶ್ರವಾಃ - ವೇದಶಾಸ್ತ್ರ ಗಳನ್ನು ಬಲ್ಲವನಾಗಿಯೂ, ಯಶಃ - ಕೀರ್ತಿಯನ್ನು, ಪ್ರಥಯಿತಾ - ಹರಡಿಸುತ್ತಾ, ಪೃಥುರ್ನಾಮ- ಪೃಥುವೆಂಬ, ಮಹಾರಾಜಃ-ಚಕ್ರವರ್ತಿಯು, ಭವಿಷ್ಯತಿ-ಆಗುವನು ॥ ೪ ॥ ಸುದತೀ - ಸುಲಿಹಲ್ಲುಳ್ಳ, ಇಯಂ ದೇವೀ - ಪ್ರಕಾಶಮಾನಳಾದ, ವರಾರೋಹಾ - ಈ ಹೆಣ್ಣುಮಗು, ಗುಣ...ಣಾ -ಸುಗುಣಗಳೆಂಬ ಆಭರಣಗಳಿಂದಲಂಕೃತೆಯಾಗಿ, ಅರ್ಚಿರ್ನಾಮ - ಅರ್ಚಿಯೆಂಬ ಹೆಸರಿನಿಂದ, ಪೃಥುಮೇವ - ಪೃಥುರಾ ಜನನ್ನೇ, ಅವರುಂಧತೀ-ಅನುಸರಿಸುವಳು ॥ ೫ ॥ ಏಷಃ-ಇವನು, ಸಾಕ್ಷಾತ್-ಪ್ರತ್ಯಕ್ಷವಾಗಿ, ಹರೇಃ- ಹರಿಯ, ಅಂಶಃ - ಕಳೆಯಾಗಿ, ಲೋಕರಿರಕ್ಷಯಾ - ಲೋಕವನ್ನು ಸಲಹಲೆಳಸಿ, ಜಾತಃ-ಹುಟ್ಟಿದನು, ಇಯಂ ಚ-ಈಕೆಯು, ತತ್ಪರಾ-ಆ ಹರಿಯಲ್ಲಿ ಆಸಕ್ತಳಾದ, ಅನಪಾಯಿನೀ-ಆತನನ್ನು ಬಿಟ್ಟಿರದ, ಶ್ರೀಃ- ಲಕ್ಷ್ಮಿಯೇ, ಜಜ್ಞೇ - ಹುಟ್ಟಿದಳು ॥ ೬ ॥ ತಂ- ಆ ಪೃಥುವನ್ನು, ವಿಪ್ರಾಃ - ಬ್ರಾಹ್ಮಣರು, ಪ್ರಶಂ ಸಂತಿಸ್ಮ-ಹೊಗಳಿದರು, ಗಂಧರ್ವಪ್ರವರಾಃ-ಗಂಧರ್ವಶ್ರೇಷ್ಠರು, ಜಗುಃ - ಗಾನಮಾಡಿದರು, ಸಿದ್ಧಾಃ- ಸಿದ್ಧರು, ಸುಮನೋಧಾರಾಃ- ಹೂಮಳೆಯನ್ನು, ಮುಮುಚುಃ - ಕರೆದರು, ಸ್ವಸ್ತ್ರಿಯಃ - ಅಪ್ಸರಸ್ತ್ರೀ ಯರು, ನೃತ್ಯಂತಿಸ್ಮ-ಕುಣಿದರು ॥ ೭ ॥ ಶಂಖ...ದ್ಯಾ-ಶಂಖ, ತೂರ್ಯ, ಮೃದಂಗ ಮೊದಲಾದುವು,

ಸಂತೋಷಗೊಂಡು ಹೇಳಿದರು ||೩|| ಈ ಗಂಡು ಮಗುವು ಲೋಕವನ್ನು ಸಲಹುವುದ ಕ್ಕಾಗಿ, ಭಗವಂತನಾದ ವಿಷ್ಣುವಿನ ಪಾಲನಾಂಶದಿಂದವತರಿಸಿರುವನು. ಈ ಹೆಣ್ಣು ಮ ಗುವು ನಿರಂತರವೂ ಪರಮಾತ್ಮನನ್ನೆಡಬಿಡದ ಲಕ್ಷ್ಮಿಯ ರೂಪದಿಂದ ಜನಿಸಿರುವಳು||೩|| ಇವರಲ್ಲಿ ಗಂಡು ಮಗುವು ಬಹುಶ್ರುತನೂ, ಆದಿರಾಜನೂ, ಆಗಿ ಪೃಥುವೆಂಬ ಹೆಸರಿನಿಂದ ತನ್ನ ಕೀರ್ತಿಯನ್ನು ವಿಸ್ತರಿಸುವನು ||೪|| ದಿವ್ಯಪ್ರಕಾಶವತಿಯಾದ ಈಕೆಯೂ, ಗುಣ ಭೂಷಣೆಯಾಗಿ ಅರ್ಚಿಯೆಂಬ ಹೆಸರಿಂದ ಪೃಥುರಾಜನಿಗೆ ಪಟ್ಟಮಹಿಷಿಯಾಗುವಳು ||೫|| ಈತನು ಲೋಕರಕ್ಷಣೆಗಾಗಿ ಅವತರಿಸಿರುವ ಸಾಕ್ಷಾತ್ ಭಗವಂತನ ಅಂಶವೇ ಸರಿ. ಭಗ ವತ್ಪರಾಯಣೆಯಾಗಿ ಆತನನ್ನೆಡಬಿಡದಿರುವ ಲಕ್ಷ್ಮಿಯೇ ಇಂತು ಅವತರಿಸಿರುವಳು. ದಿಟ ||೬|| ಎಂಬುದಾಗಿ ಅಲ್ಲಿರುವ ಬ್ರಾಹ್ಮಣರೆಲ್ಲರೂ ಆ ಪೃಥುವನ್ನು ಕೊಂಡಾಡಿದರು. ಗಂ ಧರ್ವರಾಜರು ಗಾನಮಾಡಿದರು. ಸಿದ್ಧರು ಹೂಮಳೆಯನ್ನು ಕರೆದರು. ಅಪ್ಸರಸ್ತ್ರೀಯ

ರ್ಯಮೃದಂಗಾದ್ಯಾ ನೇದುರ್ದುಂದುಭಯೋ ದಿವಿ । ತತ್ರ ಸರ್ವ ಉಪಾಜ
ಗ್ಮುರ್ದೇವರ್ಷಿಪಿತೃ * ಣಾಂ ಗಣಾಃ ||೮|| ಬ್ರಹ್ಮಾ ಜಗದ್ಗುರುರ್ದೇವ
ಉಪಸೃತ್ಯ ಸುರೇಶ್ವರೈಃ । ವೈನ್ಯಸ್ಯ ದಕ್ಷಿಣೇ ಹಸ್ತೇ ದೃಷ್ಟ್ವಾ ಚಿಹ್ನಂ
ಗದಾಭೃತಃ||೯||ಪಾದಯೋರರವಿಂದಂಚ ವೈನ್ಯಂ ಮೇನೇಹರೇಃ ಕಳಾಂ ।
ಯಸ್ಯಾಽಪ್ರತಿಹತಂ ಚಕ್ರಮಂಶ ಸ್ಸಪರಮೇಷ್ಠಿನಃ ||೧೦|| ತಸ್ಯಾಽಭಿಷೇ
ಕ ಆರಬ್ಧೇ ಬ್ರಾಹ್ಮಣೈರ್ಬ್ರಹ್ಮವಾದಿಭಿಃ।ಆಭಿಷೇಚನಿ ಕಾನ್ಯಸ್ಮೈ ಆಜ
ಹ್ರು ಸ್ಸರ್ವತೋ ಜನಾಃ||೧೧||ಸರಿತ್ಸಮುದ್ರಾ ಗಿರಯೋ ನಗಾಗಾವಃ ಖಗಾ

---

ದುಂದುಭಯಃ - ದುಂದುಭಿ ವಾದ್ಯಗಳು, ದಿವಿ - ಅಂತರಿಕ್ಷದಲ್ಲಿ, ನೇದುಃ - ಮೊಳಗಿದುವು, ತತ್ರ - ಅಲ್ಲಿಗೆ, ಸರ್ವೇ - ಎಲ್ಲಾ, ದೇವ ..ಣಾಂ - ದೇವತೆಗಳು, ಋಷಿಗಳು, ಪಿತೃಗಳು ಇವರ, ಗಣಾಃ - ಸಮೂಹಗಳು, ಉಪಾಜಗ್ಮುಃ - ಬಂದುವು || ೮ || ಜಗದ್ಗುರುಃ - ಜಗನ್ನಾಯಕನಾದ, ದೇವಃ- ಸ್ವಪ್ರಕಾಶನಾದ, ಬ್ರಹ್ಮಾ-ಬ್ರಹ್ಮನು, ಸುರೇಶ್ವರೈಃ- ದೇವತೆಗಳೊಡನೆ, ಉಪಸೃತ್ಯ - ಬಂದು, ವೈನ್ಯಸ್ಯ-ವೇನನ ಮಗನಾದ ಪೃಥುವಿನ, ದಕ್ಷಿಣೇಹಸ್ತೆ-ಬಲಗೈಯಲ್ಲಿ, ಗದಾಭೃತಃ-ವಿಷ್ಣುವಿನ, ಚಿಹ್ನಂ-ಗುರುತಾದ ಚಕ್ರವನ್ನು, ಪಾದಯೋಃ-ಅಡಿಗಳಲ್ಲಿ, ಅರವಿಂದಂಚ - ಪದ್ಮರೇಖೆಯನ್ನೂ, ದೃಷ್ಟ್ವಾ-ಕಂಡು, ವೈನ್ಯಂ-ಪೃಥುವನ್ನು, ಹರೇಃ-ವಿಷ್ಣುವಿನ, ಕಲಾಂ-ಅಂಶವನ್ನಾಗಿ, ಮೇನೇ - ತಿಳಿದನು, ಅಪ್ರತಿಹತಂ-ರೇಖಾಂತರಗಳಿಂದ ಮಿಶ್ರವಾಗದ, ಚಕ್ರಂ- ಚಕ್ರರೇಖೆಯು, ಯಸ್ಯ-ಯಾರಿಗೆ, ಚಿಹ್ನಂ-ಗುರುತಾಗಿರುವುದೋ, ಸಃ-ಅವನು, ಪರಮೇಷ್ಠಿನಃ-ಭಗವಂತನ, ಅಂಶಃ - ಅಂಶವು || ೧೦ || ಬ್ರಹ್ಮವಾದಿಭಿಃ - ವೇದಪಾಠಕರಾದ, ಬ್ರಾಹ್ಮಣೈಃ- ಬ್ರಾಹ್ಮಣರಿಂದ, ತಸ್ಯ - ಆ ಪೃಥುವಿಗೆ, ಅಭಿಷೇಕೇ - ಪಟ್ಟಾಭಿಷೇಕೋತ್ಸವವು, ಆರಬ್ಧೇ-ಪ್ರಾರಂಭಿಸಲ್ಪಡಲು, ಅಸ್ಮೈ - ಇವನಿಗಾಗಿ, ಸರ್ವತಃ - ಎಲ್ಲಾ ಕಡೆಗಳಿಂದಲೂ, ಆಭಿಷೇಚನಿಕಾನಿ-ಅಭಿಷೇಕ ಸಂಭಾರಗಳನ್ನು, ಆಜಹ್ರುಃ - ತಂದರು || ೧೧ || ಸರಿ....ದ್ರಾಃ-ನದಿಗಳು, ಸಮುದ್ರಗಳು ಗಿರಯಃ-ಬೆಟ್ಟಗಳು, ನಗಾಃ-ವೃಕ್ಷಗಳು. ಗಾವಃ-ಗೋವುಗಳು, ಖಗಾಃ - ಪಕ್ಷಿಗಳು, ಮೃಗಾಃ-

---

ರು ನಾಟ್ಯವಾಡಿದರು ||೭|| ಅಂತರಿಕ್ಷದಲ್ಲಿ ಶಂಖ, ಮೃದಂಗ, ಮೊದಲಾದವುಗಳೂ,ದುಂದುಭಿಗಳೂ ಮೊಳಗಿದುವು. ದೇವತೆಗಳು, ಪಿತೃಗಳು ಮೊದಲಾದ ದೇವಗಣಗಳೆಲ್ಲ ಅಲ್ಲಿಗೆ ಬಂದುವು ||೮|| ಜಗದ್ಗುರುವಾದ ಚತುರ್ಮುಖನು ಇಂದ್ರಾದಿಗಳೊಡಗೂಡಿ ಅಲ್ಲಿಗೆಬಂದು, ವೇನನಮಗನಾದ ಪೃಥುವಿನ ಬಲಗೈಯಲ್ಲಿರುವವಿಷ್ಣುಚಿಹ್ನವಾದ ಚಕ್ರರೇಖೆಯನ್ನೂ, ಪಾದಗಳಲ್ಲಿರುವ ಪದ್ಮರೇಖೆಯನ್ನೂ ಕಂಡು, ಆತನನ್ನು ಭಗವದಂಶವೆಂದು ತಿಳಿದುಕೊಂಡನು. ಯಾವನ ಹಸ್ತದಲ್ಲಿ ಮತ್ತಾವರೇಖೆಗಳಿಂದಲೂ ಮಿಶ್ರವಾಗದ ಚಕ್ರರೇಖೆಯು ಕಾಣುವುದೋ, ಅವನು ಭಗವಂತನ ಅಂಶವೆಂಬುದರಲ್ಲಿ ಸಂಶಯವಿಲ್ಲ ||೧೦|| ಇಾತು ಅದ್ಭುತ ಮಹಿಮನಾದ ಪೃಥುರಾಜನಿಗೆ ಪಟ್ಟಾಭಿಷೇಕೋತ್ಸವವನ್ನು ಮಾಡಬೇಕೆಂದು ವೇದವಾದಿಗಳಾದಬ್ರಾಹ್ಮಣೋತ್ತಮರು ಯತ್ನಿಸಲು, ಸಕಲದಿಕ್ಕುಗಳಲ್ಲಿರುವ ಜನರು ಆ ಪಟ್ಟಾಭಿಷೇಕಕ್ಕೆಬೇಕಾದ ಸಾಮಗ್ರಿಗಳನ್ನು ತಂದೊಪ್ಪಿಸಿದರು ||೧೧|| ಮನುಷ್ಯರು ಮಾತ್ರವೇ ಅಲ್ಲ. ನದಿಗಳು, ಸಮುದ್ರಗಳು, ಪರ್ವತಗಳು, ಸರ್ಪರಾಜರು, ಗೋವುಗಳು, ಹಕ್ಕಿಗಳು, ಮೃಗಗಳು, ಅಂತರಿಕ್ಷವು ಅಥವಾ ಸ್ವರ್ಗಲೋಕವು, ಭೂಮಿಯು ಇವು ಮೊದಲಾದ ಸಕಲ

ಮೃಗಾಃ। ದ್ಯೌಃ ಕ್ಷಿತಿ ಸ್ಸರ್ವಭೂತಾನಿ ಸಮಾಜಹ್ರು ರುಪಾಯನಂ॥೧೨॥
ಸೋಽಭಿಷಿಕ್ತೋ ಮಹಾರಾಜ ಸ್ಸುವಾಸಾ ಸ್ಸಾಧ್ವಲಂಕೃತಃ । ಪತ್ನ್ಯಾಽ
ರ್ಚಿಷಾಽಲಂಕೃತಯಾ ವಿರೇಜೇಽಗ್ನಿರಿವಾಽಪರಃ ॥೧೩॥ ತಸ್ಮೈ ಜಹಾರ
ಧನದೋ ಹೈಮಂ ವೀರವರಾಸನಂ। ವರುಣ ಸ್ಸಲಿಲಸ್ರಾವ ಮಾತಪತ್ರಂ ಶಶಿ
ಪ್ರಭಂ ॥೧೪॥ ವಾಯುಶ್ಚ ವಾಲವ್ಯಜನೇ ಧರ್ಮಃ ಕೀರ್ತಿಮಯೀಂ ಸ್ರಜಂ ।
ಇಂದ್ರಃ ಕಿರೀಟ ಮುತ್ಕೃಷ್ಟಂ ದಂಡಂ ಸಂಯಮನಂ ಯಮಃ ॥೧೫॥ ಬ್ರ
ಹ್ಮಾ ಬ್ರಹ್ಮಮಯಂ ವರ್ಮ ಭಾರತೀ ಹಾರ ಮುತ್ತಮಂ । ಹರಿ ಸ್ಸುದರ್ಶ

ಮೃಗಗಳು, ದ್ಯೌಃ-ಅಂತರಿಕ್ಷವು, ಕ್ಷಿತಿಃ- ಭೂಮಿಯು, ಸರ್ವಭೂತಾನಿ-ಎಲ್ಲಾ ಭೂತಗಳು, ಉಪಾಯನಂ-ಕಾಣಿಕೆಯನ್ನು, ಸಮಾಜಹ್ರುಃ-ತಂದುವು ॥೧೨॥

ಸುವಾಸಾಃ-ಉತ್ತಮವಸ್ತ್ರಗಳುಳ್ಳವನಾಗಿ, ಸಾಧು-ಚೆನ್ನಾಗಿ, ಅಲಂಕೃತಃ-ಅಲಂಕಾರಮಾಡಿಕೊಂಡು, ಅಲಂಕೃತಯಾ-ಅಲಂಕಾರವನ್ನು ಪಡೆದ, ಅರ್ಚಿಷಾ- ಹೆಂಡತಿಯೊಡನೆ, ಅಭಿಷಿಕ್ತಃ-ಪಟ್ಟಾಭಿಷಿಕ್ತನಾದ ಸಮಹಾರಾಜಃ - ಆ ಪೃಥುರಾಜನು, ಅಪರಃ ಅಗ್ನಿರಿವ - ಬೇರೆ ಅಗ್ನಿಯೋಪಾದಿಯಲ್ಲಿ, ವಿರೇಜೇ - ಪ್ರಕಾಶಿಸಿದನು ॥ ೧೩ ॥ ಹೇವೀರ - ಎಲೈ ಶೂರನಾದ ವಿದುರನೆ ! ತಸ್ಮೈ - ಆ ಪೃಥುವಿಗೆ, ಧನದಃ - ಕುಬೇರನು, ಹೈಮಂ-ಚಿನ್ನದ, ವರಾಸನಂ - ಸಿಂಹಾಸನವನ್ನು, ಜಹಾರ-ಒಪ್ಪಿಸಿದನು, ವರುಣಃ-ವರುಣನು ಸಲಿಲಸ್ರಾವಂ - ಜಲವನ್ನು ಸುರಿಯಿಸುವ, ಶಶಿಪ್ರಭಂ - ಚಂದ್ರನಂತೆ ಬಿಳಿದಾದ, ಆತಪತ್ರಂ - ಬೆಳುಗೊಡೆಯನ್ನೂ, ವಾಯುಃ - ವಾಯುವು, ವಾಲವ್ಯಜನೇ - ಎರಡು ಚಾಮರಗಳನ್ನೂ, ಧರ್ಮಃ ಧರ್ಮಪುರುಷನು, ಕೀರ್ತಿಮಯೀಂ - ಕೀರ್ತಿರೂಪವಾದ, ಸ್ರಜಂ - ಮಾಲಿಕೆಯನ್ನೂ, ಇಂದ್ರಃ-ಇಂದ್ರನು, ಉತ್ಕೃಷ್ಟಂ - ಉತ್ತಮವಾದ, ಕಿರೀಟಂ - ಕಿರೀಟವನ್ನೂ, ಯಮಃ - ಯಮನು, ಸಂಯಮನಂ-ದುಷ್ಟರನ್ನು ದಂಡಿಸುವ, ದಂಡಂ - ದಂಡವನ್ನೂ, ಬ್ರಹ್ಮಾ - ಬ್ರಹ್ಮನು, ಬ್ರಹ್ಮಮಯಂ - ವೇದಮಯವಾದ, ವರ್ಮ-ಕವಚವನ್ನೂ, ಭಾರತೀ - ಸರಸ್ವತಿಯು, ಉತ್ತಮಂ - ಉತ್ತಮವಾದ, ಹಾರಂ-ಹಾರವನ್ನೂ, ಹರಿಃ - ವಿಷ್ಣುವು, ಸುದರ್ಶನಂ ಚಕ್ರಂ - ಸುದರ್ಶನವೆಂಬ ಚಕ್ರವನ್ನೂ, ತತ್ಪತ್ನೀ-ಆತನಪತ್ನಿಯಾದ ಲಕ್ಷ್ಮಿಯು, ಅವ್ಯಾಹತಾಂ-ಸ್ಥಿರವಾದ, ಶ್ರಿಯಂ-ಸಂಪತ್ತನ್ನೂ, ರುದ್ರಃ - ರುದ್ರನು, ದಶಚಂದ್ರಂ - ಹತ್ತು ಚಂದ್ರಾಕಾರ ಬಿಂಬಗಳುಳ್ಳ, ಅಸಿಂ - ಕತ್ತಿಯನ್ನೂ, ತಥಾ-ಹಾಗೆಯೇ, ಅಂಬಿಕಾ -

ಭೂತಗಳು, ಕಿರೀಟೋತ್ಸವದಲ್ಲಿ ಆ ರಾಜನಿಗೆ ಕಾಣಿಕೆಗಳನ್ನು ಸಮರ್ಪಿಸಿದರು ॥೧೨॥ ವಸ್ತ್ರಾಭರಣಗಳಿಂದ ಅಲಂಕೃತನಾದ ಆ ಮಹಾರಾಜನು, ಅಲಂಕೃತಳಾದ ಅರ್ಚಿಯೆಂಬ ಪತ್ನಿಯೊಡನೆ ಪಟ್ಟಾಭಿಷಿಕ್ತನಾಗಿ, ಎರಡನೆಯ ಅಗ್ನಿಯಂತೆ ದಿವ್ಯತೇಜಸ್ಸಿನಿಂದ ಮೆರೆದನು॥೧೩॥ ಅಯ್ಯಾ ವೀರನಾದ ವಿದುರನೆ ! ಆಗ ಕುಬೇರನು ಆರಾಜನಿಗೆ ಸುವರ್ಣಮಯವಾದ ಸಿಂಹಾಸನವನ್ನು ಕಾಣಿಕೆಗೊಟ್ಟನು. ವರುಣನು ಚಂದ್ರಮಂಡಲದಂತೆ ಪಾಂಡುರವಾಗಿ ನೀರುಹನಿಗಳನ್ನು ಸುರಿಯಿಸುವ ಬೆಳುಗೊಡೆಯನ್ನಿತ್ತನು. ॥೧೪॥ ವಾಯುದೇವನು ಎರಡು ದಿವ್ಯಚಾಮರಗಳನ್ನೊಪ್ಪಿಸಿದನು. ಧರ್ಮಪುರುಷನು ಕೀರ್ತಿರೂಪವಾದ ಒಂದುಹೂಮಾಲೆಯನ್ನು ಸಮರ್ಪಿಸಿದನು. ಇಂದ್ರನು ಉತ್ತಮೋತ್ತಮವಾದ ಕಿರೀಟವನ್ನು ಉಪಾಯನಮಾಡಿದನು ಯಮನು ದುಷ್ಟರನ್ನು ನಿಗ್ರಹಿಸುವ ದಂಡವನ್ನು ಸಮ್ಮಾನಮಾಡಿದನು ॥೧೫॥ ಬ್ರಹ್ಮದೇವನು ವೇದಶಾಸ್ತ್ರಗಳನ್ನು ಪ್ರಚುರಗೊಳಿಸುವ ಸಾಮರ್ಥ್ಯವುಳ್ಳ ಕವಚವನ್ನು ಬಹುಮಾನವಿತ್ತನು. ಆತನ ಪತ್ನಿಯಾದ ಭಾರತೀದೇವಿಯು ಉತ್ತಮವಾದ ರತ್ನಹಾರವನ್ನಿತ್ತಳು. ಹರಿಯು ಸುದರ್ಶನವೆಂಬ ಚಕ್ರವನ್ನು ಬಹುಮತಿಯಿತ್ತನು.

ನಂ ಚಕ್ರಂ ತತ್ಪತ್ನ್ಯವ್ಯಾಹತಾಂ ಶ್ರಿಯಂ ॥೧೬॥ ದಶಚಂದ್ರ ಮಸಿಂ ರುದ್ರ ಶ್ಶತಚಂದ್ರಾಂ ತಥಾಂಬಿಕಾ । ಸೋಮೋಽಮೃತಮಯಾ ನಶ್ವಾಂ ಸ್ತ್ವಷ್ಟಾ ರೂಪಾಶ್ರಯಂ ರಥಂ ॥೧೭॥ ಅಗ್ನಿರಾಜಗವಂ ಚಾಪಂ ಸೂರ್ಯೋ ರಶ್ಮಿಮಯಾ ನಿಷೂನ್ । ಭೂಃಪಾದುಕೇ ಯೋಗಮಯ್ಯೌ ದ್ಯೌಃ ಪುಷ್ಪಾವಳಿಮನ್ವಹಂ ॥೧೮॥ ನಾಟ್ಯಂ ಸುಗೀತಂ ವಾದಿತ್ರ ಮಂತರ್ಧಾನಂಚ ಖೇಚರಾಃ । ಋಷಯ ಶ್ಚಾಶಿಷ ಸ್ಸತ್ಯಾ ಸಮುದ್ರ ಶ್ಶಂಖ ಮಾತ್ಮಜಂ ॥೧೯॥ ಸಿಂಧವಃ ಪರ್ವತಾ ನದ್ಯೋ ರಥವೀಧೀ ರ್ಮಹಾತ್ಮನಃ । ಸೂತೋಽಥ ಮಾಗ

ಪಾರ್ವತಿಯು, ಶತಚಂದ್ರಂ - ನೂರುಚಂದ್ರಾಕಾರ ಬಿಂಬಗಳುಳ್ಳ ಖೇಡ್ಯವನ್ನೂ, ಸೋಮಃ - ಚಂದ್ರನು, ಅಮೃತಮಯಾನ್ - ಅಮೃತವಿಕಾರಗಳಾದ, ಅಶ್ವಾನ್ - ಕುದುರೆಗಳನ್ನೂ, ತ್ವಷ್ಟಾ - ತ್ವಷ್ಟೃಪ್ರಜಾಪತಿಯು, ರೂಪಾಶ್ರಯಾಂ - ರೂಪವುಳ್ಳ, ರಥಂ - ತೇರನ್ನೂ, ಅಗ್ನಿಃ-ಅಗ್ನಿಯು, ಆಜಗವಂ-ಮೇಕೆ, ಗೋವು, ಇವುಗಳ ಕೊಂಬುಗಳಿಂದ ಮಾಡಲ್ಪಟ್ಟ, ಚಾಪಂ-ಬಿಲ್ಲನ್ನೂ, ಸೂರ್ಯಃ- ಸೂರ್ಯನು, ರಶ್ಮಿಮಯಾನ್- ಕಿರಣರೂಪಗಳಾದ, ಇಷೂನ್ - ಬಾಣಗಳನ್ನು, ಭೂಃ-ಭೂಮಿಯು, ಯೋಗಮಯ್ಯೌ-ಯೋಗಮಯಗಳಾದ, ಪಾದುಕೇ-ಪಾವುಗೆಗಳನ್ನೂ, ದ್ಯೌಃ - ಅಂತರಿಕ್ಷವು, ಅನ್ವಹಂ-ನಿತ್ಯವೂ ಪುಷ್ಪಾವಳಿಂ-ಪೂಜೆಗಾಗಿ ಹೂಗಳನ್ನೂ, ಆಜಹಾರ - ಸಮರ್ಪಿಸಿದರು ॥೧೮॥ ಖೇಚರಾಃ-ಸಿದ್ಧಸಾಧ್ಯಗಂಧರ್ವರು, ನಾಟ್ಯಂ-ನಾಟ್ಯವನ್ನೂ, ಸಂಗೀತಂ-ಸಂಗೀತವನ್ನೂ, ವಾದಿತ್ರಂ-ವಾದ್ಯಗಳನ್ನೂ, ಋಷಯಃ-ಋಷಿಗಳು, ಸತ್ಯಾಃ-ಯಥಾರ್ಥಗಳಾದ, ಆಶಿಷಃ-ಆಶೀರ್ವಾದಗಳನ್ನೂ, ಸಮುದ್ರಃ - ಸಮುದ್ರರಾಜನು, ಆತ್ಮಜಂ-ತನ್ನಲ್ಲಿರುವ, ಶಂಖಂ - ಶಂಖವನ್ನೂ, ಆಜಹ್ರುಃ - ಒಪ್ಪಿಸಿದರು ॥೧೯॥ ಸಿಂಧವಃ-ಸಮುದ್ರಗಳು, ಪರ್ವತಾಃ-ಬೆಟ್ಟಗಳು, ನದ್ಯಃ-ನದಿಗಳು, ಮಹಾತ್ಮನಃ-ಪೃಥುವಿಗೆ, ರಥವೀಧೀಃ-ರಥಮಾರ್ಗಗಳನ್ನು, ಕೊಟ್ಟುವು, ಅಥ-ಬಳಿಕ, ಸೂತಃ-ಸೂತನು, ಮಾಗಧಃ-ಮಾಗಧನು, ವಂದೀ-ವಂದಿಯು, ತಂ-ಅವನನ್ನು

ಆತನ ಮಡದಿಯಾದ ರಮಾದೇವಿಯು ಶಾಶ್ವತವಾದ ಐಶ್ವರ್ಯವನ್ನು ಅನುಗ್ರಹಿಸಿದಳು ॥೧೬॥ ರುದ್ರನು ಚಂದ್ರಮಂಡಲದಂತಿರುವ ಹತ್ತು ಬಿಂಬಗಳುಳ್ಳ ಕತ್ತಿಯನ್ನು ಕೊಟ್ಟನು. ಆತನ ಹೆಂಡತಿಯಾದ ಪಾರ್ವತಿಯು ಚಂದ್ರಾಕಾರಗಳಾದ ನೂರು ಬಿಂಬಗಳುಳ್ಳ ಖೇಡ್ಯವೆಂಬ ಚರ್ಮವನ್ನು ಬಹುಮಾನವಿತ್ತಳು. ಚಂದ್ರನು ಅಮೃತಮಯಗಳಾದ ಕುದುರೆಗಳನ್ನೂ ಅತಿಸುಂದರವಾದ ರಥವನ್ನೂ ಕಾಣಿಕೆಗೊಟ್ಟನು ॥೧೭॥ ಅಗ್ನಿಯು ಮೇಕೆಯ ಕೊಂಬಿನಿಂದಲೂ, ಗೋವಿನ ಕೊಂಬಿನಿಂದಲೂ, ಮಾಡಲ್ಪಟ್ಟಿರುವ ಬಿಲ್ಲನ್ನು ಸಮರ್ಪಿಸಿದನು. ಸೂರ್ಯನು ಕಿರಣರೂಪಗಳಾದ ಬಾಣಗಳನ್ನು ಕೊಟ್ಟನು. ಭೂದೇವಿಯು ಬೇಕಾದೆಡೆಗೆ ಒಯ್ಯುವ ಸಾಮರ್ಥ್ಯವುಳ್ಳ ಪಾದುಕೆಗಳನ್ನಿತ್ತಳು. ಅಂತರಿಕ್ಷವು ಪ್ರತಿದಿನವೂ ಪೂಜಾರ್ಹಗಳಾದ ಪುಷ್ಪಗಳನ್ನು ತಂದೊಪ್ಪಿಸುತ್ತಿದ್ದನು. ॥೧೮॥ ಸಿದ್ಧರು, ಸಾಧ್ಯರು ಗಂಧರ್ವರು ಮೊದಲಾದ ದೇವಯೋನಿಗಳು, ನಾಟ್ಯ, ಸಂಗೀತ, ವಾದ್ಯಗಳಲ್ಲಿ ಜಾಣ್ಮೆಯನ್ನೂ, ಅಂತರ್ಧಾನವಿದ್ಯೆಯನ್ನೂ, ಅನುಗ್ರಹಿಸಿದರು. ಮಹರ್ಷಿಗಳು ಯಥಾರ್ಥಗಳಾದ ಆಶೀರ್ವಾದಗಳನ್ನು ಮಾಡಿದರು. ಸಮುದ್ರರಾಜನು ತನ್ನಲ್ಲಿ ಜನಿಸಿದ ಶಂಖವನ್ನಿತ್ತನು ॥೧೯॥ ಸಾಗರಗಳು, ಪರ್ವತಗಳು, ನದಿಗಳು, ಆತನರಥಕ್ಕೆ ತಮ್ಮಲ್ಲಿ ದಾರಿಯನ್ನಿ

ಧೋ ವಂದಿನಸ್ತಂ ಸ್ತೋತುಮುಪತಸ್ಥಿರೇ ॥೨೦॥ ಸ್ತಾವಕಾಂಸ್ತಾನಭಿ
ಪ್ರೇತ್ಯ ಪೃಥುರ್ವೈನ್ಯಃ ಪ್ರತಾಪವಾನ್ । ಮೇಘನಿರ್ಹ್ರಾದಯಾ ವಾಚಾ
ಪ್ರಹಸನ್ನಿದಮಬ್ರವೀತ್ ॥೨೧॥ ಪೃಥುಃ ॥ ಭೋಃಸೂತ ! ಹೇಮಾಗಧ !
ಸೌಮ್ಯ ವಂದಿನ್ ! ಲೋಕೇಽಧುನಾಽಸ್ಪಷ್ಟಗುಣಸ್ಯ ಮೇಸ್ಯಾತ್। ಕಿಮಾ
ಶ್ರಯೋ ಽ ಮೇ ಸ್ತವ ಏಷ ಯೋಜ್ಯತಾಂ ಮಾ ಮಯ್ಯಭೂವನ್ ವಿತಥಾ
ಗಿರೋ ವಃ ॥೨೨॥ ತಸ್ಮಾತ್ಪರೋಕ್ಷೇ ಽಸ್ಮದುಪಶ್ರುತಾ ನ್ಯಲಂ ಕರಿ
ಷ್ಯಥ ಸ್ತೋತ್ರಮಪೀಚ್ಯವಾಚಃ ! । ಸತ್ಯುತ್ತಮಶ್ಲೋಕ ಗುಣಾನುವಾ

ಸ್ತೋತುಂ - ಸ್ತುತಿಸುವುದಕ್ಕೆ, ಉಪತಸ್ಥಿರೇ - ತೊಡಗಿದರು ॥ ೨೦ ॥ ಪ್ರತಾಪವಾನ್ - ಶೂರನಾದ
ವೈನ್ಯಃ-ವೇನನ ಮಗನಾದ, ಪೃಥುಃ-ಪೃಥುವು, ತಾನ್-ಅವರನ್ನು, ಸ್ತಾವಕಾನ್-ಹೊಗಳ ಭಟರನ್ನಾಗಿ,
ಅಭಿಪ್ರೇತ್ಯ-ತಿಳಿದು, ಪ್ರಹಸನ್ನಿವ-ನಗುವಂತೆ, ಮೇಘನಿರ್ಹ್ರಾದಯಾ- ಮೇಘದಂತೆ ಶಬ್ದವುಳ್ಳ, ವಾಚಾ-
ವಾಕ್ಕಿನಿಂದ, ಇದಂ - ಈಮಾತನ್ನು, ಅಬ್ರವೀತ್ - ಹೇಳಿದನು ॥ ೨೧ ॥ ಭೋಸೂತ-ಎಲೈ ಸೂತನೆ!
ಹೇಮಾಗಧ - ಎಲೈ ಮಾಗಧನೆ! ಸೌಮ್ಯ-ಸೌಮ್ಯನಾದ, ವಂದಿನ್ - ಎಲೈ ವಂದಿಯೆ! ಅಧುನಾ-ಈಗ
ಲೋಕೇ - ಲೋಕದಲ್ಲಿ, ಅಸ್ಪಷ್ಟಗುಣಸ್ಯ - ಗುಣಗಳನ್ನು ಪ್ರಕಾಶಗೊಳಿಸದ, ಮೇ-ನನ್ನ, ಸ್ತವಃ-
ಸ್ತುತಿಯು, ಕಿಮಾಶ್ರಯಃ - ಯಾವುದನ್ನಾಶ್ರಯಿಸತಕ್ಕದು, ಸ್ಯಾತ್-ಆದೀತು ? ಏಷಃ-ಈ ಸ್ತುತಿಯು,
ಅಮೇ-ಮತ್ತಾವನಿಗಾದರೂ, ಯೋಜ್ಯತಾಂ-ಸೇರಿಸಲ್ಪಡಲಿ, ವಃ-ನಿಮ್ಮ, ಗಿರಃ - ವಾಕ್ಯಗಳು, ಮಯಿ -
ನನ್ನಲ್ಲಿ, ವಿತಥಾಃ -ವ್ಯರ್ಥಗಳು, ಮಾಭೂವನ್-ಆಗಬೇಡ ॥೨೨॥ ತಸ್ಮಾತ್-ಆದುದರಿಂದ, ಹೇಅಪೀಚ್ಯ
ವಾಚಃ-ಸವಿನುಡಿಗಳುಳ್ಳ ಸೂತಾದಿಗಳಿರಾ! ಪರೋಕ್ಷೇ - ಕಾಲಾಂತರದಲ್ಲಿ, ಸ್ತೋತ್ರಾ - ಪ್ರತಿಸ್ತುತಿಯು
ಳ್ಳಿಯೂ, ಅಸ್ಮ...ನಿ-ನಮ್ಮ ಯಶಸ್ಸುಗಳನ್ನು, ಅಲಂ- ಬಹಳವಾಗಿ, ಕರಿಷ್ಯಥ-ಮಾಡುವಿರಿ, ಸಭ್ಯಾಃ
ಸದಸ್ಯರ, ಉತ್ತ..ದೇ - ಭಗವಂತನ ಗುಣವರ್ಣನೆಯು, ಸತಿ - ಮಾಡತಕ್ಕುದಾಗಿರುವಾಗ, ಜುಗು
ಪ್ಸಿತಂ-ಗುಣಹೀನನನ್ನು, ನಸ್ತವಯಂತಿ-ಹೊಗಳಿಸುವುದಿಲ್ಲ ॥ ೨೩ ॥
ಮಹದ್ಗುಣಾನ್ - ಮಹಾತ್ಮರ ಗುಣಗಳನ್ನು, ಆತ್ಮನಿ-ತನ್ನಲ್ಲಿ, ಕರ್ತುಂ - ಸಂಪಾದಿಸುವುದಕ್ಕೆ

ತ್ತ್ವವು. ಬಳಿಕ ಸೂತಮಾಗಧವಂದಿಗಳು ಆತನನ್ನು ಹೊಗಳತೊಡಗಿದರು ॥೨೦॥ ಆಗ ಮಹಾ
ಶೂರನೂ ವೇನಪುತ್ರನೂ ಆದ ಪೃಥುರಾಜನು "ಅವರು ತನ್ನನ್ನು ಹೊಗಳುವರು" ಎಂದು
ತಿಳಿದು ನಸುನಗುತ್ತಾ ಮೇಘದಂತೆ ಗಂಭೀರವಾದ ಧ್ವನಿಯುಳ್ಳ ವಾಕ್ಕಿನಿಂದ ಅವರಿಗಿಂತೆಂ
ದನು ॥೨೧॥ ಎಲೈ ಸೂತಮಾಗಧ ವಂದಿಗಳಿರಾ ! ಲೋಕದಲ್ಲಿ ಪ್ರಸಿದ್ಧನಾದವನ ಗುಣಗಳ
ನ್ನು ಹೊಗಳದಲ್ಲಿ ನ್ಯಾಯವಾಗಿದ್ದೀತು. ಜಗತ್ತಿನಲ್ಲಿ ಯಾರಿಗೂ ತಿಳಿಯದಿರುವ
ನನ್ನಲ್ಲಿ ಯಾವಗುಣವನ್ನು ಹಿಡಿದು ಹೊಗಳುವಿರಿ ? ನನ್ನನ್ನು ಹೊಗಳ ನಿಮ್ಮ ನುಡಿಗಳನ್ನು
ಸಟೆಮಾಡಿಕೊಳ್ಳಬೇಡಿರಿ. ಹೊಗಳದೆ ಇರುವುದಕ್ಕೆ ನಿಮ್ಮಿಂದಾಗುವುದಿಲ್ಲವಾದರೆ, ಗುಣವಂತನಾ
ದ ಮತ್ತಾವನನ್ನಾದರೂ ಹೊಗಳಿರಿ ॥೨೨॥ ಅಷ್ಟ್ಯಾ ಸವಿನುಡಿಗಳುಳ್ಳ ಹೊಗಳ ಭಟರಿರಾ!
ಕಾಲಾಂತರದಲ್ಲಿ ನಾನು ಗುಣಗಳನ್ನು ಪ್ರಕಾಶಗೊಳಿಸಿದಾಗ ಬಾರಿಬಾರಿಗೂ ನನ್ನ ಬಿರು
ದಾವಳಿಗಳನ್ನು ಹೊಗಳುವಿರಿ. ಸಭೆಯವರಿಂದಪ್ರೇರಿತರಾಗಿ ಹೊಗಳುವೆನೆಂದು ಹೇಳುವಿ
ರೇನೋ ? ಉತ್ತಮಶ್ಲೋಕನಾದ ಭಗವಂತನ ಗುಣಗಳನ್ನು ಬಣ್ಣಿಸಬೇಕಾದುದನ್ನುಳಿದು
ಗುಣಹೀನರಾದ ನಮ್ಮಂತವರನ್ನು ಹೊಗಳುವುದಕ್ಕೆ ಸಭೆಯವರು ತಾನೇ ನಿಮಗೆಂತಾಜ್ಞೆ

ದೇ ಜುಗುಪ್ಸಿತಂ ನಸ್ತವಯಂತಿ ಸಭ್ಯಾಃ ॥೨೩॥ ಮಹದ್ಗುಣಾ ನಾತ್ಮನಿ ಕರ್ತುಮೀಶಃ ಕಸ್ತಾವಕೈಃ ಸ್ತಾವಯತೇಽಸತೋಽಪಿ । ತೇಽಸ್ಯಾಭವಿಷ್ಯನ್ನಿತಿ ವಿಪ್ರಲಬ್ಧೋ ಜನಾವಹಾಸಂ ಕುಮತಿ ರ್ನವೇದ ॥೨೪॥ ಪ್ರಭವೋ ಹ್ಯಾತ್ಮನಃ ಖ್ಯಾತಿಂ ಜುಗುಪ್ಸಂತ್ಯತಿ ವಿಶ್ರುತಾಃ। ಹ್ರೀಮಂತಃ ಪರಮೋದಾರಾ ಪೌರುಷಂವಾ ವಿಗರ್ಹಿತಂ ॥೨೫॥ ವಯಂ ತ್ವವಿದಿತಾ ಲೋಕೇ ಸೂತಾಽದ್ಯಾಪಿ ವರೀ * ಮಭಿಃ । ಕರ್ಮಭಿಃ ಕಥಮಾತ್ಮಾನಂ ಗೋಪಯಿಷ್ಯಾಮ ಬಾಲವತ್ ॥೨೬॥

— ಇತಿ ಪಂಚದಶೋಽಧ್ಯಾಯಃ —

---

ಈಶೋಽಪಿ-ಶಕ್ತನಾದರೂ, ಕಃ-ಯಾವನು, ಅಸತೋಽಪಿ-ಇಲ್ಲದಿದ್ದರೂ, ಗುಣಗಳುಂಟಾಗುವುವೆಂದುನಂಬಿ, ಸ್ತಾವಕೈಃ-ಹೊಗಳುವವರಿಂದ, ಸ್ತಾವಯತೇ-ಹೊಗಳಿಸಿಕೊಂಡಾನು? ತೇ-ಆ ಗುಣಗಳು, ಅಸ್ಯ-ಇವನಿಗೆ ಅಭವಿಷ್ಯನ್-ಉಂಟಾಗುವುವು,ಇತಿ-ಎಂದು ಹೊಗಳಿಸಿಕೊಳ್ಳುವುನೋ, ಸಃಕುಮತಿಃ-ಬುದ್ಧಿಹೀನನು,ವಿಪ್ರಲಬ್ಧಃ - ವಂಚಿತನಾಗಿ, ಜನಾವಹಾಸಂ - ಜನರ ಪರಿಹಾಸವನ್ನು, ನವೇದ - ತಿಳಿಯುವುದಿಲ್ಲ ॥೨೪॥ ಪ್ರಭವೋಽಪಿ - ಸಮರ್ಥರಾದರೂ, ಅತಿವಿಶ್ರುತಾಅಪಿ - ಸುಪ್ರಸಿದ್ಧರಾದರೂ, ಪರಮೋದಾರಾಃ - ನಿರತಿಶಯೌದಾರ್ಯಾದಿಗುಣಸಂಪನ್ನರಾದರೂ, ಹ್ರೀಮಂತಃ- ನಾಚಿದವರಾಗಿ, ವಿಗರ್ಹಿತಂ - ತಿರಸ್ಕೃತವಾದ, ಪೌರುಷಂ - ಪರಾಕ್ರಮವನ್ನೂ, ಆತ್ಮನಃ - ತಮ್ಮ, ಖ್ಯಾತಿಂ - ಸ್ತುತಿಯನ್ನೂ, ಜುಗುಪ್ಸಂತಿ - ನಿಂದಿಸುತ್ತಾರೆ ॥೨೫॥ ಹೇಸೂತ - ಎಲೈ ಸೂತನೆ! ವಯಂತು - ನಾವಾದರೆ, ಅದ್ಯಾಪಿ - ಈ ಲೂ, ಕರ್ಮಭಿಃ - ಕಾರ್ಯಗಳಿಂದ. ವರೀಮಭಿಃ - ಉತ್ತಮಪುರುಷರಿಂದ, ಲೋಕೇ-ಲೋಕದಲ್ಲಿ, ಅವಿದಿತಾಃ - ತಿಳಿಯಲ್ಪಟ್ಟವರಲ್ಲ, ಬಾಲವತ್ - ಹಸುಳೆಯಂತೆ, ಆತ್ಮಾನಂ ನಮ್ಮನ್ನು, ಕಥಂ-ಹೇಗೆ, ಗೋಪಯಿಷ್ಯಾಮ-ಸಲಹಿ ಕೊಳ್ಳುವೆವು? ॥೨೬॥

—ಪಂಚದಶಾಧ್ಯಾಯಂ ಸಮಾಪ್ತಂ.—

---

ಯನ್ನಿತ್ತಾರು, ! ॥೨೩॥ ಈಗ ನಿನ್ನಲ್ಲಿ ಅಂತಹ ಗುಣಗಳು ಸ್ಪಷ್ಟವಾಗದಿದ್ದರೂ ಮುಂದೆ ಉಂಟಾಗುವುವಾದುದರಿಂದ ಹೊಗಳುವೆವೆಂದು ಹೇಳುವಿರೋ ? ಈಗ ತನ್ನಲ್ಲಿಲ್ಲದಿರುವ ಮಹಾತ್ಮರಗುಣಗಳನ್ನುಸಂಪಾದಿಸಿಕೊಳ್ಳುವುದಕ್ಕೆ ಶಕ್ತನಾದರೂ, ಬುದ್ಧಿಶಾಲಿಯಾದವನು ಕಾಲಾಂತರದಲ್ಲಿ ತನ್ನಲ್ಲಿ ಗುಣಗಳುಂಟಾಗುವುವೆಂದು ಹೊಗಳಿಸಿಕೊಳ್ಳಬಾರದು. ಯಾವನು ಇಂತು ಊಹಿಸಿ ಜನರು ಪರಿಹಾಸಮಾಡುವುದನ್ನೂ ತಿಳಿಯದೆ ವಂಚಿತನಾಗಿ ಹೊಗಳಿಸಿಕೊಳ್ಳುವನೋ, ಅವನು ದುರ್ಬುದ್ಧಿಯೇ ಸರಿ ॥೨೪॥ ಸುಮತಿಯಾದವನು ಸುಪ್ರಸಿದ್ಧನಾಗಿರಲಿ ಮಹೋದಾರನಾಗಲಿ, ಸಕಲಸದ್ಗುಣಗಳನ್ನು ಸಂಪಾದಿಸಲು ಶಕ್ತನಾಗಿರಲಿ, ಎಂತಿದ್ದರೂ ತನ್ನ ಪರಾಕ್ರಮವನ್ನೂ, ಪ್ರಖ್ಯಾತಿಯನ್ನೂ, ನಿಂದಿಸಿಕೊಳ್ಳುವನೇ ಹೊರತು ಹೊಗಳಕೊಳ್ಳಲಾರನು. ಇತರರು ಹೊಗಳುವುದನ್ನೂ ಸಮ್ಮತಿಸಲಾರನು ॥೨೫॥ ಅಯ್ಯಾ ವಂದಿಮಾಗಧರಿರಾ ! ಈವರೆಗೂ ನಾವು ಅದ್ಭುತಕಾರ್ಯಗಳನ್ನು ಮಾಡಿ ಉತ್ತಮರಾದವರ ಕಿವಿಗೆ ಗೋಚರರಾಗಲಿಲ್ಲ. ಅಪ್ರಸಿದ್ಧರಾಗಿರುವಾಗ, ಹಸುಳೆಗಳಂತೆ ನಮ್ಮ ಯೋಗ್ಯತೆಯನ್ನೇ ತಿಳಿದುಕೊಳ್ಳದೆ ನಿಮ್ಮಿಂದ ಹೇಗೆ ಹೊಗಳಿಸಿಕೊಳ್ಳೋಣ! ಎಂದು ಪೃಥುರಾಜನು ಸೂತಾದಿಗಳಿಗೆ ಹೇಳುತ್ತಿದ್ದನಂಬಲ್ಲಿಗೆ ಭಾಗವತ ಚಕೋರಚಂದ್ರಿಕೆಯೊಳ್

— ಹದಿನೈದನೆಯ ಅಧ್ಯಾಯಂ ಮುಗಿದುದು —

## ಓಂನಮಃ ಪರಮಾತ್ಮನೇ.

### — ಅಥ ಷೋಡಶೋಧ್ಯಾಯಃ —

ಮೈತ್ರೇಯಃ॥ ಇತಿ ಬ್ರುವಾಣಂ ನೃಪತಿಂ ಗಾಯಕಾ ಮುನಿಚೋದಿತಾಃ । ತುಷ್ಟುವುಸ್ತುಷ್ಟಮನಸಸ್ತದ್ವಾಗಮೃತ ಸೇವಯಾ ॥೧॥ ನಾಲಂ ವಯಂ ತೇ ಮಹಿಮಾಽನುವರ್ಣನೇ ಯೋ ದೇವವರ್ಯೋಽವತತಾರ ಮಾಯಯಾ । ವೇನಾಂಗಜಾತಸ್ಯ ಚ ಪೌರುಷಾಣಿ ತೇ ವಾಚಸ್ಪತೀನಾಮಪಿ ಬಭ್ರಮುರ್ಧಿಯಃ ॥೨॥ ಅಥಾಽಪ್ಯುದಾರ ಶ್ರವಸಃ ಪೃಥೋರ್ಹರೇಃ ಕಲಾ

---

### — ಷೋಡಶಾಧ್ಯಾಯಂ —

ಕಂ॥ ನುತಮಾಗಧಕ ಸೂತ ನೃಪರ । ತತಮಾಯಿಂ ಮುನಿಗಳಾಜ್ಞೆಯಿಂ ವಾದಿಗಳಾ ।
ತರುಣಿಯೊಡಗೂಡಿದಾ ಪೃಥು । ಧರಣೀಂದ್ರನ ಗುಣವನಿಲ್ಲಿ ಕೈವಾರಿಸುಗುಂ ॥

ಮೈತ್ರೇಯನು ಹೇಳುತ್ತಾನೆ. —ಮುನಿ ಚೋದಿತಾಃ - ಮುನಿಗಳಿಂದ ಪ್ರೇರಿತರಾದ, ಗಾಯಕಾಃ - ಸೂತರು, ತದ್ವಾ...ಯಾ - ಆತನವಾಕ್ಯಂಬ ಅಮೃತರಸವನ್ನು ಸವಿದು, ತುಷ್ಟಮನಸಃ - ಸಂತುಷ್ಟವಾದ ಮನಸ್ಸುಳ್ಳವರಾಗಿ, ಇತಿ-ಇಂತು, ಬ್ರುವಾಣಂ - ಹೇಳುತ್ತಿರುವ, ನೃಪತಿಂ- ರಾಜನನ್ನು, ತುಷ್ಟುವುಃ - ಹೊಗಳಿದರು ॥೧॥ ದೇವವರ್ಯಃ - ದೇವೋತ್ತಮನಾದ, ಯಃ - ಯಾವ ನೀನು, ಮಾಯಯಾ - ನಿನ್ನಮಾಯೆಯಿಂದ, ಅವತತಾರ - ಅವತರಿಸಿದೆಯೋ, ವೇನಾಂಗಜಾತಸ್ಯಾಪಿ - ವೇನನ ಶರೀರದಿಂದ ಜನಿಸಿದ, ತೇ - ಅಂತಹ ನಿನ್ನ, ಪೌರುಷಾಣಿ - ಪರಾಕ್ರಮಾದಿ ಗುಣಗಳನ್ನು ಕುರಿತು, ವಾಚಸ್ಪತೀನಾಂ - ಬ್ರಹ್ಮಾದಿಗಳ, ಧಿಯೋಪಿ - ಬುದ್ಧಿಗಳೂ, ಬಭ್ರಮುಃ - ಮರಳಾದುವು, ತೇ - ನಿನ್ನ, ಮಹಿಮಾನುವರ್ಣನೇ - ಮಹಿಮೆಯನ್ನು ವರ್ಣಿಸುವುದರಲ್ಲಿ, ವಯಂ - ನಾವು, ನಾಲಂ - ಸಮರ್ಥರಲ್ಲ ॥ ೨ ॥ ಅಥಾ

---

### — ಹದಿನಾರನೆಯ ಅಧ್ಯಾಯ —

### — ಋಷಿಪ್ರೇರಿತರಾದ ಸ್ತುತಿಪಾಠಕರು ಪೃಥುವನ್ನು ಹೊಗಳುವುದು —

ಅನಂತರದಲ್ಲಿ ಮೈತ್ರೇಯನು ಹೇಳುತ್ತಾನೆ. ಇಂತು ಆತ್ಮಸ್ತುತಿಯನ್ನು ಸ್ವೀಕರಿಸಲಾರದ ಪೃಥುರಾಜನಿಂದ ಹೊಗಳಕೂಡದು, ಎಂದು ನಿವಾರಿತರಾದರೂ, ಅಲ್ಲಿಯ ವಂದಿ ಮಾಗಧಾದಿಗಳು ಅಮೃತೋಪಮಗಳಾದ ರಾಜನನುಡಿಗಳನ್ನು ಕೇಳಿ ಸಂತೋಷಗೊಂಡು ಮಹರ್ಷಿಗಳಿಂದ ಪ್ರೇರಿತರಾಗಿ ಮರಳಿ ಹೊಗಳತೊಡಗಿದರು ॥ ೧ ॥ ಅಯ್ಯಾ ಮಹಾತ್ಮರಿರಾ ! ದೇವದೇವನಾದ ವಾಸುದೇವಮೂರ್ತಿಯು ತನ್ನ ಮಾಯೆಯಿಂದ ಯಾವನ ರೂಪವಾಗಿ ಅವತರಿಸಿರುವನೋ, ದುಷ್ಟನಾದ ವೇನನ ಶರೀರದಿಂದುದ್ಭವಿಸಿದ್ದರೂ ಸಕಲಸದ್ಗುಣ ಸಂಪನ್ನನಾದ ಯಾವ ಮಹಾತ್ಮನ ಪೌರುಷಗಳನ್ನು ಬಣ್ಣಿಸುವುದಕ್ಕೆ ಬ್ರಹ್ಮಾದಿಗಳ ಬುದ್ಧಿಯು ಕೂಡ ಮರುಳಾಗುವುದೋ, ಅಂತಹ ಈತನ ಅದ್ಭುತಮಹಿಮೆಯನ್ನು ವರ್ಣಿಸುವುದಕ್ಕೆ ನಾವು ಶಕ್ತರ

ವತಾರಸ್ಯ ಕಥಾಽಮೃತಾದೃತಾಃ । ಯಥೋಪದೇಶಂ ಮುನಿಭಿಃ ಪ್ರಚೋ
ದಿತಾಃ ಶ್ಲಾಘ್ಯಾನಿ ಕರ್ಮಾಣಿ ವಯಂ ವಿತನ್ಮಹಿ ॥೩॥ ಏಷ ಧರ್ಮಭೃತಾಂ ಶ್ರೇ
ಷ್ಠೋ ಲೋಕಂ ಧರ್ಮೇಽನುವರ್ತಯನ್ । ಗೋಪ್ತಾ ಚ ಧರ್ಮಸೇತೂನಾಂ
ಶಾಸ್ತಾ ತತ್ಪರಿಪಂಥಿನಾಂ ॥೪॥ ಏಷ ವೈ ಲೋಕಪಾಲಾನಾಂ ಬಿಭರ್ತ್ಯೇಕಸ್ತ
ನೌ ತನೂಃ । ಕಾಲೇ ಕಾಲೇ ಯಥಾಭಾಗಂ ಲೋಕಯೋರುಭಯೋ
ರ್ಹಿತಂ ॥೫॥ ವಸು ಕಾಲ ಉಪಾದತ್ತೇ ಕಾಲೇ ಚಾಯಂ ವಿಮುಂಚತಿ । ಸ

ಪಿ - ಆದರೂ, ಹರೇಃ - ವಿಷ್ಣುವಿನ, ಕಲಾವತಾರಸ್ಯ - ಅಂಶಾವತಾರವುಳ್ಳ, ಉದಾರಶ್ರವಸಃ - ಉತ್ತಮ ಯಶಸ್ಸುಳ್ಳ, ಪೃಥೋಃ - ಪೃಥುವಿನ, ಕಥಾಮೃತಾದೃತಾಃ - ಕಥೆಯೆಂಬ ಅಮೃತದಲ್ಲಿ ಆದರವುಳ್ಳವರಾಗಿ, ವಯಂ - ನಾವು, ಯಥೋಪದೇಶಂ - ಹೇಳಿಕೊಟ್ಟಂತೆ, ಮುನಿಭಿಃ - ಋಷಿಗಳಿಂದ, ಪ್ರಚೋದಿತಾಃ - ಪ್ರೇರಿತರಾಗಿ, ಶ್ಲಾಘ್ಯಾನಿ - ಹೊಗಳತಕ್ಕ, ಕರ್ಮಾಣಿ - ಕಾರ್ಯಗಳನ್ನು, ವಿತನ್ಮಹಿ - ವಿಸ್ತರಿಸುವೆವು, ಏಷಃ - ಈತನು, ಧರ್ಮಭೃತಾಂ - ಧರ್ಮಿಷ್ಠರಲ್ಲಿ, ಶ್ರೇಷ್ಠಃ - ಶ್ರೇಷ್ಠನು, ಲೋಕಂ - ಸಾಧಾರಣ ಜನರನ್ನು, ಧರ್ಮೇ - ಧರ್ಮದಲ್ಲಿ, ಅನುವರ್ತಯನ್ - ಪ್ರವೇಶಗೊಳಿಸುವವನು, ಧರ್ಮಸೇತೂನಾಂ - ಧರ್ಮಮರ್ಯಾದೆಗಳನ್ನು, ಗೋಪ್ತಾ - ಪಾಲಿಸುವವನು, ತತ್ಪರಿಪಂಥಿನಾಂ - ಧರ್ಮವಿರೋಧಿಗಳನ್ನು, ಶಾಸ್ತಾ - ದಂಡಿಸುವವನು ॥ ೪ ॥ ಏಷಃ - ಇವನ, ಏಕೋಪಿ - ಒಬ್ಬನಾದರೂ, ಕಾಲೇ ಕಾಲೇ - ಕಾಲಕ್ಕೆ ತಕ್ಕಂತೆ, ಯಥಾಭಾಗಂ - ಕಾರ್ಯಾನುಸಾರವಾಗಿ, ಉಭಯೋರ್ಲೋಕಯೋಃ - ಭೂಸ್ವರ್ಗಗಳೆರಡಕ್ಕೂ, ಹಿತಂ ಯಥಾ - ಹಿತವಾಗುವಂತೆ, ತನೌ - ತನ್ನ ದೇಹದಲ್ಲಿ, ಲೋಕಪಾಲಾನಾಂ - ಸೂರ್ಯ ಇಂದ್ರ ಮೊದಲಾದವರ, ತನೂಃ - ಶರೀರಗಳನ್ನು, ಬಿಭರ್ತಿ - ಧರಿಸುತ್ತಾನೆ ॥ ೫ ॥ ಸರ್ವೇಷು - ಸಕಲ

ಲ್ಲ ॥೨॥ ಇಂತಿಪ್ಪರೂ ಶ್ರೀಹರಿಯ ಅಂಶಾವತಾರವನ್ನು ಮಾಡಿರುವ ಉದಾರಕೀರ್ತಿಯಾದ ಪೃಥುರಾಜನ ಕಥಾಮೃತದ ಆದರವುಳ್ಳವರಾದಲ್ಲಿ ನಾವು ಋಷಿಗಳಿಂದ ಪ್ರೇರಿತರಾಗಿ ಉಪದೇಶಪ್ರಕಾರವಾಗಿ ಆತನ ಶ್ಲಾಘ್ಯ ಚರಿತ್ರೆಗಳನ್ನು ವಿವರಿಸುವೆವು ॥೩॥ ಈ ಪೃಥುರಾಜನು*ಶಾಸ್ತ್ರದಲ್ಲಿ ಹೇಳಿದಂತೆ ವರ್ಣಾಶ್ರಮೋಚಿತಗಳಾದ ಧರ್ಮಗಳನ್ನು ಆಚರಿಸುವವರಲ್ಲಿ ಶ್ರೇಷ್ಠನಾಗಿರುವನು. ಸಾಧಾರಣರಾದ ಜನರನ್ನು ಧರ್ಮದಲ್ಲಿ ನೆಲೆಗೊಳಿಸುವನು. ಧರ್ಮಮರ್ಯಾದೆಗಳನ್ನು ಸಲಹುವನು. ಧರ್ಮಕಂಟಕರಾದ ದುಷ್ಟರನ್ನು ದಂಡಿಸುವನು ॥೪॥ ಈ ಪೃಥುರಾಜನು ಒಬ್ಬನಾಗಿದ್ದರೂ, ಸೂರ್ಯ, ಚಂದ್ರ ಮೊದಲಾದ ಲೋಕಪಾಲಕರ ಮೂರ್ತಿಗಳನ್ನು ತನ್ನ ಶರೀರದಲ್ಲಿಯೇ ಧರಿಸಿ ಆ ಆ ಕಾಲಗಳಲ್ಲಿ ಪಾಲನ, ಪೋಷಣ ಅನುರಂಜನಾದಿ ಕಾರ್ಯಾನುಸಾರವಾಗಿ ಸುವೃಷ್ಟಿಯಿಂದ ಭೂಲೋಕಕ್ಕೂ, ಯಜ್ಞಾದಿಗಳಿಂದ ಸ್ವರ್ಗಲೋಕಕ್ಕೂ ಹಿತವಾಗುವಂತೆ ಧರ್ಮಗಳನ್ನು ನಡೆಯಿಸುವನು ॥ ೫ ॥ ಪ್ರತಿವರ್ಷವೂ

* ಶ್ಲೋ. ಯದ್ಯದಾಚರತಿ ಶ್ರೇಷ್ಠಸ್ತತ್ತದೇವೇತರೋ ಜನಃ । ಸಯತ್ಪ್ರಮಾಣಂ ಕುರುತೇ ಲೋಕಸ್ತದನುವರ್ತತೇ ॥ (ಗೀತಾ) ಶ್ರೇಷ್ಠನಾದವನು ಯಾವ ಯಾವುದನ್ನು ಮಾಡುವನೋ, ಇತರರೂ ಅದನ್ನು ಮಾಡುವರು, ಅವನು ಯಾವ ಕಟ್ಟಳೆಯನ್ನು ವಿಧಿಸುವನೋ, ಜನರು ಅದನ್ನು ಅನುಸರಿಸುವರು. ಆದುದರಿಂದ ರಾಜನು ಎಲ್ಲರಿಗೂ ಮಾದರಿಯೆನಿಸಿರಬೇಕು.

ಮ ಸ್ಸರ್ವೇಷು ಭೂತೇಷು ಪ್ರತಪನ್ ಸೂರ್ಯವ ದ್ವಿಭುಃ ॥೬॥ ತಿತಿಕ್ಷತ್ಯ
ಕ್ರಮಂ ವೈನ್ಯ ಉಪರ್ಯಾಕ್ರಮತಾ ಮಪಿ। ಭೂತಾನಾಂ ಕರುಣ ಶ್ಶಶ್ವ ದಾ
ರ್ತಾನಾಂ ಕ್ಷಿತಿವೃತ್ತಿ ಮಾನ್ ॥೭॥ ದೇವೇಽ ವರ್ಷತ್ಯಸೌ ದೇವೋ ನರದೇ
ವವಪು ಹರಿಃ। ಕೃಚ್ಛ್ರಪ್ರಾಣಾಃ ಪ್ರಜಾಹ್ಯೇಷ ರಕ್ಷಿಷ್ಯತ್ಯಂಜಸೇಂದ್ರ
ವತ್ ॥೮॥ ಆಪ್ಯಾಯಯ ತ್ಯಸೌ ಲೋಕಂ ವದನಾಮೃತಮೂರ್ತಿನಾ। ಸಾ
ನುರಾಗಾವಲೋಕೇನ ವಿಶದಸ್ಮಿತ ಚಾರುಣಾ ॥೯॥ ಅವ್ಯಕ್ತವರ್ತ್ಮೈಷ ನಿ
ಗೂಢಕಾರ್ಯೋ ಗಂಭೀರ ಮೇಧಾ ಉಪಗುಪ್ತವಿತ್ತಃ। ಅನಂತಮಾಹಾತ್ಮ್ಯ

ಗಳಾದ, ಭೂತೇಷು - ಭೂತಗಳಲ್ಲಿಯೂ, ಸಮಃ - ಸಮನಾದ, ವಿಭುಃ - ಪ್ರಭುವಾದ ಪೃಥುವು, ಸೂರ್ಯವತ್ - ಸೂರ್ಯನಂತೆ, ಪ್ರತಪನ್ - ತಪಿಸುತ್ತಾ, ಕಾಲೇ - ಸುಭಿಕ್ಷಕಾಲದಲ್ಲಿ ವಸು - ಧನವನ್ನು ಉಪಾದತ್ತೇ - ತೆಗೆದುಕೊಳ್ಳುತ್ತಾನೆ, ಕಾಲೇ - ದುರ್ಭಿಕ್ಷದಲ್ಲಿ, ಅಯಂ - ಇವನು, ವಿಮುಂಚತಿ - ಕೊಡುತ್ತಾನೆ ॥ ೬ ॥ ಕ್ಷಿತಿವೃತ್ತಿಮಾನ್ - ಭೂಮಿಯಂತೆ ಸೈರಣೆಯುಳ್ಳ, ವೈನ್ಯಃ - ಪೃಥುವು, ಶಶ್ವತ್ - ಯಾವಾಗಲೂ, ಕರುಣಃ - ದಯಾಶಾಲಿಯಾದುದರಿಂದ, ಉಪರಿ - ತಲೆಯಲ್ಲಿ, ಆಕ್ರಮತಾಮಪಿ - ಅಡಿಯನ್ನಿಟ್ಟರೂ, ಆರ್ತಾನಾಂ - ದೀನರಾದ, ಭೂತಾನಾಂ - ಪ್ರಾಣಿಗಳ, ಅಕ್ರಮಂ - ಅಪರಾಧವನ್ನು, ತಿತಿಕ್ಷತಿ - ಸೈರಿಸುತ್ತಾನೆ ॥ ೭ ॥ ನರದೇವವಪುಃ - ರಾಜರೂಪವುಳ್ಳ, ದೇವಃ - ಪ್ರಕಾಶಮಾನನಾದ, ಅಸೌಹರಿಃ - ಈ ವಿಷ್ಣುವು, ದೇವೇ - ಇಂದ್ರನು, ಅವರ್ಷತಿ - ಮಳೆಗರೆಯದಿರಲು, ಅಂಜಸಾ- ಬೇಗನೆ ಇಂದ್ರವತ್ - ಇಂದ್ರನಂತೆ, ಕೃಛ್ರಪ್ರಾಣಾಃ - ಪ್ರಾಣಸಂಕಟವುಳ್ಳ, ಪ್ರಜಾಃ - ಪ್ರಜೆಗಳನ್ನು, ರಕ್ಷಿಷ್ಯತಿ - ಸಲಹುತ್ತಾನೆ ॥ ೮ ॥ ಸಾನು...ನಃ- ಪ್ರೀತಿಯಿಂದ ಕೂಡಿದನೋಟವುಳ್ಳ, ವಿಶ...ಣಾ - ಸ್ವಚ್ಛವಾದ ಕಿರುನಗೆಯಿಂದ ಚೆಲುವಾದ, ವದ...ನಾ-ಮುಖವೆಂಬ ಚಂದ್ರನಿಂದ, ಅಸೌ - ಇವನು, ಲೋಕಂ - ಜಗತ್ತನ್ನು, ಆಪ್ಯಾಯಯತಿ - ಸಂತೋಷಗೊಳಿಸುತ್ತಾನೆ ॥೯॥ ಏಷಪೃಥುಃ-ಈ ಪೃಥುವು, ಅವ್ಯಕ್ತವರ್ತ್ಮಾ- ಇತರರಿಗೆ ತಿಳಿಯದ ದಾರಿಯುಳ್ಳವನು, ನಿಗೂಢಕಾರ್ಯಃ - ರಹಸ್ಯವಾದ ಕಾರ್ಯಗಳುಳ್ಳವನು, ಗಂಭೀರಮೇಧಾಃ-ಗಂಭೀರಬುದ್ಧಿಯುಳ್ಳವನು, ಉಪ...ತ್ತಃ-ದ್ರವ್ಯವನ್ನು ಸಲಹುವವನು, ಅನಂ...ಮಾ-

ಎಂಟು ತಿಂಗಳು ಬಿಸಿಲ್ಗರೆದು ತನ್ನ ಕಿರಣಗಳಿಂದ ಜಲವನ್ನಾಕರ್ಷಿಸಿ, ಅದೇ ಜಲವನ್ನು ಮಳೆಗರೆದು ಲೋಕಕ್ಕೆ ಹಿತವನ್ನು ಮಾಡುವ ಸೂರ್ಯನಂತೆ ಈತನು ಸುಭಿಕ್ಷಕಾಲದಲ್ಲಿ ಪ್ರಜೆಗಳಿಂದ ಕಾಣಿಕೆಯರೂಪವಾಗಿ ಧನವನ್ನು ಸಂಗ್ರಹಿಸಿ, ಕ್ಷಾಮಡಾಮರಗಳೊದಗಿದ ದುರ್ಭಿಕ್ಷಕಾಲದಲ್ಲಿ ಆ ಧನವನ್ನಿತ್ತು ಎಲ್ಲರನ್ನೂ ಒಂದೇ ರೀತಿಯಿಂದ ಸಲಹುವನಾದಕಾರಣ ಇವನು ಸೂರ್ಯನಿಗೆ ಸಮಾನನು ॥ ೬ ॥ ಈ ಪೃಥುರಾಜನು ಕೈಲಾಗದ ಬಡಜೀವಿಗಳು ತನ್ನ ಮೇಲೆ ಬಿದ್ದು ಬಂದರೂ, ಕಸಿಕಿರಿಗೊಂಡು ಅವರ ಅಪರಾಧಗಳನ್ನು ಸೈರಿಸುವನಾದುದರಿಂದ ಸಹನದಲ್ಲಿ ಭೂಮಿಗೆ ಸಮನೆನಿಸುವನು ॥ ೭ ॥ ವರ್ಷಾಧಿಪತಿಯಾದ ದೇವೇಂದ್ರನು ಮಳೆಗರೆಯದಿರುವಾಗ, ರಾಜರೂಪವನ್ನು ಪಡೆದ ಈ ಭಗವಂತನು ಪ್ರಾಣಸಂಕಟಗೊಳ್ಳುವ ಪ್ರಜೆಗಳನ್ನು ಇಂದ್ರನಂತೆಯೇ, ಸಲಹುವನು. ಆದರಿಂದ ಇಂದ್ರನಿಗೆ ಸಾಟಿಯಾಗುವನು ॥೮॥ ಈ ಮಹಾರಾಜನು, ಪ್ರೀತಿವೆರಸಿದ ಸವಿನೋಟದಿಂದಲೂ, ಮಿರುಗುತ್ತಿರುವ ಕಿರುನಗೆಯೆಂಬ ಬೆಳದಿಂಗಳಿಂದಲೂ ಚೆಲುವಾದ ಮುಖಚಂದ್ರನಿಂದ

ಗುಣೈಕಧಾಮಾ ಪೃಥುಃ ಪ್ರಚೇತಾ ಇವ ಸಂವೃತಾತ್ಮಾ ॥೧೦॥ ದುರಾಸದೋ ದುರ್ವಿಷಹ ಆಸನ್ನೋಽಪಿ ವಿದೂರವತ್ । ನೈವಾಭಿಭವಿತುಂ ಶಕ್ಯೋ ವೇನಾರಣ್ಯುತ್ಥಿತೋಽನಲಃ ॥೧೧॥ ಅಂತರ್ಬಹಿಶ್ಚ ಭೂತಾನಾಂ ಪಶ್ಯನ್ ಕರ್ಮಾಣಿ ಚಾರಣೈಃ । ಉದಾಸೀನ ಇವಾಧ್ಯಕ್ಷೋ ವಾಯುರಾತ್ಮೇವ ದೇಹಿನಾಂ ॥ ೧೨ ॥ ನಾದಂಡ್ಯಂ ದಂಡಯತ್ಯೇಷ ಸುತಮಾತ್ಮದ್ವಿಷಾಮಪಿ । ದಂಡಯತ್ಯಾತ್ಮಜಮಪಿ ದಂಡ್ಯಂ ಧರ್ಮಪಥೇ ಸ್ಥಿತಃ ॥೧೩॥ ಅಸ್ಯಾ

---

ಅನಂತಮಹಿಮೆಗಳುಳ್ಳವನು, ಗುಣಗಳಿಗೆ ಆವರುಮನೆಯು, ಪ್ರಚೇತಾಇವ - ವರುಣನಂತೆ, ಸಂವೃತಾತ್ಮಾ - ಚತುಸ್ಸಮುದ್ರಗಳಿಂದ ಪರಿವೃತನಾದವನು ॥೧೦॥

ದುರಾಸದಃ-ಹೊಂದಲಶಕ್ಯನು, ದುರ್ವಿಷಹಃ-ಸಹಿಸಲಶಕ್ಯನೂ, ಆದ ವೇನಾ...ಲಃ-ವೇನನೆಂಬ ಅರಣಿಯಿಂದ ಹುಟ್ಟಿದ ಅಗ್ನಿಯು, ಆಸನ್ನೋಽಪಿ- ಬಳಿಯಲ್ಲಿದ್ದರೂ, ವಿದೂರವತ್ - ದೂರದಲ್ಲಿರುವವಂತೆ, ಅಭಿಭವಿತುಂ-ಸೋಲಿಸುವುದಕ್ಕೆ, ನೈವಶಕ್ಯಃ - ಶಕ್ಯವಲ್ಲ ॥೧೧॥ ಚಾರಣೈಃ-ಗೂಢಚಾರರಿಂದ, ಅಂತರ್ಬಹಿಶ್ಚ- ಒಳಗೂ ಹೊರಗೂ, ಭೂತಾನಾಂ - ಪ್ರಾಣಿಗಳ, ಕರ್ಮಾಣಿ - ಕಾರ್ಯಗಳನ್ನು, ಪಶ್ಯನ್- ನೋಡುತ್ತಿದ್ದರೂ, ದೇಹಿನಾಂ-ಪ್ರಾಣಿಗಳಲ್ಲಿ, ಅಧ್ಯಕ್ಷಃ - ನಾಯಕನಾದ, ಆತ್ಮಾ - ಸೂತ್ರಾತ್ಮನಾದ, ವಾಯುರಿವ- ವಾಯುವಿನಂತೆ, ಉದಾಸೀನಃ - ಉದಾಸೀನನಾಗಿ, ಆಸ್ತೇ-ಇರುತ್ತಾನೆ ॥ ೧೨ ॥ ಧರ್ಮಪಥೇ - ಧರ್ಮಮಾರ್ಗದಲ್ಲಿ, ಸ್ಥಿತಃ-ಇರುವ, ಏಷಃ-ಇವನು, ಆತ್ಮದ್ವಿಷಾಂ - ಶತ್ರುಗಳ, ಸುತಮಪಿ- ಮಗನನ್ನಾದರೂ, ಅದಂಡ್ಯಂ - ದಂಡಾರ್ಹನಲ್ಲದವನನ್ನು, ನದಂಡಯತಿ - ದಂಡಿಸುವುದಿಲ್ಲ, ದಂಡ್ಯಂ- ದಂಡಾರ್ಹನಾದ, ಆತ್ಮಜಮಪಿ-ತನ್ನ ಮಗನನ್ನೂ, ದಂಡಯತಿ-ದಂಡಿಸುತ್ತಾನೆ ॥ ೧೩ ॥ ಭಗವಾನ್-

---

ಲೋಕವನ್ನು ಆನಂದಗೊಳಿಸುವ ಕಾರಣ ಚಂದ್ರನಿಗೆಣೆಯಾಗುವನು ॥೯॥ ತಾನುಹೋಗಿ ಬರುವದಾರಿಯನ್ನು ಇತರರರಿಯದಂತೆಯೂ, ಫಲವು ಕೈಗೂಡುವುದಕ್ಕೆ ಮೊದಲು ಯಾರಿಗೂ ತಿಳಿಯದಂತೆಯೂ, "ಇವನೀಕಾರ್ಯವನ್ನು ಏತಕ್ಕಾಗಿ ಮಾಡುವನು ?" ಎಂಬುದು ಕೂಡ ಹೊರಪಡಿಸದಂತೆ ಕಾರ್ಯಗಳನ್ನು ನಡೆಯಿಸುತ್ತಾ, ಯಾರೂ ಭಂಡಾರದ ಮರ್ಮವನ್ನು ಕಂಡುಕೊಳ್ಳದಂತೆ, ಧನವನ್ನು ಗೋಪಿಸುತ್ತಾ, ಶ್ರೀಮಹಾವಿಷ್ಣುವಿನಂತೆ ಅದ್ಭುತಮಹಿಮೆಗಳಿಗೂ, ಸಕಲ ಕಲ್ಯಾಣಗುಣಗಳಿಗೂ ತವರೂರಾಗಿ ಚತುಸ್ಸಮುದ್ರಗಳಿಂದಪರಿವೃತನಾಗಿರುವ ಕಾರಣ ಈತನು ಜಲಾಧಿದೇವತೆಯಾದ ವರುಣನಿಗೆ ಸಮನೆನಿಸುವನು ॥೧೦॥ ವೇನನೆಂಬ ಅರಣಿಯಿಂದ ಜನಿಸಿದ ಈ ಅಗ್ನಿಯನ್ನು, ಶತ್ರುಗಳಾದವರು ಮನಸ್ಸಿನಿಂದಲೂ ಸೋಂಕಲೆಳಸರು. ಎಳಸಿಬಂದವರೂ ಸಹಿಸಲಾರರು, ಹಗೆಗಳು ಬಳಿಗೆ ಬಂದರೂ ದೂರದಲ್ಲಿರುವನನ್ನೋಪಾದಿಯಲ್ಲಿ ಇವನನ್ನು ಗೆಲ್ಲಲಾರರು. ಇದರಿಂದ ಇವನು ಅಗ್ನಿಗೆ ಸಮಾನನು ॥ ೧೧ ॥ ಈತನು ಗೂಢಚಾರರಿಂದ ತನ್ನ ಪ್ರಜೆಗಳು ಅಂತರಂಗ ಬಹಿರಂಗಗಳೆರಡರಲ್ಲಿಯೂ ನಡೆಯಿಸುವ ದೂಷಣ ಭೂಷಣಾದಿಗಳನ್ನು ತಿಳಿಯುತ್ತಿದ್ದರೂ, ದೇಹಕ್ಕೆ ಸ್ವಾಮಿಯಾಗಿ ಸೂತ್ರರೂಪನೆನಿಸಿರುವ ವಾಯುವಿನಂತೆ ಉದಾಸೀನನಾಗಿರುವನು ಆದಕಾರಣ ಇವನಲ್ಲಿ ವಾಯುವಿನಂಶವಿರುವುದು ॥ ೧೨ ॥ ಧರ್ಮಮಾರ್ಗನಿರತನಾದ ಈ ದೊರೆಯು ಶತ್ರುವಿನ ಮಗನಾದರೂ, ತಪ್ಪಿಲ್ಲದವನನ್ನು ದಂಡಿಸುವುದಿಲ್ಲ, ಅಪರಾಧವನ್ನು

ಪ್ರತಿಹತಂ ಚಕ್ರಂ ಪೃಥೋರಾಮಾನಸಾಽಚಲಾತ್ । ವರ್ತತೇ ಭಗವಾನ
ರ್ಕೋ ಯಾವತ್ತಪತಿ ಗೋಗಣೈಃ॥೧೪॥ ರಂಜಯಿಷ್ಯತಿ ಯಲ್ಲೋಕಮ
ಯಮಾತ್ಮವಿಚೇಷ್ಟಿತೈಃ। ಅಥಾಽಮುಮಾಹೂ ರಾಜಾನಂ ಮನೋರಂಜನ
ಕೈಃ ಪ್ರಜಾಃ॥೧೫॥ದೃಢವ್ರತ ಸ್ಸತ್ಯಸಂಧೋ ಬ್ರಹ್ಮಣ್ಯೋ ವೃದ್ಧಸೇವಕಃ।
ಶರಣ್ಯ ಸ್ಸರ್ವಭೂತಾನಾಂ ಮಾನದೋ ದೀನವತ್ಸಲಃ ॥೧೬॥ ಮಾತೃಭಕ್ತಿಃ
ಪರಸ್ತ್ರೀಷು ಪತ್ನ್ಯಾ ಮರ್ಧ ಇವಾತ್ಮನಃ।ಪ್ರಜಾಸು ಪಿತೃವತ್ ಸ್ನಿಗ್ಧಃ ಕಿಂ
ಕರೋ ಬ್ರಹ್ಮವಾದಿನಾಂ ॥೧೭॥ ದೇಹಿನಾ ಮಾತ್ಮವತ್ ಪ್ರೇಷ್ಠ ಸ್ಸುಹೃ

ಮಹಾತ್ಮನಾದ, ಅರ್ಕಃ - ಸೂರ್ಯನು, ಯಾವತ್ - ಎಲ್ಲಿಯುವರೆಗೂ, ಗೋಗಣೈಃ - ಕಿರಣಗಳಿಂದ, ತಪತಿ - ಬೆಳಗುವನೋ, ಆಮಾನಸಾಚಲಾತ್ - ಆಮಾನಸಪರ್ವತದವರೆಗೂ, ಅಸ್ಯಪೃಥೋಃ- ಈ ಪೃಥುರಾಜನ, ಅಪ್ರತಿಹತಂ - ತಡೆಯಿಲ್ಲದ, ಚಕ್ರಂ - ಆಜ್ಞೆಯು, ಅಥವಾ, ರಥಚಕ್ರಗಳು, ನಡೆಯುವುವು ॥ ೧೪ ॥ ಅಯಂ-ಇವನು, ಯತ್ ಯಾವಕಾರಣದಿಂದ, ಮನೋರಂಜಕೈಃ - ಮನಸ್ಸನ್ನು ಸಂತೋಷಗೊಳಿಸುವ, ಆತ್ಮವಿಚೇಷ್ಟಿತೈಃ - ತನ್ನ ನಡನಳಿಗಳಿಂದ, ಲೋಕಂ - ಜಗತ್ತನ್ನು, ರಂಜಯಿಷ್ಯತಿ - ಸಂತೋಷಗೊಳಿಸುವನೋ, ಅಥ-ಅದರಿಂದ, ಅಮುಂ - ಇವನನ್ನು, ಪ್ರಜಾಃ-ಪ್ರಜೆಗಳು, ರಾಜಾನಂ - ರಾಜನನ್ನಾಗಿ, ಆಹುಃ - ಹೇಳುವರು ॥ ೧೫ ॥ ದೃಢವ್ರತಃ - ಸತ್ಯಸಂಕಲ್ಪನು, ಸತ್ಯಸಂಧಃ-ಸತ್ಯಪ್ರತಿಜ್ಞನು, ಬ್ರಹ್ಮಣ್ಯಃ-ಬ್ರಾಹ್ಮಣಪ್ರಿಯನು, ವೃದ್ಧಸೇವಕಃ-ಹಿರಿಯರನ್ನು ಸೇವಿಸುವವನು, ಸರ್ವಭೂತಾನಾಂ - ಸಕಲ ಪ್ರಾಣಿಗಳಿಗೂ, ಶರಣ್ಯಃ-ರಕ್ಷಕನು, ಮಾನದಃ - ಸನ್ಮಾನವನ್ನು ಮಾಡುವವನು, ದೀನವತ್ಸಲಃ- ಬಡವರನ್ನು ಪ್ರೀತಿಸುವವನು ॥ ೧೬ ॥ ಪರಸ್ತ್ರೀಷು - ಪರಸ್ತ್ರೀಯರಲ್ಲಿ, ಮಾತೃಭಕ್ತಿಃ- ತಾಯಿಯಂತೆ ಭಕ್ತಿಯುಳ್ಳವನು, ಪತ್ನ್ಯಾಂ - ಹೆಂಡತಿಯಲ್ಲಿ, ಆತ್ಮನಃ - ತನ್ನ, ಅರ್ಧಮಿವ - ಅರ್ಧದಂತೆ ತಿಳಿದಿರುವವನು, ಪ್ರಜಾಸು- ಪ್ರಜೆಗಳಲ್ಲಿ, ಪಿತೃವತ್ - ತಂದೆಯಂತೆ, ಸ್ನಿಗ್ಧಃ-ಸ್ನೇಹವುಳ್ಳವನು, ಬ್ರಹ್ಮವಾದಿನಾಂ-ಜ್ಞಾನಿಗಳಿಗೆ, ಕಿಂಕರಃ- ದಾಸನು ॥ ೧೭ ॥ ದೇಹಿನಾಂ - ಪ್ರಾಣಿಗಳಿಗೆ, ಆತ್ಮವತ್- ಆತ್ಮನಂತೆ, ಪ್ರೇಷ್ಠಃ - ಅತ್ಯಂತ ಪ್ರಿಯನು, ಮುಕ್ತ...ಗಃ - ವಿರಕ್ತರಲ್ಲಿ ಸಹವಾಸವುಳ್ಳವನು,

ಮಾಡಿದವನು ತನ್ನ ಮಗನಾಗಿದ್ದರೂ ಬಿಡುವುದಿಲ್ಲವಾದುದರಿಂದ ಇವನು ಯಮನಿಗೆಣೆಯಾಗುವನು ॥ ೧೩ ॥ ಭಗವಂತನಾದ ಸೂರ್ಯನು ಎಲ್ಲಿಯುವರೆಗೂ ತನ್ನ ಕಿರಣಗಳನ್ನು ಪ್ರಸರಗೊಳಿಸಿ ಬೆಳಗುವನೋ, ಆಮಾನಸಪರ್ವತದವರೆಗೂ, ಈ ಮಹಾರಾಜನ ಆಜ್ಞೆಯೂ, ರಥಚಕ್ರಗಳೂ ನಡೆಯುವುವು ॥ ೧೪ ॥ ಈತನು ಹೃದಯಾನಂದ ಕರಗಳಾದ ತನ್ನ ನಡವಳಿಗಳಿಂದೆಲ್ಲರ ಮನಸ್ಸನ್ನೂ ಸಂತೋಷಗೊಳಿಸುವನಾದುದರಿಂದ ಪ್ರಜೆಗಳು ಇವನನ್ನು ರಾಜನೆಂದು ಕರೆಯುವರು ॥ ೧೫ ॥ ಈ ಭೂಪತಿಯು, ಸತ್ಯಸಂಕಲ್ಪನೂ, ಸತ್ಯಸಂಧನೂ, ಬ್ರಾಹ್ಮಣಪ್ರಿಯನೂ, ವೃದ್ಧರನ್ನು ಸೇವಿಸುವವನೂ, ಸಕಲ ಭೂತಗಳಿಗೂ ರಕ್ಷಕನೂ, ಸನ್ಮಾನವನ್ನು ಮಾಡುವವನೂ, ಬಡವರನ್ನು ಕನಿಕರಿಸುವವನೂ ಆಗುವನು ॥೧೬॥ ಈತನು ಪರಸ್ತ್ರೀಯರನ್ನು ತಾಯಿಯರಂತೆ ತಿಳಿಯುವನು. ಹೆಂಡತಿಯನ್ನು ತನ್ನ ಅರ್ಧ ಶರೀರದಂತೆ ಪ್ರೀತಿಸುವನು. ಪ್ರಜೆಗಳನ್ನು ತಂದೆಯಂತೆ ಆದರಿಸುವನು. ಬ್ರಹ್ಮಜ್ಞರಾದ ಸಾಧುಗಳಿಗೆ ಕಿಂಕರನಾಗಿರುವನು ॥೧೭॥ ಪ್ರಾಣಿಗಳಿಗೆ ತಮ್ಮ ಶರೀರವೆಂತು

ದಾಂ ನಂದಿವರ್ಧನಃ । ಮುಕ್ತ ಸಂಗ ಪ್ರಸಂಗೋऽಯಂ ದಂಡಪಾಣಿ ರಸಾಧುಷು ॥೧೮॥ †ಅಯಂತು ಸಾಕ್ಷಾದ್ಭಗವಾಂಸ್ತ್ರ್ಯಧೀಶಃ ಕೂಟಸ್ಥ ಆತ್ಮಾ ಕಲಯಾऽವತೀರ್ಣಃ । ಯಸ್ಮಿನ್ನವಿದ್ಯಾರಚಿತಂ ನಿರರ್ಥಕಂ ಪಶ್ಯಂತಿ ನಾನಾ

ಅಯಂ-ಇವನು, ಅಸಾಧುಷು - ದುಷ್ಟರಲ್ಲಿ, ದಂಡಪಾಣಿಃ - ಯಮನು, ಅಥವಾ ಶಿಕ್ಷಕನು ॥ ೧೮ ॥ ಅಯಂತು - ಈತನಾದರೆ, ತ್ರ್ಯಧೀಶಃ - ಮಾಯಾನಿಯಾಮಕನಾದ, ಕೂಟಸ್ಥಃ - ನಿರ್ವಿಕಾರನಾದ, ಭಗವಾನ್-ನಿರತಿಶಯಮಹಿಮನಾದ, ಕಲಯಾ-ಅಂಶದಿಂದ, ಅವತೀರ್ಣಃ - ಅವತರಿಸಿರುವ, ಸಾಕ್ಷಾತ್-ಪ್ರತ್ಯಕ್ಷವಾದ, ಆತ್ಮೈವ - ಪರಮಾತ್ಮನೇ, ಯಸ್ಮಿನ್ - ಯಾವನಲ್ಲಿ, ಅವಿದ್ಯಾರಚಿತಂ- ಮಾಯೆಯಿಂದ ನಿರ್ಮಿಸಲ್ಪಟ್ಟ, ನಾನಾತ್ವಂ-ಭೇದವು, ಪ್ರತೀತಮಪಿ-ತೋರುತ್ತಿದ್ದರೂ, ನಿರರ್ಥಕಂ - ವ್ಯರ್ಥವನ್ನಾಗಿ

ಅತ್ಯಂತ ಪ್ರಿಯನೋ, ಅಂತೆಯೇ ಇವನು ಪ್ರೀತಿ ಪಾತ್ರನೆನಿಸುವನು. ಮಿತ್ರಮಂಡಲಿಗೆ ಸಂತೋಷವನ್ನು ಬೆಳೆಯಿಸುವನು. ಯಾವಾಗಲೂ ವಿರಕ್ತರಾದ ಸಾಧುಗಳ ಸಹವಾಸದಲ್ಲಿರುವನು. ಯಮನಂತೆ ದಂಡಧಾರಿಯಾಗಿ ದುಷ್ಟರನ್ನು ದಂಡಿಸುವನು ॥೧೮॥ ಯಾವಭಗವಂತನಲ್ಲಿ ಮಾಯೆಯಿಂದ ಕಲ್ಪಿತವಾಗಿರುವ ಪ್ರಪಂಚವು ಹಲವು ಭೇದದಿಂದ ಕಾಣುತ್ತಿದ್ದರೂ, ಜ್ಞಾನಿಗಳಾದವರು ವ್ಯರ್ಥವನ್ನಾಗಿ ತಿಳಿಯುವರೋ, ಅಂತಹ ತ್ರಿಗುಣನಿಯಾಮಕನೂ, ತ್ರಿಲೋಕೇಶ್ವರನೂ, ನಿರ್ವಿಕಾರನೂ, ಸರ್ವವ್ಯಾಪಕನೂ ಆದ ಭಗವಂತನೇ

† (೧) ಪಿ. ದೇಹವಿಲಕ್ಷಣವಾದ ಆತ್ಮಯಾಥಾತ್ಮ್ಯವನ್ನು ಬಲ್ಲ ವಿಜ್ಞಾನಿಗಳು, ಭಗವಚ್ಛರೀರವೆನಿಸಿದ ಯಾವ ಜೀವನಲ್ಲಿ ತೋರುತ್ತಿರುವ ಪ್ರಕೃತಿ ಪರಿಣಾಮರೂಪವಾದ ದೇವಮನುಷ್ಯಾದಿ ಭೇದವನ್ನು ಯಥಾರ್ಥವಲ್ಲವೆಂದು ತಿಳಿಯುವರೋ, ಅಂತಹ ತನ್ನ ಅಂಶಭೂತನಾದ ಪೃಥುವೆಂಬ ಜೀವಕಳೆಯಿಂದ ಭಗವಂತನೇ ಸಾಕ್ಷಾತ್ತಾಗಿ ಅವತರಿಸಿರುವನು. ಶರೀರಕ್ಕಾಗುವ ಬಾಲತ್ವ, ವೃದ್ಧತ್ವಾದಿಗಳು ಜೀವನಲ್ಲಿ ತೋರುವಂತೆಯೇ ಜೀವ ಶರೀರಕನಾದ ಭಗವಂತನಲ್ಲಿಯೂ ತೋರಿದರೂ, ಜ್ಞಾನಿಗಳಾದವರು ಅವುಗಳನ್ನು ಅವಾಸ್ತವಗಳೆಂದು ತಿಳಿಯುವರು.

(೨) ವಿ. ಯೋಗಿಗಳು, ಯಾವ ಭಗವಂತನ ಮತ್ಸ್ಯಾದಿರೂಪಗಳಲ್ಲಿ ತೋರುವ ಭೇದವನ್ನು ಆಕಾಶ ಪುಷ್ಪಾದಿಗಳಂತೆ ಮಿಥ್ಯಾಭೂತವೆಂದು ತಿಳಿಯುವರೋ, ಅಂತಹ ಸರ್ವಾಂತರ್ಯಾಮಿಯಾದ ಶ್ರೀಹರಿಯೇ ಈ ಪೃಥುವಿನಲ್ಲಿ ಸನ್ನಿಹಿತನಾಗಿರುವ ಕಾರಣ ಇಷ್ಟು ಮಹಿಮೆಯುಂಟಾಗುವುದು.

(೩) ಸಿ. ಶ್ರುತಿಯಲ್ಲಿ ಹೇಳುವಂತೆ ಶ್ರವಣ ಮನನಾದಿಗಳಿಂದ ತಿಳಿಯಲ್ಪಡತಕ್ಕ ಪರಮಾತ್ಮನು, ಸ್ವರೂಪದಿಂದ ನಿರ್ವಿಕಾರನಾಗಿದ್ದರೂ, ತನ್ನ ಶಕ್ತಿವಿಶೇಷದಿಂದ ಜಗತ್ಸೃಷ್ಟ್ಯಾದಿಗಳನ್ನು ನಡಯಿಸುವನೆಂಬುದೇ ಉಪನಿಷತ್ತುಗಳ ಸಿದ್ಧಾಂತವು. ಇಂತಿದ್ದರೂ ವೇದಾಂತ ವಿದ್ಯಾಹೀನರಾದ ಬುದ್ಧ, ಕಪಿಲ, ಕಣಾದ ಮೊದಲಾದ ಮೂರ್ಖರು * ವೇದದಲ್ಲಿ ಹೇಳಿದಂತೆ ಜಗತ್ತು ಪರಮಾತ್ಮನಿಂದಲೇ ಸೃಷ್ಟವಾಗಿದ್ದರೂ, ಯಾವಭಗವಂತನಿಂದ ರಚಿತವಾದ ದೇವಮನುಷ್ಯಾದಿ ಭೇದವನ್ನು ಅಂಗಿಕರಿಸುವುದಿಲ್ಲವೋ, ಆಭಗವಂತನೇ ಅರ್ಚೀರೂಪಧಾರಿಣಿಯಾದ ಲಕ್ಷ್ಮಿಯೊಡನೆ ಪೃಥುರೂಪದಿಂದವತರಿಸಿರುವನು.

* ಶ್ರು ॥ ಆತ್ಮಾವಾ ಅರೇದ್ರಷ್ಟವ್ಯಶ್ಶ್ರೋತವ್ಯೋ ಮಂತವ್ಯೋ ನಿದಿಧ್ಯಾಸಿತವ್ಯಃ । ಸೋನ್ವೇಷ್ಟವ್ಯ ಸ್ಸವಿಜಿಜ್ಞಾಸಿತವ್ಯಃ ॥ ಶ್ರು (೧) ಯತೋವಾ ಇಮಾನಿಭೂತಾನಿಜಾಯಂತೇ, (೨) ಸ್ವಾಯಮಾತ್ಮಾನ ಮಕುರುತ.

ತ್ವಮಪಿ ಪ್ರತೀತಂ ||೧೯|| ‡ ಅಯಂ ಭುವೋ ಮಂಡಲ ಮೋದಯಾದ್ರೇ ರ್ಗೋಪ್ತೈಕವೀರೋ ನರದೇವನಾಥಃ | ಆಸ್ಥಾಯ ಜೈತ್ರಂ ರಥ ಮಾತ್ತ ಚಾಪಃ ಪರ್ಯಸ್ಯತೇ ದಕ್ಷಿಣತೋ ಯಥಾ ಽ ರ್ಕಃ ||೨೦|| ಅಸ್ಮೈ ನೃಪಾಲಾಃ ಕಿಲ ತತ್ರ ತತ್ರ ಬಲಿಂ ಹರಿಷ್ಯಂತಿ ಸಲೋಕಪಾಲಾಃ | ಮಂಸ್ಯಂತ ಏಷಾಂ ಸ್ತ್ರಿಯ ಆದಿರಾಜಂ ಚಕ್ರಾಯುಧಂ ತದ್ಯಶ ಉದ್ಧರಂತ್ಯಃ ||೨೧|| ಅಯಂ ಮಹೀಂ ಗಾಂ ದುದುಹೇ ಽ ಧಿರಾಜಃ ಪ್ರಜಾಪತಿ ರ್ವೃತ್ತಿಕರಃ ಪ್ರ

ಪಶ್ಯಂತಿ - ನೋಡುವರೋ || ೧೯ || ಅಯಂ - ಈ, ನರದೇವನಾಥಃ - ಮಹಾರಾಜನು, ಆ ಉದಯಾದ್ರೇಃ- ಉದಯ ಪರ್ವತದವರೆಗೂ, ಭುವಃ - ಭೂಮಿಯ, ಮಂಡಲಂ - ಮಂಡಲವನ್ನು, ಗೋಪ್ತಾ- ಸಲಹುವನು, ಏಕವೀರಃ-ಅಸಹಾಯಶೂರನಾದ ಇವನು, ಜೈತ್ರಂ-ಜಯಶೀಲವಾದ, ರಥಂ-ರಥವನ್ನು, ಆಸ್ಥಾಯ-ಏರಿ, ಆತ್ತಚಾಪಃ-ಬಿಲ್ಲನ್ನು ಹಿಡಿದು, ಯಥಾರ್ಕಃ - ಸೂರ್ಯನಂತೆ, ದಕ್ಷಿಣತಃ- ಪ್ರದಕ್ಷಿಣವಾಗಿ, ಪರ್ಯಸ್ಯತೇ - ಸಂಚರಿಸಿರುವನು || ೨೦ || ಅಸ್ಮೈ - ಈತನಿಗೆ, ಸಲೋಕಪಾಲಾಃ - ಲೋಕಪಾಲರಿಂದ ಕೂಡಿದ, ನೃಪಾಲಾಃ - ರಾಜರು, ತತ್ರತತ್ರ - ಅಲ್ಲಲ್ಲಿ, ಬಲಿಂ - ಕಾಣಿಕೆಗಳನ್ನು, ಹರಿಷ್ಯಂತಿ ಕಿಲ - ಒಪ್ಪಿಸುವರಷ್ಟೆ, ಏಷಾಂ - ಈ ರಾಜರ, ಸ್ತ್ರಿಯಃ - ಸ್ತ್ರೀಯರು, ತದ್ಯಶಃ - ಅವನಯಶಸ್ಸನ್ನು, ಉದ್ಧರಂತ್ಯಃ - ಉದಾಹರಿಸುತ್ತಾ, ಆದಿರಾಜಂ - ಮೊದಲನೆಯ ರಾಜನಾದ ಇವನನ್ನು, ಚಕ್ರಾಯುಧಂ- ವಿಷ್ಣುವನ್ನಾಗಿ, ಮಂಸ್ಯಂತೇ-ತಿಳಿಯುವರು || ೨೧ || ಯಃ-ಯಾವನು, ಯಥೇಂದ್ರಃ - ಇಂದ್ರನಂತೆ, ಲೀಲಯಾ-ನಿರಾಯಾಸವಾಗಿ, ಸ್ವಶ...ಟ್ಯಾ-ತನ್ನ ಬಿಲ್ಲಿನ ತುದಿಯಿಂದ, ಅದ್ರೀನ್-ಬೆಟ್ಟಗಳನ್ನು, ಭಿಂದನ್-

ಸಾಕ್ಷಾತ್ತಾಗಿ ತನ್ನ ಅಂಶದಿಂದ ಈ ರಾಜರೂಪವಾಗಿ ಅವತರಿಸಿರುವನಾದಕಾರಣ ದೇವ ಮನುಷ್ಯಾದಿಗಳಿಗಿಂತಲೂ ಈತನು ಅದ್ಭುತ ಮಹಿಮನೇ ಸರಿ ||೧೯|| ಈ ರಾಜೇಂದ್ರನು ಉದಯಪರ್ವತದವರೆಗೂ ಇರುವ ಭೂಮಂಡಲವನ್ನು ಆಳುವನು. ಅಸಹಾಯ ಶೂರನಾಗಿ ಜಯಶೀಲವಾದ ರಥವನ್ನೇರಿ ಧನುವನ್ನು ಹಿಡಿದು ಮಹಾತ್ಮನಾದ ಸೂರ್ಯನಂತೆ ಲೋಕವನ್ನು ಪ್ರದಕ್ಷಿಣಮಾಡುವನು ||೨೦|| ಈತನ ಜೈತ್ರಯಾತ್ರೆಯಲ್ಲಿ ಇಂದ್ರಾದಿ ದಿಕ್ಪಾಲರೂ, ಸಕಲ ಭೂಪಾಲರೂ ಸಹ ಅಲ್ಲಲ್ಲಿ ಕಾಣಿಕೆಗಳನ್ನೊಪ್ಪಿಸುವರು. ಅಪ್ಸರಸ್ತ್ರೀಯರು ಈ ಆದಿರಾಜನನ್ನು ಸಾಕ್ಷಾನ್ನಾರಾಯಣನೆಂದು ತಿಳಿದು ಆತನ ಕೀರ್ತಿಯನ್ನಿಂತುಕೊಂಡಾಡುವರು.||೨೧|| "ಅಮ್ಮಾ ಸಖಿಯರಿರಾ ! ಈ ಪೃಥುಸಾರ್ವಭೌಮನ ಮಹಿಮೆಯನ್ನು ಕೇಳಬಲ್ಲಿರಾ ? ಈ ಮಹಾನುಭಾವನು, ತಂದೆಯಾದ ವೇನನ ದೌರಾತ್ಮ್ಯದಿಂದ ಯಾವಸಸ್ಯಗಳೂ ಮೊಳೆಯ

‡ ಶ್ಲೋ|| ಏಷ ದೋಗ್ಧಾ ಮಹೀಂ ಪೀಡ್ಯೋ ಗಾಂ ಸತೀ ಮೋಜಸೌಷಧೀಃ |
ಸವಾಂ ಕರಿಷ್ಯತೇ ಚೇಮಾಂ ಧನುಷ್ಕೋಟ್ಯಾಸಮಂತತಃ||

ಈ ಶೂರನಾದ ಪೃಥುರಾಜನು ತನ್ನ ಪರಾಕ್ರಮದಿಂದ ಭೂಮಿಯಿಂದ ಸಸ್ಯಾದಿಗಳನ್ನು ಕರೆಯುವನು. ತನ್ನ ಬಿಲ್ಲಿನ ತುದಿಯಿಂದಲೇ ಭೂಮಿಯನ್ನು ಸಮಗೊಳಿಸುವನು:

ಈ ಶ್ಲೋಕಕ್ಕೆ ವೀರರಾಘವೀಯ ವಿಜಯಧ್ವಜೀಯ ಶುಕದೇವೀಯ ವ್ಯಾಖ್ಯಾನಗಳುಂಟು ಶ್ರೀಧರ ಗೋಸ್ವಾಮಿ, ಚಕ್ರವರ್ತಿ, ರಾಧಾರಮಣರ ವ್ಯಾಖ್ಯಾನಗಳಿರುವುದಿಲ್ಲ. ದೀಪಿನೀವ್ಯಾಖ್ಯಾತೃವು, ಪುನರುಕ್ತವಾಗುವುದರಿಂದ ಈ ಅಧಿಕಪಾಠವು ವಿನೀತವೆಂದು ಅಭಿಪ್ರಾಯ ಪಟ್ಟಿರುತ್ತಾನೆ.

ಜಾನಾಂ । ಯೋ ಲೀಲಯಾಽದ್ರೀನ್ ಸ್ವಶರಾಸಕೋಟ್ಯಾ ಭಿಂದನ್ ಸಮಾಂ ಗಾಮಕರೋದ್ಯಥೇಂದ್ರಃ ॥೨೨॥ ವಿಸ್ಫೂರ್ಜಯನ್ನಾಜಗವಂ ಧನುಸ್ಸ್ವಯಂ ಯದಾ ಚರತ್ ಕ್ಷ್ಮಾಮವಿಷಹ್ಯಮಾಜೌ । ತದಾ ನಿಲಿಲ್ಯುರ್ದಿಶಿ ದಿಶ್ಯಸಂತೋ ಲಾಂಗೂಲಮುದ್ಯಮ್ಯ ಯಥಾ ಮೃಗೇಂದ್ರಃ ॥೨೩॥ ಏಷೋಽಶ್ವಮೇಧಾನ್ ಶತಮಾಜಹಾರ ಸರಸ್ವತೀ ಪ್ರಾದುರಭಾವಿ ಯತ್ರ। ಅಹಾರ * ಷೀದ್ಯಸ್ಯ ಹಯಂ ಪುರಂದರಶ್ಶತಕ್ರತುಶ್ಚರಮೇ ವರ್ತಮಾನೇ ॥೨೪॥ ಏಷ ಸ್ವಸದ್ಮೋಪವನೇ ಸಮೇತ್ಯ ಸನತ್ಕುಮಾರಂ ಭಗವಂತ

---

ಭೇದಿಸುತ್ತಾ, ಗಾಂ-ಭೂಮಿಯನ್ನು, ಸಮಾಂ-ಸಮವಾಗಿ, ಅಕರೋತ್ - ಮಾಡಿದನೋ, ಪ್ರಜಾನಾಂ-ಪ್ರಜೆಗಳಿಗೆ, ವೃತ್ತಿಕರಃ- ಜೀವನ ಪ್ರದನಾದ, ಪ್ರಜಾಪತಿಃ - ಪ್ರಜಾಪಾಲಕನಾದ, ಅಯಂ ಅಧಿರಾಜಃ- ಈ ಮಹಾರಾಜನು, ಗಾಂ - ಗೋರೂಪವನ್ನು ಧರಿಸಿದ, ಮಹೀಂ - ಭೂಮಿಯನ್ನು, ದುದುಹೇ- ಕರೆದನು ॥ ೨೨ ॥ ಲಾಂಗೂಲಂ - ಬಾಲವನ್ನು, ಉದ್ಯಮ್ಯ - ಎತ್ತಿಕೊಂಡು, ಯಥಾ ಮೃಗೇಂದ್ರಃ-ಸಿಂಹದಂತೆ, ಆಜೌ - ಯುದ್ಧದಲ್ಲಿ, ಅವಿಷಹ್ಯಂ - ಸ್ಥೈರಿಸಲಾಗದ, ಆಜಗವಂ - ಎತ್ತು ಮೇಕೆಗಳ ಕೊಂಬುಗಳಿಂದ ಮಾಡಲ್ಪಟ್ಟ, ಧನುಃ - ಬಿಲ್ಲನ್ನು, ವಿಸ್ಫೂರ್ಜಯನ್ - ಟಂಕಾರಮಾಡುತ್ತಾ, ಸ್ವಯಂ- ಏಕವೀರನಾಗಿ, ಯದಾ-ಯಾವಾಗ, ಕ್ಷ್ಮಾಂ - ಭೂಮಿಯನ್ನು, ಅಚರತ್ - ಸಂಚರಿಸುವನೋ, ತದಾ-ಆಗ, ಅಸಂತಃ - ಧರ್ಮವಿರೋಧಿಗಳು, ದಿಶಿದಿಶಿ - ದಿಕ್ಕುದಿಕ್ಕುಗಳಲ್ಲಿಯೂ, ನಿಲಿಲ್ಯುಃ - ಅವಿತುಕೊಂಡರು, ಚರಮೇ - ಕಡೆಯ (ನೂರನೆಯ) ಯಜ್ಞವು, ವರ್ತಮಾನೇ - ನಡೆಯುತ್ತಿರಲು, ಶತಕ್ರತುಃ - ನೂರು ಯಾಗಗಳನ್ನು ಮಾಡಿದ, ಪುರಂದರಃ-ಇಂದ್ರನು, ಯಸ್ಯ - ಯಾವನ ಹಯಂ-ಯಜ್ಞಾಶ್ವವನ್ನು, ಅಹಾರ್ಷೀತ್-ಅಪಹರಿಸಿದನೋ, ಏಷಃ - ಆ ಪೃಥುರಾಜನು, ಯತ್ರ-ಎಲ್ಲಿ, ಸರಸ್ವತೀ - ನದಿಯು, ಪ್ರಾದುರಭಾವಿ - ಉಂಟಾಯಿತೋ, ಅಂತಹ ಬ್ರಹ್ಮಾವರ್ತದಲ್ಲಿ, ಶತಂ ಅಶ್ವಮೇಧಾನ್ - ನೂರು ಅಶ್ವಮೇಧಗ

---

ದಂತೆ ಸಕಲ ಬೀಜಗಳನ್ನೂ ನುಂಗಿ ಲೋಕಕ್ಷೋಭೆಯನ್ನುಂಟುಮಾಡಿರುವ ಗೋರೂಪಧಾರಿಣಿಯಾದ ಭೂದೇವಿಯಿಂದ ಸಕಲ ಸಸ್ಯಗಳನ್ನೂ ಮೊಳೆಯಿಸಿದನು. ಜೀವನವಿಲ್ಲದೆ ಬಳಲಿಬೆಂಡಾಗಿದ್ದ ಸಕಲ ಪ್ರಜೆಗಳಿಗೂ ಜೀವನವನ್ನಿತ್ತು ಸಲಹಿದನು. ಮುನ್ನು ಮಹೇಂದ್ರನು ವಜ್ರಾಯುಧದಿಂದ ಪರ್ವತ ಪಕ್ಷಗಳನ್ನು ತರಿದಂತೆ ಈತನು ತನ್ನ ಧನುಷ್ಕೋಟಿಯಿಂದಲೇ ಸಕಲ ಶೈಲಗಳನ್ನೂ ಭೇದಿಸುತ್ತಾ, ಹಳ್ಳತಿಟ್ಟುಗಳಿಲ್ಲದಂತೆ ಭೂಮಿಯನ್ನು ಸಮಗೊಳಿಸಿದನು ॥೨೨॥ ಬಾಲವನ್ನೆತ್ತಿಕೊಂಡು ಕಾಡಾನೆಗಳ ಹಿಂಡಿನಲ್ಲಿ ಓಡಾಡುವ ಮೃಗೇಂದ್ರನಂತೆ, ಈತನು ತನ್ನ ಅಜಯ್ಯವಾದ ಆಜಗವ ಚಾಪಕ್ಕೆ ಹೆದೆಯೂಡಿ ಟಂಕಾರ ಗೊಳಿಸುತ್ತಾ, ಏಕವೀರನಾಗಿ ಯಾವಾಗ ಜೈತ್ರಯಾತ್ರೆಗೆ ಹೊರಟನೋ, ಆಗಲೇ ಧರ್ಮವಿರೋಧಿಗಳಾದ ದುಷ್ಟರೆಲ್ಲರೂ ದಿಕ್ಕು ದಿಕ್ಕುಗಳಲ್ಲಿಯೂ ಔತುಕೊಂಡರು ॥೨೩॥ ನೂರನೆಯ ಅಶ್ವಮೇಧ ಕ್ರತುವನ್ನು ನಡೆಯಿಸುತ್ತಿರುವಾಗ ಪರರೇಳಿಗೆಯನ್ನು ಸೈರಿಸಲಾರದ ಶತಕ್ರತುವಾದ ದೇವರಾಜನು ಯಾವನ ಯಜ್ಞಾಶ್ವವನ್ನು ಕದ್ದೊಯ್ದನೋ, ಯಾವ ಮಹಾತ್ಮನು ಕ್ರತುಗಳನ್ನು ನಡೆಯಿಸಿದ ಬ್ರಹ್ಮಾವರ್ತದಲ್ಲಿ ಗುಪ್ತಗಾಮಿನಿಯಾದ ಸರಸ್ವತೀಮಹಾನದಿಯು ಆವಿರ್ಭವಿಸಿದುದೋ, ಅಂತಹ ಈ ಮಹೀಪಾಲನು ನೂರು ಅಶ್ವಮೇಧಗಳನ್ನು ನಡೆಯಿಸಿದ

ಮೇಕಂ ಆರಾಧ್ಯ ಭಕ್ತ್ಯಾಲಭತಾಮಲಂ ತ ಜ್ಜ್ಞಾನಂ ಯತೋ ಬ್ರಹ್ಮ ಪರಂ ವಿದಂತಿ ॥೨೪॥ ತತ್ರ ತತ್ರ ಗಿರ ಸ್ತಾಸ್ತಾ ಇತಿ ವಿಶ್ರುತವಿಕ್ರಮಃ । ಶ್ರೋಷ್ಯತ್ಯಾತ್ಮಾ ಶ್ರಿತಾ ಗಾಥಾಃ ಪೃಥುಃ ಪೃಥುಪರಾಕ್ರಮಃ ॥೨೫॥ ದಿಶೋ ವಿಜಿತ್ಯಾ ಽ ಪ್ರತಿರುದ್ಧ ಚಕ್ರಃ ಸ್ವತೇಜಸೋತ್ಪಾಟಿತ ಲೋಕ ಶಲ್ಯಃ । ಸು ರಾಸುರೇಂದ್ರೈ ರುಪಗೀಯಮಾನ ಮಹಾನುಭಾವೋ ಭವಿತಾ ಪತಿ ರ್ಭುವಃ॥

—ಇತಿ ಷೋಡಶೋಧ್ಯಾಯಃ—

---

ಳನ್ನು, ಆಜಹಾರ - ನಡೆಯಿಸಿದನು ॥ ೨೪ ॥ ವಿಷಃ-ಇವನು, ಸ್ವಸ...ನೇ - ತನ್ನ ಅರಮನೆಯ ಬಳಿಯಲ್ಲಿರುವ ಉದ್ಯಾನದಲ್ಲಿ, ಏಕಂ - ಅದ್ವಿತೀಯನಾದ, ಭಗವಂತಂ - ನಿರತಿಶಯಮಹಿಮನಾದ, ಸನತ್ಕುಮಾರನನ್ನು, ಸಮೇತ್ಯ-ಸೇರಿ, ಭಕ್ತ್ಯಾ - ಭಕ್ತಿಯಿಂದ, ಆರಾಧ್ಯ-ಸೇವಿಸಿ, ಯತಃ - ಯಾವುದರಿಂದ, ಪರಂ-ಮಾಯಾತೀತವಾದ, ಬ್ರಹ್ಮ- ಪರಮಾತ್ಮನನ್ನು, ವಿದಂತಿ - ಪಡೆಯುವರೋ, ತತ್ - ಅಂತಹ, ಅಮಲಂ-ಶುದ್ಧವಾದ, ಜ್ಞಾನಂ - ಅಪರೋಕ್ಷಜ್ಞಾನವನ್ನು, ಅಲಭತ-ಹೊಂದಿದನು ॥ ೨೪ ॥ ಪೃಥುಪರಾಕ್ರಮಃ - ಅಧಿಕ ಪರಾಕ್ರಮವುಳ್ಳ, ವಿಶ್ರುತವಿಕ್ರಮಃ - ಪ್ರಸಿದ್ಧವಾದ ಯಶಸ್ಸುಳ್ಳ, ಪೃಥುಃ- ಪೃಥುವು, ಇತಿ-ಇಂತು, ತತ್ರತತ್ರ - ಅಲ್ಲಲ್ಲಿ, ಆತ್ಮಾಶ್ರಿತಾಃ - ತನಗೆ ಸಂಬಂಧಿಸಿದ, ತಾಸ್ತಾಃ-ಆ ಆ, ಗಿರಃ-ನುಡಿಗಳನ್ನು, ಗಾಥಾಃ-ಹಾಡುಗಳನ್ನೂ, ಶ್ರೋಷ್ಯತಿ - ಕೇಳುವನು ॥ ೨೫ ॥ ಸ್ವತೇಜಸಾ-ತನ್ನ ಸಾಮರ್ಥ್ಯದಿಂದ, ಉತ್ಪಾ...ಲ್ಯಃ - ನಾಶಗೊಳಿಸಲ್ಪಟ್ಟ ಲೋಕಕಂಟಕರುಳ್ಳ, ಅಪ್ರ....ಕ್ರಃ-ತಡೆಯಲ್ಪಡದ ಆಜ್ಞೆಯುಳ್ಳ ರಾಜನು, ದಿಶಃ - ದಿಕ್ಕುಗಳನ್ನು, ವಿಜಿತ್ಯ-ಗೆದ್ದು, ಸುರಾ...ದ್ರೈಃ - ದೇವ ದಾನವ ವೀರರಿಂದ, ಉಪ...ವಃ - ಹೊಗಳಲ್ಪಡುವ ಉತ್ತಮ ಮಹಿಮೆಯುಳ್ಳವನಾಗಿ, ಭುವಃ - ಭೂಮಿಗೆ, ಪತಿಃ - ಒಡೆಯನು, ಭವಿತಾ-ಆಗುವನು ॥ ೨೬ ॥

—ಷೋಡಶಾಧ್ಯಾಯಂ ಸಮಾಪ್ತಂ—

---

ನು॥೨೪॥ ತರುವಾಯ ಈ ಧರಾವಲ್ಲಭನು ತನ್ನ ಅರಮನೆಯ ಬಳಿಯಲ್ಲಿಯೇ ಇರುವ ಒಂದು ಉದ್ಯಾನವನದಲ್ಲಿ ಏಕಾಕಿಯಾಗಿ ಬಿಜಮಾಡಿದ ಭಗವಂತನಾದ ಸನತ್ಕುಮಾರಮುನಿಯನ್ನು ಕಂಡು, ಭಕ್ತಿ ಭಾವದಿಂದ ಸೇವಿಸಿ, ಮಹಾತ್ಮರಾದವರು ಯಾವುದರಿಂದ ಮಾಯಾತೀತವಾದ ಪರಬ್ರಹ್ಮವನ್ನು ಪಡೆಯುವರೋ, ಅಂತಹ ಬ್ರಹ್ಮಜ್ಞಾನವನ್ನು ಪಡೆದನು" ॥೨೪॥ ಈ ಪ್ರಕಾರವಾಗಿ ಸಲ್ಲಾಪರೂಪವಾಗಿ ಹೊಗಳುತ್ತಿರುವ ಆ ಸ್ತ್ರೀಯರ ಸವಿನುಡಿಗಳನ್ನು ಅಧಿಕ ಪರಾಕ್ರಮಶಾಲಿಯೂ, ವಿಶಾಲಕೀರ್ತಿಯೂ ಆದ ಈ ರಾಜನು ಅಲ್ಲಲ್ಲಿ ಕೇಳುವನು. ॥೨೫॥ ಈ ಮಹೀಮಹೇಂದ್ರನು, ತನ್ನ ಪರಾಕ್ರಮದಿಂದ ಲೋಕಕಂಟಕರೆಲ್ಲರನ್ನೂ ನಾಶಗೊಳಿಸುವನು. ಜಗತ್ತೆಲ್ಲವನ್ನೂ ಜಯಿಸಿ ಸಕಲ ದಿಕ್ಕುಗಳಲ್ಲಿಯೂ ತನ್ನ ಆಜ್ಞಾಚಕ್ರವನ್ನು ಸಂಚಾರಗೊಳಿಸುವನು. ದೇವದಾನವರಾದಿಯಾಗಿ ಸಕಲ ವೀರರಿಂದಲೂ ಕೈವಾರಗೊಳ್ಳುವನು, ಎಂದು ವಂದಿಮಾಗಧಾದಿಗಳು ಪೃಥುಸಾರ್ವಭೌಮನನ್ನು ಹೊಗಳುತ್ತಿದ್ದ ರೆಂಬಲ್ಲಿಗೆ, ಭಾಗವತ ಚಕೋರ ಚಂದ್ರಿಕೆಯೊಳ್

—ಹದಿನಾರನೆಯ ಅಧ್ಯಾಯಂ ಮುಗಿದುದು—

## — ಓಂನಮಃ ಪರಮಾತ್ಮನೇ —

### ಅಥ ಸಪ್ತದಶೋಽಧ್ಯಾಯಃ

ಮೈತ್ರೇಯಃ । ಏವಂ ಸಭಗವಾನ್ ವೈನ್ಯಃ ಖ್ಯಾಪಿತೋ ಗುಣಕರ್ಮಭಿಃ । ಛಂದಯಾಮಾಸ ತಾನ್ ಕಾಮೈಃ ಪ್ರತಿಪೂಜ್ಯಾಽಭಿನಂದ್ಯ ಚ ॥೧॥ ಬ್ರಾಹ್ಮಣಪ್ರಮುಖಾನ್ ವರ್ಣಾನ್ ಭೃತ್ಯಾಽಮಾತ್ಯ ಪುರೋಧಸಃ । ಪೌರಾನ್ ಜಾನಪದಾನ್ ಶ್ರೇಣೀಃ ಪ್ರಕೃತೀಃ ಸಮಪೂಜಯತ್ ॥೨॥ ವಿದುರಃ । ಕಸ್ಮಾದ್ದಧಾರ ? ಗೋರೂಪಂ ಧರಿತ್ರೀ ಬಹುರೂಪಿಣೀ । ಯಾಂ ದುದೋಹ

---

— ಸಪ್ತದಶಾಧ್ಯಾಯಂ —

ಕಂ॥ ಹಸಿದ ಜನ ರನ್ನವುಂ ಪ್ರಾ । ರ್ಥಿಸಲರಸಂ ಮರುಗಿ ಬೀಜಗಳ್ ಮೊಳೆಯುದವೊಲ್ ।
ಗ್ರಸಿಸಿದ ಧರಣಿಯು ತರುಬಲ್ । ವಸುಪತಿಯುಂ ವಸುಧೆ ಪೊಗಳ್ದು ಮನ್ನಣೆಗೊಳಿಪಳ್ ॥

ಮೈತ್ರೇಯನು ಹೇಳುತ್ತಾನೆ:—ಭಗವಾನ್ - ಪೂಜ್ಯನಾದ, ಸವೈನ್ಯಃ - ಆ ಪೃಥುವು, ಏವಂ - ಇಂತು, ಗುಣಕರ್ಮಭಿಃ - ಗುಣಗಳಿಂದಲೂ, ಕರ್ಮಗಳಿಂದಲೂ, ಖ್ಯಾಪಿತಃ - ಪ್ರಸಿದ್ಧಿಗೊಳಿಸಲ್ಪಟ್ಟವನಾಗಿ, ಕಾಮೈಃ - ಇಷ್ಟಾರ್ಥಗಳಿಂದ, ಪ್ರತಿಪೂಜ್ಯ - ಬಹುಮಾನವಮಾಡಿ, ಅಭಿನಂದ್ಯಚ - ಸಂತೋಷಿಸಿ, ತಾನ್ - ಆ ಹೊಗಳ ಭಟರನ್ನು, ಛಂದಯಾಮಾಸ - ಸಂತೋಷಗೊಳಿಸಿದನು ॥ ೧ ॥ ಬ್ರಾಹ್ಮಣಪ್ರಮುಖಾನ್ - ಬ್ರಾಹ್ಮಣರೇ ಮೊದಲಾದ, ವರ್ಣಾನ್ - ನಾಲ್ಕುವರ್ಣದವರನ್ನು, ಭೃತ್ಯಾ....ಸಃ - ಸೇವಕರು, ಮಂತ್ರಿಗಳು, ಪುರೋಹಿತರು, ಇವರನ್ನು, ಪೌರಾನ್- ಪಟ್ಟಣಿಗರನ್ನು, ಜಾನಪದಾನ್ - ದೇಶದವರನ್ನು, ಶ್ರೇಣೀಃ-ಅಂಗರಕ್ಷಕರನ್ನೂ, ಪ್ರಕೃತೀಃ-ತನ್ನ ಊಳಿಗದಲ್ಲಿರುವರನ್ನೂ, ಸಮಪೂಜಯತ್- ಪೂಜಿಸಿದನು ॥ ೨ ॥ ವಿದುರನು ಬೆಸಗೊಳ್ಳುತ್ತಾನೆ, ಪೃಥುಃ - ಪೃಥುರಾಜನು, ಯಾಂ -ಯಾವುದನ್ನು, ದುದೋಹ - ಕರೆದನೋ, ಬಹುರೂಪಿಣೀ - ಕಾಮರೂಪಿಣಿಯಾದ, ಧರಿತ್ರೀ - ಆ ಭೂ

---

### — ಹದಿನೇಳನೆಯ ಅಧ್ಯಾಯ —

#### — ಭೂದೇವಿಯು ತನ್ನನ್ನು ಕೊಲ್ಲಲೆಳಸಿದ ಪೃಥುರಾಜನನ್ನು ಸ್ತುತಿಸಿದುದು —

ಅನಂತರದಲ್ಲಿ ಮೈತ್ರೇಯ ಮುನಿಯು ವಿದುರನಿಗೆ ಹೇಳುತ್ತಾನೆ. "ಅಯ್ಯಾ ವಿದುರನೆ ? ಆಮೇಲೆ ಮಹಾತ್ಮನಾದ ಪೃಥುಭೂಪಾಲನು, ತನ್ನ ಅದ್ಭುತಗಳಾದ ಕಾರ್ಯಗಳನ್ನೂ, ಶೌರ್ಯೌದಾರ್ಯಾದಿ ಸದ್ಗುಣಗಳನ್ನೂ ಪ್ರಸಿದ್ಧಿಗೊಳಿಸಿ ಹೊಗಳುತ್ತಿರುವ ಆವಂದಿಮಾಗಧಾದಿಗಳಿಗೆ ಬೇಕಾದ ವಸ್ತ್ರಾಭರಣಾದಿಗಳನ್ನಿತ್ತು, ಅವರ ಸ್ತುತಿವಚನಗಳಿಂದ ಸಂತೋಷಗೊಂಡವನಾಗಿ ಸವಿನುಡಿಗಳಿಂದವರನ್ನು ಸಂತೋಷಗೊಳಿಸಿದನು ॥೧॥ ಅಂತೆಯೇ ಬ್ರಹ್ಮಕ್ಷತ್ರಿಯ, ವೈಶ್ಯ, ಶೂದ್ರರೆಂಬ ಚಾತುರ್ವರ್ಣ್ಯದವರಿಗೂ, ಭೃತ್ಯರಿಗೂ, ಮಂತ್ರಿಗಳಿಗೂ ಪುರೋಹಿತರಿಗೂ, ಪಟ್ಟಣಿಗರಿಗೂ, ದೇಶದವರಿಗೂ, ತನ್ನ ಜತೆಗಾರರಾದ ಮೈಗಾವಲವರಿಗೂ, ತನ್ನ ಊಳಿಗದವರಿಗೂ ಅವರವರ ಇಚ್ಛಾನುಸಾರವಾಗಿ ಬಹುಮಾನಗಳನ್ನಿತ್ತನು" ಎಂದು ಹೇಳಲು ವಿದುರನು ಬೆಸಗೊಳ್ಳುತ್ತಾನೆ. ಅಯ್ಯಾ ಬ್ರಾಹ್ಮಣೋತ್ತಮನಾದ

ಹ ಪೃಥು ಸ್ತತ್ರ ಕೋವತ್ಸೋ ? ದೋಹನಂಚ ಕಿಂ ? ||೩|| ಪ್ರಕೃತ್ಯಾ ವಿಷಮಾ ದೇವೀ ಕೃತಾ ತೇನ ಸಮಾ ಕಥಂ ? | ತಸ್ಯ ಮೇಧ್ಯಂ ಹಯಂ ದೇವಃ ಕಸ್ಯ ಹೇತೋ ರಪಾಹರತ್ ? ||೪|| ಸನತ್ಕುಮಾರಾತ್ ಭಗವತೋ ಬ್ರಹ್ಮನ್ ! ಬ್ರಹ್ಮವಿದುತ್ತಮಾತ್| ಲಬ್ಧ್ವಾ ಜ್ಞಾನಂ ಸವಿಜ್ಞಾನಂ ರಾಜರ್ಷಿಃ ಕಾಂಗತಿಂ ಗತಃ ? ||೫|| ಯಚ್ಚಾಽನ್ಯದಪಿ ಕೃಷ್ಣಸ್ಯ ಭವಾನ್ ಭಗವತಃ ಪ್ರಭೋಃ | ಶ್ರವಃ ಸುಶ್ರವಸಃ ಪುಣ್ಯಂ ಪೂರ್ವದೇಹಕಥಾಶ್ರಯಂ ||೬|| ಭಕ್ತಾಯ ಮೇಽನುರಕ್ತಾಯ ತವಚಾಽಧೋಕ್ಷಜಸ್ಯಚ | ವಕ್ತುಮರ್ಹಸಿ ಯೋಽದುಹ್ಯ ದ್ವೈನ್ಯರೂಪೇಣ ಗಾಮಿಮಾಂ ||೭||

---

ಮಿಯು, ಕಸ್ಮಾತ್-ಏಕೆ, ಗೋರೂಪಂ-ಗೋರೂಪವನ್ನು, ದಧಾರ-ಧರಿಸಿತು, ತತ್ರ-ಅಲ್ಲಿ, ವತ್ಸಃ-ಕರುವು, ಕಃ - ಯಾವುದು ? ದೋಹನಂಚ - ಹಿಂಡಲ್ಪಟ್ಟದು, ಕಿಂ - ಏನು ? || ೩ || ಪ್ರಕೃತ್ಯಾ - ಸ್ವಭಾವದಿಂದ, ವಿಷಮಂ - ವ್ಯತ್ಯಸ್ತವಾಗಿರುವ, ದೇವೀ - ಭೂದೇವಿಯು, ತೇನ- ಅವನಿಂದ, ಕಥಂ - ಹೇಗೆ, ಸಮಾ - ಸಮವಾಗಿ, ಕೃತಾ - ಮಾಡಲ್ಪಟ್ಟಳು ? ದೇವಃ - ಇಂದ್ರನು, ತಸ್ಯ - ಅವನ, ಮೇಧ್ಯಂ - ಪರಿಶುದ್ಧವಾದ, ಹಯಂ - ಕುದುರೆಯನ್ನು, ಕಸ್ಯಹೇತೋಃ - ಯಾವ ಕಾರಣದಿಂದ, ಅಪಾಹರತ್ - ಕದ್ದನು || ೪ || ಹೇ ಬ್ರಹ್ಮನ್ - ಎಲೈ ಬ್ರಾಹ್ಮಣೋತ್ತಮನೆ ? ಬ್ರಹ್ಮ...ತ್ - ಜ್ಞಾನಿಗಳಲ್ಲಿ ಶ್ರೇಷ್ಠನಾದ, ಭಗವತಃ - ಷಾಡ್ಗುಣ್ಯಯುಕ್ತನಾದ, ಸನತ್ಕುಮಾರಾತ್ - ಸನತ್ಕುಮಾರಮುನಿಯಿಂದ, ಸವಿಜ್ಞಾನಂ - ಅಪರೋಕ್ಷಜ್ಞಾನದಿಂದ ಕೂಡಿದ, ಜ್ಞಾನಂ - ಬ್ರಹ್ಮಜ್ಞಾನವನ್ನು, ಲಬ್ಧ್ವಾ - ಪಡೆದು, ರಾಜರ್ಷಿಃ - ಪೃಥುರಾಜನು, ಕಾಂಗತಿಂ - ಯಾವ ಪದವಿಯನ್ನು, ಗತಃ - ಪಡೆದನು || ೫ || ಸುಶ್ರವಸಃ- ಪುಣ್ಯಶ್ಲೋಕನಾದ, ಭಗವತಃ - ಭಗವಂತನಾದ, ಪ್ರಭೋಃ - ಜಗನ್ನಾಥನಾದ, ಕೃಷ್ಣಸ್ಯ - ಶ್ರೀಕೃಷ್ಣನ, ಪೂರ್ವ....ಯಂ - ಮೊದಲಿನ ಅವತಾರವನ್ನಾಶ್ರಯಿಸಿದ, ಪುಣ್ಯಂ - ಪಾವನವಾದ, ಶ್ರವಃ - ಯಶಸ್ಸನ್ನು, ಅನ್ಯದಪಿಯಚ್ಚ - ನಾನು ಪ್ರಶ್ನೆಮಾಡದಿರುವ ಇತರ ಸಂಗತಿಗಳನ್ನೂ, ಭವಾನ್ - ನೀನು, ಯಃ - ಯಾವನು, ವೈನ್ಯರೂಪೇಣ - ಪೃಥುರೂಪದಿಂದ, ಇಮಾಂಗಾಂ - ಈ ಭೂಮಿಯೆಂಬಾಕಳನ್ನು, ಅದುಹ್ಯತ್ - ಕರೆದನೋ, ಅದನ್ನು, ತವಚ - ನಿನಗೂ, ಅಧೋಕ್ಷಜಸ್ಯಚ - ಕೃಷ್ಣನಿಗೂ, ಭಕ್ತಾ

---

ಮೈತ್ರೇಯಮುನಿಯೆ ! ಪೃಥುರಾಜನು ಭೂಮಿಯನ್ನು ಹಿಂಡಿದನೆಂದು ಹೇಳಿದೆಯಲ್ಲಾ ? ಕಾಮರೂಪಿಣಿಯಾದ ಆಭೂದೇವಿಯು ಆಕಳಿನರೂಪವನ್ನು ಪಡೆಯುವುದಕ್ಕೆ ಕಾರಣವೇನು ? ಆ ಆಕಳನ್ನು ಹಿಂಡಿದಾಗ ಕರುವಾವುದು ? ಅದರಿಂದ ಏನನ್ನು ಹಿಂಡಿದನು ? ||೩|| ಸ್ವಭಾವದಿಂದಲೇ ಹಳ್ಳತಿಟ್ಟಾಗಿರುವ ಭೂಮಿಯನ್ನು ಆತನು ಸರಿಪಡಿಸಿದುದೆಂತು? ಆಪೃಥುರಾಜನ ಪವಿತ್ರವಾದ ಯಜ್ಞಾಶ್ವವನ್ನು ದೇವೇಂದ್ರನು ಕದ್ದೊಯ್ದುದೇಕೆ? ||೪||ಜ್ಞಾನಿಶಿರೋಮಣಿಯೆನಿಸಿ ಅಣಿಮಾದ್ಯಷ್ಟ ಸಿದ್ಧಿಗಳನ್ನು ಕೈವಶಗೊಳಿಸಿಕೊಂಡಿರುವ ಸನತ್ಕುಮಾರಮುನಿಯಿಂದ ಅಪರೋಕ್ಷಜ್ಞಾನಸಹಿತವಾದ ಬ್ರಹ್ಮಜ್ಞಾನವನ್ನು ಪಡೆದು ಆರಾಜಋಷಿಯು ಯಾವ ಪದವಿಯನ್ನು ಹೊಂದಿದನು?||೫||ನಾನು ಮಹಾತ್ಮನಾದ ನಿನಗೂ ಶ್ರೀಕೃಷ್ಣನಿಗೂ ಭಕ್ತನಾಗಿಯೂ ಅನುರಕ್ತನಾಗಿಯೂ ಇರುವುದರಿಂದ,ಯಾವ ಭಗವಂತನು ಪೃಥುರೂಪವಾಗಿ ಭೂಮಿಯೆಂಬ ಆಕಳನ್ನು ಕರೆದನೋ, ಅಂತಹ ಷಡ್ಗುಣೈಶ್ವರ್ಯ ಸಂಪನ್ನನೂ,

ಶ್ರೀಸೂತಃ ॥ ಚೋದಿತೋ ವಿದುರೇಣೈವಂ ವಾಸುದೇವ ಕಥಾಂಪ್ರತಿ ।
ಪ್ರಶಸ್ಯ ತಂ ಪ್ರೀತಮನಾ ಮೈತ್ರೇಯಃ ಪ್ರತ್ಯಭಾಷತ ॥೮॥ ಮೈತ್ರೇಯಃ ॥
ಯದಾಽಭಿಷಿಕ್ತಃ ಪೃಥು ರಂಗ ! ವಿಪ್ರೈ ರಾಮಂತ್ರಿತೋ ಜನತಾಯಾ
ಶ್ಚ ಪಾಲಃ । ಪ್ರಜಾ ನಿರನ್ನೇ ಕ್ಷಿತಿಪೃಷ್ಠ ಏತ್ಯ ಕ್ಷುತ್ ಕ್ಷಾಮದೇಹಾಃ
ಪತಿ ಮಭ್ಯವೋಚನ್ ॥೯॥ ವಯಂ ರಾಜನ್ ! ಜಾಠರೇಣಾಽಭಿತಪ್ತಾ
ಯಥಾಽಗ್ನಿನಾ ಕೋಟರಸ್ಥೇನ ವೃಕ್ಷಾಃ । ತ್ವಾ ಮದ್ಯಯಾತಾಃ ಶರಣಂ
ಶರಣ್ಯಂ ಯಃ ಸಾಧಿತೋ ವೃತ್ತಿಕರಃ ಪತಿ ರ್ನಃ ॥೧೦॥ ತನ್ನೋ ಭವಾ

---

ಯ - ಭಕ್ತನಾದ, ಅನುರಕ್ತಾಯ - ಪ್ರತಿಪಾತ್ರನಾದ, ಮೇ - ನನಗೆ, ವಕ್ತುಂ - ಹೇಳುವುದಕ್ಕೆ, ಅರ್ಹಸಿ - ಯೋಗ್ಯನಾಗುತ್ತಿ ॥ ೭ ॥ ಸೂತನು ಹೇಳುತ್ತಾನೆ, ಏವಂ - ಇಂತು, ವಾಸು...ತಿ - ಭಗವಚ್ಚರಿತ್ರೆಯನ್ನು ಕುರಿತು, ವಿದುರೇಣ - ವಿದುರನಿಂದ, ಚೋದಿತಃ - ಪ್ರೇರಿಸಲ್ಪಟ್ಟ, ಮೈತ್ರೇಯಃ - ಮೈತ್ರೇಯಮುನಿಯು, ಪ್ರೀತಮನಾಃ - ಸಂತುಷ್ಟನಾಗಿ, ತಂ- ಅವನನ್ನು, ಪ್ರಶಸ್ಯ - ಹೊಗಳಿ, ಪ್ರತ್ಯಭಾಷತ - ಹೇಳಿದನು ॥ ೮ ॥ ಹೇ ಅಂಗ - ಎಲೈ ವಿದುರನೆ ! ವಿಪ್ರೈಃ - ಬ್ರಾಹ್ಮಣರಿಂದ, ಜನತಾಯಾಃ - ಜನರಿಗೆ, ಪಾಲಃ - ರಕ್ಷಕನು, ಎಂದು, ಆಮಂತ್ರಿತಃ - ನಿಯುಕ್ತನಾಗಿ, ಪೃಥುಃ - ಪೃಥುರಾಜನು, ಯದಾ - ಯಾವಾಗ, ಅಭಿಷಿಕ್ತಃ - ಅಭಿಷೇಕ ಮಾಡಲ್ಪಟ್ಟನೋ, ಕ್ಷಿತಿಪೃಷ್ಠೇ-ಭೂಮಿಯು, ನಿರನ್ನೇಸತಿ - ಅನ್ನರಹಿತವಾಗಲು, ತದಾ - ಆಗ, ಕ್ಷುತ್‌ಕ್ಷಾಮದೇಹಾಃ - ಹಸಿವಿನಿಂದ ಕೃಶರಾಗಿದ್ದ, ಪ್ರಜಾಃ - ಪ್ರಜೆಗಳು, ಏತ್ಯ - ಬಂದು, ಪತಿಂ - ರಾಜನಿಗೆ, ಅಭ್ಯವೋಚನ್ - ಹೇಳಿದರು ॥ ೯ ॥ ಹೇರಾಜನ್ - ಎಲೈ ರಾಜನೆ ! ಕೋಟರಸ್ಥೇನ - ಪೊಟ್ಟರೆಯಲ್ಲಿರುವ, ಅಗ್ನಿನಾ - ಬೆಂಕಿಯಿಂದ, ವೃಕ್ಷಾಯಥಾ - ಮರಗಳಂತೆ, ಜಾಠರೇಣ - ಜಠರಾಗ್ನಿಯಿಂದ, ಅಭಿತಪ್ತಾಃ - ಸುಡಲ್ಪಟ್ಟ, ವಯಂ - ನಾವು, ಯಃ - ಯಾವನು, ನಃ - ನಮಗೆ, ವೃತ್ತಿಕರಃ - ಜೀವನವನ್ನೀವ, ಪತಿಃ - ಪ್ರಭುವಾಗಿ, ಸಾಧಿತಃ - ಸಂಪಾದಿಸಲ್ಪಟ್ಟನೋ, ಅಂತಹ, ಶರಣ್ಯಂ - ರಕ್ಷಕನಾದ, ತ್ವಾಂ - ನಿನ್ನನ್ನು, ಅದ್ಯ - ಈಗ, ಶರಣಂ- ಪಾಲಕನನ್ನಾಗಿ, ಯಾತಾಃ - ಹೊಂದಿರುವೆವು ॥ ೧೦ ॥

---

ಪುಣ್ಯಶ್ಲೋಕನೂ, ಜಗನ್ನಾಯಕನೂ ಆದ ಶ್ರೀಕೃಷ್ಣಮೂರ್ತಿಯು ಪೂರ್ವಾವತಾರವೆನಿಸಿದ ಪೃಥುರಾಜನ ಪುಣ್ಯಕರವಾದ ಸಚ್ಚರಿತ್ರೆಯನ್ನೂ, ನಾನು ಪ್ರಶ್ನೆಮಾಡದಿರುವ ಇತರ ಸಂಗತಿಗಳನ್ನೂ ಸಹ ನನಗೆ ದಯಮಾಡಿ ತಿಳುಹಿಸು, ಎಂದು ಬೆಸಗೊಂಡನು ॥೬-೭॥ ಅಯ್ಯಾ ಶೌನಕಾದಿಗಳಿರಾ ! ಇಂತು ವಿದುರನು ಭಗವತ್ಕಥೆಯನ್ನು ಅರುಹಬೇಕೆಂದು ಬೇಡಲು, ಮೈತ್ರೇಯ ಮುನಿಯು ಸಂತೋಷಗೊಂಡು, ಆತನ ಭಕ್ತಿ ಶ್ರದ್ಧೆಗಳಿಗೆ ಮೆಚ್ಚಿ ಹೇಳತೊಡಗಿದನು ॥೮॥ ಎಲೈ ವಿದುರನೆ ! ಲೋಕರಕ್ಷಣೆಗಾಗಿ ಬ್ರಾಹ್ಮಣೋತ್ತಮರು ವೇನಶರೀರಮಥನದಿಂದ ಜನಿಸಿದ ಪೃಥುರಾಜನಿಗೆ ಪಟ್ಟವನ್ನುಕಟ್ಟಿ ಪ್ರಜಾಪಾಲನೆಗಾಗಿ ನಿಯಮಿಸಲು, ಅನ್ನವಿಲ್ಲದೆ ಭೂಮಿಯಲ್ಲಿರುವ ಪ್ರಜೆಗಳು ಹಸಿವಿನಿಂದ ಮೆಯ್ಬಡವಾಗಿ ಕಂಗೆಟ್ಟು ರಾಜನಬಳಿಗೆ ಬಂದು ಮೊರೆಯಿಟ್ಟರು ॥೯॥ ಅಯ್ಯಾ ರಾಜೇಂದ್ರನೆ ! ಪೊಟ್ಟರೆಯಲ್ಲಿ ಹೊತ್ತಿಕೊಂಡುರಿಯುವ ಬೆಂಕಿಯಿಂದ ಮರಗಳೊಣಗುವಂತೆ,ನಾವುಆಹಾರವಿಲ್ಲದ ಜಠರಾಗ್ನಿಯಿಂದೊಣಗಿರುವೆವಾದುದರಿಂದ,ಮಹಾತ್ಮನಾದ ಮುನಿಪುಂಗವರು ಜೀವನವನ್ನಿತ್ತು ನಮ್ಮನ್ನು ಸಲಹು

ಈಹತು ರಾತವೇ ಽ ನ್ನಂ ಕ್ಷುಧಾರ್ದಿತಾನಾಂ ನರದೇವದೇವ ! । ಯಾವ ನ್ನನಂಕ್ಷ್ಯಾಮಹ ಉಜ್ಝಿತೋರ್ಜಾ ವಾರ್ತಾಪತಿ ಸ್ತ್ವಂ ಕಿಲ ಲೋಕಪಾಲಃ ॥೧೧॥ ಮೈತ್ರೇಯಃ ॥ ಪೃಥುಃ ಪ್ರಜಾನಾಂ ಕರುಣಂ ನಿಶಮ್ಯ ಪರಿದೇವಿತಂ । ದೀರ್ಘಂ ದಧ್ಯೌ ಕುರುಶ್ರೇಷ್ಠ ! ನಿಮಿತ್ತಂ ಸೋ ಽ ನ್ವಪದ್ಯತ ॥೧೨॥ ಇತಿ ವ್ಯವಸಿತೋ ಬುದ್ಧ್ಯಾ ಪ್ರಗೃಹೀತ ಶರಾಸನಃ । ಸಂದಧೇ ವಿಶಿಖಂ ಭೂಮೇಃ ಕ್ರುದ್ಧ ಸ್ತ್ರಿಪುರಹಾ ಯಥಾ ॥೧೩॥ ಪ್ರವೇಪಮಾನಾ ಧರಣೀ ನಿಶಾಮ್ಯೋದಾಯುಧಂ ಚ ತಂ । ಗೌ ಸ್ಸತ್ಯಪಾದ್ರವದ್ಭೀತಾ

---

ಹೇ ನರದೇವದೇವ - ಎಲೈ ರಾಜರಾಜನೆ ! ತತ್ - ಆದುದರಿಂದ, ಭವಾನ್ - ನೀನು, ಕ್ಷುಧಾ - ಹಸಿವಿನಿಂದ, ಅರ್ದಿತಾನಾಂ - ಪೀಡಿತರಾದ, ನಃ - ನಮಗೆ, ಅನ್ನಂ - ಅನ್ನವನ್ನು, ರಾತವೇ - ಕೊಡುವುದಕ್ಕಾಗಿ, ಈಹತು - ಯತ್ನಮಾಡು, ತ್ವಂ - ನೀನು, ಲೋಕಪಾಲಃ - ಲೋಕರಕ್ಷಕನಾದುದರಿಂದ, ವಾರ್ತಾಪತಿಃ ಕಿಲ - ಜೀವನ ಪ್ರದನಲ್ಲವೆ ! ॥೧೧॥ ಮೈತ್ರೇಯನು ಹೇಳುತ್ತಾನೆ, ಪೃಥುಃ - ಪೃಥುರಾಜನು, ಪ್ರಜಾನಾಂ - ಪ್ರಜೆಗಳ, ಕರುಣಂ ದುಃಖಕರವಾದ, ಪರಿದೇವಿತಂ - ಗೋಳಾಟವನ್ನು, ನಿಶಮ್ಯ - ಕೇಳಿ, ಹೇಕುರುಶ್ರೇಷ್ಠ - ಎಲೈ ವಿದುರನೆ ! ಸಃ - ಅವನು, ದೀರ್ಘಂ - ಬಹಳ ಹೊತ್ತು, ದಧ್ಯೌ - ಯೋಚಿಸಿದನು. ನಿಮಿತ್ತಂ - ಕಾರಣವನ್ನು, ಅನ್ವಪದ್ಯತ - ತಿಳಿದನು ॥ ೧೨ ॥ ಇತಿ - ಇಂತು, ಬುದ್ಧ್ಯಾ - ಬುದ್ಧಿಯಿಂದ, ವ್ಯವಸಿತಃ - ನಿಶ್ಚಯಿಸಿ, ಪ್ರಗೃ...ನಃ - ಬಿಲ್ಲನ್ನು ಹಿಡಿದು, ತ್ರಿಪುರಹಾಯಥಾ - ರುದ್ರನಂತೆ, ಕ್ರುದ್ಧಃ - ಕೋಪಗೊಂಡು, ಭೂಮೇಃ - ಭೂಮಿಗಾಗಿ, ವಿಶಿಖಂ - ಬಾಣವನ್ನು, ಸಂದಧೇ - ತೊಟ್ಟನು ॥ ೧೩ ॥ ಧರಣೀ - ಭೂದೇವಿಯು, ಉದಾಯುಧಂ - ಆಯುಧವನ್ನೆತ್ತಿರುವ, ತಂ - ಅವನನ್ನು, ನಿಶಾಮ್ಯ - ಕಂಡು, ಪ್ರವೇಪಮಾನಾ - ನಡಗುತ್ತಾ, ಗೌಸ್ಸತೀ - ಆಕಳಾಗಿ, ಭೀತಾ - ಹೆದರಿಕೊಂಡು, ಮೃಗ...ತಾ - ಬೇಡನಿಂದಟ್ಟಲ್ಪಟ್ಟ, ಮೃಗೀವ - ಹೆಣ್ಣುಹುಲ್ಲೆಯಂತೆ, ಅಪಾದ್ರವತ್ - ಓಡಿದಳು ॥ ೧೪ ॥ ತದ್ವೈನ್ಯಃ - ಆಪ್ಪ

---

ವುದಕ್ಕಾಗಿ ಯಾವ ಮಹನೀಯ್ಯನನ್ನು ಸಂಪಾದಿಸದರೋ, ಅಂತಹ ನೀನೇ ನಮಗೆ ಶರಣೆಂದು ನಿನ್ನನ್ನು ಮರೆಹೊಕ್ಕಿರುವೆವು॥೧೦॥ ಅಯ್ಯಾ ರಾಜೇಂದ್ರನೆ ! ಆದುದರಿಂದ ಹಸಿವಿನಿಂದ ಬಳಲುತ್ತಿರುವ ನಮ್ಮ ಪ್ರಾಣಗಳು ಆಹಾರವಿಲ್ಲದೆ ನಾಶವಾಗುವುದಕ್ಕಿಂತ ಮೊದಲೇ ನಮಗೆ ಅನ್ನವನ್ನು ಕೊಡುವುದಕ್ಕಾಗಿ ಯತ್ನಿಸು. ಪ್ರಜಾಪಾಲಕನಾದುದರಿಂದ ನೀನೇ ನಮಗೆ ಜೀವನಪ್ರದನು ॥ ೧೧ ॥ ಎಲೈ ಕುರು ಶ್ರೇಷ್ಠನಾದ ವಿದುರನೆ ! ಇಂತು ಮೊರೆಯಿಡುತ್ತಿರುವ ಪ್ರಜೆಗಳ ಗೋಳನ್ನು ಕೇಳಿ ಪೃಥುರಾಜನು, ಬಹಳ ಹೊತ್ತಿನ ವರೆಗೂ ಯೋಚಿಸಿ ಅದರ ಕಾರಣವನ್ನು ಕಂಡುಹಿಡಿದನು ॥೧೨॥ ಬಳಿಕ ಭೂಮಿಯು ಬೀಜಗಳನ್ನು ನುಂಗಿ ಮೊಳೆಯಿಸದುದರಿಂದಲೇ ಈ ಅನರ್ಥಕ್ಕೆ ಕಾರಣವಾಗಿರುವುದೆಂದು ನಿಶ್ಚಯಿಸಿ, ಬಿಲ್ಲನ್ನು ತೆಗೆದುಕೊಂಡು, ತ್ರಿಪುರಾಂತಕನಾದ ರುದ್ರನಂತೆ ಕ್ರುದ್ಧನಾಗಿ ಭೂಮಿಯನ್ನು ಧ್ವಂಸಗೊಳಿಸಬೇಕೆಂದು ತನ್ನ ಬಿಲ್ಲಿನಲ್ಲಿ ಬಾಣವನ್ನು ತೊಟ್ಟನು ॥೧೩॥ ಅದನ್ನು ಕಂಡು ಭೂದೇವಿಯು ಹೆದರಿ ಗಡಗಡನೆ ನಡಗುತ್ತಾ, ಗೋರೂಪವನ್ನು ಧರಿಸಿ, ಬೇಡನಿಂದ, ಹಿಂಬಾಲಿಸಲ್ಪಟ್ಟ ಹೆಣ್ಣು ಹುಲ್ಲೆಯಂತೆ ಓಡಿಹೋದಳು ॥೧೪॥ ಪೃಥುರಾಜನು ಮತ್ತಷ್ಟು

ಮೃಗೀವ ಮೃಗಯುದ್ರುತಾ॥೧೪॥ ತಾ ಮನ್ವಧಾವ ತ್ತದ್ವೈನ್ಯಃ ಕುಪಿತೋಽ ತ್ಯರುಣೇಕ್ಷಣಃ । ಶರಂ ಧನುಷಿ ಸಂಧಾಯ ಯತ್ರಯತ್ರ ಪಲಾಯತೇ ॥ ಸಾ ದಿಶೋ ವಿದಿಶೋ ದೇವೀ ರೋದಸೀ ಚಾಂತರಂ ತಯೋಃ । ಧಾವತೀ ತತ್ರ ತತ್ರೈನಂ ದದರ್ಶಾನೂದ್ಯತಾಯುಧಂ ॥೧೬॥ ಲೋಕೇ ನಾವಿಂದತ ತ್ರಾಣಂ ವೈನ್ಯಾನ್ಮೃತ್ಯೋರಿವ ಪ್ರಜಾಃ । ತ್ರಸ್ತಾ ತದಾ ನಿವವೃತೇ ಹೃದಯೇನ ವಿದೂಯತಾ ॥೧೭॥ ಉವಾಚ ಚ ಮಹಾಭಾಗಂ ಧರ್ಮಜ್ಞಾಪನ್ನವತ್ಸಲ! । ತ್ರಾಹಿ ಮಾಮಪಿ ಭೂತಾನಾಂ ಪಾಲನೇಽವಸ್ಥಿತೋ ಭವಾನ್ ॥೧೮॥ ಸತ್ವಂ ಜಿಘಾಂಸಸೇ ಕಸ್ಮಾ? ದ್ದೀನಾ ಮಕೃತಕಿಲ್ಬಿಷಾಂ । ಅ

ಧುವು, ಕುಪಿ...ಣಃ - ಕೋಪದಿಂದ ಕಣ್ಣುಗಳನ್ನು ಕೆಂಪಗೆಮಾಡಿಕೊಂಡು, ಧನುಷಿ - ಧನುಸ್ಸಿನಲ್ಲಿ, ಶರಂ - ಬಾಣವನ್ನು, ಸಂಧಾಯ - ತೊಟ್ಟು, ಯತ್ರಯತ್ರ - ಎಲ್ಲೆಲ್ಲಿ, ಪಲಾಯತೇ - ಓಡುವಳೋ, ಅಲ್ಲಲ್ಲಿ, ತಾಂ - ಆ ಭೂಮಿಯನ್ನು, ಅನ್ವಧಾವತ್ - ಬೆನ್ನಟ್ಟಿದನು ॥೧೫॥ ಸಾದೇವೀ - ಆ ಭೂಮಿಯು, ದಿಶಃ - ದಿಕ್ಕುಗಳಿಗೂ, ವಿದಿಶಃ - ವಿದಿಕ್ಕುಗಳಿಗೂ, ತಯೋಃ - ಅವುಗಳ, ಅಂತರಂ - ಮಧ್ಯಕ್ಕೂ, ಧಾವತೀ - ಓಡುತ್ತಾ, ತತ್ರತತ್ರ - ಅಲ್ಲಲ್ಲಿ, ಏನಂ ಇವನನ್ನು, ಅನು - ಹಿಂಬಾಲಿಸಿ, ಉದ್ಯತಾಯುಧಂ - ಆಯುಧವನ್ನು ಎತ್ತಿದವನನ್ನಾಗಿ, ದದರ್ಶ - ಕಂಡಳು ॥೧೬॥ ಮೃತ್ಯೋಃ - ಮೃತ್ಯುವಿನಿಂದ, ಪ್ರಜಾಇವ - ಪ್ರಜೆಗಳಂತೆ, ಲೋಕೇ-ಜಗತ್ತಿನಲ್ಲಿ, ವೈನ್ಯಾತ್ - ಪೃಥುವಿನಿಂದ, ತ್ರಾಣಂ- ರಕ್ಷಣೋಪಾಯವನ್ನು, ನಾವಿಂದತ - ತಿಳಿಯಲಿಲ್ಲ, ತದಾ - ಆಗ, ಭೀತಾ - ಹೆದರಿ, ವಿದೂಯತಾ - ಬಹಳವಾಗಿ ದುಃಖಿಸುವ, ಹೃದಯೇನ - ಮನಸ್ಸಿನಿಂದ, ನಿವವೃತೇ - ಹಿಂದಿರುಗಿದಳು ॥೧೭॥ ಮಹಾಭಾಗಂ - ಮಹಾತ್ಮನಾದ ಪೃಥುವಿಗೆ, ಉವಾಚಚ - ಹೇಳಿದಳು, ಧರ್ಮಜ್ಞ - ಧರ್ಮಗಳನ್ನು ಬಲ್ಲವನೆ! ಆಪನ್ನವತ್ಸಲ - ಕಷ್ಟಪಡುವವರನ್ನು ಕನಿಕರಿಸುವವನೆ! ಭವಾನ್ - ನೀನು, ಭೂತಾನಾಂ - ಪ್ರಾಣಿಗಳ, ಪಾಲನೇ - ರಕ್ಷಣೆಯಲ್ಲಿ, ಅವಸ್ಥಿತಃ - ದೀಕ್ಷಿತನಾಗಿರುವೆ, ಮಾಮಪಿ - ನನ್ನನ್ನೂ, ತ್ರಾಹಿ - ಕಾಪಾಡು ॥೧೮॥ ಸತ್ವಂ - ಆ ನೀನು, ದೀನಾಂ - ದೀನಳಾದ, ಅಕೃತಕಿಲ್ಬಿಷಾಂ - ಪಾಪರಹಿತಳಾದ, ನನ್ನನ್ನು, ಕಸ್ಮಾತ್ - ಏಕೆ, ಜಿಘಾಂಸಸೇ - ಕೊಲ್ಲಲೆಳಸುವೆ? ಯಃ - ಯಾವನು, ಧರ್ಮಜ್ಞಇತಿ-

ಕೋಪದಿಂದ ಕಣ್ಣುಗಳನ್ನು ಕೆಂಪೇರಿಸಿಕೊಂಡು, ಬಿಲ್ಲಿನಲ್ಲಿ ಬಾಣವನ್ನು ತೊಟ್ಟು, ಆಭೂದೇವಿಯು ಓಡಿದಕಡೆಗಳಲ್ಲೆಲ್ಲಾ ಅಟ್ಟಿಕೊಂಡು ಹೋದನು ॥೧೫॥ ಆ ಭೂದೇವತೆಯು ದಿಕ್ಕುವಿದಿಕ್ಕುಗಳಿಗೂ, ಅಂತರಿಕ್ಷಕ್ಕೂ, ತೋರಿದ ಕಡೆಗೆಲ್ಲಾ ಓಡುತ್ತಾ, ಹೋದಕಡೆಯಲ್ಲೆಲ್ಲಾ ಆಪೃಥುರಾಜನು ಆಯುಧವನ್ನು ಹಿಡಿದು ಹಿಂಬಾಲಿಸುತ್ತಿರುವುದನ್ನು ಕಂಡಳು ॥೧೬॥ ತರುವಾಯ ಮೃತ್ಯುವಿಗೆ ಸಿಕ್ಕಿ ಬಿದ್ದ ಪ್ರಾಣಿಗಳಂತೆ, ಭೂದೇವಿಯು ಪೃಥುರಾಜನಿಂದ ತಪ್ಪಿಸಿಕೊಳ್ಳುವುದಕ್ಕೆ ಯಲ್ಲಿಯೂ ಉಪಾಯವನ್ನು ಕಾಣದೆ, ಹೆದರಿ ಅತ್ಯಂತದುಃಖದಿಂದ ಹಿಂದಿರುಗಿ ಆ ರಾಜನಿಗೆ ಹೇಳಿಕೊಂಡಳು ॥೧೭॥ “ಅಯ್ಯಾ ಮಹಾನುಭಾವನೆ! ನೀನು ಧರ್ಮಸೂಕ್ಷ್ಮವನ್ನು ಬಲ್ಲವನು. ಕಷ್ಟಪಡುವವರಲ್ಲಿ ಕನಿಕರವುಳ್ಳವನು. ಸಕಲಭೂತಗಳನ್ನೂ ಸಲಹುವುದಕ್ಕಾಗಿ ಅವತರಿಸಿರುವವನು. ಆದುದರಿಂದ ಭೂತಕೋಟಿಯಲ್ಲಿ ಸೇರಿದ ನನ್ನನ್ನೂ ಸಲಹು ॥೧೮॥ ಇಂತು ದೀನದಯಾಳುವಾದ ನೀನು ನಿರಪರಾಧಿನಿಯಾಗಿ ಕರ

ಹನಿಷ್ಯ ತ್ಕಥಂ ಯೋಷಾಂ ಧರ್ಮಜ್ಞ ಇತಿ ಯೋ ಮತಃ ॥೧೯॥ ಪ್ರಹರಂತಿ ನವೈಸ್ತ್ರೀಷು ಕೃತಾಗ ಸ್ಸ್ವಪಿ ಜಂತವಃ । ಕಿಮುತ ತ್ವದ್ವಿಧಾ ರಾಜನ್ ಕರುಣಾ ದೀನವತ್ಸಲಾಃ ॥೨೦॥ ಮಾಂ ವಿಪಾಟ್ಯಾ ಽಜರಾಂ ನಾವಂ ಯತ್ರ ವಿಶ್ವಂ ಪ್ರತಿಷ್ಠಿತಂ । ಆತ್ಮಾನಂ ಚ ಪ್ರಜಾಶ್ಚೇಮಾಃ ಕಥ ಮಂಭಸಿ ಧಾಸ್ಯಸಿ ॥೨೧॥ ಪೃಥುಃ ॥ ವಸುಧೇ ! ತ್ವಾಂ ವಧಿಷ್ಯಾಮಿ ಮಚ್ಛಾಸನ ಪರಾಙ್ಮುಖೀಂ । ಭಾಗಂ ಬರ್ಹಿಷಿ ಯಾ ವೃಙ್ಕ್ತೇ ನ ತನೋಷಿಚ ನೋವಸು ॥೨೨॥ ಯವಸಂ ಜಗ್ಧ್ಯನುದಿನಂ ನೈವ ದೋಗ್ಧ್ಯೌಧಸಂ ಪಯಃ । ತಸ್ಯಾಂ ವೋ

---

ಧರ್ಮಜ್ಞನೆಂದು, ಮತಃ - ಎಣಿಸಲ್ಪಡುವನೋ, ಅವನು, ಯೋಷಾಂ - ಹೆಂಗಸನ್ನು, ಕಥಂ - ಹೇಗೆ, ಅಹನಿಷ್ಯತ್ - ಕೊಲ್ಲುವನು ॥ ೧೯ ॥ ಹೇ ರಾಜನ್ - ಎಲೈ ರಾಜನೆ ! ಸ್ತ್ರೀಷು - ಹೆಂಗಸರು, ಕೃತಾಗಸ್ಸ್ವಪಿ - ಅಪರಾಧಮಾಡಿದರೂ, ಜಂತವಃ - ಪ್ರಾಣಿಗಳು, ನಪ್ರಹರಂತಿ - ಕೊಲ್ಲುವುದಿಲ್ಲ, ಕರುಣಾಃ - ದಯಾಳುಗಳಾದ, ದೀನವತ್ಸಲಾಃ - ಬಡವರನ್ನು ಕನಿಕರಿಸುವ, ತ್ವದ್ವಿಧಾಃ - ನಿನ್ನಂತವರು, ಕಿಮುತ- ಹೇಳುವುದೇನು ? ॥ ೨೦ ॥ ಯತ್ರ - ಯಾರಲ್ಲಿ, ವಿಶ್ವಂ - ಜಗತ್ತೆಲ್ಲವೂ, ಪ್ರತಿಷ್ಠಿತಂ - ನೆಲೆಗೊಂಡಿರುವುದೋ, ಅಂತಹ, ಅಜರಾಂ - ದೃಢವಾದ, ನಾವಂ - ಹಡಗಿನಂತಿರುವ, ಮಾಂ - ನನ್ನನ್ನು, ವಿಪಾಟ್ಯ - ಒಡೆದು, ಆತ್ಮಾನಂ - ನಿನ್ನನ್ನೂ, ಇಮಾಃ - ಈ, ಪ್ರಜಾಃ - ಪ್ರಜೆಗಳನ್ನೂ, ಅಂಭಸಿ - ನೀರಿನಲ್ಲಿ, ಕಥಂ - ಹೇಗೆ, ಧಾಸ್ಯಸಿ - ನಿಲ್ಲಿಸುವೆ ? ॥ ೨೧ ॥ ಪೃಥುವು ಹೇಳುತ್ತಾನೆ, ಹೇ ವಸುಧೇ - ಎಲೌ- ಭೂದೇವಿಯೆ ! ಯಾಂ - ಯಾವ ನೀನು, ಬರ್ಹಿಷಿ - ಯಜ್ಞದಲ್ಲಿ, ಭಾಗಂ-ಹವಿರ್ಭಾಗವನ್ನು, ಭುಂಕ್ತೇ- ಭುಜಿಸುವೆಯೊ, ನಃ - ನಮ್ಮ, ವಸು - ಧಾನ್ಯಾದಿಗಳನ್ನು, ನತನೋಷಿ - ಬೆಳಸುವುದಿಲ್ಲವೊ ಅಂತಹ, ಮಚ್ಛಾ...ಖೀಂ - ನನ್ನ ಆಜ್ಞೆಯನ್ನುಲ್ಲಂಘಿಸಿರುವ, ತ್ವಾಂ - ನಿನ್ನನ್ನು, ವಧಿಷ್ಯಾಮಿ - ಕೊಲ್ಲುವೆನು ॥ ೨೨ ॥ ಯಾ - ಯಾವ ಆಕಳು, ಅನುದಿನಂ - ನಿತ್ಯವೂ, ಯವಸಂ - ಹುಲ್ಲನ್ನು, ಜಗ್ಧಿ - ತಿನ್ನುವುದೋ, ಔಧಸಂ - ಕೆಚ್ಚಲಿಂದ, ಪಯಃ - ಹಾಲನ್ನು, ನೈವದೋಗ್ಧಿ - ಕರೆಯುವುದಿಲ್ಲವೊ

---

ಣು ಹೊಕ್ಕಿರುವ ನನ್ನನ್ನು ಏಕೆ ಕೊಲ್ಲಬಳಸುವೆ ? ಧರ್ಮಿಷ್ಠನೆನಿಸಿಕೊಂಡವನು ಯಾವನು ತಾನೇ ಸ್ತ್ರೀಯನ್ನು ಕೊಂದಾನು? ॥೧೯॥ ಎಲೈ ರಾಜನೆ ! ಸ್ತ್ರೀಯರಾದವರು ಅಪರಾಧಗಳನ್ನು ಮಾಡಿದ್ದರೂ, ಸಾಮಾನ್ಯರಾದ ಪಾಮರರು ಕೂಡ ಅವರನ್ನು ಕೊಲ್ಲುವುದಿಲ್ಲ. ಇಂತಿರುವಾಗ ದಯಾಳುಗಳೂ, ದೀನವತ್ಸಲರೂ ಆದ ನಿಮ್ಮಂತವರಿಗೆ ಹೇಳುವುದೇನು? ॥೨೦॥ ಸಕಲ ಪ್ರಪಂಚವನ್ನೂ ಧರಿಸಿ ದೃಢವಾದ ಹಡಗಿನಂತೆ ಜಲದಮೇಲೆನಿಂತಿರುವ ನನ್ನನ್ನು ನಾಶಗೊಳಿಸಿ, ಈ ಪ್ರಜೆಗಳನ್ನು ಜಲದಮೇಲೆ ನೀನೆಂತು ನೆಲೆಗೊಳಿಸುವೆ ? ನೀನು ತಾನೇ ನಿಲ್ಲುವುದೆಂತು ?" ಎಂದು ಬೇಡಲು, ಪೃಥುರಾಜನು ಹೇಳುತ್ತಾನೆ ॥೨೧॥ ಎಲೌ ಭೂದೇವಿಯೆ ! ಪ್ರಜಾಪಾಲಕನಾದ ನನ್ನ ಆಜ್ಞೆಯನ್ನುಲ್ಲಂಘಿಸಿದುದೊಂದಪರಾಧವು. ಯಜ್ಞದಲ್ಲಿಕೊಡಲ್ಪಟ್ಟ ಹವಿರ್ಭಾಗಗಳನ್ನು ದೇವತಾರೂಪದಿಂದ ಪರಿಗ್ರಹಿಸುತ್ತಿದ್ದರೂ, ನಮಗೆ ಅನ್ನವಾದ ಧಾನ್ಯಾದಿಗಳನ್ನು ಮೊಳೆಯಿಸದಂತೆ ನುಂಗಿ ಲೋಕಕ್ಷೋಭೆಯನ್ನುಂಟು ಮಾಡಿರುವುದೊಂದಪರಾಧವು. ಈ ಅಪರಾಧಗಳಿಂದ ನಿನ್ನನ್ನು ಕೊಲ್ಲುವುದುಚಿತವೇ ಸರಿ. ॥೨೨॥ 'ಗೋರೂಪವನ್ನು ಪಡೆದಿರುವ ನನ್ನನ್ನು ಕೊಂದಲ್ಲಿ ಗೋಹತ್ಯಾದೋಷವು ಬರುವುದು'

ವಂ ಹಿ ದುಷ್ಟಾಯಾಂ ದಂಡೋ ನಾತ್ರ ನಶಸ್ಯತೇ ||೨೩|| ತ್ವಂ ಖಲ್ವೋಷಧಿಬೀಜಾನಿ ಪ್ರಾಕ್ ಸೃಷ್ಟಾನಿ ಸ್ವಯಂಭುವಾ | ನಮುಂಚಸ್ಯಾತ್ಮರುದ್ಧಾನಿ ಮಾಮವಜ್ಞಾಯ ಮಂದಧೀಃ || ೨೪ || ಅಮೂಷಾಂ ಕ್ಷುತ್ಪರೀತಾನಾಮಾರ್ತಾನಾಂ ಪರಿದೇವಿತಂ | ಶಮಯಿಷ್ಯಾಮಿ ಮದ್ಬಾಣೈರ್ಭಿನ್ನಾಯಾಸ್ತವ ಮೇದಸಾ||೨೫|| ಪುಮಾನ್ ಯೋಷಿದುತಕ್ಲೀಬ ಆತ್ಮಸಂಭಾವನೋಽಧಮಃ | ಭೂತೇಷು ನಿರನುಕ್ರೋಶೋ ನೃಪಾಣಾಂ ತದ್ವಧೋಽವಧಃ ||೨೬|| ತ್ವಾಂ ಸ್ತಬ್ಧಾಂ ದುರ್ಮದಾಂ ನೀತ್ವಾ ಮಾಯಾಗಾಂ ತಿಲಶ

---

ಏವಂ - ಇಂತು, ದುಷ್ಟಾಯಾಂ - ಕೆಟ್ಟುದಾದ, ತಸ್ಯಾಂ - ಆ ಆಕಳಿನಲ್ಲಿ, ಅತ್ರ - ಈ ಅಪರಾಧಕ್ಕಾಗಿ, ದಂಡಃ - ಶಿಕ್ಷೆಯು, ನಶಸ್ಯತ ಇತಿನ - ಪ್ರಶಸ್ತವೇ ಸರಿ ||೨೩|| ಮಂದಧೀಃ-ಬುದ್ಧಿಹೀನಳಾದ, ತ್ವಂ - ನೀನು, ಮಾಂ - ನನ್ನನ್ನು, ಅವಜ್ಞಾಯ - ಕಡೆಗಣಿಸಿ, ಪ್ರಾಕ್ - ಮೊದಲು, ಸ್ವಯಂಭುವಾ - ಬ್ರಹ್ಮನಿಂದ ಸೃಷ್ಟಾನಿ - ಸೃಜಿಸಲ್ಪಟ್ಟ, ಆತ್ಮರುದ್ಧಾನಿ ನಿನ್ನಲ್ಲಿ ಅಡಗಿಸಿಕೊಂಡಿರುವ, ಓಷಧಿಬೀಜಾನಿ - ಧಾನ್ಯಗಳನ್ನು, ನಮುಂಚಸಿ ಖಲು - ಬಿಡುವುದಿಲ್ಲವಷ್ಟೆ ||೨೪|| ಮದ್ಬಾಣೈಃ - ನನ್ನ ಬಾಣಗಳಿಂದ, ಭಿನ್ನಾಯಾಃ - ಸೀಳಲ್ಪಟ್ಟ, ತವ - ನಿನ್ನ, ಮೇದಸಾ - ಕೊಬ್ಬಿನಿಂದ, ಕ್ಷುತ್ಪರೀತಾನಾಂ - ಹಸಿವುಗೊಂಡು, ಆರ್ತಾನಾಂ - ಬಳಲುತ್ತಿರುವ, ಅಮೂಷಾಂ - ಈ ಪ್ರಜೆಗಳ, ಪರಿದೇವಿತಂ - ಗೋಳನ್ನು, ಶಮಯಿಷ್ಯಾಮಿ - ಶಾಂತಿಗೊಳಿಸುವೆನು ||೨೫|| ಭೂತೇಷು - ಪ್ರಾಣಿಗಳಲ್ಲಿ, ನಿರನುಕ್ರೋಶಃ - ಕನಿಕರವಿಲ್ಲದ, ಆತ್ಮಸಂಭಾವನಃ - ತಾನೇ ಶ್ರೇಷ್ಠನೆಂದು ತಿಳಿದಿರುವ, ಅಧಮಃ - ನೀಚನಾದವನು, ಪುಮಾನ್ - ಗಂಡಾಗಲಿ, ಯೋಷಿದ್ವಾ - ಹೆಣ್ಣಾಗಲಿ. ಉತ - ಅಥವಾ ಕ್ಲೀಬೋವಾ - ನಪುಂಸಕನಾಗಲಿ, ತದ್ವಧಃ- ಅವರ ಸಂಹಾರವು, ನೃಪಾಣಾಂ - ರಾಜರಿಗೆ, ಅವಧಃ - ವಧೆಯಲ್ಲ ||೨೬|| ಸ್ತಬ್ಧಾಂ - ಠಕಳಾಗಿಯೂ, ದುರ್ಮದಾಂ - ಹೆಮ್ಮೆಗೊಂಡವಳಾಗಿಯೂ, ಮಾಯಾಗಾಂ ಮಾಯೆಯಿಂದ ಗೋರೂಪವನ್ನು ಧರಿಸಿದವಳಾಗಿಯೂ ಇರುವ, ತ್ವಾಂ - ನಿನ್ನನ್ನು, ತಿಲಶಃ - ಪುಡಿಪುಡಿಯಾಗಿ, (ಎಳ್ಳಿನಂತೆ) ನೀತ್ವಾ - ನಾನಾವಶೇಷಗೈದು, ಆತ್ಮ...ನ - ನನ್ನ ಯೋಗಬಲದಿಂದಲೇ, ಅಹಂ - ನಾನು, ಇಮಾಃ ಪ್ರಜಾಃ - ಈ ಪ್ರಜೆ

---

ಎಂಬೆಯೇನೊ ? ಯಾವ ಗೋವು ಪ್ರತಿದಿನವೂ ತೃಪ್ತಿಯಾಗುವಂತೆ ಹುಲ್ಲನ್ನು ಮೇದರೂ ಹಾಲನ್ನು ಮಾತ್ರ ಕರೆಯದೆ ಪೋಷಕನನ್ನು ವಂಚಿಸುವುದೋ, ಆದುಷ್ಟವಾದ ಗೋವನ್ನು ದಂಡಿಸುವುದು ಪಾಪವಲ್ಲ ||೨೩|| ಮುನ್ನುಲೋಕ ರಕ್ಷಣೆಗಾಗಿ ಬ್ರಹ್ಮನಿಂದ ನಿರ್ಮಿತಗಳಾದ ಸಕಲಧಾನ್ಯಬೀಜಗಳನ್ನೂ ನುಂಗಿ, ಬುದ್ಧಿಹೀನಳಾದ ನೀನು ನನ್ನನ್ನೂ ಅಸಡ್ಡೆ ಮಾಡಿ ಸಸ್ಯಗಳನ್ನು ಮೊಳೆಯಿಸದಿರುವೆ || ೨೪ || ಆದಕಾರಣ ನನ್ನ ಬಾಣಗಳಿಂದ ಸೀಳ ದುರಾತ್ಮಕಳಾದ ನಿನ್ನ ಕೊಬ್ಬಿನಿಂದಲೇ, ಹಸಿವುಗೊಂಡು ಬಳಲಿ ಬೆಂಡಾಗಿರುವ ಈ ಪ್ರಜೆಗಳ ಗೋಳಾಟವನ್ನು ಶಾಂತಿಗೊಳಿಸುವೆನು || ೨೫ || ಪ್ರಾಣಿಗಳಲ್ಲಿ ಕನಿಕರವಿಲ್ಲದೆ, ತಾನೇ ಸರ್ವೋತ್ತಮನೆಂಬ ಹೆಮ್ಮೆಗೊಳ್ಳುವ ಗಂಡಾಗಲಿ, ಹೆಣ್ಣಾಗಲಿ ಅಥವಾ ನಪುಂಸಕನಾಗಲಿ, ಅಂತವನನ್ನು ಕೊಲ್ಲುವುದು ರಾಜನಿಗೆ ಕೊಲೆಯೆನಿಸಿಕೊಳ್ಳುವುದಿಲ್ಲ ||೨೬|| ಆದುದರಿಂದ ವಂಚಕಳಾಗಿಯೂ, ದುರಹಂಕಾರವುಳ್ಳವಳಾಗಿಯೂ, ಮಾಯೆಯಿಂದ ಗೋರೂಪವನ್ನು ಪಡೆದವಳಾಗಿಯೂ, ಇರುವ ನಿನ್ನನ್ನು ಕಡಿಕಡಿಯಾಗಿ ಕಡಿದು, ಈ ಪ್ರಜೆಗಳನ್ನು

ಶ್ವರ್ಯೈಃ । ಆತ್ಮಯೋಗಬಲೇನೇಮಾ ಧಾರಯಿಷ್ಯಾಮ್ಯಹಂಪ್ರಜಾಃ ॥೨೬॥
ಏವಂ ಮೃತ್ಯುಮಯೀಂ ಮೂರ್ತಿಂ ಕೃತಾಂತಮಿವ ಬಿಭ್ರತಂ।ಪ್ರಣತಾ ಪ್ರಾಂ
ಜಲಿಃ ಪ್ರಾಹ ಮಹೀ ಸಂಜಾತ ವೇಪಥುಃ ॥೨೭॥ ಮಹೀ ॥ * ನಮಃ ಪರ

ಗಳನ್ನು, ಧಾರಯಿಷ್ಯಾಮಿ - ನೆಲೆಗೊಳಿಸುವೆನು ॥೨೬॥ ಏವಂ - ಇಂತು, ಮೃತ್ಯುಮಯೀಂ - ಮೃತ್ಯುರೂಪವಾದ, ಮೂರ್ತಿಂ - ಶರೀರವನ್ನು, ಬಿಭ್ರತಂ - ಧರಿಸಿರುವ, ಕೃತಾಂತಮಿವ - ಯಮನಂತಿರುವ ಪೃಥುವನ್ನು (ಕಂಡು) ಮಹೀ - ಭೂಮಿಯು, ಸಂಜಾತವೇಪಥುಃ- ನಡುಕವುಳ್ಳವಳಾಗಿ, ಪ್ರಣತಾ- ನಮಸ್ಕರಿಸಿ, ಪ್ರಾಂಜಲಿಃ - ಕೈಮುಗಿದು ಪ್ರಾಹ - ಹೇಳುತ್ತಾಳೆ ॥೨೭॥

ಮಾಯಯಾ - ಮಾಯೆಯಿಂದ, ವಿನ್ಯ . ವೇ, ವಿನ್ಯಸ್ತ - ಮಾಡಲ್ಪಟ್ಟ, ವ ನಾನಾತನವೇ - ಹಲ

ನನ್ನ ಯೋಗಬಲದಿಂದಲೇ ಮುನ್ನಿನಂತೆ ನೆಲೆಗೊಳಿಸುವೆನು ॥ ೨೬ ॥ ಎಂದು ಮೃತ್ಯುರೂಪವಾದ ಆಕೃತಿಯನ್ನು ಪಡೆದ ಕಾಲಪುರುಷನಂತೆ ಕ್ರುದ್ಧನಾಗಿರುವ ಪೃಥುರಾಜನನ್ನು ಕಂಡು, ಭೂದೇವಿಯು ಬಿರುಗಾಳಿಗೆ ಸಿಕ್ಕಿದ ಬಾಳೆಯಂತೆ ಗಡಗಡನೆ ನಡಗುತ್ತಾ, ದಂಡಪ್ರಣಾಮವನ್ನಾಚರಿಸಿ ಕೈಗಳನ್ನು ಮುಗಿದುಕೊಂಡು, ಹೊಗಳದಳೆಂತೆಂದರೆ ॥ ೨೭ ॥

* (೧) ವೀ. ಯಾವ ಭಗವಂತನು, ಶರೀರವೆನಿಸಿ ತನ್ನನ್ನೆಡಬಿಡದಿರುವ ಪ್ರಕೃತಿಯಿಂದ ದೇವಮನುಷ್ಯಾದಿ ಜೀವಶರೀರಗಳನ್ನು ಸೃಷ್ಟಿಸಿ ಸತ್ವಾದಿಗುಣ ಪರಿಣಾಮರೂಪಗಳಾದ ಕಾರ್ಯಾದಿಗಳನ್ನು ಪಡೆದು, ಗುಣಮಯನಾಗಿ ತೋರುತ್ತಿದ್ದರೂ, ಪ್ರಕೃತಿ ಪುರುಷೇಶ್ವರರೂಪಗಳ ಯಾಥಾತ್ಮ್ಯಜ್ಞಾನದಿಂದ, ಭೌತಿಕಶರೀರದಲ್ಲಿ - ಆತ್ಮಭ್ರಾಂತಿಯೂ, ಇಚ್ಛಾ, ದ್ವೇಷಮೊದಲಾದ ದೇಹಗತ ವ್ಯಾಪಾರಗಳಲ್ಲಿ ಆತ್ಮವ್ಯಾಪಾರಭ್ರಾಂತಿಯೂ, ಗೀತಾ ಶಾಸ್ತ್ರದಲ್ಲಿ ಹೇಳಿದಂತೆ, ಅಧಿಷ್ಠಾನಾದಿಗಳಲ್ಲಿ ನೆಲಸಿರುವ ಕರ್ತೃತ್ವವನ್ನು ಆತ್ಮಗತವೆಂದು ತಿಳಿದಿರುವ ಭ್ರಾಂತಿಯೂ, ಇವುಗಳಿಂದುಂಟಾಗುವ ‡ ಷಡೂರ್ಮಿಗಳೂ ಸಹ ಇಲ್ಲದೆ, ಸರ್ವಜ್ಞನೂ ಸರ್ವಶಕ್ತನೂ ಆಗಿರುವನೋ, ಆಭಗವಂತನಿಗೆ ನಮಸ್ಕಾರವು. ‡ ಅಶನಾಯಾ - ಹಸಿವು, ಪಿಪಾಸಾ — ನೀಡಕೆ, ಶೋಕ, ಮೋಹ, ಜರಾ - ಮುಪ್ಪು, ಮೃತ್ಯು, ಈ ಆರಕ್ಕೂ ಊರ್ಮಿಗಳೆಂದು ಹೆಸರು.

(೨) ವಿ. ಯಾವಪರಮಾತ್ಮನು ತನ್ನ ಚಿತ್ಪ್ರಕೃತಿಯಿಂದ ಬ್ರಹ್ಮಾದಿ ಜೀವದೇಹಗಳನ್ನು ನಿರ್ಮಿಸಿದವನಾದರೂ, ಸತ್ವಾದಿಗುಣರಹಿತನಾಗಿ ಸ್ವರೂಪಾನುಭವದಿಂದ ಸಾತ್ವಿಕ, ರಾಜಸ, ತಾಮಸಾಹಂಕಾರಗಳೂ, ಅವುಗಳಿಂದುಂಟಾಗುವ ಸಂಶಯಮೊದಲಾದ ಅಂತಃಕರಣ ಧರ್ಮಗಳೂ, ಇಲ್ಲದೆ ನಿರ್ಲಿಪ್ತನಾಗಿರುವನೋ, ಆಪರಮಾತ್ಮನಿಗೆ ನಮಸ್ಕಾರವು.

(೩) ಸಿ. ಭಗವಂತನು ಸರ್ವಕಾರಣನು, ಸರ್ವಜ್ಞನು, ಸರ್ವೇಶ್ವರನು, ಎಂಬುದರಿಂದ ಅಪ್ರಾಕೃತಗುಣ ಪೂರ್ಣನೆಂತಲೂ, ಸ್ವರೂಪಾನುಭವದಿಂದ ಅಹಂಕಾರ, ರಾಗದ್ವೇಷಾದಿಗಳಿಲ್ಲದವನೆಂಬುದರಿಂದ ಪ್ರಾಕೃತಗುಣರಹಿತನೆಂತಲೂ ತಿಳಿಯಬೇಕು.

(೪) ಸಾ. ಯಾವ ಭಗವಂತನು ಮಾಯಾಶಕ್ತಿಗೊಳಗಾಗಿ ಗುಣಮಯನೆನಿಸಿ, ನಮ್ಮೆಲ್ಲರ ಶರೀರಗಳನ್ನೂ ಸೃಷ್ಟಿಸಿದನೋ, ಮಾಯೆಯನ್ನುಳಿದು ಸ್ವಸ್ವರೂಪವನ್ನು ಪಡೆದಾಗ ಆಧ್ಯಾತ್ಮಿಕಾದಿಗಳಲ್ಲಿ ಅಹಂಕಾರವು, ತನ್ನಿಮಿತ್ತಕವಾದ ಕಾಮಕ್ರೋಧಾದಿಗಳು, ತನ್ಮಯವಾದ ಸಂಸಾರವು, ಯಾವುದೂ ಇಲ್ಲದೆ ನಿರುಪಾಧಿಕನಾಗಿರುವನೋ, ಅಂತಹ ಭಗವಂತನನ್ನು ವಂದಿಸುವೆನು.

ಸಸೃಜಿಥ ಚರಾಽಚರಂ ಸ್ವಮಾಯಯಾ ತ್ಮಾಶ್ರಯಯಾಽವಿತರ್ಕ್ಯಯಾ |
ತಯೈವಸೋಽಯಂ ಕಿಲ ಗೋಪ್ತು ಮುದ್ಯತಃ ಕಥಂನು ? ಮಾಂ ಧ
ರ್ಮಪರೋ ಜಿಘಾಂಸಸಿ ||೩೦| * ನೂನಂ ಬತೇಶಸ್ಯ ಸಮೀಹಿತಂ ಜನೈ
ಸ್ತ್ವನ್ಮಾಯಯಾ ದುರ್ಜಯಯಾಽಕೃತಾತ್ಮಭಿಃ | ನಲಕ್ಷ್ಯತೇ ಯಸ್ತ್ವ

ನು, ಆದೌ - ಮುನ್ನು, ಅವಿತರ್ಕ್ಯಯಾ - ಅನಿರ್ವಚನೀಯವಾದ, ಆತ್ಮಾಶ್ರಯಯಾ - ಜೀವರನ್ನಾಶ್ರಯಿಸಿದ, ಮಾಯಯಾ - ಮಾಯೆಯಿಂದ, ಏತತ್ - ಈ, ಚರಾಚರಂ - ಜಗತ್ತನ್ನು, ಅಸೃಜತ್ - ಸೃಜಿಸಿದನೋ, ತಯೈವ - ಆಮಾಯೆಯಿಂದಲೇ, ಗೋಪ್ತುಂ - ಸಲಹುವುದಕ್ಕೆ, ಉದ್ಯತಃ - ಅವತರಿಸಿದನೋ, ಧರ್ಮಪರಃ - ಪಾಲನಾಸಕ್ತನಾದ, ಸೋಽಯಂ - ಆ ಈ ನೀನೇ ಮಾಂ - ನನ್ನನ್ನು, ಕಥಂನು - ಹೇಗೆ, ಜಿಘಾಂಸಸಿ - ಕೊಲ್ಲಲೆಳಸುವೆ ? ||೩೦|| ದುರ್ಜಯಯಾ - ಗೆಲ್ಲಲಸದಳವಾದ, ತ್ವನ್ಮಾಯಯಾ - ನಿನ್ನ ಮಾಯೆಯಿಂದ, ಅಕೃತಾತ್ಮಭಿಃ - ಮರುಳಾದ ಮತಿಯುಳ್ಳ, ಜನೈಃ - ಜನರಿಂದ - ಈಶಸ್ಯ - ಸರ್ವಶಕ್ತನಾದ ನಿನ್ನ, ಸಮೀಹಿತಂ - ಇಚ್ಛೆಯು, ನಲಕ್ಷ್ಯತೇ - ಕಾಣಲ್ಪಡುವುದಿಲ್ಲ, ನೂನಂ - ದಿಟವು ಯಃ-ಯಾವನು ಅಕರೋತ್-ಬ್ರಹ್ಮನನ್ನುಂಟುಮಾಡಿದನೋ, ಅಕಾರಯತ್-ಬ್ರಹ್ಮನಿಂದ ಜಗತ್ತನ್ನು ಸೃಷ್ಟಿ ಮಾಡಿಸಿದನೋ, ಯಃ - ಯಾವನು, ಏಕಃ - ಒಬ್ಬನೋ, ಪರತಃ - ಮಾಯೆಯಿಂದ, ಅನೇಕಃ - ಹಲ

ಪೃಥುರೂಪನಾಗಿ, ಪಾಲನರೂಪನಾದ ಅದೇ ಮಾಯಾಶಕ್ತಿಯಿಂದಲೇ ಲೋಕವನ್ನು ರಕ್ಷಿಸುವುದಕ್ಕೆ ಅವತರಿಸಿರುವಾಗ, ನನ್ನನ್ನು ಕೊಲ್ಲಬಹುದೆ? ಸರ್ವಸ್ವತಂತ್ರನಾದರೂ, ಪಾಲಕರೂಪದಿಂದ ಸಂಹಾರಕಾರ್ಯವನ್ನು ಮಾಡಬಹುದೆ ? ||೩೦|| ಎಲೈ ಪರಮಾತ್ಮನೆ! ವಿಚಿತ್ರಾದ್ಭುತ ಶಕ್ತಿಯುಳ್ಳ ನಿನ್ನ ಮಹಿಮೆಯನ್ನರಿಯದ ನನಗೆ "ನೀನು ಮಾಡುವ ಕಾರ್ಯವು ಉಚಿತವಲ್ಲ" ಎಂದು ತೋರಿದರೂ, ಗೆಲ್ಲಲಶಕ್ಯವಾದ ನಿನ್ನಮಾಯೆಯಿಂದ ಮತಿಗೆಟ್ಟು ಮರುಳಾಗಿರುವ ಮಾನವರು ನಿನ್ನ ಸಂಕಲ್ಪವನ್ನು ಎಂದಿಗೂ ಅರಿಯಲಾರರು. ಯಾವನು

* ಸಿ. ಯಾವ ಭಗವಂತನು (೧) ತಾನೇ ಜಗದ್ರೂಪನಾಗಿ ತನಗಿಂತ ಭಿನ್ನಗಳಾದ ಪ್ರಧಾನ ಪುರುಷಾದಿಗಳಿಂದ ಜಗತ್ತನ್ನು ಸೃಷ್ಟಿಗೊಳಿಸುತ್ತಾ (೨) ಸಜಾತೀಯ ವಿಜಾತೀಯ ಭೇದಗಳಿಲ್ಲದೆ ಅದ್ವಿತೀಯನಾಗಿದ್ದರೂ, ಪ್ರಕೃತಿಪುರುಷಾದಿ ಸ್ವಗತ ಭೇದಗಳಿಂದ ಅನೇಕವಾಗಿ ಕಾಣುವನೋ, ಆ ಭಗವಂತನ ಸಂಕಲ್ಪವನ್ನು ಮಾಯಾಮೋಹಿತರಾದ ಮಾನವರೆಂತು ತಿಳಿಯಲಾಪರು ?

(೧) ಶ್ರು. ಸಐಕ್ಷತಬಹುಸ್ಯಾಂ | ಸ್ವಯಮಾತ್ಮಾನಮಕುರುತ | ಸಚ್ಚ ತ್ಯಚ್ಚಾಽಭವತ್ |

(೨) ಶ್ರು. ಏಕಸ್ಸನ್ ಬಹುಧಾ ವಿಚಚಾರ | ಏಕೋದೇವೋ ಬಹುಧಾಸನ್ನಿವಿಷ್ಟಃ | ತ್ವಮೇವೈಕೋಸಿ ಬಹುಧಾ ಬ್ರಹ್ಮನ್ ! ಪ್ರವಿಷ್ಟಃ | ಶ್ಲೋ|| ಏಕತ್ವೇ ಸತಿ ನಾನಾತ್ವಂ ನಾನಾತ್ವೇ ಸತಿ ಚೈಕತಾ| ಅಚಿಂತ್ಯಂ ಬ್ರಹ್ಮಣೋ ರೂಪಂ ಕಸ್ತದ್ವೇದಿತುಮರ್ಹತಿ || (ಮನು.) ಏಕತ್ವೇನ ಪೃಥಕ್ತ್ವೇನ ಬಹುಧಾ ವಿಶ್ವತೋ ಮುಖಂ | (ಶ್ರೀಮುಖವಚನ) ಶ್ಲೋ|| ಕೇಚಿತ್ಪೃಥುತ್ವೇನ ವದಂತಿ ದೈವ ಮೇಕಾತ್ಮನಾ ಕೇಚಿ ದಮುಂ ಪುರಾತನಂ | ವೇದಾಂತಸಂಸ್ಥಾಪಿತ ಸತ್ವಯುಕ್ತಂ ದೃಷ್ಟಂ ತ ಮೀಶಂ ವಯ ಮುದ್ಯತಾಸ್ಸ್ಮಃ || (ಹರಿವಂಶದಲ್ಲಿ ಘಂಟಾಕರ್ಣವಚನ) ಶ್ಲೋ|| ಅಭೇದಃ ಕೇವಲೋ ಭ್ರಾಂತಿ ಸ್ತಥಾ ಭೇದೋಽಪಿ ಕೇವಲಃ | ತಸ್ಮಾದುಚಿತಃ ಕರ್ತವ್ಯೋ ಭೇದಾಭೇದಮಯೋ ವಿಧಿಃ | (ಪಾಂಚರಾತ್ರ) ಇತ್ಯಾದಿ ಪ್ರಮಾಣಗಳಿಂದ ಭಗವಂತನಲ್ಲಿ ಭೇದ ಅಭೇದಗಳೆರಡೂ ಉಂಟೆಂದು ತಾತ್ಪರ್ಯವು.

ಕರೋ ದಶಾರಯ ದ್ಯೋಽನೇಕ ಏಕಃ ಪರತ ಸ್ಸ ಈಶ್ವರಃ ॥ ೩೨ ॥ ಸ
ರ್ಗಾದಿ ಯೋಽಸ್ಯಾನುರುಣದ್ಧಿ ಶಕ್ತಿಭಿ ರ್ದ್ರವ್ಯಕ್ರಿಯಾಕಾರಕಚೇತ
ನಾತ್ಮಭಿಃ । ತಸ್ಮೈ ಸಮುನ್ನದ್ಧವಿರುದ್ಧಶಕ್ತಯೇ ನಮಃ ಪರಸ್ಮೈ ಪುರು
ಷಾಯ ವೇಧಸೇ ॥೩೩॥ ಸವೈ ಭವಾ ನಾತ್ಮವಿನಿರ್ಮಿತಂ ಜಗದ್ಭೂತೇಂದ್ರಿ
ಯಾಂತಃಕರಣಾತ್ಮಕಂ ವಿಭೋ ! । ಸಂಸ್ಥಾಪ ಯಿಷ್ಯನ್ನಜ! ಮಾಂ ರಸಾ
ತಲಾ ದಭ್ಯುಜ್ಜಹಾರಾಂಭಸ ಆದಿಸೂಕರಃ ॥೩೪॥ ಅಪಾ ಮುಪಸ್ಥೇ ಮಯಿ
ನಾವ್ಯವಸ್ಥಿತಾಃ ಪ್ರಜಾ ಭವಾನದ್ಯ ರಿರಕ್ಷಿಷುಃ ಕಿಲಾಸವೀರಮೂರ್ತಿಃ ಸಮ

ವು ಬಗೆಯಾಗಿರುವನೋ, ಸ - ಆನೀನೇ, ಈಶ್ವರನು ॥೩೨॥ ಯಃ - ಯಾವನು, ದ್ರವ್ಯ...ಭಿಃ, ದ್ರ
ವ್ಯ - ಮಹಾಭೂತಗಳು, ಕ್ರಿಯಾ - ಇಂದ್ರಿಯಗಳು, ಕಾರಕ - ದೇವತೆಗಳು, ಚೇತನಾ - ಬುದ್ಧಿಯು
ಆತ್ಮಭಿಃ - ಅಹಂಕಾರ ಇವುಗಳಿಂದ, ಅಸ್ಯ - ಈಜಗತ್ತಿನ, ಸರ್ಗಾದಿ - ಉತ್ಪತ್ತಿ, ಸ್ಥಿತಿ, ಲಯಗಳ
ನ್ನು, ಅನುರುಣದ್ಧಿ - ಮಾಡುವನೋ, ಸಮು...ಯೇ, ಸಮುನ್ನದ್ಧ - ಪ್ರಬಲಗಳಾದ, ವಿರುದ್ಧ - ತಡೆ
ಯಲ್ಪಟ್ಟ, ಶಕ್ತಯೇ - ಶಕ್ತಿಗಳುಳ್ಳ, ವೇಧಸೇ - ಲೋಕಕರ್ತನಾದ, ತಸ್ಮೈ - ಆ, ಪರಸ್ಮೈ ಪುರುಷಾ
ಯ - ಪರಮಪುರುಷನಿಗೆ ನಮಃ - ನಮಸ್ಕಾರವು ॥೩೩॥ ವಿಭೋ - ಪ್ರಭುವೆ ! ಅಜ - ಜನ್ಮಾದಿರಹಿತ
ನೆ! ಸವೈಭವಾನ್ - ಆ ನೀನು, ಆತ್ಮನಿರ್ಮಿತಂ - ನಿನ್ನಿಂದ ಸೃಜಿಸಲಟ್ಟ, ಭೂತೇ...ಕಂ - ಭೂತ,
ಇಂದ್ರಿಯ, ಅಂತಃ ಕರಣರೂಪವಾದ, ಜಗತ್ - ಜಗತ್ತನ್ನು, ಸಂಸ್ಥಾಪಯಿಷ್ಯನ್ - ನೆಲೆಗೊಳಿಸುವ
ವನಾಗಿ, ಆದಿಸೂಕರಃ - ಯಜ್ಞವರಾಹರೂಪವನ್ನು ಪಡೆದು, ಮಾಂ - ನನ್ನನ್ನು, ರಸಾತಲಾತ್ - ಪಾ
ತಾಳದಿಂದ ಅಂಭಸಃ - ಜಲದಿಂದ, ಅಭ್ಯುಜ್ಜಹಾರ - ಉದ್ಧರಿಸಿದೆ ॥೩೪॥ ಯಃ - ಯಾವನೀನು, ಪಯ
ಸಿ - ಹಾಲಿಗಾಗಿ, ಉಗ್ರತರಃ - ಕ್ರೂರವಾದ ಬಾಣವುಳ್ಳವನಾಗಿ, ಮಾಂ - ನನ್ನನ್ನು, ಜಿಘಾಂಸಸಿ - ಕೊ

ಸ್ವತಂತ್ರನಾಗಿ ಲೋಕಕರ್ತನಾದ ಬ್ರಹ್ಮನನ್ನೂ, ಆ ಬ್ರಹ್ಮನ ಮೂಲಕವಾಗಿ ಸಕಲ ಜಗತ್ತನ್ನೂ ಜನಿಯಿಸಿದನೋ, ಯಾವನು ಸ್ವರೂಪದಿಂದ ಅದ್ವಿತೀಯನೆನಿಸಿದ್ದರೂ ಮಾಯೋಪಾಧಿಯಿಂದ ನಾನಾರೂಪನಾಗಿ ತೋರುವನೋ, ಅವನೇ ಈಶ್ವರನು. ಇಂತಹ ಭಗವಂತನ ಸಂಕಲ್ಪವನ್ನು ಬಲ್ಲವನಾರು ? ॥ ೩೨ ॥ ಎಲೈ ಪರಮಾತ್ಮನೆ ! ಯಾವನೀನು ಪೃಥಿವ್ಯಾದಿಪಂಚಭೂತಗಳು, ಚಕ್ಷುರಾದೀಂದ್ರಿಯಗಳು, ಆ ಆದೇವತೆಗಳು, ಬುದ್ಧಿ, ಅಹಂಕಾರಗಳೆಂಬ ಮಾಯಾಶಕ್ತಿಗಳಿಂದ ಈ ಜಗತ್ತಿನ ಸೃಷ್ಟಿ, ಸ್ಥಿತಿ, ಸಂಹಾರಗಳನ್ನು ನಡೆಯಿಸುವೆಯೋ, ಯಾವಶಕ್ತಿಗಳು ಪ್ರಬಲಗಳೆನಿಸಿ ಪರಸ್ಪರ ವಿರುದ್ಧಗಳಾಗಿದ್ದರೂ, ನಿನ್ನ ಆಜ್ಞಾನುಸಾರವಾಗಿರುವುವೊ, ಅಂತಹ ಜಗತ್ಕಾರಣನಾದ ನಿನಗೆ ನಮಸ್ಕಾರವು ॥೩೩॥ ಎಲೈ ಜನ್ಮಾದಿರಹಿತನಾದ ಜಗನ್ನಾಥನೆ ! ನಿನ್ನ ಮಹಿಮೆಯನ್ನು ನಾನೇ ಕಣ್ಣಾರೆ ಕಂಡಿರುವೆನಾದುದರಿಂದ ಪ್ರಮಾಣಾಂತರವು ಬೇಕಾಗಿರುವುದಿಲ್ಲ. ಮುನ್ನ ನೀನು ಭೂತೇಂದ್ರಿಯಾಂತಃಕರಣರೂಪವಾಗಿ ಸೃಜಿಸಲ್ಪಟ್ಟಿರುವ ಈ ಜಗತ್ತನ್ನು ನೆಮ್ಮದಿಗೊಳಿಸುವುದಕ್ಕಾಗಿ ಆದಿವರಾಹಾವತಾರವನ್ನು ಅವಲಂಬಿಸಿ, ಪಾತಾಳದಲ್ಲಿ ಅಡಗಿದ್ದ ನನ್ನನ್ನು ಜಲರಾಶಿಯಿಂದುದ್ಧರಿಸಲಿಲ್ಲವೆ ? ॥೩೪॥ ಇಂತು ವರಾಹರೂಪದಿಂದ ನನ್ನನ್ನು ಉದ್ಧರಿಸಿದ ನೀನೇ ಈಗ ಜಲರಾಶಿಯನೊಳಗೆ ಹಡಗಿನಂತಿರುವ ನನ್ನಲ್ಲಿ ನೆಲಸಿದ ಪ್ರಜೆಗಳನ್ನು ಸಲಹಲೆಳಸಿ ಈ

ಭೂದ್ಧರಾಧರೋ ಯೋ ಮಾಂ ಪಯಸ್ಯುಗ್ರಶರೋ ಜಿಘಾಂಸಸಿ ॥ ೩೫ ॥ §
ನೂನಂ ಜನ್ಯೈರೀಹಿತ ಮೀಶ್ವರಾಣಾ ಮಸ್ಮದ್ವಿಧೈ ಸ್ತದ್ಗುಣಸರ್ಗ ಮಾಯ
ಯಾ । ನಜ್ಞಾಯತೇ ಮೋಹಿತ ಚಿತ್ತವರ್ತ್ಮಭಿ ಸ್ತೇಭ್ಯೋ ನಮೋ ವೀರ
ಯಶಸ್ಕರೇಭ್ಯಃ ॥೩೬॥

—ಇತಿ ಸಪ್ತದಶೋಧ್ಯಾಯಃ —

---

ಲ್ಲಲೆಳಸುವೆಯೋ, ಸಧರಾಧರಃ - ನನ್ನನ್ನು (ಭೂಮಿಯನ್ನು) ಉದ್ಧರಿಸಿದ , ಭವಾನ್ - ಆಸೀನೇ, ಅಪಾಂ - ಜಲದ, ಉಪಸ್ಥೇ - ಮೇಲ್ಗಡೆಯಲ್ಲಿ, ನಾವಿ - ಹಡಗಿನಂತಿರುವ, ಮಯಿ - ನನ್ನಲ್ಲಿ, ಅವಸ್ಥಿತಾಃ - ನೆಲಸಿರುವ, ಪ್ರಜಾಃ - ಪ್ರಜೆಗಳನ್ನು, ಅದ್ಯ - ಈಗ, ರಿರಕ್ಷಿಷುಃ - ಪಾಲಿಸಲೆಳಸಿ, ವೀರಮೂರ್ತಿಃ - ವೀರರೂಪದಿಂದ, ಸಮಭೂತ್ - ಅವತರಿಸಿರುವೆ ॥೩೫॥ ತದ್ಗ...ಯಾ, ತತ್ - ಆಭಗವಂತನ, ಗುಣ - ಸತ್ವಾದಿಗುಣಗಳ, ಸರ್ಗ - ಸೃಷ್ಟಿರೂಪವಾದ, ಮಾಯಯಾ - ಮಾಯೆಯಿಂದ, ಮೋಹಿ...ಭಿಃ - ಮರುಳ್ಗೊಳಿಸಲ್ಪಟ್ಟ ಬುದ್ಧಿಮಾರ್ಗವುಳ್ಳ. ಅಸ್ಮದ್ವಿಧೈಃ - ನಮ್ಮಂತಹ. ಜನ್ಯೈಃ - ಜನರಿಂದ, ಈಶ್ವರಾಣಾಂ - ಯಾವಭಗವದ್ಭಕ್ತರ, ಈ ಹಿತಂ - ಸಂಕಲ್ಪವೇ, ನಜ್ಞಾಯತೇ - ತಿಳಿಯಲ್ಪಡುವುದಿಲ್ಲವೋ, ವೀರ...ಭ್ಯಃ ವೀರರಕೀರ್ತಿಯನ್ನು ಬೆಳೆಯಿಸುವ, ತೇಭ್ಯಃ - ಅವರಿಗೆ, ನಮಃ-ನಮಸ್ಕಾರವು ॥೩೬॥

— ಸಪ್ತದಶಾಧ್ಯಾಯಂ ಸಮಾಪ್ತಂ —

---

ಪೃಥುರೂಪದಿಂದ ಅವತರಿಸಿದುದಲ್ಲದೆ ವೀರಮೂರ್ತಿಯಾಗಿ ಬಿಲ್ಲು ಬಾಣಗಳನ್ನು ಧರಿಸಿ ಹಾಲುಕರೆಯುವುದಕ್ಕಾಗಿ, ಗೋರೂಪಧಾರಿಣಿಯಾದ ನನ್ನನ್ನು ಕೊಲ್ಲುವಂತಟ್ಟ ಬರುತ್ತಿರುವೆಯಲ್ಲಾ ! ನಿನ್ನಲ್ಲಿ ಪರಸ್ಪರವಿರುದ್ಧಗಳಾದ ಹಲವುಶಕ್ತಿಗಳುಂಟೆಂಬುದಕ್ಕೆ ಇದಕ್ಕಿಂತ ಬೇರೆ ನಿದರ್ಶನವು ಬೇಕೆ ? ॥೩೫॥ ಅದ್ಭುತಮಹಿಮನಾದ ನಿನ್ನ ಗುಣಸೃಷ್ಟಿರೂಪವಾದ ಮಾಯೆಯಿಂದ ಮೋಹಗೊಂಡು ಮತಿಗೇಡಿಗಳಾಗಿರುವ ನಮ್ಮಂತಹ ಜನರು ನಿನ್ನ ಭಕ್ತರಾದ ಸಾಧುಗಳ ಸಂಕಲ್ಪಗಳನ್ನೇ ತಿಳಿಯಲಾರೆವು. ಇಂತಿರುವಾಗ ನಿನ್ನ ಮಹಿಮೆಯನ್ನು ತಿಳಿವುದೆಂತು? ಆದುದರಿಂದ ಶೂರರಾದವರ ಕೀರ್ತಿಯನ್ನು ಬೆಳೆಯಿಸುವ ನಿನ್ನ ಅವತಾರಗಳಿಗೆ ಅನೇಕ ವಂದನೆಗಳನ್ನು ಸಮರ್ಪಿಸುವೆನು, ಎಂದು ಭೂದೇವಿಯು ಪೃಥುರಾಜನನ್ನು ಹೊಗಳಿದನೆಂಬಲ್ಲಿಗೆ ಭಾಗವತ ಚಕೋರಚಂದ್ರಿಕೆಯೊಳ್

— ಹದಿನೇಳನೆಯ ಅಧ್ಯಾಯಂ ಮುಗಿದುದು —

---

§ ಸೂ—"ಈ ನಿನ್ನ ಪ್ರಜೆಗಳೆಲ್ಲರೂ ನನ್ನ ತೊಡೆಯಮೇಲೆಯೇ ಬೆಳೆಯುವವರಾದುದರಿಂದ ನನಗೂ ಮಕ್ಕಳೇಸರಿ. ನಾನಿವರಿಗೆ ನಿತ್ಯವೂ ಎದೆಯನ್ನೂಡಿಸಿ ಬೆಳೆಯಿಸುವೆನು. ಈಗ ಇವರ ದುರುಳತನವನ್ನು ಕಂಡು ಒಳ್ಳೆಯ ನಡವಳಿಯನ್ನು ಕಲಿಸುವುದಕ್ಕಾಗಿ ತಾಯಿಯಾದ ನಾನು ಕೋಪಗೊಂಡು ಇವರಿಗೆ ಹಾಲೆರೆಯುವುದನ್ನು ನಿಲ್ಲಿಸಿದೆನು. ಇಷ್ಟುಮಾತ್ರದಿಂದಲೇ ಯಜಮಾನನಾದ ನೀನು "ನಾನು ಹಾಲೆರೆಯುವುದೇ ಇಲ್ಲ" ಎಂದು ತಿಳಿದು ನನ್ನನ್ನು ದಂಡಿಸತೊಡಗಿರುವೆ" ಎಂದು ಭೂಮಿಯು ಭಗವಂತನಿಗೆ ಹೇಳಿದಳೆಂದು ಭಾವವು.

## — ಓಂನಮಃ ಪರಮಾತ್ಮನೇ —

### ಅಥಾಷ್ಟಾದಶೋಽಧ್ಯಾಯಃ

ಮೈತ್ರೇಯಃ ॥ ಇತ್ಥಂ ಪೃಥು ಮಭಿಷ್ಟೂಯ ರುಷಾ ಪ್ರಸ್ಫುರಿತಾಧರಂ। ಪುನರಾಹಾಽವನಿ ರ್ಭೀತಾ ಸಂಸ್ತಭ್ಯಾತ್ಮಾನ ಮಾತ್ಮನಾ ॥೧॥ ಸಂನಿಯಚ್ಛಾಭಿಭೋ ! ಮನ್ಯುಂ ನಿಬೋಧ ಶ್ರಾವಿತಂ ಚ ಮೇ । ಸರ್ವತ ಸ್ಸಾರಮಾದತ್ತೇ ಯಥಾ ಮಧುಕರೋ ಬುಧಃ ॥೨॥ ಅಸ್ಮಿನ್ ಲೋಕೇಽಥವಾಽಮುಷ್ಮಿನ್ ಮುನಿಭಿ ಸ್ತತ್ವದರ್ಶಿಭಿಃ । ದೃಷ್ಟಾ ಯೋಗಾಃ ಪ್ರಯುಕ್ತಾಶ್ಚ

---

—ಅಷ್ಟಾದಶಾಧ್ಯಾಯಂ.—

ಕಂ॥ ವರಪೃಥುಮೊದಲಾದವರಾ । ದರದಿಂ ತಿರೆಯೆಂಬ ತುರುವ ಕರೆಯಲ್ ಮನುವಂ।
ಕರುವಾಗಿಸಿ ತಾದಿಂದ । ಚ್ಚರಿಯಹ ಪಾಲ್ಗರೆದು ತಮ್ಮ ಭೀಷ್ಟವನಾಂತರ್ ॥

ಅವನಿಃ - ಭೂಮಿಯು, ರುಷಾ - ಕೋಪದಿಂದ, ಪ್ರಸ್ಫು....ರಂ-ಕೆಳದುಟಿಯು ನಡುಗುತ್ತಿರುವ, ತಂಪೃಥುಂ-ಆ ಪೃಥುರಾಜನನ್ನು, ಅಭಿಷ್ಟೂಯ - ಹೊಗಳಿ, ಭೀತಾ-ಹೆದರಿ, ಆತ್ಮನಾ - ಬುದ್ಧಿಯಿಂದ, ಆತ್ಮಾನಂ-ಮನಸ್ಸನ್ನು ಸಂಸ್ತಭ್ಯ - ಸ್ಥಿರಗೊಳಿಸಿಕೊಂಡು, ಪುನಃ-ಮರಳಿ, ಆಹ-ಹೇಳುತ್ತಾಳೆ ॥ ೧ ॥ ಅಭಿಭೋ - ಎಲೈ ಪ್ರಭುವೆ ! ಅಥವಾ, ಅಭಿ - ಅಭಯವಾಗುವಂತೆ, ಮನ್ಯುಂ - ಕೋಪವನ್ನು, ಸಂನಿಯಚ್ಛ - ನಿಗ್ರಹಿಸು, ಮೇ - ನನ್ನ, ಶ್ರಾವಿತಂ - ಬಿನ್ನಪವನ್ನು, ನಿಬೋಧ - ಲಾಲಿಸು, ಬುಧಃ-ವಿದ್ವಾಂಸನು, ಮಧುಕರೋಯಥಾ - ಭ್ರಮರದಂತೆ, ಸರ್ವತಃ - ಎಲ್ಲರಿಂದಲೂ, ಸಾರಂ - ಸಾರಾಂಶವನ್ನು, ಆದತ್ತೇ - ಪರಿಗ್ರಹಿಸುತ್ತಾನೆ ॥೨॥ ತತ್ತ್ವದರ್ಶಿಭಿಃ - ಯಥಾರ್ಥ್ಯವನ್ನು ಬಲ್ಲ, ಮುನಿಭಿಃ-ಋಷಿಗಳಿಂದ, ಅಸ್ಮಿನ್ - ಈ ಲೋಕದಲ್ಲಿಯೂ, ಅಮುಷ್ಮಿನ್‌ಲೋಕೇಚ - ಪರಲೋಕದಲ್ಲಿಯೂ, ಪುಂಸಾಂ - ಪುರುಷರ, ಶ್ರೇಯಃಪ್ರಸಿದ್ಧಯೇ-ಪುರುಷಾರ್ಥಸಿದ್ಧಿಗಾಗಿ, ಯೋಗಾಃ - ಉಪಾಯಗಳು, ದೃಷ್ಟಾಃ - ಕಾಣಲ್ಪ

---

### ಹದಿನೆಂಟನೆಯ ಅಧ್ಯಾಯ.

#### —ಭೂಮಿಯು ಗೋರೂಪದಿಂದ ಹಾಲನ್ನು ಕರೆಯುವುದು—

ಅನಂತರದಲ್ಲಿ ಮೈತ್ರೇಯನು ವಿದುರನಿಗೆ ಹೇಳುತ್ತಾನೆ—ಇಂತು ಭೂದೇವಿಯು ಕೆಳದುಟಿಯದರುವಂತೆ ಕೋಪಗೊಂಡಿರುವ ಪೃಥುರಾಜನನ್ನು ಕೊಂಡಾಡಿ, ಅದರಿಂದಲೂ ಕೋಪವಾರದಿರಲು ಹೆದರಿದವಳಾಗಿ ತನಗೆತಾನೇ ಧೈರ್ಯವನ್ನು ಪಡೆದು ಮರಳಿ ಆರಾಜನಿಗಿಂತೆಂದಳು॥೧॥ ಎಲೈ ಪ್ರಭುವೆ! ಅಭಯವನ್ನು ಕೊಡು. ಕೋಪವನ್ನು ಬಿಡು. ನನ್ನ ಬಿನ್ನಪವನ್ನಾಲಿಸು. ಪಂಡಿತನಾದವನು ಭ್ರಮರದಂತೆ ಎಲ್ಲೆಡೆಗಳಲ್ಲಿಯೂ ಸಾರವನ್ನು ಗ್ರಹಿಸುವನು ॥೨॥ ತತ್ತ್ವವನ್ನರಿತ ಮಹಾತ್ಮರು ಜನರ ಶ್ರೇಯೋಭಿವೃದ್ಧಿಯಾಗಲೆಣಿಸಿ ಈಲೋಕದಸುಖಕ್ಕಾಗಿ ಕೃಷಿವಾಣಿಜ್ಯಾದ್ಯುಪಾಯಗಳನ್ನೂ, ಪರಲೋಕಸುಖಕ್ಕಾಗಿ ಅಗ್ನಿಹೋ

ಪುಂಸಾಂ ಶ್ರೇಯಃಪ್ರಸಿದ್ಧಯೇ ॥೩॥ ತಾನಾತಿಷ್ಠತಿ ಯಃ ಸಮ್ಯಗುಪಾಯಾನ್ ಪೂರ್ವದರ್ಶಿತಾನ್ । ಅವರಃ ಶ್ರದ್ಧಯೋಪೇತ ಉಪೇಯಾನ್ ವಿಂದತೇಂಜಸಾ ॥೪॥ ತಾನನಾದೃತ್ಯ ಯೋಽವಿದ್ವಾನರ್ಥಾನಾರಭತೇ ಸ್ವಯಂ । ತಸ್ಯ ವ್ಯಭಿಚರಂತ್ಯರ್ಥಾ ಆರಬ್ಧಾಶ್ಚ ಪುನಃಪುನಃ ॥೫॥ ಪುರಾ ಸೃಷ್ಟಾ ಹ್ಯೋಷಧಯೋ ಬ್ರಹ್ಮಣಾ ಯಾ ವಿಶಾಂಪತೇ ! । ಭುಜ್ಯಮಾನಾ ಮಯಾ ದೃಷ್ಟಾ ಅಸದ್ಭಿರಧೃತವ್ರತೈಃ ॥೬॥ ಅಪಾಲಿತಾಽನಾದೃತಾಚ ಭವದ್ಭಿರ್ಲೋಕಪಾಲಕೈಃ । ಚೋರೀಭೂತೇಽಥಲೋಕೇಽಹಂ ಯಜ್ಞಾರ್ಥೇಽ

ಟ್ಟವೆ. ಅನುಷ್ಠಿತಾಶ್ಚ - ಆಚರಿಸಲ್ಪಟ್ಟೂ ಇವೆ ॥ ೩ ॥ ಯಃ ಅವರಃ - ಯಾವ ಈಚಿನವನು, ಶ್ರದ್ಧಯಾ - ಶ್ರದ್ಧೆಯಿಂದ, ಉಪೇತಃ-ಕೂಡಿದವನಾಗಿ, ಪೂರ್ವದರ್ಶಿತಾನ್ - ಮೊದಲು ತೋರಿಸಲ್ಪಟ್ಟ, ಉಪಾಯಾನ್ - ಯುಕ್ತಿಗಳನ್ನು, ಸಮ್ಯಕ್ - ಚೆನ್ನಾಗಿ, ಆತಿಷ್ಠತಿ - ಆಚರಿಸುವನೋ, ಸಃ-ಅವನು, ಅಂಜಸಾ - ಬೇಗನೆ, ಉಪೇಯಾನ್ - ಫಲಗಳನ್ನು, ವಿಂದತೇ - ಪಡೆಯುತ್ತಾನೆ ॥ ೪ ॥ ಯಃ - ಯಾವ, ವಿದ್ವಾನ್ - ಅವಿದ್ವಾನ್ವಾ-ವಿದ್ವಾಂಸನಾಗಲಿ, ಪಾಮರನಾಗಲಿ, ತಾನ್ - ಆ ಪೂರ್ವೋಪಾಯಗಳನ್ನು, ಅನಾದೃತ್ಯ - ಆದರಿಸದೆ, ಸ್ವಯಂ - ತಾನಾಗಿಯೇ, ಅರ್ಥಾನ್ - ಕಾರ್ಯಗಳನ್ನು, ಆರಭತೇ - ಪ್ರಾರಂಭಿಸುವನೋ, ತಸ್ಯ - ಅವನ, ಅರ್ಥಾಃ - ಕೆಲಸಗಳು, ಪುನಃಪುನಃ-ಬಾರಿಬಾರಿಗೂ, ಆರಬ್ಧಾ ಅಪಿ- ಪ್ರಾರಂಭಿಸಲ್ಪಟ್ಟರೂ, ವ್ಯಭಿಚರಂತಿ - ಕೈಗೂಡುವುದಿಲ್ಲ ॥ ೫ ॥ ವಿಶಾಂಪತೇ - ಎಲೈ ರಾಜನೆ ! ಪುರಾ - ಮುನ್ನು, ಬ್ರಹ್ಮಣಾ - ಬ್ರಹ್ಮನಿಂದ, ಯಾಃ - ಯಾವ, ಓಷಧಯಃ - ಸಸ್ಯಗಳು, ಸೃಷ್ಟಾಃ - ಸೃಜಿಸಲ್ಪಟ್ಟವೋ, ಅಧೃತವ್ರತೈಃ - ಕರ್ಮಭ್ರಷ್ಟರಾದ, ಅಸದ್ಭಿಃ - ದುರ್ಜನರಿಂದ, ಭುಜ್ಯಮಾನಾಃ - ತಿನ್ನಲ್ಪಡತಕ್ಕವುಗಳಾಗಿ, ಮಯಾ - ನನ್ನಿಂದ, ದೃಷ್ಟಾಃ - ಕಾಣಲ್ಪಟ್ಟವು ॥ ೬ ॥ ಲೋಕಪಾಲಕೈಃ. ಜಗತ್ತನ್ನು ಪಾಲಿಸುವ, ಭವದ್ಭಿಃ - ನಿಮ್ಮಿಂದ, ಅಹಂ - ನಾನು, ಅಪಾಲಿತಾ - ಸಲಹಲ್ಪಡಲಿಲ್ಲ, ಅನಾ

ತ್ಮಾದ್ಯುಪಾಯಗಳನ್ನು ಕಂಡುಹಿಡಿದರುವರಲ್ಲದೆ ಆಚರಣೆಗೂ ತಂದಿರುವರು॥೩॥ ತಿಳಿದವನಾಗಲಿ, ತಿಳಿಯದವನಾಗಲಿ,ಯಾವನು ಪೂರ್ವಿಕರು ತೋರಿಸಿಕೊಟ್ಟಿರುವ ಆ ಉಪಾಯಗಳನ್ನು ಶ್ರದ್ಧೆಯಿಂದ ಚೆನ್ನಾಗಿ ಆಚರಿಸುವನೋ, ಅವನು ಬೇಗನೆ ಫಲವನ್ನು ಪಡೆಯುವನು ॥೪॥ ಯಾವನು ಅವುಗಳನ್ನು ಆಚರಿಸದೆ ತನ್ನ ಮನೋನುಸಾರವಾಗಿ ಕಾರ್ಯಗಳನ್ನು ಮಾಡಲಾರಂಭಿಸುವನೋ, ಅವನ ಕೆಲಸಗಳು ಅಡಿಗಡಿಗೂ ವಿಘ್ನಗಳಿಂದ ಕೆಡುವುವಲ್ಲದೆ, ಎಷ್ಟುಸಲ ಮಾಡಿದರೂ ಫಲವನ್ನು ಕೊಡುವುದಿಲ್ಲ ॥೫॥ ಅಯ್ಯಾ ಮಹಾರಾಜನೆ ! ಜಗತ್ಕರ್ತನಾದ ಬ್ರಹ್ಮದೇವನು ಮುನ್ನು ಪ್ರಾಣಿಗಳಿಗೆ ಈ ಲೋಕವಲ್ಲಿ ಜೀವನಕ್ಕಾಗಿಯೂ, ಯಜ್ಞಯಾಗಾದಿ ಸತ್ಕರ್ಮಗಳನ್ನು ಮಾಡುವುದರ ಮೂಲಕವಾಗಿ ಪರಲೋಕದಲ್ಲಿ ಸದ್ಗತಿಯುಂಟಾಗುವದಕ್ಕಾಗಿಯೂ ಯಾವ ಸಸ್ಯಬೀಜಗಳನ್ನು ಸೃಷ್ಟಿಸಿದನೋ, ಅವುಗಳನ್ನು ದುಷ್ಟರಾದ ಜನರು ದೇವತಾ ಪ್ರೀತಿಕರಗಳಾದ ಯಜ್ಞಾದಿಕರ್ಮಗಳನ್ನು ಮಾಡದೆಯೇ ಭಗವದಾಜ್ಞೆಯನ್ನುಲ್ಲಂಘಿಸಿ, ತಿನ್ನುತ್ತಿರುವುದನ್ನು ಕಂಡು "ಈ ದುರಾತ್ಮರು ಭುಜಿಸಿದ ಸಸ್ಯಗಳು ಸಮೂಲವಾಗಿ ನಾಶವಾಗುವವು" ಎಂದು ಯೋಚಿಸಿದೆನು ॥೬॥ ಇಂತು ಕಳವಳಗೊಂಡಿರುವಾಗ ನನ್ನನ್ನು ನಿಮ್ಮಂತಹ ಮಹಾತ್ಮರು ಪಾಲಿಸಲಿಲ್ಲ. ಆದರಿಸಲೂ ಇಲ್ಲ. ಲೋಕ

ಗ್ರಸ ಮೋಷಧೀಃ॥೭॥ ನೂನಂ ತಾವೀರುಧಃ ಕ್ಷೀಣಾ ಮಯಿ ಕಾಲೇನ ಭೂ
ಯಸಾ । ತತ್ರ ಯೋಗೇನ ದೃಷ್ಟೇನ ಭವಾನಾದಾತು ಮರ್ಹತಿ ॥೮॥ ವ
ತ್ಸಂ ಕಲ್ಪಯ ಮೇ ವೀರ! ಯೇನಾಹಂ ವತ್ಸಲಾ ತವ । ಧೋಕ್ಷ್ಯೇ ಕ್ಷೀರ
ಮಯಾನ್ಕಾಮಾ ನನುರೂಪಂಚದೋಹನಂ ॥೯॥ ದೋಗ್ಧಾರಂಚ ಮಹಾ
ಬಾಹೋ ! ಭೂತಾನಾಂ ಭೂತಭಾವನ! । ಅನ್ನಮೀಪ್ಸಿತ ಮೂರ್ಜಸ್ವ ದ್ಭ
ಗವಾನ್ ವಾಂಛತೇ ಯದಿ ॥೧೦॥ ಸಮಾಂಚ ಕುರು ಮಾಂರಾಜನ್ ! ದೇವ

---

ದೃತಾಚ - ಆದರಿಸಲ್ಪಡಲೂ ಇಲ್ಲ, ಅಥ - ಆದುದರಿಂದ, ಲೋಕೇ - ಜಗತ್ತು, ಚೋರೀಭೂತೇ - ಕಳ್ಳರಮಯವಾಗಲು, ಯಜ್ಞಾರ್ಥೇ- ಯಜ್ಞಕ್ಕಾಗಿ, ಓಷಧೀಃ-ಸಸ್ಯಗಳನ್ನು, ಅಗ್ರಸಂ-ನುಂಗಿದೆನು॥೭॥ ತಾವೀರುಧಃ - ಆಸಸ್ಯಗಳು, ಮಯಿ - ನನ್ನಲ್ಲಿ, ಭೂಯಸಾ - ಬಹಳವಾದ, ಕಾಲೇನ - ಕಾಲದಿಂದ ಕ್ಷೀಣಾಃ - ಜೀರ್ಣವಾದುವು, ನೂನಂ - ದಿಟ, ತತ್ರ - ಅಲ್ಲಿ, ಭವಾನ್ - ನೀನು, ದೃಷ್ಟೇನ - ಕಾಣಲ್ಪಟ್ಟ, ಯೋಗೇನ - ಉಪಾಯದಿಂದ, ಆದಾತುಂ - ಪಡೆಯುವುದಕ್ಕೆ, ಅರ್ಹತಿ - ಯೋಗ್ಯನಾಗುತ್ತಿ ॥೮॥ ವೀರ - ಎಲೈ ಶೂರನೆ ! ಯೇನ - ಯಾವುದರಿಂದ, ತವ - ನಿನ್ನ ವಿಷಯದಲ್ಲಿ, ವತ್ಸಲಾ - ಪ್ರೀತಿಯುಳ್ಳವಳಾಗಿ, ಕ್ಷೀರಮಯಾನ್ - ಕ್ಷೀರವಿಕಾರಗಳಾದ, ಕಾಮಾನ್ - ಬಯಕೆಗಳನ್ನು, ಧೋಕ್ಷ್ಯೇ-ಕರೆಯುವೆನೋ, ಅಂತಹ, ವತ್ಸಂ - ಕರುವನ್ನೂ, ಅನುರೂಪಂ - ಅನುಗುಣವಾದ, ದೋಹನಂಚ - ಪಾತ್ರೆಯನ್ನೂ, ಕಲ್ಪಯ - ಸಿದ್ಧಪಡಿಸು ॥ ೯ ॥ ಭೂತಭಾವನ - ಭೂತಪಾಲಕನಾದ, ಮಹಾಬಾಹೋ-ಮಹಾಶೂರನೆ ! ಭವಾನ್ - ನೀನು, ಭೂತಾನಾಂ - ಪ್ರಾಣಿಗಳಿಗೆ, ಈಪ್ಸಿತಂ - ಇಷ್ಟವಾದ, ಊರ್ಜಸ್ವತ್ - ಬಲವನ್ನು ಕೊಡುವ, ಅನ್ನಂ - ಅನ್ನವನ್ನು, ಯದಿವಾಂಛತೇ - ಅಪೇಕ್ಷಿಸುವುದಾದರೆ, ದೋಗ್ಧಾರಂಚ- ಕರೆಯುವವನನ್ನೂ, ಕಲ್ಪಯ - ಸಿದ್ಧಗೊಳಿಸು ॥ ೧೦ ॥

ವಿಭೋ - ಪ್ರಭುವಾದ, ರಾಜನ್ - ರಾಜನೆ ! ದೇವವೃಷ್ಟಂ - ಇಂದ್ರನಿಂದ ಕರೆಯಲ್ಪಟ್ಟ, ಪಯಃ -ಜಲವು ಯಥಾ-ಹೇಗೆ, ಅಪರ್ತಾವಪಿ - ಮಳೆಗಾಲ ಕಳೆದ ಮೇಲೂ, ಮೇ - ನನ್ನ, ಉಪಾವ

---

ವೆಲ್ಲವೂ ಕಳ್ಳಕಾಕರ ಮಯವಾಯಿತು. ಇಂತಾಗಲು "ದುರಾತ್ಮರಿಂದ ತಿನ್ನಲ್ಪಟ್ಟ ಸಸ್ಯಗಳು ನಿಶ್ಶೇಷವಾಗಿ ನಾಶವಾಗಿ ಯಜ್ಞಾದಿಕರ್ಮಗಳು ನಡೆಯದೆಯೇ ನಿಂತುಹೋಗುವುವಲ್ಲಾ" ! ಎಂದಾಲೋಚಿಸಿ ಉಳಿದ ಬೀಜಗಳನ್ನು ನಾನು ಯಜ್ಞಾರ್ಥವಾಗಿ ನುಂಗಿದೆನು ॥೭॥ ಬಹಳ ಕಾಲವಾದುದರಿಂದ ಆ ಸಸ್ಯಗಳೂ ನನ್ನಲ್ಲಿ ಅರಗಿ ಹೋಗಿರುವುದು ದಿಟ. ಆದಕಾರಣ ನೀನು ಉಪಾಯಾಂತರದಿಂದ ಅವುಗಳನ್ನು ಬರಮಾಡಿಕೊಳ್ಳುವವನಾಗು.॥೮॥ ಎಲೈ ಶೂರನೆ ! ನಾನು ನಿನ್ನನ್ನು ಪ್ರೀತಿಸಿ, ಹಾಲಿನರೂಪದಿಂದ ನಿನ್ನ ಸಕಲ ಜನೇಷ್ಟಾರ್ಥಗಳನ್ನೂ ಕರೆಯುವಂತೆ ಒಂದುಕರುವನ್ನೂ, ಹಾಲನ್ನು ಕರೆಯತಕ್ಕ ಪಾತ್ರೆಯನ್ನೂ ಸಿದ್ಧಗೊಳಿಸು ॥೯॥ ಎಲೈ ಮಹಾಬಾಹುವೆ ! ನೀನು ಸಕಲ ಭೂತಗಳಿಗೂ ಹಿತಕನಾದುದರಿಂದ ಪ್ರಾಣಿಗಳಿಗೆ ಉಪಕಾರಿಯಾಗಿಯೂ ಇಷ್ಟವಾಗಿಯೂ ಇರುವ ಅನ್ನವನ್ನು ಕೊಡಿಸಬೇಕೆಂದು ಬಯಸುವೆಯಾದರೆ ನನ್ನ ಹಾಲುಕರೆಯ ತಕ್ಕವನನ್ನೂ ಜತೆಗೊಳಿಸು. ಇದೇ ಉಪಾಯವು ॥೧೦॥ ಅಯ್ಯಾ ಪ್ರಭುವಾದ ರಾಜನೆ ! ಬೆಟ್ಟಗಟ್ಟಗಳಿಂದ ಹಳ್ಳತಿಟ್ಟಾಗಿರುವ ನನ್ನಲ್ಲಿ ಪರ್ಜನ್ಯನು ಮಳೆಗರೆದನೀರು ನಿಲ್ಲದೆ ಪ್ರಾಣಿಗಳಿಗೆ ತೊಂದರೆಯಾಗಿರುವುದು. ಆದುದ

ವೃಷ್ಟಂ ಯಥಾ ಪಯಃ । ಅಪರ್ತಂ ಅಪಿ ಭದ್ರಂ ತೇ ಉಪಾವರ್ತೇತ
ಮೇ ವಿಭೋ! ॥೧೧॥ ಇತಿಪ್ರಿಯಂ ಹಿತಂ ವಾಕ್ಯಂ ಭುವ ಆದಾಯ ಭೂ
ಪತಿಃ । ವತ್ಸಂ ಕೃತ್ವಾಮನುಂ ಪಾಣಾವ ದುಹ ತ್ಸಕಲೌಷಧೀಃ ॥೧೨॥ ತ
ಥಾಪರೇಚ ಸರ್ವತ್ರ ಸಾರಮಾದದತೇ ಬುಧಾಃ । ತತೋಽನ್ಯೇಚ ಯಥಾ
ಕಾಮಂ ದುದುಹುಃ ಪೃಥುಭಾವಿತಾಂ ॥೧೩॥ * ಋಷಯೋ ದುದುಹು ರ್ದೇ
ವೀ ಮಿಂದ್ರಿಯೇಷ್ವಥಸತ್ತಮ ! । ವತ್ಸಂ ಬೃಹಸ್ಪತಿಂ ಕೃತ್ವಾ ಪಯ ಶ್ಛಂ

ರ್ತೇತ - ಸುತ್ತಲೂ ಇರುವುವೋ, ತಥಾ - ಹಾಗೆ, ಮಾಂ - ನನ್ನನ್ನು, ಸಮಾಂಕುರು - ಸಮಗೊಳಿ
ಸು, ತೇ - ನಿನಗೆ, ಭದ್ರಂ - ಮಂಗಳವಾಗುವುದು ॥ ೧೧ ॥ ಭೂಪತಿಃ-ಪೃಥುರಾಜನು, ಇತಿ-ಇಂತು,
ಪ್ರಿಯಂ - ರುಚಿಕರವಾಗಿಯೂ, ಹಿತಂ-ಶ್ರೇಯಸ್ಕರವಾಗಿಯೂ ಇರುವ, ಭುವಃ-ಭೂಮಿಯ, ವಾಕ್ಯಂ-
ನುಡಿಯನ್ನು, ಆದಾಯ - ಅಂಗೀಕರಿಸಿ, ಮನುಂ - ಸ್ವಾಯಂಭುವ ಮನುವನ್ನು, ವತ್ಸಂ - ಕರುವ
ನ್ನಾಗಿ, ಕೃತ್ವಾ - ಮಾಡಿ, ಪಾಣೌ - ಕೈಯಲ್ಲಿ, ಸಕಲೌಷಧೀಃ - ಎಲ್ಲಸಸ್ಯಗಳನ್ನೂ, ಅದುಹತ್ - ಕರೆ
ದನು ॥ ೧೨ ॥ ತಥಾ - ಹಾಗೆ, ಅಪರೇ - ಇತರರಾದ, ಬುಧಶ್ಚ - ವಿದ್ವಾಂಸರೂ, ಸರ್ವತ್ರ - ಎಲ್ಲಾ
ಕಡೆಗಳಲ್ಲಿಯೂ, ಸಾರಂ - ಸ್ಥಿರಾಂಶವನ್ನು, ಆದದತೇ - ಪರಿಗ್ರಹಿಸುವರು, ತತಃ - ಬಳಿಕ, ಅನ್ಯೇಚ-
ಇತರರೂ, ಯಥಾಕಾಮಂ - ಇಷ್ಟಾನುಸಾರವಾಗಿ, ಪೃಥುಭಾವಿತಾಂ - ಪೃಥುವಿನಿಂದ ವಶಗೊಳಿಸಲ್ಪಟ್ಟ
ಭೂಮಿಯನ್ನು, ದುದುಹುಃ - ಹಾಲುಕರೆದರು ॥೧೩॥ ಸತ್ತಮ - ಸಾಧುವರ್ಯನೆ! ಅಥ - ಬಳಿಕ, ಋ
ಷಯಃ - ವಸಿಷ್ಠಾದಿಋಷಿಗಳು, ಬೃಹಸ್ಪತಿಂ - ಬೃಹಸ್ಪತಿಯನ್ನು, ವತ್ಸಂ - ಕರುವನ್ನಾಗಿ, ಕೃತ್ವಾ -
ಮಾಡಿ, ಇಂದ್ರಿಯೇಷು - ಇಂದ್ರಿಯಗಳಲ್ಲಿ, ದೇವೀಂ - ಭೂಮಿಯನ್ನು, ಶುಚಿ ಪರಿಶುದ್ಧ ವಾದ, ಛಂದೋ

ರಿಂದ ಮಳೆಗಾಲವು ಕಳೆದ ಮೇಲೂ ನನ್ನಲ್ಲಿ ಜಲವು ಜಾರಿಹೋಗದಂತೆಸಮಗೊಳಿಸು. ಈಉ
ಪಾಯಗಳಿಂದ ನಿನ್ನ ಮನೋರಥವು ಸಿದ್ಧಿಸುವುದು ॥೧೧॥ ಎಂದು ಭೂದೇವಿಯು ನುಡಿದ
ಹಿತಕರಗಳಾದ ಸವಿನುಡಿಗಳನ್ನು ಕೇಳಿ, ಪೃಥುರಾಜನು ಆ ಮಾತಿಗೆ ಸಮ್ಮತಿಸಿ, ತನ್ನಕು
ಲಕ್ಕೆ ಕೂಟಸ್ಥನಾದ ಸ್ವಾಯಂಭುವ ಮನುವನ್ನು ಕರುವನ್ನಾಗಿಮಾಡಿ ತನ್ನ ಕೈಯ್ಯಲ್ಲಿ
ಯೇ ಹಾಲಿನರೂಪದಿಂದ ಸಕಲ ಸಸ್ಯಗಳನ್ನೂ ಕರೆದನು ॥೧೨॥ ಯುಕ್ತಾಯುಕ್ತವಿವೇ
ಕವುಳ್ಳ ವಿದ್ವಾಂಸರು ಇಂತೆಯೇ ಎಲ್ಲಾ ಕಡೆಗಳಲ್ಲಿಯೂ ಸಾರವನ್ನು ಗ್ರಹಿಸುವರಲ್ಲವೆ?
ಬಳಿಕ ಇತರರೂ ತಂತಮ್ಮ ಇಷ್ಟಾನುಸಾರವಾಗಿ ಪೃಥುರಾಜನಿಗೆ ವಶವಾಗಿ ಗೋರೂಪ
ವನ್ನು ಪಡೆದಿರುವ ಭೂದೇವಿಯಿಂದ ಸಕಲೇಷ್ಟ ವಸ್ತುಗಳನ್ನೂ ಕರೆಯತೊಡಗಿದರು ॥
ವಸಿಷ್ಠಾದಿ ಮಹರ್ಷಿಗಳು ಜ್ಞಾನಿಶಿರೋಮಣಿಯಾದ ಬೃಹಸ್ಪತ್ಯಾಚಾರ್ಯನನ್ನು ಕರುವ
ನ್ನಾಗಿ ಮಾಡಿ, ಭೂದೇವಿಯಿಂದ, ವಾಕ್ಕು, ಕಿವಿ, ಮನಸ್ಸುಗಳೆಂಬ ಪಾತ್ರಗಳಲ್ಲಿ, ಪರಿಶು

* ವೇದಾಧ್ಯಯನಕ್ಕೆ ಪ್ರಥಮಾಧಿಕಾರಿಯಾದ ಬೃಹಸ್ಪತಿಯು ವತ್ಸರೂಪವನ್ನು ಪಡೆಯಲು, ಭೂ
ದೇವಿಯು ಗೋರೂಪದಿಂದ ವೇದಮಯವಾದ ಹಾಲನ್ನು ಕರೆದಳು. ವಸಿಷ್ಠಾದಿಮುನಿಗಳು ಆ ಹಾಲನ್ನು
ಪಾನಮಾಡಿದ ಕೂಡಲೇ ಉಪ್ತವಾಗಿದ್ದ ವೇದವು ವೇದಗ್ರಹಣಕ್ಕೆ ಅರ್ಹಗಳಾದ ತಮ್ಮ ವಾಕ್ಕು, ಮನ
ಸ್ಸು, ಕಿವಿಗಳೆಂಬ ಇಂದ್ರಿಯಗಳಲ್ಲಿ ಆವಿರ್ಭವಿಸಿತು. ಮುಂದೆಯೂ ಇಂತೆಯೇ ಊಹಿಸಿಕೊಳ್ಳಬೇಕು.

ಧೋಮಯಂ ಶುಚಿ ॥೧೪॥ ಕೃತ್ವಾ ವತ್ಸಂ ಸುರಗಣಾ ಇಂದ್ರಂ ಸೋಮ
ಮದೂದುಹನ್ । ಹಿರಣ್ಮಯೇನ ಪಾತ್ರೇಣ* ವೀರ್ಯಮೋಜೋ ಬಲಂ ಪ
ಯಃ ॥೧೫॥ ದೈತೇಯಾ ದಾನವಾ ವತ್ಸಂ ಪ್ರಹ್ಲಾದಮಸುರರ್ಷಭಂ ।
ವಿಧಾಯಾಽದೂದುಹನ್ ಕ್ಷೀರಮಯಃಪಾತ್ರೇ † ಸುರಾಸವಂ ॥ ೧೬ ॥
ಗಂಧರ್ವಾಽಪ್ಸರಸೋಽಧುಕ್ಷನ್ ಪಾತ್ರೇ ಪದ್ಮಮಯೇ ಪಯಃ । ವತ್ಸಂ

ಮಯಂ - ವೇದರೂಪವಾದ, ಪಯಃ - ಹಾಲನ್ನು, ದುದುಹುಃ - ಕರೆದರು ॥೧೪॥ ಸುರಗಣಾಃ - ದೇವತಾಸಮೂಹಗಳು, ಇಂದ್ರಂ - ಇಂದ್ರನನ್ನು, ವತ್ಸಂ - ಕರುವನ್ನಾಗಿ, ಕೃತ್ವಾ - ಮಾಡಿ, ಹಿರಣ್ಮಯೇನ - ಚಿನ್ನದ, ಪಾತ್ರೇಣ - ಪಾತ್ರದಿಂದ, ವೀರ್ಯಂ - ಮನಶ್ಶಕ್ತಿಯನ್ನೂ, ಓಜಃ - ಇಂದ್ರಿಯಶಕ್ತಿಯನ್ನೂ, ಬಲಂ - ದೇಹಶಕ್ತಿಯನ್ನು ಕೊಡುವ, ಸೋಮಂ - ಅಮೃತರೂಪವಾದ, ಪಯಃ - ಹಾಲನ್ನು, ಅದೂದುಹನ್ - ಕರೆದರು ॥ ೧೦ ॥ ದೈತೇಯಾಃ - ದೈತ್ಯರು, ದಾನವಾಃ - ದಾನವರು, ಅಸುರರ್ಷಭಂ-ರಾಕ್ಷಸಶ್ರೇಷ್ಠನಾದ, ಪ್ರಹ್ಲಾದಂ - ಪ್ರಹ್ಲಾದನನ್ನು, ವತ್ಸಂ - ಕರುವನ್ನು, ವಿಧಾಯ-ಮಾಡಿ, ಅಯಃಪಾತ್ರೇ - ಕಬ್ಬಿಣದ ಪಾತ್ರೆಯಲ್ಲಿ, ಸುರಾಸವಂ - ಹೆಂಡ ಸಾರಾಯಿಗಳನ್ನು, ಅದೂದುಹನ್ - ಹಿಂಡಿದರು ॥೧೬॥ ಗಂಧ....ಸಃ - ಗಂಧರ್ವರು ಅಪ್ಸರಸ್ಸುಗಳು, ವಿಶ್ವಾವಸುಂ - ವಿಶ್ವಾವಸುವನ್ನು, ವತ್ಸಂ-ಕರುವನ್ನು, ಕೃತ್ವಾ - ಮಾಡಿ, ಪದ್ಮಮಯೇ - ಕಮಲವೆಂಬ, ಪಾತ್ರೇ - ಪಾತ್ರೆಯಲ್ಲಿ, ಗಾಂಧರ್ವಂ -

ದ್ಧವಾದ ವೇದವೆಂಬ ಹಾಲನ್ನು ಕರೆದುಕೊಂಡರು ॥ ೧೪ ॥ ದೇವತೆಗಳು ತಮಗೆ ಒಡೆಯನಾದ ಇಂದ್ರನನ್ನು ಕರುವನ್ನಾಗಿಮಾಡಿ ಚಿನ್ನದ ಪಾತ್ರೆಯಲ್ಲಿ,ಮನಸ್ಸಿಗೂ,ಇಂದ್ರಿಯಗಳಿಗೂ,ಶರೀರಕ್ಕೂ ಬಲವನ್ನುಂಟುಮಾಡುವ ಸೋಮವೆಂಬ ಅಮೃತವನ್ನು ಕರೆದರು॥ ದೈತ್ಯರೂ, ದಾನವರೂ, ರಾಕ್ಷಸಕುಲಶೇಖರನಾದ ಪ್ರಹ್ಲಾದನನ್ನು ಕರುವನ್ನಾಗಿಮಾಡಿ, ಕಬ್ಬಿಣದ ಪಾತ್ರೆಯಲ್ಲಿ ತಮಗಿಷ್ಟವಾದ ಹೆಂಡ ಸಾರಾಯಿಗಳನ್ನು ಹಿಂಡಿಕೊಂಡರು॥೧೬॥ ಗಂಧರ್ವರು, ಅಪ್ಸರಸ್ತ್ರೀಯರು, ವಿಶ್ವಾವಸುವೆಂಬ ಗಂಧರ್ವರಾಜನನ್ನು ಕರುವನ್ನಾಗಿಮಾಡಿಕೊಂಡು, ತಾವರೆಯೆಂಬ ಪಾತ್ರೆಯಲ್ಲಿ ಗಂಧರ್ವರ ಸಂಬಂಧವಾದ ಸೌಂದರ್ಯವೆಂಬ ಮ

* ವಿ. ದೇವತೆಗಳು ಸೋಮರಸವನ್ನು ಮಾತ್ರವೇ ಅಲ್ಲದೆ ಅದರಿಂದುಂಟಾಗುವ ಪರಾಕ್ರಮ, ಧಾರಣಾಶಕ್ತಿ, ಆಹಾರವಿಲ್ಲದಿದ್ದರೂ ಕೆಲಸಮಾಡುವ ಸಾಮರ್ಥ್ಯ, ಈ ಗುಣಗಳನ್ನೂ ಕರೆದರು. ಈ ಗುಣಗಳು ಬಾಹ್ಯಗಳೇ ಹೊರತು ಸ್ವರೂಪಭೂತಗಳಲ್ಲ. ಶ್ಲೋ॥ ಗುಣಾಸ್ವರೂಪಭೂತಾಶ್ಚ ಬಾಹ್ಯಾಶ್ಚೇತಿ ದ್ವಿಧಾಮತಾಃ । ಸ್ವರೂಪಭೂತಾ ವ್ಯಜ್ಯಂತೇ ಹರೇ ರ್ಬಾಹ್ಯಾ ದುದುಹುಃ ಪಯಃ ॥

† (೧) ಶ್ಲೋ॥ ಗೌಡೀ ಪೈಷ್ಟೀ ಚ ಮಾಧ್ವೀ ಚ ವಿಜ್ಞೇಯಾತ್ರಿವಿಧಾಮತಾ । ಮದ್ಯವು ಮೂರು ವಿಧ. ಬೆಲ್ಲದಿಂದ ತೆಗೆಯುವ ಮದ್ಯಕ್ಕೆ ಗೌಡಿಯೆಂತಲೂ, ಹಿಟ್ಟನಿಂದತೆಗೆಯುವುದಕ್ಕೆ ಪೈಷ್ಟಿಯೆಂತಲೂ. ತಾಳೆ ತೆಂಗು, ಈಚಲು ಮೊದಲಾದವುಗಳಿಂದ ತೆಗೆಯುವುದಕ್ಕೆ ಮಾಧ್ವಿಯೆಂತಲೂ ಹೆಸರು.

(೨) ವಿ, ಶ್ಲೋ॥ ಪ್ರತಿಮನ್ವಂತರಂ ಪ್ರಾಯಃ ಪ್ರಹ್ಲಾದಾದ್ಯಾ ಬಭೂವಿರೇ ॥ ಪ್ರಹ್ಲಾದ ಮೊದಲಾದವರು ಪ್ರತಿಮನ್ವಂತರದಲ್ಲಿಯೂ ಜನಿಸುವರೆಂಬ ಪ್ರಮಾಣದಿಂದ ಪೃಥುವಿನ ಕಾಲದಲ್ಲಿಯೂ ಪ್ರಹ್ಲಾದ ಸಿದ್ಧನೆಂದು ತಿಳಿಯಬೇಕು

ವಿಶ್ವಾವಸುಂ ಕೃತ್ವಾ ಗಾಂಧರ್ವಂ ಮಧು ಸೌಭಗಂ ॥೧೭॥ ವತ್ಸೇನ ಪಿತ
ರೋಽರ್ಯಮ್ಣಾ ಕವ್ಯಂ ಕ್ಷೀರ ಮಧುಕ್ಷತ । ಆಮಪಾತ್ರೇ ಮಹಾಭಾ
ಗಾ ಶ್ರದ್ಧಯಾ ಶ್ರಾದ್ಧದೇವತಾಃ ॥೧೮॥ ಪ್ರಕಲ್ಪ್ಯ ವತ್ಸಂ ಕಪಿಲಂ ಸಿದ್ಧಾ
ಸ್ಸಂಕಲ್ಪನಾಮಯೀಂ । ಸಿದ್ಧಿಂ ನಭಸಿ ವಿದ್ಯಾಂ ಚ ಯೇ ಚ ವಿದ್ಯಾಧರಾದ
ಯಃ ॥೧೯॥ ಅನ್ಯೇ ಚ ಮಾಯಿನೋ ಮಾಯಾ ಮಂತರ್ಧಾನಾಽದ್ಭುತಾತ್ಮ
ನಾಂ । ಮಯಂ ಪ್ರಕಲ್ಪ್ಯ ವತ್ಸಂ ತೇ ದುದುಹು ಧಾರಣಾಮಯೀಂ॥೨೦॥
ಯಕ್ಷರಕ್ಷಾಂಸಿ ಭೂತಾನಿ ಪಿಶಾಚಾಃ ಪಿಶಿತಾಶನಾಃ । ಭೂತೇಶವತ್ಸಾ ದು
ದುಹುಃ ಕಪಾಲೇ ಕ್ಷತಜಾಸವಂ ॥೨೧॥ § ತಥಾಽಹಯೋ ದಂದಶೂಕಾ

ಗಂಧರ್ವಂ ಸಂಬಂಧಯಾದ, ಸೌಭಗಂ - ಸೌಂದರ್ಯವೆಂಬ, ಪಯಃ - ಹಾಲನ್ನು, ದುದುಹುಃ - ಕರೆದರು ॥ ೧೭ ॥ ಮಹಾಭಾಗಾಃ - ಮಹಾತ್ಮರಾದ, ಶ್ರಾದ್ಧದೇವತಾಃ - ಶ್ರಾದ್ಧಾಭಿಮಾನಿಗಳಾದ, ಪಿತರಃ- ಪಿತೃದೇವತೆಗಳು, ಶ್ರದ್ಧಯಾ - ಆದರಿಂದ, ಅರ್ಯಮ್ಣಾ ವತ್ಸೇನ - ಸೂರ್ಯನೆಂಬ ಕರುವಿನಿಂದ, ಆಮಪಾತ್ರೇ - ಹಸೀಮಣ್ಣಿನ ಮಡಕೆಯಲ್ಲಿ, ಕವ್ಯಂ - ಪಿತೃಗಳ ಅನ್ನರೂಪವಾದ, ಕ್ಷೀರಂ - ಹಾಲನ್ನು, ಅಧುಕ್ಷತ - ಕರೆದರು ॥ ೧೮ ॥ ಕಪಿಲಂ - ಕಪಿಲಮುನಿಯನ್ನು, ವತ್ಸಂ - ಕರುವನ್ನಾಗಿ, ಪ್ರಕಲ್ಪ್ಯ- ಮಾಡಿ, ನಭಸಿ - ಆಕಾಶವೆಂಬ ಪಾತ್ರೆಯಲ್ಲಿ, ಸಿದ್ಧಾಃ - ಸಿದ್ಧರು, ಸಂಕಲ್ಪನಾಮಯೀಂ - ಇಚ್ಛಾಮಯವಾದ, ಸಿದ್ಧಿಂ - ಅಣಿಮಾದಿಸಿದ್ಧಿಗಳನ್ನೂ, ಯೇ - ಯಾವ, ವಿದ್ಯಾಧರಾದಯಃ - ವಿದ್ಯಾಧರರು ಮೊದಲಾದವರುಂಟೋ, ಅವರು, ವಿದ್ಯಾಂಚ - ಗಗನದಲ್ಲಿ ಸಂಚರಿಸುವ ವಿದ್ಯೆಯನ್ನೂ, ಕರೆದರು ॥ ೧೯ ॥ ಅನ್ಯೇ - ಇತರರಾದ, ಮಾಯಿನಃ - ಕಿಂಪುರುಷಾದಿಗಳು, ಮಯಂ - ಮಯನನ್ನು, ವತ್ಸಂ - ಕರುವನ್ನಾಗಿ, ಪ್ರಕಲ್ಪ್ಯ - ಮಾಡಿ, ಅಂತ...ನಾಂ - ಅಂತರ್ಧಾನ, ಅದ್ಭುತರೂಪಗಳುಳ್ಳವರ ಸಂಬಂಧಿಯಾದ, ಧಾರಣಾಮಯೀಂ - ಧಾರಣಾರೂಪವಾದ, ಮಾಯಾಂ-ಮಾಯಾಶಕ್ತಿಯನ್ನು, ದುದುಹುಃ-ಕರೆದರು ॥೨೦॥ ಯಕ್ಷ...ಸಿ - ಯಕ್ಷರಾಕ್ಷಸರು, ಭೂತಾನಿ - ಭೂತಗಳು, ಪಿಶಾಚಾಃ - ಪಿಶಾಚಗಳು, ಪಿಶಿ..ನಾಃ - ರಾಕ್ಷಸರು, ಭೂತೇ...ತ್ಸಾಃ - ರುದ್ರನನ್ನು ಕರುವನ್ನಾಗಿ ಮಾಡಿಕೊಂಡು, ಕಪಾಲೇ ತಲೆಬುರುಡೆಯಲ್ಲಿ,

ಧುವನ್ನು ಕರೆದರು ॥೧೭॥ ಮಹಾತ್ಮರೂ, ಶ್ರಾದ್ಧಕರ್ಮಾಭಿಮಾನಿಗಳೂ, ಆದಪಿತೃದೇವತೆಗಳು ಸೂರ್ಯನನ್ನು ಕರುವಾಗಿಮಾಡಿಕೊಂಡು, ಹಸಿಮಣ್ಣಿನ ಮಡಕೆಯಲ್ಲಿ ಕವ್ಯರೂಪವಾದ ಹಾಲನ್ನು ಕರೆದರು॥ಸಿದ್ಧರೆಂಬದೇವಯೋನಿಗಳು ಕಪಿಲಮುನಿಯನ್ನುಕರುವಾಗಿಮಾಡಿಕೊಂಡು,ಆಕಾಶವೆಂಬಪಾತ್ರೆಯಲ್ಲಿಸಂಕಲ್ಪರೂಪವಾದ ಅಣಿಮಾದಿಸಿದ್ಧಿಗಳನ್ನುಪಡೆದರು. ವಿದ್ಯಾಧರರು ಅದೇ ಕರುವಿನ ಸಹಾಯದಿಂದ ಆಕಾಶಪಾತ್ರೆಯಲ್ಲಿ,ಆಕಾಶಗಮನಾದಿ ಶಕ್ತಿಗಳನ್ನುಗಳಿಸಿಕೊಂಡರು ॥೧೯॥ ಮಾಯಾವಿಗಳಾದ ಇತರ ಕಿಂಪುರುಷಾದಿಗಳು ಮಯಾಸುರನನ್ನು ಕರುವಾಗಿಮಾಡಿಕೊಂಡು, ಅಂತರ್ಧಾನ ಶಕ್ತಿಯನ್ನೂ, ಅದ್ಭುತರೂಪಧಾರಣಾ ಶಕ್ತಿಯನ್ನೂ ಪಡೆದಿರುವ ಮಾಯಾವಿಗಳಲ್ಲಿ ಯಾವ ಯಾವ ಅದ್ಭುತಮಾಯೆಗಳುಂಟೋ,

§ ಭಾ. ಹೆಡೆಯಿಲ್ಲದ ಹಾವುಗಳಿಗೆ ಅಹಿಗಳೆಂತಲೂ, ಕುಟುಕುವ ಚೇಳು ಮಂಡರಗಪ್ಪೆ, ಮೊದಲಾದವುಗಳಿಗೆ ದಂದಶೂಕಗಳೆಂತಲೂ, ಹೆಡೆಯುಳ್ಳ ಹಾವುಗಳಿಗೆ ಸರ್ಪಗಳೆಂತಲೂ, ಕದ್ರೂದೇವಿಯ ಸಂತತಿಯಲ್ಲಿ ಹುಟ್ಟಿದ ಹೆಡೆಯಹಾವುಗಳಿಗೆ ನಾಗಗಳೆಂತಲೂ ಹೆಸರು.

ಸ್ಸರ್ಪಾ ನಾಗಾಶ್ಚ ತಕ್ಷಕಂ। ವಿಧಾಯ ವತ್ಸಂ ದುದುಹು ರ್ಬಿಲಪಾತ್ರೇ ವಿಷಂ ಪಯಃ ॥ ೨೨ ॥ ಪಶವೋ ಯವಸಂ ಕ್ಷೀರಂ ವತ್ಸಂ ಕೃತ್ವಾಚ ಗೋವೃಷಂ । ಅರಣ್ಯಪಾತ್ರೇ ಚಾ ಽ ಧುಕ್ಷ ನ್ಮೃಗೇಂದ್ರೇಣಚ ದಂಷ್ಟ್ರಿಣಃ॥ ಕ್ರವ್ಯಾದಾಃ ಪ್ರಾಣಿನಃ ಕ್ರವ್ಯಂ ದುದುಹು ಸ್ಸ್ವೇ ಕಳೇಬರೇ । ಸುಪರ್ಣವತ್ಸಾ ವಿಹಗಾ ಶ್ಚರಂ ಚಾ ಽ ಚರ ಮೇವಚ ॥೨೪॥ ವಟವತ್ಸಾ ವನಸ್ಪತಯಃ ಪೃಥಗ್ರಸಮಯಂ ಪಯಃ । ಗಿರಯೋ ಹಿಮವದ್ವತ್ಸಾ ನಾನಾಧಾತೂನ್ ಸ್ವಸಾನುಷು ॥೨೫॥ ಸರ್ವೇ ಸ್ವಮುಖ್ಯವತ್ಸೇನ ಸ್ವೇಸ್ವೇ ಪಾತ್ರೇ ಪೃಥ

---

ಕ್ಷೇ... ಪಂ, ಕ್ಷತಜ - ರಕ್ತವೆಂಬ, ಆಸವಂ - ಮದ್ಯವನ್ನು, ದುದುಹುಃ - ಕರೆದರು ॥೨೧॥ ತಥಾ - ಹಾಗೆಯೇ, ಅಹಯಃ - ಹಾವುಗಳು, ದಂದಶೂಕಾಃ - ಚೇಳುಮೊದಲಾದ ಕುಟುಕುವ ಪ್ರಾಣಿಗಳು, ಸರ್ಪಾಃ - ಸರ್ಪಗಳು, ನಾಗಾಃ - ನಾಗಗಳು, ತಕ್ಷಕಂ - ತಕ್ಷಕನನ್ನು, ವತ್ಸಂ ವಿಧಾಯ - ಕರುವನ್ನಾಗಿಮಾಡಿಕೊಂಡು, ಬಿಲಪಾತ್ರೇ - ಬಾಯಿಯೆಂಬ ಪಾತ್ರೆಯಲ್ಲಿ, ವಿಷಂ - ವಿಷವೆಂಬ, ಪಯಃ - ಹಾಲನ್ನು, ದುದುಹುಃ - ಕರೆದುವು, ಪಶವಃ - ಪಶುಗಳು, ಗೋವೃಷಂ - ರುದ್ರನ ವೃಷಭವನ್ನು, ವತ್ಸಂಕೃತ್ವಾ - ಕರುವನ್ನು ಮಾಡಿ, ಅರಣ್ಯಪಾತ್ರೇ - ಕಾಡುಗಳೆಂಬ ಪಾತ್ರೆಯಲ್ಲಿ, ಯವಸಂ - ಹುಲ್ಲೆಂಬ ಕ್ಷೀರಂ - ಹಾಲನ್ನು, ಅಧುಕ್ಷನ್ - ಕರೆದುವು, ಕ್ರವ್ಯಾದಾಃ - ಮಾಂಸಾಹಾರಿಗಳಾದ, ದಂಷ್ಟ್ರಿಣಃ - ಕೋರೆದಾಡೆಯುಳ್ಳ, ಪ್ರಾಣಿನಃ - ಹುಲಿಮೊದಲಾದುವು, ಮೃಗೇಂದ್ರೇಣ - ಸಿಂಹದಿಂದ, ಸ್ವೇಕಳೇಬರೇ - ತಮ್ಮ ಶರೀರದಲ್ಲಿ, ಕ್ರವ್ಯಂ - ಮಾಂಸವನ್ನು ದುದುಹುಃ - ಕರೆದುವು, ವಿಹಗಾಃ - ಪಕ್ಷಿಗಳು, ಸುಪರ್ಣವತ್ಸಾಃ - ಗರುಡನನ್ನು ಕರುವಾಗಿಮಾಡಿ, ಚರಂ - ಚೇತನಗಳಾದ ಹುಳುಗಳನ್ನೂ, ಅಚರಮೇವಚ - ಫಲಾದಿಗಳನ್ನೂ ದುದುಹುಃ - ಕರೆದರು ॥ ವನಸ್ಪತಯಃ - ವೃಕ್ಷಗಳು, ವಟವತ್ಸಾಃ - ಆಲದಮರವನ್ನು ಕರುವನ್ನಾಗಿಮಾಡಿ. ಪೃಥಕ್ - ಬೇರೆಬೇರೆ, ರಸಮಯಂ - ರಸರೂಪವಾದ, ಪಯಃ - ಹಾಲನ್ನು, ದುದುಹುಃ - ಹಿಂಡಿದುವು, ಗಿರಯಃ - ಬೆಟ್ಟಗಳು, ಹಿಮವದ್ವತ್ಸಾಃ - ಹಿಮವಂತನನ್ನು ಕರುವನ್ನಾಗಿಮಾಡಿ, ಸ್ವಸಾನುಷು - ತಮ್ಮ ತಪ್ಪಲುಗಳಲ್ಲಿ ನಾನಾಧಾತೂನ್ - ಹಲವುಬಗೆಯ ಧಾತುಗಳನ್ನು ದುದುಹುಃ - ಹಿಂಡಿದುವು, ॥೨೫॥ ಸರ್ವೇ - ಎಲ್ಲರೂ

---

ಆ ಮಾಯಾಶಕ್ತಿಗಳೆಲ್ಲವನ್ನೂ ಸಂಪಾದಿಸಿದರು॥೨೦॥ ಯಕ್ಷರು, ರಾಕ್ಷಸರು, ಭೂತಗಳು, ಪಿಶಾಚಗಳು, ದೈತ್ಯರು, ಇವರು ಭೂತನಾಥನಾದ ರುದ್ರನನ್ನು ಕರುವಾಗಿ ಮಾಡಿಕೊಂಡು, ತಲೆಬುರುಡೆಯೆಂಬ ಪಾತ್ರೆಯಲ್ಲಿ ರಕ್ತವೆಂಬ ಮದ್ಯವನ್ನು ಕರೆದರು॥೨೧॥ ಅಂತೆಯೇ ಅಹಿಗಳು, ಕುಟುಕುವ ಸ್ವಭಾವವುಳ್ಳ ಚೇಳು ಮೊದಲಾದುವುಗಳೂ, ಸರ್ಪಗಳು ನಾಗಗಳು ಇವು, ತಕ್ಷಕನನ್ನು ಕರುವನ್ನಾಗಿಮಾಡಿಕೊಂಡು ತಮ್ಮ ಬಾಯೆಂಬ ಪಾತ್ರೆಯಲ್ಲಿ ವಿಷವೆಂಬ ಹಾಲನ್ನು ಕರೆದುವು ॥೨೨॥ ಪಶುಗಳು ಶಿವನಿಗೆ ವಾಹನವಾದ ಬಸವನನ್ನು ಕರುವನ್ನಾಗಿಮಾಡಿ ಕಾಡುಗಳೆಂಬ ಪಾತ್ರೆಯಲ್ಲಿ ಹುಲ್ಲೆಂಬ ಹಾಲನ್ನು ಕರೆದುಕೊಂಡುವು. ಕೋರೆದಾಡೆಗಳಿಂದ ಮಾಂಸವನ್ನು ಕಿತ್ತು ತಿನ್ನುವ ಹುಲಿಮೊದಲಾದ ಕ್ರೂರಮೃಗಗಳು ಮೃಗರಾಜನಾದ ಸಿಂಹವನ್ನು ಕರುವನ್ನಾಗಿಮಾಡಿಕೊಂಡು ತಮ್ಮ ಶರೀರವೆಂಬ ಪಾತ್ರೆಯಲ್ಲಿ ಮಾಂಸವೆಂಬ ಹಾಲನ್ನು ಹಿಂಡಿದುವು, ಪಕ್ಷಿಜಾತಿಗಳು ಗರುಡನನ್ನು ಕರುವನ್ನಾಗಿಮಾಡಿ ಚೇತನಗಳಾದ ಹುಳುಗಳನ್ನೂ, ಅಚೇತನಗಳಾದ ಹಣ್ಣು ಮೊದಲಾದುವುಗಳನ್ನೂ, ಹಾಲಿನರೂಪವಾಗಿ ಕರೆದುವು॥ ವೃಕ್ಷಗಳು

ಕ್ಷಯಃ । ಸರ್ವಕಾಮದುಘಾಂ ಪೃಥ್ವೀಂ ದುದುಹುಃ ಪೃಥುಭಾವಿತಾಂ ॥
ಏವಂ ಪೃಥ್ವಾದಯಃ ಪೃಥ್ವೀ ಮನ್ನಾದಾಃ ಸ್ವನ್ನ ಮಾತ್ಮನಃ । ದೋಹ ವ
ತ್ಸಾದಿಭೇದೇನ ಕ್ಷೀರಭೇದಂ ಕುರೂದ್ವಹ! ॥೨೬॥ ತತೋ ಮಹೀಪತಿಃ ಪ್ರೀ
ತ ಸ್ಸರ್ವ ಕಾಮದುಘಾಂ ಪೃಥುಃ । ದುಹಿತೃತ್ವೇ ಚಕಾರೇಮಾಂ ಪ್ರೇ
ಮ್ಣಾ ದುಹಿತೃವತ್ಸಲಃ ॥೨೭॥ ಚೂರ್ಣಯನ್ ಸ್ವಧನುಷ್ಕೋಟ್ಯಾ ಗಿರಿ
ಕೂಟಾನಿ ರಾಜರಾಟ್ । ಭೂಮಂಡಲ ಮಿದಂ ವೈನ್ಯಃ ಪ್ರಾಯ ಶ್ಚಕ್ರೇ
ಸಮಂ ವಿಭುಃ ॥೨೮॥ ಅಥಾಸ್ಮಿನ್ ಭಗವಾನ್ ವೈನ್ಯಃ ಪ್ರಜಾನಾಂ ವೃತ್ತಿದಃ

ಸ್ವಮು...ನ-ತಮ್ಮಲ್ಲಿ ಮುಖ್ಯರಾದವರನ್ನು ಕರುವನ್ನಾಗಿಮಾಡಿ, ಪೃಥಕ್‌ಪೃಥಕ್ - ಬೇರೇ, ಸ್ವೇ ಸ್ವೇಪಾತ್ರೇ - ತಂತಮ್ಮ ಪಾತ್ರೆಯಲ್ಲಿ, ಪೃಥುಭಾವಿತಾಂ - ಪೃಥುವಿಗೆ ವಶಳಾಗಿರುವ, ಸರ್ವ....ಘಾಂ - ಎಲ್ಲಾ ಕೋರಿಕೆಗಳನ್ನೂ, ಕರೆಯುವ, ಪೃಥ್ವೀಂ - ಭೂಮಿಯನ್ನು, ದುದುಹುಃ - ಕರೆದರು ॥ ೨೫ ॥ ಕುರೂದ್ವಹ - ಕುರುಶ್ರೇಷ್ಠನೆ, ಏವಂ - ಇಂತು, ಅನ್ನಾದಾಃ - ಅನ್ನವನ್ನು ಬಯಸುವ, ಪೃಥ್ವಾದಯಃ - ಪೃಥು ಮೊದಲಾದವರು, ದೋಹ ...ನ, ಪಾತ್ರೆ ಕರುಗಳ ಭೇದದಿಂದ, ಆತ್ಮನಃ - ತಮ್ಮ, ಸ್ವನ್ನಂ - ಇಷ್ಟವಾದ ಅನ್ನವೆಂಬ, ಕ್ಷೀರಭೇದಂ - ಬಗೆಬಗೆಯಾದ ಹಾಲನ್ನು, ದುದುಹುಃ-ಕರೆದರು ।
ತತಃ - ಬಳಿಕ, ಮಹೀಪತಿಃ - ಭೂಮಿಗೊಡೆಯನಾದ, ದುಹಿತೃವತ್ಸಲಃ - ಹೆಣ್ಣು ಮಕ್ಕಳಲ್ಲಿ ಪ್ರೀತಿಯುಳ್ಳ, ಪೃಥುಃ - ಪೃಥುವು, ಪ್ರೀತಃ - ಸಂತುಷ್ಟನಾಗಿ, ಪ್ರೇಮ್ಣಾ - ಪ್ರೀತಿಯಿಂದ, ಸರ್ವಕಾಮದುಘಾಂ - ಸಕಲೇಷ್ಟಗಳನ್ನೂ ಕರೆದ, ಇಮಾಂ - ಈಭೂಮಿಯನ್ನು, ದುಹಿತೃತ್ವೇ - ಮಗಳಿನಂತೆ ಚಕಾರ-ಮಾಡಿಕೊಂಡನು ॥೨೭॥ ರಾಜರಾಟ್ - ರಾಜನಾದ ಪೃಥುವು, ಗಿರಿಕೂಟಾನಿ-ಬೆಟ್ಟಗಳ ಸಮೂಹಗಳನ್ನು, ಸ್ವಧ...ಟ್ಯಾ - ತನ್ನ ಬಿಲ್ಲಿನತುದಿಯಿಂದ, ಚೂರ್ಣಯನ್ - ಪುಡಿಗೈದು, ವಿಭುಃ - ಪ್ರಭುವಾದ, ವೈನ್ಯಃ-ಪೃಥುವು, ಇದಂಭೂಮಂಡಲಂ-ಈ ಭೂಮಿಯನ್ನು, ಪ್ರಾಯಃ-ಬಹಳ ಮಟ್ಟಿಗೆ, ಸಮಂ-ಸಮವಾಗಿ, ಚಕ್ರೇ - ಮಾಡಿದನು ॥೨೮॥ ಅಥ - ಬಳಿಕ, ಪ್ರಜಾನಾಂ - ಪ್ರಜೆಗಳಿಗೆ. ವೃತ್ತಿದಃ-ಜೀವ

ಆಲದ ಮರವನ್ನು ಕರುವನ್ನಾಗಿಮಾಡಿ ಬೇರೆಬೇರೆಯಾದಕಟ್ಟಾಮ್ಲಾದಿರಸಗಳನ್ನುಹಿಂಡಿದುವು. ಬೆಟ್ಟಗಳು ಹಿಮವಂತನನ್ನು ಕರುವನ್ನುಮಾಡಿ ತಮ್ಮ ತಪ್ಪಲುಗಳೆಂಬ ಪಾತ್ರೆಯಲ್ಲಿ ಹಲವು ಧಾತುಗಳೆಂಬ ಹಾಲನ್ನು ಹಿಂಡಿದುವು॥ ೨೪॥ ಉಳಿದ ಎಲ್ಲಾ ಪ್ರಾಣಿಗಳು ತಮ್ಮಲ್ಲಿ ಮುಖ್ಯರಾದವರನ್ನು ಕರುವನ್ನಾಗಿಸಿ, ತಂತಮ್ಮ ಪಾತ್ರೆಗಳಲ್ಲಿ ಬೇರೆ ಬೇರೆಯಾಗಿ, ಸರ್ವಕಾಮಗಳನ್ನೂ ಕರೆಯುತ್ತಾ ಪೃಥುರಾಜನಿಗೆ ವಶಳಾಗಿರುವ ಭೂದೇವಿಯಿಂದ ಹಾಲನ್ನು ಕರೆದುಕೊಂಡರು ॥೨೫॥ ಅಯ್ಯಾ ವಿದುರನೆ! ಇಂತು ಆಹಾರವನ್ನು ಬಯಸುತ್ತಿರುವ ಪೃಥುಮೊದಲಾದ ಸಕಲರೂ, ವತ್ಸ, ಪಾತ್ರಾದಿಗಳ ಭೇದದಿಂದ ತಮಗೆ ಇಷ್ಟಗಳಾದ ಆಹಾರವಸ್ತುಗಳೆಲ್ಲವನ್ನೂ ತರತರವಾದ ಹಾಲಿನರೂಪದಿಂದ ಹಿಂಡಿಕೊಂಡರು ॥೨೬॥ ಬಳಿಕ ಪೃಥುಮಹಾರಾಜನು ಅತ್ಯಂತ ಸಂತುಷ್ಟನಾಗಿ, ಈರೀತಿಯಾಗಿ ಸಕಲ ಪ್ರಾಣಿಗಳ ಇಷ್ಟಾರ್ಥಗಳನ್ನೂ ನೆರವೇರಿಸಿದ ಭೂದೇವಿಯನ್ನು ಕಂಡು, ಹೆಣ್ಣು ಮಕ್ಕಳಲ್ಲಿ ಪ್ರೀತಿಯುಳ್ಳವನಾದುದರಿಂದ ಆಕೆಯನ್ನು ತನ್ನ ಮಗಳಂತೆ ತಿಳಿದನು ॥೨೭॥ ತನ್ನ ಬಿಲ್ಲಿನ ತುದಿಯಿಂದ ಸಕಲಪರ್ವತಗಳನ್ನೂ ಪುಡಿಪುಡಿಮಾಡಿ, ಬಹಳ ಮಟ್ಟಿಗೆ ಹಳ್ಳತಿಟ್ಟುಗಳಿಲ್ಲದಂತೆ ಭೂಮಿ

ಪಿತಾ । ನಿವಾಸಾನ್ ಕಲ್ಪಯಾಂಚಕ್ರೇ ತತ್ರ ತತ್ರ ಯಥಾಽರ್ಹತಃ ॥೩೦॥ †ಗ್ರಾಮಾನ್ ಪುರಃ ಪತ್ತನಾನಿ ದುರ್ಗಾಣಿ ವಿವಿಧಾನಿಚ । ಘೋಷಾನ್ ವ್ರಜಾನ್ ಸಶಿಬಿರಾ ನಾಕರಾನ್ ಖೇಟಖರ್ವಟಾನ್ ॥೩೧॥ ಪ್ರಾಕ್ ಪೃಥೋರಿಹ ನೈವೈಷಾ ಪುರಗ್ರಾಮಾದಿಕಲ್ಪನಾ । ಯಥಾಸುಖಂ ವಸಂತಿ ಸ್ಮ ತತ್ರ ತತ್ರಾಽಕುತೋಭಯಾಃ ॥೩೨॥

— ಇತಿ ಅಷ್ಟಾದಶೋಽಧ್ಯಾಯಃ —

ಸವನ್ನಿತ್ತ, ಪಿತಾ - ತಂದೆಯಾದ, ಭಗವಾನ್ - ಮಹಾಮಹಿಮನಾದ, ವೈನ್ಯಃ - ಪೃಥುರಾಜನು, ಅಸ್ಮಿನ್ - ಈ ಭೂಮಂಡಲದಲ್ಲಿ, ಯಥಾರ್ಹತಃ-ಅವರವರಿಗೆ ತಕ್ಕಂತೆ, ನಿವಾಸಾನ್ - ವಾಸಸ್ಥಾನಗಳನ್ನು, ಕಲ್ಪಯಾಂಚಕ್ರೇ - ಕಲ್ಪಿಸಿದನು ॥೩೦॥ ಗ್ರಾಮಗಳು ಪುರಗಳು, ಪಟ್ಟಣಗಳು, ವಿವಿಧಗಳಾದ ದುರ್ಗಗಳು. ಘೋಷಗಳು ವ್ರಜಗಳು, ಶಿಬಿರಗಳು, ಆಕರಗಳು, ಖೇಟಗಳು, ಖರ್ವಟಗಳು ಇವುಗಳನ್ನು ಕಲ್ಪಿಸಿದನು ॥೩೧॥ ಇಹ - ಈಭೂಮಿಯಲ್ಲಿ, ಪೃಥೋಃಪ್ರಾಕ್ - ಪೃಥುವಿಗಿಂತ ಮೊದಲು, ಪುರ...ನಾ - ಪುರ ಗ್ರಾಮಮೊದಲಾದವುಗಳ ಕಲ್ಪನೆಯು, ನೈವ - ಇಲ್ಲೇ ಇಲ್ಲ. ತತ್ರತತ್ರ- ಅಲ್ಲಲ್ಲಿ, ಅಕುತೋಭಯಾಃ ಯಾವ ಭಯವೂ ಇಲ್ಲದೆ, ಯಥಾಸುಖಂ - ಸುಖವಾಗಿ, ವಸಂತಿಸ್ಮ-ವಾಸಮಾಡುತ್ತಿದ್ದರು ॥೩೨॥

— ಅಷ್ಟಾದಶಾಧ್ಯಾಯಂ ಸಮಾಪ್ತಂ —

ಯನ್ನು ಸಮಗೊಳಿಸಿದನು ॥೨೯॥ ತರುವಾಯ ಆ ವೈನ್ಯರಾಜನು ಪ್ರಜೆಗಳಿಗೆ ಜೀವನವನ್ನು ಕಲ್ಪಿಸಿ, ಆಭೂಮಿಯಲ್ಲಿ ಪ್ರಾಣಿಗಳು ವಾಸಮಾಡುವುದಕ್ಕಾಗಿ ಅವರವರ ಯೋಗ್ಯತೆಗೆ ತಕ್ಕಂತೆ ಅಲ್ಲಲ್ಲಿ ಗ್ರಾಮ, ಪುರ, ಪಟ್ಟಣ, ದುರ್ಗ, ಘೋಷ, ವ್ರಜ, ಶಿಬಿರ, ಆಕರ, ಖೇಟ, ಖರ್ವಟಮೊದಲಾದ ಪ್ರದೇಶಗಳನ್ನು ನಿರ್ಮಾಣಮಾಡಿಸಿದನು ॥೩೦-೩೧॥ ಪೃಥುರಾಜನಾಳಿಕೆಗಿಂತ ಮೊದಲು ಈ ಭೂಮಂಡಲದಲ್ಲಿ ಪುರ, ಗ್ರಾಮಮೊದಲಾದವುಗಳು ಇರಲಿಲ್ಲ! ಆಮೇಲೆ ಪ್ರಾಣಿಗಳೆಲ್ಲರೂ ಪೃಥುನಿರ್ಮಿತಗಳಾದ ವಾಸಸ್ಥಾನಗಳಲ್ಲಿ ನೆಲೆಗೊಂಡು ಯಾರಭಯವೂ ಇಲ್ಲದೆ ನೆಮ್ಮದಿಯಾಗಿ ಬಾಳುತ್ತಿದ್ದರು, ಎಂದು ಮೈತ್ರೇಯಮುನಿಯು ವಿದುರನಿಗೆ ಹೇಳಿದನೆಂಬಲ್ಲಿಗೆ ಭಾಗವತಚಕೋರ ಚಂದ್ರಿಕೆಯೊಳ್

— ಹದಿನೆಂಟನೆಯ ಅಧ್ಯಾಯಂಮುಗಿದುದು —

† ದುರ್ಗಗಳು ಜಲದುರ್ಗ, ಗಿರಿದುರ್ಗ, ವೃಕ್ಷದುರ್ಗ, ಮರುದುರ್ಗ, ಉಸುಬಿನ ಬೈಲುಗಳೆಂದು ಹಲವುವಿಧವು. ಶ್ಲೋ॥ ಔದಕಂ ಪಾರ್ವತಂ ವಾರ್ಕ್ಷಂ ವೈರಿಣಂ ಧಾನ್ವನಂ ತಥಾ । (ಬೃಹಸ್ಪತಿ)

ವಿ. ಹಲವುಮಂದಿ ಇರುವ ಊರಿಗೆ ಗ್ರಾಮವೆಂತಲೂ. ನದೀ, ಸಮುದ್ರಗಳ ಸಂಗಮಸ್ಥಾನದಲ್ಲಿದ್ದು ಯವನರು ವಾಸವಾಗಿರುವುದಕ್ಕೆ ಪಟ್ಟಣವೆಂತಲೂ, ವೈಶ್ಯರಿ ನ ಸ್ಥ ಕ್ಕ ...ವೆಂತಲೂ, ಬೇಡರಊರಿಗೆ ಖೇಟವೆಂತಲೂ, ದೊಡ್ಡದೊಡ್ಡ ಸಂತೆಗಳಿಗಾಗಲಿ ಜವಳಿ ಅಂಗಡಿಗಳಿರುವ ಸ್ಥಳಗಳಿಗಾಗಲಿ ಖರ್ವಟವೆಂದೂ ಹೆಸರು.

## ಓಂನಮಃ ಪರಮಾತ್ಮನೇ.

— ಅಥ ಏಕೋನವಿಂಶೋಽಧ್ಯಾಯಃ —

ಮೈತ್ರೇಯಃ ॥ ಅಥಾಽದೀಕ್ಷತ ರಾಜಾತು ಹಯಮೇಧಶತೇನ ಸಃ ।
‡ ಬ್ರಹ್ಮಾವರ್ತೇ ಮನೋಃ ಕ್ಷೇತ್ರೇ ಯತ್ರಪ್ರಾಚೀ ಸರಸ್ವತೀ ॥೧॥ ತದಭಿ
ಪ್ರೇತ್ಯ ಭಗವಾನ್ ಕರ್ಮಾತಿಶಯಮಾತ್ಮನಃ । ಶತಕ್ರತುರ್ನ ಮಮೃಷೇ

---

—ಏಕೋನವಿಂಶಾಧ್ಯಾಯಂ—

ಕಂ॥ ಹರಿಮೇಧ ಹರಿಯ ನಂದದ । ಹರಿಸಿದ ಸುರಪತಿಯ ತರಿಯಲೆಳಸಿದ ಪೃಥುಭೂ ।
ವರನಂ ಸರಸಿಜಭವನಾ । ದರದಿಂ ಸಂತೈಸಿ ತಡೆದ ಚರಿತವ ನೊರೆಗುಂ ॥

ಅಥ-ಬಳಿಕ, ಸರಾಜಾ - ಆ ದೊರೆಯು, ಯತ್ರ - ಎಲ್ಲಿ, ಪ್ರಾಚೀ - ಮೂಡಗಡೆಗೆ ಹರಿಯುವ, ಸರಸ್ವತೀ - ಸರಸ್ವತಿಯುಂಟೋ, ಮನೋಃ - ಮನುವಿನ, ಕ್ಷೇತ್ರೇ - ನೆಲೆಯಾದ, ಬ್ರಹ್ಮಾವರ್ತೇ- ಆ ಬ್ರಹ್ಮಾವರ್ತದಲ್ಲಿ, ಹಯಮೇಧಶತೇನ - ನೂರು ಅಶ್ವಮೇಧಗಳಿಂದ, ಅದೀಕ್ಷತ - ದೀಕ್ಷೆಯನ್ನು ಮಾಡಿದನು ॥ ೧ ॥ ಭಗವಾನ್ - ಭಗವಂತನಾದ, ಶತಕ್ರತುಃ - ಇಂದ್ರನು, ತತ್- ಅವನ ಕಾರ್ಯವನ್ನು, ಆತ್ಮನಃ-ತನ್ನ, ಕರ್ಮಾತಿಶಯಂ - ಕಾರ್ಯವನ್ನು ಮೀಂಚಿದ್ದೆಂದು, ಅಭಿಪ್ರೇತ್ಯ - ತಿಳಿದು, ಪೃಥೋಃ-

---

— ಹತ್ತೊಂಬತ್ತನೆಯ ಅಧ್ಯಾಯ —

— ಪೃಥುವು ಯಜ್ಞಾಶ್ವವನ್ನು ಕದ್ದ ಇಂದ್ರನನ್ನು ಕೊಲ್ಲದೆ ಬಿಡುವುದು —

ಅನಂತರದಲ್ಲಿ ಮೈತ್ರೇಯನು ವಿದುರನಿಗೆ ಹೇಳುತ್ತಾನೆ. ಇಂತು ಪೃಥುರಾಜನು ಗೋರೂಪವನ್ನು ಧರಿಸಿದ ಭೂಮಿಯಿಂದ ಸಕಲೌಷಧಿ ಬೀಜಗಳನ್ನೂ ಹಾಲಿನರೂಪವಾಗಿ ಕರೆದು, ಭೂಮಿಯನ್ನು ಸಮಗೊಳಿಸಿ, ಪ್ರಾಣಿಗಳ ವಾಸಸ್ಥಾನಗಳನ್ನು ಕಲ್ಪಿಸಿದ ಬಳಿಕಶತಾಶ್ವಮೇಧಗಳನ್ನು ಮಾಡಬೇಕೆಂದು ದೀಕ್ಷೆಯನ್ನು ವಹಿಸಿ,ತೊಂಬತ್ತೊಂಬತ್ತು ಕ್ರತುಗಳನ್ನು ನಿರಂತರಾಯವಾಗಿ ನೆರವೇರಿಸಿ,ಪೂರ್ವದಿಕ್ಕಿಗೆ ಪ್ರವಹಿಸುವ ಸರಸ್ವತೀನದಿಯಿಂದ ಲಂಕೃತವಾಗಿ ಮನುಕ್ಷೇತ್ರವೆಂದು ಹೆಸರುಗೊಂಡಿರುವ ಬ್ರಹ್ಮಾವರ್ತದಲ್ಲಿ ನೂರನೆಯ ಅಶ್ವಮೇಧ ಕ್ರತುವಿಗೆದೀಕ್ಷೆಯನ್ನುವಹಿಸಿದನು॥೧॥ ಆಗಶತಕ್ರತು (ನೂರು ಅಶ್ವಮೇಧಗಳನ್ನುಮಾಡಿದವನು) ವೆಂಬ ಬಿರುದನ್ನು ಪಡೆದ ದೇವೇಂದ್ರನು ಆ ಮನುವಿನ ಯಜ್ಞಸಂರಂಭವನ್ನು ಕಂಡು ತನ್ನ ಯಜ್ಞಕ್ಕಿಂತಲೂ ಅತಿಶಯವಾಗುವುದೆಂದು ತಿಳಿದು ಆ ಉತ್ಸವವನ್ನು ಸೈರಿಸದೇ ಹೋದ

---

‡ ಶ್ಲೋ॥ ಸರಸ್ವತೀ ದೃಷದ್ವತ್ಯೋ ರ್ದೇವನದ್ಯೋ ರ್ಯದಂತರಂ । ತಂದೇವನಿರ್ಮಿತಂ ದೇಶಂ ಬ್ರಹ್ಮಾವರ್ತಂ ಪ್ರಚಕ್ಷತೇ ॥ ಸರಸ್ವತೀ ದೃಷದ್ವತೀ ನದಿಗಳ ಮಧ್ಯದಲ್ಲಿ ದೇವತೆಗಳಿಗಾಗಿ ನಿರ್ಮಿತವಾದ ಪ್ರದೇಶಕ್ಕೆ ಬ್ರಹ್ಮಾವರ್ತವೆಂದು ಹೆಸರು.

ಪೃಥೋಸ್ಸ ಯಜ್ಞಮಹೋತ್ಸವಂ ॥೨॥ ಯತ್ರ ಯಜ್ಞಪತಿಸ್ಸಾಕ್ಷಾದ್ಭಗವಾನ್ ಹರಿರೀಶ್ವರಃ । ಅನ್ವಭೂಯತ ಸರ್ವಾತ್ಮಾ ಸರ್ವಲೋಕಗುರುಃ ಪ್ರಭುಃ ॥೩॥ ಅನ್ವಿತೋ ಬ್ರಹ್ಮಶರ್ವಾಭ್ಯಾಂ ಲೋಕಪಾಲೈಸ್ಸಹಾನುಗೈಃ । ಉಪಗೀಯಮಾನೋ ಗಂಧರ್ವೈರ್ಮುನಿಭಿಶ್ಚಾಪ್ಸರೋಗಣೈಃ ॥೪॥ ಸಿದ್ಧವಿದ್ಯಾಧರಾ ದೈತ್ಯಾ ದಾನವಾ ಗುಹ್ಯಕಾದಯಃ । ಸುನಂದನಂದ ಪ್ರಮುಖಾ ಪಾರ್ಷದ ಪ್ರವರಾ ಹರೇಃ ॥೫॥ ಕಪಿಲೋ ನಾರದೋ ದತ್ತೋ ಯೋಗೇಶಸ್ಸನಕಾದಯಃ । ತಮನ್ವೀಯುರ್ಭಾಗವತಾ ಯೇ ಚ ತತ್ಸೇವನೋತ್ಸುಕಾಃ ॥೬॥ ಯತ್ರ ಧರ್ಮದುಘಾ ಭೂಮಿಸ್ಸರ್ವಕಾಮದುಘಾ ಸತೀ । ದೋ

---

ಪೃಥುವಿನ, ಯಜ್ಞಮಹೋತ್ಸವಂ - ಯಜ್ಞಗಳ ಉತ್ಸವವನ್ನು, ನಮಮೃಷೇ - ಸೈರಿಸಲಿಲ್ಲ ॥ ೨ ॥ ಯಜ್ಞಪತಿಃ - ಯಜ್ಞನಾಯಕನಾದ, ಸರ್ವಾತ್ಮಾ - ಸರ್ವಸ್ವರೂಪನಾದ, ಭಗವಾನ್-ಮಹಾತ್ಮನಾದ ಈಶ್ವರಃ - ಲೋಕನಾಥನಾದ, ಸರ್ವಲೋಕಗುರುಃ - ಸಕಲ ಲೋಕಗಳಿಗೂ ಗುರುವಾದ, ಪ್ರಭುಃ ವ್ಯಾಪಕನಾದ, ಹರಿಃ-ವಿಷ್ಣುವು ॥ ೩ ॥ ಬ್ರಹ್ಮಶರ್ವಾಭ್ಯಾಂ - ಬ್ರಹ್ಮ ರುದ್ರರಿಂದಲೂ, ಸಹಾನುಗೈಃ ಪರಿವಾರದಿಂದ ಕೂಡಿದ, ಲೋಕಪಾಲೈಃ - ದಿಕ್ಪಾಲಕರಿಂದಲೂ, ಅನ್ವಿತಃ - ಕೂಡಿ, ಗಂಧರ್ವೈಃ-ಗಂಧರ್ವರಿಂದಲೂ, ಮುನಿಭಿಃ-ಮುನಿಗಳಿಂದಲೂ, ಅಪ್ಸರೋಗಣೈಃ - ಅಪ್ಸರಸ್ತ್ರೀಯರ ಗುಂಪುಗಳಿಂದಲೂ ಉಪಗೀಯಮಾನಃ-ಹೊಗಳಲ್ಪಡುತ್ತಾ, ಯತ್ರ-ಎಲ್ಲಿ, ಸಾಕ್ಷಾತ್-ಕಣ್ಣಾರೆ, ಅನ್ವಭೂಯತ - ಕಾಣಲ್ಪಟ್ಟನೋ ॥ ೪ ॥ ಸಿದ್ಧ...ರಾಃ - ಸಿದ್ಧರು, ವಿದ್ಯಾಧರರು, ದೈತ್ಯರು, ದಾನವರು, ಗುಹ್ಯಕಾದಯಃ-ಗುಹ್ಯಕರು ಮೊದಲಾದವರು, ಸುನಂ...ಖಾಃ-ಸುನಂದ, ನಂದ, ಮೊದಲಾದ, ಹರೇಃ-ಹರಿಯ, ಪಾರ್ಷ...ರಾಃ - ಭಕ್ತಾಗ್ರೇಸರರು, ಕಾಣಲ್ಪಟ್ಟರೋ ॥ ೫ ॥ ಕಪಿಲ, ನಾರದ, ಯೋಗೇಶಃ - ಯೋಗೀಶ್ವರನಾದ ದತ್ತಾತ್ರೇಯ, ಸನಕಾದಿಗಳು, ತತ್ಸೇ...ಕಾಃ ಆ ಭಗವತ್ಸೇವೆಯಲ್ಲಿ ಆಸಕ್ತರಾದ, ಯೇಚಭಾಗವತಾಃ, ಯಾವ ಭಕ್ತರುಂಟೋ ಅವರು, ತಂ-ಆ ವಿಷ್ಣುವನ್ನು, ಅನ್ವೀಯುಃ - ಹಿಂಬಾಲಿಸಿದರು ॥ ೬ ॥ ಹೇಭಾರತ-ಎಲೈ ವಿದುರನೆ ! ಯತ್ರ - ಯಾವ ಬ್ರಹ್ಮಾವರ್ತದಲ್ಲಿ, ಧರ್ಮದುಘಾ- ಘೃತ ಮೊದಲಾದ ಹವಿರ್ದ್ರವ್ಯಗಳನ್ನು ಕರೆಯುವ, ಭೂಮಿಃ - ಭೂಮಿಯು, ಸರ್ವಕಾಮದುಘಾಸತೀ - ಸಕಲೇಷ್ಟಾರ್ಥಗಳನ್ನೂ

---

ನು ॥೨॥ ಆ ಪೃಥುರಾಜನ ಯಜ್ಞದಲ್ಲಿ ಯಜ್ಞನಾಯಕನೂ ಸರ್ವಾತ್ಮಕನೂ ಆದ ವಿಷ್ಣುವು ಬ್ರಹ್ಮ ರುದ್ರರಿಂದೊಡಗೂಡಿ ಸಾಕ್ಷಾತ್ತಾಗಿ ಬಿಜಮಾಡಿದನು. ಇಂದ್ರಾದಿ ದಿಕ್ಪಾಲಕರು ತಂತಮ್ಮ ಪರಿವಾರಗಳಿಂದೊಡಗೂಡಿ ಆವಿಷ್ಣುವನ್ನು ಹೊಗಳುತ್ತಿದ್ದರು. ಗಂಧರ್ವರು ಗಾನಮಾಡಿದರು. ಮುನಿಗಳು ಸ್ತುತಿಸಿದರು. ಅಪ್ಸರ ಸ್ತ್ರೀಯರು ನಾಟ್ಯಮಾಡಿದರು. ಸಿದ್ಧರು, ವಿದ್ಯಾಧರರು, ದೈತ್ಯರು, ದಾನವರು, ಗುಹ್ಯಕರು ಮೊದಲಾದವರೂ, ಶ್ರೀಹರಿಗೆ ಸನ್ನಿಧಿ ಸೇವಕರಾದ ಸುನಂದ, ನಂದಮೊದಲಾದವರೂ ಬಂದು ನೆರೆದರು ॥೩-೫॥ ಅಂತೆಯೇ ಕಪಿಲಮುನಿಯೂ, ನಾರದಮುನಿಯೂ, ಯೋಗಿವರ್ಯನಾದ ದತ್ತಾತ್ರೇಯನೂ, ಸನಕಾದಿಗಳೂ ಇನ್ನೂ ಭಗವತ್ಸೇವತೆಯಲ್ಲಿ ಆಸಕ್ತರಾದ ಇತರ ಭಕ್ತರೂ ಸಹ ಆ ಭಗವಂತನನ್ನು ಹಿಂಬಾಲಿಸಿ ಬಂದರು ॥೬॥ ಎಲೈ ಭರತ ಕುಲದೀಪನೆ ! ಆ ಬ್ರಹ್ಮಾವರ್ತದಲ್ಲಿ ಕಾಮಧೇನುವಿನಂತೆ ಭೂಮಿಯು ಸಕಲೇಷ್ಟವಸ್ತುಗಳನ್ನೂ ಕೊಡುತ್ತಾ, ಯಜಮಾನ

ಗ್ಧಿ ಸ್ಮಾಽಭೀಪ್ಸಿತಾನರ್ಥಾನ್ ಯಜಮಾನಸ್ಯ ಭಾರತ ! ||೭|| ಊಹುಃ ಸರ್ವರಸಾನ್ನದ್ಯಃ ಕ್ಷೀರದಧ್ಯನ್ನಗೋರಸಾನ್ | ತರವೋ ಭೂರಿವರ್ಷ್ಮಾಣಃ ಪ್ರಾಸೂಯಂತ ಮಧುಚ್ಯುತಃ ||೮|| ಸಿಂಧವೋ ರತ್ನನಿಕರಾನ್ ಗಿರಯೋಽನ್ನಂ ‡ ಚತುರ್ವಿಧಂ | ಉಪಾಯನಮುಪಾಜಹ್ರುಸ್ಸರ್ವೇ ಲೋಕಾಸ್ಸಪಾಲಕಾಃ ||೯|| ಇತಿ ಚಾಽಧೋಕ್ಷಜೇಶಸ್ಯ ಪೃಥೋಸ್ತು ಪರಮೋದಯಂ | ಅಸೂಯನ್ ಭಗವಾನಿಂದ್ರಃ ಪ್ರತಿಘಾತಮಚೀಕರತ್ ||೧೦|| ಚರಮೇಣಾಽಶ್ವಮೇಧೇನ ಯಜಮಾನೇ § ಯಜುಷ್ಪತಿಂ | ವೈನ್ಯೇ ಯ

---

ಕೊಡತಕ್ಕುದಾಗಿ. ಯಜಮಾನಸ್ಯ - ಯಜಮಾನನಿಗೆ, ಈಪ್ಸಿತಾನ್ - ಇಷ್ಟಗಳಾದ, ಅರ್ಥಾನ್-ಫಲಗಳನ್ನು, ದೋಗ್ಧಿ ಸ್ಮ-ಕರೆದುದೋ ||೭|| ನದ್ಯಃ-ನದಿಗಳು, ಸರ್ವರಸಾನ್ - ಇಕ್ಷುದ್ರಾಕ್ಷಾದಿ ಸಕಲ ರಸಗಳನ್ನೂ, ಕ್ಷೀರ...ಸಾನ್ - ಹಾಲು, ಮೊಸರು, ಅನ್ನ, ಗೋರಸಗಳನ್ನೂ, ಊಹುಃ - ಪ್ರವಹಿಸಿದುವೋ, ತರವಃ-ಗಿಡಗಳು, ಭೂರಿವರ್ಷ್ಮಾಣಃ-ಬಲಿತು ದಪ್ಪನಾಗಿ, ಮಧುಚ್ಯುತಃ - ಜೇನುಗರೆಯುತ್ತಾ, ಪ್ರಾಸೂಯಂತ-ಫಲಿಸಿದುವೊ ||೮|| ಸಿಂಧವಃ - ಸಮುದ್ರಗಳು, ರತ್ನನಿಕರಾನ್ - ರತ್ನಸಮೂಹಗಳನ್ನೂ, ಗಿರಯಃ-ಬೆಟ್ಟಗಳು, ಚತುರ್ವಿಧಂ-ನಾಲ್ಕುವಿಧವಾದ, ಅನ್ನಂ - ಅನ್ನವನ್ನೂ, ಸಪಾಲಕಾಃ - ಪಾಲಕರಿಂದ ಕೂಡಿದ, ಸರ್ವೇ-ಎಲ್ಲಾ, ಲೋಕಾಃ-ಜನರೂ, ಉಪಾಯನಂ - ಕಾಣಿಕೆಗಳನ್ನು, ಉಪಾಜಹ್ರುಃ-ಒಪ್ಪಿಸಿದರೋ ||೯|| ಇತಿ- ಇಂತು, ಅಧೋ...ಸ್ಯ - ವಿಷ್ಣುಭಕ್ತನಾದ, ಪೃಥೋಃ - ಪೃಥುವಿನ, ಪರಮೋದಯಂ - ಅಧಿಕವಾದ ಉತ್ಸವವನ್ನು, ಅಸೂಯನ್ - ಸೈರಿಸಲಾರದೆ, ಭಗವಾನ್ - ಪೂಜ್ಯನಾದ ಇಂದ್ರನು, ಪ್ರತಿಘಾತಂ-ಅವಿಘ್ನವನ್ನು, ಅಚೀಕರತ್-ಮಾಡಿದನು ||೧೦||

---

ನಾದ ಪೃಥುವಿನ ಕೋರಿಕೆಗಳನ್ನು ಕೈಗೂಡಿಸಿತು ||೭|| ನದಿಗಳು ಹಾಲು, ತುಪ್ಪ, ಮೊಸರು ಇಕ್ಷು, ದ್ರಾಕ್ಷೆ, ಮೊದಲಾದ ಸಕಲ ರಸಗಳಿಂದಲೂ ತುಂಬಿ ಹರಿದುವು ಗಿಡಗಳು ತೋರವಾಗಿ ಬೆಳೆದು ಜೇನುಗರೆಯುತ್ತಾ ಹಣ್ಣುಗಳನ್ನು ಬಿಟ್ಟುವು ||೮|| ಸಮುದ್ರಗಳು ಉತ್ತಮಗಳಾದ ರತ್ನರಾಶಿಗಳನ್ನೂ, ಬೆಟ್ಟಗಳು, ಭಕ್ಷ್ಯ, ಭೋಜ್ಯ, ಲೇಹ್ಯ, ಚೋಷ್ಯಗಳೆಂಬ ತರತರವಾದ ಅನ್ನಗಳನ್ನೂ, ರಾಜಮಂಡಲಿಯಿಂದ ಕೂಡಿದ ಸಕಲ ಜನರೂ ಇತರ ವಸ್ತುಗಳನ್ನೂ ಕಾಣಿಕೆಗಳನ್ನೊಪ್ಪಿಸಿದರು ||೯|| ಇಂತು ಮಹಾಭಾಗವತನಾದ ಪೃಥು ಸಾರ್ವಭೌಮನ ಯಜ್ಞಮಹೋತ್ಸವವು ದಿವ್ಯ ವೈಭವದಿಂದ ನಡೆಯುತ್ತಿರುವುದನ್ನು ಕಂಡು ದೇವ ನಾಥನಾದ ಇಂದ್ರನು ಮಹಾಮಹಿಮನಾದರೂ ಅಸೂಯೆಗೊಂಡು ಆ ಯಜ್ಞಕ್ಕೆ ವಿಘ್ನವನ್ನು ಮಾಡಿದನು ||೧೦||

---

‡ ಭಾ. ಹಲ್ಲುಗಳಿಂದ ಅಗೆದು ತಿನ್ನಬೇಕಾದ ಚಕ್ಕುಲಿ ಮೊದಲಾದವುಗಳಿಗೆ ಭಕ್ಷ್ಯವೆಂತಲೂ, ಹಲ್ಲುಗಳ ಸಹಾಯವಿಲ್ಲದೆಯೂ ತಿನ್ನಬಹುದಾದ ಅನ್ನಮೊದಲಾದವುಗಳಿಗೆ ಭೋಜ್ಯವೆಂತಲೂ, ನಾಲಗೆಯಿಂದ ನೆಕ್ಕತಕ್ಕ ಗೊಜ್ಜು ಮೊದಲಾದವುಗಳಿಗೆ ಲೇಹ್ಯವೆಂತಲೂ, ಕುಡಿಯತಕ್ಕ ಕೀರು, ಪಾನಕ ಮೊದಲಾದವುಗಳಿಗೆ ಚೋಷ್ಯವೆಂತಲೂ ಹೆಸರು. ಇದೇ ಚತುರ್ವಿಧಾನ್ನ.

§ ವಿ. ಭಗವಂತನು ಮೂರುವೇದಗಳಿಗೂ ಪತಿಯಾಗಿದ್ದರೂ, ಪ್ರಕೃತವಾದ ಅಶ್ವಮೇಧಯಾಗ ಹವುವು ಯಜುರ್ವೇದದಲ್ಲಿ ಹೇಳಲ್ಪಟ್ಟಿರುವುದರಿಂದ "ಯಜುಷ್ಪತಿ" ಯೆಂದು ವರ್ಣಿಸಲ್ಪಟ್ಟಿರುವನು,

ಜ್ಞಪಶುಂ ಸ್ಪರ್ಧನ್ನಪೋವಾಹ ತಿರೋಹಿತಃ ॥೧೧॥ ತಮತ್ರಿರ್ಭಗವಾನೈ
ಕ್ಷತ್ತ್ವರಮಾಣಂ ವಿಹಾಯಸಾ। ಆಮುಕ್ತಮಿವ ಪಾಷಂಡಂ ಯೋಽಧ
ರ್ಮೇ ಧರ್ಮವಿಭ್ರಮಃ ॥೧೨॥ ಅತ್ರಿಣಾ ಚೋದಿತೋ ಹಂತುಂ ಪೃಥುಪು
ತ್ರೋ ಮಹಾರಥಃ । ಅನ್ವಧಾವತ ಸನ್ನದ್ಧಸ್ತಿಷ್ಠ ತಿಷ್ಠೇತಿ ಚಾಬ್ರವೀ
ತ್ ॥೧೩॥ ತಂ ತಾದೃಶಾಕೃತಿಂ ವೀಕ್ಷ್ಯ ಮೇನೇ ಧರ್ಮಂ ಶರೀರಿಣಂ ।
ಜಟಿಲಂ ಭಸ್ಮನಾಚ್ಛನ್ನಂ ತಸ್ಮೈ ಬಾಣಂ ನ ಮುಂಚತಿ ॥೧೪॥ ವಧಾನ್ನಿವೃ

---

ವೈನ್ಯಃ - ಪೃಥುರಾಜನು, ಚರಮೇಣ-ಕಡೆಯದಾದ, ಅಶ್ವಮೇಧೇನ-ಅಶ್ವಮೇಧದಿಂದ, ಯಜ್ಞಪತಿಂ - ಯಜ್ಞಸ್ವಾಮಿಯಾದ ಭಗವಂತನನ್ನು, ಯಜಮಾನೇ-ಯಜ್ಞ ಮಾಡುತ್ತಿರಲು, ಸ್ಪರ್ಧನ್-ಅಸೂಯೆಗೊಂಡು, ತಿರೋಹಿತಃ-ಮರೆಯಾಗಿ, ಯಜ್ಞಪಶುಂ-ಯಜ್ಞದ ಕುದುರೆಯನ್ನು, ಅಪೋವಾಹ-ಅಪಹರಿಸಿದನು ॥೧೧॥ ಅಧರ್ಮೇ - ಅಧರ್ಮದಲ್ಲಿ, ಯಃ-ಯಾವುದು, ಧರ್ಮವಿಭ್ರಮಃ - ಧರ್ಮವೆಂಬ ಭ್ರಾಂತಿಯನ್ನುಂಟುಮಾಡುವುದೋ, ಆ, ಪಾಷಂಡಂ - ಪಾಷಂಡವೇಷವನ್ನು, ಆಮುಕ್ತಮಿವ - ಕವಚದಂತೆ ತೊಟ್ಟಿರುವ, ವಿಹಾಯಸಾ - ಆಕಾಶದಲ್ಲಿ, ತ್ವರಮಾಣಂ-ಓಡುತ್ತಿರುವ, ತಂ - ಆ ಇಂದ್ರನನ್ನು, ಭಗವಾನ್ - ಜ್ಞಾನಚಕ್ಷುಸ್ಸುಳ್ಳ, ಅತ್ರಿಃ - ಅತ್ರಿಮುನಿಯು, ಐಕ್ಷತ್ - ಕಂಡನು ॥೧೨॥ ಅತ್ರಿಣಾ - ಅತ್ರಿಯಿಂದ, ಹಂತುಂ - ಕೊಲ್ಲುವುದಕ್ಕೆ, ಚೋದಿತಃ - ಪ್ರೇರಿಸಲ್ಪಟ್ಟ, ಮಹಾರಥಃ - ಮಹಾಶೂರನಾದ, ಪೃಥುಪುತ್ರಃ - ಪೃಥುವಿನ ಮಗನು, ಸನ್ನದ್ಧಃ - ಸಿದ್ಧನಾಗಿ, ಅನ್ವಧಾವತ - ಬೆನ್ನಟ್ಟಿದನು, ತಿಷ್ಠ ತಿಷ್ಠೇತಿ ಚ - ನಿಲ್ಲು ನಿಲ್ಲೆಂದೂ, ಅಬ್ರವೀತ್ - ಹೇಳಿದನು ॥೧೩॥ ತಾದೃಶಾಕೃತಿಂ - ಅಂತಹ ವೇಷವನ್ನು, ವೀಕ್ಷ್ಯ - ಕಂಡು, ಜಟಿಲಂ - ಜಡೆಗಳುಳ್ಳ, ಭಸ್ಮನಾಚ್ಛನ್ನಂ-ಬೂದಿಯನ್ನು ಬೊಳೆದುಕೊಂಡಿರುವ, ತಂ - ಅವನನ್ನು, ಶರೀರಿಣಂ - ಮೂರ್ತಿಭವಿಸಿದ, ಧರ್ಮವನ್ನಾಗಿ, ಮೇನೇ-ತಿಳಿದನು, ತಸ್ಮೈ-ಅವನಿಗೆ, ಬಾಣಂ - ಬಾಣವನ್ನು, ನಮುಂಚತಿ - ಬಿಡಲಿಲ್ಲ ॥ ೧೪ ॥ ಅತ್ರಿಃ - ಅತ್ರಿಯು, ವಧಾತ್ -

---

ವೇನತನೂಜನಾದ ಪೃಥುಮಹಾರಾಜನು, ನೂರನೆಯ ಅಶ್ವಮೇಧವನ್ನು ಮಾಡುತ್ತಿರಲು, ಆವಿಭವವನ್ನು ಕಂಡು ಸೈರಿಸಲಾರದ ಇಂದ್ರನು ಅಸೂಯೆಗೊಂಡು ಯಾರಿಗೂ ತಿಳಿಯದಂತೆ ಗುಟ್ಟಾಗಿ ಯಜ್ಞಾಶ್ವವನ್ನು ಕದ್ದುಕೊಂಡು ಓಡಿದನು ॥೧೧॥ "ನಿಜರೂಪದಿಂದೋಡಿದಲ್ಲಿ ಪೃಥುರಾಜನಲ್ಲಿ ಬೆನ್ನಟ್ಟಿ ತನ್ನನ್ನು ಕೊಲ್ಲುವನೋ" ಎಂದು ಹೆದರಿ ರಾವಣಸನ್ಯಾಸದಂತೆ ಅಧರ್ಮಮಯವಾಗಿದ್ದರೂ ಕಂಡವರಿಗೆಲ್ಲಾ ಧರ್ಮಭ್ರಾಂತಿಯನ್ನುಂಟುಮಾಡುವ ಪಾಷಂಡವೇಷವನ್ನು ಧರಿಸಿ ಆಕಾಶಮಾರ್ಗದಲ್ಲಿ ಓಡುತ್ತಿರುವ ಆ ಇಂದ್ರನನ್ನು ಮಹಾತ್ಮನಾದ ಅತ್ರಿಮುನಿಯು ದಿವ್ಯಜ್ಞಾನದಿಂದ ಕಂಡನು ॥೧೨॥ ತರುವಾಯ ಅವನನ್ನು ಕೊಲ್ಲುವುದಕ್ಕಾಗಿ ಅತ್ರಿಯಿಂದ ಪ್ರೇರಿತನಾದ ಪೃಥುಪುತ್ರನು ಸನ್ನದ್ಧನಾಗಿ "ಎಲಾ ದುರುಳನೆ ! ಕುದುರೆಗಳ್ಳನೆ ! ನಿಲ್ಲು ನಿಲ್ಲು" ಎಂದು ಕೂಗುತ್ತಾ ಬೆನ್ನಟ್ಟಿದನು ॥೧೩॥ ಒಳಗೆ ಹೋಗಿ, ಜಡೆಗಳನ್ನು ಧರಿಸಿ, ಮೈಗೆಲ್ಲಾ ಬೂದಿಯನ್ನು ಬೊಳೆದುಕೊಂಡು ಮೂರ್ತಿಭವಿಸಿದ ಧರ್ಮಪುರುಷನಂತಿರುವ ಅವನ ವೇಷವನ್ನು ಕಂಡು ಪೃಥುಕುಮಾರನು ಭ್ರಾಂತಿಗೊಂಡು ಬಾಣಪ್ರಯೋಗವನ್ನು ಮಾಡದೆ ಸುಮ್ಮನಾದನು ॥೧೪॥ ಅಂತು ಕೊಲ್ಲದೆ ಹಿಂದಿರುಗಿದ ಪೃಥುಪುತ್ರನನ್ನು ಕಂಡು ಅತ್ರಿಮುನಿಯು "ಅಯ್ಯಾ ಪೃಥುಕುಮಾರನೆ! ದೇವಾಧಮನಾದ ಈ

ತ್ತಂ ತಂ ಭೂಯೋ ಹಂತವೇಽತ್ಯಚೋದಯತ್ । ಜಹಿ ಯಜ್ಞಹನಂ ತಾತ ! ಮಹೇಂದ್ರಂ ವಿಬುಧಾಧಮಂ ॥೧೫॥ ಏವಂ ವೈನ್ಯಸುತಃ ಪ್ರೋಕ್ತ ಸ್ತ್ವರಮಾಣಂ ವಿಹಾಯಸಾ। ಅನ್ವದ್ರವ ದಭಿಕ್ರುದ್ಧೋ ವಾರಣಂ* ಮೃಗರಾಡಿವ॥೧೬॥ ಸೋಽಶ್ವಂ ರೂಪಂಚ ತದ್ಧಿತ್ವಾ ತಸ್ಮಾ ಅಂತರ್ಹಿತ ಸ್ಸ್ವರಾಟ್ । ವೀರ ಸ್ಸ್ವಪಶು ಮಾದಾಯ ಪಿತು ರ್ಯಜ್ಞ ಮುಪೇಯಿವಾನ್ ॥೧೭॥ ತತ್ತಸ್ಯಚಾಽದ್ಭುತಂ ಕರ್ಮ ವಿಚಕ್ಷ್ಯ ಪರಮರ್ಷಯಃ । ನಾಮಧೇಯಂ ದದು ಸ್ತಸ್ಮೈ ವಿಜಿತಾಶ್ವ ಇತಿ ಪ್ರಭೋ॥೧೮॥ಉಪಸೃಜ್ಯ ತಮ ಸ್ತೀವ್ರಂ

---

ಕೊಲೆಯಿಂದ, ನಿವೃತ್ತಂ-ಹಿಂದಿರುಗಿದ, ತಂ-ಆ ಪೃಥುಪುತ್ರನನ್ನು ಕುರಿತು, ಭೂಯಃ - ಮರಳಿ, ತಾತ ತಂದೆಯೆ ! ಯಜ್ಞಹನಂ - ಯಜ್ಞವನ್ನು ಕೆಡಿಸುವ, ವಿಬುಧಾಧಮಂ - ದೇವತೆಗಳಲ್ಲಿ ಅಧಮನಾದ, ಮಹೇಂದ್ರಂ - ಇಂದ್ರನನ್ನು, ಜಹಿ - ಕೊಲ್ಲು, ಎಂದು, ಹಂತವೇ - ಕೊಲೆಗಾಗಿ, ಅಚೋದಯತ್ - ಪ್ರೇರಿಸಿದನು ॥೧೫॥ ಏವಂ - ಇಂತು, ಪ್ರೋಕ್ತಃ - ಪ್ರೇರಿತನಾದ, ವೈನ್ಯಸುತಃ - ಪೃಥುಪುತ್ರನು, ಅಭಿಕ್ರುದ್ಧಃ - ಕೋಪಗೊಂಡು, ವಿಹಾಯಸಾ - ಗಗನದಲ್ಲಿ, ತ್ವರಮಾಣಂ - ಓಡಿಹೋಗುತ್ತಿರುವ ಇಂದ್ರನನ್ನು, ವಾರಣಂ - ಆನೆಯನ್ನು, ಮೃಗರಾಡಿವ - ಸಿಂಹದಂತೆ, ಅನ್ವದ್ರವತ್ - ಅಟ್ಟಿಕೊಂಡು ಹೋದನು ॥೧೬ ಸಃಸ್ವರಾಟ್ - ಆ ಇಂದ್ರನು, ಅಶ್ವಂ - ಕುದುರೆಯನ್ನೂ, ತದ್ರೂಪಂಚ - ಆ ರೂಪವನ್ನೂ, ಹಿತ್ವಾ- ಉಳಿದು, ತಸ್ಮೈ - ಅವನಿಗೆ, ಅಂತರ್ಹಿತಃ - ಮರೆಯಾದನು, ವೀರಃ - ಪೃಥುಪುತ್ರನು, ಸ್ವಪಶುಂ - ತನ್ನ ಕುದುರೆಯನ್ನು, ಆದಾಯ - ತೆಗೆದುಕೊಂಡು, ಪಿತುಃ - ತಂದೆಯ, ಯಜ್ಞಂ - ಯಜ್ಞವನ್ನು, ಉಪೇಯಿವಾನ್ - ಹೊಂದಿದನು ॥೧೭॥ ಪರಮರ್ಷಯಃ - ಋಷಿವರ್ಯರು, ತಸ್ಯ - ಅವನ, ಅದ್ಭುತಂ ಆಶ್ಚರ್ಯಕರವಾದ, ತತ್ - ಆ ಕಾರ್ಯವನ್ನು, ವಿಚಕ್ಷ್ಯ - ಕಂಡು, ಪ್ರಭೋ - ಎಲೈವಿದುರನೆ ತಸ್ಮೈ - ಅವನಿಗೆ, ವಿಜಿತಾಶ್ವಇತಿ - ವಿಜಿತಾಶ್ವನೆಂದ , ನಾಮಧೇಯಂ - ಹೆಸರನ್ನು, ದದುಃ - ಕೊಟ್ಟರು ॥೧೮॥ ಪುನಃ - ಮರಳಿ, ಹರಿಃ - ಇಂದ್ರನು, ತೀವ್ರಂ - ಅಧಿಕವಾದ, ತಮಃ - ಕತ್ತಲೆಯನ್ನು

---

ಇಂದ್ರನು ವೇಷಾಂತರದಿಂದ ಇಂತು ಯಜ್ಞವಿಘ್ನವನ್ನು ಮಾಡುತ್ತಿರುವುದರಿಂದ ಇವನನ್ನು ಬೇಗನೆ ಕೊಲ್ಲು" ಎಂದು ಮರಳಿ ಹೇಳಿದನು ॥೧೫॥ ಇಂತು ಅತ್ರಿ ಮುನಿಯು ಹೇಳಿದಕೂಡಲೆ ಪೃಥುನಂದನನು ಅತ್ಯಂತ ಕ್ರುದ್ಧನಾಗಿ ಮುನ್ನು ರಾವಣನನ್ನು ಬೆನ್ನಟ್ಟಿದ ಜಟಾಯುವಿನಂತೆಯೂ, ಆನೆಯನ್ನು ತರುಬುವ ಸಿಂಹದಂತೆಯೂ, ಗಗನಾಂಗಣದಲ್ಲಿ ಪಲಾಯನಗೈಯುತ್ತಿರುವ ಪುರಂದರನನ್ನು ಅಟ್ಟಿಕೊಂಡು ಹೋದನು ॥೧೬॥ ಆಗ ಸ್ವರ್ಗಾಧಿಪತಿಯಾದ ಇಂದ್ರನು, ಕುದುರೆಯನ್ನೂ, ತಾನು ಧರಿಸಿದ್ದ ಪಾಷಂಡರೂಪವನ್ನೂ, ತೊರೆದು ಮಾಯವಾದನು. ಮಹಾಶೂರನಾದ ಪೃಥುಪುತ್ರನು ಆ ಕುದುರೆಯನ್ನು ತೆಗೆದುಕೊಂಡು ತನ್ನ ತಂದೆಯ ಯಜ್ಞಶಾಲೆಗೆ ಹೊರಟುಹೋದನು ॥೧೭॥ ಅಲ್ಲಿದ್ದ ಮಹರ್ಷಿಗಳು ಅದ್ಭುತವಾದ ಆವನ ವಿಜಯವನ್ನು ಕಂಡು ಅವನಿಗೆ ವಿಜಿತಾಶ್ವ (ಕುದುರೆಯನ್ನು ಗೆದ್ದವನು)ನೆಂದು ಹೆಸರಿಟ್ಟರು॥೧೮॥ ಇಂದ್ರನು ಮರಳಿ ಬಹಳವಾದ ಕಗ್ಗತ್ತಲೆಯನ್ನುಂಟುಮಾಡಿ, ಯಜ್ಞದ

---

* ಪಾ. ರಾವಣಂ ಗೃಧ್ರರಾಡಿವ-ಜಟಾಯುವು ರಾವಣನನ್ನೋಪಾದಿಯಲ್ಲಿ.

ಜಹಾರಾಽಶ್ವಂ ಪುನರ್ಹರಿಃ । ಚಷಾಲಯೂಪತಶ್ಛನ್ನೋ ಹಿರಣ್ಯರಶನಂ ವಿಭುಃ ॥೧೯॥ ಅತ್ರಿಸ್ಸಂದರ್ಶಯಾಮಾಸ ತ್ವರಮಾಣಂ ವಿಹಾಯಸಾ । ಕಪಾಲಖಟ್ವಾಂಗಧರಂ ವೀರೋ ನೈನಮಬಾಧತ ॥೨೦॥ ಅತ್ರಿಣಾ ಚೋದಿತಸ್ತಸ್ಮೈ ಸಂದಧೇ ವಿಶಿಖಂ ರುಷಾ । ಸೋಽಶ್ವಂ ರೂಪಂ ಚ ತದ್ಧಿತ್ವಾ ತಸ್ಥಾವಂತರ್ಹಿತಸ್ಸ್ವರಾಟ್ ॥೨೧॥ ವೀರಶ್ಚಾಶ್ವಮುಪಾದಾಯ ಪಿತೃಯಜ್ಞಮಥಾವ್ರಜತ್ । ತದವದ್ಯಂ ಹರೇರೂಪಂ ಜಗೃಹುರ್ಜ್ಞಾನದುರ್ಬಲಾಃ ॥೨೨॥ ಯಾನಿ ರೂಪಾಣಿ ಜಗೃಹೇ ಇಂದ್ರೋ ಹಯಜಿಹೀರ್ಷಯಾ । ತಾನಿ ಪಾಪಸ

ಉಪಸೃಜ್ಯ - ಸೃಷ್ಟಿಸಿ, ಛನ್ನಃ-ಮಾಯವಾಗಿ, ಚಷಾಲ...ತಃ, ಚಷಾಲ - ಕಡಗದಿಂದ ಕೂಡಿದ, ಯೂಪತಃ - ಪಶುಬಂಧನಸ್ತಂಭದಿಂದ, ಹಿರಣ್ಯರಶನಂ - ಚಿನ್ನದ ಸರಪಳಿಯುಳ್ಳ, ಅಶ್ವಂ - ಕುದುರೆಯನ್ನು, ಜಹಾರ - ಕದ್ದನು ॥೧೯॥ ಅತ್ರಿಃ - ಅತ್ರಿಯು, ವಿಹಾಯಸಾ - ಆಕಾಶದಿಂದ, ತ್ವರಮಾಣಂ - ಓಡುತ್ತಿರುವ, ಕಪಾ...ರಂ ಕಪಾಲ - ಖಟ್ವಾಂಗಗಳನ್ನು ಧರಿಸಿದ, ಇಂದ್ರನನ್ನು, ಸಂದರ್ಶಯಾಮಾಸ - ತೋರಿಸಿದನು, ವೀರಃ - ಪೃಥುತನಯನು, ಏನಂ - ಇವನನ್ನು, ನಾಬಾಧತ - ಬಾಧಿಸಲಿಲ್ಲ ॥೨೦॥ ಅತ್ರಿಣಾ- ಅತ್ರಿಯಿಂದ, ಚೋದಿತಃ - ಪ್ರೇರಿಸಲ್ಪಟ್ಟು, ತಸ್ಮೈ - ಇಂದ್ರನಿಗಾಗಿ, ರುಷಾ-ಕೋಪದಿಂದ, ವಿಶಿಖಂ - ಬಾಣವನ್ನು, ಸಂದಧೇ - ಕೊಟ್ಟನು, ಸ್ವರಾಟ್ - ಆ ಇಂದ್ರನು, ಅಶ್ವಂ - ಕುದುರೆಯನ್ನೂ, ತದ್ರೂಪಂಚ - ಆ ರೂಪವನ್ನೂ, ಹಿತ್ವಾ - ಬಿಟ್ಟು, ಅಂತರ್ಹಿತಃ - ಮರೆಯಾಗಿ, ತಸ್ಥೌ - ಇದ್ದನು ॥೨೧॥ ವೀರಶ್ಚ - ಪೃಥುಪುತ್ರನು, ಅಶ್ವಂ - ಕುದುರೆಯನ್ನು, ಉಪಾದಾಯ - ತೆಗೆದುಕೊಂಡು, ಪಿತೃಯಜ್ಞಂ- ತಂದೆಯ ಯಜ್ಞವನ್ನು, ಅಥ - ಬಳಿಕ, ಅವ್ರಜತ್ - ಹೊಂದಿದನು, ಜ್ಞಾನದುರ್ಬಲಾಃ - ಜ್ಞಾನಹೀನರಾದವರು, ಹರೇಃ - ಇಂದ್ರನ, ಅವದ್ಯಂ - ನಿಂದಿತವಾದ, ತದ್ರೂಪಂ - ಆ ರೂಪವನ್ನು, ಜಗೃಹುಃ - ಗ್ರಹಿಸಿದರು ॥೨೨॥ ಇಂದ್ರಃ - ಇಂದ್ರನು, ಹಯಜಿಹೀರ್ಷಯಾ - ಕುದುರೆಯನ್ನು ಕದಿಯಬೇಕೆಂಬಿಚ್ಛೆಯಿಂದ, ಯಾನಿರೂಪಾಣಿ - ಯಾವ ರೂಪಗಳನ್ನು, ಜಗೃಹೇ - ಗ್ರಹಿಸಿದನೋ, ಪಾಪಸ್ಯ -ಪಾಪದ-ತಾನಿ ಷಂಡಾನಿ - ಆ ಸಮೂಹಗಳು, ಇಹ - ಇಲ್ಲಿ, ಪಾಷಂಡ-ಪಾಷಂಡವೆಂಬ, ಲಿಂಗಂ-ಗುರುತಾಗಿ, ಉಚ್ಯತೇ - ಹೇಳಲ್ಪಡುವುದು ॥೨೩॥

ಯೂಪಸ್ತಂಭದಲ್ಲಿ ಚಿನ್ನದ ಸರಪಳಿಯಿಂದ ಕಟ್ಟಿಹಾಕಿದ್ದ ಕುದುರೆಯನ್ನು ಸರಪಳಿಯೊಡನೆ ಬಿಡಿಸಿಕೊಂಡು ಯಾರೂ ಅರಿಯದಂತೋಡಿಹೋದನು ॥೧೯॥ ಆಗ ಅತ್ರಿಮುನಿಯು ಮುನ್ನಿನಂತೆಯೇ ಗಗನದಲ್ಲೋಡುತ್ತಿರುವ ಇಂದ್ರನನ್ನು ಕಂಡು ವಿಜಿತಾಶ್ವನಿಗೆ ತೋರಿಸಲು, ರುಂಡಮಾಲೆಯನ್ನು ಧರಿಸಿ ಕಾಪಾಲಿಕನಂತೆ ತೋರುವ ಅವನನ್ನು ವಿಜಿತಾಶ್ವನು ಕೊಲ್ಲದೆ ಸುಮ್ಮನಾದನು ॥೨೦॥ ಬಳಿಕ ಅತ್ರಿಯು ಅವನ ಮಾಯಾರೂಪವನ್ನು ವಿವರಿಸಲು, ವಿಜಿತಾಶ್ವನು ಕೋಪಗೊಂಡು ಬಾಣಪ್ರಯೋಗವನ್ನು ಮಾಡಲು, ಇಂದ್ರನು ಯಜ್ಞಾಶ್ವವನ್ನೂ, ಆ ಕಾಪಾಲಿಕ ರೂಪವನ್ನೂ ತೊರೆದು ಮಾಯವಾದನು ॥೨೧॥ ಶೂರನಾದ ವಿಜಿತಾಶ್ವನು ಕುದುರೆಯನ್ನು ಬಿಡಿಸಿಕೊಂಡು ತಂದೆಯ ಯಜ್ಞಶಾಲೆಗೆ ಬಂದನು. ಜ್ಞಾನಹೀನರಾದ ಜನರು ಆ ಇಂದ್ರನ ನಿಂದಿತವಾದ ರೂಪವನ್ನು ಹಿಡಿದರು ॥೨೨॥ ಇಂದ್ರನು ಕುದುರೆಯನ್ನು ಅಪಹರಿಸಬೇಕೆಂದು ಯಾವ ಯಾವ ರೂಪಗಳನ್ನು ಧರಿಸಿದನೋ, ಆ ರೂಪಗಳು ಪಾಪದ ಸಮೂಹಕ್ಕೆ

ಸ್ಯ ಷಂಡಾನಿ ಲಿಂಗಂ ಷಂಡ ಮಿಹೋಚ್ಯತೇ ॥೨೩॥ † ಏವ ಮಿಂದ್ರೇ ಹರ
ತ್ಯಶ್ವಂ ವೈನ್ಯಯಜ್ಞ ಜಿಘಾಂಸಯಾ । ತದ್ಗೃಹೀತ ವಿಸೃಷ್ಟೇಷು ಪಾಷಂ
ಡೇಷು ಮತಿ ರ್ನೃಣಾಂ ॥೨೪॥ ಧರ್ಮ ಇತ್ಯುಪಧರ್ಮೇಷು ನಗ್ನರಕ್ತಪಟಾ
ದಿಷು । ಪ್ರಾಯೇಣ ಸಜ್ಜತೇ ಭ್ರಾಂತ್ಯಾ ಪೇಶಲೇಷು ಚ ವಾಗ್ಮಿಷು ॥೨೫॥
ತದಭಿಜ್ಞಾಯ ಭಗವಾನ್ ಪೃಥುಃ ಪೃಥುಪರಾಕ್ರಮಃ । ಇಂದ್ರಾಯ ಕುಪಿತೋ
ಬಾಣ ಮಾದತ್ತೋದ್ಯತಕಾರ್ಮುಕಃ ॥೨೬॥ ತ ಮೃತ್ವಿಜ ಶ್ಶಕ್ರವಧಾಽಭಿ
ಸಂಧಿತಂ ವಿಚಕ್ಷ್ಯ ದುಷ್ಪ್ರೇಕ್ಷ್ಯ ಮಸಹ್ಯರಂಹಸಂ । ನಿವಾರಯಾಮಾ

ಏವಂ - ಇಂತು, ಇಂದ್ರೇ - ಇಂದ್ರನು, ವೈನ್ಯ...ಯಾ - ವೇನನ ಯಜ್ಞವನ್ನು ಕೆಡಿಸಬೇಕೆಂ ದಳಿಸಿ, ಅಶ್ವಂ - ಯಜ್ಞಾಶ್ವವನ್ನು, ಹರತಿ - ಕದಿಯಲು, ತದ್ಗೃ...ಷು - ಅವನು ಧರಿಸಿಬಿಟ್ಟ, ಉಪಧರ್ಮೇಷು - ಧರ್ಮಾಭಾಸಗಳಿಂದ, ಪೇಶಲೇಷು - ಅನುಕೂಲವಾಗಿ ತೋರುವ, ವಾಗ್ಮಿಷು - ಸವಿನುಡಿಗಳುಳ್ಳ, ನಗ್ನ....ಷು - ದಿಗಂಬರತ್ವಾದಿ ಧರ್ಮಗಳುಳ್ಳ, ಪಾಷಂಡೇಷು - ದುಷ್ಟವೇಷಗಳಲ್ಲಿ, ಧರ್ಮಇತಿ- ಧರ್ಮವೆಂದು, ಭ್ರಾಂತ್ಯಾ - ಅನ್ಯಥಾಜ್ಞಾನದಿಂದ, ನೃಣಾಂ - ಮನುಷ್ಯರ, ಮತಿಃ - ಬುದ್ಧಿಯು, ಸಜ್ಜತೇ - ನೆಲಸುವುದು ॥೨೪-೨೫॥ ಭಗವಾನ್ - ಮಹಾತ್ಮನಾದ, ಪೃಥು....ಮಃ - ಅಧಿಕಪರಾಕ್ರಮವುಳ್ಳ, ಪೃಥುಃ - ಪೃಥುರಾಜನು, ತತ್ - ಅದನ್ನು, ಅಭಿಜ್ಞಾಯ - ತಿಳಿದು, ಕುಪಿತಃ - ಕೋಪಗೊಂಡು, ಉದ್ಯ....ಕಃ - ಬಿಲ್ಲನ್ನೆತ್ತಿ, ಇಂದ್ರಾಯ - ಇಂದ್ರನಿಗಾಗಿ, ಬಾಣಂ-ಬಾಣವನ್ನು, ಆದತ್ತ - ತೊಟ್ಟನು ॥೨೬॥ ಶಕ್ರ....ತಂ - ಇಂದ್ರನನ್ನು ಕೊಲ್ಲಬೇಕೆಂದೆಳಸಿದ, ದುಷ್ಪ್ರೇಕ್ಷ್ಯಂ - ನೋಡಲಾಗದ, ಅಸಹ್ಯ ರಂಹಸಂ - ತಡೆಯಲಾಗದ ಬಲವೇಗಗಳುಳ್ಳ, ತಂ - ಆ ಇಂದ್ರನನ್ನು, ವಿಚಕ್ಷ್ಯ - ಕಂಡು, ಋತ್ವಿಜಃ - ಋತ್ವಿಕ್ಕುಗಳಾದವರು, ಮಹಾಮತೇ - ಎಲೈ ಪ್ರಾಜ್ಞನೇ, ಅತ್ರ - ಈ ಯಜ್ಞದಲ್ಲಿ, ಚೋದಿತಾತ್ - ವಿಧ್ಯುಕ್ತವಾದ, ಪಶುವಧೆಗಿಂತಲೂ, ಅನ್ಯವಧಃ - ಇತರವಧೆಯು, ನಯುಜ್ಯತೇ - ಯುಕ್ತವಲ್ಲ

ಗುರುತಾಗಿ, ಪಾಷಂಡ ಅಥವಾ ಪಾಖಾಂಡವೆಂಬ ಹೆಸರಿನಿಂದ ನೆಲೆಗೊಂಡವು ॥೨೩॥ ಇಂತು ಇಂದ್ರನು ಪೃಥುರಾಜನ ಯಜ್ಞವನ್ನು ಕೆಡಿಸಬೇಕೆಂದು ಹಲವು ವೇಷಗಳನ್ನು ಧರಿಸಿಬಿಡಲು, ಬೆತ್ತಲೆಯಾಗಿರುವುದು, ಕಾವಿಬಾವಡೆಗಳನ್ನುಡುವುದೇ ಮೊದಲಾದ ನಡವಳಿಗಳು, ಧರ್ಮವೆಂದು ತೋರ್ಪಡಿಸಿಕೊಳ್ಳುತ್ತಾ, ಜನರಿಗೆ ಅನುಕೂಲವಾಗಿ ಕಾಣಲು, ಸವಿಯಾಗಿರುವಂತೆ ತೋರುವ ಆ ಪಾಷಂಡವೇಷಗಳಲ್ಲಿಯೇ ಧರ್ಮ ಭ್ರಾಂತಿಯಿಂದ ಜನರಮನಸ್ಸು ನೆಲೆಗೊಳ್ಳುತ್ತಾ ಬಂದುದು ॥೨೪-೨೫॥ ಮಹಾ ಪರಾಕ್ರಮಶಾಲಿಯೂ, ನಿರತಿಶಯಮಹಿಮನೂ ಆದ ಪೃಥುರಾಜನು ಜನರು ಪಾಷಂಡರಾಗುತ್ತಾ ಬಂದುದನ್ನು ಕಂಡು ಬಹಳವಾಗಿ ಕೋಪಗೊಂಡು ಬಿಲ್ಲನ್ನೆತ್ತಿ ಇಂದ್ರನನ್ನು ಹೊಡೆಯುವುದಕ್ಕಾಗಿ ಬಾಣವನ್ನು ತೊಟ್ಟನು ॥೨೬॥ ಆಗ ಇಂದ್ರನನ್ನು ಕೊಲ್ಲಬೇಕೆಂದೆಳಸಿ, ಅತಿಕ್ರುದ್ಧನಾಗಿ ತಡೆಯಲಾರದ ಪರಾಕ್ರಮದಿಂದ ಮೆರೆಯುತ್ತಿರುವ ಪೃಥುರಾಜನನ್ನು ಕಂಡು, ಋತ್ವಿಜರು ಅಯ್ಯಾ ಪ್ರಾಜ್ಞಶಿರೋಮಣಿಯೆ! ದುಡುಕಬೇಡ. ಈ ಯಜ್ಞಸಮಯದಲ್ಲಿ ವಿಧಿವಿಹಿತವಾದ ಪಶುವಧೆಯನ್ನಲ್ಲದೆ ಮತ್ತಾರನ್ನೂ

† ದೀ. ಇಂದ್ರನು ವೇಷಧಾರಣೆಯನ್ನು ಮಾಡಿ ಬಿಟ್ಟನೊಡನೆ ಜೈನ, ಬೌದ್ಧ ಕಾಪಾಲಿಕಾದಿ ಮತಗಳುಂಟಾದುವು.

ಸು ರಹೋ ! ಮಹಾಮತೇ ! ನಯುಜ್ಯತೇಽತ್ರಾನ್ಯವಧಃ ಪ್ರಚೋದಿತಾ
ತ್‌॥೨೭॥ ವಯಂ ಮರುತ್ವಂತಮಿಹಾರ್ಥನಾಶನಂ ಹ್ವಯಾಮಹೇ ತ್ವಚ್ಛ್ರ
ವಸಾ ಹತತ್ವಿಷಂ। ಅಯಾತಯಾಮೋಪಹವೈರನಂತರಂ ಪ್ರಸಹ್ಯ ರಾಜನ್ !
ಜುಹುವಾಮ ತೇಽಹಿತಂ ॥೨೮॥ ಇತ್ಯಾಮಂತ್ರ್ಯ ಕ್ರತುಪತಿಂ ವಿದುರಾಸ್
ಯೃತ್ವಿಜೋ ರುಷಾ । ಸ್ರುಗ್ಘಸ್ತಾನ್ ಜುಹ್ವತೋಽಭ್ಯೇತ್ಯ ಸ್ವಯಂ
ಭೂಃ ಪ್ರತ್ಯಷೇಧತ ॥೨೯॥ ನವಧ್ಯೋ ಭವತಾಮಿಂದ್ರೋ ಯದ್ಯಜ್ಞೋ
ಭಗವತ್ತನುಃ। ಯಂ ಜಿಘಾಂಸಥ ಯಜ್ಞೇನ ಯಸ್ಯೇಷ್ಟಾಸ್ತನವಸ್ಸುರಾಃ॥

ಎಂದು, ನಿಷಿಧ್ಯಮಾನಾಃ - ತಡೆದರು ॥೨೭॥ ಹೇ ರಾಜನ್ - ಎಲೈ ರಾಜನೆ ! ಇಹಾ...ನಂ - ಈ ಯಜ್ಞವನ್ನು ಕೆಡಿಸಲೋಸುಗ ಬಂದ, ತ್ವಚ್ಛ್ರವಸಾ - ನಿನ್ನ ಕೀರ್ತಿಯಿಂದ, ಹತತ್ವಿಷಂ - ಕಳೆಗುಂದಿರುವ, ಮರುತ್ವಂತಂ - ಇಂದ್ರನನ್ನು, ವಯಂ - ನಾವು, ಅಯಾ....ವೈಃ, ಅಯಾತಯಾಮ - ಬಲಗುಂದದಿರುವ, ಉಪಹವೈಃ - ಆಹ್ವಾನಮಂತ್ರಗಳಿಂದ, ಹ್ವಯಾಮಹೇ - ಕರೆಯುವೆವು, ಅನಂತರಂ - ಬಳಿಕ, ಪ್ರಸಹ್ಯ- ಬಲಾತ್ಕಾರವಾಗಿ, ತೇ - ನಿನ್ನ, ಅಹಿತಂ - ಶತ್ರುವನ್ನು, ಜುಹವಾಮ - ಹೋಮಮಾಡುವೆವು ॥೨೮॥ ವಿದುರ - ಎಲೈ ವಿದುರನೆ, ಇತಿ-ಇಂತು, ಕ್ರತುಪತಿಂ - ಯಜಮಾನನಾದ ಪೃಥುವನ್ನು, ಆಮಂತ್ರ್ಯ- ಕರೆದುಹೇಳಿ, ಸ್ರುಗ್ಘಸ್ತಾನ್ - ಸ್ರುಕ್ಕನ್ನು ಕೈಯಲ್ಲಿ ಹಿಡಿದು, ಜುಹ್ವತಃ -ಹೋಮಮಾಡುವ, ಋತ್ವಿಜಃ- ಋತ್ವಿಜರನ್ನು, ಸ್ವಯಂಭೂಃ - ಬ್ರಹ್ಮನು, ಅಭ್ಯೇತ್ಯ - ಬಂದು, ಪ್ರತ್ಯಷೇಧತ - ತಡೆದನು ॥೨೯॥ ಯಜ್ಞೇನ - ಯಜ್ಞದಿಂದ, ಯಂ - ಯಾವನನ್ನು, ಜಿಘಾಂಸಥ-ಕೊಲ್ಲಲೆಳಸುವಿರೋ, ಇಷ್ಟಾಃ - ಯಜ್ಞದಿಂದ ಪೂಜಿಸಲ್ಪಟ್ಟ, ಸುರಾಃ - ದೇವತೆಗಳು, ಯಸ್ಯ - ಯಾವನಿಗೆ, ಇಷ್ಟಾಃ-ಪ್ರಿಯಗಳಾದ, ತನವಃ-, ಶರೀರಗಳೋ, ಯಜ್ಞಃ- ಯಜ್ಞನಾಯಕನಾದ ಇಂದ್ರನು, ಭಗವತ್ತನುಃ - ಭಗವಂತನ ಅವತಾರವೋ ಇಂದ್ರಃ-ಆ ಇಂದ್ರನು, ಭವತಾಂ - ನಿಮಗೆ, ನವಧ್ಯಃ - ವಧ್ಯನಲ್ಲ ॥ ೩೦ ॥ ದ್ವಿಜಾಃ - ಎಲೈ ಬ್ರಾಹ್ಮಣರಿರಾ ! ರಾಜ್ಞಃ - ಪೃಥುವಿನ, ಏತತ್ಕರ್ಮ - ಧರ್ಮಮಾರ್ಗವನ್ನು, ವಿಜಿಘಾಂಸತಾ - ನಾಶಗೊಳಿಸುವ, ಇಂದ್ರೇಣ - ಇಂದ್ರನಿಂದ; ಅನುಷ್ಠಿತಂ - ಆಚರಿಸಲ್ಪಟ್ಟ, ಧರ್ಮವ್ಯತಿಕರಂ- ಅಧರ್ಮವು ಯು

ಕೊಲ್ಲಬಾರದು ॥೨೭॥ ಈ ಯಜ್ಞವನ್ನು ಕೆಡಿಸಬೇಕೆಂದು ಬಂದು ನಿನ್ನ ಪರಾಕ್ರಮದಿಂದ ಕಳೆಗುಂದಿರುವ ಆ ಇಂದ್ರನನ್ನು, ವೀರ್ಯವತ್ತರಗಳಾದ ಆಹ್ವಾನಮಂತ್ರಗಳಿಂದ ನಾವುಕರೆದು ಬಳಿಕ ಚರುಪುರೋಡಾಶಗಳಂತೆಯೇ ನಿನ್ನ ಹಗೆಯಾದ ಅವನನ್ನೂ ಅಗ್ನಿಯಲ್ಲಿ ಹೋಮ ಮಾಡುವೆವು ಎಂದು ಹೇಳಿದರು. ॥೨೮॥ ಅಯ್ಯಾ ವಿದುರನೆ ! ಇಂತು ಯಜಮಾನನಾದ ಪೃಥುರಾಜನಿಗೆ ಬಿನ್ನವಿಸಿ, ಆತನ ಋತ್ವಿಜರುಕೋಪದಿಂದ, ಸ್ರುಕ್ಕನ್ನು ಕೈಯಲ್ಲಿ ಹಿಡಿದು ಹೋಮಮಾಡತೊಡಗಲು, ಬ್ರಹ್ಮದೇವನು ಬಂದು, ಹೋಮವನ್ನು ನಿಲ್ಲಿಸಿ, ಎಲೈ ಋತ್ವಿಜರಿರಾ! ನೀವು ಇಂದ್ರನನ್ನು ಕೊಲ್ಲುವುದುಚಿತವಲ್ಲ. ಯಾವ ಇಂದ್ರನನ್ನು ಕೊಲ್ಲಲೆಳಸುವಿರೊ, ನಿಮ್ಮ ಯಜ್ಞದಿಂದ ಪೂಜಿತರಾದದೇವತೆಗಳೇ ಆತನಿಗೆ ಪ್ರಿಯಗಳಾದ ಶರೀರಗಳೆನಿಸುವರು. ಅಲ್ಲದೆ ಆಕೂತಿದೇವಿಯಲ್ಲಿ ಯಜ್ಞನೆಂಬ ಹೆಸರಿನಿಂದ ಜನಿಸಿದವಿಷ್ಣುವೇ ಇಂದ್ರನೆನಿಸುವನು ॥೨೯-೩೦॥ ಮಹಾತ್ಮನಾದ ಪೃಥುರಾಜನ ಧರ್ಮಮಾರ್ಗವನ್ನು ಕೆಡಿಸಲೆಳಸಿ, ಇಂದ್ರನು ಅಧರ್ಮಮಯವಾದ ಪಾಷಂಡಮಾರ್ಗವನ್ನು ಕಲ್ಪಿಸಿದುದನ್ನು ಕಂಡಿರಾ ! ಆದುದರಿಂ

ತದಿದಂ ಪಶ್ಯತ ಮಹ ದ್ಧರ್ಮವ್ಯತಿಕರಂ ದ್ವಿಜಾಃ ! । ಇಂದ್ರೇಣಾ ಽ ನು
ಷ್ಠಿತಂ ರಾಜ್ಞಃ ಕರ್ಮೈತ ದ್ವಿಜಿಘಾಂಸತಾ ॥೩೧॥ ಪೃಥುಕೀರ್ತೇಃ ಪೃಥೋ
ರ್ಭೂಯಾ ತ್ತರ್ಹ್ಯೇಕೋನ ಶತಕ್ರತುಃ । ಅಲಂ ತೇ ಕ್ರತುಭಿ ಸ್ಸ್ವಿಷ್ಟೈ
ರ್ಯದ್ಭವಾನ್ ಮೋಕ್ಷಧರ್ಮವಿತ್ ॥೩೨॥ ನೈವಾತ್ಮನಾ ಮಹೇಂದ್ರಾಯ
ರೋಷ ಮಾಹರ್ತು ಮರ್ಹಸಿ । ಉಭಾವಪಿ ಹಿ ಭದ್ರಂತೇ ಉತ್ತಮಶ್ಲೋಕ
ವಿಗ್ರಹೌ ॥೩೩॥ ಮಾ ಽ ಸ್ಮಿನ್ ಮಹಾಭಾಗ ! ಕೃಥಾಸ್ಸ್ಮ ಚಿಂತಾಂ ನಿಶಾಮ
ಯಾ ಽ ಸ್ಮದ್ವಚ ಆದೃತಾತ್ಮಾ । ಯದ್ಧ್ಯಾಯತೋ ದೈವಹತಂತು ಕರ್ತುಂ
ಮನೋ ಽ ತಿರುಷ್ಟಂ ವಿಶತೇ ತಮೋಂಧಂ ॥ ೩೪ ॥ ಕ್ರತು ರ್ವಿರಮತಾ

ಮಾದ, ಮಹತ್ - ಅಧಿಕವಾದ, ತದಿದಂ - ಆ ಈ ಅನ್ಯಾಯವನ್ನು, ಪಶ್ಯತ - ನೋಡಿರಿ ॥ ೩೧ ॥ ತರ್ಹಿ - ಆದರೆ, ಪೃಥುಕೀರ್ತೇಃ - ವಿಶಾಲಕೀರ್ತಿಯುಳ್ಳ, ಪೃಥೋಃ - ಪೃಥುವಿಗೆ, ಏಕೋ....ತುಃ-ತೊಂಬತ್ತೊಂಬತ್ತು ಕ್ರತುಗಳು, ಭೂಯಾತ್ - ಆಗಲಿ, ಯತ್-ಯಾವಕಾರಣದಿಂದ, ಭವಾನ್-ನೀನು, ಮೋಕ್ಷಧರ್ಮವಿತ್ - ಮೋಕ್ಷಧರ್ಮಗಳನ್ನು ಬಲ್ಲವನೋ, ಆದುದರಿಂದ, ತೇ - ನಿನಗೆ; ಸ್ವಿಷ್ಟೈಃ - ಚೆನ್ನಾಗಿ ನಡೆಯಿಸಲ್ಪಟ್ಟ, ಕ್ರತುಭಿಃ - ಇಷ್ಟಯಜ್ಞಗಳಿಂದಲೇ, ಅಲಂ - ಸಾಕು ॥೩೨॥ ಹಿ-ಯಾವಕಾರಣದಿಂದ, ಉಭಾವಪಿ - ನೀವಿರ್ವರೂ, ಉತ್ತ....ಹೌ-ಭಗವಂತನಿಗೆ ಶರೀರಭೂತರೋ, ಅದರಿಂದ, ಆತ್ಮನಾ - ಮನಸ್ಸಿನಿಂದ, ಮಹೇಂದ್ರಾಯ - ಇಂದ್ರನಿಗಾಗಿ, ರೋಷಂ - ಕೋಪವನ್ನು, ಆಹರ್ತುಂ - ಮಾಡುವುದಕ್ಕೆ, ನಾರ್ಹಸಿ - ಅರ್ಹನಾಗುವುದಿಲ್ಲ, ತೇ - ನಿನಗೆ, ಭದ್ರಂ - ಮಂಗಳವಾಗಲಿ ॥೩೩॥ ಮಹಾಭಾಗ-ಮಹಾತ್ಮನೆ ! ಅಸ್ಮಿನ್ - ಈ ವಿಷಯದಲ್ಲಿ, ಚಿಂತಾಂ - ವ್ಯಸನವನ್ನು, ಮಾಕೃಥಾಃ - ಮಾಡಬೇಡ, ಆದೃತಾತ್ಮಾ - ಆದರವುಳ್ಳವನಾಗಿ, ಅಸ್ಮದ್ವಚಃ - ನಮ್ಮ ನುಡಿಯನ್ನು, ನಿಶಾಮಯ - ಲಾಲಿಸು, ಯತ್ - ಯಾಕೆಂದರೆ, ದೈವಹತಂ - ದೈವದಿಂದ ಕೆಡಿಸಲ್ಪಟ್ಟ ಕಾರ್ಯವನ್ನು, ಕರ್ತುಂ - ಮಾಡುವುದಕ್ಕೆ, ಧ್ಯಾಯತಃ - ಯೋಚಿಸುವವನ, ಮನಃ - ಮನಸ್ಸು, ಅತಿರುಷ್ಟಂ - ಬಹಳ ರೋಷಗೊಂಡು, ಅಂಧಂತಮಃ-ಕಗ್ಗತ್ತಲೆಯನ್ನು, ವಿಶತೇ - ಹೋಗುವುದು ॥೩೪॥

ದ ಬಲಿಷ್ಠನಾದವನೊಡನೆ ಮೈತ್ರಿಯೇ ಲೇಸಲ್ಲದೆ ವೈರವು ತರವಲ್ಲ. ವೈರವನ್ನು ಬೆರಯಿಸಿದಲ್ಲಿ ಪಾಷಂಡಮತಗಳನ್ನೂ ಹೇರಳವಾಗಿ ನೆಗಳುವುವು ॥೩೧॥ ಆದಕಾರಣ ವಿಶಾಲಕೀರ್ತಿಯಾದ ಪೃಥುರಾಜನು ತೊಂಬತ್ತೊಂಬತ್ತು ಯಾಗಗಳನ್ನು ಮಾಡಿದವನಾದರೂ ಶತಕ್ರತುವಾದಇಂದ್ರನಿಗಿಂತಲೂ ಅಧಿಕ ಕೀರ್ತಿಯನ್ನು ಪಡೆಯಲಿ, ಎಂದು ರುತ್ವಿಜರನ್ನು ಸಂತೈಸಿ, ಪೃಥುರಾಜನನ್ನು ಕುರಿತು, "ಅಯ್ಯಾ ಸಾರ್ವಭೌಮನೆ ! ಮೋಕ್ಷಧರ್ಮಗಳ ಸ್ವರೂಪವನ್ನು ಬಲ್ಲ ಮುಮುಕ್ಷುವಾದ ನಿನಗೆ, ನಿಷ್ಕಾಮಕರ್ಮಾನುಷ್ಠಾನವೇ ಯುಕ್ತವಾದುದರಿಂದ, ಇಲ್ಲಿಯವರೆಗೂ ನೀನು ಶ್ರದ್ಧೆಯಿಂದಾಚರಿಸಿರುವ ಯಜ್ಞಗಳೇ ನಿನಗೆ ಸಾಕು ॥೩೨॥ ನೀನೂ ಮಹಾತ್ಮನಾದ ಇಂದ್ರನೂ ಈರ್ವರೂ ಭಗವಂತನ ಅವತಾರಗಳೇ ಆದುದರಿಂದ ಇಂದ್ರನಮೇಲೆ ಕೋಪಿಸಬೇಡ॥೩೩॥ ಎಲೈ ಮಹಾರಾಜನೆ ! ಈಯಜ್ಞಕ್ಕೆ ವಿಘ್ನವಾದ ವಿಷಯದಲ್ಲಿ ಚಿಂತಿಸಬೇಡ. ಆದರದಿಂದ ನನ್ನ ನುಡಿಯನ್ನಾಲಿಸು. ದೈವದಿಂದ ಕೆಟ್ಟುಹೋದ ಕೆಲಸವನ್ನು ಸರಿಪಡಿಸಬೇಕೆಂದು ಚಿಂತಿಸುವವನ ಮನಸ್ಸು ಒಳಲಿ ಬಳಲಿ ಕ

ಮೇಷ ದೇವೇಷು ದುರವಗ್ರಹಃ । ಧರ್ಮವ್ಯತಿಕರೋ ಯತ್ರ ಪಾಷಂ
ಡೈ ರಿಂದ್ರನಿರ್ಮಿತೈಃ ॥ ೩೫ ॥ ಏಭಿ ರಿಂದ್ರೋಪಸಂಸೃಷ್ಟೈಃ ಪಾಷಂಡೈ
ರ್ಹಾರಿಭಿ ರ್ಜನಂ। ಹ್ರಿಯಮಾಣಂ ವಿಚಕ್ಷ್ವೈನಂ ಯಸ್ತೇ ಯಜ್ಞಧ್ರು ಗ
ಶ್ವಮುಟ್ ॥೩೬॥ ಭವಾನ್ ಪರಿತ್ರಾತು ಮಿಹಾವತೀರ್ಣೋ § ಧರ್ಮಂ ಜ
ನಾನಾಂ ಸಮಯಾನುರೂಪಂ । ವೇನಾಪಚಾರಾ ದವಲುಪ್ತ ಮದ್ಯ ತದ್ದೇ
ಹತೋ ವಿಷ್ಣುಕಲಾಸಿ ವೈನ್ಯ! ॥೩೭॥ ಸತ್ವಂ ವಿಮೃಶ್ಯಾಸ್ಯ ಭವಂ ಪ್ರ

ಯಃ - ಯಾವ ಕ್ರತುವಿನಿಂದ, ದೇವೇಷು - ದೇವತೆಗಳಲ್ಲಿ, ದುರವಗ್ರಹಃ - ದುರಾಗ್ರಹವು, ಇಂದ್ರನಿರ್ಮಿತೈಃ - ಇಂದ್ರನಿಂದ ಕಲ್ಪಿತಗಳಾದ, ಪಾಷಂಡೈಃ - ಪಾಷಂಡಮತಗಳಿಂದ, ಧರ್ಮವ್ಯತಿಕರಃ- ಧರ್ಮಭ್ರಂಶವು ಆಗುವುದೋ, ಸಃಕ್ರತುಃ - ಈ ಯಜ್ಞವು, ವಿರಮತಾಂ - ನಿಲ್ಲಲಿ ॥೩೫॥ ತೇ - ನಿನ್ನ, ಯಜ್ಞಧ್ರುಕ್ - ಯಜ್ಞಕ್ಕೆ ದ್ರೋಹಮಾಡಿದವನು, ಅಶ್ವಮುಟ್-ಕುದುರೆಯನ್ನು ಕದ್ದವನು, ಯಃ - ಯಾವನೋ, ಇಂದ್ರೋ....ಷ್ಟೈಃ - ಇಂದ್ರನಿಂದ ಕಲ್ಪಿತಗಳಾದ, ಹರಿಭಿಃ - ಮನೋಹರಗಳಾದ, ಏಭಿಃ ಪಾಷಂಡೈಃ - ಈ ಪಾಷಂಡಮತಗಳಿಂದ, ಹ್ರಿಯಮಾಣಂ - ವಶಗೊಳಿಸಲ್ಪಡುತ್ತಿರುವ, ಏನಂ ಜನಂ - ಈ ಜನವನ್ನು, ವಿಚಕ್ಷ್ವ - ನೋಡು ॥೩೬॥ ವೈನ್ಯ - ವೇನಪುತ್ರನೆ! ವೇನಾಪಚಾರಾತ್ - ವೇನನ ಅನ್ಯಾಯದಿಂದ, ಅವಲುಪ್ತಂ - ನಷ್ಟವಾದ, ಜನಾನಾಂ - ಜನರ, ಧರ್ಮಂ - ಧರ್ಮವನ್ನು, ಸಮಯಾನುರೂಪಂ - ಸಿದ್ಧಾಂತಾನುಸಾರವಾಗಿ, ಪರಿತ್ರಾತುಂ - ಸಲಹುವುದಕ್ಕಾಗಿ, ಭವಾನ್ - ನೀನು, ಅದ್ಯ - ಈಗ, ತದ್ದೇಹತಃ - ಆ ವೇನನ ಶರೀರದಿಂದ, ಅವತೀರ್ಣಃ - ಅವತರಿಸಿದೆ; ವಿಷ್ಣುಕಲಾಸಿ - ವಿಷ್ಣುವಿನ ಅಂಶವಾಗಿರುವೆ ॥೩೭॥ ಪ್ರಜಾಪತೇ - ಪ್ರಜಾಪಾಲಕನೇ ! ಸತ್ವಂ - ಅಂತಹ ನೀನು, ಅಸ್ಯ-

ಡುಮುನಿಸಿಗೀಡಾಗಿ ಕಗ್ಗತ್ತಲೆಗೆಬಿದ್ದು ಕೆಡುವುದೇ ಹೊರತು ಕೆಲಸವು ಕೈಗೂಡುವುದಿಲ್ಲ ॥ ಈ ಯಜ್ಞವನ್ನು ನೀನು ಬಲಾತ್ಕಾರದಿಂದ ನಡೆಯಿಸಿದಲ್ಲಿ ನಿನ್ನ ಮೇಲೆ ದೇವತೆಗಳಿಗೆ ದುರಾಗ್ರಹವುಂಟಾಗುವುದಲ್ಲದೆ, ಇಂದ್ರನು ಮತ್ತಷ್ಟು ಹೇರಳವಾಗಿ ಪಾಂಷಂಡಮತಗಳನ್ನು ನಿರ್ಮಿಸಿ ಧರ್ಮಗಳನ್ನು ನಾಶಗೊಳಿಸುವನು. ಆದುದರಿಂದ ಈಯಜ್ಞವನ್ನು ನಿಲ್ಲಿಸು ॥೩೫॥ ನಿನ್ನ ಯಜ್ಞಕ್ಕೆ ದ್ರೋಹವನ್ನು ಮಾಡಿ ಯಜ್ಞಾಶ್ವವನ್ನು ಕದ್ದಿರುವ ಇಂದ್ರನಿಂದ ನಿರ್ಮಿತಗಳಾದ ಪಾಂಷಂಡಮತಗಳು ಮನೋಹರಗಳಾಗಿ ಕಾಣುತ್ತಾ ಜನರನ್ನು ವಶಗೊಳಿಸಿಕೊಳ್ಳುತ್ತಿರುವುದನ್ನು ಕಂಡೆಯಾ ! ॥೩೬॥ ಇದರಿಂದ ನನಗೇನೆಂದು ಹೇಳಬೇಡ. ವೇನರಾಜನು ಮಾಡಿದ ಅನ್ಯಾಯದಿಂದ ನಷ್ಟವಾಗಿದ್ದ ಜನರ ಧರ್ಮವನ್ನು ಯೋಗ, ಸಾಂಖ್ಯಮೊದಲಾದ ಸಿದ್ಧಾಂತಾನುಸಾರವಾಗಿ ಉದ್ಧರಿಸಿ ಲೋಕಕ್ಷೇಮವನ್ನೆಸಗುವುದಕ್ಕಾಗಿ ನೀನು ಆದೇವೇನನ ಶರೀರದಲ್ಲಿ ಭಗವದಂಶದಿಂದ ಅವತರಿಸಿರುವೆ ॥೩೭॥ ಆದುದರಿಂದ ಈ ಜಗತ್ತಿನ ಉತ್ಪತ್ತಿ ಕ್ರಮವನ್ನಾಲೋಚಿಸಿ, ಜಗತ್ಕರ್ತರಾದ ದೇವತೆಗಳ ಸಂಕಲ್ಪವನ್ನು ನೆರವೇರಿಸು. ಪ್ರಜಾಪಾಲಕನಾದ ನಿನಗಿದು ಕರ್ತವ್ಯವು. ನೀನು ನಿಗ್ರಹಾನುಗ್ರಹಸಮರ್ಥನಾದುದರಿಂದ ಲೋಕದಲ್ಲಿ ಹರಡುತ್ತಿರುವ ಪಾಷಂಡ ಧರ್ಮಗಳನ್ನೂ, ಈ ದುಷ್ಟಧರ್ಮ

§ ಪಾ. ಧರ್ಮಂಚನಾನಾ ಸಮಯಾನುರೂಪಂ.

ಜಾಪತೇ ! ಸಂಕಲ್ಪನ ವಿಶ್ವಸೃಜಾಂ ಪಿಪೀಪೃಹಿ । ಐಂದ್ರೀಂಚ ಮಾಯಾ
ಮುಪಧರ್ಮಮಾತರಂ ಪ್ರಚಂಡಪಾಷಂಡಪಥಂ ಪ್ರಭೋ ! ಜಹಿ ॥೩೮॥
ಮೈತ್ರೇಯಃ ॥ ಇತ್ಥಂ ಸಲೋಕಗುರುಣಾ ಸಮಾದಿಷ್ಟೋ ವಿಶಾಂಪತಿಃ । ತ
ಥಾಚ ಕೃತ್ವಾ ವಾತ್ಸಲ್ಯಂ ಮಘೋನಾಽಪಿಚ ಸಂದಧೇ ॥೩೯॥ ಕೃತಾವ
ಭೃಥಸ್ನಾನಾಯ ಪೃಥವೇ ಭೂರಿಕರ್ಮಣೇ । ವರಾನ್ ದದುಸ್ತೇ ವರದಾ
ಯೇಂತರ್ಬರ್ಹಿಷಿ ತರ್ಪಿತಾಃ ॥೪೦॥ ವಿಪ್ರಾಸ್ಸತ್ಯಾಶಿಷಸ್ತುಷ್ಟಾಶ್ಶ್ರದ್ಧ
ಯಾ ಲಬ್ಧದಕ್ಷಿಣಾಃ ಆಶಿಷೋ ಯುಯುಜುಃ ಕ್ಷತ್ತ ರಾದಿರಾಜಾಯ ಸತ್ಕೃ
ತಾಃ ॥೪೧॥ ತ್ವಯಾ ಹೂತಾ ಮಹಾಬಾಹೋ ! ಸರ್ವ ಏವ ಸಮಾಗತಾಃ ।

---

ಈ ಜಗತ್ತಿನ, ಭವಂ - ಉತ್ಪತ್ತಿಯನ್ನು, ವಿಮೃಶ್ಯ - ಆಲೋಚಿಸಿ, ವಿಶ್ವಸೃಜಾಂ - ಜಗತ್ಕರ್ತರ, ಸಂಕಲ್ಪನಂ - ಸಂಕಲ್ಪವನ್ನು, ಪಿಪೀಪೃಹಿ - ಪೂರಯಿಸು, ಪ್ರಭೋ - ಪ್ರಭುವೆ ! ಉಪಧರ್ಮಮಾತರಂ - ದುಷ್ಟಧರ್ಮಗಳಿಗೆ ತಾಯಿಯಾದ, ಐಂದ್ರೀಂ - ಇಂದ್ರಸಂಬಂಧವಾದ, ಮಾಯಾಂ - ಮಾಯೆಯನ್ನೂ ಪ್ರಚಂ...ಥಂ - ಕ್ರೂರವಾದ ಪಾಷಂಡಮಾರ್ಗವನ್ನೂ, ಜಹಿ - ನಿಗ್ರಹಿಸು ॥೩೮॥ ಸವಿಶಾಂಪತಿಃ - ಆ ಪೃಥುರಾಜನು, ಲೋಕಗುರುಣಾ - ಜಗತ್ಕರ್ತನಾದ ಬ್ರಹ್ಮನಿಂದ, ಇತ್ಥಂ - ಇಂತು, ಸಮಾದಿಷ್ಟಃ - ಉಪದೇಶಿಸಲ್ಪಟ್ಟವನಾಗಿ, ತಥಾಚ - ಹಾಗೆಯೇ, ವಾತ್ಸಲ್ಯಂ - ವಿಶ್ವಾಸವನ್ನು, ಕೃತ್ವಾ - ಮಾಡಿ, ಮಘೋನಾಪಿಚ - ಇಂದ್ರನೊಡನೆಯೂ, ಸಂದಧೇ - ಸಂಧಿಯನ್ನು ಮಾಡಿಕೊಂಡನು ॥ ೩೯ ॥ ಕೃತಾ...ಯ - ಅವಭೃಥಸ್ನಾನವನ್ನು ಮಾಡಿದ, ಭೂರಿಕರ್ಮಣೇ - ಅದ್ಭುತಕಾರ್ಯಗಳನ್ನು ನಡೆಯಿಸಿದ, ಪೃಥವೇ - ಪೃಥುವಿಗೆ, ತದ್ಬರ್ಹಿಷಿ - ಅವನ ಯಜ್ಞದಲ್ಲಿ, ತರ್ಪಿತಾಃ - ತೃಪ್ತಿಗೊಳಿಸಲ್ಪಟ್ಟ ಯೇ - ಯಾವದೇವತೆಗಳುಂಟೋ, ತೇ - ಅವರು, ವರಾನ್ - ವರಗಳನ್ನು, ದದುಃ-ಕೊಟ್ಟರು ॥೪೦॥ ಕ್ಷತ್ತಃ - ಎಲೈ ವಿದುರನೆ ! ಸತ್ಯಾಶಿಷಃ - ಯಥಾರ್ಥಗಳಾದ ಆಶೀರ್ವಾದಗಳುಳ್ಳ, ಶ್ರದ್ಧಯಾ - ಶ್ರದ್ಧೆಯಿಂದ, ಅವಾಪ್ತದಕ್ಷಿಣಾಃ - ದಕ್ಷಿಣೆಗಳನ್ನು ಪಡೆದ, ವಿಪ್ರಾಃ - ಬ್ರಾಹ್ಮಣರು, ಸತ್ಕೃತಾಃ-ಮರಳಿ ಮರ್ಯಾದೆಯನ್ನು, ಹೊಂದಿ, ಆದಿರಾಜಾಯ - ಪೃಥುವಿಗೆ, ಆಶಿಷಃ - ಹರಕೆಗಳನ್ನು, ಯುಯುಜುಃ-ಕೊಟ್ಟರು, ॥ ಮಹಾಬಾಹೋ - ಮಹಾಶೂರನೆ ! ತ್ವಯಾ - ನಿನ್ನಿಂದ, ಆಹೂತಾಃ - ಕರೆಯಲ್ಪಟ್ಟ, ಸರ್ವಏವ - ಎಲ್ಲ

---

ಗಳನ್ನು ಕಲ್ಪಿಸಿದ ಇಂದ್ರನ ಮಾಯೆಯನ್ನೂ ಸಹ ನಿಗ್ರಹಿಸು, ಎಂದು ಹೇಳಿದನು ॥೩೮॥ ಆ ಪೃಥುರಾಜನು ಇಂತು ಬ್ರಹ್ಮನಾಡಿದ ನುಡಿಗಳನ್ನು ಕೇಳಿ ಅಂತೆಯೇ ಪ್ರೀತಿಯಿಂದ ಇಂದ್ರನೊಡನೆ ಸಂಧಿಯನ್ನು ಮಾಡಿಕೊಂಡವನಾಗಿ ಯಜ್ಞವನ್ನು ನಿಲ್ಲಿಸಿದನು ॥೩೯॥ ಆಗ ಪೃಥುರಾಜನ ಯಜ್ಞದಲ್ಲಿ ಹವಿರ್ಭಾಗಗಳಿಂದ ತೃಪ್ತರಾದ ದೇವತೆಗಳು, ಯಜ್ಞವನ್ನು ನಿಲ್ಲಿಸಿ ಅವಭೃಥಸ್ನಾನವನ್ನು ಮಾಡಿ ಅದ್ಭುತಕಾರ್ಯವನ್ನು ನೆರವೇರಿಸಿದ ಪೃಥುರಾಜನಿಗೆ ಬೇಕಾದ ವರಗಳನ್ನಿತ್ತರು ॥೪೦॥ ಆ ಯಜ್ಞದಲ್ಲಿ ಯಥೇಚ್ಛವಾಗಿ ದಕ್ಷಿಣೆಗಳನ್ನು ಸಂಪಾದಿಸಿದ ಸತ್ಯಭಾಷಣರಾದ ಬ್ರಾಹ್ಮಣರೆಲ್ಲರೂ ಮರಳಿ ಮರ್ಯಾದೆಗಳನ್ನು ಹೊಂದಿ ಆದಿರಾಜನಾದ ಪೃಥುವಿಗೆ ಹರಕೆಗಳನ್ನು ಮಾಡಿದರು ॥೪೧॥ ಬಳಿಕ ಪೃಥುರಾಜನು ಆ ಯಜ್ಞಕ್ಕೆ ಬಂದಿಷ್ಟ ಪಿತೃಗಳು, ದೇವತೆಗಳು, ಋಷಿಗಳು, ಮನುಷ್ಯರು ಆದಿಯಾಗಿ ಎಲ್ಲರನ್ನೂ ಮಾನ ಮರ್ಯಾದೆಗಳಿಂದ ಸತ್ಕರಿಸಿ ಕಳುಹಿದನು. ಎಂದು ಮೈತ್ರೇಯಮಾನಿಯು ವಿದುರನಿಗೆ

ಪೂಜಿತಾ ದಾನಮಾನಾಭ್ಯಾಂ ಪಿತೃದೇವರ್ಷಿಮಾನವಾಃ ॥೪೨॥
— ಇತಿ ಏಕೋನವಿಂಶೋಽಧ್ಯಾಯಃ —

ಓಂ ನಮಃ ಪರಮಾತ್ಮನೇ

— ಅಥ ವಿಂಶೋಽಧ್ಯಾಯಃ —

ಮೈತ್ರೇಯಃ ॥ ಭಗವಾನಪಿ * ವೈಕುಂಠ ಸಾಕಂ ಮಘವತಾ ವಿಭುಃ ।
ಯಜ್ಞೈರ್ಯಜ್ಞಪತಿ ಸ್ತುಷ್ಟೋ ಯಜ್ಞಭುಕ್ತ ಮಭಾಷತ ॥೧॥ ಶ್ರೀಭ

---

ರೂ, ಸಮಾಗತಾಃ - ಬಂದರು, ಪಿತೃ...ವಾಃ - ಪಿತೃಗಳು, ದೇವತೆಗಳು, ಋಷಿಗಳು, ಮನುಷ್ಯರು ದಾನಮಾನಾಭ್ಯಾಂ - ದಾನಮಾನಗಳಿಂದ, ಪೂಜಿತಾಃ - ಪೂಜಿಸಲ್ಪಟ್ಟರು ॥೪೨॥

— ಏಕೋನವಿಂಶೋಽಧ್ಯಾಯಂ ಸಮಾಪ್ತಂ —

— ವಿಂಶಾಧ್ಯಾಯಂ —

॥ ಹರಿ ತನ್ನುಪದೇಶದೆ ಸುರ । ವರನೊಳ್ ಕೆಳೆಯಾಂತು ತನ್ನ ನೊಲಿಸಿದ ಪೃಥುಭೂ ।
ವರನಂ ಮನ್ನಿಸಿ ವರಗಳ । ಕರುಣಿಸಿ ತಾಂ ತೆರಳಿ ದಿರವ ನೊರೆದಪುದೀಗಳ್ ॥

ಮೈತ್ರೇಯನು ಹೇಳುತ್ತಾನೆ.- ಯಜ್ಞಪತಿಃ - ಯಜ್ಞನಾಯಕನೂ, ಯಜ್ಞಭುಕ್ - ಯಜ್ಞವನ್ನು ಭುಜಿಸುವವನೂ, ವಿಭುಃ - ವ್ಯಾಪಕನೂ, ಆದ ಭಗವಾನಪಿ - ಭಗವಂತನೂ, ಯಜ್ಞೈಃ - ಯ

---

ಹೇಳುವ ನೆಂಬಲ್ಲಿಗೆ ಭಾಗವತಚಕೋರ ಚಂದ್ರಿಕೆಯೊಳ್

— ಹತ್ತೊಂಬತ್ತನೆಯ ಅಧ್ಯಾಯಂ ಮುಗಿದುದು —

— ಇಪ್ಪತ್ತನೆಯ ಅಧ್ಯಾಯ —

— ಶ್ರೀಹರಿಯು ಪೃಥುವಿಗೆ ವರಗಳನ್ನಿತ್ತು ಮನ್ನಿಸುವುದು —

ಅನಂತರದಲ್ಲಿ ಮೈತ್ರೇಯನು ವಿದುರನಿಗೆ ಹೇಳುತ್ತಾನೆ. ಬಳಿಕ ಯಜ್ಞಾಧ್ಯಕ್ಷನೂ, ಯಜ್ಞಭೋಕ್ತೃವೂ, ಸರ್ವವ್ಯಾಪಕನೂ, ವೈಕುಂಠಪತಿಯೂ ಆದ ಭಗವಂತನು ಇಂದ್ರನೊಡಗೂಡಿ ಪೃಥುರಾಜನಿಗಿಂತೆಂದನು ॥೧॥ ಅಯ್ಯಾ ರಾಜನೇ! ನೀನು ಮಾಡಿದ ನೂರು ಯಜ್ಞ

---

* ವಿ. ಉತ್ತಮನಾದ ಗುರುವು ತನ್ನ ಉಪಾಸನೆಗೆ ವಿಷಯನಾದ ಹರಿಯನ್ನು ಶಿಷ್ಯರಿಗೂ ಉಪದೇಶಿಸಬೇಕೆಂಬ ಲೋಕಾಚಾರಕ್ಕಾಗಿ, ಭಗವಂತನು ಪೃಥುಜೀವನಿಗೆ ತನ್ನ ಸ್ವರೂಪವನ್ನು ಉಪದೇಶಿಸುತ್ತಾನೆ. ಸೃಷ್ಟಿಕಾಲದಲ್ಲಿ ಬೇರೆಬೇರೆಯಾಗಿದ್ದ ಭೂತಗಳನ್ನು ಜತೆಗೊಳಿಸಿದುದರಿಂದ ವಿಷ್ಣುವಿಗೆ ವೈಕುಂಠನೆಂದು ಹೆಸರಾಯಿತು.

ಶ್ಲೋ॥ ಮಯಾ ಸಂಶ್ಲೇಷಿತಾ ಭೂಮಿ ರದ್ಭಿ, ರ್ವ್ಯೋಮ ಚ ವಾಯುನಾ ।
ವಾಯುಶ್ಚ ತೇಜಸಾ ಸಾರ್ಧಂ ವೈಕುಂಠತ್ವಂ ತತೋ ಮಮ ॥

ಗವಾನ್ ॥ ಏಷ ತೇಽಕಾರ* ಷೀದ್ಭಂಗಂ ಹಯಮೇಧಶತಸ್ಯ ಹ । ಕ್ಷಮಾಪಯತ ಆತ್ಮಾನ ಮಮುಷ್ಯ ಕ್ಷಂತು ಮರ್ಹಸಿ ॥೨॥ ಸುಧಿಯ ಸ್ಸಾಧವೋ ಲೋಕೇ ನರದೇವ ! ನರೋತ್ತಮಾಃ । ನಾಽಭಿದ್ರುಹ್ಯಂತಿ ಭೂತೇಭ್ಯೋ ಯರ್ಹಿ ನಾತ್ಮಾ ಕಳೇಬರಂ ॥೩॥ ಪುರುಷಾ ಯದಿ ಮುಹ್ಯಂತಿ ತ್ವಾದೃಶಾ ದೇವಮಾಯಯಾ । ಶ್ರಮಏವ ಪರಂ ಜಾತೋ ದೀರ್ಘಯಾ ವೃದ್ಧ ಸೇವಯಾ॥೪॥ ಅತಃ ಕಾಯ ಮಿಮಂ ವಿದ್ವಾ ನವಿದ್ಯಾಕಾಮಕರ್ಮಭಿಃ । ಆರಬ್ಧ ಇತಿ ನೈವಾಽಸ್ಮಿನ್ ಪ್ರತಿಬುದ್ಧೋಽನುಷಜ್ಜತೇ ॥೫॥ ಅಸಂಸಕ್ತ ಶ್ಶರೀ

ಜ್ಞಗಳಿಂದ, ತುಷ್ಟಃ - ಸಂತುಷ್ಟನಾಗಿ, ಮಘವತಾ ಸಾಕಂ - ಇಂದ್ರನೊಡನೆ, ?ಡಿತಂ - ಅವೃಥುವಿಗೆ, ಅಭಾಷತ - ಹೇಳಿದನು, ತೇ - ನಿನ್ನ, ಹಯ...ಸ್ಯ - ನೂರುಯಜ್ಞಗಳ ಸಂಕಲ್ಪಕ್ಕೆ, ಏಷಃ - ಇವನು, ಭಂಗಂ - ಅಡಿಯನ್ನು, ಅಕಾರ್ಷೀತ್ - ಮಾಡಿದನು, ಆತ್ಮಾನಂ - ನಿನ್ನನ್ನು, ಕ್ಷಮಾಪಯತಃ - ಮನ್ನಣೆಗೊಳಿಸುತ್ತಿರುವ, ಅಮುಷ್ಯ - ಇವನ ವಿಷಯದಲ್ಲಿ, ಕ್ಷಂತುಂ - ಕ್ಷಮಿಸುವುದಕ್ಕೆ, ಅರ್ಹಸಿ - ಯೋಗ್ಯನಾಗುತ್ತಿ ॥೨॥ ನರದೇವ - ರಾಜನೆ ! ಯರ್ಹಿ-ಯಾವಕಾರಣದಿಂದ, ಕಳೇಬರಂ - ಶರೀರವು ಆತ್ಮಾ - ಆತ್ಮವು, ನ-ಅಲ್ಲವೋ, ಅದರಿಂದ, ಸುಧಿಯಃ - ಪಂಡಿತರಾದ, ಸಾಧವಃ - ಸಾಧುಗಳಾದ, ನರೋತ್ತಮಾಃ - ಪುರುಷಶ್ರೇಷ್ಠರು, ಭೂತೇಭ್ಯಃ - ಪ್ರಾಣಿಗಳಿಗೆ, ನಾಭಿದ್ರುಹ್ಯಂತಿ - ದ್ರೋಹವನ್ನುಮಾಡುವುದಿಲ್ಲ ॥೩॥ ತ್ವಾದೃಶಾಃ - ನಿನ್ನಂತಹ, ಪುರುಷಾಃ - ಪುರುಷರೂ, ದೇವಮಾಯಯಾ - ಭಗವನ್ಮಾಯೆಯಿಂದ, ಮುಹ್ಯಂತಿಯದಿ - ಮರುಳಾಗುವುದಾದರೆ, ದೀರ್ಘಯಾ-ಚಿರತರವಾದ, ವೃದ್ಧಸೇವಯಾ-ಹಿರಿಯರ ಸೇವೆಯಿಂದ, ಶ್ರಮ ಏವಪರಂ - ಆಯಾಸಮಾತ್ರವೇ, ಜಾತಃ - ಉಂಟಾದಂತಾಯಿತು ॥೪॥ ಅತಃ - ಆದುದರಿಂದ ಅವಿ....ಭಿಃ -ಅಜ್ಞಾನ, ಕಾಮ, ಕರ್ಮ ಇವುಗಳಿಂದ, ಆರಬ್ಧಃ-ಉಂಟಾದುದು, ಎಂದು, ಇಮಂಕಾಯಂ - ಈ ಶರೀರವನ್ನು (ತಿಳಿದು) ಪ್ರತಿಬುದ್ಧಃ - ಎಚ್ಚರಗೊಂಡು, ಅಸ್ಮಿನ್-ಈ ಕಳೇಬರದಲ್ಲಿ ನೈವಾನುಷಜ್ಜತೇ - ಅಭಿಮಾನವಿಡುವುದಿಲ್ಲ ॥೫॥

ಅಸ್ಮಿನ್‌ಶರೀರೇ - ಈ ಶರೀರದಲ್ಲಿ, ಅಸಂಸಕ್ತಃ - ಅಭಿಮಾನವಿಡದೆ, ಅಮುನಾ - ಇದರಿಂದ, ಉ

ಗಳಸಂಕಲ್ಪಕ್ಕೆ ಭಂಗವನ್ನುಮಾಡಿದವನು ಇವನೇ. ಇವನೀಗ ನಿನ್ನನ್ನು ಮನ್ನಣೆಗೊಳಿಸುತ್ತಿರುವನಾದುದರಿಂದ ನೀನಿವನನ್ನು ಮನ್ನಿಸು ॥ ೨ ॥ ಮಲಮೂತ್ರಾದಿಗಳಿಂದ ಕಶ್ಮಲವಾದೀದೇಹವು ಆತ್ಮವಲ್ಲವಾದುದರಿಂದ ಬುದ್ಧಿಸಂಪನ್ನರಾಗಿ ಸಾಧುಗಳೆನಿಸಿಕೊಂಡಿರುವ ಪುರುಷಶ್ರೇಷ್ಠರು ಶರೀರಾಭಿಮಾನದಿಂದ ಯಾವಪ್ರಾಣಿಗಳಿಗೂ ದ್ರೋಹವನ್ನೆಣಿಸುವುದಿಲ್ಲ ॥ ೩ ॥ ನಿನ್ನಂತಹ ಪಂಡಿತರಾದ ಪುರುಷರೇ ಭಗವಂತನ ಮಾಯೆಗೆಸಿಕ್ಕಿ ಮರುಳಾದರೆ, ಬಹುಕಾಲದವರೆಗೂ ಮಹಾತ್ಮರನ್ನು ಸೇವಿಸುವುದರಿಂದ ಆಯಾಸವೇ ಫಲವೆಂದರಿಯಬೇಕಾಗುವುದು ॥೪॥ ಆದುದರಿಂದಲೇ ಆತ್ಮಾನಾತ್ಮವಿವೇಕವುಳ್ಳ ಪಂಡಿತರು "ಈ ಶರೀರವು ಅಜ್ಞಾನದಿಂದಲೂ, ಆ ಅಜ್ಞಾನಮೂಲಕವಾದ ಕಾಮದಿಂದಲೂ, ಕಾಮಮೂಲಕವಾದ ಕರ್ಮದಿಂದಲೂ ಉಂಟಾಗಿರುವುದು" ಎಂದು ತಿಳಿದು ಶರೀರದಲ್ಲಿ ಅಹಂಕಾರ ಮಮಕಾರಗಳನ್ನು ಮಾಡುವುದಿಲ್ಲ ॥ ೫ ॥ ಇಂತು ಶರೀರದಲ್ಲಿಯೇ ಅಭಿಮಾನವೆಂಬುದು ತೊಲಗಿದಬಳಿಕ ಆತ್ಮಾನಾತ್ಮವಿವೇಕವುಳ್ಳ ಯಾವಪಂಡಿತನು ತಾನೇ ಶರೀರದಿಂದ ಸಂಪಾದಿಸಲ್ಪ

ರೇಽಸ್ಮಿನ್ನಮುನೋತ್ಪಾದಿತೇ ಗೃಹೇ । ಅಪತ್ಯೇ ದ್ರವಿಣೇ ವಾಪಿ ಕಃ ಕು
ರ್ಯಾನ್ಮಮತಾಂ ಬುಧಃ॥೬॥ ‡ಏಕಶ್ಶುದ್ಧಸ್ಸ್ವಯಂಜ್ಯೋತಿರ್ನಿರ್ಗುಣೋ
ಸೌ ಗುಣಾಶ್ರಯಃ । ಸರ್ವಗೋಽನಾವೃತಸ್ಸಾಕ್ಷೀ ನಿರಾತ್ಮಾತ್ಮಾ
ತ್ಮನಃ ಪರಃ॥೭॥ * ಯ ಏವಂ ಸಂತಮಾತ್ಮಾನಮಾತ್ಮಸ್ಥಂ ವೇದ ಪೂರುಷಃ।

ತ್ಪಾದಿತೇ - ಸಂಪಾದಿಸಲ್ಪಟ್ಟ, ಗೃಹೇ - ಮನೆಯಲ್ಲಿಯಾಗಲಿ, ಅಪತ್ಯೇ - ಪುತ್ರರಲ್ಲಿಯಾಗಲಿ, ದ್ರವಿಣೇಪಿ ವಾ - ಧನದಲ್ಲಿಯಾಗಲಿ, ಕಃಬುಧಃ - ಯಾವಪಂಡಿತನು, ಮಮತಾಂ - ಅಭಿಮಾನವನ್ನು, ಕುರ್ಯಾತ್- ಮಾಡುವನು, ॥ ೬ ॥ ಏಕಃ - ಅದ್ವಿತೀಯನು, ಶುದ್ಧಃ - ಪರಿಶುದ್ಧನು, ಸ್ವಯಂಜ್ಯೋತಿಃ - ಸ್ವಪ್ರಕಾಶನು, ನಿರ್ಗುಣಃ - ಗುಣರಹಿತನು, ಗುಣಾಶ್ರಯಃ - ಗುಣಗಳಿಗೆಆಶ್ರಯನು, ಸರ್ವಗಃ-ಸರ್ವವ್ಯಾಪಿಯು, ಅನಾವೃತಃ - ಆವರಣರಹಿತನು , ಸಾಕ್ಷೀ-ಹೃದ್ರೂಪನು, ನಿರಾತ್ಮಾ-ದೇಹರಹಿತನು, ಆದ, ಅಸಾವಾತ್ಮಾ

ಟ್ಟ ಮನೆಯಲ್ಲಾಗಲಿ, ಹೆಂಡಿರು ಮಕ್ಕಳಲ್ಲಾಗಲಿ, ಧನಕನಕಾದಿಗಳಲ್ಲಾಗಲಿ ಅಭಿಮಾನವನ್ನಿಟ್ಟಾನು? ॥೬॥ ವಿವೇಕವೆಂಬುದು ಸಾಮಾನ್ಯವಲ್ಲ. ''ಆತ್ಮನೊಬ್ಬನು, ದೇಹಗಳನೇಕಗಳು. ಆತ್ಮನು ಪರಿಶುದ್ಧನು, ದೇಹವು ಮಲಿನವು. ಆತ್ಮನುಸ್ವಪ್ರಕಾಶನು. ದೇಹವು ಪರಪ್ರಕಾಶ್ಯವು. ಆತ್ಮನು ನಿರ್ಗುಣನು, ದೇಹವು ಸತ್ವಾದಿಗುಣಯುಕ್ತವು ಆತ್ಮನು ಗುಣಾಶ್ರಯನು. ದೇಹವು ಗುಣಾಧೀನವು ಆತ್ಮನು ಸರ್ವವ್ಯಾಪಕನು. ದೇಹವುಪರಿಮಿತವು, ಆತ್ಮನು

‡ ವಿ. ಪೂರ್ವಶ್ಲೋಕದಲ್ಲಿ ಹೇಳಲ್ಪಟ್ಟ ಪಂಡಿತನೆಂಬ ಶಬ್ದಕ್ಕೆ, ಪ್ರಕೃತಿ, ಪುರುಷ, ಪರಮಾತ್ಮರ ಯಾಥಾತ್ಮ್ಯವನ್ನು ಬಲ್ಲವನೆಂದು ಅರ್ಥವಾಗುವಕಾರಣ, ಈ ಎರಡು ಶ್ಲೋಕಗಳಿಂದ, ಚಿದಚಿದೀಶ್ವರರ ನಿಜಸ್ವರೂಪವನ್ನು ನಿರೂಪಿಸಿ 'ಯ ಏವಂ' ಎಂಬಶ್ಲೋಕದಿಂದ ''ಬ್ರಹ್ಮಜ್ಞಾನಕ್ಕೆ ಜೀವಯಾಥಾತ್ಮ್ಯ ಜ್ಞಾನವು ಅಂಗವೆಂತಲೂ, ಅದಕ್ಕೆ ಕರ್ಮಯೋಗವು ಅಂಗವೆಂತಲೂ, ಆತ್ಮಜ್ಞಾನ, ಕರ್ಮಯೋಗ, ಇವುಗಳಿಂದ ಸಹಕೃತವಾದ ಭಕ್ತಿಯೋಗವು ಬ್ರಹ್ಮಪ್ರಾಪ್ತಿಗುಪಾಯವೆಂತಲೂ, ಇಂತುಭಗವದುಪಾಸನೆಯಲ್ಲಿ ನಿಷ್ಠನಾದವನಿಗೆ ದೇಹಾಭಿಮಾನ ಮೊದಲಾದವುಗಳಿರುವುದಿಲ್ಲವೆಂತಲೂ ಹೇಳಲ್ಪಡುವುದು.

* ಮೂ. ಶ್ಲೋ॥ ದೇಹಾದ್ಯುಪಾತ್ತಸ್ತದ್ಧರ್ಮಾನಸ್ಯ ಸ್ತದ್ದ್ರಷ್ಟುರಾತ್ಮನಃ ।
ಕೈವಲ್ಯಂ ತಸ್ಯವೈಧರ್ಮ್ಯಂ ತತ್ಸುಷುಪ್ತಂ ನಿದರ್ಶನಂ ॥

ವಿ. (೧) ಶರೀರ, ಪ್ರಾಣ, ಇಂದ್ರಿಯಗಳಿಗೆ ಸಂಬಂಧಿಸಿದ, ಬಾಲ್ಯ, ಯೌವನ, ಹಸಿವು, ನೀರಡಿಕೆ ಮೊದಲಾದ ಧರ್ಮಗಳು, ಆ ಶರೀರಾದಿಗಳಿಗೆ ಸಾಕ್ಷಿಯಾದ ಜೀವನಿಗೆ ಸಲ್ಲಲಾರವು. ಶರೀರಕ್ಕಿರುವ ಜಾತಿ ಮೊದಲಾದುವು ಜೀವನಗಿರುವುದಿಲ್ಲ, ಇದೇಭೇದವು ಜೀವನಿಗೆ ಈ ಭೇದವಿರುವ ವಿಷಯದಲ್ಲಿ, ಸುಷುಪ್ತಿಯೇ ದೃಷ್ಟಾಂತವು. ಪ್ರಾಣಿಗಳು ಗಾಢನಿದ್ರೆಯನ್ನು ಮಾಡುವಾಗ ಸ್ವಸ್ವರೂಪವು ಮಾತ್ರ ಅನುಭವಕ್ಕೆ ಬರುವುದೇ ಹೊರತು, ಶರೀರಕ್ಕೆ ಸಂಬಂಧಿಸಿದ ಜಾತಿ ಮೊದಲಾದುವು ಯಾವುವೂ ಅನುಭವಕ್ಕೆ ಬರುವುದಿಲ್ಲ, ಆದುದರಿಂದ ಇದೇ ಜೀವಶರೀರಗಳಿರುವ ಭೇದವು. ಇದರಿಂದ ಪ್ರಕೃತಿ ಜೀವರ ಸ್ವರೂಪವನ್ನು ವಿಂಗಡಿಸಿ ಹೇಳಿದಂತಾಯಿತು.

(೨) ವಿ. ಸರ್ವಾಂತರ್ಯಾಮಿಯಾದ ಭಗವಂತನು ಶರೀರದಲ್ಲಿದ್ದರೂ, ಶರೀರಗತಗಳಾದ ಜನನಮರಣಾದಿ ಧರ್ಮಗಳಿಗೊಳಗಾಗುವುದಿಲ್ಲ. ನಿತ್ಯಾನಂದವು, ಅನನ್ಯ ಸಾದೃಶ್ಯವು ಇವುಗಳೇ ಭಗವದ್ಧರ್ಮಗಳು. ಸ್ವಲ್ಪವೂ ದುಃಖಸಂಬಂಧವಿಲ್ಲದ ಸುಷುಪ್ತಿಯೇ ಇದಕ್ಕೆ ನಿದರ್ಶನವೆನಿಸುವುದು.

ನಾಽಜ್ಯತೇ ಪ್ರಕೃತಿಸ್ಥೋಽಪಿ ತದ್ಗುಣೈಸ್ಸ ಮಯಿ ಸ್ಥಿತಃ ॥೮॥ ಯಸ್ಸ್ವಧ ರ್ಮೇಣ ಮಾಂ ನಿತ್ಯಂ ನಿರಾಶೀಃ ಶ್ರದ್ಧಯಾಽನ್ವಿತಃ । ಭಜತೇ ಶನಕೈ ಸ್ತಸ್ಯ ಮನೋ ರಾಜನ್ ! ಪ್ರಸೀದತಿ॥೯॥ ಪರಿತ್ಯಕ್ತಗುಣಸ್ಸಮ್ಯಗ್ದರ್ಶನೋ ವಿಶದಾಶಯಃ । ಶಾಂತಿಂ ಮೇ ಸಮವಸ್ಥಾನಂ ಬ್ರಹ್ಮಕೈವಲ್ಯ ಮಶ್ನು ತೇ ॥೧೦॥ * ಉದಾಸೀನ ಇವಾಽಧ್ಯಕ್ಷಂ ದ್ರವ್ಯಜ್ಞಾನಕ್ರಿಯಾತ್ಮನಾಂ ।

ಈ ಪರಮಾತ್ಮನು, ಆತ್ಮನಃ - ದೇಹಕ್ಕಿಂತಲೂ, ಪರಃ - ವಿಲಕ್ಷಣನು, ॥ ೭ ॥ ಯಃಪೂರುಷಃ - ಯಾವ ಮನುಷ್ಯನು, ಏವಂ - ಇಂತು, ಸಂತಂ - ಇರುವ, ಆತ್ಮಸ್ಥಂ - ತನ್ನಲ್ಲಿರುವ, ಆತ್ಮಾನಂ - ಪರಮಾತ್ಮನನ್ನು, ವೇದ - ತಿಳಿಯುವನೋ, ಸಃ - ಅವನು, ಮಯಿ-ನನ್ನಲ್ಲಿ, ಸ್ಥಿತಃ - ಇರುವವನಾಗಿ, ಪ್ರಕೃತಿಸ್ಥೋಪಿ - ಪ್ರಕೃತಿಯಲ್ಲಿದ್ದರೂ, ತದ್ಗುಣೈಃ - ಆ ಪ್ರಕೃತಿಯ ಗುಣಗಳಿಂದ, ನಾಜ್ಯತೇ - ಲಿಪ್ತನಾಗುವುದಿಲ್ಲ ॥೮॥ ರಾಜನ್ - ರಾಜನೆ ! ಯಃ - ಯಾವನು, ನಿರಾಶೀಃ - ಆಸೆಯನ್ನುಳಿದು, ಶ್ರದ್ಧಯಾ - ಆದರದಿಂದ, ಅನ್ವಿತಃ - ಕೂಡಿದವನಾಗಿ, ನಿತ್ಯಂ - ಯಾವಾಗಲೂ, ಸ್ವಧರ್ಮೇಣ - ತನ್ನ ಧರ್ಮದಿಂದ ಮಾಂ - ನನ್ನನ್ನು, ಭಜತೇ - ಧ್ಯಾನಿಸುವನೋ, ತಸ್ಯ - ಅವನ, ಮನಃ - ಮನಸ್ಸು, ಶನಕೈಃ - ಮೆಲ್ಲನೆ, ಪ್ರಸೀದತಿ - ಪ್ರಸನ್ನವಾಗುತ್ತದೆ, ॥೯॥ ಪರಿ...ಣಃ - ಬಿಡಲ್ಪಟ್ಟ ಪ್ರಕೃತಿಗುಣಗಳುಳ್ಳ, ಸಮ...ನಃ - ಅಪರೋಕ್ಷಜ್ಞಾನವುಳ್ಳ, ವಿಶ....ಯಃ - ನಿರ್ಮಲಮನಸ್ಕನಾದ, ಜ್ಞಾನಿಯು, ಮೇ - ನನಗೆ, ಸಮವಸ್ಥಾನಂ - ನೆಲೆಯೆನಿಸಿದ, ಕೈವಲ್ಯಂ - ಅದ್ವಿತೀಯವಾದ, ಬ್ರಹ್ಮ - ಬ್ರಹ್ಮರೂಪವಾದ, ಶಾಂತಿಂ -

ಆವರಣಶೂನ್ಯನು. ದೇಹವು ಗೃಹಾದ್ಯುಪಕರಣಗಳಿಂದ ಕೂಡಿದುದು. ಆತ್ಮನು ಸರ್ವಸಾಕ್ಷಿಯು. ದೇಹವು ಜಡವು. ಆತ್ಮನು ಸ್ವತಂತ್ರನು, ದೇಹವು ಪರತಂತ್ರವು. ಇಂತು ಸಂಪೂರ್ಣಭೇದವಿರುವುದರಿಂದ ಪರಮಾತ್ಮನು ದೇಹಕ್ಕಿಂತಲೂ ಭಿನ್ನನು, ಎಂದರಿಯುವುದೇ ವಿವೇಕವು ॥ ೭ ॥ ಯಾವಪುರುಷನು ಇಂತಿರುವ ಆತ್ಮಸ್ವರೂಪವನ್ನು ತಿಳಿದುಕೊಳ್ಳುವನೋ, ಅವನು ಶರೀರದಲ್ಲಿದ್ದರೂ, ಆತ್ಮಾರಾಮನಾದುದರಿಂದ ಆಶರೀರಾದಿಗಳಗುಣಗಳಿಂದ ಕಾಮಾದಿಗಳಿಗೊಳಗಾಗುವುದಿಲ್ಲ. ॥ ೮ ॥ ಅಯ್ಯಾ ಪೃಥುರಾಜನೇ ! ಯಾವಪುರುಷನು ಆಶಾಪಾಶಗಳನ್ನುಳಿದು, ಶ್ರದ್ಧಾಯುಕ್ತನಾಗಿ, ಯಾವಾಗಲೂ ಸ್ವಧರ್ಮದಲ್ಲಿದ್ದುಕೊಂಡು ನನ್ನನ್ನು ಭಜಿಸುವನೋ, ಅವನು ಮೆಲ್ಲಮೆಲ್ಲನೆ ಮನಶ್ಶಾಂತಿಯನ್ನು ಪಡೆಯುವನು ॥೯॥ ಶಾಂತಿಯೆಂಬುದು ಸಾಧಾರಣವೆಂದರಿಯಬೇಡ. ಸಂಪೂರ್ಣವಾದ ಉದಾಸೀನತೆಯಿಂದ ನೆಲಸಿರುವುದಕ್ಕೆ ಶಾಂತಿಯೆಂದು ಹೆಸರು. ಇದನ್ನೇ ಬ್ರಹ್ಮವೆಂತಲೂ

* (೧) ವಿ. ತತ್ವತ್ರಯ ವಿಮರ್ಶನವನ್ನು ಪಡೆ, ಜ್ಞಾನಕರ್ಮಯೋಗಗಳಿಂದೊಡಗೂಡಿದ ಭಕ್ತಿಯೋಗದಿಂದ ಅಪರೋಕ್ಷ ಜ್ಞಾನವನ್ನು ಪಡೆದ ಪಂಡಿತರು ಬದುಕಿರುವಾಗಲೇ, ಭೂತೇಂದ್ರಿಯಾದಿಗಳಿಗೆ ಅಧ್ಯಕ್ಷನಾದ ಜೀವನು, ಸ್ವರೂಪದಿಂದ ನಿರ್ವಿಕಾರನೆಂದು ತಿಳಿಯುತ್ತಾರೆ.

(೨) ವಿ. ಶ್ರೀಹರಿಯು ಸಾತ್ವಿಕ, ರಾಜಸ, ತಾಮಸ ಪದಾರ್ಥಗಳಿಗೆ ಅಧ್ಯಕ್ಷನಾದರೂ ನಿರ್ವಿಕಾರನಾಗಿರುವನೆಂದು ತಿಳಿಯುವವನಶ್ರೇಯಸ್ಸನ್ನು ಪಡೆಯುತ್ತಾನೆ.

(೩) ವಿ. ಭೂತದ್ರೋಹವನ್ನು ಮಾಡದ ಮುಮುಕ್ಷುಗಳು ಸಾಧನಕಾಲದಲ್ಲಿಯೂ ಆತ್ಮಾನಾತ್ಮವಿವೇಕದಿಂದ,ಆತ್ಮನಿಗೆ ಜನ್ಮಮರಣಗಳಿಲ್ಲವೆಂದು ತಿಳಿದು,ಸುಖದುಃಖಗಳಲ್ಲಿ ವಿಕಾರವನ್ನು ಪಡೆಯುವುದಿಲ್ಲ.

ಕೂಟಸ್ಥ ಮಿಮ ಮಾತ್ಮಾನಂ ಯೋ ವೇದಾಽಪ್ನೋತಿ ಶೋಭನಂ ॥೧೧॥
‡ಭಿನ್ನಸ್ಯ ಲಿಂಗಸ್ಯ ಗುಣಪ್ರವಾಹೋ ದ್ರವ್ಯಕ್ರಿಯಾಕಾರಕಚೇತನಾ
ತ್ಮನಃ । ದೃಷ್ಟಾಸು ಸಂಪತ್ಸು ವಿಪತ್ಸು ಸೂರಯೋ ನವಿಕ್ರಿಯಂತೇ ಮಯಿ

ಶಾಂತಿಯನ್ನು, ಅಶ್ನುತೇ - ಪಡೆಯುವನು ॥೧೦॥

ಯಃ - ಯಾವನು, ಕೂಟಸ್ಥಂ-ನಿರ್ವಿಕಾರನಾಗಿ, ಉದಾಸೀನಂ - ನಿರ್ಲಿಪ್ತನಾಗಿಯೂ, ದ್ರವ್ಯ... ನಾಂ - ದ್ರವ್ಯ-ಶರೀರ, ಜ್ಞಾನ - ಜ್ಞಾನೇಂದ್ರಿಯಗಳು, ಕ್ರಿಯಾ-ಕರ್ಮೇಂದ್ರಿಯಗಳು, ಆತ್ಮನಾಂ - ಮನಸ್ಸು ಇವುಗಳಿಗೆ, ಅಧ್ಯಕ್ಷಮಿವ - ನಾಯಕನಂತಿರುವ, ಇಮಂ ಆತ್ಮಾನಂ - ಈ ಆತ್ಮನನ್ನು, ಯೋವೇದ - ಯಾವನು ತಿಳಿಯುವನೋ, ಸಃ - ಅವನು, ಶೋಭನಂ - ಶ್ರೇಯಸ್ಸನ್ನು, ಆಪ್ನೋತಿ - ಹೊಂದುತ್ತಾನೆ ॥೧೧॥ ದ್ರವ್ಯ...ನಃ, ದ್ರವ್ಯ - ಮಹಾಭೂತಗಳು, ಕ್ರಿಯಾ - ಕರ್ಮೇಂದ್ರಿಯಗಳು, ಕಾರಕ - ಜ್ಞಾನೇಂದ್ರಿಯಗಳು, ಚೇತನಾ - ಚಿದಾಭಾಸವು, ಆತ್ಮನಃ - ಇವುಗಳ ರೂಪವಾದ, ಭಿನ್ನಸ್ಯ - ಬೇರೆಯಾ

ಕೈವಲ್ಯವೆಂತಲೂ ಕರೆಯುವರು. ಯಾವನು ಪ್ರಕೃತಿಗುಣಗಳಿಂದ ಕಾಮಾದಿಗಳನ್ನಳಿದು ನಿರ್ಮಲಾಂತಃಕರಣನಾಗಿ ಅಪರೋಕ್ಷಜ್ಞಾನವನ್ನು ಪಡೆಯುವನೋ, ಅವನೇ ಶಾಂತಿಯನ್ನು ಪಡೆಯುವುದಕ್ಕಧಿಕಾರಿಯು ॥ ೧೦ ॥ ಪೃಥಿವ್ಯಾದಿಭೂತಗಳಿಗೂ, ಜ್ಞಾನಕರ್ಮೇಂದ್ರಿಯಗಳಿಗೂ, ಮನಸ್ಸಿಗೂ ಅಧಿಪತಿಯಂತೆತೋರುವ ಜೀವನನ್ನು ಆ ಭೂತಾದಿಗಳಲ್ಲಿ ಆಸಕ್ತಿಯಿಲ್ಲದ ಉದಾಸೀನನನ್ನಾಗಿ ಯಾವನು ತಿಳಿಯುವನೋ, ಅವನು ಜೀವನನ್ನು ನಿರ್ವಿಕಾರನನ್ನಾಗಿ ತಿಳಿಯುತ್ತಾನೆ. ಹಾಗೆ ತಿಳಿಯುವವನು ಪರಮಾತ್ಮನನ್ನು ತಿಳಿಯುತ್ತಾನೆ. ಅಂತು ಪರಮಾತ್ಮನನ್ನು ತಿಳಿದವನು ಮುಕ್ತಿಯನ್ನು ಪಡೆಯುತ್ತಾನೆ ॥೧೧॥ ಗುಣಪ್ರವಾಹರೂಪವಾದ ಸಂಸಾರವು ಪಂಚಭೂತ, ಜ್ಞಾನೇಂದ್ರಿಯ, ಕರ್ಮೇಂ

‡ (೧) ವೀ. ಜೀವಾತ್ಮನು ದ್ರವ್ಯಾದಿಗಳಿಗೆ ಅಧಿಪತಿಯೆಂತಲೂ, ನಿರ್ವಿಕಾರನೆಂತಲೂ ಹೇಳುವುದು ಪರಸ್ಪರವಿರುದ್ಧವಾಗಿ ತೋರಬಹುದು. ಆತ್ಮನಲ್ಲಿ ದ್ರವ್ಯಾದ್ಯಧ್ಯಕ್ಷತ್ವರೂಪವಿಕಾರವೇನೋ ಇದಲೇ ಇರುವುದು. ಆದರೂ ಅದು ಜ್ಞಾನವಿಕಾರರೂಪವು. ಆ ವಿಕಾರವು ಧರ್ಮಭೂತವಾದ ಜ್ಞಾನದಲ್ಲಿರುವುದೇ ಹೊರತು ಸ್ವರೂಪದಲ್ಲಿಲ್ಲ. ಆದುದರಿಂದ ಕೂಟಸ್ಥತ್ವವು, ಉದಾಸೀನತೆಯೂ ಸಹ ಆತ್ಮನಿಗೆ ಸಹಜವೆಂತಲೂ, ದೇವಾದಿರೂಪದಿಂದ ಪರಿಣಾಮವು ದ್ರವ್ಯಾದಿ ಸಂಘಾತರೂಪವಾದ ಶರೀರಕ್ಕೆ ಸಹಜವೆಂತಲೂ ತಿಳಿಯಬೇಕು. ಧರ್ಮದಲ್ಲಿ ವಿಕಾರವಿದ್ದರೂ ನಿತ್ಯತ್ವಕ್ಕೆ ಭಂಗವೇ ಬಂದಿತೆಂದು ಹೇಳುವಿರೋ ? ಇಲ್ಲ ಧರ್ಮಭೂತವಾದ ಜ್ಞಾನದ್ರವ್ಯವು ನಿತ್ಯವು. ಅದಕ್ಕೆ ಒಮ್ಮೆ ಕರ್ಮದಿಂದ ಸಂಕೋಚವೂ, ಒಮ್ಮೆ ವಿಕಾಸವೂ ಉಂಟಾಗುವುದು. ಆದುದರಿಂದ ಧರ್ಮದಿಂದಲೂ ಆತ್ಮನ ಕೂಟಸ್ಥತ್ವಕ್ಕೆ ಚ್ಯುತಿಯಿಲ್ಲ.

(೨) ವಿ. ಜ್ಞಾನಿಗಳಾದವರು, ಪಂಚಭೂತ, ಜ್ಞಾನಕರ್ಮೇಂದ್ರಿಯ ಚೇತನಗಳನ್ನು ವ್ಯಾಪಿಸಿಕೊಂಡು ಜೀವನಿಗಿಂತಲೂ ಬೇರೆಯಾಗಿರುವ ಮನಸ್ಸಿಗೇ ಗುಣಪ್ರವಾಹರೂಪವಾದ ಸಂಸಾರವಲ್ಲದೆ, ಆತ್ಮನಿಗಿಲ್ಲವೆಂದು ತಿಳಿಯುವರು.

(೩) ಸ. "ಜೀವನು ಲಿಂಗದೇಹದಲ್ಲಿ ಅಭಿಮಾನವಿಟ್ಟಲ್ಲಿ ಸಂಸಾರಕ್ಕೊಳಗಾಗುವನೇ ಹೊರತು, ಉದಾಸೀನನಾಗಿದ್ದರೆ ಸಂಸಾರಿಯಾಗುವುದಿಲ್ಲ" ಎಂದು ತಿಳಿದು ಭಕ್ತಿಮಿಶ್ರವಾದ ಜ್ಞಾನದಿಂದಲೂ, ಕೇವಲ ಭಕ್ತಿಯಿಂದಲೂ ಭಗವಂತನನ್ನು ಆರಾಧಿಸುವವರಿಗೆ ಸಂಸಾರವುಂಟಾಗುವುದಿಲ್ಲ.

ಬದ್ಧಸೌಹೃದಾಃ ॥ ೧೨ ॥ ಸಮಃ ಸ್ಸಮಾನೋತ್ತಮ ಮಧ್ಯಮಾಧಮಃ
ಸ್ಸುಖೇಚ ದುಃಖೇಚ ಜಿತೇಂದ್ರಿಯಾಶಯಃ । ಮಯೋಪಕ್ಲೃಪ್ತಾಖಿಲ
ಲೋಕಸಂಯುತೋ ವಿಧತ್ಸ್ವ ವೀರಾಖಿಲಲೋಕರಕ್ಷಣಂ ॥ ೧೩ ॥
ಶ್ರೇಯಃ ಪ್ರಜಾಪಾಲನ ಮೇವ ರಾಜ್ಞೋ ಯತ್ಸಾಂಪರಾಯೇ ಸುಕೃತಾತ್
ಷಷ್ಠ ಮಂಶಂ । ಹರ್ತಾಽನ್ಯಥಾ ಹೃತಪುಣ್ಯಃ ಪ್ರಜಾನಾ ಮರಕ್ಷಿತಾ

ದ, ಲಿಂಗಸ್ಯ - ಶರೀರಕ್ಕೆ, ಗುಣಪ್ರವಾಹಃ - ಸಂಸಾರವು, ಆದುದರಿಂದ, ಸೂರಯಃ - **ವಿದ್ವಾಂಸರು,** ಸಂಪತ್ಸು - ಸಂಪತ್ತುಗಳು, ವಿಪತ್ಸು - ವಿಪತ್ತುಗಳು, ದೃಷ್ಟಾಸು - ನೋಡಲ್ಪಟ್ಟಲ್ಲಿ, ಮಯಿ - **ನನ್ನ** ಲ್ಲಿ, ಬದ್ಧಸೌಹೃದಾಃ - ಪ್ರೀತಿಯುಳ್ಳವರಾಗಿ, ನವಿಕ್ರಿಯಂತೇ - **ವಿಕಾರವನ್ನು** ಪಡೆಯುವುದಿಲ್ಲ ॥೧೨॥ **ವೀ** ರ - ಎಲೈ ವೀರನ ! ಸುಖೇ - ಸುಖದಲ್ಲಿಯೂ, ದುಃಖೇಚ - ದುಃಖದಲ್ಲಿಯೂ, ಸಮಃ - **ಸಮನಾದ** ಸಮಾ...ಮಃ-ಉತ್ತಮ, ಮಧ್ಯಮ, ಅಧಮರನ್ನು ಸಮಾನರನ್ನಾಗಿ ಕಾಣುವ, ಜಿತೇಂ...ಯಃ-**ಇಂದ್ರಿ** ಯಮನಸ್ಸುಗಳನ್ನು ಗೆದ್ದಿರುವ ನೀನು, ಮಯಾ - ನನ್ನಿಂದ, ಉಪ...ತಃ, ಉಪಕ್ಲೃಪ್ತ - **ಸಂಪಾದಿ** ಸಲ್ಪಟ್ಟ, ಅಖಿಲ - ಸಕಲವಾದ, ಲೋಕ - ಮಂತ್ರಿಮೊದಲಾದವರಿಂದ, ಸಂಯುತಃ - **ಕೂಡಿದವನಾಗಿ,** ಅಖಿಲ...ಣಂ - ಸಕಲಜನರಕ್ಷಣೆಯನ್ನೂ, ವಿಧತ್ಸ್ವ-ಮಾಡು, ॥೧೩॥ ಯತ್-ಯಾವ**ಕಾರಣದಿಂದ, ಸಾಂಪ** ರಾಯೇ - ಪರಲೋಕದಲ್ಲಿ, ಸುಕೃತಾತ್ - ಪ್ರಜೆಗಳ ಪುಣ್ಯದಿಂದ, ಷಷ್ಠಂ - ಆರನೆಯ, ಅಂಶಂ - **ಭಾ** ಗವನ್ನು, ಹರ್ತಾ - ಪಡೆಯುವನೋ, ಅನ್ಯಥಾ - ಇಲ್ಲವಾದರೆ, ಅರಕ್ಷಿತಾ - ರಕ್ಷಿಸದೆ, **ಕರಹಾರಃ - ಕಾ** ಣಿಕೆಯನ್ನು ಪಡೆಯುವವನು, ಹೃತಪುಣ್ಯಃ - ಪುಣ್ಯವನ್ನು ಕಳೆದುಕೊಂಡು, ಪ್ರಜಾನಾಂ - **ಪ್ರಜೆಗಳ,** ಅಘಂ - ಪಾಪವನ್ನು, ಅತ್ತಿ - ಅನುಭವಿಸುತ್ತಾನೆ, ಅತಃ - ಆದುದರಿಂದ, ರಾಜ್ಞಃ - ರಾಜನಿಗೆ, **ಪ್ರಜಾ** ಪಾಲನಮೇವ - ಪ್ರಜಾರಕ್ಷಣವೇ, ಶ್ರೇಯಃ - ಶ್ರೇಯಸ್ಕರವು.

ಏವಂ - ಇಂತು, ದ್ವಿಜಾ...ನಃ, ದ್ವಿಜಾಗ್ರ್ಯ - ಬ್ರಾಹ್ಮಣಶ್ರೇಷ್ಠರಿಗೆ, ಅನುಮತ - **ಸಮ್ಮತವಾ**

ದ್ರಿಯ, ಚಿದಾಭಾಸಗಳ ಸಂಘಾತವೆನಿಸಿ, ದೇವಮನುಷ್ಯಾದಿರೂಪದಿಂದ ಭಿನ್ನವಾಗಿ ರುವ ಶರೀರಕ್ಕೆ ಇರುವುದೇ ಹೊರತು ಪರಮಾತ್ಮನಿಗಿಲ್ಲ. ಇದನ್ನು ತಿಳಿದೇ ಜ್ಞಾನಿಗಳಾದ ವರು ನನ್ನಲ್ಲಿ (ಹರಿ) ಪ್ರೀತಿಯುಳ್ಳವರಾಗಿ ಸಂಪತ್ತುವಿಪತ್ತುಗಳೆರಡರಲ್ಲಿಯೂ ವಿಕಾ ರವನ್ನು ಪಡೆಯುವುದಿಲ್ಲ ॥ ೧೨ ॥ ಅಯ್ಯಾ ಶೂರನಾದ ಪೃಥುವೆ ! ನೀನು ಜ್ಞಾನಿಯಾದ ವನು. ಆದುದರಿಂದ ಉತ್ತಮ, ಮಧ್ಯಮ, ಅಧಮರಲ್ಲಿ ಸಮದೃಷ್ಟಿಯನ್ನಿಟ್ಟು ಸುಖ ದುಃಖಗಳಲ್ಲಿ ಹಿಗ್ಗಿತಗ್ಗದೆ ಇಂದ್ರಿಯಗಳನ್ನು ಜಯಿಸಿ ದೃಢಮನಸ್ಕನಾಗಿ, ನಾನು ಸಂಪಾ ದಿಸಿಕೊಟ್ಟಿರುವ ಮಂತ್ರಿಪುರೋಹಿತಾದಿಗಳ ಸಹಾಯದಿಂದ ಸಕಲ ಪ್ರಜೆಗಳನ್ನೂ ಸ ಲಹು ॥೧೩॥ ರಾಜಧರ್ಮಾನುಸಾರವಾಗಿ ರಾಜ್ಯವನ್ನಾಳುವ ಭೂಪತಿಯು ಪ್ರಜೆಗಳಿಂದ ಕಾಣಿಕೆಗಳನ್ನೂ, ತನ್ನ ಪ್ರಜೆಗಳ ಪುಣ್ಯದಲ್ಲಿ ಷಷ್ಠಾಂಶವನ್ನೂ, ಪಡೆದು ಈ ಲೋಕ ದಲ್ಲಿ ಕೀರ್ತಿಸುಖಗಳಿಂದ ಬಾಳುವನಲ್ಲದೆ ಪರಲೋಕದಲ್ಲಿ ಕೂಡ ಸದ್ಗತಿಯನ್ನು ಹೊಂ ದುವನು. ಅಂತಿಲ್ಲದೆ ಅನ್ಯಾಯವಾಗಿ ಪ್ರಜೆಗಳಿಂದ ಕಾಣಿಕೆಗಳನ್ನು ಪಡೆಯುವವನು, ತನ್ನ ಪುಣ್ಯಗಳನ್ನೆಲ್ಲಾ ಪ್ರಜೆಗಳಿಗಿತ್ತು ಪ್ರಜೆಗಳ ಪಾಪಕ್ಕೆ ತಾನು ಭಾಗಿಯಾಗುವನು. ಆದುದರಿಂದ ರಾಜನಾದವನಿಗೆ ಪ್ರಜಾಪಾಲನಕ್ಕಿಂತಲೂ ಶ್ರೇಯಸ್ಕರವಾದ ಕಾರ್ಯ

ಕರಹಾರೋಽಘ ಮತ್ತಿ ॥ ೧೪ ॥ ಏವಂ ದ್ವಿಜಾಽಗ್ರ್ಯಾಽನುಮತಾಽನು ವೃತ್ತಧರ್ಮಪ್ರಧಾನೋಽನ್ಯತಮೋಽವಿತಾಽಸ್ಯಾಃ । ಹ್ರಸ್ವೇನ ಕಾಲೇನ ಗೃಹೋಪಯಾತಾನ್ ದ್ರಷ್ಟಾಸಿ ಸಿದ್ಧಾನನುರಕ್ತಲೋಕಃ ॥ ವರಂಚ ಮತ್ಕಂಚನ ಮಾನವೇಂದ್ರ ! ವೃಣೀಷ್ವ ತೇಽಹಂ ಗುಣಶೀಲಯಂತ್ರಿತಃ । ನಾಽಹಂ ಮಖೈರ್ವೈ ಸುಲಭಸ್ತಪೋಭಿ ರ್ಯೋಗೇನ ವಾ ಯತ್ಸಮಚಿತ್ತವರ್ತೀ ॥ ೧೬ ॥ ಮೈತ್ರೇಯಃ ॥ ಸ ಇತ್ಥಂ ಲೋಕಗುರುಣಾ ವಿಷ್ವಕ್ಸೇನೇನ ವಿಶ್ವಜಿತ್ । ಅನುಶಾಸಿತ ಆದೇಶಂ ಶಿರಸಾ ಜಗೃಹೇ ಹರೇಃ ॥ ೧೭ ॥ ಸ್ಪೃಶಂತಂ ಪಾದಯೋಃ ಪ್ರೇಮ್ಣಾ ವ್ರೀ

ದ, ಅನುವೃತ್ತ - ಅನುಸರಿಸಲ್ಪಟ್ಟ, ಧರ್ಮ - ಧರ್ಮವೇ, ಪ್ರಧಾನಃ - ಮುಖ್ಯವಾಗುಳ್ಳ, ಅನುರಕ್ತಲೋಕಃ - ಪ್ರಜಾನುರಾಗವುಳ್ಳ ನೀನು, ಅನ್ಯತಮಃ - ಪ್ರಜೆಗಳಲ್ಲೊಬ್ಬನಂತೆ, ಅಸ್ಯಾಃ- ಈ ಭೂಮಿಯನ್ನು, ಅವಿತಾ - ರಕ್ಷಿಸುವವನಾಗಿ, ಹ್ರಸ್ವೇನ - ಅಲ್ಪವಾದ, ಕಾಲೇನ- ಕಾಲದಿಂದ, ಗೃಹೋಪಯಾತಾನ್ ಮನೆಗೆಬಂದ, ಸಿದ್ಧಾನ್ - ಸನಕಾದಿಗಳನ್ನು, ದ್ರಷ್ಟಾಸಿ - ಕಾಣುವೆ ॥೧೫॥ ಮಾನವೇಂದ್ರ - ಜನಪತಿಯೆ ! ಅಹಂ - ನಾನು, ಯತ್ - ಯಾವಕಾರಣದಿಂದ, ಸಮಚಿತ್ತವರ್ತೀ - ಸಮದರ್ಶಿಗಳಲ್ಲಿ ನೆಲಸಿರುವೆನೋ, ಆ ಕಾರಣದಿಂದ, ಮಖೈಃ - ಯಜ್ಞಗಳಿಂದಾಗಲಿ, ತಪೋಭಿಃ - ತಪಸ್ಸುಗಳಿಂದಾಗಲಿ, ಯೋಗೇನವಾ - ಯೋಗಾಭ್ಯಾಸದಿಂದಾಗಲಿ, ಸುಲಭಃ - ಸುಲಭನಲ್ಲ, ಅಹಂ - ಆ ನಾನು, ತೇ - ನಿನ್ನ, ಗುಣ...ತಃ - ಶಮಾದಿಗುಣಗಳಿಂದಲೂ, ಸ್ವಭಾವದಿಂದಲೂ, ಕಟ್ಟುಬಿದ್ದಿರುವೆನು. ಮತ್ - ನನ್ನಿಂದ, ಕಂಚನ - ಯಾವುದನ್ನಾದರೂ, ವರಂ - ವರವನ್ನು, ವೃಣೀಷ್ವ - ವರಿಸು, ॥೧೬॥ ಮೈತ್ರೇಯನು ಹೇಳುತ್ತಾನೆ— ವಿಶ್ವಜಿತ್ - ಜಗಜ್ಜೇತೃವಾದ, ಸಃ - ಆ ಪೃಥುರಾಜನು, ಇತ್ಥಂ - ಇಂತು, ಲೋಕಗುರುಣಾ - ಜಗದ್ಗುರುವಾದ, ವಿಷ್ವಕ್ಸೇನೇನ - ವಿಷ್ಣುವಿನಿಂದ, ಅನುಶಾಸಿತಃ - ಆಜ್ಞಾಪಿಸಲ್ಪಟ್ಟವನಾಗಿ, ಹರೇಃ - ವಿಷ್ಣುವಿನ, ಆದೇಶಂ - ಅಪ್ಪಣೆಯನ್ನು, ಶಿರಸಾ - ತಲೆಯಲ್ಲಿ, ಜಗೃಹೇ - ಗ್ರಹಿಸಿದನು, ॥೧೭॥ ಪಾದ

ವಾವುದೂ ಇಲ್ಲ ॥ ೧೪ ॥ ಇಂತು, ಜ್ಞಾನಿಗಳಾದ ಬ್ರಹ್ಮಣೋತ್ತಮರಿಗೆ ಸಮ್ಮತವಾಗಿಯೂ ಪರಂಪರಾಪ್ರಾಪ್ತವಾಗಿಯೂ ಇರುವ ಕುಲಧರ್ಮವನ್ನು ಬಿಡದೆ ನಡೆಯಿಸುತ್ತಾ "ನನ್ನಿಂದಲೇ ಲೋಕವು ರಕ್ಷಿತವಾಗುವುದು" ಎಂಬ ಅಭಿಮಾನವನ್ನಿಟ್ಟುಕೊಳ್ಳದೆ, ಪ್ರಜೆಗಳಲ್ಲಿ ಪ್ರಿಯನಾಗಿದ್ದುಕೊಂಡು ಭೂಮಿಯನ್ನಾಳುತ್ತಾ, ಪ್ರಜಾನುರಂಜಕನಾಗಿ, ಕೊಂಚಕಾಲದಲ್ಲಿಯೇ ನಿನ್ನ ಮನೆಗೆ ಬರುವ ಸನಕಾದಿ ಸಿದ್ಧರನ್ನು ಕಂಡು ಕೃತಾರ್ಥನಾಗುವೆ ॥ ೧೫ ॥ ಎಲೈ ರಾಜೇಂದ್ರನೆ ! ನಾನು ಸಮದರ್ಶಿಗಳಾದ ಮಹಾತ್ಮರಲ್ಲಿರುವವನಾದುದರಿಂದ ಅಂತಿಲ್ಲದವರಿಗೆ ಯಜ್ಞಗಳಿಂದಾಗಲಿ, ತಪಸ್ಸುಗಳಿಂದಾಗಲಿ, ಯೋಗದಿಂದಾಗಲಿ, ವಶನಾಗತಕ್ಕವನಲ್ಲ. ಈಗ ನಾನು ನಿನ್ನಶಮದಮಾದಿ ಗುಣಗಳಿಂದಲೂ, ಒಳ್ಳೆಯ ಸ್ವಭಾವದಿಂದಲೂ ನಿನಗೆ ವಶನಾಗಿರುವೆನು. ನನ್ನಿಂದ ಯಾವ ವರವು ಬೇಕೋ ಕೇಳು. ಎಂದು ಹೇಳಿದನು ॥೧೬॥ ಅಯ್ಯಾ ವಿದುರನೆ ! ಇಂತು ಲೋಕಗುರುವಾದ ಭಗವಂತನಾಡಿದ ನುಡಿಗಳನ್ನು ಕೇಳಿ ಜಗಜ್ಜೇತೃವಾದ ಪೃಥುರಾಜನು ಭಗವಂತನಾದೇಶವನ್ನು ತಲೆಯಲ್ಲಿ ಧರಿಸಿದನು ॥ ೧೭ ॥ ಬಳಿಕ ದೇವರಾಜನಾದ ಇಂದ್ರನು ತಾನು

ಡಿತಂ ಸ್ವೇನ ಕರ್ಮಣಾ । ಶತಕ್ರತುಂ ಪರಿಷ್ವಜ್ಯ ವಿದ್ವೇಷಂ ವಿಸಸ
ರ್ಜಹ ॥ ೧೮ ॥ ಭಗವಾನಥ ವಿಶ್ವಾತ್ಮಾ ಪೃಥುನೋಪಹೃತಾಽರ್ಹ
ಣಃ । ಸಮುಜ್ಜಿಹಾನಯಾ ಭಕ್ತ್ಯಾ ಗೃಹೀತಚರಣಾಂಬುಜಃ ॥ ೧೯ ॥
ಪ್ರಸ್ಥಾನಾಽಭಿಮುಖೋಽಪ್ಯೇನ ಮನುಗ್ರಹವಿಲಂಬಿತಃ । ಪಶ್ಯನ್ ಪದ್ಮ
ಪಲಾಶಾಕ್ಷೋ ನಪ್ರತಸ್ಥೇ ಸುಹೃ ತ್ಸತಾಂ ॥ ೨೦ ॥ ಸ ಆದಿರಾಜೋ
ರಚಿತಾಂಜಲಿ ರ್ಹರಿಂ ವಿಲೋಕಿತುಂ ನಾಽಶಕ ದಶ್ರುಲೋಚನಃ ॥ ನಕಿಂ
ಚನೋವಾಚ ಸ ಬಾಷ್ಪವಿಹ್ವಲೋ ಹೃದೋಪಗೂಹ್ಯಾಽಮು ಮಧಾ
ದವಸ್ಥಿತಃ ॥ ೨೧ ॥ ಅಥಾಽವಮೃಜ್ಯಾಽಶ್ರುಕಲಾ ವಿಲೋಕಯ ನ್ನತೃ

---

ಯೋಃ - ಕಾಲುಗಳಲ್ಲಿ, ಸ್ಪೃಶಂತಂ - ಮುಟ್ಟುತ್ತಿರುವ, ಸ್ವೇನ - ತನ್ನ, ಕರ್ಮಣಾ - ಕಾರ್ಯದಿಂದ ವ್ರೀಡಿತಂ - ನಾಚಿರುವ, ಶತಕ್ರತುಂ - ಇಂದ್ರನನ್ನು, ಪ್ರೇಮ್ಣಾ - ಪ್ರೀತಿಯಿಂದ, ಪರಿಷ್ವಜ್ಯ - ಆಲಿಂಗಿಸಿ, ವಿದ್ವೇಷಂ - ಅಧಿಕವಾದ ದ್ವೇಷವನ್ನು, ವಿಸಸರ್ಜಹ - ಬಿಟ್ಟನು ॥೧೮॥ ಅಥ - ಬಳಿಕ, ವಿಶ್ವಾತ್ಮಾ - ಜಗದ್ರೂಪನಾದ, ಪದ್ಮ ...ಕ್ಷಃ-ತಾವರೆಯೆಸಳಿನಂತೆ ಕಣ್ಣುಳ್ಳ, ಭಗವಾನ್ - ಭಗವಂತನು ಪೃಥುನಾ - ಪೃಥುವಿನಿಂದ, ಉಪ...ಣಃ - ಒದಗಿಸಲ್ಪಟ್ಟ ಪೂಜಾದ್ರವ್ಯವುಳ್ಳವನಾಗಿ, ಸಮುಜ್ಜಿಹಾನಯಾ - ಬೆಳೆಯುತ್ತಿರುವ, ಭಕ್ತ್ಯಾ-ಯಿಂದ, ಗೃಹೀ...ಜಃ - ಕಾಲಿಗೆರಗಲ್ಪಟ್ಟು, ಪ್ರಸ್ಥಾ...ಪಿ - ಪ್ರಯಾಣಕ್ಕೆ ಸಿದ್ಧನಾಗಿದ್ದರೂ, ಸತಾಂ - ಸಾಧುಗಳಿಗೆ, ಸುಹೃತ್ - ಬಂಧುವಾದುದರಿಂದ, ಏನಂ - ಇವನನ್ನು, ಪಶ್ಯನ್-ನೋಡುತ್ತಾ, ಅನು...ತಃ-ಅನುಗ್ರಹಕ್ಕಾಗಿ ಸಾವಕಾಶಮಾಡಿ, ನಪ್ರತಸ್ಥೇ-ಹೊರಡಲಿಲ್ಲ ॥೨೦॥ ಸಆದಿರಾಜಃ - ಆ ಪೃಥುವು, ರಚಿತಾಂಜಲಿಃ - ಕೈ ಮುಗಿದುಕೊಂಡು, ಅಶ್ರುಲೋಚನಃ-ಕಂಬನಿದುಂಬಿ, ಹರಿಂ - ಹರಿಯನ್ನು, ವಿಲೋಕಿತುಂ - ನೋಡುವುದಕ್ಕೆ, ನಾಶಕತ್ - ಶಕ್ತನಾಗಲಿಲ್ಲ, ಬಾಷ್ಪವಿಹ್ವಲಃ-ಕಂಬನಿಯಿಂದ ಗದ್ಗದಸ್ವರವುಳ್ಳವನಾಗಿ, ಅವಸ್ಥಿತಃ - ಇದ್ದುಕೊಂಡು, ಸಃ - ಅವನು, ಕಿಂಚನ-ಕೊಂಚವನ್ನೂ, ನೋವಾಚ - ಹೇಳಲಿಲ್ಲ, ಅಮುಂ - ಈ ಹರಿಯನ್ನು, ಹೃದಾ - ಮನಸ್ಸಿನಿಂದ, ಉಪಗೂಹ್ಯ - ಆಲಿಂಗಿಸಿ, ಅಧಾತ್ - ಧರಿಸಿದನು ॥೨೧॥ ಅಥ - ಬಳಿಕ, ಅಶ್ರುಕಲಾಃ - ಕಂಬನಿಗಳನ್ನು, ಅ

---

ಮಾಡಿದ ದುಷ್ಕಾರ್ಯದಿಂದ ನಾಚಿದವನಾಗಿ, ಕಾಲಿಗೆರಗಲು, ಪೃಥುರಾಜನು ಪರಮ ಪ್ರೀತಿಯಿಂದ ಅವನನ್ನು ಅಪ್ಪಿಕೊಂಡು, ತನಗಿದ್ದ ದ್ವೇಷವನ್ನೆಲ್ಲಾ ತೊರೆದು ಬಿಟ್ಟನು॥ ತರುವಾಯ ಸರ್ವಾತ್ಮಕನೂ, ಕಮಲನೇತ್ರನೂ, ಆದ ಭಗವಂತನು ಪ್ರಯಾಣ ಸನ್ನದ್ಧನಾದರೂ, ಭಕ್ತಪ್ರಿಯನಾದುದರಿಂದ ಪೂಜೋಪಕರಣಗಳನ್ನು ಅಣಿಮಾಡಿಕೊಂಡು, ಅಡಿಗಡಿಗೂ ಬೆಳೆಯುತ್ತಿರುವ ಪರಮಭಕ್ತಿಯಿಂದ ಪಾದಕಮಲಗಳನ್ನು ಪೂಜಿಸಿದ ಭಕ್ತಾಗ್ರೇಸರನಾದ ಆ ಪೃಥುವನ್ನು ಕಂಡು, ಅನುಗ್ರಹಿಸಬೇಕೆಂದು ತಳುವುತ್ತಾ ಪ್ರಯಾಣಮಾಡಲಿಲ್ಲ ॥೨೦॥ ಆಗ ಆದಿರಾಜನಾದ ಪೃಥುಭೂಪಾಲನು, ಭಕ್ತಿಯಿಂದ ಕೈಗಳನ್ನು ಮುಗಿದು, ಕಣ್ಣುತುಂಬ ಕಂಬನಿಗಳು ತುಂಬಿಕೊಳ್ಳಲು, ಭಗವಂತನನ್ನು ನೋಡುವುದಕ್ಕೂ ಅಡ್ಡಿಯಾಗಿ, ಸಂತೋಷಾತಿಶಯದಿಂದ ಗಂಟಲುಬ್ಬಿ ಗದ್ಗದ ಧ್ವನಿಯಿಂದ ಮಾತನಾಡಲಾರದೆ ಕೊಂಚ ಹೊತ್ತಿನವರೆಗೂ ಮನಸ್ಸಿನಲ್ಲಿ ಭಗವಂತನನ್ನು ಧ್ಯಾನಿಸುತ್ತಾ ಸುಮ್ಮನಿದ್ದನು ॥ ೨೧ ॥ ತರುವಾಯ ಕಣ್ಣುಗಳಿಂದುರುಳುತ್ತಿರುವ ಆನಂದ ಬಾಷ್ಪಗಳನ್ನೊರಸಿಕೊಂಡು, ನೋ

ಪ್ತ್ರದೃಗ್ಗೋಚರ ಮಾಹ ಪೂರುಷಂ । ಪದಾಸ್ಪೃಶಂತಂ ಕ್ಷಿತಿ ಮಂಸ ಉ
ನ್ನತೇ ವಿನ್ಯಸ್ತಹಸ್ತಾಗ್ರ ಮುರಂಗವಿದ್ವಿಷಃ ॥ ೨೨ ॥ ಪೃಥುಃ ॥
ವರಾನ್ ವಿಭೋ ! ತ್ವ ದ್ವರದೇಶ್ವರಾ ದ್ಬುಧಃ ಕಥಂ ವೃಣೀತೇ ? ಗುಣ
ವಿಕ್ರಿಯಾತ್ಮನಾಂ । ಯೇ ನಾರಕಾಣಾ ಮಪಿ ಸಂತಿ ದೇಹಿನಾಂ ತಾನೀಶ!
ಕೈವಲ್ಯಪತೇ! ವೃಣೇ ನಚ ॥ ೨೩ ॥ ನಕಾಮಯೇ ನಾಥ ! ತದಪ್ಯಹಂ
ಕ್ವಚಿ ನ್ನಯತ್ರ ಯುಷ್ಮಚ್ಚರಣಾಂಬುಜಾಸವಃ । ಮಹತ್ತಮಾಂತರ್ಹೃದ

ಮಮೃಜ್ಯ - ತೊಡೆದು, ವಿಲೋಕಯನ್ - ನೋಡುತ್ತಾ, ಅತೃ....ರಂ - ದಣಿಯದಿರುವ ಕಣ್ಣುಗಳಿಗೆ ಕಾಣುತ್ತಿರುವ, ಕ್ಷಿತಿಂ - ಭೂಮಿಯನ್ನು, ಪದಾ - ಕಾಲಿನಿಂದ, ಸ್ಪೃಶಂತಂ - ಮುಟ್ಟಿರುವ, ಉರಂಗವಿದ್ವಿಷಃ - ಸರ್ಪಗಳಿಗೆ ವೈರಿಯಾದ ಗರುಡನ, ಉನ್ನತೇ - ಎತ್ತರವಾದ, ಅಂಸೇ - ಹೆಗಲಲ್ಲಿ, ವಿನ್ಯ....ಗ್ರಂ ಮುಂಗೈಯನ್ನಿರಿಸಿರುವ, ಪೂರುಷಂ - ಭಗವಂತನನ್ನು ಕುರಿತು, ಆಹ-ಹೇಳುತ್ತಾನೆ ॥೨೨॥ ವಿಭೋ-ಎಲೈ ಪ್ರಭುವೆ! ಯೇ - ಯಾವವಿಷಯರೂಪಗಳಾದವರಗಳು, ಗುಣ ... ನಾಂ, ಗುಣವಿಕ್ರಿಯ - ಅಹಂಕಾರವೇ, ಆತ್ಮನಾಂ - ಸ್ವಭಾವವಾಗುಳ್ಳ, ನಾರಕಾಣಾಂ - ನರಕವಾಸಿಗಳಾದ, ದೇಹಿನಾಮಪಿ - ಸಂಸಾರಿಗಳಿಗೂ, ಸಂತಿ - ಇರುವುವೋ, ತಾನ್ವರಾನ್ - ಅವುಗಳನ್ನು, ಬುಧಃ - ಆತ್ಮಾನಾತ್ಮ ವಿವೇಕವುಳ್ಳವನು, ವರದೇಶ್ವರಾತ್ - ವರಗಳನ್ನು ಕೊಡುವ ದೇವತೆಗಳಿಗೆಲ್ಲಾ, ಈಶ್ವರಾತ್-ಒಡೆಯನಾದ, ತ್ವತ್ತಃ - ನಿನ್ನಿಂದ, ಕಥಂ - ಹೇಗೆ, ವೃಣೀತೇ - ವರಿಸುವನು, ಆದುದರಿಂದ ಈಶ - ಲೋಕೇಶ್ವರನೆ ! ಕೈವಲ್ಯಪತೇ - ಮುಕ್ತಿನಾಯಕನೆ ! ನಚವೃಣೇ - ನಾನು ವರಿಸುವುದಿಲ್ಲ ॥೨೩॥ ನಾಥ - ಒಡೆಯನೆ ! ಯತ್ರ - ಎಲ್ಲಿ ಮಹ...ತ್, ಮಹತ್ತಮ - ಜ್ಞಾನಿಗಳ, ಅಂತರ್ಹೃದಯಾತ್ - ಹೃದಯದಿಂದ, ಮುಖಚ್ಯುತಃ - ಮುಖದಿಂದ ಜಾರಿದ, ಯುಷ್ಮ...ವಃ ಯುಷ್ಮತ್ - ನಿನ್ನ, ಚರಣಾಂಬುಜ - ಪಾದಕಮಲದ, ಆಸವಃ -

ಹುತ್ತಾ, ಎಷ್ಟು ನೋಡಿದರೂ ದಣಿಯದಂತಿರುವ ಕಣ್ಣುಗಳಿಗೆ ಗೋಚರನಾಗಿ, ದೇವತೆಗಳು ಭೂಸ್ಪರ್ಶವನ್ನು ಮಾಡುವದಿಲ್ಲವೆಂಬ ನಿಯಮವಿದ್ದರೂ ಕೃಪಾಪರವಶನಾಗಿ ಮೈಮರೆತನೋ, ಎಂಬಂತೆ ಕಾಲ್ತುದಿಯಿಂದ ನೆಲವನ್ನು ಮುಟ್ಟಿ ಸರ್ಪವೈರಿಯಾದ ಗರುಡನ ಹೆಗಲಮೇಲೆ ಮುಂಗೈಯನ್ನಿರಿಸಿಕೊಂಡು ನಿಂದಿರುವ ಭಗವಂತನನ್ನು ಕುರಿತು ಬಿನ್ನವಿಸಿಕೊಂಡನು ॥ ೨೨ ॥ ಎಲೈ ಮುಕ್ತಿನಾಯಕನಾದ ಮುಕುಂದನೆ ! ಗುಣವಿಕಾರರೂಪವಾದ ಅಹಂಕಾರಕ್ಕೊಳಗಾಗಿ ನರಕವಾಸಿಗಳಾಗಿರುವ ಸಂಸಾರಿಗಳಿಗೆ ಕೂಡ ವರಗಳಾಗಿ ಕೊಡಲ್ಪಡುವ ವಿಷಯ ಭೋಗಗಳು ದೊರೆಯುವುವು. ಆದಕಾರಣ ಅರ್ಥಕಾಮಗಳು ನಿರತಿಶಯಗಳಲ್ಲವೆಂತಲೂ, ನಶ್ವರಗಳೆಂತಲೂ ತಿಳಿದಿರುವ ಪಂಡಿತನು ಯಾವನು ತಾನೇ ವರದಾನವನ್ನು ಮಾಡುವ ಬ್ರಹ್ಮಾದಿಗಳಿಗೂ ವರಗಳನ್ನು ದಯಪಾಲಿಸುವ ನಿನ್ನಲ್ಲಿ ಈವರಗಳನ್ನು ಬೇಡುವನು ? ಎಲೈ ಲೋಕನಾಯಕನೇ ! ಆದುದರಿಂದ ನನಗೀ ವರಗಳು ಬೇಡ ॥ ೨೩ ॥ ಭೋಗರೂಪಗಳಾದ ವರಗಳು ಬೇಡದಿದ್ದರೆ ನಿತ್ಯವಾದ ಮೋಕ್ಷವನ್ನು ಕೊಡುವೆನೆನ್ನುವೆಯಾ ? ಎಲೈ ಜಗನ್ನಾಥನೆ ! ಭಾಗವತೋತ್ತಮರ ಹೃದಯದಿಂದ ಮುಖದ್ವಾರವಾಗಿ ಹೊರಹೊಮ್ಮುವ ನಿನ್ನ ಚರಣಾರವಿಂದಮಕರಂದ ವೆಂಬುದು ಯಾವಸ್ಥಳದಲ್ಲಿರುವುದಿಲ್ಲವೊ, ಅದು ಕೈವಲ್ಯಪದವಾಗಿದ್ದರೂ ನನಗೆ ಬೇಡ. ನಿರಂತರವೂ

ಯಾನ್ಮುಖಚ್ಯುತೋ ವಿಧತ್ಸ್ವ ಕರ್ಣಾಯುತ ಮೇಷಮೇ ವರಃ ॥೨೪॥
ಸ ಉತ್ತಮ ಶ್ಲೋಕ ! ಮಹನ್ಮುಖಚ್ಯುತೋ ಭವತ್ಪದಾಂಭೋಜಸು
ಧಾಕಣಾನಿಲಃ । ಸ್ಮೃತಿಂ ಪುನ ರ್ವಿಸ್ಮೃತ ತತ್ವವರ್ತ್ಮನಾಂ ಕುಯೋ
ಗಿನಾಂ ನೋ ವಿತರತ್ಯಲಂ ವರೈಃ ॥ ೨೫ ॥ ಯಶ ಶ್ಶಿವಂ ಸುಶ್ರವ ! ಆ
ರ್ಯ ಸಂಗಮೇ ಯದೃಚ್ಛಯಾ ಚೋಪಶೃಣೋತಿ ತೇ ಸಕೃತ್ । ಕಥಂ
ಗುಣಜ್ಞೋ ವಿರಮೇ ದ್ವಿನಾಪಶುಂ ಶ್ರೀ ರ್ಯತ್ಪ್ರವವ್ರೇ ಗುಣಸಂಗ್ರಹೇ
ಚ್ಛಯಾ ॥ ೨೬ ॥ ಅಥಾ ಭಜೇ ತ್ವಾಖಿಲ ಪೂರುಷೋತ್ತಮಂ ಗುಣಾ

ಮಕರಂದವು, ನ - ಇಲ್ಲವೋ, ತದಪಿ - ಅದು ಕೈವಲ್ಯವಾದರೂ ಅದನ್ನು, ಕ್ವಚಿತ್ - ಒಮ್ಮೆಯೂ, ನಕಾಮಯೇ - ಬಯಸಲಾರೆನು, ಮೇ - ನನಗೆ, ಕರ್ಣಾಯುತಂ-ಹತ್ತುಸಾವಿರ ಕಿವಿಗಳನ್ನು ವಿಧತ್ಸ್ವ-ಮಾಡು, ಏಷಃ - ಇದೇ, ವರಃ -ವರವು ॥೨೪॥

ಉತ್ತಮಶ್ಲೋಕ-ಮಂಗಳಕೀರ್ತಿಯೆ! ಮಹ...ತಃ - ಮಹಾತ್ಮರ ಮುಖದಿಂದ ಜಾರಿದ, ಸಃ - ಆ, ಭವ....ಲಃ, ಭವತ್ - ನಿನ್ನ, ಪದಾಂಭೋಜ - ಪಾದಕಮಲದ, ಸುಧಾ - ಮಕರಂದದ, ಕಣ-ತುಂತುರಿನ ಅನಿಲಃ-ಗಾಳಿಯು, ವಿಸ್ಮೃ....ನಾಂ- ತತ್ವಮಾರ್ಗವನ್ನು ಮರೆತ, ಕುಯೋಗಿನಾಂ - ಯೋಗಭ್ರಷ್ಟರಿಗೆ, ಪುನಃ-ಮರಳಿ, ಸ್ಮೃತಿಂ - ಸ್ಮರಣೆಯನ್ನು, ವಿತರತಿ-ಕೊಡುವುದು, ನಃ - ನಮಗೆ, ವರೈಃ -ವರಗಳಿಂದ ಅಲಂ - ಸಾಕು ॥೨೫॥ ಹೇಸುಶ್ರವ-ಶುಭಕೀರ್ತಿಯೆ ! ಆರ್ಯಸಂಗಮೇ - ಸಾಧುಸಂಗಮದಲ್ಲಿ, ಯದೃಚ್ಛಯಾಪಿ - ಅಕಸ್ಮಾತ್ತಾಗಿಯಾದರೂ, ತೇ ನಿನ್ನ, ಶಿವಂ - ಮಂಗಳಕರವಾದ, ಯಶಃ - ಕೀರ್ತಿಯನ್ನು, ಯಃ - ಯಾವನು, ಸಕೃತ್ - ಒಮ್ಮೆ, ಉಪಶೃಣೋತಿ-ಕೇಳುವನೋ, ಅವನು, ಗುಣಜ್ಞಃ - ಗುಣಗಳನ್ನು ಬಲ್ಲವನಾದರೆ, ಪಶುಂವಿನಾ-ಪಶುವನ್ನುಳಿದು, ಕಥಂ-ಹೇಗೆ, ವಿರಮೇತ್ - ಬಿಟ್ಟಾನು ? ಯತ್ - ಯಾವಕಾರಣದಿಂದ, ಶ್ರೀಃ-ಲಕ್ಷ್ಮಿಯು, ಗುಣ...ಯಾ, ಗುಣ - ಕಲ್ಯಾಣಗುಣಗಳ ಅಥವಾ ಪುರುಷಾರ್ಥಗಳ, ಸಂಗ್ರಹ - ಸಮಾಹಾರವುಳ್ಳ ಚರಿತ್ರೆಯ, ಇಚ್ಛಯಾ - ಆಸೆಯಿಂದ, ಪ್ರವವ್ರೇ-ವರಿ

ನಿನ್ನ ದಿವ್ಯಕಥಾಶ್ರವಣವನ್ನು ಮಾಡುವುದಕ್ಕೆ ಅನುಕೂಲವಾಗಿರುವಂತೆ ನನಗೆ ಹತ್ತುಸಾವಿರ ಕಿವಿಗಳನ್ನು ದಯೆಪಾಲಿಸು. ಇದೇ ನನಗೆ ಬೇಕಾದ ವರವು ॥ ೨೪ ॥ ಎಲೈ ಪುಣ್ಯಶ್ಲೋಕನ ! ಮಹಾತ್ಮರ ಮುಖದಿಂದ ಹೊರಡುವ, ನಿನ್ನಪಾದಕಮಲ ಮಕರಂದ ಲೇಶದ ಗಾಳಿಯು, ತತ್ವಮಾರ್ಗವನ್ನು ಮರೆತು ಯೋಗಭ್ರಷ್ಟರಾಗಿರುವ ಜನರಿಗೂಸಹ ಕಿವಿಗೆ ಸೋಂಕಿದಕೂಡಲೇ ತತ್ವವನ್ನುಂಟುಮಾಡಿ ಕಾಮಕ್ರೋಧಾದಿಗಳನ್ನು ಕಳೆಯುವುದು. ಸಾರಗ್ರಾಹಿಗಳಾದ ನಮಗೆ ನಿನ್ನಚರಣಭಕ್ತಿಯೊಂದು ಹೊರತು ಮತ್ತಾವವರಗಳೂ ಬೇಡ ॥ ೨೫ ॥ ಎಲೈ ಪುಣ್ಯಕೀರ್ತಿಯೇ ! ಯಾವಪುರುಷನು ಸಾಧುಸಮಾಜವನ್ನು ಸೇರಿ ಆಕಸ್ಮಿಕವಾಗಿ ಒಮ್ಮೆಯಾದರೂ ನಿನ್ನದಿವ್ಯಕಥಾಶ್ರವಣವನ್ನು ಮಾಡುವನೋ, ಅವನು ಪಶುವಲ್ಲದೆ ಗುಣಜ್ಞನಾದ ಮನುಷ್ಯನೆನಿಸಿದಲ್ಲಿ, ಎಂತು ತಾನೇ ನಿನ್ನ ಚರಿತ್ರೆಯನ್ನು ಕೇಳದೇ ಸುಮ್ಮನಾದಾನು ? ಲೋಕಮಾತೆಯಾದ ರಮಾದೇವಿಯೂ ಕೂಡ ದಿವ್ಯಗುಣಭರಿತವೂ ಸಕಲೇಷ್ಟಾರ್ಥಪ್ರದವೂ ಆದ ನಿನ್ನ ದಿವ್ಯಕೀರ್ತಿಯನ್ನು ಗ್ರಹಿಸಲೆಳಸಿ ಸೇವಿಸುತ್ತಿರುವಳಾದುದರಿಂದ ಇದು ಸಾಮಾನ್ಯವೇ ! ॥೨೬ ॥ ಆದುದರಿಂದ ರಮಾದೇವಿಯಂತೆ

ಲಯಂ ಪದ್ಮಕರೇವ ಲಾಲಸಃ । ಅಪ್ಯಾವಯೋರೇಕಪತಿಸ್ಪೃಧೋಃ ಕಲಿ
ರ್ನಸ್ಯಾತ್ಕೃತತ್ವಚ್ಚರಣೈಕತಾನಯೋಃ ॥ ೨೩ ॥ ‡ ಜಗಜ್ಜನನ್ಯಾಂ
ಜಗದೀಶ ! ವೈಶಸಂ ಸ್ಯಾದೇವ ಯತ್ಕರ್ಮಣಿ ನಸ್ಸವಿಾಹಿತಂ । ಕರೋತಿ

ರುವಳೋ ॥ ೨೨ ॥ ಅಥ - ಆದುದರಿಂದ, ಪದ್ಮಕರೇವ - ಲಕ್ಷ್ಮಿಯಂತೆ, ಲಾಲಸಃ - ತವಕದಿಂದ, ಸಿಅಖಿ...ಮಂ-ಸಕಲ ಪುರುಷರಿಗೂ ಶ್ರೇಷ್ಠನಾದ, ಗುಣಾಲಯಂ - ಗುಣನಿಧಿಯಾದ, ತ್ವಾಂ - ನಿನ್ನನ್ನು ಆಭಜೇ - ಪೂಜಿಸುವೆನು, ಏಕ...ಧೋಃ-ಒಬ್ಬ ಒಡೆಯನನ್ನು ಬಯಸುತ್ತಿರುವ, ಕೃತ....ಯೋಃ - ನಿನ್ನಪಾದಗಳನ್ನೆಡಬಿಡದಿರುವ, ಆವಯೋಃ - ನಮ್ಮಿರ್ವರಿಗೂ, ಕಲಿಃ - ಜಗಳವು, ಅಪಿನಸ್ಯಾತ್ - ಆಗುವುದಿಲ್ಲವೆ ? ॥೨೩॥ ಜಗದೀಶ - ಲೋಕನಾಥನೆ ! ಜಗಜ್ಜನನ್ಯಾಂ- ಲೋಕಮಾತೆಯಾದ ಲಕ್ಷ್ಮಿಯಲ್ಲಿ, ವೈಶಸಂ - ವಿರೋಧವು, ಸ್ಯಾದೇವ - ಆಗುವುದೇದಿಟ, ಆಗಲಿ, ಯತ್ಕರ್ಮಣಿ - ಯಾರಕೆಲಸದಲ್ಲಿ, ನಃ -

ನಿನ್ನ ಕಥಾಶ್ರವಣದಲ್ಲಾಸಕ್ತನಾಗಿ, ಪುರುಷೋತ್ತಮನೂ, ಕಲ್ಯಾಣಗುಣನಿಧಿಯೂ, ಆದ ನಿನ್ನನ್ನು ಧ್ಯಾನಿಸುವೆನು. ಇಂತಾದಲ್ಲಿ ಒಬ್ಬಒಡೆಯನನ್ನೇ ಪ್ರೀತಿಸುತ್ತಾ ನಿನ್ನ ಪಾದಕಮಲಗಳನ್ನೆಡಬಿಡದೆ ನಂಬಿರುವ ನಾನು ಮತ್ತು ರಮಾದೇವಿಯು ಇವರೀರ್ವರಿಗೂ ಕಲಹವುಂಟಾಗದಿರಲಾರದು ॥ ೨೩ ॥ ಅಯ್ಯಾಜಗದೀಶನೇ ! ಜಗಜ್ಜನನಿಯಾದ ರಮಾದೇವಿಯು ಮಾಡುವ ಕಾರ್ಯವನ್ನೇ ನಾನೂ ಮಾಡತೊಡಗಿರುವದರಿಂದ ಆಕೆಗೆ ನನ್ನಲ್ಲಿ

‡ (೧) ವೀ. ಎಲೈ ಜಗನ್ನಾಯಕನೆ ! ಅನಾದಿಯಾದ ಪ್ರಕೃತಿಯ ವಶದಿಂದ, ನಾವು ಮಾಡುವ ಯಜ್ಞಾದಿಕರ್ಮಗಳು ಆರಾಧನ ರೂಪಗಳೆಂಬುದನ್ನರಿಯದೆ, ಪ್ರರೋಚನಕ್ಕಾಗಿ ಬೋಧಿಸುವ ವೇದದ ಅರ್ಥವಾದ ವಾಕ್ಯಗಳಿಂದ ಈ ಕರ್ಮಗಳಿಗೆ ಪಶು, ಪುತ್ರ, ವೃಷ್ಟಿ, ಅನ್ನ, ಸ್ವರ್ಗಮೊದಲಾದ ಐಹಿಕಾಮುಷ್ಮಿಕ ಸುಖಗಳೇ ಫಲವೆಂದು ತಿಳಿದು ಕರ್ಮಗಳನ್ನು ಮಾಡುತ್ತಿರುವೆವು. ಆದರೂ ದೀನದಯಾಳುವಾದ ನೀನು ನಮ್ಮ ತಪ್ಪನ್ನೆಣಿಸದೆ, ಅಲ್ಪವಾದ ಫಲತೃಷ್ಣೆಯನ್ನು ಕಳೆದು, ನಮ್ಮ ಕರ್ಮಗಳನ್ನು ನಿತ್ಯಫಲಸಾಧನಗಳನ್ನಾಗಿಮಾಡು. ಲೋಕದಲ್ಲಿ ಆತ್ಮಾರಾಮನಾದವನಿಗೆ ಸ್ವರ್ಗಾದಿ ಫಲಗಳು ಅತಿ ತುಚ್ಛಗಳಲ್ಲವೆ ?

(೨) ವಿ. ಎಲೈ ಅಖಂಡೇಶನೆ ! ರಜಃ ಪ್ರಧಾನವಾದ ಈ ಲೋಕದಲ್ಲಿ ಕಲಿಸ್ವಭಾವವಾದ ಕಲಹವೆಂಬುದು ಪ್ರಾಣಿಗಳ ಸ್ವಭಾವದಿಂದುಂಟಾಗುವುದೇ ಹೊರತು, ಭಗವದ್ಭಕ್ತರಲ್ಲುಂಟಾಗುವುದಿಲ್ಲ. ಭಕ್ತವತ್ಸಲನಾದ ಭಗವಂತನಿಗೆ ಭಕ್ತರಿಗಿಂತಲೂ ರಮಾದೇವಿಯು ದೊಡ್ಡವಳಲ್ಲ.

(೩) ಸಾ. ಎಲೈ ತಂದೆಯೆ ! ನಿನ್ನಪಾದ ಪರಿಚರಣ ವಿಷಯದಲ್ಲಿ ತಾಯಿಯಾದ ಲಕ್ಷ್ಮಿದೇವಿಗೂ ನನಗೂ ಕಲಹವುಂಟಾಗಬಹುದು. ಆದುದರಿಂದ ಆರಮಾದೇವಿಯು ನಿನ್ನ ವಕ್ಷಸ್ಥಲದಲ್ಲಿಯೇ ವಿಹರಿಸಿಕೊಂಡಿರಲಿ. ನಾನು ಚರಣಪರಿಚರಣದಲ್ಲಿರುವೆನು. ಹಾಗಿಲ್ಲದೆ 'ನಾನು ಹಿರಿಯವಳು, ನೀನು ಕಿರಿಯವನು, ನಾನು ಉತ್ತಮಳು, ನೀನು ನಿಕೃಷ್ಟನು'' ಎಂದು ಆಕೆಯು ನನ್ನೊಡನೆ ಸಣಿಸಿದರೂ, ಭಕ್ತವತ್ಸಲನಾದ ನೀನು ನನ್ನಲ್ಲಿಯೇ ಪಕ್ಷಪಾತವನ್ನು ತೋರುವೆಯಾದುದರಿಂದ ನಾನು ಹೆದರುವುದಿಲ್ಲ. ಶ್ಲೋ॥ ಕೃಪಾಂ ತಸ್ಯ ಸಮಾಶ್ರಿತ್ಯ ಪ್ರೌಢಿಂ ನ ಸ್ಯ ಮಪೇಕ್ಷತೇ। ಇತಿಲಾಂ ಯೋವರ್ಹ ಕೃಷ್ಣೇಪ್ರೀತಿಂ ಹೀರ ಸ್ಸ ಉಚ್ಯತೇ॥ ಎಂಬಂತೆ ಈ ಶ್ಲೋಕದಿಂದ ಧೀರಭಕ್ತರಿಗೆ ಉಚಿತವಾದ ಪ್ರಕೃವು ಹೇಳಲ್ಪಡುವುದು.

(೪) ಸಿ ಶ್ಲೋ॥ ನಮೇ ಭಕ್ತಪ್ರಿಯತಮೋ ಹ್ಯಾತ್ಮಯೋನಿ ರ್ನ ಶಂಕರಃ। ನಚಸಂಕರ್ಷಣೋ ನಶ್ರೀಃ ನೈವಾತ್ಮಾಚ ತಥಾ ಭವಾನ್ ॥ ಭಗವಂತನಿಗೆ ಭಕ್ತರಿಗಿಂತ ಯಾರೂ ಪ್ರಿಯರಲ್ಲ.

ಫಲ್ಗ್ವಪ್ಯುರು ದೀನವತ್ಸಲ ಸ್ವ ಏವ ಧಿಷ್ಣ್ಯೇಽಭಿರತಸ್ಯ ಕಿಂ ತಯಾ?॥
ಭಜಂತ್ಯಥ ತ್ವಾ ಮತ ಏವ ಸಾಧವೋ ವ್ಯುದಸ್ತಮಾಯಾಗುಣವಿಭ್ರ
ಮೋದಯಂ ॥ ಭವತ್ಪದಾಽನುಸ್ಮರಣಾ ದೃತೇ ಸತಾಂ ನಿಮಿತ್ತ ಮನ್ಯ ದ್ಭಗ
ವನ್ ! ನವಿದ್ಮಹೇ ॥ ೨೯ ॥ ಮನ್ಯೇ ಗಿರಂ ತೇ ಜಗತಾಂ ವಿಮೋಹಿನೀಂ
ವರಂ ವೃಣೀಷ್ವೇತಿ ಭಜಂತ ಮಾತ್ಥ ಯತ್ ॥ *ವಾಚಾನು ತಂತ್ಯಾ ಯದಿ
ತೇ ಜನೋಽಸಿತಃ ಕಥಂಪುನಃ ಕರ್ಮ ಕರೋತಿ ? ಮೋಹಿತಃ ॥೩೦॥ ತ್ವ

---

ನಮಗೆ, ಸಮೀಹಿತಂ-ಇಚ್ಛೆಯುಂಟೋ, ದೀನವತ್ಸಲಃ - ದೀನದಯಾಳುವಾದುದರಿಂದ ನೀನು, ಫಲ್ಗ್ವಪಿ-ಅಲ್ಪವಾದುದನ್ನು, ಉರು - ಅಧಿಕವಾಗಿ, ಕರೋತಿ - ಮಾಡುವೆ, ಸ್ವೇ-ನಿನ್ನ, ಧಿಷ್ಣ್ಯ ಏವ-ಸ್ವರೂಪದಲ್ಲಿಯೇ, ಅಭಿರತಸ್ಯ - ಕ್ರೀಡಿಸುವ ನಿನಗೆ, ತಯಾ - ಆ ಲಕ್ಷ್ಮಿಯಿಂದ, ಕಿಂ - ಏನುಫಲವು ? ॥೨೮॥ ಭಗವನ್ - ಭಗವಂತನೆ ! ಅತಏವ - ಆದುದರಿಂದಲೇ, ಸಾಧವಃ-ಜ್ಞಾನಿಗಳು, ವ್ಯುದ...ಯಂ, ವ್ಯುದಸ್ತ - ಕಳೆಯಲ್ಪಟ್ಟ, ಮಾಯಾಗುಣ - ಸತ್ವಾದಿಗುಣಗಳ, ವಿಭ್ರಮ-ವಿಲಾಸದ, ಉದಯಂ - ಕಾರ್ಯವುಳ್ಳ, ತ್ವಾಂ - ನಿನ್ನನ್ನು, ಭಜಂತಿ - ಧ್ಯಾನಿಸುವರು, ಸತಾಂ - ಸಜ್ಜನರಿಗೆ, ಭವ...ತೇ - ನಿನ್ನಪಾದಸ್ಮರಣೆಯನ್ನುಳಿದು, ಅನ್ಯತ್ - ಬೇರೆಯಾದ, ನಿಮಿತ್ತಂ-ಕಾರಣವನ್ನು, ನವಿದ್ಮಹೇ-ತಿಳಿಯಲಾರೆವು॥೨೯॥ ಭಜಂತಂ - ಧ್ಯಾನಿಸುತ್ತಿರುವ ನನಗೆ, ವರಂ - ವರವನ್ನು, ವೃಣೀಷ್ವೇತಿ - ವರಿಸೆಂದು, ಯತ್ - ಯಾವುದನ್ನು, ಆತ್ಥ - ಹೇಳುವೆಯೋ, ತೇ- ನಿನ್ನ, ಗಿರಂ - ಆನುಡಿಯನ್ನು, ಜಗತಾಂ - ಲೋಕಗಳಿಗೆ ವಿಮೋಹಿನೀಂ - ಮೋಹಕವನ್ನಾಗಿ, ಮನ್ಯೇ - ತಿಳಿಯುತ್ತೇನೆ, ಜನಃ - ಜನರು, ತೇ-ನಿನ್ನ, ತಂತ್ಯಾ-

---

ಕ್ರೋಧವುಂಟಾಗುವುದೇ ದಿಟ. ದೀನದಯಾಳುವಾದ ನೀನು ಕೈಹಿಡಿದವಸ್ತುವನ್ನು ಅತಿತುಚ್ಛವಾದರೂ ಮಹೋನ್ನತವನ್ನಾಗಿ ಮಾಡಬಲ್ಲೆ. ಮುನ್ನ ಇಂದ್ರನೊಡನೆ ವಿರೋಧವುಂಟಾದಾಗ ನನ್ನಲ್ಲಿ ಪಕ್ಷಪಾತವನ್ನು ತೋರಿದಂತೆಯೇ ಈಗಲೂ ನೀನು ಪಕ್ಷಪಾತವನ್ನು ತೋರದಿರಲಾರೆ. ಆತ್ಮಾನಂದದಿಂದ ರಮಿಸುತ್ತಿರುವ ನಿನಗೆ ಆ ಲಕ್ಷ್ಮೀದೇವಿಯ ದಾಕ್ಷಿಣ್ಯವೂ ಬೇಕಾಗಿರುವುದಿಲ್ಲ. ಆದುದರಿಂದ ನಾನುಲಕ್ಷ್ಮೀ ದೇವಿಯ ವಿರೋಧಕ್ಕೂ ಹೆದರಲಾರೆನು ॥ ೨೮ ॥ ಅಯ್ಯಾ ಭಗವಂತನೇ ! ನೀನಿಂತು ದೀನವತ್ಸಲನಾದುದರಿಂದಲೇ ಸಾಧುಗಳು ಮಾಯಾತೀತನಾದ ನಿನ್ನನ್ನು ನಿರಂತರವೂ ಧ್ಯಾನಿಸುವರು. ಸಜ್ಜನರಾದವರು ನಿನ್ನ ಪಾದಕಮಲಸ್ಮರಣೆಯನ್ನು ಹೊರತು ಮತ್ತಾವಫಲವನ್ನೂ ಬಯಸತಕ್ಕವರಲ್ಲ ॥ ೨೯ ॥ ನಿನ್ನನ್ನೇ ಅನನ್ಯವಾಗಿ ನಂಬಿರುವ ನನ್ನನ್ನು ,, ಬೇಕಾದ ವರಗಳನ್ನು ಕೇಳಿಕೋ ” ಎಂದು ನೀನು ಆಸೆಗೊಳಿಸಬಹುದೆ ? ಲೋಕವನ್ನು ಮರುಳುಮಾಡುವುದಕ್ಕಾಗಿ ನೀನಿಂತು ಸವಿನುಡಿಗಳನ್ನಾಡುವೆಯೇ ಹೊರತು ಬೇರೆಯಲ್ಲ. ನಿನ್ನವಾಗ್ರೂಪವಾದ ವೇದವಾಕ್ಯಗಳಿಂದ ಜನರು ಬಂಧಕ್ಕೊಳಗಾಗದಿರುವುದೇ ದಿಟವಾ

---

* ಶ್ರು. ಅಪಾಮ ಸೋಮ ಮಮೃತಾ ಅಭೂಮಾಽಗನ್ಮಜ್ಯೋತಿ ರವಿದಾಮ ದೇವಾನ್। ಅಕ್ಷಯ್ಯಂ ಹವೈ ಚಾತುರ್ಮಾಸ್ಯಯಾಜಿನ ಸ್ಸುಕೃತಂ ಭವತಿ॥ ಗೀ॥ ಶ್ಲೋ॥ ಯಾಮಿಮಾಂ ಪುಷ್ಪಿತಾಂ ವಾಚಂ ಪ್ರವದಂತಿ ವಿಪಶ್ಚಿತಃ । ವೇದವಾದ ರತಾಃ ಪಾರ್ಥ ! ನಾನ್ಯದಸ್ತೀತಿವಾದಿನಃ ॥

ನ್ಮಾಯಯಾದ್ಧಾ ಜನ ಈಶ ! ಖಂಡಿತೋ ಯದನ್ಯ ದಾಶಾಸ್ತ ಋತಾ
ತ್ಮನೋಽಬುಧಃ ॥ ಯಥಾ ಚರೇ ದ್ಬಾಲಹಿತಂ ಪಿತಾ ಸ್ವಯಂ ತಥಾ ತ್ವಮೇ
ವಾಽರ್ಹಸಿ ನ ಸ್ಸಮೀಹಿತುಂ ॥೩೧॥ ಮೈತ್ರೇಯಃ॥ §ಇತ್ಯಾದಿ ರಾಜೇನ
ನುತ ಸ್ಸವಿಶ್ವದೃಕ್ ತಮಾಹ ರಾಜನ್ ! ಮಯಿ ಭಕ್ತಿ ರಸ್ತು ತೇ॥ದಿಷ್ಟ್ಯೇ

ಹಗ್ಗದಂತಿರುವ, ವಾಚಾ-ವಾಗ್ರೂಪವಾದ ವೇದದಿಂದ, ಯದ್ಯಸಿತಃ - ಬದ್ಧರಾಗದಿದ್ದರೆ, ಪುನಃ-ಮರಳಿ, ಮೋಹಿತಃ-ಮರುಳಾಗಿ, ಕಥಂ - ಹೇಗೆ, ಕರ್ಮ-ಕರ್ಮವನ್ನು, ಕರೋತಿ - ಮಾಡುತ್ತಾರೆ ॥ ೩೦ ॥ ಅಬುಧಃ - ಜ್ಞಾನರಹಿತನಾಗಿ, ಋತಾತ್ಮನಃ-ಸತ್ಯಸ್ವರೂಪನಾದ ನಿನಗಿಂತಲೂ, ಅನ್ಯತ್ - ಬೇರೆಯಾದ ಅರ್ಥಕಾಮಾದಿಗಳನ್ನು, ಯತ್ - ಯಾವ ಕಾರಣದಿಂದ, ಆಶಾಸ್ತೇ - ಬಯಸುತ್ತಾರೋ, ಅದರಿಂದ, ಜನಃ - ಆ ಜನರು, ತ್ವನ್ಮಾಯಯಾ - ನಿನ್ನ ಮಾಯೆಯಿಂದ, ಖಂಡಿತಃ - ಮೋಹಿಸಲ್ಪಟ್ಟರೇಸರಿ. ಹೇ ಈಶ - ಎಲೈ ಸ್ವಾಮಿಯೆ ! ಪಿತಾ-ತಂದೆಯು, ಯಥಾ - ಹೇಗೆ, ಸ್ವಯಂ - ಅಪ್ರಾರ್ಥಿತನಾಗಿಯೇ, ಬಾಲಹಿತಂ-ಹಸುಳೆಗಳಿಗೆ ಪ್ರಿಯವನ್ನು, ಚರೇತ್ - ಮಾಡುವನೋ, ತಥಾ-ಹಾಗೆ, ತ್ವಮೇವ-ನೀನೇ, ನಃ - ನಮಗೆ, ಸಮೀಹಿತುಂ-ಹಿತವನ್ನು ಬೋಧಿಸುವುದಕ್ಕೆ, ಅರ್ಹಸಿ-ಯೋಗ್ಯನಾಗುತ್ತಿ ॥೩೧॥

ಮೈತ್ರೇಯನು ಹೇಳುತ್ತಾನೆ, ಇತಿ-ಇಂತು, ಆದಿರಾಜೇನ - ಪೃಥುವಿನಿಂದ, ನುತಃ-ಹೊಗಳಲ್ಪಟ್ಟ, ವಿಶ್ವದೃಕ್-ಜಗತ್ಸಾಕ್ಷಿಯಾದ, ಸಃ-ಆ ಭಗವಂತನು, ರಾಜನ್-ಎಲೈ ರಾಜನೆ ! ತೇ-ನಿನಗೆ, ಮಯಿ-ನನ್ನಲ್ಲಿ, ಭಕ್ತಿಃ-ಭಕ್ತಿಯು, ಅಸ್ತು-ಆಗಲಿ, ಯಯಾ - ಯಾವುದರಿಂದ, ದುಸ್ತ್ಯಜಾಂ - ಬಿಡಲಾಗದ-

ದರೆ, ಅವರು ಮೋಹಿತರಾಗಿ ಮರಳಿಮರಳಿ ಕರ್ಮಗಳನ್ನೇ ಏಕೆಮಾಡುವರು? ॥೩೦॥ ಮೊದಲೇ ನಿನ್ನಮಾಯೆಯಿಂದ ಮರುಳಾಗಿ ಆತ್ಮಯಾಥಾತ್ಮ್ಯವನ್ನರಿಯಲಾರದೆ ಅಪಾರಸಂಸಾರದಲೆಲ್ಲೇಲಾಡುತ್ತಾ, ಸತ್ಯಸ್ವರೂಪನಾದ ನಿನ್ನನ್ನುಳಿದು ನಶ್ವರಗಳಾದ ಅರ್ಥಕಾಮಾದಿಗಳನ್ನು ಬಯಸುವ ಪಾಮರರನ್ನು ನೀನು ಮತ್ತಷ್ಟು ಮರುಳುಗೊಳಿಸುವದು ಉಚಿತವೆ? ಎಲೈ ಸರ್ವೇಶ್ವರನೇ! ಲೋಕದಲ್ಲಿ ತಂದೆಯಾದವನು ಹೇಳಿಸಿಕೊಳ್ಳದೆಯೇ ತನ್ನ ಮಕ್ಕಳಿಗೆಂತು ಹಿತವನ್ನಾಚರಿಸುವನೋ, ಅಂತೆಯೇ ನೀನು ಅಜ್ಞರಾದನಮಗೆ ಹಿತವನ್ನಾಚರಿಸಿ ಸಲಹು, ಎಂದು ಬೇಡಿಕೊಂಡನು ॥೩೧॥ ಇಂತು ಪೃಥುರಾಜನು ಹೊಗಳಲು ಸರ್ವಸಾಕ್ಷಿಯಾದ ಪರಮಾತ್ಮನು ಪೃಥುವನ್ನು ಕುರಿತು ಅಯ್ಯಾ ರಾಜನೆ ! ನೀನು ಸ್ವರ್ಗಾಪವರ್ಗಗಳೆರಡನ್ನೂ ನರಕದಂತೆ ಅತಿತುಚ್ಛವಾಗಿ ತಿಳಿದಿರುವೆಯಾದಕಾರಣ ನಿನಗೆ ನನ್ನಲ್ಲಿ ಮೀರಭಕ್ತಿ

§ ಮೂ. ಶ್ಲೋ॥ತೇ ಸಾಧು ವರ್ಣಿತಂ ರಾಜನ್ನಾಶಾಸ್ತೇ ನಯದಾಶಿಷಃ । ಸ್ವರ್ಗಾಪವರ್ಗನರಕಾನ್ ಸಮಂ ಪಶ್ಯಸಿ ಮತ್ಪರಃ ॥೧॥ ಪ್ರೀತೋಽಹಂತೇ ಮಹಾರಾಜ ! ರೋಷಂ ದುಸ್ತ್ಯಜ ಮತ್ಯಜಃ। ಮದಾದೇಶಂ ಶ್ರದ್ದಧಾನ ಸ್ತನ್ಮಹ್ಯಂ ಪರಮಾರ್ಹಣಂ ॥೨॥

(ತಾ) ಅಯ್ಯಾ ರಾಜನೆ ! ಬಹಳ ಚೆನ್ನಾಗಿ ಹೇಳಿದೆ. ಸ್ವರ್ಗ, ಮೋಕ್ಷ, ನರಕಗಳನ್ನು ಒಂದೇ ಸಮವಾಗಿ ತಿಳಿದು ಯಾವ ವರಗಳನ್ನೂ ಬಯಸಲಿಲ್ಲವಾದುದರಿಂದ ನೀನು ನನಗೆ ಏಕಾಂತ ಭಕ್ತನೇಸರಿ ॥೧॥ ಅಯ್ಯಾ ನಿನ್ನಲ್ಲಿ ಬಹಳ ಸಂತುಷ್ಟನಾದೆನು. ನನ್ನ ಆಣತಿಯನ್ನು ಗೌರವಿಸಿ, ಬಿಡಲಾಗದ ವೈರವನ್ನು ಬಿಟ್ಟೆಯಾದುದರಿಂದ ಇದೇ ನನಗೆ ಸಂಪೂರ್ಣವಾದ ಸತ್ಕಾರವು ॥೨॥

ಈ ಎರಡು ಅಧಿಕ ಶ್ಲೋಕಗಳು ವೀ. ಮತ್ತು ವಿ.ಮತಗಳಲ್ಲಿರುವುವು.

ದೃಶೀ ಧೀ ರ್ಮಯಿ ತೇ ಕೃತಾ ಯಯಾ ಮಾಯಾಂ ಮದೀಯಾಂ ತರತಿಸ್ಮ
ದುಸ್ತ್ಯಜಾಂ ॥೩೦॥ ತತ್ತ್ವಂ ಕುರು ಮಯಾದಿಷ್ಟ ಮಪ್ರಮತ್ತಃ ಪ್ರಜಾ
ಪತೇ! । ಮದಾದೇಶಕರೋ ಲೋಕ ಸ್ಸರ್ವತ್ರಾಪ್ನೋತಿ ಶೋಭನಂ॥೩೧॥
ಮೈತ್ರೇಯಃ ॥ ಇತಿ ವೈನ್ಯಸ್ಯ ರಾಜರ್ಷೇಃ ಪ್ರತಿನಂದ್ಯಾಽರ್ಥವದ್ವಚಃ ॥
ಪೂಜಿತೋಽನುಗೃಹೀತ್ವೈನಂ ಗಂತುಂ ಚಕ್ರೇಽಚ್ಯುತೋ ಮತಿಂ ॥೩೨॥
ದೇವರ್ಷಿಪಿತೃಗಂಧರ್ವಸಿದ್ಧಚಾರಣಪನ್ನಗಾಃ । ಕಿನ್ನರಾ ಽ ಪ್ಸರಸೋ
ಮರ್ತ್ಯಾಃ ಖಗಾ ಭೂತಾನ್ಯನೇಕಶಃ॥೩೩॥ ಯಜ್ಞೇಶ್ವರ ಧಿಯಾ ರಾಜ್ಞಾ
ವಾಗ್ವಿತ್ತಾಂಜಲಿ ಭಕ್ತಿತಃ ॥ ಸಭಾಜಿತಾ ಯಯುಃ ಽ ಸ್ಸರ್ವೇ ವೈಕುಂಠಾಽ

---

ಮದೀಯಾಂ - ನನ್ನ ಸಂಬಂಧವಾದ, ಮಾಯಾಂ - ಮಾಯೆಯನ್ನು, ತರತಿಸ್ಮ-ದಾಟುವೆಯೋ, ಈದೃಶೀ, ಇಂತಹ, ಧೀಃ - ಬುದ್ಧಿಯು, ದಿಷ್ಟ್ಯಾ - ದೈವಯೋಗದಿಂದ, ತ್ವಯಾ - ನಿನ್ನಿಂದ, ಮಯಿ - ನನ್ನಲ್ಲಿ, ಕೃತಾ - ಮಾಡಲ್ಪಟ್ಟಿತು ॥ ೩೦ ॥ ಪ್ರಜಾಪತೇ - ರಾಜನೆ ! ತತ್ - ಆದುದರಿಂದ, ತ್ವಂ - ನೀನು, ಅಪ್ರಮತ್ತಃ - ಜಾಗರೂಕನಾಗಿ, ಮಯಾ - ನನ್ನಿಂದ, ಆದಿಷ್ಟಂ - ಹೇಳಲ್ಪಡುವುದನ್ನು, ಕುರು - ಮಾಡು, ಮದಾ...ರಃ - ನನ್ನ ಆಜ್ಞೆಯನ್ನು ನಡೆಯಿಸುವ, ಲೋಕಃ - ಜನವು, ಸರ್ವತ್ರ - ಎಲ್ಲೆಡೆಗಳಲ್ಲಿಯೂ, ಶೋಭನಂ - ಕ್ಷೇಮವನ್ನು, ಆಪ್ನೋತಿ - ಹೊಂದುವುದು ॥ ೩೧ ॥ ಮೈತ್ರೇಯನು ಹೇಳುತ್ತಾನೆ. ಅಚ್ಯುತಃ - ವಿಷ್ಣುವು, ಇತಿ - ಇಂತು, ರಾಜರ್ಷೇಃ - ರಾಜಋಷಿಯಾದ, ವೈನ್ಯಸ್ಯ - ಪೃಥುವಿನ, ಅರ್ಥವತ್ - ಅರ್ಥಯುಕ್ತವಾದ, ವಚಃ - ನುಡಿಯನ್ನು, ಪ್ರತಿನಂದ್ಯ - ಅಭಿನಂದಿಸಿ, ಪೂಜಿತಃ - ಪೂಜಿಸಲ್ಪಟ್ಟವನಾಗಿ, ಏನಂ - ಇವನನ್ನು, ಅನುಗೃಹೀತ್ವಾ - ಅನುಗ್ರಹಿಸಿ, ಗಂತುಂ-ಹೊರಡುವುದಕ್ಕೆ, ಮತಿಂ - ಬುದ್ಧಿಯನ್ನು, ಚಕ್ರೇ - ಮಾಡಿದನು, ॥ ೩೨ ॥ ದೇವ...ಗಾಃ - ದೇವತೆಗಳು, ಋಷಿಗಳು, ಪಿತೃಗಳು, ಗಂಧರ್ವರು, ಸಿದ್ಧರು, ಚಾರಣರು, ಪನ್ನಗರು, ಕಿನ್ನ....ಸಃ- ಕಿನ್ನರರು, ಅಪ್ಸರ ಸ್ತ್ರೀಯರು, ಮರ್ತ್ಯಾಃ - ಮನುಷ್ಯರು, ಖಗಾಃ - ಪಕ್ಷಿಗಳು, ಅನೇಕಶಃ - ಹಲವು ವಿಧಗಳಾದ, ಭೂತಾನಿ - ಪ್ರಾಣಿಗಳು ॥ ೩೩ ॥ ರಾಜ್ಞಾ - ರಾಜನಿಂದ, ಯಜ್ಞೇ....ಯಾ - ಪರಮಾತ್ಮ ಬುದ್ಧಿಯಿಂದ, ವಾಗ್ವಿ...ತಃ- ವಾಕ್ಕು, ಧನ, ನಮಸ್ಕಾರ, ಭಕ್ತಿ ಇವುಗಳಿಂದ, ಸಭಾಜಿತಾಃ - ಪೂಜಿಸಲ್ಪಟ್ಟವರಾಗಿ, ಸರ್ವೇ - ಎಲ್ಲ

---

ಯುಂಟಾಗಲಿ. ದೈವಯೋಗದಿಂದಲೇ ನಿನಗಿಂತಹಬುದ್ಧಿಯುಂಟಾಯಿತು. ಇದರಿಂದನೀನು ಅಪಾರವಾದ ನನ್ನಮಾಯೆಯನ್ನು ದಾಟುವೆ ॥೩೦॥ ಎಲೈ ಪ್ರಜಾಪಾಲಕನೇ ! ಆದುದರಿಂದ ನೀನು ಜಾಗರೂಕನಾಗಿ ನಾನು ಹೇಳಿದಂತೆ ನಡೆಯಿಸು. ನನ್ನ ಆಣತಿಯಂತೆ ನಡೆಯುವವನೆಲ್ಲೆಲ್ಲಿಯೂ ಶ್ರೇಯಸ್ಸನ್ನು ಪಡೆಯುವನು, ಎಂದು ಹೇಳಿದನು ॥೩೧॥ ಅಯ್ಯಾ ವಿದುರನ! ಇಂತು ಆ ಭಗವಂತನು ರಾಜರ್ಷಿಯಾದಪೃಥುವಿನ ಅರ್ಥಗರ್ಭಿತಗಳಾದ ನುಡಿಗಳಿಗೆ ಸಂತೋಷಿಸಿ, ಆತನಿಂದ ಯಥಾ ಶಾಸ್ತ್ರವಾಗಿ ಮರ್ಯಾದೆಯನ್ನು ಪಡೆದು, ಪ್ರಯಾಣವನ್ನು ಮಾಡಿದನು ॥೩೨॥ ಕೂಡಲೇ ಅಲ್ಲಿ ನೆರೆದಿದ್ದ ದೇವ, ಋಷಿ, ಪಿತೃ, ಗಂಧರ್ವ ಸಿದ್ಧ, ಚಾರಣ, ಪನ್ನಗ, ಕಿನ್ನರ, ಅಪ್ಸರ, ಮನುಷ್ಯ, ಖಗ, ಮೊದಲಾದ ಸಕಲಜಾತಿ ಪ್ರಾಣಿಗಳು,ಆಪೃಥುರಾಜನು ಪರಮಾತ್ಮ ಭಾವದಿಂದ ಭಕ್ತಿಪೂರ್ವಕವಾಗಿನಮಸ್ಕರಿಸಿ ಸವಿನುಡಿಗಳಿಂದುಪಚರಿಸಿ ಧನಕನಕಾದಿಗಳಿಂದಸತ್ಕರಿಸಿದ ಆ ಮನ್ನಣೆಗಳನ್ನುಕೈಗೊಂಡು

ನುಗತಾ ಸ್ತತಃ ॥೩೬॥ ಭಗವಾನಪಿ ರಾಜರ್ಷೇಃ ಸೋಪಾಧ್ಯಾಯಸ್ಯ ಚಾಽ
ಚ್ಯುತಃ ॥ ಹರನ್ನಿವ ಮನೋಽಮುಷ್ಯ ಸ್ವಧಾಮ ಪ್ರತ್ಯಪದ್ಯತ ॥ ೩೭ ॥
ಅದೃಷ್ಟಾಯ ನಮಸ್ಕೃತ್ಯ ನೃಪಃ ಸಂದರ್ಶಿತಾತ್ಮನೇ। ಅವ್ಯಕ್ತಾಯ ಚ ದೇ
ವಾನಾಂ ದೇವಾಯ ಸ್ವಪುರಂ ಯಯೌ ॥೩೮॥

—ಇತಿ ವಿಂಶೋಽಧ್ಯಾಯಃ—

ರೂ, ತತಃ - ಬಳಿಕ, ವೈಕುಂ...ತಾಃ - ವಿಷ್ಣುವನ್ನು ಹಿಂಬಾಲಿಸಿ, ಯಯುಃ-ಹೊರಟುಹೋದರು ॥೩೬॥ ಭಗವಾನ್ - ಮಹಾಮಹಿಮನಾದ, ಅಚ್ಯುತೋಽಪಿ - ವಿಷ್ಣುವೂ, ಸೋಪಾಧ್ಯಾಯಸ್ಯ - ಋತ್ವಿಜರಿಂದೊಡಗೂಡಿದ, ಅಮುಷ್ಯ - ಈ, ರಾಜರ್ಷೇಃ - ಪೃಥುರಾಜನು, ನೋಡುವಾಗಲೇ, ಸ್ವಧಾಮ-ತನ್ನನೆಲೆಯನ್ನು, ಪ್ರತ್ಯಪದ್ಯತ - ಹೊಂದಿದನು ॥ ೩೭ ॥ ನೃಪಃ - ಪೃಥುವು, ಅದೃಷ್ಟಾಯ - ಕಣ್ಣಿಗೆ ಮರೆಯಾದ ಸಂದರ್ಶಿತಾತ್ಮನೇ - ಸ್ವರೂಪವನ್ನು ಪ್ರಕಾಶಗೊಳಿಸಿದ, ಅವ್ಯಕ್ತಾಯ - ವ್ಯಕ್ತನಾಗದ, ದೇವಾನಾಂ ದೇವಾಯ - ದೇವತೆಗಳಿಗೆ ದೇವನಾದ ಭಗವಂತನಿಗೆ, ನಮಸ್ಕೃತ್ಯ - ವಂದಿಸಿ, ಸ್ವಪುರಂ-ತನ್ನ ಪಟ್ಟಣಕ್ಕೆ, ಯಯೌ -ಹೊರಟುಹೋದನು ॥ ೩೮ ॥

— ವಿಂಶಾಧ್ಯಾಯಂ ಸಮಾಪ್ತಂ —

ಎಲ್ಲರೂಭಗವಂತನಾದ ಲಕ್ಷ್ಮೀಕಾಂತನನ್ನು ಹಿಂಬಾಲಿಸಿ ತಂತಮ್ಮನೆಲೆಗಳಿಗೆ ತೆರಳಿದರು॥
ಬಳಿಕ ಭಗವಂತನು ಋತ್ವಿಜರಿಂದ ಕೂಡಿದ ಪೃಥುರಾಜನು ನೋಡುತ್ತಿರುವಾ
ಗಲೇ ಆತನ ಮನಸ್ಸನ್ನು ಅಪಹರಿಸುವಂತೆ ತನ್ನ ನೆಲೆಗೆ ಬಿಜಮಾಡಿದನು
॥ ೩೭ ॥ ತರುವಾಯ ಪೃಥುಭೂಪತಿಯು ದಿವ್ಯದರ್ಶನವನ್ನಿತ್ತು
ಕಣ್ಣೊಲವನ್ನು ಅತಿಕ್ರಮಿಸಿತೆರಳಿದ ವಾಸುದೇವಮೂರ್ತಿಗೆ
ನಮಸ್ಕರಿಸಿ ತನ್ನ ನಗರಿಗೆ ಹೊರಟು ಹೋದನೆಂದು
ಮೈತ್ರೇಯಮುನಿಯು ವಿದುರನಿಗೆಹೇಳಿದನೆಂಬಲ್ಲಿಗೆ
ಭಾಗವತ ಚಕೋರ ಚಂದ್ರಿಕೆಯೊಳ್
ಇಪ್ಪತ್ತನೆಯ ಅಧ್ಯಾಯಂ ಮುಗಿದುದು.

## ಓಂ ನಮಃ ಪರಮಾತ್ಮನೆ.

### —ಅಥ ಏಕವಿಂಶೋಽಧ್ಯಾಯಃ—

**ಮೈತ್ರೇಯಃ॥ ಮೌಕ್ತಿಕೈಃ ಕುಸುಮ ಸ್ರಗ್ಭಿ ರ್ದುಕೂಲೈ ಸ್ಸ್ವರ್ಣತೋರಣೈಃ । ಮಹಾಸುರಭಿಭಿ ರ್ಧೂಪೈ ರ್ಮಂಡಿತಂ ತತ್ರ ತತ್ರವೈ ॥ ೧ ॥ ಚಂದನಾಽಗರು ತೋಯಾರ್ದ್ರ ರಥ್ಯಾ ಚತ್ವರಮಾರ್ಗವತ್ । ಪುಷ್ಪಾಽಕ್ಷತ ಫಲೈ ಸ್ತೋಕ್ಮೈ ರ್ಲಾಜೈ ರರ್ಚಿರ್ಭಿ ರರ್ಚಿತಾ ॥ ೨ ॥ ಸವೃಂತೈಃ ಕದಳೀ ಸ್ತಂಭೈಃ ಪೂಗಪೋತೈಃ ಪರಿಷ್ಕೃತಂ । ತರುಪಲ್ಲವ ಮಾಲಾಭಿ ಸ್ಸರ್ವತ ಸ್ಸಮಲಂಕೃತಂ ॥ ೩ ॥ ಪ್ರಜಾ ಸ್ತಂ ದೀಪಬಲಿಭಿ ಸ್ಸಂಭೃತಾ ಽ ಶೇಷ**

---

#### — ಏಕವಿಂಶಾಧ್ಯಾಯಂ —

ಕಂ॥ ವಿನಯನಿಧಿ ಪೃಥುಮಹೀಪತಿ । ಘನಮೆನಿಸಿದ ಸತ್ರಯಾಗದೊಳ್ ದಿವಿಜರ ಮುಂ ॥
ದನುವಿಂ ಪ್ರಜೆಗಳ ಗನುಶಾ । ಸನ ವೆಸಗುವ ಪರಿಯುದಿಲ್ಲಿ ಪೇಳಲ್ಪಡುಗುಂ ॥

ಮೈತ್ರೇಯನು ಹೇಳುತ್ತಾನೆ, ಮೌಕ್ತಿಕೈಃ - ಮುತ್ತುಗಳಿಂದಲೂ, ಕುಸುಮಸ್ರಗ್ಭಿಃ - ಹೂಮಾಲೆಗಳಿಂದಲೂ, ದುಕೂಲೈಃ - ಪಟ್ಟೆವಸ್ತ್ರಗಳಿಂದಲೂ, ಸ್ವರ್ಣತೋರಣೈಃ - ಚಿನ್ನದ ತೋರಣಗಳಿಂದಲೂ, ಮಹಾಸುರಭಿಭಿಃ - ಬಹಳವಾಸನೆಯುಳ್ಳ, ಧೂಪೈಃ - ಧೂಪಗಳಿಂದಲೂ, ತತ್ರತತ್ರವೈ - ಅಲ್ಲಲ್ಲಿ, ಮಂಡಿತಂ - ಅಲಂಕರಿಸಲ್ಪಟ್ಟ ॥ ೧ ॥ ಚಂದ.. ವತ್ - ಶ್ರೀಗಂಧ, ಅಗರು ಇವುಗಳ ನೀರಿನಿಂದ ನೆನೆದ ಬೀದಿಗಳು ಚೌಕಗಳೂ ಉಳ್ಳ, ಪುಷ್ಪಾಕ್ಷತೈಃ - ಹೂವು ಅಕ್ಷತೆಫಲಗಳಿಂದಲೂ, ತೋಕ್ಮೈಃ - ಹಸುರುಮೊಳಕೆಗಳಿಂದಲೂ, ಲಾಜೈಃ - ಅರಳುಗಳಿಂದಲೂ. ಅರ್ಚಿರ್ಭಿಃ- ದೀಪಗಳಿಂದಲೂ, ಅರ್ಚಿತ - ಅಲಂಕರಿಸಲ್ಪಟ್ಟ ॥ ೨ ॥ ಸವೃಂತೈಃ - ಗೊನೆಗಳಿಂದ ಕೂಡಿದ, ಕದಳೀಸ್ತಂಭೈಃ - ಬಾಳೆಗಂಬಗಳಿಂದಲೂ ಪೂಗಪೋತೈಃ - ಅಡಕೆಸಸಿಗಳಿಂದಲೂ, ಪರಿಷ್ಕೃತಂ - ಅಲಂಕರಿಸಲ್ಪಟ್ಟ, ತರು...ಭಿಃ - ಚಿಗುರುಗಳ ಮಾಲೆಗಳಿಂದ, ಸರ್ವತಃ - ಎಲ್ಲೆಲ್ಲಿಯೂ, ಸಮಲಂಕೃತಂ - ಸಿಂಗರಿಸಲ್ಪಟ್ಟ, ಪಟ್ಟಣಕ್ಕೆ ಹೋದನು ॥ ೩ ॥ ಸಂಭೃ....ಳೈಃ - ಮೊಸರು ಮೊದಲಾದ, ಮಂಗಳ ದ್ರವ್ಯಗಳನ್ನು ಜತೆಗೊಳಿಸಿದ, ದೀಪಬಲಿಭಿಃ - ದೀಪ

---

#### —ಇಪ್ಪತ್ತೊಂದನೆಯ ಅಧ್ಯಾಯ —

#### —ಪೃಥುರಾಜನು ಪ್ರಜೆಗಳಿಗೆ ಧರ್ಮೋಪದೇಶವನ್ನು ಮಾಡುವುದು—

**ಅನಂತರದಲ್ಲಿ ಮೈತ್ರೇಯಮುನಿಯು ವಿದುರನಿಗೆ ಹೇಳುತ್ತಾನೆ:—ತರುವಾಯ ಪೃಥುರಾಜನು, ಮುತ್ತಿನ ಸರಗಳಿಂದಲೂ, ಹೂಮಾಲೆಗಳಿಂದಲೂ, ಚೀನಾಂಬರಗಳಿಂದಲೂ, ಚಿನ್ನದ ತೋರಣಗಳಿಂದಲೂ, ಮಗಮಗಿಸುತ್ತಿರುವ ಧೂಪಗಳಿಂದಲೂ, ಎಲ್ಲೆಡೆಗಳಲ್ಲಿಯೂ ಅಲಂಕರಿಸಲ್ಪಟ್ಟು, ಬೀದಿಗಳು, ಚೌಕಗಳು, ಮೊದಲಾದ ಎಲ್ಲಾ ಸ್ಥಳಗಳಲ್ಲಿಯೂ, ಗಂಧ, ಅಗರುಗಳ ಪನ್ನೀರನ್ನು ಚಲ್ಲಿ, ಹೂವು, ಅಕ್ಷತೆ, ಹಣ್ಣು, ಹಸುರ್ಮೊಳಕೆ, ಅರಳು, ದೀಪಗಳು ಇವುಗಳಿಂದ ಸಿಂಗರಿಸಿ, ಗೊನೆಗಳು ನೇತಾಡುವ ಬಾಳೆಗಂಬಗಳನ್ನು ಬಿಗಿದು, ಅಡಕೆ ಸಸಿಗಳನ್ನು ನಟ್ಟು, ಅಲ್ಲಲ್ಲಿ ಎಳೆಚಿಗುರುಗಳ ತೋರಣಗಳನ್ನು ಕಟ್ಟಿ ಅಂದವಾಗಿ ಸಿಂಗರಿಸಿರುವ ರಾಜಧಾನಿಯನ್ನು ಹೊಕ್ಕನು ॥ ೩ ॥ ಕಾ**

ಮಂಗಳೈಃ । ಅಭೀಯುರ್ಮೃಷ್ಟಕನ್ಯಾಶ್ಚ ಮೃಷ್ಟಕುಂಡಲಮಂಡಿತಾಃ ॥ ೪ ॥ ಶಂಖದುಂದುಭಿಘೋಷೇಣ ಬ್ರಹ್ಮಘೋಷೇಣ ಚರ್ತ್ವಿಜಾಂ । ವಿವೇಶ ಭವನಂ ವೀರ ಸ್ತೂಯಮಾನೋ ಗತಸ್ಮಯಃ ॥ ೫ ॥ ಪೂಜಿತಃ ಪೂಜಯಾಮಾಸ ತತ್ರ ತತ್ರ ಮಹಾಯಶಾಃ । ಪೌರಾನ್ ಜಾನಪದಾಂಸ್ತಾಂಸ್ತಾನ್ ಪ್ರೀತಃ ಪ್ರಿಯವರಪ್ರದಃ ॥ ೬ ॥ ಸ ಏವಮಾದೀನ್ಯನವದ್ಯಚೇಷ್ಟಿತಃ ಕರ್ಮಾಣಿ ಭೂಯಾಂಸಿ ಮಹಾನ್ ಮಹತ್ತಮಃ । ಕುರ್ವನ್ ಶಶಾಸಾವನಿಮಂಡಲಂ ಯಶಃ ಸ್ಫೀತಂ ನಿಧಾಯಾರುರುಹೇ ಪರಂ ಪದಂ ॥ ೭ ॥ ಸೂತಃ॥ ತದಾದಿರಾಜಸ್ಯ ಯಶೋ ವಿಜೃಂಭಿತಂ

---

ಬಲಿಮೊದಲಾದದ್ರವ್ಯಗಳೊಡನೆ, ಪ್ರಜಾಃ - ಪ್ರಜೆಗಳು, ಮೃಷ್ಟ....ತಾಃ - ಪ್ರಕಾಶಮಾನಗಳಾದ ಕುಂಡಲಗಳಿಂದ ಅಲಂಕೃತರಾದ, ಮೃಷ್ಟಕನ್ಯಾಶ್ಚ - ಸುಂದರಿಯರಾದ ಕನ್ನೆಯರೂ, ತಂ - ಆ ರಾಜನನ್ನು ಅಭೀಯುಃ - ಎದುರುಗೊಂಡರು ॥ ೪ ॥ ಗತಸ್ಮಯಃ - ಅಹಂಕಾರರಹಿತನಾದ, ವೀರಃ - ಶೂರನಾದ ಪೃಥುರಾಜನು, ಶಂಖ...ಣ - ಶಂಖ, ದುಂದುಭಿ ವಾದ್ಯಗಳ ಶಬ್ದದಿಂದಲೂ, ಋತ್ವಿಜಾಂ - ಋತ್ವಿಜರ, ಬ್ರಹ್ಮಘೋಷೇಣಚ - ವೇದಘೋಷದಿಂದಲೂ, ಸ್ತೂಯಮಾನಃ - ಹೊಗಳಲ್ಪಡುತ್ತಾ, ಭವನಂ - ತನ್ನ ಮನೆಯನ್ನು, ವಿವೇಶ - ಹೊಕ್ಕನು ॥ ೫ ॥ ಮಹಾಯಶಾಃ - ಮಹಾಕೀರ್ತಿಯುಳ್ಳ, ಪ್ರಿಯ...ದಃ ಇಷ್ಟಗಳಾದವರಗಳನ್ನು ಕೊಡುವ, ಪೃಥುವು, ಪ್ರೀತಃ - ಸಂತುಷ್ಟನಾಗಿ, ಪೂಜಿತಃ - ಪೂಜೆಗೊಂಡು, ತತ್ರ ತತ್ರ - ಅಲ್ಲಲ್ಲಿ, ಪೌರಾನ್ - ಪಟ್ಟಣಿಗರನ್ನೂ, ಜಾನಪದಾನ್ - ದೇಶದವರನ್ನೂ, ತಾಂಸ್ತಾನ್ - ಅವರವರನ್ನು, ಪೂಜಯಾಮಾಸ - ಪೂಜಿಸಿದನು ॥ ೬ ॥ ಅನವದ್ಯ ಚೇಷ್ಟಿತಃ-ನಿರ್ದುಷ್ಟವಾದ ನಡವಳಿಯುಳ್ಳ, ಮಹಾನ್ - ಗುಣಗರಿಷ್ಠನಾದ, ಮಹತ್ತಮಃ - ಅತ್ಯಂತ ಪೂಜ್ಯನಾದ, ಸಃ - ಆ ಪೃಥುವು, ಏವಮಾದೀನಿ - ಇವೇ ಮೊದಲಾದ, ಭೂಯಾಂಸಿ - ಮಹತ್ತರಗಳಾದ, ಕರ್ಮಾಣಿ - ಕಾರ್ಯಗಳನ್ನು, ಕುರ್ವನ್-ಮಾಡುತ್ತಾ, ಅವನಿಮಂಡಲಂ - ಭೂಮಂಡಲವನ್ನು, ಶಶಾಸ - ಆಳಿದನು, ಸ್ಫೀತಂ- ವಿಸ್ತಾರವಾದ, ಯಶಃ - ಕೀರ್ತಿಯನ್ನು, ನಿಧಾಯ - ಸ್ಥಾಪಿಸಿ, ಪರಂಪದಂ - ವೈಕುಂಠಲೋಕವನ್ನು, ಆರುರುಹೇ - ಏರಿ

---

ದಳೆ ಪ್ರಜೆಗಳು ಸಡಗರಗೊಂಡು ಮೊಸರು ದೂರ್ವಾ, ಪುಷ್ಪ, ಮೊದಲಾದ ಮಂಗಳದ್ರವ್ಯಗಳನ್ನು ಅಣಿಮಾಡಿಕೊಂಡು, ಸರ್ವಾಲಂಕಾರಶೋಭಿತೆಯರೆನಿಸಿದ ಸುಂದರಿಯರಾದ ಕನ್ನಿಕೆಯರೊಡನೆ ಆ ರಾಜನನ್ನು ಎದುರುಗೊಂಡರು ॥ ೪ ॥ ಮಹಾಶಾಂತನೂ ಶೂರಾಗ್ರೇಸರನೂ ಆದ ಆ ರಾಜನು ಶಂಖ, ದುಂದುಭಿ ಮೊದಲಾದ ವಾದ್ಯ ಧ್ವನಿಯಿಂದಲೂ, ಋತ್ವಿಜರ ವೇದಘೋಷದಿಂದಲೂ, ಹೊಗಳಿಸಿಗೊಳ್ಳುತ್ತಾ ತನ್ನ ಅರಮನೆಗೆ ಬಿಜಮಾಡಿದನು ॥ ೫ ॥ ಆಗ ಮಹಾ ಕೀರ್ತಿಸಂಪನ್ನನೂ, ಬೇಡುವವರ ಇಷ್ಟಾರ್ಥವನ್ನು ಕೊಡುವವನೂ ಆದ ಆ ಪೃಥುವು ಅಲ್ಲಲ್ಲಿ ನಡು-ದಾರಿಯಲ್ಲಿ ಎದುರುಗೊಂಡು ಪೂಜಿಸುತ್ತಿರುವ ಪಟ್ಟಣಿಗರನ್ನೂ, ದೇಶದವರನ್ನೂ, ಪ್ರತಿಮರ್ಯಾದೆಗಳಿಂದ ಸತ್ಕರಿಸಿ ಸಂತೋಷಗೊಳಿಸಿದನು ॥ ೬ ॥ ಇಂತು ಶ್ಲಾಘ್ಯವಾದ ನಡವಳಿಯುಳ್ಳವನಾಗಿ ಭೂದೋಹನವೇ ಮೊದಲಾದ ಅದ್ಭುತವಾದ ಕಾರ್ಯಗಳನ್ನು ನೆರವೇರಿಸಿ ಅತ್ಯಂತ ಪೂಜ್ಯನಾದ ಆ ಪೃಥು ಭೂವಲ್ಲಭನು ಧರ್ಮದಿಂದ ಭೂಮಂಡಲವನ್ನಾಳುತ್ತಿದ್ದು ಈ ಲೋಕದಲ್ಲಿ ಶಾಶ್ವತವಾದ

ಗುಣೈರಶೇಷೈರ್ಗುಣವತ್ಸಭಾಜಿತಂ । ಕ್ಷತ್ತಾ ಮಹಾಭಾಗವತಸ್ಸದಸ್ಪ
ತೇ ! ಕೌಷಾರವಿಂ ಪ್ರಾಹ ಗೃಣಂತಮರ್ಚಯನ್ ॥ ೮ ॥ ವಿದುರಃ॥
ಸೋಽಭಿಷಿಕ್ತಃ ಪೃಥುರ್ವಿಪ್ರೈರ್ಲಬ್ಧಾಶೇಷಸುರಾರ್ಹಣಃ । ಬಿಭ್ರ
ತ್ಸ ವೈಷ್ಣವಂ ತೇಜೋ ಬಾಹ್ವೋರ್ಯಾಭ್ಯಾಂ ದುದೋಹ ಗಾಂ ॥ ೯ ॥
ಕೋನ್ವಸ್ಯ ಕೀರ್ತಿಂ ನ ಶೃಣೋತ್ಯಭಿಜ್ಞೋ ಯದ್ವಿಕ್ರಮೋಚ್ಛಿಷ್ಟ
ಮಶೇಷ ಭೂಪಾಃ । ಲೋಕಾಸ್ಸಪಾಲಾ ಉಪಜೀವಂತಿ ಕಾಮಮದ್ಯಾ
ಪಿ ತನ್ಮೇ ವದ ಕರ್ಮ ಶುದ್ಧಂ ॥ ೧೦ ॥ ಗಂಗಾಯಮುನಯೋರ್ನ

ದನು! ॥ ೭ ॥ ಸೂತನು ಹೇಳುತ್ತಾನೆ, ಸದಸ್ಪತೇ - ಸಭಾಧ್ಯಕ್ಷನಾದ ಶೌನಕನೆ । ತದಾ-ಆಗ, ಮಹಾಭಾಗವತಃ - ಭಕ್ತಾಗ್ರೇಸರನಾದ, ಕ್ಷತ್ತಾ - ವಿದುರನು, ಅಶೇಷೈಃ - ಸಕಲಗಳಾದ, ಗುಣೈಃ - ಗುಣಗಳಿಂದ, ವಿಜೃಂಭಿತಂ - ಊರ್ಜಿತವಾದ, ಗುಣ...ತಂ - ಗುಣವಂತರಿಂದ ಗೌರವಿಸಲ್ಪಟ್ಟ, ಆದಿರಾಜಸ್ಯ - ಪೃಥುವಿನ, ಯಶಃ - ಕೀರ್ತಿಯನ್ನು, ಶ್ರುತ್ವಾ - ಕೇಳಿ, ಗೃಣಂತಂ - ಹೊಗಳುತ್ತಿರುವ, ಕೌಷಾರವಿಂ - ಮೈತ್ರೇಯನನ್ನು, ಅರ್ಚಯನ್ - ಪೂಜಿಸುತ್ತಾ, ಪ್ರಾಹ - ಹೇಳುತ್ತಾನೆ ॥ ೮ ॥ ಸಃ - ಆ, ಪೃಥುಃ - ಪೃಥುವು, ವಿಪ್ರೈಃ - ಬ್ರಾಹ್ಮಣರಿಂದ, ಅಭಿಷಿಕ್ತಃ - ಅಭಿಷೇಕಮಾಡಲ್ಪಟ್ಟು, ಲಬ್ಧ...ಣಃ - ಸಕಲದೇವತೆಗಳಿಂದಲೂ ಮರ್ಯಾದೆಯನ್ನು ಪಡೆದು, ಯಾಭ್ಯಾಂ - ಯಾವುಗಳಿಂದ, ಗಾಂ - ಭೂಮಿಯನ್ನು, ದುದೋಹ - ಹಿಂಡಿದನೋ, ಬಾಹ್ವೋಃ - ಆ ಭುಜಗಳಲ್ಲಿ, ವೈಷ್ಣವಂ-ವಿಷ್ಣುಸಂಬಂಧಿಯಾದ, ತೇಜಃ- ತೇಜಸ್ಸನ್ನು, ಬಿಭ್ರತ್ - ಧರಿಸಿ, (ಏನುಮಾಡಿದನು?) ॥ ೯ ॥ ಅಸ್ಯ - ಇವನ, ಕೀರ್ತಿಂ - ಯಶಸ್ಸನ್ನು, ಅಭಿಜ್ಞಃ - ತಿಳಿದವನು, ಕೋನು-ಯಾವನು ತಾನೇ, ನಶೃಣೋತಿ-ಕೇಳುವುದಿಲ್ಲ ? ಅಶೇಷಭೂಪಾಃ- ಸಕಲರಾಜರೂ, ಸಪಾಲಾಃ - ಪಾಲಕರಿಂದಕೂಡಿದ, ಲೋಕಾಃ - ಲೋಕಗಳು, ಕಾಮಂ - ಬಹಳವಾಗಿ, ಅದ್ಯಾಪಿ - ಈಗಲೂ, ಯದುಚ್ಛಿಷ್ಟಂ - ಯಾರ ಎಂಜಲನ್ನು, ಉಪಜೀವಂತಿ - ಆಶ್ರಯಿಸಿ ಬದುಕುತ್ತಿರುವರೋ, ತತ್ - ಅಂತಹ, ಶುದ್ಧಂ-ಪರಿಶುದ್ಧವಾದ, ಚರಿತ್ರೆಯನ್ನು, ಮೇ - ನನಗೆ, ವದ-ಹೇಳು ॥ ೧೦ ॥

ಕೀರ್ತಿಯನ್ನು ನೆಲೆಗೊಳಿಸಿ, ಕಡೆಗೆ ವೈಕುಂಠಕ್ಕೆ ತೆರಳಿದನು ॥ ೭ ॥ ಅಯ್ಯಾ ಕುಲಪತಿಯಾದ ಶೌನಕಮುನಿಯೆ ! ಇಂತು ಮೈತ್ರೇಯನಿಂದ ವಿವರಿಸಲ್ಪಟ್ಟ ಗುಣಗರಿಷ್ಠವಾದ, ಪೃಥುರಾಜನ ಚರಿತ್ರೆಯನ್ನು ಕೇಳಿ ಮಹಾಭಾಗವತನಾದ ವಿದುರನು ಮೈತ್ರೇಯಮುನಿಯನ್ನು ಶ್ಲಾಘಿಸುತಾ ಇಂತೆಂದನು ॥ ೮ ॥ ಎಲೈ ಗುರುವರ್ಯನೆ ! ಆ ಪೃಥುರಾಜನು ಬ್ರಾಹ್ಮಣರಿಂದ ಪಟ್ಟಾಭಿಷಿಕ್ತನಾಗಿ, ಇಂದ್ರಾದಿದೇವತೆಗಳಿಂದ ಮರ್ಯಾದೆಯನ್ನು ಪಡೆದು, ಸಕಲದೇವತೆಗಳ ತೇಜಸ್ಸನ್ನು ಬಾಹುಗಳಲ್ಲಿ ಧರಿಸಿ, ಭೂಮಿಯನ್ನು ಹಿಂಡಿದನೆಂದು ಹೇಳಿದೆಯಷ್ಟೆ. ಬಳಿಕ ಆತನೇನು ಮಾಡಿದನು ? ॥ ೯ ॥ ಲೋಕದಲ್ಲಿ ಅಭಿಜ್ಞನಾದವನು ಯಾವನು ತಾನೇ ಆ ಮಹಾತ್ಮನ ಚರಿತ್ರೆಯನ್ನು ಕೇಳುವುದಕ್ಕೆ ಬೇಸರಗೊಂಡಾನು ? ಸಕಲ ರಾಜರೂ, ಇಂದ್ರಾದಿ ದಿಕ್ಪಾಲರಿಂದ ಕೂಡಿದ ಸಕಲಲೋಕಗಳೂ ಸಹ, ಯಾವ ಮಹಾಪುರುಷನ ಎಂಜಲನ್ನುಂಡು ಜೀವಿಸುತ್ತಿರುವುವೋ! ಅಂತಹ ಪೃಥುರಾಜನ ಪರಿಶುದ್ಧವಾದ ಚರಿತ್ರೆಯನ್ನು ಸಂಪೂರ್ಣವಾಗಿ ನನಗೆ ತಿಳುಹಿಸು ॥ ೧೦ ॥ ಎಂದು ಬೆಸಗೊಳ್ಳಲು ಮೈತ್ರೇಯನು ಹೇಳುತಾನೆ. ಅಯ್ಯಾ ವಿದುರನೆ ! ಕೇಳು.

ದ್ಯೋ ರಂತರಾ ಕ್ಷೇತ್ರ ಮಾವಸನ್। ಆರಬ್ಧಾನೇವ ಬುಭುಜೇ ಭೋಗಾನ್
ಪುಣ್ಯಜಿಹಾಸಯಾ ॥ ೧೧ ॥ ಸರ್ವತ್ರಾಸ್ಖಲಿತಾದೇಶ ಸ್ಸಪ್ತ ದ್ವೀಪೈ
ಕದಂಡಧೃಕ್ । ಅನ್ಯತ್ರ ಬ್ರಾಹ್ಮಣಕುಲಾ ದನ್ಯತ್ರಾಚ್ಯುತ ಗೋ
ತ್ರತಃ ॥ ೧೨ ॥ ಏಕದಾಸೀ ನ್ಮಹಾಸತ್ರದೀಕ್ಷಾ ತತ್ರ ದಿವೌಕಸಾಂ ।
ಸಮಾಜೋ ಬ್ರಹ್ಮರ್ಷೀಣಾಂ ರಾಜರ್ಷೀಣಾಂಚ ಸತ್ತಮ ! ॥೧೩॥ ತಸ್ಮಿ
ನ್ನರ್ಹತ್ಸು ಸರ್ವೇಷು ಸ್ವರ್ಚಿತೇಷು ಯಥಾರ್ಹತಃ । ಉತ್ಥಿತ ಸ್ಸದಸೋ
ಮಧ್ಯೇ ತಾರಾಣಾ ಮುಡುರಾಡಿವ ॥ ೧೪ ॥ ಪ್ರಾಂಶುಃ ಪೀನಾಯತ
ಭುಜೋ ಗೌರಃ ಕಂಜಾರುಣೇಕ್ಷಣಃ । ಸುನಾಸ ಸ್ಸುಮುಖ ಸ್ಸೌಮ್ಯಃ

---

ಮೈತ್ರೇಯನು ಹೇಳುತ್ತಾನೆ, ಆ ಪೃಥುವು, ಗಂಗಾಯಮುನಯೋಃ - ಗಂಗೆಯಮುನೆಗಳೆಂಬ, ದೇವನ ದ್ಯೋಃ - ದೇವನದಿಗಳ, ಅಂತರಾ - ನಡುವೆಯಿರುವ, ಕ್ಷೇತ್ರಂ - ಬ್ರಹ್ಮಾವರ್ತದಲ್ಲಿ, ಆವಸನ್ - ನೆಲಸುತ್ತಾ, ಪುಣ್ಯಜಿಹಾಸಯಾ - ಪುಣ್ಯವನ್ನು ಕಳೆಯಲೆಳಸಿ, ಆರಬ್ಧಾನ್ - ಪೂರ್ವಕರ್ಮಗಳಿಂದ ಫಲಕ್ಕೆ ಬಂದಿರುವ, ಭೋಗಾನೇವ - ಭೋಗಗಳನ್ನೇ, ಬುಭುಜೇ - ಅನುಭವಿಸಿದನು ॥ ೧೧॥

ಸರ್ವತ್ರ - ಎಲ್ಲೆಲ್ಲಿಯೂ, ಅಸ್ಖಲಿತಾದೇಶಃ - ಆಜ್ಞೆಗೆ ತಡೆಯಿಲ್ಲದೆ, ಬ್ರಾಹ್ಮಣಕುಲಾತ್ - ಬ್ರಾಹ್ಮಣಜಾತಿಗಿಂತ, ಅನ್ಯತ್ರ-ಬೇರೆ, ಸಪ್ತ...ಧೃಕ್-ಸಪ್ತದ್ವೀಪಗಳಿಗೂ ಒಬ್ಬನೇ ಪಾಲಕನಾಗಿದ್ದನು ॥೧೨॥ ಸತ್ತಮ-ಎಲೈ ಸಾಧುವೆ । ಏಕದಾ - ಒಮ್ಮೆ, ಮಹಾಸತ್ರದೀಕ್ಷಾ - ದೊಡ್ಡಯಾಗಕ್ಕೆ ದೀಕ್ಷೆಯು, ಆಸೀತ್ - ಆಯಿತು, ತತ್ರ - ಆಯಾಗದಲ್ಲಿ, ದಿವೌಕಸಾಂ - ದೇವತೆಗಳ, ಬ್ರಹ್ಮರ್ಷೀಣಾಂ - ಬ್ರಹ್ಮರ್ಷಿಗಳ, ರಾಜರ್ಷೀಣಾಂಚ - ರಾಜಋಷಿಗಳ, ಸಮಾಜಃ-ಸಭೆಯು, ಆಯಿತು ॥ ೧೩ ॥ ತಸ್ಮಿನ್ - ಆ ಸಭೆಯಲ್ಲಿ, ಅರ್ಹತ್ಸು - ಪೂಜ್ಯರಾದ, ಸರ್ವೇಷು - ಎಲ್ಲರೂ, ಸ್ವರ್ಚಿತೇಷು - ಪೂಜಿಸಲ್ಪಡಲು, ಸದಸಃ - ಸಭೆಯ, ಮಧ್ಯೇ - ಮಧ್ಯದಲ್ಲಿ, ತಾರಾಣಾಂ - ನಕ್ಷತ್ರಗಳಲ್ಲಿ, ಉಡುರಾಡಿವ - ಚಂದ್ರನಂತೆ, ಉತ್ಥಿತಃ - ಎದ್ದನು ॥೧೪॥ ಪ್ರಾಂಶುಃ - ಎತ್ತರವಾದ, ಪೀನಾ...ಜಃ -ಗಡುಸಾದನಿಡುದೋಳುಳ್ಳ, ಗೌರಃ - ಬೆಳ್ಳಗಿರುವ, ಕಂಜಾ...ಣಃ - ತಾವರೆಯಂತೆ ಕೆಂಪಾದ ಕಣ್ಣುಳ್ಳ, ಸುನಾಸಃ - ಎತ್ತರವಾದ ಮೂಗುಳ್ಳ, ಸುಮುಖಃ-

---

ಬಳಿಕ ಆ ಪೃಥುರಾಜನು ದೇವನದಿಗಳಾದ ಗಂಗಾಯಮುನೆಗಳ ಮಧ್ಯದಲ್ಲಿರುವ ಬ್ರಹ್ಮಾವರ್ತದಲ್ಲಿ ನೆಲಗೊಂಡು ಮುಮುಕ್ಷುವಾಗಿ ಪಾಪದಂತೆ ಪುಣ್ಯವನ್ನೂ ಕಳೆದುಕೊಳ್ಳಬೇಕೆಂದೆಳಸಿ ಪ್ರಾಚೀನ ಕರ್ಮಗಳಿಂದ ಫಲೋನ್ಮುಖಗಳಾದ ಪ್ರಾರಬ್ಧಫಲಗಳನ್ನು ಅನುಭವಿಸುತ್ತಾ ಬಂದನು ॥೧೧॥ ಸಪ್ತದ್ವೀಪಗಳೊಳಗೆ ಬ್ರಾಹ್ಮಣಕುಲ, ವಿಷ್ಣುಭಕ್ತರಾದ ಭಾಗವತರು, ಇವರು ಹೊರತು ಮತ್ತೆಲ್ಲಿಯೂ ಆತನಾಜ್ಞೆಗೆ ತಡೆಯಿರಲಿಲ್ಲ ॥೧೨॥ ಇಂತಿರುವ ರಾಜನು ಒಮ್ಮೆ ಬಾದು ಮಹಾಸತ್ರಯಾಗವನ್ನು ನಡೆಯಿಸಬೇಕೆಂದು ದೀಕ್ಷಿತನಾದನು. ಆ ಯಾಗದಲ್ಲಿ ದೇವತೆಗಳು, ಬ್ರಹ್ಮರ್ಷಿಗಳು ರಾಜರ್ಷಿಗಳು ಎಲ್ಲರೂ ಬಂದು ನೆರೆದರು ॥ ೧೩ ॥ ಪೂಜ್ಯರಾದ ಅವರೆಲ್ಲರಿಗೂ ಸರಿಯಾದ ಸತ್ಕಾರಗಳು ನಡೆದವು. ಆಗ ನಕ್ಷತ್ರಮಂಡಲದಲ್ಲಿರುವ ಚಂದ್ರನಂತೆ ಆ ಸಭಾಮಧ್ಯದಲ್ಲಿ ಕುಳಿತಿದ್ದ ಪೃಥುರಾಜನು ಎದ್ದು ನಿಂತುಕೊಂಡನು ॥೧೪॥ ಆತನು ಬಹಳ ಉನ್ನತ ಪುರುಷನು. ಆತನ ನಿಡುದೋಳುಗಳು ಬಲು ಗಡುಸಾಗಿದ್ದವು ಮೈಬೆಳ್ಳಗಿದ್ದಿತು. ಕಣ್ಣುಗಳು ಕೆಂದಾವರೆಯನ್ನು

ಪೀನಾಂಸ ಸ್ಸುದ್ವಿಜಸ್ಮಿತಃ ॥ ೧೫ ॥ ವ್ಯೂಢವಕ್ಷಾ ಬೃಹಚ್ಛ್ರೋಣಿ ರ್ವಲಿ
ವಲ್ಗುತಲೋದರಃ । ಆವರ್ತನಾಭಿ ರೋಜಸ್ವೀ ಕಾಂಚನೋರು ರುದಗ್ರ
ಪಾತ್ ॥ ೧೬ ॥ ಸೂಕ್ಷ್ಮವಕ್ರಾಽಸಿತಸ್ನಿಗ್ಧಮೂರ್ಧಜಃ ಕಂಬು
ಕಂಧರಃ । ಮಹಾಧನೇ ದುಕೂಲಾಗ್ರ್ಯೇ ಪರಿಧಾಯೋಪವೀಯ ಚ ॥ ೧೭ ॥
ವ್ಯಂಜಿತಾಽಶೇಷ ಗಾತ್ರಶ್ರೀ ರ್ನಿಯಮೇ ನ್ಯಸ್ತಭೂಷಣಃ । ಕೃಷ್ಣಾಜಿನ
ಧರ ಶ್ರೀಮಾನ್ ಕುಶಪಾಣಿಃ ಕೃತೋಚಿತಃ ॥ ೧೮ ॥ ಶಿಶಿರ ಸ್ನಿಗ್ಧ ತಾರಾ

ಬಿಳಿಯ ಮುಖವುಳ್ಳ, ಸೌಮ್ಯಃ - ಶಾಂತನಾದ, ಪೀನಾಂಸಃ - ಗಡುಸಾದ ಹೆಗಲುಳ್ಳ, ಸುದ್ವಿ....ತಃ - ಬಿಳಿಯಹಲ್ಲುಗಳು ಕಿರುನಗೆಯೂ ಉಳ್ಳ ॥ ೧೫ ॥ ವ್ಯೂಢವಕ್ಷಾಃ - ಅಗಲವಾದೆದೆಯುಳ್ಳ, ಬೃಹಚ್ಛ್ರೋಣಿಃ - ತೋರವಾದಶ್ರೋಣಿಯುಳ್ಳ, ವಲಿ....ರಃ - ವಳಿಗಳಿಂದ ಮನೋಹರವಾದ ಹೊಟ್ಟೆಯುಳ್ಳ, ಆವರ್ತನಾಭಿಃ - ಸುಳಿಯಾದಹೊಕ್ಕಳುಳ್ಳ, ಓಜಸ್ವೀ - ತೇಜಶ್ಶಾಲಿಯಾದ, ಕಾಂಚನೋರುಃ - ಚಿನ್ನದಂತೆ ತೊಡೆಗಳುಳ್ಳ, ಉದಗ್ರಪಾತ್ - ಎತ್ತರವಾದ ಪಾದಗಳುಳ್ಳ ॥ ೧೬ ॥ ಸೂಕ್ಷ್ಮ...ಜಃ - ನೀರಾಗಿಯೂ, ಕೊಂಕಾಗಿಯೂ ನುಣುಪಾಗಿಯೂ ಇರುವ ಕೂದಲುಳ್ಳ, ಕಂಬು....ದಃ - ಶಂಖದಂತೆ ಸುಳಿಗೊರಲುಳ್ಳ ಮಹಾಧನೇ - ಬಹಳ ಬೆಲೆಯುಳ್ಳ, ದುಕೂಲಾಗ್ರ್ಯೇ - ಎರಡು ಕೂಲಗಳನ್ನು, ಪರಿಧಾಯ - ಉಟ್ಟು, ಉಪವೀಯ ಚ - ಹೊದ್ದುಕೊಂಡು ॥ ೧೭ ॥ ವ್ಯಂಜಿ...ಶ್ರೀಃ-ಶರೀರದ ಕಾಂತಿಯನ್ನು ಹೊರಪಡಿಸುತ್ತಾ, ನಿಯಮೇ - ನಿಮಿತ್ತದಿಂದ, ನ್ಯಸ್ತ...ಣಃ - ವಡವೆಗಳನ್ನು ಧರಿಸಿರುವ, ಕೃಷ್ಣಾಜಿನಧರಃ - ಜಿಂಕೆಯ ತೊಗಲನ್ನು ಧರಿಸಿದ, ಶ್ರೀಮಾನ್ - ತೇಜೋವಂತನಾದ, ಕುಶಪಾಣಿಃ - ದರ್ಭೆಯನ್ನು ಕೈಯಲ್ಲಿ ಹಿಡಿದಿರವ, ಕೃತೋಚಿತಃ - ಉಚಿತಕರ್ಮಗಳನ್ನು ಮಾಡಿರುವ ॥ ೧೮ ॥ ಶಿಶಿ...ಕ್ಷಃ - ತಣ್ಣಗೆ ಸ್ನೇಹದಿಂದ ಕೂಡಿದ ತಾರೆಗಳ ಕಣ್ಣುಳ್ಳ, ಉರ್ವೀಶಃ - ಆ ಪೃಥುರಾಜನು, ಸಮಂತತಃ - ಸುತ್ತಲೂ, ಸಮೈಕ್ಷತ - ನೋಡಿದನು, ಸದಃ - ಸಭೆಯನ್ನು, ಸಂಹರ್ಷಯನ್ನಿವ - ಸಂತೋಷಗೊಳಿಸುವಂತೆ, ಇದಂ - ಈ ಮಾತ

ಹೋಲುತ್ತಿದ್ದುವು. ನಾಸಾದಂಡವು ಉದ್ದವಾಗಿ ಎತ್ತರವಾಗಿದ್ದಿತು. ಸುಂದರವಾದ ಮುಖವು ಪ್ರಸನ್ನವಾಗಿದ್ದಿತು. ಸುಲಿಹಲ್ಲುಗಳಿಂದ ಕಿರುನಗೆಯು ಹೊರಹೊಮ್ಮುತ್ತಿತ್ತು ॥ ೧೫ ॥ ಎದೆಯು ವಿಶಾಲವಾಗಿಯೂ, ನಿತಂಬವು ತೋರವಾಗಿಯೂ, ಜಠರವು ವಳಿಗಳಿಂದ ರಮಣೀಯ್ಯವಾಗಿಯೂ, ತೊಡೆಗಳು ಚಿನ್ನದ ಬಾಳೆಗಂಬಗಳಂತೆ ಸೊಗಸಾಗಿಯೂ, ಅಡಿಗಳು ಎತ್ತರವಾಗಿಯೂ ಒಪ್ಪುತ್ತಿದ್ದುವು. ದೇಹಕಾಂತಿಯು ಮಿರುಗುತ್ತಿತ್ತು ॥ ೧೬ ॥ ತಲೆಗೂದಲು ನೀರಾಗಿಯೂ, ಕೊಂಕಾಗಿಯೂ, ನುಣುಪಾಗಿಯೂ ಹೊಳೆಯುತ್ತಿದ್ದುವು. ಕೊರಳು ಶಂಖದಂತೆ ಸುಳಿಗೊಂಡಿತ್ತು. ಬಹಳಬೆಲೆಯುಳ್ಳ ಚೀನಾಂಬರಗಳನ್ನು ಉಟ್ಟು ಹೊದ್ದುಕೊಂಡಿದ್ದನು ॥ ೧೭ ॥ ಕವಚಾದಿಗಳನ್ನು ತೊಡದೆ ಮೈಯನ್ನು ಬಿಟ್ಟುಕೊಂಡಿರುವುದರಿಂದ ಅಂಗಾಂಗಗಳೆಲ್ಲವೂ ಲಾವಣ್ಯದಿಂದ ಮೆರೆಯುತ್ತಿದ್ದುವು. ಯಜ್ಞನಿಯಮಕ್ಕಾಗಿ ವಡವೆಗಳನ್ನೂ ಕೃಷ್ಣಾಜಿನವನ್ನೂ ಧರಿಸಿದ್ದನು. ನಿತ್ಯಕೃತ್ಯಗಳನ್ನು ನೆರವೇರಿಸಿ ದರ್ಭೆಗಳನ್ನು ಕೈಯಲ್ಲಿ ಹಿಡಿದು ಅಪರಸೂರ್ಯನಂತೆ ಹೊಳೆಯುತ್ತಿದ್ದನು ॥ ಆತನ ಕಣ್ಣುಗಳು ನೋಟಕರ ತಾಪವನ್ನು ಕಳೆಯುತ್ತಾ, ರಮ್ಯಗಳಾದ ಆಲಿಗಳಿಂ ಶೋಭಿಸುತ್ತಿದ್ದುವು. ಇಂತಹ ಪೃಥುರಾಜನು ಸುತ್ತಮುತ್ತಲೂ ನೋಡಿ ಸಭೆಯವ

ಷ್ಟಃ ಸಮೈಕ್ಷತ ಸಮಂತತಃ । ಊಚಿವಾನಿದಮುರ್ವೀಶ ಸ್ಸದ ಸ್ಸಂಹರ್ಷಯನ್ನಿವ ॥ ೧೯ ॥ ಚಾರು ಚಿತ್ರಪದಂ ಶ್ಲಕ್ಷ್ಣಂ ಮೃಷ್ಟಂ ಗೂಢಮವಿಕ್ಲಬಂ । ಸರ್ವೇಷಾಮುಪಕಾರಾರ್ಥಂ ತದಾ ಅನುವದನ್ನಿವ ॥೨೦॥ ರಾಜಾ॥ ಸಭ್ಯಾ ! ಶೃಣುತ ಭದ್ರಂ ವ ಸ್ಸಾಧವೋ ಯ ಇಹಾಗತಾಃ॥ ಸತ್ಸು ಜಿಜ್ಞಾಸುಭಿಃ ಧರ್ಮ ಮಾವೇದ್ಯಂ ಸ್ವಮನೀಷಿತಂ ॥ ೨೧ ॥ ಅಹಂ ದಂಡಧರೋ ರಾಜಾ ಪ್ರಜಾನಾಮಿಹ ಯೋಜಿತಃ । ರಕ್ಷಿತಾ ವೃತ್ತಿದ

ನ್ನು, ಊಚಿವಾನ್ - ಹೇಳಿದನು ॥ ೧೯ ॥ ಚಾರು - ಕಿವಿಗಿಂಪಾಗಿಯೂ, ಚಿತ್ರಪದಂ - ಚಿತ್ರಗಳಾದ ಪದಗಳುಳ್ಳ, ಶ್ಲಕ್ಷ್ಣಂ - ಪ್ರಶಸ್ತವಾದ, ಮೃಷ್ಟಂ - ಶುದ್ಧವಾದ, ಗೂಢಂ - ಅರ್ಥಗರ್ಭಿತವಾದ, ಅವಿಕ್ಲಬಂ - ಅವ್ಯಾಕುಲವಾದ ನುಡಿಯನ್ನು, ಸರ್ವೇಷಾಂ - ಎಲ್ಲರ, ಉಪಕಾರಾರ್ಥಂ - ಉಪಕಾರಕ್ಕಾಗಿ, ತದಾ - ಆಗ, ಅನುವದನ್ನಿವ - ಅನುವಾದ ಮಾಡುವಂತೆ ಹೇಳಿದನು ॥ ೨೦ ॥ ಸಭ್ಯಾಃ - ಸಭಾಸದರಿರಾ ! ಇಹ - ಇಲ್ಲಿ, ಆಗತಾಃ - ಬಂದಿರುವ, ಯೇ - ಯಾವ, ಸಾಧವಃ - ಸಾಧುಗಳುಂಟೋ, ನೀವೆಲ್ಲರೂ, ಶೃಣುತ - ಕೇಳಿರಿ, ವಃ - ನಿಮಗೆ, ಭದ್ರಂ - ಒಳ್ಳೆಯದಾಗುವುದು, ಧರ್ಮಃ - ಧರ್ಮವನ್ನು, ಜಿಜ್ಞಾಸುಭಿಃ - ತಿಳಿಯಲೆಳಸುವವರಿಂದ, ಸತ್ಸು - ಸಾಧುಗಳಲ್ಲಿ, ಸ್ವಮನೀಷಿತಂ - ತಮ್ಮ ಅಭಿಪ್ರಾಯವು, ಆವೇದ್ಯಂ - ತಿಳಿಸಲ್ಪಡಬೇಕು ॥ ೨೧ ॥ ಅಹಂ - ನಾನು, ಪ್ರಜಾನಾಂ - ಪ್ರಜೆಗಳಿಗೆ, ದಂಡಧರಃ - ಶಿಕ್ಷಕನಾಗಿಯೂ, ರಾಜಾ - ರಂಜಕನಾಗಿಯೂ, ರಕ್ಷಿತಾ - ರಕ್ಷಕನಾಗಿಯೂ, ವೃತ್ತಿದಃ - ಜೀವನವನ್ನು ಕೊಡತಕ್ಕವನಾಗಿಯೂ, ಪೃಥಕ್ - ಬೇರೆಬೇರೆ, ಸ್ವೇಷು ಸೇತುಷು - ತಂತಮ್ಮ ಮರ್ಯಾದೆಗಳಲ್ಲಿ, ಸ್ಥಾಪಿತಾ - ನೆಲೆಗೊಳಿಸುವವನಾಗಿಯೂ, ಇಹ - ಈ ಕಾರ್ಯಗಳಲ್ಲಿ, ನಿಯೋಜಿತಃ - ನಿಯಮಿಸಲ್ಪಟ್ಟಿರು

ಸಂತೋಷಗೊಳ್ಳುವಂತೆ ಹೇಳತೊಡಗಿದನು ॥ ೧೯ ॥ ಆತನ ನುಡಿಯು ಕಿವಿಗಿಂಪಾಗಿಯೂ, ಚಿತ್ರಗಳಾದ ಪದಗಳಿಂದ ರಮಣೀಯವಾಗಿಯೂ, ಪ್ರಶಸ್ತವಾಗಿಯೂ, ಪರಿಶುದ್ಧವಾಗಿಯೂ, ಅರ್ಥಗರ್ಭಿತವಾಗಿಯೂ, ಹರ್ಷಕರವಾಗಿಯೂ, ಎಲ್ಲರಿಗೂ ಉಪಕಾರಕವಾಗಿಯೂ, ಇದ್ದಿತು. ಇಂತಹ ನುಡಿಯನ್ನು ಅನುವಾದಿಸುವಂತೆ ನುಡಿದನು ॥ ೨೦ ॥ ‘ಅಯ್ಯಾ ಸಾಧುಗಳಾದ ಸಭಾಸದರಿರಾ ! ಕೇಳಿರಿ. ನಾನು ಸರ್ವಜ್ಞನಲ್ಲ. ಜಿಜ್ಞಾಸುವಾಗಿರುವೆನು. ಧರ್ಮಸ್ವರೂಪವನ್ನು ತಿಳಿಯಲೆಳಸುವವನು ಸಾಧುಸಮಾಗಮವುಂಟಾದಾಗ ತನ್ನ ಅಭಿಪ್ರಾಯವನ್ನು ತಿಳಿಸಬೇಕು. ಆದುದರಿಂದ ನಾನು ಪ್ರಜಾನುಶಾಸನ ವ್ಯಾಜದಿಂದ ತಮ್ಮಲ್ಲಿ ವಿಚಾರಮಾಡುವೆನೇ ಹೊರತು ನಿಮಗೆ ಧರ್ಮೋಪದೇಶ ಮಾಡತಕ್ಕವನಲ್ಲ ॥ ೨೧ ॥ ಪ್ರಜೆಗಳನ್ನು ದಂಡಿಸುವುದಕ್ಕೂ ಸಂತೋಷಗೊಳಿಸುವುದಕ್ಕೂ, ಸಲಹುವದಕ್ಕೂ ಜೀವಿಕಾದಾನಕ್ಕೂ, ಅವರವರ ವರ್ಣಾಶ್ರಮಗಳಿಗೆ ಉಚಿತಗಳಾದ ಧರ್ಮಮರ್ಯಾದೆಗಳಲ್ಲಿ ಅವರನ್ನು ನಿಯಮಿಸುವದಕ್ಕೂ, ನಾನು ಭಗವಂತನಿಂದ ನಿಯಮಿತನಾಗಿರುವೆನು. ಪ್ರಾಚೀನಕರ್ಮಸಾಕ್ಷಿಯಾದ ಪರಮೇಶ್ವರನು ಯಾವನ ವಿಷಯದಲ್ಲಿ ಸಂತೋಷಗೊಳ್ಳುವನೋ, ಬ್ರಹ್ಮಚಾರಿಗೆ ಯಾವ ಉತ್ತಮಲೋಕಗಳು ದೊರೆಯುವುವೋ, ಧರ್ಮದಿಂದ ಪ್ರಜಾಪಾಲನ ರೂಪವಾದ ಕಾರ್ಯವನ್ನು ನಡೆಯಿಸುವ ರಾಜನಿಗೂ ಆ ಲೋಕಗಳುಂಟಾಗುವುದೇ ದಿಟ. ಆದಕಾರಣ ಈ ಕಾರ್ಯವು ನನಗೆ. ಅವ

ಸ್ವೇಷು ಸೇತುಷು ಸ್ಥಾಪಿತಾ ಪೃಥಕ್ ॥ ೨೨ ॥ ತಸ್ಯ ಮೇ ತದನುಷ್ಠಾ
ನಾದ್ಯಾನಾಹುರ್ಬ್ರಹ್ಮವಾದಿನಃ । ಲೋಕಾಃ ಸ್ಯುಃ ಕಾಮಸಂದೋಹಾ
ಯಸ್ಯ ತುಷ್ಯತಿ ದಿಷ್ಟದೃಕ್ ॥ ೨೩ ॥ ಯ ಉದ್ಧರೇತ್ಕರಂ ರಾಜಾ
ಪ್ರಜಾ ಧರ್ಮೇಷ್ವಶಿಕ್ಷಯನ್ । ಪ್ರಜಾನಾಂ ಶಮಲಂ ಭುಙ್ಕ್ತೇ ಭಗಂ ಚ
ಸ್ವಂ ಜಹಾತಿ ಸಃ ॥ ೨೪ ॥ ತತ್ಪ್ರಜಾಃ ! ಭರ್ತೃಪಿಂಡಾರ್ಥಂ ಸ್ವಾ
ರ್ಥಮೇವಾನಸೂಯವಃ । ಕುರುತಾಧೋಕ್ಷಜಧಿಯ ಸ್ತರ್ಹಿ ಮೇ
ಽನುಗ್ರಹಃ ಕೃತಃ ॥ ೨೫ ॥ ಯೂಯಂ ತದನುಮೋದಧ್ವಂ ಪಿತೃದೇವ
ರ್ಷಯೋಽಮಲಾಃ । ಕರ್ತುಃ ಶಾಸ್ತು ರನುಜ್ಞಾತು ಸ್ತುಲ್ಯಂ ಯತ್ಪ್ರೇತ್ಯ ತ

ತೆನು ॥ ೨೨ ॥ ದಿಷ್ಟದೃಕ್ - ಕರ್ಮಸಾಕ್ಷಿಯಾದ ಭಗವಂತನು, ಯಸ್ಯ - ಯಾವನ ವಿಷಯದಲ್ಲಿ, ತು
ಷ್ಯತಿ - ಸಂತೋಷಿಸುವನೋ, ತಸ್ಯ - ಆ, ಬ್ರಹ್ಮವಾದಿನಃ - ಜ್ಞಾನಿಯಾದವರಿಗೆ, ಯಾನ್ - ಯಾವಲೋ
ಕಗಳನ್ನು, ಆಹುಃ - ಹೇಳುವರೋ, ಏತದನುಷ್ಠಾನಾತ್ - ಈ ಕಾರ್ಯವನ್ನು ಮಾಡುವುದರಿಂದ, ಮೇ
ನನಗೆ, ಕಾಮಸಂದೋಹಾಃ - ಕಾಮಗಳನ್ನು ಕರೆಯುವ, ತೇ ಲೋಕಾಃ - ಆ ಲೋಕಗಳು, ಸ್ಯುಃ -
ಉಂಟಾಗುವುವು, ಸತ್ಯಂ - ದಿಟವು ॥ ೨೩ ॥

ಯಃ ರಾಜಾ - ಯಾವ ರಾಜನು, ಪ್ರಜಾಃ - ಪ್ರಜೆಗಳನ್ನು, ಧರ್ಮೇ-ಧರ್ಮದಲ್ಲಿ, ಅಶಿಕ್ಷಯನ್ -
ಬಳಗಿಸದೆ, ಕರಂ - ಕಾಣಿಕೆಯನ್ನು, ಉದ್ಧರೇತ್ - ತೆಗೆದುಕೊಳ್ಳುವನೋ, ಸಃ-ಅವನು, ಪ್ರಜಾನಾಂ-
ಪ್ರಜೆಗಳ, ಶಮಲಂ - ಪಾಪವನ್ನು, ಭುಙ್ಕ್ತೇ - ಅನುಭವಿಸುತ್ತಾನೆ, ಸ್ವಂ-ತನ್ನ, ಭಗಂ ಚ - ಪುಣ್ಯ
ವನ್ನೂ, ಜಹಾತಿ - ಬಿಡುತ್ತಾನೆ ॥ ೨೪ ॥ ಪ್ರಜಾಃ - ಪ್ರಜೆಗಳಿರಾ ! ತತ್ - ಆದುದರಿಂದ, ಅನಸೂ
ಯವಃ - ಅಸೂಯೆಯಿಲ್ಲದೆ, ಅಧೋ...ಯಃ - ವಿಷ್ಣುವಿನಲ್ಲಿ ಮನಸ್ಸಿಟ್ಟು, ಭರ್ತೃ...ರ್ಥಂ - ರಾಜನಾದ,
ನನ್ನ ಹಿತಕ್ಕಾಗಿ, ಸ್ವಾರ್ಥಮೇವ-ನಿಮ್ಮ ಕೆಲಸವಾದ ವರ್ಣಾಶ್ರಮಾಚಾರಾದಿಗಳನ್ನು, ಕುರುತ-ಮಾಡಿರಿ
ತರ್ಹಿ - ಹಾಗಾದರೆ, ಮೇ - ನನ್ನಲ್ಲಿ, ಅನುಗ್ರಹಃ - ಅನುಗ್ರಹವು, ಕೃತಃ - ಮಾಡಲ್ಪಟ್ಟಿತು ॥ ೨೫ ॥
ಅಮಲಾಃ - ನಿಷ್ಪಾಪರಾದ, ಪಿತೃ...ಯಃ - ಪಿತೃಗಳು, ದೇವತೆಗಳು, ಋಷಿಗಳಿರಾ ! ಯೂಯಂ - ನೀ
ವು, ತತ್ - ನಾನು ಹೇಳುವುದನ್ನು, ಅನುಮೋದಧ್ವಂ - ಸಮ್ಮತಿಸಿರಿ, ಕರ್ತುಃ - ಮಾಡುವವನಿಗೂ, ಶಾ
ಸ್ತುಃ - ಹೇಳಿದವನಿಗೂ, ಅನುಮಂತುಃ - ಸಮ್ಮತಿಸಿದವನಿಗೂ, ಪ್ರೇತ್ಯ - ಪರಲೋಕದಲ್ಲಿ, ಯತ್ -

ಶ್ಯವಾದುದು ॥ ೨೩ ॥ ಯಾವ ರಾಜನು ಪ್ರಜೆಗಳನ್ನು ಧರ್ಮಮಾರ್ಗದಲ್ಲಿ ನೆಲೆಗೊಳಿ
ಸದೆ ಅವರಿಂದ ಕಾಣಿಕೆಗಳನ್ನು ತೆಗೆದು ಕೊಳ್ಳುವನೋ, ಅವನು ಪ್ರಜೆಗಳ ಪಾಪವನ್ನು
ಅನುಭವಿಸುವುದರಲ್ಲದೆ ತನ್ನ ಪುಣ್ಯವನ್ನೂ ಕಳೆದುಕೊಳ್ಳುವನು ॥ ೨೪ ॥ ಅಯ್ಯಾ
ಪ್ರಜೆಗಳಿರಾ ! ಆದುದರಿಂದ ನೀವು ಅಸೂಯೆಯನ್ನುಳಿದು ಭಗವದ್ಭಕ್ತರಾಗಿ ರಾಜನಾದ
ನನ್ನ ಹಿತಕ್ಕಾಗಿ ನಿಮ್ಮ ಕರ್ತವ್ಯಗಳಾದ ವರ್ಣಾಶ್ರಮಾಚಾರಾದಿಗಳನ್ನು ನಡೆಯಿಸಿ
ಭಗವದರ್ಪಣೆಯನ್ನು ಮಾಡಿರಿ ಇಂತು ನೀವು ಮಾಡುವುದೇ ನನಗೆ ಪರಮಾನುಗ್ರ
ಹವು ॥ ೨೫ ॥ ಎಲೈ ಪವಿತ್ರರಾದ ಪಿತೃಗಳಿರಾ ! ದೇವತೆಗಳಿರಾ ! ಋಷಿಗಳಿರಾ !
ನೀವಿದನ್ನು ಅನುಮೋದಿಸಿರಿ ಇಂತಹ ಧರ್ಮಗಳನ್ನು ಮಾಡಿದವನಿಗೂ,ಮಾಡಬೇಂದು
ಪ್ರೇರಿಸಿದವನಿಗೂ, ಮಾಡುವದನ್ನು ಸಮ್ಮತಿಸಿದವನಿಗೂ ಸಹ ಪರಲೋಕದಲ್ಲಿ ಸಮಾನ

ತ್ಫಲಂ ॥ ೨೭ ॥ ‡ ಅಸ್ತಿ ಯಜ್ಞಪತಿ ರ್ನಾಮ ಕೇಷಾಂಚಿ ದರ್ಹಸತ್ತ
ಮಾಃ ! । ಇಹಾಽಮುತ್ರ ಚ ಲಕ್ಷ್ಯಂತೇ ಜ್ಯೋತ್ಸ್ನಾವತ್ಯಃ ಕ್ವಚಿದ್ಭುವಃ॥

ಯಾವ ಫಲವುಂಟೋ, ತತ್ - ಅದು, ತುಲ್ಯಂ - ಸಮಾನವು ॥ ೨೭ ॥ ಅರ್ಹಸತ್ತಮಾಃ - ಅಯ್ಯಾ ಪೂಜ್ಯರಿರಾ ! ಕೇಷಾಂಚಿತ್ - ಕೆಲವರ ಮತದಲ್ಲಿ, ಯಜ್ಞಪತಿರ್ನಾಮ -ಯಜ್ಞಪತಿ ಯೆಂಬವನು, ಅಸ್ತಿ- ಇರುತ್ತಾನೆ. ಇಹ - ಪ್ರತ್ಯಕ್ಷವಾಗಿಯೂ, ಅಮುತ್ರ ಚ - ಶಾಸ್ತ್ರದಿಂದಲೂ, ಜ್ಯೋತ್ಸ್ನಾವತ್ಯಃ - ಕಾಂತಿ ಯುಕ್ತಗಳಾದ, ಭುವಃ - ಶರೀರಗಳು, ಕ್ವಚಿತ್ - ಕೆಲವು, ಲಕ್ಷ್ಯಂತೇ - ಕಾಣಲ್ಪಡುವುವು ॥ ೨೮ ॥

ಫಲವು ದೊರೆಯುವದು ॥ ೨೭ ॥ "ಕರ್ಮಗಳನ್ನು ಮಾಡುವುದಕ್ಕೇನೋ ನಾವು ಸಮ್ಮತಿಸುವೆವು. ನಿಮ್ಮ ತಂದೆಯಾದ ವೇನನೇ ನಿಷೇಧಿಸಿರುವುದರಿಂದ ಮಾಡಿದ ಕರ್ಮಗಳನ್ನು ಈಶ್ವರಾರ್ಪಣಮಾಡಬೇಕೆಂಬುದನ್ನು ಸಮ್ಮತಿಸಲಾರೆವು" ಎನ್ನುವಿರೋ?" ಅಯ್ಯಾ ಅತ್ಯಂತ ಪೂಜ್ಯರಾದ ಪ್ರಜೆಗಳಿರಾ! ಕೆಲವರ ಮತದಲ್ಲಿ ಯಜ್ಞಮೂರ್ತಿಯಾದಪರಮೇಶ್ವರನುಂಟು.ಕೆಲವರ ಮತವೆಂಬುದರಿಂದ ಈಶ್ವರನಿರುವುದು ಸಂಶಯವೆಂದು ತಿಳಿಯಬೇಡಿರಿ. ಪ್ರತ್ಯಕ್ಷದಿಂದಲೂ ಶಾಸ್ತ್ರಪ್ರಮಾಣದಿಂದಲೂ ಕಾಣಲ್ಪಡುತ್ತಿರುವ ಈ ಜಗದ್ವೈಚಿತ್ರ್ಯಕ್ಕೆ ಪರಮೇಶ್ವರನು ಹೊರತು ಬೇರೇ ಕಾರಣವು ತೋರುವುದಿಲ್ಲ ॥ ೨೮ ॥

‡ (೧) ಪಿ. ಕೆಲವರ ಮತದಲ್ಲಿ ಈಶ್ವರನುಂಟೆಂದು ಹೇಳಿರುವುದರಿಂದ, ಈಶ್ವರನಿಲ್ಲವೆಂಬ ನಿರೀಶ್ವರವಾದಿಗಳ ಮತವನ್ನೂ ಸ್ವಲ್ಪ ಮಟ್ಟಿಗೆ ವಿವರಿಸಬೇಕಾಯಿತು. ಅವೆಂತೆಂದರೆ "ಪ್ರಕೃತಿ ಪುರುಷ (ಜಡಚೇತನ)ರಿಗಿಂತ ಬೇರೆಯಾಗಿ ಈಶ್ವರನಿರುವುದಕ್ಕೆ ಪ್ರಮಾಣವಿಲ್ಲ ಪ್ರಮಾಣವು ಪ್ರತ್ಯಕ್ಷ,ಅನುಮಾನ, ಶಬ್ದವೆಂದು ಮೂರುವಿಧ.ಅವುಗಳಲ್ಲಿ ಅಪ್ರತ್ಯಕ್ಷನಾದ ಈಶ್ವರನ ವಿಷಯದಲ್ಲಿ, ಪ್ರತ್ಯಕ್ಷವು ಪ್ರಮಾಣವಲ್ಲ. ಪ್ರತ್ಯಕ್ಷವಾದ ಹೇತುವಿನಿಂದ ನಿಶ್ಚಯಿಸಲ್ಪಡುವಅನುಮಾನವೂ ಪ್ರತ್ಯಕ್ಷಮೂಲಕವಾದದರಿಂದ ಇಂದ್ರಿಯಾತೀತನಾದಈಶ್ವರನನ್ನುಪ್ರಮಾಣಗೊಳಿಸಲಾರದು.ಶಬ್ದವು ಲೌಕಿಕವೆಂತಲೂ ವೈದಿಕವೆಂತಲೂಎರಡುವಿಧ.ಭ್ರಮಪ್ರಮಾದಾದಿ ದೋಷಗಳುಂಟಾಗಬಹುದಾದುದರಿಂದ ಲೌಕಿಕವಾಕ್ಯವು ಈಶ್ವರ ಸಿದ್ಧಿಯಲ್ಲಿ ಪ್ರಮಾಣವಲ್ಲ. ಮತ್ತು ಹಿರಿಯರು ಹೇಳಿದ ಹೊರತು ಈ ಶಬ್ದಕ್ಕೆ ಇದೇ ಅರ್ಥವೆಂದು ತಿಳಿಯಲಾಗುವುದಿಲ್ಲ. ಅವರೂ ಕಾರ್ಯವನ್ನು ಯೋಚಿಸಿದಲ್ಲದೆ ಶಬ್ದಪ್ರಯೋಗವನ್ನು ಮಾಡುವುದಿಲ್ಲ. ಆದುದರಿಂದ ಲೌಕಿಕ ಶಬ್ದಗಳಂತು ಕಾರ್ಯರೂಪವಾದ ಅರ್ಥದಲ್ಲಿ ಮಾತ್ರ ಪ್ರಮಾಣವೆನಿಸುವುವೋ,ಅಂತಯೇ "ಸತ್ಯಂಜ್ಞಾನಂ,ನಿಷ್ಕ್ರಿಯಂ, ನಿಷ್ಕಲಂ,,ಇತ್ಯಾದಿ ವೇದವಾಕ್ಯಗಳೂ ಕಾರ್ಯರೂಪವಾದ ಅರ್ಥದಲ್ಲಿ ಪ್ರಮಾಣವೆನಿಸುವುವೇ ಹೊರತು ಸಿದ್ಧವಾದ ಈಶ್ವರ ಪದಾರ್ಥವನ್ನು ಪ್ರಮಾಣಗೊಳಿಸಲಾರವು. ಇಂತು ಈಶ್ವರನೇ ಪ್ರಮಾಣಗಳಿಂದ ಸಿದ್ಧಸದಿರುವಾಗ ಆತನಿಂದ ಫಲಪ್ರಾಪ್ತಿಯಾಗುವುದೆಂತು ?

" ಜಗದ್ವೈಚಿತ್ರ್ಯಕ್ಕೆ ಬೇರೆ ಕಾರಣವಿಲ್ಲವಾದುದರಿಂದ ಈಶ್ವರನುಂಟು " ಎಂದು ಕೆಲವರು ಹೇಳಬಹುದು. ವಿಷಮಿಶ್ರಗಳಾದ ಅನ್ನಪಾನಾದಿಗಳು ದೇಶಕಾಲವ್ಯವಸ್ಥೆಯಿಂದ ದುಃಖಹೇತುಗಳಾಗಿಯೂ, ಔಷಧಮಿಶ್ರಗಳಾದ ಅನ್ನಪಾನಗಳು ಸುಖಹೇತುಗಳಾಗಿಯೂ, ಪರಿಣಮಿಸುವಂತೆ, ಪುಣ್ಯಪಾಪಕರ್ಮಗಳಿಂದ ಸಂಸ್ಕೃತವಾದ ಪ್ರಕೃತಿಯೇ ಜೀವರ ಪುರುಷಾರ್ಥಾನುಸಾರವಾಗಿ ಪರಿಣಮಿಸುವುದು. ಇದೇ ಜಗದ್ವೈಚಿತ್ರ್ಯಕ್ಕೆ ಕಾರಣವು" ಎಂದು ನಿರೀಶ್ವರವಾದಿಗಳು ಹೇಳುವರು. ಇದಕ್ಕೆ ಸಮಾಧಾನವೆಂತೆಂದರೆ,

ಸರ್ವಜ್ಞನಾದ ಪರಮೇಶ್ವರನ ಆಶ್ರಯವಿಲ್ಲದೆ ಕೇವಲ ಪ್ರಕೃತಿಪರಿಣಾಮದಿಂದಲೇ ಜಗದ್ವೈಚಿತ್ರ್ಯವುಂಟಾಗಲಾರದು. ಹಾಗೆ ಉಂಟಾಗುವುದಾದರೆ ಯಾವಾಗಲೂ, ಉಂಟಾಗುತ್ತಿರಬೇಕಾಗು

ಮನೋ ರುತ್ತಾನಪಾದಸ್ಯ ಧ್ರುವಸ್ಯಾಪಿ ಮಹೀಪತೇಃ । ಪ್ರಿಯವ್ರತಸ್ಯ ರಾಜರ್ಷೇ ರಂಗಸ್ಯಾಽಸ್ಮತ್ಪಿತುಃ ಪಿತುಃ ॥ ೨೮ ॥ ಈದೃಶಾನಾ ಮಥಾಽನ್ಯೇಷಾ ಮಜಸ್ಯ ಚ ಭವಸ್ಯ ಚ । ಪ್ರಹ್ಲಾದಸ್ಯ ಬಲೇಶ್ಚಾಽಪಿ ಕೃತ್ಯಮಸ್ತಿ ಗದಾಭೃತಾ ॥ ೨೯ ॥ ದೌಹಿತ್ರಾದೀ ನೃತೇ ಮೃತ್ಯೋಃ ಶೋಚ್ಯಾನ್ ಧರ್ಮ

---

ಮನೋಃ - ಮನುವಿಗೂ, ಉತ್ತಾನಪಾದಸ್ಯ - ಉತ್ತಾನಪಾದರಾಯನಿಗೂ, ಧ್ರುವಸ್ಯಮಹೀಪತೇಃ - ಧ್ರುವರಾಜನಿಗೂ, ರಾಜರ್ಷೇಃ - ರಾಜಶ್ರೇಷ್ಠನಾದ ಪ್ರಿಯವ್ರತನಿಗೂ, ಅಸ್ಮತ್ಪಿತುಃ - ತನ್ನ ತಂದೆಗೆ, ಪಿತುಃ - ತಂದೆಯಾದ, ಅಂಗಸ್ಯಾಪಿ - ಅಂಗರಾಜನಿಗೂ, ಈದೃಶಾನಾಂ - ಇಂತಹ, ಅನ್ಯೇಷಾಂ - ಇತರರಾಜರಿಗೂ, ಅಜಸ್ಯ-ಬ್ರಹ್ಮನಿಗೂ, ಭವಸ್ಯಚ-ರುದ್ರನಿಗೂ, ಪ್ರಹ್ಲಾದಸ್ಯ-ಪ್ರಹ್ಲಾದನಿಗೂ, ಬಲೇಶ್ಚಾಪಿ-

---

'ಕರ್ಮವೈಚಿತ್ರ್ಯದಿಂದಲೇ ಜಗದ್ವೈಚಿತ್ರ್ಯವು ಸಿದ್ಧಿಸುವುದರಿಂದ ಈಶ್ವರನುಂಟೆಂದೊಪ್ಪುವುದೇಕೆ? ಎನ್ನುವಿರೋ ? ಆದರೂ ಜ್ಞಾನಿಗಳ ಅನುಭವದಿಂದ ಈಶ್ವರನುಂಟೆಂಬುದೇ ಸಿದ್ಧಾಂತವು. ನಮ್ಮ ಕುಲಕ್ಕೆ ಕೂಟಸ್ಥನಾದ ಮನುವು, ಅವನ ಮಗನಾದ ಉತ್ತಾನಪಾದನು, ಅವನ ಮಗನಾದ ಧ್ರುವರಾಜನು, ಪ್ರಿಯವ್ರತನೂ, ನಮ್ಮ ಅಜ್ಜನಾದ ಅಂಗರಾಜನು, ಇಂತಹ ಇತರ ರಾಜರೂ, ಬ್ರಹ್ಮನು, ರುದ್ರನು, ಪ್ರಹ್ಲಾದನು, ಬಲಿಚಕ್ರೇಶ್ವರನು, ಇವರೇ ಮೊದಲಾದವರೆಲ್ಲರೂ ಕರ್ಮಫಲಪ್ರದನಾದ ಭಗವಂತನುಂಟೆಂಬುದನ್ನೇ ಸಿದ್ಧಾಂತಮಾಡಿರುವರು ॥ ೨೮ ॥ ಮನು ಮೊದಲಾದ ಮಹಾತ್ಮರೆಲ್ಲರೂ "ಧರ್ಮ

---

ವುದಾದುದರಿಂದ ಪ್ರಳಯದಲ್ಲಿಯೂ ಪ್ರಕೃತಿ ಪರಿಣಾಮವಿರಲೇಬೇಕಾಗುವುದು. ಅದರಿಂದ ಪ್ರಳಯವೇ ಇಲ್ಲದಂತಾಗಬೇಕಾಗುವುದು. ಪ್ರಕೃತಿನಿಯಾಮಕನಾದ ಪರಮೇಶ್ವರನುಂಟೆಂಬ ಪಕ್ಷದಲ್ಲಿ, ಆತನ ಸತ್ಯಸಂಕಲ್ಪದಿಂದ ಸೃಷ್ಟಿಪ್ರಳಯಗಳು ಕ್ರಮವಾಗಿ ನಡೆಯುವೆಂದು ಹೇಳಬಹುದು. ಜೀವಾಧಿಷ್ಠಿತವಾದ ಪ್ರಕೃತಿಯಿಂದಲೇ ಸೃಷ್ಟಿಪ್ರಳಯಗಳು ನಡೆಯಲಿ, ಎನ್ನುವಿರೋ ? ಜೀವನೇ ಪ್ರಕೃತಿಗೆ ಅಧಿಷ್ಠಾನವಾಗಿದ್ದಲ್ಲಿ, ಪಾಪಾಚರಣೆಯಿಂದ ಪಶುವೃಕ್ಷಾದಿನೀಚ ಶರೀರಗಳನ್ನು ತಮಗೆ ತಾವೇ ಸಂಪಾದಿಸಿಕೊಳ್ಳಲಿಳವರೆ ? ಆದುದರಿಂದ ಅವಾಪ್ತಸಮಸ್ತಕಾಮನೂ, ಸರ್ವಜ್ಞನೂ, ಸತ್ಯಸಂಕಲ್ಪನೂ ಆದ ಭಗವಂತನು, ಕರ್ಮಗಳನ್ನು ಪುಣ್ಯಪಾಪರೂಪದಿಂದ ವಿಭಾಗಿಸಿ, ಅವುಗಳನ್ನು ಅನುಭವಿಸುವುದಕ್ಕೆ ಉಚಿತಗಳಾದ ದೇಹೇಂದ್ರಿಯಾದಿಗಳನ್ನೂ, ಅವುಗಳನ್ನಡಗಿಸುವ ಶಕ್ತಿಯನ್ನೂ ಇತ್ತು, ತನ್ನ ಆಜ್ಞಾರೂಪವಾದ ವೇದವನ್ನು ಪ್ರಕಾಶಗೊಳಿಸಿ, ಅದರಂತೆ ನಡೆಯುವವನಿಗೆ ಧರ್ಮಾದಿ ಪುರುಷಾರ್ಥಗಳನ್ನೂ, ನಡೆಯದವನಿಗೆ ದುಷ್ಫಲಗಳನ್ನೂ ಕೊಡುವನು. ಎಂದು ಹೇಳಿದಲ್ಲಿ ಜಗದ್ವೈಚಿತ್ರ್ಯವು ಉಪಪನ್ನವಾಗುವುದು. ವೇದವಾಕ್ಯಗಳು ಕಾರ್ಯವಸ್ತುಗಳಂತೆಯೇ ಸಿದ್ಧವಸ್ತುವಿನಲ್ಲಿಯೂ ಪ್ರಮಾಣವೆನಿಸುವುದೆಂಬುದನ್ನು ಶಾರೀರಕಭಾಷ್ಯದಲ್ಲಿ ಸಿದ್ಧಾಂತಗೊಳಿಸಿರುವುದರಿಂದ ಇಲ್ಲ ಉಪರಮಿಸಲ್ಪಡುವುದು

(೨) ಸಾ. ಒಂದೇ ವಿಧವಾದ ಕರ್ಮಗಳನ್ನು ಮಾಡಿದವರಲ್ಲಿ ಕೆಲವೆಡೆ ಫಲತಾರತಮ್ಯವೂ ಕೆಲವೆಡೆ ಫಲಾಭಾವವೂ ಕಂಡು ಬರುವುದರಿಂದ ದೇವತೆಗಳಿಗಾಗಲಿ, ಜಡಗಳಾದ ಕರ್ಮಗಳಿಗಾಗಲಿ, ಫಲವನ್ನು ಕೊಡುವ ಸಾಮರ್ಥ್ಯವಿಲ್ಲ, ಆದುದರಿಂದ ಸರ್ವಶಕ್ತನಾದ ಪರಮೇಶ್ವರನುಂಟೆಂದೇ ಒಪ್ಪಿಕೊಳ್ಳಬೇಕು. ಭಕ್ತಿತಾರತಮ್ಯದಿಂದ ಫಲತಾರತಮ್ಯವೂ ಭಕ್ತ್ಯಭಾವದಿಂದ ಫಲಾಭಾವವೂ ಉಂಟಾಗುವುದೆಂದರಿಯಬೇಕು.

ರ್ಥಾಶಯಲಿಂಗನಾಮಭಿ ರ್ವಿಶುದ್ಧವಿಜ್ಞಾನಘನ ಸ್ವರೂಪತಃ ॥ ೩೪ ॥
ಪ್ರಧಾನ ಕಾಲಾಶಯ ಧರ್ಮಸಂಗ್ರಹೇ ಶರೀರ ಏಷ ಪ್ರತಿಪದ್ಯ ಚೇತನಾಂ।
ಕ್ರಿಯಾಫಲತ್ವೇನ ವಿಭು ರ್ವಿಭಾವ್ಯತೇ ಯಥಾಽನಲೋ ದಾರುಷು ತದ್ಗು
ಣಾತ್ಮಕಃ ॥ ೩೫ ॥ ಅಹೋ ! ಮಮಾಽಮೀ ವಿತರಂತ್ಯನುಗ್ರಹಂ ಹರಿಂ
ಗುರುಂ ಯಜ್ಞಭುಜಾ ಮಧೀಶ್ವರಂ । ಸ್ವಧರ್ಮಯೋಗೇನ ಯಜಂತಿ
ಮಾಮಕಾ ನಿರಂತರಂ ಕ್ಷೋಣಿತಲೇ ದೃಢವ್ರತಾಃ ॥ ೩೬ ॥ ಮಾಜಾತು

---

ಳಿಂದಲೂ, ಅನೇಕಗುಣಃ - ಅನೇಕ ಗುಣಗಳುಳ್ಳ, ಅಧ್ವರಃ - ಯಜ್ಞವಾಗಿ, ಸಂಪದ್ಯತೇ - ತಿಳಿಯಲ್ಪಡುತ್ತಾನೆ ॥ ೩೪ ॥ ಏಷಃ - ಈ ಪರಮಾತ್ಮನು, ವಿಭುರಪಿ - ಸರ್ವವ್ಯಾಪಿಯಾದರೂ, ಪ್ರಧಾ....ಹೇ, ಪ್ರಧಾನ - ಪ್ರಕೃತಿಯು, ಕಾಲ, ಆಶಯ - ಕರ್ಮವಾಸನೆ, ಧರ್ಮ - ಅದೃಷ್ಟ ಇವುಗಳಿಂದ, ಸಂಗ್ರಹೇ ಉಂಟಾಗಿರುವ, ಶರೀರೇ - ಶರೀರದಲ್ಲಿ, ಚೇತನಾಂ - ಬುದ್ಧಿಯನ್ನು, ಪ್ರತಿಪದ್ಯ - ಹೊಂದಿ, ದಾರುಷು - ಕಾಷ್ಠಗಳಲ್ಲಿ, ತದ್ಗುಣಾತ್ಮಕಃ - ಅವುಗಳ ಗುಣಗಳನ್ನು ಪಡೆದ, ಅನಲೋಯಥಾ - ಅಗ್ನಿಯಂತೆ, ಕ್ರಿಯಾಫಲತ್ವೇನ - ಕರ್ಮಫಲವಾಗಿ, ವಿಭಾವ್ಯತೇ - ಭಾವಿಸಲ್ಪಡುತ್ತಾನೆ ॥ ೩೫ ॥ ಅಹೋ - ಸಂತೋಷವು, ಯೇ - ಯಾರು, ದೃಢವ್ರತಾಃ - ನಿಯತವಾದ ವ್ರತವುಳ್ಳವರಾಗಿ, ಕ್ಷೋಣಿತಲೇ - ಭೂಮಿಯಲ್ಲಿ, ಸ್ವಧರ್ಮಯೋಗೇನ - ತಮ್ಮ ಧರ್ಮವನ್ನನುಸರಿಸಿ, ನಿರಂತರಂ - ಯಾವಾಗಲೂ, ಯಜ್ಞಭುಜಾಂ - ಯಜ್ಞವನ್ನು ಭುಜಿಸುವವರಿಗೆ, ಅಧೀಶ್ವರಂ - ನಾಯಕನಾದ, ಗುರುಂ - ಹಿತೋಪದೇಷ್ಟೃವಾದ, ಹರಿಂ - ಭಗವಂತನನ್ನು, ಯಜಂತಿ - ಪೂಜಿಸುವರೋ, ಅಮೀ - ಇವರು, ಮಮ - ನನಗೆ, ಅನುಗ್ರಹಂ - ಅನುಗ್ರಹವನ್ನು, ವಿತರಂತಿ - ಮಾಡುತ್ತಾರೆ, ಅವರು - ಮಾಮಕಾಃ - ನನ್ನವರೇಸರಿ, ॥ ೩೬ ॥ ಮಹರ್ದ್ಧಿಭಿಃ - ಮಹಾಸಂಪತ್ತುಗಳಿಂದ, ರಾಜಕುಲಾತ್ - ಕ್ಷತ್ರಿಯರಿಂದ, ಜಾತು - ಯಾವಾಗಲೂ,

---

ಟ್ಟುವುದೇ ಮೊದಲಾದ ಕ್ರಿಯೆಗಳು, ಮಂತ್ರಗಳು ಇವುಗಳಿಂದಲೂ, ಫಲ, ಸಂಕಲ್ಪ, ಕರ್ಮವಾಸನೆ, ಪದಾರ್ಥಶಕ್ತಿ, ಜ್ಯೋತಿಷ್ಟೋಮಾದಿ ನಾಮಗಳು ಇವುಗಳಿಂದಲೂ, ಬಹುಗುಣಗಳುಳ್ಳ * ಯಜ್ಞರೂಪನಾಗುವನು ॥ ೩೪ ॥ ಅಲ್ಲದೆ ಈ ಭಗವಂತನು ಪರಮಾನಂದಸ್ವರೂಪನಾದರೂ, ಮೂಲಪ್ರಕೃತಿಯು, ಗುಣಕ್ಷೋಭಕವಾದ ಕಾಲವು, ಪ್ರಾಚೀನಕರ್ಮವು, ಅದೃಷ್ಟವು, ಇವುಗಳ ವಶದಿಂದುಂಟಾಗುವ ಶರೀರದಲ್ಲಿ ವಿಷಯಾಕಾರವಾದ ಬುದ್ಧಿಯನ್ನು ಸೇರಿ, ಆ ಬುದ್ಧಿಯಲ್ಲಿ ‡ ಆನಂದರೂಪದಿಂದ ಪ್ರತಿಫಲಿಸುತ್ತಾ ಕಾಷ್ಠಗಳಲ್ಲಿರುವ ಅಗ್ನಿಯು ಅವುಗಳ ವಕ್ರತ್ವದೀರ್ಘತ್ವಾದಿ ಗುಣಗಳನ್ನಾಳಗೊಂಡು ಕಾಣುವಂತೆ, ಉಪಾಸಕರ ಉಪಾಸನಾನುಸಾರವಾಗಿ ಕರ್ಮಫಲರೂಪನೆನಿಸುವನು. ಇಂತು ಭಗವಂತ

---

* ಸಿ. ಶ್ಲೋ॥ ಬ್ರಹ್ಮಾರ್ಪಣಂ ಬ್ರಹ್ಮಹವಿ ಬ್ರಹ್ಮಾಗ್ನೌ ಬ್ರಹ್ಮಣಾಹುತಂ। ಬ್ರಹ್ಮೈವ ತೇನ ಗಂತವ್ಯಂ ಬ್ರಹ್ಮಕರ್ಮ ಸಮಾಧಿನಾ ॥ ಎಂಬ ಗೀತಾ ವಚನಾನುಸಾರವಾಗಿ, ಯಜ್ಞದಲ್ಲಿಯೂ, ಆ ಫಲವನ್ನನುಭವಿಸುವನಲ್ಲಿಯೂ, ಆ ಫಲದಲ್ಲಿಯೂ ಸಹ ಬ್ರಹ್ಮದೃಷ್ಟಿಯನ್ನಿಡಬೇಕು.

‡ ಶ್ರು. ಏತಸ್ಯೈವಾನಂದ ಸ್ಯಾನ್ಯಾನಿ ಭೂತಾನಿ ಮಾತ್ರಾಮುಪಜೀವಂತಿ. ಈ ಬ್ರಹ್ಮಾನಂದದ ಲೇಶವನ್ನು ಹೊಂದಿಯೇ ಸಕಲ ಭೂತಗಳೂ ಬದುಕಿರುವುವು.

ತೇಜಃ ಪ್ರಭವೇನ್ಮಹರ್ದ್ಧಿಭಿಸ್ತಿತಿಕ್ಷಯಾ ತಪಸಾ ವಿದ್ಯಯಾಚ । ದೇದೀ
ಪ್ಯಮಾನೇಽಜಿತ ದೇವತಾನಾಂ ಕುಲೇ ಸ್ವಯಂ ರಾಜಕುಲಾ ದ್ವಿಜಾನಾಂ॥
ಬ್ರಹ್ಮಣ್ಯದೇವಃ ಪುರುಷಃ ಪುರಾತನೋ ನಿತ್ಯಂ ಹರಿ ರ್ಯಚ್ಚರಣಾಽಭಿ
ವಂದನಾತ್ । ಅವಾಪ ಲಕ್ಷ್ಮೀ ಮನಪಾಯಿನೀಂ ಯಶೋ ಜಗತ್ಪವಿತ್ರಂ

---

ತಿತಿಕ್ಷಯಾ - ಶಾಂತಿಯಿಂದಲೂ, ತಪಸಾ - ತಪಸ್ಸಿನಿಂದಲೂ, ವಿದ್ಯಯಾಚ - ಜ್ಞಾನದಿಂದಲೂ, ದೇದೀಪ್ಯಮಾನೇ - ಪ್ರಕಾಶಿಸುವ, ಅಜಿತದೇವತಾನಾಂ - ವಿಷ್ಣುಭಕ್ತರ, ಕುಲೇ - ಕುಲದಲ್ಲಿಯೂ, ದ್ವಿಜಾನಾಂ- ಬ್ರಾಹ್ಮಣರ, ಕುಲೇಚ - ಕುಲದಲ್ಲಿಯೂ, ತೇಜಃ - ತೇಜಸ್ಸು, ಸ್ವಯಂ - ತಾನು, ಮಾಪ್ರಭವೇತ್ - ಪ್ರಭಾವವನ್ನು ತೋರಿಸಬೇಡ ||೪೭|| ಮಹ...ಣೋ - ದೇವವರೇಣ್ಯನಾದ, ಬ್ರಹ್ಮಣ್ಯದೇವಃ - ಬ್ರಾಹ್ಮಣರಿಗೆದೇವತೆಯಾದ, ಪುರಾತನಃ-ಜನ್ಮಾದಿರಹಿತನಾದ, ಪುರುಷಃ-ಸರ್ವಾಂತರ್ಯಾಮಿಯಾದ, ಹರಿಃ-ವಿಷ್ಣುವು ಯಚ್ಚ...ನಾತ್ - ಯಾರಪಾದವಂದನದಿಂದ, ಅನಪಾಯಿನೀಂ - ಎಡೆಬಿಡದಿರುವ, ಲಕ್ಷ್ಮೀಂ - ಲಕ್ಷ್ಮಿಯನ್ನೂ, ಜಗತ್ಪವಿತ್ರಂ - ಲೋಕಪಾವನವಾದ, ಯಶಶ್ಚ - ಕೀರ್ತಿಯನ್ನೂ, ಅವಾಪ- ಹೊಂದಿದನೋ||೪೮|| ಯತ್ಸೇವಯಾ - ಯಾರಸೇವೆಯಿಂದ, ಅಶೇ...ಯಃ - ಸರ್ವಾಂತರ್ಯಾಮಿಯಾದ, ಸ್ವರಾಟ್ - ಸ್ವಪ್ರಕಾಶನಾದ, ವಿಪ್ರಪ್ರಿಯಃ - ಬ್ರಾಹ್ಮಣಪ್ರಿಯನಾದ, ಈಶ್ವರಃ - ಭಗವಂತನು, ಕಾಮಂ - ಸಂಪೂರ್ಣವಾಗಿ, ತುಷ್ಯತಿ - ಸಂತೋಷಿಸುವನೋ, ತದೇವ - ಅದೇ, ಬ್ರಹ್ಮಕುಲಂ - ಬ್ರಾಹ್ಮಣಜಾತಿಯು, ತದ್ಧರ್ಮಪರೈಃ - ವಿಷ್ಣುವಿನಧರ್ಮದಲ್ಲಿ ಆಸಕ್ತರಾದ, ವಿನೀತೈಃ - ವಿನೀತರಾದವರಿಂದ, ಸರ್ವಾತ್ಮನಾ- ಸ

---

ನೇ ಯಜ್ಞ.ಯಜ್ಞಾಂಗ, ಯಜ್ಞಫಲಗಳ ಸ್ವರೂಪನಾಗಿರುವುದರಿಂದ, ನೀವು ಸಕಲ ಕರ್ಮಗಳನ್ನೂ ಭಗವದ್ಭಾವನೆಯಿಂದ ಮಾಡಬೇಕೇ ಹೊರತು ಭೇದದೃಷ್ಟಿಯಿಂದ ಮಾಡಬಾರದು || ೪೮ || ಈ ರೀತಿಯಾಗಿ ಕರ್ಮಗಳನ್ನುಳ್ಳವರನ್ನು ಕರ್ಮಮಾರ್ಗದಲ್ಲಿ ನಲೆಗೊಳಿಸಿ, ಕರ್ಮಿಗಳಾದವರನ್ನು ಕುರಿತು ಹೇಳುತ್ತಾನೆ. "ಆಹಾ ! ಯಾವ ಮಹಾತ್ಮರ ಈ ಲೋಕದಲ್ಲಿ ತಂತಮ್ಮ ವರ್ಣಾಶ್ರಮೋಚಿತಗಳಾದ ಧರ್ಮಗಳನ್ನು ಬಿಡದೆ ದೃಢವಾದ ನಿಯಮದಿಂದ, ಯಜ್ಞಭೋಕ್ತೃಗಳಾದ ದೇವತೆಗಳಿಗೆ ದೇವನಾಗಿಯೂ, ಪ್ರಜೆಗಳಿಗೆ ಹಿತೋಪದೇಷ್ಟೃವಾಗಿಯೂ, ಸಂಹಾರಕನಾಗಿಯೂ, ಇರುವ ಶ್ರೀ ಹರಿಯನ್ನು ಆರಾಧಿಸುವರೋ, ಅವರು ನನ್ನನ್ನು ಸಂಪೂರ್ಣವಾಗಿ ಅನುಗ್ರಹಿಸಿದಂತೆಣಿಸುವೆನು. ಅವರೇ ನನಗೆ ಪ್ರಿಯರೆನಿಸುವರು" || ೪೯ || ಇಂತು ಭಗವದ್ಭಕ್ತಿಯನ್ನುಪದೇಶಿಸಿ ಅದನ್ನು ದೃಢಪಡಿಸುವುದಕ್ಕಾಗಿ ಬ್ರಾಹ್ಮಣರಲ್ಲಿಯೂ ಭಗವದ್ಭಕ್ತರಲ್ಲಿಯೂ ಭಕ್ತಿಯಿರಬೇಕೆಂದು ತನ್ನ ವಂಶದವರಿಗೆ ಉಪದೇಶಿಸುತ್ತಾನೆ. " ವರ್ಣಾಶ್ರಮಧರ್ಮಗಳಿಗೆ ರಾಜರೇ ನಿಯಾಮಕರಾದುದರಿಂದ ಅವರು ರಾಜ್ಯಸಂಪದಗಳಿಂದ ಮದಾಂಧರಾಗಿ ವೈಮರೆತು, ಬಡತನದಲ್ಲಿದ್ದರೂ ಶಮದಮಾದಿ ಸದ್ಗುಣಗಳಿಂದಲೂ, ಭಗವದ್ಭಕ್ತಿಯಿಂದಲೂ, ಬ್ರಹ್ಮಜ್ಞಾನದಿಂದಲೂ ಮೆರೆಯುತ್ತಿರುವ ಬ್ರಾಹ್ಮಣೋತ್ತಮರ ಕುಲವನ್ನಾಗಲಿ, ಭಗವದ್ಭಕ್ತರಾದ ಭಾಗವತೋತ್ತಮರ ಕುಲವನ್ನಾಗಲಿ ಕಡೆಗಣಿಸಬಾರದು || ೫೦ || ಬ್ರಾಹ್ಮಣಪ್ರಿಯನೂ ಪುರಾಣಪುರುಷನೂ ಆದ ಭಗವಂತನು ಯಾರಪಾದವಂದನದಿಂದ ಎಂದಿಗೂ ತನ್ನನ್ನೆಡಬಿಡದಿರುವ ಲಕ್ಷ್ಮೀದೇವಿಯನ್ನೂ ಅಥವಾ ನಿತ್ಯೈಶ್ವರ್ಯವನ್ನೂ, ಲೋಕಪಾವನವಾದ ಕೀರ್ತಿಯ

ಚ ಮಹತ್ತಮಾಗ್ರಣೀಃ ॥ ೩೮ ॥ * ಯತ್ಸೇವಯಾಽಶೇಷಗುಹಾಶಯಸ್ಸ್ವರಾಟ್ ವಿಪ್ರಪ್ರಿಯಸ್ತುಷ್ಯತಿ ಕಾಮಮೀಶ್ವರಃ । ತದೇವ ತದ್ಧರ್ಮಪರೈರ್ವಿನೀತೈಸ್ಸರ್ವಾತ್ಮನಾ ಬ್ರಹ್ಮಕುಲಂ ನಿಷೇವ್ಯತಾಂ ॥ ೩೯ ॥ ಪುಮಾನ್ ಲಭೇತಾಽನತಿವೇಲಮಾತ್ಮನಃ ಪ್ರಸೀದತೋಽತ್ಯಂತಶಮಂ ಸ್ವತಸ್ಸ್ವಯಂ । ಯನ್ನಿತ್ಯಸಂಬಂಧನಿಷೇವಯಾ ತತಃ ಪರಂ ಕಿಮತ್ರಾಽಸ್ತಿ ಮುಖಂ ಹವಿರ್ಭುಜಾಂ ॥ ೪೦ ॥ ಅಶ್ನಾತ್ಯನಂತಃ ಖಲು ತತ್ತ್ವಕೋ

ರ್ವಭಾವದಿಂದಲೂ, ನಿಷೇವ್ಯತಾಂ - ಸೇವಿಸಲ್ಪಡಲಿ ॥೩೯॥ ಯನ್ನಿ⋯ಯಾ, ಯತ್ - ಯಾವಬ್ರಹ್ಮಕುಲದ, ನಿತ್ಯಸಂಬಂಧ - ಎಡೆಬಿಡದ, ನಿಷೇವಯಾ - ಸೇವೆಯಿಂದ, ಪುಮಾನ್ - ಪುರುಷನು, ಅನತಿವೇಲಂ - ಶೀಘ್ರವಾಗಿ, ಪ್ರಸೀದತಃ - ಪ್ರಸನ್ನವಾಗುವ, ಆತ್ಮನಃ - ಮನಸ್ಸಿನಲ್ಲಿ, ಸ್ವಯಂ - ಜ್ಞಾನಾಭ್ಯಾಸಾದಿಗಳಿಲ್ಲದೆಯೇ, ಸ್ವತಃ - ತನಗೆತಾನೇ, ಅತ್ಯಂತಶಮಂ - ಸಂಪೂರ್ಣಶಾಂತಿಯನ್ನು ( ಮೋಕ್ಷ) ಲಭೇತ್ - ಹೊಂದುವನೋ, ಅತ್ರ - ಈ ಕರ್ಮಭೂಮಿಯಲ್ಲಿ, ತತಃ - ಅದಕ್ಕಿಂತಲೂ, ಪರಂ - ಶ್ರೇಷ್ಠವಾದ,- ಹವಿರ್ಭುಜಾಂ - ದೇವತೆಗಳ, ಮುಖಂ - ಮುಖವು, ಕಿಮಸ್ತಿ - ಏನಿರುವುದು? ॥೪೦॥ ತತ್ತ್ವಕೋವಿದೈಃ-

ನ್ನೂ ಪಡೆವ ಪೂಜ್ಯರಲ್ಲಿ ಅಗ್ರಗಣ್ಯನೆನಿಸಿರುವನೋ ॥ ೩೮ ॥ ಸರ್ವಾಂತರ್ಯಾಮಿಯಾಗಿಯೂ, ಸ್ವಪ್ರಕಾಶನೂ, ಬ್ರಾಹ್ಮಣಪ್ರಿಯನೂ ಆದ ಭಗವಂತನು ಯಾವ ಬ್ರಹ್ಮಕುಲವನ್ನು ಸೇವಿಸುವವರ ವಿಷಯದಲ್ಲಿ ಸಂಪೂರ್ಣವಾಗಿ ಸಂತೋಷಿಸುವನೋ, ಲೋಕಸಂಗ್ರಹಾರ್ಥವಾಗಿ ಆ ಭಗವದ್ಧರ್ಮವನ್ನನುಸರಿಸಿ ಬ್ರಹ್ಮಕುಲವನ್ನು ಸೇವಿಸಿರಿ ॥೩೯॥ ಯಾವ ಬ್ರಾಹ್ಮಣರನ್ನು ಎಡೆಬಿಡದೆ ಸೇವಿಸುವುದರಿಂದ ಕೂಡಲೇ ಮನಸ್ಸು ಪ್ರಸನ್ನವಾಗಿ ಜ್ಞಾನಾಭ್ಯಾಸಾದಿಗಳಾವುವೂ ಇಲ್ಲದೆ ಜನರು ಅಪ್ರಯತ್ನವಾಗಿಯೇ ಸಂಪೂರ್ಣಶಾಂತಿಯನ್ನು ಪಡೆಯುವರೋ, ಅದಕ್ಕಿಂತಲೂ ಈ ಕರ್ಮಭೂಮಿಯಲ್ಲಿ ಮತ್ತಾವ ದೇವತಾಮುಖವು ತಾನೇ ಶ್ರೇಷ್ಠವೆನಿಸುವುದು ? ಆದುದರಿಂದ ಬ್ರಾಹ್ಮಣಸೇವೆಯಿಂದಲೇ ಯಜ್ಞಾದಿ ಕರ್ಮಫಲವೂ ಜ್ಞಾನಫಲವೂ ಸಹ ಲಭಿಸುವುದು ॥ ೪೦ ॥ ಜ್ಞಾನಘನವೆಂದು ಉಪ

* (1) ವಿ. “ಬ್ರಾಹ್ಮಣರ ಪಾದಸೇವಾಮಹಿಮೆಯಿಂದ ವಿಷ್ಣುವು ಲಕ್ಷ್ಮಿಯನ್ನೂ ಪವಿತ್ರಕೀರ್ತಿಯನ್ನೂ ಪಡೆದನು” ಇವು ಮೊದಲಾದುವು ಅರ್ಥವಾದ ವಾಕ್ಯಗಳೇ ಹೊರತು ಇವುಗಳಿಗೆ ಸ್ವಾರ್ಥದಲ್ಲಿ ತಾತ್ಪರ್ಯವಿಲ್ಲ ಅರ್ಥವಾದ ವಾಕ್ಯಗಳಿಗೆ ವಿಧಿಯನ್ನು ಸ್ತುತಿಸುವುದೇ ಮುಖ್ಯತಾತ್ಪರ್ಯವಾದುದರಿಂದ, ಈ ವಾಕ್ಯಗಳಿಗೆ, “ ಭಗವಂತನಿಗಿಂತ ಇತರರಾದವರು ಕೀರ್ತಿ ಸಂಪತ್ತುಗಳನ್ನು ಪಡೆಯಬೇಕಾದರೆ ಬ್ರಾಹ್ಮಣಸೇವೆಯನ್ನೇ ಮಾಡಬೇಕು' ಎಂಬ ವಿಧಿಯನ್ನು ಸ್ತುತಿಸುವುದರಲ್ಲಿಯೇ ತಾತ್ಪರ್ಯವೆಂದರಿಯಬೇಕು.

(2) ವೀ. (ಹರಿಃ - ಇಂದ್ರನು) ತ್ರಿಲೋಕೇಶ್ವರನಾದ ಇಂದ್ರನು ಯಾವ ನಾರಾಯಣಮೂರ್ತಿಯ ಪಾದಸೇವೆಯಿಂದ ನಿರವಧಿಕವಾದ ಸಂಪತ್ತನ್ನೂ ವಿಶಾಲಕೀರ್ತಿಯನ್ನೂ ಪಡೆದನೊ, ಅಂತಹ ನಾರಾಯಣಮೂರ್ತಿಯೇ ಬ್ರಾಹ್ಮಣಪ್ರಿಯನಾಗಿರುವುದರಿಂದ ಬ್ರಾಹ್ಮಣರನ್ನು ನಿಂದಿಸದೇ ಇರುವದುಮಾತ್ರವೇ ಅಲ್ಲ ಅವರಲ್ಲಿ ಭಕ್ತಿಯನ್ನೂ ಮಾಡಬೇಕೆಂದು ತಾತ್ಪರ್ಯವು.

(3) ವಿ. “ಭಗವಂತನುಕೂಡ ಲೋಕಸಂಗ್ರಹಾರ್ಥವಾಗಿ ಬ್ರಾಹ್ಮಣರನ್ನು ವಂದಿಸುತ್ತಾನೆ ” ಎಂಬುದರಿಂದ ಸಕಲರೂ ಬ್ರಾಹ್ಮಣಸೇವೆಯನ್ನು ಮಾಡಬೇಕೆಂದು ಭಾವವು.

ವಿಪ್ರೈಃ ಶ್ರದ್ಧಯಾ ಹುತಂ ಯನ್ಮುಖ ಇಜ್ಯನಾಮಭಿಃ । ನೈವ ತಥಾ ಚೇತನಯಾ ಬಹಿಷ್ಕೃತೇ ಹುತಾಶನೇ ಪಾರಮಹಂಸ್ಯಪರ್ಯಗುಃ ॥ ೪೧ ॥ ಯದ್ಬ್ರಹ್ಮ ನಿತ್ಯಂ ವಿರಜಂ ಸನಾತನಂ ಶ್ರದ್ಧಾತಪೋಮಂಗಳಮೌನ ಸಂಯಮೈಃ । ಸಮಾಧಿನಾ ಬಿಭ್ರತಿ ಹಾರ್ದ ದೃಷ್ಟಯೇ ಯತ್ರೇದಮಾದರ್ಶ ಇವಾವಭಾಸತೇ ॥ ೪೨ ॥ ತೇಷಾಮಹಂ ಪಾದಸರೋಜರೇಣುಮಾರ್ಯಾ ! ವಹೇಯಾಧಿಕಿರೀಟಮಾಯುಃ । ಯಂ ನಿತ್ಯದಾ ಬಿಭ್ರತ

---

ತತ್ತ್ವವನ್ನರಿತವರಿಂದ, ಇಜ್ಯನಾಮಭಿಃ - ಪೂಜ್ಯರಾದ ಇಂದ್ರಾದಿಗಳ ಹೆಸರುಗಳಿಂದ, ಯನ್ಮುಖೇ - ಯಾವ ಬ್ರಾಹ್ಮಣರ ಮುಖದಲ್ಲಿ, ಶ್ರದ್ಧಾ ಹುತಂ - ಶ್ರದ್ಧೆಯಿಂದ ಕೊಡಲ್ಪಟ್ಟ ಹವಿಸ್ಸನ್ನು, ಅನಾತಃ - ಭಗವಂತನು, ಯಥಾ - ಹೇಗೆ, ಅಶ್ನಾತಿ - ತಿನ್ನುವನೋ, ತಥಾ - ಹಾಗೆ, ಚೇತನಯಾ - ಚೈತನ್ಯದಿಂದ, ಬಹಿಷ್ಕೃತೇ - ಬಿಡುಗಡೆಯನ್ನು ಪಡೆದ ಹುತಾಶನೇ - ಅಗ್ನಿಯಲ್ಲಿ ಕೊಡಲ್ಪಟ್ಟುದನ್ನು, ಪಾರ...ಗಃ - ಪಾರಮಹಂಸ್ಯ - ಜ್ಞಾನವನ್ನು, ಪರ್ಯ - ಅಧಿಕರಿಸಿ ಹೋಗುವ, ಗುಃ - ಉಪನಿಷದ್ವಾಕ್ಯಗಳುಳ್ಳ, ಅಥವಾ ಪಾರಮಹಂಸ್ಯ - ಪರಮಹಂಸರಿಂದ ಹೊಂದಲ್ಪಡತಕ್ಕವನೂ, ಪರ್ಯಗುಃ - ವ್ಯಾಪ್ತನೂ ಆದ ಪರಮಾತ್ಮನು, ನಾಶ್ನಾತಿ - ತಿನ್ನುವುದಿಲ್ಲ ॥೪೧॥ ಯತ್ರ - ಯಾವವೇದದಲ್ಲಿ, ಇದಂ - ಈ ಜಗತ್ತು, ಆದರ್ಶ ಇವ - ಕನ್ನಡಿಯಲ್ಲಿ ಮುಖದಂತೆ, ಅವಭಾಸತೇ - ಹೊಳೆಯುವದೋ ಅಂತಹ, ನಿತ್ಯಂ - ನಾಶರಹಿತವಾದ ವಿರಜಂ - ದೋಷರಹಿತವಾದ, ಸನಾತನಂ - ಶಾಶ್ವತವಾದ, ಬ್ರಹ್ಮ - ವೇದವನ್ನು, ಯತ್ - ಯಾವದು, ಶ್ರದ್ಧಾ...ಮೈಃ - ಶ್ರದ್ಧೆ, ತಪಸ್ಸು, ಸದಾಚಾರ, ಮೌನ ಇವು - ಸಂಯಮ ಇವುಗಳಿಂದಲೂ, ಸಮಾಧಿನಾ - ಚಿತ್ತೈಕಾಗ್ರ್ಯದಿಂದಲೂ, ಅರ್ಥ ದೃಷ್ಟಯೇ - ಅರ್ಥವಿಚಾರಪೂರ್ವಕವಾಗಿ, ಬ್ರಹ್ಮ - ವೇದವನ್ನು, ಬಿಭ್ರತಿ - ಕಲಿಯುವರೋ, ॥೪೨॥ ಹೇ ಆರ್ಯಾಃ - ಅಯ್ಯಾ ಪೂಜ್ಯರಿರಾ ! ಯಂ - ಯಾವನನ್ನು, ನಿತ್ಯದಾ - ಯಾವಾಗಲೂ, ಬಿಭ್ರತಃ - ಧರಿಸಿದವನ, ಪಾಪಂ - ಪಾಪವು, ಆಶು - ಬೇಗನೆ-

---

ನಿಷತ್ತುಗಳಲ್ಲಿ ಪ್ರತಿಪಾದ್ಯನಾಗಿಯೂ, ಸರ್ವಾಂತರ್ಯಾಮಿಯಾಗಿಯೂ ಇರುವ ಪರಮಾತ್ಮನು, ತತ್ತ್ವವನ್ನರಿತ ಪಂಡಿತರಿಂದ, ಪೂಜ್ಯರಾದ ಇಂದ್ರಾದಿದೇವತೆಗಳ ಹೆಸರುಗಳನ್ನುಚ್ಚರಿಸಿ ಬ್ರಾಹ್ಮಣರ ಮುಖದಲ್ಲಿ ಶ್ರದ್ಧಾಪೂರ್ವಕವಾಗಿ ಕೊಡಲ್ಪಟ್ಟ ಹವಿರ್ಭಾಗಗಳನ್ನು ಎಂತು ಭುಜಿಸುವನೋ, ಅಚೇತನವಾದ ಅಗ್ನಿಯಲ್ಲಿ ಕೊಡಲ್ಪಡುವ ಆಹುತಿಗಳನ್ನು ಅಂತು ಭುಜಿಸುವುದಿಲ್ಲ. ಆದಕಾರಣ ಭಗವಂತನಿಗೂ ಬ್ರಹ್ಮಕುಲವೇ ಮುಖವೆನಿಸುವುದು ॥ ೪೧ ॥ ಅಗ್ನಿಗಿಂತಲೂ ಬ್ರಾಹ್ಮಣಮುಖವು ಶ್ರೇಷ್ಠವೆನಿಸುವುದಕ್ಕೆ ಅಗ್ನಿಯು ಅಚೇತನನೆಂಬುದೊಂದೇ ಕಾರಣವಲ್ಲ. ಕನ್ನಡಿಯಲ್ಲಿ ಮುಖವು ಕಾಣುವಂತೆ ಯಾವ ವೇದದಲ್ಲಿ ಈ ಜಗತ್ಸ್ವರೂಪವೂ ಆತ್ಮಸ್ವರೂಪವೂ ಸಹ ತಿಳಿಯುವುದೋ, ಅಂತಹ ಸನಾತನವೂ, ಭ್ರಮಪ್ರಮಾದಾದಿದೋಷರಹಿತವೂ, ಆದ ವೇದವನ್ನು ಶ್ರದ್ಧೆಯಿಂದಲೂ, ತಪಸ್ಸಿನಿಂದಲೂ, ಸದಾಚಾರದಿಂದಲೂ, ಮೌನ್ಯಮಾದಿಂದಲೂ, ಶಮದಮಾದಿಗಳಿಂದಲೂ, ಚಿತ್ತೈಕಾಗ್ರ್ಯದಿಂದಲೂ ಕೂಡಿ ಅರ್ಥವಿಚಾರಪೂರ್ವಕವಾಗಿ ಅಧ್ಯಯನ ಮಾಡುವವರಿಂದಲೂ ಬ್ರಾಹ್ಮಣಮುಖವು ಶ್ರೇಷ್ಠವೆನಿಸುವುದು ॥ ೪೨ ॥ ಅಯ್ಯಾ ಆರ್ಯರಿರಾ ! ಯಾವ ಬ್ರಾಹ್ಮಣರ ಪಾದಧೂಳಿಯನ್ನು ಧರಿಸಿದವರು ಸಕಲ

ಆಶುಪಾಪಂ ನಶ್ಯತ್ಯಮುಂ ಸರ್ವಗುಣಾ ಭಜಂತಿ ॥ ೪೩ ॥ ಗುಣಾಽಯನಂ ಶೀಲಧನಂ ಕೃತಜ್ಞಂ ವೃದ್ಧಾಶ್ರಯಂ ಸಂವೃಣುತೇಽನು ಸಂಪದಃ । ಪ್ರಸೀದತಾಂ ಬ್ರಹ್ಮಕುಲಂ ಗವಾಂಚ ಜನಾರ್ದನ ಸ್ಸಾನುಚರಶ್ಚ ಮಹ್ಯಂ॥೪೪॥ ಮೈತ್ರೇಯಃ॥ ಇತಿಬ್ರುವಾಣಂ ನೃಪತಿಂ ಪಿತೃದೇವ ದ್ವಿಜಾತಯಃ । ತುಷ್ಟುವು ಹೃಷ್ಟಮನಸಃ ಸಾಧುವಾದೇನ ಸಾಧವಃ ॥ ೪೫ ॥ * ಪುತ್ರೇಣ

ನಶ್ಯತಿ - ನಾಶವಾಗುವುದೋ, ಸರ್ವಗುಣಾಃ - ಎಲ್ಲಾ ಗುಣಗಳು, ಅಮುಂ - ಯಾವ ಇವನನ್ನು, ಭವಂತಿ - ಹೊಂದುವುವೋ, ಅಂತಹ, ತೇಷಾಂ - ಆ ಬ್ರಾಹ್ಮಣರ, ಪಾದ...ಣುಂ- ಪಾದ ಕಮಲಧೂಳಿಯನ್ನು ಆಯುಃ - ಯಾವಜ್ಜೀವವೂ, ಅಧಿಕಿರೀಟಂ - ಕಿರೀಟದಮೇಲೆ, ವಹೇಯ- ಧರಿಸುವೆನು ॥೪೩॥ ಗುಣಾಯನಂ - ಗುಣಗಳಿಗೆ ನೆಲೆಯಾದ, ಶೀಲಧನಂ - ಒಳ್ಳೆಯ ನಡವಳಿಯೇ ಧನವಾಗುಳ್ಳ, ಕೃತಜ್ಞಂ - ಉಪಕಾರಸ್ಮರಣೆಯುಳ್ಳ, ವೃದ್ಧಾಶ್ರಯಂ - ಹಿರಿಯರನ್ನು ಸೇವಿಸುವ, ಪುರುಷನನ್ನು, ಸಂಪದಃ - ಸಂಪತ್ತುಗಳು, ಅನು - ಅನುಸರಿಸಿ, ಸಂವೃಣುತೇ - ವರಿಸುತ್ತವೆ, ಆದುದರಿಂದ, ಬ್ರಹ್ಮಕುಲಂ - ಬ್ರಾಹ್ಮಣಕುಲವು, ಗವಾಂಚಕುಲಂ - ಗೋವುಗಳ ಕುಲವೂ, ಸಾನುಚರಃ-ಪರಿವಾರದಿಂದ ಕೂಡಿದ, ಜನಾರ್ದನಶ್ಚ - ಹರಿಯೂ, ಮಹ್ಯಂ - ನನಗೆ, ಪ್ರಸೀದತಾಂ - ಪ್ರಸನ್ನನಾಗಲಿ ॥೪೪॥ ಮೈತ್ರೇಯನು ಹೇಳುತ್ತಾನೆ—ಇತಿ - ಇಂತು, ಬ್ರುವಾಣಂ - ಹೇಳಿದ, ನೃಪತಿಂ - ರಾಜನನ್ನು, ಸಾಧವಃ - ಮಹಾತ್ಮರಾದ, ಪಿತೃ....ಯಃ - ಪಿತೃಗಳು, ದೇವತೆಗಳು, ಬ್ರಾಹ್ಮಣರು, ಹೃಷ್ಟಮನಸಃ - ಮನಸ್ಸಿನಲ್ಲಿ ಸಂತೋಷಿಸಿ

ಪಾಪಗಳನ್ನೂ ಕಳೆದುಕೊಂಡು ಸಕಲ ಸದ್ಗುಣಗಳನ್ನು ಪಡೆಯುವರೋ, ನಾನು ಯಾವಜ್ಜೀವವೂ ಆ ಬ್ರಾಹ್ಮಣರ ಪಾದಧೂಳಿಯನ್ನು ತಲೆಯಲ್ಲಿ ಧರಿಸುವೆನು ॥೪೩॥ ಬ್ರಾಹ್ಮಣಪಾದ ಧೂಳಿಯನ್ನು ಧರಿಸಿದವರು ಗುಣಗಳಿಗೆ ತವರೂರೆನಿಸಿ, ಸದಾಚಾರವುಳ್ಳವರಾಗಿ, ಹಿರಿಯರನ್ನು ಸೇವಿಸುತ್ತಾ, ಕೃತಜ್ಞರಾಗಿರುವರು. ಅಂತವರನ್ನು ಸಕಲ ಸಂಪತ್ತುಗಳೂ ತಾವಾಗಿ ಅರಸಿಕೊಂಡು ಬಂದು ವರಿಸುವುವು. ಇಂತಹ ಮಹಾಮಹಿಮರಾದುದರಿಂದ ಬ್ರಾಹ್ಮಣ ಕುಲವೂ, ಗೋಕುಲವೂ, ಭಕ್ತ ಪರಿವಾರದಿಂದ ಕೂಡಿದ ಶ್ರೀಹರಿಯೂ, ನನಗೆ ನಿರಂತರವೂ ಪ್ರಸನ್ನರಾಗಿರಲಿ, ಎಂದುಬೋಧಿಸಿದನು॥ ಅಯ್ಯಾವಿದುರನೆ! ಇಂತು

* ಟೀ. ಈಮತಾನುಸಾರವಾಗಿ ಸಾತ್ವಿಕ, ರಾಜಸ, ತಾಮಸಭೇದದಿಂದ ಜೀವರುಮೂರುವಿಧ. ಅವರಲ್ಲಿ ಸಾತ್ವಿಕಜೀವರೇ ಮುಕ್ತಿಗೆಯೋಗ್ಯರೆಂತಲೂ, ರಾಜಸಜೀವರು ನಿತ್ಯಸಂಸಾರಿಗಳೆಂತಲೂ, ತಾಮಸಜೀವರು ನಿತ್ಯನರಕಿಗಳೆಂತಲೂ, ಒಬ್ಬ ಪ್ರಾಣಿಯಲ್ಲಿ ಈ ತ್ರಿವಿಧಜೀವರಿಗೂ ಸಮಾವೇಶಉಂಟೆಂತಲೂ, ಸಿದ್ಧಾಂತವು. ಆದುದರಿಂದ ಪಾಪಿಯಾದ ವೇನನು ನರಕವನ್ನು ದಾಟಿದನು ಎಂಬುದೇ ದಿಟವಾದರೆ, ಸರ್ವರೂ ಮುಕ್ತಿಗೆಯೋಗ್ಯರೇ ಹೊರತು ತಮೋಯೋಗ್ಯರೇ ಇಲ್ಲವೆಂದಾದೀತು. ಆದಕಾರಣ ವೇನಶಬ್ದದಿಂದ ಕರೆಯಿಸಿಕೊಳ್ಳುವ ಜೀವರು ಮೂವರು, ಅವರಲ್ಲಿ ವೇನನಲ್ಲಿರುವ ರಾಜಸಜೀವನು ಪೃಥುವಿನಿಂದಉತ್ತಮಗತಿಯನ್ನುಹೊಂದಿದನೆಂತಲೂ, ತಾಮಸಜೀವನು ನರಕವನ್ನು ಪಡೆದನೆಂತಲೂ, ಸಾತ್ವಿಕಜೀವನು ಪೃಥುರೂಪವನ್ನು ಪಡೆದನೆಂತಲೂ ತಾತ್ಪರ್ಯವು.

ಶ್ಲೋ ॥ ವೇನಸ್ಥೋ ರಾಜಸೋಜೀವಃ ಪೃಥುನಾ ಸ್ವರ್ಗತಿಂಗತಃ । ಸ್ವಯಂತು ತಮಏವಾಪ ಸಾತ್ವಿಕಃ ಪೃಥುತಾ ಮಗಾತ್॥

ಜಯತೇ ಲೋಕಾನ್ ಇತಿ ಸತ್ಯವತೀ ಶ್ರುತಿಃ। ಬ್ರಹ್ಮದಂಡಹತಃ ಪಾಪೋ
ಯದ್ವೇನೋಽತ್ಯತರತ್ತಮಃ ॥ ೪೬ ॥ ಹಿರಣ್ಯಕಶಿಪುಶ್ಚಾಪಿ ಭಗವ
ನ್ನಿಂದಯಾ ತಮಃ । ವಿವಿಕ್ಷುರತ್ಯಗಾತ್ಸೂನೋಃ ಪ್ರಹ್ಲಾದಸ್ಯಾಽನು
ಭಾವತಃ ॥ ೪೭ ॥ ವೀರವರ್ಯ ಪಿತಃ ! ಪೃಥ್ವ್ಯಾಃ ಸಮಾಃ ಸಂಜೀ
ವ ಶಾಶ್ವತೀಃ । ಯಸ್ಯೇದೃಶ್ಯಚ್ಯುತೇ ಭಕ್ತಿಃ ಸರ್ವಲೋಕೈಕ ಭರ್ತರಿ ॥
ಅಹೋ ! ವಯಂ ಹ್ಯದ್ಯ ಪವಿತ್ರ ಕೀರ್ತೇ! ತ್ವಯೈವ ನಾಥೇನ ಮುಕುಂದ

---

ಸಾಧುವಾದೇನ - ಜಯಶಬ್ದದಿಂದ, ತುಷ್ಟುವುಃ - ಹೊಗಳಿದರು ॥೪೫॥ ಯತ್ - ಯಾವ ಕಾರಣದಿಂದ ಬ್ರಹ್ಮ ...ತಃ - ಬ್ರಾಹ್ಮಣಶಾಪದಿಂದ ಕೂಡಿದ, ಪಾಪಃ - ಪಾಪಿಷ್ಠನಾದ, ವೇನಃ - ವೇನನು, ತಮಃ- ನರಕವನ್ನು, ಅತ್ಯತರತ್ - ದಾಂಟಿದನೊ, ಅದರಿಂದ ಪುತ್ರೇಣ - ಪುತ್ರನಿಂದ, ಲೋಕಾನ್ - ಲೋಕಗಳನ್ನು, ಜಯತೇ - ಗೆಲ್ಲುತ್ತಾನೆ, ಇತಿ - ಹೀಗೆಂಬ, ಶ್ರುತಿಃ - ಜನವಾರ್ತೆಯು, ಸತ್ಯವತೀ- ಯಥಾರ್ಥವಾಯಿತು ॥೪೬॥ ಹಿರಣ್ಯ...ಪಿ - ಹಿರಣ್ಯಕಶಿಪುವೂ, ಭಗವನ್ನಿಂದಯಾ-ಭಗವಂತನನಿಂದೆಯಿಂದ, ತಮಃ -ನರಕವನ್ನು, ವಿವಿಕ್ಷುಃ - ಹೋಗಬೇಕಾಗಿದ್ದವನು, ಸೂನೋಃ - ಮಗನಾದ, ಪ್ರಹ್ಲಾದಸ್ಯ - ಪ್ರಹ್ಲಾದನ, ಅನುಭಾವತಃ - ಮಹಿಮೆಯಿಂದ, ಅತ್ಯತರತ್ - ದಾಟಿದನು ॥೪೭॥

ವೀರವರ್ಯ - ಶೂರಾಗ್ರೇಸರನ ! ಪೃಥ್ವ್ಯಾಃ - ಭೂಮಿಗೆ, ಪಿತಃ - ತಂದೆಯೆ ! ಯಸ್ಯ- ಯಾವ ನಿನಗೆ, ಸರ್ವ....ರಿ - ಸಕಲ ಲೋಕಗಳಿಗೂ, ಮುಖ್ಯಪಾಲಕನಾದ, ಅಚ್ಯುತೇ - ವಿಷ್ಣುವಿನಲ್ಲಿ, ಈದೃಶೀ - ಇಂತಹ, ಭಕ್ತಿಃ - ಭಕ್ತಿಯುಂಟೋ, ಅಂತಹನೀನು, ಶಾಶ್ವತೀಃ - ಅನೇಕ, ಸಮಾಃ - ಸಂವತ್ಸರಗಳು, ಸಂಜೀವ - ಬಾಳು ॥೪೮॥ ಪವಿತ್ರಕೀರ್ತೇ-ಪರಿಶುದ್ಧ ಕೀರ್ತಿಯುಳ್ಳವನೆ ! ಯಃ-ಯಾವನೀನು ಉತ್ತ.... ಸ್ಯ - ಪುಣ್ಯಶ್ಲೋಕರಲ್ಲಿ ಶ್ರೇಷ್ಠನಾದ, ಬ್ರಹ್ಮಣ್ಯದೇವಸ್ಯ - ಬ್ರಾಹ್ಮಣರಿಗೆ ದೇವನಾದ, ವಿಷ್ಣೋಃ- ವಿಷ್ಣುವಿನ, ಕಥಾಂ-ಚರಿತ್ರೆಯನ್ನು, ವ್ಯನಕ್ತಿ - ಪ್ರಕಾಶಗೊಳಿಸುವೆಯೋ, ಅಂತಹ, ನಾಥೇನ - ಒಡೆಯನಾದ, ತ್ವಯಾ - ನಿನ್ನಿಂದ, ವಯಂ - ನಾವು, ಅದ್ಯ - ಈಗ, ಮುಕುಂದನಾಥಾಃ - ವಿಷ್ಣುವೇ,

---

ಹೇಳಿದ ಪೃಥುರಾಜನ ನುಡಿಗಳನ್ನು ಕೇಳಿ ಮಹಾತ್ಮರಾದ ಪಿತೃಗಳು, ದೇವತೆಗಳು, ಬ್ರಾಹ್ಮಣರು ಅತ್ಯಂತ ಸಂತುಷ್ಟರಾಗಿ, 'ಜಯ ಜಯ' ಎಂದು ಹೊಗಳುತ್ತಾ ಹೇಳಿದರು॥ ಅಯ್ಯಾ ಮಹಾರಾಜನೆ ! 'ತಂದೆಯಾದವನು ಪುತ್ರನಿಂದ ಉತ್ತಮ ಲೋಕಗಳನ್ನು ಪಡೆಯುತ್ತಾನೆ, ಎಂದು ಲೋಕದಲ್ಲಿ ಜನರಾಡಿಕೊಳ್ಳುತ್ತಿದ್ದ ನುಡಿಯು ಇಂದಿಗೆ ಸತ್ಯವಾಯಿತು. ಬ್ರಾಹ್ಮಣ ಶಾಪದಿಂದ ಮಡಿದು ಮಹಾಪಾಪಕ್ಕೊಳಗಾಗಿದ್ದ ನಿನ್ನ ತಂದೆಯಾದ ವೇನರಾಜನು ಅಂಧ ತಮಸ್ಸೆಂಬ ನರಕವನ್ನು ದಾಟಿ ಸದ್ಗತಿಯನ್ನು ಪಡೆದುದೇ ಇದಕ್ಕೆ ನಿದರ್ಶನವು ॥ ೪೬ ॥ ಮುನ್ನ ದುಷ್ಟನಾದ ಹಿರಣ್ಯಕಶಿಪುವು ಭಗವನ್ನಿಂದೆಯಿಂದ ನರಕವನ್ನು ಹೊಂದಬೇಕಾಗಿದ್ದವನು ಮಗನಾದ ಪ್ರಹ್ಲಾದನ ಮಹಿಮೆಯಿಂದ ಸದ್ಗತಿಯನ್ನು ಪಡೆದನು ॥ ೪೭ ॥ ಅಯ್ಯಾ ವೀರಾಗ್ರೇಸರನ ! ಭೂದೇವಿಯ ತಂದೆಯೆ! ಸರ್ವಲೋಕಗಳಿಗೂ ಮುಖ್ಯಪಾಲಕನಾದ ಭಗವಂತನಲ್ಲಿ ನಿರತಿಶಯವಾದ ಭಕ್ತಿಯಿರುವುದರಿಂದ ನೀನು ಶಾಶ್ವತವಾಗಿ ಬಾಳು ॥ ೪೮ ॥ ಅಯ್ಯಾ ಪವಿತ್ರಕೀರ್ತಿಯ! ಉತ್ತಮಶ್ಲೋಕರಲ್ಲಿ ಸರ್ವೋತ್ತಮನಾಗಿಯೂ ಬ್ರಾಹ್ಮಣಪ್ರಿಯನಾಗಿಯೂ ಇರುವ ಭಗವಂತನ ಸಚ್ಚ

ನಾಥಾಃ । ಯ ಉತ್ತಮಶ್ಲೋಕತಮಸ್ಯ ವಿಷ್ಣೋ ರ್ಬ್ರಹ್ಮಣ್ಯದೇವಸ್ಯ
ಕಥಾಂ ವ್ಯನಕ್ತಿ ॥ ೪೯ ॥ ನಾತ್ಯದ್ಭುತ ಮಿದಂ ನಾಥ ! ತವಾಜೀವ್ಯನು
ಶಾಸನಂ । ಪ್ರಜಾನುರಾಗೋ ಮಹತಾಂ ಪ್ರಕೃತಿಃ ಕರುಣಾತ್ಮನಾಂ॥೫೦॥
ಅದ್ಯ ನ ಸ್ತಮಸಃ ಪಾರ ಸ್ತ್ವಯೋಪಾಸಾದಿತಃ ಪ್ರಭೋ ! । ಭ್ರಾಮ್ಯ
ತಾಂ ನಷ್ಟದೃಷ್ಟೀನಾಂ ಕರ್ಮಭಿ ರ್ದೈವಸಂಜ್ಞಕೈಃ ॥ ೫೧ ॥
ನಮೋ ವಿವೃದ್ಧ ಸತ್ವಾಯ ಪುರುಷಾಯ ಮಹೀಯಸೇ । ಯೋ ಬ್ರಹ್ಮ
ಕ್ಷತ್ರ ಮಾವಿಶ್ಯ ಬಿಭರ್ತೀದಂ ಸ್ವತೇಜಸಾ ॥ ೫೨ ॥

—ಇತಿ ಏಕ ವಿಂಶೋಧ್ಯಾಯಃ—

---

ಒಡೆಯನಾಗುಳ್ಳವರಾದೆವು, ಅಹೋ - ಸಂತೋಷವು, ॥೪೯॥ ನಾಥ- ಸ್ವಾಮಿಯೇ ! ಕರುಣಾತ್ಮನಾಂ - ದಯಾಳುಗಳಾದ, ಮಹತಾಂ - ಮಹಾತ್ಮರಿಗೆ, ಪ್ರಜಾನುರಾಗಃ - ಪ್ರಜಾನುರಾಗವು, ಪ್ರಕೃತಿಃ - ಸ್ವಭಾವವು. ಆದುದರಿಂದ, ಇದಂ - ಈ, ಆಜೀವ್ಯನುಶಾಸನಂ - ಸೇವಕರಿಗೆ ಹಿತೋಪದೇಶವು, ತವ - ನಿನಗೆ ಅತ್ಯದ್ಭುತಂ - ಅತ್ಯಾಶ್ಚರ್ಯವು, ನ - ಅಲ್ಲ ॥೫೦॥ ಪ್ರಭೋ- ಒಡೆಯನೆ ! ದೈವಸಂಜ್ಞಕೈಃ-ದೈವವೆಂದುಹೆಸರುಳ್ಳ, ಕರ್ಮಭಿಃ - ಕರ್ಮಗಳಿಂದ, ಭ್ರಾಮ್ಯತಾಂ-ಅಲೆಯುತ್ತಿರುವ, ನಷ್ಟದೃಷ್ಟೀನಾಂ -ಜ್ಞಾನಚಕ್ಷುಸ್ಸಿಲ್ಲದ, ನಃ - ನಮಗೆ, ಅದ್ಯ - ಇಂದು, ತ್ವಯಾ - ನಿನ್ನಿಂದ, ತಮಸಃ- ಕತ್ತಲೆಯ, ಪಾರಃ - ದಡವು ಉಪಾಸಾದಿತಃ - ಹೊಂದಿಸಲ್ಪಟ್ಟಿತು. ॥೫೧॥ ಯಃ - ಯಾವನು, ಕ್ಷತ್ರಂ - ಕ್ಷತ್ರಿಯಕುಲವನ್ನು, ಆವಿಶ್ಯ - ಹೊಕ್ಕು, ಬ್ರಹ್ಮ - ಬ್ರಾಹ್ಮಣಕುಲವನ್ನೂ, ಆವಿಶ್ಯ - ಹೊಕ್ಕು, ಕ್ಷತ್ರಂ - ಕ್ಷತ್ರಿಯಕುಲವನ್ನೂ, ಎರಡನ್ನೂ ಹೊಕ್ಕು, ತೇಜಸಾ - ತನ್ನ ಶಕ್ತಿಯಿಂದ, ಇದಂ - ಈ ಜಗತ್ತನ್ನು, ಬಿಭರ್ತಿ -ಸಲಹುವನೋ, ಅಂತಹ, ವಿವೃದ್ಧಸತ್ವಾಯ - ಸತ್ವಗುಣಾಭಿವೃದ್ಧಿಯುಳ್ಳ, ಮಹೀಯಸೇ - ಮಹಾತ್ಮನಾದ, ಪುರುಷಾಯ - ಪರಪುರುಷನಾದ ನಿನಗೆ, ನಮಃ - ನಮಸ್ಕಾರವು ॥ ೫೨ ॥

— ಏಕವಿಂಶಾಧ್ಯಯಂ ಸಮಾಪ್ತಂ —

---

ರಿತ್ರೆಯನ್ನು ವಿವರಿಸುವಯನುಭಾವಿಯಾದ ನಿನ್ನಿಂದ ಸನಾಥರಾಗಿರುವ ನಾವೀಗ ಭಗವಂತನಿಂದಲೇ ಸನಾಥರಾದಂತಾಯಿತು ॥೪೯॥ ಎಲೈಮಹಾರಾಜನೆ ! ದಯಾಳುಗಳಾದ ಮಹನೀಯರಿಗೆ ಪ್ರಜಾನುರಾಗನೆಂಬುದು ಸ್ವಭಾವವಾದುದರಿಂದ ನಿನ್ನ ಛತ್ರ ಛಾಯೆಯಲ್ಲಿ ಬದುಕುತ್ತಿರುವ ಪ್ರಜೆಗಳಿಗೆ ನೀನೀಹಿತೋಪದೇಶವನ್ನು ಮಾಡಿದುದೇನಾಶ್ಚರ್ಯವಲ್ಲ॥೫೦॥ ಸ್ವಾಮಿಯೇ ! ಬಹುಕಾಲದಿಂದಲೂ ದೈವನೆಂದು ಹೆಸರುಗೊಂಡಿರುವ ಪ್ರಾಚೀನ ಕರ್ಮಗಳಿಂದ ತತ್ವಜ್ಞಾನವಿಲ್ಲದೆ ಸಂಸಾರ ಸಾಗರದಲ್ಲಿ ಅಲೆದಾಡುತ್ತಿದ್ದ ನಮಗೆ, ನೀನಿಂದು ಪಾರಗಾಣಿಸಿದೆ ॥ ೫೧ ॥ ಬ್ರಾಹ್ಮಣರೂಪದಿಂದ ಕ್ಷತ್ರಿಯಕುಲವನ್ನೂ, ಕ್ಷತ್ರಿಯರೂಪದಿಂದ ಬ್ರಾಹ್ಮಣ ಕುಲವನ್ನೂ ಸಲಹುವುದಲ್ಲದೆ, ಈ ಎರಡು ರೂಪಗಳಿಂದಲೂ ಜಗತ್ತನ್ನು ಸಲಹುತ್ತಿರುವ ಸತ್ವಮೂರ್ತಿಯೆನಿಸಿದ ಪುರಾಣ ಪುರುಷನಾದ ನಿನಗೆ ನಮಸ್ಕಾರವನ್ನು ಮಾಡುವೆವು. ಎಂದು ದೇವಾದಿಗಳು ಪೃಥುವನ್ನು ಹೊಗಳಿದರೆಂಬಲ್ಲಿಗೆ ಭಾಗವತ ಚಕೋರ ಚಂದ್ರಿಕೆಯೊಳ್

—ಇಪ್ಪತ್ತೊಂದನಯ ಅಧ್ಯಾಯಂ ಮುಗಿದುದು—

ಓಂನಮಃ ಪರಮಾತ್ಮನೇ

—ಅಥ ದ್ವಾವಿಂಶೋಽಧ್ಯಾಯಃ—

ಮೈತ್ರೇಯಃ ॥ ಜನೇಷು ಪ್ರಗೃಣತ್ಸ್ವೇವಂ ಪೃಥುಂ ಪೃಥುಲವಿಕ್ರಮಂ ।
ತತ್ರೋಪಜಗ್ಮುರ್ಮುನಯಶ್ಚತ್ವಾರಃ ಸೂರ್ಯವರ್ಚಸಃ ॥ ೧ ॥
ತಾಂಸ್ತು ಸಿದ್ಧೇಶ್ವರಾನ್ ರಾಜಾ ವ್ಯೋಮ್ನೋಽವತರತೋಽರ್ಚಿಷಾ ।
ಲೋಕಾನಪಾಪಾನ್ ಕುರ್ವತ್ಯಾ ಸಾನುಗೋಽಚಷ್ಟ ಲಕ್ಷಿತಾನ್ ॥ ೨ ॥

— ದ್ವಾವಿಂಶೋಽಧ್ಯಾಯಂ —

ಕಂ॥ ವರಮುನಿ ಸನತ್ಕುಮಾರಂ । ಹರಿಯನುಮತದಿಂದೆ ಪೃಥುಮಹೀವಲ್ಲಭಗಾ ।
ದರದಿಂ ತತ್ತ್ವವಿಚಾರವ । ನರುಪಿದ ಸಚ್ಚರಿತಮಿಲ್ಲಿ ಪೇಳಲ್ಪಡುಗುಂ ॥

ಮೈತ್ರೇಯನು ಹೇಳುತ್ತಾನೆ ॥ ಏವಂ - ಇಂತು, ಜನೇಷು - ಜನರು, ಪೃಥುಲವಿಕ್ರಮಂ- ಅಧಿಕ ಪರಾಕ್ರಮವುಳ್ಳ, ಪೃಥುಂ - ಪೃಥುವನ್ನು, ಪ್ರಗೃಣತ್ಸು - ಹೊಗಳುತ್ತಿರಲು, ತತ್ರ - ಅಲ್ಲಿಗೆ, ಸೂರ್ಯವರ್ಚಸಃ - ಸೂರ್ಯನಂತೆ ತೇಜಸ್ಸುಳ್ಳ, ಚತ್ವಾರಃ - ನಾಲ್ವರು, ಮುನಯಃ - ಮುನಿಗಳು, ಉಪಜಗ್ಮುಃ - ಬಂದರು ॥ ೧ ॥ ಸಾನುಗಃ - ಪರಿವಾರದಿಂದ ಕೂಡಿದ, ರಾಜಾ - ಪೃಥುರಾಜನು, ಲೋಕಾನ್ - ಲೋಕಗಳನ್ನು, ಅಪಾಪಾನ್ - ಪಾಪರಹಿತಗಳನ್ನಾಗಿ, ಕುರ್ವತ್ಯಾ - ಮಾಡುತ್ತಿರುವ, ಅರ್ಚಿಷಾ - ಕಾಂತಿಯಿಂದ, ಲಕ್ಷಿತಾನ್ - ಸನಕಾದಿಗಳೆಂದು ತಿಳಿಯಲ್ಪಟ್ಟ, ವ್ಯೋಮ್ನಃ-ಅಂತರಿಕ್ಷದಿಂದ, ಅವತರತಃ - ಇಳಿಯುತ್ತಿರುವ, ತಾನ್ - ಆ, ಸಿದ್ಧೇಶ್ವರಾನ್ - ಸಿದ್ಧರಿಗೊಡೆಯರಾದ ಮುನಿಗಳನ್ನು, ಅಚಷ್ಟ - ಕಂಡನು, ॥ ೨ ॥ ವೈನ್ಯಃ - ಪೃಥುವು, ಇಂದ್ರಿಯೇಶಃ - ಜೀವನು, ಗುಣಾನಿವ - ಗಂಧಾದಿ, ಗುಣಗಳನ್ನೋಪಾದಿಯಲ್ಲಿ, ತದ್ದ...ತಾನ್ - ಅವರ ದರ್ಶನದಿಂದ ಮೇಲಕ್ಕೇರಿದ, ಪ್ರಾಣಾನ್ - ಪ್ರಾಣ

---

ಇಪ್ಪತ್ತೆರಡನೆಯ ಅಧ್ಯಾಯ.

— ಸನತ್ಕುಮಾರಮುನಿಯು ಪೃಥುರಾಜನಿಗೆ ಜ್ಞಾನೋಪದೇಶಮಾಡುವುದು —

ಅನಂತರದಲ್ಲಿ ಮೈತ್ರೇಯಮುನಿಯು ವಿದುರನಿಗೆ ಹೇಳುತ್ತಾನೆ—''ಇಂತು ಆಸಭೆಯಲ್ಲಿ ನೆರೆದಿದ್ದ ದೇವಬ್ರಾಹ್ಮಣಾದಿಗಳು ವಿಶಾಲವಿಕ್ರಮನಾದ ಪೃಥುರಾಜನನ್ನು ಕೊಂಡಾಡುತ್ತಿರುವ ಕಾಲಕ್ಕೆ ಸರಿಯಾಗಿ ಸೂರ್ಯನಂತೆ ದಿವ್ಯತೇಜಃಪುಂಜರಾಗಿರುವ ನಾಲ್ವರು ಮಹರ್ಷಿಗಳು ಅಲ್ಲಿಗೆ ಬಂದರು ॥ ೧ ॥ ಆ ಮಹರ್ಷಿಗಳು ತಮ್ಮ ದಿವ್ಯತೇಜಸ್ಸಿನಿಂದಲೇ ಸನಕಾದಿಗಳೆಂಬ ಕುರುಹನ್ನು ತೋರುತ್ತಾ, ಸಕಲಲೋಕಗಳ ಪಾಪಗಳನ್ನೂ ಕಳೆಯುತ್ತಾ, ಗಗನಮಾರ್ಗದಿಂದಿಳಿಯುತ್ತಿರುವಾಗಲೇ ಪರಿವಾರದಿಂದೊಡಗೂಡಿದ ಪೃಥುರಾಜನು ಕಂಡನು ॥ ೨ ॥ ಅವರನ್ನು ಕಂಡಕೂಡಲೇ ಗಂಧಾದಿಗುಣಗಳನ್ನಾಶಿಸಿ ತವಕಿಸುವ ಜೀವನಂತೆ, ಪೃಥುರಾಜನು ಪೂಜ್ಯದರ್ಶನದಿಂದ ಮೇಲಕ್ಕೇರುತ್ತಿರುವ ಪ್ರಾಣಗಳನ್ನು ಹಿಂದಿರುಗಿ

ತದ್ದರ್ಶನೋದ್ಗತಾನ್ ಪ್ರಾಣಾನ್ ‡ ಪ್ರತ್ಯಾದಿತ್ಸುರಿವೋತ್ಥಿತಃ । ಸ ಸದ
ಸ್ಯಾನುಗೋ ವೈನ್ಯ ಇಂದ್ರಿಯೇಶೋ ಗುಣಾನಿವ ॥೩॥ ಗೌರವಾದ್ಯಂ
ತ್ರಿತಸ್ಸಭ್ಯಃ ಪ್ರಶ್ರಯಾನತಕಂಧರಃ । ವಿಧಿವತ್ಪೂಜಯಾಂಚಕ್ರೇ ಗೃ
ಹೀತಾಽಧ್ಯರ್ಹಣಾಸನಾನ್ ॥ ೪ ॥ ತತ್ಪಾದಶೌಚಸಲಿಲೈರ್ಮಾರ್
ಜಿತಾಲಕಬಂಧನಃ । ತತ್ರ ಶೀಲವತಾಂ ವೃತ್ತಮಾಚರನ್ಮಾನಯ
ನ್ನಿವ ॥ ೫ ॥ ಹಾಟಕಾಸನ ಆಸೀನಾನ್ ಸ್ವಧಿಷ್ಣ್ಯೇಷ್ವಿವ ಪಾವಕಾನ್।
ಶ್ರದ್ಧಾಸಂಯಮಸಂಯುಕ್ತಃ ಪ್ರೀತಃ ಪ್ರಾಹ ಭವಾಗ್ರಜಾನ್॥೬॥ ಪೃಥುಃ॥

---

ಗಳನ್ನು, ಪ್ರತ್ಯಾದಿತ್ಸುರಿವ - ಹಿಂದಿರುಗಿಸುವವನಂತೆ, ಸಸ....ಗಃ - ಸಭೆಯವರಿಂದಲೂ, ಪರಿವಾರದಿಂದಲೂ ಕೂಡಿ, ಉತ್ಥಿತಃ - ಎದ್ದನು. ॥ ೩ ॥ ಗೌರವಾತ್ - ಗೌರವದಿಂದ, ಯಂತ್ರಿತಃ - ವಶಗೊಳಿಸಲ್ಪಟ್ಟವನಾಗಿ, ಸಭ್ಯಃ - ಯೋಗ್ಯನಾದ ಪೃಥುವು, ಪ್ರಶ್ರ...ರಃ - ವಿನಯದಿಂದ ತಲೆಯನ್ನು ಬಾಗಿಸಿ, ಗೃಹೀ...ನಾನ್, ಅರ್ಘ್ಯ-ಆಸನ ಮೊದಲಾದ ಉಪಚಾರಗಳನ್ನು ಪಡೆದ ಮುನಿಗಳನ್ನು, ವಿಧಿವತ್-ಯಥಾಶಾಸ್ತ್ರವಾಗಿ, ಪೂಜಯಾಂಚಕ್ರೇ - ಪೂಜಿಸಿದನು. ॥ ೪ ॥ ತತ್ರ-ಅಲ್ಲಿ, ಶೀಲವತಾಂ - ಸದಾಚಾರವುಳ್ಳವರ, ವೃತ್ತಂ - ನಡವಳಿಯನ್ನು, ಆಚರನ್ - ನಡೆಸುತ್ತಾ, ಮಾನಯನ್ನಿವ - ಗೌರವಿಸುವಂತೆ, ತತ್ಪಾ...ಲೈಃ - ಅವರ ಕಾಲನ್ನು ತೊಳೆದ ನೀರಿನಿಂದ, ಮಾರ್ಜಿ...ನಃ - ತನ್ನ ಕೇಶಗಳಮೇಲೆ ಪ್ರೋಕ್ಷಿಸಿಕೊಂಡನು ॥ ೫ ॥

ಶ್ರದ್ಧಾ..ಕ್ತಃ, ಶ್ರದ್ಧಾ - ಆದರವು, ಸಂಯಮ-ನಿಯಮವು ಇವುಗಳಿಂದ, ಸಂಯುಕ್ತಃ-ಕೂಡಿದ ರಾಜನು, ಪ್ರೀತಃ - ಸಂತುಷ್ಟನಾಗಿ, ಸ್ವಧಿಷ್ಣ್ಯೇಷು - ತಮ್ಮ ವೇದಿಗಳಲ್ಲಿ, ಪಾವಕಾನಿವ-ಅಗ್ನಿಗಳಂತೆ, ಹಾಟಕಾಸನೇ - ಚಿನ್ನದ ಮಣೆಗಳಮೇಲೆ, ಆಸೀನಾನ್ - ಕುಳಿತಿರುವ, ಭವಾಗ್ರಜಾನ್-ರುದ್ರನಿಗಿಂತ ಹಿರಿಯವರಾದ ಸನಕಾದಿಗಳನ್ನು ಕುರಿತು, ಪ್ರಾಹ-ಹೇಳುತ್ತಾನೆ. ॥ ೬ ॥ ಮಂಗಳಾ

---

ಸಳೆಳಸುವಂತೆ ಪರಿವಾರದಿಂದಲೂ, ಸದಸ್ಯರಿಂದಲೂ ಒಡಗೂಡಿ ತಟ್ಟನೆ ಮೇಲಕ್ಕೆದ್ದನು॥೩॥ ಬಳಿಕ ಮರ್ಯಾದೆಯಿಂದ ಎದಿರುಗೊಂಡು ವಿನಯದಿಂದ, ತಲೆಯನ್ನು ಬಾಗಿಸಿ, ಅರ್ಘ್ಯ, ಪಾದ್ಯ, ಆಸನ ಮೊದಲಾದ ಸತ್ಕಾರಗಳಿಂದ ಯಥಾಶಾಸ್ತ್ರವಾಗಿ ಪೂಜೆಯನ್ನಾಚರಿಸಿ ಅವರ ಪಾದೋದಕವನ್ನು ತಲೆಯಮೇಲೆ ಪ್ರೋಕ್ಷಿಸಿಕೊಂಡು ಸಾಧುಗಳ ಸದಾಚಾರವನ್ನಾಚರಿಸಿ ಗೌರವಿಸಿದನು ॥೪॥ ವೇದೀಮಧ್ಯದಲ್ಲಿ ಪ್ರಜ್ವಲಿಸುವ ಅಗ್ನಿಗಳಂತೆ ಆ ಸನಕಾದಿಗಳು ಸುವರ್ಣಪೀಠಗಳಲ್ಲಿ ಕುಳಿತುಕೊಳ್ಳಲು, ರುದ್ರಮೂರ್ತಿಗಿಂತಲೂ ಹಿರಿಯರಾದ ಅವರನ್ನು ಕಂಡು ರಾಜನು ಹರ್ಷಿತನಾಗಿ ಅವರ ನುಡಿಗಳನ್ನು ಕೇಳಬೇಕೆಂಬ ತವಕದಿಂದ ಇಂದ್ರಿಯಗಳನ್ನು ವಿಷಯಾಂತರಗಳಲ್ಲಿ ಬಿಡದೆ ನಿಯಮಿಸಿ ಏಕಾಗ್ರಚಿತ್ತನಾಗಿ ಇಂತೆಂದನು॥೬॥

---

‡ ಭಾ. ಶ್ಲೋ॥ ಊರ್ಧ್ವಂ ಪ್ರಾಣಾ ಹ್ಯುತ್ಕ್ರಾಮಂತಿ ಯೂನಃ ಸ್ಥವಿರ ಆಗತೇ । ಪ್ರತ್ಯುತ್ಥಾನಾಽಭಿವಾದಾಭ್ಯಾಂ ಪುನಸ್ತಾನ್ ಪ್ರತಿಪದ್ಯತೇ ॥ ಹಿರಿಯರಾದವರು ಮನೆಗೆ ಬಂದಾಗ ಅವರ ತೇಜಸ್ಸಿನಿಂದ ಕಿರಿಯರ ಪ್ರಾಣಗಳು ಮೇಲಕ್ಕೇರುವುವು. ಆದುದರಿಂದ ಕಿರಿಯವರು ಹಿರಿಯರನ್ನು ಕಂಡಕೂಡಲೇ ಪ್ರತ್ಯುತ್ಥಾನ ಅಭಿವಂದನೆಗಳನ್ನಾಚರಿಸಿ ಆ ಪ್ರಾಣಗಳನ್ನು ನೆಲೆಗೆ ನಿಲ್ಲಿಸಿಕೊಳ್ಳಬೇಕು.

**ಅಹೋ ಆಚರಿತಂ ಕಿಂ ಮೇ ! ಮಂಗಳಂ ಮಂಗಳಾಯನಾಃ ! । ಯಸ್ಯ**
**ವೋ ದರ್ಶನಂ ಹ್ಯಾಸೀದ್ ದುರ್ದರ್ಶಾನಾಂಚ ಯೋಗಿಭಿಃ ॥ ೭ ॥ ಕಿಂ**
**ತಸ್ಯ ದುರ್ಲಭತರ ? ಮಿಹಲೋಕೇ ಪರತ್ರಚ। ಯಸ್ಯ ವಿಪ್ರಾಃ ಪ್ರಸೀದಂತಿ**
**ಶಿವೋ ವಿಷ್ಣುಶ್ಚ ಸಾನುಗಃ ॥೮॥ ನೈವ ಲಕ್ಷಯತೇ ಲೋಕೋ ಲೋ**
**ಕಾನ್ ಪರ್ಯಟತೋಽಪಿ ಯಾನ್ । ಯಥಾ ಸರ್ವದೃಶಂ ಸರ್ವ ಆತ್ಮಾನಂ**
**ಯೇಽಸ್ಯ ಹೇತವಃ ॥ ೯ ॥ ಅಧನಾ ಅಪಿ ತೇ ಧನ್ಯಾ ಸ್ಸಾಧವೋ ಗೃಹ**
**ಮೇಧಿನಃ । ಯದ್ಗೃಹಾ ಹ್ಯರ್ಹವರ್ಯಾಂಬುತೃಣ ಭೂಮೀಶ್ವರಾ**
**ವರಾಃ ॥ ೧೦ ॥ ವ್ಯಾಳಾಲಯ ದ್ರುಮಾವೈ ತೇಽಸ್ವರಿಕ್ತಾಽಖಿಲಸಂಪದಃ॥**

---

ಯನಾಃ - ಕಲ್ಯಾಣನಿಧಿಗಳಿರಾ ! ಯಸ್ಯ - ಯಾವ ನನಗೆ, ಯೋಗಿಗಳಿಂದ, ದುರ್ದರ್ಶಾನಾಂ - ನೋಡಲಸದಳವಾದ, ವಃ - ನಿಮ್ಮ, ದರ್ಶನಂ - ದರ್ಶನವು, ಆಸೀತ್ - ಆಯಿತೋ, ಮೇ - ಆ ನನ್ನಿಂದ ಕಿಂ ಮಂಗಳಂ - ಏನು ಸುಕೃತವು, ಆಚರಿತಂ - ಮಾಡಲ್ಪಟ್ಟಿತೋ. ಅಹೋ-ಆಶ್ಚರ್ಯವು ॥ ೭ ॥ ಯಸ್ಯ - ಯಾವನಿಗೆ, ವಿಪ್ರಾಃ - ಬ್ರಾಹ್ಮಣರು, ಶಿವಃ-ಶಿವನು, ಸಾನುಗಃ - ಸಪರಿವಾರನಾದ, ವಿಷ್ಣುಶ್ಚ - ವಿಷ್ಣುವೂ, ಪ್ರಸೀದಂತಿ - ಪ್ರಸನ್ನರಾಗುವರೋ, ತಸ್ಯ - ಅವನಿಗೆ, ಇಹಲೋಕೇ - ಈ ಲೋಕದಲ್ಲಿಯೂ, ಪರತ್ರ ಚ - ಪರಲೋಕದಲ್ಲಿಯೂ, ಕಿಂ - ಯಾವುದು, ದುರ್ಲಭಂ - ಅಸಾಧ್ಯವು, ? ॥೮॥ ಅಸ್ಯ - ಈ ಜಗತ್ತಿಗೆ, ಹೇತವಃ - ಕಾರಣಭೂತರಾದ, ಸರ್ವೇ - ಸಮಸ್ತರಾದ, ಯೇ - ಬ್ರಹ್ಮಾದಿಗಳು, ಸರ್ವದೃಶಂ - ಸರ್ವಸಾಕ್ಷಿಯಾದ, ಆತ್ಮಾನಂ ಯಥಾ-ಆತ್ಮನನ್ನೋ? ಪಾದಿಯಲ್ಲಿ, ಲೋಕಾನ್-ಲೋಕಗಳನ್ನು, ಪರ್ಯಟತೋಽಪಿ - ಸಂಚರಿಸುತ್ತಿದ್ದರೂ, ಯಾನ್ - ಯಾವ ನಿಮ್ಮನ್ನು, ಲೋಕಃ-ಜನರು, ನೈವಲಕ್ಷಯತೇ - ನೋಡುವುದಿಲ್ಲವೋ ॥ ೯ ॥ ಯದ್ಗೃಹಾಃ - ಯಾರ ಮನೆಯು, ಅರ್ಹ....ರಾಃ, ಅರ್ಹ-ಪೂಜ್ಯರಿಂದ, ವರ್ಯ-ವರಿಸಲ್ಪಡುವ, ಅಂಬು-ಜಲವು, ತೃಣ - ಆಸನವು, ಭೂಮಿ-ನೆಲವು, ಈಶ್ವರ - ಯಜಮಾನನು, ಅವರಾಃ - ಭೃತ್ಯರು, ಮೊದಲಾದವನ್ನುಳ್ಳುದಾಗಿರುವುದೋ, ಗೃಹಮೇಧಿನಃ - ಸಂಸಾರಿಗಳಾದ, ತೇ - ಅವರು, ಸಾಧವಃ - ಸತ್ಪುರುಷರು, ಅಧನಾಅಪಿ - ಈಗಲೂ, ಧನ್ಯಾಃ - ಧನ್ಯರು. ॥ ೧೦ ॥ ಯದ್ಗೃಹಾಃ - ಯಾವ ಮನೆಗಳು, ತೀರ್ಥ....ತಾಃ, ತೀರ್ಥಪಾದೀಯ

---

ಅಯ್ಯಾ ಕಲ್ಯಾಣನಿಧಿಗಳಿರಾ ! ಮಹಾಯೋಗಿಗಳಿಗೆ ಕೂಡ ದರ್ಶನವನ್ನೀಯದ ನಿಮ್ಮನ್ನು ಕಂಡುದರಿಂದ ನಾನೆಷ್ಟು ಸುಕೃತವನ್ನು ಮಾಡಿದ್ದೆನೋ ತಿಳಿಯದು. ಇದಾಶ್ಚರ್ಯವೇ ಸರಿ ॥೭॥ ತಮ್ಮಂತಹ ಬ್ರಾಹ್ಮಣೋತ್ತಮರು, ಪರಿವಾರದಿಂದ ಕೂಡಿದ ಪರಶಿವನು, ನಾರಾಯಣಮೂರ್ತಿಯೂ, ಇವರು ಯಾರನ್ನು ಅನುಗ್ರಹಿಸುವರೋ, ಅವನಿಗೆ ಈ ಲೋಕದಲ್ಲಿ ಯಾಗಲಿ, ಪರಲೋಕದಲ್ಲಿಯಾಗಲಿ ಅಸಾಧ್ಯವಾದುದುಂಟೆ ? ॥೮॥ ಈ ದೃಶ್ಯಪ್ರಪಂಚಕ್ಕೆ ಕಾರಣರೆನಿಸಿದ್ದರೂ ಬ್ರಹ್ಮಾದಿಗಳು ಸರ್ವಸಾಕ್ಷಿಯಾದ ಪರಮಾತ್ಮನನ್ನು ಕಾಣದಿರುವಂತೆ, ಸಕಲಲೋಕಗಳನ್ನು ಸಂಚರಿಸುತ್ತಿದ್ದರೂ ಯಾವ ನಿಮ್ಮನ್ನು ಜನರು ಕಾಣಲಾರರೋ, ಅಂತಹ ನಿಮ್ಮ ದರ್ಶನವು ಸಾಮಾನ್ಯವೆ ? ॥೯॥ ನಿಮ್ಮಂತಹ ಮಹಾತ್ಮರು ಯಾರ ಮನೆಗೆ ಬಿಜಮಾಡಿ ಅವರಿತ್ತ ಸತ್ಕಾರಗಳನ್ನು ಸ್ವೀಕರಿಸಿ, ಮನೆಯ ಯಜಮಾನನನ್ನೂ, ಉಳಿದವರನ್ನೂ ಹರಸಿ ಅನುಗ್ರಹಿಸುವರೋ, ಆ ಸಂಸಾರಿಗಳೇ ಧನ್ಯರು. ಅವರೇ ಸಾಧುಗಳು ॥೧೦॥

ಯದ್ಗೃಹಾಸ್ತೀರ್ಥಪಾದೀಯ ಪಾದತೀರ್ಥವಿವರ್ಜಿತಾಃ ॥ ೧೧ ॥
ಸ್ವಾಗತಂ ? ವೋ ದ್ವಿಜ ಶ್ರೇಷ್ಠಾ ! ಯದ್ವ್ರತಾನಿ ಮುಮುಕ್ಷವಃ । ಚರಂ
ತಿ ಶ್ರದ್ಧಯಾ ಧೀರಾಃ ಬಾಲಾ ಏವ ಬೃಹಂತಿಚ ॥ ೧೨ ॥ ಕಚ್ಚಿನ್ನಃ
ಕುಶಲಂ ? ನಾಥಾಃ ! ಇಂದ್ರಿಯಾರ್ಥಾರ್ಥವೇದಿನಾಂ । ವ್ಯಸನಾವಾಪ
ಏತಸ್ಮಿನ್ ಪತಿತಾನಾಂ ಸ್ವಕರ್ಮಭಿಃ ॥ ೧೩ ॥ ಭವತ್ಸು ಕುಶಲ ಪ್ರಶ್ನ
ಆತ್ಮಾರಾಮೇಷು ನೇಷ್ಯತೇ । +ಕುಶಲಾಽಕುಶಲಾ ಯತ್ರ ನಸಂತಿ ಮತಿ

ವಿಷ್ಣು ಭಕ್ತರ, ಪಾದತೀರ್ಥ - ಪಾದತೀರ್ಥದಿಂದ, ವಿವರ್ಜಿತಾಃ - ಬಿಡಲ್ಪಟ್ಟಿರುವುವೋ, ತೇ - ಆ ಮನೆಗಳು, ಅರಿ....ದೋಪಿ, ಸಕಲಸಂಪತ್ತುಗಳಿಂದ ಕೂಡಿದ್ದರೂ, ವ್ಯಾಳಾ....ಮಾವೈ - ಹಾವುಗಳಿಗೆ ಅಥವಾ ಕಾಡು ಮೃಗಗಳಿಗೆ, ಇಕ್ಕೆಯಾದ ಗಿಡಗಳೆನ್ನಿಸುವುವು. ॥ ೧೧ ॥

ದ್ವಿಜಶ್ರೇಷ್ಠಾಃ - ಬ್ರಾಹ್ಮಣೋತ್ತಮರಿರಾ, ಯತ್ - ಯಾವಕಾರಣದಿಂದ, ಬಾಲಾಏವ - ಹಸುಳೆಗಳಾಗಿಯೇ, ಮುಮುಕ್ಷವಃ - ಮೋಕ್ಷವನ್ನು ಬಯಸಿ, ಧೀರಾಃ - ಜಿತೇಂದ್ರಿಯರಾಗಿ, ಶ್ರದ್ಧಯಾ - ಶ್ರದ್ಧೆಯಿಂದ, ಬೃಹಂತಿ - ಕಠಿಣಗಳಾದ, ವ್ರತಾನಿ - ನಿಯಮಗಳನ್ನು, ಚರಂತಿ - ಮಾಡುತ್ತಿರುವಿರೋ, ಅಥವಾ, ಯದ್ವ್ರತಾನಿ - ಯಾವ ನಿಮ್ಮವ್ರತಗಳನ್ನು, ಬಾಲಾಏವ - ಇತರ ಬಾಲರು, ಚರಂತಿ - ಮಾಡುತ್ತಿರುವರೋ, ಅಂತಹ, ವಃ - ನಿಮಗೆ, ಸ್ವಾಗತಂ - ಸುಖಾಗಮನವೆ? ॥ ೧೨ ॥ ನಾಥಾಃ - ಪ್ರಭುಗಳಿರಾ ! ಇಂದ್ರಿ....ನಾಂ, ಇಂದ್ರಿಯಾರ್ಥ - ವಿಷಯಗಳನ್ನೇ, ಅರ್ಥ - ಪುರುಷಾರ್ಥವನ್ನಾಗಿ, ವೇದಿನಾಂ - ತಿಳಿಯುವ, ಏತಸ್ಮಿನ್ - ಈ, ವ್ಯಸನಾವಾಪೇ - ದುಃಖಗಳಿಗೆ ನೆಲೆಯಾದ ಸಂಸಾರದಲ್ಲಿ, ಸ್ವಕರ್ಮಭಿಃ - ತಮ್ಮ ಕರ್ಮಗಳಿಂದ, ಪತಿತಾನಾಂ - ಬಿದ್ದಿರುವ, ನಃ - ನಮಗೆ, ಕುಶ

ತಮ್ಮಂತಹ ಭಾಗವತೋತ್ತಮರ ಪಾದತೀರ್ಥದಿಂದ ಪವಿತ್ರವಾಗದಿರುವ ಮನೆಯು ಸಕಲ ಸಂಪತ್ತುಗಳಿಂದ ಸಮೃದ್ಧವಾಗಿದ್ದರೂ, ಹಾವು ಹುಲಿ ಕರಡಿಗಳಿಗೆ ನೆಲೆಯಾದ ಕಾಡುಗಿಡಗಳಿಗೆ ಸಮವೆಂದರಿಯಬೇಕು ॥೧೧॥ ಅಯ್ಯಾ ಬ್ರಾಹ್ಮಣೋತ್ತಮರಿರಾ ! ಬಾಲರಾಗಿರುವಾಗಲೇ ಮುಮುಕ್ಷುಗಳಾಗಿ ಶ್ರದ್ಧೆಯಿಂದ ಅಸಾಧ್ಯಗಳಾದ ನಿಯಮಗಳನ್ನು ಆಚರಿಸುತ್ತಿರುವ ನೀವು ಸುಖವಾಗಿ ಬಂದಿರಾ ? ॥೧೨॥ “ಅಯ್ಯಾ ರಾಜನೆ ! ನಿನಗೆ ಕುಶಲವೆ? ” ಎಂದು ನನ್ನನ್ನು ಕೇಳುವಿರಾ ? ಸ್ವಾಮಿಗಳಿರಾ ! ಹಗಲಿರುಳಿನಲ್ಲಿಯೂ ಶಬ್ದಾದಿವಿಷಯಗಳೇ ಪರಮಪುರುಷಾರ್ಥಗಳೆಂದು ಭಾವಿಸಿ, ಕರ್ಮವಶರಾಗಿ ಸಕಲ ದುಃಖಗಳಿಗೂ ತವರುಮನೆಯೆನಿಸಿದ ಸಂಸಾರಕೂಪದಲ್ಲಿ ಬಿದ್ದಿರುವ ನಮಗೆ ಕುಶಲವೆತ್ತಣದು ? ॥೧೩॥ ನಮಗಂತು

+ ವೀ. ಶುಭಾಶುಭ ವಿಷಯಚಿಂತನ ರೂಪಗಳಾದ ಬುದ್ಧಿವೃತ್ತಿಗಳೇ ಕಾಮಕ್ರೋಧಮೋಹಾದಿಗಳನ್ನುಂಟುಮಾಡುವುದರ ಮೂಲಕವಾಗಿ ಸುಖದುಃಖಗಳಿಗೆ ಕಾರಣಗಳೆನಿಸುವುವು. ಅಂತಹ ಬುದ್ಧಿವೃತ್ತಿಗಳೇ ಇಲ್ಲದ ಬಳಿಕ ಶುಭಾಶುಭಗಳೆಲ್ಲಿ! ಶ್ಲೋ ॥ ಧ್ಯಾಯತೋ ವಿಷಯಾನ್ ಪುಂಸ ಸ್ಸಂಗಸ್ತೇಷೂಪಜಾಯತೇ । ಸಂಗಾತ್ಸಂಜಾಯತೇ ಕಾಮಃ ಕಾಮಾತ್ಕ್ರೋಧೋಽಭಿಜಾಯತೇ । ಕ್ರೋಧಾದ್ಭವತಿ ಸಂಮೋಹ ಸ್ಸಮ್ಮೋಹಾತ್ಸ್ಮೃತಿ ವಿಭ್ರಮಃ । ಸ್ಮೃತಿ ಭ್ರಂಶಾ ದ್ಬುದ್ಧಿನಾಶೋ ಬುದ್ಧಿನಾಶಾತ್ಪ್ರಣಶ್ಯತಿ ॥ (ಗೀತಾ) ವಸ್ತುಗಳಸಂಗ ಮೊದಲಾದವುಗಳಿಂದ ಸುಖದುಃಖಾದಿಗಳುಂಟಾಗುವದಕ್ಕೆ ಬುದ್ಧಿ ವೃತ್ತಿಗಳೇ ಕಾರಣವು.

ವೃತ್ತಯಃ ॥ ೧೪ ॥ ತದಹಂ ಕೃತವಿಸ್ರಂಭಃ ಸುಹೃದೋ ವಸ್ತಪಸ್ವಿ
ನಾಂ । ಸಂಪೃಚ್ಛೇ ಭವ ಏತಸ್ಮಿನ್ ಕ್ಷೇಮಃ ಕೇನಾಂಜಸಾ ಭವೇ
ತ್ ॥ ೧೫ ॥ ವ್ಯಕ್ತ ಮಾತ್ಮವತಾ ಮಾತ್ಮಾ ಭಗವಾ ನಾತ್ಮಭಾವನಃ ।
ಸ್ವಾನಾ ಮನುಗ್ರಹಾ ಯೇ ಮಾಂ ಸಿದ್ಧರೂಪೀ ಚರತ್ಯಜಃ ॥೧೬॥ ಮೈ
ತ್ರೇಯಃ॥ ಪೃಥೋ ಸ್ತತ್ಸೂಕ್ತ ಮಾಕರ್ಣ್ಯ ಸಾರಂ ಸುಷ್ಠು ಮಿತಂ
ಮಧು । ಸ್ಮಯಮಾನ ಇವ ಪ್ರೀತ್ಯಾ ಕುಮಾರಃ ಪ್ರತ್ಯುವಾಚ ಹ ॥ ೧೭ ॥

---

ಲಂ - ಕ್ಷೇಮವು, ಕಚ್ಚಿತ್ - ಎಲ್ಲಿಯದು ? ॥ ೧೩ ॥ ಯತ್ರ - ಎಲ್ಲಿ, ಕುಶಲಾ ಕುಶಲಾಃ - ಸುಖ ದುಃಖರೂಪಗಳಾದ, ಮತಿವೃತ್ತಯಃ - ಬುದ್ಧಿಗಳು, ನ - ಇಲ್ಲವೋ, ಅಂತಹ, ಆತ್ಮಾರಾಮೇಷು - ಆತ್ಮಕ್ರೀಡರಾದ, ಭವತ್ಸು - ನಿಮ್ಮಲ್ಲಿ, ಕುಶಲಪ್ರಶ್ನಃ - ಕ್ಷೇಮವನ್ನು ಬೆಸಗೊಳ್ಳುವುದೇ, ನೇಷ್ಯತೇ - ಸರಿಯಲ್ಲ ॥ ೧೪ ॥ ತತ್ - ಆದುದರಿಂದ, ಕೃತವಿಸ್ರಂಭಃ - ವಿಶ್ವಾಸವುಳ್ಳವನಾಗಿ, ತಪಸ್ವಿನಾಂ- ಸಂಸಾರ ತಪ್ತರಾದವರಿಗೆ, ಸುಹೃದಃ - ಮಿತ್ರರಾದ, ವಃ - ನಿಮ್ಮನ್ನು, ಸಂಪೃಚ್ಛೇ - ಬೆಸಗೊಳ್ಳುವೆನು, ಏತಸ್ಮಿನ್ಭವೇ - ಈ ಸಂಸಾರದಲ್ಲಿ ಕೇನ - ಯಾವುದರಿಂದ, ಅಂಜಸಾ - ಬೇಗನೆ, ಕ್ಷೇಮಃ- ಕ್ಷೇಮವು, ಭವೇತ್ - ಆದೀತು ? ॥ ೧೫ ॥ ಆತ್ಮವತಾಂ - ಪಕ್ವಬುದ್ಧಿಯುಳ್ಳ ಧೀರರಿಗೆ, ಆತ್ಮಭಾವನಃ - ಆತ್ಮವನ್ನು ಪ್ರಕಾಶಗೊಳಿಸುವವನು, ಭಗವಾನ್ - ಷಡ್ಗುಣೈಶ್ವರ್ಯಸಂಪನ್ನನಾದ, ಅಜಃ - ನಾರಾಯಣಮೂರ್ತಿಯು, ಸ್ವಾನಾಂ - ಭಕ್ತರ, ಅನುಗ್ರಹಾಯ - ಅನುಗ್ರಹಕ್ಕಾಗಿ, ಸಿದ್ಧರೂಪೀ - ಮುನಿರೂಪದಿಂದ, ಇದಂ - ಈ ಲೋಕವನ್ನು, ಚರತಿ - ಸಂಚರಿಸುತ್ತಿರುವನು ॥ ೧೬ ॥ ಮೈತ್ರೇಯನು ಹೇಳುತ್ತಾನೆ—ಕುಮಾರಃ-ಸನತ್ಕುಮಾರಮುನಿಯು, ಸಾರಂ - ಸಾರಭೂತವೂ, ಸುಷ್ಠು - ಗಂಭೀರಾರ್ಥವೂ, ಮಿತಂ - ಅಲ್ಪಾಕ್ಷರವೂ, ಮಧು - ಕಿವಿಗಿಂಪಾದ, ಪೃಥೋಃ - ಪೃಥುವಿನ, ತತ್ಸೂಕ್ತಂ - ಆ ನುಡಿಯನ್ನು, ಆಕರ್ಣ್ಯ - ಕೇಳಿ, ಸ್ಮಯಮಾನಇವ - ನಸುನಕ್ಕು, ಪ್ರತ್ಯುವಾಚ- ಉತ್ತರವನ್ನಿತ್ತನು ॥ ೧೭ ॥ ಮಹಾರಾಜ - ಎಲೈ ಮಹಾರಾಜನೆ, ಸರ್ವ.......ನಾಂ - ಸಕಲ ಭೂತಗಳಿಗೂ ಹಿತವನ್ನು ಮಾಡುವ, ಭವತಾ - ನಿನ್ನಿಂದ, ವಿದುಷಾಪಿ - ಪಂಡಿತನಾದರೂ,

---

ಕುಶಲವಿಲ್ಲ. ತಮ್ಮ ಕುಶಲವನ್ನಾದರೂ, ಬೆಸಗೊಳ್ಳಲೇ ? ಎಂದರೆ ಅದೂ ಸಮನಲ್ಲ. ಸುಖ ದುಃಖರೂಪಗಳಾದ ಮನೋವೃತ್ತಿಗಳೇ ಇಲ್ಲದೆ ಯಾವಾಗಲೂ ಆತ್ಮಾರಾಮರಾಗಿಯೇ ಇರುವ ನಿಮ್ಮಲ್ಲಿ ಕುಶಲಪ್ರಶ್ನೆಯನ್ನು ಮಾಡುವುದೆಂದರೇನು? ॥೧೪॥ ಆದುದರಿಂದ ಸಂಸಾರ ತಾಪಗಳಿಂದ ತಪ್ತರಾದವರನ್ನು ಕನಿಕರಿಸುವ ಪರಮ ದಯಾಳುಗಳಾದ ನಿಮ್ಮನ್ನು ಮರೆ ಹೊಕ್ಕು ಈ ಸಂಸಾರದಲ್ಲಿ ಪ್ರಾಣಿವರ್ಗಕ್ಕೆ ಯಾವ ಉಪಾಯದಿಂದ ಶೀಘ್ರವಾಗಿ ಕ್ಷೇಮವುಂಟಾಗುವುದೋ ಅದನ್ನು ತಿಳಿಯಬೇಡುವೆನು, ಎಂದು ಬಿನ್ನವಿಸಿದನು ॥ ೧೬ ॥ ಅಯ್ಯಾ ವಿದುರನೆ ! ಬಳಿಕ ಸನತ್ಕುಮಾರಮುನಿಯು ನ್ಯಾಯವಾಗಿಯೂ, ಅರ್ಥಗರ್ಭಿತವಾಗಿಯೂ, ಅಲ್ಪಾಕ್ಷರವಾಗಿಯೂ, ಕಿವಿಗಿಂಪಾಗಿಯೂ ಇರುವ ಆ ಪೃಥುರಾಜನ ನುಡಿಯನ್ನು ಕೇಳಿ ನಸುನಕ್ಕು ಆದರದಿಂದಿಂತು ಹೇಳುತ್ತಾನೆ ॥೧೭॥ ಅಯ್ಯಾ ಮಹಾರಾಜನೆ! ನೀನು ಪಂಡಿತನಾಗಿದ್ದರೂ ಸಕಲ ಭೂತಗಳಿಗೂ ಹಿತವಾಗಬೇಕೆಂದೆಳಸುವವನಾದುದರಿಂದ ಇಂತು ಬೆಸಗೊಂಡಿರುವೆ. ಬಹಳ ಸಂತೋಷವಾಯಿತು. ಲೋಕದಲ್ಲಿ ಸಾಧುಗಳ

ಸನತ್ಕುಮಾರಃ ॥ ಸಾಧುಪೃಷ್ಟಂ ಮಹಾರಾಜ ! ಸರ್ವಭೂತ ಹಿತಾತ್ಮನಾ । ಭವತಾ ವಿದುಷಾಚಾಪಿ ಸಾಧೂನಾಂ ಮತಿ ರೀದೃಶೀ ॥೧೮॥ ಸಂಗಮಃ ಖಲು ಸಾಧೂನಾ ಮುಭಯೇಷಾಂ ಚ ಸಮ್ಮತಃ । ಯತ್ಸಂಭಾಷಣಸಂಪ್ರಶ್ನ ಸ್ಸರ್ವೇಷಾಂ ವಿತನೋತಿ ಶಂ ॥೧೯॥ ಅಸ್ತ್ಯೇವರಾಜನ್! ಭವತೋ ಮಧುದ್ವಿಷಃ ಪದಾರವಿಂದಸ್ಯ ಗುಣಾऽನುವಾದನೇ । ರತಿರ್ದುರಾಪಾ ವಿಧುನೋತಿ ನೈಷ್ಠಿಕೀ ಕಾಮಂ ಕಷಾಯಂ ಮಲ ಮಂತರಾತ್ಮನಃ ॥ ೨೦ ॥ ಶಾಸ್ತ್ರೇಷ್ವಿಯಾನೇವ ಸುನಿಶ್ಚಿತೋ ನೃಣಾಂ ಕ್ಷೇಮಸ್ಯ ಸಧ್ರ್ಯಗ್ವಿಮೃಶೇಷು ಹೇತುಃ । ಅಸಂಗ ಆತ್ಮವ್ಯತಿರಿಕ್ತ ಆತ್ಮನಿ ದೃಢಾ ರತಿ

ಸಾಧು - ಚೆನ್ನಾಗಿ, ಪೃಷ್ಟಂ - ಪ್ರಶ್ನೆಮಾಡಲ್ಪಟ್ಟಿತು, ಸಾಧೂನಾಂ - ಸಾಧುಗಳ, ಮತಿಃ - ಬುದ್ಧಿಯು, ಈದೃಶೀ - ಇಂಥದೇಸರಿ ॥ ೧೮ ॥ ಯತ್ಸಂ...ಶ್ನಃ-ಯಾರೊಡನೆ ಸಂಭಾಷಣವು, ಪ್ರಶ್ನವು, ಸರ್ವೇಷಾಂ - ಎಲ್ಲರಿಗೂ, ಶಂ - ಸುಖವನ್ನು, ವಿತನೋತಿ - ಬೆಳಯಿಸುವುದೊ, ಅಂತಹ, ಸಾಧೂನಾಂ- ಸಾಧುಗಳ, ಸಂಗಮಃ - ಸಹವಾಸವು, ಉಭಯೇಷಾಂಚ - ಇಬ್ಬರಿಗೂ, ಸಮ್ಮತಃಖಲು - ಇಷ್ಟವಾದುದಷ್ಟೆ ॥ ೧೯ ॥ ರಾಜನ್ - ಎಲೈರಾಜನೆ, ಯಾ - ಯಾವ ಭಕ್ತಿಯು, ಅಂತರಾತ್ಮನಃ - ಮನಸ್ಸಿನ, ಕಷಾಯಂ - ಕಳೆಯಲಿಕ್ಕಾಗದ, ಕಾಮಂ - ಕಾಮರೂಪವಾದ, ಮಲಂ - ಕೊಳೆಯನ್ನು ವಿಧುನೋತಿ - ಹೋಗಲಾಡಿಸುವುದೋ, ಭವತಃ - ನಿನಗೆ, ಮಧುದ್ವಿಷಃ - ವಿಷ್ಣುವಿನ, ಪದಾರವಿಂದಸ್ಯ - ಪಾದಕಮಲದ, ಗುಣಾನುವಾದನೇ - ಗುಣಕೀರ್ತನದಲ್ಲಿ, ನೈಷ್ಠಿಕೀ - ನೆಲೆಯಾದ, ದುರಾಪಾ - ಇತರರಿಂದ ಹೊಂದಲ್ಪಡಲಾರದ, ರತಿಃ - ಪ್ರೀತಿಯು, ಅಸ್ತ್ಯೇವ - ಇರಲೇ ಇರುವುದು ॥ ಆತ್ಮವ್ಯತಿರಿಕ್ತೇ - ತನಗಿಂತ ಬೇರೆಯಾದ ದೇಹಾದಿಗಳಲ್ಲಿ, ಅಸಂಗಃ - ವೈರಾಗ್ಯವು, ನಿರ್ಗುಣೇ - ಗುಣರಹಿತನಾದ, ಬ್ರಹ್ಮಣಿ - ವ್ಯಾಪಕನಾದ, ಆತ್ಮನಿ - ಆತ್ಮನಲ್ಲಿ, ದೃಢಾ - ನಿಷ್ಕಪಟವಾದ, ರತಿಃ - ಪ್ರೀತಿಯು ಯಾವುದುಂಟೋ, ಇಯಾನೇವ - ಇಷ್ಟೇ, ನೃಣಾಂ - ಮನುಷ್ಯರ, ಕ್ಷೇಮಸ್ಯ - ಕ್ಷೇಮಕ್ಕೆ. ಹೇತುಃ-ಕಾರಣವು, ಇತಿ - ಎಂದು, ಸಧ್ರ್ಯ....ಷು - ಚೆನ್ನಾಗಿ ವಿಚಾರಮಾಡಿರುವ, ಶಾಸ್ತ್ರೇ

ಬುದ್ಧಿಯು ಯಾವಾಗಲೂ ಪರೋಪಕಾರದಲ್ಲಿಯೇ ನಿರತವಾದುದಷ್ಟೆ ॥೧೮॥ ಸಾಧುಗಳಲ್ಲಿ ನಡೆಯುವ ಪ್ರಶ್ನೆಗಳೂ ಸಂಭಾಷಣಗಳೂ ಸಹ ಸರ್ವರಿಗೂ ಶ್ರೇಯಸ್ಕರಗಳಾಗುವುದರಿಂದ ಸಾಧುಸಂಗವೆಂಬುದು ವಕ್ತೃಶ್ರೋತೃಗಳೆರ್ವರಿಗೂ ಸಮ್ಮತವು ॥೧೯॥ ಅಯ್ಯಾ ರಾಜನೆ ! ನೀನು ಯಾವಾಗಲೂ ಪುರಾಣಪುರುಷನಾದ ನಾರಾಯಣಮೂರ್ತಿಯ ಪಾದಕಮಲಗಳ ಗುಣಗಳನ್ನು ಬಣ್ಣಿಸುವುದರಲ್ಲಿ ಸಂಪೂರ್ಣ ಪ್ರೀತಿಯುಳ್ಳವನಾಗಿಯೇ ಇರುವೆ. ಇದನ್ನು ಸಾಮಾನ್ಯವೆಂದರಿಯಬೇಡ. ಈ ಪ್ರೀತಿಯೆಂಬುದು ಎಲ್ಲರಿಗೂ ಸಾಧ್ಯವಲ್ಲ. ಬಹುಕಾಲವಾಗಿ ಬಣ್ಣವಿಟ್ಟಂತೆ ನೆಲಗೊಂಡು ಕಳೆಯಲಾಗದಂತಿರುವ ಕಾಮರೂಪವಾದ ಮನಃಕಲ್ಮಷವನ್ನು ಸಂಪೂರ್ಣವಾಗಿ ನಾಶಗೊಳಿಸುವುದು॥೨೦॥ಸಕಲಶಾಸ್ತ್ರಗಳ ಸಾರವನ್ನೂ ಒಂದುನುಡಿಯಿಂದ ಹೇಳುವೆನು ಕೇಳು. ನಿರ್ಗುಣನಾಗಿಯೂ ಸರ್ವವ್ಯಾಪಕನಾಗಿಯೂ ಇರುವ ಪರಮಾತ್ಮನಲ್ಲಿ ಭಕ್ತಿಯೊಂದು. ಪರಮಾತ್ಮನಿಗಿಂತ ಭಿನ್ನಗಳಾದ ದೇಹಾದಿಗಳಲ್ಲಿ ವೈರಾಗ್ಯವೊಂದು. ಇವೆರಡೇ ಸಕಲಪ್ರಾಣಿಗಳ ಶ್ರೇಯಸ್ಸಿಗೂ ಮುಖ್ಯಸಾಧ

ಬ್ರಹ್ಮಣಿ ನಿರ್ಗುಣೇ ಚ ಯಾ ॥ ೨೦ ॥ ಸಾ ಶ್ರದ್ಧಯಾ ಭಗವದ್ಧ
ರ್ಮಚರ್ಯಯಾ ಜಿಜ್ಞಾಸಯಾಽಧ್ಯಾತ್ಮಿಕಯೋಗನಿಷ್ಠಯಾ । ಯೋ
ಗೇಶ್ವರೋಪಾಸನಯಾ ಚ ನಿತ್ಯಂ ಪುಣ್ಯಶ್ರವಃ ಕಥಯಾ ಪುಣ್ಯಯಾ ಚ॥೨೧
ಅರ್ಥೇಂದ್ರಿಯಾರಾಮ ಸಗೋಷ್ಠ್ಯತೃಷ್ಣಯಾ ತತ್ಸಮ್ಮತಾನಾಮಪರಿ
ಗ್ರಹೇಣ ಚ । ವಿವಿಕ್ತರುಚ್ಯಾ ಪರಿತೋಷ ಆತ್ಮನಿ ವಿನಾ ಹರೇರ್ಗುಣ
ಪೀಯೂಷಪಾನಾತ್ ॥ ೨೨ ॥ ಅಹಿಂಸಯಾ ಪಾರಮಹಂಸ್ಯಚರ್ಯಯಾ

---

ಷು - ಶಾಸ್ತ್ರಗಳಲ್ಲಿ; ಸುನಿಶ್ಚಿತಃ - ನಿಶ್ಚಯಿಸಲ್ಪಟ್ಟಿರುವುದು. ॥ ೨೦ ॥ ಸಾ - ಆ ಭಕ್ತಿವೈರಾಗ್ಯ ಗಳು, ಶ್ರದ್ಧಯಾ - ಶ್ರದ್ಧೆಯಿಂದಲೂ, ಭಗ...ಯಾ - ಸ್ವಧರ್ಮಾಚರಣದಿಂದಲೂ, ಜಿಜ್ಞಾಸಯಾ- ತತ್ತ್ವವಿಚಾರದಿಂದಲೂ, ಅಧ್ಯಾ...ಯಾ - ಅಷ್ಟಾಂಗಯೋಗಾಭ್ಯಾಸದಿಂದಲೂ, ಯೋಗೇ...ಚ - ಯೋಗ ಸಿದ್ಧರನ್ನು, ಸೇವಿಸುವುದರಿಂದಲೂ, ನಿತ್ಯಂ - ಯಾವಾಗಲೂ, ಪುಣ್ಯಯಾ - ಪವಿತ್ರವಾದ, ಪುಣ್ಯಶ್ರ ವಃಕಥಯಾ - ಪುಣ್ಯಕೀರ್ತಿಯುಳ್ಳ ಭಗವಂತನ ಚರಿತ್ರೆಯಿಂದಲೂ । ೨೧ ॥

ಅರ್ಥೇಂ...ಯಾ, ಅರ್ಥ - ಧನಾದಿಗಳನ್ನೂ, ಇಂದ್ರಿಯ - ಕಾಮಸುಖಗಳನ್ನೂ, ಆರಾಮ ಬಯಸುವವರ, ಸಗೋಷ್ಠ್ಯೇ - ಸಮಾಜದಲ್ಲಿ, ಅತೃಷ್ಣಯಾ - ವಿರಕ್ತಿಯಿಂದಲೂ, ತತ್ಸಂಮತಾನಾಂ- ಅವರಿಗಿಷ್ಟಗಳಾದ ಅರ್ಥಕಾಮಗಳನ್ನು, ಅಪರಿಗ್ರಹೇಣಚ - ಸ್ವೀಕರಿಸದುದರಿಂದಲೂ, ಆತ್ಮನಿ - ಆ ತ್ಮನಲ್ಲಿ, ಪರಿತೋಷೇಸತಿ - ಸಂತೋಷವುಂಟಾದಲ್ಲಿ, ವಿವಿಕ್ತರುಚ್ಯಾ - ಏಕಾಂತದಲ್ಲಿ ಪ್ರೀತಿಯಿಂದಲೂ, ಹರೇಃ - ವಿಷ್ಣುವಿನ, ಗುಣಪೀಯೂಷಪಾನಾದ್ವಿನಾ - ಗುಣಗಳೆಂಬ ಅಮೃತರಪಾನವಿಲ್ಲದೆ, ನ-ಇಲ್ಲ ॥೨೨॥ ಅಹಿಂಸಯಾ - ಹಿಂಸೆಯನ್ನು, ಮಾಡದಿರುವುದರಿಂದಲೂ, ಪಾರ...ಯಾ - ಶಮದಮಾದಿಗಳುಳ್ಳ ನಡವಳಿ ಯಿಂದಲೂ, ಸ್ಮೃತ್ಯಾ - ಆತ್ಮಹಿತಾನುಸಂಧಾನದಿಂದಲೂ, ಮುಕುಂ....ನಾಂ - ಭಗವಂತನ ಚರಿತ್ರೆ ಯೆಂಬ ಉತ್ತಮವಾದ ಅಮೃತದಿಂದಲೂ, ಯಮೈಃ - ಬಹಿರಿಂದ್ರಿಯಗಳನ್ನು ಗೆಲ್ಲುವುದರಿಂದಲೂ, ಅಕ- ಮೈಃ - ಅಂತರಿಂದ್ರಿಯನಿಗ್ರಹದಿಂದಲೂ, ನಿಯಮೈಃ - ಶೌಚಾದಿಗಳಿಂದಲೂ, ಅನಿಂದಯಾ - ಇತರವೂ

---

ನವೆಂದು ವಿಚಾರಪೂರ್ವಕವಾಗಿ ಶಾಸ್ತ್ರಗಳಲ್ಲಿ ನಿಶ್ಚಿತವಾಗಿರುವುದು ॥೨೦॥ ಈ ಭಕ್ತಿ ವೈರಾಗ್ಯಗಳೆಂಬುವು ಮಾತಿನಲ್ಲಿ ಸುಲಭವಾಗಿದ್ದರೂ ಆಚರಣೆಯಲ್ಲಿ ಬಹಳ ದುರ್ಲಭ ವೆಂದು ತಿಳಿ. ಇವು ಅವರವರ ಅಧಿಕಾರಾನುಗುಣವಾಗಿ ದೊರೆಯಬೇಕಲ್ಲದೆ ಒಂದೇ ಸಮನಾಗಿ ಲಭಿಸಲಾರವು ಇವನ್ನು ಪಡೆಯತಕ್ಕವರು ಶ್ರದ್ಧಾಳುಗಳಾಗಿರಬೇಕು. ಸ್ವ ಧರ್ಮನಿರತರಾಗಿರಬೇಕು. ತತ್ತ್ವವಿಚಾರವನ್ನು ಮಾಡುತ್ತಿರಬೇಕು. ಯಮನಿಯ ಮಾದಿ ಯೋಗಗಳನ್ನು ಅಭ್ಯಾಸಮಾಡಬೇಕು. ಲೋಕದಲ್ಲಿ ತಪಸ್ಸಿದ್ಧರಾದವರನ್ನು ಸೇ ವಿಸುತ್ತಿರಬೇಕು, ನಿರಂತರವೂ ಪುಣ್ಯಚರಿತ್ರನಾದ ಭಗವಂತನ ಕಥಾಶ್ರವಣವನ್ನು ಮಾಡು ತ್ತಿರಬೇಕು॥೨೧॥ ದ್ರವ್ಯಾರ್ಜನೆಯಲ್ಲಾಸಕ್ತರಾದವರಲ್ಲಿಯೂ ಸ್ರಕ್ಚಂದನವನಿತಾದಿ ಭೋ ಗಾಸಕ್ತರಲ್ಲಿಯೂ ಸಹವಾಸವನ್ನು ಮಾಡಬಾರದು. ಆ ಅರ್ಥಕಾಮಗಳನ್ನು ಬಯಸಬಾ ರದು. ಭಗವದ್ಗುಣಚಿಂತನದಿಂದ ಆತ್ಮಸಂತೋಷವನ್ನು ಪಡೆದು ಜನಸಂಗವಿಲ್ಲದ ಏ ಕಾಂತದಲ್ಲಿ ಪ್ರೀತಿಯುಳ್ಳವನಾಗಿರಬೇಕು. ಭಗವತ್ಕಥಾಮೃತಪಾನವಿಲ್ಲದಾಗ ಏಕಾಂತ ವಾಗಿ ನೆಲೆಸಿರಬಾರದು ॥ ೨೨ ॥ ಯಾವ ಭೂತಗಳನ್ನೂ ನೋಯಿಸಬಾರದು. ಶಮ

ಸ್ಮೃತ್ಯಾ ಮುಕುಂದಾಚರಿತಾಗ್ರ್ಯಸೀಧುನಾ । ಯಮೈ ರಕಾಮೈ-
ರ್ನಿಯಮೈ ಶ್ಚಾಪ್ಯನಿಂದಯಾ ನಿರೀಹಯಾ ದ್ವಂದ್ವತಿತಿಕ್ಷಯಾ ಚ॥೨೪
ಹರೇ ರ್ಮುಹು ಸ್ತತ್ಪರ ಕರ್ಣಪೂರ ಗುಣಾಭಿಧಾನೇನ ವಿಜೃಂಭಮಾ
ಣಯಾ । ಭಕ್ತ್ಯಾ ಹ್ಯಸಂಗ ಸ್ಸದಸತ್ಯನಾತ್ಮನಿ ಸ್ಯಾ ನ್ನಿರ್ಗುಣೇ ಬ್ರ
ಹ್ಮಣಿ ಚಾಂಜಸಾ ರತಿಃ ॥೨೫॥ ಯದಾ ರತಿ ರ್ಬ್ರಹ್ಮಣಿ ನೈಷ್ಠಿಕೀ
ಪುಮಾ ನಾಚಾರ್ಯವಾನ್ ಜ್ಞಾನವಿರಾಗರಂಹಸಾ । ದಹತ್ಯವೀರ್ಯಂ ಹೃದ

ಗರ್ವನ್ನು ದೂಷಿಸದುದರಿಂದಲೂ, ನಿರೀಹಯಾ - ವೈರಾಗ್ಯದಿಂದಲೂ, ದ್ವಂದ್ವ...ಯಾಚ - ಶೀತೋಷ್ಣಾದಿಗಳನ್ನು ಜಯಿಸುವುದರಿಂದಲೂ ॥೨೪॥ ಮುಹುಃ - ಅಡಿಗಡಿಗೂ, ತತ್ಪ...ರ, ತತ್ಪರ - ಭಗವದ್ಭಕ್ತರಿಗೆ, ಕರ್ಣಪೂರ - ಕರ್ಣಾಭರಣಗಳಂತಿರುವ, ಗುಣ - ಗುಣಗಳ, ಅಭಿಧಾನೇನ - ಕೀರ್ತನದಿಂದ, ವಿಜೃಂಭಮಾಣಯಾ - ಹರೇಃ - ಹರಿಯ, ಭಕ್ತ್ಯಾ - ಭಕ್ತಿಯಿಂದ, ಸದಸತಿ - ಕಾರ್ಯಕಾರಣರೂಪವಾದ, ಅನಾತ್ಮನಿ - ಪ್ರಪಂಚದಲ್ಲಿ, ಅಸಂಗಃ - ವಿರಕ್ತಿಯು, ನಿರ್ಗುಣೇ - ಗುಣರಹಿತನಾದ, ಬ್ರಹ್ಮಣಿ - ಬ್ರಹ್ಮನಲ್ಲಿ, ಅಂಜಸಾ - ಬೇಗನೆ, ರತಿಃ - ಪ್ರೇಮವು, ಸ್ಯಾತ್ - ಆಗುವುದು ॥೨೫॥ ಯದಾ - ಯಾವಾಗ, ಬ್ರಹ್ಮಣಿ - ಪರಮಾತ್ಮನಲ್ಲಿ, ರತಿಃ - ಭಕ್ತಿಯು, ನೈಷ್ಠಿಕೀ - ನೆಲೆಯಾಗಿನಿಲ್ಲುವುದೋ, ತದಾ - ಆಗ, ಆಚಾರ್ಯವಾನ್ - ಗುರುವನ್ನು ಪಡೆದ, ಪುಮಾನ್ - ಪುರುಷನು, ಜ್ಞಾನ...ಸಾ- ಜ್ಞಾನವೈರಾಗ್ಯಗಳ ವೇಗದಿಂದ, ಅವೀರ್ಯಂ - ವಾಸನಾರಹಿತವಾದ, ಜೀವಕೋಶಂ - ಜೀವನಿಗೆ ಆವರಣವಾಗಿರುವ, ಪಂಚಾತ್ಮಕಂ - ಪಂಚಕ್ಲೇಶಗಳು ಅಥವಾ ಪಂಚಭೂತಗಳ ಮಯವಾದ, ಹೃದಯಂ-ಲಿಂ

ದಮಾದಿಗಳಿಂದೊಡಗೂಡಿ ಸಾಧುವೃತ್ತಿಯಿಂದಿರಬೇಕು ಅಂತರಿಂದ್ರಿಯ ಬಹಿರಿಂದ್ರಿಯಗಳನ್ನು ನಿಗ್ರಹಿಸಬೇಕು. ಶೌಚಾಚಾರಾದಿ ನಿಯಮಗಳಿಂದಿರಬೇಕು. ಮಾರ್ಗಾಂತರಗಳನ್ನು ದೂಷಿಸಬಾರದು. ಇಲ್ಲದ ವಸ್ತುಗಳು ಲಭಿಸಬೇಕೆಂದಾಗಲಿ, ಇರುವವಸ್ತುಗಳು ತಪ್ಪದೇ ಇರಬೇಕೆಂದಾಗಲಿ ಬಯಸಬಾರದು. ಸುಖ ದುಃಖ ಶೀತ ಉಷ್ಣ ಮೊದಲಾದ ದ್ವಂದ್ವಗಳಿಗೆ ಹೆದರಬಾರದು ॥೨೪॥ ಇಂತು ಸಾಧನ ಸಂಪತ್ತಿಯನ್ನು ಸಂಪಾದಿಸಿಕೊಂಡವನಿಗೆ, ಭಾಗವತರ ಕಿವಿಗಳಿಗೆ ಅಲಂಕಾರಭೂತಗಳಾದ ಭಗವದ್ಗುಣಗಳನ್ನು ವರ್ಣಿಸುವುದರಿಂದ ಭಕ್ತಿಯು ಬೆಳೆದು ಕಾರ್ಯಕಾರಣ ರೂಪವಾದ ಈ ಜಗತ್ತಿನಲ್ಲಿ ವೈರಾಗ್ಯವೂ, ನಿರ್ಗುಣನಾದ ಪರಮಾತ್ಮನಲ್ಲಿ ಪರಮಪ್ರೇಮ ರೂಪವಾದ ಭಕ್ತಿಯೂ ಉಂಟಾಗುವುದು ॥ ೨೫ ॥ ಪುರುಷನಿಗೆ ಪರಮಾತ್ಮನಲ್ಲಿ ಯಾವಾಗ ಭಕ್ತಿಯೆಂಬುದು ನೆಲೆಯಾಗಿ ನಿಲ್ಲುವುದೋ, ಆಗಲೇ ಅವನು (೧) ಐಹಿಕಫಲಗಳು ನಶ್ವರಗಳೆಂತಲೂ ಬ್ರಹ್ಮವೇ ಸತ್ಯವೆಂತಲೂ ತಿಳಿದು (೨) ಗುರೂಪಸತ್ತಿಯನ್ನು ಮಾಡುವನು. ಆದುದರಿಂದ ಆತನ ಭಕ್ತಿ ವೈರಾಗ್ಯಗಳು ಬೆಳೆದು ನೆಲೆಗ ನಿಲ್ಲುವುವು. ಅವುಗಳ ಬಲದಿಂದ ಹೃದಯದಲ್ಲಿ ಅನಾದಿ

೧ ಪರೀಕ್ಷ್ಯ ಲೋಕಾನ್ ಕರ್ಮಚಿತಾನ್ ಬ್ರಾಹ್ಮಣೋ ನಿರ್ವೇದ ಮಾಯಾ ನ್ನಾಸ್ತ್ಯಕೃತಃ ಕೃತೇನ.

೨ ಶ್ರು. ಆಚಾರ್ಯವಾನ್ ಪುರುಷೋವೇದ. ತದ್ವಿಜ್ಞಾನಾರ್ಥಂ ಸಗುರು ಮೇವಾಭಿ ಗಚ್ಛೇತ್ಸಮಿತ್ಪಾಣಿಶ್ಶ್ರೋತ್ರಿಯಂ ಬ್ರಹ್ಮನಿಷ್ಠಂ.

**ಯಂ ಜೀವಕೋಶಂ ಪಂಚಾತ್ಮಕಂ ಯೋನಿ ಮಿವೋತ್ಥಿತೋಽಗ್ನಿಃ ॥೨೬॥ ದಗ್ಧಾಶಯೋ ಮುಕ್ತ ಸಮಸ್ತ ತದ್ಗುಣೋ ನೈವಾತ್ಮನೋ ಬಹಿರಂತರ್ವಿಚಷ್ಟೇ । ಪರಾತ್ಮನೋ ರ್ಯದ್ವ್ಯವಧಾನಂ ಪುರಸ್ತಾ ತ್ಸ್ವಪ್ನೇ ಯಥಾ ಪುರುಷ ಸ್ತದ್ವಿನಾಶೇ ॥ ೨೭ ॥ *ಆತ್ಮಾನ ಮಿಂದ್ರಿಯಾರ್ಥಂಚ ಪರಂ**

---

ಗಶರೀರವನ್ನು, ಉತ್ಥಿತಃ - ಕಾಷ್ಠದಲ್ಲಿ ಜನಿಸಿದ, ಅಗ್ನಿಃ - ಬೆಂಕಿಯು, ಯೋನಿಮಿವ - ಕಾಷ್ಠವನ್ನೇಹಾದಿಯಲ್ಲಿ, ದಹತಿ - ಸುಡುತ್ತಾನೆ ॥೨೬॥

ಪುರಸ್ತಾತ್ - ಮೊದಲು, ಪರಾತ್ಮನೋಃ, ಪರ - ದೃಶ್ಯಕ್ಕೂ, ಆತ್ಮನೋಃ - ಆತ್ಮನಿಗೂ, ಯತ್ - ಯಾವ, ವ್ಯವಧಾನಂ - ಭೇದವನ್ನುಂಟುಮಾಡುವ ಅಂತಃಕರಣವಿದ್ದುದೋ, ತದ್ವಿನಾಶೇ - ಅದುನಾಶವಾದಾಗ, ಪುರುಷಃ - ಪುರುಷನು, ಸ್ವಪ್ನೇ - ಕನಸಿನಲ್ಲಿ, ಯಥಾ - ಹೇಗೋ, ತಥಾ - ಹಾಗೆಯೇ, ದಗ್ಧಾಶಯಃ- ಲಿಂಗಶರೀರವೆಂಬ ಉಪಾಧಿಯನ್ನು ನಾಶಗೊಳಿಸಿದ ಪುರುಷನು, ಮುಕ್ತ...ರಾಃ - ಆಲಿಂಗ ಶರೀರ ಸಂಬಂಧವಾದ ಕರ್ತೃತ್ವಾದಿಗುಣಗಳನ್ನಳಿದವನಾಗಿ, ಆತ್ಮನಃ - ಆತ್ಮನಿಗಿಂತ, ಬಹಿಃ ಹೊರಗೆ ಘಟಪಟಾದಿವಸ್ತುಗಳನ್ನಾಗಲಿ, ಅಂತಃ - ಒಳಗೆ ಸುಖದುಃಖಗಳನ್ನಾಗಲಿ, ನೈವವಿಚಷ್ಟೇ - ನೋಡುವುದೇ ಇಲ್ಲ ॥೨೭॥ ಪುಮಾನ್ - ಪುರುಷನು, ಆಶಯೇ - ಅಂತಃಕರಣರೂಪವಾದ, ಉಪಾಧೌ - ಉಪಾಧಿಯು, ಸತ್ಯೇವ - ಇರುವಾಗಲೇ, ಆತ್ಮಾನಂ - ದ್ರಷ್ಟೃವನ್ನೂ, ಇಂದ್ರಿಯಾರ್ಥಂ - ದೃಶ್ಯವನ್ನೂ, ಉಭಯೋರಪಿ - ಇವರಿಬ್ಬರಿಗೂ, ಯತ್ ಯಾವುದು, ಪರಂ - ಸಂಬಂಧರೂಪವಾದ ಅಹಂಕಾರವೋ

---

ಕರ್ಮವಾಸನೆಗಳೆಲ್ಲವೂ ನಾಶವಾಗುವುವು. ಬಳಿಕ (೩) ಅವಿದ್ಯಾದಿ ಪಂಚಕ್ಲೇಶಾತ್ಮಕವಾಗಿಯೂ ಪಂಚಭೂತಾತ್ಮಕವಾಗಿಯೂ ಜೀವನಿಗೆ ಆವರಣವಾಗಿಯೂ ಇರುವ ಲಿಂಗ ಶರೀರವು ಬಲಗುಂದಿ ನಿರ್ವೀರ್ಯವಾಗುವುದು. ತರುವಾಯ ಅರಣಿಯಲ್ಲಿ ಜನಿಸಿದ ಅಗ್ನಿಯು ಅರಣಿಯೆಂಬ ಕಾಷ್ಠವನ್ನೇ ಸುಡುವಂತೆ ಪ್ರಕೃತಿಗುಣಗಳೆನಿಸಿದ ಬುದ್ಧಿ ಇಂದ್ರಿಯಾದಿಗಳ ರೂಪವಾದ ಲಿಂಗದೇಹದಲ್ಲಿ ಜನಿಸಿದ ಭಕ್ತಿಯು, ಆ ಲಿಂಗದೇಹವನ್ನೇ ಸುಟ್ಟು ಬಿಡುವುದು ॥ ೨೬॥ ಇಂತು ಲಿಂಗದೇಹ ಭಗ್ನವಾದ ಕೂಡಲೇ ಅದರಿಂದುಂಟಾಗುವ ಕರ್ತೃತ್ವಾದಿ ಗುಣಗಳೂ, ದ್ರಷ್ಟೃವಾದ ಆತ್ಮನಿಗೂ ದೃಶ್ಯಗಳಾದ ಪದಾರ್ಥಗಳಿಗೂ ಭೇದಕವಾಗಿದ್ದ ಅಂತಃಕರಣವೂ ಸಹ ನಾಶವಾಗುವುದು. ತರುವಾಯ ದೃಗ್ದೃಶ್ಯಗಳಿಗೆ ಭೇದಕವಾದ ಅಂತಃಕರಣದಿಂದಕೂಡಿದ ಜಾಗ್ರತ್ಸ್ವಪ್ನಗಳಲ್ಲಿ ತಾನು ರಾಜನೆಂತಲೂ ತನ್ನಿಂದ ನೋಡಲ್ಪಡತಕ್ಕವು ಸೈನ್ಯಾದಿಗಳೆಂತಲೂ ಮುನ್ನ ತಿಳಿದಿದ್ದ ಪುರುಷನು, ಆ ಅಂತಃಕರಣ ಲಯವಾದ ಕೂಡಲೇ ಸುಷುಪ್ತಿಯಲ್ಲಿ ಮೊದಲಿದ್ದ ಯಾವಭೇದವನ್ನೂ ತಿಳಿಯದಿರುವಂತೆ, ಮುಕ್ತನಾದವನು ಆತ್ಮನಿಗಿಂತ ಹೊರಗೆ ಘಟಪಟಾದಿ ವಸ್ತುವನ್ನಾಗಲಿ, ಒಳಗೆ ಸುಖದುಃಖಾದಿಗಳನ್ನಾಗಲಿ ಕಾಣುವುದಿಲ್ಲ ॥ ೨೭ ॥ ಅದ್ಯಾವ ರಾಜನ? ಪುರುಷನು ಅಂತಃ

---

೩ ಅವಿದ್ಯಾಸ್ಮಿತಾ ರಾಗದ್ವೇಷಾಭಿನಿವೇಶಾಃ ಪಂಚಕ್ಲೇಶಾಃ ।

* ಭಾ॥ಕೊ॥ ದೃಶ್ಯಾವರಂಜಿತಂ ದ್ರಷ್ಟೃ ದೃಶ್ಯಂ ದ್ರಷ್ಟ್ರನುರಂಜಿತಂ । ಅಹಂಕೃತ್ಯೋಭಯಂ ರಕ್ತಂ ತನ್ನಾಶೇ ನ ದ್ವೈತ ಮಾತ್ಮನಃ ॥

ಯದುಭಯೋರಪಿ । ಸತ್ಯಾಶಯ ಉಪಾಧೌ ವೈ ಪುಮಾನ್ ಪಶ್ಯತಿ
ನಾನ್ಯದಾ ॥ ೨೮ ॥ ನಿಮಿತ್ತೇ ಸತಿ ಸರ್ವತ್ರ ಜಲಾದಾವಪಿ ಪೂರುಷಃ ।
ಆತ್ಮನಶ್ಚ ಪರಸ್ಯಾಪಿ ಭಿದಾಂ ಪಶ್ಯತಿ ನಾಽನ್ಯದಾ ॥ ೨೯ ॥ ಇಂ
ದ್ರಿಯೈರ್ವಿಷಯಾಕೃಷ್ಟೈರಾಕ್ಷಿಪ್ತಂ ಧ್ಯಾಯತಾಂ ಮನಃ । ಚೇ
ತನಾಂ ಹರತೇ ಬುದ್ಧೇಃ ಸ್ತಂಬಸ್ತೋಯಮಿವ ಹ್ರದಾತ್॥೩೦॥ ಭ್ರ

ಅದನ್ನೂ, ಪಶ್ಯತಿ - ನೋಡುತ್ತಾನೆ, ಅನ್ಯದಾ - ಇಲ್ಲದಾಗ, ನ - ಇಲ್ಲ ॥೨೮॥ ಪೂರುಷಃ - ಪುರುಷನು, ಸರ್ವತ್ರ - ಎಲ್ಲೆಡೆಗಳಲ್ಲಿಯೂ, ಜಲಾದೌ - ನೀರುಮೊದಲಾದ, ನಿಮಿತ್ತೇ - ಕಾರಣವು, ಸತ್ಯೇವ - ಇರುವಾಗಲೇ, ಆತ್ಮನಃ - ತನಗೂ, ಪರಸ್ಯಾಪಿ - ಪ್ರತಿಬಿಂಬಕ್ಕೂ, ಭಿದಾಂ - ಭೇದವನ್ನು, ಪಶ್ಯತಿ-ನೋಡುತ್ತಾನೆ, ಅನ್ಯದಾ ಇಲ್ಲವಾದರೆ, ನ - ಇಲ್ಲ ॥೨೯॥ ವಿಷಯಾ ಕೃಷ್ಟೈಃ - ಶಬ್ದಾದಿವಿಷಯಗಳಿಂದ ಸೆಳೆಯಲ್ಪಟ್ಟ, ಇಂದ್ರಿಯೈಃ - ಶ್ರೋತ್ರಾದೀಂದ್ರಿಯಗಳಿಂದ, ಆಕ್ಷಿಪ್ತಂ - ಆಕರ್ಷಿಸಲ್ಪಟ್ಟ, ಧ್ಯಾಯತಾಂ- ವಿಷಯಗಳನ್ನು ಸ್ಮರಿಸುವವರ, ಮನಃ - ಮನಸ್ಸು, ಸ್ತಂಬಃ - ದರ್ಭೆ ಮೊದಲಾದವುಗಳ ತಂಡೆಯು, ಹ್ರದಾತ್ - ಮಡುವಿನಿಂದ, ತೋಯಮಿವ - ನೀರನ್ನೀಪಾದಿಯಲ್ಲಿ, ಬುದ್ಧೇಃ - ಬುದ್ಧಿಯ, ಚೇತನಾಂ - ವಿಚಾರಶಕ್ತಿಯನ್ನು, ಹರತೇ - ಅಪಹರಿಸುತ್ತದೆ ॥೩೦॥ ಚಿತ್ತಂ ಅನು - ಚಿತ್ತವನ್ನು ಅನುಸರಿ

ಕಾರಣವಾದ ಉಪಾಧಿಯುಳ್ಳವರು ಜಾಗ್ರತ್ಸ್ವಪ್ನಗಳಲ್ಲಿ ದ್ರಷ್ಟೃವಾದ ತನ್ನನ್ನೂ ದೃಶ್ಯಗಳಾದ ಶಬ್ದಾದಿವಿಷಯಗಳನ್ನೂ ಅವೆರಡಕ್ಕೂ ಸಂಬಂಧವನ್ನುಂಟುಮಾಡುವ ಅಹಂಕಾರವನ್ನೂ ಕಾಣುವನು ಅಲ್ಲದೆ ಸುಷುಪ್ತಿಯಲ್ಲಿ ಯಾವ ಭೇದವೂ ಇಲ್ಲ, ಆದುದರಿಂದ ಅನ್ವಯವ್ಯತಿರೇಕಗಳೆಂಬ ಎರಡು ನ್ಯಾಯಗಳಿಂದಲೂ ಭೇದಪ್ರತೀತಿಗೆ ಅಂತಃಕರಣವೇ ಕಾರಣವೆಂದಾ ॥ ೨೮ ॥ ಮತ್ತು ಲೋಕದಲ್ಲಿ ಎಲ್ಲೆಲ್ಲಿ ನೋಡಿದರೂ ಭೇದನಿಮಿತ್ತಗಳಾದ ಜಲ ದರ್ಪಣ ಮೊದಲಾದ ಉಪಾಧಿಗಳಿರುವಾಗಲೇ ಜನರು ಬಿಂಬಭೂತರಾದ ತಮಗೂ ಬೇರೆಯೆನಿಸಿದ ಪ್ರತಿ ತಮ್ಮ ಬಿಂಬಗಳಿಗೂ ಭೇದವನು ಕಾಣುವರು ಆದಕಾರಣ ಒಂದೇ ಆದ ಆತ್ಮವಸ್ತುವಿನಲ್ಲಿ ತೋರುವ ಭೇದವು ಔಪಾಧಿಕವೇ ಹೊರತು ಸತ್ಯವಲ್ಲ ॥ ೨೯ ॥ ಎಲೈ ರಾಜನೆ ! ಪರಮಾತ್ಮನಲ್ಲಿ ಪ್ರೇಮರೂಪವಾದ ಭಕ್ತಿಯೂ ಆತ್ಮಭಿನ್ನವಾದ ಜಗತ್ತಿನಲ್ಲಿ ವೈರಾಗ್ಯವೂ, ಇವೆರಡೇ ಮೋಕ್ಷಸಾಧನಗಳೆಂಬ ಶಾಸ್ತ್ರಸಾರವನ್ನು ಇಲ್ಲಿಯವರೆಗೆ ನಿರೂಪಿಸಿದನಷ್ಟೆ. ಇನ್ನು ಅನಾತ್ಮಗಳಾದ ದೇಹಾದಿಗಳಲ್ಲಿ ಪ್ರೀತಿಯೇ ಸಂಸಾರಕ್ಕೆ ಹೇತುವೆಂಬುದನ್ನು ಹೇಳುವೆನು ಕೇಳು. ಪುರುಷನು ಗುಣಗಳನ್ನಾರೋಪಿಸಿ ವಿಷಯಗಳನ್ನು ಚಿಂತಿಸಿದಹಾಗೆಲ್ಲಾ ಆ ಶಬ್ದಾದಿ ವಿಷಯಗಳು ಇಂದ್ರಿಯಗಳನ್ನು ತನ್ನ ಕಡೆಗೆ ಸೆಳೆಯುವುವು. ಇಂದ್ರಿಯಗಳು ವಿಷಯಗಳಿಗೆ ವಶವಾದ ಕೂಡಲೇ ಮನಸ್ಸು ಇಂದ್ರಿಯಗಳಿಗೆ ಅಡಿಯಾಳಾಗಿ ವಿಷಯಗಳಿಗೆರಗುವುದು. ಕೂಡಲೇ ಆ ಮನವು ಮಡುವಿನ ದಡಗಳಲ್ಲಿರುವ ಗಿಡಗಳು ತಮ್ಮ ಬೇರುಗಳಿಂದ ಜಲವನ್ನು ಹೀರುವಂತೆ ಬುದ್ಧಿಯಲ್ಲಿರುವ ಯುಕ್ತಾಯುಕ್ತವಿಚಾರ ಸಾಮರ್ಥ್ಯವನ್ನು ಹೋಗಲಾಡಿಸುವುದು. ಅವಿವೇಕಿಯಾದವನು ಇದನ್ನು ತಿಳಿದುಕೊಳ್ಳಲಾರನು॥೩೦॥ ವಿಚಾರಶಕ್ತಿಯು ನಾಶವಾದ ಕೂಡಲೇ ಹಿಂದು ಮುಂದಣ ಸಂಗತಿಗಳ ನೆನಪು ಕೆಡುವುದು

ಶ್ಯತ್ಯನುಸ್ಮೃತಿ ಶ್ಚಿತ್ತಂ ಜ್ಞಾನಭ್ರಂಶಃ ಸ್ಮೃತಿಕ್ಷಯೇ । ತದ್ರೋಧಂ
ಕವಯಃ ಪ್ರಾಹು ರಾತ್ಮಾಽಪಹ್ನವ ಮಾತ್ಮನಃ ||೩೧|| ನಾತಃ ಪರ
ತರೋ ಲೋಕೇ ಪುಂಸಃ ಸ್ವಾರ್ಥವ್ಯತಿಕ್ರಮಃ । ಯದಧ್ಯನ್ಯಸ್ಯ ಪ್ರೇ
ಯಸ್ತ್ವ ಮಾತ್ಮನಃ ಸ್ವವ್ಯತಿಕ್ರಮಾತ್ ||೩೨|| ಅರ್ಥೇಂದ್ರಿಯಾಽರ್ಥಾಽ
ಭಿಧ್ಯಾನಂ ಸರ್ವಾರ್ಥಾಽಪಹ್ನವೋ ನೃಣಾಂ । ಭ್ರಂಶಿತೋ
ಜ್ಞಾನವಿಜ್ಞಾನಾ ದ್ಯೇನಾಽವಿಶತಿ ಮುಖ್ಯತಾಂ || ೩೩ || ನಕುರ್ಯಾತ್ಕರ್ಹಿ
ಚಿತ್ಸಂಗಂ ತಮ ಸ್ತೀವ್ರಂ ತಿತೀ*ರ್ಷುಭಿಃ । ಧರ್ಮಾರ್ಥಕಾಮಮೋಕ್ಷಾ
ಣಾಂ ಯದತ್ಯಂತ ವಿಘಾತಕಂ ||೩೪|| ತತ್ರಾಽಪಿ ಮೋಕ್ಷ ಏವಾರ್ಥ ಆ

ಸಿ, ಸ್ಮೃತಿಃ - ಪೂರ್ವಾಪರಸ್ಮರಣೆಯು, ಭ್ರಶ್ಯತಿ - ನಾಶವಾಗುವುದು. ಸ್ಮೃತಿಕ್ಷಯೇ - ಜ್ಞಾಪಕ ಶಕ್ತಿ
ಯು ಹೋದಮೇಲೆ, ಜ್ಞಾನಭ್ರಂಶಃ - ಜ್ಞಾನನಾಶವಾಗುವುದು. ತದ್ರೋಧಂ - ಅಜ್ಞಾನನಾಶವನ್ನು, ಕವ
ಯಃ - ಪಂಡಿತರು, ಆತ್ಮನಃ - ತನ್ನ ಕಾರಣದಿಂದ, ಆತ್ಮಾಪಹ್ನವಂ - ಆತ್ಮನಾಶವನ್ನಾಗಿ, ಪ್ರಾಹುಃ -
ಹೇಳುತ್ತಾರೆ || ೩೧ || ಯದಧಿ - ಯಾವ ಆತ್ಮನಿಗಾಗಿ, ಅನ್ಯಸ್ಯ-ಇತರ ವಸ್ತುಗಳಲ್ಲಿ, ಪ್ರೇಯಸ್ತ್ವಂ-
ಪ್ರೀತಿವಿಷಯತ್ವವುಂಟೋ, ಆತ್ಮನಃ - ಅಂತಹ ಆತ್ಮನನ್ನು, ಸ್ವವ್ಯತಿಕ್ರಮಾತ್ - ತಾನೇ ಅತಿಕ್ರಮಿಸು
ವುದರಿಂದ, ಲೋಕೇ - ಲೋಕದಲ್ಲಿ, ಪುಂಸಃ - ಪುರುಷನಿಗೆ, ಅತಃ ಇದಕ್ಕಿಂತಲೂ, ಪರತರಃ - ಅಧಿ
ಕವಾದ, ಸ್ವಾರ್ಥವ್ಯತಿಕ್ರಮಃ - ಅರ್ಥನಾಶವು, ನ - ಇಲ್ಲ || ೩೨ || ಯೇನ - ಯಾವುದರಿಂದ, ಜ್ಞಾನ
ವಿಜ್ಞಾನಾತ್ - ಪರೋಕ್ಷಾಪರೋಕ್ಷಜ್ಞಾನಗಳಿಂದ, ಭ್ರಂಶಿತಃ - ಭ್ರಷ್ಟನಾಗಿ, ಮುಖ್ಯತಾಂ- ಸ್ಥಾವರ
ತ್ವವನ್ನು, ಆವಿಶತಿ - ಹೊಗುವನೋ, ಅಂತಹ, ಅರ್ಥೇಂ...ನಂ-ಇಂದ್ರಿಯ ಪ್ರೀತಿಗಾಗಿ, ವಿಷಯಚಿಂತ
ನೆಯು, ನೃಣಾಂ-ಪುರುಷರಿಗೆ, ಸರ್ವಾ...ವಃ -ಸರ್ವಾರ್ಥನಾಶವೆನಿಸುವುದು || ೩೩ || ತೀವ್ರಂ-ಅಪಾರವಾದ,
ತಮಃ - ಕತ್ತಲೆಯನ್ನು, ತಿತೀರ್ಷುಭಿಃ - ದಾಟಲೆಳಸುವವರಿಂದ, ಧರ್ಮಾ...ಣಾಂ - ಧರ್ಮಾದಿ ಪುರು
ಷಾರ್ಥಗಳಿಗೆ, ಯತ್ - ಯಾವುದು, ಅತ್ಯಂತವಿಘಾತಕಂ - ಸಂಪೂರ್ಣವಿರೋಧಿಯೋ, ಅಂತಹ, ಸಂ
ಗಂ - ವಿಷಯಸಂಗವನ್ನು, ಕರ್ಹಿಚಿತ್ - ಯಾವಾಗಲೂ, ನಕುರ್ಯಾತ್ - ಮಾಡಬಾರದು || ೩೪ ||

ಆ ನೆನಪು ಹೋದಕೂಡಲೇ ಜ್ಞಾನನಾಶವಾಗುವುದು. ಆ ಜ್ಞಾನನಾಶವನ್ನೇ ಪಂಡಿತರು ಆತ್ಮನಾಶವೆನ್ನುವರು ||೩೧|| ಯಾರಿಗಾಗಿ ಇತರಗಳಾದ ಸಕಲ ವಸ್ತುಗಳೂ ಪ್ರಿಯಗಳೆನಿಸುವವೋ, ಅಂತಹ ತನ್ನನ್ನು ತಾನೇ ನಾಶಗೊಳಿಸಿಕೊಳ್ಳುವದಕ್ಕಿಂತಲೂ ಲೋಕದಲ್ಲಿ ಮತ್ತಾವುದು ಅಧಿಕನಾಶ ವೆನಿಸಿಕೊಂಡೀತು ? ||೩೨|| ಆದುದರಿಂದ ಯಾವ ಪುರುಷರು ಇಂದ್ರಿಯಗಳ ಪ್ರೀತಿಗಾಗಿ ನಿರಂತರವೂ ಶಬ್ದಾದಿ ವಿಷಯಗಳನ್ನು ಚಿಂತಿಸುವರೋ,ಅವರು ಸಕಲ ಪುರುಷಾರ್ಥಗಳನ್ನೂ ಕಳೆದುಕೊಳ್ಳುವರಲ್ಲದೆ, ಶಾಸ್ತ್ರಜನ್ಯವಾದ ಪರೋಕ್ಷಜ್ಞಾನಕ್ಕೂ, ಅನುಭವಜನ್ಯವಾದ ಅಪರೋಕ್ಷಜ್ಞಾನಕ್ಕೂ ಬಾಹಿರರಾಗಿ ಸ್ಥಾವರಜನ್ಮವನ್ನು ಪಡೆಯುವರು ||೩೩|| ಅನಾತ್ಮಗಳಾದ ದೇಹಾದಿಗಳಲ್ಲಿ ಅಭಿಮಾನವೂ, ವಿಷಯ ಚಿಂತನವೂ, ಇವು ಮಾತ್ರವೇ ಅನರ್ಥ ಹೇತುಗಳೆಂದರಿಯಬೇಡ. ಇದರಂತೆಯೇ ವಿಷಯ ಸಂಗವೂ ಕೂಡ ಧರ್ಮಾದಿಚತುಃಪುರುಷಾರ್ಥಗಳನ್ನೂ ನಾಶಗೊಳಿಸುವುದು.ಆದಕಾರಣ ಅಜ್ಞಾನವೆಂಬ ಕತ್ತಲೆಯನ್ನು ದಾಟಬೇಕೆಂದೆಳಸುವವರು ಯಾವಾಗಲೂ ವಿಷಯಸಂಗವನ್ನುಮಾಡಬಾ

ತ್ಯಂತಿಕತಯೇಷ್ಯತೇ । ತ್ರೈವರ್ಗ್ಯೋಽರ್ಥೋ ಯತೋ ನಿತ್ಯಂ ಕೃ
ತಾಂತಭಯಸಂಯುತಃ ॥ ೩೫ ॥ ಪರೇಽಪರೇ ಚ ಯೇ ಭಾವಾ ಗುಣವ್ಯ
ತಿಕರಾದನು । ನ ತೇಷಾಂ ವಿದ್ಯತೇ ಕ್ಷೇಮ ಮೀಶವಿಧ್ವಂಸಿತಾಶಿ
ಷಾಂ ॥೩೬॥ ‡ ತತ್ತ್ವಂ ನರೇಂದ್ರ ! ಜಗತಾ ಮಥ ತಸ್ಥುಷಾಂ ಚ ದೇ

ತ್ರೈವರ್ಗ್ಯಃ - ತ್ರಿವರ್ಗಕ್ಕೆ ಸಂಬಂಧಿಸಿದ, ಅರ್ಥಃ - ಪುರುಷಾರ್ಥವು, ಯತಃ - ಯಾವುದರಿಂದ, ಕೃತಾಂ...ತಃ - ಕಾಲಭಯದಿಂದ ಕೂಡಿರುದೋ, ಆದುದರಿಂದ, ತತ್ರಾಪಿ - ಅವುಗಳಲ್ಲಿಯೂ, ಮೋಕ್ಷ ಏವ - ಮೋಕ್ಷವೇ, ಆತ್ಯಂತಿಕತಯಾ-ಎಲ್ಲವನ್ನೂ ಮೀಂಚಿದ್ದೆಂದು, ಇಷ್ಯತೇ ಇಚ್ಛಿಸಲ್ಪಡುವುದು ॥೩೫॥ ಪರೇ - ಬ್ರಹ್ಮಾದಿರೂಪರಾದ, ಅಪರೇ - ನಮ್ಮಂತವರಾದ, ಯೇ ಭಾವಾಃ - ಯಾವ ವಸ್ತುಗಳು, ಗುಣವ್ಯತಿಕರಾತ್ - ಸೃಷ್ಟಿಗಿಂತ, ಅನು - ಅನಂತರದಲ್ಲಿ, ಉಂಟಾಗುವುವೋ, ಈಶ...ಷಾಂ - ಈಶ್ವರನಿಂದ ನಾಶಗೊಳಿಸಲ್ಪಟ್ಟ ಆಸೆಯುಳ್ಳ, ತೇಷಾಂ - ಅವರಿಗೆ, ಕ್ಷೇಮಂ-ಕ್ಷೇಮವು, ನವಿದ್ಯತೇ-ಇರುವುದಿಲ್ಲ ॥೩೬॥
ರದು ॥ ೩೪ ॥ ಧರ್ಮಾದಿ ಪುರುಷಾರ್ಥಗಳೆಂಬುದರಿಂದ, ಮೋಕ್ಷವು ಧರ್ಮಾದಿಗಳಿಗೆ ಸಮವೆಂದು ತಿಳಿಯಬೇಡ. ಧರ್ಮ, ಅರ್ಥ, ಕಾಮಗಳೆಂಬ ಮೂರು ಪುರುಷಾರ್ಥಗಳೂ, ಕಾಲಕ್ಕೊಳಗಾಗಿ ಅನಿತ್ಯಗಳೆನಿಸಿರುವುವು. ಮೋಕ್ಷಕ್ಕೆ ಯಾವುದರಿಂದಲೂ ಚ್ಯುತಿಯಿಲ್ಲ ವಾದಕಾರಣ ಅದು ನಿತ್ಯವೆನಿಸುವುದು ॥೩೫॥ ಸತ್ವಾದಿಗುಣಗಳ ಪರಿಣಾಮರೂಪವಾದ ಸೃಷ್ಟಿಯ ಅನಂತರದಲ್ಲಿ ಜನಿಸಿದ ಬ್ರಹ್ಮ ಮೊದಲಾದ ಉತ್ತಮರಾಗಲಿ, ನಮ್ಮಂತಹ ಸಾಧಾರಣರಾಗಲಿ ಎಲ್ಲರೂ ಕಾಲಬದ್ಧರೇ. ಆದುದರಿಂದ ಅವರಿಗೆ ಕ್ಷೇಮವುಂಟಾಗಲಾರದು ॥೩೬॥

‡ (1) ಎಲೈ ರಾಜನೆ ! ಚೇತನಾಚೇತನ ರೂಪಗಳಾದ ಸಕಲಭೂತಗಳಲ್ಲಿಯೂ ಅಂತರ್ಯಾಮಿಯಾಗಿ, ಯಾವ ಭಗವಂತನು ಜೀವಪ್ರಕೃತಿ ವಿಲಕ್ಷಣನೆನಿಸಿ ಮೆರೆಯುವನೋ, ನಾನು ಆತನ ಸ್ವರೂಪನಾಗಿರುವೆನು ಎಂದು ತಿಳಿ. ಅಥವಾ ದೇಹೇಂದ್ರಿಯಾದಿಗಳಿಂದ ಚೇತನಗಳ ಅಹಂಕಾರ ಮಮಕಾರಗಳಿಗೆ ನೆಲೆಯೆನಿಸಿದ ತನು ಧನಾದಿಗಳನ್ನು ಸಲಹುತ್ತಾ, ದೇಹಾದಿ ವಿಲಕ್ಷಣನಾಗಿ ಜೀವರೂಪದಿಂದ ಯಾವನು ಹೃದಯದಲ್ಲಿ ಬೆಳಗುವನೋ, ಅವನೇ ಭಗವತ್ಸ್ವರೂಪನು, ಎಂದು ತಿಳಿ ॥೩೭॥

(2) ವಿ. ಮೂ ಶ್ಲೋ॥ ಮನೋಮಾತ್ರ ಮಿದಂ ವಿಶ್ವಂ ಯಥಾಸ್ವಪ್ನೇ ಮನಃಕ್ರಿಯಾ ! ಕ್ರಿಯಾ ಚ ವಾಸನಾಮಾತ್ರಂ ಸಾನೀಹಾಯಾಂ ಪ್ರಲೀಯತೇ ॥೧॥ ಭಗವದಿಚ್ಛೆಯಿಂದ ಜಾಗ್ರದವಸ್ಥೆಯಲ್ಲಿ ನೋಡಲ್ಪಡುವ ಕರಿತುರಗಾದಿ ಪದಾರ್ಥಗಳ ವಾಸನೆಗಳಿಂದ ಕೂಡಿದ ಮನಸ್ಸು, ಸ್ವಪ್ನ ಪ್ರಪಂಚವನ್ನು ಸೃಷ್ಟಿಸುವಂತೆ, ಈ ದೃಶ್ಯ ಪ್ರಪಂಚವು ಶ್ರೀಹರಿಯ ಮನಸ್ಸಿನಿಂದಲೇ ಸೃಜಿಸಲ್ಪಟ್ಟು ರಕ್ಷಿತವಾಗುತ್ತಿರುವುದು. ಆತನು ಸೃಷ್ಟಿವ್ಯಾಪಾರವನ್ನುಳಿದಾಗ ಈ ಜಗತ್ತು ತಂತಮ್ಮ ಕಾರಣವಸ್ತುಗಳನ್ನು ಸೇರುವುದರ ಮೂಲಕವಾಗಿ ಅಗೋಚರವಾಗುವುದೇ ಹೊರತು ಶೂನ್ಯವಾಗುವುದಿಲ್ಲ. ಇಂತು ಜಗತ್ತೆಂಬುದು ಹರಿಯಿಂದಲೇ ಸೃಷ್ಟಿಸಲ್ಪಟ್ಟಿರುವುದರಿಂದ ಹರಿಪ್ರಸಾದದಿಂದ ಅದನ್ನು ಬಿಡಬಹುದಲ್ಲದೆ ಬೇರೇದಾರಿಯಿಲ್ಲ.

ಮೂ॥ ಆತ್ಮಾತ್ವನೀಹಯಾ ಸಾಕ್ಷಾತ್ಸ್ವಯಂ ಜ್ಯೋತಿಃ ಪ್ರಸಿಧ್ಯತಿ ।
ಏವಂ ವ್ಯುದಸ್ಯಾತ್ಮಮಾಯಾಂ ಜ್ಞಾನಂ ಸ್ಯಾತ್ಪರಮೋ ಮುನಿಃ ॥೨॥

ಇಂತು ಮುಕ್ತರಾದವರು, ಜಾಗ್ರದಾದ್ಯವಸ್ಥೆಗಳನ್ನನುಭವಿಸುವ ಜೀವನಿಗಿಂತ ಭಿನ್ನನಾಗಿಯೂ,

ಹೇಂದ್ರಿಯಾಸುಧಿಷಣಾತ್ಮಭಿ ರಾವೃತಾನಾಂ । ಯಃ ಕ್ಷೇತ್ರವಿತ್ತಪತಯಾ
ಹೃದಿ ವಿಷ್ವಗಾವಿಃ ಪ್ರತ್ಯ ಕ್ಚಕಾಸ್ತಿ ಭಗವಾಂ ಸ್ತದವೇಹಿ ಸೋಽಸ್ಮಿ ॥

ನರೇಂದ್ರ - ಎಲೈ ರಾಜನೆ ! ತತ್ - ಆದುದರಿಂದ, ದೇಹೇಂ....ಭಿಃ-ಶರೀರ, ಇಂದ್ರಿಯ, ಪ್ರಾಣ, ಬುದ್ಧಿ, ಅಹಂಕಾರ ಇವುಗಳಿಂದ, ಆವೃತಾನಾಂ - ವ್ಯಾಪ್ತಗಳಾಗಿರುವ, ಜಗತಾಂ - ಜಂಗಮಗಳಾದ, ಅಥ - ಮತ್ತು, ತಸ್ಥುಷಾಂ - ಸ್ಥಾವರಗಳಾದ ಭೂತಗಳಲ್ಲಿ, ಯಃ-ಯಾವನು, ಕ್ಷೇತ್ರ . . . ಯಾ, ಕ್ಷೇತ್ರವಿತ್- ಜೀವನನ್ನು, ತಪತಯಾ - ನಿಯಮಿಸುವುದರಿಂದ ಅಂತರ್ಯಾಮಿಯಾಗಿಯೂ, ಅಥವಾ - ಕ್ಷೇತ್ರವಿತ್ತ - ತನುಧನಗಳನ್ನು, ಪತಯಾ - ಸಲಹುವುದರಿಂದ, ವಿಷ್ವಗಾವಿಃ - ಸರ್ವಪ್ರಕಾಶನೂ, ಪ್ರತ್ಯಕ್ - ಸ್ವಪ್ರಕಾಶನೂ, ಭಗವಾನ್ - ಅದ್ಭುತಮಹಿಮನೂ, ಆಗಿ, ಹೃದಿ - ಹೃದಯದಲ್ಲಿ, ಚಕಾಸ್ತಿ - ಹೊಳೆಯುವ

ಅಯ್ಯಾ ರಾಜೇಂದ್ರನೆ! ಇಂತು ಆತ್ಮಭಿನ್ನಗಳಾದ ಶರೀರಾದಿಗಳಲ್ಲಿ ಅಹಂಕಾರ ಮಮಕಾರಗಳನ್ನಿಡುವುದು ಅನರ್ಥಹೇತುವಾದುದರಿಂದ ,.ಶರೀರ, ಇಂದ್ರಿಯ, ಪ್ರಾಣ, ಬುದ್ಧಿ ಅಹಂಕಾರಗಳಿಂದ ಕೂಡಿದ ಸ್ಥಾವರ ಜಂಗಮ ರೂಪಗಳಾದ ಸಕಲ ಭೂತಗಳ ಹೃದಯದಲ್ಲಿಯೂ, ಯಾವ ಭಗವಂತನು ಅಂತರ್ಯಾಮಿಯಾಗಿಯೂ, ಸ್ವಪ್ರಕಾಶನಾಗಿಯೂ, ವ್ಯಾಪ

ಅವಸ್ಥಾತೀತನಾಗಿಯೂ, ಸ್ವಪ್ರಕಾಶನಾಗಿಯೂ, ಸೃಷ್ಟ್ಯಾದಿ ವ್ಯಾಪಾರಗಳಲ್ಲಿ ನಿರೀಹನಾಗಿಯೂ ಇರುವ ಭಗವಂತನನ್ನು ಹೊಂದುವರು. ಮೇಲೆ ಹೇಳಿದಂತೆ ಮುಕ್ತನು ಜೀವೇಶ್ವರರ ಸ್ವಸ್ವಾಮಿ ಭಾವವನ್ನು ತಿಳಿದಲ್ಲಿ ಮಾಯೆ ಯೆಂಬ ಬಂಧವನ್ನುಳಿದು ಭಗವಂತನಲ್ಲಿ ಪರಪ್ರೇಮರೂಪವಾದ ಭಕ್ತಿಯನ್ನು ಪಡೆದು ಸಂಸಾರ ಸಾಗರವನ್ನು ದಾಟುವನು ॥೧॥

ಮೂ॥ ನಯತ್ರ ನಿದ್ರಾ ಮೂರ್ಛಾವಾ ನಾರ್ಥದೃಕ್ಚ ಮನೋರಥಃ ।
　　ನಾನು ವೃತ್ತಿರ್ನ ಪ್ರಳಯ ಸ್ತದ್ಬ್ರಹ್ಮ ಪರಮಂ ವಿದುಃ ॥೨॥

ಎಲ್ಲಿ, ನಿದ್ದೆಯಾಗಲಿ, ಮೂರ್ಛೆಯಾಗಲಿ, ಜಾಗ್ರದವಸ್ಥೆಯಾಗಲಿ, ಬಯಕೆಯಾಗಲಿ, ಜೀವನ್ಮುಕ್ತಿಯಾಗಲಿ, ಪ್ರಳಯವಾಗಲಿ ಇಲ್ಲವೋ, ಅದೇ ನಿರತಿಶಯವಾದ ಬ್ರಹ್ಮವು ॥೨॥ ಈ ಮೂರು ಶ್ಲೋಕಗಳೂ ವಿಜಯಧ್ವಜ ತೀರ್ಥಮತದಲ್ಲಿವೆ.

ಎಲೈ ರಾಜನೆ! ಈ ಚೇತನಾ ಚೇತನಗಳ ಮಧ್ಯದಲ್ಲಿ ಯಾವ ನೀನು ಅನೇಕ ದುಃಖಗಳುಳ್ಳ ಜೀವನಾಗಿರುವೆಯೋ,ಅಂತಹ ನಿನಗೆ ಹೃದಯವನ್ನೇ ನೆಲೆ ಎಂದು ತಿಳಿ. ಯಾವನಾನು ನಿನಗೆ ಸಮಾನನಾದ ಜೀವನಾಗಿರುವೆನೋ, ಆ ನನ್ನನ್ನು ಜ್ಞಾನದಿಂದ ದೊಡ್ಡವನೆಂದು ತಿಳಿ. ಯಾವನು ಸರ್ವಾಂತರ್ಯಾಮಿಯಾಗಿ ದುಷ್ಟಶರೀರದಲ್ಲಿದ್ದರೂ ಆ ದೋಷಗಳಿಗೊಳಗಾಗದೆ, ಜೀವ ವ್ಯತಿರಿಕ್ತನಾಗಿ ಸಾಕ್ಷಿರೂಪದಿಂದ ಹೊಳೆಯುವನೋ, ಆನಾರಾಯಣ ಮೂರ್ತಿಯೇ ನಿನಗೆ ಸುಖಪ್ರದನು ಎಂದು ಭಾವಿಸು. ಇದರಿಂದ ಜೀವೇಶ್ವರರ ಸ್ವರೂಪವೂ, ಜೀವತಾರತಮ್ಯವೂ ಸೂಚಿತವಾಗುವುದು. ಇಲ್ಲಿ ಜೀವೇಶ್ವರೈಕ್ಯ ಜ್ಞಾನವು ತಮಸ್ಸಾಧನವಾದುದರಿಂದ ಅದನ್ನು ಬೋಧಿಸುವ ಯಥಾಸ್ಥಿತಾನ್ವಯವು ತಾಮಸರಿಗಿಷ್ಟವೆಂದರಿಯಬೇಕು ॥೨॥

(3) ಸಾ. ಸರ್ವಾಂತರ್ಯಾಮಿಯಾಗಿ ಪ್ರಾಣಿಗಳ ಹೃದಯದಲ್ಲಿ ನೆಲಸಿರುವ ಭಗವಂತನೇ ನಾನಾಗಿರುವೆನು. ಸೂರ್ಯಕಿರಣಗಳು ಸೂರ್ಯನೆನಿಸಿಕೊಳ್ಳುವಂತೆ ಪರಮಾತ್ಮನ ಕಿರಣರೂಪನಾದ ನಾನು ಪರಮಾತ್ಮನಾಗಿರುವೆನೆಂದು ಭಾವವು.

* ಯಸ್ಮಿನ್ನಿದಂ ಸದಸದಾತ್ಮತಯಾ ವಿಭಾತಿ ಮಾಯಾವಿವೇಕ ವಿಧುತಿ ಸ್ರಜಿ ವಾಹಿಬುದ್ಧಿಃ । ತಂ ನಿತ್ಯಮುಕ್ತಪರಿಶುದ್ಧವಿಬುದ್ಧತತ್ತ್ವಂ ಪ್ರತ್ಯೂಢಕರ್ಮಕಲಿಲಪ್ರಕೃತಿಂ ಪ್ರಪದ್ಯೇ ॥ ೩೮ ॥ ಯಃ

ನೋ, ತತ್ - ಅವನನ್ನು, ಸೋಽಸ್ಮಿ - ನಾನೇ ಆಗಿರುವೆನು, ಎಂದು, ಅವೇಹಿ - ತಿಳಿ ॥ ೩೭ ॥

ಯಸ್ಮಿನ್ - ಯಾವನಲ್ಲಿ, ವಿವೇಕವಿಧುತಿ - ವಿವೇಕದಿಂದ ಹೋಗಲಾಡಿಸಲ್ಪಡುವ, ಇದಂ - ಈ ಜಗತ್ತು, ಸ್ರಜಿ - ಮಾಲಿಕೆಯಲ್ಲಿ, ಅಹಿಬುದ್ಧಿರಿವ - ಸರ್ಪಜ್ಞಾನದಂತೆ, ಮಾಯಯಾ - ಮಾಯೆಯಾಗಿಯೇ, ಸದ . . . ಯಾ - ಕಾರ್ಯಕಾರಣರೂಪದಿಂದ, ಉತ್ಕೃಷ್ಟನಿಕೃಷ್ಟರೂಪದಿಂದ, ವಿಭಾತಿ-ಹೊಳೆಯುವುದೋ, ನಿತ್ಯ...ತ್ತ್ವಂ - ನಿತ್ಯಮುಕ್ತ - ನಿತ್ಯಮುಕ್ತನಾಗಿಯೂ, ಪರಿಶುದ್ಧ-ದೋಷರಹಿತನಾಗಿಯೂ, ವಿಬುದ್ಧತತ್ತ್ವಂ - ಜ್ಞಾನಸ್ವರೂಪನಾಗಿಯೂ, ಪ್ರತ್ಯೂ...ತಿಂ, ಪ್ರತ್ಯೂಢ - ತಿರಸ್ಕರಿಸಲ್ಪಟ್ಟ, ಕರ್ಮ - ಕರ್ಮಗಳಿಂದ, ಕಲಿಲ - ಮಲಿನವಾದ, ಪ್ರಕೃತಿಂ - ಪ್ರಕೃತಿಯುಳ್ಳ, ತಂ - ಆ ಭಗವಂತನನ್ನು, ಪ್ರಪದ್ಯೇ - ಮರೆಹೊಗುವೆನು ॥೩೮॥ ಸಂತಃ - ಸಾಧುಗಳು, ಯತ್ಪ....ಶ್ಯಾ, ಯತ್ಪಾದಪಂಕಜ- ಯಾರ

ಕನಾಗಿಯೂ ಬೆಳಗುತ್ತಿರುವನೋ ಅವನೇ ನಾನು,, ಎಂದು ತಿಳಿ ॥೩೭॥

ಭಗವಂತನು ಸರ್ವ ಭೂತಗಳಲ್ಲಿಯೂ ಅಂತರ್ಯಾಮಿಯಾಗಿರುವನೆಂಬ ನುಡಿಯಿಂದ, ,,ಭಗವಂತನಿಗಿಂತ ಬೇರೆಯಾಗಿ ವಸ್ತುಗಳುಂಟೆಂದಾಗಲಿ, ಅವುಗಳ ಸಂಬಂಧದಿಂದ ಭಗವಂತನಿಗೆ ಮಾಲಿನ್ಯಾದಿ ದೋಷಗಳುಂಟಾಗುವುವೆಂದಾಗಲಿ ತಿಳಿಯಬೇಡ. ಪುಷ್ಪಮಾಲಿಕೆಯಲ್ಲಿ ಸರ್ಪಬುದ್ಧಿಯುಂಟಾಗುವಂತೆ, ವಿವೇಕದಿಂದ ಹೋಗಲಾಡಿಸಲ್ಪಡುವ ಈ ದೃಶ್ಯ ಪ್ರಪಂಚವು ಕಾರ್ಯ ಕಾರಣ ರೂಪವಾಗಿಯೂ, ಉತ್ತಮಾಧಮ ರೂಪವಾಗಿಯೂ, ಭಗವಂತನಲ್ಲಿ ಮಾಯೆಯಿಂದ ತೋರುತ್ತಿರುವುದು. ಆದುದರಿಂದ ಅಂತಹ ನಿತ್ಯಮುಕ್ತನೂ, ದೋಷರಹಿತನೂ, ಜ್ಞಾನಮಯನೂ, ಕರ್ಮಮಲಿನವಾದ ಪ್ರಕೃತಿಗೆ ದೂರನೂ ಆದ, ಪರಮಾತ್ಮನ ಅನುಗ್ರಹವಿಲ್ಲದೆ ಮುಕ್ತಿಯು ದೊರೆಯಲಾರದು ॥೩೮॥ ಅಯ್ಯಾ

* ಪೀ (I) ಮಾಯಾಶಕ್ತಿಯಿಂದ ಜೀವೇಶ್ವರ ವಿವೇಕಜ್ಞಾನವನ್ನು ನಾಶಗೊಳಿಸುವ ದೇವಮಾನುಷಾದಿ ರೂಪವಾದ ಈ ಜಗತ್ತು ಕಾರ್ಯಕಾರಣರೂಪದಿಂದ, ಪುಷ್ಪಮಾಲೆಯಲ್ಲಿ ಸರ್ಪಬುದ್ಧಿಯಂತೆ ಕ್ಷೇತ್ರಜ್ಞರೂಪನಾದ ಭಗವಂತನಲ್ಲಿ ತೋರುವುದು. ಆದಕಾರಣ ಭಗವಂತನು ಜೀವಾಂತರ್ಯಾಮಿಯಾಗಿ ಜೀವರೂಪದಿಂದಿದ್ದರೂ ಜೀವಗತದೋಷಗಳಿಗೊಳಗಾಗುವುದಿಲ್ಲ.

ವಿ. (2) ''ಮಾಯೆಯಿಂದ ಕಲ್ಪಿಸಲ್ಪಟ್ಟ ಪಂಚಭೂತಾತ್ಮಕವಾದ ದೇಹದಿಂದ ಸುಖದುಃಖಗಳನ್ನನುಭವಿಸುವವನೂ ಬ್ರಹ್ಮನೇ. ಸಂಸಾರಮಾಡುವವನೂ ಬ್ರಹ್ಮನೇ. ಮುಕ್ತನಾಗುವವನೂ ಬ್ರಹ್ಮನೇ, ಎಂಬ ಜೀವೇಶ್ವರರ ಭೇದಜ್ಞಾನವನ್ನು ಹೋಗಲಾಡಿಸುವ ಅಪಸಿದ್ಧಾಂತವು ರಜ್ಜುವಿನಲ್ಲಿ ಉಂಟಾಗುವ ಸರ್ಪಬುದ್ಧಿಯಂತೆ ಭ್ರಾಂತಿಯೆಂದರಿಯಬೇಕು. ಇಲ್ಲಿ ಮಾಯಾಶಬ್ದಕ್ಕೆ ಜ್ಞಾನಪ್ರಕೃತಿಗಳೆಂತಲೂ, ಜ್ಞಾನಪ್ರಕೃತಿ ಶಬ್ದಗಳಿಗೆ ಈಶ್ವರಜೀವರೆಂತಲೂ ಅರ್ಥವು.

ಶ್ಲೋ॥ ನಭ್ರಾಂತಿ ರ್ಜಗತೋದೃಷ್ಟಿರ್ನಭ್ರಾಂತಿ ರ್ಹರಿದರ್ಶನಂ । ಅನ್ಯೋನ್ಯಾತ್ಮತಯಾದೃಷ್ಟಿರ್ಭ್ರಾಂತಿ ರಿತ್ಯವಧಾರ್ಯತಾಂ ॥೧॥ ಮಾಯೇತಿ ಜ್ಞಾನನಾಮಸ್ಯಾನ್ಮಾಯೇತಿ ಪ್ರಕೃತಿಸ್ತಥಾ। ಜ್ಞಾನಸ್ವರೂಪಂ ವಿಷ್ಣೋಸ್ತುಪ್ರಕೃತಿರ್ಹರೇಸ್ತನುಃ ॥೨॥

ತ್ಪಾದ ಪಂಕಜಪಲಾಶ ವಿಲಾಸಭಕ್ತ್ಯಾ ಕರ್ಮಾಶಯಂ ಗ್ರಥಿತ ಮು
ದ್ಗ್ರಥಯಂತಿ ಸಂತಃ । ತದ್ವನ್ನ ರಿಕ್ತಮತಯೋ ಯತಯೋಽಪಿ ರುದ್ಧ
ಸ್ರೋತೋ ಗಣಾಸ್ತಮರಣಂ ಭಜ ವಾಸುದೇವಂ ॥೩೯॥ ಕೃಚ್ಛ್ರೋ
ಮಹಾನಿಹ ಭವಾರ್ಣವ ಮಪ್ಲವೇಶಾಂ ಷಡ್ವರ್ಗನಕ್ರ ಮಸುಖೇನ ತಿ
ತೀರಷಂತಿ । ತತ್ತ್ವಂ ಹರೇರ್ಭಗವತೋ ಭಜನೀಯ ಮಂಘ್ರಿಂ ಕೃತ್ವೋ
ಡುಪಂ ವ್ಯಸನ ಮುತ್ತರ ದುಸ್ತರಾರ್ಣಂ ॥೪೦॥ ಮೈತ್ರೇಯಃ॥ ಸಏವಂ

---

ಪಾದಕಮಲದ, ಪಲಾಶ - ಬೆರಳುಗಳ, ವಿಲಾಸ - ಕಾಂತಿಯ, ಭಕ್ತ್ಯಾ - ಸ್ಮರಣೆಯಿಂದ, ಗ್ರಥಿತಂ-ಕರ್ಮವಾಸನಾ ಜಟಿಲವಾದ, ಆಶಯಂ - ಅಹಂಕಾರವೆಂಬ ಹೃದಯಗ್ರಂಥಿಯನ್ನು, ಉದ್ಗ್ರಥಯಂತಿ-ನಾಶಗೊಳಿಸುವರೋ, ತದ್ವತ್ - ಅವರಂತೆ, ರಿಕ್ತಮತಯಃ - ನಿರ್ವಿಷಯವಾದ ಬುದ್ಧಿಯುಳ್ಳ, ರುದ್ಧ ....ಣಾಃ - ಇಂದ್ರಿಯಗಳನ್ನು ಗೆದ್ದ, ಯತಯೋಪಿ - ಪರಮಹಂಸರೂ, ನ - ಕಳೆಯಲಾರರೋ, ತಂ ವಾಸುದೇವಂ - ಆ ವಾಸುದೇವ ಮೂರ್ತಿಯನ್ನು, ಅರಣಂ - ಶರಣವನ್ನಾಗಿ, ಭಜ - ಹೊಂದು ॥೩೯॥ ಇಹ - ಈ ಸಂಸಾರ ಸಮುದ್ರವನ್ನು ದಾಂಟುವುದರಲ್ಲಿ, ಅಪ್ಲವೇಶಾಂ - ದಾಟಿಸುವ ನೌಕೆಯಂತಿರುವ ಭಗವಂತನಿಲ್ಲದವರಿಗೆ, ಮಹಾನ್ - ಅಧಿಕವಾದ, ಕೃಚ್ಛ್ರಃ - ಕ್ಲೇಶವುಂಟು. ಅವರು, ಷಡ್ವ...ಕ್ರಂ - ಕಾಮಾದಿಗಳೆಂಬ ಮೊಸಳೆಗಳುಳ್ಳ, ಭವಾರ್ಣವಂ-ಸಂಸಾರ ಸಮುದ್ರವನ್ನು, ಅಸುಖೇನ-ಕಷ್ಟದಿಂದ, ತಿತೀರಿಷಂತಿ - ದಾಟಲೆಳಸುವರು, ತತ್ - ಆದುದರಿಂದ, ತ್ವಂ - ನೀನು, ಭಗವತಃ- ಷಾಡ್ಗುಣ್ಯಪೂರ್ಣನಾದ, ಹರೇಃ - ಹರಿಯ, ಭಜನೀಯಂ - ಧ್ಯಾನಯೋಗ್ಯವಾದ, ಅಂಘ್ರಿಂ - ಪಾದವನ್ನು, ಉಡುಪಂ - ಹಡಗನ್ನಾಗಿ, ಕೃತ್ವಾ - ಮಾಡಿ, ವ್ಯಸನಂ - ದುಃಖರೂಪವಾದ, ದುಸ್ತರಾರ್ಣಂ - ಅಪಾರಸಾಗರವನ್ನು, ಉತ್ತರ - ದಾಟು ॥೪೦॥ ಮೈತ್ರೇಯನು ಹೇಳುತ್ತಾನೆ, ಏವಂ - ಇಂತು, ಆತ್ಮಮೇಧಸಾ - ಬ್ರಹ್ಮಜ್ಞಾನಿಯಾದ. ಬ್ರಹ್ಮಪುತ್ರೇಣ - ಬ್ರಹ್ಮನಿಗೆ ಪುತ್ರನಾದ, ಕುಮಾರೇಣ - ಸನತ್ಕುಮಾರಮುನಿಯಿಂದ,

---

ರಾಜನೆ! ಮೇಲೆ ವಿವರಿಸಿದ ಆತ್ಮಜ್ಞಾನವೆಂಬುದು ಬಹು ದುಷ್ಕರವಾದುದರಿಂದ ಮೊದಲು ಭಕ್ತಿಯ ಮಹಿಮೆಯನ್ನು ತಿಳುಹುವೆನು ಕೇಳು. ಶಮದಮಾದಿಗಳಿಂದ ಕೂಡಿದ ಸಾಧುಗಳು ಯಾವ ಭಗವಂತನ ಪಾದಾಂಗುಳಿಗಳ ತೇಜಸ್ಸನ್ನು ಅನುಸಂಧಾನ ಮಾಡುವುದರಿಂದ, ಕರ್ಮವಾಸನಾ ಜಟಿಲವಾದ ಅಹಂಕಾರ ಗ್ರಂಥಿಯನ್ನಂತು ನಾಶಗೊಳಿಸುವರೋ, ಅಂತು, ಇಂದ್ರಿಯಗಳನ್ನು ಗೆದ್ದು ವಿಷಯ ಪರಾಙ್ಮುಖರಾಗಿರುವ ಪರಮಹಂಸರು ಕೂಡ ಹೃದಯ ಗ್ರಂಥಿಯನ್ನು ಭೇದಿಸಲಾರರು. ಆದುದರಿಂದ ಭಕ್ತಿ ಪ್ರಿಯನಾದ ಆ ವಾಸುದೇವ ಮೂರ್ತಿಯನ್ನು ಮರೆಹೊಗು॥೩೯॥ ಸಂಸಾರ ಸಮುದ್ರವನ್ನು ದಾಟಿಸುವುದಕ್ಕೆ ಭಗವಂತನೇ ಗತಿ" ಎಂದು ತಿಳಿಯದಿರುವ ಜ್ಞಾನಿಗಳಿಗೂ , ಈ ಭವಾರ್ಣವವನ್ನು ದಾಟುವುದು ಸುಲಭವಲ್ಲ. ಅವರು ಕಾಮ ಕ್ರೋಧಾದಿ ಷಡ್ವರ್ಗಗಳೆಂಬ ಮೊಸಳೆಗಳಿಂದ ಭಯಂಕರವಾದ ಈ ಸಾಗರವನ್ನು ದಾಟುವುದಕ್ಕೆ ಬಹಳ ಕಷ್ಟಪಡುವರು. ಆದಕಾರಣ ನೀನು ಭಗವಂತನ ಪಾದ ಕಮಲವೆಂಬ ಹಡಗನ್ನು ಆಶ್ರಯಿಸಿ ಅಪಾರವಾದ ಈ ಸಂಸಾರ ಪಾರಾವಾರವನ್ನು ದಾಟುವವನಾಗು, ಎಂದು ಹೇಳಿದನು ॥೪೦॥ ಅಯ್ಯಾ ವಿದುರನೆ! ಬ್ರಹ್ಮಮಾನಸಪುತ್ರನೂ, ಬ್ರಹ್ಮವೇತ್ತನೂ ಆದ ಸನತ್ಕುಮಾರ ಮುನಿಯು ಇಂತು ಆತ್ಮಸ್ವರೂಪವನ್ನುಪದೇಶಿಸಲು,

ಬ್ರಹ್ಮಪುತ್ರೇಣ ಕುಮಾರೇಣಾತ್ಮಮೇಧಸಾ। ದರ್ಶಿತಾತ್ಮಗತಿ ಸ್ಸಮ್ಯಕ್ಪ್ರ
ಶಸ್ಯೋವಾಚ ತಂ ನೃಪಃ ॥೪೧॥ ರಾಜಾ॥ ಕೃತೋಮೇಽನುಗ್ರಹಃ ಪೂರ್ವಂ
ಹರಿಣಾರ್ತಾನುಕಂಪಿನಾ । ತಮಾಪಾದಯಿತುಂ ಬ್ರಹ್ಮನ್ ! ಭಗವನ್ !
ಯೂಯ ಮಾಗತಾಃ ॥೪೨॥ ನಿಷ್ಪಾದಿತಶ್ಚ ಕಾರ್ತ್ಸ್ನ್ಯೇನ ಭಗವದ್ಭಿರ್ಘೃ
ಣಾಲುಭಿಃ । ಸಾಧೂಚ್ಛಿಷ್ಟಂ ಹಿ ಮೇ ಸರ್ವ ಮಾತ್ಮನಾಸಹ ಕಿಂದ
ದೇ ? ॥೪೩॥ ಪ್ರಾಣಾ ದಾರಾ ಸ್ಸುತಾ ಬ್ರಹ್ಮನ್ ! ಗೃಹಾಶ್ಚ ಸಪರಿಚ್ಛ
ದಾಃ । ರಾಜ್ಯಂ ಬಲಂ ಮಹೀ ಕೋಶಇತಿ ಸರ್ವಂ ನಿವೇದಿತಂ ॥೪೪॥ ಸೈ
ನ್ಯಾಪತ್ಯಂಚ ರಾಜ್ಯಂಚ ದಂಡನೇತೃತ್ವ ಮೇವಚ । ಸರ್ವಲೋಕಾಧಿಪ

---

ದರ್ಶಿತಾತ್ಮಗತಿಃ - ತೋರಿಸಲ್ಪಟ್ಟ ಆತ್ಮಸ್ವರೂಪವುಳ್ಳ, ಸನೃಪಃ - ಆ ರಾಜನು, ತಂ - ಆತನನ್ನು, ಪ್ರಶಸ್ಯ - ಕೊಂಡಾಡಿ, ಉವಾಚ - ಹೇಳಿದನು ॥೪೧॥ ಭಗವನ್ - ಭಗವಂತನಾದ, ಬ್ರಹ್ಮನ್ - ಬ್ರಾಹ್ಮಣೋತ್ತಮನೆ ! ಪೂರ್ವಂ - ಮೊದಲು, ಆರ್ತಾನುಕಂಪಿನಾ-ದೀನದಯಾಳುವಾದ, ಹರಿಣಾ-ಹರಿಯಿಂದ, ಅನುಗ್ರಹಃ-ಪ್ರಸಾದವು, ಕೃತಃ - ಮಾಡಲ್ಪಟ್ಟಿತು. ತಂ - ಅದನ್ನು, ಆಪಾದಯಿತುಂ - ನೆರವೇರಿಸುವುದಕ್ಕೆ, ಯೂಯಂ - ನೀವು, ಆಗತಾಃ - ಬಂದಿರಿ ॥೪೨॥ ಘೃಣಾಲುಭಿಃ-ದಯಾಳುಗಳಾದ, ಭಗವದ್ಭಿಃ-ತಮ್ಮಿಂದ, ಕಾರ್ತ್ಸ್ನ್ಯೇನ-ಪೂರ್ಣವಾಗಿ, ನಿಷ್ಪಾದಿತಂ-ನೆರವೇರಿಸಲ್ಪಟ್ಟಿತು, ಆತ್ಮನಾಸಹ-ಶರೀರದಿಂದ ಕೂಡಿದ, ಮೇ - ನನ್ನ, ಸರ್ವಂ - ಎಲ್ಲವೂ, ಸಾಧೂಚ್ಛಿಷ್ಟಂ-ಸಾಧುಗಳಿಂದ ಕೊಡಲ್ಪಟ್ಟದು ಕಿಂ-ಏನನ್ನು, ದದೇ - ಕೊಡಲಿ ? ॥೪೩॥ ಬ್ರಹ್ಮನ್ - ಬ್ರಾಹ್ಮಣನೆ ! ಪ್ರಾಣಾಃ - ಪ್ರಾಣಗಳು, ದಾರಾಃ-ಹೆಂಡಿರು, ಸುತಾಃ - ಮಕ್ಕಳು, ಸಪರಿಚ್ಛದಾಃ - ಸೋಪಸ್ಕರಗಳಾದ, ಗೃಹಾಶ್ಚ - ಮನೆಯು, ರಾಜ್ಯವು, ಸೇನೆಯು, ಭೂಮಿಯು, ಕೋಶಃ - ಭಂಡಾರವು, ಇತಿ - ಎಂದು, ಸರ್ವಂ - ಎಲ್ಲವೂ, ನಿವೇದಿತಂ - ಒಪ್ಪಿಸಲ್ಪಟ್ಟಿತು ॥೪೪॥ ವೇದಶಾಸ್ತ್ರವಿತ್ - ವೇದಶಾಸ್ತ್ರಗಳನ್ನು ಬಲ್ಲವನು, ಸೈನ್ಯಾಪತ್ಯಂ - ಸೇನಾಧಿ

---

ಪೃಥುರಾಜನು ಆ ಮಹರ್ಷಿಯನ್ನು ಕೊಂಡಾಡುತ್ತಾ ಇಂತು ಹೇಳಿದನು ॥೪೧॥ ಅಯ್ಯಾ ಷಡ್ಗುಣೈಶ್ವರ್ಯ ಸಂಪನ್ನನಾದ ಬ್ರಾಹ್ಮಣೋತ್ತಮನೆ ! ಮುನ್ನ ಪರಮದಯಾಳುವಾದ ಶ್ರೀಹರಿಯು ಅನುಗ್ರಹಿಸಿದ್ದ ಮೇರೆ ತಾವು ಬಿಜಮಾಡಿ ತತ್ತ್ವೋಪದೇಶದಿಂದ ನನ್ನನ್ನುದ್ಧರಿಸಿದಿರಿ ॥೪೨॥ ದಯಾಳುಗಳಾದ ತಮ್ಮ ಅನುಗ್ರಹದಿಂದ ನನ್ನ ಬಯಕೆಗಳೆಲ್ಲವೂ ಕೈಗೂಡಿದುವು. ಆದರೆ ಶರೀರ ಮೊದಲಾಗಿ ನನ್ನ ಸರ್ವಸ್ವವೂ ತಮ್ಮಂತಹ ಸಾಧುಗಳ ಉಚ್ಛಿಷ್ಟವಾಗಿಯೇ ಇರುವುದರಿಂದ ತಮ್ಮ ಅನುಗ್ರಹದಿಂದಲೇ ಲಬ್ಧವಾಗಿರುವ ವಸ್ತುಗಳನ್ನು 'ನನ್ನದು' ಎಂದು ಗುರು ದಕ್ಷಿಣೆಯಾಗಿ ತಮಗೆಂತು ಸಮರ್ಪಿಸಲಿ? ತಂದೆಯು ಆಶೀರ್ವದಿಸಿ, ಕೊಟ್ಟ ವಸ್ತುಗಳನ್ನು ಮರಳಿ ತಂದೆಗೆ ದಾನ ಮಾಡುವಂತೆ ಇದು ಹಾಸ್ಯಾಸ್ಪದವಾಗುವುದು ॥೪೩॥ ಆದರೂ ಭೃತ್ಯನಾದವನು ಸೇವಾರೂಪವಾಗಿ ರಾಜನ ತಾಂಬೂಲಾದಿವಸ್ತುಗಳನ್ನು ರಾಜನಿಗೇ ಸಮರ್ಪಿಸುವಂತೆ, ತಮ್ಮದಾಗಿಯೇ ಇರುವ ಈ ನನ್ನ, ಪ್ರಾಣಗಳು, ಹೆಂಡಿರು, ಮಕ್ಕಳು, ಸಂಪತ್ಸಮೃದ್ಧವಾದ ಅರಮನೆಯು, ರಾಜ್ಯವು, ಸೈನ್ಯವು, ಭೂಮಂಡಲವು, ಭಂಡಾರವು ಮೊದಲಾದ ಎಲ್ಲವನ್ನೂ ತಮಗೆ ಒಪ್ಪಿಸಿರುವೆನು ॥೪೪॥ ಸೇನಾಧಿಪತ್ಯವು, ರಾಜ್ಯವು, ದಂಡಾಧಿಕಾರವು, ಕಡೆಗೆ ಸರ್ವಲೋಕಾಧಿಪತ್ಯವು ಕೂಡ ವೇದಶಾಸ್ತ್ರವೇ

ತಾಃ । ಶೀಲಂ ತದೀಯಂ ಶಂಸಂತಃ ಖೇಽಭೂವನ್ ಮಿಷತಾಂ ನೃಣಾಂ ॥೪೮॥ ವೈನ್ಯಸ್ತು ಧುರ್ಯೋ ಮಹತಾಂ ಸಂಸ್ಥಿತ್ಯಾಽಧ್ಯಾತ್ಮಶಿಕ್ಷಯಾ । ಆಪ್ತಕಾಮಮಿವಾತ್ಮಾನಂ ಮೇನ ಆತ್ಮನ್ಯವಸ್ಥಿತಃ ॥೪೯॥ ಕರ್ಮಾಣಿ ಚ ಯಥಾಕಾಲಂ ಯಥಾದೇಶಂ ಯಥಾಬಲಂ । ಯಥೋಚಿತಂ ಯಥಾವಿತ್ತಮಕರೋದ್ಬ್ರಹ್ಮಸಾತ್ಕೃತಂ ॥೫೦॥ ಫಲಂ ಬ್ರಹ್ಮಣಿ ವಿನ್ಯಸ್ಯ ನಿರ್ವಿಷಂಗಃ ಸಮಾಹಿತಃ । ಕರ್ಮಾಽಧ್ಯಕ್ಷಂ ಚ ಮನ್ವಾನ ಆತ್ಮಾನಂ ಪ್ರಕೃತೇಃ ಪರಂ ॥೫೧॥ ಗೃಹೇಷು ವರ್ತಮಾನೋಽಪಿ ಸಸಾಮ್ರಾಜ್ಯ ಶ್ರಿಯಾಽನ್ವಿತಃ । ನಾಽಸಜ್ಜತೇಂದ್ರಿಯಾಽರ್ಥೇಷು ನಿರಹಂಮತಿ ರರ್ಕವತ್॥

---

ವಳಿಯನ್ನು, ಶಂಸಂತಃ - ಹೊಗಳುತ್ತಾ, ನೃಣಾಂ ಮನುಷ್ಯರು, ಮಿಷತಾಂ - ನೋಡುತ್ತಿರುವಾಗಲೇ ಖೇ - ಆಕಾಶದಲ್ಲ, ಅಭೂವನ್ - ಇದ್ದರು ॥೪೮॥ ಮಹತಾಂ - ಮಹಾತ್ಮರಲ್ಲಿ, ಧುರ್ಯಃ- ಮುಖ್ಯನಾದಪೃಥುವು, ಅಧ್ಯಾತ್ಮಶಿಕ್ಷಯಾ - ಆತ್ಮವಿಚಾರದಿಂದುಂಟಾದ, ಸಂಸ್ಥಿತ್ಯಾ - ಚಿತ್ತೈಕಾಗ್ರತೆಯಿಂದ ಆತ್ಮನಿ - ಪರಮಾತ್ಮನಲ್ಲಿ, ಅವಸ್ಥಿತಃ - ನಿಷ್ಠನಾಗಿ, ಆತ್ಮಾನಂ - ತನ್ನನ್ನು, ಆಪ್ತಕಾಮಮಿವ - ಪೂರ್ಣಕಾಮನನ್ನಾಗಿ, ಮೇನೇ- ತಿಳಿದನು ॥೪೯॥ ಯಥಾಕಾಲಂ-ಕಾಲಾನುಸಾರವಾಗಿ, ಯಥಾದೇಶಂ- ದೇಶಾನುಸಾರವಾಗಿ, ಯಥಾಬಲಂ - ಶಕ್ತ್ಯನುಸಾರವಾಗಿ, ಯಥೋಚಿತಂ - ಯೋಗ್ಯತಾನುಸಾರವಾಗಿಯೂ, ಯಥಾವಿತ್ತಂ - ವಿಭವಾನುಸಾರವಾಗಿಯೂ, ಬ್ರಹ್ಮಸಾತ್ಕೃತಂ ಯಥಾ - ಬ್ರಹ್ಮಾರ್ಪಣವಾಗುವಂತೆ, ಕರ್ಮಾಣಿ - ಕರ್ಮಗಳನ್ನು, ಅಕರೋತ್ - ಮಾಡಿದನು ॥೫೦॥ ಫಲಂ - ಕರ್ಮಫಲವನ್ನು, ಬ್ರಹ್ಮಣಿ - ಪರಮಾತ್ಮನಲ್ಲಿ, ವಿನ್ಯಸ್ಯ - ಇಟ್ಟು, ನಿರ್ವಿಷಂಗಃ - ನಿಸ್ಸಂಗನಾಗಿ, ಸಮಾಹಿತಃ - ಶಾಂತನಾಗಿ, ಆತ್ಮಾನಂ - ಆತ್ಮನನ್ನು, ಕರ್ಮಾಧ್ಯಕ್ಷಂ- ಕರ್ಮಸಾಕ್ಷಿಯಾದ ಉದಾಸೀನನನ್ನಾಗಿಯೂ, ಪ್ರಕೃತೇಃ- ಪ್ರಕೃತಿಗೆ, ಪರಂ - ಅತೀತನನ್ನಾಗಿಯೂ. ಮನ್ವಾನಃ - ತಿಳಿದು, ಸಃ- ಅವನು, ಸಾಮ್ರಾಜ್ಯಶ್ರಿಯಾ- ರಾಜಸಂಪತ್ತಿನಿಂದ, ಅನ್ವಿತಃ - ಕೂಡಿ, ಗೃಹೇಷು - ಮನೆಯಲ್ಲಿ, ವರ್ತಮಾನೋಽಪಿ - ಇದ್ದರೂ, ಅರ್ಕವತ್ - ಸೂರ್ಯನಂತೆ, ನಿರಹಂಮತಿಃ - ಅಹಂಕಾರರಹಿತನಾಗಿ, ಇಂದ್ರಿಯಾರ್ಥೇಷು - ವಿಷಯಗಳಲ್ಲಿ, ನಾಸಜ್ಜತ-ಸೇರಲಿಲ್ಲ ॥೫೨॥ ಏವಂ- ಇಂತು, ಅಧ್ಯಾತ್ಮಯೋಗೇನ- ಭಕ್ತಿಯೋಗದಿಂದ, ಕರ್ಮಾಣಿ-

---

ಕಾದಿಮುನಿಗಳು ಆತನ ಸಾಧುವೃತ್ತಿಯನ್ನು ಪ್ರಶಂಸಿಸುತ್ತಾ, ಅಲ್ಲಿಯ ಜನರು ನೋಡುತ್ತಿರುವಾಗಲೇ ಗಗನಮಾರ್ಗದಿಂದ ತೆರಳಿದರು॥೪೮॥ ತರುವಾಯ ಸಾಧು ಶಿರೋಮಣಿಯಾದ ವೈನ್ಯಭೂಪತಿಯು ಸನಕಾದಿಗಳ ಉಪದೇಶದಿಂದ ಏಕಾಗ್ರ ಚಿತ್ತನಾಗಿ, ನಿರಂತರವೂ ಆತ್ಮಾನುಸಂಧಾನದಲ್ಲಿ ನಲೆಗೊಂಡು ತನ್ನ ಕೋರಿಕೆಗಳೆಲ್ಲವೂ ಕೈಗೂಡಿದುವೆಂದು ತಿಳಿದನು ॥೪೯॥ ಹಾಗೆಯೇ ಭಗವದುಪಾಸನಾಂಗವಾಗಿ ಕಾಲ, ದೇಶ, ಶಕ್ತಿ, ಯೋಗ್ಯತಾ, ವಿಭವಗಳಿಗನುಸಾರವಾಗಿ ಈಶ್ವರಾರ್ಪಣಬುದ್ಧಿಯಿಂದ ಕರ್ಮಗಳನ್ನು ಮಾಡುತ್ತಾ, ಕರ್ಮಫಲಗಳನ್ನು ಭಗವದರ್ಪಣಗೈಯುತ್ತಾ, ಕರ್ಮಗಳಲ್ಲಾಸಕ್ತನಾಗದೆ, ತಾನು ಕರ್ಮಸಾಕ್ಷಿಯಾದ ಉದಾಸೀನನಂತಲೂ, ಮಾಯಾತೀತನೆಂತಲೂ ತಿಳಿದುಕೊಂಡನು॥೫೧॥ ಸಕಲಭೋಗ್ಯವಸ್ತುಗಳಿಂದ ತುಂಬಿರುವ ಅರಮನೆಯಲ್ಲಿದ್ದುಕೊಂಡು, ರಾಜಸಂಪತ್ತಿನಿಂದ ಕೂಡಿದ್ದರೂ, ಅಹಂಕಾರರಹಿತನಾದ ಆ ಪೃಥುರಾಜನು, ಕೆಸರು ಮೊದಲಾದ ಕಶ್ಮಲವಸ್ತುಗಳಲ್ಲಿ ಪ್ರತಿ

ಏವ ಮಧ್ಯಾತ್ಮಯೋಗೇನ ಕರ್ಮಾಣ್ಯನು ಸಮಾಚರನ್ । ಪುತ್ರಾ
ನುತ್ಪಾದಯಾಮಾಸ ಪಂಚಾಽರ್ಚಿಷ್ಯಾತ್ಮಸಮ್ಮತಾನ್ ॥ ೫೩ ॥ ವಿಜಿ
ತಾಽಶ್ವಂ ಧೂಮ್ರಕೇಶಂ ಹರ್ಯಕ್ಷಂ ದ್ರವಿಣಂ ವೃಕಂ । ಸರ್ವೇಷಾಂ
ಲೋಕಪಾಲಾನಾಂ ದಧಾರೈಕಃ ಪೃಥು ರ್ಗುಣಾನ್ ॥೫೪॥ ಗೋಪೀಥಾಯ
ಜಗತ್ಸೃಷ್ಟೇಃ ಕಾಲೇ ಸ್ವೇ ಸ್ವೇಽಚ್ಯುತಾತ್ಮಕಃ । ಮನೋವಾಗ್ವೃತ್ತಿ
ಭಿ ಸ್ಸೌಮ್ಯೈ ರ್ಗುಣೈ ಸ್ಸಂರಂಜಯನ್ ಪ್ರಜಾಃ ॥೫೫॥ ರಾಜೇತ್ಯಧಾ ನ್ನಾ
ಮಧೇಯಂ ಸೋಮರಾಜ ಇವಾಽಪರಃ । ಸೂರ್ಯವ ದ್ವಿಸೃಜನ್ ಗೃಹ್ಣನ್

ನಿತ್ಯನೈಮಿತ್ತಿಕಾದಿ ಕರ್ಮಗಳನ್ನು, ಅನುಸಮಾಚರನ್ - ಮಾಡುತ್ತಾ, ಅರ್ಚಿಷಿ - ಅರ್ಚಿಯೆಂಬ ಹೆಂಡತಿಯಲ್ಲಿ, ಆತ್ಮಸಮ್ಮತಾನ್ - ತನಗೆ ಅನುಕೂಲರಾದ, ವಿಜಿತಾಶ್ವ, ಧೂಮ್ರಕೇಶ, ಹರ್ಯಕ್ಷ, ದ್ರವಿಣ, ವೃಕ, ಎಂಬ ಪಂಚಪುತ್ರಾನ್ - ಐವರು ಮಕ್ಕಳನ್ನು, ಉತ್ಪಾದಯಾಮಾಸ - ಜನಿಯಿಸಿದನು, ಏಕಃಪೃಥುಃ-ಒಬ್ಬನಾದ ಪೃಥುವು, ಜಗತ್ಸೃಷ್ಟೇಃ - ಲೋಕಸೃಷ್ಟಿಯನ್ನು, ಗೋಪೀಥಾಯ - ಸಲಹುವುದಕ್ಕಾಗಿ, ಅಚ್ಯುತಾತ್ಮಕಃ-ಭಗವತ್ಸ್ವರೂಪನಾಗಿ, ಸ್ವೇಸ್ವೇಕಾಲೇ - ತಂತಮ್ಮ ಕಾಲದಲ್ಲಿ, ಸರ್ವೇಷಾಂ-ಎಲ್ಲಾ, ಲೋಕಪಾಲಾನಾಂ - ಇಂದ್ರಾದಿಗಳ, ಗುಣಾನ್ - ಗುಣಗಳನ್ನು, ದಧಾರ-ಧರಿಸಿದನು ॥ ಮನೋ...ಭಿಃ - ಮನಸ್ಸು ವಾಕ್ಕುಗಳ ನಡವಳಿಯಿಂದಲೂ, ಸೌಮ್ಯೈಃ - ಶಾಂತಗಳಾದ, ಗುಣೈಃ- ಸುಗುಣಗಳಿಂದಲೂ, ಪ್ರಜಾಃ - ಜನರನ್ನು, ಸಂರಂಜಯನ್ - ಸಂತೋಷಗೊಳಿಸುತ್ತಾ, ಅಪರಃ-ಬೇರೆಯಾದ, ಸೋಮರಾಜಇವ-ಚಂದ್ರನಂತೆ, ರಾಜೇತಿ - ರಾಜನೆಂದು, ನಾಮಧೇಯಂ - ಹೆಸರನ್ನು, ಅಧಾತ್-ಪಡೆದನು, ಸೂರ್ಯವತ್-ಸೂರ್ಯನಂತೆ, ಭುವಃ-ಭೂಮಿಯಲ್ಲಿನ, ವಸು-ಧನವನ್ನು, ಗೃಹ್ಣನ್-ಪಡೆಯುತ್ತಾ, ವಿಸೃಜನ್-ಕೊಡುತ್ತಾ, ಪ್ರತಪನ್- ಆಜ್ಞಾಪಿಸುತ್ತಾ, ತೇಜಸಾ-ಪರಾಕ್ರಮದಿಂದ, ಅಗ್ನಿರಿವ - ಅಗ್ನಿಯಂತೆ, ದುರ್ಧರ್ಷಃ - ತಿರಸ್ಕರಿಸಲಶಕ್ಯನಾಗಿ, ಮಹೇಂದ್ರಇವ - ಇಂದ್ರನಂತೆ, ದುರ್ಜಯಃ - ಜಯಿಸಲಸಾಧ್ಯನಾಗಿ, ಧರಿತ್ರೀವ - ಭೂಮಿಯಂತೆ, ತಿತಿಕ್ಷಯಾ - ತಾಳ್ಮೆಯಿಂದ ಕೂಡಿ, ದ್ಯೌರಿವ - ಸ್ವರ್ಗದಂತೆ, ನೃಣಾಂ - ಮನುಷ್ಯರ, ಅಭೀಷ್ಟದಃ - ಇಷ್ಟಾರ್ಥಗಳನ್ನು ಕೊಡುವವನಾಗಿ

ಬಿಂಬಿಸಿದರೂ ಅವುಗಳ ಲೇಪವಿಲ್ಲದಸೂರ್ಯನಂತೆ,ಯಾವ ಭೋಗಗಳನ್ನೂಆಶಿಸದೆ ಉದಾಸೀನನಾಗಿದ್ದನು ॥೫೨॥ ಇಂತು ಭಗವದ್ಭಕ್ತಿಯಿಂದ ಕರ್ಮಗಳನ್ನು ಮಾಡುತ್ತಾ, ತನ್ನ ಪಟ್ಟಮಹಿಷಿಯಾದ ಅರ್ಚಿಯೆಂಬ ಮಡದಿಯಲ್ಲಿ ತನಗೆ ಅನುಕೂಲರಾದ, ವಿಜಿತಾಶ್ವ, ಧೂಮ್ರಕೇಶ, ಹರ್ಯಕ್ಷ, ದ್ರವಿಣ, ವೃಕರೆಂಬ ಐವರು ಮಕ್ಕಳನ್ನು ಪಡೆದನು ಆತನು ಭಗವತ್ಸ್ವರೂಪನಾದುದರಿಂದ ಈ ಜಗತ್ತನ್ನು ಕಾಪಾಡುವುದಕ್ಕಾಗಿ ಇಂದ್ರಾದಿ ಲೋಕಪಾಲಕರಲ್ಲಿ ಬೇರೆಬೇರೆಯಾಗಿರುವ ಗುಣಗಳೆಲ್ಲವನ್ನೂ ಕಾಲಾನುಸಾರವಾಗಿ ತಾನೊಬ್ಬನೇ ಪಡೆದು ಮನೋವಾಕ್ಕಾಯಗಳಿಂದಲೂ, ಸೌಮ್ಯಗಳಾದ ಸದ್ಗುಣಗಳಿಂದಲೂ,ಪ್ರಜೆಗಳನ್ನು ಸಂತೋಷಗೊಳಿಸುತ್ತಾ, ಚಂದ್ರನಂತೆ ರಾಜನೆಂಬ ಯಥಾರ್ಥನಾಮಧೇಯವನ್ನು ಸಂಪಾದಿಸಿದನು. ಬಿಸಿಲುಕಾಲದಲ್ಲಿ ಜಲವನ್ನು ಹೀರಿ ವರ್ಷಾಕಾಲದಲ್ಲಿ ಮಳೆಗರೆವ ಸೂರ್ಯನಂತೆ, ಪ್ರಜೆಗಳಿಂದ ಧನವನ್ನು ಸಂಗ್ರಹಿಸಿ ದುರ್ಭಿಕ್ಷಗಳಲ್ಲಿ ಅದರಿಂದ ಅವರನ್ನು ಸಲಹುತ್ತಿದ್ದನು ॥೫೬॥ ಪರಾಕ್ರಮದಿಂದ ಅಗ್ನಿಯಂತೆ ದುರ್ಧರ್ಷನಾಗ್ನಿಯೂ, ಇಂದ್ರನಂತೆ ಅಜ

ಪ್ರತಪಂಶ್ಚ ಭುವೋ ವಶು ॥೫೬॥ ದುರ್ಧರ್ಷ ಸ್ತೇಜಸೇವಾಽಗ್ನಿ ರ್ಮಹೇಂದ್ರ ಇವ ದುರ್ಜಯಃ । ತಿತಿಕ್ಷಯಾ ಧರಿತ್ರೀವ ದ್ಯೌರಿವಾಽಭೀಷ್ಟದೋ ನೃಣಾಂ ॥೫೭॥ ವರ್ಷತಿಸ್ಮ ಯಥಾಕಾಮಂ ಪರ್ಜನ್ಯ ಇವ ತರ್ಪಯನ್ । ಸಮುದ್ರ ಇವ ದುರ್ಬೋಧ ಸ್ಸತ್ವೇನಾಽಚಲರಾಡಿವ ॥೫೮॥ ಧರ್ಮರಾಡಿವ ಶಿಕ್ಷಾಯಾ ಮೈಶ್ವರ್ಯೇ ಮಘವಾನಿವ । ಕುಬೇರ ಇವ ಕೋಶಾಢ್ಯೋ ಗುಪ್ತಾರ್ಥೋ ವರುಣೋ ಯಥಾ ॥೫೯॥ ಮಾತರಿಶ್ವೇವ ಸರ್ವಾತ್ಮಾ ಬಲೇನ ಸಹಸೌಜಸಾ । ಅವಿಷಹ್ಯತಯಾ ದೇವೋ ಭಗವಾನ್ ಭೂತರಾಡಿವ ॥೬೦॥ ಕಂದರ್ಪ ಇವ ಸೌಂದರ್ಯೇ ಮನಸ್ವೀ ಮೃಗರಾಡಿವ । ವಾತ್ಸಲ್ಯೇ ಮನುವ ನ್ನೃಣಾಂ ಪ್ರಭುತ್ವೇ ಭಗವಾನಜಃ ॥೬೧॥ ಬೃಹಸ್ಪತಿ

---

ದ್ದನು ॥೫೬-೫೭॥ ಪರ್ಜನ್ಯಇವ - ಪರ್ಜನ್ಯನಂತೆ, ತರ್ಪಯನ್ - ತೃಪ್ತಿಗೊಳಿಸುತ್ತಾ, ಯಥಾಕಾಮಂ-ಕಾಮಾನುಸಾರವಾಗಿ, ವರ್ಷತಿಸ್ಮ - ಇಷ್ಟಾರ್ಥವನ್ನು ಕೊಡುವನು, ಸಮುದ್ರಇವ - ಸಮುದ್ರದಂತೆ, ದುರ್ಬೋಧಃ-ಗಂಭೀರನು, ಸತ್ವೇನ-ಶಕ್ತಿಯಿಂದ, ಅಚಲರಾಡಿವ-ಬೆಟ್ಟದಂತಿರುವವನು ॥೫೮॥ ಶಿಕ್ಷಾಯಾಂ-ದಂಡದಲ್ಲಿ, ಧರ್ಮರಾಡಿವ - ಧರ್ಮರಾಜನಂತೆಯೂ, ಐಶ್ವರ್ಯೇ- ಸಂಪತ್ತಿನಲ್ಲಿ, ಮಘವಾನಿವ- ಇಂದ್ರನಂತೆಯೂ ಇದ್ದನು, ಕುಬೇರಇವ - ಕುಬೇರನಂತೆ, ಕೋಶಾಢ್ಯಃ - ಭಂಡಾರವುಳ್ಳವನು, ವರುಣೋಯಥಾ-ವರುಣನಂತೆ, ಗುಪ್ತಾರ್ಥಃ - ಗುಪ್ತಮಂತ್ರನು ॥೫೯॥ ಮಾತರಿಶ್ವೇವ - ವಾಯುವಿನಂತೆ, ಬಲೇನ - ಬಲದಿಂದಲೂ, ಸಹಸಾ-ಮನಶ್ಶಕ್ತಿ. ಓಜಸಾ- ಇಂದ್ರಿಯಶಕ್ತಿ ಇವುಗಳಿಂದ, ಸರ್ವಾತ್ಮಾ-ಸರ್ವವ್ಯಾಪಿಯು, ಅವಿಷಹ್ಯತಯಾ - ಸಹಿಸುವುದಕ್ಕಾಗದ ಕಾರಣದಿಂದ, ಭಗವಾನ್ - ಭಗವಂತನಾದ, ದೇವಃ-ಪ್ರಕಾಶಮಾನನಾದ, ಭೂತರಾಡಿವ - ರುದ್ರನಂತಿದ್ದನು ॥೬೦॥ ಸೌಂದರ್ಯೇ-ಸೌಂದರ್ಯದಲ್ಲಿ, ಕಂದರ್ಪಇವ-ಮನ್ಮಥನಂತೆಯೂ, ಮೃಗರಾಡಿವ-ಸಿಂಹದಂತೆ, ಮನಸ್ವೀ- ಧೀರನಾಗಿಯೂ, ವಾತ್ಸಲ್ಯೇ-ಪ್ರೀತಿಯಲ್ಲಿ, ಮನುವತ್ - ಮನುವಿನಂತೆಯೂ, ನೃಣಾಂ - ಪುರುಷರ, ಪ್ರಭುತ್ವೇ-ದೊರೆತನದಲ್ಲಿ, ಭಗವಾನ್-ಪೂಜ್ಯನಾದ, ಅಜಃ - ಬ್ರಹ್ಮನಾಗಿಯೂ ॥೬೧॥ ಬ್ರಹ್ಮವಾದೇ - ವೇದಾಧ್ಯಯನದಲ್ಲಿ, ಬೃಹಸ್ಪತಿಃ - ಗುರುವಾಗಿಯೂ, ಆತ್ಮವತ್ವೇ - ಇಂದ್ರಿಯಜಯದಲ್ಲಿ, ಸ್ವಯಂಹರಿಃ-ಸಾಕ್ಷಾದ್ವಿ

---

ಯ್ಯನಾಗಿಯೂ, ಭೂಮಿಯಂತೆ ಕ್ಷಮಾವಂತನಾಗಿಯೂ, ಸ್ವರ್ಗದಂತೆ ಸಕಲೇಷ್ಟಪ್ರದನಾಗಿಯೂ, ಪರ್ಜನ್ಯನಂತೆ ಯಾಚಕರ ಮನೋರಥಗಳನ್ನು ಪೂರಯಿಸುವವನಾಗಿಯೂ, ಸಮುದ್ರದಂತೆ ಗಂಭೀರನಾಗಿಯೂ, ಮಹಾ ಮೇರುವಿನಂತೆ ಬಲಶಾಲಿಯಾಗಿಯೂ, ಯಮನಂತೆ ದಂಡ ಧಾರಿಯಾಗಿಯೂ, ಮಹೇಂದ್ರನಂತೆ ಭಾಗ್ಯವಂತನಾಗಿಯೂ, ಕುಬೇರನಂತೆ ಕೋಶಾಢ್ಯನಾಗಿಯೂ, ವರುಣನಂತೆ ಗುಪ್ತಮಂತ್ರನಾಗಿಯೂ, ದೇಹೇಂದ್ರಿಯ ಮನಶ್ಶಕ್ತಿಗಳಿಂದ ವಾಯುವಿನಂತೆ ಸರ್ವವ್ಯಾಪಕನಾಗಿಯೂ, ಭಗವಂತನಾದ ರುದ್ರನಂತೆ ಶತ್ರುಗಳಿಗೆ ಅಜಯ್ಯನಾಗಿಯೂ, ಮನ್ಮಥನಂತೆ ಸುಂದರನಾಗಿಯೂ, ಸಿಂಹದಂತೆ ಧೀರನಾಗಿಯೂ, ಮನುವಿನಂತೆ ಪ್ರಜಾವತ್ಸಲನಾಗಿಯೂ, ಚತುರ್ಮುಖನಂತೆ ಲೋಕಪ್ರಭುವಾಗಿಯೂ, ಬೃಹಸ್ಪತಿಯಂತೆ ವೇದಾಧ್ಯಯನ ಸಂಪನ್ನನಾಗಿಯೂ, ವಿಷ್ಣುವಿನಂತೆ ಜಿತೇಂದ್ರಿಯನಾಗಿಯೂ, ಇದ್ದುದಲ್ಲದೆ, ಗೋಬ್ರಾಹ್ಮಣಗುರುಗಳಲ್ಲಿ ಭಕ್ತಿಯಿಂದಲೂ

ಬ್ರಹ್ಮಣ್ಯ ಮಾದೇ ಆತ್ಮವತ್ತ್ವೇ ಸ್ವಯಂ ಹರಿಃ। ಭಕ್ತ್ಯಾ ಗೋಗುರುವಿಪ್ರೇ
ಷು ವಿಷ್ವಕ್ಸೇನಾಽನುವರ್ತಿಷು । ಹ್ರಿಯಾ ಪ್ರಶ್ರಯಶೀಲಾಭ್ಯಾ ಮಾ
ತ್ಮತುಲ್ಯಃ ಪರೋದ್ಯಮೇ ॥೬೨॥ ಕೀರ್ತ್ಯೋರ್ಧ್ವಗೀತಯಾ ಪುಂಭಿ ಸ್ತ್ರೈ
ಲೋಕ್ಯೇ ತತ್ರ ತತ್ರಹ । ಪ್ರವಿಷ್ಟಃ ಕರ್ಣರಂಧ್ರೇಷು ಸ್ತ್ರೀಣಾಂ ರಾಮ
ಸ್ಸತಾಮಿವ ॥೬೩॥

— ಇತಿ ದ್ವಾವಿಂಶೋಽಧ್ಯಾಯಃ —

ಷ್ಣುವು, ಗೋಗುರುವಿಪ್ರೇಷು-ಗೋವು, ಗುರು, ಬ್ರಾಹ್ಮಣರಲ್ಲಿ, ವಿಷ್ವ...ಷು-ವಿಷ್ಣುಭಕ್ತರಲ್ಲಿಯೂ, ಭಕ್ತ್ಯಾ-ಭಕ್ತಿಯಿಂದಲೂ, ಹ್ರಿಯಾ - ನಾಚಿಕೆಯಿಂದಲೂ, ಪ್ರಶ್ರ..ಭ್ಯಾಂ - ವಿನಯ ಸದಾಚಾರಗಳಿಂದಲೂ, ಪರೋದ್ಯಮೇ-ಪರೋಪಕಾರದಲ್ಲ, ಆತ್ಮತುಲ್ಯಃ-ತನಗೆ ತಾನೇ ಸಮಾನನು ॥೬೨॥ ತ್ರೈಲೋಕ್ಯೇ-ಮೂರುಲೋಕಗಳಲ್ಲಿಯೂ, ತತ್ರತತ್ರ-ಅಲ್ಲಲ್ಲಿ, ಪುಂಭಿಃ - ಪುರುಷರಿಂದ, ಊರ್ಧ್ವಗೀತಯಾ-ಗಟ್ಟಿಯಾಗಿ ಹಾಡಲ್ಪಟ್ಟ, ಕೀರ್ತ್ಯಾ - ಕೀರ್ತಿಯಿಂದ, ಸತಾಂ-ಸಾಧುಗಳ, ಕರ್ಣರಂಧ್ರೇಷು - ಕಿವಿಗಳಲ್ಲಿ ರಾಮಇವ - ಶ್ರೀರಾಮನಂತೆ, ಸ್ತ್ರೀಣಾಂ - ಸ್ತ್ರೀಯರ, ಕರ್ಣರಂಧ್ರೇಷು - ಕಿವಿಗಳಲ್ಲಿ, ಪ್ರವಿಷ್ಟಃ-ಹೊಕ್ಕನು ॥೬೩॥

— ದ್ವಾವಿಂಶಾಧ್ಯಾಯಂ ಸಮಾಪ್ತಂ. —

---

ದುಷ್ಕಾರ್ಯದಲ್ಲಿ ನಾಚಿಕೆಯಿಂದಲೂ, ವಿನಯಸದಾಚಾರಗಳಿಂದಲೂ, ಪರೋಪಕಾರದಿಂದಲೂ ತನಗೆ ತಾನೇ ಸಮಾನನೆನಿಸಿದ್ದನು ॥೬೨॥ ಮೂರುಲೋಕಗಳಲ್ಲಿಯೂ ಅಲ್ಲಲ್ಲಿ ಉಚ್ಚಸ್ವರದಿಂದ ಪುರುಷರು ಕೊಂಡಾಡುತ್ತಿರುವ ಅಪದಾನ ಪ್ರಬಂಧಗಳಿಂದ, ಸಾಧುಗಳ ಕರ್ಣಕುಹರಗಳಲ್ಲಿ ನಲಿದಾಡುತ್ತಿರುವ ಶ್ರೀರಾಮಚಂದ್ರಮೂರ್ತಿಯಂತೆ, ಸ್ತ್ರೀಯರ ಕಿವಿಗಳನ್ನು ಪ್ರವೇಶಿಸುತ್ತಾ, ಜಗದ್ವಿಖ್ಯಾತಕೀರ್ತಿಯಾಗಿ ಧರ್ಮದಿಂದ ರಾಜ್ಯವನ್ನಾಳುತ್ತಿದ್ದನು, ಎಂದು ಮೈತ್ರೇಯಮುನಿಯು ವಿದುರನಿಗೆ ಹೇಳಿದನೆಂಬಲ್ಲಿಗೆ ಭಾಗವತ ಚಕೋರಚಂದ್ರಿಕೆಯೊಳ್

— ಇಪ್ಪತ್ತೆರಡನೆಯ ಅಧ್ಯಾಯಂ ಮುಗಿದುದು —

## —ಓಂ ನಮಃಪರಮಾತ್ಮನೇ—

### —ಅಥ ತ್ರಯೋವಿಂಶಾಧ್ಯಾಯಃ—

ಮೈತ್ರೇಯಃ ॥ ದೃಷ್ಟ್ವಾತ್ಮಾನಂ ಪ್ರವಯಸ ಮೇಕದಾ ವೈನ್ಯ ಆತ್ಮವಾನ್ । ಆತ್ಮನಾ ವರ್ಧಿತಾಽಶೇಷಸ್ವಾನುಸರ್ಗಃ ಪ್ರಜಾಪತಿಃ ॥ ೧ ॥ ಜಗತ ಸ್ತಸ್ಥುಷ ಶ್ಚಾಪಿ ವೃತ್ತಿದೋ ಧರ್ಮಭೃ ತ್ಸತಾಂ । ನಿಷ್ಪಾದಿತೇ ಶ್ವರಾದೇಶೋ ಯದರ್ಥ ಮಿಹ ಜಜ್ಞಿವಾನ್ ॥೨॥ ಆತ್ಮಜೇಷ್ವಾತ್ಮಜಾಂ ನ್ಯಸ್ಯ ವಿರಹಾ ದ್ರುದತೀ ಮಿವ । ಪ್ರಜಾಸು ವಿಮನ ಸ್ಸ್ವೇಕ ಸ್ಸದಾರೋಽಗಾ

---

— ತ್ರಯೋವಿಂಶಾಧ್ಯಾಯಂ —

ಕಂದ॥ ಮಡದಿಯೊಡಗೂಡುತಡವಿಸೊ । ಳೆಡೆವಿಡದಧ್ಯಾತ್ಮಯೋಗದಿಂನೆಲಸಿದರ್ದ್ದ ।
ಪೊಡವಿಯೊಡೆಯಂ ವಿಮಾನವ । ನಡರುತೆ ವೈಕುಂಠ ಕೈದಿದರಖಿಂದೊರೆಗುಂ ॥

ಮೈತ್ರೇಯನು ಹೇಳುತ್ತಾನೆ, ಆತ್ಮವಾನ್ - ವಿವೇಕ ಜ್ಞಾನವುಳ್ಳ, ಆತ್ಮನಾ - ತನ್ನಿಂದ, ವರ್ಧಿ.... ಗಃ, ವರ್ಧಿತ - ಬೆಳೆಯಿಸಲ್ಪಟ್ಟ, ಸ್ವಾನುಸರ್ಗಃ - ಅನ್ನದಿ ಸೃಷ್ಟಿಯುಳ್ಳ, ಪ್ರಜಾಪತಿಃ- ಪ್ರಜಾಪಾಲಕನಾದ, ವೈನ್ಯಃ - ಪೃಥುರಾಜನು, ಏಕದಾ - ಒಮ್ಮೆ, ಆತ್ಮಾನಂ - ತನ್ನನ್ನು, ಪ್ರವಯಸಂ - ಮುದುಕನನ್ನಾಗಿ, ದೃಷ್ಟ್ವಾ-ಕಂಡು ॥೧॥ ಯದರ್ಥಂ - ಯಾವ ಕಾರ್ಯಕ್ಕಾಗಿ, ಇಹ - ಇಲ್ಲಿ, ಜಜ್ಞಿವಾನ್ - ಅವತರಿಸಿದನೋ, ನಿಷ್ಪಾ...ಶಃ - ಭಗವದಾಜ್ಞಾ ರೂಪವಾದ ಆ ಕಾರ್ಯವನ್ನು ನೆರವೇರಿಸಿ, ಜಗತಃ - ಜಂಗಮರೂಪವಾದ, ತಸ್ಥುಷಃ - ಸ್ಥಾವರವಾದ ಜಗತ್ತಿಗೆ, ವೃತ್ತಿದಃ - ಜೀವನವನ್ನಿತ್ತು, ಸತಾಂ - ಸಾಧುಗಳ, ಧರ್ಮಭೃತ್ - ಧರ್ಮಗಳನ್ನು ನಡೆಯಿಸುತ್ತಾ ॥೨॥ ವಿರಹಾತ್ - ಅಗಲಿಕೆಯಿಂದ ರುದತೀಮಿವ - ಅಳುವಂತಿರುವ, ಆತ್ಮಜಾಂ - ಮಗಳಾದ ಭೂಮಿಯನ್ನು, ಆತ್ಮಜೇಷು - ಮಕ್ಕಳಲ್ಲಿ, ವಿನ್ಯಸ್ಯ - ಇಟ್ಟು, ಪ್ರಜಾಸು - ಪ್ರಜೆಗಳು, ವಿಮನಸ್ಸು - ಕಳವಳಿಸುತ್ತಿರಲು, ಏಕಃ - ಒಬ್ಬನೇ, ಸದಾರಃ - ಹೆಂಡತಿಯಿಂದ ಕೂಡಿ, ತಪೋವನಂ - ತಪಸ್ಸಿಗಾಗಿ ವನಕ್ಕೆ, ಅಗಾತ್ - ಹೊರಟುಹೋದ

---

### ಇಪ್ಪತ್ತುಮೂರನೆಯ ಅಧ್ಯಾಯ.

### — ಪೃಥುರಾಜನು ಮಡದಿಯೊಡನೆ ವೈಕುಂಠಕ್ಕೆ ತೆರಳುವುದು —

ಅನಂತರದಲ್ಲಿ ಮೈತ್ರೇಯಮುನಿಯು ವಿದುರನಿಗೆ ಹೇಳುತ್ತಾನೆ--ಇಂತು ಪೃಥುರಾಜನು ಪ್ರಜಾಸಮ್ಮತನಾಗಿ ರಾಜ್ಯವನ್ನಾಳುತ್ತಾ ಸಕಲಪ್ರಜೆಗಳಿಗೂ ಜೀವನವನ್ನು ಕಲ್ಪಿಸಿ ಕೃತಕೃತ್ಯನಾಗಿ ಒಮ್ಮೆ ತನಗೆ ವಾರ್ಧಕ ಬಂದುದನ್ನು ತಿಳಿದು ಚೇತನಾಽಚೇತನ ಪ್ರಪಂಚಕ್ಕೆಲ್ಲಾ ಜೀವನವನ್ನಿತ್ತು, ಭಗವದಾಜ್ಞೆಯನ್ನು ನೆರವೇರಿಸುವುದಕ್ಕಾಗಿ ಅವತರಿಸಿದವನಾದುದರಿಂದ ತನ್ನ ಅವತಾರಕಾರ್ಯಗಳೆಲ್ಲವನ್ನೂ ಪೂರಯಿಸಿ, ತನ್ನ ಅಗಲಿಕೆಯಿಂದ ರೋದಿಸುವಂತಿರುವ ಮಗಳಾದ ಭೂದೇವಿಯನ್ನು ಮಕ್ಕಳಿಗೊಪ್ಪಿಸಿ,ತನ್ನ ವಿರಹಕ್ಕಾಗಿ ಪ್ರಜೆಗಳೆಲ್ಲರೂ ಮರುಗುತ್ತಿದ್ದರೂ ಅದನ್ನು ಸಡ್ಡಮಾಡದೆ ಹೆಂಡತಿಯಿಂದೊಡಗೂಡಿ ತಪಸ್ಸಿಗಾ

ತ್ತಪೋವನಂ ॥೩॥ ತತ್ರಾಪ್ಯದಾಭ್ಯನಿಯಮೋ ವೈಖಾನಸ ಸುಸಮ್ಮತೇ । ಆರಬ್ಧ ಉಗ್ರತಪಸಿ ಯಥಾ ಸ್ವವಿಜಯೇ ಪುರಾ ॥೪॥ ಕಂದಮೂಲ ಫಲ ಹಾರ ಶ್ಶುಷ್ಕ ಪರ್ಣಾಶನಃ ಕ್ವಚಿತ್ । ಅಬ್ಭಕ್ಷಃ ಕತಿಚಿತ್ಪಕ್ಷಾನ್ ವಾಯುಭಕ್ಷ ಸ್ತತಃ ಪರಂ ॥ ೫ ॥ ಗ್ರೀಷ್ಮೇ ಪಂಚತಪಾ ವೀರೋ ವರ್ಷಾಸ್ವಾಸಾರಷಾಣ್ಮುನಿಃ । ಆಕಂಠಮಗ್ನ ಶ್ಶಿಶಿರ ಉದಕೇ ಸ್ಥಂಡಿಲೇ ಶಯಃ ॥೬॥ ತಿತಿಕ್ಷು ರ್ಯತವಾ ಗ್ದಾಂತ ಊರ್ಧ್ವರೇತಾ ಜಿತಾಽನಿಲಃ । ಆರಿರಾಧಯಿಷುಃ ಕೃಷ್ಣ ಮಚರ ತ್ತಪ ಉತ್ತಮಂ ॥೭॥ ತೇನ ಕ್ರಮಾನು

ನು ॥೩॥ ತತ್ರಾಪಿ - ಆ ಕಾಡಿನಲ್ಲಿಯೂ, ಅದಾ...ಯಃ, ಅದಾಭ್ಯ - ವಿಘ್ನಗಳಿಂದ ಕೆಡಿಸಲಾಗದ, ನಿಯಮಃ - ನೇಮಗಳುಳ್ಳವನಾಗಿ, ಪುರಾ - ಮುನ್ನ, ಸ್ವವಿಜಯೇ ಯಥಾ - ತಾನು ಭೂಮಿಯನ್ನು ಜಯಿಸುವುದಕ್ಕಾಗಿ ತಪಿಸಿದಂತೆ, ವೈಖಾ...ತೇ - ವೈಖಾನಸರಿಗೆ ಇಷ್ಟವಾದ, ಉಗ್ರತಪಸಿ - ಕ್ರೂರ ತಪಸ್ಸಿನಲ್ಲಿ, ಆರಬ್ಧಃ - ಪ್ರವರ್ತಿಸಿದನು ॥೪॥ ಕ್ವಚಿತ್ - ಒಮ್ಮೆ, ಕಂದ...ರಃ - ಗೆಡ್ಡೆ ಗೆಣಸು, ಹಣ್ಣುಗಳನ್ನು ತಿನ್ನುತ್ತಾ, ಒಮ್ಮೆ, ಶುಷ್ಕ....ನಃ - ತರಗೆಲೆಗಳನ್ನು ತಿನ್ನುತ್ತಾ, ಕತಿಚಿತ್ - ಕೆಲವು, ಪಕ್ಷಾನ್ - ಪಕ್ಷಗಳಲ್ಲಿ, ಅಬ್ಭಕ್ಷಃ - ಜಲವನ್ನು ಮಾತ್ರ ಕುಡಿಯುತ್ತಾ, ತತಃಪರಂ - ಆಬಳಿಕ, ವಾಯುಭಕ್ಷಃ - ಗಾಳಿಯನ್ನು ಕುಡಿಯುತ್ತಾ ॥೫॥ ಗ್ರೀಷ್ಮೇ - ಬಿಸಿಲುಕಾಲದಲ್ಲಿ, ಪಂಚತಪಾಃ - ಪಂಚಾಗ್ನಿಗಳಲ್ಲಿ ತಪಿಸುತ್ತಾ, ವೀರಃ - ಧೀರನಾಗಿ, ವರ್ಷಾಸು - ಮಳೆಗಾಲದಲ್ಲಿ, ಆಸಾರಷಾಟ್ - ಬಿರುಮಳೆಯನ್ನು ಸಹಿಸುತ್ತಾ, ಶಿಶಿರೇ - ಹಿಮಗಾಲದಲ್ಲಿ, ಉದಕೇ - ಜಲದಲ್ಲಿ, ಆಕಂಠಮಗ್ನಃ - ಕೊರಳಿನವರೆಗೂ ಮುಳುಗಿ, ಸ್ಥಂಡಿಲೇ ಶಯಃ - ನೆಲದಲ್ಲಿ ಮಲಗುತ್ತಾ, ಮುನಿಃ - ಧ್ಯಾನಮಾಡುತ್ತಾ, ॥೬॥ ತಿತಿಕ್ಷುಃ - ಶೀತೋಷ್ಣಗಳನ್ನು, ಸೈರಿಸಿ, ಯತವಾಕ್ - ವಾಙ್ನಿಯಮವನ್ನು ಮಾಡಿ, ದಾಂತಃ - ಜಿತೇಂದ್ರಿಯನಾಗಿ, ಊರ್ಧ್ವರೇತಾಃ - ಸ್ತ್ರೀಪರಾಙ್ಮುಖನಾಗಿ, ಜಿತಾನಿಲಃ - ಶ್ವಾಸಧಾರಣೆಯನ್ನು ಮಾಡುತ್ತಾ, ಕೃಷ್ಣಂ - ಶ್ರೀಹರಿಯನ್ನು, ಆರಿರಾಧಯಿಷುಃ - ಸೇವಿಸಲೆಳಸಿ, ಉತ್ತಮಂ - ಉತ್ತಮವಾದ, ತಪಃ - ತಪಸ್ಸನ್ನು, ಅಚರತ್ - ಮಾಡಿದನು ॥೭॥ ಕ್ರಮಾನುಸಿದ್ಧೇನ - ಕ್ರಮವಾಗಿ ಕೈಗೂಡಿದ, ತೇನ - ಆತಪಸ್ಸಿನಿಂದ, ಧ್ವಸ್ತಕರ್ಮಾ -

ಗಿ ವನಕ್ಕೆ ತೆರಳಿದನು ॥೩॥ ಅಲ್ಲಿಯೂ ಯಾವ ವಿಘ್ನಗಳಿಂದಲೂ ತನ್ನ ನಿಯಮಗಳನ್ನು ಕೆಡಿಸಿಕೊಳ್ಳದೆ, ಮುನ್ನ ಭೂಮಿಯನ್ನು ಜಯಿಸುವುದಕಾಗಿ ತಪಿಸತೊಡಗಿದಂತೆ ವೈಖಾನಸರಿಗೆ ಸಮ್ಮತವಾದ ಉಗ್ರತಪಸ್ಸನ್ನು ಮಾಡತೊಡಗಿದನು ॥೪॥ ತರುವಾಯ ಪಕ್ಷಗಳನ್ನುಳಿದು ಕೆಲವುದಿನ ಗೆಡ್ಡೆ, ಗೆಣಸು, ಹಣ್ಣುಗಳನ್ನೂ, ಕೆಲವುದಿನ ತರಗೆಲೆಗಳನ್ನೂ, ಕೆಲವುದಿನ ಜಲಮಾತ್ರವನ್ನೂ ಭಕ್ಷಿಸುತ್ತಿದ್ದುದಲ್ಲದೆ, ಕೆಲವುಪಕ್ಷಗಳು ವಾಯ್ವಾಹಾರದಿಂದಲೇ ತಪಿಸಿದನು ॥೫॥ ಬಳಿಕ ಬಿಸಿಲುಕಾಲದಲ್ಲಿ ಪಂಚಾಗ್ನಿಗಳ ಮಧ್ಯದಲ್ಲಿ ಸೂರ್ಯನಿಗಭಿಮುಖನಾಗಿಯೂ, ಮಳೆಗಾಲದಲ್ಲಿ ಬಿರುಮಳೆಯಲ್ಲಿಯೂ, ಚಳಿಗಾಲದಲ್ಲಿ ಕೊರಲುದ್ದವಾದ ಜಲದಲ್ಲಿಯೂ, ಕುಳಿತು ತಪಿಸಿದುದಲ್ಲದೆ ಯಾವಾಗಲೂ ನೆಲದಲ್ಲಿಯೇ ಮಲಗತೊಡಗಿದನು॥ಶೀತೋಷ್ಣಾದಿ ದ್ವಂದ್ವದುಃಖಗಳಿಗೆ ಹೆದರದೆ ಇಂದ್ರಿಯಗಳನ್ನು ಜಯಿಸಿ, ವಾಙ್ನಿಯಮವನ್ನು ಮಾಡಿ, ಭಗವಂತನನ್ನಾರಾಧಿಸುತ್ತಾ ಅತ್ಯುಗ್ರವಾದ ತಪಸ್ಸನ್ನುಮಾಡಿದನು ॥೭॥ ಕ್ರಮಕ್ರಮವಾಗಿ ಕೈಗೂಡಿದ ತಪಸ್ಸಿದ್ಧಿಯಿಂದಕರ್ಮಫಲಗಳೆಲ್ಲಾಸೆಯನ್ನುಳಿದು ನಿರ್ಮ

ಸಿದ್ಧೇನ ಧ್ವಸ್ತಕರ್ಮಾsಮಲಾಶಯಃ । ಪ್ರಾಣಾಯಾಮೈಸ್ಸನ್ನಿರುದ್ಧಷ ಡ್ವರ್ಗಶ್ಛಿನ್ನಬಂಧನಃ ॥೮॥ ಸನತ್ಕುಮಾರೋ ಭಗವಾನ್ ಯದಾಹಾ s ಧ್ಯಾತ್ಮಿಕಂ ಪರಂ । ಯೋಗಂ ತೇನೈವ ಪುರುಷ ಮಭಜತ್ಪುರುಷರ್ಷಭಃ ॥೯॥ ಭಗವದ್ಧರ್ಮಿಣ ಸ್ಸಾಧೋ ಶ್ಶ್ರದ್ಧಯಾ ಯತತಃ ಸದಾ । ಭಕ್ತಿರ್ಭಗವತಿ ಬ್ರಹ್ಮಣ್ಯನನ್ಯವಿಷಯಾ s ಭವತ್ ॥ ೧೦ ॥ ‡ ತಸ್ಯಾs ನಯಾ ಭಗವತಃ ಪರಿಕರ್ಮಶುದ್ಧ ಸತ್ವಾತ್ಮನ ಸ್ತದನುಸಂಸ್ಮರಣಾsನುಪೂರ್ತ್ಯಾ । ಜ್ಞಾನಂ ವಿರಕ್ತಿಮ ದಭೂ ನ್ನಿಶಿತೇನ ಯೇನ ಚಿಚ್ಛೇದ ಸಂಶಯಪದಂ ನಿ

ಕರ್ಮಗಳನ್ನು ಧ್ವಂಸಮಾಡಿ, ಅಮ...ಶಯಃ - ನಿರ್ಮಲಮನಸ್ಕನಾಗಿ, ಸನ್ನಿ...ರ್ಗಃ - ಕಾಮಾದಿ ಷಡ್ವರ್ಗವನ್ನೂ ಅಡಗಿಸಿ, ಛಿನ್ನಬಂಧನಃ - ಕರ್ಮವಾಸನೆಗಳನ್ನು ಹೋಗಲಾಡಿಸಿಕೊಂಡವನು ॥೮॥ ಭಗವಾನ್ - ಮಹಾತ್ಮನಾದ, ಸನತ್ಕುಮಾರಃ - ಸನತ್ಕುಮಾರನು, ಪರಂ - ಉತ್ತಮವಾದ, ಯತ್ - ಯಾವ, ಆಧ್ಯಾತ್ಮಿಕಂ - ಆತ್ಮವಿಷಯವಾದ, ಯೋಗಂ - ಧ್ಯಾನಕ್ರಮವನ್ನು, ಆಹ-ಹೇಳಿದ್ದನೊ, ತೇನೈವ- ಅದೇಯೋಗದಿಂದ, ಪುರುಷರ್ಷಭಃ - ಪುರುಷ ಶ್ರೇಷ್ಠನಾದ ಪೃಥುರಾಜ, ಪುರುಷಂ - ಭಗವಂತನನ್ನು, ಅಭಜತ್ - ಭಜಿಸಿದನು ॥೯॥ ಭಗವದ್ಧರ್ಮಿಣಃ - ಭಗವದಾರಾಧನೆಯನ್ನು ಮಾಡುವ ಸಾಧೋಃ-ವಿರಕ್ತನಾದ ಶ್ರದ್ಧಯಾ - ಆದರದಿಂದ, ಸದಾ - ಯಾವಾಗಲೂ, ಯತತಃ - ಯತ್ನಮಾಡುತ್ತಿರುವ, ಪೃಥುವಿಗೆ, ಭಗವತಿ - ಭಗವಂತನಾದ, ಬ್ರಹ್ಮಣಿ - ಪರಮಾತ್ಮನಲ್ಲಿ, ಅನನ್ಯವಿಷಯಾ - ಏಕಾಗ್ರವಾದ, ಭಕ್ತಿಃ - ಪ್ರೇಮವು, ಅಭವತ್ - ಆಯಿತು ॥೧೦॥ ಭಗವತಃ - ಭಗವಂತನ, ಪರಿ...ನಃ, ಪರಿಕರ್ಮ - ಸೇವೆಯಿಂದ, ಶುದ್ಧಸತ್ವ - ಸತ್ವರೂಪವಾದ, ಆತ್ಮನಃ-ಮನಸ್ಸುಳ್ಳ, ತಸ್ಯ - ಆ ಪೃಥುವಿಗೆ, ತದ...ರ್ತ್ಯಾ- ತತ್ - ಆ ಭಗವಂತನ, ಅನುಸ್ಮರಣ - ಧ್ಯಾನದಿಂದ, ಅನುಪೂರ್ತ್ಯಾ - ಸಂಪೂರ್ಣವಾದ, ಅನಯಾ - ಭಕ್ತಿಯಿಂದ, ನಿಶಿತೇನ - ತೀಕ್ಷ್ಣವಾದ, ಯೇನ - ಯಾವುದರಿಂದ, ಸಂಶಯಪದಂ - ಭ್ರಾಂತಿ ಜ್ಞಾನಗಳಿಗೆ

ಲಾಂತಃಕರಣನಾಗಿ, ರೇಚಕ, ಪೂರಕ, ಕುಂಭಕ ಮೊದಲಾದ ಪ್ರಾಣಾಯಾಮಗಳಿಂದ ಕಾಮಕ್ರೋಧಾದಿಗಳನ್ನು ಜಯಿಸಿ, ಕರ್ಮವಾಸನೆಗಳನ್ನು ತೊರೆದನು ॥೮॥ ಬಳಿಕ ಪುರುಷಪುಂಗವನಾದ ಪೃಥುವು ಭಗವಂತನಾದ ಸನತ್ಕುಮಾರಮುನಿಯುಪದೇಶಿಸಿದ ಉಪಾಸನಾವಿಧಾನದಿಂದಲೇ ಭಗವಂತನನ್ನು ಆರಾಧಿಸುತ್ತಿದ್ದನು ॥೯॥ ತರುವಾಯ ನಿರಂತರವೂ ಭಗವದುಪಾಸಕನಾದ ಆ ರಾಜನಿಗೆ ಭಗವಂತನಲ್ಲಿ ಶ್ರದ್ಧೆಯಿಂದ ಏಕಾಂತವಾದ ಭಕ್ತಿಯುಂಟಾಯಿತು ॥೧೦॥ ಭಗವಂತನ ಸೇವೆಯಿಂದ ರಾಗಾದಿಗಳು ನಾಶವಾಗಿ ಶುದ್ಧ ಸತ್ವಪ್ರಧಾನವಾದ ಮನಸ್ಸಿನಲ್ಲಿ ಆ ಭಕ್ತಿಯು ನೆಲಸಿದಕೂಡಲೇ ಭಗವಂತನ ಸದ್ಗುಣಗಳಶ್ರವಣಮನನಾದಿಗಳಿಂದ ಅದು ಪೂರ್ಣಭಕ್ತಿಯೆನಿಸಿದುದು. ಆ ಭಕ್ತಿಯಿಂದ ವೈರಾಗ್ಯಸಹಕೃತವಾದ ಜ್ಞಾನವುಂಟಾಯಿತು. ಆ ಜ್ಞಾನಾಗ್ನಿಯು ಉದಯಿಸಿದ ಕೂಡಲೇ ಸಕಲ ಭ್ರಾಂತಿಗಳಿಗೂ ನೆಲೆಯಾಗಿ ತನಗೆ ಆವರಕವಾಗಿದ್ದ ಅಹಂಕಾರವೆಂಬ ಹೃದಯಗ್ರಂಥಿಯನ್ನು ಸುಟ್ಟುಬಿಟ್ಟನು.

‡ ವಿ. ಶ್ಲೋ॥ ಆವಿರ್ಭಾವತಿರೋಭಾವೌ ಜ್ಞಾನಸ್ಯ ಜ್ಞಾನಿನೋsಪಿ ತು । ಅಪೇಕ್ಷ್ಯಾsಜ ಸ್ತಥಾ ಜ್ಞಾನಮುತ್ಪನ್ನಮಿತಿಚೋಚ್ಯತೆ ॥ ಜ್ಞಾನವೆಂಬುದು ನಿತ್ಯಸಿದ್ಧವಾದುದರಿಂದ ಜ್ಞಾನದ ಆವಿರ್ಭಾವತಿರೋಭಾವಗಳೇ ಜ್ಞಾನವುಂಟಾಯಿತು, ಜ್ಞಾನನಾಶವಾಯಿತು,, ಎಂಬು ವ್ಯವಹರಿಸಲ್ಪಡುವುವು.

ಜಜೀವಕೋಶಂ ॥ ೧೧॥ ‡ ಛಿನ್ನಾನ್ಯಧೀರಧಿಗತಾತ್ಮಗತಿರ್ನಿರೀಹಸ್ತತ್ತತ್ಯಜೇಽಚ್ಛಿನದಿದಂ ವಯುನೇನ ಯೇನ । ತಾವನ್ನ ಯೋಗಗತಿಭಿರ್ಯತಿರಪ್ರಮತ್ತೋ ಯಾವದ್ಗದಾಗ್ರಜಕಥಾಸು ರತಿಂ ನ ಕುರ್ಯಾತ್ ॥೧೨॥ ಏವಂ ಸ ವೀರಪ್ರವರಸ್ಸಂಯೋಜ್ಯಾತ್ಮಾನಮಾತ್ಮನಿ । ಬ್ರಹ್ಮಭೂತೋ ದೃಢಂ ಕಾಲೇ ತತ್ಯಾಜ ಸ್ವಂ ಕಳೇಬರಂ ॥೧೩॥ ⁑ ಸಂಪೀಡ್ಯ ಪಾಯುಂ ಪಾರ್ಷ್ಣಿಭ್ಯಾಂ ವಾಯುಮುತ್ಸಾರಯಞ್ಛನೈಃ। ನಾಭ್ಯಾಂ ಕೋ

ನೆಲೆಯಾದ, ನಿಜಜೀವಕೋಶಂ - ತನ್ನ ಹೃದಯ ಗ್ರಂಥಿಯನ್ನು, ಚಿಚ್ಛೇದ - ಕತ್ತರಿಸಿದನೋ, ಅಂತಹ, ವಿರಕ್ತಿಮತ್ - ವೈರಾಗ್ಯದಿಂದ ಕೂಡಿದ, ಜ್ಞಾನಂ - ಜ್ಞಾನವು, ಅಭೂತ್-ಉಂಟಾಯಿತು ॥೧೧॥ ಛಿನ್ನಾನ್ಯಧೀಃ - ದೇಹಾತ್ಮಜ್ಞಾನವನ್ನಳಿದು, ಅಧಿ...ತಿಃ - ಆತ್ಮಸ್ವರೂಪವನ್ನು ಬಲ್ಲವನಾದುದರಿಂದಲೇ, ನಿರೀಹಃ - ನಿಸ್ಪೃಹನಾಗಿ, ಯೇನವಯುನೇನ - ಯಾವ ಜ್ಞಾನದಿಂದ, ಇದಂ- ಈ ಲಿಂಗಶರೀರವನ್ನು, ಅಚ್ಛಿನತ್- ಕತ್ತರಿಸಿದನೋ, ತತ್ - ಆ ಜ್ಞಾನವನ್ನೂ, ತತ್ಯಜೇ- ತೊರೆದು ಬಿಟ್ಟನು, ಯತಿರಪಿ - ಸನ್ಯಾಸಿಯಾದರೂ, ಯಾವತ್ - ಎಲ್ಲಿಯವರೆಗೆ, ಗದಾ...ಸು - ಶ್ರೀಕೃಷ್ಣಚರಿತ್ರೆಗಳಲ್ಲಿ, ರತಿಂ - ಆಸಕ್ತಿಯನ್ನು, ನಕುರ್ಯಾತ್ - ಮಾಡಲಾರನೋ, ತಾವತ್ - ಅಲ್ಲಿಯವರೆಗೂ, ಯೋಗಗತಿಭಿಃ - ಯೋಗಮಾರ್ಗಗಳಿಂದ, ಅಪ್ರಮತ್ತಃ - ಜಾಗರೂಕನು, ನ - ಆಗುವುದಿಲ್ಲ ॥೧೨॥

ವೀರಪ್ರವರಃ - ಧೀರಾಗ್ರೇಸರನಾದ, ಸಃ - ಆ ಪೃಥುವು, ಏವಂ - ಇಂತು, ಆತ್ಮನಿ ಪರಮಾತ್ಮನಲ್ಲಿ, ಆತ್ಮಾನಂ - ತನ್ನನ್ನು, ದೃಢಂ-ಐಕ್ಯದಿಂದ, ಸಂಯೋಜ್ಯ ಸೇರಿಸಿ, ಬ್ರಹ್ಮಭೂತಃ - ಬ್ರಹ್ಮೀಭಾವವನ್ನು ಪಡೆದು, ಕಾಲೇ-ಪ್ರಾರಬ್ಧಾವಸಾನದಲ್ಲಿ, ಸ್ವಂ-ತನ್ನ, ಕಳೇಬರಂ- ಶರೀರವನ್ನು, ತತ್ಯಾಜ-

ದೇಹಾತ್ಮಭ್ರಾಂತಿಯಡಗಿದ ಬಳಿಕ ಆತ್ಮ ಸಾಕ್ಷಾತ್ಕಾರವಾಯಿತು. ಒಡನೆಯೇ ಪರವೈರಾಗ್ಯವುಂಟಾಯಿತು. ಬಳಿಕ ಮುನ್ನಯಾವಜ್ಞಾನದಿಂದ ಜೀವ ಕೋಶವನ್ನು ನಾಶಗೊಳಿಸಿದನೋ, ಆ ಜ್ಞಾನವಿಷಯದಲ್ಲಿಯೂ ಪ್ರಯತ್ನವನ್ನು ಬಿಟ್ಟುಬಿಟ್ಟನು. ಲೋಕದಲ್ಲಿ ಜ್ಞಾನಿಯಾದವನು ಭಗವದ್ಗುಣಶ್ರವಣಾದಿಗಳಲ್ಲಿ ಆಸಕ್ತನಾಗುವ ವರೆಗೂ ಯೋಗಸಿದ್ಧಿ ಮೊದಲಾದವುಗಳನ್ನು ಬಯಸುವನೇ ಹೊರತು ಆ ಮೇಲೆ ಬಯಸಲಾರನಾದುದರಿಂದ ಪೃಥುರಾಜನು ಭಗವತ್ಕಥಾ ರುಚಿಯನ್ನು ಬಲ್ಲವನಾದ ಕಾರಣ ಅಣಿಮಾದಿಯೋಗ ಸಿದ್ಧಿಗಳನ್ನು ಕೂಡ ಆಶಿಸಲಿಲ್ಲ॥೧೨॥ ಧೀರಾಗ್ರಗಣ್ಯನಾದ ಆ ಪೃಥುರಾಜನು ಇಂತು ಜೀವೇಶ್ವರೈಕ್ಯಾನುಸಂಧಾನದಿಂದ ಬ್ರಹ್ಮೀಭಾವವನ್ನು ಪಡೆದು, ಪ್ರಾರಬ್ಧಾವಸಾನಕಾಲವು ಪ್ರಾಪ್ತವಾಗಲು,

‡ ವಿ. ಶ್ಲೋ॥ "ಅಪರೋಕ್ಷತಯಾ ವೃತ್ತಿಜ್ಞಾನಭೇದ ನಿರೀಕ್ಷಣಂ । ಸ್ವರೂಪಜ್ಞಾನಸಂಸ್ಥಿತ್ಯಾ ಜ್ಞಾನತ್ಯಾಗ ಉದೀರ್ಯತೇ ॥" ನಿರ್ಲೇಪವಾದ ಸ್ವರೂಪಜ್ಞಾನದಿಂದ, ಬಾಹ್ಯಾಂತಃಕರಣಜನ್ಯವಾದ ವೃತ್ತಿಜ್ಞಾನವು, ಕರಾಮಲಕದಂತೆ ಪ್ರತ್ಯಕ್ಷವಾಗುವಕಾರಣ "ನನಗಿಂತಲೂ ಬೇರೆಯಾದ ಈಜಗತ್ತು ನಿತ್ಯವಲ್ಲ" ಎಂದು ಕಾಣುವುದಕ್ಕೆ ಜ್ಞಾನತ್ಯಾಗವೆಂದು ಹೆಸರು.

⁑ ಈ ಲಯಚಿಂತನಪ್ರಕರಣವು ದ್ವಿತೀಯ ಸ್ಕಂಧದಲ್ಲಿ ಕ್ರಮವಾಗಿ ವಿಚಾರಮಾಡಲ್ಪಟ್ಟಿರುವುದರಿಂದ ಇಲ್ಲಿ ವಿಸ್ತರಿಸಲಿಲ್ಲ.

ಷ್ಠೇ ಷ್ವವಸ್ಥಾಪ್ಯ ಹೃದುರಃಕಂಠಶೀರ್ಷಣಿ ॥ ೧೪ ॥ ಉತ್ಸರ್ಪಯಂಸ್ತು ತಂ ಮೂರ್ಧ್ನಿ ಕ್ರಮೇಣಾವೇಶ್ಯ ನಿಸ್ಪೃಹಃ। ವಾಯುಂ ವಾಯೌ ಕ್ಷಿತೌ ಕಾಯಂ ತೇಜ ಸ್ತೇಜ ಸ್ಯಯೂಯುಜತ್ ॥ ೧೫ ॥ ಖಾನ್ಯಾಕಾಶೇ ದ್ರವಂ ತೋಯೇ ಯಥಾಸ್ಥಾನಂ ವಿಭಾಗಶಃ । ಕ್ಷಿತಿ ಮಂಭಸಿ ತತ್ತೇಜ ಸ್ಯದೋ ವಾಯೌ ನಭಸ್ಯಮುಂ ॥೧೬॥ ಇಂದ್ರಿಯೇಷು ಮನ ಸ್ತಾನಿ ತನ್ಮಾತ್ರೇಷು ಯಥೋದ್ಭವಂ । ಭೂತಾದಿನಾಽಮೂ ನ್ಯುತ್ಕೃಷ್ಯ ಮಹ

ಬಿಟ್ಟನು ॥೧೩॥ ಪಾರ್ಷ್ಣಿಭ್ಯಾಂ-ಹಿಮ್ಮಡಿಗಳಿಂದ, ಪಾಯುಂ-ಗುದದ್ವಾರವನ್ನು, ಸಂಪೀಡ್ಯ-ತಡೆದು, ಶನೈಃ-ಮೆಲ್ಲನೆ, ವಾಯುಂ - ಮೂಲಾಧಾರದಲ್ಲಿರುವ ವಾಯುವನ್ನು, ಉತ್ಸಾರಯನ್ - ಮೇಲಕ್ಕೆಬ್ಬಿಸಿ, ನಾಭ್ಯಾಂ-ನಾಭಿಯಲ್ಲಿಯೂ, ಬಳಿಕ, ಹೃದು...ಣಿ-ಹೃದಯ, ಎದೆ, ಕಂಠ, ಭ್ರೂಮಧ್ಯವೆಂಬ, ಪ್ರಕೋಷ್ಠೇಷು- ಸ್ಥಾನಗಳಲ್ಲಿ, ಅವಸ್ಥಾಪ್ಯ - ನೆರೆಗೊಳಿಸಿ ॥೧೪॥ ತಂ-ಆ ವಾಯುವನ್ನು, ಉತ್ಸರ್ಪಯನ್-ಹೊರಡಿಸಿ, ಕ್ರಮೇಣ- ಕ್ರಮದಿಂದ, ಮೂರ್ಧ್ನಿ - ಬ್ರಹ್ಮರಂಧ್ರದಲ್ಲಿ, ಆವೇಶ್ಯ ನಿಲ್ಲಿಸಿ, ನಿಸ್ಪೃಹಃ-ವಿರಕ್ತನಾಗಿ, ವಾಯುಂ-ಪ್ರಾಣವಾಯುವನ್ನು, ವಾಯೌ-ಮಹಾವಾಯುವಿನಲ್ಲಿಯೂ, ಕಾಯಂ-ಶರೀರವನ್ನು, ಕ್ಷಿತೌ-ಭೂಮಿಯಲ್ಲಿಯೂ, ತೇಜಃ-ತೇಜಸ್ಸನ್ನು, ತೇಜಸಿ-ತೇಜಸ್ಸಿನಲ್ಲಿಯೂ, ಅಯೂಯುಜತ್ ಸೇರಿಸಿದನು ॥೧೫॥ ಖಾನಿ - ಇಂದ್ರಿಯಗಳನ್ನು, ಆಕಾಶೇ - ಗಗನದಲ್ಲಿಯೂ, ದ್ರವಂ-ಶರೀರ

ತನ್ನ ಕಳೇಬರವನ್ನು ತೊರೆದನು ॥೧೩॥ ಆತನು ಕಳೇಬರವನ್ನು ಬಿಡುವಾಗ *ಮುಕ್ತಾಸನಾಸೀನನಾಗಿ ಎರಡು ಹಿಮ್ಮಡಿಗಳಿಂದಲೂ ತನ್ನ ಗುದದ್ವಾರವನ್ನು ನಿರೋಧಿಸಿ, ಮೂಲಾಧಾರದಲ್ಲಿರುವ ಅಪಾನವಾಯುವನ್ನು ಮೆಲ್ಲನೆ, ಮೇಲಕ್ಕೆಬ್ಬಿಸಿ ನಾಭಿಯಲ್ಲಿ ನಿಲ್ಲಿಸಿ, ಬಳಿಕ ಹೃದಯ,ಎದೆ,ಕಂಠ, ಭ್ರೂಮಧ್ಯಗಳೆಂಬ ಸ್ಥಾನಗಳಲ್ಲಿ ನಿಲ್ಲಿಸಿದನು ॥೧೪॥

ಬಳಿಕ ಅಲ್ಲಿಂದ ಹೊರಡಿಸಿ ಕ್ರಮಕ್ರಮವಾಗಿ ಅದನ್ನು, ಬ್ರಹ್ಮರಂಧ್ರದಲ್ಲಿ ನೆಲೆಗೊಳಿಸಿ, ಯಾವದನ್ನೂ ಬಯಸದೆ ನಿಸ್ಪೃಹನಾಗಿ, ಆ ವಾಯುವನ್ನು ಬ್ರಹ್ಮ ರಂಧ್ರ ಮಾರ್ಗವಾಗಿ ವಾಯುಭೂತದಲ್ಲಿಯೂ, ಶರೀರವನ್ನು ಭೂಮಿಯಲ್ಲಿಯೂ,ತೇಜಸ್ಸನ್ನುಅಗ್ನಿಯಲ್ಲಿಯೂ, ಇಂದ್ರಿಯಛಿದ್ರಗಳನ್ನು ಆಕಾಶದಲ್ಲಿಯೂ, ಶರೀರದಲ್ಲಿರುವ ಪದಾರ್ಥಗಳನ್ನು ಜಲದಲ್ಲಿಯೂ, ಲಯಗೊಳಿಸಿದನು, ಇಂತು ತನ್ನ ದೇಹದಲ್ಲಿದ್ದ ಪಂಚಭೂತಾಂಶಗಳನ್ನು ತಮಗೆ ಕಾರಣಗಳಾದ ಮಹಾಭೂತಗಳಲ್ಲಿ ಲಯಗೊಳಿಸಿ, ತರುವಾಯ ಪೃಥಿವಿಯನ್ನು ಜಲದಲ್ಲಿಯೂ, ಜಲವನ್ನು ತೇಜಸ್ಸಿನಲ್ಲಿಯೂ, ತೇಜಸ್ಸನ್ನು ವಾಯುವಿನಲ್ಲಿಯೂ, ಅದನ್ನು ಆಕಾಶದಲ್ಲಿಯೂ ಲಯಗೊಳಿಸಿದನು ॥೧೬॥ ಇಂತು ತಾವು ಸಾಹಂಕಾರದಿಂದ

*(೧) ಬಾ. ಶ್ಲೋ॥ ಸಂಪೀಡ್ಯಸೀವನೀಂ ಸೂಕ್ಷ್ಮಾಂ ಗುಲ್ಫೇ ನೈಕೇನ ಮಧ್ಯತಃ । ಸವ್ಯೇ ದಕ್ಷಿಣ ಗುಲ್ಫೇನ ಮುಕ್ತಾಸನ ಮಿತೀರಿತಂ ॥

(೨) ಸಾ. ಮೂಲಾಧಾರಚಕ್ರದಿಂದ ವಾಯುವನ್ನು ಹೊರಡಿಸಿ, ಕ್ರಮವಾಗಿ ಸ್ವಾಧಿಷ್ಠಾನಚಕ್ರದಲ್ಲಿಯೂ, ನಾಭಿಯೆಂಬ ಮಣಿಪೂರಚಕ್ರದಲ್ಲಿಯೂ, ಹೃದಯವೆಂಬ ಅನಾಹತಚಕ್ರದಲ್ಲಿಯೂ, ಕಂಠದ ಕೆಳಗೆ ಎದೆಯಲ್ಲಿರುವ ವಿಶುದ್ಧಚಕ್ರದಲ್ಲಿಯೂ, ಆ ವಿಶುದ್ಧಚಕ್ರದ ಮೇಲ್ಗಡೆ ಭ್ರೂಮಧ್ಯದಲ್ಲಿರುವ ಆಜ್ಞಾಚಕ್ರದಲ್ಲಿಯೂ, ಎಲ್ಲಕ್ಕೂ ಮೇಲ್ಗಡೆ ಬ್ರಹ್ಮರಂಧ್ರವೆನಿಸಿರುವ ಸಹಸ್ರಾರ ಚಕ್ರದಲ್ಲಿಯೂ ಮೆಲ್ಲಮೆಲ್ಲನೆ ನಿಲ್ಲಿಸಿ ಕಡೆಗೆ ಕಡೆಗೆ ವಾಯು ಭೂತದಲ್ಲಿ ಲಯಗೊಳಿಸಿದನು.

ತ್ಯಾತ್ಮನಿ ಸಂದಧೇ ||೧೭|| ತಂ ಸರ್ವಗುಣವಿನ್ಯಾಸಂ ಜೀವೇ ಮಾಯಾ
ಮಯೇ ನ್ಯಧಾತ್ | ತಂ ಚಾಽನುಶಯ ಮಾತ್ಮಸ್ಥ ಮಸಾ ವನುಶಯೀ
ಪುಮಾನ್ | ಜ್ಞಾನವೈರಾಗ್ಯವೀರ್ಯೇಣ ಸ್ವರೂಪಸ್ಥೋಽಜಹಾತ್ಪ್ರ
ಭುಃ ||೧೮|| ಅರ್ಚಿರ್ನಾಮ ಮಹಾರಾಜ್ಞೀ ತತ್ಪತ್ನ್ಯನುಗತಾ ವನಂ | ಸು
ಕುಮಾರ್ಯತದರ್ಹಾ ಚ ಯತ್ಪದ್ಭ್ಯಾಂ ಸ್ಪರ್ಶನಂ ಭುವಃ ||೧೯|| ಅತೀವ
ಭರ್ತುರ್ವ್ರತ ! ಧರ್ಮನಿಷ್ಠಯಾ ಶುಶ್ರೂಷಯಾ ಚಾರ್ಷ ದೇಹಯಾತ್ರ

---

ದಲ್ಲಿರುವ ದ್ರವವನ್ನು, ತೋಯೇ - ಜಲದಲ್ಲಿಯೂ, ವಿಭಾಗಶಃ- ಬೇರೆಬೇರೆಯಾಗಿ, ಯಥಾಸ್ಥಾನಂ - ತಂತಮ್ಮ ಕಾರಣಗಳಲ್ಲಿ, ಅಯೂಯುಜತ್ - ಸೇರಿಸಿದನು. ಕ್ಷಿತಿಂ- ಭೂಮಿಯನ್ನು, ಅಂಭಸಿ - ಜಲದಲ್ಲಿಯೂ, ತತ್ - ಅದನ್ನು, ತೇಜಸಿ - ತೇಜಸ್ಸಿನಲ್ಲಿಯೂ, ಅದಃ - ಅದನ್ನು, ವಾಯೌ- ವಾಯುವಿನಲ್ಲಿಯೂ, ಅಮುಂ - ಇವನ್ನು, ನಭಸಿ - ಆಕಾಶದಲ್ಲಿಯೂ ಲಯಗೊಳಿಸಿದನು||೧೬|| ಇಂದ್ರಿಯೇಷು - ಇಂದ್ರಿಯಗಳಲ್ಲಿ, ಮನಃ - ಮನಸ್ಸನ್ನೂ, ತಾನಿ - ಆ ಇಂದ್ರಿಯಗಳನ್ನು, ತನ್ಮಾತ್ರೇಷು - ಶಬ್ದಾದಿಗಳಲ್ಲಿಯೂ, ಯಥೋದ್ಭವಂ - ಉತ್ಪತ್ತ್ಯನುಸಾರವಾಗಿ, ಅಮೂನಿ - ತನ್ಮಾತ್ರಗಳನ್ನು, ಭೂತಾದಿನಾ - ಅಹಂಕಾರದೊಡನೆಯೂ, ಉತ್ಕೃಷ್ಯ-ಲಯಗೊಳಿಸಿ, ಅದನ್ನು ಮಹತ್ಯಾತ್ಮನಿ-ಮಹತ್ತತ್ತ್ವದಲ್ಲಿ, ಸಂದಧೇ- ಸೇರಿಸಿದನು ||೧೭|| ಸರ್ವ....ಸಂ, ಸರ್ವಗುಣ - ಎಲ್ಲಾ ಮಾಯಾ ಗುಣಗಳ, ವಿನ್ಯಾಸಂ - ನೆಲೆಯುಳ್ಳ, ತಂ - ಆ ಮಹತ್ತತ್ತ್ವವನ್ನು, ಮಾಯಾಮಯೇ - ಮಾಯೋಪಾಧಿಕನಾದ, ಜೀವೇ-ಜೀವನಲ್ಲಿ, ನ್ಯಧಾತ್ ಇಟ್ಟನು, ಪ್ರಭು - ಸಮರ್ಥನಾದ, ಅನುಶಯಂ - ಉಪಾಧಿಯಿಂದ ಕೂಡಿದ, ಅಸೌ ಪುಮಾನ್ - ಈ ಪೃಥುವು, ಜ್ಞಾನ....ಣ-ಜ್ಞಾನವೈರಾಗ್ಯಗಳ ಬಲದಿಂದ, ಸ್ವರೂಪಸ್ಥಃ-ಬ್ರಹ್ಮೀಭಾವವನ್ನು ಪಡೆದು, ಆತ್ಮಸ್ಥಂ- ತನ್ನಲ್ಲಿರುವ, ತಂ ಅನುಶಯಂ ಚ -ಆ ಮಾಯೋಪಾಧಿಯನ್ನೂ, ಅಜಹಾತ್-ಬಿಟ್ಟನು ||೧೮|| ಪದ್ಭ್ಯಾಂ- ಪಾದಗಳಿಂದ, ಭುವಃ - ಭೂಮಿಯನ್ನು, ಸ್ಪರ್ಶನಂಯತ್-ಸೋಂಕುವುದಾವುದೋ, ಅತದರ್ಹಾ - ಅದನ್ನೂ ಸ್ಪರ್ಶಿಸಲಾರದ, ಸುಕುಮಾರೀ - ಕೋಮಲೆಯಾದ, ಅರ್ಚಿರ್ನಾಮ- ಅರ್ಚಿಯೆಂಬ, ಮಹಾರಾಜ್ಞೀ- ಮಹಾರಾಣಿಯಾದ, ತತ್ಪತ್ನೀ - ಆತನ ಹೆಂಡತಿಯು, ವನಂ - ಕಾಡಿಗೆ, ಅನುಗತಾ - ಹಿಂಬಾಲಿಸಿದ್ದಳಷ್ಟೇ ||೧೯|| ಬತ --ಅಕಟ, ಸಾ - ಆಕೆಯು, ಭರ್ತುಃ - ಗಂಡನ, ಧರ್ಮನಿಷ್ಠಯಾ - ಧರ್ಮದಲ್ಲಾ

---

ಜನಿಸಿದ ಆಕಾಶಾಂತಗಳಾದ ಭೂತಗಳನ್ನು ಲಯಗೊಳಿಸಿ, ಬಳಿಕ ಸಾತ್ವಿಕಾಹಂಕಾರದಿಂದ ಜನಿಸಿದ ಮನಸ್ಸನ್ನು ಜ್ಞಾನೇಂದ್ರಿಯಗಳಲ್ಲಿಯೂ, ಆ ಇಂದ್ರಿಯ ಗಳನ್ನು ಶಬ್ದಾದಿತನ್ಮಾತ್ರಗಳಲ್ಲಿಯೂ, ಅವುಗಳನ್ನು ಅಹಂಕಾರದಲ್ಲಿಯೂ, ಆ ಅಹಂಕಾರವನ್ನು ಮಹತ್ತತ್ತ್ವದಲ್ಲಿಯೂ ಲಯಗೊಳಿಸಿದನು ||೧೭|| ಸತ್ವಾದಿ ಗುಣವೈಷಮ್ಯದಿಂದುಂಟಾಗಿರುವ ಸಕಲ ಭೂತಗಳಿಗೂ ನೆಲೆಯೆನಿಸಿದ ಆ ಮಹತ್ತತ್ತ್ವವನ್ನು ಮಾಯೋಪಾಧಿಕನಾದ ಜೀವನಲ್ಲಿ ಲಯಗೊಳಿಸಿ, ಜ್ಞಾನವೈರಾಗ್ಯಗಳ ಬಲದಿಂದ ಬಳಿಕ ತನಗೆ(ಜೀವನಿಗೆ)ಉಪಾಧಿಯಾಗಿದ್ದ ಆ ಮಾಯೆಯನ್ನು ತೊರೆದು ಬ್ರಹ್ಮೀಭಾವವನ್ನು ಪಡೆದನು|| ತರುವಾಯ ಯಾವ ಮಹಾರಾಣಿಯು ತನ್ನಪಾದಕಮಲಗಳಿಂದ ನೆಲದಮೇಲೆ ನಡೆಯಲಾರದಂತಹ ಸುಕುಮಾರಿಯಾಗಿದ್ದಳೋ ಅಂತಹ ಅರ್ಚಿಯೆಂಬ ಪೃಥುಪತ್ನಿಯು ಗಂಡನೊಡನೆ ಕಾಡಿಗೆಬಂದು ಪತಿದೇವತೆಯಾದುದರಿಂದ ಗಂಡನಂತೆಯೇ ಭೂಶಯನ,ತ್ರಿಕಾಲಸ್ನಾನ, ಮೊದಲಾದ ವಾನಪ್ರಸ್ಥನಿಯಮಗಳಿಂದ

ಯಾ । ನಾಽವಿಂದತಾರ್ತಿಂ ಪರಿಕರ್ಶಿತಾಪಿ ಸಾ ಪ್ರೇಯಸ್ಕರ ಸ್ಪರ್ಶನ
ಮಾನ ನಿರ್ವೃತಿಃ ॥೨೦॥ ದೇಹಂ ವಿಪನ್ನಾಽಖಿಲಚೇತನಾದಿಕಂ ಪತ್ಯುಃ ಪೃ
ಥಿವ್ಯಾ ದಯಿತಸ್ಯ ಚಾತ್ಮನಃ । ಆಲಕ್ಷ್ಯ ಕಿಂಚಿಚ್ಚ ವಿಲಪ್ಯ ಸಾ ಸತೀ ಚಿ
ತಾ ಮಥಾಽರೋಪಯ ದದ್ರಿಸಾನುನಿ ॥೨೧॥ ವಿಧಾಯ ಕೃತ್ಯಂ ಹ್ರದಿ
ನೀಜಲಾಪ್ಲುತಾ ದತ್ತ್ವೋದಕಂ ಭರ್ತು ರುದಾರಕರ್ಮಣಃ । ನತ್ವಾ ದಿವಿ
ಸ್ಥಾನ್ ತ್ರಿದಶಾನ್ ತ್ರಿಃಪರೀತ್ಯ ವಿವೇಶ ವಹ್ನಿಂ ಧ್ಯಾಯತೀ ಭರ್ತೃಪಾ
ದೌ ॥೨೨॥ ವಿಲೋಕ್ಯಾಽನುಗತಾಂ ಸಾಧ್ವೀಂ ಪೃಥುಂ ವೀರವರಂ ಪ
ತಿಂ । ತುಷ್ಟುವು ರ್ವರದಾ ದೇವೈ ರ್ದೇವಪತ್ನ್ಯ ಸ್ಸಹಸ್ರಶಃ ॥೨೩॥ ಕುರ್ವ
ತ್ಯಃ ಕುಸುಮಾಸಾರಂ ತಸ್ಮಿ ನ್ಮಂದರಸಾನುನಿ । ನದ ತ್ಸ್ವಮರತೂರ್ಯೇ

---

ಸಕ್ತಿಯಿಂದಲೂ, ಶುಶ್ರೂಷಯಾ - ಸೇವೆಯಿಂದಲೂ, ಆರ್ಷ...ಯಾ — ಋಷ್ಯಾಹಾರದಿಂದಲೂ, ಪರಿಕ
ರ್ಶಿತಾಪಿ - ಬಡವಾಗಿದ್ದರೂ, ಪ್ರೇಯ....ತಿಃ, ಪ್ರೇಯಸ್ಕರ - ಪತಿಹಸ್ತದ, ಸ್ಪರ್ಶನ - ಸಂಸ್ಪರ್ಶವೆಂಬ,
ಮಾನ - ಸನ್ಮಾನದಿಂದ, ನಿರ್ವೃತಿಃ - ಸುಖವುಳ್ಳವಳಾಗಿ, ಆರ್ತಿಂ - ವ್ಯಥೆಯನ್ನು, ನಾವಿಂದತ - ಪಡೆ
ಯಲಿಲ್ಲ ॥೨೦॥ ಸಾ ಸತೀ - ಆ ಪತಿವ್ರತೆಯು, ಆತ್ಮನಃ - ತನಗೂ, ಪೃಥಿವ್ಯಾಃ - ಭೂಮಿಗೂ, ದಯಿತಸ್ಯ
ಪ್ರಿಯನಾದ, ಪತ್ಯುಃ - ಗಂಡನಾದ ಪೃಥುವಿನ, ದೇಹಂ - ಶರೀರವನ್ನು, ವಿಪ...ಕಂ - ಬುದ್ಧಿ, ಇಂದ್ರಿ
ಯ, ಬಲ ಮೊದಲಾದ ಚೇತನಗಳಿಲ್ಲದುದನ್ನಾಗಿ, ಆಲಕ್ಷ್ಯ - ಕಂಡು, ಕಿಂಚಿತ್ - ಕೊಂಚವಾಗಿ, ವಿ
ಲಪ್ಯ - ರೋದಿಸಿ, ಅಥ - ಬಳಿಕ, ಅದ್ರಿಸಾನುನಿ - ಬೆಟ್ಟದತಪ್ಪಲಲ್ಲಿ, ಚಿತಾಂ - ಚಿತೆಯನ್ನು, ಆರೋಪ
ಯತ್ - ಒಟ್ಟಿದಳು ॥೨೧॥ ಕೃತ್ಯಂ - ಕಾಲೋಚಿತಕಾರ್ಯವನ್ನು, ವಿಧಾಯ - ಮಾಡಿ, ಹ್ರದಿ...ತಾ -
ನದಿಯಲ್ಲಿ ಸ್ನಾನಮಾಡಿ, ಉದಾ....ಣಃ-ಅದ್ಭುತಕಾರ್ಯಗಳನ್ನುಮಾಡಿದ, ಭರ್ತುಃ - ಪತಿಗೆ, ಉದಕಂ -
ತರ್ಪಣವನ್ನು, ವಿಧಾಯ - ಮಾಡಿ, ದಿವಿಸ್ಥಾನ್ - ಸ್ವರ್ಗದಲ್ಲಿರುವ, ತ್ರಿದಶಾನ್ - ದೇವತೆಗಳನ್ನು, ನತ್ವಾ-
ವಂದಿಸಿ, ಭರ್ತೃಪಾದೌ - ಗಂಡನಪಾದಗಳನ್ನು, ಧ್ಯಾಯತೀ- ಧ್ಯಾನಿಸುತ್ತಾ, ತ್ರಿಃ- ಮೂರುಬಾರಿ, ಪರೀ
ತ್ಯ - ಪ್ರದಕ್ಷಿಣಮಾಡಿ, ವಹ್ನಿಂ - ಅಗ್ನಿಯನ್ನು, ವಿವೇಶ- ಹೊಕ್ಕಳು ॥೨೨॥ ವೀರವರಂ - ವೀರಶ್ರೇಷ್ಠ
ನಾದ, ಪತಿಂ - ಗಂಡನಾದ, ಪೃಥುಂ - ಪೃಥುವನ್ನು, ಅನುಗತಾಂ - ಹಿಂಬಾಲಿಸಿದ, ಸಾಧ್ವೀಂ - ಪತಿವ್ರ
ತೆಯಾದ ಅರ್ಚಿಯನ್ನು, ವಿಲೋಕ್ಯ - ಕಂಡು, ವರದಾಃ - ವರಗಳನ್ನುಕೊಡುವ, ದೇವಪತ್ನ್ಯಃ- ದೇವ

---

ಲೂ, ಪತಿಸೇವೆಯಿಂದಲೂ, ಕಂದಮೂಲ ಮೊದಲಾದ ಋಷ್ಯಾಹಾರದಿಂದಲೂ ಬಡವಾಗಿ
ದ್ದರೂ, ಪತಿಯ ಸಾನ್ನಿಧ್ಯದಲ್ಲಿದ್ದುಕೊಂಡು ಆತನಹಸ್ತಸ್ಪರ್ಶಾದಿ ಸನ್ಮಾನಗಳಿಂದ ಸಂತು
ಷ್ಟಳಾಗಿ ಸ್ವಲ್ಪವೂ ವ್ಯಥೆಪಡಲಿಲ್ಲ ॥೨೦॥ ಇಂತಹ ಆ ಮಹಾರಾಣಿಯು ತನಗೂ ಭೂದೇ
ವಿಗೂ ಸಹ ಪತಿಯಾಗಿದ್ದ ಪೃಥುರಾಜನ ಕಳೇಬರದಲ್ಲಿ ಬುದ್ಧಿ, ಇಂದ್ರಿಯ,ಪ್ರಾಣ, ಮೊದ
ಲಾದ ಚೇತನವೆಲ್ಲವೂ ತೊಲಗಿದುದನ್ನು ಕಂಡು, ಸ್ವಲ್ಪಹೊತ್ತಿನವರೆಗೂ ರೋದಿಸಿ, ವಿವೇಕ
ದಿಂದ ಧೈರ್ಯವನ್ನವಲಂಬಿಸಿ, ಕೂಡಲೇ ಕೆಲದಲ್ಲಿರುವ ಬೆಟ್ಟದ ತಪ್ಪಲಲ್ಲಿ ಚಿತಿಯನ್ನೊಡ್ಡಿ
ದಳು ॥೨೧॥ ಬಳಿಕ ಕಾಲೋಚಿತಗಳಾದ ಕೃತ್ಯಗಳನ್ನು ನೆರವೇರಿಸಿ ನದಿಯಲ್ಲಿ ಸ್ನಾನವನ್ನು
ಮಾಡಿ ಉದಾರಕೀರ್ತಿಯಾದ ಪತಿಗೆ ಜಲಾಂಜಲಿಯನ್ನಿತ್ತು, ಸ್ವರ್ಗವಾಸಿಗಳಾದ ದೇವತೆಗ
ಳನ್ನು ನಮಸ್ಕರಿಸಿ, ಅಗ್ನಿಜ್ವಾಲೆಗಳಿಂದ ಉರಿಯುತ್ತಿರುವ ಆ ಚಿತೆಯನ್ನು ಮೂರುಬಾರಿ

ಷು ಗೃಣಂತಿ ಸ್ಮ ಪರಸ್ಪರಂ ॥೨೪॥ ದೇವ್ಯಃ॥ ಅಹೋ ! ಇಯಂ ವಧೂ ರ್ಧನ್ಯಾ ಯಾ ಚೈವಂ ಭೂಭುಜಾಂ ಪತಿಂ । ಸರ್ವಾತ್ಮನಾ ಪತಿಂ ಭೇಜೇ ಯಜ್ಞೇಶಂ ಶ್ರೀ ರ್ವಧೂರಿವ ॥೨೫॥ ಸೈಷಾ ನೂನಂ ವ್ರಜತ್ಯೂರ್ಧ್ವ ಮನುವೈನ್ಯಂ ಪತಿಂ ಸತೀ । ಪಶ್ಯತಾ ಽ ಸ್ಮಾ ನತೀತ್ಯಾ ಽ ರ್ಚಿ ರ್ದುರ್ವಿಭಾವ್ಯೇನ ಕರ್ಮಣಾ ॥೨೬॥ ತೇಷಾಂ ದುರಾಪಂ ಕಿಂವಾ ಽ ನ್ಯ ನ್ಮರ್ತ್ಯಾನಾಂ ಭಗವತ್ಪದಂ। ಭುವಿ ಲೋಲಾಯುಷೋ ಯೇವೈ ನೈಷ್ಕರ್ಮ್ಯಂ ಸಾಧಯಂತ್ಯುತ ॥೨೭॥ ಸವಂಚಿತೋ ಬತಾತ್ಮಧ್ರುಕ್ ಕೃಚ್ಛ್ರೇಣ ಮಹತಾ

---

ಸ್ತ್ರೀಯರು, ದೇವ್ಯಃ - ದೇವತೆಗಳೊಡನೆ, ಸಹಸ್ರಶಃ - ಗುಂಪಾಗಿ, ತುಷ್ಟುವುಃ - ಹೊಗಳಿದರು ॥೨೩॥ ಅಮರತೂರ್ಯೇಷು - ದೇವದುಂದುಭಿಗಳು, ನದತ್ಸು - ಭೋರ್ಗರೆಯಲು, ತಸ್ಮಿನ್ - ಆ, ಮಂದರಸಾನುನಿ - ಮಂದರ ಪರ್ವತದ ತಪ್ಪಲಲ್ಲಿ, ಕುಸುಮಾಸಾರಂ - ಹೂಮಳೆಯನ್ನು, ಕುರ್ವತ್ಯಃ - ಕರೆಯುತ್ತಾ, ಪರಸ್ಪರಂ - ಅನ್ಯೋನ್ಯವಾಗಿ, ಗೃಣಂತಿಸ್ಮ - ಹೊಗಳಿದರು ॥೨೪॥ ಯಾ - ಯಾವಳು, ಭೂಭುಜಾಂ - ರಾಜರಿಗೆ, ಪತಿಂ - ಒಡೆಯನಾದ, ಪತಿಂ - ಗಂಡನನ್ನು, ಯಜ್ಞೇಶಂ - ಯಜ್ಞಪತಿಯಾದ ವಿಷ್ಣುವನ್ನು, ಶ್ರೀ - ಲಕ್ಷ್ಮಿಯೆಂಬ, ವಧೂರಿವ - ಹೆಂಡತಿಯಂತೆ, ಸರ್ವಾತ್ಮನಾ - ಸರ್ವಭಾವದಿಂದಲೂ, ಭೇಜೇ - ಹೊಂದಿದಳೋ, ಇಯಂವಧೂಃ - ಈ ಅರ್ಚಿಯು, ಧನ್ಯಾ - ಕೃತಾರ್ಥಳು, ಅಹೋ - ಆಶ್ಚರ್ಯವು ॥೨೫॥ ಸತೀ - ಪತಿವ್ರತೆಯಾದ, ಸೈಷಾಅರ್ಚಿಃ - ಈ ಅರ್ಚಿಯು, ದುರ್ವಿಭಾವ್ಯೇನ - ಯೋಚಿಸಲಳವಲ್ಲದ, ಕರ್ಮಣಾ - ಕರ್ಮದಿಂದ, ಅಸ್ಮಾನ್ - ನಮ್ಮನ್ನು, ಅತೀತ್ಯ - ಅತಿಕ್ರಮಿಸಿ, ಪತಿಂ - ಗಂಡನಾದ, ವೈನ್ಯಮನು - ಪೃಥುವನ್ನನುಸರಿಸಿ, ಊರ್ಧ್ವಂ - ಮೇಲಣಲೋಕಕ್ಕೆ, ವ್ರಜತಿ - ಹೋಗುತ್ತಿರುವಳು, ನೂನಂ - ದಿಟವು, ಪಶ್ಯತ - ನೋಡಿರಿ, ॥ ೨೬ ॥ ಯೇ - ಯಾರು, ಲೋಲಾಯುಷೋಪಿ - ಚಂಚಲವಾದ ಆಯುಸ್ಸುಳ್ಳವರಾದರೂ, ಭಗವತ್ಪದಂ - ಭಗವತ್ಪ್ರಾಪ್ತಿ ಸಾಧನವಾದ, ನೈಷ್ಕರ್ಮ್ಯಂ - ಜ್ಞಾನವನ್ನು, ಸಾಧಯಂತಿ - ಸಾಧಿಸುವರೋ, ತೇಷಾಂ ಮರ್ತ್ಯಾನಾಂ - ಆ ಮನುಷ್ಯರಿಗೆ, ಭುವಿ - ಭೂಮಿಯಲ್ಲಿ, ಅನ್ಯತ್ - ಬೇರೆ, ದುರಾಪಂ - ಹೊಂದಲಶಕ್ಯವಾದುದು, ಕಿಂ - ಏನು ? ॥೨೭॥ ಯಃ ಯಾವನು, ಭುವಿ-

---

ಪ್ರದಕ್ಷಿಣಮಾಡಿ ಪತಿಪಾದಕಮಲಗಳನ್ನು ಧ್ಯಾನಿಸುತ್ತಾ ಅಗ್ನಿಯನ್ನು ಪ್ರವೇಶಿಸಿದಳು ॥ ಇಂತು ಆಕೆಯು ಸಹಗಮನದಿಂದ ವೀರಾಗ್ರೇಸರನಾದ ಪೃಥುರಾಜನನ್ನು ಹಿಂಬಾಲಿಸಿದುದನ್ನು ಕಂಡು, ದೇವನಾರಿಯರು ಗುಂಪುಗುಂಪಾಗಿ ತಮ್ಮ ಪತಿಗಳಿಂದಕೂಡಿ, ಮಂದರಪರ್ವತದಲ್ಲಿ ಹೂಮಳೆಯನ್ನು ಸುರಿಸುತ್ತಾ, ವೀಣಾದಿವಾದ್ಯಗಳನ್ನು ಮೊಳಗಿಸುತ್ತಾ, ಪರಸ್ಪರವಾಗಿ ಹೊಗಳತೊಡಗಿದರು ॥೨೪॥ ,, ಆಹಾ ಆಶ್ಚರ್ಯವು. ರಮಾದೇವಿಯು ಶ್ರೀಹರಿಯನ್ನು ಹಿಡಿದು ಅನುಸರಿಸುವಂತೆ, ಈಕೆಯು ರಾಜಾಧಿರಾಜನಾದ ತನ್ನ ಗಂಡನನ್ನು ಸರ್ವಭಾವದಿಂದ ಹಿಂಬಾಲಿಸಿದುದರಿಂದ ಇವಳೇ ಧನ್ಯಳು ॥೨೫॥ ಅಮ್ಮಾ ಮಹಿಳೆಯರಿರಾ ! ಮಹಾಪತಿವ್ರತೆಯಾದ ಈ ಅರ್ಚಿಯು ಮಾತ್ರವ ಇತರ ಸ್ತ್ರೀಯರಿಂದಲೂ ಮಾಡಲಾಗದ ಸುಕೃತವಿಶೇಷದಿಂದ ಪತಿಯಾದ ಪೃಥುವನ್ನು ಅನುಸರಿಸಿ, ನಮ್ಮನ್ನೂ ಅತಿಕ್ರಮಿಸಿ ಊರ್ಧ್ವಲೋಕಕ್ಕೆ ತೆರಳುವುದನ್ನು ಕಂಡಿರಾ! ॥೨೬॥ ಈ ಭೂಮಿಯಲ್ಲಿ ಚಂಚಲಾಯುಷ್ಯರಾದ ಮಾನವರಾಗಿ ಜನಿಸಿದ್ದರೂ, ಯಾರು ಭಗವತ್ಪ್ರಾಪ್ತಿಗೆ ಸಾಧನವಾದ ಜ್ಞಾನವನ್ನು ಸಾಧಿಸುವರೋ,

ಭುವಿ । ಲಬ್ಧ್ವಾಪವರ್ಗ್ಯಂ ಮಾನುಷ್ಯಂ ವಿಷಯೇಷು ವಿಷಜ್ಜತೇ ॥೨೮॥
ವೈತ್ರೇಯ॥ ಸ್ತುವತೀಷ್ವಮರಸ್ತ್ರೀಷು ಪತಿಲೋಕಂ ಗತಾ ವಧೂಃ ।
ಯಂ॥ ವಾ ಆತ್ಮವಿದಾಂ ಧುರ್ಯೋ ವೈನ್ಯಃ ಪ್ರಾಪಾಽಚ್ಯುತಾಶ
ಯಃ ॥೨೯॥ ಇತ್ಥಂಭೂತಾಽನುಭಾವೋಽಸೌ ಪೃಥುಃ ಸ ಭಗವತ್ತಮಃ ।
ಕೀರ್ತಿತಂ ತಸ್ಯ ಚರಿತಮುದ್ದಾಮಚರಿತಸ್ಯ ತೇ ॥೩೦॥ ಯ ಇದಂ ಸುಮ
ಹತ್ಪುಣ್ಯಂ ಶ್ರದ್ಧಯಾಽವಹಿತಃ ಪಠೇತ್ । ಶ್ರಾವಯೇಚ್ಛೃಣುಯಾದ್ವಾಽ
ಪಿ ಸಪೃಥೋಃ ಪದವೀಮಿಯಾತ್ ॥೩೧॥ ಬ್ರಾಹ್ಮಣೋ ಬ್ರಹ್ಮವರ್ಚ

ಭೂಮಿಯಲ್ಲಿ. ಮಹತಾ - ಅಧಿಕವಾದ, ಕೃಛ್ರೇಣ - ಕಷ್ಟತರವಾದ ಸತ್ಕರ್ಮದಿಂದ, ಅಪವರ್ಗ್ಯಂ - ಮೋಕ್ಷಕ್ಕೆ ಸಾಧನವಾದ, ಮಾನುಷ್ಯಂ - ಮನುಷ್ಯಜನ್ಮವನ್ನು, ಲಬ್ಧ್ವಾಪಿ-ಹೊಂದಿದರೂ, ವಿಷಯೇಷು - ಶಬ್ದಾದಿ ವಿಷಯಗಳಲ್ಲಿ, ವಿಷಜ್ಜತೇ - ಲಂಪಟನಾಗುವನೋ, ಆತ್ಮದ್ರುಕ್ - ಆತ್ಮದ್ರೋಹಿಯಾದ, ಸಃ - ಅವನು, ವಂಚಿತಃ - ಮೋಸಹೋದವನೇ ಸರಿ, ಬತ- ಕಷ್ಟವು, ॥೨೮॥
... ಅಮರಸ್ತ್ರೀಷು - ದೇವಸ್ತ್ರೀಯರು, ಸ್ತುವತೀಷು - ಹೊಗಳುತ್ತಿರಲು, ವಧೂಃ - ಅರ್ಚಿಯು, ಆತ್ಮವಿದಾಂ - ಜ್ಞಾನಿಗಳಲ್ಲಿ, ಧುರ್ಯಃ - ಅಗ್ರಗಣ್ಯನಾದ, ಅಚ್ಯುತಾಶಯಃ - ವಿಷ್ಣುವಿನಲ್ಲಿ ಮನಸ್ಸುಳ್ಳ, ವೈನ್ಯಃ-ಪೃಥುವು, ಯಂ - ಯಾವಲೋಕವನ್ನು, ಪ್ರಾಪ - ಹೊಂದಿದನೋ, ತಂ ಪತಿಲೋಕಂ - ಆ ಪತಿಲೋಕವನ್ನು, ಗತಾ - ಹೊಂದಿದಳು ॥೨೯॥ ಭಗವತ್ತಮಃ- ಮಹಾತ್ಮರಲ್ಲಿ ಶ್ರೇಷ್ಠನಾದ, ಸಃ ಅಸೌಪೃಥುಃ - ಆ ಪೃಥುವು, ಇತ್ಥಂ...ವಃ - ಇಂತಹ ಮಹಿಮೆಯುಳ್ಳವನು, ಉದ್ದಾ...ಸ್ಯ- ಶ್ರೇಷ್ಠವಾದ ಚರಿತ್ರೆಯುಳ್ಳ, ತಸ್ಯ-ಅವನ, ಚರಿತಂ - ಚರಿತ್ರೆಯು, ತೇ - ನಿನಗೆ, ಕೀರ್ತಿತಂ - ವಿವರಿಸಲ್ಪಟ್ಟಿತು ॥೩೦॥ ಯಃ - ಯಾವನು, ಅವಹಿತಃ - ಏಕಾಗ್ರಮನಸ್ಕನಾಗಿ, ಸುಮಹತ್ - ಶ್ರೇಷ್ಠವಾದ, ಪುಣ್ಯಂ - ಪುಣ್ಯಾಕರವಾದ, ಇದಂ - ಈ ಚರಿತ್ರೆಯನ್ನು, ಶ್ರದ್ಧಯಾ - ಆದರದಿಂದ, ಪಠೇತ್- ಓದುವನೋ, ಶ್ರಾವಯೇತ್ ಶ್ರವಣಮಾಡಿಸುವನೋ, ಶೃಣುಯಾತ್ - ಕೇಳುವನೋ, ಸಃ- ಅವನು, ಪೃಥೋಃ-ಪೃಥುವಿನ, ಪದವೀಂ-ಸ್ಥಾನವನ್ನು, ಇಯಾತ್ - ಹೊಂದುವನು ॥ ೩೧ ॥ ಪಠನ್ - ಓದುವ, ಬ್ರಾಹ್ಮಣಃ - ಬ್ರಾಹ್ಮಣನು

ಅಂತಹ ಮಾನವರಿಗೆ ಯಾವುದು ತಾನೇ ದುರ್ಲಭವು?॥೨೭॥ ಅಕಟಾ! ಯಾರಾದರೆ ಅಸಾಧ್ಯಗಳಾದ ಬಹು ಜನ್ಮಸುಕೃತ ಸಂಸ್ಕಾರಗಳಿಂದ ಮಾನುಷ್ಯಜನ್ಮವನ್ನು ಪಡೆದರೂ, ತುಚ್ಛಗಳಾದ ಶಬ್ದಾದಿ ವಿಷಯಗಳಲ್ಲಿ ಲಂಪಟರಾಗುವರೋ, ಅವರಿಗಿಂತಲೂ ಮೋಸಹೋದವರಾಗಲಿ, ಆತ್ಮದ್ರೋಹಿಗಳಾಗಲಿ ಇರುವರೆ ?,, ಎಂದು ಕೊಂಡಾಡಿದರು ॥೨೮॥ ಇಂತು ದೇವಾಂಗನೆಯರು ಹೊಗಳುತ್ತಿರುವಾಗಲೇ, ಆ ಅರ್ಚಿರ್ದೇವಿಯು, ಜ್ಞಾನಿಶಿರೋಮಣಿಯೂ ವಿಷ್ಣುಭಕ್ತನೂ ಆದ ಪೃಥುರಾಜನಿಂದ ಹೊಂದಲ್ಪಟ್ಟ ಉತ್ತಮಲೋಕವನ್ನು ಹೊಂದಿದಳು ॥೨೯॥ ಅಯ್ಯಾ ವಿದುರನೆ ! ಭಾಗವತಾಗ್ರೇಸರನಾದ ಪೃಥುರಾಜನು ಇಂತಹ ಮಹಿಮಾವಂತನು. ಆತನ ಪವಿತ್ರವಾದ ಚರಿತ್ರೆಯನ್ನು ನಿನಗೆ ಹೇಳಿದೆನು ॥೩೦॥ ಯಾವ ಪುರುಷನು ಶ್ರದ್ಧೆಯಿಂದ ಪವಿತ್ರವಾದ ಈ ಪುಣ್ಯಚರಿತ್ರೆಯನ್ನು ಏಕಾಗ್ರಮನಸ್ಕನಾಗಿ ಓದುವನೋ, ಇತರರಿಗೆ ಹೇಳುವನೋ, ಅಥವಾ ಕೇಳುವನೋ, ಅವನು ಪೃಥುರಾಜನ ಪದವಿಯನ್ನೇ ಪಡೆಯುವನು ॥೩೧॥ ಈ ಇತಿಹಾಸವನ್ನು ಪಠಿಸುವ ಬ್ರಾಹ್ಮಣನು ಬ್ರಹ್ಮವರ್ಚಸ್ಸನ್ನೂ, ರಾಜನು

ಸ್ವೀ ರಾಜನ್ಯೋ ಜಗತೀಪತಿಃ । ವೈಶ್ಯಃ ಪರ್ಣ ವಿಟ್ಪತಿ ಸ್ಸ್ಯಾ ಚ್ಛೂದ್ರ ಸ್ಸತ್ತಮತಾ ಮಿಯಾತ್ ॥೪೩॥ ತ್ರಿಃ ಕೃತ್ವ ಇದಮಾಕರ್ಣ್ಯ ನರೋ ನಾ ರ್ಯಥವಾದೃತಾ । ಅಪ್ರಜ ಸ್ಸುಪ್ರಜತಮೋ ನಿರ್ಧನೋ ಧನವತ್ತಮಃ ॥ ಅಸ್ಪಷ್ಟಕೀರ್ತಿ ಸ್ಸುಯಶಾ ಮೂರ್ಖೋ ಭವತಿ ಪಂಡಿತಃ । ಇದಂ ಸ್ವ ಸ್ತ್ಯಯನಂ ಪುಂಸಾ ಮಮಂಗಲ್ಯನಿವಾರಣಂ ॥೪೪॥ ಧನ್ಯಂ ಯಶಸ್ಯ ಮಾ ಯುಷ್ಯಂ ಸ್ವರ್ಗ್ಯಂ ಕಲಿಮಲಾಽಪಹಂ। ಧರ್ಮಾರ್ಥ ಕಾಮಮೋಕ್ಷಾಣಾಂ ಸಮ್ಯಕ್ಸಿದ್ಧಿ ಮಭೀಪ್ಸುಭಿಃ । ಶ್ರದ್ಧಯೈತ ದನುಶ್ರಾವ್ಯಂ ಚತುರ್ಣಾಂ ಕಾ

---

ಬ್ರಹ್ಮವರ್ಚಸ್ವೀ - ಬ್ರಹ್ಮ ತೇಜಸ್ಸುಳ್ಳವನು, ರಾಜನ್ಯಃ - ರಾಜನು, ಜಗತೀಪತಿಃ - ಚಕ್ರವರ್ತಿಯೂ ವೈಶ್ಯಃ - ವೈಶ್ಯನು, ವಿಟ್ಪತಿಃ - ವೈಶ್ಯಾಗ್ರಣಿಯು, ಸ್ಯಾತ್ - ಆಗುವನು, ಶೂದ್ರಃ - ಶೂದ್ರನು, ಸತ್ತಮತಾಂ - ಸಾಧುತ್ವವನ್ನು, ಇಯಾತ್ - ಹೊಂದುವನು, ॥೪೩॥ ನರೋವಾ - ಪುರುಷನಾಗಲಿ, ಅಥವಾ, ನಾರೀವಾ - ಹೆಂಗಸಾಗಲಿ, ಆದೃತಾ - ಶ್ರದ್ಧೆಯಿಂದ, ತ್ರಿಃಕೃತ್ವಃ - ಮೂರುಬಾರಿ, ಇದಂ - ಇದನ್ನು, ಆಕರ್ಣ್ಯ - ಕೇಳಿ, ಅಪ್ರಜಾಃ - ಮಕ್ಕಳಿಲ್ಲದಲ್ಲಿ, ಸುಪ್ರಜತಮಃ -ಸತ್ಪುತ್ರರುಳ್ಳವನೂ, ನಿರ್ಧನಃ - ದರಿದ್ರನಾಗಿದ್ದಲ್ಲಿ, ಧನವತ್ತಮಃ - ಬಹಳ ಧನವುಳ್ಳವನು, ಅಸ್ಪಷ್ಟಕೀರ್ತಿಃ -ಪ್ರಸಿದ್ಧ ಕೀರ್ತಿಯಿಲ್ಲದವನು, ಸುಯಶಾಃ - ಒಳ್ಳೆಯ ಕೀರ್ತಿಯುಳ್ಳವನೂ, ಮೂರ್ಖಃ - ಮೂರ್ಖನು, ಪಂಡಿತಃ-ಪಂಡಿತನು, ಭವತಿ - ಆಗುತ್ತಾನೆ, ಇದಂ-ಇದು, ಪುಂಸಾಂ-ಪುರುಷರಿಗೆ, ಸ್ವಸ್ತ್ಯಯನಂ - ಶ್ರೇಯಸ್ಕರವು, ಅಮಂ....ಣಂ- ಅಶುಭಪರಿಹಾರವು ॥೪೪॥

ಧನ್ಯಂ - ಧನಪ್ರದವು, ಯಶಸ್ಯಂ - ಯಶಸ್ಕರವು, ಆಯುಷ್ಯಂ - ಆಯುಃಪ್ರದವು, ಸ್ವರ್ಗ್ಯಂ - ಸ್ವರ್ಗಫಲಪ್ರದವು, ಕಲಿ...ಹಂ- ಪಾಪಪರಿಹಾರಕವು, ಧರ್ಮಾ...ಣಾಂ-ಧರ್ಮ, ಅರ್ಥ, ಕಾಮ, ಮೋಕ್ಷಗಳ, ಸಮ್ಯಕ್ಸಿದ್ಧಿಂ - ಪೂರ್ಣಫಲವನ್ನು, ಅಭೀಪ್ಸುಭಿಃ - ಬಯಸುವವರಿಂದ, ಶ್ರದ್ಧಯಾ- ಆದರದಿಂದ ಚತುರ್ಣಾಂ - ನಾಲ್ಕು ಪುರುಷಾರ್ಥಗಳಿಗೂ, ಪರಂ - ಉತ್ತಮವಾದ, ಕಾರಣಂ- ಹೇತುವಾದ, ಏತತ್-

---

ಚಕ್ರವರ್ತಿಪದವಿಯನ್ನೂ, ವೈಶ್ಯನು ವೈಶ್ಯಪತಿತ್ವವನ್ನೂ, ಶೂದ್ರನು ಸಾಧುತ್ವವನ್ನೂ ಹೊಂದುವನು ॥೪೩॥ ಹೆಂಗಸಾಗಲಿ, ಗಂಡಸಾಗಲಿ ಯಾರಾದರೆ ಈ ಉಪಾಖ್ಯಾನವನ್ನು ಭಕ್ತಿಯಿಂದ ಮೂರುಬಾರಿಕೇಳುವರೋ, ಅವರು ತಮ್ಮ ಇಚ್ಛಾನುಸಾರವಾಗಿ, ಮಕ್ಕಳಿಲ್ಲದವರಾಗಿದ್ದಲ್ಲಿ ಒಳ್ಳೆಯಸಂತಾನವನ್ನೂ, ಬಡವರಾಗಿದ್ದಲ್ಲಿ ಗಜಾಂತೈಶ್ವರ್ಯವನ್ನೂ, ಕೀರ್ತಿರಹಿತರಾಗಿದ್ದಲ್ಲಿ ಜಗದ್ವಿಖ್ಯಾತಿಯನ್ನೂ, ಮೂರ್ಖನಾಗಿದ್ದಲ್ಲಿ ಪಾಂಡಿತ್ಯವನ್ನೂ, ಪಡೆಯುವರು ಈ ಚರಿತ್ರೆಯು ಜನರಿಗೆ ಶ್ರೇಯಸ್ಕರವು. ಅಶುಭಪರಿಹಾರಕವು. ॥೪೪॥ ಧನ, ಕೀರ್ತಿ, ಆಯುಸ್ಸು, ಸ್ವರ್ಗಮೊದಲಾದವುಗಳನ್ನು ಕೊಡತಕ್ಕುದು. ಸಕಲಪಾಪಗಳನ್ನೂ ಕಳೆಯುವುದು. ಆದುದರಿಂದ ಧರ್ಮಾರ್ಥಕಾಮ ಮೋಕ್ಷಗಳೆಂಬ ಪುರುಷಾರ್ಥಗಳನ್ನು ಬಯಸುವವರು ಈ ಚರಿತ್ರೆಯನ್ನು ಶ್ರದ್ಧೆಯಿಂದ ಶ್ರವಣಮಾಡಬೇಕು. ಇದು ಚತುರ್ವಿಧ

ರಣಂ ಪರಂ ॥೩೫॥ ವಿಜಯಾಽಭಿಮುಖೋ ರಾಜಾ ಶ್ರುತ್ವೈತ ದಭಿಯಾ
ತಿ ಯಾನ್ । ಬಲಿಂ ತಸ್ಮೈ ಹರಂತ್ಯಗ್ರೇ ರಾಜಾನಃ ಪೃಥವೇ ಯಥಾ ॥
ಮುಕ್ತಾಽನ್ಯಸಂಗೋ ಭಗವ ತ್ಯಮಲಾಂ ಭಕ್ತಿಮುದ್ವಹನ್ । ವೈನ್ಯಸ್ಯ
ಚರಿತಂ ಪುಣ್ಯಂ ಶೃಣುಯಾ ಚ್ಛ್ರಾವಯೇ ತ್ಪಠೇತ್॥೩೭॥ ವೈಚಿತ್ರವೀರ್ಯ!
ವಿಹಿತಂ ಮಹ ನ್ಮಾಹಾತ್ಮ್ಯಸೂಚಕಂ ।ಅಸ್ಮಿನ್ ಕೃತಮತಿ ರ್ಮರ್ತ್ಯಃ ಪಾ
ರ್ಥವೀಂ ಗತಿ ಮಾಪ್ನುಯಾತ್ ॥೩೮॥ ಅನುದಿನ ಮಿದ ಮಾದರೇಣ ಶೃಣ್ವನ್

ಇದು, ಅನುಶ್ರಾವ್ಯಂ - ಕೇಳತಕ್ಕದು ॥೩೫॥ ವಿಜ...ಖಃ - ಜೈತ್ರಯಾತ್ರೆಗೆ ಹೊರಟ, ರಾಜಾ-ರಾಜನು, ಏತತ್ - ಇದನ್ನು, ಶ್ರುತ್ವಾ-ಕೇಳಿ, ಯಾನ್ - ಯಾರನ್ನು, ಅಭಿಯಾತಿ-ಎದರಟ್ಟುವನೋ, ತಸ್ಮೈ-ಅವನಿಗೆ, ಪೃಥವೇ - ಪೃಥುವಿಗೆ, ರಾಜಾನೋಯಥಾ - ರಾಜರಂತೆ, ಬಲಿಂ - ಕಾಣಿಕೆಗಳನ್ನು, ಹರಂತಿ-ಒಪ್ಪಿಸುವರು ॥೩೬॥ ಮುಕ್ತಾ..ಗಃ - ಇತರ ಸಂಗವನ್ನುಳಿದು, ಭಗವತಿ - ಭಗವಂತನಲ್ಲಿ, ಅಮಲಾಂ - ನಿಷ್ಕಪಟವಾದ, ಭಕ್ತಿಂ-ಭಕ್ತಿಯನ್ನು, ಉದ್ವಹನ್-ಇಡುತ್ತಾ, ವೈನ್ಯಸ್ಯ -ಪೃಥುವಿನ, ಪುಣ್ಯಂ-ಪರಿಶುದ್ಧವಾದ, ಚರಿತಂ - ಚರಿತ್ರೆಯನ್ನು, ಶೃಣುಯಾತ್ - ಕೇಳಬೇಕು, ಶ್ರಾವಯೇತ್ - ಹೇಳಬೇಕು, ಪಠೇತ್ - ಓದಬೇಕು, ॥೩೭॥ ವೈಚಿತ್ರವೀರ್ಯ -ಎಲೈ ವಿಚಿತ್ರವೀರ್ಯನ ಮಗನಾದ ವಿದುರನೆ ! ಮಹತ್ - ವಿಸ್ತಾರವಾದ, ಮಾಹಾತ್ಮ್ಯಸೂಚಕಂ - ಮಹಿಮೆಯನ್ನು ಸೂಚಿಸುವ ಚರಿತ್ರೆಯು, ವಿಹಿತಂ - ಹೇಳಲ್ಪಟ್ಟಿತು, ಅಸ್ಮಿನ್-ಈ ಚರಿತ್ರೆಯಲ್ಲಿ, ಕೃತಮತಿಃ - ಬುದ್ಧಿಯುಳ್ಳ, ಮರ್ತ್ಯಃ - ಮನುಷ್ಯನು, ಪಾರ್ಥಿವೀಂ - ಪೃಥುವಿನ, ಗತಿಂ - ಪುಣ್ಯಗತಿಯನ್ನು, ಆಪ್ನುಯಾತ್ - ಹೊಂದುವನು ॥೩೮॥ ಅನುದಿನಂ - ನಿತ್ಯವೂ, ಆದರೇಣ - ಆದರದಿಂದ, ಇದಂ - ಈ, ಪೃಥುಚರಿತಂ - ಪೃಥುಚರಿತ್ರೆಯನ್ನು, ಆದರೇಣ - ಶ್ರದ್ಧೆಯಿಂದ, ಶೃಣ್ವನ್ - ಕೇಳುವವನು, ವಿಮುಕ್ತಸಂಗಃ-ಸಂಗರಹಿತನಾಗಿ, ಭವ...ದೇ, ಭವ - ಸಂಸಾರವೆಂಬ, ಸಿಂಧು - ಸಮುದ್ರಕ್ಕೆ, ಪ್ಲೋತ - ಹಡಗಿನಂತಿರುವ, ಪಾದೇ - ಪಾದವುಳ್ಳ, ಭಗ

ಪುರುಷಾರ್ಥಗಳಿಗೂ ಮುಖ್ಯಸಾಧನವು ॥೩೫॥ ರಾಜನಾದವನು ಜೈತ್ರಯಾತ್ರೆಗೆ ಹೊರಡುವಾಗ ಇದನ್ನು ಕೇಳಿ ಯಾರಮೇಲೆ ಯುದ್ಧಕ್ಕೆ ತೆರಳುವನೋ, ಆರಾಜರೆಲ್ಲರೂ, ಮುನ್ನ ಪೃಥುರಾಜನಿಗೆ ಇತರರಾಜರು ಕಾಣಿಕೆಗಳನ್ನಿತ್ತಂತೆ ಆತನಿಗೆ ಕಪ್ಪಗಳನ್ನೊಪ್ಪಿಸುವರು ॥೩೬॥ ಪವಿತ್ರವಾದ ಈ ಪೃಥುಚರಿತ್ರೆಯನ್ನು ಭಕ್ತಿಯಿಂದ ಕೇಳುವವನು ಸಕಲ ಸಂಗ ಪರಿತ್ಯಾಗವಮಾಡಿ, ಭಗವಂತನಲ್ಲಿ ಅನನ್ಯವಾದ ಭಕ್ತಿಯನ್ನಿಟ್ಟು ಇದರ ಶ್ರವಣಮನನಾದಿಗಳನ್ನು ಮಾಡಬೇಕು ॥೩೭॥ ಅಯ್ಯಾ ವಿದುರನೆ ! ದಿವ್ಯ ಮಹಿಮೆಯುಳ್ಳ ಈ ಪೃಥುಚರಿತ್ರೆಯನ್ನಿಂತು ನಿನಗೆ ವಿವರಿಸಿದೆನು. ಈ ಚರಿತ್ರೆಯಲ್ಲಿ ಮನಸ್ಸನ್ನಿಟ್ಟು ಪಠನಾದಿಗಳನ್ನು ಮಾಡುವವನು ಪೃಥುವಿನ ಸದ್ಗತಿಯನ್ನೇ ಪಡೆಯುವನು ॥೩॥ ಆದಕಾರಣ ಪ್ರತಿದಿನವೂ ಶ್ರದ್ಧಾಪುರಸ್ಸರವಾಗಿ ಈ ಚರಿತ್ರೆಯ ಶ್ರವಣಮನನಾದಿಗಳನ್ನು ಮಾಡುವವನು, ನಿಸ್ಸಂಗನಾಗಿ, ಸಂಸಾರವೆಂಬ ಸಮುದ್ರಕ್ಕೆ ಹಡಗಿನಂತಿರುವ ಪಾದಕಮಲವುಳ್ಳ ಪದ್ಮನಾಭಮೂರ್ತಿಯಲ್ಲಿ ನಿರತಿಶಯವಾದ ಭಕ್ತಿಯನ್ನು ಪಡೆದು ಕೃತಾರ್ಥನಾಗುತ್ತಾನೆ, ಎಂದು ಮೈ

ಪೃಥುಚರಿತಂ ಪ್ರಥಯನ್ ವಿಮುಕ್ತಸಂಗಃ । ಭಗವತಿ ಭವಸಿಂಧುಪೋತ
ಪಾದೇ ಸಚ ನಿಪುಣಾಂ ಲಭತೇ ರತಿಂ ಮನುಷ್ಯಃ ॥೩೯॥

— ಇತಿ ತ್ರಯೋವಿಂಶೋಽಧ್ಯಾಯಃ —

ವತಿ - ಭಗವಂತನಲ್ಲಿ, ಸಚಮನುಷ್ಯಃ - ಆ ಮನುಷ್ಯನು, ನಿಪುಣಾಂ - ಚೆನ್ನಾಗಿ, ರತಿಂ - ಪ್ರೀತಿಯು
ನ್ನು, ಲಭತೇ - ಪಡೆಯುತ್ತಾನೆ ॥೩೯॥

— ತ್ರಯೋವಿಂಶಾಧ್ಯಾಯಂ ಸಮಾಪ್ತಂ —

ತ್ರೇಯಮುನಿಯು ವಿದುರನಿಗೆ ಹೇಳಿದನೆಂಬಲ್ಲಿಗೆ ಭಾಗವತ ಚಕೋರಚಂದ್ರಿಕೆಯೊಳ್

— ಇಪ್ಪತ್ತು ಮೂರನೆ ಅಧ್ಯಾಯಂ ಮುಗಿದುದು —

## ಓಂ ನಮಃ ಪರಮಾತ್ಮನೇ

— ಅಥ ಚತುರ್ವಿಂಶೋಽಧ್ಯಾಯಃ —

ಮೈತ್ರೇಯಃ ॥ ವಿಜಿತಾಶ್ವೋಽಧಿರಾಜಾಸೀತ್ ಪೃಥುಪುತ್ರಃ ಪೃಥುಶ್ರ
ವಾಃ । ಯವೀಯೋಭ್ಯೋಽದದಾತ್ಕಾಷ್ಠಾ ಭ್ರಾತೃಭ್ಯೋ ಭ್ರಾತೃವತ್ಸ
ಲಃ ॥೧॥ ಹರ್ಯಕ್ಷಾಯಾದಿಶತ್ಪ್ರಾಚೀಂ ಧೂಮ್ರಕೇಶಾಯ ದಕ್ಷಿಣಾಂ ।
ಪ್ರತೀಚೀಂ ವೃಕಸಂಜ್ಞಾಯ ತುರ್ಯಾಂ ದ್ರವಿಣಸೇ ವಿಭುಃ ॥೨॥ ಅಂತರ್ಧಾನ

— ಚತುರ್ವಿಂಶಾಧ್ಯಾಯಂ —

ಕಂ॥ ಜಗತೀಪತಿ ಪೃಥುವಿನಮಗ । ನ್ಮಗನಹ ಪ್ರಾಚೀನಬರ್ಹಿ ಗಾತ್ಮಜನೆನಿಪಾ ।
ಸುಗುಣ ಪ್ರಚೇತಸರಿಗಿಂ । ದೊಗುಮಿಗೆಯಿಂ ರುದ್ರಗೀತೆಯಂ ವಿವರಿಸಗುಂ ।

ಮೈತ್ರೇಯನು ಹೇಳುತ್ತಾನೆ, ಪೃಥುಶ್ರವಾಃ - ವಿಶಾಲಕೀರ್ತಿಯುಳ್ಳ, ಪೃಥುಪುತ್ರಃ - ಪೃಥುವಿನ
ಮಗನಾದ, ವಿಜಿತಾಶ್ವಃ - ವಿಜಿತಾಶ್ವನು, ಅಧಿರಾಜಾ - ಚಕ್ರವರ್ತಿಯು, ಆಸೀತ್ - ಆದನು, ಭ್ರಾತೃ
ವತ್ಸಲಃ - ಸೋದರಪ್ರೀತಿಯುಳ್ಳವನಾದುದರಿಂದ, ಯವೀಯೋಭ್ಯಃ - ಕಿರಿಯುವರಾದ, ಭ್ರಾತೃಭ್ಯಃ -
ತಂತಮ್ಮಂದಿರಿಗೆ, ಕಾಷ್ಠಾಃ - ದಿಕ್ಕುಗಳನ್ನು, ಅದದಾತ್ - ಕೊಟ್ಟನು ॥೧॥ ವಿಭುಃ - ವಿಜಿತಾಶ್ವನು,
ಹರ್ಯಕ್ಷಾಯ - ಹರ್ಯಕ್ಷನಿಗೆ, ಪ್ರಾಚೀಂ - ಪೂರ್ವದಿಕ್ಕನ್ನೂ, ಧೂಮ್ರಕೇಶಾಯ - ಧೂಮ್ರಕೇಶನಿಗೆ.
ದಕ್ಷಿಣಾಂ - ದಕ್ಷಿಣದಿಕ್ಕನ್ನೂ, ವೃಕಸಂಜ್ಞಾಯ - ವೃಕನಿಗೆ, ಪ್ರತೀಚೀಂ - ಪಶ್ಚಿಮವನ್ನೂ, ದ್ರವಿಣಸೇ-
ದ್ರವಿಣನಿಗೆ, ತುರ್ಯಾಂ - ನಾಲ್ಕನೆಯ ಉತ್ತರದಿಕ್ಕನ್ನೂ, ಅದಿಶತ್ - ಕೊಟ್ಟನು ॥೨॥ ಶಕ್ರಾತ್ -

ಇಪ್ಪತ್ತುನಾಲ್ಕನೆಯ ಅಧ್ಯಾಯ.

— ಪ್ರಚೇತಸರಿಗೆ ರುದ್ರಗೀತೆಯನ್ನುಪದೇಶಿಸುವುದು —

ಅನಂತರದಲ್ಲಿ ಮೈತ್ರೇಯನು ಹೇಳುತ್ತಾನೆ.—ಅಯ್ಯಾ ವಿದುರನೆ! ಕೇಳು. ತರುವಾ
ಯ ಪೃಥುತನೂಜನೂ ವಿಶಾಲಕೀರ್ತಿಯೂ ಆದ ವಿಜಿತಾಶ್ವನು ಚಕ್ರವರ್ತಿ ಪದವಿಯನ್ನು
ಪಡೆದು ಭ್ರಾತೃವತ್ಸಲನಾದುದರಿಂದ ತನ್ನ ತಮ್ಮಂದಿರಿಗೆಲ್ಲರಿಗೂ ಕ್ರಮವಾಗಿ ದಿಕ್ಕುಗಳನ್ನು
ಹಂಚಿಕೊಟ್ಟನು ॥೧॥ ಅವರಲ್ಲಿ ಹರ್ಯಕ್ಷನು ಮೂಡಣನಾಡುಗಳನ್ನೂ, ಧೂಮ್ರಕೇಶನು
ತೆಂಕಣಸೀಮೆಯನ್ನೂ, ವೃಕನು ಪಡುವಣರಾಜ್ಯವನ್ನೂ, ದ್ರವಿಣನು ಬಡಗಣ ದೇಶಗಳ
ನ್ನೂ ಪಡೆದನು ॥೨॥ ಮುನ್ನ ಪೃಥುವಿನ ಅಶ್ವಮೇಧಕಾಲದಲ್ಲಿ ಇಂದ್ರನಿಂದ ಅಂತರ್ಧಾನ

ನಗತಿಂ ಶಕ್ರಾಲ್ಲಬ್ಧ್ವಾಂತರ್ಧಾನ ಸಂಜ್ಞಿತಃ।ಅಪತ್ಯತ್ರಯ ಮಾಧತ್ತ ಶಿಖಂಡಿನ್ಯಾಂ ಸುಸಮ್ಮತಂ ॥೩॥ ಪಾವಕಃ ಪವಮಾನಶ್ಚ ಶುಚಿ ರಿತ್ಯಗ್ನಯಃ ಪುರಾ । ವಶಿಷ್ಠಶಾಪಾ ದುತ್ಪನ್ನಾಃ ಪುನರ್ಯೋಗಗತಿಂ ಗತಾಃ ॥ ೪ ॥ ಅಂತರ್ಧಾನೋ ನಭಸ್ವತ್ಯಾಂ ಹವಿರ್ಧಾನ ಮವಿಂದತ । ಯ ಇಂದ್ರ ಮಶ್ವಹರ್ತಾರಂ ವಿದ್ವಾನಪಿ ನಜಘ್ನಿವಾನ್ ॥೫॥ ರಾಜ್ಞಾಂ ವೃತ್ತಿಂ ಕರಾದಾನದಂಡಶುಲ್ಕಾದಿದಾರುಣಾಂ । ಮನ್ಯಮಾನೋ ದೀರ್ಘಸತ್ರವ್ಯಾಜೇನ ವಿಸಸರ್ಜ ಹ ॥೬॥ ತತ್ರಾಽಪಿ ಹಂಸಂ ಪುರುಷಂ ಪರಮಾತ್ಮಾನಮಾತ್ಮದೃಕ್ ।

---

ಇಂದ್ರನಿಂದ, ಅಂತರ್ಧಾನಗತಿಂ - ಅಂತರ್ಧಾನವಿದ್ಯೆಯನ್ನು. ಲಬ್ಧ್ವಾ - ಪಡೆದು, ಅಂತ....ತಃ - ಅಂತರ್ಧಾನನೆಂದು ಹೆಸರುಗೊಂಡ ವಿಜಿತಾಶ್ವನು, ಶಿಖಂಡಿನ್ಯಾಂ - ಶಿಖಂಡಿನಿಯಲ್ಲಿ, ಸುಸಮ್ಮತಂ - ಅನುಕೂಲರಾದ, ಅಪ...ಯಂ - ಮೂವರುಮಕ್ಕಳನ್ನು, ಆಧತ್ತ-ಪಡೆದನು ॥೩॥ ಪಾವಕ, ಪವಮಾನ, ಶುಚಿ, ಇತಿ - ಎಂಬ, ಅಗ್ನಯಃ - ಅಗ್ನಿಗಳು, ಪುರಾ - ಮೊದಲು, ವಶಿಷ್ಠಶಾಪಾತ್ - ವಶಿಷ್ಠಮುನಿಯಶಾಪದಿಂದ, ಉತ್ಪನ್ನಾಃ - ಜನಿಸಿ, ಪುನಃ - ಮರಳಿ, ಯೋಗಗತಿಂ - ನಿಜರೂಪವನ್ನು, ಗತಾಃ-ಪಡೆದರು॥೪॥ ಯಃ - ಯಾವನು, ಅಶ್ವಹರ್ತಾರಂ - ಕುದುರೆಗಳ್ಳನಾದ, ಇಂದ್ರಂ - ಇಂದ್ರನನ್ನು, ವಿದ್ವಾನಪಿ - ತಿಳಿದಿದ್ದರೂ, ನಜಘ್ನಿವಾನ್ - ಕೊಲ್ಲಲಿಲ್ಲವೋ, ಅಂತಹ, ಅಂತರ್ಧಾನಃ - ವಿಜಿತಾಶ್ವನು, ನಭಸ್ವತ್ಯಾಂ - ನಭಸ್ವತಿಯೆಂಬ ಬೇರೆ ಹೆಂಡತಿಯಲ್ಲಿ, ಹವಿರ್ಧಾನಂ-ಹವಿರ್ಧಾನನೆಂಬ ಮಗನನ್ನು,ಅವಿಂದತ-ಪಡೆದನು॥೫॥ (ಅವನು) ರಾಜ್ಞಾಂ - ರಾಜರ, ವೃತ್ತಿಂ - ನಡವಳಿಯನ್ನು, ಕರಾ....ಣಾಂ - ಕಾಣಿಕೆಯನ್ನು ಗ್ರಹಿಸುದು, ದಂಡಿಸುವುದು, ತೆರಿಗೆ ಮೊದಲಾದುವುಗಳಿಂದ, ಕ್ರೂರವನ್ನಾಗಿ, ಮನ್ಯಮಾನಃ-ತಿಳಿದು, ದೀರ್ಘ ...ನ -ಬಹುಕಾಲ ನಡೆಯತಕ್ಕ ಸತ್ರಯಾಗದ ನೆವದಿಂದ, ವಿಸಸರ್ಜಹ - ತೊರೆದನು ॥೬॥ ತತ್ರಾಪಿ - ಆ

---

ವಿದ್ಯೆಯನ್ನು ಸಂಪಾದಿಸಿ ಅಂತರ್ಧಾನನೆಂದು ಹೆಸರನ್ನು ಪಡೆದಿರುವ ವಿಜಿತಾಶ್ವನು ಶಿಖಂಡಿನಿಯೆಂಬುವಳನ್ನು ಮದುವೆಯಾಗಿ, ಆಕೆಯಲ್ಲಿ ಅನುಕೂಲರಾದ ಮೂವರುಮಕ್ಕಳನ್ನು ಪಡೆದನು ॥೩॥ ಮುನ್ನು ವಶಿಷ್ಠಶಾಪವನ್ನು ಪಡೆದ ಪಾವಕ, ಪವಮಾನ, ಶುಚಿ, ಎಂಬ ಮೂವರು ಅಗ್ನಿಗಳೇ ಈ ವಿಜಿತಾಶ್ವನಲ್ಲಿ ಪುತ್ರರಾಗಿ ಜನಿಸಿ ಶಾಪಮುಕ್ತರಾಗಿ ನಿಜರೂಪವನ್ನು ಪಡೆದರು ॥೪॥ ಯಾವ ಶೂರನು ಮುನ್ನು ಕುದುರೆಗಳ್ಳನಾದ ಇಂದ್ರನನ್ನು ಕಂಡರೂ ಕೊಲ್ಲದೆ ಅವನಿಂದ ಅಂತರ್ಧಾನವಿದ್ಯೆಯನ್ನು ಸಂಪಾದಿಸಿದನೋ, ಅಂತಹ ವಿಜಿತಾಶ್ವನ ನಭಸ್ವತಿಯೆಂಬ ಮತ್ತೋರ್ವ ಪತ್ನಿಯಲ್ಲಿ ಹವಿರ್ಧಾನನೆಂಬ ಪುತ್ರನನ್ನು ಪಡೆದನು ॥ ೫॥ ಆ ಹವಿರ್ಧಾನನು ಜನರಿಂದ ಕಾಣಿಕೆಗಳನ್ನು ಪಡೆಯುವುದು, ದಂಡಿಸುವುದು,ತೆರಿಗೆಗಳನ್ನು ಕೊಳ್ಳುವುದು,ಇವು ಮೊದಲಾದ ರಾಜರ ನಡವಳಿಗಳು ಬಹಳ ಕ್ರೂರಗಳೆಂದು ತಿಳಿದು, ದೀರ್ಘಕಾಲನಡೆಯುವ ಸತ್ರಯಾಗವನ್ನು ಮಾಡುವ ನೆವದಿಂದ ಕ್ಷತ್ರಿಯ ವೃತ್ತಿಯನ್ನು ತೊರೆದುಬಿಟ್ಟನು ॥ ೬ ॥ ಆ ಸತ್ರಯಾಗದಲ್ಲಿಯೂ ಕಾಮ್ಯಕರ್ಮಾಚರಣದಿಂದ ಕಾಲವನ್ನು

ಯಜಂ ಸ್ತಲ್ಲೋಕತಾ ಮಾಪ ಕುಶಲೇನ ಸಮಾಧಿನಾ ॥೭॥ ಹವಿರ್ಧಾ
ನಾ ದ್ಧವಿರ್ಧಾನೀ ವಿದುರಾ ಽಸೂತ ಷಟ್ಸುತಾನ್ । ಬರ್ಹಿಷದಂ ಗಯಂ
ಶುಕ್ಲಂ ಕೃಷ್ಣಂ ಸತ್ಯಂ ಜಿತವ್ರತಂ ॥೮॥ ಬರ್ಹಿಷ ತ್ಸುಮಹಾಭಾಗೋ ಹ
ವಿರ್ಧಾನಿಃ ಪ್ರಜಾಪತಿಃ । ಕ್ರಿಯಾಕಾಂಡೇಷು ನಿಷ್ಣಾತೋ ಯೋಗೇಷು
ಚ ಕುರೂದ್ವಹ! ॥೯॥ ಯಸ್ಯೇದಂ ದೇವಯಜನ ಮನುಯಜ್ಞಂ ವಿತನ್ವತಃ।
ಪ್ರಾಚೀನಾಗ್ರೈಃ ಕುಶೈರಾಸೀ ದಾಸ್ತೃತಂ ವಸುಧಾತಲಂ ॥೧೦॥ ಸಾಮು
ದ್ರೀಂ ದೇವದೇವೋಕ್ತಾ ಮುಪಯೇಮೇ ಶತ*ಧೃತಿಂ । ಯಾಂವೀಕ್ಷ್ಯ

---

ಸತ್ರಯಾಗದಲ್ಲಿಯೂ, ಆತ್ಮದೃಕ್ - ಬ್ರಹ್ಮವೇತ್ತನಾದ ಅಂತರ್ಧಾನನು, ಹಂಸಂ-ಉಪಾಸಕರ ಕ್ಲೇಶಗಳನ್ನು ಕಳೆಯುವ, ಪುರುಷಂ - ಪೂರ್ಣನಾದ, ಪರಮಾತ್ಮಾನಂ-ಪರಮಾತ್ಮನನ್ನು, ಕುಶಲೇನ-ಪುಣ್ಯಾಕರವಾದ, ಸಮಾಧಿನಾ - ಯೋಗದಿಂದ, ಯಜನ್ - ಆರಾಧಿಸಿ, ತಲ್ಲೋಕತಾಂ-ಪರಮಾತ್ಮಲೋಕವನ್ನು, ಅವಾಪ - ಪಡೆದನು ॥ ೭ ॥ ವಿದುರ - ವಿದುರನೆ ! ಹವಿರ್ಧಾನಾತ್ - ಹವಿರ್ಧಾನನಿಂದ, ಹವಿರ್ಧಾನೀ - ಹವಿರ್ಧಾನನ ಹೆಂಡತಿಯು, ಬರ್ಹಿಷದ, ಗಯ, ಶುಕ್ಲ, ಕೃಷ್ಣ, ಸತ್ಯ, ಜಿತವ್ರತರೆಂಬ, ಷಟ್ - ಆರುಮಂದಿ, ಸುತಾನ್ - ಮಕ್ಕಳನ್ನು, ಅಸೂತ - ಹೆತ್ತಳು ॥೮॥ ಮಹಾಬಾಹೋ-ಮಹಾಶೂರನಾದ, ಕುರೂದ್ವಹ - ವಿದುರನೆ ! ಸುಮಹಾಭಾಗಃ - ಮಹಾತ್ಮನಾದ, ಹವಿರ್ಧಾನಿಃ - ಹವಿರ್ಧಾನನಮಗನಾದ, ಬರ್ಹಿಷತ್ - ಬರ್ಹಿಷದನು, ಪ್ರಜಾಪತಿಃ - ಪ್ರಜೆಗಳನ್ನು ಸಲಹುತ್ತಾ, ಕ್ರಿಯಾಕಾಂಡೇಷು - ಕರ್ಮಕಾಂಡದಲ್ಲಿಯೂ, ಯೋಗೇಷುಚ - ಯಮನಿಯಮಾದಿಯೋಗಗಳಲ್ಲಿಯೂ, ನಿಷ್ಣಾತಃ - ಪಾರಂಗತನಾಗಿದ್ದನು ॥೯॥ ಅನು - ಪ್ರತಿಸ್ಥಲದಲ್ಲಿಯೂ, ಯಜ್ಞಂ - ಯಜ್ಞವನ್ನು, ವಿತನ್ವತಃ - ಮಾಡುವ, ಯಸ್ಯ - ಯಾವನಿಗೆ, ಪ್ರಾಚೀನಾಗ್ರೈಃ - ಪೂರ್ವಮುಖಗಳಾದ ತುದಿಗಳುಳ್ಳ, ಕುಶೈಃ - ದರ್ಭೆಗಳಿಂದ, ಆಸ್ತೃತಂ - ಹರಡಲ್ಪಟ್ಟ, ಇದಂ ವಸುಧಾತಲಂ - ಈ ಭೂಮಿಯು, ದೇವಯಜನಂ - ಯಜ್ಞಭೂಮಿಯು, ಆಸೀತ್ - ಆಯಿತೋ ॥೧೦॥ ಉದ್ವಾಹೇ - ವಿವಾಹಕಾಲದಲ್ಲಿ, ಚಾರು....ಗೀಂ - ಸರ್ವಾಂಗಸುಂದರಿಯಾದ, ಕಿಶೋರೀಂ - ಬಾಲೆಯಾದ, ಸುಷ್ಠು - ಚೆನ್ನಾಗಿ, ಅಲಂಕೃತಾಂ - ಅಲಂಕರಿಸಲ್ಪಟ್ಟ,

---

ಕಳೆಯುದೆ, ಬ್ರಹ್ಮಜ್ಞಾನಸಂಪನ್ನನಾಗಿ ಉಪಾಸಕರ ಕ್ಲೇಶಗಳನ್ನು ಕಳೆಯತಕ್ಕವನೂ, ಸರ್ವವ್ಯಾಪ್ತನೂ, ಆದ ಪರಮಾತ್ಮನನ್ನು ನಿರ್ಮಲವಾದ ಜ್ಞಾನಯೋಗದಿಂದ ಆರಾಧಿಸಿ ಬ್ರಹ್ಮೀಭಾವವನ್ನು ಪಡೆದನು ॥೭॥ ಆ ಹವಿರ್ಧಾನನಿಂದ ಆತನ ಪತ್ನಿಯಾದ ಹವಿರ್ಧಾನಿಯು, ಬರ್ಹಿಷದ, ಗಯ, ಶುಕ್ಲ, ಕೃಷ್ಣ, ಸತ್ಯ, ಜಿತವ್ರತರೆಂಬ ಆರುಮಂದಿ ಮಕ್ಕಳನ್ನು ಪಡೆದಳು ॥೮॥ ಅವರಲ್ಲಿ ಹಿರಿಯವನಾಗಿಯೂ ಮಹಾಭಾಗ್ಯಸಂಪನ್ನನಾಗಿಯೂ ಇರುವ ಬರ್ಹಿಷದನು ಕರ್ಮಕಾಂಡದಲ್ಲಿಯೂ ಯೋಗಮಾರ್ಗದಲ್ಲಿಯೂ ನಿರತನಾಗಿ ಧರ್ಮದಿಂದ ಪ್ರಜೆಗಳನ್ನು ಸಲಹುತ್ತಿದ್ದನು ॥೯॥ ಆ ಹವಿರ್ಧಾನನು ಈ ಭೂಮಂಡಲವನ್ನೆಲ್ಲಾ ಯಜ್ಞಶಾಲೆಯನ್ನಾಗಿ ಮಾಡಿಕೊಂಡು ಪ್ರತಿಸ್ಥಲದಲ್ಲಿಯೂ ಪೂರ್ವಾಗ್ರಗಳಾದ ದರ್ಭೆಗಳನ್ನು ಹಾಸಿ ಆ ಯಜ್ಞಗಳನ್ನು ನಡೆಯಿಸಿದುದರಿಂದ ಪ್ರಾಚೀನಬರ್ಹಿಯೆಂದು ಹೆಸರುಗೊಂಡನು॥೧೦॥ ಆ ಪ್ರಾಚೀನ ಬರ್ಹಿಯು ಬ್ರಹ್ಮನ ನುಡಿಯಿಂದ ಸಮುದ್ರರಾಜನ ಮಗಳಾದ ಶತದ್ರುತಿಯನ್ನು ಕೈಹಿಡಿದನು. ಆಕೆಯ ಸೌಂದರ್ಯವನ್ನೇನೆಂದು ಬಣ್ಣಿಸಲಿ ? ಸರ್ವಾಂಗಸುಂದರಿ

ಚಾರುಸರ್ವಾಂಗೀಂ ಕಿಶೋರೀಂ ಸುಷ್ಠ್ವಲಂಕೃತಾಂ। ಪರಿಕ್ರಮಂತೀಂ ಮು
ದ್ವಾಹೇ ಚಕಮೇಽಗ್ನಿ ‡ ಶ್ಶುಕೀಮಿವ ॥೧೧॥ ವಿಬುಧಾಽಸುರಗಂಧರ್ವ
ಮುನಿಸಿದ್ಧ ನರೋರಗಾಃ । ವಿಜಿತಾ ಸ್ಸೂರ್ಯಯಾ ದಿಕ್ಷು ಕ್ವಣಯಂತ್ಯೈ
ವ ನೂಪುರೈಃ ॥೧೨॥ ಪ್ರಾಚೀನ ಬರ್ಹಿಷಃ ಪುತ್ರಾ ಶ್ಶತಧೃತ್ಯಾಂದಶಾಽಭ

ಪರಿಕ್ರಮಂತೀಂ - ಪ್ರದಕ್ಷಿಣಮಾಡುವ, ಯಾಂ - ಯಾವಳನ್ನು, ಅಗ್ನಿಃ - ಅಗ್ನಿಯು, ಶುಕೀಮಿವ - ಶುಕಿಯನ್ನೋಪಾದಿಯಲ್ಲಿ, ಚಕಮೇ - ಮೋಹಿಸಿದನೋ, ಅಂತಹ, ಸಾಮುದ್ರೀಂ - ಸಮುದ್ರರಾಜನ ಮಗಳಾದ, ದೇವ....ಕ್ತಾಂ - ಬ್ರಹ್ಮನಿಂದ ಹೇಳಲ್ಪಟ್ಟ, ಶತಧೃತಿಂ - ಶತಧೃತಿಯನ್ನು. ಉಪಯೇಮೇ - ಮದುವೆಯಾದನು ॥೧೧॥

ವಿಬು…ಗಾಃ - ದೇವತೆಗಳು, ಅಸುರರು - ಗಂಧರ್ವರು, ಋಷಿಗಳು, ಸಿದ್ಧರು, ಮನುಷ್ಯರು ಸರ್ಪಗಳು, ಇವರು, ದಿಕ್ಷು - ದಿಕ್ಕುಗಳಲ್ಲಿ, ನೂಪುರೈಃ - ಕಾಲ್ಕಡಗಗಳಿಂದ, ಕ್ವಣಯಂತ್ಯೈವ - ಶಬ್ದಗೊಳಿಸುವ, ತಯಾಸೂರ್ಯಯಾ - ಆ ನೂತನವಧುವಿನಿಂದ, ವಿಜಿತಾಃ - ಸೋಲಿಸಲ್ಪಟ್ಟರು ॥೧೨॥ ಪ್ರಾಚೀನಬರ್ಹಿಷಃ - ಪ್ರಾಚೀನಬರ್ಹಿಯಿಂದ, ಶತಧೃತ್ಯಾಂ - ಶತಧೃತಿಯಲ್ಲಿ, ದಶಪುತ್ರಾಃ - ಹತ್ತುಮಂದಿ ಮಕ್ಕಳು, ಅಭವನ್ - ಆದರು, ಸರ್ವೇ - ಅವರೆಲ್ಲರೂ, ತುಲ್ಯ…ತಾಃ - ಸಮಾನವಾದ ಹೆಸರು, ನಿಯಮವುಳ್ಳವರೂ, ಧರ್ಮಸ್ನಾತಾಃ - ಧರ್ಮಕೋವಿದರೂ, ಪ್ರಚೇತಸಃ- ಸದ್ಬುದ್ಧಿಗಳು ಅಥವಾ

ಯಾದ ಯಾವ ಬಾಲೆಯು ವಿವಾಹಸಮಯದಲ್ಲಿ ದಿವ್ಯಾಲಂಕಾರಭೂಷಿತೆಯಾಗಿ ತನ್ನ ಪತಿಯೊಡನೆ ಅಗ್ನಿಪ್ರದಕ್ಷಿಣಮಾಡುವುದನ್ನು ಕಂಡು ಅಗ್ನಿಪುರುಷನು ಶುಕೀರೂಪಧಾರಿಣಿಯಾದ ಸ್ವಾಹೆಯನ್ನೋಪಾದಿಯಲ್ಲಿ ಆಕೆಯನ್ನು ಮೋಹಿಸಿದನೋ, ಮತ್ತು ಮದವಣಿಗಿತ್ತಿಯಾಗಿ ಸಿಂಗರಿಸಿಕೊಂಡು ಕಾಲ್ಕಡಗಗಳು ಝಣಝಣಿಸುವಂತೆ ಬೆಡಗುಬೀರುತ್ತಿರುವ ಯಾವ ಬಾಲೆಯು ನಡಿಗೆಯನ್ನು ಕಂಡಮಾತ್ರದಿಂದಲೇ ಅಲ್ಲಿ ನೆರೆದಿದ್ದ ದೇವ,ಗಂಧರ್ವ, ಸಿದ್ಧ, ದಾನವಮಾನವೋರಗರೆಲ್ಲರೂ ಕಾಮಪರವಶರಾಗಿ ಮನಸೋತರೋ, ಆಕೆಯ ಲಾವಣ್ಯವನ್ನು ಬಣ್ಣಿಪರಾರು?॥೧೧॥ಆ ಶತಧೃತಿಯು ಪ್ರಾಚೀನಬರ್ಹಿಯಿಂದ ಹತ್ತುಮಂದಿ ಮಕ್ಕಳನ್ನು ಹೆತ್ತಳು. ಅವರೆಲ್ಲರೂ ಒಂದೇ ಹೆಸರುಳ್ಳವರಾಗಿಯೂ, ಸಮಾನ ವ್ರತರಾಗಿಯೂ, ಧರ್ಮಕೋವಿದರಾಗಿಯೂ,ಪ್ರಚೇತಸರೆಂದು ಪ್ರಸಿದ್ಧರಾದರು॥೧೨॥ ಅವರು ಪ್ರಜಾಭಿವೃದ್ಧಿಗಾಗಿ ತಂದೆಯಿಂದಾಜ್ಞೆಯನ್ನು ಪಡೆದು ತಪಸ್ಸನ್ನು ಮಾಡುವುದಕ್ಕಾಗಿ ಸಮುದ್ರವನ್ನು ಹೊಕ್ಕ

‡(೧) ಭಾ ಮುನ್ನು ಸಪ್ತರ್ಷಿಗಳ ಸತ್ರಯಾಗದಲ್ಲಿ ಅಗ್ನಿಯು ಅವರಪತ್ನಿಯರನ್ನುಕಂಡು ಕಾಮಾತುರನಾದನು. ಅಗ್ನಿಪತ್ನಿಯಾದ ಸ್ವಾಹಾದೇವಿಯು ಅದನ್ನು ತಿಳಿದು ಆ ಋಷಿಪತ್ನಿಯರ ರೂಪವನ್ನು ಧರಿಸಿದಳು. ಆಗ ಅಗ್ನಿಯು ಆಕೆಯನ್ನು ಮೋಹಿಸಿ ರಮಿಸಿದನು ಬಳಿಕ ಆಕೆಯು ಹೆಣ್ಣುಗಿಳಿಯರೂಪದಿಂದ ಆ ರೇತಸ್ಸನ್ನು ತೆಗೆದುಕೊಂಡು ಹೋಗಿ ಜೊಂಡುಹುಲ್ಲಿನ ಪೊದೆಯಲ್ಲಿಟ್ಟು ಹೊರಟು ಹೋದಳು.

(೨) ವಿ. ಅಗ್ನಿಯು ಮುನ್ನು ವಿವಾಹಕಾಲದಲ್ಲಿ ಪ್ರದಕ್ಷಿಣಮಾಡುತ್ತಿದ್ದ ಶುಕಿಯೆಂಬ ರಾಜಪುತ್ರಿಯನ್ನು ಮೋಹಿಸಿ ಆಕೆಯನ್ನು ಎತ್ತಿಕೊಂಡು ಮಾಯವಾದಂತೆ, ಈ ಶತಧೃತಿಯನ್ನು ಅಪಹರಿಸುವ ಶಕ್ತಿಯಿಲ್ಲದಿದ್ದರೂ ಈಕೆಯನ್ನು ಮೋಹಿಸಿದನು. ಶ್ಲೋ॥ ರಾಜಪುತ್ರೀಂ ಶುಕೀ ಮಗ್ನಿ ರಾವರ್ತಂತೀಂ ಪ್ರದಕ್ಷಿಣಂ। ಆದಾಯಾಂತರ್ದಧಾ ದ್ಧಾನಸಮಯೇ ಮನ್ಮಥಾತುರಃ ॥

ವನ್ । ತುಲ್ಯನಾಮವ್ರತಾಃ ಸರ್ವೇ ಧರ್ಮಸ್ನಾತಾಃ ಪ್ರಚೇತಸಃ ॥೧೩॥
ಪಿತ್ರಾದಿಷ್ಟಾಃ ಪ್ರಜಾಸರ್ಗೇ ತಪಸೇಽರ್ಣವ ಮಾವಿಶನ್ । ದಶವರ್ಷಸಹ
ಸ್ರಾಣಿ ತಪಸಾಽರ್ಚಂ ಸ್ತಪಸ್ಪತಿಂ ॥೧೪॥ ಯದುಕ್ತಂ ಪಥಿ ದೃಷ್ಟೇನ ಗಿ
ರಿಶೇನ ಪ್ರಸೀದತಾ । ತದ್ಧ್ಯಾಯಂತೋ ಜಪಂತಶ್ಚ ಪೂಜಯಂತಶ್ಚ ಸಂ
ಯತಾಃ ॥೧೫॥ ವಿದುರಃ ॥ ಪ್ರಚೇತಸಾಂ ಗಿರಿತ್ರೇಣ ಯಥಾಸೀ ತ್ಪಥಿ ಸಂಗ
ಮಃ । ಯದುತಾಹ ಹರಃ ಪ್ರೀತಃ ಸ್ತನ್ನೋ ಬ್ರಹ್ಮನ್ ! ವದಾಽರ್ಥವ
ತ್ ॥೧೬॥ ಸಂಗಮಃ ಖಲು ವಿಪ್ರರ್ಷೇ ! ಶಿವೇನೇಹ ಶರೀರಿಣಾಂ । ದುರ್ಲ
ಭೋ ಮುನಯೋ ದಧ್ಯು ರಸಂಗಾ ದ್ಯ ಮಭೀಪ್ಸಿತಂ ॥೧೭॥ ಆತ್ಮಾರಾ

ಪ್ರಚೇತಸರೆಂದು ಹೆಸರುಳ್ಳವರೂ ಆದರೂ ॥೧೩॥ ಅವರು, ಪಿತ್ರಾ - ತಂದೆಯಿಂದ, ಪ್ರಜಾಸರ್ಗೇ - ಪ್ರಜೋತ್ಪಾದನಕ್ಕಾಗಿ, ಆದಿಷ್ಟಾಃ - ಆಜ್ಞಪ್ತರಾಗಿ, ತಪಸೇ - ತಪಸ್ಸಿಗಾಗಿ, ಅರ್ಣವಂ - ಸಮುದ್ರ ವನ್ನು, ಆವಿಶನ್ - ಹೊಕ್ಕರು, ದಶ……ಣಿ - ಹತ್ತುಸಾವಿರವರ್ಷಗಳು, ತಪಸಾ - ತಪಸ್ಸಿನಿಂದ, ತಪ ಸ್ಪತಿಂ - ಪರಮಾತ್ಮನನ್ನು, ಆರ್ಚನ್ - ಆರಾಧಿಸಿದರು ॥೧೪॥ ಪಥಿ - ದಾರಿಯಲ್ಲಿ, ದೃಷ್ಟೇನ - ನೋ ಡಲ್ಪಟ್ಟ, ಪ್ರಸೀದತಾ - ಪ್ರಸನ್ನನಾದ, ಗಿರಿಶೇನ - ಶಿವನಿಂದ, ಯತ್ - ಯಾವುದು, ಉಕ್ತಂ - ಹೇ ಳಲ್ಪಟ್ಟಿತೋ, ತತ್ - ಅದನ್ನು, ಧ್ಯಾಯಂತಃ - ಧ್ಯಾನಿಸುತ್ತಾ, ಜಪಂತಃ- ಜಪಿಸುತ್ತಾ, ಪೂಜಯಂ ತಶ್ಚ - ಪೂಜಿಸುತ್ತಾ, ಸಂಯತಾಃ - ನಿಯಮದಿಂದಿದ್ದರು ॥೧೫॥ ವಿದುರನು ಬೆಸಗೊಳ್ಳುತ್ತಾನೆ, ಬ್ರಹ್ಮನ್- ಅಯ್ಯಾ ಮೈತ್ರೇಯನೇ ! ಪ್ರಚೇತಸಾಂ - ಪ್ರಚೇತಸರಿಗೆ, ಪಥಿ - ದಾರಿಯಲ್ಲಿ, ಗಿರಿತ್ರೇಣ - ಶಿವನೊಡ ನೆ, ಸಂಗಮಃ - ಸಂಬಂಧವು, ಯಥಾ - ಹೇಗೆ, ಆಸೀತ್ - ಆಯಿತೋ? ಪ್ರೀತಃ - ಸಂತುಷ್ಟನಾದ, ಹರಃ - ಶಿವನು, ಯದಾಹ - ಯಾವುದನ್ನುಹೇಳಿದನೋ, ಅರ್ಥವತ್ - ಅರ್ಥವುಳ್ಳ, ತತ್ - ಅದನ್ನು, ನಃ - ನಮಗೆ, ವದ - ಹೇಳು ॥೧೬॥ ವಿಪ್ರರ್ಷೇ - ಬ್ರಹ್ಮರ್ಷಿಯೆ, ಮುನಯಃ- ಮನನಶೀಲರಾದ ಸಾ ಧುಗಳು, ಅಸಂಗಾತ್ - ಸಂಗವನ್ನುಳಿದು, ಅಭೀಪ್ಸಿತಂ -ಇಷ್ಟನಾದ, ಯಂ- ಯಾರನ್ನು, ದಧ್ಯುಃ- ಧ್ಯಾನಿಸುವರೋ, ಅಂತಹ, ಶಿವೇನ - ಶಿವನೊಡನೆ, ಸಂಗಮಃ - ಸಹವಾಸವು, ಶರೀರಿಣಾಂ - ಪ್ರಾಣಿಗ ಳಿಗೆ, ದುರ್ಲಭಃಖಲು - ಲಭಿಸತಕ್ಕದಲ್ಲವಷ್ಟೆ ॥೧೭॥ ಯಸ್ತು - ಯಾವ, ಭಗವಾನ್ - ಪೂಜ್ಯನಾದ, ಭವಃ - ಈಶ್ವರನಾದರೆ, ಆತ್ಮಾರಾಮೋಪಿ - ಆತ್ಮಕ್ರೀಡನಾಗಿದ್ದರೂ, ಅಸ್ಯ- ಈ, ಲೋಕಕಲ್ಪಸ್ಯ -

ಹತ್ತುಸಾವಿರ ವರ್ಷಗಳು ಭಗವಂತನನ್ನು ಕುರಿತು ತಪಿಸಿದರು॥೧೪॥ ಅವರು ತೆರಳುವಾಗ ನಡುದಾರಿಯಲ್ಲಿ ಸಂಧಿಸಿದ ಪರಶಿವಮೂರ್ತಿಯನ್ನು ಮರೆಹೊಕ್ಕು, ಪ್ರಸನ್ನನಾದ ಆಮಹಾದೇವಮೂರ್ತಿಯು ಉಪದೇಶಿಸಿದ ರೀತಿಯಿಂದ ಧ್ಯಾನ,ಜಪ, ಪೂಜಾದಿಗಳನ್ನು ಆಚರಿಸುತ್ತಾ ನಿಯಮದಿಂದ ತಪವೆಸಗಿದರು,ಎಂದು ಮೈತ್ರೇಯನು ಹೇಳಲು ವಿದುರನು ಮರಳಿ ಬೆಸಗೊಳ್ಳುತ್ತಾನೆ ॥೧೫॥ ಅಯ್ಯಾ ಬ್ರಹ್ಮಣೋತ್ತಮನೆ ! ದಾರಿಯಲ್ಲಿ ಪ್ರಚೇತಸರಿಗೆ ಮಹಾದೇವನ ದರ್ಶನವೆಂತು ಲಭಿಸಿತು? ಆತನು ಪ್ರೀತನಾಗಿ ಏನನ್ನುಪದೇಶಿಸಿದನು? ಸಾರವತ್ತರವಾದ ಈ ಸಂಗತಿಯನ್ನು ನನಗೆ ತಿಳುಹು ॥೧೬॥ ಎಲೈ ಬ್ರಹ್ಮರ್ಷಿಯೆ ! ಮನನಶೀಲರಾದ ಮಹಾತ್ಮರು ಸಂಗವನ್ನುಳಿದು ಯಾವಭಗವಂತನನ್ನು ಬಯಸಿ ಏಕಾಂತದಲ್ಲಿ ಭಜಿಸುವರೋ, ಅಂತಹ ಪರಮೇಶ್ವರನಸಂಗವು ಪ್ರಾಣಿಗಳಿಗೆ ದುರ್ಲಭವಲ್ಲವೆ? ॥೧೭॥ ನಿರತಿಶಯ

ವೋಽಪಿ ಯಸ್ತ್ವಸ್ಯ ಲೋಕಕಲ್ಪಸ್ಯ ರಾಧಸೇ । ಶಕ್ತ್ಯಾ ಯುಕ್ತೋ
ವಿಚರತಿ ಘೋರಯಾ ಭಗವಾನ್ ಭವಃ ॥೧೮॥ ಮೈತ್ರೇಯಃ ॥ ಪ್ರಚೇತಸಃ
ಪಿತು ರ್ವಾಕ್ಯಂ ಶಿರಸಾದಾಯ ಸಾಧವಃ । ದಿಶಂ ಪ್ರತೀಚೀಂ ಪ್ರಯಯು
ಸ್ತಪಸ್ಯಾದೃತಚೇತಸಃ ॥೧೯॥ ಸಮುದ್ರ ಮುಪವಿಸ್ತೀರ್ಣ ಮಪಶ್ಯನ್ ಸು
ಮಹತ್ಸರಃ । ಮಹನ್ಮನ ಇವ ಸ್ವಚ್ಛಂ ಪ್ರಸನ್ನಸಲಿಲಾಶಯಂ ॥೨೦॥ ನೀಲ
ರಕ್ತೋತ್ಪಲಾಂಭೋಜ ಕಲ್ಹಾರೇಂದೀವರಾಕರಂ । ಹಂಸಸಾರಸ ಚಕ್ರಾ
ಹ್ವಕಾರಂಡವ ನಿಕೂಜಿತಂ ॥೨೧॥ ಮತ್ತಭ್ರಮರಸೌಸ್ವರ್ಯ ಹೃಷ್ಟರೋ
ಮ ಲತಾಂಘ್ರಿಪಂ । ಪದ್ಮಕೋಶ ರಜೋ ದಿಕ್ಷು ವಿಕ್ಷಿಪ ತ್ಪವನೋತ್ಸವಂ॥

---

ಪ್ರಪಂಚರಚನೆಯ, ರಾಧಸೇ - ಪಾಲನಗಾಗಿ, ಶಕ್ತ್ಯಾ - ಶಕ್ತಿಯಿಂದ, ಯುಕ್ತಃ - ಕೂಡಿಕೊಂಡು, ಘೋರಯಾ - ಭಯಂಕರರೂಪದಿಂದ, ವಿಚರತಿ - ಸಂಚರಿಸುವನೋ ॥೧೮॥ ಮೈತ್ರೇಯನು ಹೇಳು ತ್ತಾನೆ, ಪ್ರಚೇತಸಃ - ಪ್ರಚೇತಸರು, ಪಿತುಃ - ತಂದೆಯ, ವಾಕ್ಯಂ - ನುಡಿಯನ್ನು, ಶಿರಸಾ - ತಲೆ ಯಿಂದ, ಆದಾಯ - ವಹಿಸಿ, ತಪಸಿ - ತಪಸ್ಸಿನಲ್ಲಿ, ಆದೃತಚೇತಸಃ- ಮನಸ್ಸುಳ್ಳವರಾಗಿ, ಪ್ರತೀಚೀಂ ದಿಶಂ - ಪಶ್ಚಿಮದಿಕ್ಕಿಗೆ, ಪ್ರಯಯುಃ - ಹೋದರು ॥೧೯॥ ಸಮುದ್ರಮುಪ - ಸಮುದ್ರಕ್ಕಿಂತಕೊಂಚ ಕಡಮೆಯಾಗಿಯೂ, ವಿಸ್ತೀರ್ಣಂ - ವಿಸ್ತಾರವಾಗಿಯೂ, ಮಹನ್ಮನಇವ - ಸಾಧುಗಳ ಮನಸ್ಸಿನಂತೆ, ಸ್ವಚ್ಛಂ - ನಿರ್ಮಲವಾಗಿಯೂ, ಪ್ರಸ⋯ಯಂ - ಸಂತುಷ್ಟಗಳಾದ ಜಲಚರಗಳುಳ್ಳ, ಸುಮಹತ್ - ಬಹಳದೊಡ್ಡದಾದ, ಸರಃ - ಸರೋವರವನ್ನು, ಅಪಶ್ಯನ್ - ಕಂಡರು ॥೨೦॥ ನೀಲ⋯ರಂ - ಕನ್ನೈದಿ ಲೆ, ಬಿಳಿನೈದಿಲೆ, ತಾವರೆ, ಸೌಗಂಧಿಕ - ಇಂದೀವರಗಳಿಗೆ ನೆಲೆಯೂ, ಹಂಸ⋯ತಂ - ಹಂಸೆ, ಕಾರಂಡ ವ, ಚಕ್ರವಾಕ, ಸಾರಸಾದಿಪಕ್ಷಿಗಳಿಂದ ಶಬ್ದಾಯಮಾನವಾದ ॥೨೧॥ ಮತ್ತ⋯ಪಂ, ಮತ್ತಭ್ರಮರ- ಮದಿಸಿದ ದುಂಬಿಗಳ, ಸೌಸ್ವರ್ಯ - ಒಳ್ಳೆಯಧ್ವನಿಯಿಂದ, ಹೃಷ್ಟರೋಮ - ರೋಮಾಂಚಗಳುಳ್ಳ, ಲತಾಂಘ್ರಿಪಂ - ಬಳ್ಳಿಗಳಿಂದ ಕೂಡಿದ ವೃಕ್ಷಗಳುಳ್ಳ, ಪದ್ಮ...ಜಃ - ತಾವರೆಧೂಳಿಯನ್ನು, ದಿಕ್ಷು -

---

ಮಹಿಮನಾದ ಯಾವ ಪರಶಿವಮೂರ್ತಿಯು, ಆತ್ಮಾರಾಮನಾಗಿದ್ದರೂ, ಈ ಜಗತ್ತನ್ನು ಸಲಹುವುದಕ್ಕಾಗಿ, ಆದಿಶಕ್ತಿರೂಪಳಾದ ಸ್ತ್ರೀಯಿಂದೊಡಗೂಡಿ ಘೋರರೂಪದಿಂದ ಸಂಚ ರಿಸುವನೋ, ಅಂತಹ ಭಗವಂತನ ದರ್ಶನವು ಸಾಮಾನ್ಯವೆ? ಎಂದು ಬೆಸಗೊಳ್ಳಲು ಮೈ ತ್ರೇಯನು ಹೇಳುತ್ತಾನೆ॥೧೮॥ ಅಯ್ಯಾ ವಿದುರನೆ? ಕೇಳು. ಆ ಪ್ರಚೇತಸರು ತಂದೆಯಾ ದ ಪ್ರಾಚೀನಬರ್ಹಿಯ ನುಡಿಯನ್ನು ಮನ್ನಿಸಿ ತಪಸ್ಸನ್ನು ಮಾಡಬೇಕೆಂದು ಪಡುವಣ ಕ ಡೆಗೆ ತೆರಳಿದನು ॥೧೯॥ ಅಲ್ಲಿ ಸಮುದ್ರದಂತೆ ವಿಸ್ತಾರವಾಗಿಯೂ, ಮಹಾತ್ಮರ ಮನಸ್ಸಿನಂ ತೆ ನಿರ್ಮಲೋದಕ ಭರಿತವಾಗಿಯೂ, ಸಂತೋಷದಿಂದ ಚರಿಸುತ್ತಿರುವ ಜಲಚರಗಳಿಂದ ನಿಬಿಡವಾಗಿಯೂ, ಅತಿವಿಶಾಲವಾಗಿಯೂ ಇರುವ ಒಂದು ಸರೋವರವನ್ನು ಕಂಡರು ॥೨೦॥ ಆಸರೋವರವು ಕೆಂಪು, ಕಪ್ಪು, ಬಿಳುಪು ಬಣ್ಣದ ನೈದಿಲೆಗಳಿಂದಲೂ, ತಾವರೆಗಳಿಂದಲೂ, ಹಂಸ, ಸಾರಸ, ಚಕ್ರವಾಕ, ಕಾರಂಡವಾದಿ ಪಕ್ಷಿಗಳ ಕಲಕಲದಿಂದಲೂ ರಮಣೀಯ ವಾಗಿದ್ದುದು ॥೨೧॥ ಅಲ್ಲಿಯ ವೃಕ್ಷಗಳು, ಲತೆಗಳಿಂದಾಲಿಂಗಿತಗಳಾಗಿ, ಮದಗೊಂಡ ದುಂ ಬಿಗಳ ಇಂಚರದ ಪಂಚಮಧ್ವನಿಯಿಂದ ರೋಮಾಂಚವಾದಂತೆ ಕಂಗೊಳಿಸುತ್ತಿದ್ದುವು.

ತತ್ರ ಗಾಂಧರ್ವ ಮಾಕರ್ಣ್ಯ ದಿವ್ಯಮಾರ್ಗ ಮನೋಹರಂ । ವಿಸ್ಮಿತಾ
ರಾಜಪುತ್ರಾಸ್ತೇ ಮೃದಂಗ ಪಣವಾದ್ಯನು ॥೨೩॥ ತರ್ಹ್ಯೇವ ಸರಸ ಸ್ತಸ್ಮಾ
ನ್ನಿಷ್ಕ್ರಾಮಂತಂ ಸಹಾನುಗಂ । ಉಪಗೀಯಮಾನ ಮಮರಪ್ರವರಂ ವಿಬು
ಧಾನುಗೈಃ ॥೨೪॥ ತಪ್ತಹೇಮನಿಕಾಯಾಭಂ ಶಿತಿಕಂಠಂ ತ್ರಿಲೋಚನಂ ।
ಪ್ರಸಾದ ಸುಮುಖಂ ವೀಕ್ಷ್ಯ ಪ್ರಣೇಮುರ್ಜಾತಕೌತುಕಾಃ॥೨೫॥ ಸತಾನ್
ಪ್ರಪನ್ನಾರ್ತಿಹರೋ ಭಗವಾನ್ ಧರ್ಮವತ್ಸಲಃ । ಧರ್ಮಜ್ಞಾನ್ ಶೀಲಸಂಪ
ನ್ನಾನ್ ಪ್ರೀತಃ ಪ್ರೀತಾ ನುವಾಚ ಹ ॥೨೬॥

---

ದಿಕ್ಕುಗಳಲ್ಲಿ, ವಿಕ್ಷಿ...ವಂ, ವಿಕ್ಷಿಪತ್ - ಎರಚುತ್ತಿರುವ, ಪವನ - ಗಾಳಿಯಿಂದ, ಉತ್ಸವಂ - ಉತ್ಸವ ವುಳ್ಳ ಸರಸ್ಸನ್ನು ಕಂಡರು ॥೨೨॥ ತೇರಾಜಪುತ್ರಾಃ - ಆ ರಾಜಪುತ್ರರು, ತತ್ರ - ಅಲ್ಲಿ, ಮೃದಂ...ನು- ಮೃದಂಗ, ಪಣವವೊದಲಾದ ವಾದ್ಯಗಳಿಂದ ಕೂಡಿದ, ದಿವ್ಯ...ರಂ- ಸೊಗಸಾದ ದಾರಿಗಳಿಂದ ಮನೋ ಹರವಾದ, ಗಾಂಧರ್ವಂ - ಸಂಗೀತವನ್ನು, ಆಕರ್ಣ್ಯ - ಕೇಳಿ, ವಿಸ್ಮಿತಾಃ- ಆಶ್ಚರಿಗೊಂಡರು ॥೨೩॥
ತರ್ಹ್ಯೇವ - ಆಗಲೇ, ತಸ್ಮಾತ್ -ಆ, ಸರಸಃ - ಸರೋವರದಿಂದ, ನಿಷ್ಕ್ರಾಮಂತಂ - ಬರು ತ್ತಿರುವ, ಸಹಾನುಗಂ - ಪರಿವಾರದಿಂದ ಕೂಡಿದ, ವಿಬುಧಾನುಗೈಃ - ದೇವಪರಿಚರರಿಂದ, ಉಪಗೀಯ ಮಾನಂ - ಹೊಗಳಲ್ಪಡುತ್ತಿರುವ, ಅಮರಪ್ರವರಂ- ದೇವತಾ ಸಾರ್ವಭೌಮನಾದ, ॥೨೪॥ ತಪ್ತ....ಭಂ- ಕಾಯಿಸಿದಚಿನ್ನದಂತೆ ಕಾಂತಿಯುಳ್ಳ, ತ್ರಿಲೋಚನಂ - ಮುಕ್ಕಣ್ಣನಾದ, ಪ್ರಸಾದಸುಮುಖಂ - ಅನು ಗ್ರಹಾಭಿಮುಖನಾದ, ಶಿತಿಕಂಠಂ - ಶಿವನನ್ನು, ವೀಕ್ಷ್ಯ - ಕಂಡು, ಜಾತಕೌತುಕಾಃ - ತವಕವುಳ್ಳವರಾ ಗಿ, ಪ್ರಣೇಮುಃ - ವಂದಿಸಿದರು ॥೨೫॥ ಪ್ರಪ...ರಃ - ಭಕ್ತರ ಕಷ್ಟಗಳನ್ನು ಹೋಗಲಾಡಿಸುವ, ಭಗ ವಾನ್ - ಅಚಿಂತ್ಯಮಹಿಮನಾದ, ಧರ್ಮವತ್ಸಲಃ - ಧರ್ಮಪಕ್ಷಪಾತಿಯಾದ, ಸ - ಆಶಿವನು, ಧರ್ಮ ಜ್ಞಾನ್ - ಧರ್ಮವನ್ನು ಬಲ್ಲ, ಶೀಲಸಂಪನ್ನಾನ್-ಸದಾಚಾರವುಳ್ಳ, ಪ್ರೀತಾನ್ - ಸಂತುಷ್ಟರಾದ, ತಾನ್ - ಅವರನ್ನುಕುರಿತು, ಪ್ರೀತಃ - ಸಂತುಷ್ಟನಾಗಿ, ಉವಾಚ - ಹೇಳಿದನು ॥೨೬॥ ಯೂಯಂ - ನೀವು ವೇದಿಷದಃ - ಪ್ರಾಚೀನಬರ್ಹಿಯ, ಪುತ್ರಾಃ - ಮಕ್ಕಳು, ವಃ - ನಿಮ್ಮ, ಚಿಕೀರ್ಷಿತಂ - ಕೋರಿಕೆಯು,

---

ತಂಗಾಳಿಯು ತಾವರೆ ಮೊಗ್ಗೆಗಳಲ್ಲಿರುವ ಧೂಳಿಯನ್ನು ದಿಕು ದಿಕ್ಕಿಗೂ ಎರಚುತ್ತಾ, ದಾರಿಗರಿಗೆ ಔತಣವನ್ನು ಮಾಡುತ್ತಿದ್ದುದು ॥೨೨॥ ಇಂತಹ ದಿವ್ಯಸರೋವರವನ್ನು ಕಂಡು ಆ ರಾಜಪುತ್ರರು ಅಲ್ಲಿ ಮೃದಂಗ ಪಣವ ಮೊದಲಾದ ವಾದ್ಯಧ್ವನಿಗಳನ್ನೂ, ಹಲವುಬಗೆಗಳಾ ದ ಮೂರ್ಛನಾವಿಶೇಷಗಳಿಂದ ಇಂಪಾಗಿರುವ ಗಾನವನ್ನೂ ಕೇಳಿ ಆಶ್ಚರ್ಯಗೊಂಡರು ॥ ಇಂತಿರುವಾಗ ಯಕ್ಷಕಿನ್ನರಾದಿ ದೇವಯೋನಿಗಳಿಂದ ಹೊಗಳಿಸಿಕೊಳ್ಳುತ್ತಾ, ಕರಗಿಸಲ್ಪ ಟ್ಟ ಚಿನ್ನದಂತೆ ಹೊಂಬಣ್ಣದಿಂದ ಹೊಳೆಯುತ್ತಾ, ಮುಕ್ಕಣ್ಣನಾದ ನೀಲಕಂಠಮೂರ್ತಿ ಯು ಆ ಸರೋವರದಿಂದ ಹೊರಗೆ ಬಂದನು. ಕೂಡಲೇ ಆ ಪ್ರಚೇತಸರು ಅನುಗ್ರಹಾಭಿ ಮುಖನಾದ ಆ ಪರಮೇಶ್ವರನನ್ನು ಕಂಡು ಅತ್ಯಂತ ಕುತೂಹಲದಿಂದ ದಂಡಪ್ರಣಾಮವ ನ್ನಾಚರಿಸಿದರು ॥೨೫॥ ತರುವಾಯ ಭಕ್ತಾರ್ತಿಭಂಜನನೂ, ನಿರತಿಶಯಮಹಿಮನೂ, ಧರ್ಮಪಾಲಕನೂ ಆದ ಆ ಪರಶಿವನು, ಧರ್ಮಸೂಕ್ಷ್ಮಗಳನ್ನರಿತು ಸದಾಚಾರಸಂಪನ್ನರಾ ಗಿ ತನ್ನದರ್ಶನದಿಂದ ಸಂತುಷ್ಟರಾಗಿರುವ ಪ್ರಚೇತಸರಿಗಿಂತೆಂದನು ॥೨೬॥

— ಶ್ರೀ ರುದ್ರಗೀತಾ ಪ್ರಾರಂಭಃ —

ಶ್ರೀರುದ್ರಃ॥ ಯೂಯಂ ವೇದಿಷದಃ ಪುತ್ರಾ ವಿದಿತಂ ವಶ್ಚಿಕೀರ್ಷಿತಂ। ಅನುಗ್ರಹಾಯ ಭದ್ರಂ ವ ಏವಂ ಮೇ ದರ್ಶನಂ ಕೃತಂ ॥೨೭॥ ಯಃ ಪರಂ ರಂಹಸಃ ಸಾಕ್ಷಾತ್ತ್ರಿಗುಣಾಜ್ಜೀವಸಂಜ್ಞಿತಾತ್ । ಭಗವಂತಂ ವಾಸುದೇವಂ ಪ್ರಪನ್ನಃ ಸಪ್ರಿಯೋಹಿ ಮೇ ॥೨೮॥* ಸ್ವಧರ್ಮನಿಷ್ಠಃ ಶತಜನ್ಮಭಿಃ ಪುಮಾನ್ ವಿರಿಂಚತಾ ಮೇತಿ ತತಃ ಪರಂಹಿ ಮಾಂ । ಅವ್ಯಾಕೃತಂ ಭಾಗವತೋಽ

ವಿದಿತಂ - ತಿಳಿದುದು, ವಃ - ನಿಮ್ಮ, ಅನುಗ್ರಹಾಯ - ಅನುಗ್ರಹಕ್ಕಾಗಿ, ಮೇ - ನನ್ನಿಂದ, ಏವಂ - ಇಂತು, ಭದ್ರಂ - ಮಂಗಳಕರವಾದ, ದರ್ಶನಂ-ದರ್ಶನವು, ಕೃತಂ - ಮಾಡಲ್ಪಟ್ಟಿತು ॥೨೭॥ ಯಃ - ಯಾವನು, ರಂಹಸಃ - ಸೂಕ್ಷ್ಮವಾದ, ತ್ರಿಗುಣಾತ್ - ಪ್ರಧಾನಕ್ಕಿಂತಲೂ, ಜೀವಸಂಜ್ಞಿತಾತ್ - ಜೀವನೆಂಬ ಹೆಸರುಳ್ಳ ಪುರುಷನಿಗಿಂತಲೂ, ಪರಂ - ಅತೀತನಾದ, ಭಗವಂತಂ - ಭಗವಂತನಾದ, ವಾಸುದೇವಂ - ಶ್ರೀಹರಿಯನ್ನು, ಸಾಕ್ಷಾತ್ - ನೇರವಾಗಿ, ಪ್ರಪನ್ನಃ - ಮರೆಹೊಕ್ಕವನೋ, ಸಃ - ಅವನು, ಮೇ - ನನಗೆ, ಪ್ರಿಯೋಹಿ - ಪ್ರಿಯನಷ್ಟೆ ॥೨೮॥ ಸ್ವಧರ್ಮನಿಷ್ಠಃ - ತನ್ನಧರ್ಮಗಳಲ್ಲಿ ನಿರತನಾದ, ಪುಮಾನ್ - ಪುರುಷನು, ಶತಜನ್ಮಭಿಃ - ನೂರು ಜನ್ಮಗಳಿಂದ, ವಿರಿಂಚತಾಂ - ಬ್ರಹ್ಮಲೋಕ

— ಶ್ರೀ ರುದ್ರಗೀತೆಯ ಪ್ರಾರಂಭ —

ಅಯ್ಯಾ ಪ್ರಚೇತಸರಿರಾ ! ನೀವು ಪ್ರಾಚೀನಬರ್ಹಿಯ ಪುತ್ರರೆಂಬುದರನ್ನೂ, ಭಗವಂತನನ್ನು ಮೆಚ್ಚಿಸುವುದಕ್ಕಾಗಿ ನೀವಿಲ್ಲಿಗೆ ಬಂದಿರುವಿರೆಂಬುದನ್ನೂ ನಾನು ಬಲ್ಲೆನು. ಆದುದರಿಂದಲೇ ನಿಮ್ಮನ್ನು ಅನುಗ್ರಹಿಸುವುದಕ್ಕಾಗಿ ನಿಮಗೀಗ ದರ್ಶವನ್ನಿತ್ತೆನು॥೨೭॥ ಲೋಕದಲ್ಲಿ ಅತ್ಯಂತ ಸೂಕ್ಷ್ಮವಾಗಿಯೂ, ತ್ರಿಗುಣಾತ್ಮಕವಾಗಿಯೂ ಇರುವ ಪ್ರಕೃತಿಗೂ ಜೀವನೆಂದು ಹೆಸರುಗೊಂಡ ಪುರುಷನಿಗೂ ನಿಯಾಮಕನೆನಿಸಿರುವ ವಾಸುದೇವಮೂರ್ತಿಯನ್ನು ಯಾವನು ಅನನ್ಯಭಾವದಿಂದ ಶರಣಹೊಗುವನೋ, ಅವನು ನನಗೆ ಪ್ರಿಯನೆನಿಸುವನು. ನೂರಾರು ಜನ್ಮಗಳಲ್ಲಿ ತನ್ನ ವರ್ಣಾಶ್ರಮೋಚಿತಗಳಾದ ಧರ್ಮಗಳನ್ನಾಚರಿಸಿ ಪರಿಶುದ್ಧನಾದ ಪುರುಷನು ಚತುರ್ಮುಖಬ್ರಹ್ಮನ ಲೋಕವನ್ನು ಪಡೆಯುವನು. ಅಲ್ಲಿಯೂ ಭಗವಂತನ ಉಪಾಸನೆಯಿಂದ ಅಧಿಕ ಪುಣ್ಯವನ್ನು ಗಳಿಸಿದವನು ನನ್ನ(ಶಿವನ)ಲೋಕವನ್ನು ಪಡೆಯುವನು ಲಯಾಧಿಕಾರಿಯಾದ ನಾನೂ, ಲೋಕರಕ್ಷಣಾಧಿಕಾರಿಗಳಾದ ಇಂದ್ರಾದಿದೇವತೆಗಳೂ

* ವಿ. ಶ್ಲೋ ॥ ಋಜವೋ ನಾಮ ಯೇ ದೇವಾ ಯೋಗ್ಯಾ ಬ್ರಹ್ಮಪದಸ್ಯ ತು। ತ ಏವ ಶತ ಜನ್ಮಾನಿ ವಿಶೇಷೋಪಾಸಕಾ ಹರೇಃ॥೧॥ಪ್ರಾಪ್ಯ ಬ್ರಹ್ಮಪದಂ ಪಶ್ಚಾಚ್ಛ್ರಿಯಂ ಪ್ರಾಪ್ಯಾನುಮೋದಿತಾಃ । ತಯಾ ತತೋಹಂ ಯಾಂತಿ ವಸಂತಿ ಹರಿಸನ್ನಿಧೌ॥೨॥ಅನಾದಿಕಾಲಭಕ್ತಾಶ್ಚ ಜ್ಞಾನಿನಸ್ತೇ ನ ಸಂಶಯಃ। ವಿಶಿಷ್ಟಾಜ್ಞಾನ ಭಕ್ತ್ಯಾದೌ ಸರ್ವಜೀವಸಿಕಾಯುತಃ ॥೩॥ ಸರ್ವದಾಪಿ ವಿಶೇಷೇಣ ಶತಜನ್ಮ ಪ್ರಯತ್ನತಃ । ಸ್ವಪದಪ್ರಾಪ್ತಿ ರುದ್ದಿಷ್ಟಾ ತತೋಮುಕ್ತಿ ರವಾಪ್ಯತೇ ॥೪॥ ಬ್ರಹ್ಮಪದ ಪ್ರಾಪ್ತಿಗೆ ಅರ್ಹರಾದ ಋಜುದೇವತೆಗಳೂ ಸಹ ನೂರಾರು ಜನ್ಮಗಳು ಭಗವದುಪಾಸನೆಯನ್ನು ಮಾಡಿ, ಬ್ರಹ್ಮಲೋಕವನ್ನು ಪಡೆದು ಬಳಿಕ ರಮಾದೇವಿಯನ್ನು ಹೊಂದಿ, ಆಕೆಯಿಂದ ಆಜ್ಞಪ್ತರಾಗಿ ಶ್ರೀ ಹರಿಯ ಸಾನ್ನಿಧ್ಯವನ್ನು ಪಡೆಯುವರು ಇಂತಿರುವಾಗ ಇತರರನ್ನು ಹೇಳುವುದೇನು ? ಇಲ್ಲಿ 'ಮಾಂ' ಎಂಬ ಪದಕ್ಕೆ ಲಕ್ಷ್ಮಿಯೆಂದರ್ಥವು.

ಥ ವೈಷ್ಣವಂ ಪದಂ ಯಥಾ ಽ ಹಂ ವಿಬುಧಾಃ ಕಲಾ ಽ ತ್ಯಯೇ ||೨೯|| ಅಥ ಭಾಗವತಾ ಯೂಯಂ ಪ್ರಿಯಾ ಸ್ಥ ಭಗವಾನ್ ಯಥಾ| ನ ಮದ್ಭಾಗವತಾನಾಂಚ ಪ್ರೇಯಾನನ್ಯೋ ಽ ಸ್ತಿ ಕರ್ಹಿಚಿತ್ ||೩೦|| ಇದಂ ವಿವಿಕ್ತಂ ಜಪ್ತವ್ಯಂ ಪವಿತ್ರಂ ಮಂಗಳಂ ಪರಂ | ನಿಶ್ರೇಯಸಕರಂ ಚಾಪಿ ಶ್ರೂಯತಾಂ ತದ್ವದಾಮಿ ವಃ ||೩೧|| ಮೈತ್ರೇಯಃ | ಇತ್ಯನುಕ್ರೋಶಹೃದಯೋ ಭಗವಾನಾಹ ತಾನ್ ಶಿವಃ| ಬದ್ಧಾಂಜಲೀನ್ ರಾಜಪುತ್ರಾನ್ ನಾರಾಯಣ ಪರೋ

ವನ್ನು, ಏತಿ - ಹೊಂದುವನು, ತತಃಪರಂ - ಆ ಬಳಿಕ, ಮಾಂ - ನನ್ನನ್ನು, ಏತಿ - ಹೊಂದುವನು, ಅಥ - ಬಳಿಕ, ಭಾಗವತಃ - ಭಕ್ತನು, ಅಹಂ - ನಾನು, ವಿಬುಧಾಃ - ದೇವತೆಗಳು, ಕಲಾತ್ಯಯೇ ಯಥಾ - ಅಧಿಕಾರಾನಂತರದಲ್ಲಿ ಯೋಪಾದಿಯಲ್ಲಿ, ಅವ್ಯಾಕೃತಂ - ಅನಿರ್ವಚನೀಯವಾದ, ವೈಷ್ಣವಂಪದಂ - ವಿಷ್ಣುಪದವನ್ನು, ಇಮಃ - ಹೊಂದುತ್ತೇವೆ || ೨೯ || ಅಥ - ಆದುದರಿಂದ, ಭಾಗವತಾಃ - ಭಗದ್ಭಕ್ತರಾದ, ಯೂಯಂ - ನೀವು, ಭಗವಾನ್ಯಥಾ - ಭಗವಂತನಂತೆಯೇ, ಪ್ರಿಯಾಃ - ಪ್ರಿಯರು, ಸ್ಥ - ಆಗಿರುವಿರಿ, ಭಾಗವತಾನಾಂಚ - ಭಕ್ತರಾದವರಿಗೂ, ಮತ್ - ನನಗಿಂತಲೂ, ಅನ್ಯಃ - ಇತರರು, ಕರ್ಹಿಚಿತ್ - ಯಾವಾಗಲೂ, ಪ್ರೇಯಾನ್ - ಪ್ರಿಯನು, ನಾಸ್ತಿ - ಇಲ್ಲ ||೩೦|| ಪವಿತ್ರಂ - ಪರಿಶುದ್ಧವೂ, ಮಂಗಳಂ - ಶುಭಕರವೂ, ಪರಂ - ಉತ್ತಮವೂ, ನಿಶ್ರೇಯಸಕರಂ - ಮೋಕ್ಷಪ್ರದವೂ, ಆದ, ಇದಂ - ಇದು, ವಿವಿಕ್ತಂ - ಏಕಾಂತವಾಗಿ, ಜಪ್ತವ್ಯಂ - ಜಪಿಸತಕ್ಕದು, ತತ್ - ಆದುದರಿಂದ, ವಃ - ನಿಮಗೆ, ವದಾಮಿ - ಹೇಳುತ್ತೇನೆ, ಶ್ರೂಯತಾಂ - ಕೇಳಲ್ಪಡಲಿ, ||೩೧|| ಇತಿ - ಇಂತು, ಅನು .... ಯಃ - ದಯಾರ್ದ್ರಹೃದಯನಾದ ಮನಸ್ಸುಳ್ಳ, ಭಗವಾನ್ - ಭಗವಂತನಾದ, ಶಿವಃ ಶಿವನು, ನಾರಾಯಣಪರಃ - ನಾರಾಯಣನಲ್ಲಿಪರನಾಗಿ, ಬದ್ಧಾಂಜಲೀನ್ - ಕೈಜೋಡಿಸಿರುವ, ತಾನ್ ರಾ

ಸಹ, ತಮ್ಮ ತಮ್ಮ ಅಧಿಕಾರಾನಂತರದಲ್ಲಿ ಲಿಂಗಶರೀರವನ್ನು ಭಂಗಗೊಳಿಸಿಕೊಂಡು ಪರಮಾತ್ಮನಲ್ಲಿ ಐಕ್ಯವನ್ನು ಪಡೆಯುವಂತೆ, ಉಪಾಸನಾನಿಷ್ಠನಾದ ಭಾಗವತೋತ್ತಮನು ಮಾತ್ರ. ದೇಹಾವಸಾನದಲ್ಲಿ ಪ್ರಪಂಚಾತೀತವಾದ ವೈಷ್ಣವ ಪದವನ್ನು ಪಡೆಯುವನು ||೨೯|| ಆದುದರಿಂದ ಭಾಗವತೋತ್ತಮರಾದ ನೀವು ನನಗೆ ಭಗವಂತನಂತೆಯೇ ಪರಮಪ್ರಿಯರೆನಿಸಿರುವಿರಿ. ಅಲ್ಲದೆ ಭಾಗವತರಿಗೂ ನನಗಿಂತ ಪ್ರೀತಿಪಾತ್ರನೂ ಮತ್ತೊಬ್ಬನಿಲ್ಲವಾದುದರಿಂದ ನೀವು ನನ್ನಲ್ಲಿ ಪ್ರೀತಿಯನ್ನಿಡಬೇಕು || ೩೦ || ಅಯ್ಯಾ ರಾಜಪುತ್ರರಿರಾ ! ಪರಮಪಾವನವೂ, ಮಂಗಳಕರವೂ, ಮೋಕ್ಷಪ್ರದವೂ ಆದ ಈ ಮಂತ್ರವನ್ನು ಏಕಾಂತದಲ್ಲಿ ಜಪಿಸಬೇಕಾಗಿರುವುದರಿಂದ ಇದನ್ನು ನಿಮಗೆ ಉಪದೇಶಿಸುವೆನು ಕೇಳಿರಿ, ಎಂದು ಹೇಳಿದನು ||೩೧|| ಎಲೈ ವಿದುರನೆ! ಇಂತು ಪರಮದಯಾಳುವಾದ ಪರಶಿವನು ನಾ

ರುದ್ರನು ನಲವತ್ತು ಜನ್ಮಗಳ ಸುಕೃತದಿಂದ ಶಿವಪದವನ್ನೂ, ಇಂದ್ರನು ಇಪ್ಪತ್ತು ಜನ್ಮಗಳ ಸುಕೃತದಿಂದ ತಂತಮ್ಮ ಪದವಿಗಳನ್ನೂ ಅನುಭವಿಸಿ ಬಳಿಕ ಎಲ್ಲರೂ ಬ್ರಹ್ಮನೊಡನೆ ಮುಕ್ತಿಯನ್ನು ಪಡೆಯುವರು.

ಶ್ಲೋ|| ತಥೈವ ಚತ್ವಾರಿಂಶದ್ಭಿಃ ಪದಂ ಶೈವಂಚ ಜನ್ಮಭಿ: | ವಿಂಶದ್ಭಿ ರಿಂದ್ರಂ ದಶಭಿ ರನ್ಯೇಷಾಮಪ್ಯುದೀರ್ಯತೇ ||

ವಚಃ||೩೨|| ಶ್ರೀರುದ್ರಃ|| । ಜಿತಂತ ಆತ್ಮವದ್ವರ್ಯ ! ಸ್ವಸ್ತಯೇ ಸ್ವಸ್ತಿ
ರಸ್ತುಮೇ । ಭವತಾ ರಾಧಸಾ ರಾದ್ಧಂ ಸರ್ವಸ್ಮಾ ಆತ್ಮನೇ ನಮಃ ||೩೩||
ನಮಃ ಪಂಕಜನಾಭಾಯ ಭೂತಸೂಕ್ಷ್ಮೇಂದ್ರಿಯಾತ್ಮನೇ। ವಾಸುದೇವಾಯ

---

ಜಪುತ್ರಾನ್ - ಆ ಅರಸುಮಕ್ಕಳಿಗೆ, ವಚಃ-ನುಡಿಯನ್ನು, ಆಹ-ಹೇಳುತ್ತಾನೆ ||೩೨|| ಹೇ ಆತ್ಮವದ್ವ ರ್ಯ-ಎಲೈಜ್ಞಾನಿಗಳಲ್ಲಿ ಅಗ್ರಗಣ್ಯನೇ! ಸ್ವಸ್ತಯೇ ಜಗತ್ಕಲ್ಯಾಣಕ್ಕಾಗಿ, ತೇ-ನಿನಗೆ, ಜಿತಂ-ಜಯವಾಗಲಿ, ಅಥವಾ ಆತ್ಮ...ಯೇ,ಆತ್ಮವತ್- ಜ್ಞಾನಿಶಿರೋಮಣಿಗಳ, ಸ್ವಸ್ತಯೇ-ಆತ್ಮಾನಂದಲಾಭಕ್ಕಾಗಿ, ತೇ-ನಿನಗೆ, ಜಿತಂ - ಜಯವಾಗಲಿ, ಆದುದರಿಂದ, ಮೇ - ನನಗೆ, ಸ್ವಸ್ತಿಃ - ಆನಂದಲಾಭವು, ಅಸ್ತು - ಆಗಲಿ, ಭವತಾ - ನಿನ್ನಿಂದ, ರಾಧಸಾ - ನಿತ್ಯಾನಂದರೂಪದಿಂದ, ರಾದ್ಧಂ-ಇರೋಣವು, ಸರ್ವಸ್ಮೈ - ಸರ್ವಸ್ವ ರೂಪನಾದ, ಆತ್ಮನೇ - ಪರಮಾತ್ಮನಿಗೆ, ನಮಃ - ನಮಸ್ಕಾರವು||೩೩||
ಪಂಕಜನಾಭಾಯ - ಜಗದಾಧಾರವಾದ ಕಮಲವೇ ನಾಭಿಯಲ್ಲುಳ್ಳ, ಭೂತ....ನೇ, ಭೂತಸೂಕ್ಷ್ಮ - ಶ ಬ್ದಾದಿತನ್ಮಾತ್ರಗಳಿಗೂ, ಇಂದ್ರಿಯ -ಜ್ಞಾನಕರ್ಮೇಂದ್ರಿಯಗಳಿಗೂ, ಆತ್ಮನೇ-ನಿಯಾಮಕನಾದ, ವಾಸು

---

ರಾಯಣಪರಾಯಣನಾಗಿ, ಕೈಮುಗಿದುಕೊಂಡು ಭಕ್ತಿಯಿಂದ ನಿಂದಿರುವ ಪ್ರಚೇತಸರಿ ಗಿಂತು ಉಪದೇಶಿಸುತ್ತಾನೆ ||೩೨||

—ಶ್ರೀ ರುದ್ರಗೀತಾಪ್ರಾರಂಭ—

ಕಂ || ಜಗದಾದಿಯೊಳಜನಾತ್ಮಜ । ರಿಗೆ ಪೇಳದ ಪುಣ್ಯಾಕರವೆನಿಪ್ಪ ಸ್ತುತಿಯಂ ||
ಅಗಜಾವಲ್ಲಭ ನೀಗಳ್। ಮಗಳ್ದೊರೆದಪೆ ನಾ ಪ್ರಚೇತಸ ಗೋಲವಿಂದಂ||

ಭಕ್ತನಾದವನು ಭಗವಂತನನ್ನು ಹೊಗಳುವಾಗ ಮೊದಲು ಜಯಶಬ್ದದಿಂದಾ ರಂಭಿಸಬೇಕೆಂಬ ಸಂಪ್ರದಾಯಕ್ಕಾಗಿ, ಪರಶಿವನು ಭಗವಂತನನ್ನು ಹೊಗಳುತ್ತಾನೆ. ಎಲೈ ಪರಮಾತ್ಮನೆ ! ನಿನಗೆ ಜಯವಾಗಲಿ, ಆತ್ಮಾರಾಮರಾದ ಜ್ಞಾನಿಗಳ ನಿತ್ಯಾನಂದ ಕ್ಕಾಗಿ ನಿನ್ನ ಮಹಿಮೆಯನ್ನು ಹೊರಪಡಿಸಿರುವೆ. ಆದುದರಿಂದ ನನಗೂ ಆ ನಿತ್ಯಾನಂದವು ಸಿದ್ಧಿಸಲಿ. ನೀನು ಯಾವಾಗಲೂ ಪರಮಾನಂದರೂಪನಾಗಿಯೇ ಇರುವೆ. ನಿನ್ನ ಸರ್ವೋ ತ್ತಮತ್ವವು ಭಕ್ತಾನುಗ್ರಹಕ್ಕಾಗಿಯೇ ಹೊರತು ಸ್ವಪ್ರಯೋಜನಕ್ಕಲ್ಲ. ಆದುದರಿಂದ ಸ ರ್ವಾತ್ಮಕನಾದ ನಿನಗೆ ನಮಸ್ಕಾರವು ||೩೩|| ಜಗದಾಧಾರವಾದ ಕಮಲವನ್ನು ನಾಭಿಯಲ್ಲುಳ್ಳ ವನಾಗಿ, ನಿನ್ನಿಂದ ಸೃಜಿಸಲ್ಪಟ್ಟ ಪ್ರಾಣಿಗಳಿಗೆ ಉಪಾಧಿಭೂತಗಳಾದ ಶಬ್ದಾದಿ ತನ್ಮಾತ್ರ

---

‡ (1) ವಿ. ಪ್ರಪಂಚಸ್ವರೂಪನಾದ ನೀನು, ಸ್ವರೂಪ, ರೂಪ, ಸ್ವಭಾವಗಳಿಂದ ಸರ್ವೋತ್ತ ಮನೆನಿಸಿರುವುದು ಭಕ್ತಾನುಗ್ರಹಕ್ಕಾಗಿಯೇ ಹೊರತು ಸ್ವಾರ್ಥಕ್ಕಾಗಿ ಅಲ್ಲ. ಆದುದರಿಂದ ನಿನ್ನನ್ನು ಉ ಪಾಸನಮಾಡುವ ನನಗೂ ನಿತ್ಯಾನಂದ ಪ್ರಾಪ್ತಿಯಾಗುವಂತನುಗ್ರಹಿಸು.

(2) ವಿ. ಅಯ್ಯಾ ಜ್ಞಾನಶಿರೋಮಣಿಗಳಾದ ಪ್ರಚೇತಸರಿರಾ ! ಭಗವದುಪಾಸನೆಗಾಗಿ ನನ್ನಿಂದು ಪದೇಶವನ್ನು ಪಡೆದಿರಾದುದರಿಂದ ನೀವೇ ಧನ್ಯರು. ನಿಮಗೆ ಭಗವಂತನಲ್ಲಿ ದಿನದಿನವೂ ಭಕ್ತಿಯು ಬೆಳೆ ಯಲಿ, "ಸರ್ವಾಂತರ್ಯಾಮಿಯಾದ ಭಗವಂತನನ್ನು ನಮಸ್ಕರಿಸುವುದು ಮಾತ್ರವೇ ನಮಗೆ ಶಕ್ಯವಲ್ಲದೆ ಬೇ ರೆ ಇಲ್ಲ" ಎಂದು ನಿಶ್ಚಯಿಸಿ ನೀವು ಭಕ್ತಿಯಿಂದ ಪರಮಾತ್ಮನನ್ನು ಪೂಜಿಸಿರಿ ಎಂದು ತಾತ್ಪರ್ಯವು. ಇಲ್ಲಿ 'ಸರ್ವಾತ್ಮ' ಎಂಬ ಪದಕ್ಕೆ ಸರ್ವಾಂತರ್ಯಾಮಿಯೆಂದರ್ಥವೇ ಹೊರತು ಸರ್ವಾತ್ಮಕನೆಂದರ್ಥವಲ್ಲ.

ಶಾಂತಾಯ ಕೂಟಸ್ಥಾಯ ಸ್ವರೋಚಿಷೇ ॥ ೩೪ ॥ ಸಂಕರ್ಷಣಾಯ
ಸೂಕ್ಷ್ಮಾಯ ದುರಂತಾಯಾಂತ ಕಾಯ ಚ । ನಮೋ ವಿಶ್ವಪ್ರಬೋಧಾಯ
ಪ್ರದ್ಯುಮ್ನಾಯಾಂತ ರಾತ್ಮನೇ ॥೩೫॥ ನಮೋನಮೋಽನಿರುದ್ಧಾಯ ಹೃ
ಷೀಕೇಶೇಂದ್ರಿಯಾತ್ಮನೇ। ನಮಃ ಪರಮಹಂಸಾಯ ಪೂರ್ಣಾಯ ನಿಭೃತಾ
ತ್ಮನೇ ॥೩೬॥ ಸ್ವರ್ಗಾಽಪವರ್ಗದ್ವಾರಾಯ ನಿತ್ಯಂ ಶುಚಿಷದೇ ನಮಃ ।
ನಮೋ ಹಿರಣ್ಯವೀರ್ಯಾಯ ಚಾತುರ್ಹೋತ್ರಾಯ ತಂತವೇ ॥೩೭॥ ನಮ
ಊರ್ಜ ಇಷೇ ತ್ರಯ್ಯಾಃ ಪತಯೇ ಯಜ್ಞರೇತಸೇ । ತೃಪ್ತಿದಾಯ ಚ ಜೀ

---

ದೇವಾಯ – ಚಿತ್ತಾಧಿಷ್ಠಾತೃವಾದ. ಶಾಂತಾಯ – ಶಾಂತಿಸಂಪನ್ನನಾದ, ಕೂಟಸ್ಥಾಯ–ನಿರ್ವಿಕಾರನಾದ, ಸ್ವರೋಚಿಷೇ - ಸ್ವಪ್ರಕಾಶನಾದ ಭಗವಂತನಿಗೆ, ನಮಃ - ನಮಸ್ಕಾರವು, ॥೩೪॥ ಸಂಕರ್ಷಣಾಯ – ಅಹಂಕಾರಾಧಿಷ್ಠಾನವಾದ, ಸೂಕ್ಷ್ಮಾಯ – ಇಂದ್ರಿಯಾಗೋಚರನಾದ, ದುರಂತಾಯ – ನಾಶರಹಿತನಾದ, ಅಂತಕಾಯ – ಮುಖಾಗ್ನಿಯಿಂದ ಲೋಕವನ್ನು ದಹಿಸುವ, ವಿಶ್ವಪ್ರಬೋಧಾಯ – ಸಕಲರಿಗೂ ಜ್ಞಾನೋದಯವನ್ನುಂಟುಮಾಡುವ, ಅಂತರಾತ್ಮನೇ – ಬುದ್ಧಿಗಧಿಷ್ಠಾನವಾದ, ಪ್ರದ್ಯುಮ್ನಾಯ – ಪ್ರದ್ಯುಮ್ನನಿಗೆ, ನಮಃ – ನಮಸ್ಕಾರವು, ॥೩೫॥ ಹೃಷೀ...ನೇ, ಹೃಷೀಕ – ಇಂದ್ರಿಯುಗಳಿಗೆ, ಈಶ – ಅಧಿಪತಿಯಾದಮನಸ್ಸಿನ, ಆತ್ಮನೇ – ಸ್ವರೂಪನಾದ, ಅನಿರುದ್ಧಾಯ – ಅನಿರುದ್ಧನಿಗೆ, ನಮೋನಮಃ – ಅನೇಕನಮಸ್ಕಾರಗಳು, ಪೂರ್ಣಾಯ – ವಿಶ್ವರೂಪಿಯಾದ, ನಿಭೃತಾತ್ಮನೇ – ಕ್ಷಯವೃದ್ಧಿರಹಿತನಾದ, ಪರಮಹಂಸಾಯ – ಸೂರ್ಯಸ್ವರೂಪನಿಗೆ, ನಮಃ - ನಮಸ್ಕಾರವು ॥೩೬॥ ಸ್ವರ್ಗಾ...ಯ – ಸ್ವರ್ಗಮೋಕ್ಷಗಳಿಗೆ ಸಾಧನವಾದ, ನಿತ್ಯಂ – ಯಾವಾಗಲೂ, ಶುಚಿಷದೇ – ಯೋಗಿಗಳ ಮನಸ್ಸಿನಲ್ಲಿ ನೆಲಸಿರುವಸೂರ್ಯರೂಪನಿಗೆ, ನಮಃ, ಹಿರಣ್ಯ..ಯ – ಚಿನ್ನವೇ ರೇತಸ್ಸಾಗುಳ್ಳ, ಚಾತುರ್ಹೋತ್ರಾಯ – ಚಾತುರ್ಹೋತ್ರಕರ್ಮಕ್ಕೆ ಸಾಧನವಾದ, ತಂತವೇ – ಯಜ್ಞವಿಸ್ತಾರಕನಾದ, ಅಗ್ನಿಸ್ವರೂಪನಿಗೆ, ನಮಃ – ನಮಸ್ಕಾರವು ॥೩೭॥ ಊರ್ಜೇ – ಪಿತೃಗಳ ಅನ್ನರೂಪನೂ, ಇಷೇ – ದೇವತೆಗಳ ಅನ್ನರೂಪನೂ ಆದ

---

ಗಳಿಗೂ, ಜ್ಞಾನಕರ್ಮೇಂದ್ರಿಯುಗಳಿಗೂ ನಿಯಾಮಕನಾಗಿ ಜಗತ್ಕಾರಣನೆನಿಸಿರುವ ಸರ್ವಾಂತರ್ಯಾಮಿಯಾದ ನಿನಗೆ ನಮಸ್ಕಾರವು. ಶಾಂತನಾಗಿಯೂ, ನಿರ್ವಿಕಾರನಾಗಿಯೂ, ಸ್ವಪ್ರಕಾಶನಾಗಿಯೂ ಇರುವ ಮನೋಧಿಷ್ಠಾತೃವೆನಿಸಿದ ವಾಸುದೇವಮೂರ್ತಿಗೆ ನಮಸ್ಕಾರವು ॥೩೪॥ ಅಹಂಕಾರಕ್ಕೆ ಅಧಿಷ್ಠಾನವೆನಿಸಿ, ಇಂದ್ರಿಯಾತೀತನಾಗಿ ತನ್ನ ಮುಖಾಗ್ನಿಯಿಂದ ಜಗತ್ತೆಲ್ಲವನ್ನೂ ಲಯಗೊಳಿಸುತ್ತ ನಾಶರಹಿತನಾಗಿರುವ ಸಂಕರ್ಷಣಮೂರ್ತಿಗೂ, ಸಕಲಪ್ರಾಣಿಗಳ ಜ್ಞಾನೋದಯಕ್ಕೂ ಕಾರಣವೆನಿಸಿ ಬುದ್ಧಿಗಧಿಷ್ಠಾತೃವಾಗಿರುವ ಪ್ರದ್ಯುಮ್ನನಿಗೂ ನಮಸ್ಕಾರವು ॥೩೫॥ ಇಂದ್ರಿಯುಗಳಿಗೆ ಅಧಿಪತಿಯಾದ ಮನಸ್ಸಿನ ಸ್ವರೂಪನೆನಿಸಿರುವ ಅನಿರುದ್ಧನಿಗೂ, ತೇಜೋರೂಪದಿಂದ ಜಗದ್ವ್ಯಾಪಿಯಾಗಿ ಹಾನಿವೃದ್ಧಿರಹಿತನಾದ ಪರಮಹಂಸ (ಸೂರ್ಯ) ಸ್ವರೂಪನಾದ ಭಗವಂತನಿಗೂ ನಮಸ್ಕಾರವು ॥೩೬॥ ಸ್ವರ್ಗಕ್ಕೂ ಮೋಕ್ಷಕ್ಕೂ ದ್ವಾರಭೂತನಾಗಿ ನಿರಂತರವೂ ನಿರ್ಮಲಗಳಾದ ಯೋಗಿ ಚಿತ್ತಗಳಲ್ಲಿ ನೆಲಸಿರುವ ಯಜ್ಞಸ್ವರೂಪನಿಗೂ, ಯಜ್ಞಾದಿ ಕರ್ಮಗಳಿಗೆ ಫಲದಾಯಕನಾಗಿಯೂ, ಯಜ್ಞಪಾಲಕನಾಗಿಯೂ ಇರುವ ಅಗ್ನಿಸ್ವರೂಪನಿಗೂ ನಮಸ್ಕಾರವು ॥೩೭॥

ವಾನಾಂ ನಮಃ ಸ್ಸರ್ವರಸಾತ್ಮನೇ ॥೩೮॥ ಸ್ಸರ್ವಸತ್ವಾತ್ಮದೇಹಾಯ ವಿಶೇಷಾಯ ಸ್ಥವೀಯಸೇ । ನಮ ಸ್ತ್ರೈಲೋಕ್ಯಪಾಲಾಯ ಸಹ ಓಜೋಬಲಾಯಚ ॥೩೯॥ ಅರ್ಥಲಿಂಗಾಯ ನಭಸೇ ನಮೋಽಂತರ್ಬಹಿರಾತ್ಮನೇ । ನಮಃ ಪುಣ್ಯಾಯ ಲೋಕಾಯ ಅಮುಷ್ಮೈ ಭೂರಿವರ್ಚಸೇ ॥೪೦॥ ಪ್ರವೃತ್ತಾಯ ನಿವೃತ್ತಾಯ ಪಿತೃದೇವಾಯ ಕರ್ಮಣೇ । ನಮೋಽಧರ್ಮವಿಪಾಕಾಯ ಮೃತ್ಯವೇ ದುಃಖದಾಯಚ ॥೪೧॥ ನಮಸ್ತ ಆಶಿಷಾ ಮೀಶ ! ಮನವೇ ಕಾರಣಾತ್ಮನೇ । ನಮೋ ಧರ್ಮಾಯ ಬೃಹತೇ ಕೃಷ್ಣಾಯಾಽಕುಂಠಮೇಧಸೇ। ಪುರುಷಾಯ ಪುರಾಣಾಯ ಸಾಂಖ್ಯಯೋಗೇಶ್ವರಾಯ

ಚಂದ್ರನಿಗೆ, ನಮಃ ತ್ರಯ್ಯಾಃ - ವೇದಗಳಿಗೆ, ಪತಯೇ - ನಾಯಕನಾದ, ಯಜ್ಞರೇತಸೇ - ಫಲರೂಪನಾದ ರವಿಗೆ, ನಮಃ, ಜೀವಾನಾಂ - ಪ್ರಾಣಿಗಳಿಗೆ, ತೃಪ್ತಿದಾಯ - ತೃಪ್ತಿಯನ್ನುಂಟುಮಾಡುವ, ಸರ್ವರಸಾತ್ಮನೆ - ಸಕಲರಸಾತ್ಮಕಜಲರೂಪನಿಗೆ ನಮಃ - ನಮಸ್ಕಾರವು ॥೩೮॥ ಸರ್ವ...ಯ, ಸರ್ವತತ್ವ - ಸಕಲಪ್ರಾಣಿಗಳ, ಆತ್ಮಗಳಿಗೂ, ದೇಹಾಯ - ನೆಲೆಯಾದ, ಸ್ಥವೀಯಸೇ - ವಿರಾಡ್ರೂಪನಾದ, ಆದಿಶೇಷಾಯ - ಪೃಥ್ವೀರೂಪನಾದ, ತ್ರೈಲೋ...ಯ - ತ್ರಿಲೋಕಗಳನ್ನೂ ಸಲಹುವ, ಸಹ....ಯ, ಸಹ - ಇಂದ್ರಿಯಶಕ್ತಿ ಓಜಃ -ತೇಜಸ್ಸು, ಬಲಃಯ - ದೇಹಶಕ್ತಿ ಇವುಗಳುಳ್ಳವಾಯುರೂಪನಿಗೆ, ನಮಃ ॥೩೯॥ ಅರ್ಥಲಿಂಗಾಯ - ಪದಾರ್ಥಗಳನ್ನು ಬೋಧಿಸುವ, ಅಂತ....ನೇ - ಅಂತರಂಗಬಹಿರಂಗವ್ಯವಹಾರಗಳಿಗೆಆಶ್ರಯನಾದ, ನಭಸೇ - ಆಕಾಶರೂಪನಿಗೆ, ನಮಃ, ಪುಣ್ಯಾಯ - ಪುಣ್ಯಕರವಾದ ಭೂರಿವರ್ಚಸೇ - ಅಧಿಕತೇಜಸ್ಸುಳ್ಳ' ಅಮುಷ್ಮೈಲೋಕಾಯ - ಸ್ವರ್ಗಲೋಕಸ್ವರೂಪನಿಗೆ, ನಮಃ - ॥೪೦॥ ಪಿತೃದೇವಾಯ - ಪಿತೃಲೋಕ ದೇವಲೋಕ ಫಲಗಳನ್ನುಕೊಡುವ, ಪ್ರವೃತ್ತಾಯ - ಪ್ರವೃತ್ತಿರೂಪವಾದ, ನಿವೃತ್ತಾಯ - ನಿವೃತ್ತಿರೂಪವಾದ, ಕರ್ಮಣೇ - ಕರ್ಮರೂಪನಿಗೂ, ಅಧ...ಯ - ಅಧರ್ಮಫಲವನ್ನುಕೊಡುವ, ದುಃಖದಾಯ - ದುಃಖಗಳನ್ನುಂಟುಮಾಡುವ, ಮೃತ್ಯವೇ - ಮೃತ್ಯುರೂಪನಿಗೂ, ನಮಃ ॥೪೧॥ ಈಶ - ಸ್ವಾಮಿಯೇ ! ಆಶಿಷಾಂ - ಕರ್ಮಫಲಗಳಿಗೆ, ಕಾರಣಾತ್ಮನೇ - ಕಾರಣ

ದೇವತೆಗಳಿಗೂ ಪಿತೃಗಳಿಗೂ ಅನ್ನವೆನಿಸಿರುವ ಚಂದ್ರರೂಪನಿಗೆ ನಮಸ್ಕಾರವು. ವೇದಪ್ರತಿಪಾದ್ಯನೂ ಯಜ್ಞಫಲದಾತೃವೂ ಆದ ಸೂರ್ಯರೂಪನಿಗೂ, ಸಕಲಪ್ರಾಣಿಗಳಿಗೂ ತೃಪ್ತಿಯನ್ನುಂಟುಮಾಡುವ ಸರ್ವರಸಾತ್ಮಕವಾದ ಜಲರೂಪನಿಗೂ ನಮಸ್ಕಾರವು ॥ ೩೮ ॥ ಸಕಲಪ್ರಾಣಿಗಳ ಚೇತನಗಳಿಗೂ ನೆಲೆಯೆನಿಸಿದ ವಿರಾಡ್ರೂಪನಿಗೂ, ಭೂಸ್ವರೂಪನಿಗೂ ತ್ರಿಲೋಕಗಳನ್ನೂ ಸಲಹುತ್ತಾ, ಇಂದ್ರಿಯಶಕ್ತಿ, ಪ್ರಾಣಶಕ್ತಿ, ದೇಹಶಕ್ತಿಗಳಿಗೆ ಆಶ್ರಯನಾದ ವಾಯುರೂಪನಿಗೂ ನಮಸ್ಕಾರವು ॥೩೯॥ ವಸ್ತುಗಳನ್ನು ಬೋಧಿಸುವ ಶಬ್ದಗಳೇ ಗುಣವಾಗುಳ್ಳುದಾಗಿ, ಅಂತರಂಗ ಬಹಿರಂಗಗಳಲ್ಲಿ ನಡೆಯುವ ಸಕಲವ್ಯವಹಾರಗಳಿಗೂ ಸಾಧನವೆನಿಸಿರುವ ಆಕಾಶರೂಪನಿಗೂ, ದಿವ್ಯತೇಜಸ್ಸಿನಿಂದ ಕೂಡಿದ ಪುಣ್ಯಕರವಾದ ಸ್ವರ್ಗಲೋಕದ ಸ್ವರೂಪನಿಗೂ ನಮಸ್ಕಾರವು ॥೪೦॥ ಪಿತೃಲೋಕಪ್ರಾಪ್ತಿಯನ್ನುಂಟುಮಾಡುವ ಕಾಮ್ಯಕರ್ಮಗಳ ರೂಪನೂ, ದೇವಲೋಕಪ್ರಾಪ್ತಿಯನ್ನುಂಟುಮಾಡುವ ನಿಷ್ಕಾಮಕರ್ಮಗಳ ಸ್ವರೂಪನೂ ಆದ ಧರ್ಮಮೂರ್ತಿಗೂ, ದುಃಖರೂಪವಾದ ಅಧರ್ಮಫಲಗಳ

ಚ ॥೪೨॥ ಶಕ್ತಿತ್ರಯಸಮೇತಾಯ ಮೀಢುಷೇಽಹಂಕೃತಾತ್ಮನೇ। ಚೇತ ಆ
ಕೂತಿರೂಪಾಯ ನಮೋ ವಾಚೋ ವಿಭೂತಯೇ ॥೪೩॥ ದರ್ಶನಂ ನೋ
ದಿದೃಕ್ಷೂಣಾಂ ದೇಹಿ ಭಾಗವತಾಽರ್ಚಿತಂ । ರೂಪಂ ಪ್ರಿಯತಮಂ ಸ್ವಾ
ನಾಂ ಸರ್ವೇಂದ್ರಿಯಗುಣಾಂಜನಂ ॥ ೪೪ ॥ ಸ್ನಿಗ್ಧಪ್ರಾವೃಡ್ಘನಶ್ಯಾಮಂ ಸ
ರ್ವಸೌಂದರ್ಯಸಂಗ್ರಹಂ। ಚಾರ್ವಾಯತಚತುರ್ಬಾಹುಂ ಸುಜಾತರುಚಿ
ರಾನನಂ ॥ ೪೫ ॥ ಪದ್ಮಕೋಶಪಲಾಶಾಽಕ್ಷಂ ಸುಂದರಭ್ರುಸುನಾಸಿಕಂ ।

---

ಸ್ವರೂಪನಾದ, ಮನವೇ - ಸರ್ವಜ್ಞನಿಗೆ, ಅಥವಾ ಮಂತ್ರರೂಪನಿಗೆ, ನಮಃ, ಬೃಹತೇಧರ್ಮಾಯ - ಪರಮಧರ್ಮರೂಪನಾದ, ಅಕುಂಠಮೇಧಸೇ - ಅಪ್ರತಿಹತಜ್ಞಾನವುಳ್ಳ, ಸಾಂಖ್ಯ..ಯ - ಜ್ಞಾನಿಗಳಿಗೂ ಯೋಗಿಗಳಿಗೂ ಧ್ಯೇಯನಾದ, ಪುರಾಣಾಯಪುರುಷಾಯ-ಪುರಾಣಪುರುಷನಾದ, ಕೃಷ್ಣಾಯ - ಕೃಷ್ಣನಿಗೆ ನಮಃ ॥೪೨॥ ಶಕ್ತಿ...ಕರ್ತೃ, ಕರಣ, ಕರ್ಮಗಳೆಂಬ ತ್ರಿವಿಧಶಕ್ತಿಗಳಿಂದಕೂಡಿದ, ಅಹಂಕಾರರೂಪನಾದ, ಮೀಢುಷೇ - ರುದ್ರರೂಪನಿಗೂ, ಚೇತ....ಯ - ಜ್ಞಾನ, ಕ್ರಿಯಾರೂಪನಾದ, ವಾಚಃ - ವಾಗ್ರೂಪವಾದ ವೇದದಿಂದ, ವಿಭೂತಯೇ - ವಿಚಿತ್ರಸೃಷ್ಟಿಯುಳ್ಳ ಬ್ರಹ್ಮರೂಪನಿಗೂ, ನಮಃ ॥೪೩॥ ಭಾಗವತಾರ್ಚಿತಂ - ಭಕ್ತರಿಂದಪೂಜಿಸಲ್ಪಟ್ಟ, ಸ್ವಾನಾಂ - ಭಕ್ತರಿಗೆ, ಪ್ರಿಯತಮಂ - ಅತ್ಯಂತ ಪ್ರಿಯವಾದ, ಸರ್ವ-..ನಂ, ಸರ್ವ-ಎಲ್ಲಾ, ಇಂದ್ರಿಯ - ಚಕ್ಷುರಾದೀಂದ್ರಿಯಗಳ, ಗುಣ - ವಿಷಯಗಳನ್ನು, ಅಂಜನಂ - ಪ್ರಕಾಶಗೊಳಿಸುವ, ರೂಪಂ - ರೂಪವನ್ನು, -ದಿದೃಕ್ಷೂಣಾಂ ನೋಡಲೆಳಸುತ್ತಿರುವ, ನಃ-ನಮಗೆ, ದರ್ಶನಂ - ಸಾಕ್ಷಾತ್ಕಾರವನ್ನು, ದೇಹಿ - ಕೊಡು ॥೪೪॥ ಸ್ನಿಗ್ಧ...ಮಂ - ಸೊಗಸಾದ ಮುಂಗಾರಮುಗಿಲಂತೆ, ಕರಿದಾದ, ಸರ್ವ..ಹಂ - ಸಕಲ ಸೌಂದರ್ಯಕ್ಕೂ ನೆಲೆಯಾದ, ಚಾರ್ವಾ—ಹುಂ-ಅಂದವಾಗಿ ಉದ್ದವಾದ ನಾಲ್ಕುತೋಳುಳ್ಳ, ಸುಜಾ—ನಂ-ಕೋಮಲವಾಗಿ ಸುಂದರವಾದ ಮುಖವುಳ್ಳ,

---

ನ್ನು ಕೊಡುವ ಮೃತ್ಯುರೂಪನಿಗೂ, ನಮಸ್ಕಾರವು ॥೪೧॥ ಎಲೈ ಪರಮೇಶ್ವರನೆ ! ಕರ್ಮಫಲಗಳ ಸ್ವರೂಪನೂ, ಸರ್ವಜ್ಞನೂ, ಮಂತ್ರಸ್ವರೂಪನೂ ಆದ ನಿನಗೆ ನಮಸ್ಕಾರವು. ಧರ್ಮಸ್ವರೂಪನೂ ಅಕುಂಠಪ್ರಜ್ಞನೂ, ಜ್ಞಾನಿಗಳಿಗೂ ಯೋಗಿಗಳಿಗೂ ಧ್ಯೇಯನೂ ಪುರಾಣಪುರುಷನೂ, ಶ್ರೀ ಕೃಷ್ಣರೂಪನೂ ಆದ ನಿನಗೆ ನಮಸ್ಕಾರವು ॥೪೨॥ ಕರ್ತೃಕರಣ ಕರ್ಮರೂಪವಾದ ಶಕ್ತಿತ್ರಯದಿಂದ ಕೂಡಿದ ಅಹಂಕಾರಾತ್ಮಕನಾದ ರುದ್ರರೂಪನಿಗೂ, ಜ್ಞಾನಕ್ರಿಯಾರೂಪನಾಗಿ ವಾಗ್ರೂಪವಾದ ವೇದದಿಂದ ವಿಚಿತ್ರಸೃಷ್ಟಿಯನ್ನು ಮಾಡುವ ಬ್ರಹ್ಮರೂಪನಿಗೂ ನಮಸ್ಕಾರವು ॥೪೩॥ ಇಂತು ಭಗವಂತನ ಸರ್ವಾತ್ಮಕತ್ವವನ್ನು ವಿವರಿಸುತ್ತಾ ನಮಸ್ಕರಿಸಿ, ಬಳಿಕ ಅಯ್ಯಾ ಪರಮಾತ್ಮನೆ ! ನೀನಿಂತು ಜಗತ್ಸ್ವರೂಪನಾಗಿರುವುದರಿಂದ ಭಕ್ತರಿಗೆ ಅತ್ಯಂತ ಪ್ರಿಯವಾಗಿಯೂ, ಭಾಗವತರಿಂದ ಪೂಜಿತವಾಗಿಯೂ, ಸಕಲೇಂದ್ರಿಯಗಳಿಗೂ ಅಗೋಚರಗಳಾದ ಶಬ್ದಾದಿವಿಷಯಗಳನ್ನುಪ್ರಕಾಶಗೊಳಿಸುವುದಾಗಿಯೂ ಇರುವ ನಿನ್ನದಿವ್ಯಮಂಗಳ ವಿಗ್ರಹವನ್ನು ನೋಡಲೆಳಸುತ್ತಿರುವ ನಮಗೆ ಸಾಕ್ಷಾತ್ಕಾರಗೊಳಿಸು॥೪೪॥ಮುಂಗಾರು ಮುಗಿಲಂತೆ ನೀಲವರ್ಣದಿಂದೊಪ್ಪುತ್ತಾ, ಸಕಲ ಸೌಂದರ್ಯಗಳಗೂ ನೆಲೆಮನೆಯೆನಿಸಿ ಸುಂದರವಾಗಿಯೂ,ಉದ್ದವಾಗಿಯೂ ಇರುವ ಚತುರ್ಭುಜಗಳಿಂದೊಡಗೂಡಿ,ಕೋಮಲವಾಗಿಯೂ ಅಂದವಾಗಿಯೂ ಇರುವ ಮುಖಕಮಲದಿಂದ ಕಂಗೊ

ಸುದ್ವಿಜಂ ಸುಕಪೋಲಾಸ್ಯಂ ಸಮಕರ್ಣವಿಭೂಷಣಂ ॥೪೬॥ ಪ್ರೀತಿಪ್ರಹಸಿತಾಽಪಾಂಗಮಲಕೈ ರುಪಶೋಭಿತಂ । ಲಸತ್ಪಂಕಜ ಕಿಂಜಲ್ಕ ದುಕೂಲಂ ಮೃಷ್ಟಕುಂಡಲಂ ॥೪೭॥ ಸ್ಫುರತ್ಕಿರೀಟವಲಯ ಹಾರನೂಪುರಮೇಖಲಂ । ಶಂಖಚಕ್ರಗದಾಪದ್ಮ ಮಾಲಾಮಣ್ಯುತ್ತಮರ್ಧಿಮತ್ ॥೪೮॥ ಸಿಂಹಸ್ಕಂಧತ್ವಿಷೋ ಬಿಭ್ರತ್ಸೌಭಗಗ್ರೀವ ಕೌಸ್ತುಭಂ । ಶ್ರಿಯಾಽನಪಾಯಿನ್ಯಾ ಕ್ಷಿಪ್ತನಿಕಷಾಽಶ್ಮೋರಸೋಲ್ಲಸತ್ ॥೪೯॥ ಪೂರರೇಚಕ ಸಂವಿಗ್ನವಲಿವಲ್ಗುತಲೋದರಂ । ಪ್ರತಿಸಂಕ್ರಾಮಯದ್ವಿಶ್ವಂ ನಾಭ್ಯಾವರ್ತಗಭೀರ

ಪದ್ಮ...ಕ್ಷಂ - ಕಮಲದೆಸಳಿನಂತೆ ಕಣ್ಣುಳ್ಳ. ಸುಂದರಭ್ರು - ಸೊಗಸಾದ ಹುಬ್ಬುಳ್ಳ, ಸುನಾಸಿಕಂ - ಚೆಳ್ಳಿಯ ಮೂಗುಳ್ಳ, ಸುದ್ವಿಜಂ - ಅಂದವಾದ ಹಲ್ಲುಳ್ಳ, ಸುಕ...ಸ್ಯಂ - ರಮಣೀಯ್ಯಗಳಾದ ಗಲ್ಲಗಳೂ ಮುಖವೂ ಉಳ್ಳ, ಸಮ—ಣಂ- ಸಮಗಳಾದ ಕರ್ಣಗಳೇ ಆಭರಣವಾಗುಳ್ಳ ॥೪೬॥ ಪ್ರೀತಿ⋯ಗಂ- ಪ್ರೀತಿಯಿಂದ ನಗುವಂತಿರುವ ಕಡೆಗಣ್ಣುಗಳುಳ್ಳ, ಅಲಕೈಃ - ಮುಂಗುರುಳಿಂದ, ಉಪಶೋಭಿತಂ - ಅಂದವಾಗಿರುವ, ಲಸ...ಲಂ - ಹೊಳೆಯುವ ಕಮಲಕೇಸರದಂತೆ ಪೀತಾಂಬರವುಳ್ಳ, ಮೃಷ್ಟಕುಂಡಲಂ - ನಿರ್ಮಲಗಳಾದ ಕರ್ಣಾಭರಣಗಳುಳ್ಳ, ॥೪೭॥ ಸ್ಫುರ⋯ಲಂ - ಥಳಥಳಿಸುವ ಕಿರೀಟ, ಕಡಗ, ಹಾರ, ಕಾಲಂದುಗೆ, ಒಡ್ಯಾಣಗಳುಳ್ಳ, ಶಂಖ⋯ಮತ್ - ಶಂಖ, ಚಕ್ರ, ಗದೆ, ಪದ್ಮ, ರತ್ನಹಾರಗಳ ಉತ್ತಮಕಾಂತಿಯುಳ್ಳ ॥೪೮॥ ಸಿಂಹ⋯ಷಃ - ಸಿಂಹದ ಕೊರಳಲ್ಲಿರುವ ಕೇಸರಗಳಂತೆ ಸುತ್ತಲೂ ಕಾಂತಿಗಳನ್ನು ಬೀರುತ್ತಿರುವ, ಸೌಭ⋯ಭಂ - ಸುಂದರವಾದ ಕೌಸ್ತುಭಮಣಿಯನ್ನು. ಬಿಭ್ರತ್ -ಧರಿಸಿರುವ, ಅನಪಾಯಿನ್ಯಾ - ಎಡಬಿಡದ, ಶ್ರಿಯಾ - ಲಕ್ಷ್ಮಿಯಿಂದ, ಆಕ್ಷಿ⋯ಸಾ, ಆಕ್ಷಿಪ್ತ - ತಿರಸ್ಕರಿಸಲ್ಪಟ್ಟ, ನಿಕಷಾಶ್ಮ- ಒರೆಗಲ್ಲಿನಂತಿರುವ, ಉರಸಾ - ಎದೆಯಿಂದ, ಉಲ್ಲಸತ್-ಪ್ರಕಾಶಮಾನವಾದ । ೪೯ ।

ಆವರ್ತಗಭೀರಯಾ-ಸುಳಿಯಂತೆ ಆಳವಾದ, ನಾಭ್ಯಾ - ಹೊಕ್ಕುಳಿಂದ, ವಿಶ್ವಂ- ಜಗತ್ತನ್ನು, ಪ್ರತಿಸಂಕ್ರಾಮಯದಿವ - ಒಳಹೋಗಿಸಿಕೊಳ್ಳುವುದೊ ಎಂಬಂತೆ, ಪೂರ⋯ರಂ, ಪೂರರೇಚಕ- ಶ್ವಾಸೋಚ್ಛ್ವಾಸ

ಳಸುತ್ತಾ, ತಾವರೆಯೆಸಳನಂತಿರುವ ಕಣ್ಣುಗಳಿಂದಲೂ ಅಂದಗಳಾದ ಕಣ್ಣುಹುಬ್ಬುಗಳಿಂದಲೂ ಮನೋಹರವಾದ ನಾಸಾದಂಡದಿಂದಲೂ, ಮಿರುಗುತ್ತಿರುವ ಸುಲಿಪಲ್ಲಿನಿಂದಲೂ, ಕನ್ನಡಿಗಳನ್ನು ಹೋಲುವ ಗಲ್ಲಗಳಿಂದಲೂ, ಅಂದವಾದ ನಗೆಮೊಗದಿಂದಲೂ, ಸಮವಾಗಿ ಮೆರೆಯುತ್ತಿರುವ ಕಿವಿಗಳಿಂದಲೂ, ವಿರಾಜಮಾನನಾಗಿ ಪ್ರೀತಿಯಿಂದ ನಗುವಂತಿರುವ ಕಡೆಗಣ್ಣೋಟಗಳನ್ನು ಬೀರುತ್ತಾ ತುಂಬಿ ಮಿಂಡೆರಗಿರುವ ತಾವರೆಯಂತೆ ಮುಂಗುರುಗಳಿಂದ ಕಂಗೊಳಿಸುತ್ತಾ, ಕಮಲ ಕೇಸರದಂತೆ ಹೊಂಬಣ್ಣವಾದ ಪೀತಾಂಬರವನ್ನು ಧರಿಸಿ, ತಳತಳಿಸುವ ರತ್ನಕುಂಡಲಗಳಿಂದ ಮಂಡಿತನಾಗಿ, ಹೊಳೆಯುವ ಕಿರೀಟ, ಕಡಗ, ಹಾರ ಕಾಲ್ಗಡಗ, ಒಡ್ಯಾಣಗಳಿಂದಲಂಕೃತನಾಗಿ, ಶಂಖ, ಚಕ್ರ, ಗದಾ, ಪದ್ಮ, ರತ್ನಹಾರಗಳಿಂದ ಬೆಳಗುತ್ತಾ, ಸಿಂಹದ ಕೊರಲಲ್ಲಿ ಹೊಳೆಯುವ ಕೇಸರಗಳಂತೆ ಸುತ್ತಮುತ್ತಲೂ ಕಾಂತಿಗಳನ್ನು ಬೀರುತ್ತಿರುವ ಕೊರಳಿನಲ್ಲಿ ಕೌಸ್ತುಭಮಣಿಯನ್ನು ಧರಿಸಿ, ಚಿನ್ನದ ರೇಖೆಗಳಿಂದ ಹೊಳೆಯುವ ಒರೆಗಲ್ಲಿನಂತಿರುವ ವಿಶಾಲ ವಕ್ಷಸ್ಥಲದಲ್ಲಿ ಲಕ್ಷ್ಮಿಯನ್ನೆಡಬಿಡದೆ ನೆಲೆಗೊಳಿಸಿಕೊಂಡು, ಶ್ವಾಸೋಚ್ಛ್ವಾಸಗಳಿಂದ ಚಲಿಸುತ್ತಿರುವ ವಳಿಗಳಿಂದಲೂ, ಮುನ್ನು ಎಲ್ಲಿಂದ ಜಗತ್ತನ್ನು ಹೊರಪಡಿಸಿದನೋ,

ಯಾ ॥ ೫೦ ॥ ಶ್ಯಾಮಶ್ರೋಣ್ಯಧಿರೋಚಿಷ್ಣು ದುಕೂಲ ಸ್ವರ್ಣಮೇಖಲಂ। ಸಮಚಾರ್ವಂಘ್ರಿಜಂಘೋರು ನಿಮ್ನಜಾನು ಸುದರ್ಶನಂ॥೫೧॥ ಪದಾ ಶರತ್ಪದ್ಮಪಲಾಶರೋಚಿಷಾ ನಖದ್ಯುಭಿರ್ನೋಂತರಘಂ ವಿಧುನ್ವತಾ । ಪ್ರದರ್ಶಯ ಸ್ವೀಯಮಪಾಸ್ತಸಾಧ್ವಸಂ ಪದಂ ಗುರೋ ! ಮಾರ್ಗಗುರುಸ್ತಮೋಜುಷಾಂ ॥ ೫೨ ॥ ಏತದ್ರೂಪಮನುಧ್ಯೇಯಮಾತ್ಮಶುದ್ಧಿಮಭೀಪ್ಸತಾಂ । ಯದ್ಭಕ್ತಿಯೋಗೋಽಭಯದಃ ಸ್ವಧರ್ಮಮನುತಿಷ್ಠತಾಂ ॥೫೩॥ ಭವಾನ್ ಭಕ್ತಿಮತಾ ಲಭ್ಯೋ ದುರ್ಲಭಃ ಸರ್ವದೇಹಿನಾಂ। ಸ್ವಾರಾಜ್ಯ

ಗಳಿಂದ, ಸಂವಿಗ್ನ - ಚಂಚಲಗಳಾದ, ವಳಿ - ವಳಿಗಳಿಂದ, ವಲ್ಗು - ಮನೋಹರವಾದ, ತಲೋದರಂ- ತೆಳುವಾದ ಹೊಟ್ಟೆಯುಳ್ಳ, ॥೫೦॥ ಶ್ಯಾಮ…ಲಂ, ಶ್ಯಾಮ-ಕಪ್ಪಾದ, ಶ್ರೋಣಿ-ನಿತಂಬದಲ್ಲಿ, ಅಧಿರೋಚಿಷ್ಣು - ಪ್ರಕಾಶವಾದ, ದುಕೂಲ - ಪೀತಾಂಬರವು, ಸ್ವರ್ಣಮೇಖಲಂ - ಚಿನ್ನದೊಡ್ಯಾಣವೂ ಉಳ್ಳ ಸಮ…ರು, ಸಮವಾಗಿರುವ ಸುಂದರಗಳಾದ ಪಾದ, ಮೊಳಕಾಲು ತೊಡೆಗಳುಳ್ಳ, ನಿಮ್ನ…ನಂ - ಎತ್ತರವಿಲ್ಲದ ಜಾನುಗಳಿಂದ ಸುಂದರವಾದ ರೂಪವನ್ನು ತೋರಿಸು ॥೫೧॥ ಗುರೋ-ಗುರುವೆ ! ತಮೋಜುಷಾಂ - ಅಜ್ಞಾನಿಗಳಿಗೆ, ನೀನು, ಮಾರ್ಗಗುರುಃ-ದಾರಿಯನ್ನು ತೋರುವವನು, ಆದುದರಿಂದ, ಪದ್ಮ…ಷಾ- ಕಮಲದೆಸಳಿನಂತೆ ಕಾಂತಿಯುಳ್ಳ, ನಖದ್ಯುಭಿಃ - ನಖಕಾಂತಿಗಳಿಂದ, ನಃ - ನಮ್ಮ, ಅಂತರಘಂ - ಒಳಗಿನ ಪಾಪವನ್ನು, ವಿಧುನ್ವತಾ - ಕಳೆಯುವ, ಪದಾ - ಪಾದದಿಂದ, ಅಪಾಸ್ತಸಾಧ್ವಸಂ- ಭಯವನ್ನು ಕಳೆಯುವ, ಸ್ವೀಯಂ - ನಿನ್ನ, ಪದಂ - ಸ್ಥಾನವನ್ನು, ಪ್ರದರ್ಶಯ - ತೋರಿಸು ॥೫೨॥ ಯತ್ - ಯಾವ ಕಾರಣದಿಂದ, ಸ್ವಧರ್ಮಂ - ತನ್ನ ಧರ್ಮವನ್ನು, ಅನುತಿಷ್ಠತಾಂ - ಅನುಸರಿಸುವವರಿಗೆ, ಭಕ್ತಿಯೋಗಃ - ಭಕ್ತಿಯೆಂಬ ಉಪಾಸನವು, ಅಭಯದಃ - ಅಭಯವನ್ನು ಕೊಡತಕ್ಕದ್ದೋ ಅದರಿಂದ ಆತ್ಮಶುದ್ಧಿಂ-

ಮಡಿಳಿ ಅಲ್ಲಿಯೇ ಒಳಕೆ ಸುಳಿಯುತ್ತ ತೋರುವ ಆಳವಾದ ಆವರ್ತನಾಭಿಯಿಂದಲೂ, ಮೆರೆಯುತ್ತಿರುವ ತೆಳುವಾದ ಹೊಟ್ಟೆಯಿಂದ ಶೋಭಾಯಮಾನವಾಗಿ, ಮೇಘಶ್ಯಾಮಲವಾದ ನಿತಂಬದಲ್ಲಿ ಪೀತಾಂಬರವನ್ನುಟ್ಟು ಉಡಿನೂಲನ್ನು ಬಿಗಿದು, ಬಾದೇಸನವಾಗಿ ಮೆರೆಯುತ್ತಿರುವ ಪಾದ, ಮೀಗಾಲು, ತೊಡೆ, ಮೊಳಕಾಲುಗಳಿಂದ ಸುಂದರವಾಗಿ, ಶರತ್ಕಾಲದ ತಾವರೆಯೆಸಳಿನಂತೆ ಬೆಳಗುತ್ತಿರುವ ನಖಗಳಿಂದಲೂ, ಚಂದ್ರಕಿರಣಗಳಂತೆ ಜಗಜಗಸುತ್ತಿರುವ ನಖಕಾಂತಿಗಳಿಂದಲೂ ಭಕ್ತರ ಹೃದಯಾಂಧಕಾರವನ್ನು ತೊಲಗಿಸಿ ಸಂಸಾರಭಯವನ್ನು ನೀಗಾಡುವ ನಿನ್ನ ದಿವ್ಯರೂಪವನ್ನು ತೋರಿಸು. ಎಲೈ ಜಗದ್ಗುರುವೆ ! ಅಜ್ಞಾನಿಗಳಾದ ಪಾಮರರಿಗೆ ಮೋಕ್ಷಮಾರ್ಗವನ್ನು ತೋರಿಸು. ಸದ್ಗುರುವೇ ನೀನಾಗಿರುವುದರಿಂದ ದಿವ್ಯರೂಪ ದರ್ಶನವನ್ನಿತ್ತು ನಮ್ಮನ್ನುದ್ಧರಿಸು ॥೪೫-೫೨॥ ಎಂದು ಸ್ತುತಿಸಿ "ಎಲೈ ಪರಮಾತ್ಮನೆ " ‡ಶೃತಿಗಳಲ್ಲಿ ಹೇಳುವಂತೆ ನಾನು ಪ್ರಾಕೃತಗಳಾದ ಚಕ್ಷುರಾದೀಂದ್ರಿಯಗಳಿಗೆ ಗೋಚರನಾಗುವುದಿಲ್ಲ. ನಿರ್ಮಲವಾದ ಯೋಗಿಗಳ ಮನಸ್ಸಿಗೆ ಮಾತ್ರ ಗೋಚರನಾಗುವೆನು. ಇಂತಿರುವಲ್ಲಿ ಮನಶ್ಶುದ್ಧಿಯಿಲ್ಲದ ನೀವೆಂತು ನನ್ನ ಸಾಕ್ಷಾತ್ಕಾರವನ್ನು ಬಯಸು

‡ ಶ್ರುತಿ. ನಮಾಂಸಚಕ್ಷುರಭಿವೀಕ್ಷ್ಯತೇ ತಂ ನಚಕ್ಷುಷಾ ಪಶ್ಯತಿಕಶ್ಚನೈನಂ ಹೃದಾ ಮನೀಷಾ ಮನಸಾ ಽಭಿಕ್ಲೃಪ್ತಃ॥

ಸ್ವಾರಾಜ್ಯಸ್ಯಾಪ್ಯಭಿಮತ ಏಕಾಂತೇನಾತ್ಮವಿದ್ಗತಿಃ ॥ ೫೪ ॥ ತಂ ದುರಾರಾಧ್ಯ
ಮಾರಾಧ್ಯ ಸತಾಮಪಿ ದುರಾಪಯಾ । ಏಕಾಂತಭಕ್ತ್ಯಾ ಕೋ ವಾಂ
ಛೇತ್? ಪಾದಮೂಲಂ ವಿನಾ ಬಹಿಃ ॥ ೫೫ ॥ ಯತ್ರ ನಿರ್ವಿಷ್ಟಮ
ರಣಂ ಕೃತಾಂತೋ ನಾಭಿಮನ್ಯತೇ । ವಿಶ್ವಂ ವಿಧ್ವಂಸಯನ್ ವೀ
ರ್ಯ ಶೌರ್ಯವಿಸ್ಫೂರ್ಜಿತಭ್ರುವಾ ॥ ೫೬ ॥ ಕ್ಷಣಾರ್ಧೇನಾಪಿ ತುಲ
ಯೇ ನಸ್ವರ್ಗಂ ನಾಪುನರ್ಭವಂ । ಭಗವತ್ಸಂಗಸಂಗಸ್ಯ ಮರ್ತ್ಯಾನಾಂ

ಮನಶುದ್ಧಿಯನ್ನು, ಅಭೀಪ್ಸತಾಂ - ಬಯಸುವವರಿಂದ, ಭಗವತಃ ಭಗವಂತನ, ಏತದ್ರೂಪಂ - ಈ ರೂಪವು, ಧ್ಯೇಯಂ - ಧ್ಯಾನಿಸಲ್ಪಡತಕ್ಕದು ॥೫೩॥ ಭವಾನ್ - ನೀನು, ಸರ್ವದೇಹಿನಾಂ - ಸಕಲಪ್ರಾಣಿಗಳಿಗೂ, ದುರ್ಲಭೋಽಪಿ - ದುರ್ಲಭನಾದರೂ, ಭಕ್ತಿಮತಾ - ಭಕ್ತಿವಂತನಿಂದ, ಲಭ್ಯಃ - ಹೊಂದಲ್ಪಡತಕ್ಕವನು, ಆತ್ಮ....ತಿಃ - ಜ್ಞಾನಿಗಮ್ಯನಾದ ನೀನು, ಏಕಾಂತೇನ - ನಿಯಮದಿಂದ, ಸ್ವಾರಾಜ್ಯಸ್ಯಾಪಿ - ಸ್ವರ್ಗರಾಜ್ಯಕ್ಕಿಂತಲೂ, ಅಭಿಮತಃ - ಪ್ರಿಯನು ॥೫೪॥

ಸತಾಮಪಿ - ಸಾಧುಗಳಿಗೂ, ದುರಾಪಯಾ - ಪಡೆಯಲಸಾಧ್ಯವಾದ, ಏಕಾಂತಭಕ್ತ್ಯಾ - ಅನನ್ಯ ಭಕ್ತಿಯಿಂದ, ದುರಾರಾಧ್ಯಂ - ಉಪಾಯಾಂತರಗಳಿಂದ ಆರಾಧಿಸಲಾಗದ, ತಂ - ಆ ನಿನ್ನನ್ನು, ಆರಾಧ್ಯ - ಪೂಜಿಸಿ, ಕೋ ವಾ - ಯಾವನು, ಪಾದಮೂಲಂ ವಿನಾ - ನಿನ್ನ ಪಾದಾಶ್ರಯವನ್ನುಳಿದು, ಬಹಿಃ - ಇತರವನ್ನು ವಾಂಛೇತ್ - ಬಯಸುವವನು ॥೫೫॥ ವೀರ್ಯ ವಾ, ವೀರ್ಯ - ಬಲದಿಂದಲೂ, ಶೌರ್ಯ - ಉತ್ಸಾಹದಿಂದಲೂ, ವಿಸ್ಫೂರ್ಜಿತ - ಅಲ್ಲಾಡಿಸಲ್ಪಟ್ಟ, ಭ್ರುವಾ - ಕಣ್ಣು ಹುಬ್ಬಿನಿಂದ, ವಿಶ್ವಂ - ಜಗತ್ತನ್ನು, ವಿಧ್ವಂಸಯನ್ - ನಾಶಗೊಳಿಸುವ, ಕೃತಾಂತೋಽಪಿ - ಯಮನೂ, ಯತ್ರ - ಯಾವ ಪಾದಕಮಲದಲ್ಲಿ, ಅರಣಂ - ಶರಣವನ್ನು, ನಿರ್ವಿಷ್ಟಂ - ಪಡೆದವನನ್ನು, ನಾಭಿಮನ್ಯತೇ - ನನ್ನವನೆಂದು ಗರ್ವಿಸುವುದಿಲ್ಲವೋ ॥೫೬॥ ಭಗ...ಸ್ಯ - ಭಕ್ತರ ಸಹವಾಸಕ್ಕೆ, ಸ್ವರ್ಗಂ - ಸ್ವರ್ಗವನ್ನೂ, ಅಪುನರ್ಭವಂ - ಮೋಕ್ಷವನ್ನೂ, ಕ್ಷಣಾರ್ಧೇನಾಪಿ - ಅರ್ಧಕ್ಷಣದಿಂದಲೂ, ನತುಲಯೇ - ಹೋಲಿಸಲಾರೆನು, ಮರ್ತ್ಯಾನಾಂ - ಮೃತರಾಗತಕ್ಕವರ,

ಏರಿ?" ಎನ್ನುವೆಯೇನೋ? ಅಯ್ಯಾ ಭಗವಂತನೆ! ಅಂತಃಕರಣಶುದ್ಧಿಯನ್ನು ಬಯಸುವ ನಾವು ಈ ನಿನ್ನ ದಿವ್ಯರೂಪವು ಧ್ಯಾನಗೋಚರವಾಗಲೆಂದು ಬೇಡುವೆವೇ ಹೊರತು ಸಾಕ್ಷಾತ್ಕಾರವನ್ನು ಬೇಡುವುದಿಲ್ಲ. ತಂತಮ್ಮ ಧರ್ಮಗಳಲ್ಲಿ ನಿರತರಾಗಿ ನಿನ್ನ ದಿವ್ಯರೂಪವನ್ನು ಧ್ಯಾನಿಸಿದಲ್ಲಿ, ಆ ಧ್ಯಾನವೇ ಕಾಮಾದಿ ಕಶ್ಮಲಗಳನ್ನು ಕಳೆದು ಮನಶ್ಶುದ್ಧಿಯನ್ನುಂಟುಮಾಡಿ ಪರಮ ಭಕ್ತಿಯೋಗರೂಪವಾಗಿ ಪರಿಣಮಿಸುವುದು ॥೫೩॥ ನೀನು ಸಕಲಪ್ರಾಣಿಗಳಿಗೂ ದುರ್ಲಭನಾಗಿದ್ದರೂ ಭಕ್ತರಾದವರಿಗೆ ಮಾತ್ರ ಸುಲಭನೇ ಸರಿ. ಜ್ಞಾನಿಗಳಾದವರು ಸ್ವರ್ಗಸಾಮ್ರಾಜ್ಯಕ್ಕಿಂತಲೂ ನಿನ್ನನ್ನು ಪ್ರಿಯನೆಂದೆಣಿಸುವರಾದುದರಿಂದ ಆತ್ಮವೇತ್ತರಿಗೆ ನೀನೇ ಗತಿಯಾಗಿರುವೆ ॥೫೪॥ ಸತ್ಪುರುಷರು ಕೂಡ ಮತ್ತಾವ ಉಪಾಯಗಳಿಂದಲೂ ಹೊಂದಲಾರದ ಏಕಾಂತಭಕ್ತಿಯಿಂದ ನಿನ್ನನ್ನಾರಾಧಿಸಿದವರು ಯಾರುತಾನೇ ನಿನ್ನ ಪಾದಮೂಲವನ್ನುಳಿದು ನಶ್ವರಗಳಾದ ಲೌಕಿಕ ಭೋಗಗಳನ್ನು ಬಯಸುವರು? ॥೫೫॥ ಲಯಾಧಿಕಾರಿಯಾದ ಯಮನು ಬಬಸರಾಕ್ರಮಗಳಿಂದ ಹುಬ್ಬನ್ನು ಹಾರಿಸಿದ ಮಾತ್ರದಿಂದಲೇ ಸಕಲ ಜಗತ್ತನ್ನೂ ನಾಶಗೊಳಿಸುವ ಶಕ್ತಿಯುಳ್ಳವನಾಗಿದ್ದರೂ, ನಿನ್ನ ಪಾದಗಳಲ್ಲಿ ಮರೆಹೊಕ್ಕವ

ಕಿಮುತಾಶಿಷಃ ||೩೪|| ಅಥಾಽನಘಾಂಘ್ರೇ ಸ್ತವ ಕೀರ್ತಿತೀರ್ಥಯೋ ರಂತರ್ಬಹಿಸ್ಸ್ನಾನವಿಧೂತಪಾಪ್ಮನಾಂ । ಭೂತೇಷ್ವನುಕ್ರೋಶ ಸುಸತ್ವಶೀಲಿನಾಂ ಸ್ಯಾ ತ್ಸಂಗಮೋಽನುಗ್ರಹ ಏಷ ನಸ್ತವ || ೩೫ || ನಯಸ್ಯ ಚಿತ್ತಂ ಬಹಿರರ್ಥವಿಭ್ರಮಂ ತಮೋಗುಹಾಯಾಂಚ ವಿಶುದ ಮಾವಿಶತ್ । ಯದ್ಭಕ್ತಿಯೋಗಾಽನುಗೃಹೀತ ಮಂಜಸಾ ಮುನಿ ರ್ವಿಚಷ್ಟೇ ನನು ತತ್ರ ತೇ ಗತಿಂ ||೩೬|| ‡ ಯತ್ರೇದಂ ವ್ಯಜ್ಯತೇ ವಿಶ್ವಂ ವಿಶ್ವಸ್ಮಿ

ಆಶಿಷಃ - ಭೋಗಗಳನ್ನು, ಕಿಮುತ - ಹೇಳುವುದೇನು ? ||೩೪|| ಅಥ - ಆದುದರಿಂದ, ಅನಘಾಂಘ್ರೇಃ- ಪಾಪಹರಗಳಾದ ಪಾದಗಳುಳ್ಳ, ತವ - ನಿನ್ನ, ಕೀರ್ತಿತೀರ್ಥಯೋಃ ಕೀರ್ತಿ, ಗಂಗಾತೀರ್ಥ ಇವುಗಳಿಂದ, ಅಂತರ್ಬಹಿಃ - ಒಳಗೂ ಹೊರಗೂ, ಸ್ನಾನ...ನಾಂ - ಸ್ನಾನದಿಂದ ಕಳೆಯಲ್ಪಟ್ಟ ಪಾಪವುಳ್ಳ, ಭೂತೇಷು - ಪ್ರಾಣಿಗಳಲ್ಲಿ, ಅನು—ನಾಂ, ಅನುಕ್ರೋಶ- ದಯೆಯು, ಸುಸತ್ವ - ಪರಿಶುದ್ಧಚಿತ್ತವು, ಶೀಲಿನಾಂ - ಸದಾಚಾರವು ಉಳ್ಳ ಭಕ್ತರ, ಸಂಗಮಃ - ಸಹವಾಸವು, ಸ್ಯಾತ್- ಆಗಲಿ, ಏಷ - ಇದು, ನಃ - ನಮಗೆ, ತವ - ನಿನ್ನ, ಅನುಗ್ರಹಃ-ಅನುಗ್ರಹವಾಗಿರಲಿ ||೩೫|| ಯದ್ಭ...ತಂ, ಯತ್ - ಯಾವ ಸಾಧುಗಳ, ಭಕ್ತಿಯೋಗ - ಭಕ್ತಿಯೋಗದಿಂದ, ಅನುಗೃಹೀತಂ - ಪರಿಶುದ್ಧವಾದುದಾಗಿ, ಯಸ್ಯ - ಯಾವನ, ಚಿತ್ತಂ ಮನಸ್ಸು, ಬಹಿ...ಮಂ - ಬಾಹ್ಯವಿಷಯಗಳಿಂದ ಕೆಡುವುದಿಲ್ಲವೋ ತಮೋಗುಹಾಯಾಂ - ಅಜ್ಞಾನವೆಂಬ ಗವಿಯಲ್ಲಿ ನಾವಿಶತ್ - ಹೋಗುವುದಿಲ್ಲವೋ, ಸಮುನಿಃ - ಆ ಮುನಿಯು, ಅಂಜಸಾ-ಬೇಗನೆ, ತತ್ರ-ಆಗಲೇ,

ನನ್ನು ಮಾತ್ರ ಕಾಣಕಲಾರನು ||೩೩|| ಎಲೈ ಲೋಕೇಶ್ವರನೆ ! ಭಗವದ್ಭಕ್ತರಾದ ಸಾಧುಗಳ ಸಂಘಕ್ಕೆ ಸ್ವರ್ಗ ಭೋಗಗಳನ್ನಾಗಲಿ, ಪುನರಾವೃತ್ತಿಯಿಲ್ಲದ ಮೋಕ್ಷಾನಂದವನ್ನಾಗಲಿ ಅರ್ಧಕ್ಷಣವಾದರೂ ಸಮವೆಂದೆಣಿಸಲಾರೆನು ಅಂತಿರುವಾಗ ಮರಣಧರ್ಮವುಳ್ಳ ಮಾನವರು ಬಯಸುವ ಕ್ಷಣಿಕ ಭೋಗಗಳನ್ನು ಹೇಳುವುದೇನು ||೩೪|| ಆದುದರಿಂದ ಪಾಪಹರಗಳಾದ ಪಾದಕಮಲಗಳುಳ್ಳ ನಿನ್ನ ಕೀರ್ತಿವರ್ಣನದಿಂದ ಅಂತರಂಗದಲ್ಲಿಯೂ, ನಿನ್ನ ಪಾದದಿಂದ ಜನಿಸಿದ ಗಂಗೋದಕ ಸ್ನಾನದಿಂದ ಹೊರಗಡೆಯಲ್ಲಿಯೂ ಸಕಲಾಪಾಪಗಳನ್ನೂ ಕಳೆದುಕೊಂಡು ಭೂತದಯೆ, ಚಿತ್ತಶುದ್ಧಿ ಸದಾಚಾರಗಳನ್ನು ಪಡೆದಿರುವ ಸಾಧುಗಳ ಸಂಗವು ನಿರಂತರದಲ್ಲಿಯೂ ನಮಗುಂಟಾಗುವಂತೆ ದಯೆಪಾಲಿಸು. ನಮಗಿದು ನಿನ್ನ ಅನುಗ್ರಹವಾಗಿರಲಿ ||೩೫|| ಭಾಗವತೋತ್ತಮರ ಭಕ್ತಿಯೋಗದಿಂದ ಯಾವನ ಮನಸ್ಸು ನಿರ್ಮಲವಾಗಿ ಬಾಹ್ಯಗಳಾದ ಶಬ್ದಾದಿ ವಿಷಯಗಳಿಗೆ ಮರುಳಾಗಲಾರದೋ, ಅಜ್ಞಾನವೆಂಬ ಕಗ್ಗತ್ತಲೆಯ ಗವಿಯನ್ನು ಹೋಗಲಾರದೋ, ಅಂತಹ ಮುನಿಯ ಚಿತ್ತವು ಮಾತ್ರ

‡ (I) ವೀ. ಭಗವಂತನೇ ಈ ಜಗತ್ತಿಗೆ ನಿಮಿತ್ತಕಾರಣವೂ ಉಪಾದಾನಕಾರಣವೂ ಆಗಿರುವನರ ದುಭಾವವು. ಆತ್ಮದುಸ್ಥಯಾ - ಜೀವರಿಗೆ ಸಂಸಾರರೂಪವಾದ ಅನರ್ಥವನ್ನುಂಟುಮಾಡುವವನಾಯೆಯು

ವಿ- (೨) ನಿರ್ವಿಕಾರನಾದ ಪರಮಾತ್ಮನು ತ್ರಿಗುಣಾತ್ಮಕಪ್ರಕೃತಿಯಿಂದ ಜಗತ್ತನ್ನು ಸೃಜಿಸಿ ರಕ್ಷಿಸಿ, ಲಯಗೊಳಿಸುವನು, ಎಂಬುದರಿಂದ ಶುಕ್ತಿಕಾರಜಿತದಂತೆಬ್ರಹ್ಮಾಜ್ಞಾನಕಲ್ಪಿತವಾದಜಗತ್ತು ಮಿಥ್ಯೆಯಲ್ಲವೆಂತಲೂ, ಯದ್ಭೇಧಬುದ್ಧಿಸ್ಸದಿವಾ ॥ ಎಂಬುದರಿಂದ ಜೀವೇಶ್ವರಭೇದವು ಸತ್ಯವೆಂತಲೂ ತಿಳಿಯಬಹುದು.

ಸ್ನವಭಾತಿ ಯತ್ರ್ । ತತ್ತ್ವಂ ಬ್ರಹ್ಮ ಪರಂಜ್ಯೋತಿ ರಾಕಾಶಮಿವ ವಿಸ್ತೃತಂ ॥೬೦॥ ‡ ಯೋ ಮಾಯಯೇದಂ ಪುರುರೂಪಯಾಽಸೃಜದ್ಬಿಭರ್ತಿ ಭೂಯಃ ಕ್ಷಪಯತ್ಯವಿಕ್ರಿಯಃ । ಯದ್ಭೇದಬುದ್ಧಿಃ ಸದಿವಾತ್ಮದುಸ್ಥಯಾ ತಮಾತ್ಮತಂತ್ರಂ ಭಗವನ್ ! ಪ್ರತೀಮಹಿ ॥೬೧॥ ಕ್ರಿಯಾಕಲಾಪೈರಿದಮೇವ ಯೋಗಿನಃ ಶ್ರದ್ಧಾನ್ವಿತಾಸ್ಸಾಧು ಯಜಂತಿ ಸಿದ್ಧಯೇ

ನಿನ್ನ, ಗತಿಂ - ಸ್ವರೂಪವನ್ನು, ವಿಚಷ್ಟೇ- ನೋಡುತ್ತಾನೆ ॥೫೯॥

ಯತ್ರ - ಎಲ್ಲಿ, ಇದಂ - ಈ, ವಿಶ್ವಂ - ಜಗತ್ತು, ವ್ಯಜ್ಯತೇ - ಕಾಣುವುದೋ, ಯತ್ - ಯಾವುದು, ವಿಶ್ವಸ್ಮಿನ್ - ಜಗತ್ತಿನಲ್ಲಿ, ಅವಭಾತಿ - ಬೆಳಗುವುದೋ, ಪರಂ - ನಿರತಿಶಯವಾದ, ಜ್ಯೋತಿ: - ತೇಜೋರೂಪವಾದ, ಆಕಾಶಮಿವ - ಆಕಾಶದಂತೆ, ವಿಸ್ತೃತಂ - ವ್ಯಾಪಿಸಿರುವ, ತತ್ತ್ವಂ - ಆ ತತ್ತ್ವವು, ಬ್ರಹ್ಮ - ಬ್ರಹ್ಮವು ॥೬೦॥ ಭಗವನ್ - ಭಗವಂತನೆ! ಯಃ - ಯಾವನು, ಪುರುರೂಪಯಾ - ಹಲವು ಬಗೆಯಾದ, ಮಾಯಯಾ - ಮಾಯೆಯಿಂದ, ಇದಂ - ಇದನ್ನು, ಸದಿವ - ಸತ್ಯವಾಗಿ ಕಾಣುವಂತೆ, ಅಸೃಜತ್ - ಸೃಜಿಸಿದನೋ, ಬಿಭರ್ತಿ - ಸಲಹುವನೋ, ಭೂಯಃ - ಮರಳಿ, ಅವಿಕ್ರಿಯಃ - ನಿರ್ವಿಕಾರನಾಗಿ, ಕ್ಷಪಯತಿ - ನಾಶಗೊಳಿಸುವನೋ, ಆತ್ಮದುಸ್ಥಯಾ - ನಿನ್ನಲ್ಲಿ ತನ್ನ ಪ್ರಭಾವವನ್ನು ತೋರಿಸಲಾರದ, ಯತ್ - ಯಾವುದರಿಂದ, ಭೇದಬುದ್ಧಿಃ - ಭೇದಬುದ್ಧಿಯುಂಟಾಗುವುದೊ, ತಂ- ಆ ನಿನ್ನನ್ನು, ಆತ್ಮತಂತ್ರಂ - ಭೇದರಹಿತನನ್ನಾಗಿ, ಪ್ರತೀಮಹೇ - ತಿಳಿಯುವೆವು ॥೬೧॥ ಯೇಯೋಗಿನಃ - ಯಾವ

ವೇ ನಿನ್ನ ತತ್ತ್ವವನ್ನರಿಯುವುದು ಆದುದರಿಂದ ತತ್ತ್ವಜ್ಞಾನವು ಕೂಡ ಸಾಧುಸಂಗದಿಂದಲೇ ಉಂಟಾಗುವುದು ॥೫೯॥ ಈ ಚರಾಚರಾತ್ಮಕವಾದ ಪ್ರಪಂಚ ಯಾವನಲ್ಲಿ ಹೊಳೆಯುತ್ತಿರುವುದೋ, ಯಾವವಸ್ತುವು ಈ ಜಗದ್ರೂಪವಾಗಿ ಬೆಳಗುತ್ತಿರುವುದೋ, ಆಕಾಶದಂತೆ ಸರ್ವವ್ಯಾಪಕವಾಗಿಯೂ, ಸಪ್ರಕಾಶವಾಗಿಯೂ, ಇರುವ ಆ ನಿನ್ನ ತತ್ತ್ವವೇ ಪರಬ್ರಹ್ಮವು ॥ ಅಯ್ಯಾ ಭಗವಂತನೆ! ಯಾವ ನೀನು ಹಲವು ಬಗೆಯಾಗಿ ಪರಿಣಮಿಸುವ ಮಾಯೆಯೆಂಬ ಶಕ್ತಿಯಿಂದ ಈ ಜಗತ್ತನ್ನು ಸತ್ಯವಾಗಿರುವಂತೆಯೇ ಸೃಜಿಸಿ, ನಮ್ಮದಿಯಾಗಿ ಸಲಹುತ್ತ, ಲಯಗೊಳಿಸುತ್ತಿದ್ದರೂ, ನಿರ್ವಿಕಾರನನಿರುವೆಯೋ, ಸಕಲ ಜನರಿಗೂ ಭೇದಬುದ್ಧಿಯನ್ನುಂಟುಮಾಡುವ ಯಾವ ಮಾಯಾಶಕ್ತಿಯು ಸಕಲ ಜಗತ್ತಿನಲ್ಲಿಯೂ ತನ್ನ ಪ್ರಭಾವವನ್ನು ತೋರುತ್ತಿದ್ದರೂ, ನಿನ್ನಲ್ಲಿ ಮಹಿಮೆಯನ್ನು ತೋರಲಾರದೋ, ಅಂತಹ ಭೇದರಹಿತವಾದ ಬ್ರಹ್ಮವಸ್ತುವು ನೀನೇ ಆಗಿರುವೆ, ॥೬೧॥ ಎಲೈ ಭಗವಂತನ! ಇಂತು ನೀನು ಜಗತ್ತಿಗೆ

‡ ಪೀ. ಘಟಾದಿಗಳಲ್ಲಿ ವ್ಯಾಪಿಸಿರುವ ಆಕಾಶವು ಅವುಗಳ ವೃದ್ಧಿಹ್ರಾಸಗಳಿಗೆ ಗುರಿಯಾಗದಂತೆ ಪರಮಾತ್ಮನು ಚಿದಚಿದಾತ್ಮಕವಾದ ಈ ಜಗತ್ತಿಗೆ ಆಧಾರವೆನಿಸಿದ್ದರೂ ಅದರದೋಷಗಳಿಗೊಳಗಾಗುವುದಿಲ್ಲ.

(೧) ವಿ. ಈ ಜಗತ್ತು ಬ್ರಹ್ಮಾಜ್ಞಾನ ಕಲ್ಪಿತವೆಂತಲೂ ಶೂನ್ಯವೆಂತಲೂ ಬಗೆಬಗೆಯಾಗಿ ಹೇಳುವರು. ಭಗವಂತನ ಆಧಾರದಿಂದ ಪ್ರಪಂಚವು ಅಭಿವ್ಯಕ್ತವಾಗಿದೆ ಎಂಬುದರಿಂದ ಈ ಪೂರ್ವಪಕ್ಷಗಳೆಲ್ಲವೂ ಪರಿಹೃತಗಳಾಗುವೆಂತಲೂ, ಮೊದಲಿದ್ದ ವಸ್ತುವಿಗೇ ಅಭಿವ್ಯಕ್ತಿಯಾಗುವುದರಿಂದ ಅದರಲ್ಲಿರುವ ಭೇದಗಳು ಸತ್ಯವೆಂತಲೂ, ಆಕಾಶದೃಷ್ಟಾಂತದಿಂದ ಆತ್ಮವು ಅಪರಿಚ್ಛಿನ್ನವೆಂತಲೂ ತಿಳಿಯಬೇಕು.

ಭೂತೇಂದ್ರಿಯಾಂತಃ ಕರಣೋಪಲಕ್ಷಿತಂ ವೇದೇ ಚ ತಂತ್ರೇ ಚ ತ
ಏವ ಕೋವಿದಾಃ ॥ ೬೨ ॥ ತ್ವಮೇಕ ಆದ್ಯಃ ಪುರುಷ ಸ್ಸುಪ್ತಶಕ್ತಿ
ಸ್ತಯಾ ರಜಸ್ಸತ್ವತಮೋ ವಿಭಿದ್ಯತೇ । ಮಹಾನಹಂ ಖಂ ಮರುದಗ್ನಿವಾ
ರ್ಧರಾಃ ಸ್ಸುರರ್ಷಯೋ ಭೂತಗಣಾ ಇದಂ ಯತಃ ॥ ೬೩ ॥ ಸೃಷ್ಟಂ
ಸ್ವಶಕ್ತ್ಯೇದ ಮನುಪ್ರವಿಷ್ಟ ಶ್ಚತುರ್ವಿಧಂ ಪುರ ಮಾತ್ಮಾಂಶಕೇನ ।
ಅಥೋ ವಿದು ಸ್ತಂ ಪುರುಷಂ ಸಂತ ಮಂತ ರ್ಭುಂಕ್ತೇ ಹೃಷೀಕೈ ರ್ಮಧು

ಕರ್ಮಯೋಗಿಗಳು, ಶ್ರದ್ಧಾನ್ವಿತಾಃ-ಶ್ರದ್ಧೆಯಿಂದಕೂಡಿ, ಸಿದ್ಧಯೇ - ಫಲಪ್ರಾಪ್ತಿಗಾಗಿ, ಕ್ರಿಯಾಕಲಾಪೈಃ - ಕರ್ಮಗಳಿಂದ, ಭೂತೇಂ.....ತಂ- ಭೂತ, ಇಂದ್ರಿಯ, ಅಂತಃಕರಣ ಇವುಗಳಿಂದ ತಿಳಿಯಲ್ಪಡುವ ಇದಮೇವ - ಈ ತತ್ವವನ್ನೇ, ಸಾಧು - ನಿಷ್ಕಪಟವಾಗಿ, ಯುಜಂತಿ - ಪೂಜಿಸುತ್ತಾರೋ, ತಏವ - ಅವರೇ, ವೇದೇ - ವೇದದಲ್ಲಿಯೂ, ತಂತ್ರೇ ಚ - ಶಾಸ್ತ್ರಗಳಲ್ಲಿಯೂ, ಕೋವಿದಾಃ - ಪಾರಂಗತರೆನಿಸಿರುವರು ॥೬೨॥ ಯತಃ - ಯಾವುದರಿಂದ, ಮಹಾನ್ - ಮಹತ್ತು, ಅಹಂ - ಅಹಂಕಾರ, ಖಂ - ಆಕಾಶ, ಮರುತ್ - ವಾಯು, ಅಗ್ನಿ, ವಾಃ - ಜಲ, ಧರಾಃ - ಭೂಮಿಯು, ಸುರರ್ಷಯಃ - ದೇವತೆಗಳು, ಋಷಿಗಳು, ಭೂತಗಣಾಃ - ಪ್ರಾಣಿಕೋಟಿಗಳೆಂಬ, ಇದಂ - ಈ ಜಗತ್ತು ಉಂಟಾಗಿರುವುದೋ, ತಯಾ - ಆ ಮಾಯೆಯಿಂದ, ರಜಃಸತ್ವತಮಃ -ಸತ್ವರಜಸ್ತಮಸ್ಸುಗಳು, ವಿಭಿದ್ಯತೆ - ವಿಂಗಡವಾಗಿರುವುವು, ಸುಪ್ತಶಕ್ತಿಃ - ಅಂತಹಶಕ್ತಿಯನ್ನು ಅಡಗಿಸಿಕೊಂಡಿರುವ, ಆದ್ಯಃ - ಮೊದಲನೆಯ, ಪುರುಷಃ - ಪುರುಷನು, ತ್ವಮೇಕಃ - ನೀನೊಬ್ಬನೇ ॥ ೬೩ ॥ ಸ್ವಶಕ್ತ್ಯಾ - ನಿನ್ನಶಕ್ತಿಯಿಂದ, ಸೃಷ್ಟಂ - ಸೃಜಿಸಲ್ಪಟ್ಟ, ಚತುರ್ವಿಧಂ - ನಾಲ್ಕುವಿಧವಾದ, ಇದಂಪುರಂ - ಈ ಶರೀರಗಳನ್ನು, ಆತ್ಮಾಂಶಕೇನ- ನಿನ್ನಅಂಶದಿಂದ, ಅನುಪ್ರವಿಷ್ಟಃ - ಒಳಹೊಕ್ಕಿರುವೆ, ಅಥೋ - ಆದುದರಿಂದ, ಯಃ - ಯಾವನು, ಹೃಷೀಕೈಃ - ಇಂದ್ರಿಯಗಳಿಂದ, ಸಾರಘಂ - ತುಂಬಿಗಳಿಟ್ಟ, ಮಧು- ಜೇನಿನಂತಿರುವ ವಿಷಯಸುಖವನ್ನು, ಭುಂಕ್ತೇ- ಅನುಭವಿಸುವನೋ, ಅಂತಃ - ಒಳಗೆ, ಸಂತಂ - ಇರುವ, ತಂ - ಆ ಚಿದಾಭಾಸವನ್ನು, ಪುರುಷಂ -

ಉಪಾದಾನರೂಪವಾಗಿಯೂ ನಿಮಿತ್ತರೂಪವಾಗಿಯೂ ಕಾರಣವೆನಿಸಿ, ಭೇದರಹಿತನಾಗಿದ್ದರೂ, ಯಾವ ಕರ್ಮಯೋಗಿಗಳು ಶ್ರದ್ಧಾಳುಗಳಾಗಿ ಫಲಸಿದ್ಧಿಗಾಗಿ ಯಜ್ಞಯಾಗಾದಿ ಕರ್ಮಗಳನ್ನು ಮಾಡುತ್ತಾ, ಭೂತ, ಇಂದ್ರಿಯ, ಅಂತಃಕರಣಗಳಿಂದ ತಿಳಿಯಬಹುದಾದ ನಿನ್ನ ಸಗುಣಸ್ವರೂಪವನ್ನು ಆರಾಧಿಸುವರೋ, ಅವರೇ ವೇದಶಾಸ್ತ್ರಗಳಲ್ಲಿ ಪಾರಂಗತರೆನಿಸುವರು ॥ ೬೨ ॥ ಮಹತ್ತತ್ವ, ಅಹಂಕಾರ, ಆಕಾಶ, ವಾಯು, ಅಗ್ನಿ, ಜಲ, ಭೂಮಿಗಳೆಂಬ ತತ್ವಗಳನ್ನೂ, ದೇವಮನುಷ್ಯಾದಿ ಪ್ರಾಣಿಜಾತವನ್ನೂ, ಸೃಜಿಸುವ ಸತ್ವ ರಜಸ್ತಮೋಗುಣಗಳಿಗೆ ಮೂಲಕಾರಣವಾದ ಮಾಯಾಶಕ್ತಿಯನ್ನು ಅಡಗಿಸಿಕೊಂಡು, ಸೃಷ್ಟಿಗೆ ಮುನ್ನ ಅದ್ವಿತೀಯನೆನಿಸಿರುವ ಪುರಾಣ ಪುರುಷನು ನೀನೊಬ್ಬನೇ ಆಗಿರುವುದರಿಂದ, ನೀನೇ ಲೀಲಾರ್ಥವಾಗಿ ಈ ಚೇತನಾಚೇತನಗಳೆಂಬ ಭೇದವನ್ನು ಕಲ್ಪಿಸಿರುವೆಯೇ ಹೊರತು ಜ್ಞಾನಿಗಳಾದವರು ಅದ್ವಿತೀಯನಾದ ನಿನ್ನಲ್ಲಿ ಎಂದಿಗೂ ಭೇದವನ್ನೆಣಿಸುವುದಿಲ್ಲ ॥೬೩॥ ನಿನ್ನ ಮಾಯಾಶಕ್ತಿಯಿಂದಲೇ ನಿರ್ಮಿಸಲ್ಪಟ್ಟ, ಜರಾಯುಜ, ಅಂಡಜ, ಸ್ವೇದಜ, ಉದ್ಭಿಜ್ಜಗಳೆಂಬ ನಾಲ್ಕುವಿಧಗಳಾದ ಶರೀರಗಳಲ್ಲಿಯೂ ಆತ್ಮಾಂಶದಿಂದ ಪ್ರವೇಶಿಸಿ, ತಮ್ಮಿಂದಲೇ ಸೃಜಿಸ

ಸಾರಘಂ ಯಃ ॥ ೬೪ ॥ ಸಪಿಷ ಲೋಕಾ ನತಿಚಂಡವೇಗೋ ವಿಕರ್ಷಸಿ ತ್ವಂ ಖಲು ಕಾಲಯಾನಃ । ಭೂತಾನಿ ಭೂತೈ ರನುಮೇಯತತ್ವೋ ಘನಾವಳೀ ರ್ವಾಯುರಿವಾವಿಷಹ್ಯಃ ॥೬೫॥ ಪ್ರಮತ್ತ ಮುಚ್ಚೈ ರಿತಿ ಕೃತ್ಯಚಿಂತಯಾ ಪ್ರವೃದ್ಧಲೋಭಂ ವಿಷಯೇಷು ಲಾಲಸಂ । ತ್ವ ಮಪ್ರಮತ್ತ ಸ್ಸಹಸಾಽಭಿಪದ್ಯಸೇ ಕ್ಷುಲ್ಲೇಲಿಹಾನೋಽಹಿರಿವಾಖು ಮಂತಕಃ ॥೬೬॥ ಕಸ್ತ್ವತ್ಪದಾಬ್ಜಂ ವಿಜಹಾತಿ ಪಂಡಿತೋ ಯಸ್ತೇಽವಮಾನ ವ್ಯಯಮಾನಕೇತನಃ । ವಿಶಂಕಯಾಸ್ಮದ್ಗುರು ರರ್ಚತಿಸ್ಮ ಯದ್ವಿನೋ

ಪುರುಷನನ್ನಾಗಿ, ವಿದುಃ - ತಿಳಿಯುವರು ॥೬೪॥ ಅತಿಚಂಡವೇಗಃ - ಬಹಳ ಕ್ರೂರವಾದ ವೇಗವುಳ್ಳ, ಅನುಮೇಯ ಸತ್ವಃ - ಅಗೋಚರಸ್ವರೂಪನಾದ, ಅವಿಷಹ್ಯಃ - ಸೈರಿಸಲಶಕ್ಯನಾದ, ಸಪಿಷತ್ವಂ - ಆ ನೀನೇ, ಘನಾವಳೀಃ - ಮೇಘಪಙ್ತಿಗಳನ್ನು, ವಾಯುವ - ವಾಯುವಿನಂತ, ಭೂತೈಃ - ಭೂತಗಳಿಂದ, ಭೂತಾನಿ - ಪ್ರಾಣಿಗಳನ್ನು, ಕಾಲಯಾನಃ - ಚಲನೆಗೊಳಿಸುತ್ತಾ, ಲೋಕಾನ್ - ಲೋಕಗಳನ್ನು, ವಿಕರ್ಷಸಿ - ಸಂಹರಿಸುವೆ ॥೬೫॥ ಇತಿ...ಯಾ - ಇದನ್ನು ಇಂತು ಮಾಡಬೇಕು ಎಂಬ ಚಿಂತೆಯಿಂದ, ಉಚ್ಚೈಃ - ಬಹಳವಾಗಿ, ಪ್ರಮತ್ತಂ - ಮದಿಸಿರುವ, ವಿಷಯೇಷು - ಶಬ್ದಾದಿ ವಿಷಯಗಳಲ್ಲಿ, ಲಾಲಸಂ - ಆಸಕ್ತನಾದ ಪ್ರವೃದ್ಧಲೋಭಂ - ಅತ್ಯಾಶೆಯುಳ್ಳ ಪುರುಷನನ್ನು, ಅಪ್ರಮತ್ತಃ - ಜಾಗರೂಕನಾದ, ತ್ವಂ - ನೀನು ಅಂತಕಃ - ಯಮಸ್ವರೂಪನಾಗಿ ಕ್ಷುಲ್ಲೇಲಿಹಾನಃ - ಹಸಿವಿನಿಂದ ತುಟಿಯನ್ನು ಸವರಿಕೊಳ್ಳುವ, ಅಹಿಃ ಸರ್ಪವು, ಆಖುಮಿವ - ಇಲಿಯನ್ನೋಪಾದಿಯಲ್ಲಿ, ಅಭಿಪದ್ಯಸೇ - ಆಕ್ರಮಿಸುವೆ ॥೬೬॥ ಅಸ್ಮದ್ಗುರುಃ - ನಮ್ಮ ಗುರುವಾದ ತಂದೆಯು, ಚತುರ್ದಶಮನವಶ್ಚ - ಹದಿನಾಲ್ಕುಮಂದಿ ಮನುಗಳೂ, ವಿಶಂಕಯಾ - ನಾಶಶಂಕೆಯಿಂದ, ಉಪಪತ್ತಿಂವಿನಾ - ನಿಷ್ಕಪಟಭಕ್ತಿಯಿಂದ, ಯತ್ - ಯಾವುದನ್ನು, ಅರ್ಚಂತಿ - ಪೂಜಿಸುವರೋ, ಅಂತಹ ತ್ವತ್ಪದಾಬ್ಜಂ - ನಿನ್ನ ಪಾದಕಮಲವನ್ನು, ತೇ - ನಿನ್ನ, ಅವ...ನಃ, ಅವಮಾನ - ಅನಾದರದಿಂದ, ವ್ಯಯಮಾನ - ನಾಶವಾಗುವ, ಕೇತನಃ - ಶರೀರವುಳ್ಳವನು, ಯಃ - ಯಾವನೋ, ಅಂತಹ,

ಲ್ಪಟ್ಟ ಜೇನುತುಪ್ಪವನ್ನು ಭಕ್ಷಿಸುವ ತುಂಬಿಗಳಂತೆ* ಬುದ್ಧಿಸ್ಥಚಿದಾಭಾಸ (ಜೀವ) ರೂಪದಿಂದ ನೀನೇ ಶಬ್ದಾದಿವಿಷಯಸುಖವನ್ನು ಅನುಭವಿಸುತ್ತಿರುವೆ ॥೬೪॥ ಇಂತು ಜೀವರೂಪದಿಂದ ಸಂಸಾರಿಯಂತೆತೋರುತ್ತಾ ಅತಿವೇಗದಿಂದ ಬೀಸುವ ಬಿರುಗಾಳಿಯು ಮುಗಿಲುಗಳನ್ನಟ್ಟಿ ಚದರಿಸುವಂತೆ, ಅತ್ಯಧಿಕವಾದ ಕಾಲವೇಗದಿಂದ ಭೂತಗಳನ್ನು ಚದರಿಸುತ್ತಾ ಲೋಕವನ್ನು ನೀನೆ ಲಯಗೊಳಿಸುವೆ ॥೬೫॥ ಅಡಿಗಡಿಗೂ ತಲೆದೋರುತ್ತಿರುವ ಮನೋರಥ ಪರಂಪರೆಗಳಿಂದ „ಈ ಕಾರ್ಯವನ್ನಿಂತೆಯೇ ಮಾಡಬೇಕು" ಎಂದು ಯೋಚಿಸುತ್ತಾ, ವಿಷಯಲಂಪಟನಾಗಿ ಬದಗಿದ ಭೋಗಗಳಲ್ಲಿಅತ್ಯಾಶೆಗೊಳ್ಳುತ್ತಾ ಮತ್ತನಾಗಿರುವಪುರುಷನಿಗೆ ಕಾಲರೂಪನಾಗಿ, ಹಸಿವಿನಿಂದ ತುಟಿಗಳನ್ನು ಸವರುತ್ತಿರುವ ಕಾಳೋರಗವು ಕಾಡಿಲಿಯನ್ನು ನುಂಗುವಂತೆ ಆ ವಿಷಯಲಂಪಟರನ್ನು ನೀನೇ ನಾಶಗೊಳಿಸುವೆ॥೬೬॥ ಇಂತು ನೀನು ಸರ್ವ

* ಶ್ರು॥ ದ್ವಾಸುಪರ್ಣಾ ಸಯುಜಾಸಖಯಾಸಮಾನಂ ವೃಕ್ಷಂ ಪರಿಷಸ್ವಜಾತೇ । ತಯೋರನ್ಯಃ ಪಿಪ್ಪಲಂ ಸ್ವಾದ್ವತ್ತ್ಯನಶ್ನ ನ್ನನ್ಯೋಽಭಿಚಾಕಶೀತಿ॥ ಬ್ರಹ್ಮಸೂತ್ರ, ಗುಹಾಂಪ್ರವಿಷ್ಟಾವಾತ್ಮಾನೌ ತದ್ದರ್ಶನಾತ್॥

ಪಪತ್ತಿಂ ಮನವ ಶ್ಚತುರ್ದಶ ॥೬೭॥ * ಅಥ ತ್ವಮಸಿ ನೋ ಬ್ರಹ್ಮನ್! ಪರಮಾತ್ಮನ್ ! ವಿಪಶ್ಚಿತಾಂ । ವಿಶ್ವಂ ರುದ್ರಭಯಧ್ವಸ್ತ ಮಕುತಶ್ಚಿದ್ಭಯಾ ಗತಿಃ ॥೬೮॥ ಇದಂ ಜಪತ ಭದ್ರಂ ವೋ ವಿಶುದ್ಧಾ ನೃಪನಂದನಾಃ ! । ಸ್ವಧರ್ಮ ಮನುತಿಷ್ಠಂತೋ ಭಗವತ್ಯರ್ಪಿತಾಶಯಾಃ ॥೬೯॥ ತಮೇವಾತ್ಮಾನ ಮಾತ್ಮಸ್ಥಂ ಸರ್ವಭೂತೇಷ್ವವಸ್ಥಿತಂ । ಪೂಜಯಧ್ವಂ ಗೃಣಂತಶ್ಚ ಧ್ಯಾಯಂತಶ್ಚಾಽಸಕೃದ್ಧರಿಂ ॥೭೦॥ ಯೋಗಾದೇಶಮುಪಾ

---

ಕಃ - ಯಾವನುತಾನೇ, ಪಂಡಿತಃ - ಪಂಡಿತನಾಗಿದ್ದಲ್ಲಿ, ವಿಜಹಾತಿ - ಬಿಡುವನು ॥ ಹೇಬ್ರಹ್ಮನ್ - ಎಲ್ಲೈ ವ್ಯಾಪಕನೆ ! ಪರಮಾತ್ಮನ್ - ಪರಮಾತ್ಮನೆ ! ಯತಃ-ಯಾವಕಾರಣದಿಂದ, ವಿಶ್ವಂ-ಜಗತ್ತು, ರುದ್ರ... ಸ್ತಂ - ರುದ್ರನ ಭಯದಿಂದ ಕೂಡಿರುದೋ, ಅಥ - ಆ ಕಾರಣದಿಂದ, ವಿಪಶ್ಚಿತಾಂ-ಜ್ಞಾನಿಗಳಾದ ನಮಗೆ, ತ್ವಂ - ನೀನು, ಅಕುತಶ್ಚಿದ್ಭಯಾ - ಯಾರಿಂದಲೂ ಭಯವಿಲ್ಲದ, ಗತಿಃ - ದಿಕ್ಕು, ಅಸಿ - ಆಗುವೆ ॥೬೮॥

ನೃಪನಂದನಾಃ - ರಾಜಪುತ್ರರಿರಾ ! ವಿಶುದ್ಧಾಃ - ಪರಿಶುದ್ಧರಾಗಿ, ಸ್ವಧರ್ಮಂ - ನಿಮ್ಮ ಧರ್ಮವನ್ನು, ಅನುತಿಷ್ಠಂತಃ - ನಡೆಯಿಸುತ್ತಾ, ಭಗವತಿ - ಭಗವಂತನಲ್ಲಿ, ಅರ್ಪಿತಾಶಯಾಃ - ಮನಸ್ಸನ್ನಿಟ್ಟು, ಇದಂ - ಈ ಸ್ತೋತ್ರವನ್ನು, ಜಪತ - ಜಪಿಸಿರಿ, ವಃ - ನಿಮಗೆ, ಭದ್ರಂ - ಮಂಗಳವಾಗುವುದು ॥೬೯॥ ಸರ್ವಭೂತೇಷು - ಸಕಲ ಭೂತಗಳಲ್ಲಿಯೂ, ಅವಸ್ಥಿತಂ - ನೆಲಸಿರುವ, ಅಂತರ್ಯಾಮಿಯಾಗಿರುವ, ಆತ್ಮಾನಂ - ಆತ್ಮರೂಪನಾದ, ತಮೇವಹರಿಂ-ಆ ಹರಿಯನ್ನೇ, ಅಸಕೃತ್ - ಬಾರಿಬರಿಗೂ, ಧ್ಯಾಯಂತಃ- ಧ್ಯಾನಿಸುತ್ತಾ, ಗೃಣಂತಶ್ಚ - ಹೊಗಳುತ್ತಾ, ಪೂಜಯಧ್ವಂ - ಪೂಜಿಸಿರಿ ॥೭೦॥ ಯೋಗಾದೇಶಂ - ಯೊ

---

ಕಾರಣನಾದುದರಿಂದ, ನಮ್ಮ ಗುರುವಾದ ರುದ್ರನೂ, ಚತುರ್ದಶಮುನಿಗಳೂಸಹ ನಿನ್ನ ಪಾದಪಂಕಜವನ್ನು ಆರಾಧಿಸುತ್ತಿರುವಲ್ಲಿ, ಪಂಡಿತನಾದವನು ಯಾವನುತಾನೇ ನಿನ್ನ ಪದಕಮಲವನ್ನು ಪೂಜಿಸದೆ, ತನ್ನಜನ್ಮವನ್ನು ವ್ಯರ್ಥಗೊಳಿಸಿಕೊಂಡಾನು? ॥೬೭॥ ಎಲ್ಲೈ ಪರಿಪೂರ್ಣನಾದಪರಮಾತ್ಮನೆ? ಈಜಗತ್ತೆಲ್ಲವೂ ಅಜ್ಞಾನಪರವಶವಾಗಿ, ಕಾಲರೂಪನಾದ ರುದ್ರನಭಯಕ್ಕೆ ಸಿಕ್ಕಿ ನಾಶವಾಗುತ್ತಿರುವುದರಿಂದ ಜ್ಞಾನಿಗಳಾದವರಿಗೆ ಯಾವಭಯವೂ ಉಂಟಾಗದಂತೆ ಶರಣವಾಗು. ಎಂದು ಪ್ರಚೇತಸರಿಗುಪದೇಶಿಸಿದನು॥೬೮॥ ತರುವಾಯ ಅವರನ್ನು ಕುರಿತು, "ಅಯ್ಯಾ ರಾಜಪುತ್ರರಿರಾ? ನೀವು ಪರಿಶುದ್ಧರಾಗಿ ನಿಮ್ಮವರ್ಣಾಶ್ರಮ ಧರ್ಮಗಳನ್ನು ನಡೆಯಿಸುತ್ತಾ, ಭಗವಂತನಲ್ಲಿ ಮನಸ್ಸಿಟ್ಟು ಈ ಸ್ತೋತ್ರವನ್ನುಜಪಿಸಿರಿ. ನಿಮಗೆ ಕಲ್ಯಾಣವಾಗುವುದು ॥ ೬೯ ॥ ಸರ್ವಭೂತಗಳಲ್ಲಿಯೂ ನೆಲಸಿ ಅಂತರ್ಯಾಮಿಯಾಗಿಯೂ ಆತ್ಮರೂಪನಾಗಿಯೂ ಇರುವ ಆ ಹರಿಯನ್ನೇಧ್ಯಾನಿಸುತ್ತಾ, ನಿರಂತರವೂ ಪೂಜಿಸಿರಿ ॥೭೦॥ "ಯೋಗಾದೇಶ" ಎಂಬಹೆಸರುಳ್ಳ ಈ ಸ್ತೋತ್ರಪಾಠವನ್ನು ಕಲಿತು ನೆನಪಿ

---

* ವಿ. ಮೂ ಶ್ಲೋ॥ ಯತ್ಸ್ವಪ್ನಸುಷುಪ್ತೋಽಹರಹ ರ್ಮರ್ಕತ್ಕ್ಲೇಶ ಕ್ಯೇತೇಽ ವೃತಾಂಬುಧೌ । ತಾವ ದ್ವೇದಾಽಥ ತತ್ತೇಂಘ್ರಿಂ ಜನೋನು ಸ್ಮರತೇಚ ತತ್ ॥೬೮॥

ತಾ॥ ಜನರು ಪ್ರತಿದಿನವೂ ಸುಷುಪ್ತಿ (ಗಾಢನಿದ್ರೆ) ಯಲ್ಲಿ ನಿನ್ನಪಾದ ಸಂಪರ್ಕದಿಂದ ಕ್ಲೇಶರಹಿತರಾಗಿ ಪರಮಾನಂದವನ್ನು ಅನುಭವಿಸುತಿದ್ದರೂ, ಎಚ್ಚರವಾದ ಕೂಡಲೇ ಆ ಸುಖವನ್ನು ಸ್ಮರಿಸಿಕೊಳ್ಳುವರೇ ಹೊರತು ಅದನ್ನು ಅನುಭವಿಸಲಾರರು. ಇದೇ ಸುಷುಪ್ತಿಕೈವಲ್ಯಗಳಿಗಿರುವ ಭೇದವು.

ಸಾದ್ಯ ಧಾರಯಂತೋ ಮುನಿವ್ರತಾಃ । ಸಮಾಹಿತಧಿಯ ಸ್ಸರ್ವ ಏತದ
ಭ್ಯಸತಾದೃತಾಃ ॥ ೨೧ ॥ ಇದ ಮಾಹ ಪುರಾಽಸ್ಮಾಕಂ ಭಗವಾನ್ ವಿ
ಶ್ವಸೃಕ್ಪತಿಃ । ಭೃಗ್ವಾದೀನಾ ಮಾತ್ಮಜಾನಾಂ ಸಿಸೃಕ್ಷುಃ ಸಂಸಿಸೃಕ್ಷ
ತಾಂ ॥ ೨೨ ॥ ತೇ ವಯಂ ನೋದಿತಾ ಸ್ಸರ್ವೇ ಪ್ರಜಾಸರ್ಗೇ ಪ್ರಜೇ
ಶ್ವರಾಃ । ಅನೇನ ಧ್ವಸ್ತತಮಸಃ ಸಿಸೃಕ್ಷ್ಮ ವಿವಿಧಾಃ ಪ್ರಜಾಃ ॥೨೩॥
ಅಥೇದಂ ನಿತ್ಯದಾ ಯುಕ್ತೋ ಜಪ ನ್ನವಹಿತಃ ಪುಮಾನ್ । ಅಚಿರಾ
ಚ್ಛ್ರೇಯ ಆಪ್ನೋತಿ ವಾಸುದೇವಪರಾಯಣಃ ॥ ೨೪ ॥ ಶ್ರೇಯಸಾ
ಮಿಹ ಸರ್ವೇಷಾಂ ಜ್ಞಾನಂ ನಿಶ್ರೇಯಸಂ ಪರಂ । ಸುಖಂ ತರತಿ ದುಷ್ಪಾ

---

ಗಾದೇಶವೆಂಬ ಈ ಸ್ತುತಿಯನ್ನು, ಉಪಾಸಾಧ್ಯ - ಕಲಿತುಕೊಂಡು' ಧಾರಯಂತಃ - ಧರಿಸಿದವರಾಗಿ, ಮುನಿವ್ರತಾಃ - ಮೌನವ್ರತದಿಂದ, ಸಮಾಹಿತಧಿಯಃ - ನಿಶ್ಚಲಚಿತ್ತರಾಗಿ, ಸರ್ವೇ-ಎಲ್ಲರೂ, ಆದೃತಾಃ ಆದರದಿಂದ, ಏತತ್ - ಇದನ್ನು, ಅಭ್ಯಸತ - ಅಭ್ಯಾಸಮಾಡಿರಿ ||೨೧|| ಪುರಾ - ಮುನ್ನು, ಭಗವಾನ್ - ಭಗವಂತನಾದ, ವಿಶ್ವಸೃಕ್ಪತಿಃ-ಪ್ರಜೇಶ್ವರರಿಗೆ ಒಡೆಯನಾದ ಚತುರ್ಮುಖನು, ಸಿಸೃಕ್ಷುಃ - ಸೃಷ್ಟಿಸಲೆಳಸಿ, ಸಂಸಿಸೃಕ್ಷತಾಂ - ಸೃಷ್ಟಿಸಲೆಳಸುವ, ಆತ್ಮಜಾನಾಂ - ಮಕ್ಕಳಾದ, ಅಸ್ಮಾಕಂ - ನಮಗೆ, ಇದಂ - ಇದನ್ನು, ಆಹ - ಹೇಳಿದನು ||೨೨|| ಪ್ರಜೇಶ್ವರಾಃ- ಪ್ರಜೆಗಳಿಗೊಡೆಯರಾದ, ತೇವಯಂಸರ್ವೇ- ಆ ನಾವೆಲ್ಲರೂ, ಪ್ರಜಾಸರ್ಗೇ - ಪ್ರಜಾಸೃಷ್ಟಿಯಲ್ಲಿ, ನೋದಿತಾಃ- ಪ್ರೇರಿಸಲ್ಪಟ್ಟವರಾಗಿ, ಅನೇನ - ಇದರಿಂದ, ಧ್ವಸ್ತತಮಸಃ - ಅಜ್ಞಾನವನ್ನು ಕಳೆದುಕೊಂಡು, ವಿವಿಧಾ- ಹಲವುಬಗೆಯವಾದ, ಪ್ರಜಾ - ಪ್ರಜೆಗಳನ್ನು, ಸಿಸೃಕ್ಷ್ಮ - ಸೃಜಿಸಿದೆವು ||೨೩|| ಅಥ - ಆದುದರಿಂದ, ನಿತ್ಯದಾ-ಯಾವಾಗಲೂ, ಅವಹಿತಃ - ನಿಶ್ಚಲಚಿತ್ತನಾಗಿ, ಯುಕ್ತಃ - ಭಕ್ತಿಯಿಂದ ಕೂಡಿ, ಇದಂ-ಇದನ್ನು, ಜಪನ್- ಜಪಿಸುವ, ಪುಮಾನ್ - ಪುರುಷನು, ವಾಸುದೇವಪರಾಯಣನಾಗಿ-ಶ್ರೇಯಸ್ಸನ್ನು, ಆಪ್ನೋತಿ-ಹೊಂದುತ್ತಾನೆ||೨೪||ಇಹ- ಈ ಲೋಕದಲ್ಲಿ, ಸರ್ವೇಷಾಂ ಶ್ರೇಯಸಾಂ- ಸಕಲ ಶ್ರೇಯಸ್ಸುಗಳಲ್ಲಿಯೂ, ಜ್ಞಾನಂ - ಜ್ಞಾನವೆಂಬುದು, ಪರಂ-ಉತ್ತಮವಾದ, ನಿಶ್ರೇಯಸಂ - ಶ್ರೇಯಸ್ಸೆನಿಸುವುದು. ಜ್ಞಾನನೌಃ - ಜ್ಞಾನವೆಂಬ ಹಡಗುಳ್ಳವನು, ದುಷ್ಪಾರಂ-ಅಪಾರವಾದ, ವ್ಯಸನಾರ್ಣವಂ - ದುಃಖಸಮುದ್ರವನ್ನು, ಸುಖಂ-ಸುಖವಾಗಿ, ತರತಿ-ದಾಟು

---

ನಲ್ಲಿಟ್ಟುಕೊಂಡು, ಮೌನವ್ರತರಾಗಿ ಏಕಾಗ್ರಚಿತ್ತದಿಂದ ನೀವೆಲ್ಲರೂ ಅಭ್ಯಾಸಮಾಡಿರಿ||೨೧
ಮುನ್ನು ನವಪ್ರಜೇಶ್ವರರಿಗೂ ಒಡೆಯನಾದ ಚತುರ್ಮುಖನು ಸೃಷ್ಟಿಸಲೆಳಸಿ, ಸೃಷ್ಟಿ
ಕಾರ್ಯಕ್ಕಾಗಿ ಪ್ರಯತ್ನಿಸುತ್ತಿದ್ದ ಮಕ್ಕಳಾದ ಭೃಗುವೇ ಮೊದಲಾದ ನಮಗೆ ಈ
ಸ್ತೋತ್ರವನ್ನು ಉಪದೇಶಿಸಿದನು ||೨೨|| ಇದರಿಂದ ಅಜ್ಞಾನವನ್ನು ಕಳೆದುಕೊಂಡೆವು. ಆತ
ನಿಂದ ಸೃಷ್ಟಿಗಾಗಿ ಆಜ್ಞಪ್ತರಾಗಿ ವಿವಿಧಪ್ರಜೆಗಳನ್ನು ಸೃಜಿಸಿದೆವು ||೨೩|| ಆದುದರಿಂದ
ಯಾವಪುರುಷನು ನಿತ್ಯವೂ ಸಮಾಹಿತನಾಗಿ ಈ ಸ್ತೋತ್ರವನ್ನು ಜಪಿಸುವನೋ, ಅವನು
ಭಾಗವತೋತ್ತಮನೆನಿಸಿ ಬೇಗನೆಶ್ರೇಯಸ್ಸನ್ನು ಪಡೆಯುವನು||೨೪|| ಈ ಜನ್ಮದಲ್ಲಿ ಸಕಲ
ಶ್ರೇಯಸ್ಸುಗಳಿಗಿಂತಲೂ ಜ್ಞಾನವೇ ಪರಮಶ್ರೇಯಸ್ಸಾದುದರಿಂದ ಜ್ಞಾನವೆಂಬ ಹಡಗನ್ನೇರಿ
ದವನು ಅಪಾರವಾದ ದುಃಖಸಾಗರವನ್ನು ನಿರಾಯಾಸವಾಗಿ ದಾಟುವನು ||೨೫|| ಯಾವಪು
ರುಷನು ಶ್ರದ್ಧಾಯುಕ್ತನಾಗಿ ನಿನ್ನಿಂದ ಹೇಳಲ್ಪಟ್ಟ ಈ ಭಗವಂತನ ಸ್ತೋತ್ರವನ್ನು ಪಠಿ

ರಂ ಜ್ಞಾನನೌ ವ್ಯಸನಾರ್ಣವಂ ||೨೫|| ಯ ಇಮಂ ಶ್ರದ್ಧಯಾ ಯುಕ್ತೋ ಮದ್ಗೀತಂ ಭಗವತ್ಸ್ತವಂ । ಅಧೀಯಾನೋ ದುರಾರಾಧ್ಯಂ ಹರಿಮಾರಾಧಯತ್ಯಸೌ ||೨೬|| ವಿಂದತೇ ಪುರುಷೋಽಮುಷ್ಮಾದ್ಯದ್ಯದಿಚ್ಛತ್ಯಸತ್ವರಂ । ಮದ್ಗೀತಗೀತಾತ್ಸುಪ್ರೀತಾಚ್ಛ್ರೇಯಸಾಮೇಕವಲ್ಲಭಾತ್ ||೨೭|| ಇದಂ ಯಃಕಲ್ಯ ಉತ್ಥಾಯ ಪ್ರಾಂಜಲಿ ಶ್ರದ್ಧಯಾನ್ವಿತಃ। ಶೃಣುಯಾಚ್ಛ್ರಾವಯೇನ್ಮರ್ತ್ಯೋ ಮುಚ್ಯತೇ ಕರ್ಮಬಂಧನೈಃ ॥ ಗೀತಂ ಮಯೇದಂ ನರದೇವನಂದನಾಃ ! ಪರಸ್ಯ ಪುಂಸಃ ಪರಮಾತ್ಮ

ತ್ಮನೆ ||೨೫|| ಯಃ - ಯಾವನು, ಶ್ರದ್ಧಯಾ-ಶ್ರದ್ಧೆಯಿಂದ, ಯುಕ್ತಃ - ಕೂಡಿದವನಾಗಿ, ಮದ್ಗೀತಂ - ನನ್ನಿಂದಹೇಳಲ್ಪಟ್ಟ, ಇಮಂ-ಈ, ಭಗವತ್ಸ್ತವಂ-ಭಗವಂತನಸ್ತುತಿಯನ್ನು, ಅಧೀಯಾನಃ-ಪಠಿಸುವನೋ, ಅಸೌ-ಅವನು, ದುರಾರಾಧ್ಯಂ-ಆರಾಧಿಸಲಸಾಧ್ಯನಾದ, ಹರಿಂ- ಹರಿಯನ್ನು, ಆರಾಧಯತಿ ಪೂಜಿಸುತ್ತಾನೆ || ೨೬ || ಅಮುಷ್ಮಾತ್ ಈ, ಮದ್ಗೀತಗೀತಾತ್-ನನ್ನಿಂದ ಹೇಳಲ್ಪಟ್ಟ ಸ್ತೋತ್ರದಿಂದ, ಸುಪ್ರೀತಾತ್ - ಸಂತುಷ್ಟನಾದ, ಶ್ರೇಯಸಾಂ- ಶ್ರೇಯಸ್ಸುಗಳಿಗೆ, ಏಕವಲ್ಲಭಾತ್ - ಮುಖ್ಯನಾಯಕನಾದ, ಭಗವಂತನಿಂದ, ಪುರುಷಃ-ಪುರುಷನು, ಯದ್ಯದಿಚ್ಛತಿ - ಬಯಸಿದುದನ್ನೆಲ್ಲಾ, ಅಸತ್ವರಂ -ಬೇಗನೆ, ವಿಂದತೇ - ಪಡೆಯುತ್ತಾನೆ, ||೨೭|| ಯಃ ಮರ್ತ್ಯಃ-ಯಾವಮನುಷ್ಯನು, ಕಲ್ಯೇ - ಮುಂಜಾನೆಯಲ್ಲಿ, ಉತ್ಥಾಯ - ಎದ್ದು, ಶ್ರದ್ಧಯಾನ್ವಿತಃ-ಶ್ರದ್ಧೆಯಿಂದ ಕೂಡಿ, ಪ್ರಾಂಜಲಿಃ-ಕೈಮುಗಿದುಕೊಂಡು, ಇದಂ- ಈ ಸ್ತೋತ್ರಪಾಠವನ್ನು, ಶೃಣುಯಾತ್- ಕೇಳುವನೋ, ಶ್ರಾವಯೇತ್-ಶ್ರವಣಮಾಡಿಸುವನೋ ಅವನು, ಕರ್ಮಬಂಧನೈಃ - ಕರ್ಮಬಂಧದಿಂದ, ಮುಚ್ಯತೇ-ಬಿಡಲ್ಪಡುತ್ತಾನೆ ||೨೮|| ನರದೇವನಂದನಾಃ - ರಾಜಪುತ್ರರಿರಾ ! ಮಯಾ - ನನ್ನಿಂದ, ಗೀತಂ - ಹೇಳಲ್ಪಟ್ಟ, ಪರಸ್ಯಪುಂಸಃ - ಪರಮಪುರುಷನಿಂದ, ಪರಮಾತ್ಮನಃ - ಪರಮಾತ್ಮನ, ಇದಂಸ್ತವಂ - ಈ ಸ್ತುತಿಯನ್ನು, ಏಕಾಗ್ರಧಿಯಃ - ದೃಢಮನಸ್ಕರಾಗಿ, ಜಪಂ

ಸುವನೋ, ಅವನು ದುರಾರಾಧ್ಯನಾದ ಶ್ರೀಹರಿಯನ್ನಾರಾಧಿಸಿ ಒಲಿಸುವನು||೨೬||ನಾನುಹೇಳಿರುವ ಈ ಸ್ತೋತ್ರಪಾಠವನ್ನು ಜಪಿಸಿದಲ್ಲಿ, ಕೈವಲ್ಯನಾಯಕನಾದ ಭಗವಂತನು ಅವನು ಬಯಸಿದ ಇಷ್ಟಾರ್ಥಗಳನ್ನೆಲ್ಲಾ ಕೈಗೂಡಿಸುವನು||೨೭||ಯಾವಪುರುಷನು ಬೆಳಗಾಗುತ್ತಲೇ ಎದ್ದು ಶ್ರದ್ಧಾಳುವಾಗಿ ಭಕ್ತಿಯಿಂದ ಕೈಗಳನ್ನು ಮುಗಿದುಕೊಂಡು ಈಸ್ತೋತ್ರಪಾಠವನ್ನು ಕೇಳುವನೋ, ಅಥವಾ ಹೇಳುವನೋ, ಅವನು ಕರ್ಮಬಂಧದಿಂದಬಿಡುಗಡೆಯನ್ನು ಪಡೆಯುವನು, ||೨೮|| ಅಯ್ಯಾ ರಾಜಪುತ್ರರಾದ ಪ್ರಚೇತಸರಿರಾ? ಪರಮಪುರುಷನಾದ ಶ್ರೀಮನ್ನಾರಾಯಣಮೂರ್ತಿಯ ಸ್ತುತಿರೂಪವಾಗಿ ನನ್ನಿಂದ ಹೇಳಲ್ಪಟ್ಟಿರುವ ಯೋಗಾದೇಶವೆಂಬ ಹೆಸರುಳ್ಳ ಈ ಸ್ತೋತ್ರಪಾಠವನ್ನು ಜಪಿಸುತ್ತಾ ಏಕಾಗ್ರಮನಸ್ಕರಾಗಿ ನೀವು ತಪಸ್ಸನ್ನುಮಾಡಿದಿರಿ. ಬಳಿಕ ಅದರಿಂದ ನಿಮ್ಮಇಷ್ಟಾರ್ಥವು ಸಿದ್ಧಿಸುವುದು,, ಎಂದು ಶ್ರೀರುದ್ರ

ನಃ ಸ್ತವಂ । ಜಪಂತ ಏಕಾಗ್ರಧಿಯ ಸ್ತಪೋಮಹ ಚ್ಚರಧ್ವ ಮಂತೇ
ತತ ಆಪ್ಸ್ಯಥೇಪ್ಸಿತಂ ॥೭೯॥

—ಇತಿ ಚತುರ್ವಿಂಶೋಧ್ಯಾಯಃ—

ತಃ - ಜಪಿಸುತ್ತಾ, ಮಹತ್ತಪಃ - ಉತ್ತಮತಪಸ್ಸನ್ನು, ಚರಧ್ವಂ - ಮಾಡಿರಿ, ಅಂತೇ - ಕಡೆಯಲ್ಲಿ, ತತಃ - ಅದರಿಂದ ಈಪ್ಸಿತಂ - ಇಷ್ಟಾರ್ಥವನ್ನು, ಆಪ್ಸ್ಯಥ - ಹೊಂದುವಿರಿ ॥೭೯॥

—ಚತುರ್ವಿಂಶಾಧ್ಯಾಯಂ ಸಮಾಪ್ತಂ.—

ಮೂರ್ತಿಯು ಪ್ರಚೇತಸರರಿಗುಪದೇಶಿಸಿದನೆಂದು ಮೈತ್ರೇಯನು ವಿದುರನಿಗೆ ಹೇಳಿದನೆಂಬಲ್ಲಿಗೆ ಭಾಗವತಚಕೋರಚಂದ್ರಿಕೆಯೊಳ್.

ಇಪ್ಪತ್ತುನಾಲ್ಕನೆಯ ಅಧ್ಯಾಯಂ ಮುಗಿದುದು.

—ಓಂ ನಮಃ ಪರಮಾತ್ಮನೇ—

—ಅಥ ಪಂಚವಿಂಶೋಧ್ಯಾಯಃ—

ಮೈತ್ರೇಯಃ ॥ ಇತಿ ಸಂದಿಶ್ಯ ಭಗವಾನ್ ಬಾರ್ಹಿಷದೈ ರಭಿಪೂಜಿತಃ । ಪ
ಶ್ಯತಾಂ ರಾಜಪುತ್ರಾಣಾಂ ತತ್ರೈವಾಂತರ್ದಧೇ ಹರಃ ॥೧॥ ರುದ್ರಗೀತಂ
ಭಗವತಃ ಸ್ತೋತ್ರಂ ಸರ್ವೇ ಪ್ರಚೇತಸಃ । ಜಪಂತ ಸ್ತೇ ತಪ ಸ್ತೇಪು

— ಪಂಚವಿಂಶಾಧ್ಯಾಯಂ —

ಕಂದ॥ ಆರಯೇ ಜೀವಂಗೀಸಂ । ಸಾರಂ ಧೀಸಂಗದಿಂದೆ ಸಮನಿಪುದೆನುತಂ ॥
ನಾರದನೀಗ ಪುರಂಜನ । ಭೂರಮಣನ ಕಥೆಯ ನೆರೆವನೆವದಿಂ ಪೇಳ್ವಂ ॥

ಮೈತ್ರೇಯನು ಹೇಳುತ್ತಾನೆ— ಭಗವಾನ್ - ಭಗವಂತನಾದ, ಹರಃ - ಶಿವನು, ಇತಿ-ಇಂತು, ಸಂದಿಶ್ಯ - ಹೇಳಿ, ಬಾರ್ಹಿಷದೈಃ - ಪ್ರಚೇತಸರಿಂದ, ಅಭಿಪೂಜಿತಃ -ಪೂಜಿಸಲ್ಪಟ್ಟವನಾಗಿ, ರಾಜಪುತ್ರಾಣಾಂ- ರಾಜಪುತ್ರರು, ಪಶ್ಯತಾಂ - ನೋಡುತ್ತಿರುವಾಗಲೇ ಅಂತರ್ದಧೇ - ಮರೆಯಾದನು ॥೧॥ ತೇ ಸರ್ವೇ ಪ್ರಚೇತಸ - ಆ ಪ್ರಚೇತಸರೆಲ್ಲರೂ ರುದ್ರಗೀತಂ - ಶಿವನಿಂದ ಹೇಳಲ್ಪಟ್ಟ, ಭಗಭತಃ - ಭಗವಂತನ, ಸ್ತೋತ್ರಂ - ಸ್ತೋತ್ರವನ್ನು, ಜಪಂತಃ - ಜಪಿಸುತ್ತಾ, ವರ್ಷಾಣಾಂ ಅಯುತಂ - ಹತ್ತುಸಾವಿರವರ್ಷಗಳು,

—ಇಪತ್ತೈದನೆಯ ಅಧ್ಯಾಯ—

— ನಾರದಮುನಿಯು ಪ್ರಾಚೀನಬರ್ಹಿಗೆ ಜ್ಞಾನೋಪದೇಶವನ್ನು ಮಾಡುವುದು —

ಅನಂತರದಲ್ಲಿ ಮೈತ್ರೇಯಮುನಿಯು ಹೇಳುತ್ತಾನೆ, ಅಯ್ಯಾ ವಿದುರನೆ! ಕೇಳು ಭಗವಂತನಾದ ಮಹಾದೇವಮೂರ್ತಿಯು ಇಂತು ಪ್ರಚೇತಸರಿಗುಪದೇಶಿಸಿ ಅವರಿಂದ ಮರ್ಯಾದೆಯನ್ನು ಪಡೆದು ಅವರು ನೋಡುತ್ತಿದ್ದಾಗಲೇ ಅಂತರ್ಧಾನನಾದನು ॥ ೧ ॥ ತರುವಾಯ ಆ ಪ್ರಚೇತಸರೆಲ್ಲರೂ, ಪರಶಿವನಿಂದ ಉಪದೇಶಿಸಲ್ಪಟ್ಟ ಯೋಗಾದೇಶ ಸ್ತೋತ್ರವನ್ನು ಜಪಿಸುತ್ತಾ, ಜಲದಲ್ಲಿ ನೆಲಸಿ ಹತ್ತುಸಾವಿರ ವರ್ಷಗಳವರೆಗೂ ತಪಸ್ಸನ್ನು ಮಾಡು

ವರ್ಷಾಣಾಂ ಮಯುತಂ ಜಲೇ ||೨|| ಪ್ರಾಚೀನಬರ್ಹಿಷಂ ಕ್ಷತ್ತಃ ! ಕರ್ಮ
ಸ್ವಾಸಕ್ತ ಮಾನಸಂ । ನಾರದೋಽಧ್ಯಾತ್ಮತತ್ತ್ವಜ್ಞಃ ಕೃಪಾಳುಃ ಪ್ರ
ತ್ಯಬೋಧಯತ್ ||೩|| ಶ್ರೇಯ ಸ್ತ್ವಂ ಕತಮ ದ್ರಾಜನ್ ! ಕರ್ಮಣಾತ್ಮ
ನ ಈಹಸೇ ? । ದುಃಖಹಾನಿ ಸ್ಸುಖಾವಾಪ್ತಿ ಶ್ಶ್ರೇಯ ಸ್ತನ್ನೇಹ ಚೇಷ್ಯ
ತೇ ||೪|| ರಾಜಾ || ನಜಾನಾಮಿ ಮಹಾಭಾಗ ! ಪರಂ ಕರ್ಮಾಽಪವಿದ್ಧ
ಧೀಃ । ಬ್ರೂಹಿ ಮೆ ವಿಮಲಂ ಜ್ಞಾನಂ ಯೇನ ಮುಚ್ಯೇಯ ಕರ್ಮ
ಭಿಃ ||೫|| ಗೃಹೇಷು ಕೂಟಧರ್ಮೇಷು ಪುತ್ರದಾರ ಧನಾರ್ಥಧೀಃ । ನ ಪರಂ
ವಿಂದತೇ ಮೂಢೋ ಭ್ರಾಮ್ಯನ್ ಸಂಸಾರ ವರ್ತ್ಮಸು ||೬||

ಜಲೇ - ನೀರಿನಲ್ಲಿ, ತಪಸ್ತೇಪುಃ - ತಪಸ್ಸು ಮಾಡಿದರು ||೨|| ಕ್ಷತ್ತಃ-ವಿದುರನೆ! ಅಧ್ಯಾ....ಜ್ಞಂ- ಆತ್ಮತತ್ತ್ವವನ್ನು ಬಲ್ಲ, ಕೃಪಾಳುಃ - ದಯಾಶಾಲಿಯಾದ, ನಾರದಃ - ನಾರದ ಮುನಿಯು, ಕರ್ಮಸು - ಕರ್ಮಗಳಲ್ಲಿ, ಆಸಕ್ತಚೇತಸಂ - ಮನಸ್ಸುಳ್ಳ, ಪ್ರಾಚೀನಬರ್ಹಿಷಂ - ಪ್ರಾಚೀನ ಬರ್ಹಿಯನ್ನು ಕುರಿತು, ಪ್ರತ್ಯಬೋಧಯತ್ - ಎಚ್ಚರಿಸಿದನು ||೩|| ರಾಜನ್ - ರಾಜನೆ ! ತ್ವಂ - ನೀನು, ಆತ್ಮನೇ - ನಿನಗಾಗಿ, ಕತಮತ್ - ಯಾವ, ಶ್ರೇಯಃ - ಫಲವನ್ನು, ಈಹಸೇ - ಬಯಸುವೆ? ಇಹ - ಈ ಕರ್ಮಮಾರ್ಗದಲ್ಲಿ, ದುಃಖಹಾನಿಃ - ದುಃಖನಾಶವು, ಸುಖಾವಾಪ್ತಿಃ - ಸುಖಪ್ರಾಪ್ತಿಯು, ಎಂಬ ಶ್ರೇಯಃ - ಶ್ರೇಯಸ್ಸು, ನೇಷ್ಯತೇ - ಹೊಂದಲ್ಪಡುವುದಿಲ್ಲ ||೪|| ರಾಜನು ಹೇಳುತ್ತಾನೆ, ಮಹಾಭಾಗ - ಮಹಾತ್ಮನೆ ! ಕರ್ಮಾ... ಧೀಃ - ಕರ್ಮಗಳಿಂದ ಮರುಳಾದ ಬುದ್ಧಿಯುಳ್ಳನಾನು, ಪರಂ - ಉತ್ತಮ ಶ್ರೇಯಸ್ಸನ್ನು, ನಜಾನಾಮಿ- ತಿಳಿಯಲಾರೆನು, ಯೇನ-ಯಾವುದರಿಂದ, ಕರ್ಮಭಿಃ- ಕರ್ಮಗಳಿಂದ, ಮುಚ್ಯೇಯ - ಬಿಡಲ್ಪಡುವೆನೋ- ವಿಮಲಂ - ಮನಶ್ಶುದ್ಧಿಯನ್ನುಂಟುಮಾಡುವ, ಜ್ಞಾನಂ-ಪಜ್ಞಾನವನ್ನು, ಮೇ-ನನಗೆ, ಬ್ರೂಹಿ-ಹೇಳು ||೫|| ಕೂಟಧರ್ಮೇಷು - ಕಪಟಧರ್ಮಗಳುಳ್ಳ, ಗೃಹೇಷು - ಗೃಹಸ್ಥಾಶ್ರಮದಲ್ಲಿ, ಪುತ್ರ...ಧೀಃ- ಮಕ್ಕಳು, ಹೆಂಡತಿ, ಧನ, ಗೃಹಾದಿಗಳು ಇವುಗಳಲ್ಲಿ ಬುದ್ಧಿಯುಳ್ಳ, ಮೂಢಃ-ಮೂಢನು, ಸಂಸಾರವರ್ತ್ಮಸು-ಸಂಸಾ

ತ್ತಿದ್ದರು, ||೨|| ಇಂತಿರಲೊಂದುದಿನ ಪರಮದಯಾಳುವಾದ ನಾರದಮುನಿಯು "ಅಕಟಾ! ನನ್ನ ಶಿಷ್ಯನಾದ ಧ್ರುವನ ವಂಶದಲ್ಲಿ ಜನಿಸಿದ ಇವನು ಕರ್ಮಗಳಲ್ಲಿ ಮುಳುಗಿರುವನಲ್ಲಾ! ಆದುದರಿಂದ ಇವನನ್ನು ಉದ್ಧರಿಸಬೇಕು" ಎಂದು ಕನಿಕರಿಸಿ, ಕರ್ಮಕಾಂಡದಲ್ಲಿಯೇ ಪೂರ್ಣಶ್ರದ್ಧೆಯುಳ್ಳ ಪ್ರಾಚೀನಬರ್ಹಿಯಬಳಿಗೆ ಬಂದು, ಅಧ್ಯಾತ್ಮ ತತ್ತ್ವವನ್ನನುಗ್ರಹಿಸಲೆಳಸಿ, ಅವನನ್ನು ಕುರಿತಿಂತೆಂದನು ||೩|| ಅಯ್ಯಾ ರಾಜನೆ! ಹಗಲಿರುಳಲ್ಲಿಯೂ ಕರ್ಮಗಳನ್ನೇ ಮಾಡುತ್ತಿರುವ ನೀನು ಯಾವ ಫಲವನ್ನುದ್ದೇಶಿಸಿರುವೆ? ಲೋಕದಲ್ಲಿ ದುಃಖನಿವೃತ್ತಿ, ಸುಖಪ್ರಾಪ್ತಿಗಳೆಂಬುವೇ ಪರಮಫಲಗಳೆಂದು ನಿಶ್ಚಯಿಸಲ್ಪಟ್ಟಿರುವುದರಿಂದ, ಈ ಕರ್ಮಮಾರ್ಗದಲ್ಲಿ ಇವೆರಡೂ ಸಿದ್ಧಿಸಲಾರವು, ಎಂದು ಬೆಸಗೊಂಡನು ||೪|| ಆಗ ರಾಜನು ಅಯ್ಯಾ ಮಹಾತ್ಮನಾದ ನಾರದಮುನಿಯೆ ! ಕರ್ಮಕಲಾಪದಿಂದ ಮರುಳಾಗಿರುವ ನಾನು ಯಾವದು ನನಗೆ ಪರಮಶ್ರೇಯವೊ, ನಾನರಿಯೆನು, ಗ್ರಾಮ್ಯಧರ್ಮಮಯವಾದ ಗೃಹಸ್ಥಾಶ್ರಮದಲ್ಲಿ ಸಿಕ್ಕಿ, ಪುತ್ರ, ಕಳತ್ರ, ಗೃಹ, ಧನಾದಿಗಳಲ್ಲಿಯೇ ಆಸಕ್ತನಾಗಿ, ಸಂಸಾರ ಸಾಗರದಲ್ಲಿ ಓಲಾಡುತ್ತಿರುವ ಮೂಢನು ಎಂತು ತಾನೇ ಶ್ರೇಯಸ್ಸನ್ನು ಪಡೆಯಲಾಪನು ? ಆದುದರಿಂದ

—ಪುರಂಜನೋಪಾಖ್ಯಾನ ಪ್ರಾರಂಭಃ—

ಶ್ರೀನಾರದಃ ॥ * ಭೋಭೋ ! ಪ್ರಜಾಪತೇ! ರಾಜನ್ ! ಪಶೂನ್ ಪಶ್ಯ ತ್ವಯಾಽಧ್ವರೇ । ಸಂಜ್ಞಾಪಿತಾನ್ ಜೀವಸಂಘಾನ್ನಿರ್ಘೃಣೇನ ಸಹಸ್ರಶಃ॥೭॥ ಏತೇ ತ್ವಾಂ ಸಂಪ್ರತೀಕ್ಷಂತೇ ಸ್ಮರಂತೋ ವೈಶಸಂ ತವ । ಸಂಪರೇತ ಮಯಃಕೂಟೈಶ್ಛಿಂದಂತ್ಯುತ್ಥಿತಮನ್ಯವಃ ॥೮॥ ಅತ್ರ ತೇ ಕಥಯಿಷ್ಯೇಽಮು

ಮಾರ್ಗಗಳಲ್ಲಿ- ಭ್ರಾಮ್ಯನ್ - ಅಲೆಯುತ್ತಾ, ಪರಂ- ಉತ್ತಮಶ್ರೇಯಸ್ಸನ್ನು, ನವಿಂದತೇ - ಪಡೆಯುವುದಿಲ್ಲ ॥ ೬ ॥ ಪ್ರಜಾಪತೇ - ಪ್ರಜಾಪಾಲಕನಾದ, ಭೋಭೋರಾಜನ್ - ಎಲೈರಾಜನೆ ! ನಿರ್ಘೃಣೇನ- ದಯೆಯಿಲ್ಲದ, ತ್ವಯಾ-ನಿನ್ನಿಂದ, ಅಧ್ವರೇ-ಯಜ್ಞದಲ್ಲಿ, ಸಹಸ್ರಶಃ- ಹಿಂಡುಹಿಂಡಾಗಿ - ಸಂಜ್ಞಾಪಿತಾನ್- ಕೊಲ್ಲಲ್ಪಟ್ಟ, ಜೀವಸಂಘಾನ್ -ಪ್ರಾಣಿಸಮೂಹವನ್ನು, ಪಶ್ಯ-ನೋಡು ॥ ೭ ॥ ಏತೇ-ಇವು, ತವ- ನಿನ್ನ, ವೈಶಸಂ-ಹಿಂಸೆಯನ್ನು- ಸ್ಮರಂತಃ-ಸ್ಮರಿಸುತ್ತಾ, ತ್ವಾಂ-ನಿನ್ನನ್ನು, ಸಂಪ್ರತೀಕ್ಷಂತೇ - ಎದುರುನೋಡುತ್ತಿರುವುವು, ಸಂಪರೇತಂ - ಮೃತನಾದನಿನ್ನನ್ನು, ಉತ್ಥಿತಮನ್ಯವಃ - ಕೋಪವೇರಿ, ಅಯಃಕೂಟೈಃ - ಕಬ್ಬಿಣದಕೊಂಬುಗಳಿಂದ, ಛಿಂದಂತಿ-ಸೀಳುತ್ತವೆ ॥೮॥ ಅತ್ರ-ಈ ವಿಷಯದಲ್ಲಿ, ತೇ-ನಿನಗೆ, ಪುರಾತನಂ-

ನಾನು ಯಾವುದನ್ನಾಶ್ರಯಿಸಿದಲ್ಲಿ ಈ ಕರ್ಮಬಂಧದಿಂದ ಬಿಡುಗಡೆಯನ್ನು ಪಡೆದು ಸುಖಿಸುವೆನೋ, ಮನಸ್ಸಿನಲ್ಲಿ ಬೇರೂರಿರುವ ಕಾಮಾದಿ ಕಲ್ಮಷಗಳು ಯಾವುದರಿಂದ ಅಳಿದು ಹೋಗುವುವೋ, ಅಂತಹ ಜ್ಞಾನವನ್ನನುಗ್ರಹಿಸು ಎಂದು ಬೇಡಿಕೊಂಡನು ॥೬॥

—ಪುರಂಜನೋಪಾಖ್ಯಾನ—

ಇಂತು ಬೇಡುತ್ತಿರುವ ಪ್ರಾಚೀನಬರ್ಹಿಯ ನುಡಿಗಳನ್ನು ಕೇಳಿ, ನಾರದಮುನಿಯು, ಎಂತಾದರೂ ಆತನಿಗೆ ಕರ್ಮಮಾರ್ಗದಲ್ಲಿ ವಿರಕ್ತಿಯನ್ನು ಹುಟ್ಟಿಸಿ ತತ್ವೋಪದೇಶವನ್ನು ಮಾಡಬೇಕೆಂದು ನಿಶ್ಚಯಿಸಿ. ತನ್ನ ಯೋಗಮಹಿಮೆಯಿಂದ, ಪರಲೋಕದಲ್ಲಿರುವ ಯಜ್ಞಪಶುಗಳನ್ನು ತೋರಿಸಿ ಆತನಿಗಿಂತೆಂದನು, ಎಲೈ ಪ್ರಜಾಪಾಲಕನಾದ ಪ್ರಾಚೀನಬರ್ಹಿರಾಜನೆ ! ಮುನ್ನು ಯಜ್ಞಗಳಲ್ಲಿ ನಿರ್ಘೃಣನಾದ ನಿನ್ನಿಂದ ಕೊಲ್ಲಲ್ಪಟ್ಟ ಪ್ರಾಣಿಗಳು ಹಿಂಡುಹಿಂಡಾಗಿ ನಿಂದಿರುವುದನ್ನು ಕಂಡೆಯಾ? ॥೭॥ ಇವುಗಳೆಲ್ಲವೂ ನೀನುಮಾಡಿದ ಹಿಂಸೆಯನ್ನು ಸ್ಮರಿಸಿಕೊಂಡು ಕ್ರೋಧದಿಂದ ನಿನ್ನನ್ನು ಎದುರು ನೋಡುತ್ತಿರುವುವು. ನೀನು ಮೃತನಾಗಿ ಯಮಲೋಕಕ್ಕೆ ತೆರಳಿದಕೂಡಲೇ ಇವುಗಳು ಕೆರಳಿ ಉಕ್ಕಿನಂತೆ ಅತಿಕಠಿನಗಳಾದ ತಮ್ಮ ಕೊಂಬುಗಳಿಂದ ನಿನ್ನನ್ನು ತಿವಿದು ಕೆಡಹುವುವು ॥೮॥ ಈ ವಿಷಯದಲ್ಲಿ ಹಿಂದೆ

* ವಿ. ಕರ್ಮವುಜ್ಞಾನೋತ್ಪತ್ತಿಗೆ ಸಹಕಾರಿಯೆಂಬುದೇನೋದಿಟ. ಆದರೂ ಯಥಾವಿಧಿಯಾಗಿ ನಡೆಯಿಸುವುದು ಅಶಕ್ಯವಾಗಿಯೂ, ಅವಿಧಿಯಾದಲ್ಲಿ ನರಕಹೇತುವಾಗಿಯೂ ಪರಿಣಮಿಸುವುದರಿಂದ, ಅನೇಕನಿರ್ಬಂಧಗಳಿಗೊಳಪಟ್ಟಿರುವ ಕರ್ಮಗಳಿಗಿಂತಲೂ, ನಿರುಪಾಧಿಕವಾದ ಜ್ಞಾನೋಪಾಸನವೇ ಶ್ರೇಯಸ್ಕರವೆಂಬ ಅಭಿಪ್ರಾಯದಿಂದ ಇಂತು ಹೇಳಲ್ಪಡುವುದೇಹೊರತು ಕರ್ಮವು ವ್ಯರ್ಥವೆಂದು ತಾತ್ಪರ್ಯವಲ್ಲ.

ಶ್ಲೋ॥ ಯಥಾವತ್ಕರ್ಮಕರ್ತುಸ್ತು ಜ್ಞಾನಂ ಸಾಹಾಯ್ಯಕಾರಕಂ । ಅನ್ಯಥಾಕುರ್ವತಃ ಕರ್ಮ ನಿರಯಾಯ ಭವಿಷ್ಯತಿ ॥ ತಥಾ ವಿಕರ್ಮ ನಿಂದಂತಿ ತಪಸಃ ಕರ್ತುಮಂಜಸಾ। ಶಕ್ಯಂ ಜ್ಞಾನಫಲಸ್ಯಾಪಿ ಬಹುತ್ವಾನ್ಮೋಹನಾಯಚ ॥

ಮಿತಿಹಾಸಂ ಪುರಾತನಂ । ಪುರಂಜನಸ್ಯ ಚರಿತಂ ನಿಬೋಧ ಗದತೋ ಮ
ಮ ॥೯॥ ಆಸೀತ್ ಪುರಂಜನೋ ನಾಮ ರಾಜಾ ರಾಜರ್ಷೇ! ಬೃಹಚ್ಛ್ರ
ವಾಃ । ತಸ್ಯಾ ಽ ವಿಜ್ಞಾತನಾಮಾಽಽಸೀ ತ್ಸಖಾ ಽ ವಿಜ್ಞಾತ ಚೇಷ್ಟಿತಃ ॥೧೦॥
ಸೋ ಽ ನ್ವೇಷಮಾಣ ಶ್ಶರಣಂ ಬಭ್ರಾಮ ಪೃಥಿವೀಂ ಪ್ರಭುಃ । ನಾನು
ರೂಪಂ ಯದಾಽ ವಿಂದ ದಭೂ ತ್ಸವಿಮನಾ ಇವ ॥೧೧॥ ನ ಸಾಧುಮೇನೇ

ಪೂರ್ವದಲ್ಲಿ,ನಡೆದ, ಪುರಂಜನಸ್ಯ - ಪುರಂಜನನ, ಚರಿತಂ - ಚರಿತ್ರೆಯುರೂಪವಾದ, ಅಮುಂ-ಇತಿಹಾಸಂ- ಈ ವೃತ್ತಾಂತವನ್ನು, ಕಥಯಿಷ್ಯೇ - ಹೇಳುವೆನು, ಗದತಃ - ಹೇಳುವ, ಮಮ - ನನ್ನನುಡಿಯನ್ನು ನಿಬೋಧ-ತಿಳಿ ॥ ೯ ॥ ರಾಜರ್ಷೇ-ರಾಜನೆ ! ಪುರಂಜನೋನಾಮ-ಪುರಂಜನನೆಂಬ, ಬೃಹಚ್ಛ್ರವಾಃ-ಸುಪ್ರಸಿದ್ಧನಾದ, ರಾಜಾ-ರಾಜನು, ಆಸೀತ್-ಇದ್ದನು, ತಸ್ಯ-ಅವನಿಗೆ, ಅವಿಜ್ಞಾತನಾಮಾ - ತಿಳಿಯಲ್ಪಡದ ಹೆಸರುಳ್ಳ, ಅವಿಜ್ಞಾತಚೇಷ್ಟಿತಃ-ತಿಳಿಯಲ್ಪಡದ ನಡವಳಿಯುಳ್ಳ, ಸಖಾ-ಮಿತ್ರನು, ಆಸೀತ್-ಇದ್ದನು ॥ ೧೦ ॥
ಸಪ್ರಭುಃ - ಆ ಪುರಂಜನನು, ಶರಣಂ - ವಾಸಸ್ಥಾನವನ್ನು, ಅನ್ವೇಷಮಾಣಃ - ಹುಡುಕುತ್ತಾ, ಪೃಥಿವೀಂ - ಭೂಮಂಡಲವನ್ನು, ಬಭ್ರಾಮ - ಸಂಚರಿಸಿದನು, ಯದಾ - ಯಾವಾಗ, ಅನುರೂಪಂ - ಸರಿಯಾದಸ್ಥಳವನ್ನು, ನಾವಿಂದತ್ - ಪಡೆಯಲಿಲ್ಲವೋ, ತದಾ - ಆಗ, ಸಃ - ಅವನು, ವಿಮನಾಇವ - ಮನಗುಂದಿದವನು, ಅಭೂತ್ - ಆದನು ॥೧೧॥ ಕಾಮಾನ್ - ಶಬ್ದಾದಿವಿಷಯಗಳನ್ನು, ಕಾಮಯಮಾ

ನಡೆದ ಒಂದು ಇತಿಹಾಸವನ್ನು ಹೇಳುವೆನು ಕೇಳು ॥೯॥ ಪೂರ್ವದಲ್ಲಿ ಜಗದ್ವಿಖ್ಯಾತನಾದ ಪುರಂಜನನೆಂಬ ರಾಜನಿದ್ದನು. ಆತನಿಗೊರ್ವ ಮಿತ್ರನಿದ್ದನು. ಆ ಮಿತ್ರನು ಮಾಡುವಕೆಲಸವನ್ನಾಗಲಿ, ಅವನ ಹೆಸರನ್ನಾಗಲಿ, ಯಾರೂ ತಿಳಿಯಲಾರರು ॥೧೦॥ ಆ ಪುರಂಜನಮಹಾರಾಜನು ತನ್ನವಾಸಕ್ಕೆ ಅನುಕೂಲವಾದ ರಾಜಧಾನಿಯನ್ನು ಹುಡುಕುತ್ತಾ, ಭೂಮಂಡಲವನ್ನೆಲ್ಲಾ ಸಂಚರಿಸಿದನು. ಎಲ್ಲಿಯೂ ತನಗೆಸರಿಯಾದ ಸ್ಥಲವುದೊರೆಯದಿರಲು, ಚಿಂತಾಕ್ರಾಂತನಾದನು ॥೧೧॥ ವಿಷಯ ಭೋಗಗಳನ್ನು ಬಯಸುವ ಈರಾಜನು, ಭೂಮಂಡಲದಲ್ಲಿರುವ

— ಪುರಂಜನೋಪಾಖ್ಯಾನ ಗೂಢಾರ್ಥ —

ಅವಿದ್ಯಾ ಪ್ರತಿಬಿಂಬಿತ ಚೈತನ್ಯಕ್ಕೆ ಜೀವನೆಂದು ಹೆಸರು. ಆ ಜೀವನಿಗೆ ಜ್ಞಾನಕರ್ಮೇಂದ್ರಿಯಗಳು, ಪಂಚಪ್ರಾಣಗಳು, ಮನಸ್ಸು, ಬುದ್ಧಿಯೆಂಬಿವು ಸೂಕ್ಷ್ಮ (ಲಿಂಗ) ಶರೀರವೆಂತಲೂ, ರಕ್ತಮಾಂಸಾದಿಗಳ ಸಂಘಾತ ಪುಸ್ಥೂಲಶರೀರವೆಂತಲೂ ಸಂಜ್ಞೆ. ಜೀವನು ಆಸೂಕ್ಷ್ಮಶರೀರ ಸಹಿತವಾಗಿಯೇ ಒಂದು ಶರೀರವನ್ನುಳಿದು ಮತ್ತೊಂದು ಶರೀರಕ್ಕೆ ತೆರಳುವನು. ಜೀವನಿಗೆ ವಿಷಯಾಸಕ್ತಿಯಿಂದ ಸಂಸಾರ ಪ್ರಾಪ್ತಿಯೂ, ಈಶ್ವರಾನುಗ್ರಹದಿಂದ ಸಂಸಾರ ನಿವೃತ್ತಿಯೂ ಉಂಟಾಗುವುದೆಂಬುದೇ ಈ ಚರಿತ್ರೆಯ ಸಾರಾಂಶವು. ಆದರೆ ತತ್ವಜ್ಞಾನವಿಲ್ಲದೆ ಶರೀರವೇ ಆತ್ಮವೆಂತಲೂ, ವಿಷಯ ಸುಖವೇ ಪರಮ ಪುರುಷಾರ್ಥವೆಂತಲೂ, ನಂಬಿರುವವನಿಗೆ ಪರಮಾರ್ಥವನ್ನು ತಿಳುಹಿದರೂ, ಅವನ ಬುದ್ಧಿಗೆ ಅದು ಹಿಡಿಯಲಾರದೆಂದೆಣಿಸಿ, ನಿರಂತರವೂ ಅನುಭವದಲ್ಲಿರುವ ಗರ್ಭ, ಜನ್ಮ, ಜರಾ, ಮರಣ ಮೊದಲಾದವುಗಳ ರೂಪವಾದ ಸಂಸಾರವನ್ನು ಖಣ್ಡಿಸಿ, ಅದರಲ್ಲಿರುವ ದೋಷಗಳನ್ನು ಹೊರಪಡಿಸಿ ಆ ಸಂಸಾರದಲ್ಲಿ ವಿರಕ್ತಿಯನ್ನುಂಟುಮಾಡಿ ತತ್ತ್ವೋಪದೇಶವನ್ನು ಮಾಡಿದಲ್ಲಿ ನೆಲೆಗೆ ನಿಲ್ಲುವುವೆಂದು ಯೋಚಿಸಿ, ನಾರದಮುನಿಯು ಜೀವನಿಗೆ ಪುರಂಜನನೆಂತಲೂ, ಶರೀರಕ್ಕೆ ಪುರವೆಂತಲೂ, ಪರಮಾತ್ಮನಿಗೆ ಮಿತ್ರನೆಂತಲೂ, ಬುದ್ಧಿಗೆ ರಾಜಪತ್ನಿಯೆಂತಲೂ, ಹೆಸರಿಟ್ಟು ಕಥಾರೂಪವಾಗಿ ತತ್ವವನ್ನರುಹಿದನು.

ತಾ ಸ್ಸರ್ವಾ ಭೂತಲೇ ಯಾವತೀಃ ಪುರಃ । ಕಾಮಾನ್ ಕಾಮಯಮಾನೋಽ
ಸೌ ತಸ್ಯ ತಸ್ಯೋಪಪತ್ತಯೇ ॥೧೨॥ ಸ ಏಕದಾ ಹಿಮವತೋ ದಕ್ಷಿಣೇ
ಷ್ವಥ ಸಾನುಷು । ದದರ್ಶ ನವಭಿ ರ್ದ್ವಾರ್ಭಿಃ ಪುರಂ ಲಕ್ಷಿತ ಲಕ್ಷ
ಣಾಂ ॥೧೩॥ ಪ್ರಾಕಾರೋಪವನಾಟ್ಟಾಲ ಪರಿಖೈ ರಕ್ಷತೋರಣೈಃ । ಸ್ವ

ನಃ - ಬಯಸುವ, ಅಸೌ - ಈ ರಾಜನು, ತಸ್ಯತಸ್ಯ - ಆ ಆ ವಿಷಯಗಳ, ಉಪಪತ್ತಯೇ - ಪ್ರಾಪ್ತಿಗಾಗಿ, ಭೂತಲೇ - ಭೂಮಿಯಲ್ಲಿ, ಯಾವತೀಃ - ಎಷ್ಟು, ಪುರಃ ಪಟ್ಟಣಗಳುಂಟೋ, ತಾಸ್ಸರ್ವಾಃ - ಅವುಗಳೆಲ್ಲವನ್ನೂ, ನಸಾಧುಮೇನೆ - ಸರಿಯೆಂದು ತಿಳಿಯಲಿಲ್ಲ ॥೧೨॥ ಸಃ - ಅವನು, ಏಕದಾ - ಒಮ್ಮೆ - ಹಿಮವತಃ - ಹಿಮಾಲಯದ, ದಕ್ಷಿಣೇಷು - ತೆಂಕಣಕಡೆಯ, ಸಾನುಷು - ತಪ್ಪಲಲ್ಲಿ, ನವಭಿಃ - ಒಂಬತ್ತು, ದ್ವಾರ್ಭಿಃ - ಬಾಗಿಲುಗಳಿಂದಕೂಡಿದ, ಲಕ್ಷಿತಲಕ್ಷಣಾಂ - ಲಕ್ಷಣಯುಕ್ತವಾದ, ಪುರಂ - ಪಟ್ಟಣವನ್ನು, ದದರ್ಶ - ಕಂಡನು ॥೧೩॥ ಪ್ರಾಕಾ⋯ಖೈಃ - ಕೋಟೆ, ಉದ್ಯಾನವನ, ಕೋಟೆತೆನೆ, ಅಗಳ್ತೆ ಇವುಗಳಿಂದಲೂ

ಪಟ್ಟಣಗಳನ್ನೆಲ್ಲಾ ನೋಡಿನೋಡಿ, ಸಕಲಭೋಗಗಳಿಗೂ ಅನುಕೂಲವಾದ ನಗರವಾವುದೂ ಇಲ್ಲವೆಂದು ತಿಳಿದನು ॥೧೨॥ ಇಂತಿರಲಾ ರಾಜನೊಮ್ಮೆ ಸಂಚರಿಸುತ್ತಾ ಹಿಮಾಲಯದ ತೆಂಕಣತಪ್ಪಲಲ್ಲಿ ಒಂದು ನಗರಿಯನ್ನು ಕಂಡನು. ಆ ನಗರಿಯು ಸರ್ವಲಕ್ಷಣಲಕ್ಷಿತವಾಗಿ ಒಂಬತ್ತುಬಾಗಿಲುಗಳಿಂದ ಮೆರೆಯುತ್ತಿದ್ದುದು ॥೧೩॥ ಆ ಪುರದಸುತ್ತಲೂ ಎತ್ತರಗಳಾದ ಕೋಟೆಗಳೂ, ಉದ್ಯಾನವನಗಳೂ, ಕೊತ್ತಳಗಳೂ, ಅಗಳ್ತೆಗಳೂ, ಹೊಳೆಯುತ್ತಿದ್ದವು. ಸೊಗಸಾದ ಗವಾಕ್ಷಗಳಿಂದಲೂ, ತೋರಣಗಳಿಂದಲೂ, ಚಿನ್ನ, ಬೆಳ್ಳಿ, ಕಬ್ಬಿಣದ ಕಲಶ

ಗೂಢಾರ್ಥ॥ಅನಾದಿಮಾಯಾ ಮೋಹಿತನಾದ ಜೀವನು ಶ್ರವಣಮನನಾದಿಗಳಿಂದ ಪರಿಶುದ್ಧಾಂತಃಕರಣನಾಗಿ ತನ್ನ ಕರ್ಮಾನುಗುಣವಾದ ಶರೀರವನ್ನು ಸಂಪಾದಿಸಲೆಳಸುತ್ತಿದ್ದನು. ಇವನೇ ಪುರಂಜನನು ಆ ಜೀವನನ್ನೆಡಬಿಡದೆ ಜತೆಯಲ್ಲಿಯೇ ನೆಲಸಿದ್ದರೂ ಆತನ ಸುಖದುಃಖಗಳಿಗೆ ಭಾಗಿಯಾಗದೆ ಉದಾಸೀನನಾಗಿ ಹಿತೈಷಿಯಾದ ಪರಮಾತ್ಮನೇ ಆಜೀವನಿಗೆ ಮಿತ್ರನು. ಆಮಿತ್ರನ ಹೆಸರನ್ನಾಗಲಿ, ಕಾರ್ಯಗಳನ್ನಾಗಲಿ ಯಾರೂ ತಿಳಿಯಲಾರರು॥೧೦॥ ಆ ಜೀವನು ಒಮ್ಮೆ ತನ್ನಕರ್ಮಫಲಗಳನ್ನು ಅನುಭವಿಸುವುದಕ್ಕೆ ಯಾವ ಶರೀರವು ತಕ್ಕದೆಂದು ಹುಡುಕುತ್ತಾ ಪ್ರಕೃತಿಪರಿಣಾಮವೆನಿಸಿದ ಬ್ರಹ್ಮಾಂಡದಲ್ಲಿ ದೇವಾದಿ ಸ್ಥಾವರಾಂತಗಳಾದ ಜರಾಯುಜ, ಅಂಡಜ, ಸ್ವೇದಜ, ಉದ್ಭಿಜ್ಜಗಳೆಂಬ ನಾಲ್ಕುವಿಧಗಳಾದ ಶರೀರಗಳನ್ನೂ ಹೊಕ್ಕು ಹೊಕ್ಕು, ದೇವಮಾನವಾದ್ಯುತ್ತಮ ಶರೀರವು ದೊರೆಯದೆ, ಪಶುಪಕ್ಷಿವೃಕ್ಷಾದಿ, ಶರೀರಗಳನ್ನು ಪಡೆದು, ಅಲ್ಲಿ ಭೋಗಗಳಿಗೆ ಅವಕಾಶವಿಲ್ಲದೆ ನಿಶ್ಚೈತನ್ಯನಾದನು ॥೧೧॥ ಶಬ್ದಾದಿ ವಿಷಯ ಭೋಗಗಳನ್ನು ಬಯಸುತ್ತಿರುವ ಜೀವನು ಸಕಲ ಭೋಗಾನುಭವಕ್ಕೂ ತಕ್ಕ ಶರೀರವನ್ನಪೇಕ್ಷಿಸಿ, ಕೆಲವಿಂದ್ರಿಯಗಳಿಂದ ಮಾತ್ರಕೂಡಿರುವ ಶರೀರಗಳನ್ನು ಹೊಂದಿದರೂ, ಸಕಲ ವಿಷಯಗಳನ್ನೂ ಅನುಭವಿಸುವುದಕ್ಕೆ ಅವಕಾಶವಿಲ್ಲದೆ ಆ ಶರೀರಗಳನ್ನು ಒಪ್ಪಲಿಲ್ಲ ॥ ೧೨ ॥ ಇಂತು ಮೂಢಯೋನಿಗಳಲ್ಲಿ ಬಳಲುತ್ತಿರುವ ಜೀವನು ತನ್ನ ಪುಣ್ಯಪರಿಪಾಕದಿಂದ ಕರ್ಮಫಲಗಳ ಉತ್ಪತ್ತಿಗೆ ಯೋಗ್ಯವಾಗಿ ಕರ್ಮಭೂಮಿಯೆನಿಸಿದ ಭರತ ಖಂಡದಲ್ಲಿ,ಕುಂಟು,ಕುರುಡು ಮೊದಲಾದ ಯಾವ ದೋಷವೂ ಇಲ್ಲದೆ ಸರ್ವಲಕ್ಷಣ ಸಂಪನ್ನವಾದ ಒಂದು ಮಾನವಶರೀರವೆಂಬ ಪುರವನ್ನು ಕಂಡನು॥೧೩॥ ಆ ಶರೀರವೆಂಬ ಪುರಕ್ಕೆ ಚರ್ಮ,ಮಾಂಸ, ಎಲುಬು ಮೊದಲಾದುವು ಕೋಟೆಗಳು. ರೋಮಪಂಕ್ತಿಯೇ ಉದ್ಯಾನವನವು,ಹೆಗಲಿನ ಮೇಲ್ಭಾಗವೇ ಕೊತ್ತಳ,ರಕ್ತಸಂ

ರ್ಣರೌಪ್ಯಾಯಸ್ಯೈ ಶ್ಶೃಂಗೈ ಸ್ಸಂಕುಲಾಂ ಸರ್ವತೋ ಗೃಹೈಃ ॥೧೪॥ ನೀಲಸ್ಫಟಿಕ ವೈಡೂರ್ಯ ಮುಕ್ತಾ ಮರಕತಾರುಣೈಃ । ಕ್ಲೃಪ್ತಹರ್ಮ್ಯಸ್ಥಲೀಂ ದೀಪ್ತಾಂ ಶ್ರಿಯಾ ಭೋಗವತೀಮಿವ ॥೧೫॥ ಸಭಾಚತ್ವರರಥ್ಯಾಭಿರಾಕ್ರೀಡಾಯತನಾಪಣೈಃ । ಚೈತ್ಯಧ್ವಜಪತಾಕಾಭಿ ರ್ಯುಕ್ತಾಂ ವಿದ್ರುಮವೇದಿಭಿಃ ॥೧೬॥ ಪುರ್ಯಾಸ್ತು ಬಾಹ್ಯೋಪವನೇ ದಿವ್ಯದ್ರುಮಲತಾ

ಅಕ್ಷತೋರಣೈಃ - ಗವಾಕ್ಷತೋರಣಗಳಿಂದಲೂ, ಸ್ವರ್ಣ…ಸ್ಯೈಃ- ಚಿನ್ನ, ಬೆಳ್ಳಿ, ಕಬ್ಬಿಣಗಳ, ಶೃಂಗೈಃ-ಶಿಖರಗಳಿಂದಲೂ, ಸರ್ವತಃ - ಎಲ್ಲಾಕಡೆಯಲ್ಲಿಯೂ, ಗೃಹೈಃ - ಮನೆಗಳಿಂದಲೂ, ಸಂಕುಲಾಂ - ತುಂಬಿರುವ ॥೧೪॥ ನೀಲ…ಣೈಃ - ನೀಲ, ಸ್ಫಟಿಕ, ವೈಡೂರ್ಯ, ಮುತ್ತು ಮರಕತ - ಕೆಂಪುಗಳಿಂದಲೂ, ಕ್ಲೃಪ…ಲೀಂ - ಕೆತ್ತಲ್ಪಟ್ಟ ಮಾಡಿದನೆಲವುಳ್ಳ, ಶ್ರಿಯಾ - ಕಾಂತಿಯಿಂದ, ಭೋಗವತೀಮಿವ -ಭೋಗವತಿಯಂತೆ ಹೊಳೆಯುತಿದ್ದುದು ॥೧೫॥ ಸಭಾ…ಭಿಃ - ಸಭಾಗೃಹ, ಚೌಕ ಹೆದ್ದಾರಿಗಳಿಂದಲೂ, ಆಕ್ರೀ…ಣೈಃ - ಆಟದಮನೆ, ಅಂಗಡಿಯಬೀದಿಗಳಿಂದಲೂ, ಚೈತ್ಯ…ಭಿಃ ವಿಶ್ರಮಸ್ಥಾನ, ಧ್ವಜ, ಪತಾಕೆಗಳಿಂದಲೂ, ವಿದ್ರುಮವೇದಿಭಿಃ - ಹವಳದಜಗುಲಿಗಳಿಂದಲೂ, ಯುಕ್ತಾಂ - ಕೂಡಿರುವ ಪುರವನ್ನು

ಗಳಿಂದಲೂ, ರಮಣೀಯಗಳಾದ ಸುಂದರ ಮಂದಿರಗಳೂ ಪ್ಪುತ್ತಿದ್ದುವು ॥೧೪॥ ಮನೆಮನೆಯಲ್ಲಿಯೂ, ನೀಲ, ಸ್ಫಟಿಕ, ವೈಡೂರ್ಯ, ಮುತ್ತು, ಮರಕತ, ಕೆಂಪು, ಈರತ್ನಗಳಿಂದ ಖಚಿತಗಳಾದ ಮೇಲ್ಮಾಡದನೆಲಗಳಿಂದ, ಭೋಗವತಿಯಂತೆ ಮೆರೆಯುತ್ತಿದ್ದುದು ॥೧೫॥ ಆನಗರದಲ್ಲಿ ಅಲ್ಲಲ್ಲಿ ಸಭಾಮಂದಿರಗಳು, ಚೌಕಗಳು, ರಾಜವೀಧಿಗಳು, ಆಟದಮನೆಗಳು, ಅಂಗಡಿಬೀದಿಗಳು, ವಿಹಾರಸ್ಥಾನಗಳು ಒಪ್ಪಿದ್ದುವು .ಪ್ರತಿಗೃಹದ ಮುಂಭಾಗದಲ್ಲಿಯೂ ಧ್ವಜಪತಾಕೆಗಳೂ ಹವಳದ ಜಗುಲಿಗಳೂ ಶೋಭಿಸುತ್ತಿದ್ದುವು ॥೧೬॥ ಆಪೊಳಲಸುತ್ತಲೂ ದಿವ್ಯವಾದ ಪೂದೋಟವು ಹೊಳೆಯುತ್ತಿದ್ದುದು. ಅದರಲ್ಲಿ ರಮ್ಯಗಳಾದ ಗಿಡಬಳ್ಳಿಗಳೂ, ಚಿಲಿಪಿಲಿಗುಟ್ಟುವ ನೀರುಹಕ್ಕಿಗಳೂ, ತುಂಬಿಗಳ ಕಲಕಲದಿಂದ ಕಲಿತಗಳಾದ ತಂಗೊಳಗಳೂ, ಹಿಮನದಿಗಳ ತುಂತುರುಗಳಿಂದ ಶೈತ್ಯವನ್ನೂ, ಪುಷ್ಪರಾಜಿಗಳಿಂದ ಸೌರಭ್ಯವನ್ನೂ

ಚಾರವೇ ಅಗಳ್ತೆ, ಇಂದ್ರಿಯ ದ್ವಾರಗಳೇ ಗವಾಕ್ಷಗಳು, ಕಣ್ಣುರೆಪ್ಪೆಗಳೇ ತೋರಣಗಳು. ರಜಸ್ಸತ್ವಾದಿ ಗುಣಗಳೆಂಬ ಚಿನ್ನದ ಕಲಶಗಳಿಂದಕೂಡಿದ ಮೂಲಾಧಾರಾದಿ ಚಕ್ರಗಳೇ ಮನೆಗಳು ॥೧೪॥ ನೀಲ, ಸ್ಫಟಿಕ, ವೈಡೂರ್ಯ, ಮೌಕ್ತಿಕ, ಮರಕತ, ರತ್ನಗಳಂತೆ ಹಲವು ಬಣ್ಣಗಳುಳ್ಳ ನೂರೊಂದು ನಾಡಿಗಳಿಗೆ ನೆಲೆಯಾದ ಹೃದಯವೇ ರತ್ನದ ಜಗಲಿಯು ॥೧೫॥ ಜೀವನಿಗೆ ವಾಸಸ್ಥಾನವಾಗಿಯೂ ಜೀವಾಶ್ರಿತಗಳಾದ ಇಂದ್ರಿಯಗಳಿಗೆ ಸಭಾಮಂದಿರವಾಗಿಯೂ, ಪರಮಾತ್ಮನಿಗೆ ಕ್ರೀಡಾ ಸ್ಥಾನವಾಗಿಯೂ ಇರುವ ಹೃದಯವೇ, ಸಭಾ, ಚತ್ವರ, ರಥ್ಯ, ಆಕ್ರೀಡವೆಂದು ಕರೆಯಲ್ಪಡುವುದು. ಚಕ್ಷುರಾದೀಂದ್ರಿಯಗಳೇ ಅಂಗಡಿಗಳು. ಶಬ್ದಾದಿ ವಿಷಯಗಳೇ ಸರಕುಗಳು (ಮಾರುವ ಪದಾರ್ಥ) ಪುರೀತನ್ನಾಡಿಯೇ ಸುಷುಪ್ತಿಯಲ್ಲಿ ಜೀವನಿಗೆ ವಿಶ್ರಮಸ್ಥಾನವು. ಹಸ್ತಪಾದಗಳೇ ಧ್ವಜಪತಾಕೆಗಳು ॥೧೬॥

ಇಂತು ಶರೀರವನ್ನು ಪಟ್ಟಣಕ್ಕೆ ಹೋಲಿಸಿ ಆ ಶರೀರಾನುಬಂಧಿಗಳಾದ ಪತ್ನೀ ಪುತ್ರಾದಿಗಳನ್ನು ಉಪವನಕ್ಕೆ ಹೋಲಿಸುತ್ತಾನೆ. ಈಉದ್ಯಾನದಲ್ಲಿ ಸಂಸಾರಿಯಾದ ಪುರುಷನೇ ವೃಕ್ಷವು. ಅವನನ್ನು ಆಶ್ರಯಿಸಿರುವ ಸ್ತ್ರೀಯರೇ ಲತೆಗಳು. ಆ ದಂಪತಿಗಳನ್ನಾಶ್ರಯಿಸಿರುವ ಮಕ್ಕಳೇ ಹಕ್ಕಿಗಳು. ಆ ಮಕ್ಕಳ ಸವಿ

ಕುಲೇ । ನದದ್ವಿಹಂಗಾಳಿಕುಲಕೋಲಾಹಲಜಲಾಶಯೇ ॥೧೭॥ ಹಿಮನಿ
ರ್ಝರ ವಿ* ಪ್ರುಷತ್ಕುಸುಮಾಕರವಾಯುನಾ । ಚಲತ್ಪ್ರವಾಳ ವಿಟಪನ
ಳಿನೀತಟ ಸಂಪದಿ ॥೧೮॥ ನಾನಾ ऽ ರಣ್ಯಮೃಗವ್ರಾತೈ ರನಾಬಾಧೇ ಮುನಿ
ವ್ರತೈಃ । ಆಹೂತಂ ಮನ್ಯತೇ ಪಾಂಥೋ ಯತ್ರ ಕೋಕಿಲಕೂಜಿತೈಃ॥೧೯॥

---

ಕಂಡನು ॥೧೭॥ ದಿವ್ಯ…ಲೇ - ಸೊಗಸಾದ ಗಿಡಬಳ್ಳಿಗಳಿಂದ ವ್ಯಾಪ್ತವಾದ, ನದ…ಯೇ - ಚಿಲಿಪಿಲಿಗುಟ್ಟುವ ಹಕ್ಕಿಗಳು, ತುಂಬಿಗಳು ಇವುಗಳ ಕಲಕಲದಿಂದಕೂಡಿದ ಕೊಳಗಳುಳ್ಳ, ಹಿಮ…ನಾ - ಹಿಮನದಿಗಳ ತುಂತುರುಗಳಿಂದಕೂಡಿದ ಸುವಾಸನೆಯುಳ್ಳಗಾಳಿಯಿಂದ, ಚಲ…ದಿ - ಅಲ್ಲಾಡುತ್ತಿರುವ ಚಿಗುರುಗಳಿಂದಕೂಡಿದ ಶಾಖೆಗಳುಳ್ಳ, ತಾವರೆಬಳ್ಳಿಗಳಕಾಂತಿಯುಳ್ಳ ॥೧೮॥ ಮುನಿವ್ರತೈಃ - ಋಷಿಚರ್ಯೆಯುಳ್ಳ, ನಾನಾ…ತೈಃ - ಹಲವುಬಗೆಯಾದ ಕಾಡುಮೃಗಗಳಹಿಂಡುಗಳಿಂದ, ಅನಾಬಾಧೇ - ಬಾಧಾರಹಿತವಾದ, ಯತ್ರ - ಎಲ್ಲಿ ಪಾಂಥಃ - ದಾರಿಗನು, ಕೋಕಿ…ತೈಃ - ಕೋಗಿಲೆಗಳ ಸ್ವರಗಳಿಂದ, ಆಹೂತಂ - ಕರೆಯಲ್ಪಟ್ಟವನನ್ನಾಗಿ, ಮನ್ಯತೇ - ತಿಳಿಯುವನೋ, ಅಂತಹ, ಪುರ್ಯಾಃ - ಆ ಪಟ್ಟಣದ, ಬಾಹ್ಯೋಪವನೇ - ಹೊರಗಣಉದ್ಯಾನದಲ್ಲಿ ॥೧೯॥ ತತ್ರ - ಅಲ್ಲಿ, ಯದೃಚ್ಛಯಾ- ಸ್ವೇಚ್ಛೆಯಿಂದ, ಆಗತಾಂ- ಬಂದ, ಏಕೈ

---

ಸಂಚಾರನಿರೋಧದಿಂದ ಮಾಂದ್ಯವನ್ನು ಪಡೆದ ತಂಗಾಳಿಯೂ, ತಳತಳಿಸುತ್ತಿರುವ ಪಲ್ಲವಗಳಿಂದ ಸುಲಲಿತಗಳಾದ ತಾವರೆಬಳ್ಳಿಗಳೂ ಕಂಗೊಳಿಸುತ್ತಿದ್ದುವು. ಅಲ್ಲಿಯಮೃಗಗಳು ಪರಸ್ಪರದ್ವೇಷವನ್ನುಳಿದು ಮುನಿಚರ್ಯೆಯನ್ನವಲಂಬಿಸಿ ಶಾಂತಗಳಾಗಿದ್ದುವು ತಮ್ಮೆಡೆಗೆಬಂದ ದಾರಿಗರನ್ನು ಸತ್ಕಾರಕ್ಕಾಗಿ ಕರೆಯುವುವೋ ಎಂಬಂತೆ ಕೋಗಿಲೆಗಳು ಕೂಗುತ್ತಿದ್ದುವು ॥೧೭—೧೯॥ ಇಂತು ರಮಣೀಯವಾದ ಆಪುರೋದ್ಯಾನದಲ್ಲಿಸ್ವೇಚ್ಛೆಯಿಂದ ಒರುತ್ತಿರುವ

---

ನುಡಿಗಳೇ ಕೋಲಾಹಲವು ॥೧೭॥ ಬಹಿಃಪ್ರಾಣಗಳಾದ ಧನಕನಕಾದಿಗಳನ್ನು ಉಪಾಯದಿಂದ ಅಪಹರಿಸುವ ಮಾನ, ಭಾವ, ಮೊದಲಾದವರೇ ಮುನಿವ್ರತಗಳಾದ ಕಾಡುಮೃಗಗಳು. ಇಂತಹ ಸಂಸಾರವೆಂಬ ಉದ್ಯಾನದಲ್ಲಿ ಸಂಚರಿಸುವವನು ನಿವೃತ್ತಿಮಾರ್ಗನಿಷ್ಠನಾದರೂ, ಪತ್ನೀಪುತ್ರಾದಿಗಳೆಂಬ ಕೋಗಿಲೆಗಳ ಸವಿನುಡಿಗಳಿಂದ ಕರೆಯಲ್ಪಟ್ಟಂತೆ ತಿಳಿದು ಸಂಸಾರಾಸಕ್ತನಾಗುವನು ॥೧೯॥ ಇಂತಹ ಶರೀರವೆಂಬ ಪಟ್ಟಣವನ್ನು ಆವರಿಸಿರುವ ಸಂಸಾರವೆಂಬ ಉದ್ಯಾನದಲ್ಲಿ ಸಂಚರಿಸುತ್ತಿರುವ ಬುದ್ಧಿಯೇ ಮಹಾರಾಣಿಯು. ಜೀವನು ಸ್ಥೂಲಶರೀರವನ್ನು ಹೊಗುವುದಕ್ಕೆ ಮೊದಲು ಬುದ್ಧಿಯೊಡನೆ ಸೇರುವನು. ಈಜೀವ ಬುದ್ಧಿಗಳ ಸಂಬಂಧಕ್ಕೆ ಭಗವದಿಚ್ಛೆಯಲ್ಲದೆ ಬೇರೆ ಕಾರಣವಿಲ್ಲ ಇಲ್ಲಿ ಜೀವನು ಬುದ್ಧಿಯೊಡನೆ ಸೇರುವ ಕಾಲದಲ್ಲಿ ಶರೀರಾನುಬಂಧಿಗಳಾದ ಪತ್ನೀ ಪುತ್ರಾದಿಗಳ ಸಂಬಂಧವಿಲ್ಲದಿದ್ದರೂ ಮುಂದೊದಗುವ ಸಂಸಾರಾಸಕ್ತಿಯು ಕಥಾರಾಮಣೀಯಕಕ್ಕಾಗಿ ಬಣ್ಣಿಸಲ್ಪಡುವುದು. ಜೀವನು ಬುದ್ಧಿಯೊಡನೆ ಸೇರಿದ ಕೂಡಲೇ ಸಂಸಾರಾಸಕ್ತನಾಗುವನೆಂದು ಮುಖ್ಯತಾತ್ಪರ್ಯವು.

ಬುದ್ಧಿಯೆಂಬ ಮಹಾರಾಣಿಯು ಒಂಟಿಯಾಗಿರಲಿಲ್ಲ, ಪ್ರತ್ಯೇಕವಾಗಿ ನೂರಾರು ವೃತ್ತಿಗಳಿಂದಕೂಡಿದ ಹತ್ತು ಇಂದ್ರಿಯಗಳು ಜತೆಗೊಂಡಿದ್ದವು ॥೨೦॥ ಐದುಬಗೆಯಾದ ವೃತ್ತಿಗಳುಳ್ಳ ಪ್ರಾಣವಾಯುವು ಅದಕ್ಕೆ ಕಾವಲಾಗಿದ್ದಿತು.[ಈ ಇಂದ್ರಿಯ ಪ್ರಾಣಬುದ್ಧಿಗಳ ಸಮುದಾಯಕ್ಕೆ ಸೂಕ್ಷ್ಮಶರೀರವೆಂದುಹೆಸರು.] ಆ ಬುದ್ಧಿಯು ಜೀವನೊಡನೆ ಸೇರುವಾಗ ಕಾರ್ಯಸಾಮರ್ಥ್ಯವಿಲ್ಲದಿದ್ದರೂ, ಶಬ್ದಾದಿ ಜ್ಞಾನಭೇದದಿಂದ ಹಲವು ಬಗೆಯಾಗಿ ಕಾರ್ಯದಕ್ಷತೆಯನ್ನು ಸೂಚಿಸುತ್ತಾ, ಅನುರೂಪನಾದ ಜೀವನೊಡನೆ ಸಂಬಂಧವನ್ನು ಅರಸುತಿತ್ತು.

ಯದೃಚ್ಛಯಾಗತಾಂ ತತ್ರ ದದರ್ಶ ಪ್ರಮದೋತ್ತಮಾಂ । ಭೃತ್ಯೈರ್ದಶ
ಭಿ ರಾಯಾಂತೀಂ ಮೇಕೈಕ ಶತನಾಯಕೈಃ॥೨೦॥ * ಪಂಚಶೀರ್ಷಾಹಿನಾ ಗು
ಪ್ತಾಂ ಪ್ರತೀಹಾರೇಣ ಸರ್ವತಃ । ಅನ್ವೇಷಮಾಣಾ ಮೃಷಭ ಮಪ್ರೌಢಾಂ
ಕಾಮರೂಪಿಣೀಂ ॥೨೧॥ ಸುನಾಸಾಂ ಸುದತೀಂ ಬಾಲಾಂ ಸುಕಪೋಲಾಂ
ವರಾನನಾಂ । ಸಮವಿನ್ಯಸ್ತಕರ್ಣಾಭ್ಯಾಂ ಬಿಭ್ರತೀಂ ಕುಂಡಲಶ್ರಿ
ಯಂ ॥೨೨॥ ಪಿಶಂಗನೀವೀಂ ಸುಶ್ರೋಣೀಂ ಶ್ಯಾಮಾಂ ಕನಕಮೇಖಲಾಂ ।
ಪದ್ಭ್ಯಾಂ ಕ್ವಣದ್ಭ್ಯಾಂ ಚಲತೀಂ ನೂಪುರೈ ರ್ದೇವತಾಮಿವ ॥ ೨೩ ॥

ಕಶತನಾಯಕೈಃ - ಬೇರೆಬೇರೆಯಾಗಿ ನೂರಾರುಮಂದಿಸ್ತ್ರೀಯರಿಗೆ ನಾಯಕರಾದ, ದಶಭಿರ್ಭೃತ್ಯೈಃ - ಹತ್ತುಮಂದಿಭೃತ್ಯರೊಡನೆ, ಆಯಾಂತೀಂ - ಎದುರುಗೊಳ್ಳುತ್ತಿರುವ, ಪ್ರಮದೋತ್ತಮಾಂ - ಉತ್ತಮಸ್ತ್ರೀಯನ್ನು, ದದರ್ಶ - ಕಂಡನು ॥೨೦॥ ಪ್ರತಿಹಾರೇಣ - ದ್ವಾರಪಾಲಕನಾದ, ಪಂಚಶೀರ್ಷಾಹಿನಾ - ಐದು ತಲೆಯುಹಾವಿನಿಂದ, ಸರ್ವತಃ - ಎಲ್ಲಡೆಯಲ್ಲಿಯೂ, ಗುಪ್ತಾಂ - ರಕ್ಷಿಸಲ್ಪಟ್ಟ, ಋಷಭಂ - ಪತಿಯನ್ನು, ಅನ್ವೇಷಮಾಣಾಂ - ಅರಸುತ್ತಿರುವ, ಅಪ್ರೌಢಾಂ - ಮುಗ್ಧೆಯಾದ, ಕಾಮರೂಪಿಣೀಂ - ಸ್ವೇಚ್ಛಾರೂಪವುಳ್ಳ ॥೨೧॥ ಸುನಾಸಾಂ - ಒಳ್ಳೆಯ ಮೂಗುಳ್ಳ, ಸುದತೀಂ - ಒಳ್ಳೆಯ ಹಲ್ಲುಳ್ಳ, ಬಾಲಾಂ - ಹುಡಿಗಿಯಾದ, ಸುಕಪೋಲಾಂ - ಒಳ್ಳೆಯ ಗಲ್ಲವುಳ್ಳ, ವರಾನನಾಂ - ಸುಂದರಮುಖವುಳ್ಳ, ಸಮ...ಭ್ಯಾಂ - ಒಂದೇಸಮವಾದಕಿವಿಗಳಿಂದ, ಕುಂಡಲಶ್ರಿಯಂ - ಕುಂಡಲಕಾಂತಿಯನ್ನು, ಬಿಭ್ರತೀಂ - ಧರಿಸಿರುವ ॥೨೨॥ ಪಿಶಂಗನೀವೀಂ - ಹೊಂಬಣ್ಣದ ನಿರಿಮುಡಿಯುಳ್ಳ, ಸುಶ್ರೋಣೀಂ - ಸುಂದರವಾದಕಟಿಪಶ್ಚಾದ್ಭಾಗವುಳ್ಳ, ಶ್ಯಾಮಾಂ - ನಡುಪ್ರಾಯವುಳ್ಳ, ಕನಕಮೇಖಲಾಂ - ಚಿನ್ನದೊಡ್ಯಾಣವುಳ್ಳ, ನೂಪುರೈಃ - ಕಾಲ್ಕಡಗಗಳಿಂ

ರ್ವ ಸುಂದರಿಯನ್ನು ಕಂಡನು. ಬೇರೆಬೇರೆಯಾಗಿ ನೂರಾರುಮಂದಿ ಆಳಗಳವರಿಗೆ ದಳವಾಯಿಗಳಾದ ಹತ್ತುಮಂದಿ ಭೃತ್ಯರು ಆಕೆಗೆ ಬೆಂಗಾವಲಾಗಿ ಬರುತ್ತಿದ್ದರು. ಐದುಹೆಡೆಗಳುಳ್ಳ ಒಬ್ಬ ಸರ್ಪರಾಜನು ದ್ವಾರಪಾಲಕನಾಗಿ ಮುಂಗಡೆಯಲ್ಲಿದ್ದನು. ಮುಗ್ಧೆಯಾಗಿಯೂ ಕಾಮರೂಪಿಣಿಯಾಗಿಯೂ ಇರುವ ಆಕೆಯು ತನಗನುರೂಪನಾದ ವಲ್ಲಭನನ್ನು ಅರಸುತ್ತಿದ್ದಳು ॥೨೧॥ ಆಕೆಯ ಚೆಲುವಿಕೆಯನ್ನು ಬಣ್ಣಿಸಲಳವೆ ? ಸಂಪಗೆಯನ್ನುಹೋಲುವ ನಾಸಾದಂಡವೂ,ಮುತ್ತಿನ ಸರಕ್ಕೆಣೆಯಾದ ಸುಲಿಹಲ್ಲುಗಳೂ, ರನ್ನಗನ್ನಡಿಗಳನ್ನು ಕಡೆಗಣಿಸುವಕದಪುಗಳೂ, ಅಂದವಾದ ನಗೆಮೊಗವೂ, ಹೆಚ್ಚುಕಡಮೆಯಿಲ್ಲದೆ ಕುಂಡಲಕಾಂತಿಯಿಂದ ಮಂಡನಗೊಂಡ ಕಿವಿಗಳೂ, ಸರ್ವಾದರಣೀಯವಾದ ಎಳತನವೂ, ಒಪ್ಪಿದ್ದುವು ॥೨೨॥ ಹೊಂಬಣ್ಣದ ನಿರಿಮುಡಿಯಿಟ್ಟು ಘನವಾದ ಜಘನಭಾಗದಲ್ಲಿ ಚಿನ್ನದೊಡ್ಯಾಣವನ್ನುಬಿಗಿದು, ಕಾಲ್ಕಡಗಗಳು ಝಣಝಣಿಸುವಂತೆ ಬೆಡಗಿನಿಂದನಡೆಯುತ್ತಾ, ಇಳೆ

* ವಿ. ಮೂ. ಶ್ಲೋ॥ ತೇಷಾಂ ಪರಿವೃಢೋರಾಜನ್ ! ಸರ್ವೇಷಾಂ ಬಲಿಮುದ್ವಹನ್ । ಸಸ್ತ್ರೀಕಾಣಾಂ ಸಖಾ ತಸ್ಯಾ ಬಹುರೂಪೋ ಗೃಣೀಃ ಸ್ತ್ರಿಯಃ ॥೨೧॥

ತಾ॥ ಅಯ್ಯಾ ರಾಜನೆ ! ಸಕಲೇಂದ್ರಿಯ ವೃತ್ತಿಗಳಿಗೂ ಅಧಿಪತಿಯಾಗಿ ಅವರಿಂದ ಪೂಜೆಯನ್ನುಗೊಳ್ಳುತ್ತಾ, ವಿಷಯವೈಚಿತ್ರ್ಯದಿಂದ ಬಹುರೂಪವಾಗಿ, ಆ ಬುದ್ಧಿಗೆ ಪ್ರಿಯಮಿತ್ರವೆನಿಸಿದ ಮನಸ್ಸೂ ಒಡನಾಡಿಯಾಗಿದ್ದುದು.

ಸ್ತನೌ ವ್ಯಂಜಿತ ಕೈಶೋರೌ ಸಮವೃತ್ತೌ ನಿರಂತರೌ । ವಸ್ತ್ರಾಂತೇನ ನಿಗೂಹಂತೀಂ ಕ್ರೀಡಯಾ ಗಜಗಾಮಿನೀಂ ॥೨೪॥ ತಾಮಾಹ ಲಲಿತಂ ವೀರಃ ಸವ್ರೀಡ ಸ್ಮಿತ ಶೋಭನಾಂ । ಸ್ನಿಗ್ಧೇನಾಽಪಾಂಗ ಪುಂಖೇನ ಸ್ಪೃಷ್ಟಃ ಪ್ರೇಮೋದ್ಭ್ರಮದ್ಭ್ರುವಾ ॥೨೫॥ ಕಾ ತ್ವಂ ಕಂಜ ಪಲಾಶಾಕ್ಷಿ ? ಕಸ್ಯಾಽಸೀಹ ಕುತಃ ಸತಿ ! । ಇಮಾಮುಪ ಪುರೀಂ ಭೀರು ! ಕಿಂಚಿಕೀರ್ಷಸಿ ? ಶಂಸ ಮೇ ॥೨೬॥ ಕ ಏತೇಽನುಪಥಾ ಏತೇ ಏಕಾದಶ ಮಹಾ

---

ದ, ಕ್ವಣದ್ಭ್ಯಾಂ - ಶಬ್ದಾಯಮಾನಗಳಾದ, ಪದ್ಭ್ಯಾಂ - ಪಾದಗಳಿಂದ, ದೇವತಾಮಿವ- ದೇವತೆಯಂತೆ ಚಲತೀಂ - ಸಂಚರಿಸುವ ॥೨೩॥ ವ್ಯಂಜಿತಕೈಶೋರೌ - ಬಾಲ್ಯವನ್ನು ಸೂಚಿಸುವ, ಸಮವೃತ್ತೌ - ಸಮವಾಗಿ ದುಂಡಾಗಿರುವ, ನಿರಂತರೌ - ಸಂದಿಲ್ಲದಿರುವ, ಸ್ತನೌ - ಸ್ತನಗಳನ್ನು, ಕ್ರೀಡಯಾ- ಬೆಡಗಿನಿಂದ ವಸ್ತ್ರಾಂತೇನ - ಸೆರಗಿನಿಂದ, ನಿಗೂಹಂತೀಂ - ಮುಚ್ಚುತ್ತಿರುವ, ಗಜಗಾಮಿನೀಂ - ಆನೆಯಂತೆ ಮಂದಗಮನವುಳ್ಳ ॥೨೪॥

ಸವ್ರೀ....ನಾಂ-ನಾಚಿಕೆಯಿಂದ ಕೂಡಿದ ಮುಗುಳ್ನಗೆಯಿಂದ ಅಂದಗಾತಿಯಾದ, ತಾಂ-ಆಕೆಯನ್ನು ಕುರಿತು, ವೀರಃ-ಪುರಂಜನನು, ಪ್ರೇಮೋ...ವಾ - ಸ್ನೇಹದಿಂದ ಹಾರುತ್ತಿರುವ ಹುಬ್ಬುಳ್ಳ, ಸ್ನಿಗ್ಧೇನ-ಅನುರಾಗಪೂರಿತವಾದ, ಅಪಾಂಗಪುಂಖೇನ - ಕಡೆಗಣ್ಣೆಂಬ ಬಾಣದಿಂದ, ಸ್ಪೃಷ್ಟಃ - ಸೋಕಲ್ಪಟ್ಟವನಾಗಿ, ಆಹ-ಹೇಳುತ್ತಾನೆ ॥೨೫॥ ಪದ್ಮ...ಕ್ಷಿ – ತಾವರೆಯೆಸಳಿನಂತೆ ಕಣ್ಣುಳ್ಳ, ಸತಿ - ಸಾಧ್ವಿಯೆ - ತ್ವಾಂ-ನೀನು, ಕಾ-ಯಾರು ? ಕಸ್ಯಾಸಿ - ಯಾರಮಗಳು ? ಕುತಃ-ಎಲ್ಲಿಂದಬಂದೆ, ಭೀರು-ಎಲೈ ಭಯಶಾಲಿನಿಯೆ ! ಇಮಾಂಪುರೀಂಉಪ - ಈಪಟ್ಟಣದ ಬಳಿಯಲ್ಲಿ, ಕಿಂಚಿಕೀರ್ಷಸಿ-ಏನುಮಾಡಬೇಕೆಂದಿರುವೆ ? ಮೇ-ನನಗೆ, ಶಂಸ-ಹೇಳು, ॥೨೬॥ ಸುಭ್ರು - ಎಲೌ ಒಳ್ಳೆಯಹುಬ್ಬುಳ್ಳವಳೆ, ತೇ-ನಿನಗೆ, ಯೇ-ಯಾರು,

---

ಗಿಳಿತಂದ ದೇವತೆಯಂತೆ ಕಂಗೊಳಿಸುತ್ತಿದ್ದಳು ॥೨೩॥ ತಾರುಣ್ಯವನ್ನು ತೋರುತ್ತಾ, ಒಂದಕ್ಕೊಂದು ಸಮಾನವೆನಿಸಿ ದುಂಡಾಗಿ ಸಂದಿಲ್ಲದಿರುವ ಸ್ತನಕಲಶಗಳನ್ನು ಸೆರಗಿನಿಂದ ಮುಚ್ಚುತ್ತಾ, ಆ ಸುಂದರಿಯು ಮೆಲ್ಲಡಿಯಿಟ್ಟು ಬರುವುದನ್ನು ಕಂಡರೆ ಯಾವಪುರುಷನು ತಾನೇ ಮೋಹಗೊಳ್ಳಲಾರನು? ॥೨೪॥ ಇಂತು ಅನುರಾಗವನ್ನು ಸೂಚಿಸುವ ಹುಬ್ಬುಗಳನ್ನು ಹಾರಿಸುತ್ತಾ, ಮದನಸಾಯಕಗಳಂತೆ ನೇಹನೋಟಗಳನ್ನು ಬೀರುತ್ತಾ, ನಾಚಿಕೆಯಿಂದಕೂಡಿದ ಮುಗುಳ್ನಗೆಯನ್ನು ಸೂಸುತ್ತಾ, ಬೆಡಗಿನಿಂದ ನಡೆತರುತ್ತಿರುವ ಪ್ರಮದಾಮಣಿಯನ್ನು ಕಂಡು, ಪುರಂಜನರಾಜನು ವೀರನಾದರೂ ಧೈರ್ಯಗುಂದಿ ಆಕೆಗಿಂತೆಂದನು ॥೨೫॥ ಎಲೌ ಕಮಲಾಕ್ಷಿಯೇ ! ನೀನಾರು? ಯಾರಮಗಳು? ಎಲ್ಲಿಂದ ಬಂದೆ? ಎಲೌ ಭೀರುವೆ? ಈಪುರದಬಳಿಯಲ್ಲಿ ಏತಕ್ಕಾಗಿ ಸುಳಿದಾಡುತ್ತಿರುವೆ? ನನಗಿದನ್ನು ತಿಳುಹು॥೨೬॥ ಎಲೌ ಸುಂದರಿಯೆ!

---

ಗೂ॥ ಗಂಧ, ರಸಾದಿಗಳ ಜ್ಞಾನಭೇದದಿಂದ ಬುದ್ಧಿವೃತ್ತಿಗಳು ಹಲವು ಬಗೆಗಳಾಗಿರುವುವು. ದಂತ, ಕಪೋಲ, ಮುಖ, ಶ್ರೋಣಿ, ಪಾದ, ಸ್ತನ ಮೊದಲಾದವುಗಳ ವ್ಯಾಪಾರದಿಂದುಂಟಾಗುವ ಸಂತೋಷ ಮೊದಲಾದುವೂ ಬುದ್ಧಿ ವೃತ್ತಿಗಳೇ ಆದುದರಿಂದ ಈ ಬುದ್ಧಿವೃತ್ತಿಗಳೇ ದಂತಾದಿ ರೂಪದಿಂದ ವರ್ಣಿಸಲ್ಪಟ್ಟಿರುವುವೆಂದರಿಯಬೇಕು ॥೨೫॥ ಇಂತಿರುವ ಬುದ್ಧಿಯನ್ನು ಕಂಡನು. ಇಲ್ಲಿ ಬುದ್ಧಿ ಜೀವರ ಸಂಬಂಧವನ್ನು ಬಲಪಡಿಸುವುದಕ್ಕಾಗಿ ವಾಗ್ವಾದವು ವರ್ಣಿಸಲ್ಪಟ್ಟಿರುವುದೆಂದರಿಯಬೇಕು.

ಭಟಾಃ । ಏತಾವಾ ಲಲನಾ ಸ್ಸುಭ್ರು ! ಕೋಽಯಂ ತೇಽಹಿಃ ಪುರಸ್ಸರಃ ॥೨೭॥ ತ್ವಂ ಹ್ರೀರ್ಭವಾನ್ಯಸ್ಯಥ ವಾಗ್ರಮಾಪತಿಂ ವಿಚಿನ್ವತೀ ಕಿಂ ಮುನಿವದ್ರಹೋ ವನೇ । ತ್ವದಂಘ್ರಿಕಾಮಾಪ್ತ ಸಮಸ್ತ ಕಾಮಂ ಕ್ವ ಪದ್ಮಕೋಶಃ ಪತಿತಃ ಕರಾಗ್ರಾತ್ ॥೨೮॥ ನಾಸಾಂ ವರೋರ್ವನ್ಯತಮಾ ಭುವಿ ಸ್ಪೃಕ್ ಪುರೀಮಿಮಾಂ ವೀರವರೇಣ ಸಾಕಂ । ಅರ್ಹಸ್ಯಲಂ

ಅನುಪಥಾಃ - ಅನುಚರರಾಗಿರುವರೋ, ಏತೇ-ಈ, ಈ, ಏಕಾದಶ - ಹನ್ನೊಂದುಮಂದಿ, ಮಹಾಭಟಾಃ ! ಮಹಾಶೂರರು, ಕೇ-ಯಾರು ? ಏತಾಲಲನಾಃ- ಈ ಸ್ತ್ರೀಯರು, ಕಾಃ-ಯಾರು ? ತೇ-ನಿನಗೆ, ಪುರಸ್ಸರಃ-ಮುಂದೆ ತೆರಳುವ, ಅಹಿಃ-ಸರ್ಪವು, ಕಃ-ಯಾವುದು ? ॥೨೭॥ ತ್ವಂ ನೀನು, ಹ್ರೀಃ-ಧರ್ಮನನ್ನಾಳಿದ ಹ್ರೀದೇವಿಯೋ, ಭವಾನಿ - ಶಿವನನ್ನಾಳಿದ ಪಾರ್ವತಿಯೋ, ಅಥವಾ ವಾಕ್-ಬ್ರಹ್ಮನನ್ನಾಳಿದ ಸರಸ್ವತಿಯೋ, ಪತಿಂ-ಪತಿಯಾದ ವಿಷ್ಣುವನ್ನು, ವಿಚಿನ್ವತೀ- ಅರಸುತ್ತಿರುವ, ರಮಾ-ಲಕ್ಷ್ಮಿಯೋ, ಮುನಿವತ್-ಮುನಿಯಂತೆ ನಿಯಮವತಿಯಾಗಿ, ತ್ವದಂ....ಮಂ, ತ್ವತ್-ನಿನ್ನ, ಅಂಘ್ರಿ - ಪಾದಗಳ, ಕಾಮ-ಅನುಗ್ರಹದಿಂದಲೇ, ಆಪ್ತ - ಹೊಂದಲ್ಪಟ್ಟ, ಸಮಸ್ತಕಾಮಂ - ಸಕಲ ಕಾಮಗಳುಳ್ಳ, ಪತಿಂ-ಪತಿಯನ್ನು, ವನೇ - ಕಾಡಿನಲ್ಲಿ, ಅರಸುತ್ತಾ, ರಹಃ - ಗುಟ್ಟಾಗಿ, ಕಿಂ - ಏನುಮಾಡುತ್ತಿರುವೆ? ಕರಾಗ್ರಾತ್ - ಕೈಯಿಂದ, ಪದ್ಮಕೋಶಃ - ಕಮಲದ ಮೊಗ್ಗು, ಕ್ವ - ಎಲ್ಲಿ, ಪತಿತಃ - ಬಿದ್ದುಹೋಯಿತು? ॥೨೮॥ ವರೋರು - ಉತ್ತಮಗಳಾದ ಊರುಗಳುಳ್ಳವಳೆ! ಆಸಾಂ - ಇವರಲ್ಲಿ, ಅನ್ಯತಮಾ - ಒಬ್ಬಳು, ನ - ಅಲ್ಲ, ಭುವಿ - ಭೂಮಿಯಲ್ಲಿ, ಸ್ಪೃಕ್ - ನೋಕುತ್ತಿರುವೆ, ಯಜ್ಞಪುಂಸಾ - ಯಜ್ಞಪುರುಷನಾದ ಹರಿ

ನಿನ್ನನ್ನು ಹಿಂಬಾಲಿಸುತ್ತಿರುವ ಈ ಹನ್ನೊಂದುಮಂದಿ ಮಹಾಶೂರರಾರು ?ಈ ಸ್ತ್ರೀಯರಾರು? ನಿನ್ನಮುಂಗಡೆಯಲ್ಲಿ ಕಾವಲುಗಾರನಾದ ಸರ್ಪರಾಜನಾರು? ॥೨೭॥ ನೀನು ಧರ್ಮಮೂರ್ತಿಯನ್ನು ಅರಸಿಬಂದ ಹ್ರೀದೇವಿಯೊ? ಅಥವಾ ವರಾಹಮೂರ್ತಿಯನ್ನು ಅರಸುವ ಭೂದೇವಿಯೊ? ಶಿವನನ್ನು ಹುಡುಕುತ್ತಿರುವ ಭವಾನಿಯೊ? ಹಿರಣ್ಯಗರ್ಭನನ್ನು ಅನ್ವೇಷಿಸುವ ಭಾರತೀದೇವಿಯೊ? ಅಥವಾ ನಿನ್ನ ಚರಣಾನುಗ್ರಹದಿಂದ ಸಕಲಕಾಮಗಳನ್ನೂ ಪಡೆದಪತಿಯಾದ ವೈಕುಂಠಪತಿಯನ್ನು ಹುಡುಕುತ್ತಿರುವ ಲಕ್ಷ್ಮಿಯೋ? ಪರಮಾತ್ಮನನ್ನು ಅರಸುತ್ತಿರುವ ಮುನಿಯಂತೆ ನಿಯಮದಿಂದ ಕಾಡಿನಲ್ಲೇಕಾಂತವಾಗಿ ಚರಿಸುತ್ತಿರುವ ನೀನಾರು? ನೀನು ರಮಾದೇವಿಯಾದಲ್ಲಿ, ನಿನ್ನ ಕೈಯಲ್ಲಿದ್ದ ಲೀಲಾಕಮಲ ವೆಲ್ಲಿ ಬಿದ್ದುಹೋಯಿತು? ॥೨೮॥ ಎಲೌ ರಂಭೋರುವೆ! ನೀನು ಭೂಮಿಯಲ್ಲಿ ಸಂಚರಿಸುತ್ತಿರುವುದರಿಂದ ಈ ಸ್ತ್ರೀಯರಲ್ಲಿ

ಗೂ॥ ಇಲ್ಲಿ ಜೀವನು ಸ್ವತಃನಿಷ್ಕ್ರಿಯನಾದುದರಿಂದ ಬುದ್ಧಿಸಂಸರ್ಗದಿಂದ ಕರ್ಮಗಳಿಗೊಳಗಾಗುವನೆಂತಲೂ, ಕಾಮಾದಿ ವೃತ್ತಿಗಳಿಗಡಿಯಾಳಾಗುವನೆಂತಲೂ ಭಾವವು. ಈ ಜೀವಬುದ್ಧಿ ಸಂವಾದವು ಕಥಾಸೌಂದರ್ಯಕ್ಕಾಗಿ ಹೇಳಲ್ಪಟ್ಟಿರುವುದಲ್ಲದೆ, ಸಕಲ ಪ್ರಪಂಚವು ಮನೋಮಾತ್ರವೆಂದು ಸೂಚಿಸುವುದು॥೩೧॥ಜೀವಪ್ರಕೃತಿಗಳಿಬ್ಬರೂ ಅನಾದಿಗಳೇ ಹೊರತು ಹೊಸದಾಗಿ ಸೃಷ್ಟಿಸಲ್ಪಟ್ಟವರಲ್ಲ. ಜೀವನು ತನ್ನ ಕರ್ಮಾನುಸಾರವಾಗಿ ಸ್ಥೂಲಶರೀರ ಪ್ರಾಪ್ತಿಯಾದಬಳಿಕ ಅದನ್ನು ತಿಳಿಯುವನೇ ಹೊರತು ಅದ

ಕರ್ತುರ್ಮದ ಭ್ರಕರ್ಮಣಾ ಲೋಕಂ ಪರಂ ಶ್ರೀರಿವ ಯಜ್ಞಪುಂಸಾ॥೨೯॥
ಯದೇಷ ಮಾಽಪಾಂಗ ವಿಖಂಡಿತೇಂದ್ರಿಯಂ ಸವ್ರೀಡ ಭಾವಸ್ಮಿತ ವಿಭ್ರ
ಮದ್ಭ್ರುವಾ । ತ್ವಯೋಪಸೃಷ್ಟೋ ಭಗವಾನ್ ಮನೋಭವಃ ಪ್ರಬಾಧತೇಽ
ಥಾಽನುಗೃಹಾಣ ಶೋಭನೇ! ॥೩೦॥ ತದಾನನಂ ಸುಭ್ರು! ಸುತಾರಲೋಚ
ನಂ ವ್ಯಾಲಂಬಿ ನೀಲಾಲಕ ಬೃಂದಸಂವೃತಂ । ಉನ್ನೀಯ ಮೇ ದರ್ಶಯ
ವಲ್ಗುವಾಚಕಂ ಯದ್ವ್ರೀಡಯಾ ನಾಽಭಿಮುಖಂ ಶುಚಿಸ್ಮಿತೇ! ॥೩೧॥

---

ಯೊಡನೆ, ಶ್ರೀಃ - ಲಕ್ಷ್ಮಿಯು, ಪರಂಲೋಕಮಿವ -ವೈಕುಂಠವನ್ನೀಪಾದಿಯಲ್ಲಿ, ಅದಭ್ರಕರ್ಮಣಾ -
ಅನೇಕ ಕರ್ಮಗಳನ್ನು ಮಾಡುವ, ವೀರವರೇಣಸಾಕಂ - ಶೂರನಾದ ನನ್ನೊಡನೆ, ಇಮಾಂಪುರೀಂ - ಈ
ಪಟ್ಟಣವನ್ನು, ಅಲಂಕರ್ತುಂ - ಅಲಂಕರಿಸುವುದಕ್ಕೆ, ಅರ್ಹಸಿ-ಯೋಗ್ಯನಾಗುವೆ ॥೨೯॥ ಅಪಾಂ... ಯಂ
ಅಪಾಂಗ - ಕಟಾಕ್ಷದಿಂದ, ವಿಖಂಡಿತ - ಕಲಕಲ್ಪಟ್ಟ, ಇಂದ್ರಿಯಂ - ಮನಸ್ಸುಳ್ಳ, ಮಾಂ - ನನ್ನನ್ನು,
ಸವ್ರೀ...ವಾ, ಸವ್ರೀಡಭಾವ - ನಾಚಿಕೆಯಿಂದ ಕೂಡಿದ, ಸ್ಮಿತ - ಮಂದಹಾಸದಿಂದ, ವಿಭ್ರಮತ್ - ಹಾ
ರುತ್ತಿರುವ, ಭ್ರುವಾ - ಹುಬ್ಬುಳ್ಳ, ತ್ವಯಾ - ನಿನ್ನಿಂದ, ಉಪಸೃಷ್ಟಃ - ಪ್ರೇರಿತನಾದ, ಭಗವಾನ್ -
ಭಗವಂತನಾದ, ಏಷಮನೋಭವಃ - ಈ ಮನ್ಮಥನು, ಯಾತ್ - ಯಾವಕಾರಣದಿಂದ, ಪ್ರಬಾಧತೇ -ಕೋ
ಟಲೆಗೊಳಿಸುವನೋ, ಅಥ - ಆದುದರಿಂದ, ಶೋಭನೆ -ಸುಂದರಿಯೆ ! ಅನುಗೃಹಾಣ-ಅನುಗ್ರಹಿಸು ॥೩೦॥
ಶುಚಿಸ್ಮಿತೇ - ಅಂದವಾದ ನಗೆಯುಳ್ಳ, ಸುಭ್ರು - ಸುಂದರಿಯೆ! ಯಾತ್ - ಯಾವುದು, ವ್ರೀಡಯಾ - ನಾ
ಚಿಕೆಯಿಂದ, ನಾಭಿಮುಖಂ - ಎದುರಾಗಿರುವುದಿಲ್ಲವೊ, ಸುತಾರಲೋಚನಂ-ಬಿಳಿಯ ಆಲಿಗಳಿಂದ ಕೂಡಿ
ದಕಣ್ಣುಳ್ಳ ವ್ಯಾಲಂ...ತಂ - ಜೋಲುತ್ತಿರುವ ಮುಂಗುರುಳಿಂದ ಬಳಸಲ್ಪಟ್ಟ, ವಲ್ಗುವಾಚಕಂ -
ಇಂಪಾದ ನುಡಿಗಳುಳ್ಳ, ತದಾನನಂ - ಆ ನಿನ್ನ ಮುಖವನ್ನು, ಉನ್ನೀಯ - ಎತ್ತಿ, ಮೇ - ನನಗೆ, ದರ್ಶ
ಯ - ತೋರಿಸು ॥೩೧॥ ಇತ್ಥಂ - ಇಂತು, ಅಧೀರವತ್ - ದೀನನಾಗಿ, ಯಾಚಮಾನಂ - ಬೇಡುತ್ತಿರುವ,

---

ಬಬ್ಬಳೂ ಅಲ್ಲವೆಂದೆಣಿಸುವೆನು. ಎಲೌಸುಂದರಿ! ಲಕ್ಷ್ಮೀದೇವಿಯು ಯಜ್ಞಮೂರ್ತಿಯಾದ
ಪರಮಾತ್ಮನೊಡನೆ ವೈಕುಂಠವನ್ನಲಂಕರಿಸುವಂತೆ, ನೀನು ಶೂರಾಗ್ರಣಿಯಾದ ನನ್ನೊಡನೆ
ಈ ಪಟ್ಟಣವನ್ನಲಂಕರಿಸು ॥೨೯॥ ಎಲೌ ಮಂಗಳಾಂಗಿ? ನಿನ್ನ ಕಟಾಕ್ಷಗಳೆಂಬ ತೀಕ್ಷ್ಣ
ಗಳಾದ ಬಾಣಗಳಿಂದ ನನ್ನಮನವು ತಾರುಮಾರಾಗಿ ಬಿರಿದುಹೋಗಿರುವುದು ಲಜ್ಜೆಯಿಂದ
ಮುಗುಳ್ನಗೆಯನ್ನು ಬೀರುತ್ತಿರುವ ನೀನು ಹುಬ್ಬನ್ನುಹಾರಿಸಿ ಪ್ರೇರಿಸಿದಮಾತ್ರದಿಂದಲೇ
ಮಹಾವೀರನಾದ ಮಾರನು ನನ್ನನ್ನು ಸೂರೆಗೊಳ್ಳುತ್ತಿರುವನು. ಆದುದರಿಂದ ನನ್ನನ್ನು
ಅನುಗ್ರಹಿಸು॥೩೦॥ಎಲೌಶುಚಿಸ್ಮಿತೆಯಾದ ಸುಂದರಾಂಗಿಯೆ? ಬೆದರಿದ ಹುಲ್ಲೆಯಂತೆ ಕರಿಯ

---

ಕ್ಕೆ ಮುಂಚೆ ತಿಳಿಯಲಾರನು. ಈ ಜೀವಪ್ರಕೃತಿಗಳಿಗಾಶ್ರಯವಾದ ಶರೀರವು ಕರ್ಮಯತ್ತವಲ್ಲದೆ ಇತರ
ರಿಂದ ಸೃಜಿಸಲ್ಪಟ್ಟುದಲ್ಲ ॥೩೪॥ ಹತ್ತು ಇಂದ್ರಿಯಗಳು, ಮನಸ್ಸು ಇವೇ ಹನ್ನೊಂದು ಮಂದಿಶೂರರು.
ಬುದ್ಧಿವೃತ್ತಿಗಳೇ ಸಖಿಯರು. ಇವೆಲ್ಲವೂ ಬುದ್ಧಿಗೆ ಊಳಿಗದವರು. ಬುದ್ಧಿಯು ಪುರೀತನ್ನಾಡಿಯನ್ನು ಸೇರಿ
ಸುಷುಪ್ತಿಯಲ್ಲಿರುವಾಗ ಸಕಲೇಂದ್ರಿಯಗಳೂ ತಾತಮ್ಮ ವ್ಯಾಪಾರಗಳನ್ನುಳಿದರೂ ಪ್ರಾಣ ಪ್ರಚಾರವು
ಮಾತ್ರ ನಿಲ್ಲದೇ ನಡೆಯುತ್ತಿರುವುದು॥೩೫॥

ಜೀವನಿಗೆ ಬಹುಜನ್ಮ ಸುಕೃತ ಸಂಸ್ಕಾರಗಳಿಂದಲೇ ಮನುಷ್ಯಜನ್ಮವು ಕೈಗೂಡುವುದು
ಶರೀರಕ್ಕೆ ನೂರುವರ್ಷಗಳಾಯುಷ್ಯವು, ಇದರಿಂದಲೇ ಜೀವನಿಗೆ ಕಲ್ಯಾಣವು. ಬುದ್ಧಿಯು ಇಂದ್ರಿಯ

ಇತ್ಥಂ ಪುರಂಜನಂ ನಾರೀ ಯಾಚಮಾನ ಮಧೀರವತ್ । ಅಭ್ಯನಂದತ
ತಂ ವೀರಂ ಹಸಂತೀ ವೀರಮೋಹಿತಾ ॥೨೭॥ ನ ವಿದಾಮ ವಯಂ ಸಮ್ಯ
ಕ್ಕರ್ತಾರಂ ಪುರುಷರ್ಷಭ ! । ಆತ್ಮನಶ್ಚ ಪರಸ್ಯಾಪಿ ಗೋತ್ರಂ ನಾಮಚ
ಯತ್ಕೃತಂ ॥೨೮॥ ಇಹಾದ್ಯ ಸಂತ ಮಾತ್ಮಾನಂ ನವಿದಾಮ ತತಃಪರಂ ।
ಯೇನೇಯಂ ನಿರ್ಮಿತಾ ವೀರ ! ಪುರೀ ಶರಣ ಮಾತ್ಮನಃ ॥೨೯॥ ಏತೇ ಸ

ವೀರಂ - ಶೂರನಾದ, ತಂಪುರಂಜನಂ - ಆ ಪುರಂಜನನನ್ನು, ನಾರೀ - ಆಸ್ತ್ರೀಯು, ವೀರಮೋಹಿತಾ - ವೀರನಿಂದ ಮೋಹಿಸಲ್ಪಟ್ಟವಳಾಗಿ, ಹಸಂತೀ - ನಗುತ್ತಾ, ಅಭ್ಯನಂದತ - ಸಮ್ಮತಿಸಿದಳು ॥೨೭॥ ಪುರುಷರ್ಷಭ - ಪುರುಷ ಶ್ರೇಷ್ಠನೆ ! ಆತ್ಮನಃ - ನನ್ನನ್ನೂ, ಪರಸ್ಯಾಪಿ - ನಿನ್ನನ್ನೂ, ಕರ್ತಾರಂ - ಹುಟ್ಟಿಸಿದವನನ್ನೂ, ಯತ್ಕೃತಂ - ಯಾರಿಂದ ಮಾಡಲ್ಪಟ್ಟ, ಗೋತ್ರಂ - ಕುಲವನ್ನೂ, ನಾಮಚ- ಹೆಸರನ್ನೂ, ಸಮ್ಯಕ್ - ಚೆನ್ನಾಗಿ, ನವಿದಾಮ - ತಿಳಿಯಲಾರೆವು ॥೨೮॥ ವೀರ - ಶೂರನೆ! ಅದ್ಯ - ಈಗ, ಇಹ - ಈ ಪಟ್ಟಣದಲ್ಲಿ, ಸಂತಂ - ಇರುವ, ಆತ್ಮಾನಂ - ನನ್ನನ್ನು, ವಿದಾಮ - ಬಲ್ಲೆವು, ತತಃಪರಂ - ಇನ್ನು ಮುಂದೆ, ಆತ್ಮನಃ - ನನಗೂ ನಿನಗೂ, ಶರಣಂ - ನೆಲೆಯಾದ, ಇಯಂಪುರೀ - ಈ ಪಟ್ಟಣವು, ಯೇನ - ಯಾರಿಂದ, ನಿರ್ಮಿತಾ - ನಿರ್ಮಿಸಲ್ಪಟ್ಟಿತೋ, ಅವನನ್ನು, ನವಿದಾಮ - ತಿಳಿಯೆವು ॥೨೯॥ ಮಾನದ -

ಗುಡ್ಡೆಗಳನ್ನು ತಿರುಗಿಸುತ್ತಾ, ಜೋಲುತ್ತಿರುವ ನೀಲಾಲಕಗಳಿಂದ ಬಳಸುಗೊಂಡು, ಇಂಪಾದನುಡಿಗಳಿಂದ ಸೊಂಪುಗರೆಯುತ್ತಿರುವ ನಗೆಮೊಗವನ್ನು ನಾಚಿಕೆಯಿಂದೇಕೆ ಹಿಂದಿರುಗಿಸಿಕೊಳ್ಳುವೆ? ಅದನ್ನು ನನಗೆತೋರಿಸು ॥೨೬॥ ಎಂದು ವೀರನಾದ ಪುರಂಜನರಾಜನು ದೈನ್ಯದಿಂದ ಬೇಡುತ್ತಿರುವುದನ್ನು ಕಂಡು, ವೀರಮೋಹಿತೆಯಾದ ಆನಾರಿಯು ನಗುತ್ತಾ ರಾಜನಿಗಿಂತೆಂದಳು ॥೨೭॥ ಎಲೈ ಪುರುಷಪುಂಗವನೆ? ನೀನು ನನ್ನ ಕುಲಗೋತ್ರಾದಿಗಳನ್ನು ಬೆಸಗೊಂಡೆಯಷ್ಟೆ? ನನಗಾಗಲಿ ನಿನಗಾಗಲಿ ತಂದೆಯಾರೋ ನಾನರಿಯೆನು. ನಮ್ಮಗಳ ಹೆಸರೂತಿಳಿಯದು. ಕುಲವನ್ನೂ ನಾನರಿತವಳಲ್ಲ. ನಮಗೆ ಹೆಸರಿಟ್ಟವನನ್ನುಮೊದಲೇ ಕಾಣೆನು ॥ ಈಗ ನಾನು ಇಲ್ಲಿರುವುದನ್ನು ಮಾತ್ರಬಲ್ಲೆನು. ನನಗೂ ನಿನಗೂಸಹ ಆಶ್ರಯವಾಗಿರುವ ಈ ಪಟ್ಟಣವನ್ನು ಯಾರುನಿರ್ಮಿಸಿದನೋ, ಅವನನ್ನೂ ಅರಿಯೆನು ॥೨೯॥ ಅಯ್ಯಾ

ಗಳ ಮತ್ತು ವೃತ್ತಿಗಳಸಹಾಯದಿಂದ ಜೀವನಿಗೆ ವಿಷಯಭೋಗಗಳನ್ನೊದಗಿಸುವುದು ॥೩೬॥ ಶರೀರವೆಂಬ ಪಟ್ಟಣಕ್ಕೆ ಕಣ್ಣುಗಳೆರಡು, ಕಿವಿಗಳೆರಡು, ಮೂಗಿನ ಹೊಳ್ಳೆಗಳೆರಡು, ಬಾಯಿ, ಗುದ, ಉಪಸ್ಥಗಳೆಂಬುವೇ ಒಂಬತ್ತು ಬಾಗಿಲುಗಳು ॥೩೭॥ ಸಂಸಾರಿಯಾದವನಿಗೆ ಪ್ರವೃತ್ತಿಮಾರ್ಗವೇ ಸಹಜವಾದುದರಿಂದ ನಿವೃತ್ತಿಮಾರ್ಗವು ದೂಷಿಸಲ್ಪಡುವುದು ॥ ೩೮ ॥ ಇಲ್ಲಿ ನಿವೃತ್ತಿಧರ್ಮವನ್ನು ದೂಷಿಸುವುದುಮಾತ್ರವೇ ಅಲ್ಲದೆ ಪ್ರವೃತ್ತಿ ಮಾರ್ಗವನ್ನೂ ಹೊಗಳುವುದು ॥೩೯-೪೦-೪೧॥

ಇಂತು ಜೀವಕರ್ಮಾನುಸಾರವಾಗಿ ಜೀವನಿಗೂ ಬುದ್ಧಿಗೂ ಸಂಬಂಧವನ್ನೂ, ಈ ಬುದ್ಧಿಜೀವರಿರ್ವರಿಗೂ ಶರೀರಸಂಬಂಧವನ್ನೂ, ಪ್ರಕಾರಾಂತರದಿಂದ ತಿಳುಹಿಸಿ, ನಾರದಮುನಿಯು ಶ್ರೋತೃವಾದ ಪ್ರಾಚೀನಬರ್ಹಿರಾಜನಿಗೆ ವಿರಕ್ತಿಯುಂಟಾಗುವುದಕ್ಕಾಗಿ, ತತ್ವಶ್ರವಣದಲ್ಲಿ ಆಸೆಯುಂಟಾಗುವಂತೆ, ಜಾಗ್ರದಾದ್ಯವಸ್ಥೆಗಳಲ್ಲಿ ಜೀವನಿಗುಂಟಾಗುವ ದೋಷಗಳನ್ನು ಹೊರಪಡಿಸುತ್ತಾನೆ ॥೪೩॥ ಜೀವನು ಜಾಗ್ರದವಸ್ಥೆಯಲ್ಲಿ ಇಂದ್ರಿಯವೃತ್ತಿಗಳಿಂದ ಶಬ್ದವಿಷಯಗಳನ್ನು ಅನುಭವಿಸುತ್ತಾ, ಇಂದ್ರಿಯಗಳಿಗೆ ಜೀಸರವೂ

ಖಾಯ ಸ್ಸಖ್ಯೋ ಮೇ ನರಾ ನಾರ್ಯಶ್ಚ ಮಾನದ! । ಸುಪ್ತಾಯಾಂ ಮಯಿ ಜಾಗರ್ತಿ ನಾಗೋऽಯಂ ಪಾಲಯನ್ ಪುರೀಂ ॥೫೫॥ ದಿಷ್ಟ್ಯಾಗತೋಽಸಿ ಭದ್ರಂ ತೇ ಗ್ರಾಮ್ಯಾನ್ ಕಾಮಾನಭೀಪ್ಸಸೇ । ಉದ್ವಹಿಷ್ಯಾಮಿ ತಾಂಸ್ತೇಽಹಂ ಸ್ವಬಂಧುಭಿರರಿಂದಮ ! ॥೫೬॥ ಇಮಾಂ ತ್ವಮಧಿತಿಷ್ಠಸ್ವ ಪುರೀಂ

ಮಾನವನ್ನು ಕೊಡುವವನೆ ! ಮೇ - ನನಗೆ, ಏತೇನರಾಃ - ಈ ಪುರುಷರು, ಸಖಾಯಃ - ಮಿತ್ರರು, ನಾರ್ಯಃ - ಈ ಸ್ತ್ರೀಯರು, ಸಖ್ಯಃ - ಗೆಳತಿಯರು, ಮಯಿ - ನಾನು, ಸುಪ್ತಾಯಾಂ - ಮಲಗಿರುವಾಗ, ಅಯಂನಾಗಃ - ಈ ಸರ್ಪರಾಜನು, ಪುರೀಂ - ಪಟ್ಟಣವನ್ನು, ಪಾಲಯನ್ - ಸಲಹುತ್ತಾ, ಜಾಗರ್ತಿ - ಎಚ್ಚರದಿಂದಿರುವನು ॥೫೫॥ ಅರಿಂದಮ - ಶತ್ರುಮರ್ದನನೆ ! ದಿಷ್ಟ್ಯಾ -ದೈವಯೋಗದಿಂದ, ಆಗತೋಽಸಿ- ಬಂದಿರುವೆ, ತೇ - ನಿನಗೆ, ಭದ್ರಂ - ಮಂಗಳವಾಗುವುದು, ಗ್ರಾಮ್ಯಾನ್ ಕಾಮಾನ್ - ವಿಷಯ ಸುಖಗಳನ್ನು, ಅಭೀಪ್ಸಸೇ - ಬಯಸುತ್ತಿರುವೆ, ಅಹಂ - ನಾನು, ಸ್ವಬಂಧುಭಿಃ - ನನ್ನ ಪರಿವಾರದೊಡನೆ, ತಾನ್ - ಆ ಭೋಗಗಳನ್ನು, ತೇ - ನಿನಗೆ, ಉದ್ವಹಿಷ್ಯಾಮಿ - ಸಂಪಾದಿಸಿ ಕೊಡುವೆನು ॥೫೬॥ ವಿಭೋ-

ಮಾನದಾತನೆ? ಈ ಗಂಡಸರು ನನ್ನಮಿತ್ರರು. ಈಹೆಂಗಸರು ನನ್ನ ಗೆಳತಿಯರು. ನಾನುಮಲಗಿ ನಿದ್ರಿಸುವಾಗಲೂಎಡಬಿಡದೆಈಸರ್ಪರಾಜನು ನನ್ನ ಪಟ್ಟಣವನ್ನು ಎಚ್ಚರದಿಂದ ಕಾದುಕೊಂಡಿರುವನು॥೫೫॥ ಎಲೈಶತ್ರುಸೂದನನೆ?ನೀನು ದೈವಯೋಗದಿಂದಿಲ್ಲಿಬಿಜಮಾಡಿದೆ.ಅಲ್ಲದೆ ವಿಷಯಸುಖಗಳನ್ನೂ ಬಯಸುತ್ತಿರುವೆ. ಆದುದರಿಂದ ಪರಿವಾರದಿಂದೊಡಗೂಡಿರುವ ನಾನು ನಿನಗಾ ಭೋಗಗಳನ್ನು ಸಂಪಾದಿಸಿಕೊಡುವೆನು ॥೫೬॥ ಅಯ್ಯಾ ಪ್ರಭುವೆ ! ನಾನು ಸಮ

ಟಾದಾಗ ಪುರೀತನ್ನಾಡಿಯಲ್ಲಿ ಹೋಗುವನು. (ಪರಬ್ರಹ್ಮನಲ್ಲಿಲಯವನ್ನು ಪಡೆಯುವನು) ಇದೇಸುಷುಪ್ತಿಯು. ಶರೀರದಲ್ಲಿರುವ ಎಪ್ಪತ್ತೆರಡು ಸಾವಿರ ನಾಡಿಗಳಿಗೂ ಆಶ್ರಯವೆನಿಸಿದ ಪುರೀತನ್ನಾಡಿಯು ಹೃದಯದಲ್ಲಿರುವುದು ॥೪೪॥ ಶರೀರವೆಂಬ ನಗರಕ್ಕೆ ಒಂಬತ್ತು ಬಾಗಿಲುಂಟಷ್ಟೆ, ಅವುಗಳಲ್ಲಿ ಕಣ್ಣು, ಮೂಗು,ಕಿವಿ ಬಾಯಿಗಳೆಂಬ ಏಳುದ್ವಾರಗಳೇ ಮೇಲಣಬಾಗಿಲುಗಳು, ಲಿಂಗ, ಉಪಸ್ಥಗಳೆಂಬ ಎರಡುದ್ವಾರಗಳೇಕೆಳಗಣಬಾಗಿಲುಗಳು. ಜೀವನು ಜಾಗ್ರದವಸ್ಥೆಯಲ್ಲಿ ಶಬ್ದಾದಿವಿಷಯಗಳನ್ನು ಸಂಪಾದಿಸುವುದಕ್ಕಾಗಿ ಈ ಬಾಗಿಲುಗಳಿಂಸಂಚರಿಸುವನು ॥೪೫॥

ಎರಡುಕಣ್ಣುಗಳು, ಎರಡು ಮೂಗಿನ ಹೊಳ್ಳೆಗಳು, ಬಾಯಿ, ಇವುಗಳೇ ಪೂರ್ವದಿಕ್ಕಿನಐದು ಬಾಗಿಲುಗಳು. ಎಡಬಲ ಕಿವಿಗಳೇ ಉತ್ತರ ದಕ್ಷಿಣ ಬಾಗಿಲುಗಳು. ಪಾಯು ಉಪಸ್ಥಗಳೇ ಎರಡು ಪಶ್ಚಿಮದಬಾಗಿಲುಗಳು ॥೪೬॥ ಅವುಗಳಲ್ಲಿ ಅಲ್ಪಪ್ರಕಾಶವುಳ್ಳ ಎಡಗಣ್ಣಿಗೆ ಖದ್ಯೋತವೆಂತಲೂ, ಅಧಿಕಪ್ರಕಾಶವುಳ್ಳ ಬಲಗಣ್ಣಿಗೆ ಆವಿರ್ಮುಖಿಯೆಂತಲೂಹೆಸರು. ಜೀವನು ತೇಜಸ್ಸಿನಿಂದಕೂಡಿದ ಚಕ್ಷುರಿಂದ್ರಿಯದಿಂದ ರೂಪವೆಂಬವಿಷಯವನ್ನು ಪಡೆಯುವನು ॥೪೭॥ ಮೂಗಿನ ಹೊಳ್ಳೆಗಳಿಗೆ ನಳಿನಿ, ನಾಳಿನಿ, ಎಂದು ಹೆಸರು. ಜೀವನು ಘ್ರಾಣೇಂದ್ರಿಯ ಸಹಿತನಾಗಿ ಗಂಧವೆಂಬ ವಿಷಯವನ್ನು ಪಡೆಯುವನು ॥೪೮॥ ಮುಖ್ಯವಾದ ಹೆಬ್ಬಾಗಿಲೇ ಬಾಯಿಯು. ಜೀವನು ರಸನೇಂದ್ರಿಯವಾಗಿಂದ್ರಿಯಗಳಿದೊಡಗೂಡಿ, ಹಲವುಬಗೆಯಾದ ರುಚಿಗಳನ್ನೂ, ಸಂಭಾಷಣಶಕ್ತಿಯನ್ನೂ ಪಡೆಯುತ್ತಾನೆ ॥ ೪೯ ॥ ಶ್ರವಣಕಾಲದಲ್ಲಿ ಅಧಿಕಬಲವುಳ್ಳ ಬಲಗಿವಿಯು ಮೊದಲು ಕೇಳತೊಡಗುವುದು. ಕೇಳತಕ್ಕುದರಲ್ಲಿ ಶಾಸ್ತ್ರವೇ ಮೊದಲನೆಯದು. ಆ ಶಾಸ್ತ್ರದಲ್ಲಿಯೂ ಪ್ರವೃತ್ತಿರೂಪವಾದ ಕರ್ಮಕಾಂಡವನ್ನು ಕೇಳಿ ಅದರಂತೆ ನಡೆಯುವುದರಿಂದ ಸಂತುಷ್ಟ

ನವಮುಖೀಂ ವಿಭೋ!। ಮಯೋಪನೀತಾನ್ ಗೃಹ್ಣಾನಃ ಕಾಮಭೋಗಾನ್
ಶತಂ ಸಮಾಃ ॥೫೭॥ ಕಂ ನು ತ್ವದನ್ಯಂ ರಮಯೇ ಹ್ಯರತಿಜ್ಞ ಮಕೋವಿ
ದಂ । ಅಸಂಪರಾಯಾಽಭಿಮುಖ ಮಶ್ವಸ್ತನವಿದಂ ಪಶುಂ ॥ ೫೮ ॥ ಧ
ರ್ಮೋ ಹ್ಯತ್ರಾಽರ್ಥ ಕಾಮೌಚ ಪ್ರಜಾನಂದೋಽಮೃತಂ ಯಶಃ ।

ಎಲೈ ಮಹಾರಾಜನೆ ! ತ್ವಂ - ನೀನು, ಮಯಾ - ನನ್ನಿಂದ, ಉಪನೀತಾನ್ - ಕೊಡಲ್ಪಟ್ಟ, ಕಾಮಭೋಗಾನ್ - ವಿಷಯಭೋಗಗಳನ್ನು. ಗೃಹ್ಣಾನಃ - ಅನುಭವಿಸುತ್ತಾ, ಶತಂಸಮಾಃ - ನೂರುವರ್ಷಗಳವರೆಗೂ, ನವಮುಖೀಂ - ಒಂಬತ್ತು ಬಾಗಿಲುಳ್ಳ, ಇಮಾಂಪುರೀಂ-ಈ ಪಟ್ಟಣದಲ್ಲಿ. ಅಧಿತಿಷ್ಠಸ್ವ - ನೆಲಸಿರು ॥೫೭॥ ತ್ವದನ್ಯಂ - ನಿನಗಿಂತ ಬೇರೆಯಾದ, ಅರತಿಜ್ಞಂ - ರತಿಸ್ವರೂಪವನ್ನರಿಯದ, ಅಕೋವಿದಂ-ಮೂಢನಾದ, ಅಸಂಪರಾಯಾಭಿಮುಖಂ - ಮೃತ್ಯುವಿಗೆ ಅಭಿಮುಖನಾಗದ, ಅಶ್ವಸ್ತನವಿದಂ-ಈ ಲೋಕದ ಚಿಂತೆಯಿಲ್ಲದ, ಪಶುಂ - ಪಶುಸಮನಾದ, ಕಂನು - ಯಾವನನ್ನು, ರಮಯೇ - ಸಂಭೋಗಿಸುವೆನು ಅತ್ರ - ಈ ಪಟ್ಟಣದಲ್ಲಿ, ಕೇವಲಿನಃ - ವಿರಕ್ತಿಯನ್ನು ಮಾತ್ರ ಪಡೆದವರು, ಯಾನ್ - ಯಾವ ಲೋಕಗಳನ್ನು, ನವಿದುಃ - ತಿಳಿಯಲಾರರೋ, ಅಂತಹ, ವಿರಜಾಃ - ನಿರ್ಮಲಗಳಾದ, ವಿಶೋಕಾಃ - ದುಃಖರಹಿತಗಳಾದ, ಲೋಕಾಃ - ಪುಣ್ಯಲೋಕಗಳೂ, ಧರ್ಮಃ - ಧರ್ಮವೂ, ಅರ್ಥಕಾಮೌ - ಅರ್ಥಕಾಮಗಳು,

ಪಿಸುವ ಸಂಸ್ಕೃತ ಭೋಗಗಳನ್ನು ಅನುಭವಿಸುತ್ತಾ ನೂರುವರ್ಷಗಳ ವರೆಗೂ ನವದ್ವಾರಗಳಿಂದ ಕೂಡಿದ ಈ ರಾಜಧಾನಿಯಲ್ಲಿ ವಾಸಿಸುತ್ತಿರು ॥೫೭॥ ರಸಿಕ ಶಿಖಾಮಣಿಯಾದ ನಿನ್ನನ್ನುಳಿದು ರತಿಸ್ವರೂಪವನ್ನರಿಯದೆ, ಮೂಢನಾಗಿ ಇಹಪರಚಿಂತೆಗಳಿಲ್ಲದೆ ಪಶುವಿಗೆ ಸಮಾನನೆನಿಸಿರುವ ಮತ್ತಾವನನ್ನು ತಾನೇನಾನು ವರಿಸಲಾಪೆನು ? ॥೫೮॥ ಗೃಹಸ್ಥಾಶ್ರಮವೆಂಬುದು ಸಾಮಾನ್ಯವೆಂದರಿಯಬೇಡ. ಇಲ್ಲಿ ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಗಳೂ, ಕೀರ್ತಿಯೂ, ದುಃಖರಹಿತಗಳಾಗಿಯೂ, ನಿರ್ಮಲಗಳಾಗಿಯೂ ಇರುವ ಪುಣ್ಯಲೋಕಗಳೂ ದೊರೆಯುವುವು. ಕೇವಲ ವಿರಕ್ತರಾದ

ರಾದ ಪಿತೃಗಳ ಅನುಗ್ರಹಕ್ಕೆ ಪಾತ್ರನಾಗಿ ಪಿತೃಲೋಕ ಪ್ರಾಪಕವಾದ ಧೂಮಾದಿ ಮಾರ್ಗವನ್ನು ಪಡೆಯುವನು ಇಂತು ಪಿತೃಲೋಕಪ್ರಾಪ್ತಿಗೆ ಕಾರಣವಾದ ಬಲಗಿವಿಗೆ " ಪಿತೃಹೂ" ಎಂದು ಹೆಸರು. ಜೀವನು ಶ್ರವಣೇಂದ್ರಿಯದಿಂದ ಶಾಸ್ತ್ರವನ್ನು ಶ್ರವಣಮಾಡುವನು. ಪಂಚ-ಶಬ್ದಾದಿ ವಿಷಯಗಳನ್ನೂ,ಅಲಂ-ಇತರಸಹಾಯವೊಲ್ಲದಂತೆ ಬೋಧಿಸುವುದರಿಂದ, ಶಾಸ್ತ್ರಕ್ಕೆ ಪಾಂಚಾಲವೆಂದು ಹೆಸರು. '† ಅಂತೆಯೇ ಜೀವನು ಎಡಗಿವಿಯಿಂದ ಜ್ಞಾನಕಾಂಡವನ್ನು ಕೇಳಿ ದೇವತಾನುಗ್ರಹಕ್ಕೆ ಪಾತ್ರನಾಗುವುದರಿಂದ ಇದಕ್ಕೆ ದೇವಹೂ ಎಂದು ಹೆಸರು. ಅಥವಾ ಜೀವನು ಬಲಗಿವಿಯಿಂದ ವೇದಶಾಸ್ತ್ರಾದಿ ವೈದಿಕಶಬ್ದಗಳನ್ನೂ, ಎಡಗಿವಿಯಿಂದ ಧಕ್ಕಾಮೃದಂಗಾದಿ ಲೌಕಿಕಶಬ್ದಗಳನ್ನೂ ಕೇಳುವನು. ಪಂಚೇಂದ್ರಿಯವಿಷಯಗಳನ್ನೂ ಕಿವಿಯೊಂದರಿಂದಲೇ ಗ್ರಹಿಸಬಹುದಾದುದರಿಂದ ಕಿವಿಗಳಿಗೂ ಪಾಂಚಾಲವೆಂದು ಹೆಸರನ್ನಿಡಬಹುದು ॥೫೦॥

† ಶ್ಲೋ॥ ಪಿತೃಹೂರ್ದಕ್ಷಿಣಃ ಕರ್ಣ ಉತ್ತರೋ ದೇವಹೂ ಸ್ಮೃತಃ । ಪ್ರವೃತ್ತಿಂಚ ನಿವೃತ್ತಿಂಚ ಶಾಸ್ತ್ರಂ ಪಾಂಚಾಲ ಸಂಜ್ಞಿತಂ । ಪಿತೃಯಾನಂ ದೇವಯಾನಂ ಶ್ರೋತ್ರಾಚ್ಛ್ರುತಿಧರಾದ್ವ್ರಜೇತ್॥ ಬಲಗಿವಿಗೆ ಪಿತೃಹೂ, ಎಡಗಿವಿಗೆ ದೇವಹೂ, ಪ್ರವೃತ್ತಿ ನಿವೃತ್ತಿಗೆ ಶಾಸ್ತ್ರಗಳಿಗೆ ಪಾಂಚಾಲ, ಶ್ರವಣೇಂದ್ರಿಯಕ್ಕೆ ಶ್ರುತಿಧರ, ಎಂದು ಹೆಸರು.

ಲೋಕಾ ವಿಶೋಕಾ ವಿರಜಾ ಯಾನ್ನಕೇವಲಿನೋ ವಿದುಃ ॥ ೩೯ ॥ ಪಿತೃ ದೇವರ್ಷಿ ಮರ್ತ್ಯಾನಾಂ ಭೂತಾನಾ ಮಾತ್ಮನ ಶ್ಚಹ । ಕ್ಷೇಮ್ಯಂ ವದಂತಿ ಶರಣಂ ಭವೇಽಸ್ಮಿನ್ ಯದ್ಗೃಹಾಶ್ರಮಃ ॥೪೦॥ ಕಾನಾಮ ವೀರ ! ವಿಖ್ಯಾತಂ ವದಾನ್ಯಂ ಪ್ರಿಯದರ್ಶನಂ । ನವೃಣೀತ ಪ್ರಿಯಂ ಪ್ರಾಪ್ತಂ ಮಾದೃಶೀ ತ್ವಾದೃಶಂ ಪತಿಂ ॥೪೧॥ ಕಸ್ಯಾ ಮನಸ್ತೇ ಭುವಿ ಭೋಗಿಭೋಗಯೋಃ ಸ್ತ್ರಿಯಾ ನಸಜ್ಜೇ ದ್ಭುಜಯೋ ರ್ಮಹಾಭುಜ ! । ಯೋಽನಾಥವರ್ಗಾಧಿ ಮಲಂ ಘೃಣೋದ್ಧತ ಸ್ಮಿತಾ ಽ ವಲೋಕೇನ ಚರತ್ಯಪೋಹಿತುಂ ॥೪೨॥ ನಾರದಃ॥ ಇತಿ ತಾಂದಂಪತೀ ತತ್ರ ಸಮುದ್ಯ ಸಮಯಂ ಮಿಥಃ । ತಾಂ ಪ್ರ

ಪ್ರಜಾನಂದಃ - ಸಂತಾನಸುಖವೂ, ಅಮೃತಂ - ಮೋಕ್ಷವು, ಯಶಃ-ಕೀರ್ತಿಯು, ಉಂಟು ॥೩೯॥ ಅಸ್ಮಿನ್ ಭವೇ - ಈ ಸಂಸಾರದಲ್ಲಿ, ಗೃಹಾಶ್ರಮಃ ಯತ್ - ಗೃಹಸ್ಥಾಶ್ರಮವಾವುದುಂಟೋ, ಅದು ಪಿತೃ····ನಾಂ ಪಿತೃಗಳು, ದೇವತೆಗಳು, ಋಷಿಗಳು, ಮನುಷ್ಯರು ಇವರಿಗೂ, ಭೂತಾನಾಂ - ಇತರ ಪ್ರಾಣಿಗಳಿಗೂ, ಆತ್ಮನಶ್ಚಹ - ತನಗೂ ಕೂಡ, ಕ್ಷೇಮ್ಯಂ - ಕ್ಷೇಮಕರವಾದ, ಶರಣಂ - ಆಶ್ರಯವೆಂ ್ನ ವದಂತಿ - ಹೇಳುತ್ತಾರೆ ॥೪೦॥ ವೀರ-ಶೂರನೆ! ವಿಖ್ಯಾತಂ-ಪ್ರಸಿದ್ಧನಾದ, ವದಾನ್ಯಂ-ಉದಾರನಾದ, ಪ್ರಿಯದರ್ಶನಂ-ಸುಂದರನಾದ, ಪ್ರಾಪ್ತಂ-ಬಂದ, ತ್ವಾದೃಶಂ - ನಿನ್ನಂತಹ, ಪತಿಂ- ಗಂಡನನ್ನು, ಮಾದೃಶೀ-ನನ್ನಂತಹ ಕಾನಾಮ - ಯಾವಳುತಾನೇ, ನವೃಣೀತ - ವರಿಸಲಾರಳು ॥೪೧॥ ಮಹಾಭುಜ - ಮಹಾಶೂರನೆ ! ಯಃ ಯಾವ ನೀನು, ಅನಾ···ಧಿಂ, ಅನಾಥವರ್ಗ - ದೀನಸಮೂಹದ, ಆಧಿಂ - ದುಃಖವನ್ನು, ಅಲಂ-ಸಂಪೂರ್ಣವಾಗಿ, ವ್ಯಪೋಹಿತುಂ - ಕಳೆಯುವುದಕ್ಕಾಗಿ ಭುವಿ - ಭೂಮಿಯಲ್ಲಿ, ಘೃಣೋ···ನ, ಘೃಣಾ-ದಯೆಯಿಂದ, ಉದ್ಧತ - ಹೆಚ್ಚಾದ, ಸ್ಮಿತ - ನಗೆಯಿಂದ ಕೂಡಿದ ಅವಲೋಕೇನ - ಕಟಾಕ್ಷದಿಂದ, ಚರತಿ - ಸಂಚರಿಸುವೆಯೋ ಅಂತಹ ತೇ-ನಿನ್ನ, ಭೋಗಿ ಭೋಗಯೋಃ - ಸರ್ಪ ಶರೀರದಂತೆ ದುಂಡಾಗಿ ನೀಳವಾಗಿರುವ, ಭುಜಯೋಃ - ಭುಜಗಳಲ್ಲಿ, ಕಸ್ಯಾಸ್ತ್ರಿಯಾಃ - ಯಾವ ಸ್ತ್ರೀಯ, ಮನಃ- ಮನಸ್ಸು, ನಸಜ್ಜೇತ್- ಲಗ್ನವಾಗಲಾರದು? ॥೪೨॥ ನಾರದನು ಹೇಳುತ್ತಾನೆ ! ರಾಜನ್-ಅಯ್ಯಾ ಪ್ರಾಚೀನಬರ್ಹಿಯೆ! ಇತಿ - ಇಂತು, ತೌದಂಪತೀ - ಆ ದಂಪತಿಗಳು, ತತ್ರ - ಅಲ್ಲಿ, ಮಿಥಃ - ಪರಸ್ಪರವಾಗಿ, ಸಮಯಂ-

ವರು ಇವುಗಳನ್ನೊಂದಿಗೂ ಪಡೆಯಲಾರರು ॥೩೯॥ ಪಿತೃಗಳು, ದೇವತೆಗಳು, ಋಷಿಗಳು, ಮಾನವರು ಇವರಿಗೂ, ಇತರ ಭೂತಗಳಿಗೂ ತನಗೂ ಸಹ ಈಸಂಸಾರದಲ್ಲಿ ಗೃಹಸ್ಥಾಶ್ರಮವೇ ರಕ್ಷಕವೆಂದು ಪಂಡಿತರು ಹೇಳುವರು ॥೪೦॥ ಎಲೈ ವೀರನೆ ! ಕೀರ್ತಿವಂತನೂ ಧಾರಾಳಿಯೂ, ಸುಂದರನೂ, ಪ್ರೀತಿಪಾತ್ರನೂ, ಆದ ನಿನ್ನಂತವನು ಪತಿಯಾಗಿ ದೊರೆತಾಗ ನನ್ನಂತಹ ಯಾವ ಸ್ತ್ರೀಯುತಾನೇ ವರಿಸದಿದ್ದಾಳು ? ॥೪೧॥ ಮಹಾಶೂರನಾದ ಯಾವ ನೀನು ಅನಾಥರಾದವರ ದಂದುಗವನ್ನು ಕುಂದಿಸುವುದಕ್ಕಾಗಿ ನಸುನಗೆಯಿಂದ ಕೂಡಿದ ಕಟಾಕ್ಷಗಳನ್ನು ಪಸರಿಸುತ್ತಾ ಭೂಮಿಯಲ್ಲಿ ಸಂಚರಿಸುತ್ತಿರುವೆಯೋ, ಅಂತಹ ನಿನ್ನ ಸರ್ಪಶರೀರದಂತೆ ದುಂಡಾಗಿ ನೀಳವಾಗಿರುವ ಭುಜಗಳಲ್ಲಿ, ಯಾವ ಹೆಣ್ಣಿನ ಮನಸ್ಸು ಲಗ್ನವಾಗದಿದ್ದೀತು? ಎಂದು ಹೇಳಿದಳು॥೪೨॥ ನಾರದಮುನಿಯು ಹೇಳುತ್ತಾನೆ:- ಅಯ್ಯಾ ಪ್ರಾಚೀನ ಬರ್ಹಿರಾಜನೆ ! ಇಂತಾ ದಂಪತಿಗಳಿಬ್ಬರೂ ಪರಸ್ಪರವಾಗಿ ಸಮಯಬಂಧವನ್ನು

ವಿಶ್ಯ ಪುರೀಂ ರಾಜನ್ ! ಮುಮುದಾತೇ ಶತಂ ಸಮಾಃ ||೪೩|| ಉಪಗೀಯ
ಮಾನೋ ಲಲಿತಂ ತತ್ರತತ್ರ ಚ ಗಾಯಕೈಃ । ಕ್ರೀಡನ್ ಪರಿವೃತ ಸ್ತ್ರೀಭಿ
ರ್ಹ್ರದಿನೀ ಮಾವಿಶ ಚ್ಛುಚೌ ||೪೪|| ಸಪ್ತೋಪರಿಕೃತಾ ದ್ವಾರಃ ಪುರ ಸ್ತಸ್ಯಾ
ಸ್ತುದ್ವೇ ಅಧಃ । ಪೃಥಗ್ವಿಷಯಗತ್ಯರ್ಥಂ ತಸ್ಯಾಂ ಯಃ ಕಶ್ಚನೇಶ್ವರಃ ||
ಪಂಚದ್ವಾರಸ್ತು ಪೌರಸ್ತ್ಯ ದಕ್ಷಿಣೈಕಾ ತಥೋತ್ತರಾ । ಪಶ್ಚಿಮೇ ದ್ವೇ
ಅಮೂಷಾಂ ತೇ ನಾಮಾನಿ ನೃಪ ! ವರ್ಣಯೇ ||೪೬|| ಖದ್ಯೋತಾ ವಿ
ರ್ಮುಖೀ ಚ ಪ್ರಾಗ್ದ್ವಾರಾ ವೇಕತ್ರ ನಿರ್ಮಿತೇ । ವಿಭ್ರಾಜಿತಂ ಜನಪದಂ

ಸಂಕೇತವನ್ನು, ಸಮುದ್ಯ - ಮಾಡಿಕೊಂಡು, ತಾಂಪುರೀಂ - ಆ ನಗರವನ್ನು, ಪ್ರವಿಶ್ಯ - ಹೊಕ್ಕು, ಶ
ತಂಸಮಾಃ-ನೂರುವರ್ಷಗಳು, ಮುಮುದಾತೇ-ನಲಿಯುತ್ತಿದ್ದರು ||೪೩|| ಆ ರಾಜನು ತತ್ರತತ್ರ - ಅಲ್ಲ
ಲ್ಲಿ, ಗಾಯಕೈಃ - ಸಂಗೀತಗಾರರಿಂದ, ಲಲಿತಂ - ರಮಣೀಯವಾಗಿ, ಉಪಗೀಯಮಾನಃ - ಹೊಗಳಲ್ಪ
ಡುತ್ತಾ, ಸ್ತ್ರೀಭಿಃ - ಸ್ತ್ರೀಯರಿಂದ, ಪರಿವೃತಃ-ಬಳಸಲ್ಪಟ್ಟು, ಕ್ರೀಡನ್ - ಆಡುತ್ತಾ, ಶುಚೌ -ಬೇಸ
ಗೆಯಲ್ಲಿ, ಹ್ರದಿನೀಂ - ನೀರಿನ ಮಡುವನ್ನು, ಆವಿಶತ್ - ಹೊಕ್ಕನು ||೪೪|| ತಸ್ಯಾಂ - ಆ ನಗರದಲ್ಲಿ,
ಯಃಕಶ್ಚನ - ಯಾವನೊ ಬ್ಬ, ಈಶ್ವರಃ - ನಾಯಕನುಂಟು, ಅವನು, ಪೃಥಗ್ವಿಷಯಗತ್ಯರ್ಥಂ- ಬೇರೆಬೇರೆ ವಿಷ
ಯಗಳಲ್ಲಿ ಸಂಚರಿಸುವುದಕ್ಕಾಗಿ, ತಸ್ಯಾಃಪುರಃ - ಆ ಪಟ್ಟಣದ, ಉಪರಿ - ಮೇಲ್ಗಡೆಯಲ್ಲಿ, ಸಪ್ತ - ಏ
ಳು, ದ್ವಾರಃ - ಬಾಗಿಲುಗಳು, ಕೃತಾಃ - ಮಾಡಲ್ಪಟ್ಟುವು, ಅಧಃ - ಕೆಳಗೆ, ದ್ವೇ - ಎರಡುಬಾಗಿಲುಗ
ಳು, ಕೃತಾಃ- ಮಾಡಲ್ಪಟ್ಟುವು ||೪೫||

ನೃಪ- ರಾಜನೆ ! ಪಂಚ ದ್ವಾರಃ - ಐದುಬಾಗಿಲುಗಳು, ಪೌರಸ್ತ್ಯಃ-ಮುಂದಣವು, ಏಕಾ-ಒಂ
ದು, ದಕ್ಷಿಣಾ - ದಕ್ಷಿಣದಲ್ಲಿರುವುದು, ತಥಾ - ಹಾಗೆಯೇ, ಏಕಾ - ಒಂದು ಉತ್ತರಾ - ಉತ್ತರದಲ್ಲಿರುವು
ದು, ಪಶ್ಚಿಮೇ - ಪಶ್ಚಿಮದಲ್ಲಿ, ದ್ವೇ - ಎರಡುಬಾಗಿಲುಗಳು, ಅಮೂಷಾಂ - ಇವುಗಳ, ನಾಮಾನಿ- ಹೆಸ
ರುಗಳನ್ನು, ವರ್ಣಯೇ - ಬಣ್ಣಿಸುವೆನು ||೪೬|| ಪ್ರಾಕ್ - ಮೂಡಣಗಡೆಯಲ್ಲಿ, ಖದ್ಯೋತ (ಅಲ್ಪಪ
ಕಾಶವುಳ್ಳ ಎಡಗಣ್ಣು) ಆವಿರ್ಮುಖೀ (ಅಧಿಕಪ್ರಕಾಶವುಳ್ಳ ಬಲಗಣ್ಣು) ಎಂಬ ದ್ವಾರೌ - ಎರಡುಬಾಗಿ

ಮಾಡಿಕೊಂಡು ಆ ಪುರವನ್ನು ಹೊಕ್ಕು ನೂರುವರ್ಷಗಳ ವರೆಗೂ ಸುಖವಾಗಿ ಬಾಳುತ್ತಿ
ದ್ದರು ||೪೩|| ಆ ಪುರಂಜನರಾಜನು ಅಲ್ಲಲ್ಲಿ ರಮಣೀಯವಾಗಿ ಸಂಗೀತಗಾಗರರಿಂದ ಹೊ
ಗಳಲ್ಪಡುತ್ತಾ, ಅನೇಕ ಸ್ತ್ರೀಯರಿಂದ ಪರಿವೃತನಾಗಿ ವಿಹರಿಸುತ್ತಾ, ಬೇಸಗೆಯ ಕಾಲದಲ್ಲಿ
ಸಸ್ತ್ರೀಕನಾಗಿ ಮಡುಹುಗಳಲ್ಲಿ ಜಲಕ್ರೀಡೆಯನ್ನು ಮಾಡುತ್ತಿದ್ದನು ||೪೪||

ಆ ಪುರಂಜನನ ಪಟ್ಟಣದಲ್ಲಿ ರಾಜನಾದವನು ದೇಶಾಂತರ ಸಂಚಾರ ಹೊರಡುವುದ
ಕ್ಕೆ ಅನುಕೂಲವಾಗಿರುವಂತೆ ಮೇಲ್ಗಡೆಯಲ್ಲಿ ಏಳುಬಾಗಿಲುಗಳು ಕೆಳಗಡೆಯಲ್ಲಿ ಏಳುಬಾಗಿ
ಲುಗಳೂ ಇಡಲ್ಪಟ್ಟದ್ದುವು ||೪೫|| ಅಯ್ಯಾ ರಾಜನೆ! ಅವುಗಳಲ್ಲಿ ಮೂಡಗಡೆ ಐದುಬಾಗಲು
ಗಳೂ, ತೆಂಕಣಕಡಗೆ ಒಂದುಬಾಗಿಲೂ, ಬಡಗಣ ಕಡೆಗೆ ಒಂದುಬಾಗಿಲೂ, ಪಡುವಣದಿಕ್ಕಿ
ಗೆ ಎರಡುಬಾಗಿಲುಗಳೂ ಇರುವುವು. ಅವುಗಳ ಹೆಸರುಗಳನ್ನು ವಿವರಿಸುವೆನು ಕೇಳು ||
ಮೂಡಗಡೆಯಲ್ಲಿ ಖದ್ಯೋತ, ಆವಿರ್ಮುಖಿಗಳೆಂಬ ಎರಡುಬಾಗಿಲು ಜತೆಯಾಗಿರುವುವು.

ಗೂ||ಜೀವನು ಉಪಸ್ಥೇಂದ್ರಿಯದಿಂದೊಡಗೂಡಿ ಆಸುರಿಯೆಂದು ಹೆಸರುಳ್ಳ ಶಿಶ್ನದಿಂದ ಮೈಥುನಸುಖ

ಯಾತಿ ತಾಭ್ಯಾಂ ದ್ಯುಮತ್ಸಖಃ ॥ ೪೭ ॥ ನಳಿನೀ ನಾಳಿನೀ ಚ ಪ್ರಾಗ್ದ್ವಾರಾ ವೇಕತ್ರ ನಿರ್ಮಿತೇ । ಅವಧೂತಸಖಃ ತಾಭ್ಯಾಂ ವಿಷಯಂ ಯಾತಿ ಸೌರಭಂ ॥೪೮॥ ಮುಖ್ಯಾನಾಮ ಪುರಸ್ತಾದ್ದ್ವಾಸ್ತಯಾಪಣಬಹೂದನೌ । ವಿಷಯೌ ಯಾತಿ ಪುರರಾಡ್ರಸಜ್ಞವಿಪಣಾನ್ವಿತಃ ॥೪೯॥ ಪಿತೃಹೂರ್ನೃಪ ! ಪುರ್ಯಾ ದ್ವಾರ್ದಕ್ಷಿಣೇನ ಪುರಂಜನಃ । ರಾಷ್ಟ್ರಂ ದಕ್ಷಿಣಪಾಂಚಾಲಂ ಯಾತಿ ಶ್ರುತಧರಾನ್ವಿತಃ ॥೫೦॥ ದೇವಹೂರ್ನಾಮ

ಲುಗಳು, ಏಕತ್ರ - ಜತೆಯಾಗಿ, ನಿರ್ಮಿತೇ - ನಿರ್ಮಿಸಲ್ಪಟ್ಟುವು, ದ್ಯುಮತ್ಸಖಃ - ದ್ಯುಮಂತನಿಗೆ ಮಿತ್ರನಾದ ಪುರಂಜನನು, ತಾಭ್ಯಾಂ - ಆ ಬಾಗಿಲುಗಳಿಂದ ವಿಭ್ರಾಜಿತಂ - ಪ್ರಕಾಶವಾದ, ಜನಪದ-ದೇಶವನ್ನು, ಯಾತಿ - ಹೊಂದುತ್ತಾನೆ ॥೪೭॥ ನಳಿನೀ (ಎಡವಮೂಗಿನ ಹೊಳ್ಳೆ) ನಾಳಿನೀ (ಬಲಮೂಗಿ ಹೊಳ್ಳೆ) ಗಳೆಂಬ ದ್ವಾರೌ - ಎರಡು ಬಾಗಿಲುಗಳು, ಪ್ರಾಕ್-ಮೂಡಗಡೆಯಲ್ಲಿ, ಏಕತ್ರ - ಜತೆಯಾಗಿ, ನಿರ್ಮಿತೇ - ಮಾಡಲ್ಪಟ್ಟಿವೆ, ಅವಧೂತಸಖಃ - ಅವಧೂತನಿಗೆ, ಮಿತ್ರನಾದ ಪುರಂಜನನು, ತಾಭ್ಯಾಂ-ಆಬಾಗಿಲುಗಳಿಂದ, ಸೌರಭಂ - ಸೌರಭವೆಂಬ, ವಿಷಯಂ - ದೇಶವನ್ನು, ಯಾತಿ - ಹೊಂದುತ್ತಾನೆ ॥೪೮॥ ಪುರಸ್ತಾತ್ - ಮುಂದುಗಡೆಯಲ್ಲಿ, ಮುಖ್ಯಾನಾಮ - ಮುಖ್ಯವೆಂಬ, ದ್ವಾಃ - ಬಾಗಿಲುಂಟು, ರಸ...ತಃ - ರಸಜ್ಞ (ರಸನೇಂದ್ರಿಯ) ವಿಪಣ (ವಾಗಿಂದ್ರಿಯ) ಗಳಿಂದಕೂಡಿದವನಾಗಿ, ಪುರರಾಟ್ - ಒಡೆಯನಾದಪುರಂಜನನು, ತಯಾ - ಆಹೆಬ್ಬಾಗಿಲಿಂದ, ಆಪಣಬಹೂದನೌ, ಆಪಣ (ಸಂಭಾಷಣೆ) ಬಹೂದನ (ಹಲವುಬಗೆಯಾದ ಆಹಾರವಸ್ತುಗಳು) ಗಳೆಂಬ, ವಿಷಯೌ - ದೇಶಗಳನ್ನು, ಯಾತಿ - ಹೊಂದುತ್ತಾನೆ. ॥೪೯॥ ನೃಪ - ರಾಜನೆ? ಪುರ್ಯಾಃ - ಪಟ್ಟಣದ, ದಕ್ಷಿಣೇನ - ದಕ್ಷಿಣದಿಕ್ಕಿನಲ್ಲಿ, ಪಿತೃಹೂಃ (ಪಿತೃಲೋಕಪ್ರಾಪಕವಾದ) ಎಂಬ, ದ್ವಾಃ - ಬಾಗಿಲುಂಟು, ಪುರಂಜನಃ-ಪುರಂಜನನು, ಶ್ರುತಧರಾನ್ವಿತಃ - ಶ್ರುತಧರನಿಂದಕೂಡಿ, ದಕ್ಷಿಣಪಾಂಚಾಲಂ - ದಕ್ಷಿಣಪಾಂಚಾಲವೆಂಬ, ರಾಷ್ಟ್ರಂ - ದೇಶವನ್ನು ಯಾತಿ - ಹೊಂದುತ್ತಾನೆ ॥೫೦॥ ಪುರ್ಯಾಃ - ಪಟ್ಟಣದ, ಉತ್ತರೇಣ - ಉತ್ತರದಿಕ್ಕಿನಲ್ಲಿ, ದೇವಹೂರ್ನಾಮ - ದೇವಹೂ (ದೇವಲೋಕಪ್ರಾಪಕವಾದ) ವೆಂಬ, ದ್ವಾಃ - ಬಾಗಿಲುಂಟು. ಪುರಂಜನಃ - ಪುರಂಜ

ಪುರಂಜನನು ದ್ಯುಮಂತನೆಂಬ ಮಿತ್ರನಿಂದ ಕೂಡಿ ಆ ದಾರಿಯಿಂದ ವಿಭ್ರಾಜಿತವೆಂಬ ದೇಶಕ್ಕೆ ತೆರಳುವನು ॥೪೭॥ ನಳಿನಿ, ನಾಳಿನಿ, ಎಂಬ ಎರಡು ಬಾಗಿಲುಂಟು. ರಾಜನು ಅವಧೂತನಿಂದೊಡಗೂಡಿ ಆ ಮಾರ್ಗವಾಗಿ ಸೌರಭದೇಶಕ್ಕೆ ತೆರಳುವನು ॥೪೮॥ ಅದೇ ಮೂಡಗಡೆಯಲ್ಲಿ ಎಲ್ಲಕ್ಕಿಂತಲೂ ಮುಖ್ಯವಾದ ಒಂದು ಹೆಬ್ಬಾಗಿಲುಂಟು. ಪುರಂಜನರಾಜನು ರಸಜ್ಞ. ವಿಪಣರೆಂಬ ಮಿತ್ರರಿಂದ ಕೂಡಿ ಆಮಾರ್ಗವಾಗಿ ಆಪಣ, ಬಹೂದನಗಳೆಂಬ ದೇಶಗಳಿಗೆ ತೆರಳುವನು ॥೪೯॥ ಆ ಪಟ್ಟಣಕ್ಕೆ ದಕ್ಷಿಣದಲ್ಲಿ ಪಿತೃಹೂ ಎಂಬ ಬಾಗಿಲಿರುವುದು. ರಾಜನು ಶ್ರುತಧರನೆಂಬ ಮಿತ್ರನಿಂದ ಕೂಡಿ ಆಬಾಗಿಲಿಂದ ದಕ್ಷಿಣಪಾಂಚಾಲದೇಶಕ್ಕೆ ತೆರಳುವನು ॥೫೦॥ ಉತ್ತರದಲ್ಲಿ ದೇವಹೂ ಎಂಬ ಬಾಗಿಲಿರುವುದು. ಶ್ರುತಧರ ಮಿತ್ರನಾದ ರಾಜನು ಆ ಬಾಗಿಲಿಂದ ಉತ್ತರಪಾಂಚಾಲ ರಾಷ್ಟ್ರಕ್ಕೆ ಹೋಗುವನು ॥೫೧॥ ಆ ನಗರದ

ವನ್ನು ಅನುಭವಿಸುವನು. ಮೈಥುನಕರ್ಮವು ಅಸುರರಿಗೆ ಹಿತಕರವಾದುದರಿಂದ ಅಥವಾ ಸಕಲೇಂದ್ರಿಯಗಳಿಗೂ ಪ್ರೀತಿಕರವಾದುದರಿಂದ ಆಶಿಶ್ನಕ್ಕೆ ಆಸುರಿಯೆಂದು ಹೆಸರು ॥ ೫೦ ॥ ಪಾಯ್ವಿಂದ್ರಿಯದಿಂದ ಕೂಡಿದ

ಪುರ್ಯಾ ದ್ವಾ ಉತ್ತರೇಣ ಪುರಂಜನಃ । ರಾಷ್ಟ್ರ ಮುತ್ತರ ಪಾಂಚಾಲಂ ಯಾತಿ ಶ್ರುತಧರಾನ್ವಿತಃ ॥೫೧॥ ಆಸುರೀನಾಮ ಪಶ್ಚಾ ದ್ದ್ವಾ ಸ್ತಯಾ ಯಾತಿ ಪುರಂಜನಃ । ಗ್ರಾಮಕಂ ನಾಮ ವಿಷಯಂ ದುರ್ಮದೇನ ಸಮನ್ವಿತಃ ॥೫೨॥ ನಿರ್ಋತಿರ್ನಾಮ ಪಶ್ಚಾ ದ್ದ್ವಾ ಸ್ತಯಾ ಯಾತಿ ಪುರಂಜನಃ । ವೈಶಸಂ ನಾಮ ವಿಷಯಂ ಲುಬ್ಧಕೇನ ಸಮನ್ವಿತಃ ॥೫೩॥ ಅಂಧಾ ವಮೀಷಾಂ ಪೌರಾಣಾಂ ನಿರ್ವಾಕ್ಪೇಶಸ್ಕೃತಾ ವುಭೌ । ಅಕ್ಷಣ್ವತಾ ಮಧಿಪತಿ ಸ್ತಾಭ್ಯಾಂ ಯಾತಿ ಕರೋತಿ ಚ ॥೫೪॥ ಸಯ ಹ್ಯಂತಃ ಪುರಗತೋ ವಿಷೂಚೀನಸಮನ್ವಿತಃ । ಮೋಹಂ ಪ್ರಸಾದಂ ಹರ್ಷಂ ವಾ ಯಾತಿ ಜಾಯಾತ್ಮ

---

ನನು, ಶ್ರುತಧರಾನ್ವಿತಃ - ಶ್ರುತಧರನಿಂದ ಕೂಡಿ, ಉತ್ತರಪಾಂಚಾಲಂ - ಉತ್ತರದಪಾಂಚಾಲವೆಂಬ, ರಾಷ್ಟ್ರಂ - ದೇಶವನ್ನು, ಯಾತಿ - ಹೊಂದುತ್ತಾನೆ ॥೫೧॥ ಪಶ್ಚಾತ್ - ಪಶ್ಚಿಮದಿಕ್ಕಿನಲ್ಲಿ, ಆಸುರೀನಾಮ- ಆಸುರಿಯೆಂಬ, ದ್ವಾಃ - ಬಾಗಿಲುಂಟು ಪುರಂಜನನು, ದುರ್ಮದೇನ- ದುರ್ಮದನೊಡನೆ, ಸಮನ್ವಿತಃ- ಕೂಡಿದವನಾಗಿ, ಗ್ರಾಮಕಂನಾಮ - ಗ್ರಾಮಕವೆಂಬ, ವಿಷಯಂ - ದೇಶವನ್ನು, ಯಾತಿ - ಹೊಂದುತ್ತಾನೆ ॥೫೨॥ ಪಶ್ಚಾತ್ - ಪಡುಗಡೆಯಲ್ಲಿ, ನಿರ್ಋತಿರ್ನಾಮ - ನಿರ್ಋತಿಯೆಂಬ, ದ್ವಾಃ - ಬಾಗಿಲಿರುವುದು. ಪುರಂಜನನು, ತಯಾ - ಇದರಿಂದ, ಲುಬ್ಧಕೇನ - ಲುಬ್ಧಕನೆಂಬವನೊಡನೆ, ಸಮನ್ವಿತಃ - ಕೂಡಿ, ವೈಶಸಂನಾಮ - ವೈಶಸವೆಂಬ, ವಿಷಯಂ - ದೇಶಕ್ಕೆ, ಯಾತಿ - ಹೋಗುತ್ತಾನೆ ॥೫೩॥ ಪೌರಾಣಾಂ - ಪುರಸಂಬಂಧಿಗಳಾದ, ಅಮೀಷಾಂ - ಈ ಬಾಗಿಲುಗಳಲ್ಲಿ, ನಿರ್ವಾಕ್, ಪೇಶಸ್ಕೃತ್ ಎಂಬ, ಅಂಧೌ - ಕುರುಡಾದ, ಉಭೌ -ಎರಡುಬಾಗಿಲುಂಟು, ಅಕ್ಷಣ್ವತಾಂ - ಇಂದ್ರಿಯಯುಕ್ತಗಳಾದದೇಹಗಳಿಗೆ, ಅಧಿಪತಿಃ ಒಡೆಯನಾದಜೀವನು, ತಾಭ್ಯಾಂ-ಆಬಾಗಿಲುಗಳಿಂದ, ಯಾತಿ- ನಡೆಯುತ್ತಾನೆ, ಕರೋತಿ - ಕೆಲಸಮಾಡುತ್ತಾನೆ॥೫೪॥ಸಃ-ಆಪುರಂಜನನು, ವಿಷೂಚೀ-ಸಮನ್ವಿತಃ-ವಿಷೂಚೀನ (ಶರೀರವೆಲ್ಲವನ್ನೂ ವ್ಯಾಪಿಸುವವನನ್ನು) ನೆಂಬಮಿತ್ರನೊಡನೆ, ಸಮನ್ವಿತಃ-ಕೂಡಿಕೊಂಡು ಯರ್ಹಿ - ಯಾವಾಗ,ಅಂತಃ ಪುರಗತಃ-ರಾಣಿವಾಸವನ್ನು ಹೊಗುವನೋ, ತದಾ-ಆಗ, ಜಾಯಾ...ವಂ. ಜಾಯಾ -ಹೆಂಡತಿ(ಬುದ್ಧಿ)ಆತ್ಮಜ-ಮಕ್ಕಳು (ಇಂ

---

ಪಡುಗಡೆಯಲ್ಲಿ ಆಸುರಿ, ನಿರ್ಋತಿ ಯೆಂಬ ಎರಡುಬಾಗಿಲುಂಟು. ಪುರಂಜನನು ದುರ್ಮದನೆಂಬ ಮಿತ್ರನೊಡಗೂಡಿ ಆ ಪುರದ್ವಾರದಿಂದ ಗ್ರಾಮಕದೇಶಕ್ಕೆ ತೆರಳುವನು ॥೫೨॥ ಈ ಬಾಗಿಲುಗಳಲ್ಲಿ ಎರಡುಬಾಗಿಲುಮಾತ್ರ ತೆರೆದಿರುವುದಿಲ್ಲ. ಈ ನಗರದಲ್ಲಿ ನಿರ್ವಾಕ್ (ರಂಧ್ರವಿಲ್ಲದುದು) ಪೇಶಸ್ಕೃತ್ (ರೇಷ್ಮೆ ಹುಳ) ಎಂಬಿಬ್ಬರುಕುರುಡರಿರುವರು. ರಾಜನು ಆ ಕುರುಡರಿಂದೊಡಗೂಡಿ ಈ ಬಾಗಿಲುಗಳಿಂದ ಸಂಚಾರವನ್ನೂ ಕಾರ್ಯಗಳನ್ನೂ ಮಾಡುತ್ತಾನೆ ॥೫೪॥ ಆ ರಾಜನು ವಿಷೂಚೀನನೆಂಬ ಮಿತ್ರನೊಡಗೂಡಿ ಯಾವಾಗ ರಾಣಿವಾಸವನ್ನು ಸೇರುವನೋ ಆಗ ಹೆಂಡಿರು ಮಕ್ಕಳ ಬೇಳವೆಗೊಳಗಾಗಿ ಒಮ್ಮೆ ಮದಗೊ

---

ಗುದದ್ವಾರದಿಂದ ಮಲವಿಸರ್ಜನೆಯನ್ನು ಮಾಡುವನು.ಪುರೀಷ - ಮಲವನ್ನು ಹೊರಡಿಸುವುದುಅದರಿಂದ ಗುದಕ್ಕೆ ನಿರ್ಋತಿಯೆಂದು ಹೆಸರು॥೫೩॥ಪಾದಪಾಣಿ (ಕೈಕಾಲು) ಗಳೇ ಎರಡು ತೆರೆಯದ ಬಾಗಿಲುಗಳು. ಜೀವನು ಪಾದದಿಂದ ಗಮನವನ್ನೂ, ಪಾಣಿಯಿಂದ ಕಾರ್ಯಗಳನ್ನೂ ಮಾಡುತ್ತಾನೆ ॥೫೪॥ ಜೀವನು ಸರ್ವಶರೀರವ್ಯಾಪಿಯಾದ ಮನಸ್ಸಿನಿಂದೊಡಗೂಡಿ ಯಾವಾಗ ಹೃದಯವನ್ನು ಹೊಕ್ಕು ಬುದ್ಧಿಯೊಡನೆ ಸೇರು

ಷೋದ್ಭವಂ ॥೫೫॥ ಏವಂ ಕರ್ಮಸು ಸಂಸಕ್ತಃ ಕಾಮಾತ್ಮಾ ವಂಚಿತೋಽಬುಧಃ । ಮಹಿಷೀ ಯದ್ಯದೀಹೇತ ತತ್ತದೇವಾಽನ್ವವರ್ತತ ॥೫೬॥ ಕ್ವಚಿತ್ಪಿಬಂತ್ಯಾಂ ಪಿಬತಿ ಮದಿರಾಂ ಮದವಿಹ್ವಲಃ । ಅಶ್ನಂತ್ಯಾಂ ಕ್ವಚಿದಶ್ನಾತಿ ಜಕ್ಷತ್ಯಾಂ ಸಹಜಕ್ಷತಿ ॥೫೭॥ ಕ್ವಚಿದ್ಗಾಯತಿ ಗಾಯಂತ್ಯಾಂ ರುದಂತ್ಯಾಂ ರುದತಿ ಕ್ವಚಿತ್ । ಕ್ವಚಿದ್ಧಸಂತ್ಯಾಂ ಹಸತಿ ಜಲ್ಪಂತ್ಯಾಮನುಜಲ್ಪತಿ ॥೫೮॥

---

ದ್ರಿಯವೃತ್ತಿಗಳು) ಇವರಿಂದ, ಉದ್ಭವಂ - ಉಂಟಾದ, ಮೋಹಂ - ಅಜ್ಞಾನ (ತಮೋಗುಣಕಾರ್ಯ) ಪ್ರಸಾದ - ಚಿತ್ತಶುದ್ಧಿ (ಸತ್ವಗುಣಕಾರ್ಯ) ಹರ್ಷಂವಾ-ಸಂತೋಷ (ರಜೋಗುಣಕಾರ್ಯ) ಯಾವುದಾದರೊಂದನ್ನು, ಯಾತಿ - ಹೊಂದುತ್ತಾನೆ ॥೫೫॥ ಅಬುಧಃ - ಅಜ್ಞಾನಿಯಾದ, ಕಾಮಾತ್ಮಾ - ಕಾಮಪರವಶವಾದಮನಸ್ಸುಳ್ಳ, ಕರ್ಮಸು - ಕಾಮಸಾಧನಗಳಲ್ಲಿ, ಆಸಕ್ತಃ - ಲಂಪಟನಾದುದರಿಂದಲೇ, ವಂಚಿತಃ - ದೈವದಿಂದವಂಚಿತನಾದರಾಜನು, ಏವಂ - ಇಂತು, ಮಹಿಷೀ - ರಾಣಿಯು, ಯದ್ಯತ್ - ಯಾವಯಾವುದನ್ನು, ಈಹೇತ - ಬಯಸುವಳೋ, ತತ್ತದೇವ - ಅದನ್ನೇ, ಅನ್ವವರ್ತತ-ನಡೆಯಿಸುತ್ತಿದ್ದನು ॥೫೬॥ ಆರಾಣಿಯು, ಕ್ವಚಿತ್ - ಒಮ್ಮೆ, ಮದಿರಾಂ - ಮದ್ಯವನ್ನು, ಪಿಬಂತ್ಯಾಂ - ಕುಡಿದಲ್ಲಿ, ಮದವಿಹ್ವಲಃ - ಮದಗೊಂಡು, ಪಿಬತಿ - ತಾನೂಕುಡಿಯುತ್ತಾನೆ, ಅಶ್ನಂತ್ಯಾಂ - ಆಕೆಯುತಿಂದಲ್ಲಿ, ಅಶ್ನಾತಿ - ತಿನ್ನುತ್ತಾನೆ, ಕ್ವಚಿತ್ - ಒಮ್ಮೆ, ಜಕ್ಷತ್ಯಾಂ - ಅಗೆದಲ್ಲಿ, ಜಕ್ಷತಿ - ಅಗೆಯುತ್ತಾನೆ ॥೫೭॥

ಕ್ವಚಿತ್ - ಒಮ್ಮೆ, ಗಾಯಂತ್ಯಾಂ - ಹಾಡುವಾಗ, ಗಾಯತಿ - ಹಾಡುವನು, ಕ್ವಚಿತ್ - ಒಮ್ಮೆ ರುದಂತ್ಯಾಂ - ಅಳುವಾಗ, ರುದತಿ - ಅಳುತ್ತಾನೆ, ಕ್ವಚಿತ್ - ಒಮ್ಮೆ, ಹಸಂತ್ಯಾಂ - ನಕ್ಕರೆ, ಹಸತಿ - ನಗುವನು, ಜಲ್ಪಂತ್ಯಾಂ - ನುಡಿದರೆ, ಅನುಜಲ್ಪತಿ - ಕೂಡಲೆ ನುಡಿಯುವನು ॥೫೮॥ ಕ್ವಚಿತ್ - ಒಮ್ಮೆ, ಧಾವಂತ್ಯಾಂ - ಓಡಿದರೆ, ಧಾವತಿ - ಓಡುವನು, ತಿಷ್ಠಂತ್ಯಾಂ-ನಿಂತರೆ, ಅನುತಿಷ್ಠತಿ- ನಿಲ್ಲುವನು,

---

ಳುತ್ತಲೂ ಮತ್ತೊಮ್ಮೆ ನಿರ್ಮಲಚಿತ್ತನಾಗುತ್ತಲೂ, ಇನ್ನೊಮ್ಮೆ ಸಂತೋಷದಿಂದಹಿಗ್ಗುತ್ತಲೂ ಇರುವನು ॥೫೫॥ ಇಂತು ಆರಾಜನು ಕರ್ಮಾಸಕ್ತನಾಗಿ ಕಾಮಗಳನ್ನು ಬಯಸುತ್ತಾ ಕಾಮಸಾಧನಗಳನ್ನು ಅರಸುತ್ತಾ ದೈವದಿಂದ ವಂಚಿತನಾಗಿ ವಿವೇಕವಿಲ್ಲದೆ ಹೆಂಡತಿಯ ಇಚ್ಛಾನುಸಾರ ಕೆಲಸಗಳನ್ನು ಮಾಡತೊಡಗಿದನು ॥೫೬॥ ಆಕೆಯು ಮದ್ಯವನ್ನು ಕುಡಿದಾಗ ತಾನು ಕುಡಿಯುತ್ತಾ, ಆಕೆಯು ಉಂಡಾಗ ತಾನು ಉಣ್ಣುತ್ತಾ, ಆಕೆಯು ತಿಂದಾಗ ತಾನು ತಿನ್ನುತ್ತಿದ್ದನು ॥೫೭॥ ಆಕೆಯು ಹಾಡಿದಾಗ ತಾನು ಹಾಡುವನು. ಆಕೆಯು ಅತ್ತಾಗ ಅಳುವನು. ಆಕೆಯು ನಕ್ಕಾಗ ತಾನೂ ನಗುವನು. ಆಕೆಯು ಮಾತಾಡಿದಾಗ ತಾನೂ ಮಾತಾಡುವನು ॥ ೫೮ ॥ ಆಕೆಯು ಓಡಿದಾಗ ತಾನೂ ಓಡುವನು. ಆಕೆಯು ನಿಂತಾಗ ತಾನೂ ನಿಲ್ಲುವನು. ಆಕೆಯು ಮಲಗಿದಾಗ ತಾನೂ ಮಲಗುವನು. ಆಕೆಯು

---

ವನೋ, ಆಗ ಬುದ್ಧಿಗೂ, ಇಂದ್ರಿಯವೃತ್ತಿಗಳಿಗೂ ಅಧೀನನಾಗಿ, ತಮಸ್ಸತ್ವ ರಜಃಕಾರ್ಯಗಳಾದ ಮೋಹ, ಪ್ರಸಾದ, ಸಂತೋಷಗಳನ್ನು ಪಡೆಯುವನು ॥೫೫॥ ಇಂತು ಕರ್ಮಗಳಿಗೊಳಗಾಗಿ ಕಾಮಪರವಶನಾಗಿ ಬುದ್ಧಿಯು ಬಯಸಿದಂತೆ ಮಾಡತೊಡಗುವನು ॥ ೫೬ ॥ ಬುದ್ಧಿಯಲ್ಲಿ ಕುಡಿಯಬೇಕೆಂಬ ಬಯಕೆಯುಂಟಾದಾಗ ಮದವಶನಾಗಿ ಕುಡಿಯುವನು. ಉಣ್ಣಬೇಕೆಂದೆಳಸಿದಾಗ ಉಣ್ಣುವನು. ತಿನ್ನಬೇಕೆನ್ನುವಾಗ ತಿನ್ನುವನು ॥೫೭॥

ಕ್ವಚಿದ್ಧಾವತಿ ಧಾವಂತ್ಯಾಂ ತಿಷ್ಠಂತ್ಯಾಮನುತಿಷ್ಠತಿ । ಅನುಶೇತೇ
ಶಯಾನಾಯಾಮನ್ವಾಸ್ತೇ ಕ್ವಚಿದಾಸನೀಂ ॥೧೯॥ * ಕ್ವಚಿಚ್ಛೃಣೋತಿ
ಶೃಣ್ವಂತ್ಯಾಂ ಪಶ್ಯಂತ್ಯಾಮನುಪಶ್ಯತಿ। ಕ್ವಚಿಜ್ಜಿಘ್ರತಿ ಜಿಘ್ರಂತ್ಯಾಂ ಸ್ಪೃ
ಶಂತ್ಯಾಂ ಸ್ಪೃಶತಿ ಕ್ವಚಿತ್ ॥೨೦॥ ಕ್ವಚಿಚ್ಛ ಶೋಚತೀಂ ಜಾಯಾಮನು
ಶೋಚತಿ ದೀನವತ್। ಅನುಹೃಷ್ಯತಿ ಹೃಷ್ಯಂತ್ಯಾಂ ಮುದಿತಾಮನುಮೋ
ದತೇ॥೨೧॥ ವಿಪ್ರಲಬ್ಧೋ ಮಹಿಷ್ಯೈವಂ ಸರ್ವಪ್ರಕೃತಿವಂಚಿತಃ । ನೇಚ್ಛ
ನ್ನನುಕರೋತ್ಯಜ್ಞಃ ಕ್ಲೈಬ್ಯಾತ್ಕ್ರೀಡಾಮೃಗೋ ಯಥಾ ॥೨೨॥

— ಇತಿ ಪಂಚ ವಿಂಶೋಧ್ಯಾಯಃ —

ಶಯಾನಾಯಾಂ - ಮಲಗಿದರೆ, ಅನುಶೇತೇ - ಮಲಗುವನು, ಕ್ವಚಿತ್ - ಒಮ್ಮೆ, ಆಸನೀಂ - ಕುಳಿತ
ರೆ, ಅನ್ವಾಸ್ತೇ - ಕುಳಿತುಕೊಳ್ಳುವನು ॥೧೯॥ ಕ್ವಚಿತ್ - ಒಮ್ಮೆ, ಶೃಣ್ವಂತ್ಯಾಂ - ಕೇಳಿದರೆ. ಶೃಣೋ
ತಿ - ಕೇಳುವನು, ಪಶ್ಯಂತ್ಯಾಂ - ನೋಡಿದರೆ, ಅನುಪಶ್ಯತಿ - ನೋಡುವನು, ಕ್ವಚಿತ್ - ಒಮ್ಮೆ, ಜಿಘ್ರಂ
ತ್ಯಾಂ - ಮೂಸಿನೋಡಿದರೆ, ಜಿಘ್ರತಿ - ಮೂಸಿನೋಡುತ್ತಾನೆ, ಸ್ಪೃಶಂತ್ಯಾಂ - ತೊಟ್ಟರೆ, ಸ್ಪೃಶತಿ -
ತೊಡುವನು ॥೨೦॥ ಕ್ವಚಿಚ್ಛ - ಮತ್ತೊಮ್ಮೆ, ಶೋಚತೀಂ - ದುಃಖಿಸುವ, ಜಾಯಾಂಅನು - ಹೆಂಡತಿಯ
ನ್ನು ಅನುಸರಿಸಿ, ದೀನವತ್ - ದೀನನಂತೆ, ಶೋಚತಿ - ದುಃಖಿಸುವನು, ಹೃಷ್ಯಂತ್ಯಾಂ - ಸಂತೋಷಿಸಿ
ದಾಗ, ಅನುಹೃಷ್ಯತಿ - ಸಂತೋಷಿಸುತ್ತಾನೆ, ಮುದಿತಾಮನು - ಮೋದಗೊಂಡಾಗ, ಮೋದತೇ ಹರ್ಷ
ಗೊಳ್ಳುವನು ॥೨೧॥ ಏವಂ - ಇಂತು, ಮಹಿಷ್ಯಾ - ಹೆಂಡತಿಯಿಂದ, ವಿಪ್ರಲಬ್ಧಃ - ಮರುಳುಗೊಳಿಸಲ್ಪಟ್ಟ
ವನಾಗಿ, ಸರ್ವ....ತಃ - ಎಲ್ಲಾ ಸ್ವಭಾವಗಳಿಂದಲೂ, ವಂಚಿತನಾಗಿ, ಅಜ್ಞಃ-ಅಜ್ಞಾನಿಯಾದ ರಾಜನು, ನೇ
ಚ್ಛನ್ನಪಿ - ಬಯಸದಿದ್ದರೂ, ಕ್ಲೈಬ್ಯಾತ್-ಪರಾಧೀನತೆಯಿಂದ, ಕ್ರೀಡಾಮೃಗೋಯಥಾ - ಆಟದ ಮೃ
ಗದಂತೆ, ಅನುಕರೋತಿ - ಅನುಸರಿಸುತ್ತಿರುವನು ॥೨೨॥

— ಪಂಚವಿಂಶಾಧ್ಯಾಯಂ ಸಮಾಪ್ತಂ —

ಕುಳಿತುಕೊಂಡಾಗ ತಾನೂ ಕುಳಿತುಕೊಳ್ಳುವನು ।೧೯॥ ಆಕೆಯು ಕೇಳುವಾಗ ತಾನೂ
ಕೇಳುವನು. ಆಕೆಯು ನೋಡುವಾಗ ತಾನೂ ನೋಡುವನು ಆಕೆಯು ಮೂಸಿನೋಡಿದಾ
ಗ ತಾನೂ ಮೂಸಿನೋಡುವನು. ಆಕೆಯು ಮುಟ್ಟಿದಾಗ ತಾನೂ ಮುಟ್ಟುವನು ॥೨೦॥
ಆಕೆಯು ಮರುಗಿದಾಗ ತಾನೂ ಮರುಗುವನು. ಆಕೆಯು ಹಿಗ್ಗಿದಾಗ ತಾನೂ ಹಿಗ್ಗುವನು.
ಆಕೆಯು ಸಂತೋಷಿಸಿದಾಗ ತಾನೂ ಹರ್ಷಿಸುವನು ॥೨೧॥ ಇಂತು ಆ ರಾಜನು ಹೆಂಡತಿ
ಯು ಬೇಳವೆಗೊಳಗಾಗಿ ತನ್ನ ಸ್ವಭಾವವನ್ನುಳಿದು, ವಿವೇಕವಿಲ್ಲದೆ ತನಗಿಷ್ಟವಿಲ್ಲದಿದ್ದರೂ
ಕ್ರೀಡಾಮೃಗದಂತೆ ಆಕೆಯು ಆಡಿಸಿದಂತೆ ಆಡುತ್ತಿದ್ದನು,ಎಂದು ನಾರದಮುನಿಯು ಪ್ರಾಚೀ
ನಬರ್ಹಿಗೆ ಹೇಳುತಿದ್ದನೆಂಬಲ್ಲಿಗೆ ಭಾಗವತ ಚಕೋರಚಂದ್ರಿಕೆಯೊಳ್

—ಇಪ್ಪತ್ತೈದನೆಯ ಅಧ್ಯಾಯಂ ಮುಗಿದುದು—

ಗೂ॥ ಬುದ್ಧಿವೃತ್ತಿಗಳು ಪ್ರಸರಿಸಿದ ಹಾಗೆಲ್ಲಾ ಜೀವನು ಅವುಗಳನ್ನು ಅನುಸರಿಸುವನೆಂದು ಭಾವವು.
* ಈ ಶ್ಲೋಕವು ವೀರರಾಘವಾಚಾರ್ಯರವರ ಮತದಲ್ಲಿಲ್ಲ.

# ಓಂನಮಃ ಪರಮಾತ್ಮನೇ

## — ಅಥಷಡ್ವಿಂಶೋಽಧ್ಯಾಯಃ —

ಶ್ರೀನಾರದಃ ॥ ಸಏಕದಾ ಮಹೇಷ್ವಾಸೋ ರಥಂ ಪಂಚಾಶ್ವ ಮಾಶುಗಂ ।
ದ್ವೀಷಂ ದ್ವಿಚಕ್ರ ಮೇಕಾಕ್ಷಂ ತ್ರಿವೇಣುಂ ಪಂಚಬಂಧುರಂ ॥ ೧ ॥

---

## — ಷಡ್ವಿಂಶಾಧ್ಯಾಯಂ —

ಕಂದ|| ಜೀವಂ ಜಾಗರಣ ಸ್ವ । ಪ್ನಾವಸ್ಥೆಗಳೆಂಬ ಬೇಟೆಯಾಟದೆ ಮತಿಸ ।
ಸದ್ಭಾವವನುಳಿದೀ ಸಂಸೃತಿ । ದಾವದೆ ಸಂಚರಿಪ ಪರಿಯ ನೊರೆದಪುದೀಗಳ್ ।

ನಾರದಮುನಿಯು ಹೇಳುತ್ತಾನೆ—ಸಃ - ಆ ಪುರಂಜನನು, ಏಕದಾ - ಒಮ್ಮೆ, ಮಹೇಷ್ವಾಸಃ - ದೊಡ್ಡ ಬಿಲ್ಲನ್ನು ಹಿಡಿದು (ಕರ್ತೃತ್ವಭೋಕ್ತೃತ್ವಾದಿಗಳಲ್ಲಿ ಅಭಿನಿವೇಶವುಳ್ಳವನಾಗಿ) ಪಂಚಾಶ್ವಂ - ಐದು ಕುದುರೆಗಳನ್ನು ಕಟ್ಟಿದ (ಐದು ಜ್ಞಾನೇಂದ್ರಿಯಗಳು) ಆಶುಗಂ - ಬೇಗ ತೆರಳುವ, ದ್ವೀಷಂ - ಎರಡು ನೊಗಗಳುಳ್ಳ (ಅಹಂಕಾರ ಮಮಕಾರಗಳು) ದ್ವಿಚಕ್ರಂ - ಎರಡು ಚಕ್ರಗಳುಳ್ಳ (ಪುಣ್ಯ ಪಾಪಗಳು) ಏಕಾಕ್ಷಂ-ಒಂದು ಅಚ್ಚುಳ್ಳ, (ಪ್ರಧಾನ) ತ್ರಿವೇಣುಂ - ಮೂರುಧ್ವಜಗಳುಳ್ಳ, (ಸತ್ವ ರಜಸ್ತಮಸ್ಸುಗಳು) ಪಂಚಬಂಧುರಂ - ಐದು ಕಟ್ಟುಗಳುಳ್ಳ (ಪಂಚಪ್ರಾಣಗಳು) ॥ ೧ ॥ ಏಕರಶ್ಮ್ಯೇಕದಮನಂ - ಒಂ

---

## — ಇಪ್ಪತ್ತಾರನೆಯ ಅಧ್ಯಾಯ —

## — ಪುರಂಜನ ರಾಜನ ಮೃಗಯಾವಿಹಾರ —

ಅನಂತರವಲ್ಲಿ ನಾರದ ಮುನಿಯು ಹೇಳುತ್ತಾನೆ. ಅಯ್ಯಾ ಪ್ರಾಚೀನ ಬರ್ಹಿಯೇ ! ಕೇಳು. ಆ ಪುರಂಜನರಾಜನು ಒಮ್ಮೆ ದೊಡ್ಡಬಿಲ್ಲನ್ನು ಹಿಡಿದು, ಐದು ಕುದುರೆಗಳಿಂದಲೂ, ಎರಡು ನೊಗಗಳಿಂದಲೂ, ಎರಡುಗಾಲಿಗಳಿಂದಲೂ, ಒಂದು ಅಚ್ಚಿನಿಂದಲೂ, ಮೂರು ಧ್ವಜಗಳಿಂದಲೂ, ಐದು ಕಟ್ಟುಗಳಿಂದಲೂ ಒಂದೇ ಹಗ್ಗವನ್ನು ಹಿಡಿದ ಒಬ್ಬ ಸಾರಥಿಯಿಂದಲೂ, ಒಂದು ಸಾರಥಿಸ್ಥಾನದಿಂದಲೂ, ಎರಡು ಯುಗಸ್ಥಾನಗಳಿಂದಲೂ, ಐದು ಆಯುಧಗಳಿಂದಲೂ, ಏಳು ಆವರಣಗಳಿಂದಲೂ ಒಡಗೂಡಿ, ಐದು ಬಗೆಗಳಾದ

---

ಗೂಢಾರ್ಥ॥ ಅಯ್ಯಾ ರಾಜನೆ! ಪೂರ್ವಾಧ್ಯಾಯದಲ್ಲಿ ಜೀವನು ಉಪಾಧಿಕೃತವಾದ ಸುಷುಪ್ತ್ಯವಸ್ಥೆಯನ್ನೂ, ಜಾಗ್ರದವಸ್ಥೆಯನ್ನು ಅನುಭವಿಸುವ ಸಂಗತಿಯನ್ನು ತಿಳುಹಿದೆನಷ್ಟೆ. ಈಗ ಸ್ವಪ್ನಾವಸ್ಥೆಯನ್ನು ವಿವರಿಸುವೆನು ಕೇಳು. ಜೀವನು ಸುಷುಪ್ತಿಯನ್ನುಳಿದುಹಿಂದಿರುಗಿ ಸ್ವಪ್ನಾವಸ್ಥೆಗೆರಗಿದ ಕೂಡಲೇ ಕರ್ತೃತ್ವ ಭೋಕ್ತೃತ್ವಗಳಿಗೊಳಗಾಗುವನು. ಆಸ್ವಪ್ನದೃಷ್ಟವಾದ ಜೀವನ ಪುಣ್ಯಪಾಪಾನುಸಾರವಾಗಿ ಒಂದು ಶರೀರವೊದಗುವುದು.ಇದೇಜೀವನೇರುವ ರಥವು ತ್ವಕ್,ಚಕ್ಷು, ಶ್ರೋತ್ರಜಿಹ್ವಾಘ್ರಾಣಗಳೇ ಐದು ಕುದುರೆಗಳು (ನಾನು,ನನ್ನದು) ಎಂಬ ಅಹಂಕಾರಮಮಕಾರಗಳೇ ಎರಡು ನೊಗಗಳು. ಪುಣ್ಯಪಾಪಗಳೇ ಎರಡು ಚಕ್ರಗಳು.ಮೂಲ ಪ್ರಕೃತಿಯೇ ಅಚ್ಚು. ಸತ್ವ ರಜಸ್ತಮಸ್ಸುಗಳೇ ಮೂರುಧ್ವಜಗಳು ಪ್ರಾಣ, ಅಪಾನ, ಸಮಾನ, ವ್ಯಾನ, ಉದಾನಗಳೆಂಬ ಪ್ರಾಣಗಳೇ ಐದು ಕಟ್ಟುಗಳು ॥೧॥ ಮನಸ್ಸೇ

*ಏಕರಶ್ಮ್ಯೇಕದ ಮನ ಮೇಕನೀಡಂ ದ್ವಿಕೂಬರಂ। ಪಂಚಪ್ರಹರಣಂ ಸಪ್ತ
ವರೂಥಂ ಪಂಚವಿಕ್ರಮಂ ॥೨॥ ಹೈಮೋಪಸ್ಕರ ಮಾರುಹ್ಯ ಸ್ವರ್ಣವರ್ಮಾ
ಕ್ಷಯೇಷುಧಿಃ । ಏಕಾದಶ ಚಮೂನಾಥಃ ಪಂಚಪ್ರಸ್ಥ ಮಗಾದ್ವನಂ ॥೩॥
ಚಚಾರ ಮೃಗಯಾಂ ತತ್ರ ದೃಪ್ತ ಆತ್ತೇಷುಕಾರ್ಮುಕಃ। ವಿಹಾಯ ಜಾಯಾ

ದು ಕಗ್ಗ ಒಬ್ಬ ಸಾರಥಿಯೂ ಉಳ್ಳ (ಮನಸ್ಸು, ಬುದ್ಧಿ) ಏಕನೀಡಂ - ಒಂದು ಸಾರಥಿ ಸ್ಥಾನವುಳ್ಳ, (ಹೃದಯ) ದ್ವಿಕೂಬರಂ-ಎರಡು ನೊಗವನ್ನು ಬಿಗಿಯುವ ಸ್ಥಾನಗಳುಳ್ಳ (ಶೋಕಮೋಹಗಳು) ಪಂಚ ಪ್ರಹರಣಂ - ಐದು ಆಯುಧಗಳುಳ್ಳ (ಶಬ್ದಾದಿ ವಿಷಯಗಳು) ಸಪ್ತವರೂಥಂ - ಏಳು ಆವರಣಗಳುಳ್ಳ (ಸಪ್ತಧಾತುಗಳು) ಪಂಚವಿಕ್ರಮಂ - ಐದು ಗಮನಗಳುಳ್ಳ (ಐದು ಕರ್ಮೇಂದ್ರಿಯಗಳು) ॥೨॥ ಹೇಮೋ ಪಸ್ಕರ - ಚಿನ್ನದಲಂಕಾರವುಳ್ಳ (ಚಿನ್ನದ ಒಡವೆಗಳು) ರಥಂ - ತೇರನ್ನು [ಶರೀರ] ಆರುಹ್ಯ - ಏರಿ, ಸ್ವ ರ್ಣವರ್ಮಾ - ಚಿನ್ನದ ಕವಚವನ್ನು ತೊಟ್ಟು [ರಜೋಗುಣ] ಅಕ್ಷಯೇಷುಧಿಃ ನಾಶರಹಿತಗಳಾದ ಬತ್ತ ಳಿಕೆಗಳುಳ್ಳವನಾಗಿ [ಅನೇಕ ಕರ್ಮವಾಸನೆಗಳುಳ್ಳ ಅಹಂಕಾರೋಪಾಧಿ] ಏಕಾ....ಥಃ - ಹನ್ನೊಂದನೆಯ ಸೇನಾಪತಿಯುಳ್ಳವನಾಗಿ [ಮನಸ್ಸು] ಪಂಚಪ್ರಸ್ಥಂ - ಪಂಚಪ್ರಸ್ಥವೆಂಬ (ವಿಷಯಗಳು) ವನಂ - ಕಾ ಡಿಗೆ (ವಿಷಯ ಸ್ಥಾನಕ್ಕೆ) ಅಗಾತ್ - ಹೋದನು ॥೩॥ ತತ್ರ - ಅಲ್ಲಿ, ದೃಪ್ತಃ- ಗರ್ವಿತನಾಗಿ, ಆತ್ತೇ .. ಕಃ - ಬಿಲ್ಲು ಬಾಣಗಳನ್ನು ಧರಿಸಿ (ರಾಗಾದಿಗಳು, ಭೋಗಾಭಿನಿವೇಶ] ಅತದರ್ಹಾಂ-ಬಿಡುವುದಕ್ಕೆ ಅರ್ಹ

ಗತಿಗಳಿಂದ ಶೀಘ್ರವಾಗಿ ತೆರಳುವ ಸ್ವರ್ಣಾಲಂಕಾರ ಶೋಭಿತವಾದ ಒಂದು ತೇರನ್ನೇರಿ, ಅಕ್ಷಯಗಳಾದ ಬತ್ತಳಿಕೆಗಳನ್ನು ಧರಿಸಿ, ಹತ್ತು ಸೈನ್ಯಗಳಿಗೆ ಅಧ್ಯಕ್ಷನಾದ ಸರ್ವಸೈನ್ಯಾಧಿಪತಿಯಿಂದೊಡಗೂಡಿ, ಬೇಟೆಯಾಡುವುದಕ್ಕಾಗಿ ಪಂಚಪ್ರಸ್ಥವೆಂಬ ಕಾಡಿಗೆ ತೆರಳಿದನು ॥೧-೩॥ ಅಲ್ಲಿ ಮದಿಸಿದವನಾಗಿ ಬಿಲ್ಲುಬಾಣಗಳನ್ನು ಹಿಡಿದು ಬಿಡಲಾರದಂತಹ ಹೆಂಡತಿ

ಹಗ್ಗವು. ಬುದ್ಧಿಯೇ ಸಾರಥಿಯು, ಹೃದಯವೇ ರಥಿಕನು ಕುಳಿತುಕೊಳ್ಳುವ ಸ್ಥಳವು. ಶೋಕಮೋಹಗಳೇ ಎರಡು ನೊಗಗಳನ್ನು ಕಟ್ಟತಕ್ಕ ಸ್ಥಳಗಳು. ಶಬ್ದ ಸ್ಪರ್ಶ, ರೂಪ, ರಸ, ಗಂಧಗಳೇ ಐದು ಆಯುಧಗಳು. ಚರ್ಮ, ರಕ್ತ ಮೊದಲಾದ ಸಪ್ತಧಾತುಗಳೇ ಏಳಾವರಣಗಳು. ವಾಕ್, ಪಾಣಿ, ಪಾದ, ಪಾಯು, ಉಪಸ್ಥಗಳೇ ಐದು ಗತಿಗಳು ॥೨॥ ಚಿನ್ನದೊಡವೆಗಳೇ ಸ್ವರ್ಣಾಲಂಕಾರವು. ರಜೋಗುಣದಿಂದ ಕೂಡಿದ ಅನಾದಿ ಕರ್ಮವಾಸನಾ ಹಂಕಾರೋಪಾಧಿಯೇ ಬತ್ತಳಿಕೆಯು. ದಶೇಂದ್ರಿಯಾಧ್ಯಕ್ಷವಾದ ಮನಸ್ಸೇ ಸೇನಾಪತಿಯು. ಶಬ್ದಾದಿವಿಷಯಗಳೆಂಬ ತತ್ವಗಳಿಂದ ಕೂಡಿದ ಭೋಗ್ಯವಸ್ತುಗಳೆ ಅರಣ್ಯವು ॥೩॥ ಜೀವನಿಂತಹ ಸ್ವಪ್ನಶರೀರಾಭಿಮಾನಿಯಾಗಿ, ಮದವೇರಿ, ಪೂರ್ವ ಕರ್ಮವಾಸನೆಗಳಿಂದ ಕರ್ತೃತ್ವಾದಿಗಳಲ್ಲಿ ಅಭಿನಿವೇಶವುಳ್ಳವನಾಗಿ ತನ್ನಿಷ್ಟಾನುಸಾರ ವಿಷಯಗಳು ದೊರೆಯುದುದರಿಂದ ದುಃಖಿತನಾಗಿ ಸಾತ್ವಿಕ ಬುದ್ಧಿಯನ್ನುಳಿದು

* ವಿ. ಶ್ಲೋ॥ ಬುದ್ಧಿಂತು ಸಾರಥಿಂ ವಿದ್ಧಿ ಮನಃ ಪಗ್ರಹ ಮೇವಚ । ಪ್ರಾಣಾ ಬಂಧುರ ಮುದ್ದಿಷ್ಟಾ ಗುಣಾ ಸ್ಸತ್ವಾದಯೋ ಧ್ವಜಾಃ ॥ ಮೂಲವಾಯು ರಕ್ಷ ಸಂಜ್ಞ ಶ್ಚಕ್ರೇ ದ್ವೇ ಪುಣ್ಯದುಷ್ಕೃತೇ । ಇಂದ್ರಿಯಾಣ್ಯಶ್ವ ಸಂಜ್ಞಾನಿ ಹೃದಯಂ ನೀಡ ಮುಚ್ಯತೇ ॥ ಶೀತೋಷ್ಣ ಲಕ್ಷಣೌ ದ್ವಾತು ಕೂಬರೌ ಶಬ್ದ ಪೂರ್ವಕಂ । ಪಂಚಪ್ರಹರಣಂ ಸಪ್ತತ್ವಗಾದ್ಯಾ ಗುಪ್ತಯ ಸ್ಮೃತಾಃ ॥ ಪೃಥಿವ್ಯಾದ್ಯಾ ವಿಕ್ರಮಾಖ್ಯಾ ದೇಹಾಖ್ಯೋ ರಥ ಉಚ್ಯತೇ ॥ (ಅಧ್ಯಾತ್ಮಯೋಗ)

ಮತದರ್ಹಾಂ ಮೃಗವ್ಯಸನಲಾಲಸಃ ॥ ೪ ॥ ಆಸುರೀಂ ವೃತ್ತಿ ಮಾಶ್ರಿತ್ಯ ಘೋರಾತ್ಮಾ ನಿರನುಗ್ರಹಃ। ನ್ಯಹನ ನ್ನಿಶಿತೈ ರ್ಬಾಣೈ ರ್ವನೇಷು ವನಗೋಚರಾನ್ ॥೫॥ ತೀರ್ಥೇಷು ಪ್ರತಿದೃಷ್ಟೇಷು ರಾಜಾ ಮೇಧ್ಯಾನ್ ಪಶೂನ್ವನೇ । ಯಾವದರ್ಥಮಲಂ ಲುಬ್ಧೋ ಹನ್ಯಾದಿತಿ ನಿಯಮ್ಯತೇ ॥೬॥ ಯ ಏವಂ ಕರ್ಮನಿಯತಂ ವಿದ್ವಾನ್ ಕುರ್ವೀತ ಮಾನವಃ । ಕರ್ಮಣಾ ತೇನ ರಾ

ಳಲ್ಲದ, ಜಾಯಾಂ - ಹೆಂಡತಿಯನ್ನು (ಬುದ್ಧಿ) ವಿಹಾಯ-ತೊರೆದು, ಮೃಗ....ಸಃ- ಬೇಟೆಯಲ್ಲಿ ಆಸಕ್ತನಾಗಿ [ವಿಷಯಾಸಕ್ತಿ] ಮೃಗಯಾಂ - ಬೇಟೆಯನ್ನು, (ವಿಷಯಭೋಗ) ಚಚಾರ- ನಡೆಯಿಸಿದನು ॥೪॥ ಆಸುರೀಂ - ಅಸುರರ, ವೃತ್ತಿಂ - ನಡವಳಿಯನ್ನು, ಆಶ್ರಿತ್ಯ - ಆಶ್ರಯಿಸಿ, ಘೋರಾತ್ಮಾ - ಭಯಂಕರ ಮನಸ್ಕನಾಗಿ, ನಿರನುಗ್ರಹಃ- ನಿರ್ದಯನಾಗಿ, ನಿಶಿತೈಃ ತೀಕ್ಷ್ಣಗಳಾದ, ಬಾಣೈಃ-ಬಾಣಗಳಿಂದ (ರಾಗಾದಿಗಳು) ವನೇಷು - ಕಾಡುಗಳಲ್ಲಿ (ವಿಷಯ ಸ್ಥಾನಗಳು) ವನಗೋಚರಾನ್ - ಮೃಗಗಳನ್ನು (ಪಡೆಯಬೇಕಾದ ವಿಷಯಗಳು) ನ್ಯಹನತ್-ಸಂಹರಿಸಿದನು (ವಶಗೊಳಿಸಿಕೊಂಡನು) ॥೫॥

ಲುಬ್ಧಃ - ಆಶೆಯುಳ್ಳವನಾದಲ್ಲಿ, ಪ್ರತಿದೃಷ್ಟೇಷು - ಮಾಂಸವನ್ನು ವಿಧಿಸಿರುವ, ತೀರ್ಥೇಷು - ಶ್ರಾದ್ಧಗಳಲ್ಲಿ, ರಾಜಾ- ರಾಜನು, ವನೇ -- ಕಾಡಿನಲ್ಲಿ, ಮೇಧ್ಯಾನ್ - ಪರಿಶುದ್ಧಗಳಾದ, ಪಶೂನ್ - ಪಶುಗಳನ್ನು, ಯಾವದರ್ಥಂ - ಬೇಕಾದಷ್ಟುಮಾತ್ರ, ಹನ್ಯಾತ್ -ಕೊಲ್ಲಬೇಕು, ಇತಿ - ಎಂದು, ನಿಯಮ್ಯತೇ- ನಿಯಮಿಸಲ್ಪಟ್ಟಿದೆ ॥೬॥ ರಾಜೇಂದ್ರ - ಎಲೈ ರಾಜನೆ ! ಯಃಮಾನವಃ - ಯಾವಮನುಷ್ಯನು, ಏವಂ- ಇಂತು, ನಿಯತಂ - ನಿಯಮದಿಂದ, ಕರ್ಮ - ಕರ್ಮವನ್ನು, ಕುರ್ವೀತ - ಮಾಡುತ್ತಾನೋ, ತೇನ

ಯನ್ನು ಕೂಡ ಉಳಿದು,ಮೃಗಗಳನ್ನು ಕೊಲ್ಲುವುದಲ್ಲಾಸರಕ್ತನಾಗಿ ಬೇಟೆಯಾಡತೊಡಗಿದನು ॥೪॥ ಆ ಪುರಂಜನರಾಜನು ಧಾರ್ಮಿಕನಾದರೂ ಆಗ ಕೊಂಚವೂ ಕನಿಕರವಿಲ್ಲದೆ ನಿರ್ಘೃಣನಾಗಿ ಅಸುರವೃತ್ತಿಯನ್ನವಲಂಬಿಸಿ, ತೀಕ್ಷ್ಣಗಳಾದ ಬಾಣಗಳಿಂದ ಆ ಕಾಡುಮೃಗಗಳನ್ನೆಲ್ಲಾ ಕೊಲ್ಲುತ್ತಾ ಬಂದನು ॥೫॥ ಬೇಟೆ ಯೆಂಬುದು ರಾಜರಿಗೆ ವಿಹಿತವೇ ಆಗಿರುವುದರಿಂದ ಅದನ್ನು ದೂಷಿಸ ಬಹುದೆ ? ಎಂದರೆ, ಬೇಟೆಯು ರಾಗಪ್ರಾಪ್ತವಾದುದರಿಂದ ರಾಜರಿಗೆ ವಿಧಿವಿಹಿತವಲ್ಲ. ಬೇಟೆಯನ್ನಾಡಬೇಕಾದರೆ ಮಾಂಸಭೋಜನವನ್ನು ಮಾಡಿಸಬೇಕೆಂಬ ವಿಧಿಯುಳ್ಳ ಶ್ರಾದ್ಧಾದಿಕರ್ಮಗಳಿಗಾಗಿ ರಾಜನಾದವನು ಕಾಡಿಗೆ ತೆರಳಿ, ಭಕ್ಷಣಾರ್ಹಗಳಾದ ಪರಿಶುದ್ಧ ಮೃಗಗಳನ್ನು ತನ್ನ ಕೆಲಸಕ್ಕೆ ಉಪಯೋಗಿಸುವಷ್ಟು ಮಾತ್ರ ಕೊಲ್ಲಬೇಕೆಂದು ವಿಧಿಸಲ್ಪಟ್ಟಿರುವುದು. ಆದುದರಿಂದ ಬೇಟೆಯು ಆವಶ್ಯಕವಲ್ಲ. ॥೬॥

ಯಾವಪುರುಷನು ಕರ್ತೃತ್ವಾಭಿಮಾನವಿಲ್ಲದೆ ರಾಗಪ್ರಾಪ್ತವೆಂಬ ನಿಯಮವನ್ನು

ವಿಷಯಗಳನ್ನು ಅರಸುತ್ತಿದ್ದನು ॥೪॥ ಆವಿಷಯ ಸಾನ್ನಿಧ್ಯ ಮಹಿಮೆಯನ್ನೇನೆಂದುಹೇಳಲಿ ? ಕೂಡಲೇ, ಜೀವನಮನಸ್ಸುಕಲ್ಲಾಯಿತು. ಕನಿಕರವು ನಾಶವಾಯಿತು. ರಾಕ್ಷಸ ಸ್ವಭಾವವು ತಲೆಗೇರಿತು. ದಯಾರಸ ಇಂಗಿಹೋಯಿತು. ಕಾಮಕ್ರೋಧಗಳು ಬೆಳೆದುವು. ಕರ್ಮವಾಸನಾ ವಶದಿಂದ ಉಚ್ಚನೀಚಗಳಿಲ್ಲದೇ ವಿಷಯಗಳನ್ನು ಅನುಭವಿಸುತ್ತಾ ಬಂದನು ॥೫॥

ಜೇಂದ್ರ ! ಜ್ಞಾನೇನ ನ ಸ ಲಿಪ್ಯತೇ ॥೭॥ ಅನ್ಯಥಾ ಕರ್ಮ ಕುರ್ವಾಣೋ ಮಾನಾರೂಢೋ ನಿಬಧ್ಯತೇ । ಗುಣಪ್ರವಾಹಪತಿತೋ ನಷ್ಟಪ್ರಜ್ಞೋ ವ್ರಜತ್ಯಧಃ ॥೮॥ ತತ್ರ ನಿರ್ಭಿನ್ನಗಾತ್ರಾಣಾಂ ಚಿತ್ರವಾಜೈಃ ಶಿಲೀಮುಖೈಃ । ವಿಪ್ಲವೋಽಭೂದ್ದುಃಖಿತಾನಾಂ ದುಸ್ಸಹಃ ಕರುಣಾತ್ಮನಾಂ ॥೯॥ ಶಶಾನ್ ವರಾಹಾನ್ ಮಹಿಷಾನ್ ಗವಯಾನ್ ರುರುಶಲ್ಯಕಾನ್ । ಮೇಧ್ಯಾನನ್ಯಾಂಶ್ಚ

ಜ್ಞಾನೇನ - ಆ ಜ್ಞಾನದಿಂದ, ಕರ್ಮದಿಂದ, ಸಃ - ಅವನು, ನಲಿಪ್ಯತೇ - ಲೇಪಿಸಲ್ಪಡುವುದಿಲ್ಲ ॥೭॥ ಅನ್ಯಥಾ - ನಿಯಮವನ್ನುಳಿದು, ಮಾನಾರೂಢಃ - ಕರ್ತೃತ್ವಾಭಿಮಾನವುಳ್ಳವನಾಗಿ, ಕರ್ಮ - ಕರ್ಮವನ್ನು, ಕುರ್ವಾಣಃ - ಮಾಡುವವನು, ನಿಬಧ್ಯತೇ-ಬದ್ಧನಾಗುವನು, ಬಳಿಕ, ಗುಣ..ತಃ-ಸಂಸಾರದಲ್ಲಿ ಬಿದ್ದು, ನಷ್ಟಪ್ರಜ್ಞಃ - ಅವಿವೇಕದಿಂದ, ಅಧಃ - ನರಕದಲ್ಲಿ, ಪತತಿ - ಬೀಳುತ್ತಾನೆ ॥೮॥ ತತ್ರ - ಆ ಕಾಡಿನಲ್ಲಿ, ಚಿತ್ರವಾಜೈಃ - ಚಿತ್ರಗಳಾದ ಗರಿಗಳುಳ್ಳ, ಶಿಲೀಮುಖೈಃ - ಬಾಣಗಳಿಂದ, ನಿರ್ಭಿನ್ನಗಾತ್ರಾಣಾಂ - ಸೀಳಲ್ಪಟ್ಟ ಶರೀರವುಳ್ಳ, ದುಃಖಿತಾನಾಂ - ದುಃಖಗೊಂಡ ಮೃಗಗಳ, ವಿಪ್ಲವಃ - ನಾಶವು, ಕರುಣಾತ್ಮನಾಂ-ದಯಾಳುಗಳಿಗೆ, ದುಸ್ಸಹಃ - ಸಹಿಸಲಾಗದುದು, ಅಭೂತ್-ಆಯಿತು ॥೯॥ ಶಶಾನ್ - ಮೊಲಗಳನ್ನು,

ತಿಳಿದು ಕರ್ಮವನ್ನು ಮಾಡುವನೋ, ಅವನು ಅಂತಹ ಕರ್ಮಜನ್ಯಜ್ಞಾನದಿಂದ ಲಿಪ್ತನಾಗುವದಿಲ್ಲ. ॥೭॥ ಹಾಗಿಲ್ಲದೆ ಯಾವನು ನಿಯಮವನ್ನುಲ್ಲಂಘಿಸಿ, ಕರ್ತೃತ್ವಾಭಿಮಾನದಿಂದ ಅವಿಹಿತಕರ್ಮಗಳನ್ನು ಮಾಡುತ್ತಾನೋ, ಅವನು ಕರ್ಮಬದ್ಧನಾಗುವುದಲ್ಲದೆ ಗುಣಪ್ರವಾಹರೂಪವಾದ ಸಂಸಾರದಲ್ಲಿ ಬಿದ್ದು ನರಕಕ್ಕೂ ಇಳಿಯುವನು ॥ ೮ ॥ ಇದಂತಿರಲಿ. ಮುಂದಣ ಕಥೆಯನ್ನು ಕೇಳು. ಆ ಕಾಡಿನಲ್ಲಿ ಚಿತ್ರಗಳಾದ ಗರಿಗಳುಳ್ಳ ಅವನ ಬಾಣಗಳಿಂದ ತಾರುಮಾರಾಗಿ ಸೀಳಲ್ಪಟ್ಟ ಮೈಯುಳ್ಳ, ಮೃಗಗಳ ಕೊಲೆಯು ದಯಾಳುಗಳಿಗೆ ಅತಿದುಸ್ಸಹವಾಗಿದ್ದಿತು ॥೯॥ ಇಂತಾ ಪುರಂಜನನು ಮೊಲ, ಹಂದಿ, ಕೋಣ, ಗವಯ, ಹುಲ್ಲೆ, ಮುಳ್ಳುಹಂದಿ, ಇನ್ನೂ ಇತರಗಳಾದ ಅನೇಕ ಪರಿಶುದ್ಧ ಮೃಗಗಳನ್ನು ಕೊಂದು ಬಳಲಿದನು ॥೧೦॥ ಬಳಿಕ ಹಸಿವು ಬಾಯಾರಿಕೆಗಳಿಂದ ಕಂಗೆಟ್ಟು, ಬೇಟೆಯನ್ನುಳಿದು,

ದೈವೋಪಪಾದಿತಗಳಾದ ವಿಷಯಗಳನ್ನು ಅನುಭವಿಸುವುದು ಜೀವನಿಗೆ ವಿಹಿತವಾಗಿಯೇ ಇರುವುದರಿಂದ ಇದನ್ನು ದೂಷಿಸುವುದೇತಕ್ಕೆ? ಎಂಬೆಯೇನೊ ? ಜೀವರಿಗೆ ವಿಷಯಭೋಗವೆಂಬುದು ಐಚ್ಛಿಕವೇ ಹೊರತು ವಿಧಿಯಲ್ಲ. ವಿಷಯಗಳನ್ನು ಅನುಭವಿಸಬೇಕಾದವರು ಧರ್ಮವಿರೋಧವಿಲ್ಲದೆ ತಕ್ಕಮಟ್ಟಿಗೆ ಅನುಭವಿಸಬೇಕೇ ಹೊರತು ಸ್ವೇಚ್ಛಾಚಾರಿಗಳಾಗಬಾರದೆಂದು ಇದರ ಮುಖ್ಯತಾತ್ಪರ್ಯವು ॥ ೬ ॥ ಯಾವ ಪುರುಷನು ರಾಗಪ್ರಾಪ್ತವೆಂದು ತಿಳಿದು ಶರೀರಯಾತ್ರೆಗೆ ತಕ್ಕಷ್ಟು ವಿಷಯಗಳನ್ನು ಅನುಭವಿಸುವನೋ, ಅವನು, ಅದರಿಂದುಂಟಾದ ಪಾಪ ಪುಣ್ಯಗಳಿಂದ ಬದ್ಧನಾಗುವುದಿಲ್ಲ ॥೭॥ ಯಾವ ಪುರುಷನು ಹೇಯೋಪಾದೇಯಗಳಿಲ್ಲದೆ ಕಾಮಲಂಪಟನಾಗಿ ವಿಷಯಗಳನ್ನನುಭವಿಸತೊಡಗುವನೋ, ಅವನು ಸಂಸಾರದಲ್ಲಿ ಬಿದ್ದು ನರಕ ಭಾಗಿಯಾಗುವನು. ಅಯ್ಯಾ ರಾಜನೆ! ಪ್ರಕೃತವಿಷಯವನ್ನು ಹೇಳುವೆನು ಕೇಳು. ಆ ಜೀವನು ಅನಾದಿವಾಸನೆಗಳಿಂದ ಪ್ರೋದ್ಬಲಗೊಳಿಸಲ್ಪಟ್ಟ, ಪುಣ್ಯಪಾಪಗಳ ವಶದಿಂದ ವಿಷಯಗಳನ್ನು ಅನುಭವಿಸಿದನು. ಅದು ಭೂತ ದಯೆಯುಳ್ಳ ಜ್ಞಾನಿಗಳಿಗೆ ಅಸಹ್ಯವಾಗಿದ್ದಿತು ॥೯॥ ಇಂತು ಶಬ್ದಾದಿ ವಿಷಯಾ

ವಿವಿಧಾನ್ ವಿನಿಘ್ನನ್ ಶ್ರಮ ಮಧ್ಯಗಾತ್ ॥ ೧೦॥ ತತಃ ಕ್ಷುತ್ತೃಟ್ಪರಿಶ್ರಾಂ
ತೋ ನಿವೃತ್ತೋ ಗೃಹಮೇಯಿವಾನ್ । ಕೃತಸ್ನಾನೋಚಿತಾಹಾರಃ ಸಂವಿ
ವೇಶ ಗತಕ್ಲಮಃ ॥೧೧॥ ಆತ್ಮಾನ ಮರ್ಹಯಾಂಚಕ್ರೇ ಧೂಪಾಲೇಪ ಸ್ರಗಾ
ದಿಭಿಃ । ಸಾಧ್ವಲಂಕೃತ ಸರ್ವಾಂಗೋ ಮಹಿಷ್ಯಾ ಮಾದಧೇ ಮನಃ ॥೧೨॥
ತೃಪ್ತೋಹೃಷ್ಟ ಸ್ಸುದೃಪ್ತಶ್ಚ ಕಂದರ್ಪಾಕೃಷ್ಟಮಾನಸಃ । ನ ವ್ಯಚಷ್ಟ

---

ವರಾಹಾನ್ - ಹಂದಿಗಳನ್ನು, ಮಹಿಷಾನ್ - ಕೋಣಗಳನ್ನು, ಗವಯಾನ್-ಕಾಡಾಕಳುಗಳನ್ನೂ ರುರುಶ ಲ್ಯಕಾನ್ - ಹುಲ್ಲೆ, ಮುಳ್ಳುಹಂದಿಗಳನ್ನೂ, ಮೇಧ್ಯಾನ್ - ಪರಿಶುದ್ಧಗಳಾದ, ವಿವಿಧಾನ್ - ಹಲವು ಬಗೆ ಗಳಾದ, ಅನ್ಯಾಂಶ್ಚ - ಇತರ ಮೃಗಗಳನ್ನೂ, ವಿನಿಘ್ನನ್-ಕೊಲ್ಲುತ್ತಾ, ಶ್ರಮಂ - ಆಯಾಸವನ್ನು, ಅ ಧ್ಯಗಾತ್ - ಹೊಂದಿದನು ॥೧೦॥ ತತಃ - ಬಳಿಕ, ಕ್ಷುತ್ತೃ...ತಃ - ಹಸಿವು ನೀರಡಿಕೆಗಳಿಂದ ಬಳಲಿ, ನಿ ವೃತ್ತಃ - ಹಿಂದಿರುಗಿ, ಗೃಹಂ - ಮನೆಗೆ, ಏಯಿವಾನ್ - ಬಂದು, ಕೃತ...ರಃ - ಸ್ನಾನಭೋಜನಗಳನ್ನು ಮಾಡಿ, ಗತಕ್ಲಮಃ - ಆಯಾಸವನ್ನು ತೀರಿಸಿಕೊಂಡು, ಸಂವಿವೇಶ - ಕುಳಿತುಕೊಂಡನು ॥೧೧॥ ಆತ್ಮಾ ನಂ - ತನ್ನನ್ನು, ಧೂಪಾ...ಭಿಃ - ಧೂಪ, ಗಂಧ, ಮಾಲ್ಯಾದಿಗಳಿಂದ, ಅರ್ಹಯಾಂಚಕ್ರೇ - ಅಲಂಕರಿಸಿ ಕೊಂಡನು, ಸಾಧು - ಚೆನ್ನಾಗಿ, ಅಲಂ...ಗಃ - ಎಲ್ಲಾ ಅಂಗಗಳನ್ನು ಅಲಂಕರಿಸಿಕೊಂಡು, ಮಹಿಷ್ಯಾಂ - ರಾಣಿಯಲ್ಲಿ, ಮನಃ - ಮನಸ್ಸನ್ನು, ಆದಧೇ - ಇಟ್ಟನು ॥೧೨॥ ತೃಪ್ತಃ - ತೃಪ್ತನಾಗಿಯೂ, ಹೃಷ್ಟಃ-

---

ಮನೆಗೆ ಬಂದು ಸ್ನಾನ ಭೋಜನಗಳನ್ನು ನೆರವೇರಿಸಿ, ಆಯಾಸವನ್ನು ತೀರಿಸಿಕೊಂಡು ಶ ಯ್ಯಾಗೃಹಕ್ಕೆ ಹೋದನು ॥೧೧॥ ಅಲ್ಲಿ ಗಂಧ ಪುಷ್ಪ ತಾಂಬೂಲಾದ್ಯುಪ ಭೋಗಗಳನ್ನು ಪ ಡೆದು ವಸ್ತ್ರಾಭರಣಗಳಿಂದಲಂಕೃತನಾಗಿ, ಮಡದಿಯನ್ನು ಸ್ಮರಿಸಿಕೊಂಡನು ॥೧೨॥ ತೃಪ್ತ ನಾಗಿ ಸಂತೋಷದಿಂದ ಮದವೇರಿ ಕಾಮಪೀಡಿತನಾಗಿ, ಮನೆಗೆ ಒಡತಿಯಾಗಿಯೂ ಪ್ರಾಣ ಪ್ರಿಯಳಾಗಿಯೂ ಇರುವ ಪಟ್ಟದ ರಾಣಿಯನ್ನು ಕಾಣದೆ ಕಳವಳಸುತ್ತಾ ರಾಣಿವಾಸದಲ್ಲಿ ರುವ ಸ್ತ್ರೀಯರನ್ನು ಕರೆದು, ದೀನನಂತೆ ಖಿನ್ನನಾಗಿ, ಅಮ್ಮಾ ಸ್ತ್ರೀಯರಿರಾ, ! ಮಹಾರಾಣಿ

---

ಸ್ಪೋಷಣದಿಂದ ಇಂದ್ರಿಯಗಳೆಲ್ಲಾ ಬಳಲಿಬೇಸತ್ತವು ॥೧೦॥ ಬಳಿಕ ಜೀವನು ಸ್ವಪ್ನಗಳಲ್ಲುಂಟಾದ ವಿಷ ಯಗಳಲ್ಲಿ ಅಲೆದಲೆದು ಹಸಿವು ನೀರಡಿಕೆಗಳಿಂದ ಬಳಲಿ ಬೆಂಡಾಗಿ ಮರಳಿ ಜಾಗ್ರದ್ದೇಹದ ಹೃದಯಸ್ಥಾನ ದಲ್ಲಿ ನೆಲಸಿ ವಿಶ್ರಾಂತಿಯನ್ನು ಪಡೆದನು ॥೧೧॥ ಇಲ್ಲಿಯವರೆಗೆ ರಾಜಸ ಬುದ್ಧಿಯ ಕಾರ್ಯವಾದ ಜಾಗ್ರದವ ಸ್ಥೆಯನ್ನೂ, ತಾಮಸಬುದ್ಧಿಯ ಕಾರ್ಯವಾದ ಸ್ವಪ್ನಾವಸ್ಥೆಯನ್ನೂ ವಿವರಿಸಿ, ಈಗ ಪ್ರಣಯಕಲಹದಿಂದ ಕೋಪಗೊಂಡ ಮಡದಿಯನ್ನು ಸಂತೈಸುವ ಕಥಾರೂಪವಾಗಿ ಸಾತ್ವಿಕಬುದ್ಧಿಯು ದುರ್ಲಭವೆಂಬುದನ್ನೂ, ಅದು ದೊರೆಯದ ಕಾಲದಲ್ಲುಂಟಾಗುವ ಪರಿತಾಪವನ್ನೂ, ಬಳಿಕ ಅದನ್ನು ಪಡೆಯುವುದಕ್ಕೆ ಮಾಡುವ ಪ್ರಯತ್ನವನ್ನೂ, ಆಮೇಲೆತಕ್ಕ ಸಲಕರಣಗಳಿಂದ ಅದನ್ನು ಪಡೆಯುವುದನ್ನೂ ವಿವರಿಸಲೆಳಸಿ, ಆಬುದ್ಧಿ ಯನ್ನು ರಾಣಿ ಯೆಂತಲೂ, ಇಂದ್ರಿಯವೃತ್ತಿಗಳನ್ನು ಅಂತಃಪುರ ಸ್ತ್ರೀಯರೆಂತಲೂ ರೂಪಿಸಿ, ಆಕೆಯನ್ನು ಸಂತೈಸುವ ರೀತಿಯು ಬಣ್ಣಿಸಲ್ಪಡುವುದು. ಬಳಿಕ ಜೀವನು ನ್ಯಾಯ್ಯವಿಷಯಾನುಭವದಿಂದ ಸುಖಿತನಾಗಿ ಸಾತ್ವಿಕಬುದ್ಧಿಯ ಕಡೆಗೆ ತಿರುಗಿದನು ॥೧೨॥ ಇಂತು ಮಿಥ್ಯಾಭೋಗಗಳನ್ನನುಭವಿಸಿ ದಣಿದು ಎಚ್ಚತ್ತು ವಿವೇಕಯುಕ್ತವಾದ ಸಾತ್ವಿಕಬುದ್ಧಿಯನ್ನು ಕಾಣದೆ ಅರಸಿದನೆಂದು ಭಾವವು॥

ವರಾರೋಹಾಂ ಗೃಹಿಣೀಂ ಗೃಹಮೇಧಿನೀಂ ॥೧೩॥ ಅಂತಃ ಪುರಸ್ತ್ರಿಯೋಽ ಪೃಚ್ಛ ದ್ವಿಮನಾ ಇವ ವೇದಿಷತ್! । ಅಪಿ ವಃ ಕುಶಲಂ? ರಾಮಾಃ ! ಸೇಶ್ವರೀಣಾಂ ಯಥಾ ಪುರಾ। ನತಥೈ ತರ್ಹಿ ರೋಚಂತೇ ಗೃಹೇಷು ಗೃಹಸಂಪದಃ ॥೧೪॥ ಯದಿ ನಸ್ಯಾ ದ್ಗೃಹೇ ಮಾತಾ ಪತ್ನೀವಾ ಪತಿದೇವತಾ । ವ್ಯಂಗೇ ರಥ ಇವ ಪ್ರಾಜ್ಞಃ ಕೋನಾಮಾಸೀತ ? ದೀನವತ್ ॥೧೫॥ ಕ್ವ ವರ್ತತೇ ? ಸಾ ಲಲನಾ ಮಜ್ಜಂತಂ ವ್ಯಸನಾರ್ಣವೇ । ಯಾ ಮಾ ಮುದ್ಧರತೇ ಪ್ರಜ್ಞಾಂ ದೀಪಯಂತೀ ಪದೇಪದೇ ॥೧೬॥ ರಾಮಾಊಚುಃ ॥ ನರ

---

ಹರ್ಷಗೊಂಡವನಾಗಿಯೂ, ಸುದೃಪ್ತಃ - ಮದಿಸಿದವನಾಗಿಯೂ, ಕಂದ....ಸಃ - ಮನ್ಮಥನಿಗೆ ವಶವಾದ ಮನಸ್ಸುಳ್ಳವನಾಗಿಯೂ ಇರುವರಾಜನು, ಗೃಹಮೇಧಿನೀಂ-ಗೃಹಕಾರ್ಯಸಮರ್ಥಳಾದ, ಗೃಹಿಣೀಂ-ಮನೆಗೊಡತಿಯಾದ, ವರಾರೋಹಾಂ - ಮಡದಿಯನ್ನು, ನವ್ಯಚಷ್ಟ - ಕಾಣಲಿಲ್ಲ ॥೧೩॥ ವೇದಿಷತ್ - ಎಲೈ ಪ್ರಾಚೀನಬರ್ಹಿಯೇ ! ದ್ವಿಮನಾಇವ - ಮನಗುಂದಿದಂತೆ, ಅಂತಃಪುರಸ್ತ್ರಿಯಃ-ರಾಣಿವಾಸದ ಹೆಂಗಸರನ್ನು, ಅಪೃಚ್ಛತ್ - ಬೆಸಗೊಂಡನು, ರಾಮಾಃ - ಅಮ್ಮಾಸ್ತ್ರೀಯರಿರಾ ! ಸೇಶ್ವರೀಣಾಂ - ಒಡತಿಯಿಂದ ಕೂಡಿದ, ವಃ - ನಿಮಗೆ, ಅಪಿಕುಶಲಂ - ಕ್ಷೇಮವೆ ? ಗೃಹೇಷು - ಮನೆಯಲ್ಲಿ, ಗೃಹಸಂಪದಃ - ಸಂಪತ್ತುಗಳು,ಪುರಾಯಥಾ - ಮೊದಲೆಂತಿದ್ದುವೋ, ಏತರ್ಹಿ - ಈಗ, ತಥಾ - ಹಾಗೆ, ನರೋಚಂತೇ-ಶೋಭಿಸುವುದಿಲ್ಲ॥೧೪॥ಗೃಹೇ- ಮನೆಯಲ್ಲಿ, ಮಾತಾ - ತಾಯಿಯಾಗಲಿ,ಪತಿದೇವತಾ-ಪತಿವ್ರತೆಯಾದ, ಪತ್ನೀವಾ-ಹೆಂಡತಿಯಾಗಲಿ, ಯದಿನಸ್ಯಾತ್-ಇಲ್ಲದೇ ಹೋದರೆ, ವ್ಯಂಗೇ-ಅಂಗಹೀನವಾದ, ರಥಇವ-ರಥದಲ್ಲಿಯೋಪಾದಿಯಲ್ಲಿ, ಪ್ರಾಜ್ಞಃ - ತಿಳಿದವನು, ಕೋನಾಮ - ಯಾವನುತಾನೇ, ದೀನವತ - ದೀನನಂತೆ, ಆಸೀತ-ಇದ್ದಾನು ? ॥೧೫॥ ಯಾ - ಯಾವಳು, ವ್ಯಸನಾರ್ಣವೇ - ದುಃಖಸಮುದ್ರದಲ್ಲಿ, ಮಜ್ಜಂತಂ - ಮುಳುಗುವ, ಮಾಂ - ನನ್ನನ್ನು, ಪದೇಪದೇ - ಅಡಿಗಡಿಗೂ, ಪ್ರಜ್ಞಾಂ-ತಿಳಿವಳಿಕೆಯನ್ನು, ದೀಪಯಂತೀ- ಬೆಳಗಿಸುತ್ತಾ, ಉದ್ಧರತೇ - ಉದ್ಧರಿಸುವಳೋ, ಸಾಲಲನಾ- ಆ ನನ್ನ ಮಡದಿಯು, ಕ್ವವರ್ತತೇ - ಎಲ್ಲಿರುವಳು? ॥೧೬॥ ಸ್ತ್ರೀಯರುಹೇಳುತ್ತಾರೆ—ನರನಾಥ-ರಾಜನೆ ! ತ್ವತ್ಪ್ರಿಯಾ-ನಿನ್ನಹೆಂಡತಿಯು,ಯತ್-ಯಾವುದನ್ನು, ವ್ಯವಸ್ಯತಿ - ಮಾಡುತ್ತಿರುವಳೋ, ನಜಾನೀಮಃ - ಅರಿಯೆವು, ಶತ್ರುರ್ಹ - ಅರಿ

---

ಯಿಂದೊಡಗೂಡಿದ ನಿಮಗೆ ಕುಶಲವೆ ? ಈ ಅರಮನೆಯ ಸಂಪತ್ತುಗಳು ಮುನ್ನಿನಂತೆ ಶೋಭಿಸುವುದಿಲ್ಲ ॥೧೪॥ ಮನೆಯಲ್ಲಿ ತಾಯಿಯಾಗಲಿ ಮನೆಗಲಂಕಾರವಾದ ಹೆಂಡತಿಯಾಗಲಿ ಇಲ್ಲದಿದ್ದರೆ, ಅಂಗಹೀನವಾದ ರಥದಂತೆ ಆಮನೆಯಲ್ಲಿ ಪ್ರಾಜ್ಞನುಯಾವನು ತಾನೇ ವಾಸಮಾಡಿಯಾನು ? ॥೧೫॥ ಯಾವಮಡದಿಯು ದುಃಖಸಮುದ್ರದಲ್ಲಿ ಮುಳುಗಿದ ನನ್ನನ್ನು, ಅಡಿಗಡಿಗೂ ತಿಳವಳಿಕೆಯನ್ನಿತ್ತು ಉದ್ಧರಿಸುವಳೋ, ಆನನ್ನ ಪ್ರಾಣಕಾಂತೆಯಲ್ಲಿರುವಳು ? ಎಂದು ಬೆಸಗೊಂಡನು ॥೧೬॥ ಅಂತಃಪುರಾಂಗನೆಯರು ಆನುಡಿಯನ್ನು ಕೇಳಿ, ಮಹಾರಾಜನೆ! ನಿನ್ನ ಪ್ರಾಣಕಾಂತೆ ಏನುಮಾಡುತ್ತಿರುವಳೆಂಬುದನ್ನು ನಾವರಿಯೆವು. ಆಕೆಯು ಸಿಟ್ಟುಗೊಂಡುನೆಲದಮೇಲೆಮಲಗಿರುವುದನ್ನುಮಾತ್ರಬಲ್ಲೆವು.ಏಕೆಸಿಟ್ಟಾಗಿರುವಳೋ ಅದನ್ನೂಅರಿ

ನಾಥ ! ನಜಾನೀಮ ಸ್ತ್ವತ್ಪ್ರಿಯಾ ಯದ್ವ್ಯವಸ್ಯತಿ । ಭೂತಲೇ ನಿರವಸ್ತಾ
ರೇ ಶಯಾನಾಂ ಪಶ್ಯ ಶತ್ರುಹನ್! ॥೧೭॥ ನಾರದಃ ॥ ಪುರಂಜನ ಸ್ಸ್ವಮಹಿ
ಷೀಂ ನಿರೀಕ್ಷ್ಯಾಽವಧುತಾಂ ಭುವಿ । ತತ್ಸಂಗೋನ್ಮಥಿತ ಜ್ಞಾನೋ ವೈಕ್ಲ
ಬ್ಯಂ ಪರಮಂ ಯಯೌ ॥೧೮॥ ಸಾಂತ್ವಯನ್ ಶ್ಲಕ್ಷ್ಣಯಾ ವಾಚಾ ಹೃದ
ಯೇನ ವಿಧೂಯತಾ । ಪ್ರೇಯಸ್ಯಾ ಸ್ಸ್ನೇಹಸಂರಂಭ ಲಿಂಗ ಮಾತ್ಮನಿ ನಾ
ಭ್ಯಗಾತ್ ॥೧೯॥ ಅನುಸಿನ್ವೇಽಥ ಶನಕೈ ರ್ವೀರೋಽನುನಯಕೋವಿ
ದಃ । ಪಸ್ಪರ್ಶ ಪಾದಯುಗಳ ಮಾಹ ಚೋತ್ಸಂಗಲಾಲಿತಾಂ ॥೨೦॥ ನೂನಂ

---

ಮರ್ದನನೆ! ನಿರವಸ್ತಾರೇ - ಹಾಸಿಗೆಯಿಲ್ಲದ, ಭೂತಲೇ-ನೆಲದಲ್ಲಿ, ಶಯಾನಾಂ-ಮಲಗಿರುವುದನ್ನು, ಪಶ್ಯ-
ನೋಡು ॥೧೭॥ ನಾರದನು ಹೇಳುತ್ತಾನೆ, ಪುರಂಜನಃ - ಪುರಂಜನನು, ಭುವಿ-ನೆಲದಮೇಲೆ, ಅವಧುತಾಂ-
ಮಲಗಿರುವ, ಸ್ವಮಹಿಷೀಂ - ತನ್ನ ಹೆಂಡತಿಯನ್ನು, ನಿರೀಕ್ಷ್ಯ - ಕಂಡು, ತತ್ಸಂ...ನಃ - ಅವರಸಂಗದಿಂ
ದ ನಷ್ಟವಾದ ಜ್ಞಾನವುಳ್ಳವನಾಗಿ, ಪರಮಂ-ಅಧಿಕವಾದ, ವೈಕ್ಲಬ್ಯಂ-ದೈನ್ಯವನ್ನು, ಯಯೌ-ಹೊಂದಿದನು॥
ವಿಧೂಯತಾ - ಬಳಲುವ, ಹೃದಯೇನ - ಮನಸ್ಸಿನಿಂದ, ಶ್ಲಕ್ಷ್ಣಯಾ - ಮೃದುವಾದ, ವಾಚಾ - ನುಡಿ
ಯಿಂದ, ಸಾಂತ್ವಯನ್ನಪಿ - ಸಂತೈಸಿದರೂ, ಪ್ರೇಯಸ್ಯಾಃ - ಪ್ರಿಯಳ, ಪ್ರೇಮ...ಗಂ - ಪ್ರೀತ್ಯತಿಶ
ಯ ಚಿಹ್ನವನ್ನು, ಆತ್ಮನಿ - ಮನಸ್ಸಿನಲ್ಲಿ, ನಾಭ್ಯಗಾತ್ - ಪಡೆಯಲಿಲ್ಲ ॥೧೯॥ ವೀರಃ - ವೀರನಾದ, ಅ
ನುನಯಕೋವಿದಃ - ಸಾಂತ್ವನದಲ್ಲಿ ಸಮರ್ಥನಾದ, ಪುರಂಜನನು, ಅಥ - ಬಳಿಕ, ಶನಕೈಃ - ಮೆಲ್ಲನೆ, ಅ
ನುಸಿನ್ವೇ - ಸಂತೈಸಿದನು, ಪಾದಯುಗಳಂ - ಎರಡು ಪಾದಗಳನ್ನು, ಪಸ್ಪರ್ಶ - ಮುಟ್ಟಿದನು, ಉತ್ಸಂ
ಗಲಾಲಿತಾಂ - ತೊಡೆಯಲ್ಲಿ ಮುದ್ದಿಸುತ್ತಾ, ಆಹಚ - ಹೇಳಿದನು ॥೨೦॥ ಶುಭೇ - ಮಂಗಳಾಂಗಿಯೇ !

---

ಯೆವು. ಬಿಜಮಾಡಿನೋಡು, ಎಂದುತ್ತರವಿತ್ತರು ॥೧೭॥ ಅಯ್ಯಾ ಪ್ರಾಚೀನಬರ್ಹಿಯೇ!
ಬಳಿಕ ಪುರಂಜನನು, ನೆಲದಮೇಲೆ ಮಲಗಿರುವ ಮಡದಿಯನ್ನು ಕಂಡು ಮನಗುಂದಿ ಬಹಳ
ವ್ಯಸನವನ್ನು ಹೊಂದಿದನು ॥೧೮॥ ಆಗ ಮನಸ್ಸಿನಲ್ಲಿ ಬಳಲುತ್ತಾ ಸವಿನುಡಿಗಳಿಂದ ಸಂತೈ
ಸಿದರೂ, ಆಕೆಗೆ ತನ್ನಲ್ಲಿ ಪ್ರೀತಿಯುಂಟಾಯಿತೆಂಬ ಕುರುಹನ್ನು ಕಾಣಲಿಲ್ಲ ॥೧೯॥ ಬಳಿಕ
ಶೂರನಾಗಿಯೂ ಸಾಂತ್ವನ ಸಮರ್ಥನಾಗಿಯೂ ಇರುವ ಪುರಂಜನನು, ಮೆಲ್ಲಮೆಲ್ಲನೆ ಸವಿ
ನುಡಿಗಳಿಂದ ಸಂತೈಸಿ, ತೊಡೆಯಮೇಲೆ ಕುಳ್ಳಿರಿಸಿಕೊಂಡು ಲಲ್ಲೆಗೈಯುತ್ತಾ ಮೆಲ್ಲಡಿಗಳನ್ನೊ
ತ್ತುತ್ತಾ ಆಕೆಗಿಂತೆಂದನು ॥೨೦॥ ಎಲೌ ಮಂಗಳಾಂಗಿಯೆ ! ಯಾವ ಭೃತ್ಯರು, ಅಪರಾಧವನ್ನು

---

ಸಕಲೇಂದ್ರಿಯ ವೃತ್ತಿಗಳಿಗೂ, ನಿಶ್ಚಯಾತ್ಮಕವಾದ ಬುದ್ಧಿಯೇ ಮೂಲವಾಗಿರುವುದರಿಂದ
ಯಾವ ಇಂದ್ರಿಯವೃತ್ತಿಯೂ ಬುದ್ಧಿಯನ್ನು ಸರಿಪಡಿಸಲಾರದು ॥೧೭॥ ಬಳಿಕ ಜೀವನು ಸಾತ್ವಿಕಬು
ದ್ಧಿಯನ್ನು ಕಂಡು ಆಹಾ ನನ್ನ ಬುದ್ಧಿಯು ಇಷ್ಟುಕಾಲವೂ ಇಂತು ವಿಪರೀತವಾಗಿದ್ದುದಲ್ಲಾ! ಎಂದು ಬ
ಳಲಿದನು ॥೧೮॥ ವಿವೇಕೋದಯಕ್ಕೆ ಸಾಧನವಾದ ಸವಿನುಡಿಗಳನ್ನು ಚಿಂತಿಸುತ್ತಾ ಸಾತ್ವಿಕಬುದ್ಧಿ
ಯು ಇಷ್ಟುಕಾಲ ತನಗಿಲ್ಲದಿರುವುದಕ್ಕೆ ಕಾರಣವನ್ನು ಯೋಚಿಸಿದರೂ ತಿಳಿಯಲಿಲ್ಲ ॥೧೯॥ ಬಳಿಕ ಸಾ
ತ್ವಿಕಬುದ್ಧಿಯನ್ನು ಪಡೆಯತಕ್ಕ ಉಪಾಯಗಳಿಂದ, ಅದನ್ನು ವಶಗೊಳಿಸಿಕೊಂಡು ಇನ್ನೆಂದಿಗೂ ಸಾತ್ವಿ
ಕಬುದ್ಧಿಯನ್ನನುಸರಿಸಿಯೇ ನಡೆಯುವೆನೆಂದು ಪ್ರತಿಜ್ಞೆಮಾಡಿಕೊಂಡನು ॥೨೦॥ ಮಡದಿಯಂತೆ ಯಾವಾ

ತ್ವಕೃತಪುಣ್ಯಾ ಸ್ತೇ ಭೃತ್ಯಾ ಯೇಷ್ವೀಶ್ವರಾ ಶುಭೇ ! ।ಕೃತಾಗಸ್ಸ್ವಾತ್ಮ
ಸಾತ್ಕೃತ್ವಾ ಶಿಕ್ಷಾದಂಡಂ ನಯುಂಜತೇ ॥೨೧॥ ಪರಮೋಽನುಗ್ರಹೋ
ದಂಡೋ ಭೃತ್ಯೇಷು ಪ್ರಭುಣಾಽರ್ಪಿತಃ । ಬಾಲೋ ನವೇದ ತತ್ತನ್ವಿ !
ಬಂಧುಕೃತ್ಯ ಮಮರ್ಷಣಃ॥೨೨॥ ಸಾತ್ವಂ ಮುಖಂ ಸುದತಿ ! ಸುಭ್ರ್ವನುರಾ
ಗಭಾರ ವ್ರೀಡಾವಿಲಂಬವಿಲಸದ್ಧಸಿತಾವಲೋಕಂ । ನೀಲಾಲಕಾಲಿಭಿ
ರುಪಸ್ಕೃತ ಮುನ್ನಸಂ ನಃ ಸ್ವಾನಾಂ ಪ್ರದರ್ಶಯ ಮನಸ್ವಿನಿ ! ವಲ್ಗು
ವಾಕ್ಯಂ ॥೨೩॥ ತಸ್ಮೈ ದಧೇ ಪದಮಹಂ ತವ ವೀರಪತ್ನಿ ! ಯೋಽನ್ಯತ್ರ

ಈಶ್ವರಾಃ - ಪ್ರಭುಗಳು, ಯೇಷು - ಯಾರು, ಕೃತಾಗಸ್ಸು - ಅಪರಾಧವನ್ನು ಮಾಡಿದರೂ, ಆತ್ಮಸಾತ್ಕೃತ್ವಾ - ತಮ್ಮವರೆಂದು, ಶಿಕ್ಷಾದಂಡಂ - ಶಿಕ್ಷೆಯನ್ನು, ನಯುಂಜತೇ-ಮಾಡುವುದಿಲ್ಲವೋ, ತೇಭೃತ್ಯಾಃ-ಆ ಭೃತ್ಯರು, ಅಕೃತಪುಣ್ಯಾಃ - ಮಂದಭಾಗ್ಯರು, ನೂನಂ-ದಿಟವು ॥೨೧॥ ಭೃತ್ಯೇಷು - ಭೃತ್ಯರಲ್ಲಿ, ಪ್ರಭುಣಾ - ಪ್ರಭುವಿನಿಂದ, ಅರ್ಪಿತಃ - ಇಡಲ್ಪಟ್ಟ, ದಂಡಃ - ದಂಡನೆ, ಪರಮಃ - ಶ್ರೇಷ್ಠವಾದ, ಅನುಗ್ರಹಃ - ಅನುಗ್ರಹವು, ಹೇತನ್ವಿ - ಎಲೌ ಸುಂದರಿಯೆ, ಅಮರ್ಷಣಃ - ಸೈರಿಸಲಾರದ, ಬಾಲಃ - ಮೂಢನು, ತತ್ - ಅದನ್ನು, ಬಂಧುಕೃತ್ಯಂ - ಸ್ವಾಮಿಯ ಕರ್ತವ್ಯವೆಂದು, ನವೇದ -ತಿಳಿಯುವುದಿಲ್ಲ ॥೨೨॥ ಸುದತಿ - ಸುಳಿಹಲ್ಲುಳ್ಳವಳೆ ? ಮನಸ್ವಿನಿ - ಒಳ್ಳೆಯ ಮನಸ್ಸುಳ್ಳವಳೆ, ಸಾತ್ವಂ - ಆ ನೀನು, ಸುಭ್ರು - ಒಳ್ಳೆಯ ಹುಬ್ಬುಳ್ಳ, ಅನು...ಕಂ, ಅನುರಾಗ - ಪ್ರೇಮದ, ಭಾರ - ಅತಿಶಯದಿಂದುಂಟಾದ, ವ್ರೀಡಾ - ನಾಚಿಕೆಯಾಧಿಕ್ಯದಿಂದ, ವಿಲಸತ್ - ಹೊಳೆಯುವ, ಹಸಿತ - ನಗೆಯಿಂದ ಕೂಡಿದ, ಅವಲೋಕಂ - ನೋಟವುಳ್ಳ, ನೀಲಾಲಕಾಲಿಭಿಃ - ಕರಿದಾದ ಮುಂಗುರುಳಿಂದ, ಉಪಸ್ಕೃತಂ - ಶೋಭೆಗೊಂಡ, ಉನ್ನಸಂ - ಎತ್ತರವಾದ ಮೂಗುಳ್ಳ, ವಲ್ಗುವಾಕ್ಯಂ - ಸವಿನುಡಿಯುಳ್ಳ, ಮುಖಂ - ಮುಖವನ್ನು, ಸ್ವಾನಾಂ-ನಿನ್ನವರಾದ, ನಮಗೆ, ಪ್ರದರ್ಶಯ - ತೋರಿಸು ॥೨೩॥ ವೀರಪತ್ನಿ - ವೀರಪತ್ನಿಯೆ ! ಯಃ - ಯಾವನು

ಮಾಡಿ ತಮ್ಮ ಒಡೆಯರಿಂದ ತಕ್ಕ ದಂಡವನ್ನು ಪಡೆಯುವುದಿಲ್ಲವೋ, ಅವರು ಮಂದ ಭಾಗ್ಯರೇ ಸರಿ ॥೨೧॥ ಎಲೈಸುಂದರಿ ! ಭೃತ್ಯರಾದವರು ತಮ್ಮ ಪ್ರಭುಗಳಿಂದ ತಮ್ಮ ಅಪರಾಧಾನುಗುಣವಾಗಿ ದಂಡವನ್ನು ಪಡೆಯುವುದೇ ಪರಮಾನುಗ್ರಹವೆಂದು ತಿಳಿಯಬೇಕು. ಯಜಮಾನನಿಂದ ವಿಧಿಸಲ್ಪಡುವ ಶಿಕ್ಷೆಯನ್ನು ಯಾವನು ಸೈರಿಸುವದಿಲ್ಲವೋ, ಅವನು ಬಂಧುಕೃತ್ಯವನ್ನರಿಯದ ಮೂಢನೇ ಹೊರತು ವಿವೇಕಿಯಲ್ಲ ॥ ೨೨ ॥ ಎಲೈ ಮೃದುಮಾನಸೆಯಾದ ಸತೀಮಣಿಯೆ ! ಕೊಂಕಾದ ಹುಬ್ಬುಗಳಿಂದ ಸೊಗಸಾಗಿ, ಪ್ರೇಮಾತಿಶಯದಿಂದಕೂಡಿದ ನಾಚಿಕೆಯಿಂದ ಮೆರೆಯುತ್ತಾ, ಕಿರುನಗೆಯಿಂದ ಕಡೆನೋಟಗಳನ್ನು ಬೀರುತ್ತಾ, ಭಂಗುರಗಳಾದ ಮುಂಗುರುಳಿಂದ ಕಂಗೊಳಿಸುತ್ತಾ, ಉನ್ನತವಾದ ನಾಸಾದಂಡದಿಂದ ಭಾಸುರವಾಗಿ, ಸವಿನುಡಿಗಳನ್ನು ಸೂಸುವ ನಿನ್ನ ನಗೆಮೊಗವನ್ನು ಹಿಂದಿರು

ಗಲೂ ಹಿತಾಚರಣೆಯನ್ನು ಮಾಡುವ ಸಾತ್ವಿಕಬುದ್ಧಿಯು ಮೊದಲು ನನಗುಂಟಾಗದಿದ್ದುದು ನನಗೆ ಅನುಗ್ರಹವೇ ಸರಿ. ಮೊದಲೇ ಉಂಟಾಗಿದ್ದಲ್ಲಿ ಅದನ್ನು ಪಡೆಯುವುದಕ್ಕಾಗಿ ಇಷ್ಟು ಪರಿತಾಪ ಪಡುತ್ತಿರಲಿಲ್ಲ. ಆವಕಾರಣ ನಾನಿನ್ನೆಂದಿಗೂ ಸಾತ್ವಿಕಬುದ್ಧಿಯನ್ನುಳಿಯುವುದಿಲ್ಲ ॥ ೨ ॥ ಮುನ್ನ ನಾನು ವಿವೇಕವಿಲ್ಲದೆ ನಿನ್ನನ್ನುಳಿದೆನು. ಅದು ನನಗೆ ಸ್ವಪ್ನಾವಸ್ಥೆಯಾಗಿತ್ತು ಈಗ ನಾನು ವಿವೇಕಿಯಾಗಿರುವೆನು. ಇನ್ನು

ಭೂಸುರ ಕುಲಾತ್ಕೃತಕಿಲ್ಬಿಷ ಸ್ತಂ। ಪಶ್ಯೇ ನ ವೀತಭಯ ಮುನ್ಮುದಿತಂ
ತ್ರಿಲೋಕ್ಯಾ ಮನ್ಯತ್ರ ವೈ ಮುರರಿಪೋ ರಿತರತ್ರ ದಾಸಾತ್ ॥ ೨೪ ॥
ವಕ್ತ್ರಂ ನತೇ ವಿತಿಲಕಂ ಮಲಿನಂ ವಿಹರ್ಷಂ ಸಂರಂಭಭೀಮ ಮವಿಮೃ
ಷ್ಟ ಮಪೇತರಾಗಂ । ಪಶ್ಯೇ ಸ್ತನಾವಪಿ ರುಜೋಽಪಹತೌ ಸುಜಾತೌ ಬಿಂ
ಬಾಧರಂ ವಿಗತಕುಂಕುಮಪಂಕರಾಗಂ ॥೨೫॥ ತನ್ಮೇ ಪ್ರಸೀದ ಸುಹೃದಃ ಕೃ
ತಃ ಕಿಲ್ಬಿಷಸ್ಯ ಸ್ವೈರಂ ಗತಸ್ಯ ಮೃಗಯಾ ವ್ಯಸನಾತುರಸ್ಯ। ಕಾ ದೇವರಂ

ತವ - ನಿನಗೆ, ಕೃತಕಿಲ್ಬಿಷಃ - ಅಪರಾಧ ಮಾಡಿದವನೋ, ಭೂಸುರಕುಲಾದನ್ಯತ್ರ- ಬ್ರಾಹ್ಮಣಕುಲದವನಲ್ಲವಾದರೆ, ಮುರರಿಪೋಃ- ವಿಷ್ಣುವಿನ, ದಾಸಾನ್ಯತ್ರ-ಭಕ್ತನಲ್ಲವಾದರೆ, ತಸ್ಮಿನ್-ಅವನಲ್ಲಿ, ಅಹಂ- ನಾನು, ಪದಂ - ಪಾದವನ್ನು, ದಧೇ- ಇಡುವೆನು, ತ್ರಿಲೋಕ್ಯಾಂ-ಮೂರುಲೋಕದಲ್ಲಿಯೂ, ವೀತಭಯಂ- ಭಯವಿಲ್ಲದವನನ್ನೂ, ಉನ್ಮುದಿತಂ - ಹೆಮ್ಮೆಗೊಂಡವನನ್ನೂ, ನಪಶ್ಯೇ - ನೋಡುವುದಿಲ್ಲ ॥೨೪॥ ವಿತಿಲಕಂ - ತಿಲಕವಿಲ್ಲದ, ಮಲಿನಂ - ಮಾಸಿಹೋದ, ವಿಹರ್ಷಂ-ಸಂತೋಷವಿಲ್ಲದ, ಸಂರಂಭ...ಮಂ - ಕೋಪದಿಂದ ಭಯಂಕರವಾದ, ಅವಿಮೃಷ್ಟಂ - ತೊಳೆಯಲ್ಪಡದ, ಅಪೇತರಾಗಂ - ಪ್ರೇಮರಸವಿಲ್ಲದ, ತೇ - ನಿನ್ನ, ವಕ್ತ್ರಂ - ಮುಖವನ್ನು, ಸುಜಾತೌ - ಸುಂದರಗಳಾದ, ಸ್ತನಾವಪಿ - ಸ್ತನಗಳನ್ನೂ ರುಜಾ - ಶೋಕದಿಂದ, ಉಪಹತೌ - ಬಳಲಿದವುಗಳನ್ನು, ವಿಗ...ಗಂ - ಕುಂಕುಮ ರಾಗವಿಲ್ಲದ, ಬಿಂಬಾಧರಂ - ಕೆಳದುಟಿಯನ್ನು. ನಪಶ್ಯೇ - ಎಂದಿಗೂ ಕಂಡಿದ್ದಿಲ್ಲ ॥೨೫॥ ತತ್ - ಆದುದರಿಂದ. ಕೃತಕಿಲ್ಬಿಷಸ್ಯ - ಅಪರಾಧ ಮಾಡಿದ, ಸ್ವೈರಂ - ಸ್ವೇಚ್ಛೆಯಿಂದ. ಮೃಗಯಾಂ - ಬೇಟೆಗೆ, ಗತಸ್ಯ-ಹೋದ, ವ್ಯಸನಾತುರಸ್ಯ - ಚಿಂತಾತುರನಾದ, ಮೇ - ನನ್ನಲ್ಲಿ, ಪ್ರಸೀದ - ಪ್ರಸನ್ನಳಾಗು, ವಶಗತಂ -

ಗಿಸಿಕೊಂಡಿರುವುದೇಕೆ! ಪ್ರಿಯನಾದ ನನಗೆ ತೋರಿಸು ॥೨೩॥ ಎಲೌ ವೀರಪತ್ನಿಯೆ ! ನಿನಗೆಯಾವನು ಅಪರಾಧವನ್ನು ಮಾಡಿರುವನು? ಹೇಳು. ಅವನು ಬ್ರಾಹ್ಮಣಕುಲದವನಲ್ಲದೆಮತ್ತಾವನಾಗಿದ್ದರೂಅವನನ್ನು ಕಾಲಿನಿಂದ ತುಳಿದು ಹಾಕುವೆನು ತ್ರಿಲೋಕದಲ್ಲಿಯೂ ವಿಷ್ಣುಭಕ್ತನಾದನವನು ಹೊರತು ಮತ್ತಾವನುತಾನೇ ಹೆಮ್ಮೆಗೊಂಡು ನನಗೆ ಹೆದರದಿದ್ದಾನು ! ॥ ಪ್ರಿಯೆ ! ನಿನ್ನ ಮೊಗವೇಕೆ ಕಳೆಗುಂದಿರುವುದು ? ತಿಲಕವು ಅಳಿದು ಧೂಳಿಯಿಂದ ಮಲಿನವಾಗಿರುವುದೇಕೆ? ಕಂದಿ ಕುಂದಿರುವುದೇಕೆ ? ಎಂದಿಗೂ ಇಲ್ಲದ ಕೋಪದಿಂದ ಭಯಂಕರವಾಗಿರುವುದೇಕೆ ? ಪ್ರೇಮರಸವು ಶೂನ್ಯವಾಗಿರುವುದು. ಸಂಸ್ಕಾರಹೀನನಾಗಿರುವುದೇಕೆ? ಮತ್ತು ಕಮಲಕೋರಕಗಳನ್ನುಹೋಲುವನಿನ್ನಹಸ್ತಗಳು ದುಃಖಾಗ್ನಿಯಿಂದ ಬಳಲಿರುವುವು. ಕೋಮಲವಾದನಿನ್ನ ಅಧರಬಿಂಬವು ಬಣ್ಣಗೆಟ್ಟಿರುವುದು.ನಾನೆಂದಿಗೂ ಇದನ್ನು ಕಂಡಿರಲಿಲ್ಲವಲ್ಲಾ! ಇದಕ್ಕೆ ಕಾರಣವೇನು ? ॥೨೫॥ನಾನು ಸ್ವೇಚ್ಛೆಯಿಂದ ಬೇಟೆಯಾಡುವುದಕ್ಕೆ ಹೋದುದಕ್ಕಾಗಿಕೋಪಿಸಿರುವೆಯಾ ? ನನ್ನದು ತಪ್ಪಾಯಿತು.ನಿನ್ನಲ್ಲಿಯೇ ಪೂರ್ಣಪ್ರೇಮವುಳ್ಳನನ್ನನ್ನುಕನಿಕರಿಸು. ನಾನು ಮಾಡಿದ ಅಪರಾಧವನ್ನು ಕ್ಷಮಿಸು ಪ್ರಾಣಕಾಂತನಾದಭೂಕಾಂ

ತನ್ನಲ್ಲಿ ಪ್ರಸನ್ನಳಾಗಿ ಒಡನಾಡಿಯಾಗಿರು, ಎಂದು ಜೀವನು ಬುದ್ಧಿಯನ್ನು ಬೇಡಿದನು. ಎಂದರ ಜೀವನು ಸಾತ್ವಿಕಬುದ್ಧಿಯನ್ನುಳಿದು ಅಜ್ಞಾನದಿಂದ ವಿಷಯಗಳನ್ನು ಅನುಭವಿಸುತ್ತಾ ಬೇಸರಗೊಂಡು, ಅಕಟಾ ವಿವೇಕಯುಕ್ತವಾದ ಸಾತ್ವಿಕಬುದ್ಧಿಯಿಲ್ಲದೆ ಭ್ರಷ್ಟನಾದೆನಲ್ಲಾ ! ಎಂದು ಪಶ್ಚಾತ್ತಾಪಪಟ್ಟನೆಂದು ಭಾವವು.

ವಶಗತಂ ಕುಸುಮಾಸ್ತ್ರವೇಗ ವಿಸ್ರಸ್ತಪೌಂಸ್ಕ ಮುಶತೀ ನಭಜೇತ ಕೃತ್ಯೇ॥

—ಇತಿಷಡ್ವಿಂಶೋಽಧ್ಯಾಯಃ—

ಮರಬಿದ್ದ, ದೇವರಂ- ಕಾಂತನಾದ, ಕುಸು....ಸ್ಕಂ- ಮನ್ಮಥನ ಬಾಣಗಳ ಹೊಡೆತದಿಂದ ಧೈರ್ಯವಳಿದ ಪತಿಯನ್ನು, ಕಾ - ಯಾವಳುತಾನೇ, ಉಶತೀ - ಪ್ರೀತಿಸಿ. ಕೃತ್ಯೇ-ಯೋಗ್ಯಕಾರ್ಯಗಳಲ್ಲಿ, ನಭಜೇತ- ಹೊಂದದಿದ್ದಾಳು ? ॥೨೬॥

— ಷಡ್ವಿಂಶಾಧ್ಯಾಯಂ ಸಮಾಪ್ತಂ —

ತನೇ ಕಾಮಬಾಣಗಳಿಂದ ಪೀಡಿತನಾಗಿ ಪಾದಾಂತವನ್ನು ಮರೆಹೊಕ್ಕು ಬೇಡುವಾಗ ನಿನ್ನಂತಹ ಮನಸ್ವಿನಿಯರು ಯಾರುತಾನೇ ಅಪರಾಧವನ್ನು ಮನ್ನಿಸಿ ಅನುಗ್ರಹಿಸಲಾರಳು? ದಯೆಮಾಡಿ ನನ್ನತಪ್ಪನ್ನುಕ್ಷಮಿಸು, ಎಂದು ಪುರಂಜನರಾಜನು ಹೆಂಡತಿಯನ್ನು ಸಂತೈಸುತ್ತಿದ್ದನೆಂಬಲ್ಲಿಗೆ ಭಾಗವತಚಕೋರ ಚಂದ್ರಿಕೆಯೊಳ್

ಇಪ್ಪತ್ತಾರನೆಯ ಅಧ್ಯಾಯಂ ಮುಗಿದುದು.

---

—ಓಂ ನಮಃ ಪರಮಾತ್ಮನೇ—

—ಅಥ ಸಪ್ತವಿಂಶೋಽಧ್ಯಾಯಃ—

ಶ್ರೀನಾರದಃ ॥ ಇತ್ಥಂ ಪುರಂಜನಂ ಸ್ವಧ್ರ್ಯಗ್ವಶ ಮಾನೀಯ ವಿಭ್ರಮೈಃ ।

— ಸಪ್ತವಿಂಶಾಧ್ಯಾಯಂ —

ಕಂ॥ ಸತಿ ಸುತರ ಬೇಳವೆಗೆ ವಿ । ಸ್ಮೃತನಾಗಿ ನಿಜಸ್ವರೂಪಮಂ ಮರೆತು ಜರಾ ।
ಹತನಾದ ಜೀವನೀ ಸಂ । ಸೃತಿದುಃಖವನಾಂತ ಪರಿಯ ನೊರೆದಪುದೀಗಳ್॥

ನಾರದ ಮುನಿಯು ಹೇಳುತ್ತಾನೆ, ಮಹಾರಾಜ-ಪ್ರಾಚೀನಬರ್ಹಿಯೆ ! ಇತ್ಥಂ - ಇಂತು, ಪುರಂಜನೀ - ರಾಣಿಯು, ಪುರಂಜನಂ - ಪುರಂಜನನನ್ನು, ಸ್ವಧ್ರ್ಯಕ್ - ಮೆಲ್ಲನೆ, ವಿಭ್ರಮೈಃ - ಬೆಡಗುಗಳಿಂದ, ವಶಂ - ಸ್ವಾಧೀನವನ್ನು, ಆನೀಯ - ಹೊಂದಿಸಿ, ಪತಿಂ-ರಾಜನನ್ನು, ಮುದಯುತೀ - ಮುದ

—ಇಪ್ಪತ್ತೇಳನೆಯ ಅಧ್ಯಾಯ.—

—ನಾರದಮುನಿಯು ಕಾಲಕನ್ಯೋಪಾಖ್ಯಾನವನ್ನು ಹೇಳುವುದು.—

ನಾರದಮುನಿಯು ಹೇಳುತ್ತಾನೆ. ಅಯ್ಯಾ ಪ್ರಾಚೀನಬರ್ಹಿರಾಜನೆ ! ಆಪುರಂಜನನಪತ್ನಿಯು ಇಂತು ರಾಜನಿಂದ ಸಂತೈಸಲ್ಪಟ್ಟವಳಾಗಿ, ತನ್ನ ಬೆಡಗುಗಳಿಂದ ಆತನನ್ನು ಮೆಲ್ಲನೆ

---

ಗೂ॥ ಜಾಗ್ರತ್ಸ್ವಪ್ನಸುಷುಪ್ತ್ಯಾದಿಗಳಿಂದ ಅಲೆದಾಡುವ ಜೀವನಿಗೆ ದೈವವಶದಿಂದೊಮ್ಮೆ ವಿವೇಕವುಂಟಾಗುವುದು. ಆದುದರಿಂದ ಈಗ ತಾನೇ ಜೀವನು ವಿವೇಕವನ್ನು ಪಡೆದಿದ್ದರೂ,ಅನಾದಿ ಕರ್ಮವಾಸನೆಗಳ ಸಂಬಂಧದಿಂದ, ರಜಃ ಪ್ರಚುರವಾದ ಬುದ್ಧಿಯು ಮರಳಿ ಆಜೀವನನ್ನು ತನ್ನ ವಶಗೊಳಿಸಿಕೊಂಡು, ಸಂಸಾರವಮಾಡಿಸುವುದು,ಎಂಬುದೆ ಈ ಅಧ್ಯಾಯದ ಮುಖ್ಯಾಭಿಪ್ರಾಯವು.ಇಂತು ಜೀವನು ದೈವವಶದಿಂದ ವಿವೇಕವನ್ನು ಪಡೆದಿದ್ದರೂ ಧರ್ಮಾರ್ಥ ಕಾಮಗಳಲ್ಲಾಸೆಯನ್ನುಂಟುಮಾಡುವ ರಜಃ ಪ್ರಚುರವಾದ ಬುದ್ಧಿಯು

ಪುರಂಜನೀ ಮಹಾರಾಜ ! ರೇಮೇ ರಮಯತೀ ಪತಿಂ ॥೧॥ ಸರಾಜಾ ಮಹಿಷೀಂ ರಾಜನ್ ! ಸುಸ್ನಾತಾಂ ರುಚಿರಾನನಾಂ । ಕೃತ ಸ್ವಸ್ತ್ಯಯನಾಂ ತೃಪ್ತಾ ಮಭ್ಯನಂದ ದುಪಾಗತಾಂ ॥ ೨ ॥ ತಯೋಪಗೂಢಃ ಪರಿರಬ್ಧಕಂಧರೋ ರಹೋಽನುಮಂತ್ರ್ಯೈ ರಪ ಕೃಷ್ಟಚೇತನಃ । ನಕಾಲರಂಹೋ ಬುಬುಧೇ ದುರತ್ಯಯಂ ದಿವಾ ನಿಶೇತಿ ಪ್ರಮದಾಪರಿಗ್ರಹಃ ॥೩॥ ಶಯಾನ ಉನ್ನದ್ಧಮದೋ ಮಹಾಮನಾ ಮಹಾರ್ಹ ತಲ್ಪೇ ಮಹಿಷೀ ಭುಜೋಪಧಿಃ । ತಾಮೇವ ವೀರೋ ಮನುತೇ ಪರಂ ಯತ ಸ್ತಮೋಽಭಿ ಭೂತೋ ನ

ಗೊಳಿಸುತ್ತಾ, ರೇಮೇ - ರಮಿಸಿದಳು ॥೧॥ ರಾಜನ್ - ರಾಜನೆ, ಸರಾಜಾ-ಆ ಪುರಂಜನನು ಸುಸ್ನಾತಾಂ-ಮಂಗಳ ಸ್ನಾನಮಾಡಿದ,ರುಚಿರಾನನಾಂ-ಸುಂದರವಾದ ಮುಖವುಳ್ಳ,ಕೃತಸ್ವಸ್ತ್ಯಯನಾಂ-ಸಿಂಗರಿಸಿಕೊಂಡ, ತೃಪ್ತಾಂ - ಸಂತುಷ್ಟಳಾದ, ಉಪಾಗತಾಂ - ಬಂದು, ಮಹಿಷೀಂ - ಪತ್ನಿಯನು, ಅಭ್ಯನಂದತ್ - ಸನ್ಮತಿಸಿದನು ॥೨॥ ತಯಾ - ಅವಳಿಂದ, ಉಪಗೂಢಃ-ಆಲಿಂಗಿಸಲ್ಪಟ್ಟು, ಪರಿರಬ್ಧಕಂಧರಃ - ಆಲಿಂಗಿಸಲ್ಪಟ್ಟ ಕಂಠವುಳ್ಳವನಾಗಿ, ರಹೋನುಮಂತ್ರ್ಯೈಃ - ಏಕಾಂತ ಭಾಷಣದಿಂದ, ಅಪಕೃಷ್ಟಚೇತನಃ - ಸೆಳೆಯಲ್ಪಟ್ಟ ವಿವೇಕವುಳ್ಳವನಾಗಿ, ಪ್ರಮದಾಪರಿಗ್ರಹಃ - ಸ್ತ್ರೀಸಹಾಯನಾಗಿ, ದಿವಾ ನಿಶಾ - ಇತಿ - ಇದು ಹಗಲು, ಇದು ರಾತ್ರಿ, ಎಂದು, ದುರತ್ಯಯಂ - ನಾಶರಹಿತವಾದ,ಕಾಲರಂಹಃ-ಕಾಲ ವೇಗವನ್ನು, ನಬುಬುಧೇ - ತಿಳಿಯಲಿಲ್ಲ ॥೩॥ ಮಹಾಮನಾಃ - ಉತ್ತಮಮನಸ್ಸುಳ್ಳ, ವೀರಃ - ಪುರಂಜನ ರಾಜನು, ಮಹಾರ್ಹತಲ್ಪೇ - ಉತ್ತಮವಾದ ಹಾಸಿಗೆಯಲ್ಲಿ, ಮಹಿಷೀ ಭುಜೋಪಧಿಃ - ರಾಣಿಯ ಭುಜವನ್ನೇ ತಲೆ ದಿಂಬುಮಾಡಿ, ಶಯಾನಃ-ಮಲಗಿ, ಮದವೇರಿ, ತಾಮೇವ-ಆಹೆಂಡತಿಯನ್ನೇ, ಪರಂ-ಉತ್ತಮಪುರುಷಾರ್ಥವನ್ನಾಗಿ, ಮನುತೇ - ತಿಳಿಯುವನು, ಯತಃ - ಯಾವುದರಿಂದ, ತಮೋಽಭಿಭೂತಃ-

ವಶಗೊಳಿಸಿಕೊಂಡು ಅವನೊಡನೆ ರಮಿಸುತ್ತಿದ್ದಳು ॥೧॥ ಬಳಿಕ ಆರಾಣಿಯು ಮಂಗಳ ಸ್ನಾನವನ್ನುಮಾಡಿ ದಿವ್ಯವಸ್ತ್ರಾಭರಣಗಳಿಂದಲಂಕೃತೆಯಾಗಿ, ಗಂಧ, ಪುಷ್ಪ, ತಾಂಬೂಲಾದ್ಯುಪಭೋಗಗಳನ್ನು ಪಡೆದು, ಸಂತೋಷದಿಂದ ಬರುತ್ತಿರುವುದನ್ನುಕಂಡು ಪುರಂಜನನು ಆನಂದದಿಂದ ಹಿಗ್ಗಿದನು ॥೨॥ ಕೂಡಲೇ ಆರಾಜಪತ್ನಿಯು ತನ್ನನಳದೋಳುಗಳಿಂದ ಪತಿಯಕೊರಲನ್ನಪ್ಪಿ ಗಾಢಾಲಿಂಗನವನ್ನು ಮಾಡಿಕೊಂಡು, ಏಕಾಂತಕ್ಕೆ ಕರೆದೊಯ್ದು ಇಂಪಾಗಿ ಸೊಂಪಾಗಿ ರಹಸ್ಯಾಲೋಚನಗಳನ್ನು ಹೇಳುತ್ತಾ, ಸವಿನುಡಿಗಳಿಂದ ಲಲ್ಲೆಗೊಳಸಲು, ಪುರಂಜನನು ಆಕೆಯಬೇಳವೆಗೊಳಗಾಗಿ,ಹಗಲಿರುಳನ್ನು ಕೂಡ ತಿಳಿಯದೆ ಮೋಹಪರವಶನಾಗಿದ್ದನು॥೩॥ ಇಂತು ಸ್ತ್ರೀಸಂಗದಿಂದ ಮದವೇರಿ, ದಿವ್ಯವಾದ ಹಂಸತೂಲತಲ್ಪದಲ್ಲಿ ಪ್ರಾಣಕಾಂತೆಯ ನಳದೋಳಿನಮೇಲೆ ತಲೆಯಿಟ್ಟು ಮಲಗಿಕೊಂಡು, ತಮೋಗುಣಾವೃತನಾದುದರಿಂದ ಆಸ್ತ್ರೀಮುಖವನ್ನೇ ಪರಮಪುರುಷಾರ್ಥವೆಂದು ತಿಳಿದು ತನ್ನ ನಿಜಸ್ವರೂಪ

ಜೀವನನ್ನು ಮೆಲ್ಲನೆ ವಶಗೊಳಿಸಿಕೊಂಡು, ಕಾರ್ಯಗಳನ್ನು ನಡೆಯಿಸತೊಡಗಿತು ॥೧॥ ಜೀವನು ಆರಾಜಸ ಬುದ್ಧಿಯನ್ನೇ ಅನುಕೂಲವನ್ನಾಗಿ ತಿಳಿದನು ॥೨॥ ಬಳಿಕ ಜೀವನು ಆರಾಜಸಬುದ್ಧಿಯೇ ತಾನೆಂದು ತಿಳಿದು ಶಬ್ದಾದಿ ವಿಷಯಗಳನ್ನು ಚಿಂತಿಸುತ್ತಾ,ಪ್ರಮಾದ ಆಲಸ್ಯಾದಿಗಳಿಂದ ವಿವೇಕವನ್ನುಳಿದನು॥೩॥ ಆಮೇಲೆ ಜೀವನು ಬುದ್ಧಿಯೊಡನೆ ಹೃದಯವೆಂಬ ಹಾಸಿಗೆಯಲ್ಲಿ ನೆಲಸಿ,ಅಜ್ಞಾನಕ್ಕೊಳಗಾಗಿ ಬುದ್ಧಿಸಂಗ

ನಿಜಂ ಪರಂ ಚ ಯತ್ ॥೪॥ ತಸ್ಯೈವಂ ರಮಮಾಣಸ್ಯ ಕಾಮಕಶ್ಮಲ ಚೇತಸಃ । ಕ್ಷಣಾರ್ಧಮಿವ ರಾಜೇಂದ್ರ ! ವ್ಯತಿಕ್ರಾಂತಂ ನವಂ ವಯಃ ॥೫॥ ತಸ್ಯಾಮಜನಯತ್ಪುತ್ರಾನ್ ಪುರಂಜನ್ಯಾಂ ಪುರಂಜನಃ । ಶತಾನ್ಯೇಕಾದಶ ವಿರಾಡಾಯುಷೋಽರ್ಧಮಥಾಽತ್ಯಗಾತ್ ॥೬॥ ದುಹಿತೄರ್ದಶೋತ್ತರಶತಂ ಪಿತೃ ಭ್ರಾತೃ ಯಶಸ್ಕರೀಃ। ಶೀಲೌದಾರ್ಯಗುಣೋಪೇತಾಃ ಪೌರಂಜನ್ಯಃ ಪ್ರಜಾಪತೇ! ॥೭॥ ಸ ಪಾಂಚಾಲಪತಿಃ ಪುತ್ರಾನ್ ಪಿತೃವಂಶ ವಿ

ಮೋಹಗೊಂಡವನು, ಯತ್ - ಯಾವುದು, ನಿಜಂ - ನಿಜರೂಪವೋ, ಪರಂ ಚ - ಪರಮಾತ್ಮರೂಪವೋ, ತತ್ - ಅದನ್ನು, ನ- ತಿಳಿಯುವುದಿಲ್ಲವೋ, ॥೪॥

ರಾಜೇಂದ್ರ-ಪ್ರಾಚೀನಬರ್ಹಿಯೇ! ಏವಂ-ಇಂತು, ರಮಮಾಣಸ್ಯ-ವಿಹರಿಸುತ್ತಿರುವ, ಕಾಮ...ಸಃ - ಕಾಮದಿಂದ ಮಲಿನವಾದ ಮನಸ್ಸುಳ್ಳ, ತಸ್ಯ - ಅವನಿಗೆ, ಕ್ಷಣಾರ್ಧಮಿವ - ಅರ್ಧಕ್ಷಣದಂತೆ, ನವಂವಯಃ - ಯೌವನವು, ವ್ಯತಿಕ್ರಾಂತಂ - ಕಳೆದುಹೋಯಿತು. ॥೫॥ ವಿರಾಟ್- ಮಹಾರಾಜನೇ? ಪುರಂಜನಃ - ಪುರಂಜನನು, ತಸ್ಯಾಂ ಪುರಂಜನ್ಯಾಂ- ಆಪುರಂಜನಿಯಲ್ಲಿ, ಏಕಾದಶಶತಾನಿ - ಒಂದುಸಾವಿರದನೂರುಮಂದಿ, ಪುತ್ರಾನ್ - ಗಂಡುಮಕ್ಕಳನ್ನು, ಅಜನಯತ್ - ಹೆತ್ತನು, ಅಥ - ಬಳಿಕ, ಆಯುಷಃ - ಆಯುಸ್ಸಿನ, ಅರ್ಧಂ - ಅರ್ಧಭಾಗವು, ಅತ್ಯಗಾತ್ - ಕಳೆಯಿತು ॥೬॥ ಪ್ರಜಾಪತೇ - ರಾಜನೆ? ಪಿತೃ...ರೀ - ತಂದೆ ತಾಯಿಗಳಿಗೂ, ಅಣ್ಣತಮ್ಮಂದಿರಿಗೂ ಕೀರ್ತಿಯನ್ನುಂಟುಮಾಡುವ, ಶೀಲೌ...ತಾಃ-ಸದಾಚಾರ, ದಾತೃತ್ವ, ಮೊದಲಾದ ಗುಣಗಳಿಂದ ಕೂಡಿದ, ಪೌರಂಜನ್ಯಃ-ಪುರಂಜನಿಯಲ್ಲಿ ಹುಟ್ಟಿದ, ದಶೋತ್ತರಶತಂ - ನೂರಹತ್ತುಮಂದಿ. ದುಹಿತೄಃ- ಹೆಣ್ಣುಮಕ್ಕಳನ್ನು, ಹೆತ್ತನು ॥೭॥ ಸಪಾಂಚಾಲಪತಿಃ- ಆ ಪಾಂಚಾಲರಾಜನು, ಪಿತೃ...ನಾನ್ - ತಂದೆಯಕುಲವನ್ನು ಬೆಳೆಯಿಸುವ, ಪುತ್ರಾನ್-ಮಕ್ಕಳನ್ನು,

ವನ್ನು ಮರೆತುಬಿಟ್ಟನು ॥೪॥ ಅಯ್ಯಾ ರಾಜನೇ! ಇಂತು ಹಗಲಿರುಳೂ ರಾಣಿವಾಸದಲ್ಲಿಹೆಂಡಿರೊಡನೆ ವಿಹರಿಸುತ್ತಾ, ಕಾಮದಿಂದ ಮಲಿನಮನಸ್ಕನಾಗಿರುವ ಆಪುರಂಜನನಿಗೆ ಅರ್ಧಕ್ಷಣದಂತೆ ಯೌವ್ವನಾವಸ್ಥೆಯು ಕಳೆಯಿತು ॥೫॥ ಬಳಿಕ ಆತನಿಂದ ಪುರಂಜನಿಯಲ್ಲಿ ಒಂದುಸಾವಿರದ ಒಂದುನೂರುಮಂದಿ ಗಂಡುಮಕ್ಕಳೂ, ತಂದೆತಾಯಿಯರಿಗೂ ಅಣ್ಣತಮ್ಮಂದಿರಿಗೂ ಕೀರ್ತಿಯನ್ನುಂಟುಮಾಡುವ ಸದಾಚಾರಾದಿಗುಣಸಂಪನ್ನೆಯರಾದ ಒಂದುನೂರಹತ್ತುಮಂದಿ ಹೆಣ್ಣುಮಕ್ಕಳೂ ಜನಿಸಿದರು. ಈ ವರೆಗೆ ಆತನಿಗೆ ಅರ್ಧಾಯುಷ್ಯವು ಕಳೆದುಹೋಯಿತು ॥೬—೭॥ ಆಗ ಪುರಂಜನನು, ಪಿತೃವಂಶವರ್ಧನರಾದ ಗಂಡುಮಕ್ಕಳಿಗೂ,

ಕೃತವಾದ ವಿಷಯ ಸುಖವನ್ನೇ ಪರಮಪುರುಷಾರ್ಥವನ್ನಾಗಿತಿಳಿದು, ತನ್ನ ನಿಜಸ್ವರೂಪವನ್ನು ಮರೆತನು॥

ಜೀವನು ಬುದ್ಧಿಯನ್ನು ಆಶ್ರಯಿಸಿದಕೂಡಲೇ ಇಂದ್ರಿಯಪರಿಣಾಮ ರೂಪಗಳಾದ ಸಾವಿರಾರು ಗಂಡುಮಕ್ಕಳು ಹುಟ್ಟಿದರು. ಬಳಿಕ ತಂದೆತಾಯಿಯರಾದ ಜೀವ ಬುದ್ಧಿಗಳಿಗೂ, ಒಡಹುಟ್ಟುಗಳಾದ ಇಂದ್ರಿಯ ಪರಿಣಾಮಗಳಿಗೂ ಸುಖವನ್ನುಂಟುಮಾಡುವ ನೂರಾರು ಬುದ್ಧಿವೃತ್ತಿಗಳು ಜನಿಸಿದುವು. ಇವೇ ಹೆಣ್ಣುಮಕ್ಕಳು ॥೭॥ ಶಬ್ದಾದಿವಿಷಯಗಳನ್ನು ಅನುಭವಗೊಳಿಸುವ ಇಂದ್ರಿಯಗಳಿಗೆ ಪಂಚಾಲವೆಂತಲೂ ಆ ಇಂದ್ರಿಯಾಧ್ಯಕ್ಷನಾದ ಜೀವನಿಗೆ ಪಾಂಚಾಲನೆಂತಲೂ ಹೆಸರು. ಆ ಜೀವನು ಗಂಡುಮಕ್ಕಳಿಗೆ ಮದುವೆಮಾಡಿದನು ಎಂದರೆ ಇಂದ್ರಿಯಪರಿಣಾಮಗಳೇ ಪುತ್ರರು ಹಿತ, ಅಹಿತ, ಇವುಗಳು ಚಿತ್ತವೃತ್ತಿಸೊ

ವರ್ಧನಾನ್। ದಾರೈಃ ಸಂಯೋಜಯಾಮಾಸ ದುಹಿತೄಃ ಸದೃಶೈರ್ವರೈಃ॥೮॥
ಪುತ್ರಾಣಾಂ ಚಾಽಭವನ್ ಪುತ್ರಾ ಏಕೈಕಸ್ಯ ಶತಂ ಶತಂ। ಯೈರ್ವೈ ಪೌ
ರಂಜನೋ ವಂಶಃ ಪಾಂಚಾಲೇಷು ಸಮೇಧಿತಃ ॥೯॥ ತೇಷು ತದ್ರಿಕ್ಥಹಾ
ರೇಷು ಗೃಹ ಕೋಶಾನು ಜೀವಿಷು। ನಿರೂಢೇನ ಮಮತ್ವೇನ ವಿಷಯೇಷ್ವ
ನ್ವಬಧ್ಯತ ॥೧೦॥ ಈಜೇ ಚ ಕ್ರತುಭಿ ರ್ಘೋರೈ ರ್ದೀಕ್ಷಿತಃ ಪಶುಮಾರ
ಕೈಃ । ದೇವಾನ್ ಪಿತೄನ್ ಭೂತಪತೀ ನ್ನಾನಾಕಾಮೋ ಯಥಾಭ
ವಾನ್ ॥೧೧॥ ಯುಕ್ತೇ ಷ್ವೇವಂ ಪ್ರಮತ್ತಸ್ಯ ಕುಟುಂಬಾಸಕ್ತ ಚೇತಸಃ।

---

ದಾರೈಃ - ಹೆಂಡಿರೊಡನೆಯೂ, ದುಹಿತೄಃ - ಹೆಣ್ಣುಮಕ್ಕಳನ್ನು, ಸದೃಶೈಃ - ಸಮಾನರಾದ, ವರೈಃ - ಗಂಡಂದಿರೊಡನೆಯೂ, ಸಂಯೋಜಯಾಮಾಸ - ಸೇರಿಸಿದನು ॥೮॥ ಪುತ್ರಾಣಾಂ ಚ - ಪುತ್ರರಲ್ಲಿ, ಏಕೈಕಸ್ಯ - ಒಬ್ಬೊಬ್ಬನಿಗೆ, ಶತಂಶತಂ - ನೂರು ನೂರುಮಂದಿ, ಪುತ್ರಾಃ - ಮಕ್ಕಳು, ಅಭವನ್ - ಆದರು, ಯೈರ್ವೈ - ಯಾರಿಂದ, ಪೌರಂಜನಃ - ಪುರಂಜನನ, ವಂಶಃ - ವಂಶವು, ಪಾಂಚಾಲೇಷು - ಪಾಂಚಾಲದೇಶದಲ್ಲಿ, ಸಮೇಧಿತಃ - ಬೆಳೆಯಿತೋ ॥೯॥ ತದ್ರಿ····ಷು - ಮನೆ ಬಂಡಾರ ಮೊದಲಾದವುಗಳಿಂದ ಬದುಕುವ, ತೇಷು - ಅವರಲ್ಲಿ, ನಿರೂಢೇನ - ನೆಲೆಗೊಂಡ. ಮಮತ್ವೇನ - ಅಭಿಮಾನದಿಂದ, ವಿಷಯೇಷು- ವಿಷಯಗಳಲ್ಲಿ, ಅನ್ವಬಧ್ಯತ - ಬದ್ಧನಾದನು ॥೧೦॥

ದೀಕ್ಷಿತಃ - ದೀಕ್ಷೆಯನ್ನು ವಹಿಸಿದವನಾಗಿ, ಯಥಾಭವಾನ್ - ನಿನ್ನಂತೆ, ನಾನಾಕಾಮಃ - ಹಲವು ಕೋರಿಕೆಗಳುಳ್ಳವನಾಗಿ, ಪಶುಮಾರಕೈಃ - ಪಶುಗಳನ್ನು ಕೊಲ್ಲುವ, ಘೋರೈಃ - ಭಯಂಕರಗಳಾದ, ಕ್ರತುಭಿಃ - ಯಜ್ಞಗಳಿಂದ, ದೇವಾನ್ - ದೇವತೆಗಳನ್ನೂ, ಪಿತೄನ್ - ಪಿತೃಗಳನ್ನೂ, ಭೂತಪತೀನ್-

---

ಹೆಣ್ಣುಮಕ್ಕಳಗೂ ಕೂಡ ವಿವಾಹಗಳನ್ನು ಬೆಳೆಯಿಸಿದನು॥೮॥ ಬಳಿಕ ಆ ಮಕ್ಕಳಲ್ಲಿ ಒಬ್ಬೊಬ್ಬನಿಗೆ ನೂರುಮಂದಿಯುವೋರೆ ಎಲ್ಲರಿಗೂ ಸಂತಾನವು ಬೆಳೆಯಿತು. ಈ ಪುರಂಜನನ ಸಂತತಿಯವರಿಂದಲೇ ಪಾಂಚಾಲದೇಶವೆಲ್ಲಾ ತುಂಬಿತು॥೯॥ ಇಂತು ಬೆಳೆಯುತ್ತಾ ತನ್ನ ಆಸ್ತಿಗೆ ಬಾಧ್ಯರಾಗಿ ತನ್ನ ಗೃಹಕೋಶಾದಿಗಳಿಂದ ಜೀವಿಸುತ್ತಿರುವ ಪುತ್ರಾದಿಗಳಲ್ಲಿ ಅಭಿಮಾನವು ಬೇರೂರಿ ಪುರಂಜನನು ಸಂಪೂರ್ಣವಾಗಿ ವಿಷಯಗಳಲ್ಲಿ ಮಗ್ನನಾದನು ॥೧೦॥ ಬಳಿಕ ಬಗೆಬಗೆಯಾದ ಬಯಕೆಗಳನ್ನು ಬಯಸುತ್ತಾ, ಪಶುಮಾರಣದಿಂದ ಭಯಂಕರಗಳಾದ ಯಜ್ಞಗಳಿಂದ ದೇವತೆಗಳು, ಪಿತೃಗಳು, ಭೂತಗಳು ಇವರನ್ನು ಆರಾಧಿಸುವುದಕ್ಕಾಗಿ ನಿನ್ನಂತೆಯೇ

---

ನೆಯರು, ಬುದ್ಧಿವೃತ್ತಿಗಳೇ ಹೆಣ್ಣುಮಕ್ಕಳು, ವಿಷಯಭೋಗಗಳೇ ಅಳಿಯಂದಿರು. ಇವರಿಗೆ ಪರಸ್ಪರ ಸಂಬಂಧವಾಯಿತು, ಎಂದರೆ ಜೀವನು ಇಂದ್ರಿಯಪರಿಣಾಮಗಳಿಂದ ಹಿತಾಹಿತಚಿಂತಾ ಪೂರ್ವಕವಾಗಿ, ಬುದ್ಧಿವೃತ್ತಿಗಳಿಂದ ವಿಷಯಗಳನ್ನು ಅನುಭವಿಸುವನೆಂದು ಭಾವವು ॥೮॥ ಒಂದೊಂದು ಇಂದ್ರಿಯಪರಿಣಾಮವು ನೂರಾರು ಪಾಪ ಪುಣ್ಯಕಾರ್ಯಗಳನ್ನು ಮಾಡಿಸುವುದರಿಂದ ಈ ಪುಣ್ಯಪಾಪಗಳೇ ಪುರಂಜನರಾಜನ ಮಕ್ಕಳು; ಇಂತು ಜೀವನ ಸಂಸಾರವೇ ವಿಷಯಪ್ರಪಂಚವನ್ನೆಲ್ಲಾ ಆಕ್ರಮಿಸಿತು ॥೯॥ ಇಂತು ವಿಷಯಸಾಗರದಲ್ಲಿ ಮಗ್ನನಾದ ಜೀವನು, ಅಹಂಕಾರ ಮಮಕಾರಗಳಿಂದ ಬದ್ಧನಾಗಿ ತನ್ನ ನಿಜಸ್ವರೂಪವನ್ನು ಮರೆತುಬಿಟ್ಟನ ॥೧೦॥ ಅಲ್ಲದೆ ಶಬ್ದಾದಿ ವಿಷಯಗಳನ್ನು ಬಯಸಿ, ಪಂಚಸೂನಾದಿ ಹಿಂಸಾಗರ್ಭಗಳಾದ ಕರ್ಮೇಂದ್ರಿಯಗಳಿಂದ ಇಂದ್ರಿಯಗಳನ್ನು ಉಣಿಸತೊಡಗಿದನು ॥೧೧॥ ಇಂತು ಸ್ವರೂಪಜ್ಞಾನವಿಲ್ಲದೇ ಬುದ್ಧಿ ಅದರ

ಆಸಸಾದ ಸವೈ ಕಾಲೋ ಯೋಽಪ್ರಿಯಃ ಪ್ರಿಯಯೋಷಿತಾಂ ॥೧೨॥
ಚಂಡವೇಗ ಇತಿ ಖ್ಯಾತೋ ಗಂಧರ್ವಾಧಿಪತಿ ರ್ನೃಪ ! ಗಂಧರ್ವಾ ಸ್ತಸ್ಯ
ಬಲಿನಃ ಷಷ್ಟ್ಯುತ್ತರ ಶತತ್ರಯಂ ॥೧೩॥ ಗಂಧರ್ವ್ಯ ಸ್ತಾದೃಶೀ ರಸ್ಯ ಮೈ
ಥುನ್ಯಶ್ಚ ಸಿತಾಽಸಿತಾಃ। ಪರಿವೃತ್ತ್ಯಾ ವಿಲುಂಪಂತಿ ಸರ್ವಕಾಮ ವಿನಿರ್ಮಿ
ತಾಂ ॥೧೪॥ ತೇ ಚಂಡ ವೇಗಾನುಚರಾಃ ಪುರಂಜನ ಪುರಂ ಯದಾ । ಹ
ರ್ತು ಮಾರೇಭಿರೇ ತತ್ರ ಪ್ರತ್ಯಷೇಧ ತ್ಪ್ರಜಾಗರಃ ॥೧೫॥ ಸ ಸಪ್ತಭಿ

---

ಭೂತಾಧ್ಯಕ್ಷರನ್ನೂ, ಈಜೇ - ಆರಾಧಿಸಿದನು ॥೧೧॥ ಯುಕ್ತೇಷು - ತನಗೆ ಹಿತಕರಗಳಾದ ಕಾರ್ಯ
ಗಳಲ್ಲಿ, ಪ್ರಮತ್ತಸ್ಯ - ಎಚ್ಚರವಿಲ್ಲದ, ಕುಟುಂ...ಸಃ - ಸಂಸಾರದಲ್ಲಿ ಆಸಕ್ತವಾದ ಮನಸ್ಸುಳ್ಳರಾಜನಿ
ಗೆ, ಪ್ರಿಯಯೋಷಿತಾಂ-ಕಾಮಿಸೀಕಾಮುಕರಿಗೆ, ಯಃ-ಯಾವುದು, ಅಪ್ರಿಯಃ-ಅನಿಷ್ಟವೋ, ಸವೈಕಾಲಃ-
ಆ ಮುದಿತನವು, ಆಸಸಾದ-ಪ್ರಾಪ್ತವಾಯಿತು ॥೧೨॥ ನೃಪ-ರಾಜನೆ ! ಚಂಡವೇಗಇತಿ-ಚಂಡವೇಗ (ಸಂವ
ತ್ಸರ) ವೆಂದು, ಖ್ಯಾತಃ - ಪ್ರಸಿದ್ಧನಾದ, ಗಂಧರ್ವಾಧಿಪತಿಃ - ಗಂಧರ್ವರಾಜನುಂಟು, ಬಲಿನಃ - ಬಲಿ
ಷ್ಠನಾದ, ತಸ್ಯ - ಅವನಿಗೆ, ಷಷ್ಟ್ಯ...ಯಂ - ಮುನ್ನೂರ ಅರವತ್ತುಮಂದಿ, ಗಂಧರ್ವಾಃ - ಗಂಧ
ರ್ವರು (ಹಗಲುಗಳು) ಇರುವರು ॥ ೧೩ ॥ ತಾದೃಶೀಃ - ಅಷ್ಟುಮಂದಿ, ಮೈಥುನ್ಯಃ - ಜತೆಯಾಗಿರುವ,
ಸಿತಾಸಿತಾಃ - ಕರಿದುಬಿಳಿದಾಗಿರುವ (ಶುಕ್ಲಪಕ್ಷ ಕೃಷ್ಣಪಕ್ಷ) ಗಂಧರ್ವ್ಯಃ - ಗಂಧರ್ವಸ್ತ್ರೀಯರು [ರಾ
ತ್ರಿಗಳು] ಉಂಟು, ಅವರು, ಪರಿವೃತ್ತ್ಯಾ - ಸುತ್ತುವುದರಿಂದ, ಸರ್ವ..ತಾಂ - ಸಕಲ ವಸ್ತುಗಳಿಂದ
[ಪಂಚಭೂತಗಳಿಂದ] ನಿರ್ಮಿತವಾದ, ಪುರೀಂ - ಪಟ್ಟಣವನ್ನು, ವಿಲುಂಪಂತಿ-ನಾಶಗೊಳಿಸುವುವು॥೧೪॥
ತೇ - ಆ, ಚಂಡವೇಗಾನುಚರಾಃ - ಚಂಡವೇಗನ ಭೃತ್ಯರು, ಯದಾ - ಯಾವಾಗ, ಪುರಂಜನ ಪುರಂ -

---

ದೀಕ್ಷೆಯನ್ನು ವಹಿಸಿ ಕ್ರತುಗಳನ್ನು ನಡೆಯಿಸಿದನು ॥ ೧೧ ॥ ಇಂತು ಆತ್ಮಹಿತಗಳಾದ
ಕಾರ್ಯಗಳನ್ನು ಗಮನಿಸದೆ, ಕುಟುಂಬದಲ್ಲಿಯೇ ಸಂಪೂರ್ಣಾಸಕ್ತನಾಗಿರುವಷ್ಟರಲ್ಲಿ,
ಕಾಮುಕರಾದ ಸ್ತ್ರೀಪುರುಷರಿಗೆ ಅಪ್ರಿಯಕರವಾದ ಮುದಿತನವು ಪ್ರಾಪ್ತವಾಯಿತು ॥೧೨॥
ಅಯ್ಯಾ ಪ್ರಾಚೀನಬರ್ಹಿಯೇ! ಸುಪ್ರಸಿದ್ಧನಾದ ಚಂಡವೇಗನೆಂಬ ಗಂಧರ್ವರಾಜನುಂ
ಟೆಂಬುವದನ್ನು ಬಲ್ಲೆಯಷ್ಟೆ? ಆತನಿಗೆ ಮಹಾಶೂರರಾದ ಮುನ್ನೂರುಅರವತ್ತು ಮಂದಿ
ಗಂಧರ್ವರೂ,ಇವರನ್ನೆಡಬಿಡದಿರುವ ಕಪ್ಪು ಬಿಳುಪುಬಣ್ಣವುಳ್ಳ ಮುನ್ನೂರುಅರವತ್ತುಮಂದಿ
ಗಂಧರ್ವಸ್ತ್ರೀಯರೂ ಅನುಚರರುಂಟು.ಅವರುಸುತ್ತುತ್ತಾ ಭಾಗ್ಯವುಳ್ಳ ನಗರಗಳನ್ನು ಸೂರೆ
ಗೊಳ್ಳುವರು ॥೧೪॥ ಪುರಂಜನರಾಜನು ವೃದ್ಧನಾದಬಳಿಕ ಆಗಂಧರ್ವರಾಜನ ಭೃತ್ಯರು ಬಂ
ದು ಆತನರಾಜಧಾನಿಯನ್ನು ಕೊಳ್ಳುಹೊಡೆಯುತೊಡಗಿದರು. ಆಗ ಅಲ್ಲಿ ಕಾವಲುಗಾರನಾ
ಗಿದ್ದ ಪ್ರಜಾಗರನೆಂಬ ಶೂರನು ಅವರನ್ನು ತಡೆದನು ॥೧೫॥ ಆಪುರಂಜನ ಪುರಕ್ಕೆ ಪಾಲತ

---

ವೃತ್ತಿಗಳು ಮೊದಲಾದವುಗಳಲ್ಲಿ ಆಸಕ್ತನಾಗಿರುವಾಗ ಜೀವನಿಗೆ ಭೋಗಾಯತನವಾಗಿದ್ದ ಸ್ಥೂಲಶರೀರಕ್ಕೆ
ವಾರ್ಧಕವು ಪ್ರಾಪ್ತವಾಯಿತು॥೧೨॥ಮುನ್ನೂರುಅರವತ್ತು ಹಗಲುಗಳಿಂದಲೂ,ಶುಕ್ಲಕೃಷ್ಣಪಕ್ಷಗಳಿಂದ
ಕೂಡಿದ ಮುನ್ನೂರು ಅರವತ್ತುರಾತ್ರಿಗಳಿಂದಲೂ ಕೂಡಿದ ಸಂವತ್ಸರ ಸ್ವರೂಪವಾದ ವಾರ್ಧಕಕಾ
ಲವು ಪಂಚಭೂತನಿರ್ಮಿತವಾದ ಸ್ಥೂಲಶರೀರವು ಜರಾಜರ್ಜರಿತವಾಗುದನ್ನುತಿಳಿಯಲು,ಅದನ್ನು ನಾಶ
ಗೊಳಿಸತೊಡಗಿತು. ಆ ದೇಹದಲ್ಲಿ ನೆಲಸಿರುವ ಪ್ರಾಣವಾಯುವು ತಡೆದು, ಪಂಚಭೂತ, ಪಂಚತನ್ಮಾತ

ಶ್ಶತ್ಯೈರೇಕೋ ವಿಂಶತ್ಯಾ ಚ ಶತಂ ಸಮಾಃ । ಪುರಂಜನ ಪುರಾಧ್ಯಕ್ಷೋ
ಗಂಧರ್ವೈರ್ಯುಯುಧೇ ಬಲೀ ॥೧೬॥ ಕ್ಷೀಯಮಾಣೇ ಸ್ವಸಂಬಂಧೇ ಏಕ
ಸ್ಮಿನ್ ಬಹುಭಿರ್ಯುಧಿ । ಚಿಂತಾಂ ಪರಾಂ ಜಗಾಮಾರ್ತಃ ಸರಾಷ್ಟ್ರಪು
ರಬಾಂಧವಃ ॥೧೭॥ ಸ ಏವ ಪುರ್ಯಾಂ ಮಧುಭುಕ್ಪಂಚಾಲೇಷು ಸ್ವಪಾ
ರ್ಷದೈಃ । ಉಪನೀತಂ ಬಲಿಂ ಗೃಹ್ಣನ್ ಸ್ತ್ರೀಜಿತೋ ನಾವಿದದ್ಭಯಂ॥೧೮॥
ಕಾಲಸ್ಯ ದುಹಿತಾ ಕಾಚಿತ್ ತ್ರಿಲೋಕೀಂ ವರಮಿಚ್ಛತೀ । ಪರ್ಯಟಂತೀ

ಪುರಂಜನನ ನಗರ (ಶರೀರ) ವನ್ನು, ಹರ್ತುಂ - ಸೂರೆಗೊಳ್ಳುವುದಕ್ಕೆ, ಆರೇಭಿರೆ - ಮೊದಲಿಟ್ಟರು, ತತ್ರ-ಅಲ್ಲಿ, ಪ್ರಜಾಗರಃ - ಕಾವಲುಗಾರನು (ಪ್ರಾಣವಾಯುವು) ಪ್ರತ್ಯಷೇಧತ್ - ತಡೆದನು ॥೧೫॥ ಬಲೀ - ಬಲಿಷ್ಠನಾದ, ಪುರಂ...ಕ್ಷಃ - ಪುರಂಜನನ ಪಟ್ಟಣಕ್ಕೆ ನಾಯಕನಾದ, ಸಃ - ಆ ಪ್ರಜಾಗರನು, ಏಕಃ - ಒಬ್ಬನೇ, ವಿಂಶತ್ಯಾಸಪ್ತಭಿಃ - ಇಪ್ಪತ್ತೇಳು, ಶರೈಃ - ಬಾಣಗಳಿಂದ ಶತಂಸಮಾಃ - ನೂರುವರ್ಷಗಳು, ಗಂಧರ್ವೈಃ - ಗಂಧರ್ವರೊಡನೆ, ಯುಯುಧೇ - ಕಾದಾಡಿದನು ॥೧೬॥ ಸ್ವಸಂಬಂಧೇ - ತನಗೆ ಬಂಧುವಾದ, ಏಕಸ್ಮಿನ್ - ಏಕವೀರನಾದ ಪ್ರಜಾಗರನು, ಬಹುಭಿಃ - ಹಲವು ಮಂದಿಯೊಡನೆ, ಯುಧಿ - ಯುದ್ಧದಲ್ಲಿ, ಕ್ಷೀಯಮಾಣೇ - ಬಲಗುಂದಲು, ಸರಾ...ವಃ - ದೇಶ, ಪುರ, ಬಂಧುಗಳು, ಇವರಿಂದ ಕೂಡಿದ ಪುರಂಜನನು, ಆರ್ತಃ - ಬಳಲಿ, ಪರಾಂ - ಅಧಿಕವಾದ, ಚಿಂತಾಂ - ಚಿಂತೆಯನ್ನು, ಜಗಾಮ-ಹೊಂದಿದನು ॥೧೭॥ ಪುರ್ಯಾಂ - ಪಟ್ಟಣದಲ್ಲಿ, ಮಧುಭುಕ್ - ಕ್ಷುದ್ರಸುಖವನ್ನೇ ಅನುಭವಿಸುವ, ಸಏವ-ಆ ರಾಜನೇ, ಪಾಂಚಾಲೇಷು - ಪಾಂಚಾಲದೇಶದಲ್ಲಿ, ಸ್ವಪಾರ್ಷದೈಃ-ತನ್ನ ಸೇವಕರಿಂದ, ಉಪನೀತಂ-ಒಪ್ಪಿಸಲ್ಪಟ್ಟ, ಬಲಿಂ - ಕಾಣಿಕೆಯನ್ನು, ಗೃಹ್ಣನ್-ಪಡೆದು, ಸ್ತ್ರೀಜಿತಃ-ಹೆಣ್ಣಿಗನಾದುದರಿಂದ, ಭಯಂ-ಮೃತ್ಯುಭಯವನ್ನು, ನಾವಿದತ್ - ತಿಳಿಯಲಿಲ್ಲ ॥೧೮॥ ಬರ್ಹಿಷ್ಮನ್-ಪ್ರಾಚೀನಬರ್ಹಿಯೆ ! ಕಾಲಸ್ಯ - ಕಾಲನಿಗೆ, ದುಹಿತಾ - ಮಗಳಾದ, ಕಾಚಿತ್-ಒಬ್ಬಳು, ವರಂ-ಗಂಡನನ್ನು,

ನಾದ ಪ್ರಜಾಗರನು ಬಲಿಷ್ಠನಾದುದರಿಂದ ನೂರಾರು ವರ್ಷಗಳವರೆಗೂ ಇಪ್ಪತ್ತೇಳು ಬಾಣಗಳಿಂದ ಆಗಂಧರ್ವರೊಡನೆ ಕಾದಾಡಿದನು ॥೧೬॥ ಇಂತು ತನಗೆ ಅಂಗರಕ್ಷಕನಾಗಿ ಏಕವೀರನಾಗಿರುವ ಪ್ರಜಾಗರನು ಹಲವು ಹಗೆಗಳೊಡನೆ ಕಾಳಗವಾಡಿ ಬಲಗುಂದಲು, ದೇಶ, ನಗರ, ಬಾಂಧವಗಳಿಂದಕೂಡಿದ ಪುರಂಜನರಾಜನು ಖಿನ್ನನಾಗಿ ಚಿಂತಾಸಮುದ್ರದಲ್ಲಿ ಮುಳುಗಿದರೂ, ಸ್ತ್ರೀಜಿತನಾಗಿ ತಾನೊರ್ವನೇ ರಾಜಧಾನಿಯಲ್ಲಿನೆಲಸಿ, ಪಾಂಚಾಲದೇಶಗಳಿಂದ ತನ್ನ ಸೇವಕರುತಂದಿತ್ತ ಭೋಗಗಳನ್ನು ಅನುಭವಿಸುತ್ತಾ ಮರಣಭಯವನ್ನರಿಯದೇ ಇದ್ದನು ॥೧೭-೧೮॥ ಅಯ್ಯಾ ಪ್ರಾಚೀನಬರ್ಹಿಯೇ! ಕಾಲನಮಗಳಾದ ಕಾಲಕನ್ಯೆಯೆಂಬೊರ್ವಕನ್ನೆಯು, ಅನುರೂಪನಾದವರನನ್ನು ಅರಸುತ್ತಾ ತ್ರಿಲೋಕವನ್ನೂ ಸಂಚರಿ

ಪಂಚಜ್ಞಾನೇಂದ್ರಿಯ, ಪಂಚಕರ್ಮೇಂದ್ರಿಯ, ಅಪಾನ, ವ್ಯಾನ, ಉದಾನ, ಸಮಾನ, ಮನಸ್ಸು, ಬುದ್ಧಿ, ಅಹಂಕಾರಗಳಿಂದೊಡಗೂಡಿ ಪ್ರಾರಬ್ಧಾವಸಾನದ ವರೆಗೂ, ಆ ಶರೀರವನ್ನುಳಿಯಲಿಲ್ಲ ॥೧೬॥ ಆ ಪ್ರಾಣವಾಯುವಂತೂ ಹಲವುದಿನ ಹೋರಾಡಿ ಕ್ರಮಕ್ರಮವಾಗಿ ಬಲಗುಂದಲು ಜೀವನು ವಿಶೇಷ ಕಷ್ಟಕ್ಕೆ ಗುರಿಯಾದನು ॥೧೭॥ ಇಂತಾದರೂ ಜೀವನು ಯಥೋಚಿತವಾಗಿ ಇಂದ್ರಿಯಗಳಿಂದ ಸಂಪಾದಿಸಲ್ಪಟ್ಟ ಕ್ಷುದ್ರವಿಷಯಸುಖಗಳನ್ನನುಭವಿಸುತ್ತಾ ತನ್ನ ದುರ್ದೆಶೆಯನ್ನರಿಯಲಿಲ್ಲ ॥ ೧೮ ॥

ನಬರ್ಹಿಷ್ಮನ್ ! ಪ್ರತ್ಯನಂದತ ಕಶ್ಚನ ॥೧೯॥ ದೌರ್ಭಾಗ್ಯೇನಾತ್ಮನೋ
ಲೋಕೇ ವಿಶ್ರುತಾ ದುರ್ಭಗೇತಿ ಸಾ । ಯಾ ತುಷ್ಟಾ ರಾಜರ್ಷಯೇತು ವೃ
ತಾsದಾತ್ಪೂರವೇ ವರಂ ॥೨೦॥ ಕದಾಚಿ ದಟಮಾನಾ ಸಾ ಬ್ರಹ್ಮಲೋ
ಕಾನ್ಮಹೀಂ ಗತಂ । ವವ್ರೇ ಬೃಹದ್ವ್ರತಂ ಮಾಂತು ಜಾನತೀ ಕಾಮ
ಮೋಹಿತಾ॥೨೧॥ ಮಯಿ ಸಂರಭ್ಯ ವಿಪುಲ ಮದಾ ಚ್ಛಾಪಂ ಸುದುಸ್ಸಹಂ।
ಸ್ಥಾತು ಮರ್ಹಸಿ ನೈಕತ್ರ ಮದ್ಯಾಚ್ಞಾ ವಿಮುಖೋ ಮುನೇ!॥೨೨॥ತತೋ
ವಿಹತ ಸಂಕಲ್ಪಾ ಕನ್ಯಕಾ ಯವನೇಶ್ವರಂ। ಮಯೋಪದಿಷ್ಟ ಮಾಸಾದ್ಯ ವ
ವ್ರೇ ನಾಮ್ನಾ ಭಯಂ ಪತಿಂ ॥೨೩॥ ಋಷಭಂ ಯವನಾನಾಂ ತ್ವಾಂ ವೃಣೇ

---

ಇಚ್ಛತೀ- ಬಯಸಿದವಳಾಗಿ, ತ್ರಿಲೋಕೀಂ - ಮೂರುಲೋಕಗಳನ್ನೂ, ಪರ್ಯಟಂತೀ - ಸಂಚರಿಸಿದಳು, ಕಶ್ಚನ- ಒಬ್ಬನಾದರೂ, ನಪ್ರತ್ಯನಂದತ - ಸಮ್ಮತಿಸಲಿಲ್ಲ ॥೧೯॥ ಯಾ- ಯಾವಳು, ವೃತಾ-ವರಿಸಲ್ಪಟ್ಟು, ತುಷ್ಟಾ ಸಂತೋಷಗೊಂಡು, ರಾಜರ್ಷಯೇ- ರಾಜಶ್ರೇಷ್ಠನಾದ, ಪೂರವೇ-ಪೂರುವಿಗೆ, ವರಂ- ವರವನ್ನು, ಅದಾತ್ - ಕೊಟ್ಟಳೋ, ಸಾ-ಅವಳು, ಆತ್ಮನಃ-ತನ್ನ, ದೌರ್ಭಾಗ್ಯೇನ - ವೈರೂಪ್ಯದಿಂದ, ಲೋಕೇ-ಲೋಕದಲ್ಲಿ, ದುರ್ಭಗೇತಿ-ದುರ್ಭಗಳೆಂದು, ವಿಶ್ರುತಾ-ಪ್ರಸಿದ್ಧಿಗೊಂಡಳು ॥೨೦॥ ಸಾ-ಅವಳು, ಅಟಮಾನಾ-ಅಲೆಯುತ್ತಾ, ಕದಾಚಿತ್ - ಒಮ್ಮೆ, ಬ್ರಹ್ಮಲೋಕಾತ್ - ಬ್ರಹ್ಮಲೋಕದಿಂದ, ಮಹೀಂ- ಭೂಮಿಗೆ, ಗತಂ-ಬಂದ, ಮಾಂ-ನನ್ನನ್ನು, ಬೃಹದ್ವ್ರತಂ - ನೈಷ್ಠಿಕನೆಂದು, ಜಾನತೀ - ತಿಳಿದರೂ, ಕಾಮಮೋಹಿತಾ-ಕಾಮಪರವಶೆಯಾಗಿ, ವವ್ರೇ - ವರಿಸಿದಳು ॥೨೧॥ ಮಯಿ-ನನ್ನಲ್ಲಿ, ಸಂರಭ್ಯ-ಕೋಪಿಸಿ, ಮುನೇ - ಎಲೈ ಮುನಿಯೆ ! ಮದ್ಯಾಚ್ಞಾವಿಮುಖಃ - ನನ್ನ ಪ್ರಾರ್ಥನೆಯನ್ನು ಭಂಗಿಸಿದ ನೀನು, ಏಕತ್ರ-ಒಂದುಕಡೆ, ಸ್ಥಾತುಂ - ಇರುವುದಕ್ಕೆ, ನಾರ್ಹಸಿ - ಅರ್ಹನಾಗಬೇಡ ಎಂದು, ಸುದುಸ್ಸಹಂ- ಸಹಿಸಲಶಕ್ಯವಾದ, ವಿಪುಲಂ - ದೊಡ್ಡದಾದ, ಶಾಪಂ - ಶಾಪವನ್ನು, ಅದಾತ್ - ಕೊಟ್ಟನು ॥೨೨॥ ತತಃ - ಬಳಿಕ, ವಿಹತಸಂಕಲ್ಪಾ - ಆಶಾಭಂಗವನ್ನು ಪಡೆದ, ಕನ್ಯಕಾ - ಕಾಲಕನ್ಯೆಯು, ಮಯಾ- ನನ್ನಿಂದ, ಉಪದಿಷ್ಟಂ-ತಿಳಿಸಲ್ಪಟ್ಟ, ನಾಮ್ನಾ - ಹೆಸರಿನಿಂದ, ಭಯಂ-ಭಯನೆಂಬ, ಯವನೇಶ್ವರಂ- ಯವನರಾಜನನ್ನು, ಪತಿಂ - ಪತಿಯನ್ನಾಗಿ, ವವ್ರೇ - ವರಿಸಿದಳು ॥೨೩॥ ವೀರ- ಶೂರನೆ ! ಯವನಾನಾಂ-

---

ಸುತ್ತಿರುವಳಷ್ಟೆ. ಆಕೆಯನ್ನು ಯಾವನೂವರಿಸಲಿಲ್ಲ ॥೧೯॥ ಮುನ್ನು ತನ್ನನ್ನು ವರಿಸಿದ ಯಯಾತಿ ಪುತ್ರನಾದ ಪೂರುವೆಂಬರಾಜರ್ಷಿಗೆ ರಾಜ್ಯಪ್ರಾಪ್ತಿಯಾಗುವಂತೆ ವರವನ್ನಿತ್ತ ಆಕೆಯು ತನ್ನವೈರೂಪ್ಯದಿಂದ ಲೋಕದಲ್ಲಿ ದುರ್ಭಗೆಯೆಂದು ಹೆಸರುಗೊಂಡಳು ॥೨೦॥ ಇಂತು ಸಂಚರಿಸುತ್ತಿರುವ ಆಕೆಯು ಒಮ್ಮೆ, ಬ್ರಹ್ಮಲೋಕದಿಂದ ಭೂಲೋಕಕ್ಕೆ ಬಂದ ನನ್ನನ್ನುಕಂಡು, ನೈಷ್ಠಿಕನೆಂದು ತಿಳಿದಿದ್ದರೂ ಕಾಮಮೋಹಿತಳಾಗಿ ನನ್ನನ್ನುವರಿಸಿದಳು ॥ ನನ್ನಿಂದ ನಿರಾಕೃತಳಾಗಿ ಕೋಪಗೊಂಡು “ಎಲೈನಾರದನೆ ! ಕಾಮಮೋಹಿತಳಾದ ನನ್ನ ಪ್ರಾರ್ಥನೆಯನ್ನು ಕಡೆಗಣಿಸಿದುದರಿಂದ ನೀನು ನಿಂತಕಡೆಯಲ್ಲಿ ನಿಲ್ಲದೆ ಅಲೆಯುತ್ತಿರು” ಎಂದು ನನಗೆ ಶಾಪವನ್ನಿತ್ತಳು॥೨೨॥ ತರುವಾಯ ಆ ಕಾಲಕನ್ನೆಯು ಭಗ್ನಮನೋರಥಳಾಗಿ, ನನ್ನಿಂದ ತೋರಿಸಲ್ಪಟ್ಟ ಭಯನೆಂಬ ಯವನರಾಜನಬಳಿಗೆಹೋಗಿ „ಎಲೈವೀರನೇ ! ಯವನರಿಗೊಡೆಯನಾದ ನಿನ್ನನ್ನು ಪ್ರಿಯಪತಿಯನ್ನಾಗಿ ವರಿಸಿರುವೆನು. ನಿನ್ನಲ್ಲಿ ಯಾವಪ್ರಾಣಿ

ವೀರೇಪ್ಸಿತಂ ಪತಿಂ। ಸಂಕಲ್ಪ ಸ್ತ್ವಯಿ ಭೂತಾನಾಂ ಕೃತಃ ಕಿಲ ನ ರಿಷ್ಯತಿ ॥೨೪॥ ದ್ವಾ ವಿಮಾ ವನು ಶೋಚಂತಿ ಬಾಲಾವ ಸದವಗ್ರಹೌ। ಯಲ್ಲೋಕ ಶಾಸ್ತ್ರೋಪನತಂ ನರಾತಿ ನತದಿಚ್ಛತಿ॥೨೫॥ ಅಥೊ ಭಜಸ್ವ ಮಾಂ ಭದ್ರೇ! ಭಜತೀಂ ಮೇ ದಯಾಂ ಕುರು। ಏತಾವಾನ್ ಪೌರುಷೋ ಧರ್ಮೋ ಯದಾರ್ತಾ ನನುಕಂಪತೇ॥೨೬॥ ಕಾಲಕನ್ಯೋದಿತವಚೋ ನಿಶಮ್ಯ ಯವನೇಶ್ವರಃ। ಚಿಕೀರ್ಷು ರ್ದೇವಗುಹ್ಯಂ ಸ ಸಸ್ಮಿತಂ ತಾ ಮಭಾಷತ ॥೨೭॥ ಮಯಾ ನಿರೂಪಿತ ಸ್ತುಭ್ಯಂ ಪತಿ ರಾತ್ಮಸಮಾಧಿನಾ ನಾಽಭಿನಂದತಿ ಲೋಕೋ

ಯವನರಿಗೆ, (ಅಧಿವ್ಯಾಧಿಗಳು) ಋಷಭಂ - ಒಡೆಯನಾದ, ತ್ವಾಂ-ನಿನ್ನನ್ನು, ಈಪ್ಸಿತಂ - ಪ್ರಿಯನಾದ, ಪತಿಂ-ಪತಿಯನ್ನಾಗಿ, ವೃಣೇ - ವರಿಸುತ್ತೇನೆ, ತ್ವಯಿ-ನಿನ್ನಲ್ಲಿ, ಕೃತಃ - ಮಾಡಲ್ಪಟ್ಟ, ಭೂತಾನಾಂ-ಪ್ರಾಣಿಗಳ, ಸಂಕಲ್ಪಃ-ಕೋರಿಕೆಯು, ನರಿಷ್ಯತಿ - ವ್ಯರ್ಥವಾಗುವುದಿಲ್ಲ ॥೨೪॥ ಯತ್-ಯಾವುದು, ಲೋಕ...ತಂ-ಲೋಕದಿಂದಲೂ ಶಾಸ್ತ್ರದಿಂದಲೂ ಪ್ರಾಪ್ತವಾದುದೋ, ತತ್-ಅದನ್ನು, ಯಃ-ಯಾವನು, ನರಾತಿ - ಕೊಡುವುದಿಲ್ಲವೋ, ತತ್- ಕೊಟ್ಟದ್ದನ್ನು, ನೇಚ್ಛತಿ - ತೆಗೆದುಕೊಳ್ಳುವುದಿಲ್ಲವೋ, ಅಸದವಗ್ರಹೌ - ದುರಾಗ್ರಹವುಳ್ಳ, ಇಮೌದ್ವೌ - ಇವರಿಬ್ಬರನ್ನೂ, ಸಂತಃ - ಸಾಧುಗಳು, ಅನುಶೋಚಂತಿ - ದುಃಖಿಸುವರು ॥೨೫॥ ಅತಃ - ಆದುದರಿಂದ, ಭದ್ರೇ - ಮಂಗಳಾಂಗನೆ ! ಭಜತೀಂ - ನಂಬಿರುವ, ಮಾಂ - ನನ್ನನ್ನು, ಭಜಸ್ವ - ಅನುಗ್ರಹಿಸು, ದಯಾಂ - ದಯೆಯನ್ನು, ಕುರು - ಮಾಡು, ಆರ್ತಾನ್ - ದೀನರನ್ನು, ಅನುಕಂಪತೇಯತ್ - ಕನಿಕರಿಸುವುದಾವುದುಂಟೋ, ಏತಾವಾನೇವ, ಇಷ್ಟೇ, ಪೌರುಷಃ - ಪುರುಷನ, ಧರ್ಮಃ - ಧರ್ಮವು ॥೨೬॥ ಕಾಲ . . . ಚಃ - ಕಾಲಕನ್ನೆಯು ನುಡಿದನುಡಿಯನ್ನು, ನಿಶಮ್ಯ - ಕೇಳಿ, ಸಯವನೇಶ್ವರಃ - ಆಯವನರಾಜನು, ದೇವಗುಹ್ಯಂ - ದೇವರಹಸ್ಯವನ್ನು, ಚಿಕೀರ್ಷುಃ - ನಡೆಯಿಸಲೆಳಸಿ, ಸಸ್ಮಿತಂ - ನಸುನಗುತ್ತಾ, ತಾಂ - ಆಕೆಗೆ, ಅಭಾಷತ-ಹೇಳಿದನು॥೨೭॥ ಅಯಂಲೋಕಃ - ಈ ಲೋಕವು, ಅಭದ್ರಾಂ - ಅಮಂಗಳೆಯಾದ, ಅಸಂಮ್ಮತಾಂ - ಅನಿಷ್ಟಳಾದ, ತ್ವಾಂ - ನಿನ್ನನ್ನು, ನಾಭಿನಂದತಿ - ಸಮ್ಮತಿಸುವುದಿಲ್ಲ, ಆತ್ಮಸಮಾಧಿನಾ - ಚಿತ್ತೈಕಾಗ್ರ್ಯವುಳ್ಳ, ಮಯಾ - ನನ್ನಿಂದ, ತುಭ್ಯಂ - ನಿನಗೆ, ಪತಿಃ - ಪತಿಯು, ನಿರೂಪಿತಃ - ತೋರಿಸಲ್ಪಟ್ಟನು ॥೨೮॥

ಗಳಕೋರಿಕೆಯೂ ವ್ಯರ್ಥವಾಗುವುದಿಲ್ಲವೆಂದೆಣಿಸುವೆನು ॥೨೪॥ ವೇದಶಾಸ್ತ್ರಗಳಲ್ಲಿ, ಯಾವ ವಸ್ತುವು ಕೊಡತಕ್ಕದಾಗಿಯೂ, ಪರಿಗ್ರಹಿಸತಕ್ಕದಾಗಿಯೂ ಲೋಕಸಮ್ಮತವಾಗಿಯೂ ಇರುವುದೋ, ಅಂತಹವಸ್ತುವನ್ನು ಬೇಡತಕ್ಕವನಿಗೆ ಕೊಡದಿರುವವನನ್ನೂ, ಕೊಟ್ಟರೂ ಅದನ್ನು ಪರಿಗ್ರಹಿಸದಿರುವವನನ್ನೂಸಹ ಸಾಧುಗಳು ಮೂಢರೆಂದುಹೇಳುವರು ॥೨೫॥ ಎಲೈ ಮಂಗಳಾಂಗನೆ ! ಆದುದರಿಂದ ನಿನ್ನನ್ನೇ ನಂಬಿರುವ ನನ್ನನ್ನುವರಿಸು. ಕನಿಕರಿಸು. ದೀನರಾದವರನ್ನು ಕನಿಕರಿಸುವುದೆಂಬುದೇ ಲೋಕದಲ್ಲಿ ಸತ್ಪುರುಷರಧರ್ಮವು" ಎಂದು ಬೇಡಿದಳು ॥೨೬॥ ಆ ಯವನರಾಜನು ಕಾಲಕನ್ನೆಯು ನುಡಿದ ನುಡಿಗಳನ್ನು ಕೇಳಿ, ದೇವರಹಸ್ಯವಾದ ಕಾರ್ಯ (ಮರಣ)ವನ್ನು ನಡೆಯಿಸಲೆಳಸಿ, ಮಂದಹಾಸವನ್ನು ಬೀರುತ್ತಾ, ಆಕೆಗಿಂತೆಂದನು ॥೨೭॥ ಎಲೌ ಕಾಲಕನ್ನೆಯೆ? ಯಾವಲೋಕವು ನಿನ್ನನ್ನು ಅಮಂಗಳೆಯೆಂತಲೂ, ಅನಿಷ್ಟಳೆಂತಲೂ ಕಡೆಗಣಿಸಿದುದೋ, ನಾನು ಏಕಾಗ್ರಚಿತ್ತದಿಂದಾಲೋಚಿಸಿ ಆಲೋಕ

ಯಂ ತ್ವಾ ಮಭದ್ರಾ ಮುಸಮ್ಮತಾಂ ॥ ೨೮ ॥ ತ್ವ ಮವ್ಯಕ್ತ ಗತಿ ರ್ಭುಂ
ಕ್ಷ್ವ ಲೋಕಂ ಕರ್ಮವಿನಿರ್ಮಿತಂ । ಯಾಹಿ ಮೇ ಪೃತನಾಯುಕ್ತಾ ಪ್ರ
ಜಾನಾಶಂ ಪ್ರಣೇಷ್ಯಸಿ ॥೨೯॥ ಪ್ರಜ್ವರೋಽಯಂ ಮಮ ಭ್ರಾತಾ ತ್ವಂ ಚ
ಮೇ ಭಗಿನೀ ಭವ।ಚರಾ ಮ್ಯುಭಾಭ್ಯಾಂ ಲೋಕೇಽಸ್ಮಿ ನ್ನವ್ಯಕ್ತೋ ಭೀಮ
ಸೈನಿಕಃ ॥೩೦॥

—ಇತಿ ಸಪ್ತವಿಂಶೋಽಧ್ಯಾಯಃ.—

ತ್ವಂ - ನೀನು, ಅವ್ಯಕ್ತಗತಿಃ - ಯಾರಿಗೂ ತಿಳಿಯದಂತೆ ನಡೆದು, ಕರ್ಮವಿನಿರ್ಮಿತಂ - ಕರ್ಮದಿಂದುಂಟಾದ, ಲೋಕಂ - ಲೋಕವನ್ನು, ಭುಂಕ್ಷ್ವ - ಅನುಭವಿಸು, ಮೇ - ನನ್ನ, ಪೃತನಾಯುಕ್ತಾ - ಸೈನ್ಯದಿಂದ ಕೂಡಿ, ಯಾಹಿ - ಹೋಗು, ಪ್ರಜಾನಾಶಂ - ಪ್ರಜಾನಾಶವನ್ನು, ಪ್ರಣೇಷ್ಯಸಿ - ಮಾಡುವೆ ॥೨೯॥ ಪ್ರಜ್ವರಃ - ವೈಷ್ಣವ ಜ್ವರವು, ಮೇ - ನನಗೆ, ಭ್ರಾತಾ - ಒಡಹುಟ್ಟಿದವನು, ತ್ವಂಚ- ನೀನೂ, ಮೇ - ನನಗೆ, ಭಗಿನೀ - ಸಹೋದರಿಯು, ಭವ - ಆಗು, ಅಸ್ಮಿನ್‌ಲೋಕೇ - ಈ ಲೋಕದಲ್ಲಿ, ಉಭಾಭ್ಯಾಂ - ನಿಮ್ಮಿಬ್ಬರಿಂದಲೂ ಕೂಡಿ, ಭೀಮಸೈನಿಕಃ - ಭಯಂಕರ ಸೈನ್ಯವುಳ್ಳವನಾಗಿ, ಚರಾಮಿ- ಸಂಚರಿಸುತ್ತೇನೆ ॥ ೩೦ ॥

— ಸಪ್ತವಿಂಶಾಧ್ಯಾಯಂ ಸಮಾಪ್ತಂ —

ವನ್ನೇ ನಿನಗೆಪತಿಯನ್ನಾಗಿ ನಿರ್ಣಯಿಸಿರುವೆನು॥೨೮॥ನೀನು ಯಾರಿಗೂತಿಳಿಯದಂತೆ ಸಂಚರಿಸುತ್ತಾ, ಕರ್ಮನಿರ್ಮಿತವಾದ ಲೋಕವನ್ನು ಅನುಭವಿಸು. ನನ್ನ ಸೈನ್ಯದಿಂದ ಕೂಡಿ ತೆರಳು. ಪ್ರಜೆಗಳನ್ನು ನಾಶಗೊಳಿಸು ॥೨೯॥ ಪ್ರಜ್ವರನು ನನಗೆ ತಮ್ಮನಾಗಿರಲಿ. ನೀನು ನನಗೆ ತಂಗಿಯಾಗಿರು. ನಾನು ವಿಸ್ತಾರವಾದ ಸೈನ್ಯದಿಂದ ಸಮೇತನಾಗಿ, ನಿಮ್ಮಿಬ್ಬರೊಡನೆ ಯಾರಿಗೂತಿಳಿಯದಂತೆ ಈ ಲೋಕದಲ್ಲಿ ಸಂಚರಿಸುವೆನು, ಎಂದು ಯವನರಾಜನು ಕಾಲಕನ್ನೆಗೆ ಹೇಳಿದನೆಂದು, ನಾರದನು ಪ್ರಾಚೀನಬರ್ಹಿಗೆ ಹೇಳುತ್ತಿದ್ದನೆಂಬಲ್ಲಿಗೆ ಭಾಗವತ ಚಕೋರ ಚಂದ್ರಿಕೆಯೊಳ್

—ಇಪ್ಪತ್ತೇಳನೆಯ ಅಧ್ಯಾಯಂ ಮುಗಿದುದು.—

ಗೂ॥ ಲೋಕದಲ್ಲಿ ಮುದಿತನವನ್ನು ಯಾರೂ ಸಮ್ಮತಿಸುವುದಿಲ್ಲ. ನಾರದನಂತಹ ಜ್ಞಾನಿಗಳಿಗೆ ಜರಾಬಾಧೆಯುಂಟಾಗಲಾರದಾದರೂ ಅದನ್ನು ತಪ್ಪಿಸಿಕೊಳ್ಳುವುದು ಬಹಳ ಕಷ್ಟವು. ಮುದಿತನ, ಮನೋರೋಗ, ಶರೀರರೋಗ, ಜ್ವರ, ಭಯಗಳು ಸೇರಿ ಮರಣವನ್ನುಂಟು ಮಾಡುವುವು. ಎಂದು ಭಾವವು॥

# ಓಂ ನಮಃ ಪರಮಾತ್ಮನೇ

## —ಅಥ ಅಷ್ಟಾವಿಂಶೋಽಧ್ಯಾಯಃ—

ಶ್ರೀನಾರದಃ॥ ಸೈನಿಕಾ ಭಯನಾಮ್ನೋ ಯೇ ಬರ್ಹಿಷ್ಮನ್! ದಿಷ್ಟಕಾರಿಣಃ । ಪ್ರಜ್ವಾರ ಕಾಲಕನ್ಯಾಭ್ಯಾಂ ವಿಚೇರು ರವನೀ ಮಿಮಾಂ ॥ ೧ ॥ ತ ಏಕ ದಾ ತು ರಭಸಾ ಪುರಂಜನಪುರೀಂ ನೃಪ! । ರುರುಧು ರ್ಭೌಮ ಭೋಗಾ ಢ್ಯಾಂ ಜರತ್ಪನ್ನಗಪಾಲಿತಾಂ ॥೨॥ ಕಾಲಕನ್ಯಾಪಿ ಬುಭುಜೇ ಪುರಂಜನ

---

## — ಅಷ್ಟಾವಿಂಶಾಧ್ಯಾಯಂ —

ಕಂ॥ ಕಾಂತಾಚಿಂತನದಿಂ ಮೃತಿ । ಯಾಂತು ಸ್ತ್ರೀಜನ್ಮ ಪಡೆದ ಜೀವಂ ಭಗವ ।
ಚ್ಚಿಂತನದಿಂದಸವ ರ್ಗವ । ನಾಂತ ಮಹಾಚರಿತಮಿಲ್ಲಿ ಪೇಳಲ್ಪಡುಗುಂ ॥

ನಾರದಮುನಿಯು ಹೇಳುತ್ತಾನೆ, ಬರ್ಹಿಷ್ಮನ್ - ಪ್ರಾಚೀನಬರ್ಹಿಯೇ ! ಭಯನಾಮ್ನಃ - ಭಯ ನೆಂಬ ರಾಜನ, ಯೇ ಸೈನಿಕಾಃ - ಯಾವ ಸೈನಿಕರುಂಟೋ ಅವರು, ದಿಷ್ಟಕಾರಿಣಃ- ಸ್ವಾಮಿಯಾಜ್ಞೆ ಯನ್ನು ನಡೆಯಿಸುವವರಾಗಿ, ಪ್ರಜ್ವಾ . . . ಭ್ಯಾಂ - ಪ್ರಜ್ವಾರ, ಕಾಲಕನ್ಯೆ ಇವರೊಡನೆ, ಇಮಾಂ ಅವನೀಂ - ಈ ಭೂಮಿಯನ್ನು, ವಿಚೇರುಃ - ಸಂಚರಿಸಿದರು ॥೧॥ ನೃಪ - ರಾಜನೆ ! ತೇ - ಅವರು, ಏಕದಾ - ಒಮ್ಮೆ, ಭೌಮ . . : ಢ್ಯಾಂ - ಐಹಿಕ ಭೋಗಗಳಿಂದ ಕೂಡಿದ, ಜರ . . . ತಾಂ - ಮುದಿ ಹಾವಿನಿಂದ ಕಾಪಾಡಲ್ಪಟ್ಟ, ಪುರಂಜನಪುರೀಂ - ಪುರಂಜನನ ಪಟ್ಟಣವನ್ನು, ರಭಸಾ-ಬೇಗನೆ, ರುರು ಧುಃ - ಮುತ್ತಿದರು ॥ ೨ ॥ ಯಯಾ - ಯಾವಳಿಂದ, ಅಭಿಭೂತಃ - ಆಕ್ರಮಿಸಲ್ಪಟ್ಟ, ಪುರುಷಃ -

---

## — ಇಪ್ಪತ್ತೆಂಟನೆಯ ಅಧ್ಯಾಯ —

### ಪುರಂಜನನು ಮುಕ್ತಿಯನ್ನು ಪಡೆಯುವುದು.

ಅನಂತರದಲ್ಲಿ ನಾರದಮುನಿಯು ಪ್ರಾಚೀನ ಬರ್ಹಿಯನ್ನು ಕುರಿತು, ಅಯ್ಯಾ ರಾ ಜನೆ ! ಭಯನೆಂಬ ಯವನರಾಜನ ಭಟರು, ಸ್ವಾಮಿಯಾಜ್ಞೆಯನ್ನು ನಡೆಯಿಸಲೆಳಸಿ, ಜ್ವರ, ಕಾಲಕನ್ನೆಯರಿಂದ ಕೂಡಿ ಭೂಮಂಡಲವೆಲ್ಲವನ್ನೂ ಸಂಚರಿಸತೊಡಗಿದರು ॥೧॥ ಒಮ್ಮೆ ಆ ಭಟರು ಐಹಿಕಗಳಾದ ಸಕಲ ಭೋಗಗಳಿಂದ ಕೂಡಿ, ಒಂದಾನೊಂದು ಮು ದಿಹಾವಿನಿಂದ ರಕ್ಷಿಸಲ್ಪಟ್ಟ ಪುರಂಜನ ರಾಜನ ರಾಜಧಾನಿಯನ್ನು ಕಂಡು ಗಕ್ಕನೆ ಅದನ್ನು ಮುತ್ತಿದರು. ॥ ೨ ॥ ಆಕ್ರಮಿಸಿದ ಮಾತ್ರದಿಂದಲೇ ಎಂತಹ ಪುರುಷನನ್ನಾದರೂ ನಿಸ್ಸಾರ ಗೊಳಿಸತಕ್ಕ ಕಾಲಕನ್ನೆಯೆಂಬವಳು ಮೊದಲೇ ಆ ಪುರವನ್ನು ಬಲಾತ್ಕಾರದಿಂದ ವಶಗೊ

---

ಗೂಢಾರ್ಥ-ಅಯ್ಯಾ ರಾಜನೆ ! ಪೂರ್ವಾಧ್ಯಾಯದಲ್ಲಿ, ಸಂಸಾರವ್ಯಾಪೃತನಾದ ಜೀವನಿಗೆ ಜರಾರೋ ಗಾದಿಗಳು ಆಸನ್ನಗಳಾದುವೆಂದು ಹೇಳಿದೆನಷ್ಟೆ. ಈಗ ಜೀವನು ಸ್ಥೂಲಶರೀರವನ್ನುಳಿಯುವ ರೀತಿ ಯನ್ನು ಹೇಳುವೆನು ಕೇಳು. ಮರಣ ಭಯಕ್ಕೆ ಹೇತುಗಳಾದ ಆಧಿವ್ಯಾಧಿಗಳು ಭಗವತ್ಸಂಕಲ್ಪಾನು ಸಾರವಾಗಿ, ರೋಗರಾಜನಾದ ಜ್ವರದಿಂದಲೂ, ಮುದಿತನದಿಂದಲೂ ಕೂಡಿ ಜಗತ್ತಿನಲ್ಲಿ ವ್ಯಾಪಿಸಿದುವು॥೧॥ ಮುದಿತನವು ಶರೀರವನ್ನಾಕ್ರಮಿಸಿ, ಇಂದ್ರಿಯಗಳನ್ನು, ಸಡಲಿಸಲು ಪ್ರಾಣವಾಯುವು ಬಲಗುಂದಿತು.

ಪುರಂ ಬಲಾತ್ । ಯಯಾಽಭಿಭೂತಃ ಪುರುಷ ಸ್ಸದ್ಯೋ ನಿಸ್ಸಾರತಾಂ ಮಿ
ಯಾತ್ ॥೩॥ ತಯೋಪಭುಜ್ಯಮಾನಾಂ ವೈ ಯವನಾ ಸ್ಸರ್ವತೋ ದಿಶಂ ।
ದ್ವಾರ್ಭಿಃ ಪ್ರವಿಶ್ಯ ಸುಭೃಶಂ ಪ್ರಾರ್ದಯನ್ ಸಕಲಾಂ ಪುರೀಂ॥೪॥ ತಸ್ಯಾಂ
ಪ್ರಪೀಡ್ಯಮಾನಾಯಾ ಮಭಿಮಾನೀ ಪುರಂಜನಃ । ಅವಾಪೋರುವಿಧಾಂ ಸ್ತಾ
ಪಾನ್ ಕುಟುಂಬೀ ಮಮತಾಕುಲಃ ॥೫॥ ಕನ್ಯೋಪಗೂಢೋ ನಷ್ಟಶ್ರೀಃ
ಕೃಪಣೋ ವಿಷಯಾತ್ಮಕಃ । ನಷ್ಟಪ್ರಜ್ಞೋ ಹತೈಶ್ವರ್ಯೋ ಗಂಧರ್ವ
ಯವನೈ ರ್ಬಲಾತ್ ॥೬॥ ವಿಶೀರ್ಣಾಂ ಸ್ವಪುರೀಂ ವೀಕ್ಷ್ಯ ಪ್ರತಿಕೂಲಾ

---

ಪುರುಷನು, ಸದ್ಯಃ - ಕೂಡಲೇ, ನಿಸ್ಸಾರತಾಂ - ಬಲಹೀನತೆಯನ್ನು, ಇಯಾತ್ - ಪಡೆಯುವನೋ, ಅಂತಹ, ಕಾಲಕನ್ಯಾಪಿ - ಕಾಲಕನ್ನೆಯು (ಮುದಿತನವು) ಬಲಾತ್ - ಬಲಾತ್ಕಾರವಾಗಿ, ಪುರಂಜನನ ಪಟ್ಟಣವನ್ನು (ಶರೀರವನ್ನು) ಬುಭುಜೇ - ಆಕ್ರಮಿಸಿದಳು ॥೩॥ ತಯಾ - ಅವಳಿಂದ, ಸರ್ವತೋದಿಶಂ- ಎಲ್ಲಾಕಡೆಗಳಲ್ಲಿಯೂ, ಉಪಭುಜ್ಯಮಾನಾಂ - ಅನುಭವಿಸಲ್ಪಡುತ್ತಿರುವ, ಪುರೀಂ -ಪಟ್ಟಣವನ್ನು, ಯವನಾಃ - ಯವನರು, ದ್ವಾರ್ಭಿಃ - ಬಾಗಿಲುಗಳಿಂದ, ಪ್ರವಿಶ್ಯ - ಹೊಕ್ಕು, ಸುಭೃಶಂ - ಬೇಗನೆ, ಸಕಲಾಂ - ಎಲ್ಲವನ್ನೂ, ಪ್ರಾರ್ದಯನ್ - ಪೀಡಿಸಿದರು ॥ ೪ ॥ ತಸ್ಯಾಂ - ಆ ನಗರವು, ಪ್ರಪೀಡ್ಯಮಾನಾಯಾಂ - ಪೀಡಿಸಲ್ಪಡಲು, ಅಭಿಮಾನೀ - ಅದನ್ನಾಳುವ, ಕುಟುಂಬೀ - ಪರಿವಾರದಿಂದ ಕೂಡಿದ, ಮಮತಾಕುಲಃ - ಮಮಕಾರದಿಂದ ಪೀಡಿತನಾದ, ಪುರಂಜನನು, ಉರುವಿಧಾನ್ - ಹಲವು ಬಗೆಗಳಾದ, ತಾಪಾನ್ - ಸಂಕಟಗಳನ್ನು, ಅವಾಪ - ಹೊಂದಿದನು ॥ ೫ ॥ ಕನ್ಯೋಪಗೂಢಃ - ಕಾಲಕನ್ಯೆಯಿಂದಾಲಿಂಗಿತನಾದ, ನಷ್ಟಶ್ರೀಃ - ಐಶ್ವರ್ಯಹೀನನಾದ, ಕೃಪಣಃ - ದೀನನಾದ, ವಿಷಯಾತ್ಮಕಃ - ವಿಷಯಾಭಿಲಾಷೆಯುಳ್ಳ, ನಷ್ಟಪ್ರಜ್ಞಃ - ಪ್ರಜ್ಞೆಯಿಲ್ಲದ, ಹತೈಶ್ವರ್ಯಃ - ಭಾಗ್ಯಹೀನನಾದ ರಾಜನು, ಗಂಧ... ನೈಃ - ಗಂಧರ್ವಯವನರಿಂದ, ಬಲಾತ್ - ಬಲಾತ್ಕಾರದಿಂದ ॥೬॥ ವಿಶೀರ್ಣಾಂ - ಜರ್ಜರಿತವಾದ, ಸ್ವಪು

---

ಳಸಿಕೊಂಡು, ಅನುಭವಿಸುತ್ತಿದ್ದಳು ॥೩॥ ಆ ನಗರವನ್ನು ಕಾಲಕನ್ಯೆಯೋರ್ವಳೇ ಏಕಾಧಿಪತ್ಯದಿಂದ ಅನುಭವಿಸುತ್ತಿರುವುದನ್ನು ಕಂಡು, ಇತರರಾದ ಯವನಭಟರೂ ಎಲ್ಲಾ ಕಡೆಯ ಬಾಗಿಲುಗಳಿಂದ ಆ ಪುರವನ್ನು ನುಗ್ಗಿ ಎಲ್ಲೆಲ್ಲಿಯೂ ಕೋಟಲೆಗೊಳಿಸ ತೊಡಗಿದರು ॥೪॥ ಇಂತು ತನ್ನ ರಾಜಧಾನಿಯು ಯವನಾಕ್ರಾಂತವಾಗಲು, ಆ ಪುರಾಭಿಮಾನಿಯಾದ ಪುರಂಜನನು ಕುಟುಂಬಸಹಿತನಾಗಿ ಮಮಕಾರದಿಂದ ಬಗೆಬಗೆಯಾಗಿ ಸಂಕಟಪಟ್ಟನು ॥೫॥ ಮುದಿತನವು ಅಡಸಿದಕೂಡಲೇ ಶರೀರದಲ್ಲಿ ಕಳೆಗುಂದಿತು. ಶೌರ್ಯವಡಗಿತು. ವಿಷಯಾಭಿಲಾಷೆ ಹೆಚ್ಚಿತು. ಪ್ರಜ್ಞೆಯು ಸಡಲಿತು. ಐಶ್ವರ್ಯವು ಹೋಯಿತು. ಹಗೆಗಳಾದ ಗಂಧರ್ವರು ಯವನರು ಸಹ ಪಟ್ಟಣವನ್ನು ಸೂರೆಗೊಂಡರು. ಮಕ್ಕಳು, ಮಮ್ಮ

---

ಜರಾಗ್ರಸ್ತನಾದವನು ಎಂತವನಾದರೇನು ? ಕೂಡಲೇ ದುರ್ಬಲನಾಗುವನು ॥ ೩ ॥ ಇಂತು ಶರೀರವು ಜರಾಜರ್ಜರಿತವಾದೊಡನೆಯೇ ನಖಮುಖದಲ್ಲಿಯೂ ರೋಗಗಳು ವ್ಯಾಪಿಸಿ, ಶರೀರವನ್ನು ಪೀಡಿಸತೊಡಗಿದುವು ॥೪॥ ರೋಗಗಳು ಪ್ರಬಲವಾಗಿ ಶರೀರವು ಪರಾಧೀನವಾಗಲು, ಆ ಶರೀರವು ತನ್ನದು ಎಂಬಭಿಮಾನದಿಂದ ಕೂಡಿರುವ ಜೀವನ ಹಲವು ಬಗೆಯಾಗಿ ಸಂಕಟಪಟ್ಟನು ॥೫॥

ಸ್ಥೂಲಶರೀರಕ್ಕೆ ಮುಪ್ಪಡಸಿ, ಕಳೆಗುಂದಿ ಕಾಲಕ್ರಮದಿಂದ ರೋಗಗಳು ವ್ಯಾಪಿಸಿ, ಶಿಥಿಲವಾ

ನನಾದೃತಾನ್ | ಪುತ್ರಾನ್ ಪೌತ್ರಾನುಗಾಽಮಾತ್ಯಾನ್ ಜಾಯಾಂಚ ಗತ
ಸೌಹೃದಾಂ ||೭|| ಆತ್ಮಾನಂ ಕನ್ಯಯಾ ಗ್ರಸ್ತಂ ಪಾಂಚಾಲಾನರಿದೂಷಿ
ತಾನ್ | ದುರಂತಚಿಂತಾಮಾಪನ್ನೋ ನಲೇಭೇ ತತ್ಪ್ರತಿಕ್ರಿಯಾಂ ||೮||
ಕಾಮಾನಭಿಲಷನ್ ದೀನೋ ಯಾತಯಾಮಾಂಶ್ಚ ಕನ್ಯಯಾ | ವಿಗತಾ
ತ್ಮಗತಿಸ್ನೇಹಃ ಪುತ್ರದಾರಾಂಶ್ಚ ಲಾಲಯನ್ ||೯|| ಗಂಧರ್ವಯವನಾ
ಕ್ರಾಂತಾಂ ಕಾಲಕನ್ಯೋಪಮರ್ದಿತಾಂ | ಹಾತುಂ ಪ್ರಚಕ್ರಮೇ ರಾಜಾ
ತಾಂ ಪುರೀಮನಿಕಾಮತಃ ||೧೦|| ಭಯನಾಮ್ನೋಽಗ್ರಜೋ ಭ್ರಾತಾ

ರೀಂ - ತನ್ನ ನಗರವನ್ನೂ, ಅನಾದೃತಾನ್ - ಆದರಿಸದಿರುವ, ಪುತ್ರಾನ್ - ಮಕ್ಕಳನ್ನೂ, ಪೌತ್ರಾ... ತ್ಯಾನ್ - ಪೌತ್ರರು, ಭೃತ್ಯರು, ಮಂತ್ರಿಗಳು ಇವರನ್ನೂ, ಗತಸೌಹೃದಾಂ-ಪ್ರೀತಿಸದಿರುವ, ಜಾಯಾಂಚ- ಹೆಂಡತಿಯುನ್ನೂ, ||೭|| ಕನ್ಯಯಾ - ಕಾಲಕನ್ನೆಯಿಂದ, ಗ್ರಸ್ತಂ - ಆಕ್ರಮಿಸಲ್ಪ, ಆತ್ಮಾನಂ- ತನ್ನನ್ನೂ, ಅರಿದೂಷಿತಾನ್ - ಶತ್ರುಗಳಿಂದ ಮುತ್ತಲ್ಪಟ್ಟ, ಪಾಂಚಾಲಾನ್ - ಪಾಂಚಾಲದೇಶಗಳನ್ನೂ, ವೀಕ್ಷ್ಯ - ಕಂಡು, ದುರಂ...ತಾಂ - ಅಪಾರವಾದ ಚಿಂತೆಯನ್ನು, ಆಪನ್ನಃ-ಹೊಂದಿ, ತತ್ಪ್ರತಿ ಕ್ರಿಯಾ- ಅದಕ್ಕೆ ಪ್ರತೀಕಾರವನ್ನು, ನಲೇಭೇ- ಹೊಂದಲಿಲ್ಲ ||೮|| ಕನ್ಯಯಾ - ಕಾಲಕನ್ನೆಯಿಂದ, ಯಾತಯಾಮಾನ್ ನಿಸ್ಸಾರಗಳಾದ, ಕಾಮಾನ್ - ಬಯಕೆಗಳನ್ನು, ಅಭಿಲಷನ್ - ಬಯಸುತ್ತಾ, ದೀನಃ - ದೀನನಾಗಿ, ವಿಗ...ಹಃ, ವಿಗತ - ಕಳೆದುಹೋದ, ಆತ್ಮ - ತನ್ನ, ಗತಿ - ಪರಲೋಕಗತಿಯು, ಸ್ನೇಹಃ - ಪುತ್ರಾದಿಸ್ನೇಹವೂ ಉಳ್ಳವನಾಗಿ, ಪುತ್ರ . . . ಶ್ಚ - ಹೆಂಡಿರುಮಕ್ಕಳನ್ನು, ಲಾಲಯನ್ - ಅನುಸರಿಸುತ್ತಾ ||೯|| ರಾಜಾ - ಪುರಂಜನನು, ಗಂಧ . . . ತಾಂ - ಗಂಧರ್ವರು, ಯವನರು ಇವರಿಂದ ಮುತ್ತಲ್ಪಟ್ಟ, ಕಾಲ . . . ತಾಂ - ಕಾಲಕನ್ನೆಯಿಂದ ಪೀಡಿಸಲ್ಪಟ್ಟ, ತಾಂಪುರೀಂ - ಆ ನಗರವನ್ನು, ಅನಿಕಾಮತಃ - ಇಚ್ಛೆ ಇಲ್ಲದಿದ್ದರೂ, ಹಾತುಂ - ಬಿಡುವುದಕ್ಕೆ, ಪ್ರಚಕ್ರಮೇ - ಆರಂಭಿಸಿದನು || ೧೦ || ಭಯನಾಮ್ನಃ - ಭಯನೆಂಬ ರಾಜನ, ಅಗ್ರಜಃ - ಹಿರಿಯವನಾದ, ಪ್ರಜ್ವಾರಃ - ಜ್ವರನೆಂಬ ಭ್ರಾತಾ -

ಕ್ಕಳು, ಭೃತ್ಯರು, ಮಂತ್ರಿಗಳು ಎಲ್ಲರೂ ಅಸಡ್ಡೆಯಾಗಿ ಕಂಡರು. ಹೆಂಡತಿಯು ಪ್ರೇಮವನ್ನುಳಿದಳು. ಕಾಲಕನ್ನೆಯು ಶರೀರವನ್ನಾಕ್ರಮಿಸಿದಳು. ಇದನ್ನು ಕಂಡ ಪುರಂಜನರಾಜನು ಚಿಂತಾಸಮುದ್ರದಲ್ಲಿ ಮುಳುಗಿ, ಅದಕ್ಕೆ ಪ್ರತೀಕಾರವನ್ನು ಕಾಣದಾದನು ||೭-೮|| ಕಾಲಕನ್ಯಾಕ್ರಮಣದಿಂದ ನಿಸ್ಸಾರಗಳಾದರೂ ವಿಷಯಸುಖಗಳನ್ನು ಬಯಸುತ್ತಾ, ಧೈರ್ಯಗುಂದಿ ಪರಲೋಕದಲ್ಲಿ ಸದ್ಗತಿಯನ್ನೂ, ಇಹದಲ್ಲಿ ಪತ್ನೀಪುತ್ರಾದಿಗಳಸ್ನೇಹವನ್ನೂ ಕೂಡಾ ಕಳೆದುಕೊಂಡು, ಕೃಪಣನಾದರೂ ಆ ಪತ್ನೀಪುತ್ರಾದಿಗಳನ್ನೇ ಅನುಸರಿಸುತ್ತಾ, ಗಂಧರ್ವರು, ಯವನರು, ಕಾಲಕನ್ನೆ, ಇವರಿಂದ ಮುತ್ತಲ್ಪಟ್ಟು ಶಿಥಿಲವಾಗಿರುವ ತನ್ನ ರಾಜಧಾನಿಯನ್ನು ಬಿಟ್ಟು ತೆರಳುವುದಕ್ಕಿಷ್ಟವಿಲ್ಲದಿದ್ದರೂ, ಬಲಾತ್ಕಾರದಿಂದ ಹೊರಡಲೆಳಸಿದನು ||೧೦|| ಅಷ್ಟರಲ್ಲಿ ಭಯರಾಜನ ಹಿರಿಯಣ್ಣನಾದ ಜ್ವರನೆಂಬ

ಗಲು ತದಭಿಮಾನಿಯಾದ ಜೀವನು ಪ್ರಜ್ಞಾಹೀನನಾಗಿ ತನ್ನ ಸ್ವರೂಪವನ್ನು ಮರೆತು, ದೀನನಾದರೂ ವಿಷಯಾಭಿಲಾಷೆಯನ್ನುಳಿಯಲಿಲ್ಲ ||೭|| ಇಂದ್ರಿಯ ಪರಿಣಾಮಗಳು, ಪುಣ್ಯಪಾಪಕರ್ಮಗಳು, ಇಂದ್ರಿಯಗಳು, ಇಂದ್ರಿಯಾಭಿಮಾನ ದೇವತೆಗಳು, ಬುದ್ಧಿಯು, ಇವುಗಳೆಲ್ಲಾ ಸ್ವಾಧೀನತಪ್ಪಿ

ಪ್ರಜ್ವಾರಃ ಪ್ರತ್ಯುಪಸ್ಥಿತಃ । ದದಾಹ ತಾಂಪುರೀಂ ಕೃತ್ಸ್ನಾಂ ಭ್ರಾತುಃ ಪ್ರಿ
ಯಚಿಕೀರ್ಷಯಾ ॥೧೧॥ ತಸ್ಯಾಂ ಸಂದಹ್ಯಮಾನಾಯಾಂ ಸಪೌರ ಸ್ಸಪರಿ
ಚ್ಛದಃ । ಕೌಟುಂಬಿಕಃ ಕುಟುಂಬಿನ್ಯಾ ಉಪಾತಪ್ಯತ ಸಾನ್ವಯಃ ॥೧೨॥
ಯವನೋಪರುದ್ಧಾಯತನೋ ಗ್ರಸ್ತಾಯಾಂ ಕಾಲಕನ್ಯಯಾ । ಪುರ್ಯಾಂ
ಪ್ರಜ್ವಾರಸಂಸೃಷ್ಟಃ ಪುರಪಾಲೋಽನ್ವತಪ್ಯತ ॥೧೩॥ ನಶೇಕೇ ಸೋಽವಿ
ತುಂ ತತ್ರ ಪುರುಕೃಚ್ಛ್ರೋರುವೇಪಥುಃ । ಗಂತುಂ ಮೈಚ್ಛತ್ತತೋ ವೃಕ್ಷ

ಸಹೋದರನು, ಪ್ರತ್ಯುಪಸ್ಥಿತಃ - ಆಕ್ರಮಿಸಿ, ಭ್ರಾತುಃ - ತಮ್ಮನಿಗೆ, ಪ್ರಿಯಚಿಕೀರ್ಷಯಾ - ಪ್ರಿಯ
ವನ್ನುಮಾಡಲೆಳಸಿ, ಕೃತ್ಸ್ನಾಂ-ಸಂಪೂರ್ಣವಾಗಿ, ತಾಂಪುರೀಂ-ಆ ಪಟ್ಟಣವನ್ನು, ದದಾಹ-ಸುಟ್ಟನು॥೧೧॥
ತಸ್ಯಾಂ- ಆಪಟ್ಟಣವು, ಸಂದಹ್ಯಮಾನಾಯಾಂ - ದಹಿಸಲ್ಪಡಲು, ಸಪೌರಃ - ಪುರಜನರಿಂದ ಕೂಡಿದ,
ಸಪರಿಚ್ಛದಃ - ಪರಿವಾರದಿಂದಕೂಡಿದ, ಕೌಟುಂಬಿಕಃ - ಕುಟುಂಬಯುಕ್ತನಾದ ರಾಜನು, ಸಾನ್ವಯಃ-
ಪುತ್ರಾದಿಗಳಿಂದಕೂಡಿ, ಉಪಾತಪ್ಯತ - ದುಃಖಿಸಿದನು ॥ ೧೨ ॥ ಕಾಲಕನ್ಯಯಾ - ಕಾಲಕನ್ನೆಯಿಂದ,
ಪುರ್ಯಾಂ - ಪಟ್ಟಣವು, ಗ್ರಸ್ತಾಯಾಂ - ಆಕ್ರಮಿಸಲ್ಪಡಲು, ಯವ...ನಃ-ಯವನರಿಂದ ಮುತ್ತಲ್ಪಟ್ಟ ನೆಲೆ
ಯುಳ್ಳವನಾಗಿ, ಪ್ರಜ್ವಾ...ಷ್ಟಃ - ಜ್ವರದಿಂದ ವ್ಯಾಪ್ತನಾದ, ಪುರಪಾಲಃ - ಪುರಂಜನನು, ಅನ್ವತಪ್ಯತ-
ವ್ಯಥೆಗೊಂಡನು ॥೧೩॥ ಪುರು....ಥುಃ-ಅಧಿಕವಾದ ದುಃಖದಿಂದ ನಡುಕವುಳ್ಳವನಾಗಿ, ತತ್ರ - ಅದ

ವನು ತನ್ನ ತಮ್ಮನಿಗೆ ಪ್ರಿಯವನ್ನುಸಗಲೆಳಸಿ, ಬಂದು ಆ ಪಟ್ಟಣವನ್ನೆಲ್ಲಾ ಸುಡತೊಡಗಿ
ದನು ॥೧೧॥ ರಾಜಧಾನಿಯು ಸುಡುತ್ತಿರುವುದನ್ನು ಕಂಡು, ಪಟ್ಟಣಿಗರಿಂದಲೂ, ಪರಿವಾ
ರದವರಿಂದಲೂ, ತನ್ನ ಬಳಗದಿಂದಲೂ ಕೂಡಿದ ಪುರಂಜನನು ದೊಡ್ಡ ಕುಟುಂಬಿಯಾದುದ
ರಿಂದ ಪತ್ನಿಯೊಡನೆ ಕೊರಗಿದನು॥೧೨॥ ಕಾಲಕನ್ನೆಯು ಪಟ್ಟಣವನ್ನು ಮುತ್ತಿದಕೂಡಲೇ
ಯವನರೆಲ್ಲರೂ ಅರಮನೆಯನ್ನು ಆಕ್ರಮಿಸಿದರು. ಜ್ವರನಕಾಟವನ್ನು ಸೈರಿಸಲಾರದೇ
ಪುರಂಜನನು ಗೋಳಾಡುತ್ತಾ, ವೇದನಾತಿಶಯದಿಂದ ನೊಂದು ನರಳುತ್ತಾ, ಆ ರಾಜಧಾನಿ
ಯನ್ನು ಸಲಹುವುದಕ್ಕೆ ಕೈಲಾಗದೆ, ಬೆಂಕಿಹೊತ್ತಿದ ಮರದಪೊಟ್ಟರೆಯಿಂದ ತೆರಳುವ
ಉರಗರಾಜನಂತೆ ಆ ಪುರದಿಂದ ತೆರಳಲೆಳಸಿದನು ॥೧೩॥ ಆಗ ಗಂಧರ್ವರು ಬಂದು ಕೈ-
ಕಾಲುಗಳನ್ನು ಬಿಗಿಯಲು, ಪೌರುಷಹೀನನಾಗಿ, ಹಗೆಗಳಿಂದ [illegible]ವನದಿಂದ ನಿರುದ್ಧನಾಗಿ
ಧಾರಾಳವಾಗಿ ತೆರಳುವುದಕ್ಕೂ ಯತ್ನವಿಲ್ಲದೆ, 'ನಾನು ನನ್ನದು[illegible]ಂಬ ಅಹಂಕಾರ ಮಮ

ದುವು. ಶಬ್ದಾದಿವಿಷಯ ಭೋಗಗಳಿಗೆ ವಿಘ್ನಗಳುಂಟಾದುವು. ಪರಲೋಕ್ಕ್ರಿಯೆಯು ಕೆಟ್ಟಿತು. ಈ ಶರೀರ
ದಲ್ಲಿ ಇಂದ್ರಿಯಾದಿಗಳ ವೈಕಲ್ಯವುಂಟಾಯಿತು. ಕಾಲಕ್ರಮದಿಂದ ಶರೀರಕ್ಕೆ ರೋಗಗಳೊದಗಿ ಮುಪ್ಪಿ
ನಿಂದ ಪರವಶವಾಗಿ ವಿಷಯಭೋಗಗಳಿಗೆ ಅಸಮರ್ಥನಾದರೂ ಅವುಗಳಲ್ಲಿ ಆಸೆಯು ಮಾತ್ರ ತೊಲಗ
ಲಿಲ್ಲ ॥೯॥ ಬಳಿಕ ಜರಾವ್ಯಾಧಿಗಳಿಂದ ಶರೀರವು ನಶಿಸತೊಡಗಲು ಚಿಂತೆಗೊಂಡು ಬಿಡುವುದಕ್ಕಿಚ್ಛೆಯಿಲ್ಲದಿ
ದ್ದರೂ ಬಲಾತ್ಕಾರದಿಂದ ಸ್ಥೂಲಶರೀರವನ್ನುಳಿಯಲೆಳಸಿದನು ॥೧೦॥ ಇಂತು ಪ್ರಾಣೋತ್ಕ್ರಮಣಕಾ
ಲವು ಸನ್ನಿಹಿತವಾಗಲು ಜ್ವರದಿಂದ ನೈಸಡತೊಡಗಿತು ॥೧೧॥ ಶರೀರಕ್ಕೆ ಜ್ವರವು ವ್ಯಾಪಿಸಿದಕೂಡಲೇ
ಆ ಶರೀರಾಭಿಮಾನದಿಂದ ಇಂದ್ರಿಯಾದಿ ಪರಿವಾರಸಮೇತನಾದ ಜೀವನೂ ಬುದ್ಧಿಯೊಡನೆ ಜ್ವರತಪ್ತನಾ
ದನು ॥ ೧೨ ॥ ಇಂತು ಜ್ವರಯಾತನೆಯಿಂದ ಕಂಪಿತಗಾತ್ರನಾಗಿ, ಶರೀರನಿಲ್ಲುವುದಿಲ್ಲವೆಂದು ತಿಳಿದು,

ಕೋಟರಾದಿವ ಸಾ ನಲಾತ್ ||೧೩|| ಶಿಥಿಲಾವಯವೋ ಯರ್ಹಿ ಗಂಧರ್ವೈರ್ಹೃತಪೌರುಷಃ। ಯವನೈ ರರಿಭೀ ರಾಜ ನ್ನುಪರುದ್ಧೋ ರುರೋದ ಹ ||೧೪|| ದುಹಿತೄಃ ಪುತ್ರಪೌತ್ರಾಂಶ್ಚ ಜಾಮಿಜಾಮಾತೃಪಾರ್ಷದಾನ್ । ಸ್ವತ್ವಾಽವಶಿಷ್ಟಂ ಯತ್ಕಿಂಚಿದ್ಗೃಹಕೋಶಪರಿಚ್ಛದಂ ||೧೫|| ಅಹಂ ಮಮೇತಿ ಸ್ವೀಕೃತ್ಯ ಗೃಹೇಷು ಕುಮತಿರ್ಗೃಹೀ । ದಧ್ಯೌ ಪ್ರಮದಯಾ ದೀನೋ ವಿಪ್ರಯೋಗ ಉಪಸ್ಥಿತೇ ||೧೬|| ಲೋಕಾಂತರಂ ಗತವತಿ ಮಯ್ಯನಾಥಾ ಕುಟುಂಬಿನೀ । ವರ್ತಿಷ್ಯತೇ ಕಥಂ ತ್ವೇಷಾ ? ಬಾಲಕಾ ನನುಶೋಚತೀ ||೧೭|| ನ ಮಯ್ಯನಾಶಿತೇ ಭುಙ್ಕ್ತೇ ನಾಽಸ್ನಾತೇ ಸ್ನಾತಿ ಮತ್ಪರಾ।

ನ್ನು, ಸಃ-ಆ ರಾಜನು, ಅವಿತುಂ ಕಾಪಾಡುವುದಕ್ಕೆ, ನಶೇಕೇ- ಶಕ್ತನಾಗಲಿಲ್ಲ, ತತಃ-ಬಳಿಕ, ಸಾನಲಾತ್ - ಬೆಂಕಿಯಿಂದ ಕೂಡಿದ, ವೃಕ್ಷ...ವ-ಮರದ ಪೊಟ್ಟರೆಯಿಂದಲೋಪಾದಿಯಲ್ಲಿ, ತತಃ - ಅಲ್ಲಿಂದ, ಗಂತುಂ-ಹೊರಡುವುದಕ್ಕೆ, ಐಚ್ಛತ್ - ಎಳಸಿದನು ||೧೩|| ರಾಜನ್ - ಪ್ರಾಚೀನಬರ್ಹಿಯೆ ! ಯರ್ಹಿ-ಯಾವಾಗ, ಗಂಧರ್ವೈಃ- ಗಂಧರ್ವರಿಂದ, ಶಿಥಿಲಾವಯವಃ - ಅಂಗಭಂಗವಾಗಿ, ಹತಪೌರುಷಃ-ಶೌರ್ಯವನ್ನಳಿದು, ಅರಿಭಿಃ-ಹಗೆಗಳಾದ, ಯವನೈಃ - ಮ್ಲೇಚ್ಛರಿಂದ, ಉಪರುದ್ಧಃ - ಮುತ್ತಲ್ಪಟ್ಟನೋ, ಆಗ ರುರೋದಹ-ಅಳತೊಡಗಿದನು ||೧೪|| ದುಹಿತೄಃ- ಹೆಣ್ಣುಮಕ್ಕಳನ್ನೂ, ಪುತ್ರಪೌತ್ರಾಂಶ್ಚ - ಮಕ್ಕಳು ಮಮ್ಮಕ್ಕಳನ್ನೂ, ಜಾಮಿ...ದಾನ್ - ಸೊಸೆಯರು, ಅಳಿಯಂದಿರು, ಭೃತ್ಯರು ಇವರನ್ನು, ಸ್ವತ್ವಾವಷ್ಟಂ-ತನ್ನದೆಂದು ಹೆಸರುಮಾತ್ರವಿರುವ, ಯತ್ಕಿಂಚಿತ್ - ಯಾವ, ಗೃಹ...ದಂ - ಮನೆ, ಬಂಡಾರ, ಪರಿವಾರವುಂಟೋ, ಅವರನ್ನು, ಅಹಂಮಮೇತಿ - ನಾನು ನನ್ನದೆಂದು, ಸ್ವೀಕೃತ್ಯ - ತಿಳಿದು, ಕುಮತಿಃ-ದುರ್ಬುದ್ಧಿಯುಳ್ಳ, ಗೃಹೀ - ರಾಜನು, ದೀನಃ-ದೀನನಾಗಿ, ಪ್ರಮದಯಾ - ಹೆಂಡತಿಯೊಡನೆ, ವಿಪ್ರಯೋಗೇ-ವಿಯೋಗವು, ಉಪಸ್ಥಿತೇ - ಒದಗಲು, ದಧ್ಯೌ-ಚಿಂತಿಸಿದನು ||೧೬|| ಮಯಿ-ನಾನು, ಲೋಕಾಂತರಂ ಪರಲೋಕಕ್ಕೆ, ಗತವತಿ-ಹೋದಲ್ಲಿ, ಏಷಾಕುಟುಂಬಿನೀ - ಈ ಮಡದಿಯು, ಅನಾಥಾ-ದಿಕ್ಕಿಲ್ಲದೆ, ಬಾಲಕಾನ್- ಮಕ್ಕಳನ್ನು ಕುರಿತು, ಅನುಶೋಚತೀ - ಚಿಂತಿಸುತ್ತಾ, ಕಥಂ-ಹೇಗೆ, ವರ್ತಿಷ್ಯತೇ-ಇರುವಳೋ ||೧೭|| ಮತ್ಪರಾ-ನನ್ನಲ್ಲಿ ಪ್ರೀತಿಯುಳ್ಳ, ಸಾ-ಆಕೆಯು, ಮಯಿ-ನಾನು, ಅನಾಶಿತೇ-ಊಟ

ಕಾರಗಳಿಂದ ಮಕ್ಕಳು, ಮಮ್ಮಕ್ಕಳು, ಸೊಸೆಯರು, ಅಳಿಯಂದಿರು, ಭೃತ್ಯರು ಮೊದಲಾದವರನ್ನು ಹಂಬಲಿಸುತ್ತಾ, ಪರಮಪ್ರೇಯಸಿಯಾದ ಮಡದಿಮಣಿಯನ್ನಳಿದೆಂತು ತೆರಳಲಿ ? ಎಂದು ಗೋಳ್ಕರೆತೊಡಗಿದನು || ೧೬ || ಅಕಟಾ ! ನಾನು ಲೋಕಾಂತರಕ್ಕೆ ತೆರಳಿದರೆ, ಅನಾಥಳಾದ ಈ ನನ್ನ ಮಡದಿಯು ಮಕ್ಕಳನ್ನು ಕುರಿತು ಗೋಳಾಡುತ್ತಾ ಹೇಗಿದ್ದಾಳು ? ||೧೭|| ನನ್ನಲ್ಲಿ ಸಂಪೂರ್ಣಪ್ರೀತಿಯುಳ್ಳ ನನ್ನ ಮಡದಿಯು ನಾನುಂಡಲ್ಲದೆ ಉಣ್ಣುವುದಿಲ್ಲ. ನಾನುಮಿಂದಲ್ಲದೆ ತಾನು ಮಿಯುವುದಿಲ್ಲ, ನಾನು ಕೋಪಿಸಿಕೊಂಡರೆ

ಪ್ರಯಾಣೋನ್ಮುಖನಾದನು ||೧೩|| ಇಷ್ಟಾದರೂ ದೇಹಾಭಿಮಾನ ತೊಲಗದೆ ಭ್ರಾಂತಿಯಿಂದ ತನ್ನದೆಂದು ಭಾವಿಸಲ್ಪಟ್ಟಿರುವ ವಿಷಯಾದಿಗಳನ್ನು ಹಂಬಲಿಸಿ ರೋದಿಸಿದನು ||೧೪|| ಇಂತು ಜೀವನು ಶರೀರವನ್ನು ಳಿಯಲಾರದೆ ರೋದಿಸುತ್ತಿರುವಾಗ ಮೃತ್ಯುವು ಸನ್ನಿಹಿತವಾಯಿತು. ಜೀವನು ಶರೀರವನ್ನುಳಿದು ಹೊರಟನು. ಅವನಿಗೆ ಪರಿವಾರವೆನಿಸಿರುವ ಕರ್ಮೇಂದ್ರಿಯಗಳು, ಜ್ಞಾನೇಂದ್ರಿಯಗಳು, ಪಂಚಪ್ರಾಣಗಳು,

ಮಯಿ ರುಷ್ಟೇ ಸುಸಂತ್ರಸ್ತಾ ಭರ್ತ್ಸಿತೇ ಯತವಾಗ್ಭಯಾತ್ ॥ ೧೯ ॥
ಪ್ರಬೋಧಯತಿ ಮಾಽವಿಜ್ಞಂ ವ್ಯುಷಿತೇ ಶೋಕಕರ್ಶಿತಾ । ವರ್ತ್ಮೈತ
ದ್ಗೃಹಮೇಧೀಯಂ ವೀರಸೂರಪಿ ನೇಷ್ಯತಿ ॥ ೨೦ ॥ ಕಥಂ ನು ? ದಾರಕಾ
ದೀನಾ ದಾರಕೀರ್ವಾಽಪರಾಯಣಾಃ । ವರ್ತಿಷ್ಯಂತೇ ಮಯಿ ಗತೇ ಭಿ
ನ್ನನಾವ ಇವೋದಧೌ ॥ ೨೧ ॥ ಏವಂ ಕೃಪಣಯಾ ಬುದ್ಧ್ಯಾ ಶೋಚಂತ ಮ
ತದರ್ಹಣಂ । ಗೃಹೀತುಂ ಕೃತಧೀರೇನಂ ಭಯನಾಮಾಽಭ್ಯಪದ್ಯತ ॥

ಮಾಡಿಸಲ್ಪಡದೆ, ನಭುಂಕ್ತೇ-ಊಟಮಾಡುವುದಿಲ್ಲ, ಅಸ್ನಾತೇ ಸ್ನಾನಮಾಡಿದಲ್ಲದೆ, ನಸ್ನಾತಿ-ಸ್ನಾನಮಾಡುವುದಿಲ್ಲ ಮಯಿ-ನಾನು, ರುಷ್ಟೇ - ಕೋಪಮಾಡಿಕೊಂಡರೆ, ಸುಸಂತ್ರಸ್ತಾ-ಹೆದರುವಳು, ಭರ್ತ್ಸಿತೇ-ಗದರಿದರೆ, ಭಯಾತ್ - ಭಯದಿಂದ, ಯತವಾಕ್-ಮೌನವನ್ನು ಪಡೆಯುವಳು ॥೧೯॥ ಅವಿಜ್ಞಂ - ಅವಿವೇಕಿಯಾದ, ಮಾಂ - ನನ್ನನ್ನು, ಪ್ರಬೋಧಯತಿ - ಎಚ್ಚರಗೊಳಿಸುವಳು, ವ್ಯುಷಿತೇ - ನಾನು ದೇಶಾಂತರಕ್ಕೆ ಹೋದರೆ, ಶೋಕಕರ್ಶಿತಾ - ದುಃಖದಿಂದ ಬಡವಾಗುವಳು, ವೀರಸೂಃ - ಪುತ್ರವತಿಯಾದ ಮಡದಿಯು, ಏತತ್ - ಈ, ಗೃಹಮೇಧೀಯಂ - ಗೃಹಸ್ಥಸಂಬಂಧಿಯಾದ, ವರ್ತ್ಮ - ಮಾರ್ಗವನ್ನು, ಅಪಿನೇಷ್ಯತಿ - ಅನುಸರಿಸುವಳೆ ? ॥೨೦॥

ಮಯಿ - ನಾನು, ಗತೇ - ಹೋದರೆ, ದೀನಾಃ - ದೀನರಾದ, ದಾರಕಾಃ - ಗಂಡುಮಕ್ಕಳು, ಅಪರಾಯಣಾಃ - ನಿರಾಶ್ರಯರಾದ, ದಾರಿಕಾಃ - ಹೆಣ್ಣುಮಕ್ಕಳೂ, ಉದಧೌ - ಸಮುದ್ರದಲ್ಲಿ, ಭಿನ್ನನಾವಃ ಇವ - ಒಡೆದ ಹಡಗಿನವರಂತೆ, ಕಥಂ - ಹೇಗೆ, ವರ್ತಿಷ್ಯಂತೇ - ಇರುವರು ॥೨೧॥ ಏವಂ - ಇಂತು ಕೃಪಣಯಾ - ದೀನವಾದ, ಬುದ್ಧ್ಯಾ - ಬುದ್ಧಿಯಿಂದ, ಶೋಚಂತಂ - ಅಳುತ್ತಿರುವ, ಅತದರ್ಹಣಂ - ದುಃಖಕ್ಕೆ ಅನರ್ಹನಾದ, ಏನಂ - ಈ ರಾಜನನ್ನು, ಗೃಹೀತುಂ - ಹಿಡಿಯುವುದಕ್ಕಾಗಿ, ಭಯನಾಮಾ - ಭಯನೆಂಬ ಶತ್ರುರಾಜನು, ಅಭ್ಯಪದ್ಯತ - ಬಂದನು ॥೨೨॥ ಏಷಃ - ಈತನು, ಯವನೈಃ - ಯವನರಿಂದ, ಪಶುವತ್-

ಹೆದರುವಳು. ನಾನು ಗದ್ದರಿಸಿದಾಗ ಮಾತನಾಡದೆ ಮೌನದಿಂದಿರುವಳು ॥ ೧೯ ॥ ನಾನು ಅವಿವೇಕದಿಂದ ದಾರಿತಪ್ಪಿದಲ್ಲಿ ವಿವೇಕವನ್ನು ಹೇಳುವಳು. ನಾನು ಮನೆಯನ್ನು ಬಿಟ್ಟು ಗ್ರಾಮಾಂತರಕ್ಕೆ ತೆರಳಿದರೆ ನನ್ನ ಅಗಲಿಕೆಯಿಂದ ಬಡಳವಾಗಿ ಶೋಕಿಸುವಳು. ಇಂತಹ ಪತಿವ್ರತೆಯಾದ ನನ್ನ ಪತ್ನಿಯು ವೀರಪುತ್ರರನ್ನು ಹೆತ್ತವಳಾದರೂ, ನಾನು ಹೋದಮೇಲೆ ಗೃಹಸ್ಥಾಶ್ರಮಧರ್ಮವನ್ನು ಅನುಸರಿಸಿರುವಳೋ, ಅಥವಾ ನನ್ನ ವಿರಹವನ್ನು ಸೈರಿಸಲಾರದೆ ಮರಣವನ್ನೇ ಹೊಂದುವಳೋ, ನಾನರಿಯೆನು ॥೨೦॥ ಅಯ್ಯೋ! ನಾನು ಹೋದಮೇಲೆ, ಹಸುಳೆಗಳಾದ ಈ ಮಕ್ಕಳು ಸಮುದ್ರಮಧ್ಯದಲ್ಲಿ ಒಡೆದುಹೋದ ನಾವೆಯಲ್ಲಿ ಕುಳಿತಿರುವ ಪಯಣಿಗರಂತೆ, ಅನಾಥರಾಗಿ ಹೇಗೆ ಬಾಳುವರು ? ॥ ೨೧ ॥ ಎಂಬುದಾಗಿ ಪುರಂಜನ ರಾಜನು ಶೋಕಿಸುವುದಕ್ಕರ್ಹನಲ್ಲವಾದರೂ, ಮತಿಗೆಟ್ಟು ಹಂಬಲಿಸುತ್ತಿರುವಾಗ, ಇವನನ್ನು ಸೆರೆಹಿಡಿಯುವುದಕ್ಕಾಗಿ ಭಯನೆಂಬ ಶತ್ರುರಾಜನು ಬಳಿಗೆ ಬಂದನು ॥ ೨೨ ॥ ಕೂಡಲೆ ಆತನಾಣತಿಯಂತೆ ಯವನಭಟರು ಪುರಂ

ಇವುಗಳಿಗೆ ಅಧ್ಯಕ್ಷವಾದ ಮನಸ್ಸು (ಸೂಕ್ಷ್ಮಶರೀರ) ಇವುಗಳು ಆ ಜೀವನನ್ನು ಹಿಂಬಾಲಿಸಿದವು ॥೬೩॥

ಪಶುವದ್ಯವನಸ್ಯೈಷ ನೀಯಮಾನಃ ಸ್ವಕಂ ಕ್ಷಯಂ। *ಅನ್ವದ್ರವನ್ನನು
ಪಥಾಃ ಶೋಚಂತೋ ಭೃಶಮಾತುರಾಃ ॥೨೩॥ ಪುರೀಂ ವಿಹಾಯೋಪಗತ
ಉಪರುದ್ಧೋ ಭುಜಂಗಮಃ । ಯದಾ ತಮೇವಾನುಪುರೀ ವಿಶೀರ್ಣಾ ಪ್ರ
ಕೃತಿಂ ಗತಾ ॥೨೪॥ ವಿಕೃಷ್ಯಮಾಣಃ ಪ್ರಸಭಂ ಯವನೇನ ಬಲೀಯಸಾ ।
ನಾವಿಂದತ್ತಮಸಾವಿಷ್ಟಃ ಸಖಾಯಂ ಸುಹೃದಂ ಪುರಃ ॥೨೫॥ ತಂ ಯಜ್ಞ
ಪಶವೋಽನೇನ ಸಂಜ್ಞಪ್ತಾ ಯೇಽದಯಾಳುನಾ । ಕುಠಾರೈಶ್ಚಿಚ್ಛಿದುಃ

---

ಪಶುವಿನಂತೆ, ಸ್ವಕಂಕ್ಷಯಂ - ತನ್ನನೆಲೆಗೆ. ನೀಯಮಾನಃ - ಒಯ್ಯಲ್ಪಟ್ಟವನಾದನು, ಅನುಪಥಾಃ - ಪತ್ನೀಪುತ್ರಾದಿಗಳು (ಪ್ರಾಣೇಂದ್ರಿಯಾದಿಗಳು) ಭೃಶಂ - ಬಹಳವಾಗಿ, ಆತುರಾಃ - ಹೆದರಿ, ಶೋಚಂತಃ- ದುಃಖಿಸುತ್ತ, ಅನ್ವದ್ರವನ್ - ಹಿಂಬಾಲಿಸಿದರು ॥೨೩॥ ಉಪರುದ್ಧಃ - ಯವನರಿಂದ ಆಕ್ರಮಿಸಲ್ಪಟ್ಟ, ಭುಜಂಗಮಃ - ಸರ್ಪರಾಜನು, ಯದಾ - ಯಾವಾಗ, ಪುರೀಂ - ಪಟ್ಟಣವನ್ನು, ವಿಹಾಯ - ಬಿಟ್ಟು, ಉಪಗತಃ - ಹೊರಟುಹೋದನೋ, ತದಾ - ಆಗ, ತಮೇವಾನು - ಅವನುಹೊರಟಕೂಡಲೇ, ಪುರೀ - ಪಟ್ಟಣವು, ವಿಶೀರ್ಣಾ - ನಷ್ಟವಾಗಿ, ಪ್ರಕೃತಿಂಗತಾ - ನೆಲಸಮವಾಯಿತು ॥೨೪॥ ಬಲೀಯಸಾ - ಬಲವಂತನಾದ, ಯವನೇನ - ಯವನನಿಂದ, ಪ್ರಸಭಂ - ಬಲಾತ್ಕಾರವಾಗಿ, ವಿಕೃಷ್ಯಮಾಣಃ - ಸಳೆಯಲ್ಪಟ್ಟವನಾಗಿ, ತಮಸಾ - ಅಜ್ಞಾನದಿಂದ, ಆವಿಷ್ಟಃ - ಆವೃತನಾಗಿ, ಸುಹೃದಂ - ಹಿತೈಷಿಯಾದ, ಪುರಃಸಖಾಯಂ - ಪೂರ್ವಸ್ನೇಹಿತನನ್ನು, ನಾವಿಂದತ್ - ಸ್ಮರಿಸಲಿಲ್ಲ ॥೨೫॥ ಅದಯಾಳುನಾ - ನಿರ್ಘೃಣನಾದ, ಅನೇನ - ಇವನಿಂದ, ಯೇ ಯಜ್ಞಪಶವಃ - ಯಾವ ಯಜ್ಞಪಶುಗಳು, ಸಂಜ್ಞಪ್ತಾಃ - ಕೊಲ್ಲಲ್ಪಟ್ಟವೋ ಅವು, ಅಸ್ಯ - ಇವನ, ತತ್ ಅಘಂ - ಆ ಪಾಪವನ್ನು, ಸ್ಮರಂತಃ- ಸ್ಮರಿಸಿಕೊಂಡು, ಕ್ರುದ್ಧಾಃ - ಕುಪಿತಗಳಾಗಿ, ಕುಠಾರೈಃ - ಕುಠಾರದಂತಹ ಕೊಂಬುಗಳಿಂದ, ತಂ - ಅವನನ್ನು, ಚಿಚ್ಛಿದುಃ - ತಿವಿದುವು.

---

ಜನನನ್ನು ಸೆರೆ ಹಿಡಿದುಕೊಂಡು ತೆರಳಲು, ಅವನ ಪರಿವಾರದವರೆಲ್ಲರೂ ಭಯದಿಂದ ಕಂಪಿಸುತ್ತಾ, ಶೋಕಾಕ್ರಾಂತರಾಗಿ ಹಿಂಬಾಲಿಸಿದರು ॥ ೨೩ ॥ ಇಂತು ರಾಜನಾದ ಪುರಂಜನನು, ಅವನ ಪರಿವಾರವೂ ಸಹ ರಾಜಧಾನಿಯಿಂದ ತೆರಳಲು, ಪುರಪಾಲಕನಾದ ಭುಜಂಗರಾಯನೂ ಯವನಾಕ್ರಾಂತನಾಗಿ, ಪಟ್ಟಣದಿಂದ ಹೊರಟುಹೋದನು. ಕೂಡಲೇ ಆ ನಗರವು ನಾಶವಾಗಿ ನೆಲಸಮವಾಯಿತು ॥೨೪॥ ಬಳಿಕ ಬಲಿಷ್ಠನಾದ ಒಬ್ಬ ಯವನನು ಪುರಂಜನನನ್ನು ಬಲಾತ್ಕಾರದಿಂದ ಕಟ್ಟಿಸೆಳೆದುಕೊಂಡು ಹೋಗಿ ಕಗ್ಗತ್ತಲೆಯ ಸೆರೆಯಮನೆಗೆ ತಳ್ಳಿದನು. ಬಳಿಕ ಪುರಂಜನನು ಸೆರೆಗೆಸಿಕ್ಕಿ ಕಂಗೆಟ್ಟು ನರಳುತ್ತಿದ್ದರೂ ಹಿತೈಷಿಯಾದ ತನ್ನ ಬಾಲ್ಯಮಿತ್ರನನ್ನು ಸ್ಮರಿಸಿಕೊಳ್ಳಲಿಲ್ಲ ॥ ೨೫ ॥

---

* ಶ್ಲೋ॥ ಮನಃಷಷ್ಠಾನೀಂದ್ರಿಯಾಣಿ ಪ್ರಕೃತಿಸ್ಥಾನಿ ಕರ್ಷತಿ । ಶರೀರಂ ಯದವಾಪ್ನೋತಿ ಯಚ್ಚಾಪ್ಯುತ್ಕ್ರಾಮತೀಶ್ವರಃ । ಗೃಹೀತ್ವೈತಾನಿ ಸಂಯಾತಿ ವಾಯುರ್ಗಂಧಾನಿವಾಶಯಾತ್ ॥ ಶ್ರುತಿ॥ ತಮುತ್ಕ್ರಾಮಂತಂ ಪ್ರಾಣೋಽನೂತ್ಕ್ರಾಮತಿ । ಪ್ರಾಣಮನೂತ್ಕ್ರಾಮಂತಂ ಸರ್ವೇ ಪ್ರಾಣಾ ಅನೂತ್ಕ್ರಾಮಂತಿ ॥ ಜೀವನು ಶರೀರವನ್ನು ಬಿಟ್ಟು ತೆರಳುವಾಗ ಪ್ರಾಣೇಂದ್ರಿಯ ಮನೋರೂಪವಾದ ಸೂಕ್ಷ್ಮಶರೀರದೊಡನೆ ತೆರಳುವನೆಂದಭಿಪ್ರಾಯವು.

ಕಪ್ರಿದ್ಧಾ ಸ್ಸ್ಮರಂತೋ ಽ ವಿಾವ ಮೃತ್ಯತಾಂ॥೨೬॥ಅನಂತಪಾರೇ ತಮಸಿ
ಮಗ್ನೋ ನಷ್ಟಸ್ಮೃತಿ ಸ್ಸಮಾಃ । ಶಾಶ್ವತೀ ರನುಭೂಯಾರ್ತಿಂ ಪ್ರಮದಾ
ಸಂಗದೂಷಿತಃ ॥೨೭॥ ತಾ ಮೇವ ಮನಸಾ ಗೃಹ್ಣನ್ ಬಭೂವ ಪ್ರಮದೋ
ತ್ತಮಾ । ಅನಂತರಂ ವಿದರ್ಭಸ್ಯ ರಾಜಸಿಂಹಸ್ಯ ವೇಶ್ಮನಿ ॥೨೮॥ ಉಪಯೇ
ಮೇ ವೀರ್ಯಪಣಾಂ ವೈದರ್ಭೀಂ ಮಲಯಧ್ವಜಃ । ಯುಧಿ ನಿರ್ಜಿತ್ಯ ರಾಜ
ನ್ಯಾನ್ ಪಾಂಡ್ಯಃ ಪರಪುರಂಜಯಃ॥೨೯॥ತಸ್ಯಾಂ ಸಜನಯಾಂಚಕ್ರೇ ಆತ್ಮಜಾ

---

ಅನಂತಪಾರೇ - ಅಪಾರವಾದ, ತಮಸಿ - ಕತ್ತಲೆಯಲ್ಲಿ (ನರಕದಲ್ಲಿ) ಮಗ್ನಃ - ಮುಳುಗಿ, ನಷ್ಟಸ್ಮೃತಿಃ - ಸ್ಮರಣೆಯಿಲ್ಲದೆ, ಶಾಶ್ವತೀಸ್ಸಮಾಃ - ಹಲವುವರ್ಷಗಳು, ಆರ್ತಿಂ - ದುಃಖವನ್ನು, ಅನುಭೂಯ - ಅನುಭವಿಸಿ, ಪ್ರಮ....ತಃ - ಸ್ತ್ರೀಸಂಗದಿಂದ ಮತಿಗೆಟ್ಟು ॥೨೭॥ ಅನಂತರಂ- ಬಳಿಕ, ತಾಮೇವ - ಆ ಸ್ತ್ರೀಯನ್ನೇ, ಮನಸಾ - ಮನಸ್ಸಿನಿಂದ, ಗೃಹ್ಣನ್ - ಧ್ಯಾನಿಸುತ್ತಾ, ರಾಜಸಿಂಹಸ್ಯ - ರಾಜಶ್ರೇಷ್ಠನಾದ, ವಿದರ್ಭಸ್ಯ - ವಿದರ್ಭರಾಜನ, ವೇಶ್ಮನಿ - ಮನೆಯಲ್ಲಿ, ಪ್ರಮದೋತ್ತಮಾ - ಉತ್ತಮಸ್ತ್ರೀಯಾಗಿ, ಬಭೂವ - ಜನಿಸಿದನು ॥೨೮॥ ವೀರ್ಯಪಣಾಂ - ಪರಾಕ್ರಮವೇ ಶುಲ್ಕವಾಗುಳ್ಳ, ವೈದರ್ಭೀಂ- ಆ ಕನ್ನೆಯನ್ನು, ಪರ...ಯಃ - ಶತ್ರುಪುರಗಳನ್ನು ಜಯಿಸುವ, ಮಲಯಧ್ವಜಃ - ಮಲಯಧ್ವಜನೆಂಬ (ವಿಷ್ಣುಭಕ್ತಿಯುಳ್ಳ ದಕ್ಷಿಣದೇಶಕ್ಕಲಂಕಾರವಾದ), ಪಾಂಡ್ಯಃ-(ನಿಶ್ಚಯಬುದ್ಧಿಯುಳ್ಳ ಭಕ್ತನು) ಪಾಂಡ್ಯರಾಜನು, ಯುಧಿ - ಯುದ್ಧದಲ್ಲಿ, ರಾಜನ್ಯಾನ್ - ರಾಜರನ್ನು, ನಿರ್ಜಿತ್ಯ-ಗೆದ್ದು, ಉಪಯೇಮೇ - ಮದುವೆಯಾದನು ॥೨೯॥ ಸಃ - ಆ ಪಾಂಡ್ಯರಾಜನು, ತಸ್ಯಾಂ -ಆಕೆಯಲ್ಲಿ, ಅಸಿತೇಕ್ಷಣಾಂ - ಕಪ್ಪಾದ ಆ

---

ಮುನ್ನು ಇವನಿಂದ ಅಸಕ್ಕೃತರಾಗಿದ್ದವರೆಲ್ಲರೂ ಬಂದು ಚಿತ್ರವಿಚಿತ್ರವಾಗಿ ಹಿಂಸಿಸತೊಡಗಿದರು ॥೨೬॥ ಇಂತು ಪುರಂಜನನು ರಾಜ್ಯಭ್ರಷ್ಟನಾಗಿ ಪತ್ನೀಪುತ್ರಾದಿಗಳನ್ನಗಲಿ ಕತ್ತಲೆಯ ಸೆರೆಯಲ್ಲಿ ನೆಲಸಿದ್ದರೂ ವಿಷಯಚಿಂತೆಯನ್ನು ಮಾತ್ರ ಬಿಡಲಿಲ್ಲ ॥೨೭॥ ಅಂತ್ಯಕಾಲದಲ್ಲಿಯೂ ಕಾಂತೆಯನ್ನೇ ಚಿಂತಿಸುತ್ತಿದ್ದುದರಿಂದ ಸ್ತ್ರೀಜನ್ಮವನ್ನು ಪಡೆದು ವಿದರ್ಭರಾಜನ ಪುತ್ರಿಯಾಗಿ ಜನಿಸಿದನು ॥೨೮॥ ಬಳಿಕ ವಿದರ್ಭರಾಜನು ಪುತ್ರಿಯ ಪ್ರತಿಜ್ಞಾನುಸಾರವಾಗಿ ಸ್ವಯಂವರೋತ್ಸವವನ್ನು ಬೆಳೆಯಿಸಿ, ಯುದ್ಧಾಂಗಣದಲ್ಲಿ ಸಕಲರಾಜರನ್ನೂ ಗೆದ್ದು, ಪರಪುರಂಜಯನೆಂದು ಬಿರುದನ್ನು ಪಡೆದ ಮಲಯಧ್ವಜನೆಂಬ ಪಾಂಡ್ಯರಾಜನಿಗೆ ಆಕೆಯನ್ನಿತ್ತು ಮದುವೆಮಾಡಿದನು ॥ ೨೯ ॥ ಅತನು ಇಂತೀವರಾಕ್ಷಿಯಾದ ಆಕೆಯಲ್ಲಿ

---

ಗೂಢಾರ್ಥ—ಜೀವನು ಕಳೇಬರವನ್ನಳಿದ ಕೂಡಲೇ ಪ್ರಾಣವಾಯುಗಳು ಹೊರಟುಹೋದುವು. ಬಳಿಕ ಶರೀರವು ದಹನಖನನಾದಿಗಳಿಗೊಳಗಾಗಿ ಮಹಾ ಭೂತಗಳಲ್ಲಿ ಕಲೆತುಹೋಯಿತು ॥೨೬॥ ಮೃತ್ಯುಪಾಶಕ್ಕೊಳಗಾದ ಜೀವನು ನರಕಕ್ಕಿಳಿದು ವಿಚಿತ್ರಯಾತನೆಗಳನ್ನನುಭವಿಸಿದರೂ, ಮಿತ್ರಧರ್ಮವನ್ನನುಸರಿಸಿ, ಹಿತವನ್ನಪೇಕ್ಷಿಸುತ್ತ ಎಡಬಿಡದೆ ಜತೆಯಲ್ಲಿಯೇ ನೆಲಸಿರುವ ತನ್ನ ಬಾಲ್ಯಮಿತ್ರನಾದ ಪರಮಾತ್ಮನನ್ನು ಸ್ಮರಿಸಲಿಲ್ಲ ॥ ೨೭ ॥ ಮುನ್ನು ತಾನು ಮಾಡಿದ ಕರ್ಮಗಳಿಗೆ ಅನುಸಾರವಾಗಿ ಬಹುಕಾಲದವರೆಗೂ ಪಾಪಕರ್ಮಗಳಫಲವನ್ನನುಭವಿಸಿ, ಬಳಿಕ ಕಾಮ್ಯಕರ್ಮಗಳಾದ ಯಾಗಾದಿಗಳನ್ನು ಮಾಡಿದುದರಿಂದುಂಟಾದ ಪುಣ್ಯದಿಂದ ಕರ್ಮಭೂಮಿಯಲ್ಲಿ ಉತ್ತಮವಾದ ಮತ್ತೊಂದು ಮಾನವ ಜನ್ಮವನ್ನು ಪಡೆದು ಪೂರ್ವೋಪಾಸನಾ ಫಲದಿಂದ ಭಾಗವತ ಸಂಗವನ್ನೈದಿದನು ॥ ೨೯ ॥

ಮಸಿತೇಕ್ಷಣಾಂ। ಯವೀಯಸ‡ ಸ್ಸಪ್ತ ಸುತಾನ್ ಸಪ್ತ ದ್ರವಿಡಭೂಭೃತಃ।
ಏಕೈಕಸ್ಯಾಭವ ತ್ತೇಷಾಂ ರಾಜ ನ್ನರ್ಬುದ ಮರ್ಬುದಂ। ಭೋಕ್ಷ್ಯತೇ
ಯದ್ವಂಶಧರೈ ರ್ಮಹೀ ಮನ್ವಂತರಂ ಪರಂ॥೩೧॥ ♯ಅಗಸ್ತ್ಯಃ ಪ್ರಾಗ್ದುಹಿತರ

---

ಲಿಯುಳ್ಳ, ಅಸಿತ - ಕೃಷ್ಣನಲ್ಲಿ, ಈಕ್ಷಣಾಂ - ದೃಷ್ಟಿಯುಳ್ಳ, ಆತ್ಮಜಾಂ - ಮಗಳನ್ನು, ಯವೀಯಸಃ - ಚಿಕ್ಕವರಾದ, ಸಪ್ತ...ತಃ - ಏಳು ದ್ರವಿಡ ದೇಶಗಳಿಗೊಡೆಯರಾದ, ಸಪ್ತಸುತಾನ್ - ಏಳುಮಂದಿ ಗಂಡುಮಕ್ಕಳನ್ನು, ಜನಯಾಂಚಕ್ರೇ - ಉಂಟುಮಾಡಿದನು ॥೩೦॥ ರಾಜನ್ - ರಾಜನೆ! ತೇಷಾಂ - ಅವರಲ್ಲಿ, ಏಕೈಕಸ್ಯ - ಒಬ್ಬೊಬ್ಬನಿಗೆ, ಅರ್ಬುದಂ ಅರ್ಬುದಂ - ಒಂದೊಂದುಕೋಟಿ ಮಕ್ಕಳು, ಅಭವತ್ - ಆದರು, ಯದ್ವಂ...ರೈಃ - ಯಾರವಂಶಸ್ಥರಿಂದ, ಮನ್ವಂತರಂ-ಮನ್ವಂತರಕಾಲವೂ, ಪರಂ - ಇನ್ನೂಹೆಚ್ಚಾಗಿಯೂ, ಮಹೀ - ಭೂಮಿಯು, ಭೋಕ್ಷ್ಯತೇ- ಅನುಭವಿಸಲ್ಪಡುವುದು ॥೩೧॥ ಯಸ್ಯಾಂ - ಯಾರಲ್ಲಿ, (ಯಾವಸೇವಾರುಚಿ) ಇಧ್ಮ....ಜಃ - ಇಧ್ಮವಾಹನೆ (ಇಧ್ಮವಹನೋಪಲಕ್ಷಿತವಾದಗುರೂ

---

ಚೆಲುವೆಯಾದ ಒಬ್ಬಹೆಣ್ಣುಮಗಳನ್ನು, ದ್ರಾವಿಡ ದೇಶಾಧೀಶ್ವರರಾದ ಏಳುಮಂದಿ ಗಂಡುಮಕ್ಕಳನ್ನು ಪಡೆದನು ॥೩೦॥ ಅವರಲ್ಲಿ ಒಬ್ಬೊಬ್ಬನಿಗೆ ಒಂದೊಂದರ್ಬುದವೆಂಬ ಮಕ್ಕಳಾದರು. ಅವರಸಂತತಿಯವರೇ ಅನೇಕಮನ್ವಂತರಗಳಿಂದ ಈಗಲೂ ಭೂಮಿಯನ್ನಾಳುತ್ತಿರುವರು ॥೩೧॥ ಧೃತವ್ರತೆಯಾದ ಆರಾಜನ ಹಿರೀಮಗಳನ್ನು ಅಗಸ್ತ್ಯನೆಂಬ ಮುನಿಯು ವಿವಾಹಮಾಡಿಕೊಂಡು ಆಕೆಯಲ್ಲಿ ಇಧ್ಮವಾಹನನ ತಂದೆಯಾದ ದೃಢಚ್ಯುತನೆಂಬ

---

ಗೂ॥ ಬಳಿಕ ಜೀವನಿಗೆ ಸಾಧುಸಂಗದಿಂದ ಭಗವಂತನ ಸಾಕ್ಷಾತ್ಕಾರಕ್ಕೆ ಹೇತುವಾದ ಕೃಷ್ಣಸೇವಾರುಚಿಯೂ, ಅದರಿಂದ ಭಗವಂತನ ಕಥಾಶ್ರವಣ, ಕೀರ್ತನ, ಸ್ಮರಣ, ಪಾದಸೇವನ, ಅರ್ಚನ, ವಂದನ, ದಾಸ್ಯಗಳೆಂಬ ಏಳುವಿಧಗಳಾದ ಭಕ್ತಿಮಾರ್ಗಗಳೂ ಉಂಟಾದುವು ॥೩೦॥ ಆಶ್ರವಣಾದಿಗಳಲ್ಲಿ ನಾಮಲೀಲಾದಿಭೇದಗಳಿಂದಲೂ, ಆನಾಮಾದಿಗಳಲ್ಲಿ ರಾಮಕೃಷ್ಣಾದ್ಯವತಾರ ಭೇದಗಳಿಂದಲೂ, ಆ ಅವತಾರಗಳಲ್ಲಿ ದಾಸ್ಯಾದಿ ಭೇದಗಳಿಂದಲೂ ಒಂದೊಂದು ಭಕ್ತಿಯೂ ಹಲವು ಬಗೆಯಾಯಿತು. ಇಂತು ಅನೇಕ ಪ್ರಕಾರಗಳಾದ ಭಕ್ತಿಮಾರ್ಗಗಳು ಅನಾದಿಯಾಗಿ ಅವಿದ್ಯಾಕಾಮಕರ್ಮಗಳನ್ನಡಗಿಸಿ ಸಕಲ ಪ್ರಪಂಚವನ್ನೂ ಸಲಹುತ್ತಿರುವುದು ॥೩೧॥ ತರುವಾಯ ಆ ಜೀವನ ಮನಸ್ಸಿನಲ್ಲಿ

---

‡ ಭಾ. ಶ್ಲೋ॥ ಶ್ರವಣಂ ಕೀರ್ತನಂ ವಿಷ್ಣೋಃ ಸ್ಮರಣಂ ಪಾದಸೇವನಂ। ಅರ್ಚನಂ ವಂದನಂ ದಾಸ್ಯಂ ॥ ಇವು ಏಳು ಭಕ್ತಿಗಳು ಸಖ್ಯ, ಆತ್ಮನಿವೇದನಗಳೆಂಬ ಮಿಕ್ಕ ಎರಡು ಭಕ್ತಿಗಳೂ ತ್ವಂ ಪದಾರ್ಥ ಜ್ಞಾನವುಂಟಾದ ಬಳಿಕ ಭಗವಂತನಿಂದಲೇ ಉಪದೇಶಿಸಲ್ಪಡಬೇಕಾದುದರಿಂದಲೂ, ಇನ್ನೂ ಜನಿಸಲಿಲ್ಲವಾದುದರಿಂದಲೂ ಇಲ್ಲಿ ಹೇಳಲ್ಪಟ್ಟಿಲ್ಲ ಶ್ರವಣಾದಿ ಭಕ್ತಿಗಳು ದ್ರವಿಡದೇಶದಲ್ಲಿಯೇ ವಿಶೇಷವಾಗಿರುವುದರಿಂದ ದ್ರವಿಡದೇಶಗಳಿಗೊಡೆಯರಾದರೆಂದು ಹೇಳಲ್ಪಟ್ಟಿತು.

♯ ಇಲ್ಲಿ ಅಗಸ್ತ್ಯ ಶಬ್ದಕ್ಕೆ ಅನೇಕಾರ್ಥಗಳುಂಟು. (೧) ಭಾ. ಅಗ-ನಿಷ್ಕ್ರಿಯ ಶರೀರಗಳನ್ನು ಸ್ತ್ಯಾಯತಿ- ಜತೆಗೊಳಿಸುವುದು, ಮನಸ್ಸು (೨) ಪೀ. ಅಗಸ್ತ್ಯೋಪ ಲಕ್ಷಿತನಾದ ಮುಮುಕ್ಷು, (೩) ವಿ. ಅಗಂ-ಭಗವಂತನನ್ನು, ಸ್ತ್ಯಾಯತಿ-ಹೊಗಳುವವನು. ಭಕ್ತನು (೪) ಸಾ. ಅಂಗಾನಿ-ಇಂದ್ರಿಯಗಳನ್ನು, ಸ್ತ್ಯಾಯತಿ - ಜತೆಗೊಳಿಸುವುದು, ಮನಸ್ಸು, (೫) ಸಿ ಅಂಗಾನಿ-ಶರೀರವನ್ನು, ಸ್ತ್ಯಾಯತಿ - ನಡೆಯಿಸುವುದು, ಅಂತಃಕರಣ.

ಮುಪಯೇಮೇ ಧೃಡವ್ರತಾಂ । ಯಸ್ಯಾಂ ದೃಢಚ್ಯುತೋ * ಜಾತ ಇಧ್ಮ
ವಾಹಾತ್ಮಜೋ ಮುನಿಃ॥೩೨॥ ವಿಭಜ್ಯ ತನಯೇಭ್ಯಃ ಕ್ಷ್ಮಾಂ ರಾಜರ್ಷಿ ರ್ಮ
ಲಯಧ್ವಜಃ । ಆರಿರಾಧಯಿಷುಃ ಕೃಷ್ಣಂ ಸಜಗಾಮ ಕುಲಾಚಲಂ ॥೩೩॥
ಹಿತ್ವಾ ಗೃಹಾನ್ ಸುತಾನ್ ಭೋಗಾನ್ ವೈದರ್ಭೀ ಮದಿರೇಕ್ಷಣಾ। ಅನ್ವಧಾ

ಪಸತ್ತಿ) ಪುತ್ರನಾಗುಳ್ಳ, ದೃಢಚ್ಯುತಃ-ದೃಢಚ್ಯುತ (ಸ್ಥಿರಗಳಾದ ಸತ್ಯಲೋಕಾದಿಗಳಲ್ಲಿಯೂ ವೈರಾಗ್ಯ) ನೆಂಬ, ಮುನಿಃ - ಮನನಶೀಲನಾದ ಋಷಿಯು, ಜಾತಃ- ಹುಟ್ಟಿದನೋ, ಅಂತಹ ಧೃತವ್ರತಾಂ - ವ್ರತ ಗಳನ್ನು ಆಚರಿಸುವ, ಪ್ರಾಗ್ದುಹಿತರಂ-ಹಿರೀಮಗಳನ್ನು (ಭಕ್ತಿ) ಅಗಸ್ತ್ಯಃ, (ಅಗ-ನಿಷ್ಕ್ರಿಯಗಳಾದ ಶರೀರಗಳನ್ನು, ಸ್ತ್ಯಃ-ಉಂಟುಮಾಡುವ ಮನಸ್ಸು) ಅಗಸ್ತ್ಯನೆಂಬುವನು, ಉಪಯೇಮೇ-ಮದುವೆಯಾ ದನು ॥೩೨॥ ಮಲಯಧ್ವಜಃ - (ಭಕ್ತನು) ಮಲಯಧ್ವಜನೆಂಬ, ರಾಜರ್ಷಿಃ - ರಾಜಋಷಿಯು, ತನ ಯೇಭ್ಯಃ - ಗಂಡುಮಕ್ಕಳಿಗೆ (ಶ್ರವಣಾದಿಗಳಿಗೆ), ಕ್ಷ್ಮಾಂ- ಭೂಮಿಯನ್ನು (ವಿಷ್ಣುಭಕ್ತಿ) ವಿಭಜ್ಯ - ಹಂ ಚಿ, ಕೃಷ್ಣಂ - ಕೃಷ್ಣನನ್ನು, ಆರಿರಾಧಯಿಷುಃ - ಪೂಜಿಸಲೆಳಸಿ, ಸಃ- ಅವನು, ಕುಲಾಚಲಂ - ಮಲ ಯಪರ್ವತಕ್ಕೆ, ಜಗಾಮ-ಹೋದನು ॥೩೩॥ ಮದಿರೇಕ್ಷಣಾ - ಮದಕರಗಳಾದ ನೋಟವುಳ್ಳ, ವೈದರ್ಭೀ- ವಿದರ್ಭಪುತ್ರಿಯು, (ಸ್ತ್ರೀಜನ್ಮವನ್ನು ಪಡೆದಜೀವನು) ಗೃಹಾನ್ - ಮನೆಯನ್ನು, ಸುತಾನ್ - ಮಕ್ಕಳ ನ್ನು, ಭೋಗಾನ್ - ರಾಜಭೋಗಗಳನ್ನು, ಹಿತ್ವಾ - ತೊರೆದು, ರಜನೀಕರಂ - ಚಂದ್ರನನ್ನು, ಜ್ಯೋ

ಪುತ್ರನನ್ನು ಹೆತ್ತನು.॥೩೨॥ ಬಳಿಕ ಮಲಯಧ್ವಜರಾಜನು ಏಳುಮಂದಿ ಮಕ್ಕಳಿಗೂ ರಾಜ್ಯ ವನ್ನು ಹಂಚಿಕೊಟ್ಟು,ಭಗವಂತನನ್ನು ಆರಾಧಿಸುವುದಕ್ಕಾಗಿ ಮಲಯಪರ್ವತಕ್ಕೆ ತೆರಳಿ ದನು ॥೩೩॥ ಆತನಪತ್ನಿಯಾದ ವೈದರ್ಭಿಯೂ (ಸ್ತ್ರೀಜನ್ಮವನ್ನು ಪಡೆದ ಪುರಂಜನನು) ಸಮೃದ್ಧವಾದ ಮನೆಯನ್ನೂ, ಮಕ್ಕಳನ್ನೂ, ರಾಜಭೋಗಗಳನ್ನು ತೊರೆದು, ಚಂದ್ರನನ್ನೆ

ಕೃಷ್ಣಸೇವಾರುಚಿಯು ನೆಲೆಗೊಂಡಿತು. ಆ ರುಚಿಯಿಂದ ಬ್ರಹ್ಮಲೋಕಾದಿ ಭೋಗಗಳಲ್ಲಿಯೂ ವಿರಕ್ತಿ ಯುಂಟಾಯಿತು. ಕೂಡಲೆ ಗುರೂಪಸತ್ತಿಯು ತಲೆದೋರಿತು. ಆಗ ಜೀವನು ಶ್ರವಣಕೀರ್ತನಾದಿಗಳಿಂ ದಲೇ ಭಕ್ತಿಯನ್ನು ಸಂಪಾದಿಸಬೇಕೆಂಬ ಅನುಸಂಧಾನಮಾಡಿಕೊಂಡು ಭಗವದ್ಧ್ಯಾನಪರನಾಗಿ ಏಕಾಂತ ದಲ್ಲಿ ನೆಲಸಿದನು ॥೩೦॥ ಇಲ್ಲಿಯುವರೆಗೆ ಸ್ತ್ರೀಜನ್ಮವನ್ನು ಪಡೆದ ಪುರಂಜನನು ಸತ್ಸಂಗಪೂರ್ವಕವಾಗಿ ಶಮ ದಮಾದಿಗಳನ್ನು ಪಡೆದು ಶ್ರವಣಾದಿಗಳಿಂದ ಭಗವತ್ಸೇವೆಯಲ್ಲಿ ರುಚಿಯೂ ತೀವ್ರವೈರಾಗ್ಯವೂ ಉಂಟಾಗಲು, ಗುರೂಪಸತ್ತಿಯನ್ನು ಮಾಡಿದನೆಂದು ನಿರೂಪಿಸಲ್ಪಟ್ಟಿತಷ್ಟೆ. ಈಗ "ಪತಿರೇವ ಗುರುಸ್ತ್ರೀಣಾಂ" ಎಂಬಂತೆ ಪುರಂಜನನು ಗುರುಸೇವೆಯೇ ಸರ್ವೋತ್ಕೃಷ್ಟವೆಂದು ಬೋಧಿಸುವ ವೇದವಾಕ್ಯನಲ್ಲಿ ದೃಷ್ಟಿಯಿಟ್ಟು, ಪತಿಸೇವಾವ್ಯಾಜದಿಂದ ಗುರುಶುಶ್ರೂಷೆಯನ್ನು ಮಾಡುತ್ತಾ ಶ್ರವಣಕೀರ್ತನಾದಿಗಳನ್ನಾಗಲಿ, ಅವುಗಳಿಂ ದುಂಟಾಗುವ ಪ್ರೇಮಾನಂದಗಳನ್ನಾಗಲಿ, ಅವುಗಳಿಗುಚಿತಗಳಾದ ವಿವಿಕ್ತದೇಶವನ್ನಾಗಲಿ ಬಯಸದೆ, ಸರ್ವವೂ ಗುರುಸೇವೆಯಿಂದಲೇ ಲಭಿಸುವುದೆಂದರಿತನು ॥೩೪॥

* ಗುರೂಪಸತ್ತಿಗೆ ಇಧ್ಮವಹನವೇ ಲಕ್ಷಣವಾದುದರಿಂದ ಇಧ್ಮವಾಹ ಶಬ್ದಕ್ಕೆ ಗುರೂಪಸತ್ತಿ ಯೆಂದು ಅರ್ಥವು, ಜ್ಞಾನೋಪದೇಶಕ್ಕಾಗಿ ಮೊದಲು ಸದ್ಗುರುವಿನ ಬಳಿಗ ಹೋಗತಕ್ಕ ಶಿಷ್ಯನು ರಿಕ್ತ ಹಸ್ತನಾಗದೆ ಕಟ್ಟಿಗೆಯ ಹೊರೆಯನ್ನಾದರೂ ತೆಗೆದುಕೊಂಡು ಹೋಗಬೇಕು. ಶ್ರು. ತದ್ವಿಜ್ಞಾನಾರ್ಥಂ ಸಗುರುಮೇವಾಭಿಗಚ್ಛೇತ್ ಸಮಿತ್ಪಾಣಿ ಶ್ರೋತ್ರಿಯಂ ಬ್ರಹ್ಮನಿಷ್ಠಂ ॥

ಪತಿಂ ಪಾಂಡ್ಯೇಶಂ ಜ್ಯೋತ್ಸ್ನೇವ ರಜನೀಕರಂ ॥೩೪॥ ತತ್ರ ಚಂದ್ರವಸಾನಾಮ ತಾಮ್ರಪರ್ಣೀ ವಟೋದಕಾ । ತತ್ಪುಣ್ಯ ಸಲಿಲೈರ್ನಿತ್ಯ ಮುಭಯತ್ರಾತ್ಮನೋ ಮೃಜನ್ ॥೩೫॥ ಕಂದಾಷ್ಟಿಭಿ ರ್ಮೂಲಫಲೈಃ ಪುಷ್ಪಪರ್ಣೈಸ್ತೃಣೋದಕೈಃ । ವರ್ತಮಾನ ಶ್ಶನೈರ್ಗಾತ್ರಕರ್ಷಣಂ ತಪ ಆಸ್ಥಿತಃ ॥೩೬॥ ಶೀತೋಷ್ಣವಾತ ವರ್ಷಾಣಿ ಕ್ಷುತ್ಪಿಪಾಸೇ ಪ್ರಿಯಾಪ್ರಿಯೇ । ಸುಖದುಃಖೇ ಇತಿ ದ್ವಂದ್ವಾನ್ಯಜಯ ತ್ಸಮದರ್ಶನಃ ॥೩೭॥ ತಪಸಾ ವಿದ್ಯಯಾ ಪಕ್ವಕಷಾಯೋ ನಿಯಮೈ ರ್ಯಮೈಃ । ಯುಯುಜೇ ಬ್ರಹ್ಮಣ್ಯಾತ್ಮಾನಂ ವಿಜಿತಾಕ್ಷಾನಿಲಾಶಯಃ ॥೩೮॥ ಆಸ್ತೇ ಸ್ಥಾಣು ರಿವೈಕತ್ರ

ಜ್ಯೋತ್ಸ್ನೇವ - ಬೆಳದಿಂಗಳಂತೆ, ಪಾಂಡ್ಯೇಶಂ - ಪಾಂಡ್ಯರಾಜನನ್ನು, ಅನ್ವಧಾವತ - ಹಿಂಬಾಲಿಸಿದಳು ॥೩೪॥ ತತ್ರ - ಅಲ್ಲಿ, ಚಂದ್ರವಸಾನಾಮ - ಚಂದ್ರವಸೆಯೆಂತಲೂ, ತಾಮ್ರಪರ್ಣಿಯೆಂತಲೂ, ವಟೋದಕಾ - ವಟೋದಕಾಎಂತಲೂ, ನದಿಗಳುಂಟು, ತತ್ಪುಣ್ಯಸಲಿಲೈಃ - ಆ ನದಿಗಳ ಪುಣ್ಯೋದಕಗಳಿಂದ, ನಿತ್ಯಂ - ನಿತ್ಯವೂ, ಉಭಯತ್ರ - ಒಳಗೂ ಹೊರಗೂ, ಆತ್ಮನಃ - ತನ್ನ, ಮಲಂ - ಪಾಪವನ್ನು, ಮೃಜನ್-ಕಳೆಯುತ್ತಾ ॥೩೫॥ ಕಂದಾಷ್ಟಿಭಿಃ - ಗೆಡ್ಡೆಗೆಣಸುಗಳಿಂದಲೂ, ಮೂಲಫಲೈಃ - ಬೇರುಹಣ್ಣುಗಳಿಂದಲೂ, ಪುಷ್ಪಪರ್ಣೈಃ - ಹೂವೆಲೆಗಳಿಂದಲೂ, ತೃಣೋದಕೈಃ - ಹುಲ್ಲು ನೀರುಗಳಿಂದಲೂ, ವರ್ತಮಾನಃ - ಜೀವನಮಾಡುತ್ತಾ, ಶನೈಃ-ಮೆಲ್ಲನೆ, ಗಾತ್ರಕರ್ಷಣಂ-ಶರೀರವನ್ನು ಶೋಷಿಸುವ, ತಪಃ-ತಪಸ್ಸನ್ನು, ಆಸ್ಥಿತಃ-ಮಾಡುತ್ತಿದ್ದನು ॥೩೬॥ ಶೀತೋ····ಣಿ-ಚಳಿ, ಬಿಸಲು, ಗಾಳಿ, ಮಳೆ, ಹಸಿವು-ಬಾಯಾರಿಕೆ. ಸ್ನೇಹ - ದ್ವೇಷ, ಸುಖ - ದುಃಖ, ಇತಿ - ಎಂಬ, ದ್ವಂದ್ವಾನಿ - ದ್ವಂದ್ವಗಳನ್ನು, ಸಮದರ್ಶನಃ - ಸಮದೃಷ್ಟಿಯುಳ್ಳವನಾಗಿ, ಅಜಯತ್ - ಜಯಿಸಿದನು ॥೩೭॥ ತಪಸಾ - ತಪಸ್ಸಿನಿಂದಲೂ, ವಿದ್ಯಯಾ - ಉಪಾಸನದಿಂದಲೂ, ನಿಯಮೈಃ - ನಿಯಮಗಳಿಂದಲೂ, ಯಮೈಃ - ಶೌಚಾದಿಗಳಿಂದಲೂ, ವಿಜಿ····ಯಃ - ಇಂದ್ರಿಯ ಪ್ರಾಣ, ಮನಸ್ಸುಗಳನ್ನು, ಗೆದ್ದು, ಆತ್ಮಾನಂ-ತನ್ನನ್ನು, ಬ್ರಹ್ಮಣಿ-ಬ್ರಹ್ಮನಲ್ಲಿ, ಯುಯುಜೇ - ಸೇರಿಸಿದನು ॥೩೮॥ ದಿವ್ಯಂ - ದೇವಮಾನದ, ವರ್ಷಶತಂ - ನೂರುವರ್ಷಗಳು, ಸ್ಥಿರಃ - ಸ್ಥಿರನಾಗಿ, ಏಕತ್ರ ॥

ಬಿಡದಿರುವ ಚಂದ್ರಿಕೆಯಂತೆ, ಪಾಂಡ್ಯರಾಜನನ್ನು ಹಿಂಬಾಲಿಸಿದಳು ॥೩೪॥ ಆ ರಾಜರ್ಷಿಯು ಅಲ್ಲಿರುವ ಚಂದ್ರವಸಾ, ತಾಮ್ರಪರ್ಣೀ, ವಟೋದಕಾ, ಎಂಬ ಪುಣ್ಯನದಿಗಳಲ್ಲಿ ಸ್ನಾನ ಪಾನಗಳನ್ನು ಮಾಡುತ್ತಾ, ಅಂತರಂಗಬಹಿರಂಗಗಳಲ್ಲಿ ಪರಿಶುದ್ಧನಾಗಿ, ಗೆಡ್ಡೆ, ಗೆಣಸು, ಬೇರು, ಹಣ್ಣು, ಹೂ, ಎಲೆ, ಹುಲ್ಲು, ನೀರು, ಇವುಗಳಲ್ಲಿ ದೊರೆತಷ್ಟುಮಾತ್ರದಿಂದ ದೇಹಯಾತ್ರೆಯನ್ನು ಮಾಡುತ್ತಾ, ಕ್ರಮವಾಗಿ ಶರೀರಶೋಷಕವಾದ ಅನಶನವ್ರತದಿಂದ ತೀವ್ರತಪಸ್ಸನ್ನು ಮಾಡತೊಡಗಿದನು ॥೩೬॥

ಭೇದಬುದ್ಧಿಯಿಲ್ಲದೆ, ಚಳಿ-ಬಿಸಿಲು, ಗಾಳಿ-ಮಳೆ, ಹಸಿವು-ಬಾಯಾರಿಕೆ, ರಾಗ-ದ್ವೇಷ, ಸುಖ-ದುಃಖಗಳೆಂಬ ದ್ವಂದ್ವಗಳನ್ನು ಜಯಿಸಿದನು ॥೩೭॥ ಕೃಚ್ಛ್ರಚಾಂದ್ರಾಯಣಾದಿತಪಸ್ಸಿನಿಂದಲೂ, ಉಪಾಸನದಿಂದಲೂ, ತ್ರಿಷವಣಸ್ನಾನ, ಭೂಶಯನ ಮೊದಲಾದನಿಯಮಗಳಿಂದಲೂ, ಇಂದ್ರಿಯಜಯಾದಿಯಮಗಳಿಂದಲೂ, ಕಾಮಕ್ರೋಧಾದಿ ಮನೋದೋಷಗಳನ್ನು ಕಳೆದು, ಇಂದ್ರಿಯಗಳನ್ನೂ, ಪ್ರಾಣವಾಯುವನ್ನೂ, ಮನಸ್ಸನ್ನೂ ಸಹ ಗೆದು

ದಿವ್ಯಂ ವರ್ಷಶತಂ ಸ್ಥಿರಃ । ವಾಸುದೇವೇ ಭಗವತಿ ನಾನ್ಯದ್ವೇದೋದ್ವಹನ್ ರತಿಂ ॥೩೯॥ ‡ ಸ ವ್ಯಾಪಕತಯಾತ್ಮಾನಂ ವ್ಯತಿರಿಕ್ತತಯಾತ್ಮನಿ । ವಿದ್ವಾನ್ ಸ್ವಪ್ನ ಇವಾಮರ್ಶಸಾಕ್ಷಿಣಂ ವಿರರಾಮ ಹ ॥೪೦॥ ಸಾಕ್ಷಾದ್ಭಗವತೋಕ್ತೇನ ಗುರುಣಾ ಹರಿಣಾ ನೃಪ ! । ವಿಶುದ್ಧಜ್ಞಾನದೀಪೇನ ಸ್ಫುರತಾ ವಿಶ್ವತೋಮುಖಂ ॥೪೧॥ † ಪರೇ ಬ್ರಹ್ಮಣಿ ಚಾತ್ಮಾನಂ ಪರಂ ಬ್ರಹ್ಮ ತಥಾತ್ಮನಿ । ವೀಕ್ಷ

---

ಒಂದುಕಡೆಯಲ್ಲಿ, ಸ್ಥಾಣುರಿವ - ಮೋಟುಮರದಂತೆ, ಆಸ್ತೇ - ಇರುತ್ತಾನೆ, ಭಗವತಿ - ಷಡ್ಗುಣೈಶ್ವರ್ಯಯುಕ್ತನಾದ, ವಾಸುದೇವೇ - ವಾಸುದೇವಮೂರ್ತಿಯಲ್ಲಿ, ರತಿಂ - ಪ್ರೇಮವನ್ನು, ಉದ್ವಹನ್ - ವಹಿಸಿ, ಅನ್ಯತ್ - ಮತ್ತಾವುದನ್ನೂ, ನವೇದ - ತಿಳಿಯಲಿಲ್ಲ ॥೩೯॥ ಸಃ - ಅವನು, ವ್ಯಾಪಕತಯಾ - ಶರೀರವನ್ನು ಪ್ರಕಾಶಗೊಳಿಸುವುದರಿಂದಲೂ, ವ್ಯತಿರಿಕ್ತತಯಾ - ಶರೀರಾದಿಗಳಿಗಿಂತ ಬೇರೆಯಾಗಿರುವುದರಿಂದಲೂ, ಆತ್ಮನಿ - ತನ್ನಲ್ಲಿ, ಆತ್ಮಾನಂ - ಪರಮಾತ್ಮನನ್ನು, ಸ್ವಪ್ನೇ - ಸ್ವಪ್ನದಲ್ಲಿ, ಅಮರ್ಶಸಾಕ್ಷಿಣಮಿವ - ಅಂತಃಕರಣವೃತ್ತಿಸಾಕ್ಷಿಯನ್ನೋಪಾದಿಯಲ್ಲಿ, ವಿದ್ವಾನ್ - ತಿಳಿದು, ಉಪರರಾಮ - ವಿರಮಿಸಿದನು ॥೪೦॥ ನೃ

---

ತಾನೇ ಬ್ರಹ್ಮನೆಂದು ತಿಳಿದುಕೊಂಡನು ॥೩೮॥ ಇಂತು ದೇವಮಾನದ ಒಂದುನೂರು ವರ್ಷಗಳವರೆಗೂ ಒಂದೇ ಸ್ಥಳದಲ್ಲಿ ಮೋಟುಮರದಂತೆ ಚಲಿಸದೆ ಸ್ಥಿರಾಸನದಿಂದ ಕುಳಿತುಕೊಂಡನು. ಭಗವಂತನಾದ ವಾಸುದೇವಮೂರ್ತಿಯಲ್ಲಿ ಪ್ರೇಮವನ್ನಿಟ್ಟು, ಶರೀರಾದಿಗಳನ್ನು ಕೂಡ ತಿಳಿಯಲಿಲ್ಲ ॥೩೯॥ ಇಂತು ನೆಲಸಿರುವ ಆ ರಾಜನು ಅಂತಃಕರಣವೃತ್ತಿಗಳಿಗೆ ಸಾಕ್ಷಿಯಾಗಿಯೂ, ದೇಹಾದಿಪ್ರಕಾಶಕನಾಗಿಯೂ, ದೇಹಾದಿವ್ಯತಿರಿಕ್ತನಾಗಿಯೂ ಇರುವ ಪರಮಾತ್ಮನನ್ನು ತನ್ನಲ್ಲಿಯೇ ಅಭೇದದಿಂದ ಭಾವಿಸುತ್ತಾ, ಸ್ವಪ್ನದಲ್ಲಿ ತನ್ನ ಶಿರಚ್ಛೇದವನ್ನು ತಾನೇ ನೋಡುವಂತೆ ತನ್ನನ್ನು ತಾನೇ ನೋಡುತ್ತಾ ಶಾಂತನಾದನು ॥೪೦॥ ಗುರುರೂಪದಿಂದ ಸಾಕ್ಷಾತ್ಕಾರವನ್ನಿತ್ತ ಭಗವಂತನಾದ ವಾಸುದೇವನಿಂದುಪದೇಶಿಸಲ್ಪಟ್ಟು ಸರ್ವತೋಮುಖವಾಗಿ

---

‡ (೧) ವೀ. ಸಾಕ್ಷಾದ್ದ್ರಷ್ಟೃವಾದ ಪರಮಾತ್ಮನು ಜೀವಾತ್ಮನಲ್ಲಿ ವ್ಯಾಪಕನಾಗಿ ಜೀವನಿಗಿಂತ ವಿಲಕ್ಷಣನಾಗಿರುವನೆಂತಲೂ, ದೇಹಾದಿಗಳ ಸಂಗತಿಯು ಸ್ವಪ್ನದಂತೆ ಅನಿತ್ಯವೆಂತಲೂ ತಿಳಿದು ಕೇವಲ ಪರಮಾತ್ಮಾನುಸಂಧಾನದಲ್ಲಿಯೇ ತತ್ಪರನಾದನು (೨) ವಿ. ಸ್ವಪ್ನದಲ್ಲಿ ಆ ಪ್ರಪಂಚವ್ಯಾಪಕನೂ ದ್ರಷ್ಟೃವೂ ಆಗಿರುವಂತೆ, ಪರಮಾತ್ಮನು ಆ ಸ್ವಪ್ನಪ್ರಪಂಚ ವ್ಯಾಪಕವಾದ ಸ್ವರೂಪಕ್ಕಿಂತಲೂ ಬೇರೆಯಾದ ಸ್ವರೂಪದಿಂದ ಶುದ್ಧಜೀವನಲ್ಲಿ ವ್ಯಾಪಿಸಿರುವನೆಂದು ತಿಳಿದನು.

(೩) ಸಾ. ಆ ಮಲಯಧ್ವಜನು ನಿರತಿಶಯ ಪ್ರೇಮದಿಂದ, ಭಗವಂತನು ಸಕಲ ದಿಕ್ಕುಗಳಲ್ಲಿಯೂ ಬ್ರಹ್ಮರೂಪದಿಂದ ಬೆಳಗುತ್ತಿರುವನೆಂತಲೂ, ತನ್ನಲ್ಲಿ ಮಾತ್ರ ವಿಯುಕ್ತನಾಗಿರುವನೆಂತಲೂ ತಿಳಿದು ಪ್ರೇಮಾತಿಶಯದಿಂದ ಆತನ ಅಗಲಿಕೆಯನ್ನು ಸೈರಿಸಲಾರದೆ ಮೂರ್ಛಿತನಾದನು.

† (೧) ವೀ. ಜೀವಾತ್ಮನಿಗೆ ಪರಮಾತ್ಮನು ಧಾರಕನೆಂತಲೂ, ವ್ಯಾಪಕನೆಂತಲೂ, ದೇಹಾವಸಾನದವರೆಗೂ ಉಪಾಸನ ಮಾಡುತ್ತಿದ್ದು, ಕಡೆಗೆ ಆ ಉಪಾಸನಾತ್ಮಕ ಜ್ಞಾನವನ್ನುಳಿದು ಮೃತನಾದನು.

(೨) ವಿ. ಜೀವಾತ್ಮನು ಪರಮಾತ್ಮನಲ್ಲಿರುವನೆಂತಲೂ, ಪರಮಾತ್ಮನು ಜೀವಾಂತರ್ಯಾಮಿಯಾಗಿಹನೆಂತಲೂ, ಜೀವೇಶ್ವರರ ಭೇದವು ಸತ್ಯವೆಂತಲೂ ತಿಳಿದು ಶರೀರಾದಿಗಳಲ್ಲಿ ಅಭಿಮಾನವನ್ನುಳಿದನು ॥

ಮಾಣೋ ವಿಹಾಯೇಕ್ಷಾ ಮಸ್ಮಾ ದುದುಪರರಾಮಹ ॥೪೨॥ ಪತಿಂ ಪರಮ
ಧರ್ಮಜ್ಞಂ ವೈದರ್ಭೀ ಮಲಯಧ್ವಜಂ । ಪ್ರೇಮ್ಣಾ ಪರ್ಯಚರ ದ್ಧಿತ್ವಾ
ಭೋಗಾನ್ ಸಾ ಪತಿದೇವತಾ ॥೪೩॥ ಚೀರವಾಸಾ ವ್ರತಕ್ಷಾಮಾ ವೇಣೀ
ಭೂತಶಿರೋರುಹಾ । ಬಭಾ ವುಪಪತಿಂ ಶಾಂತಾ ಶಿಖಾ ಶಾಂತಮಿವಾ ಽ ನ
ಲಂ ॥೪೪॥ ಅಜಾನತೀ ಪ್ರಿಯತಮಂ ಯದೋಪರತ ಮಂಗನಾ । ಸುಸ್ಥಿರಾ
ಸನ ಮಾಸಾದ್ಯ ಯಥಾಪೂರ್ವ ಮುಪಾಚರತ್ ॥೪೫॥ ಯದಾ ನೋಪ

---

ಪ - ರಾಜನೆ ! ಭಗವತಾ-ಭಗವಂತನಾದ, ಹರಿಣಾ - ಹರಿಯೆಂಬ, ಗುರುಣಾ - ಗುರುವಿನಿಂದ, ಉಕ್ತೇನ - ಹೇಳಲ್ಪಟ್ಟ, ವಿಶ್ವತೋಮುಖಂ- ಎಲ್ಲಾ ಕಡೆಯಲ್ಲಿಯೂ, ಸ್ಫುರತಾ-ಹೊಳೆಯುವ, ವಿಶುದ್ಧಜ್ಞಾನದೀಪೇನ - ಪರಿಶುದ್ಧವಾದ ಜ್ಞಾನದೀಪದಿಂದ, ಪರೇಬ್ರಹ್ಮಣಿ - ಪರಬ್ರಹ್ಮನಲ್ಲಿ, ಆತ್ಮಾನಂ - ತನ್ನನ್ನೂ, ತಥಾ- ಹಾಗೆಯೇ, ಆತ್ಮನಿ - ತನ್ನಲ್ಲಿ, ಪರಬ್ರಹ್ಮ - ಪರಮಾತ್ಮನನ್ನೂ, ವೀಕ್ಷಮಾಣಃ - ನೋಡುತ್ತಾ, ಈಕ್ಷಾಂ- ನೋಟವನ್ನು, ವಿಹಾಯ - ಉಳಿದು, ಅಸ್ಮಾತ್-ಮಿಕ್ಕುದರಿಂದ, ಉಪರರಾಮ-ಉಪರತನಾದನು ॥೪೨॥ ಪತಿದೇವತಾ - ಪತಿಯೇ ದೈವವಾಗುಳ್ಳ, ಸಾವೈದರ್ಭೀ - ಆ ವಿದರ್ಭಪುತ್ರಿಯು, ಭೋಗಾನ್ - ಭೋಗಗಳನ್ನು, ಹಿತ್ವಾ - ತೊರೆದು, ಪರಮಧರ್ಮಜ್ಞಂ- ಧರ್ಮಸೂಕ್ಷ್ಮವನ್ನು ಬಲ್ಲ, ಮಲಯಧ್ವಜಂಪತಿಂ- ಮಲಯಧ್ವಜನೆಂಬ ಗಂಡನನ್ನು, ಪ್ರೇಮ್ಣಾ - ಪ್ರೀತಿಯಿಂದ, ಪರ್ಯಚರತ್ - ಸೇವಿಸಿದಳು ॥೪೩॥ ಚೀರವಾಸಾಃ - ನಾರುಮಡಿಯನ್ನುಟ್ಟ, ವ್ರತಕ್ಷಾಮಾ-ವ್ರತಗಳಿಂದ ಬಡವಾದ, ವೇಣೀ....ಹಾ - ಜಡೆಗಟ್ಟ ಕೂದಲುಳ್ಳ, ಆಕೆಯು, ಶಾಂತಂ - ಕೆಂಡವಾದ, ಅನಲಮಿವ - ಅಗ್ನಿಯುಬಳಿ, ಶಿಖೇವ . ಜ್ವಾಲೆಯಂತೆ, ಉಪಪತಿಂ - ಪತಿಯ ಸಮೀಪದಲ್ಲಿ, ಅಥವಾ ಪತಿಗೆ ಸಮಾನಳಾಗಿ, ಶಾಂತಾ - ಶಾಂತೆಯಾಗಿ, ಬಭೌ - ಪ್ರಕಾಶಿಸಿದಳು ॥೪೪॥ ಉಪರತಂ - ಮೃತನಾದರೂ. ಸುಸ್ಥಿರಾಸನಂ - ಸ್ಥಿರಾಸನವುಳ್ಳ, ಪ್ರಿಯತಮಂ - ಪತಿಯನ್ನು, ಅಂಗನಾ - ವೈದರ್ಭಿಯು, ಯದಾ - ಯಾವಾಗ, ಅಜಾನತೀ - ತಿಳಿಯಲಿಲ್ಲವೋ, ತದಾ - ಆಗ, ಆಸಾದ್ಯ - ಬಳಿಗೈದಿ, ಯಥಾಪೂರ್ವಂ - ಮುನ್ನಿನಂತೆಯೇ, ಉಪಾಚರತ್ - ಸೇವಿಸುತ್ತಿದ್ದಳು ॥ ಅರ್ಚತೀ - ಸೇವಿಸುತ್ತಾ, ಯದಾ - ಯಾವಾಗ, ಪತ್ಯುಃ- ಗಂಡನ, ಅಂಘ್ರಿ-ಪಾದದಲ್ಲಿ, ಊಷ್ಮಾಣಂ-

---

ಬೆಳಗುತ್ತಿರುವ ಪರಿಶುದ್ಧವಾದ ಜ್ಞಾನದೀಪದಿಂದ ಸ್ವಸ್ವರೂಪವನ್ನು ತಿಳಿದು, ತನ್ನನ್ನು ಪರಮಾತ್ಮನಲ್ಲಿಯೂ, ಪರಮಾತ್ಮನನ್ನು ತನ್ನಲ್ಲಿಯೂ ಅಭೇದದಿಂದ ನೋಡುತ್ತಾ, ಕಡೆಗೆ ದಗ್ಧೇಂಧನಾನಲದಂತೆ ಆವೀಕ್ಷಣವೂ ಶಾಂತವಾಗಲು, ಸಂಸಾರದಿಂದಮುಕ್ತನಾದನು ॥೪೨॥

ಮಹಾಪತಿವ್ರತೆಯಾದ ವೈದರ್ಭಿಯು ಸಕಲ ಭೋಗಗಳನ್ನೂ ತೊರೆದು ಪರಮ ಧಾರ್ಮಿಕನಾದ ಮಲಯಧ್ವಜರಾಜನನ್ನು ಭಕ್ತಿಯಿಂದ ಸೇವಿಸುತ್ತಿದ್ದಳು ॥೪೩॥ ಆಕೆಯು ಪತಿಯಂತೆಯೇ ನಾರುಮಡಿಗಳನ್ನುಟ್ಟು; ಉಪವಾಸ ವ್ರತಾದಿಗಳಿಂದ ಬಡವಾಗಿ ಸಂಸ್ಕಾರವಿಲ್ಲದೆ ಜಡೆಗಟ್ಟಿರುವ ತಲೆಗೂದಲನ್ನು ಬಿಟ್ಟುಕೊಂಡು, ಶಾಂತವಾದ ಅಗ್ನಿಯಜ್ವಾಲೆಯಂತೆ, ಪತಿಯಬಳಿಯಲ್ಲಿ ಶಾಂತಮನಸ್ಕಳಾಗಿ ಮೆರೆಯುತ್ತಿದ್ದಳು ॥೪೪॥ ಇಂತಿರುವಾಗ ಮಲಯಧ್ವಜನು ಆಸನಬಂಧವನ್ನು ಉಳಿಯದೆಯೇ ಮೃತನಾಗಲು, ವೈದರ್ಭಿಯು ಗಂಡನ ಮರಣವನ್ನರಿಯದೆ ಮುನ್ನಿನಂತೆಯೇ ಬಳಿಯಲ್ಲಿಕುಳಿತು ಸೇವಿಸತೊಡಗಿದಳು ॥೪೫॥ ಕಾಲನ್ನೊತ್ತುವಾಗ ಬಿಸಿಯು ಕಾಣದಿರಲು, ವೈದರ್ಭಿಯು ಗಾಬರಿಯಾಗಿ, ಹಿಂದಿನಿಂದ

ಲಭೇತಾಂಘ್ರಿ ಪ್ರೋಷ್ಮಾಣಂ ಪತ್ಯು ರರ್ಚತೀ । ಆಸೀ ತ್ಸಂವಿಗ್ನಹೃದಯಾ
ಯೂಥಭ್ರಷ್ಟಾ ಮೃಗೀಯಥಾ ॥ ೪೬ ॥ ಆತ್ಮಾನಂ ಶೋಚತೀ ದೀನ
ಮಬಂಧುಂ ವಿಕ್ಲಬಾಽಶ್ರುಭಿಃ । ಸ್ತನಾ ವಾಸಿಚ್ಯ ವಿಪಿನೇ ಸುಸ್ವರಂ ಪ್ರ
ರುರೋದ ಸಾ ॥ ೪೭ ॥ ಉತ್ತಿಷ್ಠೋತ್ತಿಷ್ಠ ರಾಜರ್ಷೇ ! ಇಮಾ ಮು
ದಧಿಮೇಖಲಾಂ । ದಸ್ಯುಭ್ಯಃ ಕ್ಷತ್ರಬಂಧುಭ್ಯೋ ಬಿಭ್ಯತೀಂ ಪಾತು ಮ
ರ್ಹಸಿ ॥ ಏವಂ ವಿಲಪತೀ ಬಾಲಾ ವಿಪಿನೇಽನುಗತಾ ಪತಿಂ । ಪತಿತಾ ಪಾದ
ಯೋ ರ್ಭರ್ತುಃ ರುದಂತ್ಯಶ್ರೂ ಣ್ಯವರ್ತಯತ್ ॥ ೪೮ ॥ ಚಿತಿಂ ದಾರುಮ
ಯೀಂ ಚಿತ್ವಾ ತಸ್ಯಾಂ ಪತ್ಯುಃ ಕಳೇಬರಂ । ಆದೀಪ್ಯ ಚಾನುಮರಣೇ
ವಿಲಪಂತೀ ಮನೋ ದಧೇ ॥ ೫೦ ॥ ತತ್ರ ಪೂರ್ವತರಃ ಕಶ್ಚಿ ತ್ಸಖಾ ಬ್ರಾ

---

ಬಿಸಿಯನ್ನು, ನೋಪಲಭೇತ - ಕಾಣಲಿಲ್ಲವೋ, ತದಾ - ಆಗ, ಯೂಥಭ್ರಷ್ಟಾ-ಗುಂಪಿನಿಂದ ಸಿಡಿದ, ಮೃಗೀಯಥಾ - ಹುಲ್ಲೆಯಂತೆ, ಸಂವಿಗ್ನಹೃದಯಾ - ಮನೋವ್ಯಥೆಯುಳ್ಳವಳು, ಆಸೀತ್ - ಆದಳು ॥೪೬॥ ಅಬಂಧುಂ - ಬಂಧುಗಳಿಲ್ಲದ, ದೀನಂ - ದೀನವಾದ, ಆತ್ಮಾನಂ - ತನ್ನನ್ನು, ಶೋಚತೀ-ಶೋಕಿಸುತ್ತಾ, ವಿಕ್ಲಬಾಶ್ರುಭಿಃ - ದುಃಖಾಶ್ರುಗಳಿಂದ, ಸ್ತನೌ - ಸ್ತನಗಳನ್ನು, ಆಸಿಚ್ಯ - ತೋಯಿಸಿ, ವಿಪಿನೇ - ಕಾಡಿನಲ್ಲಿ, ಸುಸ್ವರಂ - ಇಂಪಾಗಿ, ಪ್ರರುರೋದಹ - ಗಟ್ಟಿಯಾಗಿ ಅತ್ತಳು ॥ ೪೭ ॥ ರಾಜರ್ಷೇ - ರಾಜಋಷಿಯೇ ! ಉತ್ತಿಷ್ಠೋತ್ತಿಷ್ಠ-ಏಳುಏಳು, ದಸ್ಯುಭ್ಯಃ-ಅಧಾರ್ಮಿಕರಾದ, ಕ್ಷತ್ರಬಂಧುಭ್ಯಃ-ಕ್ಷತ್ರಿಯಾಧಮರಿಂದ, ಬಿಭ್ಯತೀಂ - ಹೆದರುತ್ತಿರುವ, ಉದಧಿಮೇಖಲಾಂ - ಸಮುದ್ರಗಳೇಒಡ್ಯಾಣವಾಗುಳ್ಳ, ಇಮಾಂ - ಈಭೂಮಿಯನ್ನು, ಪಾತುಂ - ಸಲಹುವುದಕ್ಕೆ, ಅರ್ಹಸಿ-ಯೋಗ್ಯನಾಗುತ್ತಿ ॥೪೮॥ ಪತಿಂ - ಪತಿಯನ್ನು, ಅನುಗತಾ - ಅನುಸರಿಸಿದ, ಬಾಲಾ-ವೈದರ್ಭಿಯು, ಏವಂ - ಇಂತು, ವಿಪಿನೇ-ಕಾಡಿನಲ್ಲಿ, ವಿಲಪತೀ - ಅಳುತ್ತಾ, ಭರ್ತುಃ - ಗಂಡನ, ಪಾದಯೋಃ - ಕಾಲುಗಳಲ್ಲಿ, ಪತಿತಾ - ಬಿದ್ದು, ರುದಂತೀ - ಅಳುತ್ತಾ, ಅಶ್ರೂಣಿ - ಕಂಬನಿಗಳನ್ನು, ಅವರ್ತಯತ್-ಸುರಿಸಿದಳು ॥೪೯॥ ದಾರುಮಯೀಂ - ಕಾಷ್ಠರೂಪವಾದ, ಚಿತಿಂ - ಚಿತಿಯನ್ನು, ಕೃತ್ವಾ - ಮಾಡಿ, ತಸ್ಯಾಂ - ಅದರಲ್ಲಿ, ಪತ್ಯುಃ- ಗಂಡನ, ಕಳೇಬರವನ್ನು, ಚಿತ್ವಾ - ಇಟ್ಟು, ಆದೀಪ್ಯ - ಉರಿಸಿ, ವಿಲಪಂತೀ - ಅಳುತ್ತಾ, ಅನುಮರಣೇ - ಸಹಗಮನದಲ್ಲಿ, ಮನಃ - ಮನಸ್ಸನ್ನು, ದಧೇ-ಇಟ್ಟಳು ॥೫೦॥ ಪ್ರಭೋ - ಪ್ರಾಚೀನಬರ್ಹಿಯೇ ! ತತ್ರ - ಆಗ, ಪೂ

---

ಸಿಡಿದುಬಂದ ಹುಲ್ಲೆಗರುವಿನಂತೆ ಎದೆಗುಂದಿ ಅಳತೊಡಗಿದಳು ॥೪೬॥ ಇಂತು ಕಾಡಿನಲ್ಲಿ ದಿಕ್ಕಿಲ್ಲದೆ ಒಂಟಿಯಾಗಿ ದುಃಖಿಸುತ್ತಾ ಸ್ತನಮಂಡಲವು ತೋಯುವಂತೆ ಕಂಬನಿಗಳನ್ನು ಸುರಿಸುತ್ತಾ, ಸುಸ್ವರದಿಂದ ಅಳುತ್ತಾ, ಎಲೈ ರಾಜರ್ಷಿಯೆ ! ಏಕಿಂತು ಮಲಗಿರುವೆ ? ಏಳು ಏಳು. ಚತುಸ್ಸಮುದ್ರಮುದ್ರಿತೆಯಾದ ಈ ಭೂಮಿಯು ದುಷ್ಟರಾದ ಕ್ಷತ್ರಿಯಾಧಮರಿಗಂಜುತ್ತಿರುವಳು. ಇವಳನ್ನು ರಕ್ಷಿಸು ಎಂದು ಮೊರೆಯಿಟ್ಟಳು ॥ ೪೮ ॥ ಇಂತು ಆಬಾಲೆಯಾದ ವೈದರ್ಭಿಯು ಕಾಡಿನಲ್ಲಿ ಗೋಳಾಡುತ್ತಾ, ಗಂಡನಪಾದಗಳಲ್ಲಿ ಬಿದ್ದು ಹಂಬಲಿಸುತ್ತಾ ಕಂಬನಿಗಳನ್ನು ಸುರಿಸಿದಳು ॥೪೯॥ ತರುವಾಯ ಆಕೆಯು ಕಾಷ್ಠಗಳಿಂದ ಚಿತಿಯನ್ನೊಡ್ಡಿ, ಅದರಲ್ಲಿ ಪತಿಯ ಕಳೇಬರವನ್ನಿಟ್ಟು ಅಗ್ನಿದಾನದಿಂದ ಉರಿಯಿಸಿ, ಉಕ್ಕಿಬರುವ ದುಃಖವನ್ನು ಸೈರಿಸಲಾರದೆ ಬಿಕ್ಕಿಬಿಕ್ಕಿ ಅಳುತ್ತಾ, ಕಡೆಗೆ ತಾನೂ ಅದೇಚಿತಿಯಲ್ಲಿ

ಹ್ಮಣ ಆತ್ಮವಾನ್ । ಸಾಂತ್ವಯನ್ ವಲ್ಗುನಾ ಸಾಮ್ನಾ ತಾ ಮಾಹ ರುದತೀಂ ಪ್ರಭೋ ! ॥೫೧॥ ಬ್ರಾಹ್ಮಣಃ ॥ ಕಾ ತ್ವಂ? ಕಸ್ಯಾಸಿ ? ಕೋಽವಾಽಯಂ? ಶಯಾನಃ ಯಮನುಶೋಚಸಿ । ಜಾನಾಸಿ ಕಿಂ? ಸಖಾಯಂ ಮಾಂ ಯೇನಾಽಗ್ರೇ ವಿಚಚರ್ಥಹ ॥ ೫೨ ॥ ಅಪಿಸ್ಮರಸಿ ? ಚಾತ್ಮಾನ ಮವಿಜ್ಞಾತ ಸಖಂ ಸಖೇ! ।ಹಿತ್ವಾ ಮಾಂ ಪದ ಮನ್ವಿಚ್ಛನ್ ಭೌಮಭೋಗರತೋ ಗತಃ ॥೫೩॥

ವರ್ತರಃ - ಹಳಬನಾದ, ಆತ್ಮವಾನ್ - ದಯಾಳುವಾದ, ಬ್ರಾಹ್ಮಣಃ-ಬ್ರಾಹ್ಮಣನಾದ, ಕಶ್ಚಿತ್ಸಖಾ-ಒಬ್ಬಸ್ನೇಹಿತನು, (ಬಂದು) ವಲ್ಗುನಾ - ಇಂಪಾದ, ಸಾಮ್ನಾ - ಸವಿನುಡಿಯಿಂದ, ರುದತೀಂ - ಅಳುತ್ತಿರುವ, ತಾಂ - ಆಕೆಗೆ, ಆಹ - ಹೇಳುತ್ತಾನೆ, ||೫೧|| ತ್ವಂ - ನೀನು, ಕಾ - ಯಾರು, ಕಸ್ಯಾಸಿ - ಯಾರಸಂಬಂಧಿಯು ಯಸ್ಯ-ಯಾವನಿಗಾಗಿ, ಅನುಶೋಚಸಿ-ಅಳುವೆಯೋ, ಶಯಾನಃ-ಮಲಗಿರುವ, ಅಯಂ-ಇವನು ಕೋವಾ-ಯಾವನು, ಯೇನ-ಯಾರೊಡನೆ, ಅಗ್ರೇ-ಮುನ್ನು, ವಿಚಚರ್ಥಹ-ಮಿತ್ರತ್ವಸುಖವನ್ನು ಅನುಭವಿಸಿದೆಯೋ, ಸಖಾಯಂಮಾಂ-ಆ ಮಿತ್ರನಾದ ನನ್ನನ್ನು, ಜಾನಾಸಿಕಿಂ - ಬಲ್ಲೆಯಾ ? ||೫೨|| ಸಖೇ - ಮಿತ್ರನೆ ! ಅವಿಜ್ಞಾತಸಖಂ - ಸ್ನೇಹಿತನನ್ನು ಮರೆತಿರುವ, ಆತ್ಮಾನಂ - ನನ್ನನ್ನು, ಅಪಿಜಾನಾ

ಶರೀರವನ್ನು ಬಿಡಬೇಕೆಂದು ನಿಶ್ಚಯಿಸಿದಳು ||೫೦|| ಅಯ್ಯಾ ಪ್ರಾಚೀನಬರ್ಹಿಯೆ! ಇಷ್ಟರಲ್ಲಿ ದಯಾಳುವಾಗಿಯೂ ಬ್ರಾಹ್ಮಣೋತ್ತಮನಾಗಿಯೂ ಇರುವ ಒಬ್ಬ ಪೂರ್ವಮಿತ್ರನಲ್ಲಿಗೆ ಬಂದು ಸವಿನುಡಿಗಳಿಂದ ಸಂತೈಸುತ್ತಾ ಆಕೆಗಿಂತೆಂದನು ‡ ಅಯ್ಯಾ ಮಿತ್ರನೆ! ನೀನುಯಾರು? ಯಾರಬಂಧುವು? ಇಲ್ಲಿ ಮಲಗಿರುವ ಇವನಾರು ? ಇವನಿಗಾಗಿ ಏಕಿಂತು ಚಿಂತಿಸುವೆ? ಮುನ್ನು ನೀನು ಯಾರಜತೆಯಲ್ಲಿದ್ದುಕೊಂಡು ನೆಮ್ಮದಿಯಾಗಿದ್ದೆಯೋ, ಅಂತಹ ಬಾಲ್ಯಮಿತ್ರನಾದ ನನ್ನ ಜ್ಞಾಪಕವಿರುವುದೆ? ೫೧||ಅಯ್ಯಾ ನನ್ನ ಜ್ಞಾಪಕವಿಲ್ಲದಿದ್ದರೂ ಹೋಗಲಿ "ನನಗೊಬ್ಬಸ್ನೇಹಿತನಿರುವನು, ಎಂಬುದನ್ನೂ ಕೂಡ ಮರೆತಿರುವ ನಿನ್ನನ್ನಾದರೂ ನೀನುಬಲ್ಲೆಯಾ? ಮಿತ್ರನೆ ! ನನ್ನನ್ನುಳಿದು ಕ್ಷುದ್ರಗಳಾದ ವಿಷಯಭೋಗಗಳನ್ನು ಅನುಭವಿಸುವುದಕ್ಕಾಗಿ ಭೋಗಾಯತನ (ಶರೀರ)ಗಳನ್ನು ಅರಸುತ್ತಾ, ನನ್ನ ಸ್ನೇಹವನ್ನು ಬಿಟ್ಟೆಯಲ್ಲಾ ||೫೨ || ಎಲೈ ಮಿತ್ರನೆ! ನಾನು ನೀನೂ ಸಹ ಮಾನಸಸರೋವರದಲ್ಲಿ ಹಂಸಪಕ್ಷಿಗಳಾಗಿ ಅನೇಕ ಸಹಸ್ರವರ್ಷಗಳು ಸ್ಥಲವಿಲ್ಲದೆ ಇರಲಿಲ್ಲವೆ? || ೧೪|| ಆಗ ನೀನು ನನ್ನನ್ನುಳಿದು ವಿಷಯಸುಖಾ

ಗೂ||ಇಂತು-ಜೀವನು ಭಕ್ತಿಮಾರ್ಗವನ್ನು ಪಡೆದು ವಿರಕ್ತನಾಗಿ ಸದ್ಗುರುವನ್ನುಸಂಪಾದಿಸಿ ಧ್ಯಾನಧಾರಣಾದಿಗಳಿಂದ ಅಜ್ಞಾನವನ್ನು ಕಳೆದುಕೊಂಡು ನಿರಂತರವೂ ಸ್ವಸ್ವರೂಪಾನು ಸಂಧಾನಮಾಡುತ್ತಿರಲು, ಅವಿದ್ಯಾ ನಿವೃತ್ತಿಯಿಂದ ಬ್ರಹ್ಮಸಾಕ್ಷಾತ್ಕಾರವಾಯಿತು. ಹಿಂದೆ ಹೇಳಿದಂತೆ ಸಖ್ಯ, ಆತ್ಮನಿವೇದನಗಳೆಂಬಎರಡು ಭಕ್ತಿಗಳ ಸ್ವರೂಪವನ್ನೂ ಉಪದೇಶಿಸಲೆಳಸಿ ಪರಮಾತ್ಮನು ತಿಳುಹುತ್ತಾನೆ. ಎಲೈ ಜೀವನೆ! ನೀನು ಯಾರು ? ಯಾರಕಡೆಯು ? ಎಂದು ತಿಳಿದಿರುವೆ ? '' ನೀನು ಯಾರಿಗಾಗಿ ದುಃಖಿಸುತ್ತಿರುವೆಯೋ, ಅವನಿಗೂ ನಿನಗೂ ಸಂಬಂಧವೇನು ? ನಿಮ್ಮಿರ್ವರಿಗೂ ದೇಹದಿಂದ ಮಾತ್ರವೇ ಸಂಬಂಧವೆಂಬುದನ್ನು ತಿಳಿಯದೆ ವ್ಯರ್ಥವಾಗಿ ಗೋಳಾಡುವೆ. ಸೃಷ್ಟಿಗೆ ಮುನ್ನು ನನ್ನಲ್ಲಿಯೇ ಇದ್ದು ಸುಖವನ್ನನುಭವಿಸು

‡ಪೂರ್ವಜನ್ಮನದಲ್ಲಿ ಪುರಂಜನನಾಗಿದ್ದ ಜೀವನೇ ಈಗ ವೈದರ್ಭಿಯಾಗಿರುವನೆಂದು ಸೂಚಿಸುವುದಕ್ಕಾಗಿ ಪುಲ್ಲಿಂಗದಿಂದ ಸಂಬೋಧಿಸಲ್ಪಡುವುದು.

ಹಂಸಾ ವಹಂಚ ತ್ವಂಚಾರ್ಯ ! ಸಖಾಯೌ ಮಾನಸಾಯನೌ । ಅಭೂತಾ ಮಂತರಾ ವೌಕ ಸ್ಸಹಸ್ರಪರಿವತ್ಸರಾನ್ ॥ ೫೪ ॥ ಸತ್ವಂ ವಿಹಾಯ ಮಾಂ ಬಂಧೋ ! ಗತೋ ಗ್ರಾಮ್ಯಮತಿ ರ್ಮಹೀಂ । ವಿಚರನ್ ಪದ ಮದ್ರಾಕ್ಷೀಃ ಕಯಾಚಿ ನ್ನಿರ್ಮಿತಂ ಸ್ತ್ರಿಯಾ ॥ ೫೫ ॥ ಪಂಚಾರಾಮಂ ನವದ್ವಾರ ಮೇಕಪಾಲಂ ತ್ರಿಕೋಷ್ಠಕಂ । ಷಟ್ಕುಲಂ ಪಂಚವಿಪಣಂ ಪಂಚಪ್ರಕೃತಿ ಸ್ತ್ರೀಧವಂ ॥ ೫೬ ॥ ಪಂಚೇಂದ್ರಿಯಾರ್ಥಾ ಆರಾಮಾ ದ್ವಾರಃ ಪ್ರಾಣಾ

ಸಿ - ಇಲ್ಲೆಯಾ ? ಮಾಂ - ನನ್ನನ್ನು, ಹಿತ್ವಾ - ತೊರೆದು, ಭೌಮ...ತಃ - ವಿಷಯ ಭೋಗಾಸಕ್ತನಾಗಿ, ಪದಂ - ಭೋಗಸ್ಥಾನವನ್ನು, ಅನ್ವಿಚ್ಛನ್ - ಬಯಸುತ್ತಾ, ಗತಃ - ನನ್ನವಿಯೋಗವನ್ನು ಪಡೆದೆ ॥ ೫೩ ॥ ಆರ್ಯ - ಪೂಜ್ಯನೆ ! ಅಹಂ - ನಾನು, ತ್ವಂಚ - ನೀನೂ, ಮಾನಸಾಯನೌ - ಮಾನಸ ಸರೋವರದಲ್ಲಿ ನೆಲಸಿ, ಸಖಾಯೌ - ಸ್ನೇಹಿತರಾಗಿ, ಓಕಅಂತರಾವಾ - ಸ್ಥಾನವಿಲ್ಲದೆಯೇ, ಸಹಸ್ರಪರಿವತ್ಸರಗಳು, ಅಭೂತಾಂ - ಇದ್ದೆವು ॥ ೫೪ ॥ ಬಂಧೋ - ಬಂಧುವೆ ! ಸತ್ವಂ - ಆ ನೀನು, ಮಾಂ-ನನ್ನನ್ನು, ವಿಹಾಯ - ಬಿಟ್ಟು, ಗ್ರಾಮ್ಯಮತಿಃ - ವಿಷಯಾಸಕ್ತನಾಗಿ, ಮಹೀಂ - ಭೂಮಿಗೆ, ಗತಃ-ಬಂದೆ, ವಿಚರನ್ - ಅಲೆದಾಡುತ್ತಾ, ಕಯಾಚಿತ್ - ಒಬ್ಬ, ಸ್ತ್ರಿಯಾ - ಸ್ತ್ರೀಯಿಂದ, ನಿರ್ಮಿತಂ - ಉಂಟುಮಾಡಲ್ಪಟ್ಟ, ಪದಂ - ನೆಲೆಯನ್ನು, ಅದ್ರಾಕ್ಷೀಃ - ಕಂಡೆ ॥ ೫೫ ॥ ಪಂಚಾರಾಮಂ-ಐದು ಉದ್ಯಾನಗಳುಳ್ಳ, ನವದ್ವಾರಂ - ಒಂಬತ್ತು ಬಾಗಿಲುಗಳುಳ್ಳ, ಏಕಪಾಲಂ - ಒಬ್ಬ ನಾಯಕನುಳ್ಳ, ತ್ರಿಕೋಷ್ಠಕಂ - ಮೂರು ಪ್ರಾಕಾರಗಳುಳ್ಳ, ಷಟ್ಕುಲಂ - ಆರುಮಂದಿ ವರ್ತಕರು ಉಳ್ಳ, ಪಂಚವಿಪಣಂ - ಐದು ಅಂಗಡಿಗಳುಳ್ಳ, ಪಂಚಪ್ರಕೃತಿ-ವಿಸ್ತಾರವಾದ ಪ್ರಜೆಗಳುಳ್ಳ, ಸ್ತ್ರೀಧವಂ - ಹೆಂಗಸೇ ಯಜಮಾನಿಯಾಗುಳ್ಳ ಪುರವದು॥ ೫೬ ॥ ಪ್ರಭೋ - ಪ್ರಭುವೆ । ಪಂಚ - ಐದು, ಇಂದ್ರಿಯಾರ್ಥಾಃ -

ಭಿಲಾಷೆಯಿಂದ ಭೂಲೋಕಕ್ಕೆರಗಿ ನೆಲೆಯನ್ನರಸುತ್ತಾ, ಕಡೆಗೆ ಒಬ್ಬಾನೊಬ್ಬ ಸ್ತ್ರೀಯಿಂದ ನಿರ್ಮಿತವಾದ ಸ್ಥಾನವನ್ನು ಕಂಡೆ॥೫೫॥ಆ ಸ್ಥಲವು ಐದು ಉದ್ಯಾನಗಳಿಂದಲೂ, ಒಂಬತ್ತು ಬಾಗಿಲುಗಳಿಂದಲೂ, ಒಬ್ಬ ಪುರಪಾಲಕನಿಂದಲೂ, ಮೂರು ಕೋಟೆಗಳಿಂದಲೂ, ಬೇಕಾದ ಸಂಭಾರಗಳನ್ನೊದಗಿಸುವ ಆರುಮಂದಿ ವರ್ತಕರಿಂದಲೂ, ಐದು ಅಂಗಡಿಗಳಿಂದಲೂ, ಅನೇಕ

ತ್ತಿದ್ದೆ ॥೫೩॥ ಅಂತಹ ನನ್ನನ್ನೇ ಮರೆತೆ. ಚಿಂತೆಯಿಲ್ಲ. ನೀನಾರೆಂಬುದನ್ನಾದರೂ ತಿಳಿದಿರುವೆಯ ? ಮುನ್ನ ನಾನು ನೀನು ಇಬ್ಬರೂ‡ಶ್ರುತಿಯಲ್ಲಿ ಹೇಳುವಂತೆ ಹೃದಯವಾಸಿಗಳಾಗಿ ಮಹಾಪ್ರಳಯದವರೆಗೂ ಒಂದೇಕಡೆಯಲ್ಲಿ ಎಡಬಿಡದೆ ನೆಲಸಿದ್ದೆವು ॥೫೪॥ ನೀನು ಗ್ರಾಮ್ಯಸುಖೇಚ್ಛೆಯಿಂದ ನನ್ನನ್ನು ಬಿಡು ಮಾಯಿಕವಾದ ಶರೀರವೆಂಬ ಪುರವನ್ನವಲಂಬಿಸಿದೆ ॥೫೫॥ ಶಬ್ದಾದಿ ವಿಷಯಗಳೇ ಉದ್ಯಾನಗಳು, ಇಂದ್ರಿಯಸ್ಥಾನಗಳೇ ಒಂಬತ್ತು ಬಾಗಿಲು. ರಕ್ತ, ಮಾಂಸ, ಎಲುಬುಗಳೇ ಮೂರು ಕೋಟೆಗಳು, ಜ್ಞಾ

‡ ಶ್ರು ॥ ದ್ವಾಸುಪರ್ಣಾ ಸಯುಜಾ ಸಖಾಯೌ ಸಮಾನಂ ವೃಕ್ಷಂ ಪರಿಷಸ್ವಜಾತೇ।ತಯೋ ರನ್ಯಃ ಪಿಪ್ಪಲಂ ಸ್ವಾದ್ವತ್ತ್ಯನಶ್ನನ್ನನ್ಯೋ Z ಭಿಚಾಕಶೀತಿ ॥ ಶರೀರವೆಂಬ ವೃಕ್ಷದಮೇಲೆ ಜೀವಾತ್ಮ ಪರಮಾತ್ಮಗಳೆಂಬ ಎರಡು ಪಕ್ಷಿಗಳು ನೆಲಸಿರುವುವು. ಅವುಗಳಲ್ಲಿ ಒಂದು ಹಕ್ಕಿಯು (ಜೀವನು) ಹಣ್ಣು (ಪುಣ್ಯ ಪಾಪ ಫಲ) ಗಳನ್ನು ಸವಿಯುತ್ತಿರುವನು. ಮತ್ತೊಂದು ಹಕ್ಕಿಯು (ಪರಮಾತ್ಮನು) ಉದಾಸೀನವಾಗಿ ನೋಡುತ್ತಿರುವುದು.

ನವ ಪ್ರಭೋ ! † ತೇಜೋಽಬನ್ನಾನಿ ಕೋಷ್ಠಾನಿ ಕುಲ ಮಿಂದ್ರಿಯ
ಸಂಗ್ರಹಃ ॥ ೫೩ ॥ ವಿಪಣಸ್ತು ಕ್ರಿಯಾ ಶಕ್ತಿಃ ಭೂತಪ್ರಕೃತಿ ರವ್ಯಯಾ ।
ಶಕ್ತ್ಯಧೀಶಃ ಪುಮಾಂ ಸ್ತ್ವತ್ರ ಪ್ರವಿಷ್ಟೋ ನಾಽವಬುಧ್ಯತೇ ॥ ೫೪ ॥
ತಸ್ಮಿಂ ಸ್ತ್ವಂ ರಾಮಯಾ ಸ್ಪೃಷ್ಟೋ ರಮಮಾಣೋಽಶ್ರುತಸ್ಮೃತಿಃ ।
ತತ್ಸಂಗಾ ದೀದೃಶೀಂ ಪ್ರಾಪ್ತೋ ದಶಾಂ ಪಾಪೀಯಸೀಂ ಪ್ರಭೋ ! ॥೫೫॥

ವಿಷಯಗಳು, ಆರಾಮಾಃ - ಉದ್ಯಾನಗಳು, ನವದ್ವಾರಾಃ - ಒಂಭತ್ತು ಬಾಗಿಲುಗಳು, ಪ್ರಾಣಾಃ - ಪ್ರಾಣದ್ವಾರಗಳು, ತೇಜೋಽಬನ್ನಾನಿ-ತೇಜಸ್ಸು, ಜಲ, ಪೃಥಿವಿಗಳು, ಕೋಷ್ಠಾನಿ - ಪ್ರಾಕಾರಗಳು, ಇಂದ್ರಿಯಸಂಗ್ರಹಃ - ಇಂದ್ರಿಯ ಸಮೂಹವು, ಷಟ್ಕುಲಂ - ಆರುಮಂದಿ ವರ್ತಕರು ॥೫೩॥ ಕ್ರಿಯಾ ಶಕ್ತಿಃ - ಕರ್ಮೇಂದ್ರಿಯಗಳು, ವಿಪಣಃ - ಅಂಗಡಿಗಳು, ಅವ್ಯಯಾ - ನಾಶರಹಿತವಾದ, ಭೂತಪ್ರಕೃತಿಃ - ಪಂಚಭೂತಗಳೇ ಉಪಾದಾನ ಕಾರಣವು. ಶಕ್ತ್ಯಧೀಶಃ - ಶಕ್ತಿಯೇ ಯಜಮಾನನು, ತತ್ರ- ಅಲ್ಲಿ, ಪ್ರವಿಷ್ಟಃ - ಪ್ರವೇಶಿಸಿ, ನಾವಬುಧ್ಯತೇ - ತಿಳಿಯುವುದಿಲ್ಲ ॥೫೪॥ ತಸ್ಮಿನ್ - ಅದರಲ್ಲಿ, ತ್ವಂ - ನೀನು, ರಾಮಯಾ - ಸ್ತ್ರೀ (ಬುದ್ಧಿ) ಯಿಂದ, ಸ್ಪೃಷ್ಟಃ - ಮುಟ್ಟಲ್ಪಟ್ಟವನಾಗಿ, ರಮಮಾಣಃ - ವಿಹರಿಸುತ್ತಾ, ಅಶ್ರುತಸ್ಮೃತಿಃ - ಸ್ವರೂಪಸ್ಮರಣೆಯಿಲ್ಲದೆ, ತತ್ಸಂಗಾತ್ - ಅದರ ಸಂಗದಿಂದ, ಪ್ರಭೋ - ಪ್ರಭುವೆ ! ಈದೃಶೀಂ - ಇಂತಹ, ಪಾಪೀಯಸೀಂ - ಪಾಪಕರವಾದ, ಗತಿಂ - ಗತಿಯನ್ನು, ಪ್ರಾಪ್ತಃ - ಹೊಂದಿದೆ ॥೫೫॥

ಪ್ರಜೆಗಳಿಂದಲೂ, ಒಡಗೂಡಿ ಸ್ತ್ರೀಯ ಅಧಿಕಾರಕ್ಕೊಳಗಾದುದು. ಈಸ್ಥಾನವನ್ನು ಸೇರಿ ಪ್ರಿಯಮಿತ್ರನಾದ ನನ್ನನ್ನೂ ಮರೆತುಬಿಟ್ಟೆ ॥೫೪॥ ಆನಗರದಲ್ಲಿ ಬೆಡಗುಗಾತಿಯಾದ ಮಡದಿಯಿಂದೊಡಗೂಡಿ ವಿಹರಿಸುತ್ತಾ, ನಿನ್ನ ಸ್ವರೂಪವನ್ನುಕೂಡಾ ತಿಳಿದುಕೊಳ್ಳದೆ ಸ್ತ್ರೀಜಿತನಾದೆ ಯಾದುದರಿಂದ, ಇಂತಹ ನೀಚವಾದ ದುರ್ದೆಸೆಗೀಡಾಗಿರುವೆ ॥೫೫॥

ಬ್ರಾಹ್ಮಣರೂಪದಿಂದ ಬಂದಿರುವ ಮಿತ್ರನು, ಈ ರೀತಿಯಾಗಿ ..ತನ್ನನ್ನುಳಿದು ಪ್ರ

ನೇಂದ್ರಿಯಗಳು ಮನಸ್ಸು ಈ ಆರೇ ಬೇಕಾದ ಭೋಗಗಳನ್ನೊದಗಿಸುವ ವರ್ತಕರು, ಕರ್ಮೇಂದ್ರಿಯಗಳೇ ಅಂಗಡಿಗಳು,ಪಂಚಭೂತಗಳೇ ಪ್ರಜೆಗಳು,ಬುದ್ಧಿಯೇ ಮಹಾರಾಣಿಯು॥೫೪॥ಇಂತಹ ಬುದ್ಧಿಗಧೀನನಾಗಿ ಅದು ಕುಣಿಸಿದಂತೆ ಕುಣಿಯುತ್ತಾ, ನೈಮರೆತು ಇಂತಹ ಸಂಸಾರದುಃಖಕ್ಕೆ ಗುರಿಯಾದೆ॥೫೫॥

† ವೀ. ಪೃಥಿವಿ, ಅಪ್ಪು,ತೇಜಸ್ಸುಗಳೆಂಬ ಮೂರುಭೂತಗಳು ದೇಹಾದಂಭಕಗಳಾದುದರಿಂದ ಪ್ರಕೃತಿಗಳೆಂತಲೂ, ಎಲುಬು, ರಕ್ತ, ಮಾಂಸಗಳ ರೂಪವಾಗಿ ಪರಿಣಮಿಸಿರುವುದರಿಂದ ಕೋಟೆಗಳೆಂತಲೂ, ವರ್ಣಿಸಲ್ಪಟ್ಟಿರುವುವು.ಶ್ರು॥ಅನ್ನಮಶಿತಂ ತ್ರೇಧಾ ವಿಧೀಯತೇ।ತಸ್ಯ ಯಸ್ಸ್ಥವಿಷ್ಠೋ ಭಾಗ ಸ್ತತ್ಪುರೀಷಂ। ಯೋಮಧ್ಯಮ ಸ್ತನ್ಮಾಂಸಂ । ಯೋಽಣಿಷ್ಠ ಸ್ತನ್ಮನಃ । ಆಪಃಪೀತಾ ಸ್ತ್ರೇಧಾ ವಿಧೀಯಂತೇ । ತಾಸಾಂಯ ಸ್ಥವಿಷ್ಠೋ ಭಾಗಸ್ತನ್ಮೂತ್ರಂ । ಯೋಮಧ್ಯಮ ಸ್ತಲ್ಲೋಹಿತಂ । ಯೋಽಣಿಷ್ಠ ಸ್ಸಪ್ರಾಣಃ । ತೇಜೋಽಶಿತಂ ತ್ರೇಧಾ ವಿಧೀಯತೇ । ತಸ್ಯ ಯಸ್ಥವಿಷ್ಠೋ ಭಾಗ ಸ್ತದಸ್ಥಿ। ಯೋಮಧ್ಯಮ ಸ್ಸಾಮಜ್ಜಾ। ಯೋಽಣಿಷ್ಠಸ್ಸಾವಾಕ್ ॥ ಅನ್ನ, ಜಲ, ತೇಜಸ್ಸುಗಳು ವಿಭಕ್ತಗಳಾಗಿ ಮೊದಲನೆಯ ಭಾಗವು ಮಲ, ಮೂತ್ರ, ಅಸ್ಥಿಗಳಾಗಿಯೂ, ಎರಡನೆಯ ಭಾಗವು ಮಾಂಸ, ರಕ್ತ, ಮಜ್ಜಾರೂಪಗಳಾಗಿಯೂ,ಸಾರವತ್ತರವಾದ ಭಾಗವು ಮನಸ್ಸು, ಪ್ರಾಣ, ವಾಕ್ಕುಗಳಾಗಿಯೂ ಪರಿಣಮಿಸುವುವು.(ಛಾಂದೋಗ್ಯ).

ನತ್ವಂ ವಿದರ್ಭದುಹಿತಾ ನಾಯಂ ವೀರ ಸ್ಸುಹೃತ್ತವ । ನ ಪತಿ ಸ್ತ್ವಂ ಪುರಂ
ಜನ್ಯಾ ರುದ್ಧೋ ನವಮುಖೇ ಮಯಾ ॥ ೬೦ ॥ ‡ ಮಾಯಾ ಹ್ಯೇಷಾ ಮ
ಯಾ ಸೃಷ್ಟಾ ಯತ್ಪುಮಾಂಸಂ ಸ್ತ್ರಿಯಂ ಸತೀಂ । ಮನ್ಯಸೇ ನೋಭ

ತ್ವಂ - ನೀನು, ವಿದರ್ಭದುಹಿತಾ - ವಿದರ್ಭಪುತ್ರಿಯು, ನ-ಅಲ್ಲ, ಅಯಂವೀರಃ-ಈ ಶೂರನು,ತವ - ನಿನಗೆ, ಸುಹೃತ್ -ಪ್ರಿಯನು, ನ - ಅಲ್ಲ, ತ್ವಂ- ನೀನು, ಪುರಂಜನ್ಯಾಃ -ಪುರಂಜನನಿಗೆ, ಪತಿಃ-ಪತಿಯು ನ - ಅಲ್ಲ, ಮಯಾ - ನನ್ನಿಂದ, ನವಮುಖೇ - ಶರೀರದಲ್ಲಿ, ರುದ್ಧಃ - ಇಡಲ್ಪಟ್ಟೆ ॥೬೦॥ ಪುಮಾಂಸಂ - ಗಂಡಸನ್ನಾಗಿಯೂ, ಸತೀಂಸ್ತ್ರಿಯಂ - ಪತಿವ್ರತೆಯಾದ ಸ್ತ್ರೀಯನ್ನಾಗಿಯೂ, ಮನ್ಯಸೇಯತ್ - ತಿಳಿಯುವುದಾವುದೋ, ಏಷಾ - ಇದು, ಮಯಾ-ನನ್ನಿಂದ, ಸೃಷ್ಟಾ - ಸೃಜಿಸಲ್ಪಟ್ಟ, ಮಾಯಾ-ಮಾಯೆಯು, ಯತ್ - ಯಾವಕಾರಣದಿಂದ, ಉಭಯಂ-ಎರಡೂ, ನ-ಅಲ್ಲವೋ, ಆವಯೋಃ- ನಮ್ಮಿಬ್ಬರ, ಗತಿಂ - ಸ್ವರೂಪವನ್ನು, ಪಶ್ಯ - ನೋಡು, ॥೬೧॥ ಅಹಂ - ನಾನೇ, ಭವಾನ್ - ನೀನು, ತ್ವಂ - ನೀ

ಕೃತಿಪರಿಣಾಮರೂಪವಾದ ಬುದ್ಧಿಗೊಳಗಾದುದರಿಂದ ಸಂಸಾರಕ್ಲೇಶಗಳುಂಟಾಗಿರುವುವು. ಇವು ಉಪಾಧಿವಶದಿಂದ ಆತ್ಮನಲ್ಲಿ ಆರೋಪಿಸಲ್ಪಟ್ಟಿರುವುವೇ ಹೊರತು. ನಿಜವಾಗಿ ಆತ್ಮಧರ್ಮವಲ್ಲ" ಎಂದು ನಿರೂಪಿಸಿ ತತ್ವವನ್ನುಪದೇಶಿಸತೊಡಗಿದನು. "ಎಲೈ ಜೀವನೇ! ನೀನು ವಿಧರ್ಭರಾಜನಮಗಳಲ್ಲ, ಇಲ್ಲಿ ಮಲಗಿರುವ ಮಲಯಧ್ವಜನು ನಿನಗೆ ಪತಿಯೂ ಅಲ್ಲ. ಎಲೈ ಮಿತ್ರನೆ ! ನೀನು ಮುನ್ನ ಪುರಂಜನಿಗೆ ಪತಿಯೂ ಅಲ್ಲ. ನಾನೇ ನಿನ್ನನ್ನು ಮಾಯೆಯಿಂದ ಶರೀರದಲ್ಲಿ ಸೆರೆಗೊಳಿಸಿರುವೆನು ॥೬೦॥ ಪುರಂಜನನರೂಪದಿಂದ ಪುರುಷನೆಂತಲೂ, ವೈದರ್ಭೀರೂಪದಿಂದ ಸ್ತ್ರೀಯೆಂತಲೂ, ನೀನುತಿಳಿದಿರುವುದಾವುದೋ ಇದೇ ನನ್ನ ಮಾಯೆಯೆಂದರಿ. ಸ್ತ್ರೀ ಪುರುಷರೆರಡೂ ಅಲ್ಲದ ನಮ್ಮಿಬ್ಬರ ಸ್ವರೂಪ

‡ (1) ವೀ. ಪೂರ್ವಜನ್ಮದಲ್ಲಿ ಪುರುಷನೆಂತಲೂ, ಈ ಜನ್ಮದಲ್ಲಿ ಉತ್ತಮಸ್ತ್ರೀಯೆಂತಲೂ ತಿಳಿಯುವುದೇ ನನ್ನ ಮಾಯೆಯು, ಆತ್ಮನಲ್ಲಿ ಈ ಎರಡೂ ನಿಜವಾಗಿಲ್ಲ. ನಾವೀರ್ವರೂ ಪರಿಶುದ್ಧರಾದುದರಿಂದ ಈಗ ನಮ್ಮಿಬ್ಬರ ಸ್ವರೂಪವನ್ನೂ ಹೇಳುವೆನು ಕೇಳು ॥೬೧॥ ನನಗೆ ನೀನು ಶರೀರವಾಗಿರುವುದರಿಂದ ನಾನು ನಿನ್ನ ರೂಪವಾಗಿಯೇ ಇರುವೆನು. ನೀನು ಯಾವಾಗಲೂ ನನ್ನ ಶರೀರಭಾವವನ್ನುಳಿದಿರುವುದಿಲ್ಲ. ಆದುದರಿಂದ ನೀನು ನನಗಿಂತಲೂ ಬೇರೆಯಲ್ಲ. ಪಂಡಿತರು ನಮ್ಮಿಬ್ಬರಿಗೂ ಯಾವಾಗಲೂ ಸ್ವಲ್ಪವಾದರೂ ಸಂಬಂಧರಾಹಿತ್ಯವನ್ನು ಕಾಣುವದಿಲ್ಲ, ಆದಕಾರಣ ಎಡಬಿಡದಿರುವ ಜಾತಿ ಗುಣ ಪ್ರಭಾದಿಗಳಿಂದೊಡಗೂಡಿದ ಮಣ್ಯಾದಿಗಳಂತೆ, ಜೀವೇಶ್ವರಾತ್ಮಕವಾದ ವಸ್ತುವು ವಿಶಿಷ್ಟರೂಪದಿಂದ ಒಂದೇ ಆಗಿರುವುದೆಂದು ತಿಳಿ ॥೬೨॥ ಇದಕ್ಕೆ ದೃಷ್ಟಾಂತವನ್ನು ಹೇಳುವೆನು ಕೇಳು. ಪುರುಷಾಕಾರವಾದ ತನ್ನ ದೇಹವನ್ನು ದೊಡ್ಡ ಕನ್ನಡಿಯಲ್ಲಿ, ದೊಡ್ಡದಾಗಿಯೂ, ಚಿಕ್ಕದಾದ ಕಣ್ಣುಗುಡ್ಡಿನಲ್ಲಿ ಚಿಕ್ಕದಾಗಿಯೂ ಕಾಣುವಂತೆ, ಶರೀರಾತ್ಮ ಭಾವದಿಂದೆಡಬಿಡದೆ ಸೇರಿಕೊಂಡಿರುವ ಜೀವೇಶ್ವರಾತ್ಮಕವಾದ ಒಂದೇ ವಿಶಿಷ್ಟವಸ್ತುವು ಸ್ಥೂಲಸೂಕ್ಷ್ಮ ಶರೀರಗಳನ್ನು ಹೊಕ್ಕು, ಉಪಾಧಿ ಭೇದದಿಂದ ಹಲವು ಬಗೆಯಾಗಿ ಕಾಣುವುದು. ಜಾತಿವ್ಯಕ್ತಿಗಳಿಗೂ, ಗುಣಗುಣಿಗಳಿಗೂ, ಭೇದಇರುವಂತೆ ಶರೀರಾತ್ಮರಾಗಿರುವ ನಮ್ಮಿಬ್ಬರಿಗೂ ಭೇದವು ಸಿದ್ಧವಾಗಿ ಇರುವುದರಿಂದ, "ಬಿಂಬಪ್ರತಿಬಿಂಬಗಳಂತೆ ಜೀವೇಶ್ವರಭೇದವು ಔಪಾಧಿಕವೇ ಹೊರತು ವಾಸ್ತವವಲ್ಲ" ಎಂಬರ್ಥವು ಸರಿಯಲ್ಲ.

ಯಂ ಯದ್ವ್ಯೈ ಹಂಸೌ ಪಶ್ಯಾವಯೋರ್ಗತಿಂ ॥ ೬೧ ॥ ಅಹಂ ಭವಾ
ನ್ನಚಾಽನ್ಯಸ್ತ್ವಂ ತ್ವಮೇವಾಽಹಂ ವಿಚಕ್ಷ್ವ ಭೋ ! । ನ ನೌ ಪ
ಶ್ಯಂತಿ ಕವಯ ಶ್ಛಿದ್ರಂ ಜಾತು ಮನಾಗಪಿ ॥ ೬೨ ॥ ಯಥಾ ಪುರುಷ ಆತ್ಮಾ
ನ ಮೇಕ ಮಾದರ್ಶ ಚಕ್ಷುಷೋಃ । ದ್ವಿಧಾಭೂತ ಮವೇಕ್ಷೇತ ತಥೈವಾಂ
ತರ ಮಾವಯೋಃ ॥ ೬೩ ॥ ಏವಂ ಸಮಾನಸೋ ಹಂಸೋ ಹಂಸೇನ

ನು, ನಚಾನ್ಯಃ - ಬೇರೆಯಲ್ಲ, ತ್ವಮೇವ - ನೀನೇ, ಅಹಂ - ನಾನು, ಎಂದು ಭೋಃ - ಅಯ್ಯಾ, ವಿಚಕ್ಷ್ವ-
ತಿಳಿ, ಕವಯಃ - ಪಂಡಿತರು, ಜಾತು - ಯಾವಾಗಲೂ, ನೌ - ನಮ್ಮಿಬ್ಬರಿಗೂ, ಮನಾಗಪಿ - ಕೊಂಚ
ವಾದರೂ, ಛಿದ್ರಂ - ಭೇದವನ್ನು, ನಪಶ್ಯಂತಿ - ಕಾಣುವುದಿಲ್ಲ ॥೬೨॥ ಪುರುಷಃ - ಪುರುಷನು, ಏಕಂ -
ಒಂದಾದ, ಆತ್ಮಾನಂ - ದೇಹವನ್ನು, ಆದರ್ಶಚಕ್ಷುಷೋಃ - ಕನ್ನಡಿ ಕಣ್ಣುಗಳಲ್ಲಿ, ದ್ವಿಧಾಭೂತಂ- ಎ
ರಡನ್ನಾಗಿ, ಅವೇಕ್ಷೇತ - ಕಾಣುವನೋ, ಆವಯೋಃ - ನಮ್ಮಿಬ್ಬರ, ಅಂತರಂ - ಭೇದವನ್ನು, ತಥೈ
ವ - ಹಾಗೆಯೇ ॥೬೩॥ ಏವಂ - ಇಂತು, ಸಃ - ಆ, ಮಾನಸಃ - ಕ್ಷೇತ್ರಜ್ಞನೆಂಬ, ಹಂಸಃ - ಜೀವನು,

ವನ್ನು ತಿಳುಹುವೆನು ಕೇಳು ॥೬೧॥ ನಾನೇ ನೀನು. ನೀನು ಬೇರೆಯೆಂದರಿಯಬೇ
ಡ ನೀನೇ ನಾನಾಗಿರುವೆನು. ತತ್ವವನ್ನರಿತ ಪಂಡಿತರು ನಮ್ಮಿಬ್ಬರಿಗೂ ಯಾವಾಗ
ಲೂ ಕೊಂಚವಾದರೂ ಭೇದವನ್ನು ತಿಳಿಯುವುದಿಲ್ಲ ॥೬೨॥ ಪುರುಷನಂತು ಒಂದೇ ತ
ನ್ನ ಶರೀರವನ್ನು, ಉಪಾಧಿಭೇದದಿಂದ ಕನ್ನಡಿಯಲ್ಲಿ ನಿರ್ಮಲವಾಗಿಯೂ, ದೊಡ್ಡದಾಗಿ
ಯೂ, ಸ್ಥಿರವಾಗಿಯೂ, ಇತರರ ಕಣ್ಣಾಲಿಯಲ್ಲಿ, ಮಲಿನವಾಗಿ, ಚಿಕ್ಕದಾಗಿ ಚಂಚಲ
ವಾಗಿಯೂ ಎರಡುಬಗೆಯಾಗಿ ಕಾಣುವನೋ ಅಂತೆಯೇ ನಮ್ಮ ಸ್ವರೂಪವು ಅಲ್ಪಜ್ಞತ್ವ
ಸರ್ವಜ್ಞತ್ವಗಳೆಂಬ ಉಪಾಧಿಗಳ ಭೇದದಿಂದ ಜೀವೇಶ್ವರರೆಂದು ಬೇರೆಯಾಗಿ ತೋರು
ವುದೇ ಹೊರತು, ನಿರುಪಾಧಿಕಚಿದ್ರೂಪದಲ್ಲಿ ಭೇದವಿಲ್ಲ,, ॥೬೩॥ ಎಂದು ಗುರುರೂಪನಾದ
ಪರಮಾತ್ಮನಿಂದುಪದಿಷ್ಟನಾದ ಜೀವನು ಮಿತ್ರವಿಯೋಗದಿಂದ ನಷ್ಟನಾಗಿದ್ದ ಪ್ರಜ್ಞೆ

(೨) ವಿ. ನೀನು ಮುನ್ನು ಗಂಡೆಂತಲೂ, ಈಗ ಹೆಣ್ಣೆಂತಲೂ, ತಿಳಿದಿರುವದು ಪ್ರಾರಬ್ಧ ಕರ್ಮಾ
ನುಸಾರ ಇಂತಹ ಫಲವನ್ನು ಅನುಭವಿಸುವುದಕ್ಕಾಗಿ ನನ್ನಿಂದ ಉಂಟುಮಾಡಲ್ಪಟ್ಟ ಬಂಧಕ ಶಕ್ತಿಯೇ
ದಿಟ ಪರಮಾತ್ಮನು ನಾಮಗೋತ್ರಾದಿ ರಹಿತನೆಂತಲೂ, ಪರಿಶುದ್ಧನೆಂತಲೂ, ಸಕಲಕ್ಕೂ ಸತ್ತಾ
ಪ್ರದನೆಂತಲೂ ತಿಳಿ. ಇಲ್ಲಿ ಗುರುಶಿಷ್ಯ ಭಾವವು ಅನುಭವ ಸಿದ್ಧವಾಗಿರುವುದರಿಂದ ಭೇದವೆಂಬುದು
ಅಬಾಧಿತವಾಗಿರುವುದು ॥೬೧॥ ತತ್ತ್ವಮಸ್ಯಾದಿ ವಾಕ್ಯಗಳಿಂದ ಜೀವೇಶ್ವರರಿಗೆ ಅಭೇದವೇ ತೋರುತಿ-
ರುವುದರಿಂದ ಭೇದವು ಅಬಾಧಿತವೆಂತು ? ಏಂದರೆ, ಅಹಂ ಭವಾನ್ನ - ನಾನು ನೀನಲ್ಲ. ತ್ವಂ - ಅನ್ಯಃ -
ನೀನು ಅನ್ಯನು, ಆದುದರಿಂದ, ತ್ವಂ-ತ್ವಮೇವ-ನೀನು ನೀನೇ, ಅಹಂ - ಅಹಮೇವ - ನಾನು ನಾನೇ,
ಎಂದು ತಿಳಿ. ಕವಯಃ - ಪಂಡಿತರು, ನೌ - ನಮ್ಮಿಬ್ಬರಿಗೂ, ಮನಾಕ್‌ಛಿದ್ರಂ - ಸ್ವಲ್ಪಭೇದವನ್ನು,
ನಪಶ್ಯಂತಿ - ನೋಡುವುದಿಲ್ಲ. ಎಂದರೆ ಬಹಳ ಭೇದವುಂಟು. ಅಥವಾ ನಮ್ಮ ಅಂತರ್ಯಾಮಿಗಳಲ್ಲಿ
ಭೇದವನ್ನೆಣಿಸುವುದಿಲ್ಲ ॥೬೨॥ ಆದರ್ಶ ಚಕ್ಷುಸ್ಸುಗಳಲ್ಲಿ ತೋರುವ ಪ್ರತಿಬಿಂಬಗಳ ಸತ್ವವು ಸೂಚಕ
ನಬಿಂಬಾಧೀನವಾದುದರಿಂದ ಆ ಬಿಂಬ ಪ್ರತಿಬಿಂಬಗಳಿಗೆ ಭೇದವಿಲ್ಲದಿರುವಂತೆ, ಜೀವ ಸತ್ತಾಪ್ರದ
ನಾದ ಪರಮಾತ್ಮನಿಗೆ ಜೀವನೊಡನೆ ಭೇದವಿಲ್ಲ ॥೬೩॥

ಪ್ರತಿಬೋಧಿತಃ । ಸ್ವಸ್ಥ ಸ್ತದ್ವ್ಯಭಿಚಾರೇಣ ನಷ್ಟಾಮಾಪ ಪುನ ಸ್ಸ್ಮೃ
ತಿಂ ॥೬೪॥ ಬರ್ಹಿಷ್ಮನ್ನೇತ ದಧ್ಯಾತ್ಮಂ ಪಾರೋಕ್ಷ್ಯೇಣ ಪ್ರದರ್ಶಿತಂ ।
ಯತ್ಪರೋಕ್ಷ ಪ್ರಿಯೋ ದೇವೋ ಭಗವಾನ್ ವಿಶ್ವಭಾವನಃ ॥ ೬೫ ॥

— ಇತ್ಯಷ್ಟಾವಿಂಶೋಽಧ್ಯಾಯಃ —

ಹಂಸೇನ - ಪರಮಾತ್ಮನಿಂದ, ಪ್ರತಿಬೋಧಿತಃ - ಉಪದೇಶಿಸಲ್ಪಟ್ಟು, ಸ್ವಸ್ಥಃ -ಸ್ವರೂಪವನ್ನು ತಿಳಿದು, ತದ್ವ್ಯಭಿಚಾರೇಣ - ಆ ಪರಮಾತ್ಮನಗಲಿಕೆಯಿಂದ, ನಷ್ಟಾಂ - ತಪ್ಪಿಹೋಗಿದ್ದ, ಸ್ಮೃತಿಂ - ಸ್ಮರಣೆಯನ್ನು, ಪುನಃ - ಮರಳಿ, ಆಪ - ಪಡೆದನು ॥೬೪॥ ಬರ್ಹಿಷ್ಮನ್ - ಪ್ರಾಚೀನಬರ್ಹಿಯೆ ! ಯತ್ - ಯಾವ ಕಾರಣದಿಂದ, ವಿಶ್ವಭಾವನಃ - ಜಗತ್ಕಾರಣನಾದ, ಭಗವಾನ್-ಭಗವಂತನಾದ, ದೇವಃ-ನಾರಾಯಣಮೂರ್ತಿಯು, ಪರೋಕ್ಷಪ್ರಿಯಃ - ಪರೋಕ್ಷವಾದುದರಿಂದ ತುಷ್ಟನಾಗುವನೋ, ಅದರಿಂದ, ಏತತ್-ಈ ಅಧ್ಯಾತ್ಮಂ - ಆತ್ಮವಿಚಾರವು, ಪಾರೋಕ್ಷ್ಯೇಣ-ಕಥಾ ವ್ಯಾಜದಿಂದ, ಪ್ರದರ್ಶಿತಂ - ತೋರಿಸಲ್ಪಟ್ಟಿತು.

—ಅಷ್ಟಾವಿಂಶಾಧ್ಯಾಯಂ ಸಮಾಪ್ತಂ—

ಯನ್ನು ಪಡೆದು ತನಗೂ ಪರಮಾತ್ಮನಿಗೂ ಭೇದವಿಲ್ಲವೆಂದು ನಿಶ್ಚಯಿಸಿಕೊಂಡು, ತಾನೇ ಪರಬ್ರಹ್ಮನೆಂದು ತಿಳಿದು ಮುಕ್ತನಾದನು ॥೬೪॥ ಅಯ್ಯಾ ಪ್ರಾಚೀನಬರ್ಹಿಯೇ ! ನಿರತಿಶಯಮಹಿಮನೂ,ಜಗತ್ಕಾರಣನೂ ಆದ ನಾರಾಯಣಮೂರ್ತಿಯು ಪರೋಕ್ಷವಾದದಿಂದ ಸಂತುಷ್ಟನಾಗುವನು, ಆದಕಾರಣ ಈ ಅಧ್ಯಾತ್ಮವಿಚಾರವನ್ನು ನಾನು ನಿನಗೆ ಕಥಾ ವ್ಯಾಜದಿಂದ ಹೇಳಿದೆನು, ಎಂದು ನಾರದಮುನಿಯು ಪ್ರಾಚೀನಬರ್ಹಿರಾಜನಿಗೆ ಹೇಳಿದನೆಂಬಲ್ಲಿಗೆ ಭಾಗವತ ಚಕೋರಚಂದ್ರಿಕೆಯೊಳ್.

—ಇಪತ್ತೆಂಟನಯ ಅಧ್ಯಾಯಂಮುಗಿದುದು—

## ಓಂ ನಮಃ ಪರಮಾತ್ಮನೇ.

— ಅಥ ಏಕೋನವಿಂಶೋಽಧ್ಯಾಯಃ —

ಪ್ರಾಚೀನಬರ್ಹಿಃ ॥ ಭಗವಂ ಸ್ತೇ ವಚೋಽಸ್ಮಾಭಿ ರ್ನಸಮ್ಯ ಗವಗ
ಮ್ಯತೇ । ಕವಯ ಸ್ತದ್ವಿಜಾನಂತಿ ನವಯಂ ಕರ್ಮಮೋಹಿತಾಃ ॥ ೧ ॥
ನಾರದಃ ॥ ಪುರುಷಂ ಪುರಂಜನಂ ವಿದ್ಯಾ ದ್ಯದ್ವ್ಯನಕ್ತ್ಯಾತ್ಮನಃ
ಪುರಂ । ಏಕದ್ವಿತ್ರಿಚತುಷ್ಪಾದಂ ಬಹುಪಾದ ಮಪಾದಕಂ ॥ ೨ ॥ ಯೋ

— ಏಕೋನವಿಂಶೋಽಧ್ಯಾಯಂ —

ಕಂ॥ ಸ್ತ್ರೀಸಂಗದೆ ಸಂಸೃತಿ ಸ । ದ್ವ್ಯಸಂಗದೆ ಮುಕ್ತಿಯೆಂಬುದಂ ನೆಲೆಗೊಳಿಸಲ್ ।
ಲೇಸನಿಪಧ್ಯಾತ್ಮಾರ್ಥವ । ನಾಸಿಪ ರಾಜರ್ಷಿಗೊರೆದ ನಮರಮುನೀಂದ್ರಂ॥

ಪ್ರಾಚೀನಬರ್ಹಿರಾಜನು ಬೆಸಗೊಳ್ಳುತ್ತಾನೆ, ಭಗವನ್ - ಪೂಜ್ಯನೆ ! ತೇ- ನಿನ್ನ, ವಚಃ- ನುಡಿಯು, ಅಸ್ಮಾಭಿಃ - ನಮ್ಮಿಂದ, ಸಮ್ಯಕ್ - ಚೆನ್ನಾಗಿ, ನಾವಗಮ್ಯತೇ - ತಿಳಿಯಲ್ಪಡುವುದಿಲ್ಲ, ತತ್ - ಅದನ್ನು ಕವಯಃ - ಪಂಡಿತರು, ವಿಜಾನಂತಿ - ತಿಳಿಯುವರು, ಕರ್ಮಮೋಹಿತಾಃ - ಕರ್ಮಗಳಿಂದ ಮೋಹಿತರಾದ, ವಯಂ - ನಾವು, ನ- ಇಲ್ಲ, ॥೧॥ ನಾರದನು ಹೇಳುತ್ತಾನೆ, ಯತ್ - ಯಾವಕಾರಣದಿಂದ, ಏಕ... ದಂ - ಒಂದು, ಎರಡು, ಮೂರು, ನಾಲ್ಕುಪಾದಗಳುಳ್ಳ, ಬಹುಪಾದಂ - ಅನೇಕ ಪಾದಗಳುಳ್ಳ, ಅಪಾದಕಂ - ಪಾದಗಳಿಲ್ಲದ, ಆತ್ಮನಃ - ತನ್ನ, ಪುರಂ- ಪಟ್ಟಣವನ್ನು, ವ್ಯನಕ್ತಿ- ಉಂಟುಮಾಡುವನೋ, ಅದರಿಂದ, ಪುರುಷಂ - ಜೀವನನ್ನು, ಪುರಂಜನಂ-ಪುರಂಜನನೆಂದು, ವಿದ್ಯಾತ್-ತಿಳಿಯಬೇಕು ॥೨॥ ಯತ್-

— ಇಪ್ಪತ್ತೊಂಭತ್ತನೆಯ ಅಧ್ಯಾಯ —

— ಪುರಂಜನೋಪಾಖ್ಯಾನತತ್ತ್ವನಿರೂಪಣ —

ಅಯ್ಯಾ ವಿದುರನೆ ! ಅನಂತರದಲ್ಲಿ ಪ್ರಾಚೀನಬರ್ಹಿರಾಜನು ನಾರದ ಮುನಿಯನ್ನು ಕುರಿತು, ಮಹಾತ್ಮನೆ ! ನೀನು ನುಡಿದ ನುಡಿಗಳಿಗೆ ನಮಗೆ ಚೆನ್ನಾಗಿ ಅರ್ಥವಾಗಲಿಲ್ಲ. ಪಂಡಿರಾದವರು ನಿನ್ನ ನುಡಿಗಳನ್ನು ತಿಳಿಯಲಾಪರೇ ಹೊರತು, ಕರ್ಮಮೋಹಿತರಾದ ನಮ್ಮಂತವರು ತಿಳಿದುಕೊಳ್ಳಲಾರರು. ಆದಕಾರಣ ನಮಗೆತಿಳಿಯುವಂತೆ ಸ್ಪಷ್ಟವಾಗಿ ನಿರೂಪಿಸು, ಎಂದು ಬೆಸಗೊಂಡನು. ಅದನ್ನು ಕೇಳಿ ನಾರದಮುನಿಯು ಹೇಳತೊಡಗಿದನು ॥೧॥ ಅಯ್ಯಾ ರಾಜನೆ ಕೇಳು. ಪುರಂಜನನೆಂದರೆ ಜೀವನೆಂದರ್ಥವು. ತನ್ನ ಕರ್ಮಾನುಗುಣವಾಗಿ ಒಂದು, ಎರಡು, ಮೂರು, ನಾಲ್ಕು, ಇನ್ನೂ ಅಧಿಕ ಗಳಾದ ಪಾದಗಳುಳ್ಳ ಮತ್ತು ಪಾದಗಳೇ ಇಲ್ಲದ ಹಲವು ಬಗೆಯ ಶರೀರಗಳನ್ನು ಸಂಪಾದಿಸುವುದರಿಂದ ಈ ಹೆಸರು ಬಂದುದು ॥೨॥ ಆ

ಽವಿಜ್ಞಾತಾಹ್ವತ ಸ್ತಸ್ಯ ಪುರುಷಸ್ಯ ಸಖೇಶ್ವರಃ । ಯನ್ನ ವಿಜ್ಞಾಯತೇ
ಪುಂಭಿ ರ್ನಾಮಭಿರ್ವಾ ಕ್ರಿಯಾಗುಣೈಃ ॥ ೩ ॥ ಯದಾ ಽ ಜಿಘೃಕ್ಷ
ತ್ಪುರುಷ ಃ ಕಾರ್ತ್ಸ್ನ್ಯೇನ ಪ್ರಕೃತೇ ರ್ಗುಣಾನ್ । ನವದ್ವಾರಂ ದ್ವಿಹ
ಸ್ತಾಂಘ್ರಿಂ ತತ್ರಾ ಽ ಮನುತ ಸಾಧ್ವಿತಿ ॥ ೪ ॥ ಬುದ್ಧಿಂತು ಪ್ರಮದಾಂ ವಿ
ದ್ಯಾ ನ್ಮಮಾಹ ಮಿತಿ ಯತ್ಕೃತಂ । ಯಾಮಧಿಷ್ಠಾಯ ದೇಹೇಽಸ್ಮಿನ್
ಪುಮಾನ್ ಭುಙ್ಕ್ತೇ ಽ ಕ್ಷಭಿ ರ್ಗುಣಾನ್ ॥ ೫ ॥ ಸಖಾಯ ಇಂದ್ರಿ
ಯ ಗಣಾ ಜ್ಞಾನಂ ಕರ್ಮ ಚ ಯತ್ಕೃತಂ । ಸಖ್ಯ ಸ್ತದ್ವೃತ್ತಯಃ

ಯಾವಕಾರಣದಿಂದ, ಪುಂಭಿಃ - ಪುರುಷರಿಂದ, ನಾಮಭಿಃ - ಹೆಸರುಗಳಿಂದ, ಕ್ರಿಯಾಗುಣೈಃ, ಕಾರ್ಯ ಗುಣ ಇವುಗಳಿಂದಾಗಲಿ, ನಜ್ಞಾಯತೇ-ತಿಳಿಯಲ್ಪಡುವುದೋ, ಅದರಿಂದ, ಯಃ - ಯಾವನು- ಅವಿ...ತಃ - ಅವಿಜ್ಞಾತಶಬ್ದದಿಂದ ಹೇಳಲ್ಪಡುವನೋ, ಆತನು ತಸ್ಯಪುರುಷಸ್ಯ - ಆ ಜೀವನಿಗೆ, ಸಖಾ- ಒಡೆಯನು, ಈಶ್ವರಃ - ಈಶ್ವರನು ॥೩॥ ಪುರುಷಃ - ಜೀವನು, ಯದಾ - ಯಾವಾಗ, ಪ್ರಕೃತೇಃ - ಪ್ರಕೃತಿಯ, ಗುಣಾನ್ - ಗುಣಗಳನ್ನು, ಕಾರ್ತ್ಸ್ನ್ಯೇನ - ಸಂಪೂರ್ಣವಾಗಿ, ಅಜಿಘೃಕ್ಷತ್ - ಅನುಭವಿಸಲೆಳಸಿದನೋ, ತದಾ - ಆಗ, ನವದ್ವಾರಂ - ಒಂಬತ್ತು ಬಾಗಿಲುಳ್ಳ, ದ್ವಿಹ....ಘ್ರಿಂ - ಎರಡೆರಡು ಹಸ್ತಪಾದಗಳುಳ್ಳ, ಶರೀರವನ್ನು, ಸಾಧ್ವಿತಿ - ಅನುಕೂಲವೆಂದು, ಅಮನುತ - ತಿಳಿದನು ॥೪॥ ಯತ್ - ಯಾವಬುದ್ಧಿಯಿಂದ, ಮಮಾಹಮಿತಿ - ಅಹಂಕಾರಮಮಕಾರಗಳು, ಕೃತಂ - ಮಾಡಲ್ಪಡುವುವೋ, ಯಾಂ-ಯಾವಬುದ್ಧಿಯನ್ನು, ಅಧಿಷ್ಠಾಯ - ಆಶ್ರಯಿಸಿ, ಪುಮಾನ್ - ಜೀವನು, ಅಕ್ಷಭಿಃ - ಇಂದ್ರಿಯಗಳಿಂದ, ಗುಣಾನ್ - ವಿಷಯಗಳನ್ನು, ಭುಂಕ್ತೇ - ಅನುಭವಿಸುವನೋ, ಬುದ್ಧಿಂ - ಆ ಬುದ್ಧಿಯನ್ನು, ಪ್ರಮದಾಂ - ಸ್ತ್ರೀಯನ್ನಾಗಿ, ವಿದ್ಯಾತ್ - ತಿಳಿಯಬೇಕು ॥೫॥

ಯತ್ - ಯಾವುದರಿಂದ, ಜ್ಞಾನಂ - ವಿಷಯಜ್ಞಾನವು, ಕರ್ಮಚ - ಗತ್ಯಾದಾನಾದಿ ಕರ್ಮವು, ಕೃತಂ - ಮಾಡಲ್ಪಟ್ಟಿತೋ, ಇಂದ್ರಿಯಗಣಃ - ಇಂದ್ರಿಯ ಸಮೂಹವು, ಸಖಾಯಃ - ಮಿತ್ರರು, ತದ್ವೃ

ಜೀವನಿಗೆ ಹಿತೈಷಿಯಾಗಿ ಜತೆಯಲ್ಲಿ ನೆಲಸಿರುವ ಮಿತ್ರನೇ ಈಶ್ವರನು. ಈತನ ಹೆಸರುಗಳನ್ನಾಗಲಿ, ರೂಪಗಳನ್ನಾಗಲಿ, ಕಾರ್ಯಗಳನ್ನಾಗಲಿ, ಸತ್ಯಜ್ಞಾನಾದಿ ಗುಣಗಳನ್ನಾಗಲಿ, ಯಾರೂ ಸಂಪೂರ್ಣವಾಗಿ ತಿಳಿಯಲಾರರು. ಆದರಿಂದ ಈತನಿಗೆಅವಿಜ್ಞಾತನೆಂದು ಹೆಸರಾಯಿತು॥೩॥ ಜೀವನು ಯಾವಾಗ ಮಾಯಾ ಗುಣಗಳಾದ ಶಬ್ದಾದಿ ವಿಷಯಗಳನ್ನು ಸಮಗ್ರವಾಗಿಅನುಭವಿಸಲೆಳಸುವನೋ,ಆಗ ಹಸ್ತಪಾದಾದಿ ಸಕಲೇಂದ್ರಿಯಸಂಪನ್ನನಾದ ಮಾನವ ಶರೀರವನ್ನು ಬಯಸುವನು. ಪಶುಪಕ್ಷ್ಯಾದಿ ಶರೀರಗಳಲ್ಲಿ ಸಕಲೇಂದ್ರಿಯಗಳು ಅಭಿವ್ಯಕ್ತಗಳಾಗಿಲ್ಲದಿರುವುದರಿಂದ ಶಬ್ದಾದಿ ವಿಷಯಗಳನ್ನೆಲ್ಲಾ ಅನುಭವಿಸಲಾರನು. ಇದೇಮಾನವಶರೀರಾಭಿಲಾಷೆಗೆ ಕಾರಣವು. ಇದು ದೈವಾನುಗ್ರಹಲಭ್ಯವಾದುದರಿಂದ ಇದನ್ನು ಬಯಸಿದನು॥೪॥ ಅಹಂಕಾರಮಮಕಾರಗಳನ್ನುಂಟುಮಾಡಿ ಜೀವನನ್ನುಮರುಳು ಮಾಡುವ ಬುದ್ಧಿಯೇ ಪುರಂಜನಪತ್ನಿಯು. ಜೀವನು ಆಬುದ್ಧಿಯನ್ನವಲಂಬಿಸಿ ಈದೇಹದಲ್ಲಿ ಇಂದ್ರಿಯಗಳಿಂದ ವಿಷಯಗಳನ್ನನುಭವಿಸುವುದರಿಂದ ಬುದ್ಧಿಗೀ ಹೆಸರಾಯಿತು ॥೫॥ ಶಬ್ದಾದಿವಿಷಯಗಳ ತಿಳವಳಿಕೆಯನ್ನೂ ಗಮನ,ಆದಾನ ಮೊದಲಾದ ಕಾರ್ಯಗಳನ್ನೂಉಂಟುಮಾಡುವ ಜ್ಞಾನಕರ್ಮೇಂದ್ರಿಯಗಳೇ

ಪ್ರಾಣಃ ಪಂಚವೃತ್ತಿ ರ್ಯಥೋರಗಃ ॥ ೬ ॥ ಬೃಹದ್ಬಲಂ ಮನೋ ವಿದ್ಯಾ ದುಭಯೇಂದ್ರಿಯ ನಾಯಕಂ । ಪಂಚಾಲಾಃ ಪಂಚ ವಿಷಯಾಃ ಯನ್ಮಧ್ಯೇ ನವಖಂ ಪುರಂ ॥೭॥ ಅಕ್ಷಿಣೀ ನಾಸಿಕೇ ಕರ್ಣೌ ಮುಖಂ ಶಿಶ್ನಗುದಾ ವಿತಿ । ದ್ವೇ ದ್ವೇ ದ್ವಾರೌ ಬಹಿರ್ಯಾತಿ ಯ ಸ್ತದಿಂದ್ರಿಯ ಸಂಯುತಃ ॥೮॥ ಅಕ್ಷಿಣೀ ನಾಸಿಕೇ ಆಸ್ಯ ಮಿತಿ ಪಂಚಪುರಃ ಕೃತಾಃ । ದಕ್ಷಿಣಾ ದಕ್ಷಿಣಃ ಕರ್ಣಃ ಉತ್ತರಾ ಚೋತ್ತರ ಸ್ಸ್ಮೃತಃ॥೯॥ಪಶ್ಚಿಮೇ ಇತ್ಯಧೋ ದ್ವಾರೌ ಗುದಂ ಶಿಶ್ನ ಮಿಹೋಚ್ಯತೇ। ಖದ್ಯೋತಾ ವಿರ್ಮುಖೀ

ತ್ತಯಃ - ಆ ಇಂದ್ರಿಯ ವೃತ್ತಿಗಳು, ಸಖಿಯರು, ಉರಗೋಯಥಾ - ಹಾವಿನಂತೆ, ಪಂಚವೃತ್ತಿಃ - ಐದುವೃತ್ತಿಗಳುಳ್ಳ, ಪ್ರಾಣಃ - ಪ್ರಾಣವಾಯುವೇ, ಸರ್ಪವು ॥೬॥ ಉಭ...ಕಂ - ಜ್ಞಾನಕರ್ಮೇಂದ್ರಿಯಗಳಿಗೆ ನಾಯಕವಾದ, ಮನಃ - ಮನಸ್ಸನ್ನು, ಬೃಹದ್ಬಲಂ - ಬೃಹದ್ಬಲನೆಂದು, ವಿದ್ಯಾತ್- ತಿಳಿಯಬೇಕು, ಯನ್ಮಧ್ಯೇ - ಯಾವುದರ ಮಧ್ಯದಲ್ಲಿ, ನವಖಂ - ಒಂಬತ್ತು ಬಾಗಿಲುಳ್ಳ, ಪುರಂ - ಪಟ್ಟಣವುಂಟೋ, ಪಂಚವಿಷಯಾಃ - ಆ ಐದು ವಿಷಯಗಳೇ, ಪಂಚಾಲಾಃ - ಪಂಚಾಲದೇಶವು ॥ ೭ ॥ ಅಕ್ಷಿಣೀ - ಕಣ್ಣುಗಳು, ನಾಸಿಕೇ - ಮೂಗಿನ ಹೊಳ್ಳೆಗಳು, ಕರ್ಣೌ - ಕಿವಿಗಳು, ಶಿಶ್ನಗುದೌ - ಪಾಯೂಪಸ್ಥಗಳು, ದ್ವೇದ್ವೇದ್ವಾರೌ - ಎರಡೆರಡು ಬಾಗಿಲುಗಳು, ಮುಖಂ - ಮುಖವೂ ಸೇರಿನವದ್ವಾರಗಳು, ತದಿಂದ್ರಿಯಸಂಯುತಃ - ಆ ಇಂದ್ರಿಯಗಳಿಂದ, ಯಃ - ಯಾವಜೀವನುಂಟೋ ಅವನು, ಬಹಿರ್ಯಾತಿ - ಅವುಗಳಿಂದ ಹೊರಗೆ ಹೋಗುತ್ತಾನೆ ॥ ೮ ॥ ಕಣ್ಣು, ಮೂಗಿನ ಹೊಳ್ಳೆ, ಬಾಯಿ,ಎಂದು ಪಂಚ - ಐದು - ಪುರಃ - ಮುಂಗಡೆಯಲ್ಲಿ, ಮಾಡಲ್ಪಟ್ಟುವು, ದಕ್ಷಿಣಃಕರ್ಣಃ - ಬಲಗಿವಿಯು, ದಕ್ಷಿಣಾ - ದಕ್ಷಿಣದ್ವಾರವು, ಉತ್ತರಃ - ಎಡಗಿವಿಯು, ಉತ್ತರಾ - ಉತ್ತರದ್ವಾರವೆಂದು ಸ್ಮೃತಃ - ಹೇಳಲ್ಪಟ್ಟಿತು॥ ಇಹ-ಈ ಶರೀರದಲ್ಲಿ, ಗುದ, ಶಿಶ್ನಗಳೆಂಬ, ದ್ವಾರೌ - ಎರಡು ಬಾಗಿಲು, ಪಶ್ಚಿಮೇಇತಿ - ಪಡುವಣ ಬಾಗಿಲೆಂದು, ಉಚ್ಯತೇ-ಹೇಳಲ್ಪಡುವುದು, ಅತ್ರ-ಇಲ್ಲಿ, ಖದ್ಯೋತ, ಆವಿರ್ಮುಖಿ, ಎಂಬಿವು. ನೇತ್ರೇ-ಕಣ್ಣುಗಳು, ಏಕತ್ರ-ಒಂದು ಕಡೆಯಲ್ಲಿ, ನಿರ್ಮಿತೇ - ನಿರ್ಮಿಸಲ್ಪಟ್ಟವು, ಈಶ್ವರಃ- ಜೀವನು, ತಾಭ್ಯಾಂ-ಆ

ಆಬುದ್ಧಿಗೆ ಮಿತ್ರರು. ಇಂದ್ರಿಯ ವೃತ್ತಿಗಳೇ ಸಖಿಯರು. ಹಾವಿನಂತೆ ಐದು ವೃತ್ತಿಗಳುಳ್ಳ ಪ್ರಾಣವಾಯುವೇ ಸರ್ಪವು ॥೬॥ ದಶೇಂದ್ರಿಯಗಳಿಗೂ ನಿಯಾಮಕವಾದ ಮನಸ್ಸೇ ಆಕೆಯ ದಳವಾಯಿಯು. ಶಬ್ದ, ಸ್ಪರ್ಶ, ರೂಪ, ರಸ,ಗಂಧಗಳೆಂಬ ವಿಷಯಗಳಿಗೆ ಪಾಂಚಾಲ ದೇಶವೆಂದು ಹೆಸರು. ನವ ದ್ವಾರಗಳಿಂದ ಕೂಡಿದ ಶರೀರವೇ ಪಟ್ಟಣವು. ॥೭॥ ಕಣ್ಣುಗಳೆರಡು, ಮೂಗಿನ ಹೊಳ್ಳೆಗಳೆರಡು, ಕಿವಿಗಳೆರಡು, ಮುಖ ವೊಂದು, ಶಿಶ್ನ ಗುದಗಳೆರಡು, ಇವೇ ಒಂಬತ್ತು ಬಾಗಿಲುಗಳು. ಇವುಗಳಲ್ಲಿ ಮುಖವು ವಿನಾ ಉಳಿದ ಬಾಗಿಲುಗಳು ಎರಡೆರಡು ಜತೆಯಾಗಿರುವುವು. ಜೀವನು ಆಇಂದ್ರಿಯಗಳೊಳಗೂಡಿ ಈ ಬಾಗಿಲುಗಳಿಂದ ಸಂಚರಿಸುವನು ॥೮॥ ಕಣ್ಣುಗಳು, ಮೂಗಿನ ಹೊಳ್ಳೆಗಳು, ಬಾಯಿ. ಈ ಐದು ಪೂರ್ವದ್ವಾರಗಳು. ಬಲಗಿವಿಯೇ ದಕ್ಷಿಣದ್ವಾರವು. ಎಡಗಿವಿಯೇ ಉತ್ತರದ್ವಾರವು. ॥೯॥ ಗುದಶಿಶ್ನ ಗಳೆರಡೂ ಪಶ್ಚಿಮದ್ವಾರಗಳು. ಎಡಗಣ್ಣಿಗೆ ಖದ್ಯೋತವೆಂದೂ,ಬಲಗಣ್ಣಿಗೆ ಆವಿರ್ಮುಖಿಯೆಂದೂ ಹೆಸರು. ಇವೆರಡೂ ಜತೆಯಾಗಿರುವುವು. ಜೀವನು ಈಕಣ್ಣುಗಳೆಂಬ ಬಾ

ಚಾತ್ರ ನೇತ್ರೇ ಏಕತ್ರ ನಿರ್ಮಿತೇ । ರೂಪಂ ವಿಭ್ರಾಜಿತಂ ತಾಭ್ಯಾಂ ವಿಚಷ್ಟೇ ಚಕ್ಷುಷೇಶ್ವರಃ ॥೧೦॥ ‡ನಳಿನೀ ನಾಳಿನೀ ನಾಸೇ ಗಂಧಃ ಸೌರಭ ಉಚ್ಯತೇ । ಘ್ರಾಣೋಽವಧೂತೋ ಮುಖ್ಯಾಸ್ಯಂ* ವಿಪಣೋ ವಾಗ್ರಸವಿದ್ರಸಃ ॥೧೧॥ ಆಪಣೋ ವ್ಯವಹಾರೋಽತ್ರ ಚಿತ್ರಮಂಧೋ ಬಹೂದನಂ । ಪಿತೃಹೂರ್ದಕ್ಷಿಣಃ ಕರ್ಣ ಉತ್ತರೋ ದೇವಹೂಃ ಸ್ಮೃತಃ ॥೧೨॥ ಪ್ರವೃತ್ತಂ ಚ ನಿವೃತ್ತಂ ಚ ಶಾಸ್ತ್ರಂ ಪಾಂಚಾಲಸಂಜ್ಞಿತಂ । ಪಿತೃಯಾನಂ ದೇವಯಾನಂ ಶ್ರೋತ್ರಾಚ್ಛ್ರುತಿಧರಾದ್ವ್ರಜೇತ್ ॥೧೩॥ ಆಸುರೀ ಮೇಢ್ರ

---

ಬಾಗಿಲಿಂದ, ಚಕ್ಷುಷಾ-ಕಣ್ಣಿನಿಂದ, ವಿಭ್ರಾಜಿತಂ - ವಿಭ್ರಾಜಿತವೆಂಬ ರೂಪವನ್ನು, ವಿಚಷ್ಟೇ-ನೋಡುತ್ತಾನೆ ॥೧೦॥ ನಳಿನಿ-ನಾಳಿನಿ ಇವು, ನಾಸೇ-ಮೂಗಿನ ರಂಧ್ರಗಳು, ಗಂಧಃ-ಗಂಧವು, ಸೌರಭವೆಂದು, ಉಚ್ಯತೇ-ಹೇಳಲ್ಪಡುವುದು, ಘ್ರಾಣಃ- ಘ್ರಾಣೇಂದ್ರಿಯವು, ಅವಧೂತಃ-ಅವಧೂತನು, ಮುಖ್ಯಾಸ್ಯಂ-ಬಾಯಿಯೇ ಹೆಬ್ಬಾಗಿಲು, ವಾಕ್ಕು, ವಿಪಣ -ವಿಪಣವು, ರಸವಿತ್ - ರಸಜ್ಞವು, ರಸನೇಂದ್ರಿಯವು ॥೧೧॥ ವ್ಯವಹಾರವು, ಆಪಣವು, ಚಿತ್ರಂ-ಅಂಧಃ ಬಗೆಬಗೆಯಾದ ಅನ್ನವು, ಬಹೂದನವು, ದಕ್ಷಿಣಃಕರ್ಣಃ-ಬಲಗಿವಿಯು, ಪಿತೃಹೂ, ಉತ್ತರಃ-ಎಡಗಿವಿಯು, ದೇವಹೂ, ಸ್ಮೃತಃ ಹೇಳಲ್ಪಟ್ಟಿತು ॥೧೨॥ ಪ್ರವೃತ್ತ ನಿವೃತ್ತಗಳೆಂಬ, ಶಾಸ್ತ್ರಂ-ಶಾಸ್ತ್ರವು, ಪಾಂಚಾಲಸಂಜ್ಞಿತಂ - ಪಾಂಚಾಲವೆಂಬ ಹೆಸರುಳ್ಳದ್ದು, ಶ್ರುತಿಧರಾತ್ ಶ್ರುತಿಧರನೆಂಬ, ಶ್ರೋತ್ರಾತ್-ಕಿವಿಗಳಿಂದ, ಪಿತೃಯಾನ, ದೇವಯಾನಗಳನ್ನು, ವ್ರಜೇತ್ - ಹೊಂದುವನು ॥೧೩॥ ಆಸುರಿ ಎಂಬ, ಅರ್ವಾಗ್ದ್ವಾಃ-ಕೆಳಗಣಬಾಗಿಲು, ಮೇಢ್ರಂ - ಶಿಶ್ನವು, ಗ್ರಾಮಿಣಾಂ-ಪಾ

---

ಗಲುಗಳಿಂದ ಸಾಚರಸುತ್ತು ರೂಪಗಳನ್ನು ಗ್ರಹಿಸುವನು ॥೧೦॥ ಮೂಗಿನ ರಂಧ್ರಗಳಿಗೆ ನಳಿನಿ, ನಾಳಿನಿ ಎಂದು ಹೆಸರು. ಅದಕ್ಕೆ ವಿಷಯವಾದುದು ಗಂಧವು. ಈ ನಾಸಾ ರಂಧ್ರಗಳಿಂದ ಸಂಚರಿಸುವ ಉಚ್ಛ್ವಾಸ ನಿಶ್ವಾಸವಾಯುಗಳಿಗೆ ಅವಧೂತನೆಂದು ಸಂಜ್ಞೆ. ಮುಖಕ್ಕೆ ಹೆಬ್ಬಾಗಿಲೆಂದೂ, ವಾಕ್ಕಿಗೆ ವಿಪಣವೆಂದೂ, ರಸನೇಂದ್ರಿಯಕ್ಕೆ ರಸಜ್ಞವೆಂದೂ ಹೆಸರು. ರಸನೇಂದ್ರಿಯಕ್ಕೆ ಮಧುರಾದಿ ರಸಗಳೇ ವಿಷಯವು ॥೧೧॥ ವ್ಯವಹಾರಕ್ಕೆ ಆಪಣವೆಂದೂ, ಚತುರ್ವಿಧಾನ್ನಗಳಿಗೆ ಬಹೂದನವೆಂದೂ, ಬಲಗಿವಿಗೆ ಪಿತೃಹೂ ಎಂದೂ, ಎಡಗಿವಿಗೆ ದೇವಹೂ ಎಂದೂ ಹೆಸರು. ॥೧೨॥ ಪ್ರವೃತ್ತ ನಿವೃತ್ತಗಳೆಂಬ ಶಾಸ್ತ್ರಗಳಿಗೆ ಪಾಂಚಾಲವೆಂದು ಹೆಸರು. ಈಶಾಸ್ತ್ರವನ್ನು ಗ್ರಹಿಸುವ ಕಿವಿಗೆ ಶ್ರುತಧರನೆಂದು ಸಂಜ್ಞೆ. ಜೀವನು ಶ್ರವಣೇಂದ್ರಿಯದಿಂದ ಪಿತೃಯಾನ (ಧೂಮಾದಿಮಾರ್ಗ) ದೇವಯಾನ( ಅರ್ಚಿರಾದಿಮಾರ್ಗ) ಗಳನ್ನು ಪಡೆಯುವನು ॥೧೩॥ ಕೆಳಗಡೆಯಿರುವ ಶಿಶ್ನದ್ವಾರಕ್ಕೆ ಆಸುರಿಯೆಂದು ಹೆಸರು. ಗ್ರಾಮ್ಯಸುಖ (ಮೈಥುನ) ಕ್ಕೆ ವ್ಯವಾಯವೆಂದು ಹೆಸರು. ಉಪಸ್ಥೇಂದ್ರಿಯಕ್ಕೆ ದುರ್ಮದನೆಂದೂ, ಗುದಕ್ಕೆ ನಿರ್ಋತಿಯೆಂದೂ ಸಂಜ್ಞೆ. ನರಕಕ್ಕೆ ವೈಶಸವೆಂದೂ, ಪಾಯುವಿಗೆ ಲುಬ್ಧಕನೆಂದೂ,

---

‡ ಈ ಶ್ಲೋಕ ಮೊದಲು ಮೂವತ್ತು ಶ್ಲೋಕಗಳವರೆಗೂ ಶ್ರೀವೀರರಾಘವಾಚಾರ್ಯರ ಮತದಲ್ಲಿ ಗ್ರಂಥಾನುಪೂರ್ವಿಯು ವ್ಯತ್ಯಸ್ತವಾಗಿದೆ. ಶ್ರೀವಿಜಯಧ್ವಜ ಮತದಲ್ಲಿಯೂ ಕೆಲವು ಕಡೆ ಆನುಪೂರ್ವಿಯು ಬದಲಾಯಿಸಿರುವದು. ವಾಚಕರು ಅಲ್ಲಲ್ಲಿ ವ್ಯಾಖ್ಯಾನಗಳನ್ನು ನೋಡಿ ಮೂಲ ಕ್ರಮವನ್ನು ಸರಿಪಡಿಸಿಕೊಳ್ಳಬೇಕು.

ಮವಾರ್ಗ ಗ್ರಾವ್ಯ ವ್ಯವಾಯೋ ಗ್ರಾಮಿಣಾಂ ರತಿಃ । ಉಪಸ್ಥೋ ದುರ್ಮದಃ ಪ್ರೋಕ್ತೋ ನಿರ್ಋತಿ ರ್ಗುದ ಉಚ್ಯತೇ ॥೧೪॥ ವೈಶಸಂ ನರಕಂ ಪಾಯು ರ್ಲುಬ್ಧಕೋಽಂಧೌತು ಮೇಶೃಣು । ಹಸ್ತಪಾದೌ ಪುಮಾಂ ಸ್ತಾಭ್ಯಾಂ ಯುಕ್ತೋ ಯಾತಿ ಕರೋತಿಚ ॥೧೫॥ ಅಂತಃ ಪುರಂಚ ಹೃದಯಂ ವಿಷೂಚಿರ್ಮನ ಉಚ್ಯತೇ । ತತ್ರ ಮೋಹಂ ಪ್ರಸಾದಂವಾ ಹರ್ಷಂ ಪ್ರಾಪ್ನೋತಿ ತದ್ಗುಣೈಃ ॥೧೬॥ ಯಥಾ ಯಥಾ ವಿಕ್ರಿಯತೇ ಗುಣಾಕ್ತೋ ವಿಕರೋತಿವಾ। ತಥಾ ತಥೋಪ ದ್ರಷ್ಟಾತ್ಮಾ ತದ್ವೃತ್ತೀ ರನುಕಾರ್ಯತೆ ॥೧೭॥ ದೇಹೋ ರಥಸ್ತ್ವಿಂದ್ರಿಯಾಶ್ವಾ ಸ್ಸಂವತ್ಸರರಯೋ ಗತಿಃ । ದ್ವಿಕರ್ಮಚಕ್ರಸ್ತ್ರಿಗುಣಧ್ವಜಃ ಪಂಚಾಸು ಬಂಧುರಃ ॥೧೮॥ ಮನೋರಶ್ಮಿ ರ್ಬುದ್ಧಿ ಸೂತೋ

ಮರರಿಗೆ, ರತಿಃ-ಸುಖಕರವಾದುದು, ರತಿಃ-ಸ್ತ್ರೀಭೋಗವು, ಉಪಸ್ಥಃ-ಉಪಸ್ಥವು, ದುರ್ಮದಃ-ದುರ್ಮದನೆಂದು, ಪ್ರೋಕ್ತಃ-ಹೇಳಲ್ಪಟ್ಟನು, ಗುದಃ-ಗುದವು, ನಿರ್ಋತಿಯೆಂದು, ಉಚ್ಯತೇ- ಹೇಳಲ್ಪಡುತ್ತದೆ ॥ ವೈಶಸಂ-ವೈಶಸವೇ ನರಕವು, ಪಾಯುಃ - ಪಾಯುವೇ ಲುಬ್ಧಕನು, ಮೇ-ನನ್ನಿಂದ, ಅಂಧೌ- ಕುರುಡರನ್ನು, ಶೃಣು-ಕೇಳು, ಹಸ್ತಪಾದೌ - ಕೈಕಾಲುಗಳು, ಪುಮಾನ್-ಪುರುಷನು, ತಾಭ್ಯಾಂ-ಅವುಗಳಿಂದ, ಯುಕ್ತಃ- ಕೂಡಿ, ಯಾತಿ - ನಡೆಯುತ್ತಾನೆ, ಕರೋತಿಚ - ಕಾರ್ಯಗಳನ್ನು ಮಾಡುತ್ತಾನೆ ॥ ೧೫ ॥ ಹೃದಯಂ- ಹೃದಯವು, ಅಂತಃಪುರವು, ಮನಃ-ಮನಸ್ಸು, ವಿಷೂಚಿಯೆಂದು, ಉಚ್ಯತೇ - ಹೇಳಲ್ಪಡುವುದು, ತತ್ರ-ಅಲ್ಲಿ, ತದ್ಗುಣೈಃ - ಆ ಬುದ್ಧಿವೃತ್ತಿಗಳಿಂದ, ಮೋಹ ಪ್ರಸಾದಗಳನ್ನು, ಆಪ್ನೋತಿ-ಹೊಂದುತ್ತಾನೆ ॥೧೬॥ ಗುಣಾಸಕ್ತಃ - ಗುಣಲಿಪ್ತವಾಗಿ, ಯಥಾಯಥಾ - ಹೇಗೆಹೇಗೆ, ವಿಕ್ರಿಯತೇ-ಬದಲಾಯಿಸುವದೊ, ವಿಕರೋತಿವಾ-ಬೇರೆಬೇರೆ ಮಾಡುವದೋ, ತಥಾತಥಾ ಹಾಗೆಹಾಗೆ, ಉಪದ್ರಷ್ಟಾ ದ್ರಷ್ಟವಾದಜೀವನು, ತದ್ವೃತ್ತೀಃ-ಆಬುದ್ಧಿವೃತ್ತಿಗಳನ್ನು, ಅನುಕಾರ್ಯತೇ-ಅನುಕಾರವಮಾಡಿಸಲ್ಪಡುತ್ತಾನೆ ॥ ದೇಹಃ-ಶರೀರವು, ರಥವು, ಇಂದ್ರಿಯಗಳೇ ಕುದುರೆಗಳು, ಸಂವತ್ಸರರಯಃ - ಸಂವತ್ಸರವೇಗವೇ, ಗತಿಯು, ದ್ವಿಕ....ಕ್ರಃ - ಪುಣ್ಯಪಾಪಗಳೇ ಎರಡು ಚಕ್ರಗಳು, ಸತ್ವಾದಿಗುಣಗಳೇ ಮೂರುಧ್ವಜಗಳು, ಪಂಚಾಸುಬಂಧುರಃ-ಪಂಚಪ್ರಾಣಗಳೇ ಕಟ್ಟುಗಳು ॥೧೮॥ ಮನಸ್ಸೇ ಹಗ್ಗವು, ಬುದ್ಧಿಯೇ ಸಾರಥಿಯು,

ಹಸ್ತಪಾದಗಳಿಗೆ ಅಂಧರೆಂದೂ ಹೆಸರು. ಜೀವನು ಈ ಹಸ್ತಪಾದಗಳಿಂದ ಗಮನ,ಆದಾನ, ಮೊದಲಾದ ಕಾರ್ಯಗಳನ್ನು ಮಾಡುತ್ತಾನೆ॥೧೫॥ ಹೃದಯವೇ ಅಂತಃಪುರವು. ಮನಸ್ಸೇ ವಿಷೂಚಿಯು, ಆ ಮನೋಗುಣಗಳಾದ ಸತ್ವಾದಿಗಳಿಂದ ಜೀವನು, ಮೋಹ, ಪ್ರಸಾದ, ಹರ್ಷಗಳನ್ನು ಪಡೆಯುವನು ॥೧೬॥ ಬುದ್ಧಿಯು ಜಾಗ್ರತ್ಸ್ವಪ್ನಗಳಲ್ಲಿ ಹೇಗೆ ಹೇಗೆ ವಿಕಾರವನ್ನು ಪಡೆಯುವುದೋ,ಹಾಗೆ ಹಾಗೆ ಜೀವನು ಸಾಕ್ಷಿಯಾದವನಾದರೂ ಇಂದ್ರಿಯ ಪ್ರೇರಿತನಾಗಿ ಆ ಬುದ್ಧಿಗುಣಗಳಗೊಳಗಾಗುವನು॥ ೧೭ ॥ ಶರೀರವೇ ರಥವು. ಇಂದ್ರಿಯಗಳೇ ಕುದುರೆಗಳು. ಸಂವತ್ಸರಗತಿಯೇ ಗಮನವು. ಪುಣ್ಯಪಾಪಗಳೇ ಆ ರಥಕ್ಕೆ ಚಕ್ರಗಳು. ಸತ್ವಾದಿಗುಣಗಳೇ ಮೂರು ಧ್ವಜಗಳು. ಪಂಚಪ್ರಾಣಗಳೇ ಕಟ್ಟುಗಳು ॥೧೮॥ ಮನಸ್ಸೇಹಗ್ಗವು. ಬುದ್ಧಿಯೇ ಸಾರಥಿಯು. ಹೃದಯವೇ ಕುಳಿತುಕೊಳ್ಳುವ ಸ್ಥಾನವು. ದ್ವಂದ್ವಗಳೇ ನೊಗಗಳನ್ನು ಬಿಗಿಯುವ ಸ್ಥಾನವು. ಶಬ್ದಾದಿ ವಿಷಯಗಳೇ ಆಯುಧಗಳನ್ನಿಡುವ

ಹೃನ್ನೀಡೋ ದ್ವಂದ್ವಕೂಬರಃ । ಪಂಚೇಂದ್ರಿಯಾರ್ಥ ಪ್ರಕ್ಷೇಪ ಸ್ಸಪ್ತಧಾ
ತುವರೂಥಕಃ ॥೧೯॥ ಆಕೂತಿ ರ್ವಿಕ್ರಮೋ ಬಾಹ್ಯೋ ಮೃಗತೃಷ್ಣಾಂ
ಪ್ರಧಾವತಿ । ಏಕಾದಶೇಂದ್ರಿಯಚಮೂಃ ಪಂಚಸೂನಾ ವಿನೋದಕೃತ್ ।
ಸಂವತ್ಸರ ಶ್ಚಂಡವೇಗಃ ಕಾಲೋ ಯೇನೋಪಲಕ್ಷಿತಃ ॥೨೦॥ ತಸ್ಯಾಽ
ಹಾನೀಹ ಗಂಧರ್ವಾ ಗಂಧರ್ವ್ಯೋ ರಾತ್ರಯ ಸ್ಸ್ಮೃತಾಃ । ಹರಂತ್ಯಾಯುಃ
ಪರಿಕ್ರಾಂತ್ಯಾ ಷಷ್ಟ್ಯುತ್ತರ ಶತತ್ರಯಂ ॥೨೧॥ ಕಾಲಕನ್ಯಾ ಜರಾ ಸಾ
ಕ್ಷಾಲ್ಲೋಕ ಸ್ತಾಂ ನಾಽಭಿನಂದತಿ । ಸ್ವಸಾರಂ ಜಗೃಹೇ ಮೃತ್ಯುಃ
ಕ್ಷಯಾಯ ಯವನೇಶ್ವರಃ ॥೨೨॥ ಆಧಯೋ ವ್ಯಾಧಯ ಸ್ತಸ್ಯ ಸೈನಿಕಾ

ಹೃದಯವೇ ಸ್ಥಾನವು, ಸುಖದುಃಖಾದಿದ್ವಂದ್ವಗಳೇ ನೊಗಗಳನ್ನು ಕಟ್ಟುವಸ್ಥಲವು, ಪಂಚವಿಷಯಗಳೇ ಆಯುಧಸ್ಥಾನಗಳು, ಸಪ್ತಧಾತುಗಳೇ ಆವರಣಗಳು ॥೧೯॥ ಬಾಹ್ಯಃ - ಬಾಹ್ಯವಿಷಯಗಳಲ್ಲಿ ಆಸಕ್ತವಾದ, ಆಕೂತಿಃ-ಕರ್ಮೇಂದ್ರಿಯಗಳು, ವಿಕ್ರಮಃ-ವಿಕ್ರಮವೆನಿಸುವುದು, ಏಕಾ...ಮೂಃ-ಹನ್ನೊಂದು ಇಂದ್ರಿಯಗಳೇ ಸೇನೆಯಾಗುಳ್ಳವನಾಗಿ, ಪಂಚ...ತ್ - ಹಿಂಸಾತ್ಮಕವಾದ ವಿನೋದವನ್ನು ನಡೆಯಿಸುತ್ತಾ ಮೃಗತೃಷ್ಣಾಂ - ಬಿಸಲ್ಗುದುರೆ ಸಮಾನವಾದ ವಿಷಯಸುಖಗಳನ್ನು ಕುರಿತು, ಪ್ರಧಾವತಿ - ಓಡುತ್ತದೆ, ಯೇನ-ಯಾವುದರಿಂದ, ಕಾಲವು, ಉಪಲಕ್ಷಿತಃ - ತೋರಿಸಲ್ಪಡುವುದೋ, ಸಂವತ್ಸರಃ-ಆ ಸಂವತ್ಸರವೇ, ಚಂಡವೇಗಃ - ಚಂಡವೇಗನು ॥೨೦॥ ಇಹ-ಇಲ್ಲಿ, ತಸ್ಯ-ಆ ಸಂವತ್ಸರದ, ಅಹಾನಿ - ದಿನಗಳೇ, ಗಂಧರ್ವಾಃ-ಗಂಧರ್ವರು, ರಾತ್ರಯಃ-ರಾತ್ರಿಗಳು, ಗಂಧರ್ವ್ಯಃ- ಗಂಧರ್ವಸ್ತ್ರೀಯರೆಂದು, ಸ್ಮೃತಾಃ-ಹೇಳಲ್ಪಟ್ಟರು, ಷಷ್ಟ್ಯ...ಯಂ - ಮುನ್ನೂರ ಅರವತ್ತು ದಿನಗಳು, ಪರಿಕ್ರಾಂತ್ಯಾ - ಸುತ್ತುವುದರಿಂದ, ಆಯುಃ-ಆಯುಸ್ಸನ್ನು, ಹರಂತಿ - ಅಪಹರಿಸುತ್ತವೆ ॥೨೧॥ ಜರಾ-ಮುದಿತನವೇ, ಕಾಲಕನ್ಯಾ-ಕಾಲಕನ್ನೆಯು, ಸಾಕ್ಷಾಲ್ಲೋಕಃ-ಈಲೋಕದ ಜನರು, ತಾಂ-ಆಕೆಯನ್ನು, ನಾಭಿನಂದತಿ - ಬಯಸುವುದಿಲ್ಲ, ಯವನೇಶ್ವರಃ - ಯವನರಾಜನೇ ಮೃತ್ಯುವು, ಅವನು, ಕ್ಷಯಾಯ - ನಾಶಕ್ಕಾಗಿ, ಸ್ವಸಾರಂ-ತಂಗಿಯನ್ನಾಗಿ, ಜಗೃಹೇ-ಅಂಗೀಕರಿಸಿದನು ॥೨೨॥ ತಸ್ಯ-ಆ ಮೃತ್ಯುವಿಗೆ, ಆಧಯಃ - ಮನೋರೋಗಗಳು, ವ್ಯಾಧಯಃ-ರೋಗಗಳೂ, ಸೈನಿಕಾಃ - ಸೇನೆಯವರಾದ, ಯವನೇಶ್ವರಾಃ ಯವನರು, ಭೂತೋ....ಯಃ -

ಸ್ಥಾನಗಳು. ಸಪ್ತಧಾತುಗಳೇ ಗೌಸಣಿಗೆಗಳು ॥೧೯॥ ಕರ್ಮೇಂದ್ರಿಯಗಳೇ ಗತಿಗಳು. ವಿಷಯಾಭಿಲಾಷೆಯೇ ವಿಕ್ರಮವು. ಮೃಗತೃಷ್ಣೆಯಂತೆ ಮಿಥ್ಯಾಭೂತಗಳಾದ ವಿಷಯಗಳಲ್ಲಿ ಸಂಚಾರವೇ ಬೇಟೆಯು. ಹನ್ನೊಂದು ಇಂದ್ರಿಯಗಳೇ ಸೇನೆಯು. ಪಂಚಸೂನಾ ದೋಷಗಳೇ ಮೃಗಗಳ ಕೊಲೆಯು. ಸಂವತ್ಸರವೇ ಚಂಡವೇಗನು. ಇವನೇ ಕಾಲಸೂಚಕನು ॥೨೦॥ ಆ ಸಂವತ್ಸರದ ದಿನಗಳೇ ಗಂಧರ್ವರು. ರಾತ್ರಿಗಳೇ ಗಂಧರ್ವಸ್ತ್ರೀಯರು. ಈ ಮುನ್ನೂರು ಅರವತ್ತು ದಿನಗಳೇ ಸುತ್ತುತ್ತಾ ಪ್ರಾಣಿಗಳ ಆಯುಷ್ಯವನ್ನು ಅಪಹರಿಸತಕ್ಕವು. ಮುದಿತನಕ್ಕೆ ಕಾಲಕನ್ನೆಯೆಂದು ಹೆಸರು. ಅದನ್ನು ಯಾವ ಜನರೂ ಅಂಗೀಕರಿಸುವುದಿಲ್ಲ. ಮೃತ್ಯುವೆಂಬ ಯವನೇಶ್ವರನು, ಲೋಕನಾಶಕ್ಕಾಗ ಆಜರೆಯನ್ನು ತಂಗಿಯನ್ನಾಗಿ ಮಾಡಿಕೊಂಡನು ॥೨೨॥ ಆಧಿವ್ಯಾಧಿಗಳೇ ಆ ಮೃತ್ಯುವಿನ ಭಟರು. ಪ್ರಾಣಿಗಳನ್ನು ಪೀಡಿಸುವುದರಲ್ಲಿ ವೇಗವುಳ್ಳ ಶೀತೋಷ್ಣಜ್ವರಗಳೇ ಮೃತ್ಯುವಿಗೆ ತಮ್ಮನಾದ

ಯವನಾಃ ಸ್ಯುರರಾಃ । ಭೂತೋಪಸರ್ಗಾಶುರಯಃ ಪ್ರಜ್ವಾರೋ ದ್ವಿವಿಧೋ ಜ್ವರಃ ॥೨೩॥ ಏವಂ ಬಹುವಿಧೈರ್ದುಃಖೈರ್ದೈವಭೂತಾತ್ಮಸಂಭವೈಃ । ಕ್ಲಿಶ್ಯಮಾನಃ ಶತಂ ವರ್ಷಂ ದೇಹೇ ದೇಹೀ ತಮೋವೃತಃ ॥೨೪॥ ಪ್ರಾಣೇಂದ್ರಿಯಮನೋಧರ್ಮಾನಾತ್ಮನ್ಯಧ್ಯಸ್ಯ ನಿರ್ಗುಣಃ । ಶೇತೇ ಕಾಮಲವಾನ್ ಧ್ಯಾಯನ್ ಮಮಾಹಮಿತಿ ಕರ್ಮಕೃತ್ ॥೨೫॥ ಯದಾತ್ಮಾನಮವಿಜ್ಞಾಯ ಭಗವಂತಂ ಪರಂ ಗುರುಂ । ಪುರುಷಸ್ತು ವಿಷಜ್ಜೇತ ಗುಣೇಷು ಪ್ರಕೃತೇಃ ಸ್ವದೃಕ್ ॥೨೬॥ ಗುಣಾಽಭಿಮಾನೀ ಸತದಾ ಕರ್ಮಾಣಿ ಕುರು

---

ಪ್ರಾಣಿಗಳನ್ನು ಬಾಧಿಸುವುದರಲ್ಲಿ ತೀವ್ರವೇಗವುಳ್ಳ, ಪ್ರಜ್ವಾರಃ - ಪ್ರಜ್ವಾರನೇ, ದ್ವಿವಿಧಃ - ಎರಡು ಬಗೆಯಾದ, ಜ್ವರವು ॥೨೩॥ ಏವಂ - ಇಂತು, ದೇವ....ವೈಃ - ದೈವ, ಭೂತ, ಆತ್ಮಗಳಿಂದುಂಟಾದ, ಬಹುವಿಧೈಃ - ಹಲವು ಬಗೆಯಾದ, ದುಃಖೈಃ - ದುಃಖಗಳಿಂದ, ಕ್ಲಿಶ್ಯಮಾನಃ- ಕಷ್ಟಪಡುತ್ತಾ, ತಮೋವೃತಃ - ಅಜ್ಞಾನಾವೃತನಾದ, ದೇಹೀ - ಜೀವನು, ನಿರ್ಗುಣೋಽಪಿ - ನಿರ್ಗುಣನಾದರೂ, ಪ್ರಾಣೇ... ಧರ್ಮಾನ್]. ಪ್ರಾಣ, ಇಂದ್ರಿಯ, ಮನಸ್ಸು ಇವುಗಳ ಧರ್ಮಗಳನ್ನು, ಆತ್ಮನಿ - ತನ್ನಲ್ಲಿ, ಅಧ್ಯಸ್ಯ - ಆರೋಪಿಸಿ, ಕಾಮಲವಾನ್ - ಕ್ಷುದ್ರಸುಖಗಳನ್ನು, ಧ್ಯಾಯನ್ - ಧ್ಯಾನಿಸುತ್ತಾ, ಮಮಾಹಮಿತಿ - ನಾನು ನನ್ನದೆಂದು, ಕರ್ಮಕೃತ್ - ಕಾರ್ಯಗಳನ್ನು ಮಾಡುತ್ತಾ, ಶತಂ ವರ್ಷಂ - ನೂರುವರ್ಷಗಳು, ದೇಹೇ - ಶರೀರದಲ್ಲಿ, ಶೇತೇ - ವಾಸಿಸುತ್ತಾನೆ ॥೨೫॥ ಯದಾ - ಯಾವಾಗ, ಸ್ವದೃಕ್ - ಸ್ವಪ್ರಕಾಶ ಸ್ವರೂಪನಾದರೂ, ಪುರುಷಃ - ಪುರುಷನು, ಭಗವಂತಂ - ಮಹಾಮಹಿಮನಾದ, ಪರಂಗುರುಂ - ಪರಮಗುರುವಾದ, ಆತ್ಮಾನಂ - ಪರಮಾತ್ಮನನ್ನು, ಅವಿಜ್ಞಾಯ - ತಿಳಿಯದೆ, ಪ್ರಕೃತೇಃ - ಪ್ರಕೃತಿಯ ಗುಣೇಷು - ಗುಣಗಳಲ್ಲಿ, ವಿಷಜ್ಜೇತ - ವ್ಯಾಪೃತನಾಗುವನೋ, ತದಾ - ಆಗ, ಸಃ - ಅವನು, ಗುಣಾಭಿಮಾನೀ - ಗುಣಗಳಲ್ಲಿ ಅಭಿಮಾನವುಳ್ಳವನಾಗಿ, ಅವಶಃ - ಪರಾಧೀನತೆಯಿಂದ, ಶುಕ್ಲಂ - ಸಾತ್ವಿಕ, ಕೃಷ್ಣಂ - ತಾಮಸ, ಲೋಹಿತಂ - ರಾಜಸ ಈ, ಕರ್ಮಾಣಿ - ಕರ್ಮಗಳನ್ನು, ಕುರುತೇ - ಮಾಡುತ್ತಾನೆ, ಯಥಾಕರ್ಮ - ಕರ್ಮಾನುಗುಣವಾಗಿ, ಅಭಿಜಾಯತೇ - ಮರಳಿ ಹುಟ್ಟುತ್ತಾನೆ ॥೨೬॥

---

ಪ್ರಜ್ವಾರನು ॥೨೩॥ ಇಂತು ನಾರದಮುನಿಯು ಪುರಂಜನೋಪಾಖ್ಯಾನದ ಗೂಢಾರ್ಥವನ್ನು ತಿಳುಹಿಸಿ, ಈ ಜೀವನು ಕ್ಲೇಶಪಡುವ ರೀತಿಯನ್ನು ವಿವರಿಸುತ್ತಾನೆ. ಅಯ್ಯಾ ರಾಜನೆ! ಈ ರೀತಿಯಾಗಿ ಜೀವನು ಆಧ್ಯಾತ್ಮಿಕಾದಿ ತಾಪತ್ರಯದಿಂದ ಬಳಲುತ್ತಾ, ಅಜ್ಞಾನಾವೃತನಾಗಿ ಅಹಂಕಾರ ಮಮಕಾರಗಳಿಗೊಳಗಾಗಿ ಪ್ರಾಣಧರ್ಮಗಳಾದ ಕ್ಷುತ್ತೃಷ್ಣೆಗಳನ್ನೂ, ಇಂದ್ರಿಯ ಧರ್ಮಗಳಾದ ಕುಂಟು, ಕುರುಡು ಮೊದಲಾದವುಗಳನ್ನೂ, ಮನೋಧರ್ಮಗಳಾದ ಕಾಮಸಂಕಲ್ಪಾದಿಗಳನ್ನೂ, ನಿರ್ಗುಣನಾದ ತನ್ನಲ್ಲಾರೋಪಿಸಿಕೊಂಡು ಕ್ಷುದ್ರಗಳಾದ ವಿಷಯಸುಖಗಳನ್ನು ಬಯಸುತ್ತಾ, ಕರ್ಮಾಸಕ್ತನಾಗಿ ನೂರು ವರ್ಷಗಳವರೆಗೂ ಶರೀರದಲ್ಲಿ ನೆಲಸಿರುತ್ತಾನೆ ॥೨೫॥ ಜೀವನು ಸ್ವಪ್ರಕಾಶನಾದರೂ ಯಾವಾಗ ತಮೋವೃತನಾಗಿ ಪರಮಗುರುವಾದ ಭಗವಂತನನ್ನರಿಯದೇ ಮಾಯಾಗುಣಗಳಾದ ವಿಷಯಗಳಲ್ಲಿ ಆಸಕ್ತನಾಗುವನೋ, ಆಗ ಗುಣಾಭಿಮಾನದಿಂದ ಪೂರ್ವಕರ್ಮವಾಸನಾನುಸಾರವಾಗಿ ಸಾತ್ವಿಕ ತಾಮಸ ರಾಜಸಗಳಾದ ಕರ್ಮಗಳನ್ನೆಸಗುತ್ತಾ, ಆ ಕರ್ಮಾನುಸಾ

ತೇಽವಶಃ । ಶುಕ್ಲಂ ಕೃಷ್ಣಂ ಲೋಹಿತಂವಾ ಯಥಾ ಕರ್ಮಾಽಭಿಜಾಯ
ತೇ॥ ಶುಕ್ಲಾತ್ಪ್ರಕಾಶಭೂಯಿಷ್ಠಾನ್ ಲೋಕಾನಾಪ್ನೋತಿ ಕರ್ಹಿಚಿತ್ ।
ದುಃಖೋದರ್ಕಾನ್ ಕ್ರಿಯಾಯಾಸಾಂಸ್ತಮಃಶೋಕೋತ್ಕಟಾನ್ ಕ್ವಚಿ
ತ್ ॥೨೮॥ ಕ್ವಚಿತ್ಪುಮಾನ್ ಕ್ವಚಿಚ್ಚ ಸ್ತ್ರೀ ಕ್ವಚಿನ್ನೋಭಯಮಂಧ
ಧೀಃ ।ದೇವೋ ಮನುಷ್ಯಸ್ತಿರ್ಯಗ್ವಾ ಯಥಾ ಕರ್ಮ ಗುಣಂ ಭವಃ॥೨೯॥
ಕ್ಷುತ್ಪರೀತೋ ಯಥಾ ದೀನ ಸ್ಸಾರಮೇಯೋ ಗೃಹಂ ಗೃಹಂ । ಚರನ್ ವಿಂ
ದತಿ ಯದ್ದಿಷ್ಟಂ ದಂಡ ಮೋದನ ಮೇವವಾ ॥೩೦॥ ತಥಾ ಕಾಮಾಶಯೋ
ಜೀವ ಉಚ್ಚಾವಚಪಥಾ ಭ್ರಮನ್।ಉಪರ್ಯಧೋವಾ ಮಧ್ಯೇವಾ ಯಾತಿ

ಕರ್ಹಿಚಿತ್ - ಒಮ್ಮೆ, ಶುಕ್ಲಾತ್ - ಸಾತ್ವಿಕ ಕರ್ಮಗಳಿಂದ, ಪ್ರಕಾಶಭೂಯಿಷ್ಠಾನ್ - ಪ್ರಕಾಶಾಧಿಕ್ಯವುಳ್ಳ, ಲೋಕಾನ್ - ಲೋಕಗಳನ್ನು, ಆಪ್ನೋತಿ - ಹೊಂದುತ್ತಾನೆ, ಕ್ವಚಿತ್ - ಮತ್ತೊಮ್ಮೆ, ದುಃಖೋದರ್ಕಾನ್ - ದುಃಖಾತಿಶಯವುಳ್ಳ, ಕ್ರಿಯಾಯಾಸಾನ್-ಕರ್ಮಗಳ ತೊಂದರೆಯುಳ್ಳ, ತಮ...ಟಾನ್, ಅಜ್ಞಾನ, ದುಃಖಗಳೇ ಬಲವಾಗಿರುವ ಲೋಕಗಳನ್ನು ಹೊಂದುತ್ತಾನೆ ॥ ೨೮ ॥ ಕ್ವಚಿತ್ - ಒಮ್ಮೆ- ಪುಮಾನ್ - ಗಂಡು, ಕ್ವಚಿತ್ - ಒಮ್ಮೆ, ಸ್ತ್ರೀ - ಹೆಣ್ಣು, ಕ್ವಚಿತ್ - ಮತ್ತೊಮ್ಮೆ, ನೋಭಯಂ - ಎರಡೂ ಅಲ್ಲ, ಅಂಧಧೀಃ - ಅಜ್ಞಾನಿಯು, ದೇವಃ - ದೇವತೆಯಾಗಿ, ಮನುಷ್ಯಃ - ಮನುಷ್ಯನಾಗೀ ತಿರ್ಯಗ್ವಾ - ಪಶ್ವಾದಿಗಳಾಗಿ, ಯಥಾಕರ್ಮಗುಣಂ - ಕರ್ಮಾನುಗುಣವಾಗಿ, ಭವಃ-ಜನಿಸುವನು॥೨೯॥ ಕ್ಷುತ್ಪರೀತಃ - ಹಸಿವುಗೊಂಡು, ದೀನಃ - ಬಳಲಿದ, ಸಾರಮೇಯಃ - ನಾಯಿಯು, ಯಥಾ - ಹೇಗೆ ಗೃಹಂಗೃಹಂ - ಮನೆಮನೆಯನ್ನೂ, ಚರನ್ - ಅಲೆಯುತ್ತಾ, ದಂಡಂ - ಪೆಟ್ಟನ್ನಾಗಲಿ, ಓದನಮ್, ವಾ - ತಿಂಡಿಯನ್ನಾಗಲಿ, ಯದ್ದಿಷ್ಟಂ - ಕೊಟ್ಟದ್ದನ್ನು, ವಿಂದತಿ - ಪಡೆಯುವುದೋ ॥ ೩೦ ॥ ತಥಾ - ಹಾಗೆ, ಕಾಮಾಶಯಃ - ವಿಷಯಾಸಕ್ತನಾದ, ಜೀವಃ - ಜೀವನು, ಉಚ್ಚಾವಚಪಥಾ - ಸಿಕ್ಕಿದ

ರವಾಗಿ ಮರಳಿಜನ್ಮವನ್ನು ಪಡೆಯುತ್ತಾನೆ ॥೨೭॥ಅವುಗಳಲ್ಲಿ ಸಾತ್ವಿಕ ಕರ್ಮದಿಂದ ಪ್ರಕಾಶ ಬಹುಳಗಳಾದ ಊರ್ಧ್ವಲೋಕಗಳನ್ನೂ, ತಾಮಸಕರ್ಮಗಳಿಂದ ಅತಿದುಃಖಕರಗಳಾದ ಅಧೋಲೋಕಗಳನ್ನೂ, ರಾಜಸಕರ್ಮಗಳಿಂದ ದುಃಖಾಯಾಸಗಳಾದ ಲೋಕಗಳನ್ನೂ ಪಡೆಯುವನು ॥ ೨೮ ॥ ಕರ್ಮಾನುಗುಣವಾಗಿ ಜನಿಸುವ ಜೀವನು ಒಮ್ಮೆ ಪುರುಷನಾಗಿಯೂ ಮತ್ತೊಮ್ಮೆ ಸ್ತ್ರೀಯಾಗಿಯೂ, ಇನ್ನೊಮ್ಮೆ ನಪುಂಸಕನಾಗಿಯೂ, ದೇವತೆಯಾಗಿಯೂ, ಮನುಷ್ಯನಾಗಿಯೂ, ತಿರ್ಯಗ್ಜಂತುವಾಗಿಯೂ ಹುಟ್ಟುವನು. ॥೨೯॥ ತರುವಾಯ ಹಸಿವುಬಾಯಾರಿಕೆಗಳಿಗೆ ತಾಳಲಾರದೇ ಬಡವಾದ ನಾಯಿಯು ಮನೆಮನೆಗೂ ಅಲೆಯುತ್ತಾ, ಅದೃಷ್ಟಾನುಸಾರವಾಗಿ ಕೆಲವು ಕಡೆ ಅನ್ನವನ್ನೂ,ಕೆಲವು ಕಡೆ ಪೆಟ್ಟುಗಳನ್ನು ತಿನ್ನುವಂತೆ,ಕಾಮಾಭಿಲಾಷಿಯಾದ ಜೀವನು ಮನಸ್ಸು ಬಂದದಾರಿಯಲ್ಲಿ ಅಲೆಯುತ್ತಾ,ಪ್ರಾರಬ್ಧಾನುಸಾರವಾಗಿ, ಸ್ವರ್ಗಮೊದಲಾದ ಮೇಲಣಲೋಕಗಳಲ್ಲಾಗಲಿ, ನರಕಮೊದಲಾದ ಅಧೋಲೋಕಗಳಲ್ಲಾಗಲಿ, ಮಧ್ಯಮಲೋಕದಲ್ಲಾಗಲಿ, ಜನಿಸಿ ಸುಖದುಃಖಗಳನ್ನು ಅನುಭವಿಸುವನು ॥೩೧॥ ಆಧ್ಯಾತ್ಮಿಕ, ಆಧಿದೈವಿಕ, ಆಧಿಭೌತಿಕಗಳೆಂಬ ಮೂರುವಿಧ ದುಃಖಗಳಲ್ಲಿ ಯಾವುದಾದರೊಂದು ಜೀವನಿಗಿರಲೇ ಇರುವುದು. ಪ್ರತೀಕಾರವನ್ನು ಮಾಡಿದರೂ ಅದೂ

ದಿಷ್ಟಂ ಪ್ರಿಯಾ ಽ ಪ್ರಿಯಂ ॥೩೧॥ ದುಃಖೇಷ್ವೇಕತರೇಣಾ ಽ ಪಿ ದೈವ ಭೂತಾತ್ಮಹೇತುಷು । ಜೀವಸ್ಯ ನವ್ಯವಚ್ಛೇದ ಸ್ಸ್ಯಾಚ್ಚೇ ತ್ತತ್ತ ತ್ಪ್ರತಿಕ್ರಿಯಾ ॥೩೨॥ ಯಥಾಹಿ ಪುರುಷೋ ಭಾರಂ ಶಿರಸಾ ಗುರು ಮುದ್ವಹನ್ । ತಂ ಸ್ಕಂಧೇನ ಸ ಆಧತ್ತೇ ತಥಾಸರ್ವಾಃ ಪ್ರತಿಕ್ರಿಯಾಃ ॥ ೩೩ ॥ ನೈಕಾಂತತಃ ಪ್ರತೀಕಾರಃ ಕರ್ಮಣಾಂ ಕರ್ಮ ಕೇವಲಂ।ದ್ವಯಂ ಹ್ಯವಿದ್ಯೋಪಸೃತಂ ಸ್ವಪ್ನೇ ಸ್ವಪ್ನಇವಾ ಽ ನಘ ! ॥೩೪॥ ಅರ್ಥೇ ಹ್ಯವಿದ್ಯಮಾನೇಽಪಿ ಸಂಸೃತಿ ರ್ನನಿವರ್ತತೇ। ಮನಸಾ ಲಿಂಗರೂಪೇಣ ಸ್ವಪ್ನೇ ವಿಚರತೋ ಯಥಾ॥

---

ದಾರಿಯಲ್ಲಿ, ಭ್ರಮ್ರ್ನ - ಅಲೆಯುತ್ತಾ, ಉಪರಿ - ಮೇಲಣ ಲೋಕಗಳಲ್ಲಾಗಲಿ, ಅಧೋವಾ - ಕೆಳಗಣ ಲೋಕಗಳಲ್ಲಾಗಲಿ, ಮಧ್ಯೇವಾ - ಭೂಲೋಕದಲ್ಲಾಗಲಿ, ದಿಷ್ಟಂ - ಪ್ರಾಪ್ತವಾದ, ಪ್ರಿಯಾಪ್ರಿಯಂ. ಶುಭಾಶುಭಗಳನ್ನು, ಯಾತಿ - ಹೊಂದುತ್ತಾನೆ ॥೩೧॥ ದೈವ—ಷು, ದೈವ, ಭೂತ, ಆತ್ಮಗಳೇ ಹೇತುವಾಗುಳ್ಳ, ದುಃಖೇಷು - ದುಃಖಗಳಲ್ಲಿ, ಏಕತರೇಣಾಽಪಿ - ಒಂದರಿಂದಲಾದರೂ. ಜೀವಸ್ಯ - ಜೀವನಿಗೆ, ವ್ಯವಚ್ಛೇದಃ - ಬಿಡುಗಡೆಯು, ನ - ಇಲ್ಲ, ತತ್ತ....ಯಾ - ಅದರದರ ಪ್ರತೀಕಾರವು, ಸ್ಯಾಚ್ಚೇತ್ - ಆದರೆ ॥೩೨॥ ಶಿರಸಾ - ತಲೆಯಿಂದ, ಗುರುಂ - ಅಧಿಕವಾದ, ಭಾರಂ - ಭಾರವನ್ನು, ಉದ್ವಹನ್- ಹೊರೆದಿರುವ, ಪುರುಷಃ - ಪುರುಷನು, ಯಥಾ - ಹೇಗೆ, ಸ್ಕಂಧೇ - ಹೆಗಲಲ್ಲಿ, ಆಧತ್ತೇ-ಇಡುವನೋ, ಸರ್ವಾಃ-ಎಲ್ಲಾ, ಪ್ರತಿಕ್ರಿಯಾಃ -ಪ್ರತೀಕಾರಗಳು, ತಥಾ - ಹಾಗೆಯೇ॥೩೩॥ ಅನಘ- ಪಾಪರಹಿತನೆ! ಕರ್ಮಣಾಂ-ಕರ್ಮಗಳಿಗೆ, ಕರ್ಮಕೇವಲಂ - ಕರ್ಮಗಳೇ, ಏಕಾಂತತಃ - ಸಂಪೂರ್ಣವಾದ, ಪ್ರತೀಕಾರಃ-ಪ್ರತೀಕಾರವು, ನ - ಅಲ್ಲ, ಸ್ವಪ್ನೇ - ಸ್ವಪ್ನದಲ್ಲಿ. ಸ್ವಪ್ನಇವ - ಸ್ವಪ್ನದಂತೆ, ದ್ವಯಂ - ಎರಡೂ; ಅವಿದ್ಯೋಪಸೃತಂ - ಅಜ್ಞಾನದಿಂದ ಕೂಡಿದುದು ॥ ೩೪ ॥ ಲಿಂಗರೂಪೇಣ - ಉಪಾಧಿಭೂತವಾದ, ಮನಸಾ - ಮನಸ್ಸಿನಿಂದ, ಸ್ವಪ್ನೇಯಥಾ - ಕನಸಿನಲ್ಲಿಯೋಪಾದಿಯಲ್ಲಿ, ವಿಚರತಃ - ಸಂಚರಿಸುವ ಜೀವನಿಗೆ, ಅರ್ಥೇ - ದೇಹಾದಿಗಳು, ಅವಿದ್ಯಮಾನೇಽಪಿ - ಇಲ್ಲದಿದ್ದರೂ, ಸಂಸೃತಿಃ - ಸಂಸಾರವು, ನನಿವರ್ತತೇ-ಹೋಗುವುದಿಲ್ಲ ॥೩೫॥ ಅಥ - ಆದುದರಿಂದ, ಅರ್ಥಭೂತಸ್ಯ - ಅರ್ಥರೂಪನಾದ, ಆತ್ಮನಃ - ಜೀವನಿಗೆ,

---

ದುಃಖವೇಕರಿ.॥೩೨॥ತಲೆಯ ಮೇಲಣ ಭಾರವನ್ನುಹೊರಲಾರದೆ ಹೆಗಲಿಗೆ ಇಳುಹಿಸಿಕೊಂಡರೆ,ತಲೆಗೆ ಭಾರವು ತಪ್ಪಿತೇಹೊರತು,ಹೆಗಲಿಗೆ ಭಾರವು ತಪ್ಪಲಿಲ್ಲ.ಹಾಗೆಯೇ ದುಃಖಗಳಿಗೆ ಪ್ರತೀಕಾರ ಮಾಡಿದಲ್ಲಿ ಆದುಃಖವು ತಪ್ಪಿದರೂ ಪ್ರತೀಕಾರ ದುಃಖವು ತಪ್ಪುವುದಿಲ್ಲ॥ ದುಃಖಗಳಿಗೆ ಮೂಲಭೂತಗಳು ಕರ್ಮಗಳು. ಅವುಗಳಿಗೆ ಪ್ರತೀಕಾರವಾಗಿ ಮಾಡಲ್ಪಡತಕ್ಕವುಗಳೂ ಕರ್ಮಗಳೇ. ಈ ಎರಡು ಕರ್ಮಗಳೂ ಅಜ್ಞಾನಕೃತಗಳೇ ಆಗಿರುವುದರಿಂದ ಕರ್ಮಗಳಿಂದ, ಕರ್ಮಗಳಿಗೆ ಪರಿಹಾರವಾಗಲಾರದು. ಕತ್ತಲೆಯಿಂದ ಕತ್ತಲೆಯು ನಾಶವಾದೀತೆ ? ಮತ್ತು ಕನಸಿನಲ್ಲಿ ಮತ್ತೊಂದು ಕನಸನ್ನು ಕಂಡಾಗ ಆ ಕನಸಿನಿಂದ ಮೊದಲನೆಯ ಕನಸಿಗೆ ನಿವೃತ್ತಿಯುಂಟೆ ? ಅವೆರಡೂ ಅಜ್ಞಾನಜನ್ಯಗಳಾದ ಕಾರಣ ಎಚ್ಚರವಾಗುವವರೆಗೂ ಎರಡಕ್ಕೂ ನಾಶವಿಲ್ಲ ॥೩೪॥ ಉಪಾಧಿಭೂತವಾದ ಮನಸ್ಸಿನಿಂದ ಸ್ವಪ್ನದಲ್ಲಿ ಸಂಚರಿಸುವ ಜೀವನಿಗೆ ವಸ್ತುಗಳಿಲ್ಲದಿದ್ದರೂ ಹೇಗೆ ತೋರುವುವೋ, ಹಾಗೆ ಮಿಥ್ಯಾಭೂತಗಳಾದ ವಸ್ತುಗಳಿಲ್ಲದಿದ್ದರೂ ಜೀವನಿಗೆ ಸಂಸಾರವು ತಪ್ಪುವುದಿಲ್ಲ ॥೩೫॥ ಆದುದರಿಂದ

ಅಥಾತ್ಮನೋ ಽ ರ್ಥಭೂತಸ್ಯ ಯತೋ ಽ ನರ್ಥಪರಂಪರಾ । ಸಂಸೃತಿ ಸ್ತ
ದ್ವ್ಯವಚ್ಛೇದೋ ಭಕ್ತ್ಯಾ ಪರಮಯಾ ಗುರೌ॥೩೬॥ವಾಸುದೇವೇ ಭಗವ
ತಿ ಭಕ್ತಿಯೋಗಃ ಸಮಾಹಿತಃ । ಸಧ್ರೀಚೀನೇನ ವೈರಾಗ್ಯಂ ಜ್ಞಾನಂಚ ಜನ
ಯಿಷ್ಯತಿ ॥೩೭॥ ಸೋ ಽ ಚಿರಾದೇವ ರಾಜರ್ಷೇ! ಸ್ಯಾದಚ್ಯುತಕಥಾ
ಶ್ರಯಃ । ಶೃಣ್ವತಃ ಶ್ರದ್ದಧಾನಸ್ಯ ನಿತ್ಯದಾ ಸ್ಯಾದಧೀಯತಃ ॥ ೩೮ ॥
ಯತ್ರ ಭಾಗವತಾ ರಾಜನ್! ಸಾಧವೋ ವಿಶದಾಶಯಾಃ । ಭಗವದ್ಗುಣಾನು
ಕಥನಶ್ರವಣವ್ಯಗ್ರಚೇತಸಃ ॥೩೯॥ ತಸ್ಮಿನ್ ಮಹನ್ಮುಖರಿತಾ ಮಧುಭಿಚ್ಚ
ರಿತ್ರಪಿಯೂಷಶೇಷಸರಿತಃ ಪರಿತ ಸ್ಸ್ರವಂತಿ । ತಾ ಯೇ ಪಿಬಂ ತ್ಯವಿತೃ

ಯತಃ - ಯಾವುದರಿಂದ, ಅನರ್ಥಪರಂಪರಾ - ಅನರ್ಥರೂಪವಾದ, ಸಂಸೃತಿಃ - ಸಂಸಾರವುಂಟೋ, ಗುರೌ - ಗುರುವಿನಲ್ಲಿ, ಪರಮಯಾಭಕ್ತ್ಯಾ - ಪೂರ್ಣಭಕ್ತಿಯಿಂದ, ತದ್ವ್ಯವಚ್ಛೇದಃ - ಅದಕ್ಕೆ ನಾಶವು ॥೩೬॥ ಭಗವತಿವಾಸುದೇವೇ - ಭಗವಂತನಾದ ವಾಸುದೇವನಲ್ಲಿ, ಸಮಾಹಿತಃ - ಇಡಲ್ಪಟ್ಟ, ಭಕ್ತಿಯೋಗಃ - ಭಕ್ತಿಯು, ಸಧ್ರೀಚೀನೇನ - ಒಳ್ಳೆಯ ರೀತಿಯಿಂದ, ವೈರಾಗ್ಯಂ - ವೈರಾಗ್ಯವನ್ನೂ, ಜ್ಞಾನಂಚ - ಜ್ಞಾನವನ್ನೂ, ಜನಯಿಷ್ಯತಿ-ಉಂಟುಮಾಡವುದು ॥೩೭॥ ರಾಜರ್ಷೇ - ಎಲೈ ರಾಜಪುಂಗವನೆ! ಶೃಣ್ವತಃ - ಕೇಳುವ, ಶ್ರದ್ದಧಾನಸ್ಯ - ಶ್ರದ್ಧೆಯುಳ್ಳ, ನಿತ್ಯದಾ - ಯಾವಾಗಲೂ, ಅಧೀಯತಃ - ಪಠನ ಮಾಡುವವನಿಗೆ, ಸಃ - ಆ ಭಕ್ತಿಯೋಗವು, ಅಚಿರಾದೇವ - ಬೇಗನೆ, ಸ್ಯಾತ್ - ಆದೀತು ॥೩೮॥ ರಾಜನ್ - ರಾಜನೆ ! ಯತ್ರ - ಎಲ್ಲಿ, ಸಾಧವಃ - ಸಮಬುದ್ಧಿಯುಳ್ಳ, ವಿಶದಾಶಯಾಃ - ನಿರ್ಮಲಚಿತ್ತರಾದ, ಭಗ...ಸಃ - ಭಗವಂತನ ಗುಣಕಥನ - ಶ್ರವಣಗಳಲ್ಲಿ ಆಸಕ್ತವಾದ ಮನಸ್ಸುಳ್ಳ, ಭಾಗವತಾಃ - ಭಗವದ್ಭಕ್ತರು ಇರುವರೋ ॥೩೯॥

ನೃಪ - ರಾಜನೆ ! ತಸ್ಮಿನ್ - ಆಸ್ಥಾನದಲ್ಲಿ, ಮಹ...ತಾಃ-ಮಹಾತ್ಮರಿಂದ ಹೇಳಲ್ಪಟ್ಟ, ಮಧು... ತಃ - ಮಧುಭಿತ್ - ವಿಷ್ಣುವಿನ, ಚರಿತ್ರ - ಕಥೆಯೆಂಬ, ಪಿಯೂಷ - ಅಮೃತದ, ಶೇಷ - ಸಾರದ, ಸರಿತಃ - ನದಿಗಳು, ಪರಿತಃ - ಎಲ್ಲಾ ಕಡೆಯೂ, ಸ್ರವಂತಿ - ಹರಿಯುವುವು, ಯೇ - ಯಾರು, ಅವಿತೃ

ಪುರುಷಾರ್ಥ ಸ್ವರೂಪನಾದ ತನಗೆ ಯಾವ ಅಜ್ಞಾನದಿಂದ ದುಃಖಪರಂಪರಾ ರೂಪವೆನಿಸಿದ ಸಂಸಾರವು ಪ್ರಾಪ್ತವಾಗುವುದೋ, ಆ ಅಜ್ಞಾನವು ಭಗವಂತನಾದ ವಾಸುದೇವ ಮೂರ್ತಿಯಲ್ಲಿ ಭಕ್ತಿಯನ್ನಿಡುವುದರಿಂದಲೇ ನಿವರ್ತಿಸಬೇಕಲ್ಲದೆ ಬೇರೆ ಇಲ್ಲ ॥ ೩೬ ॥ ಭಗವಂತನಾದ ವಾಸದೇವನಲ್ಲಿಡಲ್ಪಟ್ಟ ಭಕ್ತಿಯೋಗವೆಂಬುದು ಸುಖಕರವಾದ ರೀತಿಯಿಂದ ವಿಷಯ ವೈರಾಗ್ಯವನ್ನೂ, ಭಕ್ತಿಯನ್ನೂ ಉಂಟುಮಾಡುವುದು ॥ ೩೭ ॥ ಅಯ್ಯಾ ರಾಜನೆ! ಭಗವತ್ಕಥಾ ಶ್ರವಣ ಮನನಾದಿಗಳನ್ನು ಮಾಡುವವನ ಭಕ್ತಿಯೋಗವು ಯಾವಾಗಲೂ ಹರಿಕಥೆಯನ್ನಾಶ್ರಯಿಸುವುದು ॥ ೩೮ ॥ ಭಗವದ್ಭಕ್ತರೂ, ಸಮದರ್ಶಿಗಳೂ, ನಿರ್ಮಲ ಮನಸ್ಕರೂ, ಭಗವದ್ಗುಣ ಕಥನಶ್ರವಣಾದಿಗಳನ್ನು ಮಾಡತಕ್ಕವರೂ ಆದ ಸಾಧುಗಳು ಎಲ್ಲಿರುವರೋ, ಅಲ್ಲಿ ಮಹಾತ್ಮರಿಂದ ಗಾನ ಮಾಡಲ್ಪಡುವ ಭಗವತ್ಕಥಾಮೃತನದಿಗಳು ಎಲ್ಲಾ ಕಡೆಗಳಲ್ಲಿಯೂ ಹರಿಯುತ್ತಿರುವುವು. ಯಾರು ಸಾವಧಾನರಾಗಿ ತೃಪ್ತಿಯಿಲ್ಲದೆ ಕಿವಿಗಳೆಂಬ ಪಾತ್ರೆಗಳಿಂದ ಆ ನದಿಗಳನ್ನು ಕುಡಿಯುವರೋ, ಅವರು ಆಹಾರ, ನೀರಡಿಕೆ

ಷೋऽನೃಪ ! ಗಾಢಕರ್ಣೈಸ್ತಾನ್ನಸ್ಪೃಶಂತ್ಯಶನತೃಡ್ಭಯಶೋಕಮೋಹಾಃ ॥೪೦॥ ಏತೈರುಪದ್ರುತೋ ನಿತ್ಯಂ ಜೀವಲೋಕಸ್ಸ್ವಭಾವಜೈಃ । ನಕರೋತಿ ಹರೇರ್ನೂನಂ ಕಥಾऽಮೃತನಿಧೌ ರತಿಂ ॥೪೧॥ ಪ್ರಜಾಪತಿಪತಿಸ್ಸಾಕ್ಷಾದ್ಭಗವಾನ್ ಗಿರಿಶೋ ಮನುಃ । ದಕ್ಷಾದಯಃ ಪ್ರಜಾಧ್ಯಕ್ಷಾ ನೈಷ್ಠಿಕಾಸ್ಸನಕಾದಯಃ ॥೪೨॥ ಮರೀಚಿರತ್ರ್ಯಂಗಿರಸೌ ಪುಲಸ್ತ್ಯಃ ಪುಲಹಃ ಕ್ರತುಃ । ಭೃಗುರ್ವಸಿಷ್ಠ ಇತ್ಯೇತೇ ಮದಂತಾ ಬ್ರಹ್ಮವಾದಿನಃ ॥೪೩॥ ಅದ್ಯಾಪಿ ವಾಚಸ್ಪತಯಸ್ತಪೋವಿದ್ಯಾಸಮಾಧಿಭಿಃ । ಪಶ್ಯಂತೋऽಪಿ ನಪಶ್ಯಂತಿ ಪಶ್ಯಂತಂ ಪರಮೇಶ್ವರಂ ॥೪೪॥ ಶಬ್ದಬ್ರಹ್ಮಣಿ ದುಷ್ಪಾರೇ ಚ

ಷಃ - ಸಾಕೆನ್ನದೆ, ಗಾಢಕರ್ಣೈಃ - ಸಾವಧಾನವಾಗಿ ಕಿವಿಗಳಿಂದ, ತಾಃ - ಅವನ್ನು, ಪಿಬಂತಿ - ಕುಡಿಯುವರೋ, ತಾನ್ - ಅವರನ್ನು, ಅಶ...ಹಾಃ - ಆಹಾರ, ಹಸಿವು, ನೀರಡಿಕೆ, ಭಯ, ಮೋಹ ಇವು, ನಸ್ಪೃಶಂತಿ - ಸೋಕುವುದಿಲ್ಲ ॥೪೦॥ ಜೀವಲೋಕಃ - ಪ್ರಾಣಿಲೋಕವು, ಸ್ವಭಾವಜೈಃ - ಸ್ವಾಭಾವಿಕಗಳಾದ, ಏತೈಃ - ಇವುಗಳಿಂದ, ನಿತ್ಯಂ - ಯಾವಾಗಲೂ, ಉಪದ್ರುತಃ - ಬಾಧಿಸಲ್ಪಟ್ಟು, ಹರೇಃ - ಹರಿಯ, ಕಥಾ...ಧೌ - ಚರಿತ್ರೆಯೆಂಬ ಅಮೃತನಿಧಿಯಲ್ಲಿ, ರತಿಂ - ಆಸಕ್ತಿಯನ್ನು, ನಕರೋತಿ- ಮಾಡುವುದಿಲ್ಲ, ನೂನಂ - ದಿಟವು - ॥೪೧॥ ಪ್ರಜಾಪತಿಃ - ನವಪ್ರಜೇಶ್ವರರಿಗೊಡೆಯನಾದ ಚತುರ್ಮುಖನು, ಸಾಕ್ಷಾತ್ - ಪ್ರತ್ಯಕ್ಷನಾದ, ಭಗವಾನ್ - ಭಗವಂತನಾದ, ಗಿರಿಶಃ - ಶಿವನು, ಮನುಃ - ಮನುವು, ಪ್ರಜಾಧ್ಯಕ್ಷಾಃ - ಪ್ರಜೇಶ್ವರರಾದ, ದಕ್ಷಾದಯಃ - ದಕ್ಷಮೊದಲಾದವರು, ನೈಷ್ಠಿಕಾಃ-ಬ್ರಹ್ಮನಿಷ್ಠರಾದ, ಸನಕಾದಯಃ, ಸನಕ ಮುಂತಾದವರು ॥೪೨॥ ಮರೀಚಿಯು, ಅತ್ರಿ, ಅಂಗಿರಸ್ಸು, ಪುಲಸ್ತ್ಯ, ಪುಲಹ, ಕ್ರತು, ಭೃಗು ವಸಿಷ್ಠ, ಇತ್ಯೇತೇ - ಇವರೆಂಬ, ಮದಂತಾಃ - ನನ್ನ ವರೆಗಿನ, ಬ್ರಹ್ಮವಾದಿನಃ - ಜ್ಞಾನಿಗಳು, ಅದ್ಯಾಪಿ - ಈಗಲೂ, ವಾಚಸ್ಪತಯಃ - ವಾಕ್ಪತಿಗಳಾಗಿ, ತಪೋ...ಭಿಃ - ತಪಸ್ಸು, ಜ್ಞಾನ, ಚಿತ್ತೈಕಾಗ್ರತೆಗಳಿಂದ, ಪಶ್ಯಂತೋऽಪಿ - ಹುಡುಕತಕ್ಕವರಾದರೂ, ಪಶ್ಯಂತಂ - ಸರ್ವಸಾಕ್ಷಿಯಾದ, ಪರಮೇಶ್ವರಂ - ಪರಮಾತ್ಮನನ್ನು, ನಪಶ್ಯಂತಿ - ಕಾಣಲಾರರು, ದುಷ್ಪಾರೇ - ಅಪಾರವಾದ, ಉರುವಿಸ್ತಾರೇ - ಬಹಳ ವಿಶಾಲವಾದ, ಶಬ್ದಬ್ರಹ್ಮಣಿ - ಶಬ್ದವೆಂಬ ಬ್ರಹ್ಮನಲ್ಲಿ, ಚರಂತಃ - ಸಂಚರಿಸುತ್ತಾ, ಮಂತ್ರ - ಮಂತ್ರಗಳ, ಲಿಂಗೈಃ - ವಜ್ರಹಸ್ತತ್ವಾದಿ ಗುಣಗಳಿಂದ ಕೂಡಿದ ಇಂದ್ರಾದಿದೇವತೆಗಳ ಅಭಿಧಾನಸಾಮರ್ಥ್ಯಗಳಿಂದ,

ಭಯ, ಶೋಕ, ಮೋಹಗಳೇ ಮೊದಲಾದ ಯಾವ ತೊಂದರೆಗಳಿಗೂ ಗುರಿಯಾಗುವುದಿಲ್ಲ ॥ ೪೦ ॥ ಪ್ರಾಣಿಗಳು ಭಗವತ್ಕಥಾಮೃತವನ್ನು ಬಯಸದಿರುವುದಕ್ಕೆ ಸಹಜಗಳಾದ ಕ್ಷುತ್ತೃಷ್ಣಾದಿಗಳ ಬಾಧೆಯೇ ಮೂಲಕಾರಣವು ॥೪೧॥ ನವಪ್ರಜೇಶ್ವರರಿಗೂ ಒಡೆಯನಾದ ಚತುರ್ಮುಖನು, ಭಗವಂತನಾದ ಪರಶಿವನು, ಮನುವು, ದಕ್ಷ ಮೊದಲಾದ ಪ್ರಜಾಪತಿಗಳು, ಬ್ರಹ್ಮನಿಷ್ಠರಾದ ಸನಕಾದಿ ಮುನಿಗಳು, ಮರೀಚಿ, ಅತ್ರಿ, ಅಂಗಿರಸ್ಸು, ಪುಲಸ್ತ್ಯ, ಪುಲಹ, ಕ್ರತು, ಭೃಗು, ವಸಿಷ್ಠ ಇವರೂ, ಮತ್ತು ನನ್ನವರೆಗೂ ಇರುವ ಇತರ ಬ್ರಹ್ಮವಾದಿಗಳೂ ಸಹ ಇಂದಿನಪರ್ಯಂತವೂ ವೇದನಿಷ್ಣಾತರಾಗಿ ಚಿತ್ತೈಕಾಗ್ರ್ಯದಿಂದ ಶರೀರಕ್ಲೇಶವನ್ನೆಣಿಸದೆ ಉಪಾಸನಮಾಡುತ್ತಾ, ತತ್ವವನ್ನರಸುತ್ತಿದ್ದರೂ, ಸರ್ವಸಾಕ್ಷಿಯಾದ ಪರಮಾತ್ಮನನ್ನು ಕಾಣಲಿಲ್ಲ ॥ ೪೪ ॥ ಇವರು ಅಪಾರವಾಗಿಯೂ ಅತಿವಿಶಾಲವಾಗಿಯೂ

ರಂತ ಉರುವಿಸ್ತರೇ । ಮಂತ್ರಲಿಂಗೈರ್ವ್ಯವಚ್ಛಿನ್ನಂ ಭಜಂತೋ ನವಿದುಃ
ಪರಂ ॥೪೫॥ ಯದಾ ಯಮನುಗೃಹ್ಣಾತಿ ಭಗವಾನಾತ್ಮಭಾವಿತಃ । ಸ
ಜಹಾತಿ ಮತಿಂ ಲೋಕೇ ವೇದೇಚ ಪರಿನಿಷ್ಠಿತಾಂ ॥ ೪೬ ॥ ತಸ್ಮಾತ್ಕ
ರ್ಮಸು ಬರ್ಹಿಷ್ಮನ್ನಜ್ಞಾನಾದರ್ಥಕಾಶಿಷು । ಮಾsರ್ಥದೃಷ್ಟಿಂ ಕೃಥಾ
ಶ್ರೋತ್ರಸ್ಪರ್ಶಿಷ್ವಸ್ಪೃಷ್ಟವಸ್ತುಷು॥೪೭॥ಸ್ವಂ ಲೋಕಂ ನವಿದುಸ್ತೇ
ವೈ ಯತ್ರದೇವೋ ಜನಾರ್ದನಃ।ಆಹುರ್ಧೂಮ್ರಧಿಯೋ ವೇದಂ ಸಕರ್ಮ
ಕಮತದ್ವಿದಃ॥೪೮॥ ಆಸ್ತೀರ್ಯ ದರ್ಭೈಃ ಪ್ರಾಗಗ್ರೈಃ ಕಾರ್ತ್ಸ್ನ್ಯೇನ ಕ್ಷಿತಿ

ವ್ಯವಚ್ಛಿನ್ನಂ - ನಿಶ್ಚಯಿಸಲ್ಪಟ್ಟ ಇಂದ್ರಾದಿರೂಪಗಳನ್ನು, ಭಜಂತಃ - ಧ್ಯಾನಿಸುತ್ತಾ, ಪರಂ - ಪರಮಾ
ತ್ಮನನ್ನು, ನವಿದುಃ - ತಿಳಿಯಲಾರರು, ಯದಾ - ಯಾವಾಗ, ಆತ್ಮಭಾವಿತಃ - ಮನಸ್ಸಿನಲ್ಲಿ ಧ್ಯಾನಿಸಲ್ಪಟ್ಟ,
ಭಗವಾನ್ - ಭಗವಂತನು, ಯಂ - ಯಾವನನ್ನು, ಅನುಗೃಹ್ಣಾತಿ - ಅನುಗ್ರಹಿಸುವನೋ, ಸಃ - ಅವ
ನು, ಲೋಕೇ - ಲೋಕವ್ಯವಹಾರದಲ್ಲಿಯೂ, ವೇದೇಚ - ಕರ್ಮಮಾರ್ಗದಲ್ಲಿಯೂ, ಪರಿನಿಷ್ಠಿತಾಂ -
ನೆಲೆಗೊಂಡಿರುವ, ಮತಿಂ - ಬುದ್ಧಿಯನ್ನು, ಜಹಾತಿ - ಬಿಡುತ್ತಾನೆ ॥೪೬॥

ಬರ್ಹಿಷ್ಮನ್ - ಪ್ರಾಚೀನಬರ್ಹಿಯೆ ! ತಸ್ಮಾತ್ - ಆದುದರಿಂದ, ಅಜ್ಞಾನಾತ್ - ಅಜ್ಞಾನದಿಂದ,
ಅರ್ಥಕಾಶಿಷು - ಪರಮಾರ್ಥದಂತೆ ತೋರುವ, ಶ್ರೋತ್ರಸ್ಪರ್ಶಿಷು - ಕಿವಿಗಿಂಪಾಗಿರುವ, ಅಸ್ಪೃಷ್ಟವ
ಸ್ತುಷು - ತತ್ವವನ್ನು ನೋಡದಿರುವ, ಕರ್ಮಸು - ಕರ್ಮಗಳಲ್ಲಿ, ಅರ್ಥದೃಷ್ಟಿಂ - ಪುರುಷಾರ್ಥಬು
ದ್ಧಿಯನ್ನು, ಮಾಕೃಥಾಃ - ಮಾಡಬೇಡ, ॥೪೭॥ ಯಾರು, ಧೂಮ್ರಧಿಯಃ - ಮಲಿನ ಬುದ್ಧಿಗಳಾಗಿ,
ವೇದಂ - ವೇದವನ್ನು, ಸಕರ್ಮಕಂ - ಕರ್ಮಪರವನ್ನಾಗಿ, ಆಹುಃ - ಹೇಳುವರೋ, ತೇವೈ - ಅವರು,
ಅತದ್ವಿದಃ - ವೇದವನ್ನರಿತವರಲ್ಲ, ಜನಾರ್ದನೋದೇವಃ - ಭಗವಂತನು, ಯತ್ರ - ಎಲ್ಲಿರುವನೋ, ಸ್ವಂ-
ಸ್ವರೂಪಭೂತವಾದ, ಲೋಕಂ - ಆ ಲೋಕವನ್ನು, ನವಿದುಃ - ತಿಳಿಯರು ॥೪೮॥ ಪ್ರಾಗಗ್ರೈಃ - ಪೂ

ಇರುವ ಶಬ್ದಬ್ರಹ್ಮರೂಪವಾದ ವೇದದಲ್ಲಿ ಸಂಚರಿಸುತ್ತಾ,ವಜ್ರ,ಹಸ್ತತ್ವಾದಿ ಗುಣಗಳಿಂದ
ಕೂಡಿದ ಇಂದ್ರಾದಿ ದೇವತೆಗಳನ್ನು ಪ್ರತಿಪಾದಿಸುವ ಮಂತ್ರಲಿಂಗಗಳಿಂದ ಪರಿಚ್ಛಿನ್ನ
ಳಾದ ಆ ದೇವತಾ ರೂಪಗಳನ್ನು ಭಜಿಸಿದರೂ, ಅಪರಿಚ್ಛಿನ್ನನಾದ ಪರಮೇಶ್ವರನನ್ನು ಅರಿ
ಯರು ॥೪೫॥ ಯಾವಾಗ ಭಗವಂತನು ಮನಸ್ಸಿನಲ್ಲಿ ಭಾವಿಸಲ್ಪಟ್ಟವನಾಗಿ ಯಾವನನ್ನು ಅನುಗ್ರ
ಹಿಸುವನೋ, ಆಗ ಅವನು ಲೋಕ ವ್ಯಾಪಾರಗಳಲ್ಲಿಯೂ, ವೇದೋಕ್ತಗಳಾದ ಕರ್ಮಗ
ಳಲ್ಲಿಯೂ ಇರುವ ಕಾಮನಾ ಬುದ್ಧಿಯನ್ನು ಬಿಡುವನು ॥ ೪೬ ॥ ಅಯ್ಯಾ ರಾಜೇಂದ್ರನೆ!
ಆದುದರಿಂದ ಪರಮಾರ್ಥದಂತೆ ತೋರುತ್ತಾ, ಫಲನಿರೂಪಣಾದಿಗಳಿಂದ ಶ್ರೋತ್ರಗಳ ಕಿವಿ
ಗಳಿಗೆ ಇಂಪನ್ನುಂಟುಮಾಡಿದರೂ, ತತ್ವಕ್ಕೆ ದೂರವಾಗಿರುವ ಕರ್ಮಗಳಲ್ಲಿ, ಅಜ್ಞಾನದಿಂದ
ಪುರುಷಾರ್ಥ ಬುದ್ಧಿಯನ್ನು ಮಾಡಬೇಡ ॥ ೪೭ ॥ ವೇದೋಕ್ತಕರ್ಮಗಳೇ ಸ್ವರ್ಗಾದಿ
ಸಾಧನಗಳೆಂದು ವೇದಪಾಠಕರು ಹೇಳಬಹುದಾದರೂ,ವೇದಗಳನ್ನು ಕರ್ಮಪ್ರತಿಪಾದಕಗ
ಳನ್ನಾಗಿ ಹೇಳುವವರು ಜಡಮತಿಗಳೇ ಹೊರತು ವೇದಾರ್ಥವನ್ನು ಬಲ್ಲವರಲ್ಲ. ಅವರು
ಸರ್ವವ್ಯಾಪಕನಾಗಿಯೂ ಸ್ವರೂಪ ಭೂತನಾಗಿಯೂ ಇರುವ ಪರಮಾತ್ಮನನ್ನೂ ಅರಿತ
ವರೂ ಅಲ್ಲ ॥೪೮॥ ಅಕಟಾ ರಾಜನೆ ! ನೆಲದಮೇಲೆಲ್ಲಾ ಪೂರ್ವಾಗ್ರಗಳಾದ ದರ್ಭೆಗಳನ್ನು

ಮಂಡಲಂ । ಸ್ತಬ್ಧೋ ಬೃಹದ್ವಧಾ ನ್ಮಾನೀ ಕರ್ಮ ನಾವೈಷಿ ಯತ್ಪರಂ । ತತ್ಕರ್ಮ ಹರಿತೋಷಂ ಯತ್ಸಾವಿದ್ಯಾ ತನ್ಮತಿ ರ್ಯಯಾ॥೪೯॥ ಹರಿ ರ್ದೇಹಭೃತಾ ಮಾತ್ಮಾ ಸ್ವಯಂಪ್ರಕೃತಿ ರೀಶ್ವರಃ।ತತ್ಪಾದಮೂಲಂ ಶರಣಂ ಯತಃ ಕ್ಷೇಮೋ ನೃಣಾ ಮಿಹ ॥೫೦॥ ಸವೈ ಪ್ರಿಯತಮ ಶ್ಚಾತ್ಮಾ ಯತೋ ನ ಭಯ ಮಣ್ವಪಿ । ಇತಿ ವೇದ ಸವೈವಿದ್ವಾನ್ ಯೋ ವಿದ್ವಾನ್ ಸಗುರು ರ್ಹರಿಃ ॥೫೧॥ ಪ್ರಶ್ನಏವಂಹಿ ಸಂಛಿನ್ನೋ ಭವತಃ ಪುರುಷರ್ಷಭ ! । ಅತ್ರ ಮೇ ವದತೋ ಗುಹ್ಯಂ ನಿಶಾಮಯ ಸುನಿಶ್ಚಿತಂ॥೫೨॥ ಕ್ಷುದ್ರಂಚರಂ ಸುಮ

---

ವಾಗ್ರಗಳಾದ, ದರ್ಭೈಃ - ದರ್ಭೆಗಳಿಂದ, ಕಾರ್ತ್ಸ್ನ್ಯೇನ - ಸಂಪೂರ್ಣವಾಗಿ, ಕ್ಷಿತಿಮಂಡಲಂ -ಭೂಮಿಯನ್ನು, ಆಸ್ತೀರ್ಯ - ಹರಡಿ, ಬೃಹದ್ವಧಾತ್ - ಅನೇಕ ಪಶುಗಳ ವಧೆಯಿಂದ, ಮಾನೀ - ಸೋಮಯಾಜಿಯೆಂದು ಗರ್ವಿಸುತ್ತಾ, ಸ್ತಬ್ಧಃ-ಧೂರ್ತನಾಗಿ, ಕರ್ಮ-ಕರ್ಮತತ್ವವನ್ನೂ, ಪರಂಚ-ಪರತತ್ವವನ್ನೂ, ನಾವೈಷಿ-ತಿಳಿಯಲಿಲ್ಲ,ಯತ್-ಯಾವುದು, ಹರಿತೋಷಂ-ಭಗವಂತನನ್ನು ಸಂತೋಷಗೊಳಿಸುವುದು, ಸ್ಯಾತ್-ಆದೀತೋ,ತತ್- ಅದು, ಕರ್ಮ-ಕರ್ಮವು, ಯಯಾ -ಯಾವುದರಿಂದ, ತನ್ಮತಿಃ-ಭಗವಂತನಲ್ಲಿಭಕ್ತಿಯು, ಭವೇತ್ - ಆದೀತೋ, ಸಾ - ಅದು, ವಿದ್ಯಾ - ವಿದ್ಯೆಯು, ॥೪೯॥ ಹರಿಃ - ಹರಿಯು, ದೇಹಭೃತಾಂ - ಪ್ರಾಣಿಗಳಿಗೆ, ಆತ್ಮಾ - ಆತ್ಮರೂಪನು, ಸ್ವಯಂ - ಸ್ವತಂತ್ರನಾದ. ಪ್ರಕೃತಿಃ - ಕಾರಣವು, ಈಶ್ವರಃ - ಅಧಿಪತಿಯು, ಇಹ - ಈಲೋಕದಲ್ಲಿ, ಯತಃ - ಯಾವುದರಿಂದ, ನೃಣಾಂ - ಮನುಷ್ಯರಿಗೆ, ಕ್ಷೇಮಃ - ಕ್ಷೇಮವಾಗುವುದೋ, ತತ್ಪಾದಮೂಲಂ - ಆತನ ಪಾದಮೂಲವೇ, ಶರಣಂ - ರಕ್ಷಕವು- ಯತಃ - ಯಾವುದರಿಂದ, ಅಣ್ವಪಿ - ಸ್ವಲ್ಪವೂ, ಭಯಂ - ಭಯವು, ನ - ಇಲ್ಲವೋ, ಸವೈ - ಆತನೇ, ಪ್ರಿಯತಮಃ-ಅತ್ಯಂತ ಪ್ರಿಯನಾದ, ಆತ್ಮಾ- ಆತ್ಮನು, ಇತಿ-ಇದನ್ನು, ಯಃ-ಯಾವನು, ವೇದ-ಬಲ್ಲನೋ ಸವೈ-ಅವನೇ, ವಿದ್ವಾನ್-ಜ್ಞಾನಿಯು, ಯಃ- ಯಾವನು, ವಿದ್ವಾನ್-ಜ್ಞಾನಿಯೋ, ಸಃ-ಅವನು, ಗುರುಃ-ಗುರುವು, ಹರಿಃ- ಅವನೇಹರಿಯು ॥೫೧॥ ಪುರುಷರ್ಷಭ-ಪುರುಷಶ್ರೇಷ್ಠನೆ ! ಏವಂ-ಇಂತು, ಭವತಃ-ನಿನ್ನ, ಪ್ರಶ್ನಃ - ಪ್ರಶ್ನೆಯು, ಸಂಛಿನ್ನಃ - ನಿವಾರಿಸಲ್ಪಟ್ಟಿತು, ಅತ್ರ - ಈ ವಿಷಯದಲ್ಲಿ, ವದತಃ - ಹೇಳುವ, ಮೇ - ನನ್ನ, ಸುನಿಶ್ಚಿತಂ - ಸಿದ್ಧಾಂತವನ್ನು, ನಿಶಾಮಯ - ಲಾಲಿಸು, ॥೫೨॥ ಕ್ಷುದ್ರಂಚರಂ - ಅಲ್ಪಾ

---

ಹರಡಿ, ಹಿಂಡುಹಿಂಡಾಗಿ ಪಶುಗಳನ್ನು ಕೊಂದು ‘‘ನಾನೇ ಆಹಿತಾಗ್ನಿಯು, ಸೋಮಯಾಜಿಯು ’’ ಎಂದು ಹೆಮ್ಮೆಗೊಳ್ಳುತ್ತಾ, ಸರ್ವೋತ್ತಮವಾದ ಕರ್ಮತತ್ವವನ್ನೇ ಅರಿಯದೆ ಮೂರ್ಖನಾದೆಯಲ್ಲಾ ! ಈಗಲಾದರೂ ಕರ್ಮಸ್ವರೂಪವನ್ನು ತಿಳಿ. ಭಗವನ್ಮನಃಪ್ರೀತಿಯನ್ನು ಮಾಡುವುದಾವುದೋ ಅದೇ ಕರ್ಮವು ಆ ಭಗವಂತನಲ್ಲಿ ಅಚಂಚಲವಾಗಿ ನಿಲ್ಲುವ ಬುದ್ಧಿ ಯಾವುದೋ ಅದೇ ವಿದ್ಯೆಯು ॥ ೪೯ ॥ ಶ್ರೀ ಹರಿಯೇ ಪ್ರಾಣಿಗಳಿಗೆ ಆತ್ಮನು. ಆತನೇ ಜಗತ್ತಿಗೆ ಕಾರಣನು. ಆತನ ಪಾದಾಶ್ರಯವೇ ಲೋಕಕ್ಕೆ ರಕ್ಷಕವು. ಅದೇ ಪ್ರಾಣಿಗಳಿಗೆ ಕ್ಷೇಮಪ್ರದವು ‘‘ ಯಾರನ್ನು ನಂಬಿದವರಿಗೆ ಸ್ವಲ್ಪವಾದರೂ ಭಯವೆಂಬುದಿಲ್ಲವೋ, ಅವನೇ ಪ್ರಾಣಿಗಳಿಗೆ ಪರಮಪ್ರಿಯನಾದ ಆತ್ಮನು ’’ ಎಂಬುದನ್ನು ಬಲ್ಲವನೇ ಜ್ಞಾನಿಯೆನಿಸುವನು. ಅಂತಹ ಜ್ಞಾನಿಯೇ ಗುರುವು. ಆ ಗುರುವೇ ದೈವವು ॥ ೫೧ ॥ ಅಯ್ಯಾ ರಾಜೇಂದ್ರನೇ ! ನೀನು ಮಾಡಿದ ಪ್ರಶ್ನೆಗೆ ಇಂತು ಸಮಾಧಾನವನ್ನು ಹೇಳಿದೆನು.

ನಸಾಂ ಶರಣೇ ಮಿಥಿತ್ವಾ ರಕ್ತಂ ಷಡಂಘ್ರಿಗಣಸಾಮಸು ಲುಬ್ಧಕರ್ಣಂ ।
ಅಗ್ರೇವೃಕಾ ನಸುತೃಪೋ ವಿಗಣಯ್ಯ ಯಾಂತಂ ಪೃಷ್ಠೇ ಮೃಗಂ ಮೃಗಯ
- ಲುಬ್ಧಕಬಾಣಭಿನ್ನಂ ॥೫೪॥ವಾಕ್ಯಂ॥ ಸುಮನಸ್ಸಮಧರ್ಮಣಾಂ ಸ್ತ್ರೀಣಾಂ
ಶರಣ ಆಶ್ರಮೇ ಪುಷ್ಪಮಧುಗಂಧವತ್ ಕ್ಷುದ್ರತಮಂ ಕಾಮ್ಯಕರ್ಮವಿ
ಪಾಕಜಂ ಕಾಮಸುಖಲವಂ ಜೈಹ್ವ್ಯೌಪಸ್ಥ್ಯಾದಿ ವಿಚಿನ್ವಂತಂ ಮಿಥುನೀ
ಭೂಯ ತದಭಿನಿವೇಶಿತ ಮನಸಂ ಷಡಂಘ್ರಿಗಣ ಸಾಮಗೀತವ ದತಿಮನೋ

ಹಾರವುಳ್ಳ, ಸುಮನಸಾಂ - ಪುಷ್ಪಗಳಿಗೆ, ಶರಣೇ-ಸ್ಥಾನವಾದ ತೋಟದಲ್ಲಿ, ಮಿಥಿತ್ವಾ - ಹೆಣ್ಣಿನೊಡಗೂಡಿ, ರಕ್ತಂ - ಆಸಕ್ತವಾದ, ಷಡಂ....ಸು - ಆರಡಿಗಳ ಸಂಗೀತದಲ್ಲಿ, ಲುಬ್ಧಕರ್ಣಂ - ಆದರಗೊಂಡ ಕಿವಿಗಳುಳ್ಳ, ಅಗ್ರೇ - ಮುಂದಿರುವ, ಅಸುತೃಪಃ - ಪ್ರಾಣಹಾರಕಗಳಾದ. ವೃಕಾನ್- ತೋಳಗಳನ್ನು, ಅವಿಗಣಯ್ಯ - ಲೆಕ್ಕಿಸದೆ, ಪೃಷ್ಠೇ - ಹಿಂದುಗಡೆ, ಯಾಂತಂ- ಹೋಗುತ್ತಿರುವ, ಲುಬ್ಧ····ನ್ನಂ - ಬೇಡನ ಬಾಣದಿಂದ ಸೀಳಲ್ಪಟ್ಟ, ಮೃಗಂ - ಮೃಗವನ್ನು, ಮೃಗಯ - ನೋಡು ||೫೩||

(ಈ ಅರ್ಥವೇ ೫೪ ನೆಯ ವಾಕ್ಯದಲ್ಲಿ ನಿರೂಪಿಸಲ್ಪಡುವುದರಿಂದ ಪ್ರತಿಪದಾರ್ಥವನ್ನು ಬರೆಯಲಿಲ್ಲ) ಸತ್ವಂ - ಆ ನೀನು, ಆತ್ಮನಃ - ನಿನ್ನ, ಮೃಗಚೇಷ್ಟಿತಂ-ಮೃಗಸ್ವಭಾವವನ್ನು, ವಿಚಕ್ಷ್ಯ -ವಿಚಾರಿಸಿ, ಅಂತರ್ಹೃದಿ - ಹೃದಯದಲ್ಲಿ, ಚಿತ್ತಂ - ಮನಸ್ಸನ್ನು, ಚಿತ್ತೇ - ಮನಸ್ಸಿನಲ್ಲಿ, ಕರ್ಣಧುನೀಂಚ - ಹೊರಗಣ ಇಂದ್ರಿಯವೃತ್ತಿಗಳನ್ನೂ, ನಿಯಚ್ಛ - ತಡೆ, ಅಸ··ಥಂ, ಅಸತ್ತಮ - ಕಾಮುಕರ, ಯೂಥ - ಸಮೂಹದ, ಗಾಥಂ - ಕಥೆಗಳುಳ್ಳ, ಅಂಗನಾಶ್ರಮಂ - ಗೃಹಾಶ್ರಮವನ್ನು, ಜಹಿ-ಜಯಿಸು, ಹಂಸಶರಣಂ - ಜೀವರಿಗಾಶ್ರಯನಾದ ಪರಮಾತ್ಮನನ್ನು. ಪ್ರೀಣೀಹಿ - ಪ್ರೀತಿಗೊಳಿಸು, ಕ್ರಮೇಣ - ಕ್ರಮ

ಇನ್ನು ನಿನಗೊಂದು ರಹಸ್ಯವನ್ನು ಹೇಳುವೆನು ಕೇಳು ॥ ೫೩ ॥ ಹೂಗಳಿಗೆ ನೆಲೆಯಾದ ತೋಟದಲ್ಲಿ, ತುಚ್ಛವಾದ ಹುಲ್ಲನ್ನು ಮೇಯುತ್ತಾ, ಸ್ತ್ರೀಮೃಗದಿಂದ ಕೂಡಿ ಆಸೆಯಿಂದ ತುಂಬಿಗಳ ಗಾನಕ್ಕೆ ಕಿವಿಗೊಟ್ಟು, ಮುಂಗಡೆಯಲ್ಲಿರುವ ಪ್ರಾಣಾಪಹಾರಕಗಳಾದ ತೋಳಗಳನ್ನೂ ಲೆಕ್ಕಿಸದೆ, ಬೆನ್ನಟ್ಟಿಬರುವ ಕಿರಾತನ ಬಾಣದಿಂದ ಪೆಟ್ಟುತಿಂದು ಓಡುತ್ತಿರುವ ಹುಲ್ಲೆಯನ್ನು ಕಂಡೆಯಾ?॥೫೪॥ ಇದರ ತತ್ವಾರ್ಥವನ್ನು ಹೇಳುವೆನು ಕೇಳು. ಹೂಗಳಂತೆ ಕಣ್ಣಿಗಿಂಪಾಗಿರುವ ಸ್ತ್ರೀಯರಿಗೆ ಆಸರೆಯಾದ ಗೃಹಸ್ಥಾಶ್ರಮದಲ್ಲಿ, ಹೂಗಳ ವಾಸನೆಯಂತೆ ಕ್ಷಣಿಕಗಳಾದ ಕಾಮ್ಯಕರ್ಮಗಳಿಗೆ ಫಲವೆನಿಸಿದ ಕಾಮಸುಖಲೇಶವನ್ನು ಅರಸುತ್ತಾ, ಹೆಂಗಸರೊಡಗೂಡಿ ಆ ಕಾಮಕ್ರೀಡಾದಿಗಳಲ್ಲಿ ಅಭಿನಿವೇಶಗೊಂಡು, ಭ್ರಮರಘೋಂಕಾರದಂತೆ ಅತಿ ಮನೋಹರವಾದ ಲಲನೆಯರ ಸವಿನುಡಿ ಮೊದಲಾದವುಗಳಿಂದ ವಂಚಿತನಾಗಿ,ಮುಂದೆ ತೋಳಗಳಂತೆ ತನ್ನ ಪ್ರಾಣಗಳನ್ನು ಅಪಹರಿಸುವ ಹಗಲಿರಳುಗಳೆಂಬ ಕಾಲವನ್ನೂ ಗಣಿಸದೇ, ಮನೆಯಲ್ಲಿ ವಿಹರಿಸುತ್ತಾ,ಹಿಂದುಗಡೆಯಲ್ಲಿಯೇ ಕಾಣದಂತೆ ಹೊಂಚುಹಾಕುತ್ತಿರುವ ಮೃತ್ಯುವಿನಿಂದ ಪೆಟ್ಟುತಿನ್ನುತ್ತಾ, ಹುಲ್ಲೆಯಂತೆ ಸ್ತ್ರೀಯರಿಗೆ ಅಡಿಯಾಳಾಗಿರುವ ನಿನ್ನನ್ನೇ ಮೃಗವೆಂದು ತಿಳಿ. ,, ಸಾರಭೂತವಾದ ಸಂಗತಿಯನ್ನು ಹೇಳುವೆನು ಕೇಳು. ಮೃತ್ಯುವೆಂಬ ಬೇಟೆಗಾರನು ಪ್ರಾಣಿಗಳೆಂಬ ಮೃಗಗಳನ್ನು ಬೇಟೆಯಾಡುವನೆಂಬುದನ್ನು ಚೆನ್ನಾಗಿ ಯೋಚಿಸಿ, ಶಬ್ದಾದಿ ವಿಷಯಗಳಲ್ಲಿ ಅಲೆದಾಡುವ ಇಂದ್ರಿಯವೃತ್ತಿಗಳನ್ನು ಮನ

ಹರ ವನಿತಾಗಿಜ ನಾಮಾಲಾಪೇಷ್ವತಿತರಾ ಮತಿಪ್ರಲೋಭಿತಕರ್ಣ ಮಗ್ರೇವೃ
ಕಯೂಥವ ದಾತ್ಮನ ಆಯ.ು ರ್ಹರತೋಽಹೋರಾತ್ರಾಂತರ್ ಕಾಲಲವವಿಶೇ
ಷಾ ನವಿಗಣಯ್ಯ ಗೃಹೇಷು ವಿಹರಂತಂ ಪೃಷ್ಠತ ಏವ ಪರೋಕ್ಷ ಮನುಪ್ರ
ವೃತ್ತೋ ಲುಬ್ಧಕಃ ಕೃತಾಂತೋಂತಶ್ಶರೇಣ ಯಮಿಹ ಪರಾವಿಧ್ಯತಿ ತಮಿ
ಮ ಮಾತ್ಮಾನ ಮಹೋರಾಜನ್! ಭಿನ್ನಹೃದಯಂ ದ್ರಷ್ಟು ಮರ್ಹಸೀತಿ॥೫೪॥
ಸತ್ವಂ ವಿಚಕ್ಷ್ವ ಮೃಗಚೇಷ್ಟಿತ ಮಾತ್ಮನೋಂಽತಶ್ಚಿತ್ತಂ ನಿಯಚ್ಛ ಹೃದಿ
ಕರ್ಣಧುನೀಂಚ ಚಿತ್ತೇ । ಜಹ್ಯಂಗನಾಶ್ರಮ ಮಸತ್ತಮಯೂಥಗಾಥಂ
ಪ್ರೀಣೀಹಿ ಹಂಸಶರಣಂ ವಿರಮ ಕ್ರಮೇಣ॥೫೫॥ ಪ್ರಾಚೀನಬರ್ಹಿಃ ॥ ಶ್ರುತ
ಮನ್ವೀಕ್ಷಿತಂ ಬ್ರಹ್ಮನ್! ಭಗವಾನ್ ಯದಭಾಷತ । ನೈತ ಜ್ಜಾನಂತ್ಯುಪಾಧ್ಯಾ
ಯಾಃ ಕಿಂ ನಬ್ರೂಯು ರ್ವಿದು ರ್ಯದಿ ॥೫೬॥ ಸಂಶಯೋಽತ್ರ ತು ಮೇ ವಿ
ಪ್ರ ! ಸಂಛಿನ್ನಸ್ತತ್ಕೃತೋ ಮಹಾನ್ । ಋಷಯೋಪಿಹಿ ಮುಹ್ಯಂತಿ ಯ
ತ್ರನೇಂದ್ರಿಯ ವೃತ್ತಯಃ ॥೫೭॥ ಕರ್ಮಾಣ್ಯಾರಭತೇ ಯೇನ ಪುಮಾನಿಹ

---

ವಾಗಿ, ವಿರಮ - ವಿರಕ್ತನಾಗು ॥೫೫॥ ಪ್ರಾಚೀನಬರ್ಹಿಯು ಹೇಳುತ್ತಾನೆ, ಬ್ರಹ್ಮನ್ - ನಾರದನೆ ! ಭಗವಾನ್ - ನೀನು, ಯತ್ - ಯಾವುದನ್ನು, ಅಭಾಷತ - ಹೇಳಿದೆಯೋ, ಅದು, ಶ್ರುತಂ - ಕೇಳಲ್ಪಟ್ಟಿತು। ಅನ್ವೀಕ್ಷಿತಂ - ವಿಚಾರಿಸಲ್ಪಟ್ಟಿತು, ಉಪಾಧ್ಯಾಯಾಃ-ಕರ್ಮೋಪದೇಷ್ಟೃಗಳಾದ ನನ್ನ ಗುರುಗಳು, ಏತತ್ - ಇದನ್ನು, ನಜಾನಂತಿ - ತಿಳಿಯಲಿಲ್ಲ, ಯದಿವಿದುಃ - ತಿಳಿದಿದ್ದಲ್ಲಿ, ಕಿಂನಬ್ರೂಯುಃ - ಯಾಕೇಹೇಳಲಿಲ್ಲ ॥೫೬॥ ವಿಪ್ರ - ಬ್ರಾಹ್ಮಣನೆ ! ತತ್ಕೃತಃ - ಅವರಿಂದುಂಟುಮಾಡಲ್ಪಟ್ಟಿದ್ದ, ಮಹಾನ್ - ದೊಡ್ಡದಾದ, ಮೇ - ನನ್ನ, ಸಂಶಯಃ - ಸಂಶಯವು, ಸಂಛಿನ್ನಃ - ಕಳೆಯಲ್ಪಟ್ಟಿತು, ಅತ್ರ - ಈ ವಿಷಯದಲ್ಲಿ, ಸಂಶಯವೇನೆಂದರೆ, ಯತ್ರ - ಎಲ್ಲಿ, ಇಂದ್ರಿಯವೃತ್ತಯಃ - ಇಂದ್ರಿಯವೃತ್ತಿಗಳು, ನ - ಪ್ರವರ್ತಿಸುವುದಿಲ್ಲವೋ, ತತ್ರ - ಅಲ್ಲಿ, ಋಷಯೋಪಿ - ಋಷಿಗಳೂ, ಮುಹ್ಯಂತಿ - ಮರುಳಾಗುವರು ॥೫೭॥ ಯೇನ - ಯಾವಶರೀರದಿಂದ, ಕರ್ಮಾಣಿ - ಪುಣ್ಯಪಾಪಕರ್ಮಗಳನ್ನು, ಆರಭತೇ - ಮಾಡುವನೋ, ತಂ - ಆ ಶರೀರವನ್ನು, ಇಹೈವ - ಇಲ್ಲಿಯೇ, ವಿಹಾಯ - ತೊರೆದು, ಅಮುತ್ರ - ಪರಲೋಕದಲ್ಲಿ, ಅನ್ಯೇನದೇಹೇನ - ಬೇರೇಶರೀರದಿಂದ, ಜುಷ್ಟಾನಿ - ಅನುಭವಿಸಲ್ಪಟ್ಟವುಗಳನ್ನು, ಸಃ - ಆ ಜೀವನು, ಅಶ್ನುತೇಯತ್ - ಪ

---

ಸ್ಸಿನಲ್ಲಿಯೂ, ಆ ಮನಸ್ಸನ್ನು ಹೃದಯದಲ್ಲಿಯೂ ನಿರೋಧಿಸು. ಕಾಮುಕರ ಕಾಮಕಥಾಲಾಪಗಳಿಂದ ನಿಬಿಡವಾದ ಗೃಹಸ್ಥಾಶ್ರಮವನ್ನು ಬಿಡು. ಜೀವರಿಗಾಶ್ರಯನಾದ ಪರಮಾತ್ಮನನ್ನು ಸಂತೋಷಗೊಳಿಸು. ಕ್ರಮವಾಗಿ ಜಗದ್ವ್ಯಾಪಾರದಿಂದ ವಿರತನಾಗು, ಎಂದುಪದೇಶಿಸಿದನು ॥ ೫೫ ॥ ಅದನ್ನು ಕೇಳಿ ಪ್ರಾಚೀನಬರ್ಹಿಯು ನಾರದಮುನಿಯನ್ನು ಕುರಿತು ಅಯ್ಯಾ ಬ್ರಾಹ್ಮಣೋತ್ತಮನೆ ! ಪೂಜ್ಯನಾದ ನೀನು ಉಪದೇಶಿಸಿದ ತತ್ವವನ್ನು ಕೇಳಿದೆನು. ವಿಚಾರವನ್ನೂ ಮಾಡಿದೆನು. ನನಗೆ ಕರ್ಮೋಪದೇಶವನ್ನು ಮಾಡಿದ ಗುರುಗಳು ಈ ತತ್ವವನ್ನು ತಿಳಿದಿರಲಿಲ್ಲವೆಂದು ತೋರುವುದು. ತಿಳಿದಿದ್ದಲ್ಲಿ ಅವರು ನನಗೆ ತಿಳಿಸದೇ ಇರುತ್ತಿರಲಿಲ್ಲ ॥೫೬॥ ಆದುದರಿಂದ ಕರ್ಮೋಪದೇಷ್ಟೃಗಳಾದ ಉಪಾಧ್ಯಾಯರ ವಾಕ್ಯಗಳಿಗೆ ವಿರೋಧಿಗಳಾದ ಭಕ್ತಿ ಜ್ಞಾನ ವೈರಾಗ್ಯಗಳ ವಿಷಯದಲ್ಲಿ ನನಗುಂಟಾಗಿದ್ದ ಸಂಶಯ

ವಿಹಾಯ ತಂ। ಅಮುತ್ರಾಽನ್ಯೇನ ದೇಹೇನ ಜುಷ್ಟಾನಿ ಸದಯಶ್ನುತೇ ॥೫೮॥
* ಇತಿ ವೇದವಿದಾಂ ವಾದಃ ಶ್ರೂಯತೇ ತತ್ರತತ್ರ ಹ । ಕರ್ಮಯತ್ಕ್ರಿಯ
ತೇ ಪ್ರೋಕ್ತಂ ಪರೋಕ್ಷಂ ಸಪ್ರಕಾಶತೇ ॥೫೯॥ ನಾರದಃ ॥ ಯೇನೈವಾರ
ಭತೇ ಕರ್ಮ ತೇನೈವಾಽಮುತ್ರ ತತ್ಪುಮಾನ್ । ಭುಙ್ಕ್ತೇ ಹ್ಯವ್ಯವಧಾನೇನ

ಡೆಯುತ್ತಾನೆ, ॥ ೫೮ ॥ ಇತಿ - ಇಂತು, ತತ್ರತತ್ರ - ಅಲ್ಲಲ್ಲಿ, ವೇದವಿದಾಂ - ವೇದಜ್ಞರ, ವಾದಃ - ಭಾಷಣವು, ಶ್ರೂಯತೇ - ಕೇಳಲ್ಪಡುವುದು, ಪ್ರೋಕ್ತಂ - ವೇದೋಕ್ತವಾದ, ಯತ್ - ಯಾವ ಕರ್ಮವು, ಕ್ರಿಯತೇ - ಮಾಡಲ್ಪಡುವುದೋ, ತತ್ - ಅದು, ಪರೋಕ್ಷಂ - ಮರೆಯಾಗಿ, ನಪ್ರಕಾಶತೇ ಕಾಣುವುದಿಲ್ಲ ॥೫೯॥ ನಾರದನು ಹೇಳುತ್ತಾನೆ, ಪುಮಾನ್ - ಪುರುಷನು (ಜೀವನು), ಯೇನೈವ - ಯಾವ ಶರೀರದಿಂದಲೇ, ಕರ್ಮ - ಕರ್ಮವನ್ನು, ಆರಭತೇ - ಪ್ರಾರಂಭಿಸುವನೋ, ಅಮುತ್ರ - ಪರಲೋಕದಲ್ಲಿ, ತೇನೈವ - ಅದರಿಂದಲೇ, ಲಿಂಗೇನ - ಉಪಾಧಿಭೂತವಾದ, ಮನಸಾ - ಮನಸ್ಸಿನಿಂದ, ಸ್ವಯಂ - ತಾ

ವನ್ನು ನೀನು ತೊಲಗಿಸಿದೆ. ಜಿತೇಂದ್ರಿಯರಾದ ಮಹರ್ಷಿಗಳು ಕೂಡ ಮರುಳಾಗಿಯೂ ಕರ್ಮಗಳನ್ನು ಮಾಡುವರೆಂಬುದು ದಿಟ; ಇನ್ನು ನಮ್ಮಂತವರ ಪಾಡೇನು ? ॥ ೫೭ ॥ "ಈ ಕರ್ಮಗಳ ವಿಷಯದಲ್ಲಿ ನನಗೊಂದು ಸಂಶಯ ವುಂಟಾಗಿರುವುದು. ಏನೆಂದರೆ-- ಜೀವನು ಈ ಲೋಕದಲ್ಲಿ ಯಾವ ಶರೀರದಿಂದ ಕರ್ಮಗಳನ್ನು ಮಾಡುವನೋ, ಆ ಶರೀರ ವನ್ನು ಇಲ್ಲಿಯೇ ಬಿಟ್ಟು ಪರಲೋಕದಲ್ಲಿ ಅನುಭವಿಸಲ್ಪಡುವ ಸ್ವರ್ಗನರಕಾದಿಫಲಗಳ ನ್ನು ಬೇರೊಂದು ರೀರದಿಂದ ಪಡೆಯುತ್ತಾನೆ ॥ ೫೮ ॥ ಎಂಬುದಾಗಿ ಅಲ್ಲಲ್ಲಿ ವೇದವಾದಿ ಗಳು ಹೇಳುವುದನ್ನು ಕೇಳಿರುವೆನು. "ಒಂದು ಶರೀರದಿಂದ ಗಳಿಸಲ್ಪಟ್ಟ ಪುಣ್ಯಪಾಪಗಳ ನ್ನು ಮತ್ತೊಂದು ಶರೀರವು ಅನುಭವಿಸುವುದು" ಎಂಬ ನುಡಿಯು ಯುಕ್ತಿಯುಕ್ತವಲ್ಲ. ಮತ್ತೊಂದು ಸಂಶಯವಾವುದೆಂದರೆ:-ಜನರು ವೇದೋಕ್ತಗಳಾದ ಕರ್ಮಗಳನ್ನು ಮಾಡು ರಷ್ಟೆ. ಆ ಕರ್ಮಗಳು ಉತ್ತರಕ್ಷಣದಲ್ಲಿಯೇ ನಾಶವಾಗುವುವು. ನಷ್ಟಕರ್ಮಗಳಿಂದ ಫಲಾನುಭವವೆಂತು? "ಆ ಕರ್ಮಗಳು ನಾಶವಾಗುವಾಗ ಒಂದು ಅಪೂರ್ವವೆಂಬುದುಂಟಾಗು ವುದು. ಅದು ಫಲಾನುಭವದವರೆಗೂ ಇರುವುದೆಂದು" ಹೇಳುವೆಯೇನು ! ಅಂತಹ ಅ ಪೂರ್ವ ವುಂಟಾಗುವುದರಲ್ಲಿಯೂ ಪ್ರಮಾಣವಿಲ್ಲವಾದುದರಿಂದ ಅದೂ ಕಾಣುವುದಿಲ್ಲ. ಆದ ಕಾರಣ ಇಲ್ಲಿ ಮಾಡಿದ ಕರ್ಮಗಳ ಫಲಗಳನ್ನು ಲೋಕಾಂತದಲ್ಲಿ ಅನುಭವಿಸುವುದೆಂತು ! ಎಂದು ಬೆಸಗೊಂಡನು ॥ ೫೯ ॥

ಅದನ್ನು ಕೇಳಿ ನಾರದ ಮುನಿಯು ಹೇಳುತ್ತಾನೆ. ಅಯ್ಯಾ ರಾಜನೆ ಕೇಳು. ಪುರುಷ ನು ಈ ಲೋಕದಲ್ಲಿ ಯಾವಶರೀರ ದಿಂದ ಕರ್ಮಗಳನ್ನು ಮಾಡುವನೋ, ಪರಲೋಕದಲ್ಲಿ ಅದೇ ಶರೀರ ದಿಂದಲೇ ವ್ಯವಧಾನ ವಿಲ್ಲದೇ ತಾನೇ ಆ ಕರ್ಮ ಫಲಗಳನ್ನು ಅನುಭವಿಸುತ್ತಾ ನೆ. ಕರ್ಮಗಳನ್ನು ಮಾಡುವ ಮತ್ತು ಅನುಭವಿಸುವ ಸ್ಥೂಲಶರೀರಗಳು ಬೇರೆ ಬೇರೆ ಯಾ

* ವೀ ಸೂತ್ರ॥ ವರ್ಣಾಶ್ರಮಾಶ್ಚ ಸ್ವಕರ್ಮನಿಷ್ಠಾಃ। ಪ್ರೇತ್ಯ ಕರ್ಮಫಲ ಮನುಭೂಯ ತತಃ ಶೇಷೇಣ ವಿಶಿಷ್ಟ ಕುಲ ಜಾತಿರೂಪಾಯು ಶ್ರುತ ವಿತ್ತ ಸುಖಮೇಧಸೋ ಜನ್ಮ ಪ್ರತಿಪದ್ಯಂತೇ । ವಿಷ್ವಂ ಚೋ ವಿಪರೀತಾ ನಶ್ಯಂತಿ ॥

ಲಿಂಗೇನ ಮನಸಾ ಸ್ವಯಂ ||೬೦|| ಶಯಾನ ಮಿಮ ಮುತ್ಸೃಜ್ಯ ಶ್ವಸಂತಂ ಪುರುಷೋಯಥಾ । ಕರ್ಮಾತ್ಮನ್ಯಾಹಿತಂ ಭುಙ್ಕ್ತೇ ತಾದೃಶೇನೇತರೇಣವಾ|| ಮಮೈತೇ ಮನಸಾ ಯದ್ಯ ದಸಾವಹ ಮಿತಿ ಬ್ರುವನ್ । ಗೃಹ್ಣೀಯಾ ತ್ತತ್ಪುಮಾನ್ ರಾದ್ಧಂ ಕರ್ಮಯೇನ ಪುನರ್ಭವಃ ||೬೨|| ‡ ಯಥಾ ೭ ನು ಮೀಯತೇ ಚಿತ್ತ ಮುಭಯೈ ರಿಂದ್ರಿಯೇಹಿತೈಃ । ಏವಂ ಪ್ರಾಗ್ದೇಹಜಂ ಕರ್ಮ

ನು, ತತ್- ಆ ಫಲವನ್ನು ಅವ್ಯವಧಾನೇನ - ಅಂತರವಿಲ್ಲದೆ, ಭುಂಕ್ತೇ- ಅನುಭವಿಸುತ್ತಾನೆ ||೬೦|| ಪುರುಷಃ - ಜೀವನು, ಶಯಾನಂ - ಮಲಗಿರುವ, ಶ್ವಸಂತಂ - ಉಸಿರಾಡುವ, ಇಮಂ - ಸ್ಥೂಲಶರೀರವನ್ನು, ಉತ್ಸೃಜ್ಯ - ತೊರೆದು, ತಾದೃಶೇನ-ಅಂತಹ ಶರೀರದಿಂದಾಗಲಿ, ಇತರೇಣವಾ - ಬೇರೇ ಶರೀರದಿಂದಲಾಗಲಿ, ಆತ್ಮನಿ - ಮನಸ್ಸಿನಲ್ಲಿ, ಆಹಿತಂ - ಇಡಲ್ಪಟ್ಟ, ಕರ್ಮ - ಕರ್ಮವನ್ನು, ಯಥಾ - ಹೇಗೆ, ಭುಂಕ್ತೇ - ಅನುಭವಿಸುವನೋ ಹಾಗೆ ||೬೧|| ಏತೇ-ಪುತ್ರಾದಿಗಳು, ಮಮ - ನನ್ನವರು, ಅಸಾವಹಂ-ನಾನು ಬ್ರಾಹ್ಮಣನು, ಇತಿ - ಎಂದು, ಬ್ರುವನ್-ಹೇಳುತ್ತಾ, ಮನಸಾ-ಮನಸ್ಸಿನಿಂದ, ಯತ್-ಯಾವ ದೇಹವನ್ನು, ಗೃಹ್ಣೀಯಾತ್ - ಗ್ರಹಿಸುವನೋ, ಪುಮಾನ್ - ಜೀವನು, ಯೇನ-ಯಾವುದರಿಂದ, ಪುನರ್ಭವಃ - ಪುನರ್ಜನ್ಮವುಂಟೋ, ರಾದ್ಧಂ-ಸಿದ್ಧವಾದ, ತತ್ಕರ್ಮ - ಆ ಕರ್ಮವನ್ನು, ಗೃಹ್ಣೀಯಾತ್- ಅನುಭವಿಸುವನು ||೬೨|| ಉಭಯೈಃ-ಜ್ಞಾನಕರ್ಮೇಂದ್ರಿಯ ರೂಪಗಳಾದ, ಇಂದ್ರಿಯೇಹಿತೈಃ - ಇಂದ್ರಿಯಪ್ರವೃತ್ತಿಗಳಿಂದ, ಚಿತ್ತಂ - ಮನಸ್ಸು, ಯಥಾ - ಹೇಗೆ, ಅನುಮೀಯತೇ - ಊಹಿಸಲ್ಪಡುವುದೋ, ಏವಂ-ಇಂತು, ಚಿತ್ತವೃತ್ತಿಭಿಃ - ಮನೋವೃತ್ತಿಗಳಿಂದ, ಪ್ರಾಗ್ದೇಹಜಂ - ಮೊದಲಿನಶರೀರದಿಂದ ಮಾಡಲ್ಪಟ್ಟ,

ಗಿದ್ದರೂ ಮನಃ ಪ್ರಧಾನವಾದ ಲಿಂಗಶರೀರವು ಒಂದೇ ಆಗಿರುವುದರಿಂದ ಕೃತನಾಶ ಅಕೃತಾಭ್ಯಾಗಮವೆಂಬ ದೋಷವು ಬರುವುದಿಲ್ಲ||೬೦|| ಇದಕ್ಕೆ ದೃಷ್ಟಾಂತರ ವೇನಂದರೆ. ಲೋಕದಲ್ಲಿ ಪುರುಷನು ಮಲಗಿ ನಿದ್ರಿಸುವಾಗ ಶ್ವಾಸೋಚ್ಛ್ವಾಸಗಳಿಂದ ಬದುಕಿರುವ ಸ್ಥೂಲ ಶರೀರವು ಮಲಗಿದ್ದ ಕಡೆಯಲ್ಲಿಯೇ ಇದ್ದರೂ, ತಾನು ಆ ದೇಹಾಭಿ ಮಾನವನ್ನುಳಿದು, ಕರ್ಮಾನುಗುಣವಾಗಿ ಪ್ರಾಪ್ತವಾದ ಅಂತಹ ಮಾನವ ಶರೀರದಿಂದಾಗಲಿ,ಬೇರೇ ಶರೀರದಿಂದಾಗಲಿ ಸಂಸ್ಕಾರ ರೂಪದಿಂದ ಮನಸ್ಸಿನಲ್ಲಿ ನೆಲಸಿರುವಕರ್ಮವನ್ನಂತನುಭವಿಸುವನೋ, ಅಂತೆಯೇ ಲೋಕಾಂತರದಲ್ಲಿಯೂ ಅನುಭವಿಸುವನು ||೬೧|| ಈ ಸ್ವಪ್ನದೃಷ್ಟಾಂತದಿಂದಲಿಂಗಶರೀರ ವಿಶಿಷ್ಟನಾದ ಜೀವನಿಗೆ ಭೋಕ್ತೃತ್ವವಿರಲಿ. ಆದರೂ ದಾನ ಪ್ರತಿಗ್ರಹಾದಿ ಕರ್ಮಗಳಲ್ಲಿ ಸ್ಥೂಲಶರೀರವೇ ಕರ್ತೃವಾಗಿರುವುದರಿಂದ ಜೀವನಿಗೆ ಕರ್ತೃತ್ವವೆಂತು? ಎಂದರೆ "ಈ ಪುತ್ರಾದಿಗಳು ನನ್ನವರು. ನಾನು ಬ್ರಾಹ್ಮಣನು." ಎಂದು ಮನಸ್ಸಿನಿಂದ ಯಾವ ಯಾವ ದೇಹವನ್ನು ಪರಿಗ್ರಹಿಸುವನೋ, ಆ ಆದೇಹದಿಂದ ಸಿದ್ಧವಾದ ಕರ್ಮವನ್ನು ಲಿಂಗದೇಹದಿಂದ ಕೂಡಿದ ಜೀವನು ಪರಿಗ್ರಹಿಸುವನು. ಅಹಂಕಾರ ಗೃಹೀತವಾದ ಆಕರ್ಮದಿಂದ ಮರಳಿ ಜನ್ಮವುಂಟಾಗುವದು. ಆದುದರಿಂದ, ದೇಹಾಭಿಮಾನಿಯಾದ ಜೀವನಿಗೆಕರ್ತೃತ್ವವೇ ಹೊರತು,ಅಭಿಮಾನ ವಿಷಯವಾದ ಶರೀರಕ್ಕೆ ಕರ್ತೃತ್ವವಿಲ್ಲ.||೬೨|| ಕರ್ಮಗಳು ನಷ್ಟ

‡ ಯುಗಪತ್ ಜ್ಞಾನಾನುತ್ಪತ್ತಿ ರ್ಮನಸೋ ಲಿಂಗಂ (ಅಕ್ಷಪಾದ) ಒಂದೇಕಾಲದಲ್ಲಿ ಶಬ್ದಾದಿ ವಿಷಯಜ್ಞಾನಗಳೆಲ್ಲವೂ ಉಂಟಾಗದಿರುವುದೇ ಮನಸ್ಸುಂಟು ಎಂಬುದಕ್ಕೆ ಕುರುಹು.

ಲಕ್ಷ್ಯತೇ ಚಿತ್ತವೃತ್ತಿಭಿಃ ॥೬೩॥ ನಾನುಭೂತಂಕ್ವಚಾಽನೇನ ದೇಹೇನಾಽ
ದೃಷ್ಟಮಶ್ರುತಂ । ಕದಾಚಿ ದುಪಲಭ್ಯೇತ ಯದ್ರೂಪಂ ಯಾದೃಗಾತ್ಮನಿ ॥
॥ ೬೪ ॥ ತೇನಾಽಸ್ಯ ತಾದೃಶಂ ರಾಜನ್! ಲಿಂಗಿನೋ ದೇಹಸಂಭವಂ । ಶ್ರ
ದ್ಧತ್ಸ್ವಾಽ ನನುಭೂತೋಽರ್ಥೋ ನಮನ ಸ್ಸ್ಪ್ರಷ್ಟು ಮರ್ಹತಿ ॥೬೫॥ ‡
ಮನ ಏವ ಮನುಷ್ಯಸ್ಯ ಪೂರ್ವರೂಪಾಣಿ ಶಂಸತಿ। ಭವಿಷ್ಯತಶ್ಚ ಭದ್ರಂತೇ

ಕರ್ಮ-ಕರ್ಮವೂ, ಲಕ್ಷ್ಯತೇ - ಊಹಿಸಲ್ಪಡುವುದು ॥ ೬೩ ॥ ಅನೇನ - ಈ, ದೇಹೇನ - ಶರೀರದಿಂದ, ಕ್ವಚ - ಒಮ್ಮೆಯೂ, ನಾನುಭೂತಂ- ಅನುಭವಿಸಲ್ಪಡದ, ಅದೃಷ್ಟಂ-ನೋಡಲ್ಪಡದ, ಅಶ್ರುತಂ-ಕೇಳಲ್ಪಡದ, ಯದ್ರೂಪಂ - ಯಾವುದೋ ಒಂದುಬಗೆಯು, ಯಾದೃಕ್ - ಯೆಂತಹುದೊ, ಕದಾಚಿತ್ - ಒಂದೊಂದು ವೇಳೆಯಲ್ಲಿ, ಆತ್ಮನಿ - ಮನಸ್ಸಿನಲ್ಲಿ, ಉಪಲಭ್ಯತೇ- ಹೊಂದಲ್ಪಡುವುದು॥೬೪॥ ರಾಜನ್-ರಾಜನೆ ! ತೇನ - ಅದರಿಂದ, ಅಸ್ಯ - ವಾಸನಾಶ್ರಯನಾದ, ಲಿಂಗಿನಃ - ಜೀವನಿಗೆ, ತಾದೃಶಂ - ಪೂರ್ವಾನುಭವದಿಂದ ಕೂಡಿದ, ದೇಹಸಂಭವಂ - ಮೊದಲಿನ ದೇಹದಿಂದುಂಟಾದ ಕರ್ಮವನ್ನು, ಶ್ರದ್ಧತ್ಸ್ವ-ನಂಬು, ಅನನುಭೂತಃ - ಅನುಭವಿಸಲ್ಪಡದ, ಅರ್ಥಃ - ಅರ್ಥವು, ಮನಃ - ಮನಸ್ಸನ್ನು, ಸ್ಪ್ರಷ್ಟುಂ-ಸೋಕುವುದಕ್ಕೆ, ನಾರ್ಹತಿ-ಅರ್ಹವಾಗುವುದಿಲ್ಲ ॥೬೫॥ ಮನುಷ್ಯಸ್ಯ-ಮನುಷ್ಯನ, ಮನಏವ-ಮನಸ್ಸೇ, ಪೂರ್ವರೂಪಾಣಿ - ಹಿಂದಣ ಶರೀರಗಳನ್ನೂ, ಭವಿಷ್ಯತಃ - ಮುಂದಣ ಶರೀರಗಳನ್ನೂ, ನಭವಿಷ್ಯತಶ್ಚ -

ಗಳಾದಬಳಿಕ ಫಲಾನುಭವವೆಂತು? ಎಂಬ ನಿನ್ನ ಪ್ರಶ್ನೆಗುತ್ತರವನ್ನು ಹೇಳುವೆನು ಕೇಳು. ಚಕ್ಷುರಾದೀಂದ್ರಿಯಗಳಿಗೂ, ರೂಪಾದಿ ವಿಷಯಗಳಿಗೂ ಯಾವಾಗಲೂ ಸಂಬಂಧವಿರಲೇ ಇರುವುದು. ಆದರೂ ಮನಸ್ಸು ಯಾವಾಗ ಯಾವ ಇಂದ್ರಿಯದೊಡನೆ ಸೇರುವುದೋ ಆಗ ಆ ಇಂದ್ರಿಯಕ್ಕೆ ಮಾತ್ರವೇ ವಿಷಯಜ್ಞಾನ ವುಂಟಾಗುವುದು. ಆದುದರಿಂದ ಜ್ಞಾನಕರ್ಮೇಂದ್ರಿಯ ವ್ಯಾಪಾರಗಳಿಂದ ಮನಸ್ಸೆಂಬ ಪದಾರ್ಥ ವುಂಟೆಂದು ಎಂತು ಊಹಿಸಲ್ಪಡುವುದೋ, ಅಂತೆಯೇ ಮನೋವ್ಯಾಪಾರಗಳಿಂದ ಪೂರ್ವಶರೀರ ಜನ್ಯವಾದ ಕರ್ಮವೂ ಊಹಿಸಲ್ಪಡುವುದು ॥೬೩॥ ಮತ್ತು ಈಗಿರುವ ದೇಹದಿಂದ ಯಾವಾಗಲೂ ಎಲ್ಲಿಯೂ, ಅನುಭವಿಸಲ್ಪಡದೆಯೂ, ನೋಡಲ್ಪಡದೆಯೂ, ಕೇಳಲ್ಪಡದೆಯೂ ಇರುವ ಸಂಗತಿಗಳು ಸ್ವಪ್ನ, ಮನೋರಥಾದಿಗಳಲ್ಲಿ ಅನುಭವಕ್ಕೆ ಬರುವುದರಿಂದ ಪೂರ್ವಕರ್ಮ ವುಂಟೆಂದು ಊಹಿಸಲ್ಪಡುವುದು॥೬೪॥ ಅಯ್ಯಾ ರಾಜನೆ ! ಆದುದರಿಂದ ಆ ಅನುಭವಾದಿಗಳಿಂದೊಡಗೂಡಿದ ಲಿಂಗದೇಹಾಭಿಮಾನಿಯಾದ ಜೀವನಿಗೆ, ಪೂರ್ವ ಶರೀರದಿಂದ ಜನಿಸಿದ ಪ್ರಾಚೀನ ಕರ್ಮವುಂಟೆಂಬುದನ್ನು ದಿಟವೆಂದು ನಂಬು. ಮುನ್ನು ಅನುಭವಿಸಲ್ಪಡದಿರುವ ಯಾವ ವಿಷಯವೂ ಮನಸ್ಸಿನಲ್ಲಿ ಹೊಳೆಯುವುದಿಲ್ಲ ॥೬೫॥ ಎಲೈ ರಾಜನೆ ! ನಿನಗೆ ಶ್ರೇಯಸ್ಸಾಗುವುದು. ಇದನ್ನು ಲಾಲಿಸಿಕೇಳು. ಲೋಕದಲ್ಲಿ ಮನಸ್ಸೇ ಪ್ರಾಣಿಗಳಿಗೆ ಪ್ರಾಪ್ತವಾಗಿದ್ದ ಪೂರ್ವದೇಹಗಳನ್ನೂ, ಮುಂದೆ ಬರು

‡ ವಿ. ಮನಸ್ಸೆಂತು ಪೂರ್ವಶರೀರಗಳನ್ನು ಜ್ಞಾಪಿಸುವುದೋ, ಅಂತೆಯೇ ನೀನು ಮುಂದೆ ಸ್ವರ್ಗಾದಿಪುಣ್ಯಲೋಕಗಳಿಗೆ ತೆರಳುವುದನ್ನೂ, ಈ ಲೋಕದಲ್ಲಿ ಸುಖಗಳನ್ನು ಪಡೆವುದನ್ನೂ ಸಹ ಸೂಚಿಸುವುದು. ಅಂತಹಸದ್ಬುದ್ಧಿಯು ಇಲ್ಲದಿದ್ದಲ್ಲಿ ನಿನಗೆ ಇಲ್ಲಿ ರಾಜ್ಯಾಧಿಪತ್ಯವು, ಮುಂದೆಸ್ವರ್ಗಾದಿಭೋಗಗಳೂ ಹೇಗೆ ಉಂಟಾಗುತ್ತಿದ್ದುವು ?

ತಥೈವ ನ ಭವಿಷ್ಯತಃ ॥ ೬೬ ॥ ಅದೃಷ್ಟ ಮಶ್ರುತಂ ಚಾಽತ್ರ ಕ್ವಚಿನ್ಮನಸಿ
ದೃಶ್ಯತೇ । ಯಥಾ ತಥಾಽನುಮಂತವ್ಯಂ ದೇಶಕಾಲಕ್ರಿಯಾಶ್ರಯಂ ॥೬೭॥ ‡

---

ಶರೀರವಿಲ್ಲದುದನ್ನೂ ಶಂಸತಿ- ಹೇಳುವುದು, ತೇ - ನಿನಗೆ, ಭದ್ರಂ - ಮಂಗಳವಾಗಲಿ ॥೬೬॥ ಅದೃಷ್ಟಂ- ಕಾಣಲ್ಪಡದ, ಅಶ್ರುತಂ-ಕೇಳಲ್ಪಡದ, ವಿಷಯವು, ಯಥಾ-ಹೇಗೆ, ಕ್ವಚಿತ್-ಒಮ್ಮೆ, ಮನಸಿ-ಮನಸ್ಸಿನಲ್ಲಿ ದೃಶ್ಯತೇ - ಕಾಣಲ್ಪಡುವುದೋ, ತಥಾ - ಹಾಗೆ, ದೇಶ . . . ಯಂ- ದೇಶ, ಕಾಲ, ಕ್ರಿಯೆಗಳಿಗೆ ಆಶ್ರಯವನ್ನಾಗಿ, ಅನುಮಂತವ್ಯಂ - ತಿಳಿಯಬೇಕು ॥೬೭॥ ಇಂದ್ರಿಯಗೋಚರಃ - ಇಂದ್ರಿಯಗಳಿಗೆ ತೋರುವ

---

ವದೇಹಗಳನ್ನೂ, ಅವುಗಳಲ್ಲಿ ಉತ್ತಮಾಧಮ ಶರೀರಗಳನ್ನೂ, ಶರೀರವೇ ಇಲ್ಲದೆ ಮುಕ್ತನಾಗುವುದನ್ನು ಕೂಡ ತಿಳುಹುವುದು ॥ ೬೬ ॥ ಮನುಷ್ಯನು ಸ್ವಪ್ನವನ್ನನುಭವಿಸುವಾಗ, ಬೆಟ್ಟದ ತುದಿಯಲ್ಲಿ ಸಮುದ್ರವಿರುವಂತೆಯೂ, ಹಗಲು ನಕ್ಷತ್ರಗಳು ಹೊಳೆಯುವಂತೆಯೂ, ತನ್ನ ಶಿರಚ್ಛೇದವನ್ನು ತಾನೇ ಕಾಣುವಂತೆಯೂ, ತೋರುವುದು. ಇವು ಅನುಭೂತಗಳಲ್ಲ. ಆದಕಾರಣ "ಪೂರ್ವಾನುಭೂತಗಳಾದ ವಸ್ತುಗಳೇ ಮನಸ್ಸಿನಲ್ಲಿ ಹೊಳೆಯುವುವು" ಎಂಬ ನುಡಿಯು ಯುಕ್ತವಲ್ಲ, ಎಂಬೆಯೇನೋ ? ಪರ್ವತ, ಸಮುದ್ರಗಳೆಂಬ ಎರಡು ಪದಾರ್ಥಗಳೂ ಬೇರೆಬೇರೆ ದೇಶಕಾಲಗಳಲ್ಲಿ ಅನುಭೂತಗಳಾಗಿಯೇ ಇರುವುದರಿಂದ ಸ್ವಪ್ನದಲ್ಲಿ ಅವೆರಡನ್ನೂ ಒಂದೇಕಡೆಯಲ್ಲಿರುವಂತೆ ಭ್ರಾಂತಿಯಿಂದ ಕಾಣುವನು ॥ ೬೭ ॥ ಮುನ್ನು ಕಂಡುಕೇಳಲ್ಪಟ್ಟವುಗಳೇ ಈಗ ಅನುಭವಕ್ಕೆ ಬರುವುವು,

---

‡ ವೀ. ಈ ಜನ್ಮದಲ್ಲಿ ನಮ್ಮ ಮನೋರಥಗಳಿಗೆ ವಿಷಯಗಳಾಗುವ ಸಕಲ ಪದಾರ್ಥಗಳೂ ಹಿಂದಣ ಜನ್ಮಗಳಲ್ಲಿ ಕ್ರಮವಾಗಿ ಇಂದ್ರಿಯಗಳ ಮೂಲಕ ಮನಸ್ಸಿನಲ್ಲಿ ನೆಲಸಿದ್ದುವು. ಆ ಅನುಭವದಿಂದುಂಟಾದ ಸಂಸ್ಕಾರ ವಿಶೇಷದಿಂದ ಪ್ರತಿಪುರುಷನಿಗೂ ಬೇರೆಬೇರೆಯಾಗಿ ಕೋರಿಕೆಗಳುಂಟಾಗುವುವು. ಕಾರಣವಿಲ್ಲದೇ ಕಾರ್ಯವುಂಟಾಗಲಾರದಾದುರಿಂದ, ಈಗ ನಮ್ಮ ಮನಸ್ಸಿನಲ್ಲಿ ಹುಟ್ಟುವ ಸಾವಿರಾರು ಕೋರಿಕೆಗಳಿಂದ ಪೂರ್ವಸಂಸ್ಕಾರಗಳೂ, ಅವುಗಳಿಂದ ಪೂರ್ವದ ಅನುಭವವೂ, ಊಹಿಸಲ್ಪಡುವುದು. ಈ ಜನ್ಮದಲ್ಲಿ ಅಂತಹ ಅನುಭವವೆಂದಿಗೂ ಇಲ್ಲವಾದುದರಿಂದ ಜನ್ಮಾಂತರವೂ ಸಾಧಿಸಲ್ಪಡುವುದು. ಕಾರಣವಿಲ್ಲದೆ ಜನ್ಮಗಳಲ್ಲಿ ತಾರತಮ್ಯವುಂಟಾಗುವುದಿಲ್ಲವಾದುದರಿಂದ ಪ್ರಾಕ್ತನ ಕರ್ಮವೂ ಸಿದ್ಧಿಸುವುದು. ಇದರಿಂದ ಮನಸ್ಸು ಜನ್ಮ, ಕರ್ಮಗಳೆಂಬ ಮೂರೂ ಅನಾದಿಗಳೆಂದರಿಯಬೇಕು. ಅನುಭೂತವಾದ ಅರ್ಥವೇ ಮನಸ್ಸಿಗೆ ಗೋಚರವಾಗುವುದೆಂದು ಹೇಳಿದಲ್ಲಿ, ಮುಮುಕ್ಷುವಾದವನ ಮನಸ್ಸಿನಲ್ಲಿ ಒಮ್ಮೆ ಮುಕ್ತಾನಂದವೂ ಗೋಚರವಾಗುವುದು. ಅದೂ ಪೂರ್ವಾನುಭೂತವೆಂದೇ ಒಪ್ಪುವುದಾದರೆ, ಮುಕ್ತರಾದವರಿಗೂ ಜನ್ಮಾಂತರವು ಸಿದ್ಧವಾಗಬೇಕಾಗುವುದು. ಇದು "ನಚ ಪುನರಾವರ್ತತೆ, ಅನಾವೃತ್ತಿಶ್ಶಬ್ದಾತ್" ಎಂಬ ಶ್ರುತಿಸೂತ್ರಗಳಿಗೆ ಸಮ್ಮತವಲ್ಲ, ಎಂದಾಕ್ಷೇಪಿಸಬಹುದು. ಆದರೆ ಅನನುಭೂತಗಳಾವವೂ ಮನಸ್ಸಿಗೆ ಗೋಚರವಾಗುವುದಿಲ್ಲವೆಂಬ ನಿಯಮಕ್ಕೆ ಪಾಂಚಭೌತಿಕ ಶರೀರದಿಂದನುಭವಿಸಲ್ಪಡಬಹುದಾದ ವಿಷಯಗಳಲ್ಲಿ ಮಾತ್ರವೇ ಅನ್ವಯವೆಂಬ ಅಭಿಪ್ರಾಯವಾದುದರಿಂದ, ಮನೋಗೋಚರವಾದ ಮುಕ್ತಾನಂದವೂ, ಸೋಽಶ್ನುತೇ ಸರ್ವಾನ್ ಕಾಮಾನ್ ಸಹಬ್ರಹ್ಮಣಾ,, ಎಂಬ ಶ್ರುತಿಯಿಂದ ತಿಳಿಯಲ್ಪಡುವುದು ನಿರತಿಶಯಾನಂದ ರೂಪವಾದುದರಿಂದ ಅದು ಪರೋಕ್ಷವೇ ಹೊರತು ಅಪರೋಕ್ಷಾನಂದವಲ್ಲ. ಮತ್ತು ಇದರಿಂದ ಊಹಿಸಲ್ಪಡುವ ಪೂರ್ವಾನುಭವವುಕೂಡ ಪರೋಕ್ಷಾನಂದವೇ ಆದುದರಿಂದ ಮುಕ್ತನಿಗೆ ಪುನರ್ಜನ್ಮವುಂಟಾಗುವುದೆಂಬ ಶಂಕೆಗೆ ಅವಕಾಶವಿಲ್ಲ.

**ಸರ್ವೇ ಕ್ರಮಾನುರೋಧೇನ ಮನಸೀಂದ್ರಿಯ ಗೋಚರಾಃ। ಆಯಾಂತಿ ವರ್ಗಶೋ ಯಾಂತಿ ಸರ್ವೇ ಸುಮನಸೋ ಜನಾಃ ॥ ೬೮ ॥ ಸತ್ವೈಕನಿಷ್ಠೇ ಮನಸಿ ಭಗವತ್ಪಾರ್ಶ್ವ ವರ್ತಿನಿ । ತಮ ಶ್ಚಂದ್ರಮಸೀವೇದ ಮುಪರಜ್ಯಾವಭಾಸತೇ ॥ ೬೯ ॥ ನಾಹಂ ಮಮೇತಿ ಭಾವೋಽಯಂ ಪುರುಷೇ ವ್ಯವಧೀಯತೇ । ಯಾವ ದ್ಬುದ್ಧಿಮನೋಽಕ್ಷಾರ್ಥ ಗುಣವ್ಯೂಹೋ ಹ್ಯನಾದಿಮಾನ್॥**

ಸರ್ವೇ - ಎಲ್ಲವೂ, ಕ್ರಮಾನುರೋಧೇನ - ಕ್ರಮವನ್ನು ಹಿಡಿದು, ಮನಸಿ - ಮನಸ್ಸಿನಲ್ಲಿ, ಆಯಾಂತಿ- ಬರುವುವು, ವರ್ಗಶಃ - ಗುಂಪಾಗಿ, ಯಾಂತಿ - ಹೋಗುವುವು, ಸರ್ವೇಜನಾಃ - ಎಲ್ಲಜನರೂ, ಸುಮನಸಃ - ಮನಸ್ಸುಳ್ಳವರು ॥೬೮॥ ಸತ್ವೈಕನಿಷ್ಠೇ - ಸತ್ವದಲ್ಲಿಯೇ ನೆಲೆಯನ್ನು ಪಡೆದ, ಭಗವ....ನಿ - ಭಗವಂತನನ್ನು ಧ್ಯಾನಿಸುವ, ಮನಸಿ - ಮನಸ್ಸಿನಲ್ಲಿ, ಚಂದ್ರಮಸಿ - ಚಂದ್ರನಲ್ಲಿ, ತಮಇವ - ರಾಹುವಿನಂತೆ, ಇದಂ - ಈ ಸಕಲವಿಷಯಗಳು, ಉಪರಜ್ಯ - ಸೇರಿದಂತೆ, ಅವಭಾಸತೇ - ಹೊಳೆಯುತ್ತದೆ ॥೬೯॥ ಬುದ್ಧಿ...ಹಃ - ಬುದ್ಧಿ, ಮನಸ್ಸು, ಇಂದ್ರಿಯ, ವಿಷಯ, ಈ ಗುಣಗಳ ಪರಿಣಾಮರೂಪವಾದ ಲಿಂಗಶರೀರವು, ಯಾವತ್ - ಎಲ್ಲಿಯವರೆಗುಂಟೋ, ಅಲ್ಲಿಯವರೆಗೂ, ಪುರುಷೇ - ಜೀವನಲ್ಲಿ, ಅಯಂ - ಪರಿದೃಶ್ಯಮಾನವಾದ, ಅಹಂಮಮೇತಿಭಾವಃ - ನಾನು ನನ್ನದುಎಂಬ ಭಾವವು, ಅನಾದಿಮಾನ್ - ಅನಾದಿಯೆ

ಎಂಬುದೇ ಸಿದ್ಧಾಂತವಾದರೆ, ಜನ್ಮಗಳಿಗೆ ಕೊನೆಮೊದಲಿಲ್ಲವಾಗುದರಿಂದ ಸಕಲ ಜನ್ಮ ಸಂಸ್ಕಾರಗಳೂ ಒಂದೇಕಾಲದಲ್ಲಿ ಏಕೇ ಅನುಭವಕ್ಕೆ ಬರುವುದಿಲ್ಲ? ಎಂಬೆಯೇನೋ? ಶಬ್ದಾದಿ ವಿಷಯಗಳು ಅನೇಕ ಜನ್ಮಗಳಲ್ಲಿ ಇಂದ್ರಿಯದ್ವಾರದಿಂದ ಮನಸ್ಸಿನಲ್ಲಿ ಹೊಕ್ಕು ಸಂಸ್ಕಾರರೂಪವಾಗಿ ಅಲ್ಲಿ ನೆಲಸಿರುವುವು. ಅವು ಅದೃಷ್ಟಾನುಸಾರವಾಗಿ ಕ್ರಮವನ್ನನುಸರಿಸಿ ಜೀವನ ಅನುಭವಕ್ಕೆ ಬರುವುವು. ಸಕಲ ಕರ್ಮವಾಸನೆಗಳಿಗೂ ಮನಸ್ಸು ಬಂಡಾರವು. ಅದೃಷ್ಟವೇ ನಿಯಾಮಕವು ಆದುದರಿಂದ ಈ ಜನ್ಮದಲ್ಲಿ ಯಾವಾಗಲೂ ಕಂಡು ಕೇಳಲ್ಪಡದ ಸಂಸ್ಕಾರಗಳು ಜೀವನ ಅನುಭವಕ್ಕೆ ಬರುವುವು. ಮಹಾರಾಜನೊಮ್ಮೆ ತಾನು ಅತಿ ದರಿದ್ರನೆಂತಲೂ; ಹುಟ್ಟು ಬಡವನೊಮ್ಮೆ ತಾನು ಮಹಾರಾಜನೆಂತಲೂ ತಿಳದುಕೊಳ್ಳುವದೇ ಇದಕ್ಕೆ ದೃಷ್ಟಾಂತವು. ಇದರಿಂದ ಸಕಲ ವಿಷಯಗಳೂ ಕ್ರಮವಾಗಿ ಅನುಭವಕ್ಕೆ ಬರುವುವೆಂತಲೂ, ಕಾಣದಿರುವ ವಿಷಯವು ಒಂದಾದರೂ ಇಲ್ಲವೆಂತಲೂ ತಿಳಿ ॥೬೮॥ ಸರ್ವವಿಷಯಗಳೂ ಸರ್ವರಿಗೂ ಕ್ರಮವಾಗಿ ಅನುಭವಕ್ಕೆ ಬರುವುವೆಂಬುದು ಮಾತ್ರವೇ ಅಲ್ಲ. ಮನಸ್ಸು ಶುದ್ಧ ಸತ್ವಪ್ರಧಾನವಾಗಿ ಭಗವಧ್ಧ್ಯಾನದಲ್ಲಿರುವಾಗ ಚಂದ್ರಬಿಂಬದಲ್ಲಿ ರಾಹುವು ತೋರುವಂತೆ ಒಮ್ಮೆ ಸಕಲಕರ್ಮವಾಸನೆಗಳೂ ಏಕಕಾಲದಲ್ಲಿಯೇ ತೋರುವುವು. ಇದಕ್ಕೆ ಯೋಗಿ ಪ್ರತ್ಯಕ್ಷವೆಂದು ಹೆಸರು. ಆದಕಾರಣ ಸ್ಥೂಲದೇಹವು ನಷ್ಟವಾದರೂ ಲಿಂಗಶರೀರವು ಇಹಪರಗಳೆರಡರಲ್ಲಿಯೂ ಒಂದೇ ಆಗಿರುವುದರಿಂದ ಕರ್ತೃಭೋಕ್ತೃಗಳು ಬೇರೆಯೆಂಬ ಸಂಶಯವನ್ನುಬಿಡು॥೬೯॥ ಆದರೆ "ಲಿಂಗಶರೀರದ ಕರ್ತೃತ್ವಭೋಕ್ತೃತ್ವಗಳು ಸ್ಥೂಲಶರೀರ ಮೂಲಕಗಳೇ ಹೊರತು ಬೇರೆಯಲ್ಲ. ಒಮ್ಮೆ ಸ್ಥೂಲಶರೀರವಿಲ್ಲದಾಗ ಕರ್ತೃತ್ವಭೋಕ್ತೃತ್ವಗಳಿಲ್ಲದ ಜೀವನಿಗೆ ಮುಕ್ತಿಯೇಕೆ ಉಂಟಾಗಬಾರದು?" ಎಂದರೆ ಪ್ರಾಣೇಂದ್ರಿಯ ಮನೋಬುದ್ಧಿಗಳ ಪರಿಣಾಮರೂಪವಾದ ಅನಾದಿಲಿಂಗ ಶರೀರವು ಎಲ್ಲಿಯವರೆಗೂ ಇರುವು

॥ ೨೦ ॥ ಸುಷುಪ್ತಿಮೂರ್ಛೋಪತಾಪೇಷು ಪ್ರಾಣಾಽಯನವಿಘಾತತಃ । ನೇಹತೇಽಹಮಿತಿಜ್ಞಾನಂ ಮೃತ್ಯುಪ್ರಜ್ವಾರಯೋರಪಿ ॥ ೨೧ ॥ ಗರ್ಭೇ ಬಾಲ್ಯೇಽಪ್ಯಪೌಷ್ಕಲ್ಯಾದೇಕಾದಶವಿಧಂ ತದಾ । ಲಿಂಗಂ ನದೃಶ್ಯತೇ ಯೂನಃ ಕುಹ್ವಾಂ ಚಂದ್ರಮಸೋಯಥಾ ॥ ೨೨ ॥ ಅರ್ಥೇ ಹ್ಯವಿದ್ಯಮಾನೇಪಿ ಸಂಸೃತಿರ್ನ ನಿವರ್ತತೇ । ಧ್ಯಾಯತೋ ವಿಷಯಾನಸ್ಯ † ಸ್ವಪ್ನೇಽನರ್ಥಾಗಮೋ ಯಥಾ ॥ ೨೩ ॥ ಏವಂ ಪಂಚವಿಧಂ ಲಿಂಗಂ ತ್ರಿವೃತ್ ಷೋಡಶ

ನಿಸಿ, ನವ್ಯವಧೀಯತೇ - ನಾಶವಾಗುವುದಿಲ್ಲ ॥೨೦॥

ಸುಷುಪ್ತಿ....ಷು - ನಿದ್ರೆ, ಮೂರ್ಛೆ, ದುಃಖಗಳಲ್ಲಿಯೂ, ಮೃತ್ಯು....ಪಿ - ಮರಣ, ಜ್ವರ ಇವುಗಳಲ್ಲಿಯೂ, ಪ್ರಾಣಾ...ತಃ, ಪ್ರಾಣ - ಪ್ರಾಣಗಳಿಗೆ, ಅಯನ - ದ್ವಾರವೆನಿಸಿದ ಇಂದ್ರಿಯಗಳ, ವಿಘಾತತಃ - ತಡೆಯಿಂದ, ಅಹಮಿತಿಜ್ಞಾನಂ - ನಾನು ಎಂಬಜ್ಞಾನವು, ನೇಹತೇ - ತೋರುವುದಿಲ್ಲ ॥೨೧॥ ಯೂನಃ- ಯೌವನಸ್ಥನ, ಏಕಾದಶವಿಧಂ - ಏಕಾದಶೇಂದ್ರಿಯರೂಪವಾದ, ಲಿಂಗಂ - ಮನಸ್ಸು, ಯತ್ ಯಾವುದುಂಟೋ, ಅದು, ಗರ್ಭೇ - ಗರ್ಭದಲ್ಲಿಯೂ, ಬಾಲ್ಯೇ - ಚಿಕ್ಕಂದಿನಲ್ಲಿಯೂ, ಕುಹ್ವಾಂ - ಅಮಾವಾಸ್ಯೆಯಲ್ಲಿ, ಚಂದ್ರಮಸೋಯಥಾ - ಚಂದ್ರನಿಗೋಪಾದಿಯಲ್ಲಿ, ಅಪೌಷ್ಕಲ್ಯಾತ್ - ಸಂಪೂರ್ಣವಾಗದುದರಿಂದ, ತದಾ - ಆಗ, ನದೃಶ್ಯತೇ - ಕಾಣಲ್ಪಡುವುದಿಲ್ಲ ॥೨೨॥ ವಿಷಯಾನ್ - ಶಬ್ದಾದಿವಿಷಯಗಳನ್ನು, ಧ್ಯಾನಿಸುವವನಿಗೆ, ಅರ್ಥೇ - ವಸ್ತುಗಳು, ಅವಿದ್ಯಮಾನೇಪಿ - ಇಲ್ಲದಿದ್ದರೂ, ಸ್ವಪ್ನೇ - ಕನಸಿನಲ್ಲಿ, ಅನರ್ಥಾಗಮೋಯಥಾ - ದುಃಖಾದಿಗಳುಂಟಾಗುವಂತೆ, ಸಂಸೃತಿಃ - ಸಂಸಾರವು, ನನಿವರ್ತತೇ - ನಿವರ್ತಿಸುವುದಿಲ್ಲ ॥೨೩॥ ಏವಂ - ಇಂತು, ಪಂಚವಿಧಂ - ಪಂಚತನ್ಮಾತ್ರರೂಪವಾದ, ತ್ರಿವೃತ್ - ತ್ರಿಗುಣಾತ್ಮಕವಾದ, ಷೋಡಶವಿಸ್ತೃತಂ - ಏಕಾದಶೇಂದ್ರಿಯ ಪ್ರಾಣಪಂಚಕವೆಂಬ ಹದಿನಾರು ಅಂಗಗಳಿಂದ ವಿಸ್ತೃತವಾದುದು, ಲಿಂಗಂ - ಲಿಂಗಶರೀರವು, ಚೇತನಯಾ - ಚೈತನ್ಯದಿಂದ, ಯುಕ್ತಃ - ಕೂಡಿದ, ಏಷಃ-

ದೋ, ಅಲ್ಲಿಯವರೆಗೂ ಸ್ಥೂಲದೇಹ ಸಂಬಂಧವಾದ ಅಹಂಕಾರಮಮಕಾರಗಳು ಜೀವನಿಗೆ ತಪ್ಪುವುದಿಲ್ಲ ॥ ೨೦ ॥ ಸುಷುಪ್ತಿ, ಮೂರ್ಛೆ, ದುಃಖ, ಮರಣ, ಸನ್ನಿಪಾತಜ್ವರ ಮೊದಲಾದವುಗಳಲ್ಲಿ ಪ್ರಾಣಗಳಿಗೆ ದ್ವಾರಭೂತಗಳಾದ ಇಂದ್ರಿಯಗಳು ಲಯವನ್ನು ಪಡೆಯುವುದರಿಂದ ಅಹಂಕಾರಮಮಕಾರಗಳು ಸ್ಫುರಿಸುವುದಿಲ್ಲ ॥ ೨೧ ॥ ಯೌವ್ವನಸ್ಥನಾದ ಪುರುಷನಲ್ಲಿ ಏಕಾದಶೇಂದ್ರಿಯಗಳಿಂದ ಸ್ಫುಟವಾಗಿ ತೋರುವ ಅಹಂಕಾರವು,ಅಮಾವಾಸ್ಯೆಯಲ್ಲಿ ಚಂದ್ರಕಳೆಯಂತೆ, ಗರ್ಭದಲ್ಲಿರುವ ಪ್ರಾಣಿಯಲ್ಲಿಯಾಗಲಿ, ಬಾಲನಾದ ಪ್ರಾಣಿಯಲ್ಲಿಯಾಗಲಿ ತೋರುವುದಿಲ್ಲ॥೨೨॥ ಸ್ವಪ್ನದಲ್ಲಿ ಸುಖದುಃಖಗಳು ತೋರುವಂತೆ ಶಬ್ದಾದಿವಿಷಯಗಳನ್ನು ಧ್ಯಾನಿಸುವ ಪುರುಷನಿಗೆ ವಸ್ತುಗಳಿಲ್ಲದಿದ್ದರೂ ಸಂಸಾರವು ಮಾತ್ರ ತಪ್ಪುವುದಿಲ್ಲ ॥೨೩॥ ಆದುದರಿಂದ ಲಿಂಗಶರೀರವಿರುವ ವರೆಗೂ ಸ್ಥೂಲಶರೀರಾಭಿಮಾನವು ಹೋಗುವುದಿಲ್ಲ. ಸ್ಥೂಲಶರೀರವು

† ಛಾ. ಶ್ರು॥ ಯದಾಕರ್ಮಸು ಕಾಮ್ಯೇಷು ಸ್ತ್ರಿಯಂ ಸ್ವಪ್ನೇಷು ಪಶ್ಯತಿ। ಸಮೃದ್ಧಿಂ ತತ್ರಜಾನೀಯಾತ್ತಸ್ಮಿಂಸ್ವಪ್ನನಿದರ್ಶನೇ ॥ ಅಥ ಸ್ವಪ್ನೇ ಪುರುಷಂ ಕೃಷ್ಣದಂತಂ ಪಶ್ಯತಿ ಸಏನಂಹಂತಿ ॥ ಕಾಮ್ಯಕರ್ಮಗಳನ್ನು ಮಾಡುವವನು ಸ್ವಪ್ನದಲ್ಲಿ ಸ್ತ್ರೀಯನ್ನು ಕಂಡರೆ ಅಭ್ಯುದಯವುಂಟಾಗುವುದು. ಮತ್ತು ಸ್ವಪ್ನದಲ್ಲಿ (ಕೃಷ್ಣದಂತ) ಕರೀಹಲ್ಲುಳ್ಳವನನ್ನು ಕಂಡವನು ಮೃತನಾಗುವನು.

ಶವಿಸ್ತೃತಂ । ಏಷ ಚೇತನಯಾ ಯುಕ್ತೋ ಜೀವ ಇತ್ಯಭಿಧೀಯತೇ॥ ಅನೇನ ಪುರುಷೋ ದೇಹಾನುಪಾದತ್ತೇ ವಿಮುಂಚತಿ । ಹರ್ಷಂ ಶೋಕಂ ಭಯಂ ದುಃಖಂ ಸುಖಂ ಚಾಽನೇನ ವಿಂದತಿ ॥ ೨೫ ॥ ಯಥಾ ತೃಣಜಲೂಕೇಯಂ ನಾಽಪಯಾತ್ಯಪಯಾತಿ ಚ । ನತ್ಯಜೇನ್ಮ್ರಿಯಮಾಣೋಽಪಿ ಪ್ರಾಗ್ದೇಹಾಽಭಿಮತಿಂ ಜನಃ ॥ ೨೬ ॥ ಯಾವದನ್ಯಂ ನವಿಂದೇತ ವ್ಯವಧಾನೇನ ಕರ್ಮಣಾಂ। ಮನಏವ ಮನುಷ್ಯೇಂದ್ರ ! ಭೂತಾನಾಂ ಭವಭಾವನಂ ॥ ೨೭ ॥ ಯದಾಽಕ್ಷೈಶ್ಚರಿತಾನ್ ಧ್ಯಾಯನ್ ಕರ್ಮಾಣ್ಯಾ

---

ಈ ದೇಹಾಕಾರವು, ಜೀವಇತಿ - ಜೀವನೆಂದು, ಅಭಿಧೀಯತೇ - ಹೇಳಲ್ಪಡುತ್ತಾನೆ ॥೨೪॥ ಪುರುಷಃ - ಜೀವನು, ಅನೇನ - ಇದರಿಂದ, ದೇಹಾನ್ - ಸ್ಥೂಲದೇಹಗಳನ್ನು, ಉಪಾದತ್ತೇ - ಪಡೆಯುತ್ತಾನೆ, ವಿಮುಂಚತಿ - ಬಿಡುತ್ತಾನೆ, ಅನೇನ - ಇದರಿಂದ, ಹರ್ಷಂ - ಸಂತೋಷವನ್ನೂ, ಶೋಕಂ - ವ್ಯಸನವನ್ನೂ, ಭಯಂ - ಭಯವನ್ನೂ, ದುಃಖಂ - ದುಃಖವನ್ನೂ, ಸುಖಂಚ - ಸುಖವನ್ನೂ, ವಿಂದತಿ - ಪಡೆಯುತ್ತಾನೆ ॥೨೫॥ ಇಯಂತೃಣಜಲೂಕಾ - ಜಿಗಣೆಯೆಂಬ ಹುಲ್ಲಿನಹುಳು, ಯಥಾ - ಹೇಗೆ, ನಾಪಯಾತಿ - ಹೋಗುವುದಿಲ್ಲ, ಅಪಯಾತಿಚ - ಹೋಗಲೂ ಹೋಗುವುದೋ, ತಥಾ - ಹಾಗೆ, ಜನಃ - ಜನವು, ಮ್ರಿಯಮಾಣೋಽಪಿ - ಸಾಯುತ್ತಿದ್ದರೂ, ಪ್ರಾಗ್ದೇ...ತಿಂ - ಪೂರ್ವಶರೀರಾಭಿಮಾನವನ್ನು, ನತ್ಯಜೇತ್ - ಬಿಡಲಾರದು ॥೨೬॥ ಕರ್ಮಣಾಂ - ಪೂರ್ವದೇಹಾರಂಭಕಗಳಾದ, ಕರ್ಮಗಳ, ವ್ಯವಧಾನೇನ - ವಿರಾಮದಿಂದ, ಯಾವತ್ - ಎಲ್ಲಿಯವರೆಗೆ, ಅನ್ಯಂ - ಬೇರೊಂದು ಶರೀರವನ್ನು, ನವಿಂದೇತ - ಪಡೆಯುವುದಿಲ್ಲವೋ, ಅಲ್ಲಿಯವರೆಗೂ ಬಿಡುವುದಿಲ್ಲ ಮನುಷ್ಯೇಂದ್ರ - ರಾಜೇಂದ್ರನೆ ! ಭೂತಾನಾಂ-ಪ್ರಾಣಿಗಳಿಗೆ, ಭವಭಾವನಂ - ಸಂಸಾರಹೇತುವು, ಮನಏವ - ಮನಸ್ಸೇ ॥೨೭॥ ಯದಾ - ಯಾವಾಗ, ಅಕ್ಷೈಃ - ಇಂದ್ರಿಯಗಳಿಂದ, ಚರಿತಾನ್ - ಅನುಭವಿಸಲ್ಪಡುವ ವಿಷಯಗಳನ್ನು, ಧ್ಯಾಯನ್ - ಧ್ಯಾನಿಸುತ್ತಾ, ಅಸಕೃತ್ - ಅಡಿಗಡಿಗೂ, ಕರ್ಮಾಣಿ - ಕರ್ಮಗಳನ್ನು, ಆಚಿನುತೇ - ಮಾಡುವನೋ,

---

ಹೋಗುವವರೆಗೂ ಸಂಸಾರ ನಿವೃತ್ತಿಯಾಗುವುದಿಲ್ಲ. ಪಂಚತನ್ಮಾತ್ರಗಳು, ತ್ರಿಗುಣಗಳು, ಏಕಾದಶೇಂದ್ರಿಯಗಳು, ಪಂಚಪ್ರಾಣಗಳು, ಇವುಗಳ ಸಮುದಾಯವೇ ಲಿಂಗಶರೀರವೆನಿಸುವುದು. ಈ ಲಿಂಗದೇಹವು ಚೇತನದಿಂದ ಕೂಡಿ ಜೀವನೆಂದು ಹೆಸರುಗೊಳ್ಳುವುದು ॥೨೪॥ ಜೀವನು ಈ ಲಿಂಗದೇಹದಿಂದಲೇ ಬಗೆಬಗೆಯಾದ ಸ್ಥೂಲದೇಹಗಳನ್ನು ಪಡೆಯುತ್ತಾ ಬಿಡುತ್ತಾ ಇರುವನು. ಈ ದೇಹದಿಂದಲೇ ಹರ್ಷ, ಶೋಕ, ಭಯ, ದುಃಖ, ಸುಖ, ಮೊದಲಾದ ಭಾವಗಳನ್ನು ಹೊಂದುವನು ॥೨೫॥ ಹುಲ್ಲಿನಮೇಲೆ ಸಂಚರಿಸುವ ಜಿಗಣೆಯು ಮೊದಲು ತಾನಿದ್ದ ತೃಣದಿಂದ ಮತ್ತೊಂದು ತೃಣವನ್ನೇರುವಾಗ ಮುಂದಣ ತೃಣವನ್ನು ದೃಢವಾಗಿ ಹಿಡಿದುಕೊಂಡು ಮೊದಲಿನ ತೃಣವನ್ನು ಬಿಡುವಂತೆ, ಜೀವನು ಮತ್ತೊಂದು ದೇಹವನ್ನಾಶ್ರಯಿಸುವ ವರೆಗೂ ಪೂರ್ವದೇಹಾಭಿಮಾನವನ್ನು ಬಿಡುವುದಿಲ್ಲ ॥೨೬॥ ಅಯ್ಯಾ ಮಾನವೇಂದ್ರನೆ ! ಪ್ರಾಣಿಗಳಿಗೆ ಮನಸ್ಸೇ ಸಂಸಾರಹೇತುವು. ಇಂದ್ರಿಯಗಳಿಂದ ಅನುಭವಿಸಲ್ಪಟ್ಟ ವಿಷಯಗಳನ್ನು ಧ್ಯಾನಿಸುತ್ತಾ, ಕರ್ಮಗಳನ್ನು ಮಾಡುವನು. ಆ ಕರ್ಮಗಳೇ ಶರೀರಪ್ರಾಪ್ತಿಗೆ ಕಾರಣಗಳಾಗುವುವು. ಅನಾತ್ಮಗಳಾದ ದೇಹಾದಿಗಳಿಗೆ ಕರ್ಮಗಳುಂಟಾಗು

ಚಿನುತೇಽಸಕೃತ್ । ಸತಿ ಕರ್ಮಣ್ಯವಿದ್ಯಾಯಾಂ ಬಂಧಃ ಕರ್ಮಣ್ಯನಾತ್ಮನಃ ॥ ೭೮ ॥ ಅತ ಸ್ತದಪವಾದಾರ್ಥಂ ಭಜ ಸರ್ವಾತ್ಮನಾ ಹರಿಂ । ಪಶ್ಯಂ ಸ್ತದಾತ್ಮಕಂ ವಿಶ್ವಂ ಸ್ಥಿತ್ಯುತ್ಪತ್ತ್ಯಪ್ಯಯಾ ಯತಃ ॥೭೯॥ * ಮೈತ್ರೇಯಃ॥ ಭಾಗವತಮುಖ್ಯೋ ಭಗವಾ ನ್ನಾರದೋ ಹಂಸಯೋ ರ್ಗತಿಂ।ಪ್ರದರ್ಶ್ಯ ಹ್ಯ ಮು ಮಾಮಂತ್ರ್ಯ ಸಿದ್ಧಲೋಕಂ ತತೋಽಗಮತ್ ॥ ೮೦ ॥ ಪ್ರಾಚೀನಬ

ತದಾ - ಆಗ, ಕರ್ಮಣಿಸತಿ - ಕರ್ಮವುಂಟಾಗಲು, ಅವಿದ್ಯಯಾ - ಅವಿದ್ಯೆಯಿಂದ, ಕರ್ಮಣಿಕದಲ್ಲಿ, ಅನಾತ್ಮನಃ - ದೇಹಾದಿಗಳಿಗೆ. ಬಂಧಃ - ಬಂಧವುಂಟಾಗುವುದು ॥೭೮॥ ಅತಃ - ಆದುದರಿಂದ, ತದಪವಾದಾರ್ಥಂ - ಆ ಕರ್ಮಗಳನ್ನು ಕೊಳ್ಳುವುದಕ್ಕಾಗಿ, ಯತಃ - ಯಾರಿಂದ, ಸ್ಥಿತ್ಯು....ಯಾಃ - ಹುಟ್ಟು, ಬಾಳು, ಸಾವುಗಳು, ಆಗುವುವೋ, ವಿಶ್ವಂ - ಜಗತ್ತನ್ನು, ತದಾತ್ಮಕಂ - ಆತನ ಸ್ವರೂಪವನ್ನಾಗಿ, ಪಶ್ಯನ್ - ನೋಡುತ್ತಾ, ಸರ್ವಾತ್ಮನಾ - ಸರ್ವಭಾವದಿಂದಲೂ, ಹರಿಂ - ಭಗವಂತನನ್ನು ಭಜ - ಧ್ಯಾನಿಸು ॥ ೭೯ ॥ ಮೈತ್ರೇಯನು ಹೇಳುತ್ತಾನೆ, ಭಾಗವತಮುಖ್ಯಃ - ಭಕ್ತಾಗ್ರೇಸರನಾದ, ಭಗವಾನ್ - ಭಗವಂತನಾದ, ನಾರದಃ - ನಾರದಮುನಿಯು, ಹಂಸಯೋಃ - ಜೀವೇಶ್ವರರ, ಗತಿಂ - ಸ್ವರೂಪವನ್ನು, ಪ್ರದರ್ಶ್ಯ - ತೋರಿಸಿ, ಅಮುಂ - ಪ್ರಾಚೀನಬರ್ಹಿಯನ್ನು, ಆಮಂತ್ರ್ಯ - ಒಡಂಬಡಿಸಿ, ತತಃ - ಬಳಿಕ, ಸಿದ್ಧಲೋಕಂ - ಸಿದ್ಧರಲೋಕವನ್ನು, ಅಗಮತ್ - ಹೊಂದಿದನು ॥ ೮೦ ॥

ವುದಕ್ಕೆ ಅವಿದ್ಯೆಯೇ ಕಾರಣವು. ಆ ಅವಿದ್ಯೆಯಿಂದ ಬಂಧವುಂಟಾಗುವುದು ॥೭೮॥ ಆದುದರಿಂದ ಆ ಅವಿದ್ಯಾಕಾಮಕರ್ಮಗಳನ್ನು ಕಳೆದುಕೊಳ್ಳುವುದಕ್ಕಾಗಿ ಸರ್ವಭಾವದಿಂದಲೂ ಭಗವಂತನನ್ನಾರಾಧಿಸು. ಈ ಜಗತ್ತನ್ನು ಜಗಜ್ಜನ್ಮಾದಿಕಾರಣನಾದ ಭಗವಂತನ ಸ್ವರೂಪವೆಂದು ಭಾವಿಸು, ಎಂದು ಹೇಳಿದನು ॥೭೯॥ ಅಯ್ಯಾ ವಿದುರನೆ! ಕೇಳು. ಭಾಗವತಶಿರೋಮಣಿಯಾದ ನಾರದಮುನಿಯು, ಈ ರೀತಿಯಾಗಿ ಪ್ರಾಚೀನಬರ್ಹಿರಾಜನಿಗೆ ಜೀವೇಶ್ವರರ ಸ್ವರೂಪವನ್ನು ತಿಳುಹಿ, ಆತನಿಂದ ಅಪ್ಪಣೆಯನ್ನು ಪಡೆದು ಸಿದ್ಧಲೋಕಕ್ಕೆ ತೆರಳಿದನು ॥೮೦॥ ತರುವಾಯ ಪ್ರಾಚೀನಬರ್ಹಿಯು ಪ್ರಜೆಗಳನ್ನು ಸೃಷ್ಟಿಸಿ ಸಲಹುವಂತೆ

* ವಿ. ಮೂ. ಶ್ಲೋ॥ ಭಕ್ತಿಃ ಕೃಷ್ಣೇ ದಯಾ ಜೀವೇ ಷ್ವಕುಂಠಜ್ಞಾನ ಮಾತ್ಮನಿ । ಯದಿಸ್ಯಾ ದಾತ್ಮನೋ ಭೂಯಾ ದಪವರ್ಗಸ್ತು ಸಂಸ್ಕೃತೇಃ ॥೧॥ ಗುರುಮೊದಲು ಬ್ರಹ್ಮಾಂತರಾದ ಉತ್ತಮ ಜೀವರಲ್ಲಿಯೂ, ಪರಿಪೂರ್ಣನಾದ ಹರಿಯಲ್ಲಿಯೂ ತಾರತಮ್ಯಾನುಸಾರವಾಗಿ ಭಕ್ತಿಯೂ, ಸಕಲ ಭೂತಗಳಲ್ಲಿ ದಯೆಯೂ, ಸ್ವಸ್ವರೂಪಜ್ಞಾನವೂ, ಇವುಗಳೇ ಮೋಕ್ಷಕ್ಕೆ ಕಾರಣಸಾಮಗ್ರಿಯೆನಿಸುವುದು.

(೧) ವಿ. ಮೂ. ಶ್ಲೋ॥ ಅದೃಷ್ಟಂ ದೃಷ್ಟವ ನ್ನಂಕ್ಷ್ಯೇತ್ ಭೂತಂ ಸ್ವಪ್ನವ ದನ್ಯಥಾ । ಭೂತಂ ಭವ ದ್ಭವಿಷ್ಯಚ್ಚ ಸುಪ್ತಂ ಸರ್ವರಹೋರಹಃ ॥ ಹಿಂದಿದ್ದ, ಈಗಿರುವ, ಮತ್ತು ಮುಂದೆ ಉಂಟಾಗುವ ಈ ಜಗತ್ತು ಸ್ವಪ್ನಪದಾರ್ಥದಂತೆ ಅನಿತ್ಯವಾದುದರಿಂದ, ಅದೃಷ್ಟವೆನಿಸಿದ ಸ್ವರ್ಗಾದಿ ಫಲಗಳೂ ಕೃಷ್ಯಾದಿ ದೃಷ್ಟಫಲಗಳಂತೆ ನಶ್ವರಗಳೇ ಹೊರತು ನಿತ್ಯವಲ್ಲ. ಸರ್ವಶಾಸ್ತ್ರಪ್ರತಿಪಾದ್ಯಗಳಾದ ವಿಷಯಗಳಲ್ಲಿ ರಹಸ್ಯವೆನಿಸಿ, ಗುರೂಪದೇಶದಿಂದ ಮಾತ್ರ ಗಮ್ಯವೆನಿಸುವ ಅತಿರಹಸ್ಯವಾದ ಪರತತ್ವವೇ ಸತ್ಯವು. ಎಂಬ ನಿತ್ಯಾನಿತ್ಯವಿವೇಕದಿಂದ ವೈರಾಗ್ಯವೂ, ಭಕ್ತಿ, ಭೂತದಯೆ, ಆತ್ಮಜ್ಞಾನ ಮೊದಲಾದ ಮೋಕ್ಷಕಾರಣ ಸಾಮಗ್ರಿಗಳುಂಟಾದಲ್ಲಿ ಮುಕ್ತಿಯು ಕರಗತವೆನಿಸುವುದು.

ರ್ಹಿರ್ ರಾಜರ್ಷಿಃ ಪ್ರಜಾಸರ್ಗಾಽಭಿ ರಕ್ಷಣೇ । ಆದಿಶ್ಯ ಪುತ್ರಾನಗಮ ತ್ತಪ
ಸೇ ಕಪಿಲಾಶ್ರಮಂ ॥ ೮೧ ॥ ತತ್ರೈಕಾಗ್ರಮನಾ ವೀರೋ ಗೋವಿಂದಚರ
ಣಾಂಬುಜಂ । ವಿಮುಕ್ತಸಂಗೋಽನುಭಜನ್ ಭಕ್ತ್ಯಾ ತತ್ಸಾಮ್ಯತಾ ಮ
ಗಾತ್ ॥೮೨॥ ಏತ ದಧ್ಯಾತ್ಮ ಪಾರೋಕ್ಷ್ಯಂ ಗೀತಂ ದೇವರ್ಷಿಣಾಽನಘ ! ।
ಯ ಶ್ರಾವಯೇ ದ್ಯಃ ಶೃಣುಯಾ ತ್ಸಲಿಂಗೇನ ವಿಮುಚ್ಯತೇ ॥ ೮೩ ॥ ಏತ
ನ್ಮುಕುಂದಯಶಸಾ ಭುವನಂ ಪುನಾನಂ ದೇವರ್ಷಿವರ್ಯ ಮುಖನಿಸ್ಸೃತ
ಮಾತ್ಮಶೌಚಂ । ಯಃ ಕೀರ್ತ್ಯಮಾನ ಮಧಿಗಚ್ಛತಿ ಪಾರಮೇಷ್ಠ್ಯಂ ನಾಽ
ಸ್ಮಿನ್ ಭವೇ ಭ್ರಮತಿ ಮುಕ್ತಸಮಸ್ತಬಂಧಃ ॥ ೮೪ ॥ ಅಧ್ಯಾತ್ಮಪಾರೋ

---

ರಾಜರ್ಷಿಯಾದ ಪ್ರಾಚೀನಬರ್ಹಿಯು, ಪ್ರಜಾ—ಣೇ - ಪ್ರಜೆಗಳ ಸೃಷ್ಟಿ, ಪಾಲನದಲ್ಲಿ, ಪುತ್ರಾನ್ - ಮಕ್ಕಳನ್ನು, ಆದಿಶ್ಯ - ಆಜ್ಞಾಪಿಸಿ, ತಪಸೇ - ತಪಸ್ಸಿಗಾಗಿ, ಕಪಿಲಾಶ್ರಮವನ್ನು, ಅಗಮತ್ - ಹೊಂದಿದನು ॥೮೧॥ ತತ್ರ - ಅಲ್ಲಿ, ಏಕಾಗ್ರಮನಾಃ - ನಿಶ್ಚಲಚಿತ್ತನಾದ, ವೀರಃ - ಶೂರನಾದ ರಾಜನು, ಗೋವಿಂ—ಜಂ - ಭಗವಂತನ ಪಾದಕಮಲವನ್ನು, ಭಕ್ತ್ಯಾ - ಭಕ್ತಿಯಿಂದ, ಅನುಭಜನ್ - ಧ್ಯಾನಿಸುತ್ತಾ, ವಿಮುಕ್ತಸಂಗಃ - ವಿರಕ್ತನಾಗಿ, ತತ್ಸಾಮ್ಯತಾಂ - ಭಗವಂತಸಾಯುಜ್ಯವನ್ನು, ಅಗಾತ್ - ಪಡೆದನು ॥೮೨॥ ಅನಘ - ಪುಣ್ಯಶಾಲಿಯೆ ! ದೇವರ್ಷಿಣಾ - ನಾರದನಿಂದ, ಗೀತಂ - ಹೇಳಲ್ಪಟ್ಟ, ಏತತ್- ಈ, ಅಧ್ಯಾತ್ಮಪರೋಕ್ಷ್ಯಂ - ಪರೋಕ್ಷವೇದಾಂತವನ್ನು, ಯಃ - ಯಾವನು. ಶ್ರಾವಯೇತ್ - ಶ್ರವಣ ಮಾಡಿಸುವನೋ, ಯಃ - ಯಾವನು, ಶೃಣುಯಾತ್ - ಕೇಳುವನೋ, ಸಃ - ಅವನು, ಲಿಂಗೇನ - ಲಿಂಗ ಶರೀರದಿಂದ, ವಿಮುಚ್ಯತೇ - ಬಿಡಲ್ಪಡುವನು ॥೮೩॥ ಮುಕುಂದಯಶಸಾ - ಭಗವಚ್ಚರಿತ್ರದಿಂದ, ಭುವನಂ - ಲೋಕವನ್ನು, ಪುನಾನಂ - ಪರಿಶುದ್ಧಗೊಳಿಸುವ, ದೇವ...ತಂ - ದೇವರ್ಷಿಯಾದ ನಾರದನಮುಖದಿಂದ ಜಾರಿದ, ಆತ್ಮಶೌಚಂ - ಮನಸ್ಸನ್ನು ಶುದ್ಧಿಪಡಿಸುವ, ಪಾರಮೇಷ್ಠ್ಯಂ - ಪರಮಪದವನ್ನು ಕೊಡುವ, ಕೀರ್ತ್ಯಮಾನಂ - ಹೊಗಳಲ್ಪಡುವ, ಏತತ್ - ಇದನ್ನು, ಯಃ - ಯಾವನು, ಅಧಿಗಚ್ಛತಿ - ಪಡೆಯುವನೋ, ಅವನು, ಮುಕ್ತ—ಧಃ- ಸಕಲಬಂಧಗಳನ್ನೂ ತೊರೆದು, ಅಸ್ಮಿನ್‌ಭವೇ-ಈ ಸಂಸಾರದಲ್ಲಿ, ನಭ್ರಮತಿ-ಅಲೆದಾಡುವುದಿಲ್ಲ ॥೮೪॥ ಅದ್ಭುತಂ -ಆಶ್ಚರ್ಯಕರವಾದ, ಇದಂ - ಈ, ಅಧ್ಯಾತ್ಮಪಾರೋಕ್ಷ್ಯಂ- ಪರೋಕ್ಷವೇದಾಂತವು, ಮಯಾ - ನನ್ನಿಂದ, ಅಭಿಹಿತಂ - ಹೇಳಲ್ಪಟ್ಟಿತು, ಏವಂ - ಇದರಿಂದ, ಪುಂಸಃ-

---

ಪುತ್ರರಿಗಾಜ್ಞಾಪಿಸಿ, ತಪಸ್ಸಿಗಾಗಿ ಕಪಿಲಾಶ್ರಮಕ್ಕೆ ತೆರಳಿದನು ॥೮೧॥ ಅಲ್ಲಿ ವೀರನಾದ ಆ ರಾಜನು ಸ್ಥಿರಚಿತ್ತನಾಗಿ ಸಕಲ ಸಂಗಗಳನ್ನೂ ತೊರೆದು, ಭಗವಂತನ ಪಾದಕಮಲಗಳನ್ನು ಧ್ಯಾನಿಸುತ್ತಾ, ಬ್ರಹ್ಮೀಭಾವವನ್ನು ಪಡೆದನು ॥೮೨॥ ಅಯ್ಯಾ ವಿದುರನೆ ! ದೇವರ್ಷಿಗೀತವಾದ ಈ ಪರೋಕ್ಷ ವೇದಾಂತವನ್ನು ಯಾವನು ಕೇಳುವನೋ, ಯಾವನು ಕೇಳಿಸುವನೋ, ಆತನು ಲಿಂಗದೇಹದಿಂದ ಬಿಡುಗಡೆಯನ್ನು ಪಡೆಯುವನು ॥೮೩॥ ಶ್ರೀಹರಿ ಚರಿತ್ರೆಯಿಂದ ಲೋಕವನ್ನು ಪಾವನಗೊಳಿಸುತ್ತಾ, ನಾರದಮುಖಕಮಲದಿಂದ ನಿಸ್ಸೃತವಾದ ಪರಮಪದಪ್ರದವಾದ ಈ ಪರೋಕ್ಷ ವೇದಾಂತಶಾಸ್ತ್ರವನ್ನು ಭಕ್ತಿಯಿಂದ ಕೇಳುವವನು ಸಕಲಬಂಧಮುಕ್ತನಾಗಿ ಸಂಸಾರಭ್ರಮಣವನ್ನು ಕಳೆದುಕೊಳ್ಳುವನು ॥೮೪॥ ಅಯ್ಯಾ ವಿದುರನೆ ! ಪರಮಾಶ್ಚರ್ಯಕರವಾದ ಈ ಪರೋಕ್ಷಾಧ್ಯಾತ್ಮ ಶಾಸ್ತ್ರವನ್ನು ನಾನು ನಿನಗೆ

ಷ್ಯ ಮಿದಂ ಮಯಾಽಭಿಹಿತ ಮದ್ಭುತಂ । ಏವಂ ಸ್ತ್ರಿಯಾಶ್ರಮಃ ಪುಂಸ ಶ್ಛಿ
ನ್ನೋಽಮುತ್ರ ಚ ಸಂಶಯಃ ॥೮೫॥

—ಇತ್ಯೇಕೋನ ತ್ರಿಂಶೋಽಧ್ಯಾಯಃ—

ಪುರುಷನ, ಸ್ತ್ರಿಯಾಶ್ರಮಃ - ಬುದ್ಧಿಯಿಂದಕೂಡಿದ ಅಹಂಕಾರವು, ಅಮುತ್ರ - ಪರಲೋಕದಲ್ಲಿ, ಸಂಶಯಶ್ಚ - ಫಲಸಂಶಯವೂ, ಛಿನ್ನಃ - ಕತ್ತರಿಸಲ್ಪಟ್ಟಿತು ॥೮೫॥

—ಏಕೋನತ್ರಿಂಶಾಧ್ಯಾಯಂ ಸಮಾಪ್ತಂ—

ಹೇಳಿರುವೆನು. ಇದರಂತೆ ನಡೆಯುವವನಿಗೆ ಬುದ್ಧಿಸಹಿತವಾದ ಅಹಂಕಾರವೂ, ಪರಲೋಕದಲ್ಲಿ ಕರ್ಮಫಲಭೋಗವೆಂತೆಂಬ ಸಂಶಯವೂ ಸಹ ತೊಲಗುವುದು, ಎಂದು ಮೈತ್ರೇಯಮುನಿಯು ವಿದುರನಿಗೆ ಹೇಳಿದನೆಂಬಲ್ಲಿಗೆ ಭಾಗವತ ಚಕೋರಚಂದ್ರಿಕೆಯೊಳ್

— ಇಪ್ಪತ್ತೊಂಬತ್ತನೆಯ ಅಧ್ಯಾಯಂ ಮುಗಿದುದು —

—ಓಂ ನಮಃ ಪರಮಾತ್ಮನೆ—

—ಅಥ ತ್ರಿಂಶೋಽಧ್ಯಾಯಃ—

ವಿದುರಃ॥ಯೇ ತ್ವಯಾಽಭಿಹಿತಾ ಬ್ರಹ್ಮನ್ ! ಸುತಾಃ ಪ್ರಾಚೀನಬರ್ಹಿಷಃ।
ತೇ ರುದ್ರಗೀತೇನ ಹರಿಂ ಸಿದ್ಧಿ ಮಾಪುಃ ಪ್ರತೋಷ್ಯ ಕಾಂ ? ॥ ೧ ॥ ಕಿಂ

— ತ್ರಿಂಶಾಧ್ಯಾಯಂ —

ಕಂ॥ ಹರಿಯಿಂ ವರಂಗಳಂಪಡೆ । ದುರುಮಹಿಮರಹ ಪ್ರಚೇತಸರ್ ವಾರ್ಕ್ಷಿಯ ನಾ ।
ದರದಿಂ ಪಡೆಯುತೆ ಧರ್ಮದೆ। ಧರೆಯಂ ಪೊರೆದಿರವ ನಿಲ್ಲಿ ವಿವರಿಪೆ ನೀಗಳ್ ॥

ವಿದುರನು ಬೆಸಗೊಳ್ಳುತ್ತಾನೆ—ಬ್ರಹ್ಮನ್ - ಮೈತ್ರೇಯನೆ ! ಪ್ರಾಚೀನಬರ್ಹಿಷಃ - ಪ್ರಾಚೀನಬರ್ಹಿಯ, ಸುತಾಃ - ಮಕ್ಕಳಾದ, ಯೇ - ಯಾರು, ತ್ವಯಾ - ನಿನ್ನಿಂದ, ಅಭಿಹಿತಾಃ - ಹೇಳಲ್ಪಟ್ಟರೋ, ತೇ - ಅವರು, ರುದ್ರಗೀತೇನ - ರುದ್ರಗೀತದಿಂದ, ಹರಿಂ - ಹರಿಯನ್ನು, ಪ್ರತೋಷ್ಯ- ಸಂತೋಷಗೊಳಿಸಿ, ಕಾಂಸಿದ್ಧಿಂ- ಯಾವಫಲವನ್ನು, ಆಪುಃ ಪಡೆದರು ॥೧॥ ಬಾರ್ಹಸ್ಪತ್ಯ- ಎಲೈ ಬೃಹಸ್ಪತಿಗೆ

## ಮೂವತ್ತನೆಯ ಅಧ್ಯಾಯ.

— ಪ್ರಚೇತಸರು ವಾರ್ಕ್ಷಿ ಯೆಂಬವಳನ್ನು ಮದುವೆಯಾಗುವುದು —

ಅನಂತರದಲ್ಲಿ ವಿದುರನು ಮೈತ್ರೇಯನನ್ನು ಕುರಿತು, ಅಯ್ಯಾ ಮುನಿಯೆ ! ಪ್ರಚೇತಸರ ವೃತ್ತಾಂತವನ್ನು ಮುಗಿಸದೆಯೇ ನಡುವೆ ಪ್ರಾಚೀನಬರ್ಹಿಯ ಚರಿತ್ರೆಯನ್ನು ವಿವರಿಸಿದೆ. ಅವನ ಮಕ್ಕಳಾದ ಪ್ರಚೇತಸರು ರುದ್ರಗೀತಸ್ತೋತ್ರದಿಂದ ಹರಿಯನ್ನು ಸಂತೋಷಗೊಳಿಸಿ, ಯಾವ ಸಿದ್ಧಿಯನ್ನು ಪಡೆದರು ? ॥೧॥ ಅವರು ಅಪ್ರಯತ್ನವಾಗಿ ಪರಮೇಶ್ವರನ ದರ್ಶನವನ್ನು ಪಡೆದು, ಆತನ ಅನುಗ್ರಹಕ್ಕೆ ಪಾತ್ರರಾದುದರಿಂದ ಕಡೆಗೆ ಮೋಕ್ಷವನ್ನು

ಬಾಹ* ಸ್ವಿತ್ತೇಽಹ ಪರತ್ರ ವಾಥ ಕೈವಲ್ಯನಾಥ ಪ್ರಿಯಪಾರ್ಶ್ವವರ್ತಿನಃ । ಆ
ಸಾದ್ಯ ದೇವಂ ಗಿರಿಶಂ ಯದೃಚ್ಛಯಾ ಪ್ರಾಪುಃ ಪರಂ ನೂನ ಮಥ ಪ್ರಚೇತ
ಸಃ||೨|| ಮೈತ್ರೇಯಃ|| ಪ್ರಚೇತಸೋಽಂತರುದಧೌ ಪಿತುರಾದೇಶಕಾರಿಣಃ।
ಜಪಯಜ್ಞೇನ ತಪಸಾ ಪುರಂಜನ ಮತೋಷಯನ್ || ೩ || ದಶವರ್ಷಸಹ
ಸ್ರಾಂತೇ ಪುರುಷಸ್ತು ಸನಾತನಃ । ತೇಷಾ ಮಾವಿರಭೂ ತ್ಕೃಚ್ಛ್ರಂ ಶಾಂ
ತೇನ ಶಮಯನ್ ರುಚಾ ||೪|| ಸುಪರ್ಣಸ್ಕಂಧ ಮಾರೂಢೋ ಮೇರುಶೃಂಗ
ಮಿವಾಂಬುದಃ । ಪೀತವಾಸಾ ಮಣಿಗ್ರೀವಃ ಕುರ್ವನ್ ವಿತಿಮಿರಾ ದಿಶಃ ||೫||
ಕಾಶಿಷ್ಣುನಾ ಕನಕವರ್ಣವಿಭೂಷಣೇನ ಭ್ರಾಜತ್ಕಪೋಲವದನೋ ವಿಲಸತ್ಕಿ

---

ಶಿಷ್ಯನಾದ ಮೈತ್ರೇಯನೆ! ಯದೃಚ್ಛಯಾ- ಮಾರ್ಗವಶದಿಂದ, ಗಿರಿಶಂ- ಶಿವನನ್ನು, ಆಸಾದ್ಯ - ಹೊಂದಿ-
ಕೈವ .... ನಃ- ಮೋಕ್ಷಾಧಿಪತಿಯಾದ ವಿಷ್ಣುವಿಗೆ ಮಿತ್ರನಾದ ಮಹಾದೇವನ ಬಳಿಯಲ್ಲಿರುವ, ಪ್ರಚೇ
ತಸಃ - ಪ್ರಚೇತಸರು, ಪರಂ - ಮೋಕ್ಷವನ್ನು, ನೂನಂಪ್ರಾಪುಃ -ಹೊಂದಿದ್ದು ದಿಟವೇಸರಿ, ಅಥ- ಆದರೆ,
ಇಹ - ಇಲ್ಲಿಯು, ಪರತ್ರ - ಪರಲೋಕದಲ್ಲಿಯೂ, ಕಿಂ - ಏನು ಫಲವನ್ನು ಪಡೆವರು ||೨|| ಮೈತ್ರೇಯ
ನು ಹೇಳುತ್ತಾನೆ, ಪ್ರಚೇತಸಃ - ಪ್ರಚೇತಸರು, ಅಂತರುದಧೌ - ನಡುಗಡಲಲ್ಲಿ, ಪಿತುಃ - ತಂದೆಯ,
ಆದೇಶ ಕಾರಿಣಃ- ಆಜ್ಞೆಯನ್ನು ನಡೆಯಿಸುವವರಾಗಿ, ಜಪ ... ನ, ಜಪ-ಯಜ್ಞಗಳಿಂದಲೂ, ತಪಸಾ,
ತಪಸ್ಸಿನಿಂದಲೂ, ಪುರಂಜನಂ - ಹರಿಯನ್ನು, ಅತೋಷಯನ್ - ಸಂತೋಷಗೊಳಿಸಿದರು ||೩|| ಸನಾತ
ನಃ ಪುರುಷಃ- ಪುರಾಣ ಪುರುಷನು, ದಶ...ತೇ - ಹತ್ತುಸಾವಿರ ವರ್ಷಗಳಕಡೆಯಲ್ಲಿ, ಶಾಂತೇನ- ಸೌಮ್ಯ
ವಾದ, ರುಚಾ - ತೇಜಸ್ಸಿನಿಂದ, ಕೃಚ್ಛ್ರಂ - ಕಷ್ಟವನ್ನು, ಶಮಯನ್ - ಶಾಂತಿಗೊಳಿಸುತ್ತಾ, ತೇ
ಷಾಂ - ಅವರಿಗೆ, ಆವಿರಭೂತ್ - ಪ್ರತ್ಯಕ್ಷನಾದನು || ೪ || ಮೇರುಶೃಂಗಂ-ಮೇರುಶಿಖರವನ್ನು, ಅಂಬುದ
ಇವ - ಮೇಘದಂತೆ, ಸುಪ...ಧಂ - ಗರುಡನ ಭುಜವನ್ನು, ಆರೂಢಃ - ಏರಿ, ಪೀತವಾಸಾಃ - ಪೀತಾಂಬ
ರವನ್ನು ಧರಿಸಿ, ಮಣಿಗ್ರೀವಃ - ಕೌಸ್ತುಭವನ್ನು ಪಡೆದು, ದಿಶಃ - ದಿಕ್ಕುಗಳನ್ನು, ವಿತಿಮಿರಾಃ- ಪ್ರಕಾ
ಶಮಾನಗಳನ್ನಾಗಿ, ಕುರ್ವನ್ - ಮಾಡುತ್ತಾ ||೫|| ಕಾಶಿಷ್ಣುನಾ - ಪ್ರಕಾಶಮಾನವಾದ, ಕನಕ...ನ -

---

ಪಡೆಯುವುದೇನೋ ಸರಿಯಷ್ಟೆ. ಅದಕ್ಕೆ ಮೊದಲು ಈಲೋಕವಲ್ಲಿಯೂ ಪರಲೋಕಗ
ಳಲ್ಲಿಯೂ ಯಾವಯಾವ ಸಿದ್ಧಿಗಳನ್ನು ಪಡೆದರು ? ಇದನ್ನು ತಿಳುಹಬೇಕೆಂದು ಬೆಸಗೊಂಡ
ನು ||೨|| ಆಗ ಮೈತ್ರೇಯನು ಹೇಳುತ್ತಾನೆ—ಅಯ್ಯ ವಿದುರನೆ ! ಕೇಳು. ಪ್ರಚೇತಸರು
ತಂದೆಯಾಣತಿಯನ್ನನುಸರಿಸಿ ನಡುಗಡಲಲ್ಲಿ ಕುಳಿತು, ಜಪ, ಯಜ್ಞ, ತಪಸ್ಸು ಇವುಗಳಿಂ
ದ ಭಗವಂತನನ್ನಾರಾಧಿಸುತ್ತಿದ್ದರು ||೩|| ಇಂತು ಹತ್ತುಸಾವಿರವರ್ಷಗಳು ಕಳೆಯಲು,
ಪುರಾಣಪುರುಷನಾದ ವಾಸುದೇವಮೂರ್ತಿಯು ಶಾಂತವಾದ ತನ್ನ ಕಾಂತಿಯಿಂದಲೇ ಅವ
ರ ಚಿಂತೆಯನ್ನು ಕಳೆಯುತ್ತಾ, ಪ್ರತ್ಯಕ್ಷನಾದನು ||೪|| ಮೇರುಶಿಖರವನ್ನೇರಿದ ಮುಂಗಾ
ರುಮುಗಿಲಂತೆ ಗರುಡನ ಹೆಗಲನ್ನೇರಿ ಪೀತಾಂಬರ ಕೌಸ್ತುಭಕಾಂತಿಗಳಿಂದ ಸಕಲದಿಕ್ಕು
ಗಳನ್ನೂ ಬೆಳಗಿಸುತ್ತಿದ್ದನು ||೫|| ನವರತ್ನಖಚಿತಗಳಾದ ಭೂಷಣಗಳ ಕಾಂತಿಯು ಕದಪು
ಗಳಲ್ಲಿಯೂ, ಮುಖಕಮಲದಲ್ಲಿಯೂ ಮೆರೆಯುತ್ತಿತ್ತು. ತಲೆಯಲ್ಲಿ ರತ್ನಕಿರೀಟವೂ, ಹಸ್ತ
ಗಳಲ್ಲಿ ಶಂಖಚಕ್ರಾದ್ಯಾಯುಧಗಳೂ ಬೆಳಗುತ್ತಿದ್ದುವು. ಮಹರ್ಷಿಗಳು, ದೇವತೆಗಳು,ಗರು

ರೀಟಃ । ಅಷ್ಟಾಯುಧೈರನುಚರೈರ್ಮುನಿಭಿಸ್ಸುರೇಂದ್ರೈರಾಸೇವಿತೋ
ಗರುಡ ಕಿನ್ನರ ಗೀತಕೀರ್ತಿಃ ॥೬॥ ಪೀನಾಯತಾಽಷ್ಟಭುಜಮಂಡಲ ಮಧ್ಯ
ಲಕ್ಷ್ಮ್ಯಾ ಸ್ಪರ್ಧಚ್ಛ್ರಿಯಾ ಪರಿವೃತೋ ವನಮಾಲಯಾದ್ಯಃ। ಬರ್ಹಿಷ್ಮತಃ
ಪುರುಷ ಆಹ ಸುತಾನ್ ಪ್ರಪನ್ನಾನ್ ಪರ್ಜನ್ಯನಾದರುತಯಾ ಸಘೃಣಾಽವ
ಲೋಕಃ ॥೭॥ ಶ್ರೀಭಗವಾನ್ ॥ ವರಂ ವೃಣೀಧ್ವಂ ಭದ್ರಂ ವೋ ಯೂಯಂ
ಮೇ ನೃಪನಂದನಾಃ! । ಸೌಹಾರ್ದೇನಾಽಪೃಥಗ್ಧರ್ಮಾಸ್ತುಷ್ಟೋಽಹಂ
ಸೌಹೃದೇನ ವಃ ॥೮॥ ಯೋಽನುಸ್ಮರತಿ ಸಂಧ್ಯಾಯಾಂ ಯುಷ್ಮಾನನು
ದಿನಂ ನರಃ। ತಸ್ಯ ಭ್ರಾತೃಷ್ವಾತ್ಮಸಾಮ್ಯಂ ತಥಾ ಭೂತೇಷು ಸೌಹೃದಂ॥

---

ಚಿನ್ನದ ಒಡವೆಗಳಿಂದ, ಭ್ರಾಜ...ನಃ-ಹೊಳೆಯುವ ಗಲ್ಲಗಳು ಮುಖವೂ ಉಳ್ಳ, ವಿಲ....ಟಃ-ಪ್ರಕಾಶಮಾನವಾದ ಕಿರೀಟವುಳ್ಳ, ಅಷ್ಟಾಯುಧೈಃ - ಎಂಟು ಆಯುಧಗಳಿಂದಲೂ, ಅನುಚರೈಃ - ಭಕ್ತರಿಂದಲೂ, ಮುನಿಭಿಃ - ಋಷಿಗಳಿಂದಲೂ, ಸುರೇಂದ್ರೈಃ - ದೇವತೆಗಳಿಂದಲೂ, ಆಸೇವಿತಃ - ಸೇವಿಸಲ್ಪಡುವ, ಗರು...ರ್ತಿಃ - ಗರುಡರು, ಪನ್ನಗರು ಇವರಿಂದ ಹೊಗಳಲ್ಪಡುವ ಕೀರ್ತಿಯುಳ್ಳ ॥ ೬ ॥ ಪೀನಾ....ಕ್ಷ್ಮ್ಯಾ, ಪೀನ - ಗಡುಸಾಗಿರುವ, ಆಯತ - ನಿಡಿದಾದ, ಅಷ್ಟಭುಜ - ಎಂಟುತೋಳುಗಳ, ಮಂಡಲ-ಸುತ್ತಿನ, ಮಧ್ಯ - ಮಧ್ಯದಲ್ಲಿರುವ, ಲಕ್ಷ್ಮ್ಯಾ-ಲಕ್ಷ್ಮಿಯೊಡನೆ, ಸ್ಪರ್ಧಚ್ಛ್ರಿಯಾ- ಸೆಣಸುವ ಕಾಂತಿಯುಳ್ಳ, ವನಮಾಲಯಾ - ವನಮಾಲೆಯಿಂದ, ಪರಿವೃತಃ - ಬಳಸಲ್ಪಟ್ಟ, ಆದ್ಯಃಪುರುಷಃ - ಪುರಾಣಪುರುಷನು, ಸಘೃ....ಕಃ - ಕರುಣಾಕಟಾಕ್ಷದಿಂದ ನೋಡಿ, ಬರ್ಹಿಷ್ಮತಃ - ಪ್ರಾಚೀನಬರ್ಹಿಯ, ಸುತಾನ್ - ಮಕ್ಕಳಾದ ಪ್ರಚೇತಸರನ್ನು ಕುರಿತು, ಪರ್ಜ....ಯಾ - ಮೇಘಗರ್ಜಿತದಂತಿರುವ ಶಬ್ದದಿಂದ, ಆಹ - ಹೇಳುತ್ತಾನೆ ॥೭॥ ನೃಪನಂದನಾಃ-ರಾಜಪುತ್ರರಿರಾ ! ಯೂಯಂ-ನೀವು, ಸೌಹಾರ್ದೇನ - ಸ್ನೇಹದಿಂದ, ಅಪೃಥಗ್ಧರ್ಮಾಃ - ಸಮಾನಧರ್ಮವುಳ್ಳವರು, ವಃ - ನಿಮ್ಮ, ಸೌಹೃದೇನ - ಸ್ನೇಹದಿಂದ, ಅಹಂ - ನಾನು, ತುಷ್ಟಃ - ಸಂತೋಷಿಸಿದೆನು, ಮೇ-ನನ್ನಿಂದ, ವರಂ - ವರವನ್ನು, ವೃಣೀಧ್ವಂ- ಕೇಳಿರಿ, ವಃ - ನಿಮಗೆ, ಭದ್ರಂ - ಶುಭವಾಗಲಿ ॥೮॥ ಯಃ ನರಃ-ಯಾವ ಮನುಷ್ಯನು, ಅನುದಿನಂ- ನಿತ್ಯವೂ, ಸಂಧ್ಯಾಯಾಂ - ಸಂಜೆಯಲ್ಲಿ, ಯುಷ್ಮಾನ್ - ನಿಮ್ಮನ್ನು, ಅನುಸ್ಮರತಿ - ಸ್ಮರಿಸುವನೋ, ತಸ್ಯ - ಅವನಿಗೆ, ಭ್ರಾತೃಷು - ಒಡಹುಟ್ಟಿದವರಲ್ಲಿ, ಆತ್ಮಸಾಮ್ಯಂ - ಸಮಬುದ್ಧಿಯು, ತಥಾ - ಹಾ

---

ಡರು, ಕಿನ್ನರರು ಮೊದಲಾದವರು ಕೈವಾರಿಸುತ್ತಿದ್ದರು॥೬॥ದುಂಡಾಗಿ ಗಡುಸಾಗಿರುವ ಎಂಟುಭುಜಗಳ ಮಂಡಲಮಧ್ಯದಲ್ಲಿ ನೆಲಸಿರುವ ರಮಾದೇವಿಯೊಡನೆ ಸೆಣಸುವ ಕಾಂತಿಯಿಂದ ಕಾಂತವಾದ ವನಮಾಲೆಯು ರಾರಾಜಿಸಿತು. ಇಂತು ದಿವ್ಯಾಲಂಕಾರದಿಂದೊಪ್ಪುತ್ತಾ, ಪುರಾಣಪುರುಷನಾದ ಹರಿಯು ಶರಣಾಗತರಾದ ಪ್ರಚೇತಸರ ಬಳಿಗೆಬಂದು ಕರುಣಾಕಟಾಕ್ಷಗಳಿಂದ ವೀಕ್ಷಿಸುತ್ತಾ, ಮೇಘಗರ್ಜಿತದಂತೆ ಗಂಭೀರವಾದ ಧ್ವನಿಯಿಂದ ಅವರಿಗಿಂತೆಂದನು ॥೭॥ ಅಯ್ಯಾ ಅರಸುಮಕ್ಕಳಿರಾ ! ನಿಮಗೆ ಮಂಗಳವಾಗಲಿ. ನೀವು ಪರಸ್ಪರಮೈತ್ರಿಯಿಂದ ಸಮಾನಧರ್ಮರಾಗಿರುವುದರಿಂದ ನಿಮ್ಮ ನಡವಳಿಗೆ ಮೆಚ್ಚಿದೆನು. ಬೇಕಾದ ವರಗಳನ್ನು ಕೇಳಿಕೊಳ್ಳಿರಿ ॥೮॥ ಯಾವ ಪುರುಷನು ಅನುದಿನವೂ ಸಂಜೆಯಲ್ಲಿ ನಿಮ್ಮನ್ನು ಸ್ಮರಿಸಿಕೊಳ್ಳುವನೋ, ಅವನಿಗೆ ಸಹೋದರರಲ್ಲಿ ಮೈತ್ರಿಯೂ, ಭೂತಗಳಲ್ಲಿ ದಯೆಯೂ ಉಂ

ಯೇತು ಮಾಂ ರುದ್ರಗೀತೇನ ಸಾಯಂಪ್ರಾತ ಸ್ಸಮಾಹಿತಾಃ । ಸ್ತುವಂ ತ್ಯಹಂ ಕಾಮವರಾ ದಾಸ್ಯೇ ಪ್ರಜ್ಞಾಂಚ ಶೋಭನಾಂ ॥ ೧೦ ॥ ಯದ್ಯೂಯಂ ಪಿತು ರಾದೇಶ ಮಗ್ರಹೀಷ್ಟ ಮುದಾ ಽ ನ್ವಿತಾಃ । ಅಥೋ ವ ಉಶತೀ ಕೀರ್ತಿ ರ್ಲೋಕಾ ನನುಭವಿಷ್ಯತಿ ॥೧೧॥ ಭವಿತಾ ವಿಶ್ರುತಃ ಪುತ್ರೋ ಽ ನವಮೋ ಬ್ರಹ್ಮಣೋ ಗುಣೈಃ । ಯ ಏತಾ ಮಾತ್ಮವೀರ್ಯೇಣ ತ್ರಿಲೋಕೀಂ ಪೂರಯಿಷ್ಯತಿ ॥೧೨॥ ಕಂಡೋಃ ಪ್ರಮ್ಲೋಚಯಾ ಲಬ್ಧಾ ಕನ್ಯಾ ಕಮಲಲೋಚನಾ । ತಾಂ ಚಾ ಽ ಪವಿದ್ಧಾಂ ಜಗೃಹು ರ್ಭೂರುಹಾ

---

ಗೆಯೋ, ಭೂತೇಷು - ಪ್ರಾಣಿಗಳಲ್ಲಿ, ಸೌಹೃದಂ - ದಯೆಯು ಉಂಟಾಗುವುದು ॥೯॥ ಯೇತು-ಯಾರಾದರೆ, ಸಮಾಹಿತಾಃ - ಚಿತ್ತೈಕಾಗ್ರ್ಯದಿಂದ, ಸಾಯಂಪ್ರಾತಃ - ಸಂಜೆಮುಂಜಾನೆಗಳಲ್ಲಿ, ರುದ್ರಗೀತೇನ - ರುದ್ರಗೀತದಿಂದ, ಮಾಂ - ನನ್ನನ್ನು, ಸ್ತುವಂತಿ - ಹೊಗಳುವರೋ, ಅಹಂ - ನಾನು, ಕಾಮವರಾ - ಬೇಕಾದವರಗಳನ್ನೂ, ಶೋಭನಾಂ -ಶುಭಕರವಾದ, ಪ್ರಜ್ಞಾಂಚ - ಬುದ್ಧಿಯನ್ನೂ, ದಾಸ್ಯೇ ಕೊಡುವೆನು ॥೧೦॥

ಯತ್ - ಯಾವಕಾರಣದಿಂದ, ಯೂಯಂ - ನೀವು, ಪಿತುಃ - ತಂದೆಯ, ಆದೇಶಂ - ಅಪ್ಪಣೆಯನ್ನು, ಮುದಾ - ಸಂತೋಷದಿಂದ, ಅನ್ವಿತಾಃ - ಕೂಡಿ, ಅಗ್ರಹೀಷ್ಟ - ಗ್ರಹಿಸಿದಿರೋ, ಅಥೋ - ಅದರಿಂದ, ವಃ - ನಿಮ್ಮ, ಉಶತೀ - ರಮಣೀಯವಾದ, ಕೀರ್ತಿಃ - ಕೀರ್ತಿಯು, ಲೋಕಾ - ಲೋಕಗಳನ್ನು, ಅನುಭವಿಷ್ಯತಿ - ಅನುಭವಿಸುತ್ತದೆ ॥೧೧॥ ಯಃ - ಯಾವನು, ಆತ್ಮವೀರ್ಯೇಣ - ತನ್ನ ಸಂತಾನದಿಂದ, ಏತಾಂ - ಈ, ತ್ರಿಲೋಕೀಂ - ಮೂರುಲೋಕಗಳನ್ನು, ಪೂರಯಿಷ್ಯತಿ - ತುಂಬುವನೋ, ಅಂತಹ, ಬ್ರಹ್ಮಣಃ - ಬ್ರಹ್ಮನಿಗೆ, ಗುಣೈಃ - ಗುಣಗಳಿಂದ, ಅನವಮಃ - ಕಡಮೆಯಿಲ್ಲದ, ವಿಶ್ರುತಃ - (ಪ್ರಸಿದ್ಧನಾದ) ವಿಶ್ರುತನೆಂಬ, ಪುತ್ರಃ - ಮಗನು, ಭವಿತಾ - ಆಗುವನು ॥೧೨॥ ನೃಪನಂದನಾಃ - ರಾಜಪುತ್ರರಿರಾ ! ಕಂಡೋಃ - ವಿಶ್ರುತನ ಮಗನಾದ ಕಂಡುವಿಗೆ, ಪ್ರಮ್ಲೋಚಯಾ - ಪ್ರಮ್ಲೋಚೆಯೆಂಬ ಅಪ್ಸರಸ್ಸಿನಿಂದ, ಕಮಲಲೋಚನಾ - ಕಮಲನೇತ್ರೆಯಾದ, ಕನ್ಯಾ - ಕನ್ನೆಯು, ಲಬ್ಧಾ - ಹೊಂದಲ್ಪಟ್ಟಳು, ಅಪವಿದ್ಧಾಂ - ಬಿಡಲ್ಪಟ್ಟ, ತಾಂ - ಆಕೆಯನ್ನು. ಭೂರುಹಾಃ - ವೃಕ್ಷಗಳು, ಜಗೃಹುಃ - ಪರಿ

---

ಟಾಗಲಿ ॥೯॥ ಯಾರು ನಿಯಮದಿಂದ ನಿತ್ಯವೂ ಸಂಜೆಮುಂಜಾನೆಗಳಲ್ಲಿ ಈ ರುದ್ರಗೀತೆಯಿಂದ ನನ್ನನ್ನು ಸ್ತುತಿಸುವರೋ, ಅವರು ಬೇಕಾದ ಐಹಿಕಾಮುಷ್ಮಿಕ ಸುಖಗಳನ್ನೂ, ಶ್ರೇಯಸ್ಕರವಾದ ಸಾತ್ವಿಕಬುದ್ಧಿಯನ್ನೂ ಪಡೆಯಲಿ ॥೧೦॥ ನೀವು ಸಂತೋಷದಿಂದ ತಂದೆಯ ಆಣತಿಯನ್ನು ಪಡೆದಿರುವಿರಾದುದರಿಂದ ರಮಣೀಯವಾದ ನಿಮ್ಮ ಕೀರ್ತಿಯು ಲೋಕದಲ್ಲಿ ವಿಸ್ತರಿಸುವುದು ॥ ೧೧ ॥ ಬ್ರಹ್ಮನಂತೆ ಗುಣಗಳಿಂದ ವಿಖ್ಯಾತನಾದ ಒಬ್ಬ ಪುತ್ರನು ನಿಮಗೆ ಜನಿಸುವನು. ಅವನು ತನ್ನ ಸಂತಾನದಿಂದ ಮೂರುಲೋಕಗಳನ್ನೂ ತುಂಬುವನು ॥೧೨॥ ಪೂರ್ವದಲ್ಲಿ ಕಂಡುಮುನಿಯು ತಪಸ್ಸನ್ನು ಮಾಡುತ್ತಿರಲು, ದೇವತೆಗಳು ಆತನ ತಪೋಭಂಗಕ್ಕಾಗಿ "ಪ್ರಮ್ಲೋಚೆ"ಯೆಂಬ ಅಪ್ಸರಸ್ತ್ರೀಯನ್ನು ಕಳುಹಿದರು. ಕಂಡುಋಷಿಯು ಆಕೆಯೊಡನೆ ಬಹುಕಾಲ ರಮಿಸುತ್ತಿರಲು, ಗರ್ಭವತಿಯಾದ ಪ್ರಮ್ಲೋಚೆಯು ಆ ಗರ್ಭವನ್ನು ವೃಕ್ಷಗಳಲ್ಲಿಟ್ಟು ಸ್ವರ್ಗಕ್ಕೆ ಹೊರಟುಹೋದಳು. ವೃಕ್ಷಗಳು ಆ ಗರ್ಭವನ್ನು

ನೃಪನಂದನಾಃ! ॥ ೧೩ ॥ ಕ್ಷುತ್‌ಕ್ಷಾಮಾಯಾ ಮುಖೇ ರಾಜಾ ಸೋಮಃ ಪಿಯೂಷವರ್ಷಿಣೀಂ। ದೇಶಿನೀಂ ರೋದಮಾನಾಯಾ ನಿದಧೇ ಸ ದಯಾನ್ವಿತಃ ॥ ೧೪ ॥ ಪ್ರಜಾವಿಸರ್ಗ ಆದಿಷ್ಟಾಃ ಪಿತ್ರಾ ಮಾ ಮನುವರ್ತತಾ । ತತ್ರ ಕನ್ಯಾಂ ವರಾರೋಹಾಂ ತಾ ಮುದ್ವಹತ ಮಾಚಿರಂ॥ ೧೫॥ ಅಪೃಥ ಗ್ಧರ್ಮ ಶೀಲಾನಾಂ ಸರ್ವೇಷಾಂ ವಃ ಸುಮಧ್ಯಮಾ । ಅಪೃಥ ಗ್ಧರ್ಮಶೀಲೇಯಂ ಭೂಯಾತ್ಪತ್ನ್ಯರ್ಪಿತಾಶಯಾ ॥೧೬॥ ದಿವ್ಯವರ್ಷ ಸಹಸ್ರಾಣಾಂ ಸಹಸ್ರ ಮಹತೌಜಸಃ।ಭೌಮಾನ್ ಭೋಕ್ಷ್ಯಥ ಭೋಗಾನ್ವೈ ದಿವ್ಯಾಂಶ್ಚಾನುಗ್ರಹಾ ನ್ಮಮ ॥೧೭॥ಅಥ ಮಯ್ಯನಪಾಯಿನ್ಯಾ ಭಕ್ತ್ಯಾ ಪಕ್ವ ಗುಣಾಶಯಾಃ।

ಗ್ರಹಿಸಿದುವು ॥೧೩॥ ಕ್ಷುತ್‌ಕ್ಷಾಮಾಯಾಃ - ಹಸಿವಿನಿಂದ ಬಡವಾದ, ರೋದಮಾನಾಯಾಃ - ಅಳುತ್ತಿರುವ ಅವಳ, ಮುಖೇ - ಮುಖದಲ್ಲಿ, ರಾಜಾ - ವನಸ್ಪತಿಗಳಿಗೊಡೆಯನಾದ, ಸೋಮಃ - ಆ ಚಂದ್ರನು, ದಯಾನ್ವಿತಃ- ದಯಾಳುವಾಗಿ, ಪಿಯೂಷವರ್ಷಿಣೀಂ-ಅಮೃತವನ್ನು ಸುರಿಸುವ, ದೇಶಿನೀಂ-ತರ್ಜನಿಯೆಂಬ ಬೆರಳನ್ನು, ನಿದಧೇ - ಇಟ್ಟನು ॥೧೪॥ ಮಾಂ - ನನ್ನನ್ನು, ಅನುವರ್ತತಾ - ಅನುಸರಿಸುವ, ಪಿತ್ರಾ- ತಂದೆಯಿಂದ, ಪ್ರಜಾಸರ್ಗೇ - ಪ್ರಜಾಸೃಷ್ಟಿಯಲ್ಲಿ, ಆದಿಷ್ಟಾಃ-ಆಜ್ಞಾಪಿಸಲ್ಪಟ್ಟರುವಿರಿ, ತತ್ರ - ಆವಿಷಯದಲ್ಲಿ, ವರಾರೋಹಾಂ - ವರನನ್ನರಸುವ, ತಾಂ ಕನ್ಯಾಂ - ಆ ಕನ್ನೆಯನ್ನು, ಉದ್ವಹತ - ಮದುವೆಯಾಗಿರಿ, ಮಾಚಿರಂ - ತಡಮಾಡಬೇಡಿರಿ ॥೧೫॥ ಅಪೃ... ನಾಂ - ಒಂದೇವಿಧವಾದ ನಡವಳಿಯೂ, ಸ್ವಭಾವವೂ ಉಳ್ಳ, ವಸ್ಸರ್ವೇಷಾಂ - ನಿಮ್ಮೆಲ್ಲರಿಗೂ, ಅಪೃ....ಲಾ - ಅನುರೂಪವಾದ ನಡವಳಿಯೂ ಸ್ವಭಾವವೂ ಉಳ್ಳ, ಇಯಂಸುಮಧ್ಯಮಾ - ಈ ಕನ್ನೆಯು, ಅರ್ಪಿತಾಶಯಾ - ಅನುರಾಗವುಳ್ಳ, ಪತ್ನೀ - ಮಡದಿಯು, ಭೂಯಾತ್ - ಆಗಲಿ ॥೧೬॥ ದಿವ್ಯ....ಣಾಂ - ದೇವಮಾನದ ಸಾವಿರಗಳ, ಸಹಸ್ರಂ - ಸಾವಿರವರ್ಷಗಳವರೆಗೂ, ಅಹತೌಜಸಃ - ಅಪ್ರತಿಹತವಾದ ಶಕ್ತಿಯುಳ್ಳವರಾಗಿ, ಮಮ - ನನ್ನ, ಅನುಗ್ರಹಾತ್ - ಪ್ರಸಾದದಿಂದ, ಭೌಮಾನ್ - ಐಹಿಕಗಳಾದ, ದಿವ್ಯಾಂಶ್ಚ - ಪರಲೋಕಗಳ, ಭೋಗಾನ್ - ಭೋಗಗಳನ್ನು, ಭೋಕ್ಷ್ಯಥ-ಅನುಭವಿಸುವಿರಿ ॥೧೭॥ ಅಥ - ಬಳಿಕ, ಮಯಿ - ನನ್ನಲ್ಲಿ, ಅನಪಾಯಿನ್ಯಾ - ನಾಶರಹಿತವಾದ, ಭಕ್ತ್ಯಾ - ಭಕ್ತಿಯಿಂದ ಪಕ್ವ....ಯಾಃ - ನಷ್ಟಗಳಾದ ಮನೋದೋ

ಸಲಹುತ್ತಿದ್ದವು ॥ ೧೩ ॥ ಆ ಮಗುವು ಹಸಿವಿನಿಂದ ಬಡವಾಗಿ ರೋದಿಸಲು, ವೃಕ್ಷಗಳಿಗೆ ರಾಜನಾದ ಚಂದ್ರನು ಅಮೃತವನ್ನು ಕರೆವ ತನ್ನ ತರ್ಜನಿಯೆಂಬ ಬೆರಳನ್ನು ಬಾಯಿಯಲ್ಲಿಟ್ಟನು ॥೧೪॥ ಇಂತು ವೃಕ್ಷಗಳಿಂದ ಬೆಳೆಯಿಸಲ್ಪಟ್ಟುದರಿಂದ ಆ ಬಾಲೆಗೆ ವಾರ್ಕ್ಷಿಯೆಂದು ಹೆಸರಾಯಿತು. ನನ್ನ ಸಂಕಲ್ಪಾನುಸಾರವಾಗಿ ತಂದೆಯಿಂದ ಪ್ರಜಾಸೃಷ್ಟಿಯಲ್ಲಿ ಆಜ್ಞಪ್ತರಾಗಿರುವ ನೀವು ತಡಮಾಡದೆ, ಪತಿಯನ್ನರಸುತ್ತಿರುವ ಆಕೆಯನ್ನು ಮದುವೆಯಾಗಿರಿ ॥೧೫॥ ಒಂದೇರೀತಿಯಾದ ನಡವಳಿಯೂ ಸ್ವಭಾವವೂ ಉಳ್ಳ ನಿಮ್ಮೆಲ್ಲರಿಗೂ, ನಿಮಗನುರೂಪವಾದ ಶೀಲಸ್ವಭಾವಗಳುಳ್ಳ ಆಕೆಯೋರ್ವಳೇ ಪ್ರಿಯಪತ್ನಿಯಾಗಿರಲಿ ॥೧೬॥ ನೀವು ನನ್ನ ಅನುಗ್ರಹದಿಂದ ಹತ್ತುಲಕ್ಷ ದೇವಮಾನದ ವರ್ಷಗಳವರೆಗೂ ಮಹಾವೀರರೆನಿಸಿ ಇಹಪರಲೋಕಗಳ ಎಲ್ಲ ಭೋಗಗಳನ್ನೂ ಅನುಭವಿಸಿರಿ ॥೧೭॥ ತರುವಾಯ ನನ್ನಲ್ಲಿ ನೆಲೆಗೊಂಡ ಅನನ್ಯವಾದ ಭಕ್ತಿಯಿಂದ, ಕಾಮಾದಿಮನೋದೋಷಗಳನ್ನು

ಉಪಯಾಸ್ಯಥ ಮದ್ಧಾಮ ನಿರ್ವಿದ್ಯ ನಿರಯಾದತಃ ॥೧೮॥ ಗೃಹೇಷ್ವಾವಿಶ
ತಾಂ ಚಾಽಪಿ ಪುಂಸಾಂ ಕುಶಲಕರ್ಮಣಾಂ। ಮದ್ವಾರ್ತಾಯಾತಯಾಮಾ
ನಾಂ ನಬಂಧಾಯ ಗೃಹಾ ಮತಾಃ॥೧೯॥ನವ್ಯವದ್ಧೃದಯೇ ಯಜ್ಜ್ಞೋ
ಬ್ರಹ್ಮೈತದ್ಬ್ರಹ್ಮವಾದಿಭಿಃ । ನಮುಹ್ಯಂ ನಶೋಚಂತಿ ನಹೃಷ್ಯಂತಿ ಯ
ತೋ ಗತಾಃ ॥ ೨೦ ॥ ಮೈತ್ರೇಯಃ । ಏವಂ ಬ್ರುವಾಣಂ ಪುರುಷಾರ್ಥಭಾ
ಜನಂ ಜನಾರ್ದನಂ ಪ್ರಾಂಜಲಯಃ ಪ್ರಚೇತಸಃ । ತದ್ದರ್ಶನಧ್ವಸ್ತತಮೋ

ಷಗಳುಳ್ಳವರಾಗಿ, ನಿರಯಾತ್ - ನರಕಪ್ರಾಯವಾದ, ಅತಃ - ಈ ಇಹಪರಲೋಕಗಳಿಂದ, ನಿರ್ವಿದ್ಯ - ವಿರಕ್ತರಾಗಿ, ಮದ್ಧಾಮ - ನನ್ನನೆಲೆಗೆ, ಉಪಯಾಸ್ಯಥ - ಬರುವಿರಿ ॥ ೧೮ ॥ ಕುಶ...ಣಾಂ-ಕರ್ಮಗಳನ್ನು ನನಗರ್ಪಿಸುವ, ಮದ್ವಾ .. ನಾಂ - ನನ್ನ ಚರಿತ್ರೆಯಿಂದ ಕಾಲವನ್ನು ಕಳೆಯುವ, ಗೃಹೇಷು- ಸಂಸಾರದಲ್ಲಿ, ಆವಿಶತಾಮಪಿ - ಇರುವ, ಪುಂಸಾಂ - ಪುರುಷರಿಗೆ, ಗೃಹಾಃ - ಸಂಸಾರವು, ಬಂಧಾಯ - ಬಂಧಕ್ಕಾಗಿ, ನಮತಾಃ - ಹೇಳಲ್ಪಟ್ಟಿಲ್ಲ ॥ ೧೯ ॥ ಯತ್ - ಯಾವ ಕಾರಣದಿಂದ, ಜ್ಞಃ - ಸರ್ವಜ್ಞನಾದ ನಾನು, ಬ್ರಹ್ಮವಾದಿಭಿಃ - ಜ್ಞಾನೋಪದೇಷ್ಟೃಗಳಿಂದ, ಹೃತ್ - ಶ್ರೋತೃಗಳ ಹೃದಯವನ್ನು, ನವ್ಯವತ್ - ಹೊಸದನಾಗಿ, ಅಯೇ - ಹೊಂದುವೆನೋ, ಯತಃ - ಯಾರನ್ನು, ಗತಾಃ - ಹೊಂದಿದವರು, ನಮುಹ್ಯಂತಿ - ಮರುಳಾಗುವುದಿಲ್ಲವೋ, ನಶೋಚಂತಿ - ಶೋಕಿಸುವುದಿಲ್ಲವೋ, ನಹೃಷ್ಯಂತಿ - ಹಿಗ್ಗುವುದಿಲ್ಲವೋ, ಏತತ್ - ಇದೇ, ಬ್ರಹ್ಮ - ಬ್ರಹ್ಮವು, ನಾನಾಗಿರುವೆನು ॥ ೨೦ ॥ ಮೈತ್ರೇಯನು ಹೇಳುತ್ತಾನೆ. ಏವಂ - ಇಂತು, ಬ್ರುವಾಣಂ - ಹೇಳುತ್ತಿರುವ, ಪುರು....ನಂ - ಪುರುಷಾರ್ಥಗಳಿಗೆ ನೆಲೆಯಾದ, ಸುಹೃತ್ತಮಂ - ಹಿತೈಷಿಯಾದ, ಜನಾರ್ದನಂ - ವಿಷ್ಣುವನ್ನು ಕುರಿತು, ಪ್ರಾಂಜಲಯಃ - ಬದ್ಧಾಂಜಲಿಗಳಾದ, ಪ್ರಚೇತಸಃ - ಪ್ರಚೇತಸರು, ತದ್ದ....ಲಾಃ - ಆ ಹರಿದರ್ಶನದಿಂದ ಕಾಮಾದಿದೋಷಗಳನ್ನು ಕಳೆದವರಾಗಿ, ಗದ್ಗದಯಾ - ಕೊರಳುಬ್ಬಿದ, ಗಿರಾ - ವಾಕ್ಕಿನಿಂದ, ಅಗ್ಗಣ-

ಕಳೆದುಕೊಂಡು ನರಕಪ್ರಾಯಗಳಾದ ಇಹಪರಲೋಕಗಳಲ್ಲಿ ವಿರಕ್ತರಾಗಿ, ನನ್ನ ನೆಲೆಯನ್ನು ಹೊಂದಿರಿ ॥೧೮॥ ಸಂಸಾರಾಸಕ್ತರಿಗೆ ಮುಕ್ತಿಯೆಂತು ? ಎಂಬಿರೇನೋ? ಫಲಾಭಿಸಂಧಿಯಿಲ್ಲದೆ ಕರ್ಮಗಳನ್ನಾಚರಿಸಿ ಭಗವದರ್ಪಣಮಾಡುತ್ತಾ, ನನ್ನ ಚರಿತ ಶ್ರವಣಾದಿಗಳಿಂದ ಕಾಲವನ್ನು ಕಳೆಯುತ್ತಾ ಸಂಸಾರಿಗಳಾಗಿರುವವರಿಗೂ ಆ ಸಂಸಾರವು ಬಂಧವೆನಿಸಲಾರದು॥೧೯॥ ಸರ್ವಜ್ಞನಾದ ಯಾವ ಪರಮಾತ್ಮನು ಜ್ಞಾನೋಪದೇಷ್ಟೃಗಳ ಮೂಲಕವಾಗಿ ಶ್ರೋತೃಗಳ ಹೃದಯದಲ್ಲಿ ಹೊಸಹೊಸದಾಗಿರುವಂತೆ ಹೊಳೆಯುವನೋ, ಯಾರನ್ನು ಹೊಂದಿದವರು ಮೋಹ, ಶೋಕ, ಹರ್ಷ ಮೊದಲಾದ ವಿಕಾರಗಳನ್ನು ಪಡೆಯಲಾರರೋ, ಅಂತಹ ಪರಬ್ರಹ್ಮನೇ ನಾನಾಗಿರುವುದರಿಂದ ನನ್ನ ಭಕ್ತರು ಸಂಸಾರದಲ್ಲಿದ್ದರೂ ಬಂಧಕ್ಕೊಳಗಾಗುವುದಿಲ್ಲ, ಎಂದು ಹೇಳಿದನು ॥೨೦॥ ಅಯ್ಯಾ ವಿದುರನೆ ! ಇಂತು ಸಕಲ ಪುರುಷಾರ್ಥಗಳಿಗೂ ನೆಲೆಯಾದ ಜನಾರ್ದನನ ನುಡಿಗಳನ್ನು ಕೇಳಿ, ಪ್ರಚೇತಸರು ಕೈಮುಗಿದು ಭಗವದ್ದರ್ಶನದಿಂದ ರಜಸ್ತಮೋಗುಣಗಳಾದ ರಾಗಮೋಹಾದಿಗಳನ್ನು ಕಳೆದು, ಹರ್ಷಾತಿಶಯದಿಂದ ಗದ್ಗದಕಂಠರಾಗಿ ಪರಮದಯಾಳುವಾದ ಭಗವಂತನನ್ನಿಂತು ಹೊಗಳಿದರು ॥೨೧॥ ಅವಿದ್ಯಾದಿ ಕ್ಲೇಶಗಳನ್ನು ಕಳೆಯುವವನೆ ! ಜಗನ್ಮಂಗಳಕರಗಳಾದ ಕಲ್ಯಾಣ

ರಹೋಽಮುಲಾ ಗಿರಾ ಗೃಣನ್ ಗದ್ಗದಯಾ ಸುಹೃತ್ತಮಂ॥೨೧॥ ಪ್ರಚೇತಸಃ॥
ನಮೋ ನಮಃ ಕ್ಲೇಶವಿನಾಶನಾಯ ನಿರೂಪಿತೋದಾರಗುಣಾಹ್ವಯಾಯ ।
ಮನೋವಚೋವೇಗಪುರೋಜವಾಯ ಸರ್ವಾಽಕ್ಷಮಾರ್ಗೈರಗತಾಽ
ಧ್ವನೇ ನಮಃ ॥೨೨॥ ಶುದ್ಧಾಯ ಶಾಂತಾಯ ನಮಸ್ಸ್ವನಿಷ್ಠಯಾ ಮನಸ್ಯ
ಪಾರ್ಥಂ ‡ ವಿಲಸದ್ದ್ವಯಾಯ । ನಮೋ ಜಗತ್ ಸ್ಥಾನಲಯೋದಯೇಷು
ಗೃಹೀತ ಮಾಯಾಗುಣ ವಿಗ್ರಹಾಯ ॥೨೩॥ ನಮೋ ವಿಶುದ್ಧಸತ್ತ್ವಾಯ ಹರ

---

ಹೊಗಳಿದರು ॥೨೧॥ ಪ್ರಚೇತಸರು ಹೇಳುತ್ತಾರೆ, ಕ್ಲೇಶವಿನಾಶನಾಯ- ಕ್ಲೇಶಗಳನ್ನು ನಾಶಗೊಳಿಸುವ, ನಿರೂ....ಯ, ನಿರೂಪಿತ - ತಿಳುಹಿಸಲ್ಪಟ್ಟ, ಉದಾರ - ಉತ್ತಮಗಳಾದ, ಗುಣ - ಗುಣಗಳು, ಆಹ್ವಯಾಯ-ಹೆಸರುಗಳೂ ಉಳ್ಳ, ಮನೋ....ಯ-ಮನಸ್ಸಿಗೂ, ವಾಕ್ಕಿಗೂ ಮುಂದಾದ ವೇಗವುಳ್ಳ, ಸರ್ವಾ...ಗೈಃ - ಎಲ್ಲಾ ಇಂದ್ರಿಯ ದ್ವಾರಗಳಿಗೂ, ಅಗ....ನೇ - ಅಗೋಚರವಾದ ಮಾರ್ಗವುಳ್ಳ ನಿನಗೆ, ನಮೋ ನಮಃ - ಅನೇಕನಮಸ್ಕಾರಗಳು ॥೨೨॥ ಸ್ವನಿಷ್ಠಯಾ - ಸ್ವರೂಪಸ್ಥಿತಿಯಿಂದ, ಶುದ್ಧಾಯ - ನಿರ್ಮಲನಾದ, ಶಾಂತಾಯ - ಶಾಂತನಾದ, ಮನಸಿ - ಮನಸ್ಸುನಿಮಿತ್ತವಾದಲ್ಲಿ, ಅಪಾರ್ಥಂ - ವ್ಯರ್ಥವಾಗಿ, ವಿಲ...ಯ - ದ್ವೈತಪ್ರತೀತಿಯುಳ್ಳ, ಜಗ....ಷು, ಜಗತ್ತಿನ ಉತ್ಪತ್ತಿ, ಸ್ಥಿತಿ, ಲಯಗಳಲ್ಲಿ, ಗೃಹೀ....ಯ - ಮಾಯಾಗುಣಗಳಾದ ಸತ್ವಾದಿಗಳಿಂದ ಬ್ರಹ್ಮಾದಿ ಶರೀರಗಳನ್ನು ಪಡೆದವನಿಗೆ, ನಮಃ - ನಮಸ್ಕಾರವು ॥ ೨೩ ॥ ವಿಶುದ್ಧಸತ್ವಾಯ - ಶುದ್ಧಸತ್ವಸ್ವರೂಪನಾದ, ಹರಯೇ - ಪಾಪಹಾರಕನಾದ, ಹರಿಮೇಧಸೇ - ಸಂಸಾರತಾರಕವಾದ ಜ್ಞಾನವನ್ನುಂಟುಮಾಡುವ, ವಾಸುದೇವಾಯ-

---

ಗುಣಗಳನ್ನೂ, ಪಾಪಹಾರಕಗಳಾದ ದಿವ್ಯನಾಮಗಳನ್ನೂ ಹೊರಪಡಿಸಿದವನೆ! ವಾಙ್ಮನಸ್ಸುಗಳಿಗೆ ಅಗೋಚರನಾದವನೆ! ಇಂದ್ರಿಯಗಳಿಗೆ ವಿಷಯವಾದ ಮಾರ್ಗವುಳ್ಳವನ! ನಿನಗೆ ನಮಸ್ಕಾರವು ॥೨೨॥ ಸ್ವರೂಪಾವಸ್ಥಾನದಿಂದ ಪರಿಶುದ್ಧನಾಗಿ ನಿರ್ವಿಕಾರನಾದುದರಿಂದ ಶಾಂತನೆನಿಸಿ, ಮನಸ್ಸೆಂಬ ಉಪಾಧಿಯಿಂದ ಪದಾರ್ಥವಿಲ್ಲದಂತೆಯೇ ದ್ವೈತರೂಪವಾಗಿತೋರುತ್ತಾ, ಈ ಜಗತ್ತಿನ ಸೃಷ್ಟಿ, ಸ್ಥಿತಿ, ಲಯಗಳಿಗಾಗಿ, ಮಾಯಾಗುಣಗಳಾದ ಸತ್ವಾದಿಗಳಿಂದ ಬ್ರಹ್ಮಾದಿರೂಪಗಳನ್ನು ಪಡೆಯುವ ನಿನಗೆ ನಮಸ್ಕಾರವು ॥೨೩॥ ಶುದ್ಧಸತ್ವಸ್ವರೂಪನೂ, ಪಾಪಪರಿಹಾರಕನೂ, ಸಂಸಾರ ತಾರಕವಾದ ಜ್ಞಾನವನ್ನು ಕೊಡತಕ್ಕವನೂ, ಸಕಲ ಭಕ್ತರಿಗೂ ಪಾಲಕನೂ,ಆನಂದಘನನೂ ಆದ ಕೃಷ್ಣನೆ! ನಿನಗೆ ನಮಸ್ಕಾ

---

‡ (೧) ವೀ. ಸ್ವರೂಪ ಜ್ಞಾನವಿಲ್ಲದಿದ್ದರೂ ಯಾರಮನಸ್ಸಿನಲ್ಲಿ, ಭಗವತ್ಪ್ರಸಾದದಿಂದ ಪರಸ್ಪರ ವಿಲಕ್ಷಣಗಳಾದ ದೇಹಾತ್ಮಗಳ ಜ್ಞಾನವೆಂಬುದುಂಟಾಗುವುದೋ, ಅಂತಹ ಭಕ್ತರಿಗೆ ಪ್ರಿಯನಾದವನೆಂದು ಭಾವವು. ಮನಸ್ಯಪಾರ್ಥೇವಿಲಸದ್ವಯಾತ್ಮನೇ, ಎಂದು, ವೀ, ಪಾಠ,

(೨) ವಿ. ಶೋ॥ ಅನವಸ್ಥಿತಬುದ್ಧೀನಾಂ ದ್ವಿತೀಯಂ ದೃಶ್ಯತೇ ಹರೇಃ ।
ಸುವ್ಯವಸ್ಥಿತಬುದ್ಧೀನಾ ಮಿದಂ ಸರ್ವಂ ಹರೇ ರ್ವಶಃ ॥

ಸ್ಥಿರಚಿತ್ತವಿಲ್ಲದವರಿಗೆ,ಹರಿಗಿಂತ ಎರಡನೆಯ ಸ್ವತಂತ್ರವಸ್ತುವಿರುವುದೆಂದೂ ಸ್ಥಿರಚಿತ್ತರಿಗೆ ಸರ್ವವೂ ಹರಿಗಧೀನವೆಂದೂ ತೋರುವುದು.

ಯೇ ಹರಿಮೇಧಸೇ । ವಾಸುದೇವಾಯ ಕೃಷ್ಣಾಯ ಪ್ರಭವೇ ಸರ್ವಸಾತ್ವ
ತಾಂ ॥೨೪॥ ನಮಃ ಕಮಲನಾಭಾಯ ನಮಃ ಕಮಲಮಾಲಿನೇ । ನಮಃ
ಕಮಲ ಪಾದಾಯ ನಮಸ್ತೇ ಕಮಲೇಕ್ಷಣ ! ॥೨೫॥ ನಮಃ ಕಮಲಕಿಂ
ಜಲ್ಕಪಿಶಂಗಾಽಮಲವಾಸಸೇ । ಸರ್ವಭೂತನಿವಾಸಾಯ ನಮೋ ಯುಂ
ಕ್ಷ್ಮಹಿ ಸಾಕ್ಷಿಣೇ ॥೨೬॥ ರೂಪಂ ಭಗವತಾ ತ್ವೇತ ದಶೇಷಕ್ಲೇಶಸಂಕ್ಷ
ಯಂ।ಆವಿಷ್ಕೃತಂ ನಃ ಕ್ಲಿಷ್ಟಾನಾಂ ಕಿಮನ್ಯ ದನುಕಂಪಿತಂ? ॥೨೭॥ ಏತಾ
ವತ್ತ್ವಂಹಿ ವಿಭುಭಿ ರ್ಭಾವ್ಯಂ ಭೂತೇಷು ವತ್ಸಲೈಃ । ಯದನುಸ್ಮರ್ಯತೇ
ಕಾಲೇ ಸ್ವಬುದ್ಧ್ಯಾಽಭದ್ರರಂಧನ ! ॥೨೮॥ ಯೇನೋಪಶಾಂತಿ ರ್ಭೂತಾ
ನಾಂ ಕ್ಷುಲ್ಲಕಾನಾಂ ಮಪೀಹತಾಂ। ಅಂತರ್ಹಿತೋಽಂತರ್ಹೃದಯೇ ಕಸ್ಮಾ

---

ಆನಂದಖನಿಯಾದ, ಸರ್ವಸಾತ್ವತಾಂ - ಸಕಲಭಕ್ತರಿಗೂ, ಪ್ರಭವೇ - ಒಡೆಯನಾದ. ಕೃಷ್ಣಾಯ - ಕೃಷ್ಣನಿಗೆ, ನಮಃ - ನಮಸ್ಕಾರವು ॥೨೪॥

ಕಮಲನಾಭಾಯ - ನಾಭಿಯಲ್ಲಿ ಜಗದ್ರೂಪವಾದ ಕಮಲವುಳ್ಳ, ಕಮ....ನೇ - ಕಮಲಮಾಲಿಕೆಯನ್ನು ಧರಿಸಿದ, ಕಮಲಪಾದಾಯ - ತಾವರೆಗಳಂತೆ ಪಾದಗಳುಳ್ಳ, ಕಮಲೇಕ್ಷಣ - ಕೃಷ್ಣನ! ತೇ - ನಿನಗೆ, ತಮಃ ॥೨೫॥ ಕಮ....ಸೇ - ಕಮಲ ಕೇಸರಗಳಂತೆ ಹೊಂಬಣ್ಣವಾದ ಪೀತಾಂಬರವುಳ್ಳ, ಸರ್ವ....ಯ - ಸಕಲಭೂತಗಳಿಗೂ ನೆಲೆಯಾದ, ಸಾಕ್ಷಿಣೇ - ಸಾಕ್ಷಿಯಾದ ನಿನಗೆ, ನಮಃ-ನಮಸ್ಕಾರವನ್ನು, ಯುಕ್ಷ್ಮಹಿ - ಸಮರ್ಪಿಸುತ್ತೇವೆ ॥೨೬॥ ಭಗವತಾ - ಭಗವಂತನಿಂದ, ಅಶೇ. .ಯಂ - ಸಕಲಕಷ್ಟಗಳನ್ನೂ ಕಳೆಯುವ, ಏತದ್ರೂಪಂ - ಈ ರೂಪವು, ಕ್ಲಿಷ್ಟಾನಾಂ - ಕಷ್ಟಪಡುತ್ತಿರುವ, ನಃ - ನಮಗೆ, ಆವಿಷ್ಕೃತಂ - ತೋರಿಸಲ್ಪಟ್ಟಿತು ಅನ್ಯತ್ - ಬೇರೆ, ಅನುಕಂಪಿತಂ - ಅನುಗ್ರಹವು, ಕಿಂ - ಏನು ? ॥೨೭॥ ಅಭದ್ರರಂಧನ - ಅಮಂಗಳನಾಶಕನೆ ! ಕಾಲೇ - ಉಚಿತಕಾಲದಲ್ಲಿ, ಸ್ವಬುದ್ಧ್ಯಾ - ತಮ್ಮವರೆಂದು,ಅನುಸ್ಮರ್ಯತೇಯತ್ - ಸ್ಮರಿಸಲ್ಪಡುವುದಾವುದುಂಟೋ, ಏತಾವತ್ವಂ-ಇಷ್ಟೇ, ದೀನೇಷು-ದೀನರಲ್ಲಿ, ವತ್ಸಲೈಃ - ಕನಿಕರವುಳ್ಳ, ಪ್ರಭುಭಿಃ - ಪ್ರಭುಗಳಿಂದ, ಭಾವ್ಯಂಹಿ - ಮಾಡಲ್ಪಡತಕ್ಕದಷ್ಟೆ ॥ ಯೇನ - ಯಾವ ಸ್ಮರಣದಿಂದ, ಕ್ಷುಲ್ಲಕಾನಾಂ - ಪಾಪಗಳಿಗೆ, ಉಪಶಾಂತಿಃ - ನಾಶವುಂಟಾಗುವುದೋ,

---

ರವು ॥೨೪॥ ಕಮಲನಾಭನೆ ! ಕಮಲಮಾಲಾಧರನೆ ! ಕಮಲಚರಣನೆ ! ಕಮಲಾಕ್ಷನೆ ! ನಮಸ್ಕಾರವು ॥೨೫॥ ಕಮಲಕೇಸರದಂತೆ ಹೊಂಬಣ್ಣವಾದ ಪೀತಾಂಬರವನ್ನು ಧರಿಸಿ, ಸಕಲಪ್ರಾಣಿಗಳಿಗೂ ನೆಲೆಮನೆಯಾಗಿ, ಸರ್ವಸಾಕ್ಷಿಯಾದ ನಿನಗೆ ನಮಸ್ಕಾರವು ॥೨೬॥ ಅಯ್ಯಾ ಭಗವಂತನೆ ! ಕಷ್ಟಪಡುತ್ತಿರುವ ನಮ್ಮನ್ನುದ್ಧರಿಸುವುದಕ್ಕಾಗಿ ಸಕಲ ಕ್ಲೇಶಗಳನ್ನೂ ಕಳೆಯುವ ಈ ನಿನ್ನ ದಿವ್ಯರೂಪ ಸಂದರ್ಶನವನ್ನು ಮಾಡಿಸಿದುದಕ್ಕಿಂತಲೂ ನಮಗೆ ಮತ್ತಾವುದು ವರವು ? ॥೨೭॥ ಅಯ್ಯಾ ಕಲ್ಯಾಣಪ್ರದನ ! ಇವರು ನಮ್ಮವರು ಎಂದು ತಕ್ಕಕಾಲದಲ್ಲಿ ಸ್ಮರಿಸಿಕೊಳ್ಳುವುದಾವುದೋ, ಅದೇ ದೀನದಯಾಳುಗಳಾದ ಪ್ರಭುಗಳು ಆಶ್ರಿತರಲ್ಲಿ ಮಾಡತಕ್ಕ ಕಾರ್ಯವು ॥೨೮॥ ನಿನಗೆ ಭಕ್ತರ ಸ್ಮರಣೆಯುಂಟಾಗುವುದು ಅವರ ಕ್ಷೇಮಾರ್ಥವೇ ಹೊರತು ಬೇರೆಯಲ್ಲ. ವಿಷಯಾಭಿಲಾಷೆಯುಳ್ಳ ಕ್ಷುದ್ರಪ್ರಾಣಿಗಳ ಹೃದಯಗಳಲ್ಲಿಯೂ ಅಂತರ್ಯಾಮಿ ರೂಪದಿಂದಿರುವ ನಿನಗೆ ನಮ್ಮ ಮನೋರಥಗಳು ವ್ಯಾ

ನ್ನೋ ವೇದ ನಾಶಿಷಃ ? ॥೨೯॥ ಅಸಾವೇವ ವರೋಽಸ್ಮಾಕ ಮೀಪ್ಸಿತೋ ಜಗತಃ ಪತೇ ! । ಪ್ರಸನ್ನೋ ಭಗವಾನ್ ಯೇಷಾ ಮಪವರ್ಗಗುರು ರ್ಗತಿಃ ॥೩೦॥ ವರಂ ವೃಣೀಮಹೇಽಥಾಪಿ ನಾಥ ! ತ್ವತ್ಪರತಃ ಪರಾತ್। ನಹ್ಯಂ ತ ಸ್ತ್ವದ್ವಿಭೂತೀನಾಂ ಸೋಽನಂತ ಇತಿ ಗೀಯಸೇ ॥೩೧॥ ಪಾರಿಜಾತೇಽಂಜಸಾ ಲಬ್ಧೇ ಸಾರಂಗೋಽನ್ಯ ನ್ನಸೇವತೇ । ತ್ವದಂಘ್ರಿಮೂಲ ಮಾಸಾದ್ಯ ಸಾಕ್ಷಾ ತ್ಕಿಂಕಿಂ ವೃಣೀಮಹಿ ? ॥೩೨॥ ಯಾವ ತ್ತೇ ಮಾಯಯಾ ಸ್ಪೃಷ್ಟಾ ಭ್ರಮಾಮ ಇಹ ಕರ್ಮಭಿಃ । ತಾವ ದ್ಭವತ್ಪ್ರಸಂಗಾನಾಂ ಸಂಗಃ ಸ್ಯಾ

ಈಹತಾಂ - ಬಯಸುವ, ಭೂತಾನಾಂ - ಪ್ರಾಣಿಗಳ, ಅಂತರ್ಹೃದಯೇ - ಹೃದಯದಲ್ಲಿ, ಅಂತರ್ಹಿತಃ - ಅಂತರ್ಯಾಮಿಯಾಗಿ ನೆಲಸಿರುವನೀನು, ನಃ - ನಮ್ಮ, ಆಶಿಷಃ - ಕೋರಿಕೆಗಳನ್ನು, ಕಸ್ಮಾತ್ - ಹೇಗೆ, ನವೇದ - ತಿಳಿಯುವುದಿಲ್ಲ ॥ ೨೯ ॥ ಜಗತಃಪತೇ - ಜಗದ್ಗುರುವೆ ! ಯೇಷಾಂ - ಯಾರಿಗೆ, ಅಪವರ್ಗಗುರುಃ - ಮುಕ್ತಿಮಾರ್ಗವನ್ನು ತೋರುವ, ಗತಿಃ - ಮೋಕ್ಷಸ್ವರೂಪನಾದ, ಭಗವಾನ್-ಭಗವಂತನು, ಪ್ರಸನ್ನಃ - ಪ್ರಸನ್ನನಾದನೋ, ಅಸ್ಮಾಕಂ - ನಮಗೆ, ಅಸಾವೇವ - ಇದೇ, ಈಪ್ಸಿತಃ - ಇಷ್ಟವಾದ, ವರಃ - ವರವು ॥೩೦॥ ನಾಥ - ಸ್ವಾಮಿಯೆ ! ಅಥಾಪಿ - ಆದರೂ, ಪರತಃ - ಅಕ್ಷರಕ್ಕಿಂತಲೂ, ಪರಾತ್ - ಉತ್ತಮನಾದ, ತ್ವತ್ - ನಿನ್ನಿಂದ, ವರಂ - ವರವನ್ನು, ವೃಣೀಮಹೇ-ವರಿಸುವೆವು, ಆದರೆ ತ್ವದ್ವಿಭೂತೀನಾಂ - ನಿನ್ನ ಸಂಪತ್ತುಗಳಿಗೆ, ಅಂತಃ - ಕೊನೆಯು, ನಹಿ-ಇಲ್ಲವಷ್ಟೆ, ಸಃ - ಆ ನೀನು, ಅನಂತಇತಿ - ಅನಂತನೆಂದು, ಗೀಯಸೇ - ಹೊಗಳಲ್ಪಡುವೆ ॥ ೩೧ ॥ ಸಾರಂಗಃ-ಭ್ರಮರವು, ಅಂಜಸಾ - ಬೇಗನೆ, ಪಾರಿಜಾತೇ - ಪಾರಿಜಾತವು, ಲಬ್ಧೇ - ದೊರೆತಾಗ, ಅನ್ಯತ್ - ಮತ್ತಾವುದನ್ನೂ, ನಸೇವತೇ - ಸೇವಿಸುವುದಿಲ್ಲ, ತ್ವದಂ....ಲಂ - ನಿನ್ನಪಾದಮೂಲವನ್ನು, ಸಾಕ್ಷಾತ್- ಪ್ರತ್ಯಕ್ಷವಾಗಿ, ಆಸಾದ್ಯ - ಹೊಂದಿ, ಕಿಂಕಿಂ - ಏನೇನನ್ನು, ವೃಣೀಮಹಿ - ವರಿಸುವೆವು ॥೩೨॥

ತ್ರ ತಿಳಿಯದಿರುವ್ರವೆ ?॥ ೨೯॥ಆದರೂ ನಮ್ಮಿಂದಲೇ ಹೇಳಿಸಬೇಕೆಂದಿರುವೆಯಾದರೆ ಹೇಳುವೆವು. ಎಲೈ ಜಗನ್ನಾಥನೆ ! ಮುಕ್ತಿನಾಯಕನೂ, ಮೋಕ್ಷಸ್ವರೂಪನೂ, ಆದ ನೀನು ಪ್ರಸನ್ನನಾದುದೇ ನಮಗೆ ಬೇಕಾದ ಮುಖ್ಯವರವು ॥೩೦॥ ಆದರೂ ನಿನ್ನ ಆಜ್ಞಾನುಸಾರವಾಗಿ ಪರಾತ್ಪರನಾದ ನಿನ್ನಿಂದ ವರವನ್ನು ಬೇಡುವೆವು. ಆದರೆ ಕೇಳಿದ ವರಗಳನ್ನು ಕೊಡುವುದಕ್ಕೆ ನೀನು ಶಕ್ತನಾಗಿದ್ದರೂ, ನಿನ್ನ ವಿಭೂತಿಗಳಿಗೆ ಪಾರವಿಲ್ಲದುದರಿಂದ ನೀನು ಅನಂತನೆನಿಸಿಕೊಂಡಿರುವೆ. ಇಂತಹ ನಿನ್ನಲ್ಲಿ ಯಾವ ವರಗಳನ್ನು ಬೇಕೋ ನಾವರಿಯೆವು ॥೩೧॥ ಆದರೂ ಭ್ರಮರವು ಪಾರಿಜಾತಪುಷ್ಪದ ಮಕರಂದವನ್ನು ಸವಿದಬಳಿಕ ಮತ್ತಾವ ಪುಷ್ಪವನ್ನೂ ಎಂತು ಬಯಸುವುದಿಲ್ಲವೋ, ಅಂತು ನಿನ್ನ ಪಾದಮೂಲವನ್ನಾಶ್ರಯಿಸಿದ ನಾವು ಮತ್ತಾವ ವರವನ್ನೂ ಬೇಡಲಾರೆವು. ಒಂದುವೇಳೆ ಬೇಡಿದರೆ, ಮನೋರಥಗಳಿಗೆ ಪಾರವಿಲ್ಲದುದರಿಂದ ಏನೇನನ್ನು ಬೇಡಬಹುದು ? ಬೇಡಿದರೂ ತುಚ್ಛವಿಷಯಗಳಂದಾಗತಕ್ಕುದೇನು? ॥೩೨॥ಆದುದರಿಂದ, ಇಷ್ಟುಮಾತ್ರ ನಮಗೆ ವರವನ್ನು ದಯೆಪಾಲಿಸು. ನಾವು ನಿನ್ನ ಮಾಯೆಯಿಂದ ಮೋಹಿತರಾಗಿ ಎಲ್ಲಿಯವರೆಗೂ ಈ ಜನನ ಮರಣರೂಪ

ನ್ಸ್ಯೋ ಭವೇ ಭವೇ ॥೩೩॥ ತುಲಯಾಮ ಲವೇನಾಪಿ ನಸ್ವರ್ಗಂ ನಾಽ
ಪುನರ್ಭವಂ । ಭಗವತ್ಸಂಗಿಸಂಗಸ್ಯ ಮರ್ತ್ಯಾನಾಂ ಕಿಮುತಾಶಿಷಃ ॥೩೪॥
ಯತ್ರೇಡ್ಯಂತೇ ಕಥಾ ಮೃಷ್ಟಾ ಸ್ತೃಷ್ಣಾಯಾಃ ಪ್ರಶಮೋ ಯತಃ । ನಿರ್ವೈ
ರಂ ಯತ್ರ ಭೂತೇಷು ನೋದ್ವೇಗೋ ಯತ್ರ ಕಶ್ಚನ ॥೩೫॥ ಯತ್ರ ನಾ
ರಾಯಣಃ ಸಾಕ್ಷಾ ದ್ಭಗವಾ ನ್ನ್ಯಾಸಿನಾಂ ಗತಿಃ । ಸಂಸ್ತೂಯತೇ ಸತ್ಕಥಾ
ಸು ಮುಕ್ತಸಂಗೈಃ ಪುನಃ ಪುನಃ ॥೩೬॥ ತೇಷಾಂ ವಿಚರತಾಂ ಪದ್ಭ್ಯಾಂ ತೀ
ರ್ಥಾನಾಂ ಪಾವನೇಚ್ಛಯಾ । ಭೀತಸ್ಯ ಕಿಂ ನರೋಚೇತ ? ತಾವಕಾನಾಂ

---

ತೇ-ನಿನ್ನ, ಮಾಯೆಯಿಂದ, ಸೃಷ್ಟಾಃ-ಆಕ್ರಮಿಸಲ್ಪಟ್ಟವರಾಗಿ, ಯಾವತ್-ಎಲ್ಲಿಯವರೆಗೆ, ಇಹ-ಈ ಸಂಸಾರದಲ್ಲಿ, ಕರ್ಮಭಿಃ-ಕರ್ಮಗಳಿಂದ, ಭ್ರಮಾಮಃ-ಅಲೆಯುವೆವೋ, ತಾವತ್-ಅಲ್ಲಿಯವರೆಗೂ, ನಃ-ನಮಗೆ, ಭವ...ನಾಂ-ಭವತ್-ನಿನ್ನಲ್ಲಿ, ಪ್ರಸಂಗಾನಾಂ-ಸಂಬಂಧವುಳ್ಳವರ, ಸಂಗಃ-ಸಹವಾಸವು, ಭವೇಭವೇ-ಪ್ರತಿಜನ್ಮದಲ್ಲಿಯೂ, ಸ್ಯಾತ್-ಆಗಲಿ ॥೩೩॥ ಭಗ....ಸ್ಯ-ಭಗವಂತನಲ್ಲಿ ಸಂಗವುಳ್ಳ ಭಕ್ತರ ಸಂಗಕ್ಕೆ, ಲವೇನಾಪಿ-ಎಳ್ಳಷ್ಟಾದರೂ, ಸ್ವರ್ಗಂ-ಸ್ವರ್ಗವನ್ನೂ, ಅಪುನರ್ಭವಂ - ಮೋಕ್ಷವನ್ನೂ ಸಹ, ನತುಲಯಾಮಃ -ಸಮಗೊಳಿಸಲಾರೆವು, ಮರ್ತ್ಯಾನಾಂ-ಮನುಷ್ಯರ, ಆಶಿಷಃ-ಭೋಗಗಳನ್ನು, ಕಿಮುತ-ಹೇಳುವುದೇನು?॥೩೪॥ ಯತ್ರ-ಯಾವಸತ್ಸಂಗದಲ್ಲಿ, ಮೃಷ್ಟಾಃ-ಪಾಪಶೋಧಕಗಳಾದ, ಕಥಾಃ-ಭಗವಚ್ಚರಿತ್ರೆಗಳು, ಈಡ್ಯಂತೇ-ಹೊಗಳಲ್ಪಡುವವೋ, ಯತಃ-ಯಾವುದರಿಂದ, ತೃಷ್ಣಾಯಾಃ-ಆಸೆಯ, ಪ್ರಶಮಃ - ನಾಶವುಂಟಾಗುವುದೋ, ಯತ್ರ-ಎಲ್ಲಿ, ಭೂತೇಷು - ಪ್ರಾಣಿಗಳಲ್ಲಿ, ನಿರ್ವೈರಂ - ವೈರತ್ರಿಯಿರುವುದೋ, ಯತ್ರ-ಎಲ್ಲಿ ಕಶ್ಚನ-ಯಾವ, ಉದ್ವೇಗಃ-ದುಃಖವೂ, ನ-ಇಲ್ಲವೋ ॥೩೫॥ ಯತ್ರ-ಎಲ್ಲಿ, ಮುಕ್ತಸಂಗೈಃ- ವಿರಕ್ತರಿಂದ, ಪುನಃಪುನಃ-ಅಡಿಗಡಿಗೂ, ನ್ಯಾಸಿನಾಂ - ಸನ್ಯಾಸಿಗಳಿಗೆ, ಗತಿಃ - ಪ್ರಾಪ್ಯನಾದ, ಭಗವಾನ್ - ಭಗವಂತನಾದ, ಸಾಕ್ಷಾತ್ ನಾರಾಯಣಃ - ನಾರಾಯಣಮೂರ್ತಿಯೇ ನೇರವಾಗಿ, ಸತ್ಕಥಾಸು - ಸಚ್ಚರಿತ್ರೆಗಳಲ್ಲಿ, ಸಂಸ್ತೂಯತೇ - ಹೊಗಳಲ್ಪಡುವನೋ ॥ ೩೬ ॥ ತೀರ್ಥಾನಾಂ - ಗಂಗಾದಿತೀರ್ಥಗಳ, ಪಾವನೇಚ್ಛಯಾ - ಪಾರಿಶುದ್ಧ್ಯಾಭಿಲಾಷೆಯಿಂದ, ಪದ್ಭ್ಯಾಂ - ಪಾದಗಳಿಂದ, ವಿಚರತಾಂ -

---

ವಾದ ಸಂಸಾರದಲ್ಲಿ ಕರ್ಮವಶರಾಗಿ ನರಳುವೆವೋ?, ಅಲ್ಲಿಯವರೆಗೂ ನಮಗೆ ಜನ್ಮಜನ್ಮದಲ್ಲಿಯೂ ನಿನ್ನ ಭಕ್ತರಸಂಗವು ಲಭಿಸುತ್ತಿರಲಿ ॥ ೩೩ ॥ ಸ್ವರ್ಗಸಾಮ್ರಾಜ್ಯ, ಮೋಕ್ಷಾನಂದ ಇವುಗಳು ಕೂಡ ಭಾಗವತರ ಸಂಗದ ಲೇಶವನ್ನು ಹೋಲಲಾರವು. ಇಂತಿರುವಲ್ಲಿ ಅಲ್ಪಾಯುಗಳಾದ ಮಾನವರ ಭೋಗಗಳನ್ನು ಹೇಳುವುದೇನು ? ॥ ೩೪ ॥ ಯಾವ ಭಕ್ತರಸಂಗದಲ್ಲಿ, ಪಾಪಹಾರಕಗಳಾಗಿ, ಆಶಾಪಾಶಗಳನ್ನು ಹೋಗಲಾಡಿಸುವ ಭಗವತ್ಕಥಾ ಪ್ರಸಂಗಗಳು ನಡೆಯುವುವೋ?, ಸಕಲ ಭೂತಗಳಲ್ಲಿಯೂ ಕನಿಕರವುಂಟಾಗುವುದೋ, ದ್ವೇಷಬುದ್ಧಿಯು ತೊಲಗುವುದೋ, ದುಃಖಗಳು ನಶಿಸಿ ಮನಶ್ಶಾಂತಿಯುಂಟಾಗುವುದೋ ॥ ೩೫ ॥ ಯಾವ ಕೂಟದಲ್ಲಿ ಪರಮವಿರಕ್ತರಾದ ಭಕ್ತರು ಸತ್ಕಥಾಲಾಪಗಳಲ್ಲಿ, ಜ್ಞಾನಿಗಳಿಗೆ ಗತಿಯಾದ ನಾರಾಯಣಮೂರ್ತಿಯ ದಿವ್ಯಚರಿತ್ರೆಗಳನ್ನು ಅಡಿಗಡಿಗೂ ಸಂಭಾಷಿಸುವರೋ ॥ ೩೬ ॥ ಯಾವ ಮಹನೀಯರು ಲೋ

ಸಮಾಗಮಃ ||೩೭|| ವಯಂತು ಸಾಕ್ಷಾ ದ್ಭಗವನ್ ! ಭವಸ್ಯ ಪ್ರಿಯಸ್ಯ ಸ
ಖ್ಯುಃ ಕ್ಷಣಸಂಗಮೇನ | ಸುದುಶ್ಚಿಕಿತ್ಸಸ್ಯ ಭವಸ್ಯ ಮೃತ್ಯೋರ್ಭಿಷಕ್ತಮಂ
ತ್ವಾದ್ಯ ಗತಿಂ ಗತಾ ಸ್ಮ ||೩೮|| ಯನ್ನಃ ಸ್ವಧೀತಂ ಗುರವಃ ಪ್ರಸಾದಿತಾಃ
ವಿಪ್ರಾಶ್ಚ ವೃದ್ಧಾಶ್ಚ ಸದಾಽನುವೃತ್ತ್ಯಾ | ಆರ್ಯಾ ನತಾ ಸ್ಸುಹೃದೋ ಭ್ರಾತ
ರಶ್ಚ ಸರ್ವಾಣಿ ಭೂತಾ ನ್ಯನಸೂಯಯೈವ || ೩೯ || ಯನ್ನಃ ಸುತಪ್ತಂ ತ
ಪ ಏತದೀಶ ! ನಿರಂಧಸಾಂ ಕಾಲ ಮದಭ್ರ ಮಪ್ಸು | ಸರ್ವಂ ತದೇತ ತ್ಪು
ರುಷಸ್ಯ ಭೂಮ್ನೋ ವೃಣೀಮಹೇ ತೇ ಪರಿತೋಷಣಾಯ || ೪೦ || ಮನು

ಸಂಚರಿಸುವ, ತೇಷಾಂತಾವಕಾನಾಂ-ಆ ನಿನ್ನ ಭಕ್ತರ, ಸಮಾಗಮಃ-ಸಂಗವು, ಭೀತಸ್ಯ-ಸಂಸಾರದಿಂದ ಹೆದರಿದವನಿಗೆ, ಕಿಂನರೋಚೇತ- ರುಚಿಸುವುದಿಲ್ಲವೆ? ||೩೭|| ಭಗವನ್-ಭಗವಂತನೆ ! ಪ್ರಿಯಸ್ಯಸಖ್ಯುಃ-ಪ್ರಿಯಮಿತ್ರನಾದ, ಭವಸ್ಯ - ಮಹಾದೇವನ, ಸಾಕ್ಷಾತ್-ಪ್ರತ್ಯಕ್ಷವಾದ, ಕ್ಷಣಸಂಗಮೇನ - ಕ್ಷಣಸಂಗದಿಂದ, ವಯಂ-ನಾವು, ಸುದು....ಸ್ಯ-ಚಿಕಿತ್ಸೆಗೆ ಅಸಾಧ್ಯವಾದ, ಭವಸ್ಯ- ಸಂಸಾರವೆಂಬ, ಮೃತ್ಯೋಃ-ಮೃತ್ಯುವಿಗೆ, ಭಿಷಕ್ತಮಂ-ಉತ್ತಮವೈದ್ಯನಾದ, ತ್ವಾಂ-ನಿನ್ನನ್ನು, ಅದ್ಯ-ಈಗ, ಗತಿಂ-ಶರಣವನ್ನಾಗಿ, ಗತಾಸ್ಮಃ-ಹೊಂದಿದೆವು ||೩೮|| ನಃ-ನಮ್ಮ, ಸ್ವಧೀತಂ - ಅಧ್ಯಯನವು, ಗುರವಃ-ಗುರುಗಳು, ಪ್ರಸಾದಿತಾಃ-ಸಂತೋಷಿಸಲ್ಪಟ್ಟದು, ವಿಪ್ರಾಶ್ಚ - ಬ್ರಾಹ್ಮಣರು, ವೃದ್ಧಾಶ್ಚ - ಹಿರಿಯರು, ಸದಾ ಯಾವಾಗಲೂ, ಅನುವೃತ್ತ್ಯಾ ಅನುವರ್ತನದಿಂದ, ಪ್ರಸಾದಿತಾಃ - ಸಂತೋಷಿಸಲ್ಪಟ್ಟುದೂ, ಆರ್ಯಾಃ - ಪೂಜ್ಯರಾದ, ಸುಹೃದಃ - ಮಿತ್ರರೂ, ಭ್ರಾತರಃ-ಸಹೋದರರೂ, ಸರ್ವಾಣಿ-ಎಲ್ಲಾ, ಭೂತಾನಿ- ಪ್ರಾಣಿಗಳು, ಅನಸೂಯಯೈವ - ಮೈತ್ರಿಯಿಂದ, ನತಾಃ - ವಂದಿಸಲ್ಪಟ್ಟದೂ, ಯತ್ - ಯಾವುದುಂಟೋ ||೩೯|| ನಿರಂಧಸಾಂ- ಆಹಾರವಿಲ್ಲದ, ನಃ-ನಮ್ಮ, ಅದಭ್ರಕಾಲಂ - ಬಹುಕಾಲ, ಅಪ್ಸು-ಜಲದಲ್ಲಿ, ಸುತಪ್ತಂಯತ್-ತಪಸ್ಸು ಯಾವುದುಂಟೋ, ಏತತ್ಸರ್ವಂ - ಇದೆಲ್ಲವೂ, ಭೂಮ್ನಃ-ಸರ್ವಾತ್ಮಕನಾದ, ಪುರುಷಸ್ಯ-

ಕದಲ್ಲಿರುವ ಗಂಗಾದಿ ತೀರ್ಥಗಳನ್ನು ಪರಿಶುದ್ಧಗೊಳಿಸುವುದಕ್ಕಾಗಿ ಕಾಲ್ನಡಿಯಿಂದ ಸಂಚರಿಸುತ್ತಿರುವರೋ, ಅಂತಹ ನಿನ್ನ ಭಕ್ತರ ಸಂಗವು, ಸಂಸಾರಭೀತನಾದ ಯಾವ ಪುರುಷನಿಗೆ ತಾನೇ ರುಚಿಸದೇಹೋದೀತು ? ||೩೭|| ಅಯ್ಯಾ ಭಗವಂತನೇ ! ನಾವು ನಿನಗೆ ಪರಮ ಮಿತ್ರನಾದ ಮಹಾದೇವಮೂರ್ತಿಯೊಡನೆ ಕ್ಷಣಕಾಲ ನೆಲಸಿದ್ದ ಮಾತ್ರದಿಂದಲೇ, ಚಿಕಿತ್ಸೆಗೆ ಅಸಾಧ್ಯವೆನಿಸಿದ ಮೃತ್ಯುರೂಪವಾದ ಸಂಸಾರವೆಂಬ ದೀರ್ಘರೋಗಕ್ಕೆ ಉತ್ತಮವೈದ್ಯನಾದ ನಿನ್ನನ್ನು ಶರಣಹೊಂದಿದೆವು. ಭಕ್ತರಸಂಗವು ಮಹಾ ಫಲಪ್ರದವೆಂಬುದಕ್ಕಿದೇ ದೃಷ್ಟಾಂತವು ||೩೮|| ಎಲೈ ಸ್ವಾಮಿಯೇ ! ನಮಗೆ ಮತ್ತೊಂದು ವರವನ್ನನುಗ್ರಹಿಸು. ನಾವು ವೇದಶಾಸ್ತ್ರಗಳನ್ನು ಅಧ್ಯಯನ ಮಾಡಿದುದೂ, ಗುರುಗಳನ್ನೂ, ಬ್ರಾಹ್ಮಣರನ್ನೂ, ಹಿರಿಯರನ್ನೂ ನಿರಂತರವೂ ಅನುವರ್ತನೆಯಿಂದ ಸೇವಿಸಿದುದೂ, ಮಿತ್ರರನ್ನೂ, ಭ್ರಾತೃಗಳನ್ನೂ ವಂದನಾದಿಗಳಿಂದ ಸಂತೋಷಗೊಳಿಸುದುದೂ, ಸರ್ವಭೂತಗಳನ್ನೂ ಸಮಬುದ್ಧಿಯಿಂದ ಕಂಡುದೂ, ಬಹುಕಾಲದವರೆಗೂ ಜಲದಲ್ಲಿ ನೆಲಸಿ ಅನಶನವ್ರತದಿಂದ ತಪಸ್ಸನ್ನು ಮಾಡಿದುದೂ, ಇವೆಲ್ಲವೂ ಪುರಾಣಪುರುಷನಾದ ನಿನ್ನ ಸಂತೋಷಕ್ಕಾಗಲಿ || ||೩೯—೪೦|| ಅಯ್ಯಾ ಪರಮಾತ್ಮನೆ ! ಸ್ವಾಯಂಭುವಮನುವು, ಚತುರ್ಮುಖನು, ಭಗ

ಸ್ವಾಯಂಭುವೋ ಭಗವಾನ್ ಭವಶ್ಚ ಯೇಽನ್ಯೇ ತಪೋಜ್ಞಾನವಿಶುದ್ಧಸತ್ತ್ವಾಃ।
ಅದೃಷ್ಟಪಾರಾ ಅಪಿ ಯನ್ಮಹಿಮ್ನಃ ಸ್ತುವಂತ್ಯಥೋ ತ್ವಾತ್ಮಸಮಂ ಗೃಣೀ
ಮಃ ॥ ೪೧ ॥ ನಮಃ ಸಮಾಯ ಶುದ್ಧಾಯ ಪುರುಷಾಯ ಪರಾಯ ಚ । ವಾ
ಸುದೇವಾಯ ಸತ್ತ್ವಾಯ ತುಭ್ಯಂ ಭಗವತೇ ನಮಃ ॥೪೨॥ ಮೈತ್ರೇಯಃ ॥
ಇತಿ ಪ್ರಚೇತೋಭಿ ರಭಿಷ್ಟುತೋ ಹರಿ ಪ್ರೀತ ಸ್ತಥೇತ್ಯಾಹ ಶರಣ್ಯವತ್ಸಲಃ।
ಅನಿಚ್ಛತಾಂ ಯಾನ ಮತೃಪ್ತ ಚಕ್ಷುಷಾಂ ಯಯೌ ಸ್ವಧಾಮಾನಪವರ್ಗವೀ
ರ್ಯಃ ॥ ೪೩॥ ಅಥ ನಿರ್ಯಾಯ ಸಲಿಲಾತ್ ಪ್ರಚೇತಸ ಉದನ್ವತಃ । ವೀಕ್ಷ್ಯಾ

---

ಪುರುಷನಾದ, ತೇ-ನಿನ್ನ, ಪರಿತೋಷಣಾಯ - ಸಂತೋಷಕ್ಕಾಗಿ, ವೃಣೀಮಹೇ - ವರಿಸುವೆವು ॥೪೦॥ ಮನುವು, ಸ್ವಾಯಂಭುವಃ - ಬ್ರಹ್ಮನು, ಭಗವಾನ್-ಮಹಾತ್ಮನಾದ, ಭವಶ್ಚ - ಶಿವನು, ತಪೋ...ತ್ವಾಃ- ತಪಸ್ಸು, ಜ್ಞಾನ ಇವುಗಳಿಂದ ಶುದ್ಧಮನಸ್ಕರಾದ, ಯೇಽನ್ಯೇ ಚ - ಇತರರೂ, ಯನ್ಮಹಿಮ್ನಃ-ಯಾವ ನಿನ್ನ ಮಹಿಮೆಯ, ಅದೃಷ್ಟಪಾರಾ ಅಪಿ - ಪಾರವನ್ನರಿಯದಿದ್ದರೂ ಆತ್ಮಸಮಂ - ತಮ್ಮ ಬುದ್ಧಿಗನುಸಾರ ವಾಗಿ, ಗೃಣಾತಿ-ಹೊಗಳುವರು, ಅಥೋ-ಆದುದರಿಂದ, ನಾವೂ, ಗೃಣೀಮಃ- ಹೊಗಳುವೆವು ॥೪೧॥ ಸಮಾಯ-ವೈಷಮ್ಯವಿಲ್ಲದ, ಶುದ್ಧಾಯ-ಪಾಪರಹಿತನಾದ, ಪರಾಯ ಪುರುಷಾಯ - ಪರಮಪುರುಷನಾದ, ಸತ್ತ್ವಾಯ-ಶುದ್ಧಸತ್ತ್ವನಾದ, ಭಗವತೇ-ಭಗವಂತನಾದ, ತುಭ್ಯಂ ವಾಸುದೇವಾಯ-ವಾಸುದೇವನಾದ ನಿನಗೆ, ನಮಃ-ನಮಸ್ಕಾರವು ॥೪೨॥

ಮೈತ್ರೇಯನು ಹೇಳುತ್ತಾನೆ—ಇತಿ - ಇಂತು, ಪ್ರಚೇತೋಭಿಃ - ಪ್ರಚೇತಸರಿಂದ, ಅಭಿಷ್ಟುತಃ - ಹೊಗಳಲ್ಪಟ್ಟ, ಶರಣ್ಯವತ್ಸಲಃ - ಭಕ್ತವತ್ಸಲನಾದ, ಹರಿಃ - ಹರಿಯು, ಪ್ರೀತಃ - ಸಂತುಷ್ಟನಾಗಿ, ತಥೇತಿ - ಹಾಗೆಯೇ ಆಗಲೆಂದು, ಆಹ - ಹೇಳುತ್ತಾನೆ ಯಾನಂ - ತನ್ನ ಪ್ರಯಾಣವನ್ನು, ಅತೃಪ್ತಚಕ್ಷುಷಾಂ - ಕಣ್ಣಿಗೆ ತೃಪ್ತಿಯಿಲ್ಲದೆ, ಅನಿಚ್ಛತಾಂ - ಬಯಸದವರಾ, ಅನ...ರ್ಯಃ - ಅಕುಂಠಿತಪ್ರಭಾವವುಳ್ಳ ಭಗವಂತನು, ಸ್ವಧಾಮ- ತನ್ನ ಮನೆಗೆ ಯಯೌ - ಹೊರಟುಹೋದನು, ॥೪೩॥ ಅಥ-

---

ವಂತನಾದ ಮಹಾದೇವನು, ತಪ್ರೋಜ್ಞಾನಗಳಿಂದ ಕೂಡಿದ ಶುದ್ಧಸತ್ತ್ವರಾದ ಇತರ ಜ್ಞಾನಿಗಳು, ಇವರು ಎಂತು ನಿನ್ನ ಮಹಿಮೆಯ ಪಾರವನ್ನರಿಯದಿದ್ದರೂ, ತಂತಮ್ಮ ಬುದ್ಧ್ಯನುಸಾರವಾಗಿ ಹೊಗಳುವರೋ, ಅಂತೆಯೇ ನಾವೂ ನಮ್ಮ ಪ್ರಜ್ಞಾನುಸಾರವಾಗಿ ಹೊಗಳುವೆವು. ಆದುದರಿಂದ ಅಜ್ಞರಾದ ನಮಗೆ ನಿನ್ನ ಸ್ತುತಿಯಲ್ಲಿ ಅಧಿಕಾರವಿಲ್ಲವೆಂದು ಎಣಿಸಬೇಡ ॥೪೧॥ ಸರ್ವಸಮನೂ, ಪಾಪರಹಿತನೂ, ಪರಮಪುರುಷನೂ, ಶುದ್ಧಸತ್ತ್ವಸ್ವರೂಪನೂ ಆದ ನಿನಗೆ ನಮಸ್ಕಾರವು, ಎಂದು ಹೊಗಳಿದರು ॥೪೨॥ ಅನಘ! ವಿದುರನೆ! ಕೇಳು; ಇಂತು ಪ್ರಚೇತಸರಿಂದ ಸನ್ನುತನಾದ ಭಕ್ತವತ್ಸಲನಾದ ಶ್ರೀಹರಿಯು ಸಂತುಷ್ಟನಾಗಿ ಆಂತೆಯೇ ಆಗಲೆಂದು ವರಗಳನ್ನನುಗ್ರಹಿಸಿ, ಭಕ್ತರಾದ ಪ್ರಚೇತಸರು ಕಣ್ಣು ದಣಿಯದೆ ತನ್ನ ಪ್ರಯಾಣಕ್ಕೆ ಸಮ್ಮತಿಸದಿದ್ದರೂ, ಅವರು ನೋಡುತ್ತಿರುವಂತೆಯೇ ತನ್ನ ಮನೆಗೆ ತೆರಳಿದನು ॥೪೩॥ ಅನಂತರದಲ್ಲಿ ಪ್ರಚೇತಸರು ಸಮುದ್ರದಿಂದ ಹೊರಗೆಬಂದು, ಸ್ವರ್ಗಲೋಕವನ್ನು ಅಡ್ಡಗಟ್ಟುವುದಕ್ಕಾಗಿ ಬೆಳೆದಿರುವವೋ, ಎಂಬಂತೆ ಗಗನಚುಂಬಿಗಳಾಗಿರುವ ವೃಕ್ಷಗಳಿಂದ ಭೂಮಿಯು ಆಚ್ಛಾದಿತವಾಗಿರುವುದನ್ನು ಕಂಡು ಕೋಪಗೊಂಡರು॥

ಕುಪ್ಯನ್ ದ್ರುಮೈಶ್ಛನ್ನಾಂ ಗಾಂ ಗಾಂ ರೋದ್ಧುಮಿವೋಚ್ಛ್ರಿತೈಃ ॥೪೪॥
ತತೋಽಗ್ನಿಮಾರುತೌ ರಾಜನ್! ನಮುಂಚನ್ ಮುಖತೋ ರುಷಾ। ಮಹೀಂ
ನಿರ್ವೀರುಧಂ ಕರ್ತುಂ ಸಂವರ್ತಕ ಇವಾತ್ಯಯೇ ॥ ೪೫ ॥ ಭಸ್ಮಸಾ
ತ್ಕ್ರಿಯಮಾಣಾಂಸ್ತಾನ್ ದ್ರುಮಾನ್ ವೀಕ್ಷ್ಯ ಪಿತಾಮಹಃ। ಆಗತಶ್ಶಮಯಾ
ಮಾಸ ಪುತ್ರಾನ್ ಬರ್ಹಿಷ್ಮತೋ ನಯೈಃ ॥ ೪೬ ॥ ತತ್ರಾಽವಶಿಷ್ಟಾ ಯೇ
ವೃಕ್ಷಾ ಭೀತಾ ದುಹಿತರಂ ತದಾ । ಉಜ್ಜಹ್ರುಸ್ತೇ ಪ್ರಚೇತೋಭ್ಯ ಉಪ
ದಿಷ್ಟಾಸ್ಸ್ವಯಂಭುವಾ ॥ ೪೭ ॥ ತೇ ಚ ಬ್ರಹ್ಮಣ ಆದೇಶಾನ್ಮಾರಿಷಾಮು
ಪಯೇಮಿರೇ । ಯಸ್ಯಾಂ ಮಹದವಜ್ಞಾನಾದಜನ್ಯಜನಯೋನಿಜಃ ॥ ೪೮ ॥

ಬಳಿಕ, ಪ್ರಚೇತಸಃ - ಪ್ರಚೇತಸರು, ಉದನ್ವತಃ - ಸಮುದ್ರದ, ಸಲಿಲಾತ್ - ಜಲದಿಂದ, ನಿರ್ಯಯುಃ - ಹೊರಟು, ಗಾಂ - ಸ್ವರ್ಗವನ್ನು, ರೋದ್ಧುಮಿವ - ತಡೆವುದಕ್ಕೋ ಎಂಬಂತೆ, ಉಚ್ಛ್ರಿತೈಃ - ಉನ್ನತಗಳಾದ, ದ್ರುಮೈಃ - ಗಿಡಗಳಿಂದ, ಛನ್ನಾಂ - ಮುಚ್ಚಲ್ಪಟ್ಟಿರುವ, ಗಾಂ - ಭೂಮಿಯನ್ನು, ವೀಕ್ಷ್ಯ - ನೋಡಿ, ಅಕುಪ್ಯನ್ - ಕೋಪಗೊಂಡರು ॥೪೪॥ ರಾಜನ್ - ವಿದುರನೆ! ತತಃ - ಬಳಿಕ, ಅತ್ಯಯೇ - ಪ್ರಳಯದಲ್ಲಿ, ಸಂವರ್ತಕಃ ಇವ - ಕಾಲಾಗ್ನಿ ರುದ್ರರಂತೆ, ಮಹೀಂ - ಭೂಮಿಯನ್ನು, ನಿರ್ವೀರುಧಂ - ವೃಕ್ಷರಹಿತವನ್ನಾಗಿ, ಕರ್ತುಂ - ಮಾಡುವುದಕ್ಕಾಗಿ, ರುಷಾ - ಕೋಪದಿಂದ, ಮುಖತಃ - ಬಾಯಿಯಿಂದ, ಅಗ್ನಿಮಾರುತೌ - ಬೆಂಕಿಗಾಳಿಗಳನ್ನು, ಅಮುಂಚನ್ - ಬಿಟ್ಟರು ॥೪೫॥ ಪಿತಾಮಹಃ - ಬ್ರಹ್ಮನು, ಭಸ್ಮಸಾತ್ - ಬೂದಿಯನ್ನಾಗಿ, ಕ್ರಿಯಮಾಣಾನ್ - ಮಾಡಲ್ಪಡುವ, ತಾನ್ ದ್ರುಮಾನ್ - ಆ ಗಿಡಗಳನ್ನು, ವೀಕ್ಷ್ಯ - ಕಂಡು, ಆಗತಃ - ಬಂದು, ಬರ್ಹಿಷದಃ - ಪ್ರಾಚೀನಬರ್ಹಿಯ, ಪುತ್ರಾನ್ - ಮಕ್ಕಳನ್ನು, ನಯೈಃ - ಸವಿನುಡಿಗಳಿಂದ, ಶಮಯಾಮಾಸ - ಸಂತೈಸಿದನು ॥ ೪೬ ॥ ತತ್ರ - ಅಲ್ಲಿ, ಅವಶಿಷ್ಟಾಃ - ಮಿಕ್ಕ, ಯೇ ವೃಕ್ಷಾಃ - ಯಾವ ಗಿಡಗಳುಂಟೋ, ಅವು, ಭೀತಾಃ - ಹೆದರಿ, ತದಾ - ಆಗ, ಸ್ವಯಂಭುವಾ - ಬ್ರಹ್ಮನಿಂದ, ಉಪದಿಷ್ಟಾಃ - ಆಜ್ಞಾಪಿಸಲ್ಪಟ್ಟವುಗಳಾಗಿ, ಪ್ರಚೇತೋಭ್ಯಃ - ಪ್ರಚೇತಸರಿಗೆ, ದುಹಿತರಂ - ಮಗಳನ್ನು, ಉಜ್ಜಹ್ರುಃ - ಸಮರ್ಪಿಸಿದುವು ॥೪೭॥ ತೇ ಚ - ಅವರೂ, ಬ್ರಹ್ಮಣಃ - ಬ್ರಹ್ಮನ, ಆದೇಶಾತ್ - ಆಜ್ಞೆಯಿಂದ, ಮಾರಿಷಾಂ - ಮಾರಿಷೆಯನ್ನು, ಉಪಯೇಮಿರೇ - ಮದುವೆಯಾದರು, ಯಸ್ಯಾಂ - ಯಾವಳಲ್ಲಿ, ಅಜಯೋನಿಜಃ - ಬ್ರಹ್ಮನ ಪುತ್ರನಾದ ದಕ್ಷನು, ಮಹ...ತ್ - ಮಹಾತ್ಮನಾದ ಶಿವನಲ್ಲಿ ಅಪರಾಧವನ್ನು ಮಾಡಿದುದರಿಂದ, ಅಜನಿ - ಜನಿಸಿದನೋ ॥ ೪೮ ॥

ಬಳಿಕ ಪ್ರಳಯ ಕಾಲಾಗ್ನಿ ರುದ್ರರಂತೆ ಕ್ರುದ್ಧರಾಗಿ ಭೂಮಿಯಲ್ಲಿ ಸಸ್ಯವರ್ಗವೇ ಇಲ್ಲದಂತೆ ಮಾಡಬೇಕೆಂದು ಸಂಕಲ್ಪಿಸಿ, ತಮ್ಮ ಮುಖದಿಂದ ಅಗ್ನಿವಾಯುಗಳನ್ನು ಬಿಟ್ಟರು ॥೪೫॥ ಜಗತ್ತಿನಲ್ಲಿರುವ ಗಿಡಮರಬಳ್ಳಿಗಳೆಲ್ಲವೂ ಆ ಗಾಳಿ ಬೆಂಕಿಗಳಿಂದ ಸುಟ್ಟು ಬೂದಿಯಾಗುತ್ತಿರುವುದನ್ನು ಕಂಡು, ಚತುರ್ಮುಖನು ಬಂದು ಸವಿನುಡಿಗಳಿಂದ ಪ್ರಚೇತಸರನ್ನು ಸಂತೈಸಿದನು॥೪೬॥ ಆಗ ಉಳಿದ ವೃಕ್ಷಗಳು ಬ್ರಹ್ಮನ ಆಜ್ಞಾನುಸಾರವಾಗಿ ತಾವು ಸಲಹುತ್ತಿದ್ದ ಮಾರ್ಷಿಯೆಂಬ ಕನ್ನೆಯನ್ನು ಪ್ರಚೇತಸರಿಗಿತ್ತುವು ॥೪೭॥ ಆ ಪ್ರಚೇತಸರು ಚತುರ್ಮುಖನ ಅಪ್ಪಣೆಯಂತೆ ಆ ಮಾರ್ಷಿಯನ್ನು ಮದುವೆಯಾದರು. ಮಹಾತ್ಮನಾದ ಮಹಾದೇವಮೂರ್ತಿಗೆ ಅವಮಾನವನ್ನು ಮಾಡಿದ ಅಪರಾಧಕ್ಕಾಗಿ ದಕ್ಷಪ್ರಜಾಪತಿ

ಚಾಕ್ಷುಷೇ ತ್ವಂತರೇ ಪ್ರಾಪ್ತೇ ಪ್ರಾಕ್ಸರ್ಗೇ ಕಾಲವಿದ್ರುತೇ । ಯಃ ಸಸ
ರ್ಜ ಪ್ರಜಾ ಇಷ್ಟಾಃ ಸ ದಕ್ಷೋ ದೈವಚೋದಿತಃ ॥ ೪೯ ॥ ಯೋ ಜಾಯ
ಮಾನಃ ಸರ್ವೇಷಾಂ ತೇಜಸ್ತೇಜಸ್ವಿನಾಂ ರುಚಾ । ಸ್ವಯೋಪಾದತ್ತ ದಾ
ಕ್ಷ್ಯಾಚ್ಚ ಕರ್ಮಣಾಂ ದಕ್ಷಮಬ್ರುವನ್ ॥ ೫೦ ॥ ತಂ ಪ್ರಜಾಸರ್ಗರಕ್ಷಾ
ಯಾಮನಾದಿರಭಿಷಿಚ್ಯ ಚ । ಯುಯೋಜ ಯುಯುಜೇಽನ್ಯಾಂಶ್ಚ ಸ ವೈ
ಸರ್ವಪ್ರಜಾಪತೀನ್ ॥ ೫೧ ॥

— ಇತಿ ತ್ರಿಂಶೋಧ್ಯಾಯಃ. —

ಚಾಕ್ಷುಷೇ - ಚಾಕ್ಷುಷವೆಂಬ, ಅಂತರೇ - ಮನ್ವಂತರವು, ಪ್ರಾಪ್ತೇ - ಬರಲು, ಪ್ರಾಕ್ಸರ್ಗೇ - ಪೂರ್ವಸೃಷ್ಟಿಯು, ಕಾಲವಿದ್ರುತೇ - ಕಾಲದಿಂದ ನಾಶವಾಗಲು, ಯಃ - ಯಾವನು, ಇಷ್ಟಾಃಪ್ರಜಾಃ - ಇಷ್ಟರಾದ ಪ್ರಜೆಗಳನ್ನೂ, ಸಸರ್ಜ - ಸೃಜಿಸಿದನೋ, ಸದಕ್ಷಃ - ಆ ದಕ್ಷನು, ದೈವಚೋದಿತಃ - ದೈವದಿಂದ ಪ್ರೇರಿತನಾಗಿ ॥೪೯॥ ಯಃ - ಯಾವನು, ಜಾಯಮಾನಃ - ಹುಟ್ಟುತ್ತಾ, ಸರ್ವೇಷಾಂ - ಎಲ್ಲ, ತೇಜಸ್ವಿನಾಂ - ತೇಜೋವಂತರ, ತೇಜಃ - ತೇಜಸ್ಸನ್ನು, ಸ್ವಯಾರುಚಾ - ತನ್ನ ಕಾಂತಿಯಿಂದ, ಉಪಾದತ್ತ - ಪಡೆದನೋ, ಕರ್ಮಣಾಂ - ಕರ್ಮಗಳಲ್ಲಿ, ದಾಕ್ಷ್ಯಾತ್ - ಸಾಮರ್ಥ್ಯದಿಂದ, ದಕ್ಷಂ - ದಕ್ಷನೆಂದು, ಅಬ್ರುವನ್ - ಹೇಳಿದರೋ, ॥೫೦॥ ಅನಾದಿಃ - ಬ್ರಹ್ಮನು, ತಂ - ಅವನನ್ನು, ಪ್ರಜಾ...ಯಾಂ - ಪ್ರಜೆಗಳ ಸೃಷ್ಟಿಪಾಲನಗಳಲ್ಲಿ, ಅಭಿಷಿಚ್ಯ - ಅಭಿಷೇಕಮಾಡಿ, ಯುಯೋಜ - ನೆಲೆಗೊಳಿಸಿದನು, ಸವೈ - ಆ ದಕ್ಷನು, ಸರ್ವಪ್ರಜಾಪತೀನ್ - ಎಲ್ಲಾ ಪ್ರಜೇಶ್ವರರನ್ನೂ, ಅನ್ಯಾಂಶ್ಚ - ಇತರರನ್ನೂ, ಯುಯುಜೇ - ನಿಯೋಗಿಸಿದನು ॥೫೧॥

— ತ್ರಿಂಶಾಧ್ಯಾಯಂ ಸಮಾಪ್ತಂ —

ಯು ಆ ಮಾರ್ಷೇದೇವಿಯಲ್ಲಿ ಕ್ಷತ್ರಿಯನಾಗಿ ಜನಿಸಿದನು ॥೪೮॥ ಚಾಕ್ಷುಷ ಮನ್ವಂತರವು ಬರಲು, ಮೊದಲಿದ್ದ ಸೃಷ್ಟಿಯು ಕಾಲವಶದಿಂದ ನಾಶವೈದಿತು. ಆಗ ದಕ್ಷನು ಭಗವತ್ಪ್ರೇರಣೆಯಿಂದ ಪ್ರಜಾಸೃಷ್ಟಿಯನ್ನು ಮಾಡಿದನು. ॥೪೯॥ ಆ ದಕ್ಷನು ತನ್ನ ತೇಜಸ್ಸಿನಿಂದ ಸಕಲ ತೇಜಸ್ವಿಗಳ ತೇಜಸ್ಸನ್ನೂ ಅಪಹರಿಸಿ, ಕರ್ಮಕಾಂಡದಲ್ಲಿ ಸಮರ್ಥನಾದುದರಿಂದ ದಕ್ಷನೆಂದು ಹೆಸರುಗೊಂಡನು ॥೫೦॥ ಆಗ ಚತುರ್ಮುಖ ಬ್ರಹ್ಮನು ಪ್ರಜಾಭಿವೃದ್ಧಿ ಮಾಡುವಂತೆ ದಕ್ಷನಿಗಾಜ್ಞಾಪಿಸಿದನು. ಆ ದಕ್ಷನು ಸಕಲ ಪ್ರಜೇಶ್ವರರನ್ನೂ ಪ್ರಜಾಸೃಷ್ಟಿಯಲ್ಲಿ ನಿಯಮಿಸಿದನು, ಎಂದು ಮೈತ್ರೇಯ ಮುನಿಯು ವಿದುರನಿಗೆ ಹೇಳಿದನೆಂಬಲ್ಲಿಗೆ ಭಾಗವತ ಚಕೋರಚಂದ್ರಿಕೆಯೊಳ್

ಮೂವತ್ತನೆಯ ಅಧ್ಯಾಯಂ ಮುಗಿದುದು.

# ಓಂ ನಮಃ ಪರಮಾತ್ಮನೇ

## — ಅಥ ಏಕತ್ರಿಂಶೋಽಧ್ಯಾಯಃ —

ಮೈತ್ರೇಯಃ । ತತ ಉತ್ಪನ್ನವಿಜ್ಞಾನಾ ಆಶ್ವಧೋಕ್ಷಜ ಭಾಷಿತಂ । ಸ್ಮರಂತ ಆತ್ಮಜೇ ಭಾರ್ಯಾಂ ವಿಸೃಜ್ಯ ಪ್ರಾವ್ರಜನ್ ಗೃಹಾತ್ ॥ ೧ ॥ ದೀಕ್ಷಿತಾ ಬ್ರಹ್ಮ ಸತ್ರೇಣ ಸರ್ವಭೂತಾತ್ಮಮೇಧಸಾ । ಪ್ರತೀಚ್ಯಾಂ ದಿಶಿ ವೇಲಾಯಾಂ ಸಿದ್ಧೋಽಭೂದ್ಯತ್ರ ಜಾಜಲಿಃ ॥ ೨ ॥ ತಾನ್ನಿರ್ಜಿತ ಪ್ರಾಣ ಮನೋವಚೋದೃಶೋ ಜಿತಾಸನಾನ್ ಶಾಂತಸಮಾನವಿಗ್ರಹಾನ್ । ಪರೇಽ

---

—ಏಕತ್ರಿಂಶಾಧ್ಯಾಯಂ—

ಕಂ॥ ತನಯಂ ಗೊಡೆತನ ಪ್ರೊಪ್ಪಿ । ವನಕ್ಕೈದುತೆ ನಾರದರ್ಷಿ ಪೇಳಿದ ತೆರದಿಂ ।
ಅನಘಗುಣರಾ ಪ್ರಚೇತಸ । ರನುವಿಂ ಘನಮುಕ್ತಿ ಪಡೆದ ಚರಿತವ ನೂರೆವೆಂ ॥

ಮೈತ್ರೇಯನು ಹೇಳುತ್ತಾನೆ, ತತಃ - ಬಳಿಕ, ಉತ್ಪನ್ನವಿಜ್ಞಾನಾಃ - ವಿವೇಕಜ್ಞಾನವುಳ್ಳವರಾಗಿ, ಆಶು-ಬೇಗನೆ, ಆಶ್ವಧೋ....ತಂ-ಭಗವಂತನ ನುಡಿಯನ್ನು, ಸ್ಮರಂತಃ- ಸ್ಮರಿಸಿಕೊಂಡು, ಆತ್ಮಜೇ ಮಗನಲ್ಲಿ, ಭಾರ್ಯಾಂ-ಹೆಂಡತಿಯನ್ನು ಬಿಟ್ಟು, ಗೃಹಾತ್-ಮನೆಯಿಂದ, ಪ್ರಾವ್ರಜನ್-ಹೊರಟುಹೋದರು ॥ ಸರ್ವ....ಸಾ - ಸರ್ವಭೂತಗಳಲ್ಲಿಯೂ ತಾನೇ ಎಂಬ ಜ್ಞಾನವುಳ್ಳ, ಬ್ರಹ್ಮಸತ್ರೇಣ - ಆತ್ಮವಿಚಾರದಿಂದ, ದೀಕ್ಷಿತಾಃ-ಸಂಕಲ್ಪಿಸಿ, ಪ್ರತೀಚ್ಯಾಂದಿಶಿ ಪಶ್ಚಿಮದಿಕ್ಕಿನಲ್ಲಿ, ವೇಲಾಯಾಂ-ಸಮುದ್ರತೀರದಲ್ಲಿ, ಯತ್ರ-ಎಲ್ಲಿ, ಸಿದ್ಧಃ - ತಪಸ್ಸಿದ್ಧನಾದ, ಜಾಜಲಿಃ - ಜಾಜಲಿಯು, ಅಭೂತ್ ಇದ್ದನೋ ॥೨॥ ನಿರ್ಜಿ....ಶಃ-ಪ್ರಾಣ, ಮನಸ್ಸು, ವಾಕ್ಕು, ದೃಷ್ಟಿ, ಇವುಗಳನ್ನು ಜಯಿಸಿದ, ಜಿತಾಸನಾನ್-ಆಸನಸಿದ್ಧಿಯನ್ನು ಪಡೆದ, ಶಾಂತ-....ಹಾನ್, ಶಾಂತ ಉಪರತವಾದ, ಸಮಾನ-ನೆಟ್ಟಗಿರುವ, ವಿಗ್ರಹಾನ್ - ಶರೀರವುಳ್ಳ, ಅಮಲೇ-

---

## ಮೂವತ್ತೊಂದನೆಯ ಅಧ್ಯಾಯ.

### — ಪ್ರಚೇತಸರು ನಾರದೋಪದೇಶದಿಂದ ಮುಕ್ತಿಯನ್ನು ಪಡೆಯುವುದು. —

ಅನಂತರದಲ್ಲಿ ಮೈತ್ರೇಯ ಮುನಿಯು ಹೇಳುತ್ತಾನೆ — ಅಯ್ಯಾ ವಿದುರನೆ ! ಇಂತು ಆ ಪ್ರಚೇತಸರು ಹತ್ತು ಲಕ್ಷ ವರ್ಷಗಳವರೆಗೂ ಜಲದಲ್ಲಿ ತಪಸ್ಸು ಮಾಡಿದಬಳಿಕ ನಿತ್ಯಾನಿತ್ಯ ವಿವೇಕಜ್ಞಾನವುಳ್ಳವರಾಗಿ, ಮುನ್ನು ಭಗವಂತನು ಹೇಳಿದ ನುಡಿಯನ್ನು ಸ್ಮರಿಸಿಕೊಂಡು ಪ್ರಿಯಪತ್ನಿಯಾದ ಮಾರ್ಷೆಯನ್ನು ಪುತ್ರನಾದ ದಕ್ಷನ ವಶದಲ್ಲಿಟ್ಟು ಶೀಘ್ರವಾಗಿ ಮನೆಯಿಂದ ಹೊರಟರು ॥೧॥ ಪಶ್ಚಿಮ ಸಮುದ್ರತೀರದಲ್ಲಿರುವ ಜಾಬಾಲಿ ಮಹರ್ಷಿಯ ಆಶ್ರಮಕ್ಕೆ ಹೋಗಿ ಅಲ್ಲಿ " ಸರ್ವ ಭೂತಗಳಲ್ಲಿಯೂ ತಾನೇ ಇರುವೆನೆಂಬ " ಆತ್ಮವಿಚಾರರೂಪವಾದ ಸತ್ರಯಾಗಕ್ಕೆ ಸಂಕಲ್ಪಿಸಿದರು ॥೨॥ ಯೋಗಶಾಸ್ತ್ರದಲ್ಲಿ ಹೇಳುವಂತೆ ಬಾಹ್ಯವ್ಯಾಪಾರಗಳನ್ನುಳಿದು, ಮೂಲಾಧಾರಾದಿ ಷಟ್ಚಕ್ರಗಳೂ ಸಮರೇಖೆಯಲ್ಲಿ ನಿಲ್ಲುವಂತೆ ನೆಟ್ಟಗೆ ಕುಳಿತುಕೊಂಡು, ಆಸನಸಿದ್ಧಿಯನ್ನು ಪಡೆದು, ಪ್ರಾಣಾಯಾಮ ಮೊದಲಾದ ಯೋಗಾಂಗಗಳಿಂದ ಪ್ರಾಣವಾಯುಗಳನ್ನೂ, ಮನಸ್ಸನ್ನೂ, ವಾಕ್ಕನ್ನೂ, ದೃಷ್ಟಿಯನ್ನೂ ನಿರೋಧಿಸಿ ನಿರುಪಾಧಿಕ ಶುದ್ಧಚೈತನ್ಯದಲ್ಲಿ ಜೀವನನ್ನು ಐಕ್ಯಗೊಳಿಸಿ, ಆತ್ಮಾರಾ

ಮಳೇ ಬ್ರಹ್ಮಣಿ ಯೋಜಿತಾತ್ಮನ ಸ್ಸುರಾಸುರೇಡ್ಯೋ ದದೃಶೇಸ್ಮ ನಾರ
ದಃ ॥ ೩ ॥ ತ ಮಾಗತಂ ತ ಉತ್ಥಾಯ ಪ್ರಣಿಪತ್ಯಾಽಭಿನಂದ್ಯಚ । ಪೂಜ
ಯಿತ್ವಾ ಯಥಾದೇಶಂ ಸುಖಾಸೀನ ಮಥಾಽಬ್ರುವನ್ ॥ ೪ ॥ ಪ್ರಚೇತಸಃ ।
ಸ್ವಾಗತಂ ತೇ? ಸುರರ್ಷೇಽದ್ಯ ದಿಷ್ಟ್ಯಾನೋ ದರ್ಶನಂ ಗತಃ। ತವ ಚಂಕ್ರ
ಮಣಂ ಬ್ರಹ್ಮ ನ್ನಭಯಾಯ ಯಥಾ ರವೇಃ ॥೫॥ ಯದಾದಿಷ್ಟಂ ಭಗವತಾ
ಶಿವೇನಾಽಧೋಕ್ಷಜೇನಚ । ತದ್ಗೃಹೇಷು ಪ್ರಸಕ್ತಾನಾಂ ಪ್ರಾಯಶಃ ಕ್ಷಪಿ
ತಂ ಪ್ರಭೋ!॥೬॥ತ ನ್ನಃ ಪ್ರದ್ಯೋತಯಾಽಧ್ಯಾತ್ಮಜ್ಞಾನಂ ತತ್ವಾರ್ಥ ದರ್ಶ

---

ನಿರುಪಾಧಿಕವಾದ, ಪರೇಬ್ರಹ್ಮಣಿ-ಪರಬ್ರಹ್ಮನಲ್ಲಿ, ಯೋಜಿತಾತ್ಮನಃ-ಮನಸ್ಸನ್ನು ಸೇರಿಸಿರುವ, ತಾನ್-ಅವರನ್ನು, ಸುರಾ....ಡ್ಯಃ-ದೇವದಾನವರಿಂದ ಸ್ತುತ್ಯನಾದ, ನಾರದಃ - ನಾರದಮುನಿಯು, ದದೃಶೇ-ಕಂಡನು ॥೩॥ ತೇ-ಅವರು, ಆಗತಂ - ಬಂದ, ತಂ-ಅವನನ್ನು, ಉತ್ಥಾಯ - ಎದ್ದು, ಪ್ರಣಿಪತ್ಯ-ನಮಸ್ಕರಿಸಿ, ಅಭಿನಂದ್ಯಚ-ಹೊಗಳಿ, ಪೂಜಯಿತ್ವಾ-ಪೂಜಿಸಿ, ಯಥಾದೇಶಂ - ಆಜ್ಞೆಯಂತೆ, ಸುಖಾಸೀನಂ-ಸುಖವಾಗಿ ಕುಳಿತವನನ್ನು ಕುರಿತು, ಅಥ-ಬಳಿಕ, ಅಬ್ರುವನ್ - ಹೇಳಿದರು ॥೪॥ ಸುರರ್ಷೇ-ದೇವಮುನಿಯೇ ! ಅದ್ಯ - ಈಗ, ತೇ-ನಿನಗೆ, ಸ್ವಾಗತಂ - ಸುಖಾಗಮನವೆ ! ದಿಷ್ಟ್ಯಾ-ಅದೃಷ್ಟದಿಂದ, ನಃ-ನಮ್ಮ, ದರ್ಶನಂ-ಸಾಕ್ಷಾತ್ಕಾರವನ್ನು, ಗತಃ- ಹೊಂದಿದೆ, ಬ್ರಹ್ಮನ್ ಬ್ರಾಹ್ಮಣನೆ ! ರವೇಃ ಯಥಾ-ಸೂರ್ಯನಂತೆ, ತವ-ನಿನ್ನ, ಚಂಕ್ರಮಣಂ-ಸಂಚಾರವು, ಅಭಯಾಯ - ಭಯನಿವೃತ್ತಿಗಾಗಿ, ಆಗುವುದು ॥೫॥ ಪ್ರಭೋ ಸ್ವಾಮಿಯೆ ! ಭಗವತಾ-ಭಗವಂತನಾದ, ಶಿವೇನ-ಶಿವನಿಂದಲೂ, ಅಧೋಕ್ಷಜೇನಚ-ವಿಷ್ಣುವಿನಿಂದಲೂ, ಯತ್-ಯಾವತತ್ತ್ವವು, ಆದಿಷ್ಟಂ ಆಜ್ಞಾಪಿಸಲ್ಪಟ್ಟಿತೋ, ತತ್-ಅದು, ಗೃಹೇಷು- ಸಂಸಾರದಲ್ಲಿ, ಪ್ರಸಕ್ತಾನಾಂ - ವ್ಯಾಪೃತರಾದ ನಮಗೆ, ಪ್ರಾಯಶಃ- ಬಹಳವಮಟ್ಟಿಗೆ, ಕ್ಷಪಿತಂ- ಮರೆತುಹೋಯಿತು, ॥೬॥ ತತ್ - ಅದುದರಿಂದ, ಯೇನ - ಯಾವುದರಿಂದ, ಅಂಜಸಾ-ಬೇಗನೆ ದುಸ್ತರಂ - ದಾಟಲಶಕ್ಯವಾದ, ಭವಸಾಗರಂ - ಸಂಸಾರ ಸಮುದ್ರವನ್ನು, ತರಿಷ್ಯಾಮಃ-ದಾಟುವೆವೋ, ತತ್ವಾರ್ಥದರ್ಶನಂ - ತತ್ವಾರ್ಥವನ್ನು ಪ್ರಕಾಶಗೊಳಿಸುವ, ತತ್-ಆ, ಅಧ್ಯಾತ್ಮಜ್ಞಾನಂ-ಆತ್ಮಜ್ಞಾನವನ್ನು, ನಃ-ನಮಗೆ,ಪ್ರದ್ಯೋತಯ-ಬೆಳಗಿಸು॥೭॥ಇತಿ-ಇಂತು,ಪ್ರಚೇತಸಾಂ-ಪ್ರಚೇತಸರಿಂದ,ಪೃಷ್ಟಃ-ಪ್ರಶ್ನೆಮಾಡ

---

ಮರಾಗಿರುವ ಅವರಬಳಿಗೆ ಒಮ್ಮೆ ಸುರಾಸುರೇಡ್ಯನಾದ ನಾರದ ಮಹಾಮುನಿಯು ಬಂದು ದರ್ಶನವಿತ್ತನು ॥೩॥ ಆ ಪ್ರಚೇತಸರು ಆ ಮುನಿಯನ್ನು ಕಂಡು ಕೂಡಲೇ ದಿಗ್ಗನೆ ಮೇಲಕ್ಕೆದ್ದು ದಂಡಪ್ರಣಾಮವನ್ನಾಚರಿಸಿ, ಮನದ ಕೆಯ್ಯಂತೆ ಹೊಗಳುತ್ತಾ, ಯಥಾವಿಧಿಯಾಗಿ ಪೂಜಿಸಿ, ಸುಖಾಸೀನನಾದ ಮಹರ್ಷಿಯು ಅಪ್ಪಣೆಯನ್ನು ಪಡೆದು ಇಂತು ಬೆಸಗೊಂಡರು ॥೪॥ ಎಲೈ ದೇವರ್ಷಿಯೆ ! ನೀನಿಂದು ಸುಖವಾಗಿ ಬಿಜಯಮಾಡಿಯ ? ಅದೃಷ್ಟವಿಶೇಷದಿಂದ ನಮಗೆ ನಿನ್ನ ದರ್ಶನವಾಯಿತು. ಮಹಾತ್ಮನೆ ! ನಿನ್ನ ಸಂಚಾರವು ಸೂರ್ಯಸಂಚಾರದಂತೆ ಲೋಕಕ್ಷೇಮಾರ್ಥವೇ ಹೊರತು ಬೇರೆಯಲ್ಲ ॥೫॥ ಎಲೈ ಸ್ವಾಮಿಯೆ ! ಮುನ್ನ ಭಗವಂತನಾದ ಮಹಾದೇವನು ಶ್ರೀಹರಿಯೂ ಸಹ ಯಾವ ಪರತತ್ವವನ್ನು ಉಪದೇಶಿಸಿದರೋ, ಸಂಸಾರದಲ್ಲಿ ಆಸಕ್ತರಾದ ನಾವು ಅದನ್ನು ಮರೆತುಬಿಟ್ಟಿರುವೆವು ॥ ೬ ॥ ಆದಕಾರಣ ಯಾವ ತತ್ವಜ್ಞಾನದಿಂದ ನಾವು ಬೇಗ ದುಸ್ತರವಾದ ಸಂಸಾರಸಾಗರವನ್ನು

ನಂ । ಯೇನಾಂಜಸಾ ತರಿಷ್ಯಾಮೋ ದುಸ್ತರಂ ಭವಸಾಗರಂ ॥ ೭ ॥ ಮೈತ್ರೇಯಃ॥ ಇತಿ ಪ್ರಚೇತಸಾಂ ಪೃಷ್ಟೋ ಭಗವಾನ್ನಾರದೋ ಮುನಿಃ। ಭಗವತ್ಯುತ್ತಮಶ್ಲೋಕೇ ಆವಿಷ್ಟಾತ್ಮಾಽಬ್ರವೀನ್ನೃಪಾನ್ ॥ ೮ ॥ ನಾರದಃ ॥ ತಜ್ಜನ್ಮ ತಾನಿ ಕರ್ಮಾಣಿ ತದಾಯುಸ್ತನ್ಮನೋ ವಚಃ । ನೃಣಾಂ ಯೇನೇಹ ವಿಶ್ವಾತ್ಮಾ ಸೇವ್ಯತೇ ಹರಿರೀಶ್ವರಃ ॥ ೯ ॥ ಕಿಂ ಜನ್ಮಭಿಸ್ತ್ರಿಭಿರ್ವೇಹ ಶೌಕ್ಲಸಾವಿತ್ರಯಾಜ್ಞಿಕೈಃ। ಕರ್ಮಭಿರ್ವಾ ತ್ರಯೀಪ್ರೋಕ್ತೈಃ ಪುಂಸೋಽಪಿ

---

ಲ್ಪಟ್ಟ, ಭಗವಾನ್ - ಪೂಜ್ಯನಾದ, ನಾರದಃಮುನಿಃ - ನಾರದಮುನಿಯು, ಉತ್ತಮಶ್ಲೋಕೇ-ಉತ್ತಮರಿಂದ, ಹೊಗಳಲ್ಪಡುವ, ಭಗವತಿ-ಭಗವಂತನಲ್ಲಿ, ಆವಿಷ್ಟಾತ್ಮಾ-ಮನಸ್ಸಿಟ್ಟವನಾಗಿ, ನೃಪಾನ್-ಪ್ರಚೇತಸರನ್ನು ಕುರಿತು, ಅಬ್ರವೀತ್-ಹೇಳಿದನು ॥೮॥ ಯೇನ - ಯಾವುದರಿಂದ, ವಿಶ್ವಾತ್ಮಾ-ಸರ್ವಾತ್ಮನಾದ, ಈಶ್ವರಃ- ಜಗನ್ನಾಯಕನಾದ, ಹರಿಃ-ವಿಷ್ಣುವು, ಸೇವ್ಯತೇ - ಸೇವಿಸಲ್ಪಡುವನೋ, ನೃಣಾಂ-ಪುರುಷರ, ತತ್-ಅದು, ಜನ್ಮ-ಜನ್ಮವು, ತಾನಿ ಅವು, ಕರ್ಮಾಣಿ-ಕರ್ಮಗಳು, ತತ್-ಅದು, ಆಯುಃ-ಆಯುಸ್ಸು, ತತ್-ಅದು, ಮನಃ-ಮನಸ್ಸು, ವಚಃ-ನುಡಿಯು ॥೯॥ ಇಹ-ಈಲೋಕದಲ್ಲಿ, ಶೌಕ್ಲ-...ಕೈಃ ಶೌಕ್ಲ- ಉತ್ತಮ ಸ್ತ್ರೀಪುರುಷರಿಂದ ಜನ್ಮ, ಸಾವಿತ್ರ - ಉಪನಯನದಿಂದ ಜನ್ಮವು, ಯಾಜ್ಞಿಕೈಃ-ಯಜ್ಞದೀಕ್ಷೆಯಿಂದುಂಟಾಗುವ ಜನ್ಮವು, ತ್ರಿಭಿಜನ್ಮಭಿಃ-ಈಮೂರುಜನ್ಮಗಳಿಂದ, ಕಿಂ-ಏನು, ತ್ರಯೀಪ್ರೋಕ್ತೈಃ-ವೇದೋಕ್ತಗಳಾದ, ಕರ್ಮಭಿರ್ವಾಕಿಂ -ಕರ್ಮಗಳಿಂದೇನು ! ಪುಂಸಃ-ಪುರುಷನ, ವಿಬುಧಾಯುಷಾಪಿ-ದೇವತೆಗಳಂತೆ ದೀರ್ಘಾಯುಸ್ಸಿನಿಂದಲೂ, ಕಿಂ-ಏನು ? ॥೧೦॥ ಶ್ರುತೇನ-ವೇದಶಾಸ್ತ್ರಶ್ರವಣದಿಂದಲೂ,

---

ದಂಟುವೆವೋ, ಅಂತಹ ತತ್ವಸ್ವರೂಪವನ್ನೀಗ ನಮಗೆ ಮರಳಿ ಉಪದೇಶಗೈದು ಅನುಗ್ರಹಿಸು ॥೭॥ ಅಯ್ಯಾ ವಿದುರನೆ ! ಇಂತು ಬಿನ್ನವಿಸಲು, ಭಗವಂತನಾದ ನಾರದಮುನಿಯು ಉತ್ತಮಶ್ಲೋಕನಾದ ಶ್ರೀಹರಿಯಲ್ಲಿ ಚಿತ್ತವನ್ನಿರಿಸಿ, ಆ ಅರಸುಮಕ್ಕಳಗಿಂತೆಂದನು ॥೮॥ ಅಯ್ಯಾ ರಾಜಕುಮಾರರಿರಾ ! ಸರ್ವಾತ್ಮನೂ, ನಿರತಿಶಯ ಮಹಿಮನೂ ಆದ ವಾಸುದೇವಮೂರ್ತಿಯನ್ನು ಯಾವನು ಸೇವಿಸುವನೋ, ಅವನ ಜನ್ಮವೇ ಜನ್ಮವು. ಅವನ ಕರ್ಮಗಳೇ ಕರ್ಮಗಳು. ಅವನ ಆಯುಷ್ಯವೇ ಆಯುಷ್ಯವು. ಅವನಮನಸ್ಸೇ ಮನಸ್ಸು. ಅವನ ನುಡಿಯೇ ನುಡಿಯು ॥೯॥ ಯಾವನು ಆತ್ಮಸ್ವರೂಪನಾದ ಭಗವಂತನನ್ನು ಆರಾಧಿಸುವುದಿಲ್ಲವೋ, ಅವನು ಪರಿಶುದ್ಧರಾದ ಮಾತಾಪಿತೃಗಳಿಂದ ಜನಿಸಿ, ಉಪನಯನಾದಿ ಸಂಸ್ಕಾರಗಳಿಂದ ದ್ವಿಜನ್ಮನೆನಿಸಿ, ಯಜ್ಞಾದಿ ಶ್ರೌತಕರ್ಮಗಳ ದೀಕ್ಷೆಯಿಂದ ತೃತೀಯ ಜನ್ಮವನ್ನು ಪಡೆದಿದ್ದರೂ, ಆ ಮೂರು ಜನ್ಮಗಳೂ ವ್ಯರ್ಥಗಳೇ ಸರಿ. ಮತ್ತು ಅರಿತವನು ದೇವತೆಗಳಂತೆ ದೀರ್ಘಾಯುವಾಗಿ ವೇದೋಕ್ತ ಕರ್ಮಗಳನ್ನು ಮಾಡಿದರೂ,ವೇದಶಾಸ್ತ್ರಾದಿಗಳನ್ನು ಶ್ರವಣಮಾಡಿದರೂ, ತಪಸ್ಸನ್ನಾಚರಿಸಿದರೂ, ಸವಿಯಾಗಿ ನುಡಿದರೂ, ಮನಸ್ಸನ್ನು ನಿಗ್ರಹಿಸಿದರೂ, ಸೂಕ್ಷ್ಮಬುದ್ಧಿಯಾದರೂ, ಇಂದ್ರಿಯ ಪಾಟವವಿದ್ದರೂ, ಯೋಗಾಂಗಗಳನ್ನು ಅಭ್ಯಾಸ ಮಾಡಿದರೂ, ಪ್ರಕೃತಿಪುರುಷ ವಿವೇಚನ ರೂಪವಾದ ಸಾಂಖ್ಯವನ್ನು ಕಲಿತರೂ, ಸನ್ಯಾಸವನ್ನು ಸ್ವೀಕರಿಸಿದರೂ, ನಿಯಮದಿಂದ ವೇದಗಳನ್ನು ಅಧ್ಯಯನಮಾಡಿದರೂ, ಇನ್ನೂ, ಯಾವಯಾವ ಸತ್ಕಾರ್ಯಗಳನ್ನು ಮಾಡಿದರೂ, ಅವೆಲ್ಲವೂ

ವಿಬುಧಾಯುಷಾ ॥ ೧೦ ॥ ಶ್ರುತೇನ ತಪಸಾ ವಾ ಕಿಂ? ವಚೋಭಿಶ್ಚಿತ್ತ
ವೃತ್ತಿಭಿಃ । ಬುದ್ಧ್ಯಾ ವಾ ಕಿಂ ನಿಪುಣಯಾ ಬಲೇನೇಂದ್ರಿಯ ರಾಧಸಾ ॥ ೧೧ ॥
ಕಿಂ ವಾ? ಯೋಗೇನ ಸಾಂಖ್ಯೇನ ನ್ಯಾಸ ಸ್ವಾಧ್ಯಾಯಯೋರಪಿ । ಕಿಂ ವಾ?
ಶ್ರೇಯೋಭಿರನ್ಯೈಶ್ಚ ನ ಯತ್ರಾತ್ಮಪ್ರದೋ ಹರಿಃ ॥ ೧೨ ॥ ಶ್ರೇಯಸಾ
ಮಪಿ ಸರ್ವೇಷಾಮಾತ್ಮಾ ಹ್ಯವಧಿರರ್ಥತಃ । ಸರ್ವೇಷಾಮಪಿ ಭೂತಾನಾಂ
ಹರಿರಾತ್ಮಾತ್ಮದಃ ಪ್ರಿಯಃ ॥ ೧೩ ॥ ಯಥಾ ತರೋರ್ಮೂಲ ನಿಷೇಚನೇನ
ತೃಪ್ಯಂತಿ ತತ್ಸ್ಕಂಧಭುಜೋಪಶಾಖಾಃ । ಪ್ರಾಣೋಪಹಾರಾಚ್ಚ ಯಥೇಂ
ದ್ರಿಯಾಣಾಂ ತಥೈವ ಸರ್ವಾರ್ಹಣ ಮಚ್ಯುತೇಜ್ಯಾ ॥ ೧೪ ॥ ಯಥೈವ

---

ತಪಸಾವಾ - ತಪಸ್ಸಿನಿಂದಲೂ, ಕಿಂ - ಏನು? ವಚೋಭಿಃ - ವಾಕ್ಕುಗಳಿಂದಲೂ, ಚಿತ್ತವೃತ್ತಿಭಿಃ - ಚಿತ್ತವೃತ್ತಿಗಳಿಂದಲೂ, ನಿಪುಣಯಾ-ಸೂಕ್ಷ್ಮವಾದ, ಬುದ್ಧ್ಯಾವಾ - ಬುದ್ಧಿಯಿಂದಲೂ. ಕಿಂ-ಏನು ? ಬಲೇನ-ಬಲದಿಂದಲೂ, ಇಂದ್ರಿಯರಾಧಸಾ-ಇಂದ್ರಿಯಪಾಟವದಿಂದಲೂ. ಕಿಂ-ಏನು ?

ಯತ್ರ - ಎಲ್ಲಿ, ಆತ್ಮಪ್ರದಃ - ಬಂಧಹರನಾದ, ಹರಿಃ - ಹರಿಯು, ನಾಸ್ತಿ - ಇಲ್ಲವೋ, ಅಂತಹ ಯೋಗೇನ - ಯೋಗದಿಂದಲೂ, ಸಾಂಖ್ಯೇನ - ಸಾಂಖ್ಯದಿಂದಲೂ, ನ್ಯಾಸ...ಪಿ - ಸನ್ಯಾಸವೇದಾಧ್ಯಯನ ಇವುಗಳಿಂದಲೂ, ಅನ್ಯೈಶ್ಚಶ್ರೇಯೋಭಿಃ - ಇತರ ಶ್ರೇಯಸ್ಸುಗಳಿಂದಲೂ, ಕಿಂ - ಏನು ? ಸರ್ವೇಷಾಂ - ಎಲ್ಲಾ, ಶ್ರೇಯಸಾಮಪಿ - ಫಲಗಳಿಗೂ, ಅರ್ಥತಃ - ಪರಮಾರ್ಥವಾಗಿ, ಆತ್ಮಾ-ಆತ್ಮನೇ, ಅವಧಿಃ - ಗಡಿಯು, ಸರ್ವೇಷಾಂ - ಎಲ್ಲಾ, ಭೂತಾನಾಮಪಿ-ಪ್ರಾಣಿಗಳಿಗೂ, ಪ್ರಿಯಃ-ಪ್ರಿಯನೂ, ಆತ್ಮದಃ- ಸ್ವರೂಪ ಪ್ರಕಾಶಕನೂ, ಆತ್ಮಾ - ಆತ್ಮರೂಪನು, ಹರಿಃ - ಹರಿಯು ॥೧೩॥ ತರೋಃ - ಗಿಡದ, ಮೂಲ...ನ - ಬುಡಕ್ಕೆ ನೀರೆರೆಯುವುದರಿಂದ, ತತ್...ಖಾಃ - ಅದರ ಹೆಗ್ಗೊಂಬೆ, ಕಿರುಗೊಂಬೆ, ಅಳ್ಳಿಗೊಂಬೆ, ಮೊದಲಾದುವು, ಯಥಾ - ಹೇಗೆ, ತೃಪ್ಯಂತಿ - ದಣಿಯುವುವೋ, ಪ್ರಾಣೋಪಹಾರಾತ್ - ಪ್ರಾಣಗಳ ತೃಪ್ತಿಯಿಂದ, ಇಂದ್ರಿಯಾಣಾಂ - ಇಂದ್ರಿಯಗಳಿಗೆ, ಯಥಾ - ಹೇಗೆಯೋ, ತಥೈವ - ಹಾಗೆಯೇ, ಅಚ್ಯುತೇಜ್ಯಾ - ವಿಷ್ಣುವಿನ ಆರಾಧನವು, ಸರ್ವಾರ್ಹಣಂ - ಸಕಲ ದೇವತಾರಾಧನವು ॥೧೪॥ ಸೂರ್ಯಾತ್ - ಸೂರ್ಯನಿಂದ, ವಾರಃ - ಜಲವು, ಯಥೈವ - ಹೇಗೆ, ಪ್ರಭವಂತಿ - ಉಂಟಾಗುವುದೋ, ಪುನಶ್ಚ - ಮರಳಿ, ಯಥಾ - ಹೇಗೆ, ಕಾಲೇ - ಕಾಲದಲ್ಲಿ, ತಸ್ಮಿನ್ - ಅವನಲ್ಲಿ, ಪ್ರವಿಶಂತಿ - ಸೇರುವುವೋ, ಸ್ಥಿರ...ನಿ - ಚೇತನಾಚೇತನಗಳಾದ, ಭೂತಾನಿ - ಪ್ರಾಣಿಗಳು, ಭೂಮೌ ಯಥಾ - ಭೂಮಿಯಲ್ಲಿ ಹೇಗೋ, ತಥಾ -

---

ವ್ಯರ್ಥಗಳೇ ಹೊರತು ಫಲಕಾರಿಗಳಾಗುವುದಿಲ್ಲ ॥ ೧೦ - ೧೨ ॥ ಆತ್ಮಾರ್ಥವಾಗಿಯೇ ಸಕಲ ಶ್ರೇಯಸ್ಸುಗಳೂ ಪ್ರಿಯಗಳೆನಿಸುವುದರಿಂದ, ಎಲ್ಲಾ ಫಲಗಳಿಗೂ ಆತ್ಮಲಾಭವೇ ಕಡೆಯ ಫಲವು. ಆದುದರಿಂದ ಹರಿಯನ್ನು ಸೇವಿಸದಿದ್ದರೆ ಯಾವ ಫಲವೂ ಲಭಿಸುವುದಿಲ್ಲ. ಅವಿದ್ಯಾನಿರಾಸದಿಂದ ಸ್ವಸ್ವರೂಪವನ್ನು ಪ್ರಕಾಶಗೊಳಿಸುವ ಪರಮಾನಂದರೂಪನಾದ ಶ್ರೀಹರಿಯೇ ಆತ್ಮನು ॥೧೩॥ ಗಿಡದ ಬುಡಕ್ಕೆ ನೀರೆರೆಯುವುದರಿಂದ ಅದರ ಶಾಖೋಪಶಾಖೆಗಳೆಲ್ಲವೂ ತೃಪ್ತಿಯನ್ನು ಪಡೆಯುವಂತೆಯೂ, ಭೋಜನದಿಂದ ಪ್ರಾಣಗಳನ್ನು ತೃಪ್ತಿಗೊಳಿಸಿದಲ್ಲಿ ಸಕಲೇಂದ್ರಿಯಗಳೂ ದಣಿಯುವಂತೆಯೂ, ಶ್ರೀಹರಿಯ ಆರಾಧನದಿಂದಲೇ ಸಕಲ ದೇವತೆಗಳನ್ನೂ ಆರಾಧಿಸಿದಂತಾಗುವುದು ॥೧೪॥ ಮಳೆಗಾಲದಲ್ಲಿ ಸೂರ್ಯನಿಂದ

ಸೂರ್ಯಾತ್ಪ್ರಭವಂತಿ ವಾರಃ ಪುನಸ್ತಸ್ಮಿನ್ ಪ್ರವಿಶಂತಿ ಕಾಲೇ । ಭೂತಾನಿ ಭೂಮೌ ಸ್ಥಿರಜಂಗಮಾನಿ ತಥಾ ಹರಾವೇವ ಗುಣಪ್ರವಾಹಃ ॥೧೫॥ ಏತತ್ಪದಂ ತಜ್ಜಗದಾತ್ಮನಃ ಪರಂ ಸಕೃದ್ವಿಭಾತಂ ಸವಿತು ರ್ಯಥಾ ಪ್ರಭಾ। ಯಥಾಽಸವೋ ಜಾಗ್ರತಿ ಸುಪ್ತಶಕ್ತಯೋ ದ್ರವ್ಯಕ್ರಿಯಾ ಜ್ಞಾನಭಿದಾಭ್ರಮಾತ್ಯಯಃ॥೧೬॥ ಯಥಾ ನಭಸ್ಯಭ್ರತಮಃ ಪ್ರಕಾಶಾ ಭವಂತಿ ಭೂಪಾಃ! ನಭವಂತ್ಯನುಕ್ರಮಾತ್। ಏವಂ ಪರೇ ಬ್ರಹ್ಮಣಿ ಶಕ್ತಯ ಸ್ತ್ವಮೂ ರಜಸ್ತಮಸ್ಸತ್ವಮಿತಿ ಪ್ರವಾಹಃ ॥೧೭॥ ತೇನೈಕ ಮಾತ್ಮಾನ ಮಶೇಷದೇಹಿನಾಂ

---

ಹಾಗೆ, ಗುಣಪ್ರವಾಹಃ - ಗುಣರೂಪವಾದ ಸಂಸಾರವು, ಹರಾವೇವ - ಹರಿಯಲ್ಲಿರುವುದು ॥೧೫॥ ಯಃ - ಯಾವ ಭಗವಂತನು, ದ್ರವ್ಯ...ಯಃ, ದ್ರವ್ಯ - ಭೂತಪಂಚಕ, ಕ್ರಿಯಾ - ಕರ್ಮೇಂದ್ರಿಯ. ಜ್ಞಾನ - ಜ್ಞಾನೇಂದ್ರಿಯ ಇವುಗಳ, ಭಿದಾಭ್ರಮಃ ಭೇದಭ್ರಾಂತಿಯು, ಅತ್ಯಯಃ - ನಾಶವುಳ್ಳವನೋ, ಆತ್ಮನಃ - ಆ ಆತ್ಮನಿಗೆ, ಅಸವಃ - ಇಂದ್ರಿಯಗಳು, ಯಥಾ - ಹೇಗೆ, ಜಾಗ್ರತಿ- ಎಚ್ಚರದಲ್ಲಿ, ಸ್ಫುರಿಸಿ, ಅಜಾಗ್ರತಿ - ಸುಷುಪ್ತಿಯಲ್ಲಿ,, ಸುಪ್ತಶಕ್ತಯಃ - ನಿರ್ವ್ಯಾಪಾರಗಳಾಗುವುವೋ, ಅಂತು, ಕ್ವಚಿತ್ - ಒಮ್ಮೆ, ವಿಭಾತಂ-ಹೊಳೆಯುವ, ಸವಿತುಃ - ಸೂರ್ಯನ, ಪ್ರಭಾಯಥಾ - ಕಾಂತಿಯಂತೆ, ಏತಜ್ಜಗತ್ - ಈ ಜಗತ್ತು, ಆತ್ಮನಃ - ಪರಮಾತ್ಮನಿಗೆ, ಪರಂ - ಅನತಿರಿಕ್ತವಾದ, ಪದಂ - ಸ್ಥಾನವು ॥೧೬॥ ಭೂಪಾಃ - ರಾಜರಿರಾ ! ನಭಸಿ - ಅಂತರಿಕ್ಷದಲ್ಲಿ, ಯಥಾ - ಹೇಗೆ, ಅಭ್ರ...ಶಾಃ, ಮೋಡ, ಕತ್ತಲೆ, ಬೆಳಕುಗಳು, ಅನುಕ್ರಮಾತ್ - ಕ್ರಮದಿಂದ, ಭವಂತಿ - ಆಗುವುವೋ, ನಭವಂತಿಚ - ಆಗುವುದಿಲ್ಲವೋ, ಏವಂ - ಇಂತು, ಪರೇ ಬ್ರಹ್ಮಣಿ - ಪರಬ್ರಹ್ಮನಲ್ಲಿ, ರಜಸ್ಸು, ತಮಸ್ಸು, ಸತ್ವವೆಂಬ, ಅಮೂಃ ಶಕ್ತಯಃ - ಈ ಶಕ್ತಿಗಳು, ಹುಟ್ಟಿ ಮುಳುಗುವುವೆಂಬುದೇ, ಪ್ರವಾಹಃ - ಜಗತ್ಪ್ರವಾಹವು ॥೧೭॥

ತೇನ - ಅದರಿಂದ, ಅಶೇ...ನಾಂ - ಸಕಲ ಪ್ರಾಣಿಗಳಿಗೂ, ಆತ್ಮಾನಂ - ಆತ್ಮನಾದ, ಏಕಂ -

---

ಉಂಟಾದ ಜಲವು ಮರಳಿ ಬೇಸಗೆಯಲ್ಲಿ ಆ ಸೂರ್ಯನಲ್ಲಿಯೇ ಸೇರುವಂತೆಯೂ, ಭೂಮಿಯಿಂದುತ್ಪನ್ನಗಳಾದ ಪ್ರಾಣಿಗಳು ಕಾಲವಶದಿಂದ ಮರಳಿ ಭೂಮಿಯಲ್ಲಿಯೇ ಲಯವನ್ನು ಪಡೆಯುವಂತೆ ಇ..., ಶ್ರೀಹರಿಯಿಂದ ಉತ್ಪನ್ನವಾದ ಗುಣಪ್ರವಾಹರೂಪವಾದ ಈ ಪ್ರಪಂಚವು ಮರಳಿ ಹರಿಯಲ್ಲಿಯೇ ಲೀನವಾಗುವುದು ॥೧೫॥ ಯಾವ ಭಗವಂತನಿಂದ ತ್ರಿವಿಧಾಹಂಕಾರ ಕಾರ್ಯಗಳಾದ ಪಂಚಭೂತ, ಜ್ಞಾನಕರ್ಮೇಂದ್ರಿಯ ಮೊದಲಾದವುಗಳ ನಿಮಿತ್ತವಾದ ಭೇದಭ್ರಾಂತಿಯು ಹೋಗಲಾಡಿಸಲ್ಪಡುವುದೋ, ಆ ಪರಮಾತ್ಮನಿಗೆ ಈ ಜಗತ್ತು ಅನತಿರಿಕ್ತವಾಗಿಯೂ, ಶಾಸ್ತ್ರಪ್ರಸಿದ್ಧವಾಗಿಯೂ ಇರುವ ಸ್ಥಾನವೆನಿಸುವುದು. ಇದುಜಾಗ್ರದವಸ್ಥೆಯಲ್ಲಿ ಹೊಳೆಯುತ್ತಾ ಸುಷುಪ್ತಿಯಲ್ಲಿ ನಿರ್ವ್ಯಾಪಾರಗಳಾಗಿ ಲೀನವಾಗುವ ಇಂದ್ರಿಯಗಳೋಪಾದಿಯಲ್ಲಿ, ಒಮ್ಮೊಮ್ಮೆ ಗಂಧರ್ವನಗರದಂತೆ ಉದಯಾಸ್ತಗಳನ್ನು ಪಡೆಯುತ್ತಾ, ಸೂರ್ಯನಿಗಿಂತಲೂ ಬೇರೆಯಲ್ಲದ ಸೂರ್ಯಪ್ರಭೆಯಂತೆ, ಪರಮಾತ್ಮನಿಗಿಂತ ಅನನ್ಯವಾಗಿರುವುದು ॥೧೬॥ ಆಕಾಶದಲ್ಲಿ ಮೋಡಗಳು, ಕತ್ತಲೆಯು, ಬೆಳಕು ಸಹ ಹುಟ್ಟುವಂತೆ ಪರಮಾತ್ಮನಲ್ಲಿ ಸತ್ವರಜಸ್ತಮಸ್ಸುಗಳೆಂಬ ಗುಣಗಳ ರೂಪವಾದ ಈ ಪ್ರಪಂಚ ಪ್ರವಾಹವುಂಟಾಗುವುದು ॥೧೭॥ ಅಯ್ಯಾ ಪ್ರಚೇತಸರಿರಾ ! ಆದುದರಿಂದ ಸಕಲ ಭೂತ

ಕಾಲಂ ಪ್ರಧಾನಂ ಪುರುಷಂ ಪರೇಶಂ । ಸ್ವತೇಜಸಾ ಧ್ವಸ್ತ ಗುಣಪ್ರವಾಹ ಮಾತ್ಮೈಕಭಾವೇನ ಭಜಧ್ವ ಮದ್ಧಾ ॥ ೧೮ ॥ * ದಯಯಾ ಸರ್ವಭೂತೇಷು ಸಂತುಷ್ಟ್ಯಾ ಯೇನ ಕೇನವಾ । ಸರ್ವೇಂದ್ರಿಯೋಪಶಾಂತ್ಯಾಚ ತುಷ್ಯತ್ಯಾಶು ಜನಾರ್ದನಃ ॥ ೧೯ ॥ ಅಪಹತ ಸಕಲೈಷಣಾಽಮಲಾತ್ಮ ನ್ಯವಿರತ

---

ಅದ್ವಿತೀಯನಾದ, ಕಾಲಂ - ಕಾಲರೂಪನೂ, ಪುರುಷಂ - ಜೀವರೂಪನೂ, ಪ್ರಧಾನಂ - ಪ್ರಕೃತಿರೂಪನಾದ, ಸ್ವತೇಜಸಾ - ತನ್ನ ತೇಜಸ್ಸಿನಿಂದ, ಧ್ವಸ್ತ...ಹಂ - ಗುಣಗಳ ಪ್ರವಾಹರೂಪವಾದ ಸಂಸಾರವನ್ನು ಶಾಂತಿಗೊಳಿಸುವ, ಪರೇಶಂ - ಪರಮಾತ್ಮನನ್ನು, ಆತ್ಮೈ...ನ - ಅನನ್ಯಭಾವದಿಂದ, ಅದ್ಧಾಭಜಧ್ವಂ - ಸಾಕ್ಷಾತ್ತಾಗಿ ಭಜಿಸಿರಿ ॥೧೮॥ ಸರ್ವಭೂತೇಷು - ಸಕಲ ಭೂತಗಳಲ್ಲಿ, ದಯಯಾ - ದಯೆಯಿಂದಲೂ, ಯೇನಕೇನವಾ - ದೊರೆತಷ್ಟು ಮಾತ್ರದಿಂದ, ಸಂತುಷ್ಟ್ಯಾ - ಸಂತೋಷದಿಂದಲೂ, ಸರ್ವೇ....ತ್ಯಾಚ - ಸಕಲೇಂದ್ರಿಯ ನಿಗ್ರಹದಿಂದಲೂ, ಜನಾರ್ದನಃ - ಭಗವಂತನು, ಆಶು - ಬೇಗನೆ, ತುಷ್ಯತಿ - ಸಂತೋಷಗೊಳ್ಳುವನು ॥೧೯॥ ಸತಾಂ - ಸಾಧುಗಳ, ಅಪ....ನಿ, ಅಪಹೃತ - ಕಳೆಯಲ್ಪಟ್ಟ, ಸಕಲ - ಸಮಸ್ತ

---

ಗಳಿಗೂ ಆತ್ಮನೆನಿಸಿ, ಕಾಲರೂಪದಿಂದ ನಿಮಿತ್ತವಾಗಿಯೂ, ಪ್ರಕೃತಿ ರೂಪದಿಂದ ಉಪಾದಾನಕಾರಣನಾಗಿಯೂ, ಜೀವರೂಪದಿಂದ ಕರ್ತೃವಾಗಿಯೂ ಸರ್ವಕಾರಣನೆನಿಸಿ ಅದ್ವಿತೀಯನಾಗಿ, ಸ್ವಪ್ರಕಾಶದಿಂದ ಮಾಯಾಗುಣಗಳ ರೂಪವಾದ ಸಂಸಾರ ಪ್ರವಾಹವನ್ನು ಶಾಂತಿಗೊಳಿಸುವ ಪರಮಾತ್ಮನನ್ನು ಅನನ್ಯಭಾವದಿಂದ ಭಜಿಸಿರಿ ॥೧೮॥ ಸರ್ವಭೂತಗಳಲ್ಲಿಯೂ ದಯೆಯನ್ನಿಡಿರಿ. ಅಪ್ರಯತ್ನವಾಗಿ ದೊರೆತಷ್ಟು ಮಾತ್ರದಿಂದ ಸಂತೋಷಗೊಳ್ಳಿರಿ. ಅಂತರಂಗ ಬಹಿರಂಗಗಳಾದ ಸಕಲೇಂದ್ರಿಯಗಳನ್ನೂ ನಿಗ್ರಹಿಸಿರಿ. ಇವೇ ಭಗವನ್ಮನ್ತೋಲಷ್ಟಿಕ್ಕೆ ಮುಖ್ಯ ಸಾಧನಗಳು ॥೧೯॥ ಕಾಮಾದಿ ಸಕಲ ವಾಸನೆಗಳನ್ನೂ

---

* ಮೂ॥ ಶ್ಲೋ॥ ನಿರಸ್ತಸಂಕಲ್ಪವಿಕಲ್ಪ ಮದ್ವಯಂ ವ್ಯಪಾಸ್ತಸಮಾದೋಪರಮೋಪಲಂಭನಂ । ಅನಾದಿ ಮಧ್ಯಾಂತ ಮಜಸ್ರನಿರ್ವೃತಿಂ ಸಂಜ್ಞಪ್ತಿಮಾತ್ರಂ ಭಜತಾಽಮುಯಾ ದೃಶಾ ॥೧೯॥

(೧) ಪೀ. ಹಿಂದಣ ಶ್ಲೋಕದಲ್ಲಿ ಪರಮಾತ್ಮನನ್ನು ಧ್ಯಾನಿಸಬೇಕೆಂದು ಹೇಳಿರುವುದರಿಂದ ಈ ಶ್ಲೋಕದಲ್ಲಿ ಧ್ಯೇಯವಾದ ಪರಮಾತ್ಮಸ್ವರೂಪವು ನಿರೂಪಿಸಲ್ಪಡುವುದು. ಅಯ್ಯಾ ಅರಸುಮಕ್ಕಳಿರಾ! ಸುಖ ದುಃಖ ಮೊದಲಾದ ಸಂಕಲ್ಪವಿಕಲ್ಪಗಳಿಂದ ರಹಿತನಾಗಿಯೂ, ವಿಜಾತೀಯ ರಹಿತನಾಗಿಯೂ, ದೇಹಾತ್ಮಭ್ರಮನಿವೃತ್ತಿಯಾದಬಳಿಕ ಹೊಂದಲ್ಪಡತಕ್ಕವನಾಗಿಯೂ, ನಿತ್ಯನಾಗಿಯೂ, ನಿತ್ಯಾನಂದರೂಪನಾಗಿಯೂ, ಒಮ್ಮೆಯೂ ಜಡರೂಪವಿಲ್ಲದವನಾಗಿಯೂ ಇರುವ ಭಗವಂತನನ್ನು ಭಜಿಸಿರೆಂದು ಭಾವವು. ಇದರಿಂದ "ಸತ್ಯಂಜ್ಞಾನ ಮನಂತಂ ಬ್ರಹ್ಮ" ಎಂಬ ಸ್ವರೂಪಬೋಧಕವಾಕ್ಯದಿಂದ ತಿಳಿಯಲ್ಪಡುವ ಬ್ರಹ್ಮಸ್ವರೂಪವನ್ನು ವಿವರಿಸಿದಂತಾಯಿತು.

(೨) ವಿ. ಭಕ್ತರ ಸಂಕಲ್ಪವಿಕಲ್ಪಗಳನ್ನು ಹೋಗಲಾಡಿಸುವವನೂ, ಐದುವಿಧಗಳಾದ ಭೇದಗಳನ್ನು ಕುತರ್ಕಗಳಿಂದ ನಿರಾಕರಿಸದಿರುವ ಸಾಧುಗಳ ಮನಸ್ಸಿನಲ್ಲಿ ಗೋಚರನಾಗತಕ್ಕವನೂ ಆದ ಭಗವಂತನನ್ನು ಧ್ಯಾನಿಸಿರಿ. (ಈ ಶ್ಲೋಕವು ಶ್ರೀಧರಾದಿಗಳ ಮತದಲ್ಲಿ ಇಲ್ಲ).

ಶ್ಲೋ॥ ಸಂಕಲ್ಪಶ್ಚ ವಿಕಲ್ಪಶ್ಚ ಖಿತೇ ವಿಷ್ಣುಪ್ರಸಾದತಃ । ನೈವ ಸಂಭವತೋ ವಿಷ್ಣೋಃ ಸಮಾಭಾವಾತ್ತು ಸೋಽದ್ವಯಃ (ಪ್ರಮಾಣವಚನ)

ಮೇಧಿತ ಭಾವನೋಪಹೂತಃ । ನಿಜಜನವಶಗತ್ವ ಮಾತ್ಮನೋಽಯ ನ್ನ ಸರತಿ ಛಿದ್ರವದಕ್ಷರ ಸ್ಸತಾಂ ಹಿ ॥ ೨೦ ॥ ನ ಭಜತಿ ಕುಮನೀಷಿಣಾಂ ಸ ಇಜ್ಯಾಂ ಹರಿ ರಧನಾತ್ಮಧನಪ್ರಿಯೋ ರಸಜ್ಞಃ । ಶ್ರುತಧನಕುಲಕರ್ಮ ಣಾಂ ಮದೈ ರ್ಯೇ ವಿದಧತಿ ಪಾಪ ಮಕಿಂಚನೇಷು ಸತ್ಸು ॥ ೨೧ ॥ ಶ್ರಿಯ ಮನುಚರತೀಂ ತದರ್ಥಿನಶ್ಚ ದ್ವಿಪದಪತೀನ್ ವಿಬುಧಾಂಶ್ಚ ಯ ತ್ಸ್ವಪೂರ್ಣಃ। ನಭಜತಿ ನಿಜಭೃತ್ಯವರ್ಗತಂತ್ರಃ ಕಥ ಮಮು ಮುದ್ವಿಸೃಜೇ ತ್ಪುಮಾನ್

---

ಗಳಾದ, ವಿಷಣಾ - ಬಯಕೆಗಳುಳ್ಳುದರಿಂದ, ಅಮಲ - ಶುದ್ಧವಾದ, ಆತ್ಮನಿ - ಮನಸ್ಸಿನಲ್ಲಿ, ಅವಿರತಂ - ನಿರಂತರವೂ, ಏಧಿ....ತಃ - ಬೆಳೆಯಿಸಲ್ಪಟ್ಟ ಭಾವನೆಯಿಂದ ನೆಲೆಗೊಳಿಸಲ್ಪಟ್ಟ, ಅಕ್ಷರಃ - ಹರಿಯು ಆತ್ಮನಃ - ತನ್ನ, ನಿಜ...ತ್ವಂ - ಭಕ್ತಪರಾಧೀನತೆಯನ್ನು, ಅಯನ್ - ಪಡೆಯುತ್ತಾ, ಛಿದ್ರವತ್, ಆಕಾಶದಂತೆ, ನಸರತಿ-ಬಿಟ್ಟು ಹೋಗುವುದಿಲ್ಲ ॥೨೦॥ ಅಧ...ಯಃ, ಅಧನ - ಬಡವರಾಗಿಯೂ, ಆತ್ಮಧನ - ಪರಮಾತ್ಮನೇ ಧನವಾಗುಳ್ಳವರಾಗಿಯೂ ಇರುವವರಿಗೆ, ಪ್ರಿಯಃ - ಇಷ್ಟವಾದ, ರಸಜ್ಞಃ- ಭಕ್ತಿರಸದ ರುಚಿಯನ್ನು ಬಲ್ಲ, ಹರಿಃ - ಹರಿಯು, ಯೇ - ಯಾರು, ಶ್ರುತ...ಣಾಂ- ವಿದ್ಯೆ, ಸಂಪತ್ತು, ಕುಲ ಕರ್ಮ ಇವುಗಳ, ಮದೈಃ - ಮದಗಳಿಂದ, ಅಕಿಂಚನೇಷು - ಭಕ್ತರಾದ, ಸತ್ಸು - ಸಾಧುಗಳಲ್ಲಿ, ಪಾಪಂ-ತಿರಸ್ಕಾರವನ್ನು, ವಿದಧತಿ - ಮಾಡುವರೋ, ಕುಮನೀಷಿಣಾಂ - ಅಂತಹ ದುರ್ಬುದ್ಧಿಗಳ, ಇಜ್ಯಾಮಪಿ - ಪೂಜೆಯನ್ನೂ, ನಭಜತಿ - ಅಂಗೀಕರಿಸುವುದಿಲ್ಲ ॥೨೧॥ ಸ್ವಪೂರ್ಣಃ - ತನ್ನಿಂದಲೇ ಪೂರ್ಣನಾದ, ನಿಜ...ತ್ರಃ - ತನ್ನ ಭೃತ್ಯರ ಗುಂಪಿಗೆ ಅಧೀನನಾದ ಭಗವಂತನು, ಯತ್ - ಯಾವಕಾರಣದಿಂದ, ಅನುಚರತೀಂ-ಅನುಸರಿಸುವ, ಶ್ರಿಯಂ - ಲಕ್ಷ್ಮಿಯನ್ನೂ, ತದರ್ಥಿನಃ - ಆಸಿರಿಯನ್ನು ಬಯಸುವ, ದ್ವಿಪದಪತೀನ್ - ರಾಜರನ್ನೂ, ವಿಬುಧಾಂಶ್ಚ - ದೇವತೆಗಳನ್ನೂ, ನಭಜತಿ - ಹೊಂದುವುದಿಲ್ಲವೋ, ಅದರಿಂದ, ಕೃತಜ್ಞಃ - ಉಪಕಾರವನ್ನು ಬಲ್ಲ, ಪುಮಾನ್ - ಪುರುಷನು, ಅಮುಂ - ಇವನನ್ನು, ಕಥಂ - ಹೇಗೆ, ಉದ್ವಿಸೃಜೇತ್-ಬಿಟ್ಟಾನು ? ॥೨೨॥ ಮೈತ್ರೇಯನು ಹೇಳುತ್ತಾನೆ, ರಾಜನ್ ವಿದುರನೆ! ಸ್ವಾಯಂಭುವಃ-ಬ್ರಹ್ಮಪುತ್ರನಾದ,

---

ಕಳೆದುಕೊಂಡು ಪರಿಶುದ್ಧವಾಗಿರುವ ಸಾಧುಗಳ ಮನಸ್ಸಿನಲ್ಲಿ ನಿರಂತರ ಭಾವನೆಯಿಂದ ನೆಲೆಗೊಂಡಿರುವ ಭಗವಂತನು "ಭಕ್ತಪರಾಧೀನನು" ಎಂಬ ತನ್ನ ಬಿರುದನ್ನು ಕಾಪಾಡುತ್ತಾ, ಆ ಹೃದಯದಲ್ಲಿರುವ ಆಕಾಶದಂತೆ ಚಲಿಸದೆ ನಿಲ್ಲುವನು ॥೨೦॥ ಲೌಕಿಕಧನಾದಿಗಳನ್ನಾಶಿಸದೆ ಪರಮಾತ್ಮನೇ ಸರ್ವೋತ್ತಮಧನವೆಂದು ತಿಳಿದ ಭಕ್ತರಿಗೆ ಪ್ರಿಯನೆನಿಸಿದ ಭಗವಂತನು ಭಕ್ತಿರಸದ ಸವಿಯನ್ನು ಬಲ್ಲವನಾದುದರಿಂದ, ಯಾರು ವಿದ್ಯೆ, ಸಂಪತ್ತು, ಕುಲ, ಸತ್ಕರ್ಮ ಮೊದಲಾದವುಗಳಿಂದ ಮದವೇರಿ ಬಡವರಾದ ಸಾಧುಗಳನ್ನು ಗೌರವಿಸದೇ ಕಡೆಗಣಿಸುವರೋ, ಅಂತಹ ಡಾಂಭಿಕರು ಮಾಡುವ ಪೂಜೆಯನ್ನು ಕೂಡ ಪರಿಗ್ರಹಿಸುವುದಿಲ್ಲ ॥೨೧॥ ಯಾವ ಪರಮಾತ್ಮನು ಪೂರ್ಣಕಾಮನಾದುದರಿಂದ ನಿರಂತರವೂ ತನ್ನನ್ನು ಅನುಸರಿಸಿಕೊಂಡಿರುವ ಲಕ್ಷ್ಮಿಯನ್ನೂ, ಐಶ್ವರ್ಯಕಾಮುಕರಾದ ರಾಜರನ್ನೂ, ದೇವತೆಗಳನ್ನೂ ಕೂಡ ಅನುಸರಿಸದೆ ತನ್ನ ಭಕ್ತವರ್ಗಕ್ಕೆ ಮಾತ್ರ ಅಧೀನನಾಗಿರುವನೋ, ಅಂತಹ ಭಗವಂತನನ್ನು, ಕೃತಜ್ಞನಾದ ಯಾವ ಪುರುಷನು ತಾನೇ ಬಿಟ್ಟಾನು ? ॥೨೨॥ ಅಯ್ಯಾ ವಿದುರನೆ ಕೇಳು. ಬ್ರಹ್ಮಮಾನಸಪುತ್ರನಾದ ನಾರದಮುನಿಯು ಈರೀತಿಯಾಗಿ ಪ್ರಚೇತ

ಕೃತಜ್ಞಃ † ॥ ೨೨ ॥ ಮೈತ್ರೇಯಃ । ಇತಿ ಪ್ರಚೇತಸೋ ರಾಜ ನ್ನನ್ಯಾಂ
ಶ್ಚ ಭಗವತ್ಕಥಾಃ । ಶ್ರಾವಯಿತ್ವಾ ಬ್ರಹ್ಮಲೋಕಂ ಯಯೌ ಸ್ವಾಯಂಭು
ವೋ ಮುನಿಃ ॥ ೨೩ ॥ ತೇಽಪಿ ತನ್ಮುಖನಿರ್ಯಾತಂ ಯಶೋ ಲೋಕಮ
ಲಾಪಹಂ । ಹರೇರ್ನಿಶಮ್ಯ ತತ್ಪಾದಂ ಧ್ಯಾಯಂತಸ್ತದ್ಗತಿಂ ಯಯುಃ ॥
ಏತತ್ತೇಽಭಿಹಿತಂ ಕ್ಷತ್ತಃ! ಯನ್ಮಾಂ ತ್ವಂ ಪರಿಪೃಷ್ಟವಾನ್ । ಪ್ರಚೇತಸಾಂ

---

ಮುನಿಃ - ನಾರದನು, ಇತಿ - ಇಂತು, ಪ್ರಚೇತಸಃ - ಪ್ರಚೇತಸರಿಗೂ, ಅನ್ಯಾಂಶ್ಚ - ಇತರರಿಗೂ, ಭಗ... ಥಾಃ - ಭಗವಚ್ಚರಿತ್ರೆಗಳನ್ನು, ಶ್ರಾವಯಿತ್ವಾ - ಶ್ರವಣಮಾಡಿಸಿ, ಬ್ರಹ್ಮಲೋಕಂ - ಬ್ರಹ್ಮಲೋಕಕ್ಕೆ, ಯಯೌ - ಹೋದನು ॥೨೩॥ ತೇಽಪಿ - ಆ ಪ್ರಚೇತಸರು, ತನ್ಮು....ತಂ - ಆತನ ಮುಖದಿಂದ ಬಂದ, ಲೋಕ....ಹಂ - ಜಗತ್ತಿನ ಪಾಪವನ್ನು ಕಳೆಯುವ, ಹರೇಃ - ಹರಿಯ, ಯಶಃ - ಚರಿತ್ರೆಯನ್ನು, ನಿಶಮ್ಯ - ಕೇಳಿ, ತತ್ಪಾದಂ - ಆ ಹರಿಯ ಪಾದವನ್ನು, ಧ್ಯಾಯಂತಃ - ಧ್ಯಾನಿಸುತ್ತಾ, ತದ್ಗತಿಂ - ವಿಷ್ಣು ಲೋಕವನ್ನು, ಯಯುಃ - ಹೊಂದಿದರು ॥೨೪॥ ಕ್ಷತ್ತಃ - ವಿದುರನೆ! ತ್ವಂ - ನೀನು, ಮಾಂ - ನನ್ನನ್ನು ಕುರಿತು, ಯತ್ - ಯಾವುದನ್ನು, ಪರಿಪೃಷ್ಟವಾನ್ - ಬೆಸಗೊಂಡೆಯೋ, ಪ್ರಚೇತಸಾಂ - ಪ್ರಚೇತಸರಿಗೂ, ನಾರದಸ್ಯ - ನಾರದನಿಗೂ, ಸಂವಾದಂ - ಸಂವಾದರೂಪವಾದ, ಹರಿಕೀರ್ತನಂ - ಭಗವತ್ಕೀರ್ತನ

---

ಸರಿಗೂ ಅಲ್ಲಿ ನೆರೆದಿದ್ದ ಇತರ ಮಹರ್ಷಿಗಳಿಗೂ ಸಹ ವಿಚಿತ್ರಗಳಾದ ಭಗವಚ್ಚರಿತ್ರೆಗಳನ್ನು ಉಪದೇಶಿಸಿ, ಅವರಿಂದ ಮನ್ನಣೆಯನ್ನು ಪಡೆದು ಬ್ರಹ್ಮಲೋಕಕ್ಕೆ ತೆರಳಿದನು ॥೨೩॥ ತರುವಾಯ ಆ ಪ್ರಚೇತಸರು ಸಕಲಲೋಕಪಾಪಹರವಾಗಿ ನಾರದಮುನಿಯಿಂದ ಉಪದಿಷ್ಟವಾದ ಭಗವಚ್ಚರಿತ್ರೆಯನ್ನು ಕೇಳಿ, ಆತನ ಪಾದಗಳನ್ನು ಸ್ಮರಿಸುತ್ತಾ ಆ ಭಗವಂತನ ಸಾಯುಜ್ಯವನ್ನು ಪಡೆದರು॥ ೨೪॥ ಅಯ್ಯಾ ವಿದುರನೆ ! ನೀನು ಬೆಸಗೊಂಡ ಮೇರೆ ನಾರದ

---

† ವಿ. ಮೂ. ಶ್ಲೋ॥ ಭವತಾಂ ವಂಶಧುರ್ಯೋಽಭೂದ್ಧ್ರುವಶ್ಚಿತ್ರರಥಸ್ಸ್ವರಾಟ್ । ಗುರುದಾರವಚೋಬಾಣೈರ್ನಿರ್ಭಿನ್ನಹೃದಯೋಽರ್ಭಕಃ ॥೧॥ ತ್ಯಕ್ತ್ವೈವ ಸ್ತ್ರೈಣಂಚ ತಂ ಗಚ್ಛನ್ ದೃಷ್ಟೋ ಮೇ ಪಥ್ಯುದಾರಧೀಃ । ಪಂಚವರ್ಷೋ ಮದಾದೇಶ್ಯಸ್ಸಂರಾಧ್ಯ ಪುರುಷೇಶ್ವರಂ ॥೨॥ ತತ್ಪರಂ ಸರ್ವಧಿಷ್ಣ್ಯೇಭ್ಯೋ ಮಾಯಾಽಧಿಷ್ಠಿತ ಮಾರುಹತ್ । ಮುನಯೋಽದ್ಯಾಪ್ಯುದೀಕ್ಷಂತೇ ಪರಂ ನಾಪು ರವಾಙ್ಮುಖಾಃ ॥೩॥ ತಂ ಯೂಯಂ ಸರ್ವಭೂತಾನಾ ಮಂತರ್ಯಾಮಿಣ ಮೀಶ್ವರಂ । ರುದ್ರಾದಿಷ್ಟೋಪದೇಶೇನ ಭಜಧ್ವಂ ಭವನುತ್ತಯೇ ॥೪॥

ತಾ॥ ಅಯ್ಯಾ ರಾಜಪುತ್ರರಿರಾ ! ನಿಮ್ಮ ವಂಶಸ್ಥರಲ್ಲಿ ಅತ್ಯುತ್ತಮನಾದ ಚಿತ್ರರಥನೆಂಬ ಅಡ್ಡ ಹೆಸರುಳ್ಳ ಧ್ರುವನೆಂಬ ಅರಸನಿದ್ದನು. ಅವನು ಮಲತಾಯಿಯ ಬಿರುನುಡಿಗಳೆಂಬ ಬಾಣಗಳಿಂದ ನೋಯಿಸಲ್ಪಟ್ಟನು ॥ ೧ ॥ ಅವನು ಐದುವರ್ಷದ ಬಾಲಕನಾಗಿದ್ದರೂ ಅದನ್ನು ಸೈರಿಸಲಾರದೆ ಸ್ತ್ರೀಜಿತನಾದ ತಂದೆಯನ್ನುಳಿದು ಕಾಡಿಗೆ ತೆರಳುತ್ತಾ, ದಾರಿಯಲ್ಲಿ ನನ್ನನ್ನು ಕಂಡು, ನನ್ನ ಆಜ್ಞಾಪ್ರಕಾರವಾಗಿ ಪರಮಪುರುಷನನ್ನು ಆರಾಧಿಸಿದನು ॥ ೨ ॥ ಬಳಿಕ ಭಗವಂತನಿಂದ ದಯಪಾಲಿಸಲ್ಪಟ್ಟ ಸಕಲಲೋಕಗಳಿಗೂ ಮೇಲ್ಗಡೆಯಲ್ಲಿರುವ ಧ್ರುವಪದವನ್ನು ಪಡೆದನು. ಈಗಲೂ ಮಹರ್ಷಿಗಳು ಅದನ್ನು ನೋಡಬಲ್ಲರೇ ಹೊರತು ಹೊಂದಲಾರರು ॥೩॥ ಇಂತು ಭಕ್ತವತ್ಸಲನಾದುದರಿಂದ ಸರ್ವಾಂತರ್ಯಾಮಿಯಾದ ಪರಮಾತ್ಮನನ್ನು ರುದ್ರಗೀತೆಯಿಂದ ಧ್ಯಾನಿಸಿ ಮುಕ್ತಿಯನ್ನು ಪಡೆಯಿರಿ, ಎಂದು ನಾರದಮುನಿಯು ಹೇಳಿದನು ॥೪॥

ನಾರದಸ್ಯ ಸಂವಾದಂ ಹರಿಕೀರ್ತನಂ ॥ ೨೫ ॥ ಶ್ರೀಶುಕಃ । ಯ ಏಷ ಉತ್ತಾನಪದೋ ಮಾನವಸ್ಯಾನುವರ್ಣಿತಃ । ವಂಶಃ ಪ್ರಿಯವ್ರತಸ್ಯಾಪಿ ನಿಬೋಧ ನೃಪಸತ್ತಮ! ॥ ೨೬ ॥ ಯೋ ನಾರದಾ ದಾತ್ಮವಿದ್ಯಾ ಮಧಿಗಮ್ಯ ಪುನ ರ್ಮಹೀಂ । ಭುಕ್ತ್ವಾ ವಿಭಜ್ಯ ಪುತ್ರೇಭ್ಯ ಐಶ್ವರ್ಯಂ ಸಮಗಾ ತ್ಪದಂ ॥ ೨೭॥ ಇಮಾಂ ತು ಕೌಶಾರವಿಣೋಪವರ್ಣಿತಾಂ ಕ್ಷತ್ತಾ ನಿಶಮ್ಯಾಜಿತವಾದ ಸತ್ಕಥಾಂ । ಪ್ರವೃದ್ಧ ಭಾವೋಽಶ್ರುಕಲಾಕುಲೋ ಮುನೇ ರ್ದಧಾರ ಮೂರ್ಧ್ನಾ ಚರಣಂ ಹೃದಾ ಹರೇಃ ॥ ೨೮ ॥ ವಿದುರಃ ॥ ಸೋಽಯ ಮದ್ಯ ಮಹಾಯೋಗಿನ್! ಭವತಾ ಕರುಣಾತ್ಮನಾ । ದರ್ಶಿತ ಸ್ತಮಸಃ ಪಾರೋ

---

ವುಳ್ಳ, ಏತತ್ - ಈ ಉಪಾಖ್ಯಾನವು, ತೇ - ನಿನಗೆ, ಅಭಿಹಿತಂ - ಹೇಳಲ್ಪಟ್ಟಿತು ॥೨೫॥ ಶುಕಮುನಿಯು ಹೇಳುತ್ತಾನೆ, ನೃಪಸತ್ತಮ - ರಾಜೇಂದ್ರನೆ! ಮಾನವಸ್ಯ - ಮನುವಂಶದವನಾದ, ಉತ್ತಾನಪದಃ - ಉತ್ತಾನಪಾದರಾಯನ, ಯಃ ಏಷ ವಂಶಃ - ಈ ವಂಶವು, ಅನುವರ್ಣಿತಃ - ವರ್ಣಿಸಲ್ಪಟ್ಟಿತು, ಪ್ರಿಯವ್ರತಸ್ಯಾಪಿ - ಪ್ರಿಯವ್ರತನ ಚರಿತ್ರೆಯನ್ನೂ, ನಿಬೋಧ - ತಿಳಿ, ॥೨೬॥ ಯಃ - ಯಾವನು, ನಾರದಾತ್ - ನಾರದನಿಂದ, ಆತ್ಮವಿದ್ಯಾಂ - ಅಧ್ಯಾತ್ಮವಿದ್ಯೆಯನ್ನು, ಅಧಿಗಮ್ಯ-ಪಡೆದು, ಪುನಃ - ಮರಳಿ, ಮಹೀಂ - ಭೂಮಿಯನ್ನು, ಭುಕ್ತ್ವಾ - ಅನುಭವಿಸಿ, ಪುತ್ರೇಭ್ಯಃ - ಮಕ್ಕಳಿಗೆ; ಐಶ್ವರ್ಯಂ - ಸಂಪತ್ತನ್ನು, ವಿಭಜ್ಯ - ಹಂಚಿ, ಪದಂ - ಪರಮಪದವನ್ನು, ಸಮಗಾತ್ - ಪಡೆದನು ॥೨೭॥ ಕ್ಷತ್ತಾ - ವಿದುರನು, ಕೌಶಾರವಿಣಾ - ಮೈತ್ರೇಯನಿಂದ, ಉಪವರ್ಣಿತಾಂ ವರ್ಣಿಸಲ್ಪಟ್ಟ, ಇಮಾಂ - ಈ, ಅಜಿ...ಥಾಂ - ಭಗವಂತನ ಮತ್ತು ಭಾಗವತರ ಕಥೆಯನ್ನು, ನಿಶಮ್ಯ - ಕೇಳಿ, ಪ್ರವೃದ್ಧಭಾವಃ - ಅತಿಶಯವಾದ ಭಕ್ತಿಯುಳ್ಳವನಾಗಿ, ಅಶ್ರು...ಲಃ - ಆನಂದ ಬಾಷ್ಪಗಳಿಂದ ವ್ಯಾಪ್ತನಾಗಿ, ಮುನೇಃ - ಮೈತ್ರೇಯನ, ಚರಣಂ - ಪಾದವನ್ನು, ಮೂರ್ಧ್ನಾ - ತಲೆಯಿಂದಲೂ, ಹರೇಃ - ಭಗವಂತನ, ಚರಣಂ - ಪಾದವನ್ನು, ಹೃದಾಚ - ಮನಸ್ಸಿನಿಂದಲೂ, ದಧಾರ - ಧರಿಸಿದನು ॥೨೮॥ ವಿದುರನು ಹೇಳುತ್ತಾನೆ, ಮಹಾಯೋಗಿನ್ - ಯೋಗೀಶ್ವರನೆ! ಯತ್ರ - ಎಲ್ಲಿ, ಅಕಿಂಚನಗಃ - ಜ್ಞಾನಿಗಮ್ಯನಾದ, ಹರಿಃ - ಹರಿಯಿರುವನೋ, ಕರುಣಾತ್ಮನಾ - ದಯಾಳುವಾದ, ಭವತಾ-ನಿನ್ನಿಂದ, ತಮಸಃ-ಕತ್ತಲೆಯ, ಸೋಽಯಂ ಪಾರಃ-ಗಡಿಯು, ದರ್ಶಿತಃ-

---

ಮುನಿಗೂ ಪ್ರಚೇತಸರಿಗೂ ನಡೆದ ಸಂವಾದರೂಪವಾದ ಹರಿಕಥಾಗರ್ಭಿತವಾದೀ ಉಪಾಖ್ಯಾನವನ್ನು ನಿನಗೆ ಹೇಳಿದೆನು, ಎಂದು ನುಡಿದನು ॥೨೫॥ ಅಯ್ಯಾ ಪರೀಕ್ಷಿದ್ರಾಜನೆ! ಈರೀತಿಯಾಗಿ ಸ್ವಾಯಂಭುವ ಮನುವಿಗೆ ಪುತ್ರನಾದ ಉತ್ತಾನಪಾದರಾಯನ ವಂಶಚರಿತ್ರೆಯನ್ನು ನಿನಗೆ ತಿಳುಹಿದೆನು. ಇನ್ನು ಇವನ ಸಹೋದರನಾದ ಪ್ರಿಯವ್ರತರಾಜನ ವಂಶಚರಿತ್ರೆಯನ್ನೂ ತಿಳುಹುವೆನು ಕೇಳು॥೨೬॥ ಆ ಪ್ರಿಯವ್ರತನು ನಾರದಮುನಿಯಿಂದ ಬ್ರಹ್ಮಜ್ಞಾನವನ್ನು ಪಡೆದು ಮರಳಿ ಹಲವುದಿನ ರಾಜ್ಯವನ್ನಾಳಿ,ಬಳಿಕ ತನ್ನ ಪುತ್ರರಿಗೆ ರಾಜ್ಯೈಶ್ವರ್ಯಗಳನ್ನು ಹಂಚಿಕೊಟ್ಟು ಪರಮಪದವನ್ನು ಪಡೆದನು,ಎಂದುಶುಕಮುನಿಯುನುಡಿದನು॥ ಅಯ್ಯಾ ರಾಜನೆ! ಈಪ್ರಕಾರವಾಗಿ ಮೈತ್ರೇಯಮುನಿಯು ವರ್ಣಿಸಿದ ಭಗವತ್ಕಥೆಯನ್ನು ಕೇಳಿ ವಿದುರನು ಭಕ್ತಿಪರವಶನಾಗಿ,ಆನಂದಬಾಷ್ಪಗಳನ್ನುತುಳುಕಿಸುತ್ತಾ,ಹರಿಚರಣವನ್ನು ಮನಸ್ಸಿನಲ್ಲಿಧ್ಯಾನಿಸುತ್ತಾ, ಮೈತ್ರೇಯಮುನಿಯ ಪಾದಕ್ಕೆರಗಿ ಬಿನ್ನವಿಸಿದನು॥ ಅಯ್ಯಾ

ಯತ್ರಾಕಿಂಚನಗೋ ಹರಿಃ ॥ ೨೯ ॥ ಶ್ರೀಶುಕಃ ॥ ಇತ್ಯಾನಮ್ಯ ತ ಮಾ ಮಂತ್ರ್ಯ ವಿದುರೋ ಗಜಸಾಹ್ವಯಂ । ಸ್ವಾನಾಂ ದಿದೃಕ್ಷುಃ ಪ್ರಯಯೌ ಜ್ಞಾತೀನಾಂ ನಿರ್ವೃತಾಶಯಃ ॥ ೩೦ ॥ ಏತ ದ್ಯಃ ಶೃಣು ಯಾ ದ್ರಾಜನ್ ! ರಾಜ್ಞಾಂ ಹರ್ಯರ್ಪಿತಾತ್ಮನಾಂ । ಆಯು ರ್ಧನಂ ಯಶ ಸ್ಸ್ವಸ್ತಿ ಗತಿ ಮೈಶ್ವ ರ್ಯ ಮಾಪ್ನುಯಾತ್ ॥ ೩೧ ॥

ಇತಿ ಶ್ರೀಮದ್ಭಾಗವತೇ ಮಹಾಪುರಾಣೇ ಅಷ್ಟಾದಶ ಸಹಸ್ರಿಕಾಯಾಂ ಸಂಹಿತಾಯಾಂ ಪಾರಮಹಂಸ್ಯಾಂ ವೈಯ್ಯಾಸಿಕ್ಯಾಂ ಶ್ರೀಹಯಗ್ರೀವ ಬ್ರಹ್ಮವಿದ್ಯಾಯಾಂ

— ಚತುರ್ಥಸ್ಕಂಧೇ ಏಕತ್ರಿ

ಚತುರ್ಥಸ್ಕಂಧೋಽಯಂ ಹರಿಚರಿತ ರತ್ನಾವಲಿಸಿಧಿಃ ।
ಕಥಂಚಿ ದ್ವ್ಯಾಖ್ಯಾತೋ ಹರಿಗುರುಮಹಾನುಗ್ರಹ ಬಲಾತ್ ॥
ಮಹಾಂತಃ ಪ್ರೀಯಂತಾಂ ಸುಗುಣ ಲವಲುಬ್ಧಾ ಶ್ಶುಚಿಧಿಯಃ ।
ಸಹಂತಾಂ ಚಾಪದ್ಯಂ ಮಮ ವಿವೃತಿಮಾರ್ಗೇ ಸ್ಖಲನತಃ ॥
ಸ್ಕಂಧಶ್ಚಾಯಂ ಸಮಾಪ್ತಃ.

ತೋರಿಸಲ್ಪಟ್ಟಿತು ॥೨೯॥ ಶುಕಮುನಿಯು ಹೇಳುತ್ತಾನೆ, ವಿದುರಃ- ವಿದುರನು, ಇತಿ - ಇಂತು, ಆನಮ್ಯ- ನಮಸ್ಕರಿಸಿ, ತಂ - ಆ ಮೈತ್ರೇಯನನ್ನು, ಆಮಂತ್ರ್ಯ - ಒಪ್ಪಿಸಿ, ಸ್ವಾನಾಂಜ್ಞಾತೀನಾಂ- ತನ್ನ ಬಂಧುಗಳನ್ನು, ದಿದೃಕ್ಷುಃ - ನೋಡಲೆಳಸಿ, ನಿರ್ವೃತಾಶಯಃ - ಹರ್ಷಚಿತ್ತನಾಗಿ, ಗಜಸಾಹ್ವಯಂ - ಹಸ್ತಿನಾವತಿಗೆ, ಪ್ರಯಯೌ - ಹೊರಟುಹೋದನು ॥೩೦॥ ರಾಜನ್ - ರಾಜನೆ ! ಯಃ - ಯಾವನು, ಹರ್ಯ....ನಾಂ- ಹರಿಯಲ್ಲಿ ಮನಸ್ಸನ್ನಿಟ್ಟ, ರಾಜ್ಞಾಂ - ರಾಜರ, ಏತತ್ - ಈ ಚರಿತ್ರೆಯನ್ನು, ಶೃಣುಯಾತ್ - ಕೇಳುವನೋ, ಅವನು, ಆಯುಸ್ಸು, ಧನ, ಯಶಸ್ಸು, ಕ್ಷೇಮ, ಗತಿ, ಐಶ್ವರ್ಯಗಳನ್ನು, ಆಪ್ನುಯಾತ್ - ಪಡೆಯುವನು ॥೩೧॥

— ಏಕತ್ರಿಂಶಾಧ್ಯಾಯಂ ಸಮಾಪ್ತಂ —

ಯೋಗೀಂದ್ರನ ! ಪರಮದಯಾಳುವಾದ ನೀನು ಜ್ಞಾನಿಗಮ್ಯನಾದ ಶ್ರೀಹರಿಗೆ ಯಾವುದು ನೆಲೆಯಾಗಿರುವುದೋ, ಸ್ವರೂಪಜ್ಞಾನಕ್ಕೆ ಆವರಣವಾಗಿರುವ ಅಂತಹ ಅಜ್ಞಾನವನ್ನು ಕಳೆದು ನಮಗೀಗ ಪಾರಗಾಣಿಸಿವೆ ಎಂದು ಬೇಡಿದನು ॥೨೯॥ ಅಯ್ಯಾ ಪರೀಕ್ಷಿದ್ರಾಜನೆ ! ಇಂತು ವಿದುರನು ಮೈತ್ರೇಯಮುನಿಗೆರಗಿ ಆತನಿಂದಪ್ಪಣೆಯನ್ನು ಪಡೆದು ತನ್ನ ನಂಟರನ್ನು ನೋಡಲೆಳಸಿ ಸಂತೋಷದಿಂದ ಹಸ್ತಿನಾವತಿಗ ತೆರಳಿದನು ॥೩೦॥ ಶ್ರೀ ಹರಿಯಲ್ಲಿ

ಮನಸ್ಸನ್ನಿಟ್ಟು ಪರಮಭಾಗವತರೆನಿಸಿರುವ ಈ ರಾಜರ ಚರಿತ್ರೆಯನ್ನು ಯಾವ ಪುರುಷನು ಭಕ್ತಿಯಿಂದ ಕೇಳುವನೋ ಅವನು ಆಯುಷ್ಯ, ಧನ, ಕೀರ್ತಿ, ಸಂಪತ್ತು. ಸುಖಗಳನ್ನು, ಕಡೆಗೆ ಶ್ರೀಹರಿಯ ಸಾಯುಜ್ಯವನ್ನು ಪಡೆಯುವನು, ಎಂದು ಶ್ರೀ ಶುಕಮುನಿಯು ಪರೀಕ್ಷಿದ್ರಾಜನಿಗೆ ನಿರೂಪಿಸಿದನೆಂದು ಸೂತಪೌರಾಣಿಕನು ನೈಮಿಶಾರಣ್ಯವಾಸಿಗಳಾದ ಶೌನಕಾದಿಋಷಿಗಳಿಗೆ ಹೇಳಿದನೆಂಬಲ್ಲಿಗೆ ಸಕಲ ಸುರಾಸುರ ಮಸ್ತಕನ್ಯಸ್ತ ಮಕುಟಮಣಿ

ಕಿರಣ ಮಂಜರೀ ಪುಂಜ ಪಿಂಜರೀಭೂತ ಪಾದಾಂಬುಜ ಶ್ರೀಮಹಾ ತ್ರಿಪುರಸುಂ

ದರೀವರಪ್ರಸಾದ ಸಮಾಸಾದಿತ ಸಕಲವಿದ್ಯಾ ವೈಶದ್ಯ ವಿದ್ಯೋತಮಾನ ವ

ವಕಾಳಿದಾಸಾದಿವಿದ್ವನ್ಮಣಿವ್ರಾತ ವಿಖ್ಯಾತವೆಲ್ಲಾಲಕುಲ ಕಲಶ ಜಲಧಿ

ಸುಧಾಕರಾಯಮಾಣ ಶ್ರೀಸಾಂಬಸೂರಿ ತನೂಜಾತ ರಾಮ

ಶೇಷಕವಿ ವಿರಚಿತ ಶ್ರೀಭಾಗವತ ಚಕೋರಚಂದ್ರಿಕೆಯೊಳ್

ಮೂವತ್ತೊಂದನೆಯ ಅಧ್ಯಾಯಂ ಮುಗಿದುದು.

— ಚತುರ್ಥಸ್ಕಂಧಂ ಸಮಾಪ್ತಂ —

ಕಂದ॥ ಪಿರಿದಹ ಭಾಗವತಾಮರ ।
ತರುವಿನೊಳೆಸೆದಿರ್ಪ ಭಕ್ತಿಫಲವಿಳುಹುತೆ ಬೇ ।
ಳ್ಪರಿಗೀಯಲ್ ಯತ್ನಿಸಿ ಸ ।
ದ್ಗುರುಕೃಪೆಯಿಂ ಸ್ಕಂಧಮಂ ತುರೀಯಮ ನಡರ್ದೆಂ ॥

ಶ್ರೀ ಕೃಷ್ಣಾರ್ಪಣಮಸ್ತು.



ಓಂ ತತ್ಸತ್